ಡೇವಿಡ್ ಕಾಪರ್ಫೀಲ್ಡ್‌ನ ಜೀವನ ವೃತ್ತಾಂತ ಮತ್ತು ಅನುಭವಗಳು

(ಕಾದಂಬರಿ)



ಮೂಲ ಇಂಗ್ಲಿಷಿನಲ್ಲಿ ಚಾರ್ಲ್ಸ್ ಡಿಕನ್ಸ್

ಕನ್ನಡ ಭಾವಾನುವಾದ ಎ.ಪಿ. ಸುಬ್ಬಯ್ಯ

ಡೇವಿಡ್ ಕಾಪರ್ಫೀಲ್ಡ್‌ನ ಜೀವನ ವೃತ್ತಾಂತ ಮತ್ತು ಅನುಭವಗಳು

(ಕಾದಂಬರಿ)


ಮೂಲ ಇಂಗ್ಲಿಷಿನಲ್ಲಿ ಚಾರ್ಲ್ಸ್ ಡಿಕನ್ಸ್
ಕನ್ನಡ ಭಾವಾನುವಾದ ಎ.ಪಿ. ಸುಬ್ಬಯ್ಯ

[ಮೂಲ ಪುಸ್ತಕದ ಮೊದಲ ಮುದ್ರಣ ೧೯೬೬, ಬೃಂದಾವನ್ ಪ್ರಿಂಟರ್ಸ್ ಪ್ರೈ.ಲಿ., ಚಾಮರಾಜಪೇಟೆ, ಬೆಂಗಳೂರು ೧೮. ಪುಟಗಳು೧೬ + ೫೫೦ ಬೆಲೆ ರೂ ಇಪ್ಪತ್ತೈದು ಮಾತ್ರ.]

ಅತ್ರಿ ವಿ–ಪುಸ್ತಕಗಳು

ಅಭಯಾದ್ರಿ, ಪಿಂಟೋರವರ ಓಣಿ, ಕರಂಗಲ್ಪಾಡಿ, ಮಂಗಳೂರು ೫೭೫೦೦೩

ದೂರವಾಣಿ: ೦೮೨೪–೨೪೯೨೪೯೭ । ಮಿಂಚಂಚೆ: athreebook@gmail.com | ಜಾಲತಾಣ: www.athreebook.com



ಅರ್ಪಣೆ



ವಿದ್ಯಾರ್ಥಿಗಳಿಗೆ ಪ್ರಿಯರೂ ಪೂಜ್ಯರೂ ಆಗಿ ಕಾಲೇಜಿನಲ್ಲಿ ಪ್ರೊಫೆಸರರಾಗಿ, ಅನಂತರ ಜಿಲ್ಲೆಯವಿದ್ಯಾಧಿಕಾರಿಗಳಾಗಿ ಹೆಸರು ಪಡೆದು, ಸರ್ಕಾರಿ ಕೆಲಸದಿಂದ ನಿವೃತ್ತರಾಗಿದ್ದರೂ ಸರ್ಕಾರದ ವಿದ್ಯಾಸಂಬಂಧದ ಕೆಲವು ಕಮಿಟಿಗಳ ಅಧ್ಯಕ್ಷರಾಗಿಯೂ, ಸಹಕಾರ ಸಂಸ್ಥೆಗಳ ಗಣನೀಯಸದಸ್ಯರಾಗಿಯೂ ಗೌರವ ಕಾರ್ಯಕರ್ತರಾಗಿಯೂ ಸಮಾಜದ ಸೇವೆಯನ್ನು ತಮ್ಮ ವೃದ್ಧಾಪ್ಯದಲ್ಲೂಸಲ್ಲಿಸುತ್ತಿರುವ ಮಂಗಳೂರಿನ ಶ್ರೀಮಾನ್ ಉಚ್ಚಿಲ ಕಣ್ಣಪ್ಪ, ಎಂ.ಎ., ಎಲ್.ಟಿ., ಇವರುಗಳಿಗೆ ಈಭಾವಾನುವಾದದ ಗ್ರಂಥವನ್ನು ಶಿಷ್ಯಭಾವದ ಭಯಭಕ್ತಿಗಳಿಂದ – ಹಿಂದೆ ಕಾಲೇಜಿನಲ್ಲಿ ಶಿಷ್ಯನೇ ಆಗಿದ್ದನಾನು – ಇದೇ ಕಾದಂಬರಿಯನ್ನು ಇಂಗ್ಲಿಷಿನ ಪಠ್ಯಪುಸ್ತಕವನ್ನಾಗಿ ಓದಿ ತಿಳಿದ ಸವಿನೆನಪಿನಿಂದ – ಅರ್ಪಿಸುತ್ತೇನೆ.

ಎ.ಪಿ. ಸುಬ್ಬಯ್ಯ
೨೦ನೇ ಅಕ್ಟೋಬರ್ ೧೯೬೬
ಪುತ್ತೂರು

ಮುನ್ನುಡಿ

ಕನ್ನಡದಲ್ಲಿ ಕಾದಂಬರಿಗಳ ಯುಗ ಕಾಲಿರಿಸಿದ್ದು ಕಳೆದ ಶತಮಾನದ ಕೊನೆಯಲ್ಲಿ. ಸ್ವತಂತ್ರಕಾದಂಬರಿಗಳ ಪಂಕ್ತಿಯಲ್ಲಿ ಮೊದಲಿಗೆ ಕಾಣಿಸಿಕೊಂಡ ಕನ್ನಡ ಕಾದಂಬರಿ ಗುಲ್ವಾಡಿವೆಂಕಟರಾಯರ 'ಇಂದಿರಾ. ಇದು ಕಳೆದ ಶತಮಾನದ ಕೊನೆಯ ದಶಕದಲ್ಲಿಪ್ರಕಟಗೊಂಡಿತು. ಅದೇ ವೇಳೆಯಲ್ಲಿ ಆ ಕಾದಂಬರಿಯ ಇಂಗ್ಲಿಷ್ ಅನುವಾದ ಕೂಡ ದಕ್ಷಿಣಕನ್ನಡ ಜಿಲ್ಲೆಯ ಕಲೆಕ್ಟರರಾಗಿದ್ದ ಕ್ರೌಚ್‌ಮೆನ್ ಎಂಬ ಇಂಗ್ಲಿಷ್ ಗೃಹಸ್ಥರಿಂದಭಾಷಾಂತರಿಸಲ್ಪಟ್ಟು ಪ್ರಕಟಗೊಂಡಿತು. ಈ ಶತಮಾನದ ಆರಂಭದಲ್ಲಿ ಗುಲ್ವಾಡಿಅಣ್ಣಾಜಿರಾಯರ 'ಸೀಮಂತಿನಿ ಎಂಬ ಸ್ವತಂತ್ರ ಕಾದಂಬರಿ, ಎಂ.ಎಸ್. ಪುಟ್ಟಣ್ಣನವರ'ಮಾಡಿದ್ದುಣ್ಣೋ ಮಹಾರಾಯ, ಬೋಳಾರ ಬಾಬೂರಾಯರ 'ವಾಗ್ದೇವಿಗಳುಪ್ರಕಟಗೊಂಡವು. ಇದೇ ವೇಳೆಯಲ್ಲಿ ಬಿ. ವೆಂಕಟಾಚಾರ್ಯರು ಬಹಳವಾಗಿ ಬಂಗಾಳಿಕಾದಂಬರಿಗಳ ಕನ್ನಡ ಅನುವಾದಗಳನ್ನು ಒದಗಿಸಿಕೊಟ್ಟರು. ಅವರು ಇಂಗ್ಲಿಷಿನಿಂದಭಾಷಾಂತರಿಸಿದ 'ರಜನಿಯೆಂಬ ಕಾದಂಬರಿ 'ಲಾಸ್ಟ್ ಡೇಸ್ ಆಫ್ ಪೊಂಪಿ ಎಂಬುದರ ಅನುವಾದ. ಹೆಚ್ಚು ಕಡಿಮೆ, ದೇಶ ಭಾಷೆಗಳಲ್ಲಿ ಈ ಶತಮಾನದ ಆರಂಭದಲ್ಲಷ್ಟೆ ಕಾದಂಬರಿಸಾಹಿತ್ಯ ನಮ್ಮಲ್ಲಿ ಕಾಣಿಸಿಕೊಂಡಿತೆಂದು ಹೇಳಿದರೆ ತಪ್ಪಾಗಲಾರದು. ದೀರ್ಘವಾದ ಸ್ವತಂತ್ರ ಕಥಾನಕಗಳ ಸಾಹಿತ್ಯ ರೂಪ ಮೊದಲು ಕಾಣಿಸಿಕೊಂಡುದು ಯುರೋಪಿನಲ್ಲಿ. ಭಾರತೀಯರಾದ ನಮಗೆಅಂತಹ ರಚನೆ ಮಾಡುವ ಪ್ರೇರಣೆ ಬಂದದ್ದು ಇಂಗ್ಲಿಷ್ ಸಾಹಿತ್ಯದಿಂದ. ಅವರು ತಮಗೆ ಹೊಸತಾದ ಈ ಸಾಹಿತ್ಯ ರೂಪವನ್ನು'ನಾವೆಲ್' ಎಂಬ ಅಭಿದಾನದಿಂದ ಕರೆದರು. ಹಲವಾರು ವ್ಯಕ್ತಿಗಳ ಶೀಲವನ್ನೂ, ಸಮಾಜದಲ್ಲಿ ವಿವಿಧ ಸನ್ನಿವೇಶಗಳಿಂದ ಭಿನ್ನಶೀಲರಲ್ಲಿ ಉಂಟಾಗುವ ಸಂಘರ್ಷಣೆಗಳನ್ನೂ ಚಿತ್ರಿಸುವುದು ಇವುಗಳ ಗುರಿಯಾಗಿತ್ತು. ಇಂಗ್ಲಿಷಿನಂತೆಯೇ ಫ್ರೆಂಚ್ ಸಾಹಿತ್ಯದಲ್ಲಿ ಈಬಗೆಯ ಕಾದಂಬರಿಗಳು ಬಂದುವು. ವಿಕ್ಟರ್ ಹ್ಯೂಗೋವಿನ 'ಲಾ ಮಿಸರೆಬಲ್ಸ್' ಅಂಥ ಒಂದು ಬೃಹತ್ ಕಾದಂಬರಿ. ಅದುದೊಡ್ಡದಾಗಿರುವಂತೆ ಬಲು ಶಕ್ತಿಯುತವೂ ಆದ ರಚನೆಯಾಗಿದೆ. ಫ್ರೆಂಚ್ ಭಾಷೆಯಿಂದ ಇಂಗ್ಲಿಷಿಗೆ ಪರಿವರ್ತನೆಗೊಂಡ ಆಕಾದಂಬರಿಯೂ ನಮ್ಮ ಕಣ್ಣಿಗೆ ಬಂತು. ರಷ್ಯಾ ದೇಶದಲ್ಲಿ ಕಳೆದ ಶತಮಾನದಲ್ಲಿ ಹೆಸರಾಂತ ಸಾಹಿತಿ ಎನಿಸಿಕೊಂಡ ಕೌಂಟ್ ಲಿಯೋಟಾಲ್ಸ್ಟಾಯ್ ಬರೆದ 'ವಾರ್ ಎಂಡ್ ಪೀಸ್, 'ಎನ್ನಾ ಕೆರಿನೀನಾ' ಮೊದಲಾದ ಗ್ರಂಥಗಳು ಇಂಗ್ಲಿಷ್ ಭಾಷೆಯಲ್ಲಿ ಭಾಷಾಂತರಗೊಂಡುನಮ್ಮ ಜನಗಳ ಕಣ್ಣಿಗೆ ಬಿದ್ದುವು. ಸ್ವತಃ ಇಂಗ್ಲಿಷಿನಲ್ಲಿಯೇ ಕಳೆದ ಶತಮಾನದಲ್ಲಿಯೇ ಹಲವು ಪ್ರಸಿದ್ಧ ಬರಹಗಾರರುಕಾಣಿಸಿಕೊಂಡರು. ಬ್ರೊಂಟೆ ಸಹೋದರಿಯರು, ಜೇನ್ ಆಸ್ಟಿನ್, ಸರ್ ವಾಲ್ಟರ್ ಸ್ಕಾಟ್, ಥಾಮಸ್ ಹಾರ್ಡಿ, ಚಾರ್ಲ್ಸ್ ಡಿಕೆನ್ಸ್,ಮಿಸೆಸ್ ಹೆನ್ರಿ ವುಡ್, ಗೋಲ್ಡ್ ಸ್ಮಿತ್ ಮೊದಲಾದವರು ಹಲವು ಕಾದಂಬರಿಗಳನ್ನು ಇಂಗ್ಲಿಷಿನಲ್ಲಿ ಕೊಟ್ಟಿದ್ದಾರೆ. ಆ ಕಾಲದಲ್ಲಿಇಂಗ್ಲೆಂಡಿನ ಕಾದಂಬರಿಯ ಬೆಳಸು ಸಮೃದ್ಧಿಯಾಗಿದ್ದುದಲ್ಲದೆ, ವಿಶೇಷ ಜನಪ್ರಿಯವೂ ಪ್ರಭಾವಶಾಲಿಯೂ ಆಗಿತ್ತು. ಯಾವುದೇ ಒಂದು ದೇಶದ ಜನತೆ ಸಾಹಿತ್ಯಕ್ಕೆ ಮನ್ನಣೆ ಕೊಡುವಲ್ಲಿ, ಅದರ ನಿಷ್ಕರ್ಷ ರೂಪ ಮತ್ತು ತೂಕಗಳನ್ನುಅರ್ಥಮಾಡಿಕೊಳ್ಳಬೇಕಾದರೆ, ಅನ್ಯ ಭಾಷೆಗಳಲ್ಲಿಯೂ ನಡೆಯುತ್ತಿರುವ ಸಾಹಿತ್ಯದ ಕೃಷಿ ಯಾವ ಬಗೆಯದು ಎಂದುತಿಳಿಯಲೇಬೇಕು. ಕರ್ನಾಟಕದ ಜನರು ಬರಿಯ ಕನ್ನಡ ಬರಹಗಳನ್ನಷ್ಟೇ ಓದಿ 'ನಮ್ಮದು ಹಾಗೆ', 'ನಮ್ಮದು ಹೀಗೆ' ಎಂದು ತಿಳಿದರೆಅದರಿಂದ ಸಾಹಿತ್ಯವನ್ನು ಕುರಿತಾದ ವಿವೇಕಯುತ ದೃಷ್ಟಿ ಬರಲಾರದು. ಜೀವನ ದೃಷ್ಟಿ ಪೂರ್ಣವಾಗಿ ನಮಗೆ ಬರುವುದಕ್ಕೂ ಕೂಡ,ಅನ್ಯ ಜನಗಳ ಜೀವನದ ಪರಿಚಯವೂ ನಮಗಾಗಬೇಕು. ಅದು ಪ್ರತ್ಯಕ್ಷವಾಗಿ ನಮಗೆ ದೊರೆಯದಿದ್ದಾಗ ಸಾಹಿತ್ಯದ ಮೂಲಕಅದನ್ನು ನಾವು ತಿಳಿಯಬೇಕು. ಈ ಕೆಲಸವನ್ನು ನಮ್ಮ ನಮ್ಮ ಭಾಷೆಯಲ್ಲಿ ಅನುವಾದಕರು ಮಾಡಿಕೊಡಬೇಕಾಗುತ್ತದೆ. ಆದೃಷ್ಟಿಯಿಂದ ಮಿತ್ರರಾದ ಶ್ರೀ ಎ.ಪಿ. ಸುಬ್ಬಯ್ಯನವರು ಕೈಕೊಂಡಿರುವ ಈ ಕೆಲಸ ಮಹತ್ವವಾದದ್ದು. ಈ ಹಿಂದೆ ಅವರು ವಿಕ್ಟರ್ಹ್ಯೂಗೋವಿನ 'ಲಾ ಮಿಸರೆಬಲ್ಸ್' ಕಾದಂಬರಿಯನ್ನು ಕನ್ನಡಿಸಿ ಪ್ರಕಟಿಸಿದರು. ಈ ಬಾರಿ ಇಂಗ್ಲಿಷ್ ಕಾದಂಬರಿಕಾರ ಚಾರ್ಲ್ಸ್ಡಿಕೆನ್ಸನು ಬರೆದ, ಅವನ ಅತ್ಯುತ್ತಮ ಗ್ರಂಥವೆನಿಸಿದ 'ಡೇವಿಡ್ ಕಾಪರ್ಫೀಲ್ಡ್'ನ್ನು ಅನುವಾದಿಸಿ ಕೊಟ್ಟಿದ್ದಾರೆ. ಈ ಕಾದಂಬರಿ೧೮೪೯–೫೦ರಲ್ಲಿ ಇಂಗ್ಲೆಂಡಿನ ಪತ್ರಿಕೆಯೊಂದರಲ್ಲಿ ಕ್ರಮಶಃ ಪ್ರಕಟವಾಯಿತು. ಅದರೊಳಗಣ ಕೆಲವೊಂದು ಪಾತ್ರಗಳುಚಿರಸ್ಮರಣೀಯವಾಗಿವೆ. ಭಾಷಾಂತರದ ಕೆಲಸ ಸುಲಭವೆಂದು ಯಾರೂ ತಿಳಿಯಬೇಕಾಗಿಲ್ಲ. ಒಂದುಭಾಷೆಯ ಪದಸಂಪತ್ತಿಗೆ ಸಮನಾಗಿ ಇನ್ನೊಂದು ಭಾಷೆಯಲ್ಲಿ ಉಚಿತ ಪದಗಳುಸಿಗುವುದು ಕಷ್ಟ. ಇಂಗ್ಲೆಂಡಿನ ಜೀವನಕ್ರಮವೇ ಪ್ರತ್ಯೇಕವಾದುದರಿಂದ ಅಲ್ಲಿನಶಿಷ್ಟಾಚಾರ, ವಸ್ತು, ಒಡವೆಗಳ ರೂಪ ಬೇರೆಯವೇ ಆದುದರಿಂದ ಅವಕ್ಕೆಲ್ಲಸಮಾನ ಪದಗಳನ್ನು ಕನ್ನಡದಲ್ಲಿ ಒದಗಿಸುವುದು ಕಷ್ಟ. ಈ ಅಡಚಣೆಯ ಜೊತೆಗೆಇಂಗ್ಲಿಷ್ ಭಾಷೆಯ ಅಂದಿನ ಅಥವಾ ಇಂದಿನ ವಾಕ್ಯ ರಚನಾ ಕ್ರಮಗಳು, ನುಡಿಗಟ್ಟುಗಳು, ಕನ್ನಡದ ಹಿಡಿತಕ್ಕೆ ಸಿಗುವುದೂ ಕಷ್ಟ. ಅವನ್ನು ಇದ್ದಕ್ಕಿದ್ದಂತೆ(ಮಕ್ಕಾಮಕ್ಕಿ) ಭಾಷಾಂತರಿಸಿದರೆ 'ಇದು ಕನ್ನಡವೇ?' ಎಂಬ ಟೀಕೆ ಬರುತ್ತದೆ.ಹಾಗೆ ಮಾಡದೇ ಹೋದರೆ 'ಮೂಲದಲ್ಲಿ ಹೀಗಿರಲಿಲ್ಲವಲ್ಲ' ಎಂದು ಇಂಗ್ಲಿಷಿನಲ್ಲಿಅದನ್ನೋದಿದವರು ಹೇಳಬಹುದು. ಯಾವ ಭಾಷಾಂತರಕಾರನಿಗೂ ಈ ಸಮಸ್ಯೆತಪ್ಪಿದ್ದಲ್ಲ. ಇಂಥ ಅಡಚಣೆಗಳನ್ನು ಎದುರಿಸಿ, ಉತ್ಸಾಹದಿಂದ ನಮ್ಮ ಮಿತ್ರರುಡಿಕನ್ಸಿನ ಒಂದು ಕಾದಂಬರಿಯ ರೂಪರೇಷೆಗಳು ಹೇಗಿರಬಹುದೆಂದುತೋರಿಸುವುದಕ್ಕೆ ಪ್ರಯತ್ನಿಸಿದ್ದಾರೆ. ಇಂಥ ಅನೇಕ ಅನ್ಯದೇಶೀಯಕಾದಂಬರಿಗಳೂ ಮತ್ತು ಇತರ ಸಾಹಿತ್ಯಗಳೂ ಕನ್ನಡದಲ್ಲಿ ಬರಬೇಕಾಗಿದೆ.ಅನುವಾದದ ಜಟಿಲ ಸಮಸ್ಯೆಗಳನ್ನು ತಿಳಿದು, ಪರಿಶ್ರಮದಿಂದ ಅವನ್ನು ಬಿಡಿಸಿ,ಕನ್ನಡ ಜನದ ಮನಸ್ಸನ್ನು ತೃಪ್ತಿಪಡಿಸಲು ಅನೇಕ ಸಾಹಸಿಗಳು ಮುಂದೆಬರಬೇಕಾಗಿದ್ದ ಈ ಕಾಲದಲ್ಲಿ ಶ್ರೀ ಎ.ಪಿ. ಸುಬ್ಬಯ್ಯನವರ ಈ ಯಥಾನುಶಕ್ತಿಪ್ರಯತ್ನವನ್ನು ಆದರದಿಂದ ಸ್ವಾಗತಿಸಬೇಕಾಗಿದೆ. ಅವರು ದೀರ್ಘ ಕಾಲದಿಂದತಮ್ಮ ಬಿಡುವಿನ ಸಮಯವನ್ನು ಈ ಕೆಲಸಕ್ಕಾಗಿ ಕಳೆಯುತ್ತಿದ್ದಾರೆ. ಓದುಗರಸಹಕಾರ, ಸಹಾನುಭೂತಿಯಿಂದ ಅವರ ಪ್ರಯತ್ನಕ್ಕೆ ತಕ್ಕ ಪುರಸ್ಕಾರಸಿಗುವಂತಾಗಲೆಂದು ಹಾರೈಸುತ್ತೇನೆ.

ಶಿವರಾಮ ಕಾರಂತ (೧೭–೧೦–೧೯೬೬, ಪುತ್ತೂರು, ದಕ.)

ಚಾರ್ಲ್ಸ್ ಡಿಕನ್ಸರ ಜೀವನ ಚರಿತ್ರೆಯ ಸೂಕ್ಷ್ಮ ಪರಿಚಯ

ಚಾರ್ಲ್ಸ್ ಡಿಕನ್ಸರು ೧೮೧೨ನೇ ಇಸವಿಯ ಫೆಬ್ರವರಿ ೭ರಲ್ಲಿ ಇಂಗ್ಲೆಂಡಿನಪೋರ್ಟ್ಸ್‌ಮತ್ ಎಂಬಲ್ಲಿ ಜನಿಸಿದರು. ಇವರದು ಕೇವಲ ಒಂದು ಬಡ ಕುಟುಂಬ.ಇವರ ತಂದೆಯ ಹೆಸರು ಜಾನ್ ಡಿಕನ್ಸ್. ಜಾನ್ ಡಿಕನ್ಸ್ ಬಡತನದಿಂದ ಬಹಳಕಷ್ಟಗಳನ್ನು ಅನುಭವಿಸಿದರು. ಸಾಲಗಳ ಬಾಧೆ ಪರಮಾವಧಿಗೆ ಮುಟ್ಟಿ, ಈಕುಟುಂಬ ಸ್ವಲ್ಪ ಸಮಯ ಜೈಲಿನಲ್ಲೇ ಇತ್ತು. ಯಜಮಾನನಿಗೆ ಜೈಲಾದರೂ ಅವನಕುಟುಂಬವೂ ಜೈಲಿನಲ್ಲಿರುವ ಅನುಕೂಲ ಆಗಿನ ಕಾಲದಲ್ಲಿ ಇತ್ತಂತೆ. (ಇದು ಸಿವಿಲ್‌ಜೈಲು ವಾಸದ ಸಮಯದಲ್ಲಿ ಮಾತ್ರ) ಹೀಗೆ ತನ್ನ ತಂದೆ ಜೈಲಿನಲ್ಲಿದ್ದಾಗ ಚಾರ್ಲ್ಸ್‌ಡಿಕನ್ಸರು ಒಂದು ಕಾರ್ಖಾನೆಯಲ್ಲಿ ಕುಪ್ಪಿಗಳನ್ನು ತೊಳೆದು ಅವಕ್ಕೆ ಚೀಟಿ ಅಂಟಿಸುವವೃತ್ತಿಯಿಂದ ಸಂಬಳ ಸಂಪಾದಿಸುತ್ತಿದ್ದರು. ತಮ್ಮ ವೃತ್ತಿಯನ್ನೂ ವಾಸಸ್ಥಳವನ್ನೂಬದಲಾಯಿಸುವುದರಿಂದ ತಾವು ಬಡತನದಿಂದ ಪಾರಾಗಬಹುದೆಂದುನಿರೀಕ್ಷಿಸಿಕೊಂಡು ಜಾನ್ ಡಿಕನ್ಸರು ಇಂಗ್ಲೆಂಡಿನ ಅನೇಕ ಪಟ್ಟಣಗಳಿಗೆ ತಮ್ಮಸಂಸಾರವನ್ನು ಸಾಗಿಸಿ, ಜೀವನ ನಡೆಸಿ ನೋಡಿದರು. ಒಂದು ಕ್ಷಣ ದುಃಖಭಾವದಅತ್ಯುಗ್ರ ಸ್ಥಿತಿಯಲ್ಲಿದ್ದು ಮರುಕ್ಷಣದಲ್ಲೇ ಸಂತೋಷಭಾವದ ಶಿಖರಕ್ಕೇರಿ ಅದರಲ್ಲಿತಲ್ಲೀನರಾಗಬಲ್ಲ, ಸದಾ ಶುಭನಿರೀಕ್ಷಣೆಗಳಾಗಿದ್ದ 'ಮಿಸ್ಟರ್ ಮೈಕಾಬರರು ಜಾನ್ಡಿಕನ್ಸರನ್ನು ಬಹುವಾಗಿ ಹೋಲುವ ಕಥಾವ್ಯಕ್ತಿ. 'ಡೇವಿಡ್ ಕಾಪರ್ಫೀಲ್ಡ್ ಚಾರ್ಲ್ಸ್‌ಡಿಕನ್ಸರ ಆತ್ಮಕಥೆಯೆಂದರೂ ವಿಶೇಷ ತಪ್ಪಾಗಲಾರದು.

ಡಿಕನ್ಸರ ಕಾದಂಬರಿಗಳಲ್ಲಿ 'ಡೇವಿಡ್ ಕಾಪರ್ಫೀಲ್ಡ್ ಸರ್ವೋತ್ಕೃಷ್ಟವಾದುದೆಂದುಅನೇಕ ವಿಮರ್ಶಕರ ಅಭಿಪ್ರಾಯ. 'ಬ್ಲೀಕ್ ಹೌಸ್, 'ನಿಕೊಲಾಸ್ ನಿಕಲ್ಬಿ, ಆಲಿವರ್ಟ್ವಿಸ್ಟ್ ಮೊದಲಾದ ಅನೇಕ ಕಾದಂಬರಿಗಳನ್ನು ಅವರು ಬರೆದಿರುತ್ತಾರೆ. ೧೮೩೬ರಲ್ಲಿ'ಪಿಕ್‌ವಿಕ್ ಪೇಪರ್ಸ್ ಎಂಬ ಹಾಸ್ಯ ಪ್ರಧಾನವಾದ ಇವರ ಪುಸ್ತಕವೊಂದು ಪ್ರಕಾಶಕ್ಕೆಬಂತು. ಇದು ಪ್ರಚಾರಕ್ಕೆ ಬಂದು ಬಹು ಸ್ವಲ್ಪ ಸಮಯದಲ್ಲಿ ಡಿಕನ್ಸರು (ಒಂದು ರೀತಿಯ) ಅನಾಮಧೇಯ ಸ್ಥಿತಿಯಿಂದಜಗದ್ವಿಖ್ಯಾತೆಗೂ ಬಡತನದಿಂದ ಶ್ರೀಮಂತಿಕೆಗೂ ತಲುಪಿದರು.

ಚಾರ್ಲ್ಸ್ ಡಿಕನ್ಸರು ಎರಡಾವೃತ್ತಿ ಅಮೆರಿಕ ದೇಶವನ್ನು ಸಂದರ್ಶಿಸಿರುವರು; ಅಮೆರಿಕದ ಅವರ ಅನುಭವಗಳನ್ನು ಮಾರ್ಟಿನ್ ಚಸಲ್ವಿಟ್ ಎಂಬ ಕಾದಂಬರಿಯಲ್ಲಿ ಚಿತ್ರಿಸಿರುವರು. ಇವರ ಖ್ಯಾತಿ ಹೆಚ್ಚಿದಂತೆಯೇ ಇವರ ಕಾದಂಬರಿಗಳನ್ನು ಇವರಿಂದಲೇ ಓದಿಸಿ ಕೇಳುವಒಂದು ನೂತನ ಕ್ರಮವನ್ನು ಇಂಗ್ಲಿಷ್ ಮತ್ತು ಅಮೆರಿಕದ ಜನರು ಏರ್ಪಡಿಸತೊಡಗಿದರು. ಈ ವಿಧದ ಕಥಾಕಾಲಕ್ಷೇಪ ಇವರಕೀರ್ತಿಯನ್ನು ಹೆಚ್ಚಿಸಿತು. ಆದರೆ ಈ ಪರಿಶ್ರಮಗಳ ಫಲವಾಗಿ ಇವರ ಆರೋಗ್ಯವು ಕೆಡುತ್ತಾ ಬಂತು. ೧೮೭೦ನೇ ಇಸವಿಯ ಜೂನ್ತಿಂಗಳ ೯ರಲ್ಲಿ ಇವರು ದೈವಾಧೀನರಾದರು. ಇಂಗ್ಲೆಂಡಿನ ರಾಷ್ಟ್ರಕವಿಗೆ ತಕ್ಕುದಾದ ಗೌರವಗಳಿಂದ ಇವರ ಕಳೇಬರ ವೆಸ್ಟ್ಮಿನಿಸ್ಟರ್ ಎಬ್ಬಿಯಲ್ಲಿ ಸಮಾಧಿ ಮಾಡಲ್ಪಟ್ಟಿತು.

'ಡೇವಿಡ್ ಕಾಪರ್ಫೀಲ್ಡ್‌ನಿಂದಲೂ ಡಿಕನ್ಸರ ಜೀವನ ಚರಿತ್ರೆಯಿಂದಲೂ ನಾವು ತಿಳಿಯಬಹುದಾದ ಉತ್ತಮ ವಿಷಯಗಳು ಅನೇಕ ಇವೆ.ಹಿಡಿದ ಕಾರ್ಯವನ್ನು ಎಡೆಬಿಡದೆ ಪರಿಶ್ರಮಗಳಿಂದ ಸಾಧಿಸುವ ಶಕ್ತಿ, ಕರ್ತವ್ಯದಲ್ಲಿ ಶ್ರದ್ಧೆ ಈ ಗುಣಗಳಿಲ್ಲದೆ ಶ್ರೀಮಂತಿಕೆಗೂ ಖ್ಯಾತಿಗೂಬರುವುದು ಕಷ್ಟವೆಂಬುದು ಈ ಚರಿತ್ರೆಗಳಲ್ಲಿ ಕಂಡುಬರುವುದು. ಸ್ಫೂರ್ತಿ, ಅನುಭವ, ವಾಕ್ ಶಕ್ತಿ, ಶಬ್ದ ಸಂಪತ್ತಿ, ಇವೆಲ್ಲವುಗಳ ಜತೆಗೆಕರ್ತವ್ಯಸಾಧನಾ ಶಕ್ತಿ ಇದ್ದರೆ ಮಾತ್ರ ಒಬ್ಬನು ಉತ್ತಮ ಸಾಹಿತಿಯಾಗಬಲ್ಲನೆಂಬುದನ್ನೂ ನಾವು ತಿಳಿಯಬಹುದು.

ಇವರ ಕಾದಂಬರಿಗಳಲ್ಲಿ ಪ್ರೀತಿ, ವಿಶ್ವಾಸ, ಕರುಣೆ, ಅನುಕಂಪ, ಸೌಮ್ಯವಾದ ಹಾಸ್ಯಗಳು ತುಂಬಿರುವುವು. ಒಂದು ಪಾರ್ಲಿಮೆಂಟುಮಾಡಬಹುದಾದ ಸಮಾಜ ಸುಧಾರಣೆಗಳನ್ನು ಈ ಒಬ್ಬ ವ್ಯಕ್ತಿ ತಮ್ಮ ಕೃತಿಗಳಿಂದ ಮಾಡಿರುವರೆಂದರೆಅತಿಶಯೋಕ್ತಿಯಾಗಲಾರದು. ಇವರ ಕಾದಂಬರಿಗಳನ್ನೋದುವುದರಿಂದ ನಮ್ಮ ಜೀವನವು ಸಂಸ್ಕಾರ ಹೊಂದುವುದೆನ್ನಲೂಬಹುದು. ಜೀವನದಲ್ಲಿ ಇರುವ ಮುಖಗಳನ್ನು ಮಾನವ ಸ್ವಭಾವಕ್ಕೆ ಇರಬೇಕಾದ ಪ್ರೀತಿ, ಅನುಕಂಪ, ನಗುಗಳಿಂದ ನಿವಾರಿಸಬೇಕೆಂಬಮಾರ್ಗವನ್ನು ಡಿಕನ್ಸರು ತೋರಿಸುತ್ತಿರುವರು. ಸದುದ್ದೇಶಪೂರಿತರಾದ ಸದ್ಗುಣಿ ಪಾತ್ರಗಳಿಂದ ಚಿತ್ರಿತವಾಗಿ ತುಂಬಿರುವ ಇವರಕಾದಂಬರಿಗಳನ್ನು ಇಂಗ್ಲಿಷ್ ಬರುವವರೆಲ್ಲರೂ ಓದಿಯೇ ಓದುತ್ತಾರೆ.

ಎ.ಪಿ. ಸುಬ್ಬಯ್ಯ


ಅನುವಾದಕರ ನಾಲ್ಕು ಮಾತುಗಳು

ನನ್ನ ಎಸ್ಸೆಸೆಲ್ಸಿ ಕ್ಲಾಸಿನಲ್ಲಿ ಸಂಕ್ಷಿಪ್ತಗೊಳಿಸಲಾಗಿದ್ದ 'ಡೇವಿಡ್ ಕಾಪರ್ ಫೀಲ್ಡ್' ಕಾದಂಬರಿ 'ನಾನ್ ಡಿಟೈಲ್ ಪುಸ್ತಕವಾಗಿ ನಾನುಓದಬೇಕಾಗಿ ಬಂತು. ನಮ್ಮ ಬಹು ಗೌರವದ, ಮೆಚ್ಚಿನ ಉಪಾಧ್ಯಾಯರು – ಶ್ರೀ ಯು. ಕಣ್ಣಪ್ಪನವರು, ನಮಗೆಲ್ಲ ಅಪ್ಪಣೆ, ಪ್ರೇರಣೆ–ಪ್ರೋತ್ಸಾಹ ಕೊಟ್ಟ ಕಾರಣವಾಗಿ ನಾನು ಮೂಲ 'ಡೇವಿಡ್ ಕಾಪರ್ಫೀಲ್ಡ್ನ್ನ, ಚಾರ್ಲ್ಸ್ ಡಿಕನ್ಸರ ಇತರ ಅನೇಕ ಕಾದಂಬರಿಗಳನ್ನೂಓದಿದೆ. ಬೇರೆ ಲೇಖಕರ ಕಾದಂಬರಿಗಳನ್ನು ನಾನು ಆಗಲೂ ಅನಂತರವೂ ಹೆಚ್ಚಿನ ಸಂಖ್ಯೆಯಲ್ಲಿ ಓದಲಿಲ್ಲ. ಈ ಕಾರಣದಿಂದಲೋಅಥವಾ ನ್ಯಾಯವಾಗಿಯೋ ಚಾರ್ಲ್ಸ್ ಡಿಕನ್ಸರಿಗಿಂತ ಉತ್ತಮ ಕಾದಂಬರೀಕಾರರಿಲ್ಲವೆಂದು ಆಗ (...ಕಪ್ಪೆಯಂತೆ) ನಿಶ್ಚೈಸಿಬಿಟ್ಟೆ. ಈಕಾರಣಗಳಿಂದಲೂ ನನ್ನ ಜೀವನಾನುಭಗಳಿಂದಲೂ 'ಡೇವಿಡ್ ಕಾಪರ್‌ಫೀಲ್ಡ್' ಕಾದಂಬರಿ ನನ್ನ ಅಚ್ಚುಮೆಚ್ಚಿನದಾಗಿ ಹೋಗಿದೆ. ನನ್ನ ಸೋದರಳಿಯ ನಾರಾಯಣ ಸುಮಾರು ಹದಿನಾಲ್ಕು ವರ್ಷಗಳ ಹಿಂದೆ, ನಾನು ಈ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಬೇಕೆಂದು ಸಲಹೆಯಿತ್ತನು. ಸಾಧಾರಣ ಆ ಸಮಯದಲ್ಲೇನನಗೊಂದು ಕಠಿಣ ಖಾಯಿಲೆ ಬಂದು, ಅದರ ಸಂಬಂಧ ವಿಶ್ರಾಂತಿ ದೊರಕಿದಾಗ ಈ ಭಾಷಾಂತರಕಾರ್ಯವನ್ನು ಮಾಡಿ ಮುಗಿಸಿದೆ. ಇದರ ಜೊತೆಯಲ್ಲೇ ಫ್ರೆಂಚ್ ಕಾದಂಬರಿ (ಇಂಗ್ಲಿಷ್ ಮೂಲದಿಂದ) 'ಲಾ ಮಿಸರೆಬಲ್ಸ್'ನ್ನು 'ದುಃಖಾರ್ತರು' ಎಂದು ಹೆಸರಿತ್ತು ಅನುವಾದಿಸಿದೆ.

ನನ್ನ ಈ ಎರಡು ಭಾಷಾಂತರಗಳನ್ನು (ಈಗ ದಿವಂಗತ) ವೇದಾಂತ ಶಿರೋಮಣಿ, ಕಡವ, ಶ್ರೀಶಂಭುಶರ್ಮರು ಓದಿ, ಅಗತ್ಯಬಿದ್ದಲ್ಲಿ ನನ್ನಿಂದ ತಿದ್ದಿಸಿ, ತನ್ನ ಸಂತೋಷವನ್ನು ವ್ಯಕ್ತಪಡಿಸಿದರು.ಮಾತ್ರವಲ್ಲದೆ ಈ ಎರಡೂ ಕಾದಂಬರಿಗಳನ್ನು ತುಲನಾತ್ಮಕವಾಗಿ ಗ್ರಹಿಸಿ, ಇದು'ದುಃಖಾರ್ತರಿ'ಗಿಂತಲೂ ಮೇಲ್ಮಟ್ಟದ್ದು ಎಂದು ಪ್ರಶಂಸಿಸಿದರು. ಇವರ ಈ ಪ್ರಶಂಸೆ ಕಾರಣವಾಗಿ ನನ್ನಕೈ ಬರಹದ ಪ್ರತಿ ಹಾಳಾಗದೆ ನನ್ನಲ್ಲಿ ಉಳಿದಿತ್ತು. ಶ್ರೀ ಶಂಭುಶರ್ಮರನ್ನು ನಾನಿಂದುಕೃತಜ್ಞತಾಪೂರ್ವಕವಾಗಿ, ಗೌರವದಿಂದ ಸ್ಮರಿಸುತ್ತೇನೆ. 'ದುಃಖಾರ್ತರು' ಪ್ರಿಂಟು–ಪ್ರಕಟಣೆಗೊಂಡಿರುವುದಾದರೂ 'ಡೇವಿಡ್ ಕಾಪರ್‌ಫೀಲ್ಡ್' ಮೂಲೆಗೆ ಬಿದ್ದಿತ್ತು. ಇಂಥ ಸಂದರ್ಭದಲ್ಲಿನಾರಾಯಣನ ಸಾಹಸ ಬುದ್ಧಿ, ಸಹಕಾರ ಬುದ್ಧಿ, ಕುಗ್ಗದ ತಗ್ಗದ ಜೀವನ ಸ್ಫೂರ್ತಿ ಮತ್ತು ಸ್ವಲ್ಪ ಮಟ್ಟಿಗೆ ಮೈಕಾಬರ್ ಬುದ್ಧಿ ಎದುರುಬಂದು ಈ ಕಾದಂಬರಿ ಪ್ರಿಂಟಾಗುತ್ತಿದೆ, ಪ್ರಕಟಗೊಳ್ಳುತ್ತಿದೆ. ಅವನ ಶ್ರಮ, ತ್ಯಾಗ, ಕೆಲಸ ಎಷ್ಟು ನಡೆದಿವೆ – ಈ ಸಂದರ್ಭದಲ್ಲಿ, ನನಗೆಮಾತ್ರ ಗೊತ್ತಾಗಿದೆ. ನನಗಿಂತ ಎಷ್ಟೋ ಚಿಕ್ಕವನಾದ ಚಿ। ನಾರಾಯಣನಿಗೆ ನನ್ನ ಅನಂತ ಆಶೀರ್ವಾದಗಳು.

ಶ್ರೀ ಡಾ। ಕೆ. ಶಿವರಾಮ ಕಾರಂತರು ೧೯೧೯ರಿಂದಲೇ ನನ್ನ ಪರಿಚಿತರೂ, ಅನಂತರ ನಮ್ಮ ನೆರೆಕರೆಯ ಸ್ನೇಹಿತರೂ ಆಗಿದ್ದರು.ಅವರ ಸಮಯದ ಅವಕಾಶವನ್ನೂ ಸಮಯದ ಬೆಲೆಯನ್ನೂ ಅರಿತಿರುವ ನಾನು ಅವರಿಂದ (ಆಖೈರು ಪ್ರೂಫ್ ತಿದ್ದಿದ) ಈ ಪುಸ್ತಕವನ್ನುಹೇಗೆ ಓದಿಸಲಿ, ಮುನ್ನುಡಿಯನ್ನು ಯಾಚಿಸಲಿ ಎಂದು ಹೆದರುತ್ತಿದ್ದೆ. ಒಮ್ಮೆ ನೋಡೋಣವೆಂದು ವಿಚಾರಿಸಿದೆ – 'ಆಖೈರು ಪ್ರೂಫ್ ತಿದ್ದಿಮುಗಿದ ಇಡೀ ಪುಸ್ತಕವನ್ನು ಕೊಟ್ಟರೆ, ಓದಿ ಮುನ್ನುಡಿ ಕೊಡಬಹುದು ಎಂಬರ್ಥದ ಉತ್ತರವಿತ್ತರು. ಓದದೆ ದಾಕ್ಷಿಣ್ಯಕ್ಕೆ,ಪ್ರಾಮಾಣಿಕತನವನ್ನು ಮೀರಿ, ತನ್ನ ಅಭಿಪ್ರಾಯವನ್ನು ಕೊಡಕೂಡದೆಂಬ ಅವರ ನಿಷ್ಠೆಗೆ, ಆತ್ಮ ಸಂಸ್ಕೃತಿಗೆ ನಾವು ಎಷ್ಟುಗೌರವಿಸಿದರೂ ಸಾಲದು. ಅವರು ತಮ್ಮ ಮುನ್ನುಡಿಯನ್ನು ನನಗೆ ಕೊಟ್ಟದ್ದು ಮಹಾ ಅನುಗ್ರಹವೆಂದು ಗ್ರಹಿಸುತ್ತಾ ಅವರನ್ನುಹಾರ್ದಿಕವಾಗಿ ವಂದಿಸುತ್ತೇನೆ.

ಇದರ ಪ್ರೂಫ್ ಓದಿ ತಿದ್ದುತ್ತಿದ್ದ ಕಾಲದಲ್ಲಿ ತಾವೂ ಕೇಳಿ, ಸಂತೋಷಿಸಿ, ನಮ್ಮ ಕಾರ್ಯ ಸಾಧನೆಯು ಸಂತೋಷಪ್ರದವಾಗುವಂತೆಸಲಹೆಯೀಯುತ್ತಿದ್ದ ನಾರಾಯಣನ ಮಿತ್ರ ವೃಂದಕ್ಕೂ ನನ್ನ ವಂದನೆಗಳು. ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿದ ಮೆ। ಬೃಂದಾವನ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಪ್ರೈ.ಲಿ., ಬೆಂಗಳೂರು ಇವರಉಪಕಾರವನ್ನು ಸಂತೋಷದಿಂದ ಸ್ಮರಿಸುತ್ತೇನೆ. ದೇವಸ್ಥಾನಗಳಲ್ಲಿ ದೇವರ ದಿವ್ಯ ಪ್ರಸಾದಕ್ಕಾಗಿ ಕೈಯೊಡ್ಡಿನಿಂತಿರುವ ಹಿರಿಯರ ಕಾಲೆಡೆಯಲ್ಲಿ ನುಗ್ಗಿ ತನಗೂ ಪ್ರಸಾದಬೇಕೆಂದು ಕೈಯೊಡ್ಡುವ ಕಿರುಬಾಲಕನಂತಿದೆ ನನ್ನ ಈಪ್ರಸಂಗ. ತಾವು ಕಾದಂಬರಿಗಳನ್ನೋ ಇತರ ಸಾಹಿತ್ಯವಿಷಯಗಳನ್ನೋ ಬರೆದು ಸಮಾಜದ ಸಂತೋಷ ಬಯಸುವಹಿರಿಯ ಸಾಹಿತಿಗಳ ಎಡೆಯಲ್ಲಿ ಅವರ ಮತ್ತು ಎಲ್ಲರಿಗೂ ಆಧಾರ ಸ್ತಂಭದಂತಿರುವ ಓದುಗರ, ಎರಡು ಶುಭಾಶಯಕ್ಕಾಗಿ ನಾನಿಂದು ಕೈಯ್ಯೊಡ್ಡಿ ನಿಂತಿದ್ದೇನೆ.



ಎ.ಪಿ.ಸುಬ್ಬಯ್ಯ
ಆರ್ಯಾಪು ಗ್ರಾಮದ ಮರಿಕೆ ಮನೆ, ದಕ
ತಾ। ೧೯–೧೦–೧೯೬೬

ವಿ–ಪ್ರಕಾಶಕನ ಮಾತುಗಳು

ಎ.ಪಿ. ಸುಬ್ಬಯ್ಯ ನನ್ನ ಅಜ್ಜ (ಮಾತಾಮಹ). ಇವರು ಕೇವಲ ಸಾಹಿತ್ಯ ಪ್ರೀತಿಗಾಗಿ ಅನುವಾದ,ಪ್ರಕಾಶನಗಳನ್ನು ನಂಬಿದವರು. ಡೇವಿಡ್ ಕಾಪರ್ಫೀಲ್ಡ್‌ನ್ನು ಇವರು ಸ್ವಂತ ವೆಚ್ಚದಲ್ಲಿ, ಅವರ ಅಂದಿನ ಪುತ್ತೂರು ಮನೆ ವಿಳಾಸದಲ್ಲೇ ಪ್ರಕಟಿಸಿದರು (ಆ ಮನೆ ಸದ್ಯ ಊರ್ಜಿತದಲ್ಲಿಲ್ಲ).

ಅದರ ಪೂರ್ಣ ಮುದ್ರಣ ಮತ್ತು ವಿತರಣೆಯ ಹೊಣೆ ಹೊತ್ತವರುಅಂದು ಬೆಂಗಳೂರಿನಲ್ಲಿದ್ದ ನನ್ನ ತಂದೆ – ಜಿ.ಟಿ. ನಾರಾಯಣರಾವ್ (ಸುಬ್ಬಯ್ಯನವರ ಹಿರಿಯ ಅಳಿಯ). ಐದಾರುವರ್ಷಗಳನಂತರ, ನಾವು ಮೈಸೂರಿಗೆ ಹೋದಾಗ, ಇದರಮಾರಿಹೋಗದ ಅಸಂಖ್ಯ ಪ್ರತಿಗಳನ್ನು ತಂದೆ ಯಾವುದೋಖಾಸಗಿ ಪ್ರಕಾಶಕರಿಗೆ ಸಗಟು ದರದಲ್ಲಿ ಕೊಟ್ಟುಕಳಚಿಕೊಳ್ಳಬೇಕಾಯ್ತು. ಆ ಪ್ರಕಾಶಕರಾದರೋ ಇದರನಿರಾಕರ್ಷಕ ರಟ್ಟನ್ನು ಬದಲಿಸಿ (ಹೊಸತರ ಮಾದರಿನನ್ನಲ್ಲಿಲ್ಲ), (ಪ್ರಕಟಣಾ ವರ್ಷವನ್ನು ‘ಅನುಕೂಲ’ಕ್ಕೆ ತಕ್ಕಂತೆತಿದ್ದಿಕೊಂಡಿರಬೇಕು) ಗ್ರಾಹಕಸ್ನೇಹೀ ಬೆಲೆಯನ್ನು ಅವರದೇ‘ಅಗತ್ಯ’ಗಳಿಗೆ ತಕ್ಕಂತೆ ಹೆಚ್ಚಿಸಿ, ಎಲ್ಲೋ ಸಗಟುಮಾರಿಕೊಂಡರೆಂದೂ ಕೇಳಿದ್ದೇನೆ.

ಅಜ್ಜನ ಮೊದಲ ಅನುವಾದದ ಕಾದಂಬರಿ ದುಃಖಾರ್ತರು (ಮೂಲ ವಿಕ್ಟರ್ ಹ್ಯೂಗೋ – ಲೇ ಮಿಸರೆಬಲ್ಸ್) ಪುಸ್ತಕವನ್ನು ಮೊದಲಬಾರಿಗೆ ಪುತ್ತೂರಿನ ಪೊಪ್ಯುಲರ್ ನ್ಯೂಸ್ ಏಜನ್ಸಿಯ ಶಿವರಾಮ ಹೊಳ್ಳರು (೧೯೬೦) ಪ್ರಕಟಿಸಿದ್ದರು. ಅದರ ಹುಳ ಕೊರೆದ, ಕಂದುಮಾಸಿದ, ರಟ್ಟು ಮುರಿದ ಹಲವು ಪ್ರತಿಗಳನ್ನು ನಾನು ಮಂಗಳೂರಿನಲ್ಲಿ ಅತ್ರಿ ಬುಕ್ ಸೆಂಟರ್ ತೆರೆದ ಹೊಸದರಲ್ಲಿ ಖರೀದಿಸಿಮಾರಿದ್ದುಂಟು. ಮುಂದೆ ಸ್ವಂತ ಪ್ರಕಾಶನದ ಉತ್ತುಂಗದಲ್ಲಿ ನಾನೇ ಅದನ್ನು ಮರುಮುದ್ರಣ (೨೦೦೧) ಮಾಡಿಸಿದ್ದೂ ಆಯ್ತು. ಆದರೆ ಸಾಹಿತ್ಯ ಮತ್ತು ಸಾಂಸ್ಕೃತಿಕವಾಗಿ ಅಧೋಮುಖಿಯಾಗಿರುವ ಕನ್ನಡ ಪರಿಸರದಲ್ಲಿ (ಪ್ರಚಾರದಲ್ಲಿ ನಿಸ್ಸಂದೇಹವಾಗಿ ಬಹು ಪ್ರಖರವಾಗಿದೆ. ಕೇವಲ ಸಾಹಿತ್ಯ ಪ್ರೀತಿಯಿಟ್ಟುಕೊಂಡು ಇಂದು ಪುಸ್ತಕ ಪ್ರಕಾಶನಕ್ಕೆ ಕೈಯಿಕ್ಕಿದರೆ ಸೀದು ಹೋಗುವುದುಖಾತ್ರಿ!) ನಾನು ಮಾಡಿಸಿದ ಸಾವಿರ ಪ್ರತಿಗಳಲ್ಲಿ ಇನ್ನೂ ನಾನೂರಕ್ಕು ಮಿಕ್ಕು ಪ್ರತಿಗಳುನನ್ನಲ್ಲೇ ಗಟ್ಟಿಯಾಗಿ ಉಳಿದಿವೆ! (ಆಸಕ್ತರು ರೂ ಎಪ್ಪತ್ತು ಮುಂಗಡ ಕಳಿಸಿದಲ್ಲಿಪ್ರತಿಯೊಂದನ್ನು ನನ್ನದೇ ವೆಚ್ಚದಲ್ಲಿ ಸಾದಾ ಅಂಚೆಯಲ್ಲಿ ಕಳಿಸುತ್ತೇನೆ.) ದುಃಖಾರ್ತರನ್ನು ಪ್ರಕಟಿಸುವಂದು ಅಜ್ಜನ ಇತರ ಪುಸ್ತಕಗಳನ್ನೂ ಮರುಮುದ್ರಣಕ್ಕೆತೆಗೆದುಕೊಳ್ಳಲುದ್ದೇಶಿಸಿದ್ದೆ.

‘ಹಿರಿಯರ ಸ್ಮರಣೆಯನ್ನು ಅವರಕೃತಿಗಳಲ್ಲಿ ಕಾಣು’ ಎನ್ನುವ ವಿಚಾರಕ್ಕೆ ಬದ್ಧನಾಗಿ ಈಗ ಡೇವಿಡ್ ಕಾಪರ್ಫೀಲ್ಡನ್ನುವಿದ್ಯುನ್ಮಾನ ಧಾರಾವಾಹಿಯಲ್ಲಿ ಕನ್ನಡ ಲೋಕಕ್ಕೆ ಉಚಿತವಾಗಿ ಕೊಡುವಕೆಲಸಕ್ಕಿಳಿಯುತ್ತಿದ್ದೇನೆ.

ಚಾರ್ಲ್ಸ್ ಡಿಕನ್ಸ್ (೧೮೧೨–೧೮೭೦) ಇಂಗ್ಲೆಂಡಿನಲ್ಲಿ ಸುಮಾರು ಎರಡು ದಶಕಗಳ ಕಾಲಒಂದು ಇಂಗ್ಲಿಷ್ ಸಾಪ್ತಾಹಿಕದ ಸಂಪಾದಕರಾಗಿ ದುಡಿದಿದ್ದರು. ಆಗ ಅವರು ಪತ್ರಿಕೆಯಅಗತ್ಯಕ್ಕಾಗಿ ಡೇವಿಡ್ ಕಾಪರ್ಫೀಲ್ಡ್‌ನ್ನು ಧಾರಾವಾಹಿಯಾಗಿಯೇ ಹರಿಸಿದ್ದರಂತೆ.ಸುಮಾರು ಒಂದೂವರೆ ಶತಮಾನೋತ್ತರದಲ್ಲಿ, ಬದಲಾದ ಮಾಧ್ಯಮದಲ್ಲೇ ಆದರೂಕನ್ನಡದಲ್ಲಿ ಅದು ಧಾರಾವಾಹಿಯಾಗುತ್ತಿರುವುದು ಒಂದು ಯೋಗಾಯೋಗ. ಡಿಕನ್ಸ್ ಓದುಗರ ಪ್ರತಿಕ್ರಿಯೆಗಳನ್ನು ಗಮನಿಸುತ್ತ ತನ್ನಹೊಸ ಕಂತುಗಳನ್ನು ಪರಿಷ್ಕರಿಸಿಕೊಳ್ಳುತ್ತಿದ್ದ ಎನ್ನುತ್ತಾರೆ, ಸಾಹಿತ್ಯ ಇತಿಹಾಸಕಾರರು. (ಟೀಯಾರ್ಪೀ ನೋಡಿಕೊಂಡು ತೌಡುಗುದ್ದುವ ಅಥವಾ ಅಕಾಲ ಮರಣಿಸುವ ಇಂದಿನ ಟೀವೀ ಸರಣಿಗಳಿಗೆ ಹೋಲಿಸುವ ಅಪರಾಧ ಮಾಡಬೇಡಿ!) ಇಂದು ಲೇಖಕಮತ್ತು ಅನುವಾದಕ (೧೯೦೧–೭೭) ಇಬ್ಬರೂ ಕಾಲನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ನಾನು ಕೇವಲ ಪುಟಸಂಖ್ಯೆ ಅಥವಾ ಅಧ್ಯಾಯಗಳ ಅನುಕೂಲ ನೋಡಿಕೊಂಡು ಕಂತುಗಳನ್ನು ನಿರ್ಧರಿಸುವ ಲಿಪಿಕಾರನಾಗಿ ಮುಂದುವರಿಯುತ್ತೇನೆ. ನನ್ನವಾರದ ಕಂತಿನ ಮಿತಿಯಲ್ಲಿ ಕಾದಂಬರಿಯ ಓದಿನ ರುಚಿ ನಿಮಗೆ ಹತ್ತಲೆಂದು ಮೂಲ ಪುಸ್ತಕದಲ್ಲಿ ಬಂದ ಪೀಠಿಕಾ ಪ್ರಕರಣಗಳನ್ನುಧಾರಾವಾಹಿಯಲ್ಲಿ ಮಾತ್ರ ಮೊದಲ ಕೆಲವು ಕಂತುಗಳಿಗೆ ಹಂಚಿಕೊಡುತ್ತೇನೆ. ನಿಮ್ಮ ಪ್ರತಿಕ್ರಿಯೆಗಳು ನಿಮ್ಮ ಓದಿನ ಸಂತೋಷದಕುರುಹಾಗಿ, ಲಿಪಿಕಾರನಾಗಿ ಅಕ್ಷರಕ್ಷರ ಕುಟ್ಟುವ ನನಗೆ ಕುಮ್ಮಕ್ಕಾಗುವಂತೆ ಮತ್ತು ಕ್ಷಣಕಾಲಕ್ಕಾದರೂ ನನಗೆ ಸಾರ್ಥಕ್ಯಮೂಡಿಸುವಂತೆ ನಿರಂತರ ಬರುತ್ತಿರಲಿ.

ಅಶೋಕವರ್ಧನ ಜಿ.ಎನ್.
ಅಭಯಾದ್ರಿ, ಪಿಂಟೋರವರ ಓಣಿ, ಕರಂಗಲ್ಪಾಡಿ, ಮಂಗಳೂರು ೫೭೫೦೦೩
೨೦೧೪

ಅಧ್ಯಾಯ ಒಂದು
ನನ್ನ ಜನನ

ನನ್ನ ಜೀವನ ವೃತ್ತಾಂತದಲ್ಲಿ ನಾನೇ ಕಥಾನಾಯಕನಾಗುವೆನೋ ಅಥವಾ ಆ ಮುಖ್ಯ ಪಾತ್ರವೂ ಇತರ ಯಾರಿಗಾದರೂಸಲ್ಲುವುದೋ ಎನ್ನುವುದನ್ನು ಈ ಪುಸ್ತಕದ ಮುಂದಿನ ಪುಟಗಳನ್ನೋದಿ ನಿಷ್ಕರ್ಷಿಸಬೇಕಷ್ಟೆ. ಈ ವೃತ್ತಾಂತದ ಪ್ರಾರಂಭ ನನ್ನಜನನದಿಂದಲೇ ಆಗಬೇಕು ಎನ್ನುವುದಾದರೆ, ನನ್ನ ಕೇಳಿಕೆ ಪ್ರಕಾರ, ನಾನು ಶುಕ್ರವಾರ ರಾತ್ರಿ ಹನ್ನೆರಡು ಗಂಟೆಗೆ ಜನಿಸಿರುತ್ತೇನೆ.ಗಡಿಯಾರವು ಹನ್ನೆರಡು ಹೊಡೆದುದೂ ನಾನು ಕೂಗಿದುದೂ ಏಕಕಾಲದಲ್ಲಿ ಆಗಿತ್ತಂತೆ.

ಹುಟ್ಟಿದ ದಿನ ಮತ್ತು ಸಮಯದ ಜ್ಯೋತಿಷ್ಯಫಲದ ಪ್ರಕಾರ ಮೊದಲನೆಯದಾಗಿ ನಾನು ಬಹು ದುರದೃಷ್ಟವಂತನಾಗಿರಬೇಕು.ಎರಡನೆಯದಾಗಿ ಪ್ರೇತ ಪಿಶಾಚಗಳನ್ನು ಆಗಿಂದಾಗ್ಗೆ ಕಾಣುವಂಥವನೂ ಆಗಿರಬೇಕು. ಹೀಗೆಂದು ನನ್ನ ಹೆರಿಗೆಯ ಕಾಲದಲ್ಲಿ ನಮ್ಮಮನೆಯಲ್ಲಿದ್ದ ದಾದಿಯೂ ನಮ್ಮ ಸಹಾಯಕ್ಕಾಗಿ ಬಂದಿದ್ದ ನೆರಮನೆಯ ಒಬ್ಬಳು ಮುದುಕಿಯೂ ಮಾತಾಡಿಕೊಳ್ಳುತ್ತಿದ್ದರಂತೆ.ಜನನದ ಫಲಪ್ರಕಾರ ನಾನು ದುರದೃಷ್ಟವಂತನಾಗಿರುವೆನೋ ಅಥವಾ ಇಲ್ಲವೋ ಎನ್ನುವ ವಿಷಯದಲ್ಲಿ ಈ ವೃತ್ತಾಂತದ ಮುಂದಿನಪುಟಗಳ ಹೇಳಿಕೆಗಳಿಗಿಂತ ಉತ್ತಮ ಸಾಕ್ಷಿಯನ್ನು ಕೊಡಲಾರೆ. ಆದರೆ ಪ್ರೇತ ಪಿಶಾಚಿಗಳ ದರ್ಶನ ಲಾಭವು ನನ್ನಬಾಲ್ಯಾವಸ್ಥೆಯಲ್ಲೇ ಆಗಿಹೋಗಿರದಿದ್ದ ಪಕ್ಷಕ್ಕೆ, ಈ ವರೆಗೂ ನನಗೆ ಅದು ಲಭಿಸಿಲ್ಲವೆಂದಷ್ಟನ್ನು ಮಾತ್ರ ನಾನು ಹೇಳಬಲ್ಲೆ.

ನಾನು ತಾಯಿಯ ಗರ್ಭದಿಂದ ಭ್ರೂಣಾವರಣ ಸಮೇತನಾಗಿ ಜನಿಸಿದವನು. ಭ್ರೂಣಾವರಣವನ್ನು ತಮ್ಮಲ್ಲಿ ಇಟ್ಟುಕೊಂಡಿರುವವರಿಗೆನೀರಿನಿಂದ ಸಂಭವಿಸಬಹುದಾದ ಅವಗಡಗಳ ಭಯ ಇಲ್ಲವೆಂದೂ ಆ ಭ್ರೂಣಾವರಣವು ಅಂಥ ಅವಗಡಗಳನ್ನು ತಡೆಯುವುದೆಂದೂನಮ್ಮೂರಿನವರು ನಂಬುತ್ತಾರೆ. ಅದರ ಈ ಪ್ರಭಾವಕ್ಕಾಗಿ ನನ್ನ ಭ್ರೂಣಾವರಣವನ್ನು ಇಪ್ಪತ್ತೈದು ಪವನುಗಳ ಕ್ರಯಕ್ಕೆವಿಕ್ರಯಿಸುವುದಾಗಿ ನಮ್ಮ ಕಡೆಯವರು ಪ್ರಕಟಿಸಿದ್ದರು. ಆದರೆ ಅದಕ್ಕೆ ಗ್ರಾಹಕರು ವಿಶೇಷವಾಗಿ ಬರದೆ, ಕೊನೆಗೆ ಒಬ್ಬ ವಕೀಲನುಕೆಲವಂಶ ತನ್ನ ಶರ್ರೀವೈನನ್ನು ನಮಗೆ ಕೊಟ್ಟು ಬಾಕಿ ಅಂಶವನ್ನು ನಗದು ಹಣವಾಗಿಯೇ ಕೊಡುವ ಮೂಲಕ ಅದನ್ನುಪಡೆದುಕೊಳ್ಳಲು ಮುಂದೆ ಬಂದನು. ನಮ್ಮ ಮನೆಯ ಶರ್ರೀವೈನೇ ಮಾರಾಟವಾಗದೇ ಉಳಿದಿದ್ದುದರಿಂದ ಈ ಕ್ರಮದ ವಹಿವಾಟಕ್ಕೆನಾವು ಒಪ್ಪಲಿಲ್ಲ. ಜನರಿಗೆ ಈ ಆವರಣ ಯಂತ್ರದ ಪ್ರಭಾವದಲ್ಲಿ ನಂಬಿಕೆ ಇಲ್ಲದೆಯೋ ಅಥವಾ ಅವರಲ್ಲಿ ಜೀವದಾಸೆಗಿಂತಲೂಹಣದಾಸೆ ಹೆಚ್ಚಾಗಿದ್ದುದರಿಂದಲೋ ನಮ್ಮ ಪ್ರಕಟಣೆಯಂತೆ ಭ್ರೂಣಾವರಣವು ಮಾರಾಟವಾಗಲಿಲ್ಲ.

ಆದರೂ ಹತ್ತು ವರ್ಷಗಳನಂತರ ನನ್ನ ಭ್ರೂಣಾವರಣವನ್ನು ಒಂದು ಚೀಟ್ಟೆ ಕ್ರಮದಿಂದ ಬಹಿರಂಗವಾಗಿ ಮಾರಿದರು. ಆ ಚೀಟ್ಟಿಹರಾಜಿನಲ್ಲಿ ನಾನು ಅಲ್ಲೇ ನಿಂತು ಎಲ್ಲವನ್ನೂ ನೋಡುತ್ತಿದ್ದೆ. ಕೊನೆಗೆ ಒಬ್ಬಳು ಮುದುಕಿ ಹರಾಜಿನಲ್ಲಿ ಗೆದ್ದು, ಭ್ರೂಣಾವರಣವನ್ನುಕ್ರಯಕ್ಕೆ ಪಡೆದುಕೊಂಡಳು. ನಾನೇ ಪ್ರತ್ಯಕ್ಷ ಅಲ್ಲೇ ಇರುತ್ತಾ, ಚೀಟ್ಟಿಯಲ್ಲಿ ಗೆದ್ದವರಿಗೆ ನನ್ನದೇ ಒಂದಂಶವನ್ನು ಕೊಡಲಾಗುವುದೆಂಬತಿಳಿವಳಿಕೆ ನನಗೆ ಜಿಗುಪ್ಸೆ, ನಾಚಿಕೆ, ಆಶ್ಚರ್ಯಗಳನ್ನು ತಂದಿತ್ತು.

ಅನಂತರ ನಾವು ಕೇಳಿ ತಿಳಿದ ಪ್ರಕಾರ ಆ ಹೆಂಗಸು ನೀರಿನ ಅವಗಡಕ್ಕೆ ಒಳಗಾಗದೆಯೇ ತನ್ನ ತೊಂಬತ್ತನೇ ವರ್ಷದಲ್ಲಿ, ತನ್ನಹಾಸಿಗೆಯಲ್ಲೇ ಮಲಗಿ ಸತ್ತಿರುವಳಾಗಿ ತಿಳಿದೆವು. ಚಾ ಸೇವನೆ ಕಾಲದಲ್ಲೂ ಮತ್ತು ಸೇತುವೆಗಳಲ್ಲೇ ನದಿಗಳನ್ನು ದಾಟುವಾಗಲೂಮಾತ್ರ ನೀರಿನ ಸಂಪರ್ಕವಿಟ್ಟುಕೊಂಡಿದ್ದ ಆ ಮುದುಕಿ ತನ್ನಲ್ಲಿದ್ದ ಭ್ರೂಣಾವರಣದ ಪ್ರಭಾವವನ್ನು ಆಗಿಂದಾಗ್ಗೆ ಕೊಂಡಾಡುತ್ತಿದ್ದಳಂತೆ.

ಇನ್ನು ನಮ್ಮ ಮೂಲ ಕಥಾಮುಖವಾಗಿ ಮುಂದುವರಿಯೋಣ. ಸಫಕ್ ತಾಲ್ಲೋಕಿನ ಬ್ಲಂಡರ್ ಸ್ಟನ್ ಎನ್ನುವಲ್ಲಿ ನಾನು ಹುಟ್ಟಿದೆ. ನಾನು ನನ್ನ ತಂದೆಯ ಮರಣಾನಂತರ ಹುಟ್ಟಿದವನು – ಅಂದರೆ,ಪ್ರಪಂಚದ ಬೆಳಕನ್ನು ನಾನು ನೋಡಿದ ಸಮಯಕ್ಕೆ ಆರು ತಿಂಗಳ ಮೊದಲು ನನ್ನ ತಂದೆ ಆ ಬೆಳಕನ್ನು ಅಖೈರಾಗಿ ನೋಡಿದನು. ನನ್ನತಂದೆ ನನ್ನನ್ನು ಎಂದೂ ನೋಡಿರುವುದಿಲ್ಲವೆಂಬ ತಿಳಿವಳಿಕೆ ಈಗಲೂ ಸಹ ನನಗೆ ಒಂದು ವಿಧದ ದುಃಖ ಮಿಶ್ರಿತ ಆಶ್ಚರ್ಯವನ್ನುಂಟುಮಾಡುತ್ತದೆ. ಮಸಕು ಮಸಕಾಗಿ ತೋರುವ ಬಾಲ್ಯದ ನೆನಪುಗಳಲ್ಲಿ ನಮ್ಮ ಮನೆ ಸಮೀಪದಲ್ಲಿರುವ ಇಗರ್ಜಿಯ ವಠಾರ, ಅದರಲ್ಲಿಅಲುಗಾಡದೆ ಮಲಗಿರುವ ಶ್ವೇತ ಶಿಲೆಯಲ್ಲಿ ರಚಿಸಿರುವ ತಂದೆಯ ಗೋರಿ, ಈಗಲೂ ಕಂಡುಬರುವುವು. ಅಷ್ಟು ಮಾತ್ರವಲ್ಲದೆ,ಕತ್ತಲೆಯ ಮತ್ತು ಚಳಿಯ ರಾತ್ರಿಗಳಲ್ಲಿ ಏಕಾಂಗಿಯಾಗಿ ತಂದೆ ಹೊರಗೆ ಮಲಗಿರುವಾಗಲೇ ಅವನ ಸಂಪರ್ಕ ನಮಗೆಇರಬಾರದೆಂದು ಬಾಗಿಲುಗಳನ್ನು ಮುಚ್ಚಿಕೊಂಡು, ನಮ್ಮ ಬೆಚ್ಚಗಿನ ಕೋಣೆಯಲ್ಲಿ, ಬೆಳಕಿನಲ್ಲಿ, ನಾವು ಮಾತು, ನಗೆ ಮೊದಲಾದಚಟುವಟಿಕೆಗಳನ್ನು ನಡೆಸುತ್ತಿದ್ದಾಗ ನನಗುಂಟಾಗುತ್ತಿದ್ದ ವಿಸ್ಮಯ, ದುಃಖ ಈಗಲೂ ನೆನಪಿಗೆ ಬರುತ್ತಿದೆ.

ನಮ್ಮ ಕುಟುಂಬದಲ್ಲಿ ಹಿರಿಯರೆಂದಿದ್ದವರು ಒಬ್ಬರು ಮಾತ್ರ. ಅವರು ನನ್ನ ತಂದೆಯ ಚಿಕ್ಕತಾಯಿ – ಅಂದರೆ, ನನ್ನಜ್ಜಿ. ಈ ಅಜ್ಜಿಯನ್ನುನನ್ನ ಬಾಲ್ಯದ ಅಭ್ಯಾಸಗಳ ಕಾರಣವಾಗಿ ಅತ್ತೆ ಎಂದೇ ಕರೆದಿರುತ್ತೇನೆ. ಅತ್ತೆಯ ಪರಿಚಯವನ್ನು ಕೂಲಂಕಷವಾಗಿ ಮುಂದೆ

ತಮಗೆಮಾಡಿಕೊಡುವವನಿದ್ದೇನೆ. ಇಲ್ಲಿನ ಪ್ರಸಂಗಕ್ಕೆ ಸಂಬಂಧಿಸಿದಷ್ಟು ಮಾತ್ರ ನಾನಿಲ್ಲಿ ಪ್ರಸ್ತಾಪಿಸುತ್ತೇನೆ. ಅತ್ತೆಯ ಹೆಸರು ಮಿಸ್ ಬೆಟ್ಸಿಟ್ರಾಟೂಡ್. ನನ್ನ ತಾಯಿಗೆ ಅತ್ತೆಯನ್ನು ಕಂಡರೆ ತುಂಬಾ ಭಯ. ಆ ಭಯದ ಕಾರಣವಾಗಿ ಅತ್ತೆಯ ಪೂರ್ಣ ಹೆಸರನ್ನು ಹೇಳುವಬದಲು ಮಿಸ್ ಬೆಟ್ಸಿ ಎಂದು ಮಾತ್ರ ಹೇಳುತ್ತಿದ್ದಳು. ಅದರಲ್ಲೂ ಸಹ, ಆದಷ್ಟು ಅವಳ ಹೆಸರನ್ನು ಉಚ್ಚರಿಸದೇ ಮಾತಾಡುವಪ್ರಯತ್ನವನ್ನೇ ತಾಯಿ ಮಾಡುತ್ತಿದ್ದಳು. ಬೆಟ್ಸಿಯ ದೇಹ, ಮುಖ, ಮಾತು, ನಡತೆ, ವರ್ಚಸ್ಸು – ಎಲ್ಲವೂ – ಅಂಥ ಹೆದರಿಕೆಯನ್ನುಉಂಟುಮಾಡುವಂಥವೇ ಆಗಿರುತ್ತಿದ್ದುವು. ಬೆಟ್ಸಿ ಒಬ್ಬ ಸುಂದರ, ಸುಲಕ್ಷಣ ಪುರುಷನನ್ನೇ ಮದುವೆಯಾಗಿದ್ದಿದ್ದರೂ ಅವನ ಸೌಂದರ್ಯಜೀವನದಲ್ಲಿ – ಸಂಸಾರದಲ್ಲಿ – ತೋರ್ಪಡದೆ, ಬೆಟ್ಸಿಯನ್ನು ಹಿಂಸಿಸುವುದರಲ್ಲಿ ಪರಿವರ್ತನೆ ಹೊಂದಿತ್ತು. ಹೀಗಾಗಿ ಬೆಟ್ಸಿಯು ತನ್ನಪತಿಗೆ ಹಣ ಕೊಟ್ಟು ಅವನ ದಾಂಪತ್ಯವನ್ನೇ ತ್ಯಜಿಸಿದ್ದಳು. ದಿಟ್ಟತನದ, ಸರಳ ಸ್ವಭಾವದ, ನಿರ್ದಾಕ್ಷಿಣ್ಯ ಪ್ರವೃತ್ತಿಯ ಬೆಟ್ಸಿಯನ್ನುಮಹಡಿ ಮೇಲಿನಿಂದ ಕೆಳಗೆ ಒದ್ದೆಸೆದರೆ ತನಗಾಗುವ ಸಂತೋಷ ಅಷ್ಟಿಷ್ಟಲ್ಲವೆಂದೇ ಅವನೊಮ್ಮೆ ಸ್ಪಷ್ಟವಾಗಿ ತಿಳಿಸಿದ್ದನು. ತಾನು ಆರೀತಿ ಎಸೆಯಲ್ಪಡುವುದಕ್ಕಿಂತ ತಾನೇ ಪತಿಯನ್ನು ದಾಂಪತ್ಯದಿಂದ ಹೊರ ಎಸೆಯುವುದು ಉತ್ತಮವೆಂದು ಗ್ರಹಿಸಿದ್ದೇ ಅವಳುಗಂಡನನ್ನು ಬಿಟ್ಟಿರಬೇಕು. ಹೆಂಡತಿ ತೆತ್ತ ಹಣದಿಂದ ಅವನು ಹಿಂದುಸ್ಥಾನಕ್ಕೆ ಹೋದನೆಂದೂ, ಅಲ್ಲಿ ಆನೆಯ ಮೇಲೆ ಅಂಬಾರಿಯನ್ನೇರಿಒಂದು ಬಾಬೂನ್ ಜೊತೆಯಲ್ಲಿ ಮೆರೆಯುತ್ತಿದ್ದುದನ್ನು ಇತ್ತ ಕಡೆಯವರು ಕಂಡಿದ್ದರೆಂದೂ ವದಂತಿಯಿತ್ತು. ಅವನ ಜತೆಯಲ್ಲಿದ್ದುದುಒಂದು ಬಾಬೂನ್ ಆಗಿರಲಾರದು – ಒಬ್ಬ ಬಾಬುವೋ ಬೇಗಮಳೋ ಆಗಿರಬೇಕೆಂದು ನಾವು ಊಹಿಸುವುದೇ ನ್ಯಾಯ. ಅನಂತರಹತ್ತು ವರ್ಷಗಳು ಕಳೆದಮೇಲೆ ಅವನು ಪರದೇಶದಲ್ಲೇ ಸತ್ತನೆಂದೂ ವರ್ತಮಾನ ಹಬ್ಬಿತ್ತು. ಆತನ ಮರಣದ ಕುರಿತು ಅತ್ತೆ ಅತ್ತಳೋ,ಹೇಗೆ ಅತ್ತಳು, ಎಷ್ಟು ಅತ್ತಳು ಎಂಬಿತ್ಯಾದಿಯನ್ನು ತಿಳಿಯಲು ನಮ್ಮ ಮನೆಯವರಿಗೆ ಅನುಕೂಲವಿರಲಿಲ್ಲ. ಏಕೆಂದರೆ, ತಮ್ಮದಾಂಪತ್ಯವಿಚ್ಛೇದವಾದ ಮರುದಿನವೇ ಅತ್ತೆ ಸಮುದ್ರ ಕರಾವಳಿಯ ಬಹು ದೂರ ಪ್ರದೇಶದಲ್ಲಿ ಒಂದು ಹಿತ್ತಲು ಮನೆಯನ್ನು ಕ್ರಯಕ್ಕೆ ತೆಗೆದುಕೊಂಡು, ಒಬ್ಬಳು ಹೆಣ್ಣಾಳನ್ನು ಮಾತ್ರ ಕೆಲಸಕ್ಕಿಟ್ಟುಕೊಂಡು, ತನ್ನ ಅಖಂಡ ಏಕಾಂಗೀ ಜೀವನವನ್ನು ನಡೆಸುತ್ತಿದ್ದಳು.

ಅತ್ತೆಗೆ ನನ್ನ ತಂದೆಯ ಮೇಲೆ ತುಂಬಾ ಪ್ರೀತಿಯಿದ್ದರೂ ಅವನು ಪುನರ್ವಿವಾಹವಾಗಿದ್ದುದರಿಂದ – ಅದರಲ್ಲೂ, ಪುನರ್ವಿವಾಹದಪತ್ನಿಯ ಕಾರಣವಾಗಿ – ಅವನ ಮೇಲೆ ಅವಳು ಶಾಶ್ವತವಾದ ಕೋಪ ಮತ್ತು ತಿರಸ್ಕಾರವನ್ನು ತಾಳಿಬಿಟ್ಟಿದ್ದಳು. ನನ್ನ ತಾಯಿ ಬರೇಮಯಣದ ಬೊಂಬೆ ಎಂದು ಅತ್ತೆ ನಿಶ್ಚೈಸಿಕೊಂಡಿದ್ದಳು. ನನ್ನ ತಾಯಿಯನ್ನು ಅವಳು ಸ್ವತಃ ನೋಡಿರದಿದ್ದರೂ ನನ್ನ ತಾಯಿಗೆಇಪ್ಪತ್ತೆರಡು ವರ್ಷ ಪ್ರಾಯ ಪೂರಾ ಆಗಿರಲಿಲ್ಲವೆಂಬುದು ಅವಳಿಗೆ ಹೇಗೋ ಗೊತ್ತಿದ್ದಿತು. ಈ ದಾಂಪತ್ಯದಲ್ಲಿ ನನ್ನ ತಂದೆ ಅಶಕ್ತಿವಂತಮತ್ತು ಕೃಷದೇಹಿಯಾಗಿದ್ದುದು ಮಾತ್ರವಲ್ಲದೆ, ಅವನು ನನ್ನ ತಾಯಿಯ ಇಮ್ಮಡಿ ಪ್ರಾಯದವನೂ ಆಗಿದ್ದನು. ಇಂತಹ ವಿಷಮಪರಿಸ್ಥಿತಿಗಳ ಕಾರಣವಾಗಿಯೋ ಏನೋ – ನನ್ನ ತಂದೆ ಮದುವೆಯಾಗಿ ಒಂದು ವರ್ಷವಾಗುವಷ್ಟರಲ್ಲೇ – ಅಂದರೆ, ನಾನು ಜನಿಸುವಆರು ತಿಂಗಳ ಮೊದಲೇ ಮೃತನಾದನು.

ನನ್ನ ಮಟ್ಟಿಗೆ 'ವಿಶೇಷ'ವಾದ ಎಂದಂದರೆ ತಪ್ಪಾಗಲಾರದ ಆ ಶುಕ್ರವಾರ ಸಂಜೆ ಸಮಯದಲ್ಲಿ ನನ್ನ ಜೀವನ ಚರಿತ್ರೆಯ ಕೆಲವುವಿಷಯಗಳು ಈ ತೆರನಾಗಿದ್ದುವು. ಇವುಗಳಿಗಿಂತ ಹೆಚ್ಚಿನ ವಿವರಗಳನ್ನು ನಾನು ಸಂಗ್ರಹಿಸಲಿಲ್ಲ. ಆಗಲಂತೂ ನನಗೆ ತಿಳಿಯಲೇಸಾಧ್ಯವಿರಲಿಲ್ಲವಷ್ಟೆ. ಅಂತೂ ನಾನು ಸಂಗ್ರಹಿಸಿರುವ ಮಟ್ಟಿನ ಚರಿತ್ರೆಯು ಈ ವಿಧದಿಂದ ನಡೆದಿದೆ.

ಮಾರ್ಚಿ ತಿಂಗಳಿನ ಪ್ರಕಾಶಮಾನವೂ ಉಷ್ಣದಾಯಕವೂ ಆಗಿರುವ ಬಿಸಿಲು ನಮ್ಮ ಮನೆಯ ಹೊರಗಡೆ ಬಿದ್ದು ಪ್ರಜ್ವಲಿಸುತ್ತಿತ್ತು. ಅದೇಸಮಯದಲ್ಲಿ ನಮ್ಮ ಮನೆಯ ಒಳಗೆ ತಾಯಿ ಚಳಿಯಿಂದಲೂ ಮಾನಸಿಕ ಮತ್ತು ದೇಹದ ದೌರ್ಬಲ್ಯದಿಂದಲೂ ಆರಾಮ ಕುರ್ಚಿಯಲ್ಲಿಕುಳಿತು ಬೆಂಕಿಯ ಶಾಖವನ್ನು ಪಡೆದುಕೊಳ್ಳುತ್ತಿದ್ದಳು. ನನ್ನ ಜನನದ ಕುರಿತು ಇತರ ಯಾರಿಗೂ ಏನೊಂದೂ ಉತ್ಸಾಹವಾಗಲೀಗಾಬರಿಯಾಗಲೀ ಇರದಿದ್ದರೂ ನನ್ನ ತಾಯಿಗೆ ಮಾತ್ರ ತಾನು ಹೆರಿಗೆಯಿಂದ ಪಾರಾಗುವೆನೋ – ಮುಂದೆ ಜನಿಸುವ ನನ್ನ ಸ್ಥಿತಿಹೇಗಾಗಬಹುದೋ – ಎಂಬಿತ್ಯಾದಿಯಾದ ವಿಷಯಗಳಲ್ಲಿ ಬಹುವಾದ ಭಯವೇ ಇತ್ತು. ಹೀಗೆ ಲೋಕದ ಭಾರವನ್ನೇ ತಾನುಹೊತ್ತಿರುವಂತೆ ಅವಳು ಊಹಿಸಿ, ದುಃಖಿಸಿ, ಭಯಪಡುತ್ತಿದ್ದರೂ ನಾನೊಬ್ಬ ಅವಳ ಜತೆಗೆ ಬಂದು ಸೇರುವೆನೆಂಬ ಶುಭನಿರೀಕ್ಷಣೆಮಾತ್ರ ಅವಳೆದುರು ಸದಾ ಇರುತ್ತಿದ್ದು, ಅವಳಿಗೆ ಧೈರ್ಯ ಕೊಡುತ್ತಿತ್ತು. ಈ ರೀತಿ ತಾಯಿ ಕುಳಿತಲ್ಲಿಂದಲೇ ಸುತ್ತಲೂ ನೋಡುತ್ತಿದ್ದಹಾಗೆಯೇ ಒಬ್ಬ ವಿಚಿತ್ರದ ಹೆಂಗಸು ಅಂಗಳದಲ್ಲೇ ನಡೆದು ತನ್ನ ಕಡೆಗೆ ಬರುವುದನ್ನು ಕಂಡಳು. ಅವಳು ತಾಯಿಗೆ ಬಹುಸ್ಪಷ್ಟವಾಗಿಯೇ ಕಂಡುಬರುತ್ತಿದ್ದಳು. ಬರುತ್ತಿದ್ದ ಸ್ತ್ರೀ ಬಹು ಸ್ಥಿರ ಮುಖಮುದ್ರೆಯುಳ್ಳವಳಾಗಿದ್ದಳು; ಸ್ಥಿರಪದಗತಿ, ದೃಢಕಾಯ – ಈರೀತಿ ಅವಳಲ್ಲಿ ಸ್ಥಿರತೆ, ಗಾಂಭೀರ್ಯ, ಮನೋದಾರ್ಢ್ಯಗಳು ಎದ್ದು ಕಾಣಿಸುತ್ತಿದ್ದುವು. ಇಂಥ ವರ್ಚಸ್ಸುಳ್ಳ ವ್ಯಕ್ತಿ ನನ್ನ ಅತ್ತೆಯಲ್ಲದೆಮತ್ತೆ ಯಾರೂ ಅಲ್ಲವೆಂದು ತಾಯಿ ಕೂಡಲೇ ಊಹಿಸಿಕೊಂಡಳು – ಜತೆಯಲ್ಲೇ ಹೆದರಿಕೊಂಡಳು. ಅತ್ತೆ ಕರೆಗಂಟೆಯನ್ನು ಬಾರಿಸಿಒಳಗೆ ಬರುವ ಸಾಂಪ್ರದಾಯಿಕ ಕ್ರಮವನ್ನು ಬಿಟ್ಟು, ಸೀದಾ ಬಂದು, ತಾಯಿ ಕುಳಿತಿದ್ದಲ್ಲಿಗೆ ಸಮೀಪದ ಕಿಟಕಿಯ ಹೊರಗಡೆ ನಿಂತು,ಕಿಟಕಿಯ ಕನ್ನಡಿಗೆ ತನ್ನ ಮೂಗನ್ನು ಒತ್ತುತ್ತಾ ಒಳಗಡೆ ನೋಡಿದಳಂತೆ. ಅಂಜುಬುರುಕಳಾಗಿದ್ದ ನನ್ನ ತಾಯಿ ಕನ್ನಡಿಗೆ ಅಂಟಿ,ಅಗಲವಾಗಿ, ಕನ್ನಡಿಯನ್ನೆಲ್ಲ ಆವರಿಸಿದ್ದ ಮೂಗನ್ನು ಕಂಡು ಮತ್ತಷ್ಟು ಹೆದರಿದಳಂತೆ. ಅತ್ತೆ ನಮ್ಮನೆಗೆ ಬಂದ ಆ ಶುಕ್ರವಾರ ದಿನವೇನಾನು ಜನಿಸಲು ಈ ನಾಸಿಕವಿಕಾಸದ ಪ್ರಸಂಗವೇ ಕಾರಣವಾಗಿರಬೇಕೆಂದು ನಾನು ಪ್ರಾಯ ಬಂದ ಮೇಲೆ ತರ್ಕಿಸಿನಿಶ್ಚೈಸಿಕೊಂಡಿದ್ದೇನೆ.

ಅಪರಿಚಿತವಾದ ಈ ಗಂಭೀರ ಮುಖವನ್ನು ಕಂಡು ತಾಯಿ ಹೆದರಿ ತಾನು ಕುಳಿತಿದ್ದ ಕುರ್ಚಿಯ ಹಿಂದೆ ಅಡಗಿದಳು. ಕಿಟಕಿಯಹೊರಬದಿ ಕನ್ನಡಿಯಲ್ಲಿ ಅಂಟಿದ್ದ ಕಣ್ಣುಗಳು – ಕೆಲವು ಗಡಿಯಾರಗಳಲ್ಲಿನ ಸೆಕೆಂಡಿನ ಹೊಡೆತಕ್ಕನುಸರಿಸಿ ಕಣ್ಣುಗಳು ಅತ್ತಿತ್ತ ಅಲೆದುನೋಡುವ ತಮಾಷೆಯಂತೆ – ತಾಯಿಯನ್ನು ಹಿಂಬಾಲಿಸಿ ನೋಡತೊಡಗಿದುವು. ಈ ಅಧಿಕಾರಯುತ ಕಣ್ಣುಗಳು ತಾಯಿ ಬಾಗಿಲನ್ನುತೆರೆಯುವಂತೆ ದೃಷ್ಟಿಯಿಂದಲೇ ಅಪ್ಪಣೆ ಕೊಟ್ಟವು. ಅತ್ತೆಯ ಕಣ್ಣು, ಕೈಕರಣ, ಹಾವಭಾವಗಳನ್ನು ನೋಡುವಾಗ ಯಾವಾಗಲೂಅಧಿಕಾರಾಪನ್ನಳಾಗಿಯೇ ಇದ್ದು, ಕೈಕೆಳಗಿನವರನ್ನು ಶಿಸ್ತು ನಿಯಮದಲ್ಲಿ ಇಟ್ಟುಕೊಂಡವಳಂತೆ ತೋರುತ್ತಿದ್ದಳು. ಈ ಭಾವನೆಯನ್ನೇಅಪ್ಪಣೆಯಾಗಿ ಅಂಗೀಕರಿಸಿ ತಾಯಿ ಬಾಗಿಲನ್ನು ತೆರೆದಳು. ಅತ್ತೆ ಒಳಗೆ ಬರುತ್ತಾ –

"ದಿವಂಗತ ಡೇವಿಡ್ ಕಾಪರ್ಫೀಲ್ಡನ ಹೆಂಡತಿ ತಾನೆ, ನೀನು?" ಎಂದು, ತಾಯಿಯ ಕೈಯ್ಯಲ್ಲಿ ಕಟ್ಟಿಕೊಂಡಿದ್ದ ಮರಣ ದುಃಖಸೂಚಕದಕರಿಬಟ್ಟೆಗಳನ್ನು ತೋರಿಸುತ್ತಾ ಕೇಳಿದಳು.

"ಹೌದು", ಅಂದಳು ತಾಯಿ ಮೆತ್ತಗೆ.

"ನಾನು ಮಿಸ್ ಟ್ರಾಟೂಡ್, ಕೇಳಿದ್ದೀಯೇನು?"

ಮಿಸ್ ಟ್ರಾಟೂಡ್ಡಳ ಪರಿಚಯ ತನಗಿದೆಯೆಂದೂ, ಆ ಪರಿಚಯವು ತುಂಬಾ ಸಂತೋಷಕರವಾದುದೆಂದೂ, ತಾಯಿ ನಮ್ರತೆಯಿಂದಉತ್ತರ ಕೊಟ್ಟಳು. ಆದರೂ ತನ್ನ ಅಂತರಂಗದಲ್ಲಿ ಸಂತೋಷಕ್ಕಿಂತ ಭಯವೇ ಹೆಚ್ಚಿದೆಯೆಂಬ ಅರಿವಿನಿಂದ ತಾಯಿ ತುಂಬಾಕಂಪಾಗತೊಡಗಿದಳು.

"ಅವಳೇ ನಾನು" ಎಂದನ್ನುತ್ತಾ, ಬಾಗಿಲು ತೆರೆಯಲು ಹೋಗಿದ್ದ ನನ್ನ ತಾಯಿಯನ್ನು ಹಿಂಬಾಲಿಸುತ್ತಾ ಅತ್ತೆ ಬಂದಳು.

ನಮ್ಮ ಮನೆಯ ಪೂರ್ವ ಭಾಗದ ಮುಖ್ಯ ಕೊಠಡಿಯಲ್ಲಿ ತಂದೆಯ ಮರಣಾನಂತರ ಬೆಂಕಿ ಹೊತ್ತಿಸಿರಲಿಲ್ಲ. ಈ ದಿನ ಸಹಮುಂದುಗಡೆಯ ಬೈಠಖಾನೆಯಲ್ಲಿ ಮಾತ್ರ ಬೆಂಕಿ ಉರಿಸಲಾಗಿತ್ತು. ತಾಯಿಯೂ ಅತ್ತೆಯೂ ಅಲ್ಲಿಗೆ ಹೋಗಿ, ಕುರ್ಚಿಗಳಲ್ಲಿ ಕುಳಿತು,ಸ್ವಲ್ಪ ಸಮಯ ಒಬ್ಬರನ್ನೊಬ್ಬರು ನೋಡುತ್ತಾ ಮೌನವಾಗಿಯೇ ಕಾಲಕಳೆದರು. ಹೀಗೆ ಮೌನವಾಗಿದ್ದ ಕಾರಣದಿಂದಲೇ ತಾಯಿ – ಅಳಬಾರದೆಂದು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗದೆ – ಅಳತೊಡಗಿದಳು – ಕೊನೆಗೆ ಬೇಕಷ್ಟು ಅತ್ತಳು. ಈ ಅಳುವಿನಿಂದಅತ್ತೆಯ ಮನಸ್ಸು ಕರಗಿರಬೇಕು. ಅವಳೆದ್ದು ಬಂದು, ತಾಯಿಯ ಹತ್ತಿರ ನಿಂತು, ಅವಳ ತಲೆಯನ್ನು ಸವರುತ್ತಾಸಂತೈಸತೊಡಗಿದಳು. ನನ್ನ ತಾಯಿ ಬಹು ಸುಂದರಿಯಾಗಿದ್ದಳಂತೆ. ಪುಷ್ಕಳವಾಗಿ ಬೆಳೆದಿದ್ದ ಅವಳ ಮೃದು ತಲೆಕೂದಲು ಮುಖದಮೇಲೆಲ್ಲಾ ಹರಡಿತ್ತು. ಹೀಗೆ ತಲೆಕೂದಲು ಹರಡಿಕೊಂಡು ಅಳುತ್ತಿದ್ದ ತಾಯಿಯನ್ನು ಅತ್ತೆ ನೋಡಿ,

"ನಿಜ, ನೀನು ನಿಜವಾಗಿಯೂ ಹಸುಗೂಸು – ಮಾತೆಯಾಗತಕ್ಕಷ್ಟು ದೊಡ್ಡವಳಲ್ಲ" ಅಂದಳು.

ತಾಯಿ ಗದ್ಗದ ಕಂಠದಿಂದ "ಹೌದು, ತಿಳಿಯದ ಹುಡುಗಿ – ವಿಧವೆ – ಸದ್ಯವೇ ಮಾತೆಯಾಗಲಿರುವವಳು" ಎಂದನ್ನುತ್ತಾ ಅತ್ತೆಯನ್ನುನೋಡಿ ನಾಚಿಕೆಪಟ್ಟುಕೊಂಡಳು. ಪಾಪ! ಅವಳ ಸೌಂದರ್ಯದ ಅರಿವು, ಪ್ರಾಯದ ಎಳೆತನ, ಅಶಕ್ತಿ, ಜೀವನದಲ್ಲಿ ತಾನುಏಕಾಂಗಿಯಾಗಿ ಇರುವ ಜ್ಞಾನ – ಇವನ್ನೆಲ್ಲಾ ಗ್ರಹಿಸಿ ಅವಳು ನಾಚಿಕೆಪಟ್ಟುಕೊಂಡಿರಬೇಕು. ಇದೇ ಸಮಯದಲ್ಲಿ ಅತ್ತೆಯ ಮನಸ್ಸುಮತ್ತಷ್ಟು ಕರಗಿರಬೇಕು. ಅತ್ತೆ ಪುನಃ ತಾಯಿಯ ತಲೆಯನ್ನು ಮತ್ತಷ್ಟು ಮೃದುವಾಗಿ ಸವರುತ್ತಾ ಆಲೋಚನಾಮಗ್ನಳಾಗಿ ಕುಳಿತಳು.ಆದರೆ, ತನ್ನ ಜನ್ಮ ಸಿದ್ಧವಾದ ದಿಟ್ಟತನ ಬಿಟ್ಟು ಮೃದುತ್ವ ಹೊಂದಿದ್ದ ಶಿಸ್ತು ಭಂಗವನ್ನು ಅವಳು ಕೂಡಲೇ ತಿಳಿದು, ಹಠಾತ್ತಾಗಿಮುಖದಲ್ಲಿ ಮಹತ್ತರವಾದ ಗಂಭೀರ ಮುದ್ರೆಯನ್ನು ಹೊತ್ತು, ಕಾಲುಗಳನ್ನು ಬೆಂಕಿ ಉರಿಯುತ್ತಿದ್ದ ಅಗ್ಗಿಷ್ಟಿಕೆಯ ಪಕ್ಕಗಳಲ್ಲಿರಿಸಿ,ಮೊಣಕಾಲ ಮೇಲೊಂದು ಕೈಯ್ಯನ್ನೂರಿ ಅಂಗೈಯಲ್ಲಿ ತಲೆಯನ್ನಿಟ್ಟು, ಬೆಂಕಿಯನ್ನೇ ದೃಷ್ಟಿಸತೊಡಗಿದಳು. ಹೀಗಿದ್ದ ಕೆಲವುನಿಮಿಷಗಳ ನಂತರ ಇದ್ದಕ್ಕಿದ್ದಂತೆಯೇ ತಾಯಿಯನ್ನು ನೋಡಿ –

"ಕೋಕಿಲನಿವಾಸ – ಅದೇನು ಈ ಹೆಸರು?" ಅಂದಳು.

"ಈ ಮನೆಗೆ ಹೆಸರೇಕೆಂದು ಕೇಳಿದಿರಾ. . ." ಎಂದು ತಾಯಿ ಮಾತಾಡುತ್ತಾ ಮುಂದುವರಿಯುವ ಮೊದಲೇ

"ಪಾಕನಿವಾಸ – ಎಂತಲೂ ಹೆಸರಿಡಬಹುದಿತ್ತು. ಈ ಮನೆಗೂ ಒಂದು ಹೆಸರು ಬೇಕಿತ್ತೇ?" ಎಂದು ಅತ್ತೆ ಕೇಳಿದಳು.

"ಈ ಮನೆಯನ್ನು ಕ್ರಯಕ್ಕೆ ಪಡೆದಾಗ ಆ ಮನೆಗಳಲ್ಲಿದ್ದ ಗೂಡುಗಳನ್ನು ಕಂಡು, ಅವುಗಳಲ್ಲಿ ತುಂಬಾ ಕೋಗಿಲೆಗಳಿರಬೇಕೆಂದು ತಿಳಿದುಈ ಹೆಸರಿಟ್ಟರು" ಅಂದಳು ತಾಯಿ.

ನಮ್ಮ ಹಿತ್ತಲಿನ ಒಂದು ಮೂಲೆಯಲ್ಲಿ ರಾಕ್ಷಸಾಕಾರವಾಗಿ ಬೆಳೆದಿದ್ದ ಕೆಲವು ಎಲ್ಮ್ ಮರಗಳಿದ್ದುವು. ಆ ಸಂಜೆಯ ಸಮಯದಲ್ಲಿ ಈಮರಗಳು ಗಾಳಿಯಿಂದ ಬಾಗುತ್ತಾ, ರಾಕ್ಷಸರು ತಂತಮ್ಮೊಳಗೆ ಆಂತರಂಗಿಕವಾಗಿ ಮಾತಾಡುವಂತೆ ಒಂದನ್ನೊಂದು ಮುಟ್ಟಿ, ಒರೆಸಿ,ಪುನಃ ದೂರಸರಿದು, ತಲೆಗಳನ್ನು ಒದರಿಕೊಂಡು, ತಮ್ಮ ಗೆಲ್ಲುಗಳನ್ನು ಪರಸ್ಪರ ತೂರಿಕೊಂಡು ಪುನಃ ಹಿಂದೆಳೆದು, ಗಾಳಿಯಆರ್ಭಟೆಯಲ್ಲಿ ತಾವೂ ಆರ್ಭಟಿಸುತ್ತಿರುವಂತೆ ಭಯಂಕರವಾಗಿ ತೋರಿದುವು. ಮೂರ್ಖ ರಾಕ್ಷಸರ ಅಂತರಂಗ ಸಲ್ಲಾಪವೇ ಈಭಯಂಕರಾವಸ್ಥೆಗೆ ಕಾರಣವೆಂಬಂತೆ ತೋರುತ್ತಿದ್ದ ಮರಗಳನ್ನು ಅತ್ತೆಯೂ ತಾಯಿಯೂ ನೋಡುತ್ತಿದ್ದರು. ಇದೇ ಸಮಯದಲ್ಲಿಹರಿದುಹಾಳಾಗಿದ್ದ ಕೋಗಿಲೆಗಳ ಗೂಡುಗಳು ಒಂದು ಮರದಿಂದ ಇನ್ನೊಂದು ಮರದ ಕಡೆಗೆ ಜೋತು ನೇತಾಡಿ,ಹಗುರವಾಗಿದ್ದುದರಿಂದ ಬೀಳದೆ ತೂಗಾಡುತ್ತಿದ್ದುವು. ಅತ್ತೆ ಗೂಡುಗಳನ್ನು ನೋಡುತ್ತಾ –

"ಕೋಗಿಲೆಗಳೆಲ್ಲಿವೆ?" ಅಂದಳು.

ತನ್ನನ್ನು ವಿಚಾರಿಸಿದ ಸ್ವರ ಮತ್ತೂ ಕ್ರಮದಿಂದ ತಾಯಿ ಹೆದರಿ, ಗಾಬರಿಗೊಂಡು–

“ಗೂಡುಗಳನ್ನು ಕಂಡು ಕೋಗಿಲೆಗಳು ಅಲ್ಲಿರಬೇಕೆಂದು ಅವರು ನಂಬಿದ್ದರು. ನಾವು ಬಂದು ಇಲ್ಲೇ ವಾಸಮಾಡುವಾಗ ಅವೆಲ್ಲಖಾಲಿಗೂಡುಗಳೆಂಬುದನ್ನು ತಿಳಿದೆವು” ಅಂದಳು.

“ಅಬ್ಬಾ! ಪ್ರತಿ ಹೆಜ್ಜೆಯಲ್ಲೂ ಡೇವಿಡ್ ಕಾಪರ್ಫೀಲ್ಡನೇ! ಗೂಡು ನೋಡಿ ಹಕ್ಕಿಗಳನ್ನೆಣಿಸಿದ! ತಾನು ಹಿಡಿದ ಕೆಲಸದಲ್ಲೆಲ್ಲಾ ತನ್ನಬುದ್ಧಿಶೂನ್ಯತೆಯ ಪ್ರದರ್ಶನ!” ಎಂದು ಅತ್ತೆ ಜಿಗುಪ್ಸೆಯಿಂದ ನುಡಿದಳು.

ತನಗೆ ತ್ರಾಣವಿಲ್ಲದಿದ್ದರೂ, ತನ್ನ ಮೃತ ಪತಿಯ ದೂಷಣೆಯನ್ನು ಕೇಳಲಾರದೆ ಬೆಟ್ಸಿಯನ್ನು ಒಮ್ಮೆಯಾದರೂ ಎದುರಿಸಿಮಾತಾಡಬೇಕೆಂದು ತಾಯಿಯು ಎದ್ದು ನಿಂತಳು. ಆದರೆ, ಅವಳು ಆರೋಗ್ಯವಾಗಿದ್ದಾಗಲಾದರೂ ಸಹ ಬೆಟ್ಸಿಯೊಡನೆ ಎದುರಿಸಿಮಾತಾಡಿದ್ದಾದರೆ ಸೋಲಲೇಬೇಕಾಗಿದ್ದ ನನ್ನ ತಾಯಿ, ಈ ದಿನದ ತನ್ನ ಮಾನಸಿಕ ಮತ್ತೂ ದೈಹಿಕ ಪರಿಸ್ಥಿತಿಯ ಕಾರಣವಾಗಿ – “ಕಳೆದುಹೋದವರ ಹೆಸರೆತ್ತಿ ಟೀಕಿಸಲೂ ನಿಮಗೆ ಧೈರ್ಯ ಬರುತ್ತದೆಯೇ. . . ಏನು?” ಎಂದು ಅಷ್ಟು ಮಾತ್ರ ಹೇಳಿ, ಆಗಲೇ ತನ್ನಈ ಮಾತುಗಳ ಪರಿಣಾಮ ಈ ಭೀಕರ ಅತ್ತೆಯ ಮೇಲೆ ಏನಾಗಬಹುದೆಂದು ಊಹಿಸಿ, ಊಹನೆಯಿಂದ ಹೆದರಿ, ಮೂರ್ಛಿತಳಾಗಿಮಲಗಿಬಿಟ್ಟಳು.

ಇಷ್ಟರಲ್ಲಿ ಸಂಧ್ಯಾಕಾಲ ದಾಟಿತ್ತು, ರಾತ್ರಿಯೇ ಪ್ರಾರಂಭಿಸಿತ್ತು. ಸ್ವಲ್ಪ ಹೊತ್ತಿನಲ್ಲೇ ತಾಯಿಗೆ ಸ್ಮೃತಿ ಬಂದದ್ದು ಬೆಂಕಿಯ ಬೆಳಕಿನಲ್ಲಿಗೊತ್ತಾಯಿತು. ಬೆಟ್ಸಿಯ ಸಹಾಯದಿಂದ ಅವಳು ಎದ್ದು ನಿಂತು, ಕಿಟಕಿಯ ಸರಳುಗಳನ್ನು ಹಿಡಿದುಕೊಂಡು ಸುಧಾರಿಸುತ್ತಾ,ಬೆಟ್ಸಿಯನ್ನು ನೋಡಿದಳು. ಅತ್ತೆ ಪುನಃ ವಿಚಾರಿಸತೊಡಗಿದಳು –

”ತಿಂಗಳು ತುಂಬುವುದು ಯಾವಾಗ?”

“ಗೊತ್ತಿಲ್ಲ, ಈಗಲೇ ಆಗಬಹುದೆಂದು ತೋರುತ್ತದೆ. ನಾನಂತೂ ಇದರಿಂದ ಪಾರಾಗುವುದು ಅಸಂಭವ – ಸಾಯುವುದು ಖಂಡಿತ,”ಅಂದಳು ತಾಯಿ.

ಅತ್ತೆ ಸಮಾಧಾನಪಡಿಸತೊಡಗಿದಳು,

“ಹೆದರಬೇಡ ಮಗು, ಹೆದರಿಕೆಯಿಂದ ಮಾತ್ರ ಆ ರೀತಿಯ ಆಲೋಚನೆಗಳು ಬರುತ್ತವೆ. ಸ್ವಲ್ಪ ಬಾಯಾರಿಕೆ ಕುಡಿದು ನೋಡು,ಸುಖವಾಗುತ್ತೆ. ಇರಲಿ, ಹುಡುಗಿಯ ಹೆಸರೇನೆ?” ಅಂದಳು ಅತ್ತೆ.

“ನಾನು ಹೆರುವುದು ಗಂಡನ್ನೋ ಹೆಣ್ಣನ್ನೋ ಯಾರಿಗೆ ಗೊತ್ತು!” ಎಂದು ತಾಯಿ ಉತ್ತರ ಕೊಟ್ಟಳು. ಆಗ ಅತ್ತೆ –

“ಅಯ್ಯೋ ಹೆಡ್ಡು ಹುಡುಗೀ, ನೀನು ಹೆರುವ ಮಗುವಿನ ಹೆಸರನ್ನು ವಿಚಾರಿಸಿದ್ದಲ್ಲ. – ನಿಮ್ಮ ಮನೆ ಕೆಲಸದವಳ ಹೆಸರೇನೆಂದು ಕೇಳಿದೆ.”

“ಅವಳ ಹೆಸರೋ – ಅವಳು ಪೆಗಟಿ,” ಎಂದು ತಾಯಿ ಕೆಲಸದವಳ ಹೆಸರನ್ನು ಹೇಳಿದಳು.

ಈ ಹೆಸರು ಕೇಳಿ ಅತ್ತೆಗೆ ಆಶ್ಚರ್ಯವಾಯಿತು.

“ಏನು – ಪೆಗಟಿ, ಎಂದು ಹೆಸರೇನು? ಕ್ರಿಶ್ಚಿಯನ್ ಜಾತಿಯಲ್ಲಿ ಜನಿಸಿ, ಇಗರ್ಜಿಗೆ ಹೋಗಿ, ಹುಡುಕಿ ಇಟ್ಟ ಹೆಸರು – ಪೆಗಟಿ!”ಎಂದನ್ನುತ್ತಾ ಅತ್ತೆ ಪೆಗಟಿಯನ್ನು ಕರೆದು ಸ್ವಲ್ಪ ಚಾ ತರಲು ಹೇಳಿದಳು. ಅನಂತರ ತಾಯಿಯನ್ನು ನೋಡಿ,

“ಈಗ ತಾನೇ ಹೆಣ್ಣೋ ಗಂಡೋ ಎಂದು ಪ್ರಸ್ತಾಪಿಸಿದೆವಲ್ಲಾ – ನಾನು ಕಂಡ ಕೆಲವು ಶಕುನಗಳಿಂದ ಹುಟ್ಟುವುದು ಹೆಣ್ಣೆಂತನಿಶ್ಚೈಸಿರುತ್ತೇನೆ,” ಅಂದಳು ಅತ್ತೆ.

“ಗಂಡೇ ಜನಿಸುವುದೆಂದು ನನ್ನ ಊಹೆ,” ಅಂದಳು ತಾಯಿ.

ಈ ಮಾತು ಅತ್ತೆಗೆ ಸಮಾಧಾನ ಕೊಡಲಿಲ್ಲ. ಜನಿಸುವ ಮಗು ಹೆಣ್ಣೇ ಆಗುವುದೆಂದು ಅತ್ತೆ ತನ್ನ ಅಂತರಂಗದಲ್ಲಿ ನಿಶ್ಚೈಸಿಕೊಂಡಿದ್ದಳು – ಅವಳ ಅತಿಯಾದ ಕಾಂಕ್ಷೆಯೇ ಹಾಗಿತ್ತು. ಸ್ವಲ್ಪ ಆಲೋಚಿಸುತ್ತಾ ಅತ್ತೆ ಅಂದಳು –

“ನನಗೆ ಬಲವತ್ತರವಾದ ನಂಬಿಕೆಯೇ ಇದೆ; ಜನಿಸುವ ಮಗು ಹೆಣ್ಣೆಂತ. ನನ್ನ ಅಭಿಪ್ರಾಯಕ್ಕೆ ವಿರೋಧ ಮಾತಾಡಬೇಡ. ಹುಟ್ಟುವಹುಡುಗಿಗೆ ನಾನು ದೇವಮಾತೆಯಾಗುತ್ತೇನೆ. ಈ ನನ್ನ ‘ಬೆಟ್ಸಿ ಟ್ರಾಟೂಡ್’ ಆದರೂ ನನಗಿಂತ ಉತ್ತಮವಾದ ಜೀವನಸುಖವನ್ನುಅನುಭವಿಸಲಿ. ಇವಳ ಪ್ರೇಮ ಅಪಾತ್ರನ ಪಾಲಾಗದೆ – ಜುಗಾರಿಯ ಪಣದಂತೆ ಆಗದೆ ಇರಲಿ! ಈಗ ಜನಿಸುವ ಶಿಶುವಿನ ಮನಸ್ಸುಯೋಗ್ಯ ಮಾರ್ಗವನ್ನನುಸರಿಸುವಂತೆ ನೋಡಿ, ಕಾಪಾಡಿ, ಅವಳನ್ನು ಆದರ್ಶ ಜೀವನಮಾರ್ಗದಲ್ಲಿ ನಡೆಸುವ ಜವಾಬ್ದಾರಿ ನನ್ನದಿರಲಿ”ಎಂದು ಅತ್ತೆ ಸ್ವಲ್ಪವೇ ದುಃಖಮಿಶ್ರಿತ ಆವೇಶದಿಂದ ಹೇಳಿದಳು. ಅವಳ ಜೀವನದ ಗತಕಾಲದ ಅನುಭವದ ಕಾರಣವಾಗಿ ಅವಳು ಹಾಗೆಮಾತಾಡಿರಬೇಕು. ಹೀಗೆ ಮಾತಾಡಿ ಬೆಂಕಿಯನ್ನೇ ನೋಡುತ್ತಾ ಅತ್ತೆ ಚಿಂತಾಮಗ್ನಳಾಗಿ ಕುಳಿತಳು. ಮತ್ತೆ ಸ್ವಲ್ಪ ಹೊತ್ತಿಗೆತಾಯಿಯನ್ನು ಪ್ರಶ್ನಿಸಿದಳು –

“ಮಗೂ, ಡೇವಿಡ್ಡನು ನಿನ್ನನ್ನು ಪ್ರೀತಿಸುತ್ತಿದ್ದನೇನು – ನಿಮ್ಮ ಸಂಸಾರ ಸುಖವಾಗಿತ್ತೇ?”

ತನ್ನ ದೇಹ ದೌರ್ಬಲ್ಯವನ್ನೂ, ಹೆರಿಗೆಯ ಗಂಡಾಂತರಗಳನ್ನೂ ಯೋಚಿಸುತ್ತಾ, ಗಾಬರಿಗೊಂಡಿದ್ದ ತಾಯಿ ಸ್ವಲ್ಪ ದುಃಖದಿಂದಲೇ–

“ನಾವು ಸುಖವಾಗಿದ್ದೆವು – ಡೇವಿಡ್ಡನು ಇರಬೇಕಾದುದಕ್ಕಿಂತಲೂ ಹೆಚ್ಚಿನ ರೀತಿಯಲ್ಲೇ ನನಗೆ ಒಳ್ಳೆಯವನಾಗಿದ್ದನು.”

“ಏನು, ಅತಿ ಪ್ರೀತಿಯಿಂದ ನಿನ್ನನ್ನು ಹಾಳುಮಾಡಿದನೇನು?” ಎಂದು ಅತ್ತೆ ಮರುಪ್ರಶ್ನಿಸಿದಳು.

ತಾಯಿಗೆ ಅಳು ಬಂದಿತು. ಅಳುತ್ತಾ ಅಂದಳು –

“ಹೌದು, ಈ ಕಷ್ಟಮಯ ಪ್ರಪಂಚದಲ್ಲಿ ನನ್ನೊಬ್ಬಳನ್ನೇ ಬಿಟ್ಟು ಹೋಗಿದ್ದಾನೆ – ಆ ಮಟ್ಟಿಗೆ ಹೌದು.”

ಅತ್ತೆಯ ಮನಸ್ಸು ಕರಗಿತು –

"ನಾನು ಹಾಗೆ ಕೇಳಿದೆನೆಂದು ಬೇಸರಿಸಬೇಡ, ಅಳಬೇಡ, ಮಗು – ನಿಮ್ಮ ದಾಂಪತ್ಯವು ಯೋಗ್ಯವಾದ ಒಂದುಕೂಟವಾಗಿರಲಿಲ್ಲವೆಂದು ನಾನು ಊಹಿಸಿದ್ದೆ. ಆದರೆ, ಸ್ವಲ್ಪ ಆಲೋಚಿಸಿ ನೋಡಿದರೆ ಯೋಗ್ಯವಾದ ದಾಂಪತ್ಯಗಳೇಇಲ್ಲವೆನ್ನಲೂಬಹುದು. ಪ್ರಪಂಚದ ಸ್ಥಿತಿಯೇ ಹಾಗೆ. ನೀನೊಬ್ಬ ತಂದೆತಾಯಿಯಿಲ್ಲದ – ಏಕಾಂಗಿ – ಅನಾಥದಾದಿಯಾಗಿದ್ದೆಯಲ್ಲವೇ?"

"ಹೌದು, ನಾನು ದಾದಿಯಾಗಿದ್ದೆ. ನಾನಿದ್ದ ಮನೆಗೆ ಡೇವಿಡ್ಡನು ಆಗಿಂದಾಗ್ಗೆ ಬರುತ್ತಿದ್ದನು. ಅಲ್ಲಿ ನನ್ನನ್ನು ಅವನು ವಿಶೇಷವಾಗಿಗಮನವಿಟ್ಟು ನೋಡುತ್ತಿದ್ದನು. ನನ್ನಲ್ಲಿ ಅವನಿಗಿದ್ದ ಪ್ರೀತಿ ಶ್ರದ್ಧೆಗಳ ಪರಿಣಾಮವಾಗಿ ನಮ್ಮೊಳಗೆ ವಿವಾಹವು ನಡೆಯಿತು."

ಈ ರೀತಿ ಇನ್ನೂ ಅನೇಕ ವಿಷಯಗಳನ್ನು ಸ್ವಲ್ಪಸ್ವಲ್ಪವಾಗಿ ಅತ್ತೆ ವಿಚಾರಿಸಿ ತಿಳಿದಳು. ನಮ್ಮ ತಾಯಿ ತಂದೆಯರ ಜೀವನ ಕ್ರಮ,ತಂದೆ ಮೃತಪಡುವ ಮೊದಲು ತಾಯಿಗೆ ಐನೂರು ಪವನು ವರ್ಷಾಶನ ಸಿಕ್ಕುವಂತೆ ಮಾಡಿರುವ ಏರ್ಪಾಡು, ಇಂಥದ್ದೇ ಅನೇಕವಿಷಯಗಳನ್ನು ಮಾತಾಡಿಕೊಂಡರು. ಇಷ್ಟರಲ್ಲಿ ನನ್ನ ತಾಯಿಯ ಪರಿಸ್ಥಿತಿಯು ತುಂಬಾ ಕೆಡುತ್ತಾ ಬಂದಿತ್ತು. ಇದನ್ನು ಕಂಡುಡಾಕ್ಟರರೂ ನರ್ಸ್‌ಳೂ ಬಂದರೆ ಅನುಕೂಲವೆಂದು – ಮರೆಯಲ್ಲೇ ನಿಂತು ನೋಡುತ್ತಲೂ, ಮಾತುಗಳನ್ನು ಕೇಳುತ್ತಲೂ ಇದ್ದ –ಪೆಗಟಿಯು ಅಭಿಪ್ರಾಯಪಟ್ಟಳು. ಇಂಥ ಸಂದರ್ಭಕ್ಕೆ ಒಬ್ಬ ಜವಾನ ಅಗತ್ಯವೆಂದು ಪೆಗಟಿ ತನ್ನ ಸೋದರಳಿಯ ಹೇಮನನ್ನುಮನೆಯಲ್ಲೇ ಅಡಗಿಸಿಟ್ಟುಕೊಂಡಿದ್ದಳು – ಆ ಹೇಮ ಡಾಕ್ಟರರನ್ನು ಕರೆತರಲು ಓಡಿದ.

ಸ್ವಲ್ಪ ಹೊತ್ತಿನಲ್ಲಿ ಡಾಕ್ಟರರೂ, ನರ್ಸ್‌ಳೂ ಬಂದರು. ಇಂತಹ ಸನ್ನಿವೇಶಗಳಲ್ಲಿ ಎಲ್ಲರಿಂದಲೂ ಗೌರವ ಮತ್ತು ಭಯದಿಂದ ಕಾಣಲ್ಪಡುವಡಾಕ್ಟರರೂ ಮತ್ತು ನರ್ಸುಗಳೂ ಇಲ್ಲಿ ಮಾತ್ರ ತಾವೇ ಭಯಪಡುವ ಪ್ರಸಂಗವಿತ್ತು. ಡಾಕ್ಟರರು ಸ್ವಭಾವತಃ ಬಹು ವಿನೀತರಾಗಿದ್ದರು.ನಮ್ಮ ಮನೆಯಲ್ಲಿ ಯಾರಿಗೂ ಪರಿಚಯವಿಲ್ಲದಿದ್ದ – ನೋಡಿದರೇನೆ ಭಯವುಂಟಾಗಬೇಕಾದಂಥ ಶರೀರ ಮತ್ತು ಮುಖ ವರ್ಚಸ್ಸಿದ್ದ –ಅತ್ತೆ ಬೆಟ್ಸಿಯನ್ನು ನೋಡಿ ಡಾಕ್ಟರರು ಭಯಗ್ರಸ್ತರೇ ಆದರು. ಬೆಟ್ಸಿ ತನ್ನ ಕುಲಾವಿಯನ್ನು ಎಡತೋಳಿಗೆ ಕಟ್ಟಿಕೊಂಡು,ಅನಾವಶ್ಯಕವಾದ ಮಾತುಗಳು ತನ್ನ ಕಿವಿಗೆ ಬೀಳದಂತೆ ಕಿವಿಗೆ ಹತ್ತಿಯ ದಿಮ್ಮಿಯನ್ನು ಹಾಕಿಕೊಂಡು ಬೆಂಕಿಯ ಎದುರುಕುಳಿತಿದ್ದಳು. ಆಕೆ ಡಾಕ್ಟರರ ದೃಷ್ಟಿಯಲ್ಲಿ ಒಂದು ಗಂಭೀರವೂ, ಭಯಪ್ರದವೂ ಆದ, ವೈಚಿತ್ರ್ಯವೇ ಆಗಿಬಿಟ್ಟಿದ್ದಳು.

ಇಷ್ಟರಲ್ಲಿ ತಾಯಿಯನ್ನು ಮಹಡಿಯ ಮೇಲಿನ ಒಂದು ಕೋಣೆಗೆ ಸಾಗಿಸಿದ್ದರು. ಡಾಕ್ಟರರು ಅಲ್ಲಿಗೆ ಹೋಗಿ ಅವಳನ್ನು ಪರೀಕ್ಷಿಸಿ,ಹೆರಿಗೆಗೆ ಇನ್ನು ಸ್ವಲ್ಪ ಸಮಯ ಬೇಕೆಂದಂದುಕೊಂಡು ಕೆಳಗೆ ಬಂದರು. ಕೆಳಗಿದ್ದ ಭಯಕಾರಕ ಸ್ತ್ರೀಯ ಸಮಕ್ಷಮದಲ್ಲಿ ಸ್ವಲ್ಪ ಹೊತ್ತುತಾನು ಕುಳಿತಿರಬೇಕಾಗುವುದೆಂಬುದನ್ನು ಗ್ರಹಿಸಿ – ಹೀಗಿರುವಷ್ಟು ಅವಳನ್ನು ಒಲಿಸಿಕೊಂಡಿರುವುದು ಅಗತ್ಯವೆಂದು – ವಿನೀತತೆಯಿಂದಬೆಟ್ಸಿಯನ್ನು ನೋಡುತ್ತಾ, ತಲೆಯನ್ನು ಸ್ವಲ್ಪ ಓರೆ ಮಾಡಿಕೊಂಡು ಅತ್ತಿತ್ತ ನಡೆಯತೊಡಗಿದರು. ಡಾಕ್ಟರರು ಬಹು ವಿನೀತರು –ವಿನೀತತೆಯನ್ನು ಮೀರಿ, ಪುಕ್ಕರೆ ಆಗಿದ್ದರು, ಎಂದನ್ನಬಹುದಾದಷ್ಟು ವಿನೀತರು. ಅಂಥವರು ಗಂಡಸರಲ್ಲಿ ಸಿಕ್ಕುವುದು ಬಹು ಅಪೂರ್ವ.ಯಾರಾದರೂ ಅವರನ್ನು ದೃಷ್ಟಿಸಿ ನೋಡಿದ್ದಾದರೆ ಆ ಕೂಡಲೇ ಅವರು ಮೊದಲಿಗಿಂತಲೂ ಚಿಕ್ಕದಾಗಿ ಹೋದವರಂತೆತೋರಿಕೊಳ್ಳುತ್ತಿದ್ದರು. ಅವರು ನಡೆಯುವಾಗ ಯಾರಿಗಾದರೂ ಮೈ ಒರೆಸಿ ತೊಂದರೆಯಾಗಿಬಿಡುವುದೋ ಎಂದು ಅಂಜಿನಡೆಯುತ್ತಿದ್ದರು. ನಡೆಯುವಾಗ ತಲೆ ತಗ್ಗಿಸಿ ಸಮಸ್ತರಿಗೂ ಪ್ರಣಾಮಗೈಯುತ್ತಾ ನಡೆಯುತ್ತಿರುವಂತೆ ತೋರುತ್ತಿದ್ದರು. ಅವರುಯಾರಿಗೂ, ಎಂದೂ ಒಂದು ನಿಷ್ಠುರವಾದ ಮಾತನ್ನಾಡಿದವರಲ್ಲ – ಒಂದು ನಾಯಿಗೇ ಆದರೂ ಒಂದು ಕಠಿಣ ಮಾತನ್ನಾಡರು.ನಾಯಿಗೇ ಆದರೂ ರೊಟ್ಟಿ ತುಂಡನ್ನು 'ಎಸೆದುಬಿಟ್ಟೆ' ಎಂದನ್ನಲಾರರು – 'ಕೊಟ್ಟೆ', 'ಕೊಡುತ್ತೇನೆ', ಎಂದೇ ಹೇಳುವರು. ಇಂಥವಿನಯಸಂಪನ್ನರಿಗೆ ಬೆಂಕಿಯ ಎದುರಿದ್ದ ಓರ್ವ ಸ್ತ್ರೀಯನ್ನು ಮಾತಾಡಿಸಿ ಗೌರವಿಸಬೇಕೆಂದು ತೋರಿದುದು ಸ್ವಾಭಾವಿಕವೇ ಸರಿ.ಹೀಗಾಗಿ ನಮ್ಮತ್ತೆ ಬೆಟ್ಸಿಯ ಕಿವಿಯಲ್ಲಿ ಹತ್ತಿ ದಿಮ್ಮಿ ಇದ್ದುದನ್ನು ಕಂಡು ಡಾಕ್ಟರರು, ತಮ್ಮ ಕಿವಿಯನ್ನು ಮುಟ್ಟಿ ತೋರಿಸಿಕೊಂಡು –

"ಏನಮ್ಮಾ, ನಿಮಗೆ ಕಿವಿನೋವೇ?" ಎಂದಂದರು.

ಡಾಕ್ಟರರ ಹೆಸರು ಮಿಸ್ಟರ್ ಚಿಲ್ಲಿಪ್ಪ್. ಡಾಕ್ಟರ್ ಚಿಲ್ಲಿಪ್ಪರ ಪ್ರಶ್ನೆಯನ್ನು ಕೇಳಿ, ಅತ್ತೆ ಹಠಾತ್ತಾಗಿ ಹತ್ತಿ ದಿಮ್ಮಿ ತೆಗೆದು –

"ಏನಂದಿರಿ?" ಎಂದು ಕೇಳಿದಳು. ದಿಮ್ಮಿ ತೆಗೆದ ಕ್ರಮ, ಮತ್ತು ಪ್ರಶ್ನೆಯ ಕ್ರಮಗಳನ್ನು ಕಂಡು ಡಾಕ್ಟರರು ಮೂರ್ಛಿತರೇಆಗುವುದರಲ್ಲಿದ್ದರು. ಆದರೆ, ತಾವು ಡಾಕ್ಟರರೆಂಬ ಜ್ಞಾನದಿಂದ ಧೈರ್ಯ ತಾಳಿ –

"ಅಲ್ಲಾ, ನಿಮಗೆ ಕಿವಿನೋವು ಇದೆಯೇ, ಎಂದು ಕೇಳಿದೆ" ಎಂದಂದರು.

"ನಿಮಗೆ ಹುಚ್ಚು," ಎಂದು ಮಾತ್ರ ಅತ್ತೆ ಉತ್ತರ ಕೊಟ್ಟು, ಪುನಃ ದಿಮ್ಮಿ ಏರಿಸಿಕೊಂಡು ಬೆಂಕಿ ನೋಡುತ್ತಾ ಕುಳಿತಳು.

ಡಾಕ್ಟರರು ಏನೋ ಅವಸರದ ಕೆಲಸವಿದ್ದಂತೆ – ಅಥವಾ, ಅಲ್ಲಿಂದ ತಪ್ಪಿಸ್ಕೊಂಡು ಮರ್ಯಾದೆ ಉಳಿಸಿಕೊಳ್ಳಲೋಸ್ಕರವೋ ಏನೋ–ಮಹಡಿಯ ಕೋಣೆಗೆ ಹೋದರು. ಮಹಡಿಯ ಮೇಲೆ ಹೆರಿಗೆ ಸಂಬಂಧದ ಕೆಲಸ ನಡೆಯುತ್ತಿದ್ದಿರಬೇಕೆಂದು ತಿಳಿಯುವಂತೆ ಕಾಲಸಪ್ಪಳ ಕೇಳಿಬರುತ್ತಿತ್ತು. ಹೀಗೆ ಮಹಡಿಯ ಮೇಲೆ ಸ್ವಲ್ಪ ಸಮಯ ಕೆಲಸಗಳು ನಡೆದು ಸುಖಪ್ರಸವವೇ ನಡೆಯಿತು.

ವಿನೀತರಾದ ಡಾಕ್ಟರ್ ಚಿಲ್ಲಿಪ್ಪರು ಎಂದೂ ದ್ವೇಷ ಸಾಧಿಸುವವರಲ್ಲ– ಅದರಲ್ಲೂ, ಸುಖಪ್ರಸವವಾದನಂತರವಂತೂ ಹಾಗೆಮಾಡುವವರಲ್ಲ. ಈಗ ಅವರ ವಿನೀತತೆ ಪರಿಪೂರ್ಣತೆಗೆ ಏರಿತ್ತು. ಈ ಸಂತೋಷ ಸಮಯದಲ್ಲಿ ಬೆಟ್ಸಿಯನ್ನೂಸಂತೋಷಗೊಳಿಸಬೇಕೆಂದು ಡಾಕ್ಟರರು ಮಹಡಿಯಿಂದ ಇಳಿದುಬಂದ ಕೂಡಲೇ, ಬೆಟ್ಸಿಯನ್ನು ನೋಡಿ–

"ಸುವಾರ್ತೆಯನ್ನು ತಿಳಿಸಲು ಸಂತೋಷಪಡುತ್ತೇನೆ," ಅಂದರು.

"ಯಾವ ವಾರ್ತೆ?" ಅಂದಳು ಅತ್ತೆ.

ಈ ಪ್ರಶ್ನೆಯ ಸ್ವರ – ಸ್ವಭಾವವನ್ನು ಕಂಡು ಡಾಕ್ಟರರು – ಸುಖಪ್ರಸವದ ವರ್ತಮಾನದಿಂದ ಬೆಟ್ಸಿಯು ಮೃದುವಾಗಬಹುದೆಂದುನಿರೀಕ್ಷಿಸುತ್ತಿದ್ದವರು – ತುಂಬಾ ಗಾಬರಿಗೊಂಡರು. ಆದರೂ, ಅವಳ ಕೋಪಾಗ್ನಿ ಶಮನಕ್ಕಾಗಿ ತನ್ನ ತಲೆಯನ್ನು ಮತ್ತಷ್ಟು ಓರೆಮಾಡಿಕೊಂಡು – ಪ್ರಸನ್ನಳಾಗುವ ಕ್ರಮವನ್ನೇ ಬೆಟ್ಸಿಗೆ ತೋರಿಸುತ್ತಿರುವವರಂತೆ ತೋರುತ್ತಾ – ಮುಗುಳ್ನಗೆಯಿಂದ –
"ಅಮ್ಮಾ, ಎಲ್ಲವೂ ನಾವಿಚ್ಛಿಸಿದಂತೆಯೇ ಸುಖವಾಗಿ ನಡೆದಿದೆ," ಎಂದು ಡಾಕ್ಟರ್ ಚಿಲ್ಲಿಪ್ಪರು ಹೇಳಿದರು.
"ಅಯ್ಯೋ, ಇವರಿಗೇನು ಮಾತೇ ಬರೋದಿಲ್ಲವೋ? ಹೇಳಬೇಕಾದ್ದನ್ನು ಹೇಳದೇ ಏನೇನೋ ಒದರುತ್ತಾರಲ್ಲಾ!" ಎಂದು ಅತ್ತೆಉದ್ಗಾರವನ್ನು ಎಳೆದಳು. ಮತ್ತೆ ಸ್ವಲ್ಪ ಸಮಾಧಾನ ತೆಗೆದುಕೊಂಡು ಕೇಳಿದಳು–
"ಅವಳು ಹೇಗಿದ್ದಾಳೆ?"
"ಅವಳು ಸೌಖ್ಯವಾಗಿದ್ದಾಳೆ, ತಾಯೀ – ಬೇಕಾದ ಚಿಕಿತ್ಸೆಯೆಲ್ಲ ನಡೆದಿದೆ. ನೀವು ಬೇಕಾದರೆ ಹೋಗಿ ನೋಡಿ ಬನ್ನಿ, ತಾಯೀ –ನೀವು ಮಾತಾಡಿದರೆ ಬಾಣಂತಿಗೆ ಮತ್ತಷ್ಟು ಸುಖವಾಗಬಹುದು," ಅಂದರು ಡಾಕ್ಟರರು.
ಬೆಟ್ಸಿಗೆ ಈಗ ತುಂಬಾ ಕೋಪ ಬಂದಿರಬೇಕು; ಸ್ಪಷ್ಟವಾದ ಸ್ವರದಿಂದ, ವಿರಳವಾಗಿ ಅವಳು ನುಡಿದಳು –
"ಅವಳು – ಅವಳು – ಅಂದರೆ, ಈಗ ಹುಟ್ಟಿದ ಹುಡುಗೀ – ಹುಡುಗೀ ಹೇಗಿದ್ದಾಳೆ" ಎಂದು ಕೇಳಿದೆ.
"ನಿಮಗೆ ಆಗಲೇ ಗೊತ್ತಾಗಿರಬಹುದೆಂದು ಗ್ರಹಿಸಿದೆ. ತಾಯೀ – ಜನಿಸಿದ್ದು ಗಂಡು ಶಿಶು," ಅಂದರು ಡಾಕ್ಟರ್ ಚಿಲ್ಲಿಪ್ಪರು.
ತಾನು ಸಂಸಾರ ಕಟ್ಟಿ ಸುಖಪಡೆಯಲು ಪ್ರಯತ್ನಿಸಿ, ಸುಖಕಾಣದೇ ಸೋತಬೆಟ್ಸಿ ಇನ್ನೋರ್ವ ಸ್ತ್ರೀಗಾದರೋ ತಾನು ಶ್ರಮ ವಹಿಸಿಸಂಸಾರ ಸುಖವನ್ನೊದಗಿಸಬೇಕೆಂದು ಉದ್ದೇಶಿಸಿ, ಇಲ್ಲಿ ಜನಿಸುವ ಶಿಶು ಹೆಣ್ಣಾಗಬೇಕೆಂದು ಬಹುವಾದ ಕಾಂಕ್ಷೆಯಲ್ಲಿದ್ದಳು.
ಇಲ್ಲಿ ಜನಿಸಿದ ಹೆಣ್ಣು ಶಿಶುವನ್ನು ಸಾಕಿ ಸಲಹಿ, ತಾನು ಅನುಭವಿಸದಿದ್ದ ಸುಖವನ್ನು ಅದಕ್ಕಾದರೂ ಒದಗಿಸಿ ಸಂತೋಷಿಸಬೇಕೆಂದುಅತ್ತೆ ಇಚ್ಛಿಸಿದ್ದಳು. ಈ ತೆರನಾದ ನಿರೀಕ್ಷಣೆ– ಶಿಶುವಿನ ಮುಂದಿನ ಜೀವನಪಥ – ಇತ್ಯಾದಿಗಳಲ್ಲಿ ಸಂತೋಷದಿಂದ ಮಗ್ನಳಾಗಿದ್ದಬೆಟ್ಸಿಗೆ, ಜನಿಸಿದ ಶಿಶು ಗಂಡೆಂದು ತಿಳಿದದ್ದು ಬಹು ದುಃಖಕರವೇ ಆಗಿ ಅವಳ ಆಶಾಭಂಗಕ್ಕೂ, ಕೋಪಕ್ಕೂ ಮೇರೆ ಇಲ್ಲದೇಹೋಯ್ತು. ಆದರೂ ಮನೋನಿಗ್ರಹವನ್ನು ಅರಿತಿದ್ದ ಬೆಟ್ಸಿ ಡಾಕ್ಟರರ ಮಾತನ್ನು ಕೇಳಿ ಎದ್ದು ನಿಂತು, ತನ್ನ ಕುಲಾವಿಯ ಹಗ್ಗವನ್ನುಹಿಡಿದು ಒಮ್ಮೆ ಕುಲಾವಿಯನ್ನು (ಡಾಕ್ಟರರನ್ನೇ ಅದರಿಂದ ಹೊಡೆದು ಬಿಡುವಂತೆ) ಬೀಸಿ, ತಲೆಗಿಟ್ಟುಕೊಂಡು, ಬಗ್ಗಿ, ಬಾಗಿಲನ್ನು ದಾಟಿ,ನಮ್ಮ ಮನೆಯನ್ನು ಬಿಟ್ಟೇ ಹೋದಳು. ಪ್ರಪಂಚಾತೀತ ಸ್ವರೂಪಗಳನ್ನು ನೋಡುವ ಯೋಗದಲ್ಲಿ ಜನಿಸಿದ್ದ ನನ್ನನ್ನು ನೋಡಲುಬಂದಿದ್ದ ಒಬ್ಬ ಯಕ್ಷಿಣಿಯು ಕೋಪಾವಿಷ್ಟಳಾಗಿ ಹೋದಂತೆ ಅತ್ತೆ ಅಂತರ್ಧಾನವೇ ಆಗಿಬಿಟ್ಟಳು. ಅವಳು ಆ ಮನೆಗೆ ಅನಂತರಎಂದೂ ಕಾಲಿಡಲಿಲ್ಲ.
ನಿಜ! ಬೆಟ್ಸಿ ಟ್ರಾಟೂಡ್ ಪುನಃ ಬರಲೇ ಇಲ್ಲ; ನನ್ನ ಜನನದ ಮೊದಲು ನಾನು ಯಾವ ಅದೃಶ್ಯ ಪ್ರಪಂಚದಲ್ಲಿದ್ದೆನೋ ಅದೇ ವಿಶಾಲಕ್ಷೇತ್ರಕ್ಕೆ ಅತ್ತೆಯಿಂದ ಕಲ್ಪಿತಳಾಗಿದ್ದ ಬೆಟ್ಸಿ ಟ್ರಾಟೂಡ್ ಕಾಪರ್ ಫೀಲ್ಡಳೂ ಹೋದಳು. ನಾನು ಮಾತ್ರ ನನ್ನ ಬಿದಿರಿನ ತೊಟ್ಟಿಲಲ್ಲಿಮಲಗಿದ್ದೆ; ನನ್ನ ತಾಯಿ ಅವಳ ಹಾಸಿಗೆಯಲ್ಲಿ ಮಲಗಿದ್ದಳು. ಯಾವಾತ ಇರದಿದ್ದರೆ ನಾನು ಇರುತ್ತಿರಲಿಲ್ಲವೋ – ಯಾರು ಈ ಲೋಕಜೀವನದ ಗಡಿಯಂತಿರುವ ಗೋರಿಯ ಅಡಿಯಲ್ಲಿ ಮಣ್ಣಾಗಿ ಮಲಗಿದ್ದಾನೋ – ಆತನ ಮೇಲೂ, ಆತನಂತೆಯೇ ಪ್ರಪಂಚವನ್ನು ಬಿಟ್ಟುನಿರ್ಗಮನ ಹೊಂದಿದ್ದ ಇತರರ ಮೇಲೂ, ನಮ್ಮ ಕೋಣೆಯೊಳಗಿನ ಸೌಮ್ಯವಾದ ಬೆಳಕು ಹರಡಿ ಬಿದ್ದಿತ್ತು.

ಅಧ್ಯಾಯ ಎರಡು
ನಾನು ಸುತ್ತಲಿನ ಅನುಭವವನ್ನು ಪಡೆಯುತ್ತೇನೆ

ನನ್ನ ಬಾಲ್ಯದ ಅರಿವಿನ ಪರದೆಯನ್ನು ನೋಡತೊಡಗಿದರೆ ಮೊದಲೆದ್ದು ಕಾಣುವುದುನನ್ನಮ್ಮನ ಮೃದು ಕೂದಲು, ಸುಂದರರೂಪ ಮತ್ತು ಪೆಗಟಿಯ ರೂಪರಹಿತ ಮುಖ, ಕಪ್ಪನ್ನೇಕಾರುವಂತಿದ್ದ ಅವಳ ಎರಡು ಕಣ್ಣು. ಪೆಗಟಿಯ ಕಣ್ಣುಗಳು ಹಾಗಿದ್ದರೂ ಅವಳ ಕೈ ಮತ್ತುಕೆನ್ನೆಗಳು ಸೇಬು ಹಣ್ಣಿನಷ್ಟು ಕೆಂಪಾಗಿ ಇದ್ದುವು; ಈ ಕೆಂಪನ್ನು ಕಂಡು ಕಾಗೆಗಳೇಕೆ ಅವನ್ನುತಮ್ಮ ಕೊಕ್ಕಿನಿಂದ ಕುಕ್ಕಿನೋಡದೆ ಬಿಡುವುವೆಂದು ನಾನು ಆಶ್ಚರ್ಯಪಡುತ್ತಿದ್ದೆ.

ತಾಯಿಯೂ ಪೆಗಟಿಯೂ ಮೊಣಕಾಲೂರಿಕೊಂಡು, ನನ್ನನ್ನು ಅತ್ತಿತ್ತ ನಡೆಯುವಂತೆಮಾಡುತ್ತಿದ್ದುದೂ, ಆಗ್ಗೆ ನಾನು ಪೆಗಟಿಯ ಸಮೀಪಕ್ಕೆ ತಲಪುವ ಮೊದಲು ಬೀಳದಂತೆಹಿಡಿದುಕೊಳ್ಳಲು ಅವಳು ಕೈ ನೀಡಿ ನನಗೆ ತೋರಿಸುತ್ತಿದ್ದ ಅವಳ ತೋರುಬೆರಳೂ, ನನಗೆಜ್ಞಾಪಕಕ್ಕೆ ಬರುತ್ತವೆ. ಬೆರಳಿನ ಜ್ಞಾಪಕದ ಜತೆಯಲ್ಲೇ ಅವಳ ಆ ಬೆರಳು ಅಡಿಕೆಯನ್ನುಪುಡಿಮಾಡುವ ಕತ್ತರಿಯ ದೊರಗು ಭಾಗದಂತೆ ಇತ್ತೆಂಬುದೂ ನೆನಪಿಗೆ ಬರುತ್ತದೆ.

ಹಿಂದಿನ ಈ ನೆನಪು ಸ್ವಲ್ಪಾಂಶ ಕಲ್ಪನೆಯೂ ಇರಬಹುದು. ಆದರೆ, ಅಂಥ ಕಲ್ಪನೆಗಾದರೂಆಗಲೇ ಆಧಾರವಿದ್ದಿರಬೇಕೆಂದು ನಾವು ನಿಶ್ಚೈಸಿಕೊಂಡರೆ ತಪ್ಪಾಗಲಾರದು. ಸಾಧಾರಣ ಈತರ್ಕ ಸರಣಿಯಂತೆಯೇ ನಮ್ಮ ಗುಣಗಳನ್ನು ಕುರಿತು ನಾವು ನಿಶ್ಚೈಸಬಹುದೆಂದು ನಾನುನಂಬುತ್ತೇನೆ. ಅಂದರೆ ನಾವು ದೊಡ್ಡವರಾದಾಗ ಹೊರಹಾಕುವ ನಮ್ಮ ಗುಣಗಳ ಮೂಲವೆಲ್ಲಬಾಲ್ಯದಲ್ಲೇ ರೂಪಹೊಂದುವುವೆಂದು ನನ್ನ ನಂಬಿಕೆ. ಬಾಲಕರಿಗೆ ಸ್ಮರಣ ಶಕ್ತಿ ತುಂಬಇರುತ್ತದೆ. ಹಾಗಾಗಿ ಬಾಲ್ಯದಲ್ಲಿ ಸಂಗ್ರಹವಾದ ಗುಣಗಳ ಕಾರಣ – ಆಧಾರವಾಗಿಯೇವಯಸ್ಸಾದನಂತರವೂ ಮನುಷ್ಯನ ಅನೇಕ ಚಟುವಟಿಕೆಗಳು ನಡೆಯುತ್ತವೆ. ಸರಳತೆ,ಸಂತೃಪ್ತಿ, ಹರ್ಷಚಿತ್ತತೆ, ಇವೆಲ್ಲಾ ಬಾಲ್ಯದ ಗುಣಗಳು. ಇಂಥ ಗುಣಗಳನ್ನು ನಾವು ಪ್ರೌಢ ವಯಸ್ಕರಲ್ಲಿ ಕಂಡಾಗ ಆ ಗುಣಗಳೆಲ್ಲ ಅವರಪ್ರಾಯಬಂದನಂತರ ಸಂಗ್ರಹವಾದುವಲ್ಲವೆಂದೂ ಅವೆಲ್ಲ ಅವರ ಬಾಲ್ಯದ ಗುಣಗಳ ಅವಶೇಷಗಳೆಂದೂ ನಾವು ತಿಳಿಯಬಹುದು.ನನಗೆ ಸ್ಮರಣ ಶಕ್ತಿ ತುಂಬಾ ಇತ್ತೆಂದು ನಾನು ಅನೇಕ ಪ್ರಸಂಗಗಳಿಂದ ತಿಳಿದುಕೊಂಡಿದ್ದೇನೆ. ಆದ್ದರಿಂದಲೇ ನಾನು ಹಿಂದಿನವಿಷಯಗಳನ್ನು ಬಹು ಸುಲಭವಾಗಿ ಅರಿವಿನ ಪರದೆಯ ಮೇಲೆ ನೋಡಬಲ್ಲೆನು. ಇನ್ನೂ ಏನೆಲ್ಲ ಜ್ಞಾಪಕವಿದೆಯೋ ನೋಡೋಣ.

ಹರಡಿ ಮುಸುಕಿರುವ ಮೋಡಗಳ ಮಧ್ಯದಿಂದ ರೂಪಗಳು ಉದಯಿಸಿ ಬರಬಹುದಾದಂತೆ ಬಾಲ್ಯದ ಅನುಭವಗಳಿಂದ ಎದ್ದುಕಾಣುವುವುಗಳಲ್ಲಿ ಮೊದಲನೆಯದು ನಮ್ಮ ಮನೆ ಮತ್ತು ಮನೆಯ ಜತೆಯಲ್ಲೇ ಅದರ ಹಿಂಭಾಗದಲ್ಲಿದ್ದ ಪೆಗಟಿಯ ಕೋಣೆ. ಮತ್ತೆಜ್ಞಾಪಕಕ್ಕೆ ಬರುವುದು ನಮ್ಮ ಅಂಗಳದ ಮಧ್ಯದಲ್ಲಿದ್ದ ಒಂದು ಕಂಬ ಮತ್ತು ಕಂಬದ ಮೇಲಿದ್ದ ಪಾರಿವಾಳದ ಗೂಡು. ಪಾರಿವಾಳದಗೂಡಿನಲ್ಲಿ ಮಾತ್ರ ಪಾರಿವಾಳಗಳಿರಲಿಲ್ಲ. ಹೀಗೆಯೇ ಅಂಗಳದ ಮೂಲೆಯಲ್ಲಿ ನಾಯಿಯಿಲ್ಲದಿದ್ದ ಒಂದು ನಾಯಿಗಳ ಗೂಡೂ ಇತ್ತು.ಆಂಗಳದ ಇನ್ನೊಂದು ಮೂಲೆಯಲ್ಲಿ ತುಂಬ ಕೋಳಿಗಳಿದ್ದುವು – ಆ ಕೋಳಿಗಳನ್ನು ನಾನು ಗುರುತಿಸಲಾರದೆ ಕೋಳಿಗಳ ರಾಶಿಗಳೇಅವೆಂದು ಗ್ರಹಿಸುತ್ತಿದ್ದೆ. ಆದರೆ ಈ ಕೋಳಿಗಳ ಪೈಕಿ ಒಂದು ದೊಡ್ಡ ಹುಂಜವು ಒಂದೊಂದಾವರ್ತಿ ಕಂಬದ ಮೇಲೇರಿ ಕೊಕ್ಕೊಕ್ಕೋಎಂದು ಕೂಗುತ್ತಿದ್ದುದೂ, ಅದು ನನ್ನನ್ನೇ ನೋಡಿ ಕೂಗುತ್ತಿದ್ದುದರಿಂದ, ನನ್ನನ್ನು ಉದ್ದೇಶಿಸಿಯೇ ಅದು ಏನನ್ನೋ ಹೇಳುತ್ತಿದೆಯೆಂದುನಾನು ಗ್ರಹಿಸುತ್ತಿದ್ದುದೂ ಈಗಲೂ ಜ್ಞಾಪಕವಿದೆ. ನಮ್ಮ ಕೋಳಿಗಳಿಂದಾಚೆಗೆ ಬಾತುಕೋಳಿಗಳಿದ್ದುವು. ನಾನೇನಾದರೂ ಅಪ್ಪಿತಪ್ಪಿ ಆಕಡೆ ಹೋದರೆ ಅವುಗಳು ಬಳ್ಳಿಗಳಂತಿದ್ದ ತಮ್ಮ ಕುತ್ತಿಗೆಯನ್ನು ನೀಡಿ ನನ್ನನ್ನು ಅಟ್ಟಿ ಬರುತ್ತಿದ್ದುವು. ಹೀಗೆ ಅಟ್ಟಿ ಬಂದ ಅನುಭವದಜತೆಯಲ್ಲೇ ರಾತ್ರಿ ಸ್ವಪ್ನದಲ್ಲೂ ಆ ಭಯಂಕರ ಪ್ರಸಂಗಗಳನ್ನು ಕಂಡದ್ದು ಜ್ಞಾಪಕವಿದೆ – ಅಲ್ಲದೆ, ಸಿಂಹಗಳ ಮಧ್ಯದಲ್ಲಿ ಸಿಕ್ಕಿಬಿದ್ದಬೇಟೆಗಾರನು ಚೀರಬಹುದಾದಂತೆ ನಾನು ಸ್ವಪ್ನದಲ್ಲಿ ಚೀರಿದುದೂ ಜ್ಞಾಪಕಕ್ಕೆ ಬರುತ್ತದೆ.

ಇನ್ನು ಪೆಗಟಿಯ ಹಿಂಬದಿಯ ಕೋಣೆಯಿಂದ ಮನೆಯ ಮುಂಬದಿಯ ಕೋಣೆಗೆ ಬರುವಾಗ ದಾಟಬೇಕಾಗಿದ್ದ ದಾರಿಬದಿಯಕೋಣೆಯಲ್ಲೂ ಸ್ವಲ್ಪ ಸ್ವಾರಸ್ಯವಿದೆ. ಆ ದಾರಿಬದಿ ಕೋಣೆಯೆಂದರೆ ಒಂದು ನೀಳವಾದ ಓಣಿ. ಓಣಿಯ ಪಕ್ಕದಲ್ಲೇ ಮನೆಯ ಮುಖ್ಯಉಗ್ರಾಣವಿದೆ. ಈ ಉಗ್ರಾಣಕ್ಕೆ ಮನೆಯವರು ಕೆಲವೊಮ್ಮೆ ಹೋಗಿ, ಮಿನುಗು ದೀಪವನ್ನು ಹಿಡಿದುಕೊಂಡು ಹಳೆಪೆಟ್ಟಿಗೆ, ಪಾತ್ರೆ,ಹೊಸ ಡಬ್ಬಿ, ಭರಣಿ, ಗೋಣಿ ಮುಂತಾದುವುಗಳನ್ನು ನೋಡುವುದಿದೆ. ಆಗ್ಗೆ ಕಾಫಿ, ಚಾ, ಹೊಗೆಸೊಪ್ಪು, ಒಳ್ಳೆಮೆಣಸು, ಧೂಳು ಈಎಲ್ಲವುಗಳ ಮಿಶ್ರ ಪರಿಮಳ ಒಂದೇ ಗುಟುಕಿನಲ್ಲಿ ಬಂದುಬಿಡುತ್ತದೆ. ಉಗ್ರಾಣವು ಕತ್ತಲೆಯಾಗಿದ್ದುದರಿಂದಲೂ, ಪೆಗಟಿಯಕೋಣೆಯಿಂದ ಮನೆಯ ಮುಂಭಾಗಕ್ಕೆ ದೂರವಿರುವುದರಿಂದಲೂ, ಆ ಓಣಿ ಕೋಣೆಯ ದಾರಿಯು ಬಹು ಅಪಾಯಕರವೆಂದೇ ನನ್ನಭಾವನೆ. ಮನೆಯ ಮುಂಭಾಗದಲ್ಲಿ ಒಂದು ಉದ್ದದ ಜಗುಲಿಯೂ, ಜಗುಲಿಯ ಎರಡು ತುದಿಗಳಲ್ಲೂ ಈ ಒಂದೊಂದು ಕೋಣೆಯೂಇವೆ. ಈ ಎರಡು ಕೋಣೆಗಳ ಪೈಕಿ ಒಂದರಲ್ಲಿ ಪೆಗಟಿ, ನಾನು ಮತ್ತು ತಾಯಿ ಸಂಧ್ಯಾಕಾಲದಲ್ಲಿ ಕುಳಿತು ಮನಸ್ವಿಯಾಗಿಮಾತಾಡುತ್ತಿದ್ದೆವು. ಇಲ್ಲಿ ಕುಳಿತು ಮಾತಾಡುವುದೆಂದರೆ ನನಗೆ ಬಹಳ ಸಂತೋಷ. ಈ ಕೋಣೆ ಸ್ವಲ್ಪ ಸಣ್ಣದು. ಮತ್ತು ಸಡಗರದಸಾಮಾನುಗಳಿಲ್ಲದುದು. ಇನ್ನೊಂದು

ಕೋಣೆಯಿದೆಯಲ್ಲ – ಅದು ವಿಶಾಲವಾದುದು; ಸಡಗರ ಸಂಭ್ರಮಗಳ ಕೋಣೆ.ಆದಿತ್ಯವಾರಗಳಲ್ಲೂ, ವಿಶೇಷ ದಿನಗಳಲ್ಲೂ ಕುಳಿತು ಮೆರೆಯುವ ಸ್ಥಳ ಅದು. ಆದರೂ ನನಗೆ ಆ ಕೋಣೆ ಒಪ್ಪುತ್ತಿರಲಿಲ್ಲ. ಆಕೋಣೆಯನ್ನು ಕುರಿತು ನನಗೆ ಒಂದು ವಿಧದ ಅಂಜಿಕೆಯೇ ಇತ್ತು. ನಾನು ಕೇಳಿ ತಿಳಿದ ಪ್ರಕಾರ ನನ್ನ ತಂದೆಯ ಶವವನ್ನು ಆಕೋಣೆಯಲ್ಲಿಟ್ಟಿದ್ದರು. ಕಪ್ಪು ಕುಪ್ಪಸದ ಜನರು ಅಲ್ಲಿಂದಲೇ ಶವವನ್ನು ತೆಗೆದುಕೊಂಡು ಶ್ಮಶಾನಕ್ಕೆ ಮೆರವಣಿಗೆ ಹೊರಟಿದ್ದುದಂತೆ.ಆದಿತ್ಯವಾರಗಳಲ್ಲಿ ತಾಯಿ ಅಲ್ಲಿ ಕುಳಿತು ಬೈಬಲ್ಲನ್ನು ಓದುತ್ತಾಳೆ. ಬೈಬಲ್ಲನ್ನು ಓದುತ್ತಿದ್ದಾಗ ಒಂದು ಸರ್ತಿ ಲಾಸರ್ಸನು ಸತ್ತುಪುನರ್ಜೀವಗೊಂಡ ಕಥೆ ಕೇಳಿ ನಾನು ಹೆದರಿ ಅತ್ತೆನು. ಆಗ ನನ್ನನ್ನು ಸಮಾಧಾನಪಡಿಸುವುದು ಬಹಳ ಕಷ್ಟವಾಗಿತ್ತು. ಕೊನೆಗೆ, ನಮ್ಮಮನೆಯ ಕೇವಲ ನೆರೆ ಕಾಂಪೌಂಡಿನಲ್ಲಿದ್ದ ಶ್ಮಶಾನದ ಗೋರಿಗಳನ್ನೇ ನನಗೆ ತೋರಿಸಿ, ಸತ್ತವರು ಏಳದೆ ಮಲಗಿರುತ್ತಾರೆಂದುನನ್ನನ್ನು ನಂಬಿಸಿ ಸಮಾಧಾನಪಡಿಸಿದ್ದಾರೆ. ಅಂದಿನ ನನ್ನ ಸಮಾಧಾನಕ್ಕೆ ಗೋರಿಗಳು ಮಾತ್ರ ಕಾರವಾಗಿರದೆ, ಆ ಗೋರಿಗಳಮೇಲೂ, ಎಲ್ಲ ಕಡೆಯಲ್ಲೂ ಬಿದ್ದಿದ್ದ ಬೆಳದಿಂಗಳಿನ ಬೆಳಕೂ ರಾತ್ರಿಯ ಅಲ್ಲಿನ ಶಾಂತ ವಾತಾವರಣವೂ ಕಾರಣಗಳಾಗಿದ್ದುವೆಂದುಈಗ ತಿಳಿಯುತ್ತೇನೆ.

ನಮ್ಮ ಇಗರ್ಜಿ ವಟಾರದ ಹುಲ್ಲುಗಾವಲಿನ ಹಸುರಿನಷ್ಟುಸುಂದರ ಹಸುರೂ, ಅಲ್ಲಿನ ಮರಗಳ ತೋಪಿನಡಿಯತಂಪಿನಷ್ಟರ ತಂಪೂ, ಅಲ್ಲಿನ ಗೋರಿಗಳು ಮನಸ್ಸಿನಲ್ಲಿಉಂಟುಮಾಡುತ್ತಿದ್ದಷ್ಟರ ಶಾಂತಿಯೂ ಬೇರೆ ಎಲ್ಲಿಯೂಇಲ್ಲವೆಂದು ನಾನು ನಂಬಿದ್ದೆ. ನಮ್ಮ ಕೋಣೆಯಲ್ಲಿ ಒಂದುಪಿಠಾರಿಯ ಮೇಲೆ ಹಾಸಿಗೆ ಹಾಸಿ ನನ್ನನ್ನು ಮಲಗಿಸುತ್ತಿದ್ದರು.ಪ್ರತಿದಿನ ಬೆಳಿಗ್ಗೆ ಎದ್ದ ಹಾಗೆ ನಾನು ನೋಡುವುದೇ ಈಮೈದಾನವನ್ನು. ಇದರಲ್ಲಿ ಕುರಿಮಂದೆಗಳು ಸದಾಮೇಯುತ್ತಿದ್ದುವು. ಬೆಳಗ್ಗಿನ ಸೌಮ್ಯದ ಬಿಸಿಲು, ಕುರಿಮಂದೆಮೈದಾನಗಳ ಮೇಲೆ ಬಿದ್ದು ಸೃಷ್ಟಿಯನ್ನೆಲ್ಲ ಹರ್ಷಪುಳಕಿತವಾಗಿಮಾಡುತ್ತಿತ್ತಲ್ಲದೆ, ಮುಂದೆ ನನ್ನ ಕೋಣೆಯಲ್ಲಿದ್ದಛಾಯಾಯಂತ್ರದ ಮೇಲೂ ಬಿದ್ದು ಅದನ್ನುಪ್ರಕಾಶಮಾನವಾಗಿ ಮಾಡುತ್ತಿತ್ತು. ಸೂರ್ಯೋದಯದಿಂದದಿನವೂ ಪ್ರಾರಂಭವಾಗಿ ಪುನಃ ತಾನು ಗಂಟೆಗಳನ್ನು ತಿಳಿಸುವಅವಕಾಶ ಸಿಕ್ಕಿದ್ದಕ್ಕೆ ಈ ಛಾಯಾ ಯಂತ್ರವೂ ತನ್ನಂತರಂಗದಲ್ಲೇ ಸಂತೋಷಪಡುತ್ತಿರಬೇಕೆಂದು ನಾನು ನಂಬಿಕೊಂಡಿದ್ದೆ. ಛಾಯಾಯಂತ್ರದ ಗುಟ್ಟನ್ನು ತಿಳಿದ ಸಂತೋಷ ಪ್ರತಿ ದಿನವೂ ನನ್ನ ಪಾಲಿಗೆ ಇತ್ತು.

ನಮ್ಮ ಮನೆಯವರಿಗೆಂದೇ ಮೀಸಲಾಗಿಟ್ಟಿದ್ದ ಒಂದು ಸೋಫಾ ನಮ್ಮಇಗರ್ಜಿಯಲ್ಲಿತ್ತು. ನಾವು ಇಗರ್ಜಿಗೆ ಹೋದಾಗ ಇದರಲ್ಲೇ ಕುಳಿತಿರುತ್ತಿದ್ದೆವು.ಸೋಫಾದ ಬದಿಯಲ್ಲಿದ್ದ ಕಿಟಕಿಯಿಂದ ನೋಡಿದರೆ ನಮ್ಮ ಮನೆಕಾಣುತ್ತಿತ್ತು. ಅದು ಕಾಣುತ್ತಿತ್ತು ಮಾತ್ರವಲ್ಲದೆ ನಾನು ಅಲ್ಲಿಗೆಹೋದಾಗಲೆಲ್ಲಾ ಆಗಿಂದಾಗ್ಗೆ ನಮ್ಮ ಮನೆಯನ್ನು ನೋಡುತ್ತಲೂ ಇದ್ದೆ.ನಮ್ಮ ಮನೆಯನ್ನು ತನ್ನ ಮನೆಗಿಂತಲೂ ಹೆಚ್ಚಾಗಿ ಕಾದುಕೊಳ್ಳುತ್ತಿದ್ದಪೆಗಟಿಯು ನಮ್ಮ ಮನೆಯನ್ನು ಯಾರಾದರೂ ದರೋಡೆಮಾಡಿಬಿಡಬಹುದೆಂದು ನಡು ಹಗಲಲ್ಲೇ ಆದರೂ – ನಮ್ಮ ಮನೆ ಕಡೆಗೆಆಗಿಂದಾಗ್ಗೆ ನೋಡುತ್ತಿದ್ದಳು. ಆದರೆ, ನಾನು ಮಾತ್ರ ನಮ್ಮ ಮನೆಕಡೆನೋಡಿದಾಗ, ನಾನು ಹಾಗೆ ನೋಡಬಾರದೆಂದೂ, ನಾನು ಗುರುಗಳುಮಾಡುತ್ತಿದ್ದ ಉಪದೇಶ ಭಾಷಣವನ್ನು ಕೇಳುತ್ತಾ ಗುರುಗಳನ್ನೇನೋಡುತ್ತಿರಬೇಕೆಂದೂ ಎಚ್ಚರಿಸುತ್ತಿದ್ದಳು.

ಪೆಗಟಿಯ ಎಚ್ಚರಿಕೆಯ ಪರಿಣಾಮವಾಗಿ ಒಂದಾವರ್ತಿ ನನಗಾದ ಪ್ರಸಂಗವನ್ನುತಿಳಿಸುವೆನು. ಪೆಗಟಿ ಹೇಳಿದ ಪ್ರಕಾರ ಗುರುಗಳನ್ನು ನೋಡಲು ನನಗೆ ಅಂಜಿಕೆಯೂಆಗುತ್ತಿತ್ತು, ನಾಚಿಕೆಯೂ ಆಗುತ್ತಿತ್ತು. ಇಗರ್ಜಿಯಲ್ಲಿ ಅದರಲ್ಲೂ, ಆಗ ಮಾತ್ರ – ಬಿಳೀವಸ್ತ್ರವನ್ನು ಹೊದೆದುಕೊಂಡು ತೋರಿಬರುತ್ತಿದ್ದ ಗುರುಗಳು ನನಗೆ, ಅವರಸಾದವಸ್ತ್ರದಲ್ಲಿ, ಪರಿಚಿತರೇ ಆಗಿದ್ದರು. ಅವರು ಅಲ್ಲೇಕೆ ಆ ಬಿಳಿವಸ್ತ್ರಧಾರಿಗಳಾಗಿದ್ದಾರೆಂದು ಅವರನ್ನು ಬಹು ಕೌತುಕದಿಂದ ನೋಡತೊಡಗಿದೆ –ಹಾಗೆ ನೋಡುತ್ತಿದ್ದ ಹಾಗೆಯೇ, ನಾನು ಹಾಗೆ ನೋಡಿದ್ದನ್ನು ಆಕ್ಷೇಪಿಸಿ ಗುರುಗಳುನನ್ನನ್ನು ವಿಚಾರಿಸಿದರೆ ನನ್ನ ಗತಿ ಏನೆಂದು ಹೆದರಿದೆ. ಇದಕ್ಕಾಗಿ ಗುರುಗಳನ್ನುನೋಡುವುದು ಬಿಟ್ಟು ತಾಯಿಯನ್ನು ನೋಡತೊಡಗಿದೆ. ತಾಯಿಯು ನನ್ನನ್ನುಕಂಡರೂ ಕಾಣದಂತೆ ಮಾಡಿಕೊಂಡು ನನ್ನ ದೃಷ್ಟಿಯನ್ನೇ ಗಮನಿಸಲಿಲ್ಲ. ಹೀಗಾಗಿಇನ್ನೇನನ್ನು ನೋಡುವುದೆಂದು ಹೆದರಿ ದೂರದ ಬಾಗಿಲ ಹತ್ತಿರ ನಿಂತಿದ್ದ ಒಬ್ಬ ಚಿಕ್ಕಹುಡುಗನನ್ನು ನೋಡಿದೆ. ಅವನು ನನ್ನನ್ನು ನೋಡಿ ಮೂಗು ಡೊಂಕಿಸಿ ಅಣಕಿಸಿದನು.ಕೊನೆಗೆ ಅವನ ಮೇಲಿನ ದೃಷ್ಟಿಯನ್ನು ತಪ್ಪಿಸಿ ಹೆಬ್ಬಾಗಿಲಿಗಾಗಿ ಒಳಗೆ ಬರುತ್ತಿದ್ದಬಿಸಿಲನ್ನು ನೋಡಿದೆ. ಅಲ್ಲಿ ಒಳಗೆ ನುಗ್ಗಬೇಕೋ, ಹೊರಗೇ ನಿಲ್ಲಬೇಕೋ ಎಂದುಶಂಕಿಸುತ್ತಿದ್ದ – ಭಕ್ತನಾಗಿ ಬರುತ್ತಿದ್ದ ಮನುಷ್ಯನನ್ನಲ್ಲ, ಭುಕ್ತವಾಗಲಿದ್ದ ಕುರಿಯನ್ನುಕಂಡೆ. ಅದನ್ನು ಕಂಡು ಮೌನವಾಗಿರಲಾರೆನೆಂದು ತೋರಿತು. ನಾನೇನಾದರೂಮಾತಾಡಿದರೆ ಗುರುಗಳೇನೆಂದಾರು, ಜನರೇನೆಂದಾರು ಎಂದು ಹೆದರಿ ಕಂಬಗಳತುದಿಯಲ್ಲಿದ್ದ ಪ್ರತಿಮೆಗಳನ್ನು ನೋಡಿದೆ. ಪ್ರತಿಮೆಗಳ ಸಾಲಿನಲ್ಲಿ ದಿವಂಗತ ಮಿಸ್ಟರ್‌ಬ್ಯಾಜರ್ಸರೂ ಇದ್ದರು. ಅವರು ಸಾಯುವ ಮೊದಲು ಡಾ। ಚಿಲ್ಲಿಪ್ಪರೂಬಂದಿರಬೇಕಲ್ಲವೇ? ಬ್ಯಾಜರ್ಸರು ಎಷ್ಟು ದಿನ ಖಾಯಿಲೆಯಲ್ಲಿ ಮಲಗಿನರಳಿರಬೇಕು? ಅವರ ಪತ್ನಿ ಹೇಗೆ ಅತ್ತಿರಬೇಕು? ತನ್ನಿಂದ ಬದುಕಿಸಲಾಗದೆ ಸತ್ತ ಬ್ಯಾಜರ್ಸರ ನೆನಪು ಈಗಲೂ ವರ್ಷಕ್ಕೊಮ್ಮೆ ಡಾ।ಚಿಲ್ಲಿಪ್ಪರಿಗೆ ಆಗುವುದಿಲ್ಲವೇ? ಎಂದು ಮೊದಲಾಗಿ ಆಲೋಚಿಸಿದೆ. ಇದೇ ಆಲೋಚನೆಗೆ ಸಂಬಂಧಪಡುತ್ತಾ ಬಿಳಿ ವಸ್ತ್ರವನ್ನುಹೊದೆದುಕೊಂಡು ಗುರುಗಳ ಸಮೀಪದಲ್ಲೇ ಇದ್ದ ಡಾಕ್ಟರ್ ಚಿಲ್ಲಿಪ್ಪರನ್ನು ನೋಡಿದೆ. ಅವರು ಡಾಕ್ಟರರಾದುದರಿಂದಲೇ ಗುರುಗಳವೇದಿಕೆಗೆ ಅಷ್ಟೊಂದು ಸಮೀಪದಲ್ಲಿ ಅವರ ಆಸನವಿರಬೇಕೆಂದು ಊಹಿಸಿದೆ. ಹೀಗೆ ಡಾಕ್ಟರ್ ಚಿಲ್ಲಿಪ್ಪರಿಂದ ಪ್ರಾರಂಭವಾದ ದೃಷ್ಟಿಗುರುಗಳ ವೇದಿಕೆಗೆ ತಲುಪಿತು. ಆವರಣವಿದ್ದ ವೇದಿಕೆಯು ಹುಗ್ಗಾಟಕ್ಕೂ ಚಿಕ್ಕತರ ಯುದ್ಧಗಳ ಆಟಕ್ಕೂ ಅನುಕೂಲವೆಂದು ತೋರಿತು.ಎತ್ತರದಲ್ಲಿ ನಿಂತು ಕೆಳಗಿನಿಂದ ಬರುವ ಶತ್ರುಗಳನ್ನು ತಡೆದು ನಿಲ್ಲಿಸುವ ಪ್ರಸಂಗವೂ ಮನಸ್ಸಿನಲ್ಲಿ ಮೂಡಿತು. ಕ್ರಮೇಣವಾಗಿಯುದ್ಧವೂ ವೇದಿಕೆಯೂ ಮಸಕು ಮಸಕಾಗಿ ತೋರಿದುವು. ಗುರುಗಳ ಮಂದ್ರ ಸ್ವರದ ಭಾಷಣವು ಅಸ್ಪಷ್ಟವಾಗಿ

ಕೇಳತೊಡಗಿತು.ಸೆಕೆಯಿಂದಲೂ, ಯೋಚನೆಗಳಿಂದಲೂ ನನಗೆ ನಿದ್ರೆ ಬಂದಿತು. ಇನ್ನೇನಾಯಿತೆಂದು ಹೇಳಬೇಕೇ? ನಾನು ಸೋಫಾದಿಂದ ಬಿದ್ದದ್ದೂಆಯ್ತು. ಬಿದ್ದವನನ್ನು ಪೆಗಟಿಯು ಎತ್ತಿಕೊಂಡು ಮನೆಗೆ ಹೋದುದೂ ಜ್ಞಾಪಕವಿದೆ.

ಇನ್ನು ನಮ್ಮ ಮನೆ ವಠಾರದ ವಿಚಾರ ಹೀಗಿತ್ತು: ನಮ್ಮ ಮನೆಯ ಕಿಟಕಿಯ ಹೊರಬದಿಯಿಂದಲೇ ನಮ್ಮ ಹಣ್ಣಿನ ತೋಟವುಪ್ರಾರಂಭವಾಗುವುದು. ಹೂ ಹಣ್ಣುಗಳ ಸುವಾಸನೆಯು ಮನೆಯೊಳಕ್ಕೆ ಸದಾ ಬರುತ್ತಿರುವುದು. ಕೆಲವೊಮ್ಮೆ ತಾಯಿಯೂ ನಾನೂತೋಟದೊಳಗೆ ಹೋಗುವುದಿದೆ. ನಮ್ಮ ತೋಟದಲ್ಲಿ ಬೆಳೆದಷ್ಟು ತುಂಬ ಮತ್ತು ಅಲ್ಲಿನ ಹಣ್ಣುಗಳ ಬಣ್ಣದಷ್ಟು ತೀಕ್ಷ್ಣ ಕೆಂಪು ಹಣ್ಣುಗಳು,ಇನ್ನೆಲ್ಲಿಯೂ ಬೆಳೆಯುತ್ತಿಲ್ಲವೆಂದು ನನ್ನ ನಂಬಿಕೆ. ತಾಯಿ ಹಣ್ಣುಗಳನ್ನು ಕುಯ್ದು ಬುಟ್ಟಿಯೊಳಗಿಡುವಾಗ್ಗೆ ನಾನು ಕೆಲವು ಹಣ್ಣುಗಳನ್ನುಕದ್ದು ತಿಂದು ಏನೂ ಅರಿಯದವನಂತೆ ನಿಂತುಬಿಡುತ್ತಿದ್ದೆ.

ನನ್ನ ಬಾಲ್ಯದ ವಿಷಯ ಇನ್ನೇನೆಲ್ಲ ಜ್ಞಾಪಕವಿದೆಯೆಂದು ನೋಡೋಣ. ಒಂದು ವಸಂತ ಋತುವಿನ ಕೊನೆಯಲ್ಲಿ ಬಿರುಗಾಳಿಯೆದ್ದಿತು.ಬಿರುಗಾಳಿಯನ್ನು ಹಿಂಬಾಲಿಸಿ ಚಳಿಗಾಲ ಬಂದಿತು. ಚಳಿಗಾಲದ ಅನುಭವವೇ ಬೇರೊಂದು ತೆರನಾಗಿತ್ತು. ಮನೆಯಲ್ಲಿ ಬೆಂಕಿಯೆದುರುಕುಳಿತು ಬೇಕಾದಷ್ಟು ಮಾತಾಡಿ ಆನಂದಪಡುವ ಸಮಯವೇ ಆ ಕಾಲ. ಮುಸ್ಸಂಜೆ ಸಮಯದಲ್ಲಿ ನಮ್ಮ ಬೈಠಖಾನೆಯಲ್ಲಿ ನಾವೆಲ್ಲಕುಣಿಯುತ್ತೇವೆ. ನಮ್ಮ ಜತೆಯಲ್ಲಿ ಕುಣಿದ ತಾಯಿ ದಣಿದು ಆರಾಮ ಕುರ್ಚಿಯಲ್ಲಿ ಕುಳಿತು ತನ್ನ ಗುಂಗುರು ತಲೆ ಕೂದಲನ್ನು ಕೈಬೆರಳಿಗೆ ಸುತ್ತಿಕೊಂಡು, ದೇಹವನ್ನು ನೆಟ್ಟಗೆ ಮಾಡಿ ಕುಳಿತುಕೊಳ್ಳುತ್ತಾಳೆ. ಆಗ ಅವಳು ಎಷ್ಟೊಂದು ಚೆಂದವಾಗಿ ಕಾಣುತ್ತಾಳೆ. ನನ್ನತಾಯಿ ಸುಂದರಿಯೆಂದು ನನಗೆ ಗೊತ್ತಿತ್ತು. ಅಲ್ಲದೆ ತಾಯಿಯು ತಾನು ಸುಂದರಿಯೆಂಬುದನ್ನು ಅರಿತು ಸಂತೋಷಿಸುತ್ತಿದ್ದಳೆಂದೂನನಗೆ ಗೊತ್ತಿತ್ತು. ಈ ಗುಟ್ಟುಗಳು ನನಗೂ ತಾಯಿಗೂ ಮಾತ್ರ ಗೊತ್ತಿದ್ದುದೆಂಬುದು ನನ್ನ ಇನ್ನೊಂದು ಸಂತೋಷ.

ನಾವು ಈ ರೀತಿ ಸಂತೋಷದಿಂದಿರುತ್ತಿದ್ದೆವು. ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ಆದರೆ ತಾಯಿಯೂ ನಾನೂ ಪೆಗಟಿಯಆಜ್ಞೆಯಂತೆ ಸ್ವಾಭಾವಿಕವಾಗಿಯೇ ಇದ್ದು ಬಿಡುತ್ತಿದ್ದೆವು. ತಾಯಿಯ ಕಡೆ ಯಜಮಾನಿಕೆಗೆ ಅವಕಾಶವೇ ಇರಲಿಲ್ಲ ಎಂಬುದನ್ನು ನಾನುಹೇಗೋ ತಿಳಿದುಕೊಂಡಿದ್ದೆ. ನಮ್ಮೆಲ್ಲರ ಅಪಾರವಾದ ಸಂತೋಷಕ್ಕೆ ಈ ವಿಷಯ ಹೇಗೆ ಸಂಬಂಧಿಸುತ್ತಿತ್ತೆಂಬುದನ್ನು ನಾನುತಿಳಿದಿರಲಿಲ್ಲ.

ಒಂದು ದಿನ ರಾತ್ರಿ ಪೆಗಟಿಯೂ ನಾನೂ ಬೈಠಖಾನೆಯಲ್ಲಿ ಕುಳಿತು ನಾನು ನನ್ನ ಚಿಕ್ಕ ಪುಸ್ತಕದಿಂದ ಮೊಸಳೆಗಳ ಜೀವನಕ್ರಮವನ್ನುಪೆಗಟಿಗೆ ಓದಿ ಹೇಳುತ್ತಿದ್ದೆ. ಕೊನೆಗೆ – ನನ್ನ ಓದೋಣವು ಹಾಗಿದ್ದೋ ಅಥವಾ ಪೆಗಟಿಯ ಬುದ್ಧಿಶಕ್ತಿ ಹಾಗಿದ್ದೋ – ಪೆಗಟಿಗೆ ಮಾತ್ರಮೊಸಳೆ ಅಂದರೆ ಬಸಳೆ ಎಂದರ್ಥವಾದಂತೆ ತೋರಿತು. ಬಸಳೆಯ ವಿಷಯ ಅರ್ಥವಾಗಿ ತೃಪ್ತಿಪಟ್ಟಂತೆ ಅವಳು ಮಾತಾಡಿದಳು.ನನಗೆ ನಿದ್ರೆ ಮಾಡಲು ಮನಸ್ಸಿರಲಿಲ್ಲ. ಅದಕ್ಕಾಗಿ ಏನಾದರೊಂದು ಕೆಲಸ ನನಗೆ ಬೇಕಾಗಿತ್ತು. ಯಾವಾಗಲೂ ನನ್ನನ್ನು ಬೇಗಮಲಗಿಸುತ್ತಿದ್ದರಾದರೂ ಆ ದಿನ ತಾಯಿಯು ನಮ್ಮ ನೆರೆಯವರ ಮನೆಗೆ ಸಂಜೆಗೇ ಹೋಗಿದ್ದವಳು ಆ ವರೆಗೂ ಬರದಿದ್ದುದರಿಂದನಾನು ನಿದ್ರೆ ಮಾಡದೇ ಉಳಿದಿದ್ದೆ. ತಾಯಿ ಬರುವವರೆಗೆ ನಿದ್ರೆ ಮಾಡದೆ ಕುಳಿತಿರುವ ಸ್ವಾತಂತ್ರ್ಯವನ್ನು ಅನುಭವಿಸುವುದಕ್ಕಾಗಿ,ಬರುತ್ತಿದ್ದ ನಿದ್ರೆಯನ್ನು ನಿಲ್ಲಿಸುವುದಕ್ಕಾಗಿ, ಏನೇನೋ ಪ್ರಯತ್ನಪಡುತ್ತಿದ್ದೆ. ಕೊನೆಗೆ ರೆಪ್ಪೆಗಳನ್ನು ಬೆರಳಿನಿಂದ ಅಗಲಿಸಿ ಹಿಡಿದುಕೊಂಡುಪೆಗಟಿಯನ್ನು ನೋಡತೊಡಗಿದೆ. ಪೆಗಟಿಯು ಹೊಲಿಗೆ ಕೆಲಸದಲ್ಲಿದ್ದಳು. ಅವಳ ಹೊಲಿಗೆ ಸಾಹಿತ್ಯಗಳನ್ನೆಲ್ಲ ಒಮ್ಮೆ ನೋಡಿದೆ –ಗಜಕೋಲು, ಸೂಜಿ, ನೂಲು, ಕತ್ತರಿ ಮತ್ತು ಇವುಗಳೆಲ್ಲ ಕೆಲಸವಿಲ್ಲದಿದ್ದಾಗ ಮಲಗುತ್ತಿದ್ದ ಮಾಡಿದ್ದ ಚಿಕ್ಕಮನೆ, ಇವನ್ನೆಲ್ಲ ನೋಡಿದೆ.ಪೆಗಟಿಯ ಕೈಬೆರಳಿನಲ್ಲಿದ್ದ ಹಿತ್ತಾಳೆ ಸೂಜೊತ್ತು ಬಹು ಆಶ್ಚರ್ಯಕರವಾಗಿ ತೋರುತ್ತಿತ್ತು. ಅದರಿಂದ ಮುಂದುವರಿದು ಪೆಗಟಿಯನ್ನೇನೋಡಿದೆ. ಪೆಗಟಿಯನ್ನು ನೋಡಿದಂತೆಲ್ಲ ಅವಳು ಮುದ್ದುಮುದ್ದಾಗಿ ತೋರಿದಳು. ಇದೇ ಸಮಯದಲ್ಲಿ ನಿದ್ರೆಯ ಬಾಧೆಯುವಿಪರೀತವಾಗತೊಡಗಿತು. ಸ್ವಲ್ಪ ನಿದ್ರೆಗೆ ಎಡೆಕೊಟ್ಟರೆ ನಾನು ಅಷ್ಟು ಹೊತ್ತು ಕಾದು ಕುಳಿತದ್ದೂ ನಿರರ್ಥಕವಾಗಬಹುದೆಂದು ಹೆದರಿ –ಎಚ್ಚತ್ತು, ಬೇರೇನೂ ಮಾರ್ಗ ತೋರದೆ ಪೆಗಟಿಯೊಡನೆ ಮಾತಾಡತೊಡಗಿದೆ.

"ಪೆಗಟಿ, ನಿನಗೆ ಯಾವಾಗಲಾದರೂ ಮದುವೆಯಾಗಿದೆಯೋ?" ಎಂದು ಕೇಳಿದೆ.

"ಓ ದೇವರೇ! ನಿನ್ನ ತಲೆಗೆ ಮದುವೆ ಹೇಗೆ ಹೊಕ್ಕಿತು!" ಅಂದಳು ಪೆಗಟಿ.

ಅವಳ ಆಶ್ಚರ್ಯಸೂಚಕ ಪ್ರಶ್ನೆಯು ನನ್ನನ್ನು ಅರೆನಿದ್ರಾವಸ್ಥೆಯಿಂದ ಸಂಪೂರ್ಣ ಎಚ್ಚರಿಸಿತು. ಪೆಗಟಿಯು ತಾನು ಹೊಲಿಯುತ್ತಿದ್ದುದನ್ನುಬಿಟ್ಟು, ನನ್ನನ್ನೇ ಆಶ್ಚರ್ಯದಿಂದ ನೋಡಿದಳು.

"ಅಲ್ಲ ಪೆಗಟಿ, ನಿನಗೆ ಎಂದಾದರೂ ಮದುವೆಯಾಗಿದೆಯೇ – ನೀನೊಬ್ಬ ಸುಂದರಿಯಲ್ಲವೇ, ಪೆಗಟಿ?" ಎಂದು ನಿಷ್ಕಪಟವಾಗಿ, ಬಹುಕುತೂಹಲದಿಂದ ಕೇಳಿದೆ. ನನ್ನ ತಾಯಿಯ ಸೌಂದರ್ಯ ಒಂದು ವಿಧದ್ದು, ಪೆಗಟಿಯದ್ದು ಮತ್ತೊಂದು ವಿಧದ್ದು. ಆಯಾ ವಿಧದಸೌಂದರ್ಯದಲ್ಲಿ ಅವರವರೇ ಅತ್ಯುತ್ತಮರೆಂದು ನನ್ನ ನಂಬಿಕೆ. ನನ್ನ ಈ ನಂಬಿಕೆಗೆ ಸಾಕಷ್ಟು ಕಾರಣವೂ ಇದೆ: ನಮ್ಮಬೈಠಖಾನೆಯಲ್ಲಿರುವ ಕಾಲುಮಣೆಗೆ ಚಿತ್ರ ಕೆಲಸ ಮಾಡಿ ತಾಯಿಯು ಮುಚ್ಚಿದ್ದ ಮಖಮಲ್ಲಿನ ಕೆಂಪೂ ಪೆಗಟಿಯ ಕಾಂತಿಯೂ ಒಂದೇತರದ್ದು. ನನ್ನ ಮೆಚ್ಚಿಗೆಯ ಸೌಂದರ್ಯವನ್ನು ಒಪ್ಪದೆ, ಮೆಚ್ಚದೆ ಇರುವುದು ತಾನೆ ಹೇಗೆ?

"ನಾನು ಚೆಂದ! ನಾನು ಸುಂದರಿ! ಓ ದೇವರೇ! ಅದೆಲ್ಲಾ ಇರಲಿ, ಡೇವಿ, ನಿನ್ನ ತಲೆಗೆ 'ಮದುವೆ' ಹೊಕ್ಕಿದ್ದು ಹೇಗೆ?"
"ನಂಗೊತ್ತಿಲ್ಲ, ಪೆಗಟಿ – ಆದರೆ, ಈ ಪ್ರಶ್ನೆಗೆ ಉತ್ತರ ಕೊಡು. ಪೆಗಟೀ – ನೀನು ಒಂದೇ ಸರ್ತಿ ಒಬ್ಬನಿಗಿಂತ ಹೆಚ್ಚು ಗಂಡಂದಿರನ್ನುಮದುವೆಯಾಗಬಾರದಲ್ಲ, ಪೆಗಟಿ" ಎಂದು ನಾನು ಪ್ರಶ್ನಿಸಿದೆ.
ಪೆಗಟಿಯು ಸ್ಪಷ್ಟವಾಗಿ ನುಡಿದಳು–
"ಖಂಡಿತವಾಗಿಯೂ ಕೂಡದು, ಡೇವಿ"
"ಮದುವೆಯಾದನಂತರ ಆ ಗಂಡ ಸತ್ತರೆ?" ನನ್ನ ಪ್ರಶ್ನೆ.
"ಮತ್ತೊಬ್ಬನನ್ನು ಆಗಬಾರದು ಎಂದಿಲ್ಲ – ಅದು ಅವರವರ ಕುಷಿ."
"ನಿನ್ನ ಅಭಿಪ್ರಾಯವೇನು ಪೆಗಟಿ?" ಎಂದು ಕೇಳಿ, ಪೆಗಟಿಯನ್ನು ಪರೀಕ್ಷಿಸುತ್ತಾ ಕಾದು ಕುಳಿತೆ. ನಾನು ಅವಳ ಗುಟ್ಟನ್ನುಕಂಡುಹಿಡಿಯಲು ಹೊರಟಿದ್ದಂತೆ ತೋರಿದ್ದರಿಂದ ಅವಳು ಪುನಃ ಹೊಲಿಗೆ ಕೆಲಸವನ್ನು ಪ್ರಾರಂಬಿಸಿದಳು. ಆದರೆ, ನಾನು, ಏನಾದರೂಹಟ ಹಿಡಿದು ಕೇಳದೇ ಬಿಡೆನೆಂದು ಗ್ರಹಿಸುತ್ತಾ ಇರುವಂತೆಯೂ ತೋರುತ್ತಿದ್ದಳು, ಕೊನೆಗೆ –
"ನಾನು ಮದುವೆ ಆಗಲಿಲ್ಲ – ಆದ್ದರಿಂದ ನನಗೆ ಅದೆಲ್ಲಾ ಗೊತ್ತಿಲ್ಲ" ಅಂದಳು.
"ಏನು ಪೆಗಟಿ, ನಿನಗೆ ಸಿಟ್ಟಾಯಿತೇ? ನಾನೇನೂ ಮಾಡಲಿಲ್ಲ ನಿನಗೆ" ಎಂದು ನಾನು ಬೇಸರದಿಂದ ಅಂದೆ.
ಪೆಗಟಿಗೆ ಸಿಟ್ಟಾಯಿತೆಂದು ನಾನು ಗ್ರಹಿಸಿದ್ದೆ. ಆದರೆ ಅವಳು ಹೊಲಿಯುವುದನ್ನು ಬಿಟ್ಟು ನನ್ನ ಗುಂಗುರು ತಲೆಕೂದಲು ಸಮೇತತಲೆಯನ್ನು ತಬ್ಬಿ ಹಿಡಿದಳು. ಕೊನೆಗೆ ನನ್ನನ್ನು ಎತ್ತಿ ತಬ್ಬಿಕೊಂಡಳು. ಹೀಗೆ ತಬ್ಬಿದ ಭರದಲ್ಲಿ ಅವಳ ಜಾಕೆಟ್ಟಿನ ಹಿಂಬದಿಯಗುಂಡಿಗಳು ಸಿಡಿದು ದೂರಕ್ಕೆ ಹಾರಿದುವು. ಈ ವಿಧದ ಗುಂಡಿಗಳ ಸ್ಫೋಟನ ನನಗೊಂದು ಅಪರೂಪದ್ದಾಗಿರಲಿಲ್ಲ. ನನ್ನನ್ನು ಅವಳುಅಪ್ಪಿದಾಗಲೆಲ್ಲ ಈ ರೀತಿ ಗುಂಡಿಗಳು ಸಿಡಿಯುತ್ತಿದ್ದುವು. ನನ್ನನ್ನು ಸಂತೋಷಗೊಳಿಸಲೋಸ್ಕರವೋ ಏನೋ ಪೆಗಟಿ ಅಂದಳು –
"ಈಗ ಬಸಳೆ ಕುರಿತು ಸ್ವಲ್ಪ ಹೇಳು." ಹಿಂದೆ ಮೊಸಳೆಯನ್ನು ಕುರಿತಾಗಿ ಪುಸ್ತಕ ಓದಿದ್ದು ಸರಿಯಾಗಲಿಲ್ಲವೆಂದು ನನಗೆಸ್ಪಷ್ಟವಾಯಿತು.
ಮೊದಲು ಇಲ್ಲದಿದ್ದ ಶ್ರದ್ಧೆ ಪೆಗಟಿಗೆ ಮೊಸಳೆಯನ್ನು ಕುರಿತು ಈಗ ಉಂಟಾದುದು ಹೇಗೆ? ಪೆಗಟಿ ನನ್ನನ್ನು ಹೀಗೇಕೆ ನೋಡುತ್ತಿದ್ದಾಳೆ?ಇವೆಲ್ಲಾ ನನಗೆ ಅರ್ಥವಾಗದ ಸಮಸ್ಯೆಗಳಾಗಿ ತೋರಿದುವು. ಮೊಸಳೆಯ ಪಾಠವನ್ನು ಪುನಃ ಶ್ರದ್ಧೆಯಿಂದ ನಾನು ಓದಿದೆ.ಭಯಂಕರವಾದ ಮೊಸಳೆಗಳಾದ್ದರಿಂದ ಬಹು ಎಚ್ಚರದಿಂದ ಓದಿದೆ. ತಮ್ಮ ಮೊಟ್ಟೆಗಳನ್ನು ಅವುಗಳು ಮರಳಲ್ಲಿ ಹೂತಿಡುತ್ತಿದ್ದುದನ್ನುಅಡಗಿ ನೋಡಿದೆ. ಸೂರ್ಯನ ಶಾಖದಿಂದ ಮೊಟ್ಟೆಗಳೊಡೆದು ಒಳಗಿನ ಮೊಸಳೆಗಳು ನಮ್ಮನ್ನು ಅಟ್ಟಿಬರುವಾಗ ಮಳಲ ಮೇಲೆಅಡ್ಡಡ್ಡವಾಗಿ ಓಡಿದ್ದಾಯ್ತು. ಮೊಸಳೆಗಳ ದೇಹರಚನೆಯ ಅಡಚಣೆಯಿಂದ ಅವು ನಮ್ಮನ್ನು ಹಿಂಬಾಲಿಸಿ ಹಿಡಿಯಲಾರದಿದ್ದಾಗಲೇಊರಿನವರು ಓಡಿಬಂದರು. ಅವರನ್ನೆಲ್ಲ ಕಂಡು ನೀರಕಡೆಗೆ ಓಡುತ್ತಿದ್ದ ಮೊಸಳೆಗಳ ಬಾಯಿಗೆ ಕಲ್ಲು, ಮರ, ಮಣ್ಣನ್ನು ತುಂಬಿ ಅವನ್ನುಕೊಂದೆವು. ನನ್ನಷ್ಟೆ ಶೌರ್ಯದಿಂದ ಪೆಗಟಿಯೂ ಈ ಎಲ್ಲಾ ಕೆಲಸಗಳನ್ನು ಮಾಡಿರುವಳೋ ಇಲ್ಲವೋ ಎಂದು ನಾನು ಹೇಳಲಾರೆ.ನಾನಂತೂ ಮೈಮರೆತು ಆವೇಶದಿಂದಲೇ ಈ ಕೆಲಸಗಳನ್ನು ಮಾಡಿದೆ. ಪೆಗಟಿಯು ಮೊಸಳೆಯನ್ನು ಅಷ್ಟರಲ್ಲೇ ಮರೆತಂತೆತೋರಿದಳು.

ಮೊಸಳೆ ಕಥೆಯನ್ನು ಬಿಟ್ಟು ಇನ್ನೊಂದನ್ನು ಪ್ರಾರಂಭಿಸುವಷ್ಟರಲ್ಲಿ ಹಿತ್ತಲಿನ ಬಾಗಿಲು ತೆಗೆದ ಶಬ್ದ ಕೇಳಿಸಿತು. ಬಾಗಿಲವರೆಗೆ ಹೋಗಿನೋಡುವಾಗ್ಗೆ ತಾಯಿಯು ಯಾರೋ ಒಬ್ಬ ಗೃಹಸ್ಥರ ಜತೆಯಲ್ಲಿ ಬರುತ್ತಿದ್ದಳು. ಆ ಗೃಹಸ್ಥರು ಕಳೆದ ಆದಿತ್ಯವಾರವೂ, ನಮ್ಮಮನೆವರೆಗೆ, ಇಗರ್ಜಿಯಿಂದ ನಾವು ಬರುವಾಗ ಜತೆಯಲ್ಲಿದ್ದರು. ಬಲವಾಗಿ ಬೆಳೆದಿದ್ದ ಅವರ ಕಪ್ಪು ತಲೆಕೂದಲು ಮತ್ತೂ ಕಪ್ಪುಮೀಸೆಗಳಿಂದ ಅವರನ್ನು ನಾನು ಚೆನ್ನಾಗಿ ಗುರುತಿಸಿದೆ. ಬಂದವರು ಯಾರೆಂದು ನಾನು ಅತ್ತ ಕಡೆ ಹೋಗಿ ನೋಡಿದಾಗ ನನ್ನತಾಯಿಯು ಯಾವತ್ತು ಇದ್ದದ್ದಕ್ಕಿಂತ ಹೆಚ್ಚು ಚಂದವಾಗಿ ಕಾಣುತ್ತಿದ್ದಳು.

ಅವರನ್ನು ನೋಡಲು ಹೋಗಿದ್ದ ನನ್ನನ್ನು ತಾಯಿಯು ಎತ್ತಿ ಮುದ್ದಾಡಿದಾಗ ನಾನು ಒಬ್ಬ ಮಹಾರಾಜನಿಗಿಂತಲೂಭಾಗ್ಯಶಾಲಿಯೆಂದು (ಸಾಧಾರಣ ಈ ಅಭಿಪ್ರಾಯದ ಮಾತು ಅದಾಗಿರಬೇಕೆಂದು ನನಗೆ ಬುದ್ಧಿ ಬಂದಮೇಲೆ ನಿಶ್ಚೈಸಿಕೊಂಡೆ) ಆಕಪ್ಪುಮೀಸೆಯ ಗೃಹಸ್ಥರು ಅಂದರು.

ಗೃಹಸ್ಥರ ಮಾತು ನನಗರ್ಥವಾಗದೆ ಅವರಂದದ್ದೇನೆಂದು ತಾಯಿಯನ್ನು ಅಲ್ಲೇ ವಿಚಾರಿಸಿದೆ. ಯಾರೂ ಉತ್ತರ ಕೊಡಲಿಲ್ಲ. ಅದರಬದಲು ಗೃಹಸ್ಥರು ನನ್ನ ತಲೆಯನ್ನು ಸವರಿ ನನ್ನ ಕೈಯ್ಯನ್ನೊತ್ತಿದರು. ಹಾಗೆ ನನ್ನ ಕೈ ಒತ್ತುವಾಗ ನನ್ನ ತಾಯಿಯ ಕೈಯನ್ನೂ ಅವರುಮುಟ್ಟಿದರು. ನನಗೆ ಆ ಮನುಷ್ಯನಾಗಲೀ, ಅವರ ದಪ್ಪ ಸ್ವರವಾಗಲೀ ಮೆಚ್ಚಲಿಲ್ಲ. ಅವರು ನನ್ನ ತಾಯಿಯನ್ನು ಮುಟ್ಟುವುದನ್ನುಅಂತರಂಗದಲ್ಲೇ ನಿಷೇಧಿಸುತ್ತಾ ಅವರ ಕೈಯನ್ನು ನನ್ನಿಂದ ಸಾಧ್ಯವಾದಷ್ಟು ದೂರ ನೂಕಿದೆ. ಈ ಕುರಿತು ನನಗೆ ಹಟವೇ ಇತ್ತು.
"ಡೇವಿಡ್, ಹಾಗೆ ಮಾಡಬಾರದು" ಅಂದಳು ತಾಯಿ.
"ಮಗುವಿಗೆ ಅಷ್ಟೊಂದು ಮಮತೆ ನಿನ್ನ ಮೇಲಿರುವುದು ಆಶ್ಚರ್ಯವಲ್ಲ" ಅಂದರು ಅವರು.

ಈ ಮಾತು ಕೇಳಿದ್ದರಿಂದಲೋ ಏನೋ ತಾಯಿಯ ಮುಖದಲ್ಲಿ ಬಹುಬೇಗನೆ ಚಂದದ ಕಳೆಯೇರಿತು. ಗೃಹಸ್ಥರೊಡನೆಮರ್ಯಾದೆಯಿಂದಿರಬೇಕೆಂದು ನನಗೆ ಬುದ್ಧಿ ಹೇಳುತ್ತಾ, ಬಂದ ಗೃಹಸ್ಥರನ್ನು ಕಳುಹಿಸಿಕೊಡಲೋಸ್ಕರ ಹಸ್ತಲಾಘವವನ್ನು ಕೊಡಲುತಾಯಿಯು ಕೈ ನೀಡಿದಳು. ಅವರು ತಾಯಿಯ ಹಸ್ತವನ್ನು ಸ್ವೀಕರಿಸಿ ಹಸ್ತ ಲಾಘವವನ್ನೀಯುತ್ತಿದ್ದಾಗ ನನ್ನ ದೃಷ್ಟಿ ಎಲ್ಲಿದೆಯೆಂದುತಾಯಿಯು ನನ್ನನ್ನು ಓರೆಗಣ್ಣಿನಿಂದ ನೋಡುತ್ತಿದ್ದುದು ನನಗೆ ಈಗಲೂ ಜ್ಞಾಪಕವಿದೆ.
ಅವರು ನನ್ನನ್ನು ನೋಡಿ, "ಮಗುವೇ 'ನಮಸ್ಕಾರ ಎಂದಂದುಕೊಳ್ಳುವ ನಾವೂ" ಅಂದರು.
"ನಮಸ್ಕಾರ" ಎಂದಂದೆ ನಾನು. ಆದರೆ ಹಸ್ತ ಲಾಘವಕ್ಕಾಗಿ ಅವರು ಕೈ ನೀಡಿದಾಗ, ನನ್ನ ಬಲಗೈ ತಾಯಿಯ ಕೈಯ್ಯಲ್ಲಿದ್ದುದರಿಂದ,ಎಡಗೈಯನ್ನು ನೀಡಿದೆ. ತಾಯಿಗೆ ಅದು ಸಮಾಧಾನವಾಗದೆ ನನ್ನ ಬಲಗೈ ನೀಡುವಂತೆ ಹೇಳಿದಳು. ನಾನು ಮಾತ್ರ ಹಟ ಹಿಡಿದುಎಡಗೈಯನ್ನು ಮಾತ್ರ ನೀಡಿದೆ.

ಎಡಗೈಯನ್ನು ಕುಲುಕಿ ಹುಡುಗ ಬಲು ಧೈರ್ಯಸ್ಥ ಎಂದಂದುಕೊಂಡು ಆ ಗೃಹಸ್ಥರು ಅವರು ಬಂದಿದ್ದ ದಿಕ್ಕಿಗೇ ಹೋದರು. ಆದರೂಹೆಚ್ಚು ದೂರ ಹೋಗುವ ಮೊದಲು ಅವರು ನಮ್ಮನ್ನು ಹಿಂತಿರುಗಿ ನೋಡಿದರು. ಆಗ ನನಗೆ ಕಂಡ ಅವಲಕ್ಷಣದ ಮುಖವನ್ನುನಾನೆಂದಿಗೂ ಮರೆಯಲಾರೆ.

ನಾವು ಒಳಗೆ ಬಂದ ಕೂಡಲೇ ಪೆಗಟಿಯು ಕದವನ್ನು ಮುಚ್ಚಿದಳು. ನಾವೆಲ್ಲರೂ ಯಾವಾಗಲೂ ಕುಳಿತಿರುತ್ತಿದ್ದ ಕೋಣೆಗೇ ಹೋದೆವು.ತಾಯಿಯು ಈ ದಿನ ಮಾತ್ರ – ಯಾವಾಗಿನಂತೆ ಬೆಂಕಿಯ ಎದುರು ಕುಳಿತುಕೊಳ್ಳುವ ಬದಲು – ಕೋಣೆಯ ಇನ್ನೊಂದು ತುದಿಗೆಹೋಗಿ ಏಕಾಂಗಿಯಾಗಿ ಕುಳಿತಳು. ಅವಳಿಗೆ ಹಾಗಿರುವುದೇ ಅಂದು ಸಂತೋಷವೆಂಬಂತೆ ಅವಳಷ್ಟಕ್ಕೆ ಏನೋ ಒಂದು ಪದವನ್ನುಮೆಲ್ಲಗೆ ಹೇಳುತ್ತಿದ್ದಳು.

ಪೆಗಟಿಯು ಅವಳ ಎದುರು ಬಂದು ನಿಂತು –
ಸಂಜೆಯ ಕಾಲಕ್ಷೇಪ ಸುಖವಾಗಿತ್ತೇ? ಎಂದು ಕೇಳಿದಳು. ಈ ಮಾತುಗಳಲ್ಲಿ ಪೆಗಟಿಯ ನಿತ್ಯದ ಸಲಿಗೆಯಿರಲಿಲ್ಲ – ಪೆಗಟಿಯು ಒಂದುಸಿಪಾಯಿ ನಿಂತಿದ್ದಂತೆ ನೆಟ್ಟಗೆ ನಿಂತು, ಕೈಯಲ್ಲೊಂದು ದೀಪ ಹಿಡಿದುಕೊಂಡು, ಇತರ ಕೆಲಸಗಳ ನಡುವೆ ಸಾಂಪ್ರದಾಯಿಕವಾಗಿವಿಚಾರಿಸಿದವಳಂತೆ ಈ ಮಾತನ್ನಾಡಿದ್ದಳು.
ಓಹೋ, ಕಾಲವು ಸುಖವಾಗಿ ದಾಟಿತು. ನೀನು ವಿಚಾರಿಸಿದುದು ಸಂತೋಷ ಅಂದಳು ನನ್ನ ತಾಯಿ.
ಜನರಿಲ್ಲದ ಈ ಹಳ್ಳಿಗಳಲ್ಲಿ ಅಪರಿಚಿತರಾದರೂ ಚಿಂತೆಯಿಲ್ಲ – ಯಾರಾದರೂ ಬಂದು ಹೋಗುತ್ತಿರುವುದು ಸಂತೋಷವಪ್ಪಅಂದುಕೊಂಡಳು ಪೆಗಟಿ.

ಇಂದಿನ ಸಂಜೆಯು ಸಂತೋಷದಿಂದ ಕಳೆಯಿತು ಎಂದು ಮಾತ್ರ ತಾಯಿ ಪುನಃ ಹೇಳಿದಳು.
ಪೆಗಟಿ ನಿಂತಲ್ಲಿಂದ ಅಲ್ಲಾಡಲಿಲ್ಲ. ತಾಯಿಯು ಮೃದುವಾಗಿ ತನಗೆ ತಾನೇ ಹಾಡಿಕೊಂಡಿದ್ದಳು. ನನಗೆ ಇದ್ದಕ್ಕಿದ್ದ ಹಾಗೆಯೇ ನಿದ್ರೆಬಂತು. ಸ್ವಲ್ಪ ಹೊತ್ತು – ಎಷ್ಟು ಹೊತ್ತೆಂದು ಸ್ಪಷ್ಟವಾಗಿ ತಿಳಿಯಲಾರದಷ್ಟು ಹೊತ್ತು – ನಿದ್ರೆ ಮಾಡಿ, ಇವರಿಬ್ಬರ ಮಾತುಗಳಿಂದ ಸ್ವಲ್ಪಸ್ವಲ್ಪವಾಗಿ ನಾನು ಎಚ್ಚತ್ತೆನು. ನಾನು ಸಂಪೂರ್ಣವಾಗಿ ಎಚ್ಚತ್ತು ನೋಡುವಾಗ ತಾಯಿಯೂ ಪೆಗಟಿಯೂ ಅಳುತ್ತಲಿದ್ದರು. ಆಗ ನನಗೆಮೊದಲು ಕೇಳಿಸಿದುದು ಪೆಗಟಿಯ ಮಾತುಗಳು. ಪೆಗಟಿ ಅಂದಳು –
"ಇಂಥವನನ್ನು ದಿವಂಗತ ಮಿಸ್ಟರ್ ಡೇವಿಡ್ ಕಾಪರ್‌ಫೀಲ್ಡರು ನೋಡಿದ್ದರೆ ಎಂದೂ ಒಪ್ಪುತ್ತಿರಲಿಲ್ಲ – ಆ ಮಟ್ಟಿಗೆ ಪಣತೊಟ್ಟುಹೇಳುವಷ್ಟು ಧೈರ್ಯ ನನಗಿದೆ."
"ದೇವರೇ, ಇಂಥ ಅವಸ್ಥೆಯೂ ಬಂದಿತೇ, ಪೆಗಟಿ! ನಿನ್ನ ಬಾಯಿಂದ ಬರಬೇಕಾದ ಮಾತು ಇದೇಯೇ? ಮದುವೆಯವಿಷಯವನ್ನರಿಯದ ಚಿಕ್ಕ ಪುಟ್ಟ ಹುಡುಗಿಯೇ ನಾನು, ಪೆಗಟಿ? ತನ್ನ ಆಳಿನಿಂದಲೇ ಈ ರೀತಿ ಹೇಳಿಸಿಕೊಳ್ಳುವ ಯಜಮಾನಿಯುಎಲ್ಲಿಯಾದರೂ ಇರಬಹುದೇ? ಗ್ರಹಿಸಿ ನೋಡು, ಪೆಗಟಿ, ನನಗೆ ಬೇರೆ ಯಾರಿದ್ದಾರೆ? ಕಷ್ಟ ಬಂದಾಗ ಸಹಾಯಕ್ಕಾಗಿ ಯಾರ ಕಡೆನೋಡಲಿ?" ಎಂದು ಮೊದಲಾಗಿ ತಾಯಿ ಅಳುತ್ತಾ ಹೇಳಿದಳು.
"ನೀನು ಮದುವೆಯಾದವಳೆಂದು ಒಪ್ಪುತ್ತೇನೆ. ಆದರೆ..." ಎಂದು ಪೆಗಟಿ ಮಾತು ಮುಂದರಿಸುವ ಮೊದಲೇ ತಾಯಿ ಅಂದಳು –
"ಹಾಗಾದಮೇಲೆ ನನ್ನ ಈ ನಿಸ್ಸಹಾಯಕ ಸ್ಥಿತಿಯಲ್ಲಿ, ನೀನೂ ಸಹ ಹೀಗನ್ನಬಹುದೇ? ಹಾಗನ್ನಲು ನಿನಗಾದರೂ ಅಧಿಕಾರವಿದೆಯೇ?ಅಥವಾ ಅಧಿಕಾರದ ವಿಷಯ ಹಾಗಿರಲಿ, ನಿನಗೆ ಮನಸ್ಸಾದರೂ ಹೇಗೆ ಬಂತು, ಪೆಗಟಿ?"
"ಅದಕ್ಕಾಗಿಯೇ – ಅಂದರೆ, ನಿನಗೆ ಹಿತಚಿಂತಕರು ಯಾರೂ ಇಲ್ಲದಿರುವಾಗ – ನೀನು ಈ ಸಂಬಂಧಕ್ಕೆ ಒಪ್ಪಬಾರದೆಂದುನಾನನ್ನುವುದು. ಇದು ಒಳ್ಳೆಯ ಸಂಬಂಧವಲ್ಲ, ನೋಡು" ಎಂದು ಮೊದಲಾಗಿ ಹೇಳುತ್ತಾ ತನ್ನ ಕೈಯ್ಯಲ್ಲಿದ್ದ ದೀಪವನ್ನೇ ತಾಯಿಯಮುಖಕ್ಕೆ ಎಸೆದುಬಿಡುವಳೋ ಎಂಬಂತೆ ಪೆಗಟಿ ತೋರಿದಳು.
ಮೊದಲೇ ಪ್ರಾರಂಭಿಸಿದ್ದ ಅಳುವನ್ನು ತಾಯಿ ಮತ್ತಷ್ಟು ಹೆಚ್ಚಾಗಿ ಮಾಡಿಕೊಂಡು, ಅಳುತ್ತಲೂ ಮಾತಾಡುತ್ತಲೂ ಪೆಗಟಿಗೆಉತ್ತರಕೊಡತೊಡಗಿದಳು –

"ಹೀಗೊಂದು ಹಿಂಸೆಯನ್ನೇಕೆ ಕೊಡುತ್ತಿದ್ದೀಯಾ, ಪೆಗಟಿ? ಏನೋ ಕೆಲವು ಮಾತುಗಳನ್ನು ಮಾತ್ರ ಆಡಿರುತ್ತೇವೆ. ಯಾವವಾಗ್ದಾನವೂ ಆಗಿರುವುದಿಲ್ಲ. ಅವನು ನನ್ನನ್ನು ನೋಡಿ ಮರುಳಾಗಿರುವನು ಎಂದು ಒದರಿದೆಯಲ್ಲಾ – ಅದೇನಿದ್ದರೂ ನಾನುಮಾಡುವುದೇನು? ಇತರರು ಅವರಿಗೆ ಕುಷಿ ಬಂದಂತೆ ನನ್ನನ್ನು ಕುರಿತು ಗ್ರಹಿಸಿಕೊಂಡರೆ ಅವರಿಗಾಗಿ ನಾನು ತಲೆ ಬೋಳಿಸಿಕೊಂಡುಕುರೂಪಿಯಾಗಿ ಕುಳಿತಿರಬೇಕೆನ್ನುವಿಯಾ? ನಿನ್ನಂತರಂಗದ ಬಯಕೆ ಹಾಗಿದ್ದರೆ ಹೇಳಿಬಿಡು ಪೆಗಟಿ."
ಈ ಉತ್ತರವು ಪೆಗಟಿಯನ್ನು ಇರಿಯಿತು. ಅವಳೂ ಅಳಲಾರಂಬಿಸಿದಳು. ತಾಯಿ ನನ್ನ ಹತ್ತಿರ ಬಂದು –
"ಡೇವೀ, ನಿನ್ನಲ್ಲಿ ನನಗೆ ಪ್ರೀತಿ ಕಡಿಮೆಯಾಗಿ ಹೀಗೆ ಮಾಡುತ್ತಿದ್ದೇನೆಂದು ಪೆಗಟಿ ಓರೆಯಲ್ಲಿ ಒದರುತ್ತಾಳಲ್ಲಾ, ಅದು ನ್ಯಾಯವೇ?"ಎಂದು ಹೇಳುತ್ತಾ ನನ್ನನ್ನು ಅಪ್ಪಿಕೊಂಡಳು.
"ಹಾಗೆ ಯಾರೂ, ಯಾವಾಗಲೂ ಹೇಳಲಿಲ್ಲ" ಎಂದು ಹೇಳುತ್ತಾ ಪೆಗಟಿ ಮತ್ತಷ್ಟು ಜೋರಾಗಿ ಅಳತೊಡಗಿದಳು.
"ಯಾರೂ ಹೇಳಲಿಲ್ಲ! – ನೀನು ಹೇಳಿದ ಮಾತುಗಳ ಅರ್ಥ ಹಾಗಲ್ಲದೆ ಮತ್ತೆ ಹೇಗೆ? ಹೊಸ ಲಂಗ ನನಗೆ ಅಗತ್ಯವಿದ್ದರೂ ಹಳೆಲಂಗದಲ್ಲೇ ನಾನು ದಿನದೂಡುತ್ತಿರುವುದು ಯಾರಿಗೆ ಹಣ ಉಳಿಸುವುದಕ್ಕೋಸ್ಕರ ಮತ್ತೆ? – ಈಗ ಮೂರು ತಿಂಗಳಾಯ್ತು, ನನ್ನ ಲಂಗಹರಿದು!" ಎಂದನ್ನುತ್ತಾ, ತಾಯಿ ತನ್ನ ಕೆನ್ನೆಯನ್ನು ನನ್ನ ಮುಖಕ್ಕೆ ಒತ್ತಿಟ್ಟುಕೊಂಡು, ಪುನಃ ಮಾತಾಡತೊಡಗಿದಳು –
"ನಾನು ನಿನ್ನನ್ನು ಸಾಕೋದಿಲ್ಲವೇ, ಡೇವಿ? ನಾನು ನಿನ್ನ ವೈರಿಯೇ, ಡೇವಿ? ನಾನು ನಿನಗೆ ಜೋರು ಮಾಡ್ತೇನೆಯೇ, ಡೇವಿ?ಇದೆಲ್ಲಾ ಹೌದೆಂದು ಬೇಕಾದರೂ ಹೇಳು, ಡೇವಿ – ಪೆಗಟಿ ನಿನ್ನ ಕಡೆಯವಳು. ಅವಳು ಮಾತ್ರ ನಿನ್ನನ್ನು ಪ್ರೀತಿಸುವವಳೆಂದೇಬೇಕಾದರೂ ಹೇಳಿಬಿಡು" ಎಂದು ಮೊದಲಾಗಿ ಗದ್ಗದ ಕಂಠದಿಂದ ಉದ್ದುದ್ದವಾಗಿ ಹೇಳಿದಳು.
ಇಷ್ಟಾಗುತ್ತಾ, ನಮಗೆ ಅರಿಯದೇ, ನಾವು ಮೂವರೂ ಅಳತೊಡಗಿದೆವು. ಸ್ವರದಲ್ಲಿ ಅವರಿಬ್ಬರ ಅಳುವಿನ ಸ್ವರಕ್ಕಿಂತಲೂ ನನ್ನದುಮೇಲಾಗಿತ್ತು. ನನ್ನ ದುಃಖಾತಿರೇಕದಲ್ಲಿ ನಾನು ಪೆಗಟಿಯನ್ನು ನೋಡಿ –
"ಮೂರ್ಖಿ, ಮೃಗ" ಎಂದಂದುಬಿಟ್ಟೆ. ಪೆಗಟಿಗೆ ನನ್ನ ಮಾತು ಕೇಳಿ ಒಂದು ಕಡೆಯಿಂದ ದುಃಖವೂ, ಮತ್ತೊಂದು ಕಡೆಯಿಂದ ನನ್ನಮೇಲಿನ ಪ್ರೀತಿಯೂ ಹೆಚ್ಚಿತು. ಅವಳು ನನ್ನ ತಾಯಿಯ ಕ್ಷಮೆಯನ್ನು ಬೇಡಿದಳು. ತಾಯಿಯನ್ನು ಅಪ್ಪಿಕೊಂಡು ತನ್ನ ಕೆಲವುಗುಂಡಿಗಳನ್ನು ಕಳೆದುಕೊಂಡಳು. ಕೊನೆಗೆ ನನ್ನನ್ನೂ ಅಪ್ಪಿಕೊಂಡು ಇನ್ನೂ ಕೆಲವು ಸ್ಫೋಟನಗಳನ್ನು ನಡೆಸಿದಳು. ಹೀಗೆಲ್ಲಾ ಆಗುತ್ತಾನಾವು ರಾಜಿಯಾದೆವು.

ಇಷ್ಟೆಲ್ಲಾ ಆದ ಕೆಲವು ದಿನಗಳ ಅನಂತರವೋ ಅಥವಾ, ಒಂದೆರಡುವಾರಗಳ ಅನಂತರವೋ – ಅಂತೂ, ಒಂದು ಆದಿತ್ಯವಾರ ದಿನ ಈಮೊದಲು ಪ್ರಸ್ತಾಪಿಸಿರುವ ಗೃಹಸ್ಥರು ಇಗರ್ಜಿಯಿಂದ ನಮ್ಮ ಜತೆಯಲ್ಲೇನಮ್ಮ ಮನೆಗೆ ಬಂದರು. ನಮ್ಮಲ್ಲಿದ್ದ ಪ್ರಖ್ಯಾತವಾದ ಒಂದು 'ಜಿರೇನಿಯಂ'ಹೂವನ್ನು ನೋಡಲು ಬಂದದ್ದೆಂದು ಆ ಗೃಹಸ್ಥರು ನನ್ನೊಡನೆ ಹೇಳಿದ್ದುಈಗಲೂ ಜ್ಞಾಪಕವಿದೆ. ಆದರೆ, ಅವರು ಆ ಹೂವನ್ನು ಕಂಡಾಗವಿಶೇಷವಾಗಿ ಅದನ್ನು ಕುರಿತು ಗಮನಕೊಟ್ಟಂತೆ ಕಾಣಲಿಲ್ಲ. ಜಿರೇನಿಯಂನಮ್ಮ ಕೋಣೆಯ ಕಿಟಕಿಯ ದಂಡೆಯಲ್ಲಿ ಒಂದು ಚಟ್ಟಿಯಲ್ಲಿತ್ತು.ಕೋಣೆಯಲ್ಲಿ ಕುಳಿತು ಮಾತಾಡುತ್ತಾ ಆ ಹೂವಿನ ಒಂದೆರಡುಕುಸುಮಗಳನ್ನು ತನಗೆ ಕೊಡಬೇಕೆಂದು ಗೃಹಸ್ಥರು ತಾಯಿಯನ್ನುಯಾಚಿಸಿದರು. ಕುಸುಮಗಳನ್ನು ಎಷ್ಟು ಬೇಕಾದರೂ ಅವರುತೆಗೆದುಕೊಳ್ಳಬಹುದೆಂದು ತಾಯಿ ಹೇಳಿದರೂ, ತಾಯಿಯೇಕುಸುಮಗಳನ್ನು ಕುಯ್ದುಕೊಡಬೇಕೆಂದು ಅವರು ಹಟ ಮಾಡಿದರು. ಕೊನೆಗೆತಾಯಿ ಒಂದೆರಡು ಕುಸುಮಗಳನ್ನು ಕೊಯ್ದು ಅವರಿಗೆ ಕೊಟ್ಟಳು. ಗೃಹಸ್ಥರು ಆ ಕುಸುಮಗಳನ್ನು ಸದಾ ಕಾಪಾಡಿಕೊಂಡು ತಾನುಇಟ್ಟುಕೊಳ್ಳುವುದಾಗಿ ತಾಯಿಯೊಡನೆ ಸಂತೋಷಭರಿತರಾಗಿ ಹೇಳಿದಾಗ, ಒಂದೆರಡು ದಿನಗಳಲ್ಲಿ ಒಣಗಿಹೋಗುವ ಆ ಹೂವಿನಎಸಳಿನ ವಿಷಯದಲ್ಲಿ ಅವರಿಗೆ ಏನೂ ತಿಳಿವಳಿಕೆಯಿಲ್ಲವೆಂದೂ – ಅವರೊಬ್ಬ ದೊಡ್ಡ ಹೆಡ್ಡರೇ ಎಂದೂ ನಾನು ಗ್ರಹಿಸಿಕೊಂಡೆನು.

ಹೀಗೆ ಕೆಲವು ದಿನಗಳು ಕಳೆಯುತ್ತಾ ಬಂದ ಹಾಗೆ ಸಂಜೆಯ ಸಮಯದಲ್ಲಿ ಪೆಗಟಿ ನಮ್ಮ ಜತೆಯಲ್ಲಿ ಕುಳಿತಿರುವುದುಕಡಿಮೆಯಾಯಿತು. ಆದರೂ ನಮ್ಮ ಮೂವರೊಳಗಣ ಪ್ರೀತಿ ಸ್ವಲ್ಪವೂ ಕಡಿಮೆಯಾಗಲಿಲ್ಲ. ಆದರೆ, ತಾಯಿ ಪೆಗಟಿಯನ್ನು ಕಂಡರೆಮೊದಲಿಗಿಂತಲೂ ಹೆಚ್ಚಾಗಿ ಹೆದರುತ್ತಿದ್ದಳು. ಈ ವಿಧದ ತಾಯಿಯ ಹೆದರಿಕೆಗೆ ಕಾರಣವನ್ನು ನಾನು ಅರಿಯಲಾರದವನಾಗಿದ್ದರೂ –ತಾಯಿ ಅವಳ ಒಳ್ಳೆಯ ಉಡುಪುಗಳನ್ನೆಲ್ಲಾ ಬಿಡದೆ ತೊಟ್ಟು ಮಾಸುವುದನ್ನು ಪೆಗಟಿಯು ಆಕ್ಷೇಪಿಸಿರಬೇಕು, ಅಥವಾ, ನೆರೆ ಗೃಹಸ್ಥರಮನೆಗೆ ಆಗಾಗ ಹೋಗುವುದು ಸರಿಯಲ್ಲವೆಂದು ಪೆಗಟಿ ಅಂದಿರಬೇಕು. ಈ ಎರಡರ ಪೈಕಿ ಯಾವುದೋ ಒಂದುಕಾರಣವಾಗಿರಬೇಕೆಂದು ನಾನು ಊಹಿಸಿಕೊಂಡಿದ್ದೆ.

ಕರಿ ಮೀಸೆಯ ಗೃಹಸ್ಥರು ಆಗಾಗ ನಮ್ಮ ಮನೆಗೆ ಬರತೊಡಗಿದರು. ಅವರ ಬರೋಣವು ಎಷ್ಟೇ ಹೆಚ್ಚಿದರೂ ಅವರನ್ನು ಕುರಿತಾದನನ್ನ ಹೆದರಿಕೆಯೂ, ದ್ವೇಷವೂ ಮೊದಲಿನಂತೆಯೇ ಇದ್ದುವು. ಅವರ ಮೇಲೆ ಒಂದು ವಿಧವಾದ ಮಾತ್ಸರ್ಯವೂ ನನ್ನಲ್ಲಿಉತ್ಪನ್ನವಾಯಿತು. ನಮ್ಮ ಸುಖಸಂತೋಷಗಳ ಮಧ್ಯೆ ಸ್ವಯಂಪ್ರೇರಿತರಾಗಿ ತಾವು ಸಹಾಯಕರೆಂಬಂತೆ, ಅನಗತ್ಯವಾಗಿ ಅವರುಪ್ರವೇಶಿಸುತ್ತಿದ್ದರೆಂದು ನಾನು ತಿಳಿಯತೊಡಗಿದೆ. ತರ್ಕಗಳಿಂದ ತೋರಿಸಿಕೊಡಲಾಗದಿದ್ದರೂ, ನಿಜವಾಗಿಯೂ ನಮ್ಮಲ್ಲಿ ಅನೇಕರಕುರಿತು, ಒಂದು ವಿಧದ ಮಾರ್ಮಿಕ, ಅಂತರಂಗ ಪ್ರೇರಣೆಯಿಂದ, ಜಿಗುಪ್ಸೆ, ವಿರೋಧ, ದ್ವೇಷ ಉಂಟಾಗುವ ಕ್ರಮದಲ್ಲಿ, ನನಗೆ ಆಗೃಹಸ್ಥರನ್ನು ಕುರಿತು ಅಂತರಂಗದಲ್ಲೇ

ವಿರೋಧ, ದ್ವೇಷ ಉಂಟಾಗಿತ್ತು. ನಮಗೂ ಅವರಿಗೂ ನಡೆದು ಹೋಗುತ್ತಿದ್ದ ಚಿಕ್ಕ ಚಿಕ್ಕಪ್ರಸಂಗಗಳ ಬಲೆಯಿಂದ ಅವರನ್ನು ಕುರಿತಾದ ನಮಗಿದ್ದ ದ್ವೇಷದ ಕಾರಣಗಳನ್ನು ಹೆಕ್ಕಿ ತೆಗೆಯುವ ಶಕ್ತಿ ನನಗೆ ಆಗ ಇರಲಿಲ್ಲ.

ಹೀಗೆ ದಿನ ಕಳೆಯುತ್ತಾ ಆ ಗೃಹಸ್ಥರ ಹೆಸರು ಮಿಸ್ಟರ್ ಮರ್ಡ್‌ಸ್ಟನ್ ಎಂದು ನನಗೆ ತಿಳಿಯಿತು. ಒಂದು ದಿನ ಬೆಳಿಗ್ಗೆ ಮಿ.ಮರ್ಡ್‌ಸ್ಟನ್ನರು ಕುದುರೆಯನ್ನೇರಿ ನಮ್ಮ ಮನೆಗೆ ಬಂದರು. ನಮ್ಮ ಹಣ್ಣಿನ ತೋಟದಲ್ಲಿ ಇದ್ದ ತಾಯಿಯನ್ನು ಕಂಡು, ಕುದುರೆಯನ್ನುನಿಲ್ಲಿಸಿ, ತಾನು ಲೌಸ್ಟಾಫಿನ ಕೆಲವು ಸ್ನೇಹಿತರನ್ನು ನೋಡಲು ಹೋಗುವುದಾಗಿಯೂ, ನಾನು ಇಷ್ಟಪಟ್ಟರೆ ನನ್ನನ್ನು ಅಲ್ಲಿಗೆಕರೆದುಕೊಂಡು ಹೋಗಿಬರುವುದಾಗಿಯೂ ತಿಳಿಸಿದರು.

ಅಂದಿನ ಬೆಳಗ್ಗಿನ ಬಿಸಿಲು, ಚಳಿ, ಗಾಳಿ, ಬೆಳಕು ಯಾರನ್ನಾದರೂ ಹೊರಗೆ ಹೋಗಿ ತಿರುಗಾಡಲು ಪ್ರೇರೇಪಿಸುವಷ್ಟು ಚೆನ್ನಾಗಿದ್ದುವು.ಮಿ. ಮರ್ಡ್‌ಸ್ಟನ್ನರು ಏರಿಬಂದಿದ್ದ ಕುದುರೆಗೆ ಅಂಥಾ ಮನಸ್ಸುಂಟಾಗಿ ನಿಂತಲ್ಲಿ ನಿಲ್ಲದೆ ಹೋಗೋಣವೆಂದು ತವಕಪಡುತ್ತಿದ್ದಿತು. ನಾನುಆ ಗೃಹಸ್ಥರ ಜತೆಯಲ್ಲಿ ಹೋಗಲು ಸಮ್ಮತಿಸಿದೆ. ನನ್ನನ್ನು ಪೆಗಟಿಯು ಮಹಡಿಯ ಮೇಲೆ ಕರೆದುಕೊಂಡು ಹೋಗಿ ದುಸ್ತುಮಾಡತೊಡಗಿದಳು. ನನಗೆ ತಲೆಬಾಚಿ, ದುಸ್ತು ಆಗುವವರೆಗೆ ಮಿ. ಮರ್ಡ್‌ಸ್ಟನ್ನರು ಬೇಲಿಯ ಹೊರಗಡೆಯಿಂದ ಒಳಗಿದ್ದ ನನ್ನತಾಯಿಯೊಡನೆ ಮಾತಾಡುತ್ತಿದ್ದರು. ಅವರಿಬ್ಬರೂ, ಮಧ್ಯೆ ಚಿಕ್ಕ ಬೇಲಿಯಿದ್ದರೂ, ಅತ್ತಿಂದಿತ್ತ ತಿರುಗಾಡುತ್ತಾ ಮಾತಾಡುತ್ತಾಒಮ್ಮೊಮ್ಮೆ ಇಬ್ಬರೂ ಒಟ್ಟಾಗಿ ಕುತೂಹಲದಿಂದ, ಬಗ್ಗಿ, ಒಂದು ಹೂವನ್ನೋ ಗಿಡವನ್ನೋ ನೋಡುತ್ತಿದ್ದರು. ನಮ್ಮ ಮಹಡಿಯಿಂದಅದೆಲ್ಲ ಕಾಣಿಸುತ್ತಿತ್ತು. ಅವರು ಬಗ್ಗಿ ನೋಡುತ್ತಿದ್ದ ಸಮಯದಲ್ಲೆಲ್ಲ ನನ್ನ ತಲೆಬಾಚುತ್ತಿದ್ದ ಪೆಗಟಿ ತಲೆಯನ್ನು ಹಣಿಗೆಯಿಂದ ನನಗೆನೋವಾಗುವಷ್ಟು ಒತ್ತಿ ಬಾಚುತ್ತಿದ್ದಳು.

ನನ್ನ ದುಸ್ತು ಆದನಂತರ ನನ್ನನ್ನು ಕರೆದುಕೊಂಡು ಹೋಗಿ ಕುದುರೆಯ ಮೇಲೆ ಕುಳ್ಳಿರಿಸಿದರು. ನನ್ನ ಹಿಂದೆ ಮಿ. ಮರ್ಡ್‌ಸ್ಟನ್ನರುಕುಳಿತು ನಾವು ಲೌಸ್ಟಾಫಿನ ಕಡೆ ಹೊರಟೆವು. ಕುದುರೆಯ ಮೇಲೆ ಕುಳಿತಿದ್ದ ನನ್ನನ್ನು ಮಿ. ಮರ್ಡ್‌ಸ್ಟನ್ನರು ಒಂದು ಕೈಯಿಂದಹಿಡಿದುಕೊಂಡಿದ್ದರು. ನಾನು ಒಮ್ಮೊಮ್ಮೆ ಏನೇನೋ ನೆಪಮಾಡಿಕೊಂಡು ಅವರ ಮುಖವನ್ನು ನೋಡುತ್ತಿದ್ದೆ. ಅವರ ಕಣ್ಣು, ಮುಖದಮೇಲಿನ ರೋಮ, ಮೀಸೆ ಎಲ್ಲವೂ ಕಪ್ಪಗಿದ್ದುವು. ಅವರು ಮುಖವನ್ನು ನುಣ್ಣಗೆ ಕ್ಷೌರ ಮಾಡಿದ್ದುದರಿಂದ ಚರ್ಮದ ಮೇಲೆಕರಿಚುಕ್ಕೆಗಳಿದ್ದಂತೆ ರೋಮದ ಬುಡ ತೋರುತ್ತಿದ್ದುವು. ತಿದ್ದಿದ ಹುಬ್ಬು, ಮೀಸೆ, ಕಪ್ಪಗಿನ ಕಣ್ಣು, ಬಲವಾದ ದವಡೆಗಳಿದ್ದ ಮಿ.ಮರ್ಡ್‌ಸ್ಟನ್ನರು ಸುಂದರ ಪುರುಷರೆಂದೇ ನಾನು ಭಾವಿಸಿದೆ. ಮತ್ತು, ಈಗ ಗ್ರಹಿಸುವಾಗ, ನನ್ನ ಹೆಡ್ಡು ತಾಯಿಯೂ ನಾನುಗ್ರಹಿಸಿದಂತೆಯೇ ಗ್ರಹಿಸಿರಬೇಕೆಂದು ತೋರುತ್ತದೆ. ನಾವು ಹೀಗೆ ಕುದುರೆಯ ಮೇಲೆ ಮುಂದರಿಸಿಹೋಗಿ ಲೌಸ್ಟಾಫಿಗೆ ತಲಪಿದೆವು.

ಲೌಸ್ಟಾಫ್ ಸಮುದ್ರ ಕರೆಯ ಒಂದು ಚಿಕ್ಕ ಊರು. ನಾವು ಅಲ್ಲಿನ ಒಂದು ಹೋಟೆಲಿಗೆ ಹೋದೆವು. ಹೋಟೆಲಿನ ಒಳಗೆ ಕುರ್ಚಿಗಳನ್ನೆಲ್ಲಸಾಲಾಗಿ ಇಟ್ಟುಕೊಂಡು ಇಬ್ಬರು ಹಾಯಾಗಿ ಮಲಗಿದ್ದರು. ಅವರು ಎಡೆಬಿಡದೆ ಸಿಗರೇಟು ಸೇದುತ್ತಿದ್ದರು. ನಮ್ಮನ್ನು ಕಂಡ ಕೂಡಲೆಫಕ್ಕನೆ ಎದ್ದು "ನಮಸ್ಕಾರ, ಮಿ. ಮರ್ಡ್‌ಸ್ಟನ್" ಎಂದರು. ಅವರಲ್ಲಿ ಒಬ್ಬನು ನನ್ನನ್ನು ನೋಡುತ್ತಾ, ಸಲಿಗೆಯಿಂದ –
"ಈ ಪೋರ ಯಾರು? ನೀನು ಬರುವುದು ತಡವಾದದ್ದನ್ನು ಕಂಡು ನೀನು ಬದುಕಿದ್ದೀಯೋ ಸತ್ತೇ ಹೋದೆಯೋ ಎಂದು ಹೆದರಿದ್ದೆವು"ಎಂದನ್ನುತ್ತಾ ಒರಟಾಗಿ ಹಹ್ಹಹ್ಹಾ ಎಂದು ನಗಾಡಿದನು.
"ಇವನು ಚಿಕ್ಕ ಡೇವಿಡ್" ಅಂದರು ಮಿ. ಮರ್ಡ್‌ಸ್ಟನ್ನರು.
"ಡೇವಿಡ್ ಸರಿ, ಆದರೆ ಡೇವಿಡ್ ಜೋನ್ಸ್ ಏನು?"
"ಅಲ್ಲ, ಡೇವಿಡ್ ಕಾಪರ್‌ಫೀಲ್ಡ್" ಎಂದುತ್ತರವಿತ್ತರು ಮಿ. ಮರ್ಡ್‌ಸ್ಟನ್ನರು.
"ಓಹೋ – ಅವನೋ – ಆ ಮನೋಹರೀ ವಿಧವೆಯ ರಗಳೆ!"
ಇಷ್ಟು ಒಬ್ಬನು ಹೇಳಿ ಪೂರೈಸುವುದರೊಳಗೆ ಮತ್ತೊಬ್ಬ –
"ದಿವಂಗತ ಡೇವಿಡ್ ಕಾಪರ್‌ಫೀಲ್ಡನ ವಿಧವೆ – ಸುಂದರಿಯ – ಮಗನೇನು?" ಎಂದು ಕೇಳಿದನು.
"ಕ್ವಿನಿಯನ್, ನಮ್ಮಲ್ಲಿ ಚುರುಕಿನವರಿದ್ದಾರೆ, ಎಚ್ಚರ" ಅಂದರು ಮರ್ಡ್‌ಸ್ಟನ್ನರು.
"ಯಾರು?" ಎಂದು ಕ್ವಿನಿಯನ್ ಪ್ರಶ್ನಿಸಿದನು.
ಚುರುಕಿನವರು ನಮ್ಮ ಮಧ್ಯೆ ಯಾರು, ಎಲ್ಲಿ, ಇದ್ದಾರೆಂದು ನಾನೂ ಕಣ್ಣು ತಿರುಗಿಸಿ ನೋಡಿದೆನು.
"ಶಫೀಲ್ಡಿನ ಬ್ರೂಕ್ಸ್" ಎಂದು ಮಿ. ಮರ್ಡ್‌ಸ್ಟನ್ನರಂದರು. ಈ ಹೆಸರು ಕೇಳಿ ನನಗೆ ಸಮಾಧಾನವಾಯಿತು. ಚುರುಕಿನವನುನಾನಾಗಿರಬಹುದೋ ಎಂದು ಶಂಕಿಸುತ್ತಿದ್ದ ನನಗೆ ಸಂಶಯ ನಿವಾರಣೆಯಾಗಿ ನಾನೂ ಅವರ ಮಾತುಕತೆ ವಿನೋದಗಳಲ್ಲಿಭಾಗವಹಿಸುವಂತಾಯಿತು. ಶಫೀಲ್ಡ್‌ನ ಬ್ರೂಕ್ಸನ ಹೆಸರು ಕೇಳಿ ಅವರೆಲ್ಲರೂ ತುಂಬಾ ನಗಾಡಿದರು. ನಾನೂ ಅವರ ಜತೆ ಸೇರಿನಗಾಡಿದೆ.

ಅವರೆಲ್ಲರೂ ಸೇರಿ ಬ್ರೂಕ್ಸಿನ ಆರೋಗ್ಯವರ್ಧನೆಗೆ ಅಂದುಕೊಂಡು ವೈನ್ ಮತ್ತು ಬಿಸ್ಕೆಟುಗಳನ್ನು ತರಿಸಿ ನನಗೂ ಕೊಟ್ಟು –
"ಶಫೀಲ್ಡಿನ ಬ್ರೂಕ್ಸ್ ಹಾಳಾಗಿ ಹೋಗಲಿ ಎಂದು ಹೇಳಪ್ಪಾ" ಎಂದು ಹೇಳಿದರು. ಅವರು ಹೇಳಿಕೊಟ್ಟಂತೆ ನಾನು ಹೇಳಿದನಂತರನಾವೆಲ್ಲಾ ವೈನ್ ಕುಡಿದೆವು. ಪುನಃ ನಾವೆಲ್ಲರೂ ಜತೆ ಸೇರಿ ಉತ್ಸಾಹಭರಿತರಾಗಿ ನಗಾಡಿದೆವು.

ಅನಂತರ ಹಸುರು ಹುಲ್ಲಿನ ಮೇಲೆ ತಿರುಗಾಡಿದೆವು. ಬಂಡೆಗಳನ್ನೇರಿ ದೂರದರ್ಶಿಗಳನ್ನು ಹಿಡಿದುಕೊಂಡು ಸೃಷ್ಟಿ ವೈಚಿತ್ರ್ಯವನ್ನುನೋಡಿದೆವು. ದೂರದರ್ಶಿಯಲ್ಲಿ ನಾನು ವಿಶೇಷವೇನನ್ನೂ ಕಾಣದಿದ್ದರೂ ಅವರು ತೋರಿಸಿದ ಗೌರವಕ್ಕಾಗಿ ಎಲ್ಲವನ್ನೂ ಕಂಡವನಂತೆನಟಿಸಿ, ಗಾಂಭೀರ್ಯದಿಂದ ನಾನೂ ಕಂಡೆನೆಂದು ಹೇಳಿದೆ.

ಅನಂತರ ಸಮುದ್ರ ಕರೆಯಲ್ಲಿದ್ದ ಒಂದು ದೋಣಿಯನ್ನೇರಿದೆವು. ನನ್ನನ್ನು ಒಬ್ಬ ನಾವಿಕನ ಜತೆಯಲ್ಲಿ ಬಿಟ್ಟು ಮಿ. ಮರ್ಡ್‌ಸ್ಟನ್ ಮತ್ತೂಮೊದಲಿನ ಇಬ್ಬರು ನಾವಿಕರೂ ದೋಣಿಯ ಒಳಭಾಗಕ್ಕೆ ಹೋದರು. ಅವರು ಅಲ್ಲಿ ಏನೇನೋ ರಿಕಾರ್ಡುಗಳನ್ನು ತನಿಖೆನೋಡುತ್ತಿದ್ದುದನ್ನು ಒಂದು ಕಂಡಿಯಿಂದ ನಾನೂ ಒಮ್ಮೊಮ್ಮೆ ನೋಡುತ್ತಿದ್ದೆ. ಒಳಗಿನಿಂದ ಬರುತ್ತಿದ್ದ ಸಿಗರೇಟಿನ ಹೊಗೆಹೊಗ್ಗಂಡಿಗಾಗಿ ಮೇಲೆ ಬಂದು ಗಾಳಿಯಲ್ಲಿ ತೇಲಿಹೋಗುತ್ತಿತ್ತು. ನನ್ನ ಜತೆಯಲ್ಲಿ ಆ ಒಬ್ಬ ನಾವಿಕ ಮಾತ್ರವಿದ್ದುದರಿಂದ ನಾನೂ ಒಬ್ಬಸಮಾಜ ಧರ್ಮವನ್ನರಿತ ಗೃಹಸ್ಥನಾಗಬೇಕೆಂದು ಗ್ರಹಿಸಿ ಅವನೊಡನೆ ಮಾತಾಡಲು ಹೊರಟೆ. ಜತೆಯಲ್ಲಿದ್ದವನ ಹೆಸರನ್ನು ನನಗೆಯಾರು ಹೇಳಿಕೊಟ್ಟಿರದಿದ್ದರೂ ಅವನ ಬನಿಯನ್ನಿನ ಮೇಲೆ ದೊಡ್ಡ ಅಕ್ಷರಗಳಲ್ಲಿ 'ಸ್ಕೈಲಾರ್ಕ್' ಎಂದು ಬರೆದಿದ್ದುದನ್ನು ಕಂಡು ಅದೇಅವನ ಹೆಸರಾಗಿರಬೇಕೆಂದೂ, ಅವನ ಮನೆಯೇ ದೋಣಿಯಾಗಿದ್ದುದರಿಂದ ಅವನ ವಿಳಾಸ, ಹೆಸರು ಮೊದಲಾದುವನ್ನು ಈ ರೀತಿಬರೆದುಕೊಂಡಿರಬೇಕೆಂದೂ ಗ್ರಹಿಸಿಕೊಂಡೆ. ಈ ನವೀನ ಕ್ರಮದ ಹೆಸರಿನ ಬೋರ್ಡನ್ನು ಕಂಡು ಸಂತೋಷಪಟ್ಟೆ. ಅವನನ್ನು ಮಿಸ್ಟರ್ಸ್ಕೈಲಾರ್ಕ್ ಎಂದು ಸಂಬೋಧಿಸಿ ಮಾತಾಡಲಾರಂಭಿಸಿದಾಗ ಮಾತ್ರ ಆ ಹೆಸರು ಅವನ ದೋಣಿಯದು ಎಂದು ತಿಳಿದೆ. ಈಪ್ರಸಂಗದಲ್ಲಿ ನನಗೆ ಸ್ವಲ್ಪ ನಾಚಿಕೆಯಾದರೂ ಅಂದಿನ ಪ್ರಯಾಣ ವಿಶೇಷ ಅನುಭವಕಾರಿಯಾಗಿದ್ದಿತು.

ಆ ದಿನ ರಾತ್ರಿಯಾಗುವುದರ ಮೊದಲು ನಮ್ಮ ಮನೆಗೆ ತಲುಪಿದೆವು. ಮಿ. ಮರ್ಡ್‌ಸ್ಟನ್ನರು ನನ್ನನ್ನು ನಮ್ಮ ಮನೆಯಲ್ಲಿ ಬಿಟ್ಟು ಅವರಮನೆ ಕಡೆಗೆ ಹೋದರು. ರಾತ್ರಿ ನನ್ನ ಆ ದಿನದ ಅನುಭವವನ್ನೆಲ್ಲ ತಾಯಿಗೆ ಕೂಲಂಕಷವಾಗಿ ವರದಿ ಮಾಡಿದೆ. ಅವಳ ರೂಪವನ್ನುಕುರಿತು ಅವರು ಮನೋಹರಿ. ಸುಂದರಿ ಎಂದದ್ದನ್ನು ಕೇಳುವಾಗ ತಾಯಿಯ ಮುಖ ಕೆಂಪಾಗಿ ತೇಜೋಮಯವಾಗುತ್ತಿತ್ತು. ಶಫೀಲ್ಡಿನಬ್ರೂಕ್ಸ್ ಯಾರಿರಬಹುದೆಂದು ತಾಯಿಯನ್ನು ವಿಚಾರಿಸಿದ್ದಕ್ಕೆ ಅವನೊಬ್ಬ ಕತ್ತಿ, ಚೂರಿ, ಮಚ್ಚುಗಳ ತಯಾರಕನಿರಬೇಕೆಂದು ತಾಯಿತಿಳಿಸಿದಳು.
ಆ ದಿನ ರಾತ್ರಿ ನಾವು ಮಲಗುವ ಮೊದಲು ತಾಯಿಯು ಮತ್ತೊಮ್ಮೆ ಲೌಸ್ಟಾಫಿನ ಆ ಬುದ್ಧಿಯಿಲ್ಲದ ಜನ ಏನೇನೆಂದರೆಂದುತಿಳಿಸಬೇಕೆಂದಳು.
"ಅಪ್ಪಾ ಡೇವಿ, ಅವರಂದದ್ದೇನು – ನನ್ನ ಕುರಿತು" ಎಂದು ತಾಯಿ ಕೇಳಿದಳು.
"ಮನೋಹರಿ..." ಎಂದು ಹೇಳಿ ನಾನು ಮುಂದುವರಿಸುವ ಮೊದಲೇ ನನ್ನ ಬಾಯಿಗೆ ಅಡ್ಡ ಕೈಯಿಟ್ಟು,
"ಹಾಗೆ ಹೇಳಲು ಕಾರಣವಿಲ್ಲ – ಹಾಗೆ ಹೇಳಲಿಲ್ಲ – ಏನೇನಾದರೂ ಹೇಳಬೇಡ" ಎಂದು ತಾಯಿಯಂದಳು.
ನಾನು ಬಿಡಿಸಿಕೊಂಡು –
"ಇಲ್ಲ, ಮನೋಹರೀ, ಸುಂದರೀ, ಸ್ಫುರದ್ರೂಪೀ, ಮಿಸೆಸ್ ಕಾಪರ್‌ಫೀಲ್ಡ್ ಎಂದಂದರು" ಎಂದು ಹೇಳತೊಡಗಿದೆ.
ಪುನಃ ತಾಯಿ ನನ್ನ ಬಾಯನ್ನು ಮುಚ್ಚಿ ತಡೆಯತೊಡಗಿದಳು.
"ಇಲ್ಲಾ, ಖಂಡಿತವಾಗಿಯೂ ಹೇಳಿದರು. ಸುಂದರೀ, ಸ್ಫುರದ್ರೂಪೀ, ಮುದ್ದುಮುಖದ ವಿಧವೆ, ಎಂದು ಸಹಾ ಹೇಳಿದರು" ಎಂದು ನನ್ನಸತ್ಯವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದೆ.
ಕೊನೆಗೆ ತಾಯಿ ಸ್ವಲ್ಪ ಗುಟ್ಟಾಗಿಯೇ ಅನ್ನುವಂತೆ –
"ಎಂಥ ಬುದ್ಧಿಯಿಲ್ಲದವರು. ನಾಚಿಕೆಯೂ ಇಲ್ಲದವರು – ಅಲ್ಲವೇ, ಡೇವಿ? ಅವರಂದದ್ದನ್ನು ಇನ್ನು ಪೆಗಟಿಗೆ ಹೇಳಿ ಅವಳನ್ನು ಸಿಟ್ಟಿಗೆಏಳಿಸಬೇಡ ನಾನೊಬ್ಬಳು ಸಿಟ್ಟಾದುದು ಸಾಕು" ಅಂದಳು. ಆ ದಿನ ನನ್ನನ್ನು ಬಹಳವಾಗಿ ಮುದ್ದಿಸಿದಳು. ಅನಂತರ ಮಲಗಿನಿದ್ರಿಸಿದೆವು.
ನಮ್ಮೊಳಗೆ ಈ ಮಾತುಗಳೆಲ್ಲ ನಡೆಯುವಾಗ ತಾಯಿಯ ಮುಖ ಕಳೆಯೇರಿ ಅವಳು ಬಹು ಚದುರೆಯಾಗಿ ತೋರಿದಳು. ಆ ದಿನದಅವಳ ಚಂದದ ಮುಖ, ಅವಳು ನನ್ನೊಡನೆ ಮಾತಾಡುತ್ತಿದ್ದಾಗ ನನ್ನ ಮುಖದ ಮೇಲೆ ಬೀಳುತ್ತಿದ್ದ ಬಿಸಿಗಾಳಿ ಈಗಲೂ ನನ್ನಸ್ಮರಣೆಯಲ್ಲಿ ಸ್ಪಷ್ಟವಾಗಿ ಉಳಿದಿವೆ.
ಇಂಥ ರೂಪ, ಸ್ಪರ್ಶದ ನೆನಪು ಈಗಲೇ ಅವೆಲ್ಲ ನನ್ನೆದುರೇ ಇರುವಷ್ಟು ಸ್ಪಷ್ಟವಾಗಿ ಉಳಿದಿರುವಾಗ, ನನ್ನ ಪಾಲಿಗೆ ಅವಳುಮೃತಪಟ್ಟಿದ್ದಾಳೆಂದಾಗಲಿ, ಮುಂದಿನ ದಿನಗಳಲ್ಲಿ ಅವಳ ರೂಪ ಬದಲಾಗಿದ್ದುದನ್ನು ನಾನು ನೋಡಿದ್ದರೂ – ಅವಳು ಸುಂದರಿ,ಸ್ಫುರದ್ರೂಪಿಯಲ್ಲದೆ ಬೇರೆ ರೀತಿಯಲ್ಲಿ ಇದ್ದಳೆಂದಾಗಲೀ ನಾನು ಹೇಳಿದರೆ ನ್ಯಾಯವಾಗಬಹುದೇ ಎಂದು ಅನೇಕ ಸರ್ತಿ ಗ್ರಹಿಸಿದ್ದುಇದೆ.

ತಾಯಿ ಮತ್ತೂ ನನ್ನೊಳಗೆ ನಡೆದ ಈ ಮಾತುಕತೆಗಳನ್ನು ನಾನು ಪೆಗಟಿಗೆ ಸ್ವಲ್ಪವೂ ತಿಳಿಸಲಿಲ್ಲ. ಕೆಲವು ದಿನಗಳನಂತರ ನನ್ನತಾಯಿ ಪೂರ್ವದ ನೆರೆ ಗೃಹಸ್ಥರ ಮನೆಗೆ ಹೋಗಿದ್ದಾಗ, ನಾನೂ ಪೆಗಟಿಯೂ ಕುಳಿತು ಹರಟೆ ಹೊಡೆಯತೊಡಗಿದೆವು. ಆಗ ಸ್ವಲ್ಪರಾತ್ರಿಯೂ ಆಗಿತ್ತು. ಪೆಗಟಿ ಏನೇನೋ ಆಲೋಚಿಸುತ್ತಿದ್ದಂತೆ ತೋರುತ್ತಾ – ನನ್ನನ್ನು ಒಮ್ಮೊಮ್ಮೆ ನೋಡಿ, ಹೇಳಬೇಕೋಬೇಡವೋ ಎಂದು ಶಂಕಿಸುತ್ತಿರುವಂತೆ ಮಾಡುತ್ತಾ – ಕೊನೆಗೆ ಕೇಳಿದಳು –

"ನನ್ನಣ್ಣನ ಯಾರ್ಮತ್ ಮನೆಗೆ ಒಂದಾವರ್ತಿ ನಾವಿಬ್ಬರೂ ಹೋದರಾಗಬಹುದೇನು, ಡೇವಿ? ಎರಡು ವಾರ ಗಮ್ಮತ್ತಿನಿಂದ ಅಲ್ಲಿಇದ್ದು ಬರುವ?"

"ನಿನ್ನಣ್ಣನ ಮರ್ಜಿ ಹೇಗೆ – ಅದನ್ನು ಮೊದಲು ತಿಳಿಯಬೇಕು" ಎಂದು ಬುದ್ಧಿವಂತನಂತೆ ಕೇಳಿದೆ.

"ಅವನ ಮರ್ಜಿ! ಹೇಳುವುದೇನು? ಅವನು ಬಹಳ ಒಳ್ಳೆಯವನು. ಅಲ್ಲಿ ಸಮುದ್ರವಿದೆ – ದೋಣಿ, ಹಡಗು, ಬೆಸ್ತರವರು, ಆಟ ಆಡಲುಜನಬೇಕಾದರೆ ನಮ್ಮ ಹೇಮ್ – ಎಲ್ಲಾ ಅನುಕೂಲ ಅಲ್ಲಿದೆ, ಡೇವಿ."

ಈ ವಿವರಗಳನ್ನು ಕೇಳಿ ನನಗೆ ಸಂತೋಷವಾಯಿತು. ಆದರೆ ತಾಯಿ ಇದಕ್ಕೊಪ್ಪಬಹುದೋ, ಒಪ್ಪಲಾರಳೋ ಎಂಬ ಶಂಕೆ ನನಗಿತ್ತು.ಹಾಗಾಗಿ ತಾಯಿಯನ್ನು ಕೇಳದೆ, ಅವಳು ಸಮ್ಮತಿಸದೆ, ಹೋಗುವುದು ಅಸಾಧ್ಯವೆಂದೆ.

"ಅವಳನ್ನು ಒಪ್ಪಿಸುವ ಕೆಲಸ ನನ್ನದು" ಅಂದಳು ಪೆಗಟಿ.

ಆದರೆ ನಾನೊಬ್ಬ ಮನೆಯ ಗಂಡಸಾಗಿರುವಾಗ, ಒಂದು ವಿಷಯದಲ್ಲಿ ನನಗೆ ದಾರಿ ತೋಚದೆ ಕಷ್ಟಪಟ್ಟೆ. ಈ ಆಲೋಚನೆಗಾಗಿಎರಡೂ ಮೊಣಕೈಗಳನ್ನು ಮೇಜಿನಮೇಲೆ ಊರಿಕೊಂಡು, ಅಂಗೈಗಳಿಂದ ಗಲ್ಲವನ್ನು ಹಿಡಿದುಕೊಂಡು ಪೆಗಟಿಯನ್ನು ಕೇಳಿದೆ –

"ನಾವಿಬ್ಬರೂ ಇಲ್ಲಿಂದ ಹೋದರೆ ಅಮ್ಮನ ಜೊತೆಗೆ ಇರುವವರು ಯಾರು?"

ಈ ಪ್ರಶ್ನೆಗೆ ಉತ್ತರ ಕೊಡುವುದು ಪೆಗಟಿಗೆ ಖಂಡಿತವಾಗಿಯೂ ಕಷ್ಟವಾಗಬಹುದೆಂದು ನಾನು ನಿರೀಕ್ಷಿಸಿದ್ದೆ. ಆದರೆ ಅವಳು ಸ್ವಲ್ಪ ಬೇರೆಕೆಲಸದಲ್ಲಿ ಮಗ್ನಳಾದಂತೆ ಮಾಡಿಕೊಂಡು,

"ಅಬ್ಬಾ! ನಿನ್ನ ಪ್ರಶ್ನೆಯೇ! ಮಿಸೆಸ್ ಗ್ರೈಪರಳ ಮನೆಗೆ ತುಂಬಾ ನೆಂಟರು ಬರುವರಂತೆ. ನಿನ್ನ ತಾಯಿ ನಾಲ್ಕು ದಿನ ಅಲ್ಲಿಗೆಹೋಗಿಬರುವಳು" ಎಂದಂದಳು.

"ಹಾಗಾದರೆ ನನ್ನಡ್ಡಿಯಿಲ್ಲ" ಅಂದೆ ನಾನು.

ತಾಯಿ ಬರುವ ಸಮಯವನ್ನು ಬಹು ಕಾತರತೆಯಿಂದ ಕಾದುಕೊಂಡಿದ್ದು ಅವಳು ಬಂದ ಕೂಡಲೇ ಈ ಮಹಾ ವಿಷಯವನ್ನುತಿಳಿಸಿದೆನು. ನನ್ನ ಮಟ್ಟಿಗೆ ಈ ವಿಷಯ ಹೊಸತೂ, ಆಶ್ಚ್ಯರ್ಯಕರವಾದದ್ದೂ ಮತ್ತು ಸಂತೋಷದ್ದೂ ಆಗಿದ್ದರೂ ತಾಯಿಗೆ ಅದುಹಾಗೆಲ್ಲ ಕಂಡುಬಂದಂತೆ ತಾಯಿಯ ಮುಖ ನೋಡುವಾಗ ಕಾಣಲಿಲ್ಲ. ಅವಳು ಆಗಲೇ, ಸುಲಭವಾಗಿ ಸಮ್ಮತಿಯಿತ್ತಳು. ನನ್ನಊಟದ ಮತ್ತು ದಾರಿ ಖರ್ಚಿನ ಏರ್ಪಾಡುಗಳೆಲ್ಲ ಆಗಲೇ ಮಾಡಲಾದುವು.

ನಮ್ಮ ಪ್ರಯಾಣಕ್ಕೆ ಏನೆಲ್ಲ ವಿಘ್ನಗಳು ಬರಲಿವೆಯೋ – ಭೂಕಂಪವೋ, ಬೆಂಕಿಯೋ, ಬಿರುಗಾಳಿಯೋ ಬಂದು ನಮ್ಮ ಪ್ರಯಾಣದಸಂತೋಷ ನಿಲ್ಲುವುದೋ ಎಂದು ಹೆದರಿ ದಿನ ಕಳೆಯಬೇಕಾಯ್ತು. ಅಂತೂ ಕೊನೆಗೆ ಪ್ರಯಾಣಕ್ಕಾಗಿ ಗೊತ್ತು ಮಾಡಿದ್ದ ದಿನ ನನಗೆಆಶ್ಚರ್ಯವಾಗುವಂತೆ ಬಂತೇ ಬಂತು. ಒಂದು ಬಾಡಿಗೆ ಗಾಡಿಯಲ್ಲಿ ನಾವು ಹೋಗಬೇಕೆಂದು ಹಿಂದಿನ ದಿನವೇ ಏರ್ಪಾಡಾಗಿತ್ತು.ಇಜಾರು ಬೂಟ್ಸುಗಳನ್ನು ಹಾಕಿಕೊಂಡು ಮಲಗಲು ಬಿಡುವ ಹಾಗಿದ್ದಿದ್ದರೆ ನಾನು ಹಾಗೆಯೇ ಮಾಡಲೂ ತಯಾರಿದ್ದೆ.

ಈ ವಿಷಯವನ್ನಿಲ್ಲಿ, ಈಗ ಸ್ವಲ್ಪ ಹಗುರವಾಗಿ ಹೇಳುತ್ತಿರುವೆನಾದರೂ ನಾನು ಯಾರ್ಮತ್ತಿಗೆ ಹೋಗಲು ಹೊರಟ ದಿನವನ್ನುಆಲೋಚಿಸಿದರೆ, ಈಗಲೂ ದುಃಖ ಬರುತ್ತದೆ. ನಾನು ಆ ಹೊತ್ತು ಮನೆಯನ್ನು ಬಿಟ್ಟು ಹೊರಡುವಾಗ ಆಗಲೇ ಏನನ್ನೆಲ್ಲಕಳೆದುಕೊಳ್ಳಲಿಕ್ಕೆ ಇತ್ತೆಂಬುದನ್ನು ಆಗ ನಾನು ತಿಳಿದಿರಲಿಲ್ಲ. ಮನೆಯನ್ನೂ ತಾಯಿಯನ್ನೂ ಎಂದೂ ಬಿಟ್ಟಗಲದವನು ಆ ಪಯಣಕ್ಕಾಗಿನಾನು ಎಷ್ಟು ಹಾತೊರೆಯುತ್ತಿದ್ದೆನೆಂದು ಜ್ಞಾಪಿಸಿಕೊಂಡಾಗಲೆಲ್ಲ ನನ್ನ ಕಣ್ಣುಗಳಲ್ಲಿ ನೀರು ಸುರಿಯುತ್ತದೆ.

ಮನೆಯನ್ನು ಬಿಟ್ಟು ಬಂಡಿ ಹತ್ತುವಾಗ ತಾಯಿ ಬಂದು ನನ್ನನಪ್ಪಿಕೊಂಡು ಮುದ್ದಾಡಿದಳು. ಆಗ ನನಗೆ ಕೇಳಿಸಿದ ಅವಳ ಹೃದಯದಬಡಿತ ಈಗಲೂ ಕೇಳುತ್ತಿರುವಂತೆ ಭ್ರಮೆಯುಂಟಾಗುತ್ತದೆ. ಅಂದು ತಾಯಿ ಮುದ್ದಾಡುತ್ತಾ ಮನಸ್ವಿಯಾಗಿ ಅತ್ತು ಆನಂದಿಸಿದುದರನೆನಪು ಈಗಲೂ ಬಹು ಸ್ಪಷ್ಟವಾಗಿದೆ. ಅಂದಿನ ದಿನದ ಆನಂದವೂ, ಅಳುವೂ ನನಗೆ ಪರಮ ಪವಿತ್ರದ ಸ್ಮರಣೆಗಳಾಗಿ ಉಳಿದಿವೆ.ಪುನಃ ಪುನಃ ಗಾಡಿಬಳಿಗೆ ಬಂದು ನನ್ನನ್ನು ಆಲಿಂಗಿಸಿ ಮುದ್ದಾಡಿದ ನನ್ನ ತಾಯಿಯ ಮುದ್ದು ಮುಖವು ನನ್ನ ಸ್ಮರಣೆಯಲ್ಲಿ ಶಾಶ್ವತವಾಗಿನಿಂತಿದೆ. ಪೆಗಟಿಯೂ ನಾನೂ ಕೊನೆಗೆ ಗಾಡಿಯನ್ನು ಹತ್ತಿದೆವು.

ನಾವು ಗಾಡಿ ಹತ್ತುವಾಗಲೇ ಮಿ. ಮರ್ಡ್‌ಸ್ಟನ್ನರು ಬಂದು ನಿಂತಿದ್ದರು. ತಾಯಿ ಬಳಿ ಇಂತಹ ಅಲ್ಪ ವಿಷಯದಲ್ಲಿ ಮನಸ್ಸುಪಲ್ಲಟವಾಗಲೆಡೆಕೊಡಬಾರದೆಂದು ಅವರು ನಮಗೆ ಕೇಳಿಸುವಂತೆಯೇ ತಾಯಿಗೆ ಬೋಧಿಸುತ್ತಿದ್ದರು. ಇದನ್ನು ಕೇಳಿ ಬಂಡಿಯೊಳಗೆಕುಳಿತಿದ್ದ ಪೆಗಟಿಗೂ ನನಗೂ ಸಿಟ್ಟು ಬಂತು.

ಬಂಡಿಯು ಮುಂದರಿದಂತೆಯೇ – ನಾನು ತಾಯಿಯಿಂದ ಹೆಚ್ಚೆಚ್ಚು ದೂರ ಹೋದಂತೆಯೇ – ನನ್ನ ಜತೆಯಲ್ಲಿದ್ದ ಪೆಗಟಿಯೂ ಸಹನನ್ನನ್ನು ನಡುದಾರಿಯಲ್ಲಿ ಬಿಟ್ಟು ಊರಿಗೆ ಹಿಂತಿರುಗಿದರೆ ನನ್ನ ಗತಿ ಏನಾಗಬಹುದೆಂದು ಹೆದರಿದೆ.

ಅಧ್ಯಾಯ ಮೂರು
ಪರಸ್ಥಳ ಒಂದರ ಪರಿಚಯವಾಯ್ತು

ನಮ್ಮ ಗಾಡಿಯ ಕುದುರೆಯಷ್ಟು ನಿಧಾನವಾಗಿ ನಡೆಯುವ ಕುದುರೆ ಇನ್ನೆಲ್ಲಿಯೂ ಇರಲಾರದು. ಗಾಡಿಯ ಮುಖಾಂತರ ತಮಗೆಬಟವಾಡೆಯಾಗಬೇಕಾದ ಸಾಮಾನುಗಳನ್ನು ಪಡೆಯುವುದಕ್ಕಾಗಿ ರಸ್ತೆಯಲ್ಲಿಕಾದು ನಿಂತವರನ್ನು ಮತ್ತಷ್ಟು ಕಾಯಿಸಬೇಕೆಂದೇ ಈ ಕುದುರೆ ಈ ರೀತಿ ತಲೆಅಡಿಗೆ ಹಾಕಿ ಮಂಕಾಗಿ ನಡೆಯುತ್ತಿತ್ತು. ಕುದುರೆಗೆ ಒಂದು ವಿಧದ ಕೆಮ್ಮು ಇದ್ದು,ಅದು ಕೆಮ್ಮುತ್ತಿದ್ದಾಗ ಕಾದು ನಿಂತಿದ್ದವರ ಕಷ್ಟವನ್ನು ತಿಳಿದೇ – ತನ್ನ ಉದ್ದೇಶಸಾಫಲ್ಯಕ್ಕಾಗಿ – ಅದು ಸಂತೋಷಿಸುತ್ತಿದ್ದಂತೆ ತೋರುತ್ತಿತ್ತು.

ಗಾಡಿಯವನೂ ಸಹ ಕುದುರೆಗೆ ತಕ್ಕಂಥವನೇ ಆಗಿದ್ದನೆಂದರೆತಪ್ಪಾಗಲಾರದು. ಅವನು ತನ್ನ ಮೊಣಕಾಲುಗಳ ಮೇಲೆಮೊಣಕೈಗಳನ್ನೂರಿಕೊಂಡು ತಲೆ ಅಡಿಗೆ ಹಾಕಿಕೊಂಡು ಗಾಡಿಯನ್ನುನಡೆಸುತ್ತಿದ್ದನು. ನಮ್ಮ ಗಾಡಿಯ ಮಟ್ಟಿಗೆ, ಯಾವ ಗಾಡಿಯವನಿರದಿದ್ದರೂ ಗಾಡಿ ಯಾರ್ಮತ್ತಿಗೆ ತಲುಪುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ.

ನಮ್ಮ ಜತೆ ಪ್ರಯಾಣಿಕಳಾಗಿ ಒಬ್ಬ ಮುದುಕಿಯಿದ್ದಳು. ಗಾಡಿಯು ಎಷ್ಟೇ ಅಲುಗಾಡಿದರೂ ಆ ಮುದುಕಿ ನಿದ್ರಿಸಿ ಗೊರಕೆಹೊಡೆಯುತ್ತಿದ್ದಳು. ಗಾಡಿಯ ಅಲುಗಾಟ, ಮುದುಕಿಯ ಗೊರಕೆ, ಮತ್ತೂ ನನ್ನ ಪಕ್ಕದಲ್ಲಿ ಕುಳಿತು ನನ್ನನ್ನು ಒತ್ತಿ ಅಮರಿಸುತ್ತಿದ್ದ ಹಿಂಸೆ,ಇಷ್ಟನ್ನೆಲ್ಲ ಸಹಿಸುತ್ತಾ ಕೊನೆಗೆ ಯಾರ್ಮತ್ತಿಗೆ ಸಮೀಪವಾಗತೊಡಗಿದೆವು.

ನನ್ನೆದುರಿನ ಪ್ರದೇಶ ಬಹು ವಿಶಾಲವಾಗಿಯೂ ಸಮತಟ್ಟಾಗಿಯೂ ಇತ್ತು. ಭೂಮಿ ಉರುಟಾಗಿದೆಯೆಂದು ಭೂಗೋಳಶಾಸ್ತ್ರಹೇಳುತ್ತಿರುವುದಕ್ಕೆ ಆಧಾರವೇನಿರಬಹುದೆಂಬ ಸಂಶಯವೂ ತಲೆದೋರಿತು. ಆದರೆ, ಯಾರ್ಮತ್ತು ಧ್ರುವಪ್ರದೇಶದಲ್ಲಿರಬೇಕೆಂದೂ ಆಕಾರಣದಿಂದಲೇ ಆ ಪ್ರದೇಶದ ಸಮತಟ್ಟು ಪರಿಸ್ಥಿತಿ ಇರಬೇಕೆಂದೂ ನಿಶ್ಚೈಸಿಕೊಂಡೆ. ಇನ್ನೂ ಮುಂದೆ ಹೋಗುತ್ತಿದ್ದಂತೆಯೇ ದಿಗಂತದಲ್ಲಿನೆಟ್ಟಗಿನ ಗೆರೆಯಂತೆ ಗಡಿಯಿದ್ದ ಸ್ಥಳವನ್ನು ಕಂಡು ನನಗೆ ಆಶ್ಚರ್ಯವಾಯಿತು. ಹೀಗೆ ಸಮತಟ್ಟು, ಸರಳ ರೇಖೆ, ಮೊದಲಾದ ಸರ್ವತ್ರಒಂದೇ ವಿಧದಿಂದ ತೋರಿಬರುವ ಸೌಂದರ್ಯಕ್ಕಿಂಥ ಮಧ್ಯೆ ಮಧ್ಯೆ ಚಿಕ್ಕ ಗುಡ್ಡಗಳು, ಡೊಂಕಾಗಿ ಏರಿಹೋಗುವ ರಸ್ತೆಗಳು,ಇತ್ಯಾದಿಗಳ ವೈವಿಧ್ಯ ಕೊಡುವ ಸೌಂದರ್ಯ ಉತ್ತಮವೆಂಬ ನನ್ನ ಅನುಭವವನ್ನು ಪೆಗಟಿಗೆ ಹೇಳಿದೆ. ಆದರೆ ಇದನ್ನೆಲ್ಲ ಕೇಳಿ ಪೆಗಟಿಗೆಬೇಸರವಾಯಿತು. ಅವಳು ಬಹಳವಾಗಿ ಅಭಿಮಾನದಿಂದ ತಿಳಿದು ಬಂದಿದ್ದ ಯಾರ್ಮತ್ತನ್ನು ಕುರಿತು ನನ್ನ ಅನುಭವ ಹಾಗಿರುವುದುಸರಿಯಲ್ಲವೆಂದು, ಅವಳ ಕಡೆಯ ಹೊಗಳಿಕೆ, ಹೊಗಳಿಕೆಗೆ ತಕ್ಕಂಥ ಸಮರ್ಥನೆಯನ್ನು ಕೊಟ್ಟಳು. ನೆಟ್ಟಗಿರುವ ಗೆರೆ ಸಮುದ್ರದದೂರದ ಗಡಿಯೆಂದೂ, ಸಮೀಪ ಹೋದ ಹಾಗೆ ವಸ್ತುಸ್ಥಿತಿ ಬೇರೊಂದು ರೂಪದಲ್ಲಿ ತೋರ್ಪಡುವುದೆಂದೂ, ಸೃಷ್ಟಿಯಲ್ಲಿಹಾಗಿರಬೇಕಿತ್ತು, ಹೀಗಿರಬೇಕಿತ್ತು ಎನ್ನುವುದಕ್ಕಿಂತ ವಸ್ತುಸ್ಥಿತಿಯನ್ನು ಸಮಾಧಾನ ಚಿತ್ತದಿಂದ ಗ್ರಹಿಸಿಕೊಂಡು, ಇದ್ದುದರಲ್ಲೇತೃಪ್ತಿಪಟ್ಟುಕೊಳ್ಳುವ ಮನೋಭಾವವನ್ನು ತಂದುಕೊಳ್ಳಬೇಕೆಂದೂ ಅವಳು ಹೇಳಿದಳು.

ನಮ್ಮ ಗಾಡಿ ಪಟ್ಟಣವನ್ನು ಪ್ರವೇಶಿಸುತ್ತಿದ್ದ ಹಾಗೆಯೇಪಟ್ಟಣದಿಂದ ಮೀನು, ತಾರು, ಹೊಗೆಸೊಪ್ಪು ಇತ್ಯಾದಿಗಳವಾಸನೆ ಬರತೊಡಗಿತು. ಕಾರ್ಖಾನೆಯಲ್ಲಿನ ಯಂತ್ರಗಳಕೀರುಧ್ವನಿ, ಕಬ್ಬಿಣ ಕೆಲಸಗಾರರ ಝಣಝಣ ಶಬ್ದ, ಗಾಡಿಗರಗಸಗಳ ಗರಗರ ಶಬ್ದಗಳೂ ಕೇಳಿಸಿದುವು. ಒಂದುಪ್ರವಾಹದಂತೆ ಜನಸ್ತೋಮ ದೂರದಲ್ಲಿ ತೋರಿ, ಹತ್ತಿರ ಬಂದುಹಿಂದೆ ದಾಟಿ ಹೋಗುತ್ತಾ ಮುಗಿಯದಷ್ಟು ಜನರುಕಾಣಿಸಿಕೊಂಡರು. ಇದನ್ನೆಲ್ಲ ಕಂಡು ನನ್ನ ಮೊದಲಿನಅಭಿಪ್ರಾಯವನ್ನು ಬದಲಿಸಬೇಕಾಯ್ತು. ಯಾರ್ಮತ್ತುನಿಜವಾಗಿಯೂ ಒಂದು ಸುಂದರವಾದ ಗಣನೀಯಪ್ರದೇಶವೆಂಬುದಾಗಿ ನಾನು ತಿಳಿದು, ಇದನ್ನೇ ಪೆಗಟಿಗೆತಿಳಿಸಿದೆ. ಪೆಗಟಿಗೂ ನನ್ನ ಅಭಿಪ್ರಾಯ ಕೇಳಿಸಂತೋಷವಾಯಿತು. ಯಾರ್ಮತ್ತು ವಿದ್ವಜ್ಜನರಿಂದ ಮಾತ್ರತಿಳಿಯಲು ಶಕ್ಯವಾದ – ಪ್ರಪಂಚದ ಸುಂದರ ಪ್ರದೇಶಗಳಲ್ಲಿಒಂದು ಪ್ರಾಮುಖ್ಯವಾದ ಸ್ಥಳವೆಂದು ಪೆಗಟಿ ಹೇಳಿದಳು.

ನಮ್ಮನ್ನು ಇಷ್ಟರಲ್ಲೇ ಪೆಗಟಿಯ ಅಳಿಯ ಹೇಮನು ಬಂದು ಎದುರುಗೊಂಡನು. ನನ್ನನ್ನು ಕಂಡ ಕೂಡಲೇ ಅವನು ನನ್ನ ಪರಿಚಯಅವನಿಗೆ ಆ ಮೊದಲೇ ಇದ್ದವನಂತೆ ಕುಶಲವೇ? ಸ್ಥಳ ಒಗ್ಗುತ್ತಿದೆಯೇ? ಎಂದು ಗಂಭೀರವಾಗಿ ಕೇಳಿದನು. ನನ್ನ ಜನನದ ಕಾಲದಲ್ಲೇಇವನಿಗೆ ನನ್ನ ಪರಿಚಯವಾಗಿದ್ದುದರಿಂದ, ಅವನಿಗೆ ಈ ತೆರನಾದ ಸಲಿಗೆ ಬಂದಿರಬೇಕೆಂದು ತಿಳಿಯುತ್ತಾ, ಅವನ 'ಮರ್ಜಿ'ಗೆ ನಾನುಮೆಚ್ಚಿ, ಅವನಂತೆಯೇ ಗಂಭೀರವಾಗಿ, ಅವನನ್ನು ವಂದಿಸಿ, ಊರು ಚೆನ್ನಾಗಿದೆಯೆಂದೆನು.

*

ಹೇಮ ದೃಢಕಾಯನು; ಸಾಧಾರಣ ಆರಡಿಗಿಂತ ಹೆಚ್ಚಾಗಿಯೇ ಎತ್ತರವಾಗಿದ್ದನು. ಒಳಗೆ ಕಾಲುಗಳಿರದಿದ್ದರೂ ತಾವಾಗಿಯೇ ನೆಟ್ಟಗೆನಿಲ್ಲುವಷ್ಟು ತ್ರಾಣವಿದ್ದ, ದಪ್ಪದ ಕಾಕಿ ಬಟ್ಟೆಯ ಇಜಾರನ್ನು ಧರಿಸಿದ್ದನು. ತಲೆಯಲ್ಲಿ ತುಂಬಾ ಗುಂಗುರು ಕೂದಲಿತ್ತು. ಈ ಹೇಮ ನಾನುಬೇಡವೆಂದನ್ನುತ್ತಿದ್ದಾಗಲೇ – ನಾನೊಬ್ಬ ಪ್ರಾಯಸ್ಥ, ಅವನಿಗೆ ಸರಿಸಮಾನಸ್ಥ ಎಂದನ್ನುತ್ತ ಅವನೊಡನೆ ಮಾತಾಡುತ್ತಿದ್ದ ಹಾಗೆಯೇ –ನನ್ನನ್ನೆತ್ತಿ ತನ್ನ ಹೆಗಲ ಮೇಲೆ ಕೂರಿಸಿಕೊಂಡು ನಡೆಯತೊಡಗಿದನು. ಪೆಗಟಿ ನಮ್ಮನ್ನು ಹಿಂಬಾಲಿಸಿದಳು.

ಕಾರ್ಖಾನೆ, ಅಂಗಡಿ, ಹೋಟೆಲು ಮೊದಲಾದುವುಗಳನ್ನೆಲ್ಲಾ ಫರ್ಲಾಂಗುಗಳ ಗಟ್ಟಲೆ ದಾಟಿದನಂತರ ವಿಶಾಲವಾದ ಮರಳಿನ ಬೈಲುಪ್ರದೇಶಕ್ಕೆ ತಲುಪಿದೆವು. ಆ ಬೈಲಿನ ಒಂದು ಕಡೆಗೆ ಕೈ ತೋರಿಸುತ್ತಾ "ಅದೆ ನಮ್ಮನೆ" ಅಂದನು ಹೇಮ. ನಾನು ಅತ್ತ ಕಡೆನೋಡಿದರೂ ನನಗೆ ಯಾವ ಮನೆಯೂ ಅಲ್ಲಿ ಕಾಣಿಸಲಿಲ್ಲ. ಆದರೆ ನಮ್ಮಿಂದ ಸ್ವಲ್ಪ ದೂರದಲ್ಲಿ ಒಂದು ಹರಿಗೋಲು ನಿಂತಿತ್ತು. ನಾನು ಆಹರಿಗೋಲನ್ನು ಕೈಯಿಂದ ತೋರಿಸುತ್ತಾ, ಸ್ವಲ್ಪ ಆಶ್ಚರ್ಯದಿಂದಲೂ, ಸ್ವಲ್ಪ ಸಂಶಯದಿಂದಲೂ "ಹಡಗಿನಂತೆ ಕಾಣುತ್ತದಲ್ಲಾ,ಅದಲ್ಲವಷ್ಟೆ ಮನೆ?" ಎಂದು ಕೇಳಿದೆನು.

"ನಮ್ಮನೆ ಅದೇ" ಅಂದನು ಹೇಮ.

ಅವರು ಆ ಹರಿಗೋಲನ್ನು ವಾಸಕ್ಕಾಗಿ ಮನೆಯಂತೆಉಪಯೋಗಿಸುತ್ತಿರುವರು ಎಂದು ತಿಳಿದ ಕೂಡಲೆ ನನಗೆ ಆದಆನಂದ, ಆಶ್ಚರ್ಯ ಅಷ್ಟಿಷ್ಟಲ್ಲ. ಮನೆಗೆ ತಲಪಿದ ಹಾಗೆ ಅದುಅಲ್ಲಾವುದ್ದೀನನ ದೀಪದ ಒಂದು ವಿಚಿತ್ರ ನಿರ್ಮಾಣವೆಂದೂಅಥವಾ ದೇವ, ಗಂಧರ್ವ, ಯಕ್ಷಿಣಿಯರ ನಿರ್ಮಾಣ ಅದೇಕೆಆಗಿರಬಾರದೆಂದೂ ತೋರಿತು. ಅದರ ಒಂದು ಪಕ್ಕದಲ್ಲಿಬಾಗಿಲೂ, ಮನೆಗೆ ಸುತ್ತಲೂ ತುಂಬಾ ಕಿಟಕಿಗಳೂ ಇದ್ದುವು. ಈಬಾಗಿಲು ಮತ್ತು ಕಿಟಕಿಗಳಿಗೆಲ್ಲ – ನಮ್ಮ ತಲೆಯ ಹೇಟಿನಮುಂಬದಿ ಮತ್ತು ಹಿಂಬದಿ ಇರುವ ಚಿಕ್ಕ ಇಳಿ ಅಂಚುಗಳಂತೆ –ಚಿಕ್ಕ ಮಾಡುಗಳಿದ್ದುವು. ಮನೆಯ, ಸಾಧಾರಣ ಮಧ್ಯ ಭಾಗದಲ್ಲಿಒಂದು ಹೊಗೆನಳಿಗೆ ಮೇಲಕ್ಕೆದ್ದು – ಮನೆಯೊಳಗೆ ಜನರಿದ್ದಾರೆ,ಜೀವನ ನಡೆಸುತ್ತಿದ್ದಾರೆ, ಚಟುವಟಿಕೆಯಲ್ಲಿದ್ದಾರೆ, ಎಂದುತೋರಿಸಲೋಸ್ಕರವೆಂಬಂತೆ – ಆಗಾಗ ಬಿಸಿಬಿಸಿ ಹೊಗೆಕಾರುತ್ತಿತ್ತು. ಸಮುದ್ರವನ್ನು ಬಿಟ್ಟು, ಮರಳಲ್ಲಿ ತಂಗಿ, ಜನರನ್ನುತುಂಬಿಸಿಕೊಂಡು, ಬಿಸಿ ಉಸಿರು ಬಿಡುತ್ತಿದ್ದ ಆ ಮನೆ ತುಂಬ ಮನೋಹರವಾಗಿತ್ತು.

ನಮ್ಮನ್ನೆದುರುಗೊಳ್ಳಲು ಸ್ವಲ್ಪ ಪ್ರಾಯವಾದ ಹೆಂಗುಸೊಬ್ಬಳು, ಒಬ್ಬ ಚಿಕ್ಕ ಹುಡುಗಿಯ ಜತೆಯಲ್ಲಿ, ಕಾದು ನಿಂತಿದ್ದಳು. ಆ ಹುಡುಗಿನಮ್ಮ ಸ್ವಾಗತಕ್ಕಾಗಿಯೇ ಹೊಸ ಲಂಗವನ್ನು ಧರಿಸಿ, ಗಾಜಿನ ಮಣಿಸರಗಳಿಂದ ಅಲಂಕೃತಳಾಗಿದ್ದಳು. ಇವರ ಸ್ವಾಗತದ ಕ್ರಮಗಳೆಲ್ಲಬಹು ಸೊಗಸಾಗಿದ್ದುವು. ಹುಡುಗಿಯು ಬಹು ಮುದ್ದುಮುಖದವಳು. ಅವರಿಬ್ಬರು ನಮ್ಮನ್ನು ಒಳಗೆ ಕರೆದುಕೊಂಡು ಹೋಗಿಆಸನಗಳನ್ನಿತ್ತರು.

ಆ ಮನೆಯಲ್ಲೇ ಅಡಿಗೆಗೆ, ಊಟಕ್ಕೆ, ಕುಳಿತು ಮಾತಾಡಲು, ನಿದ್ರಿಸಲು ಪ್ರತ್ಯಪ್ರತ್ಯೇಕ ಅಂಕಣಗಳಿದ್ದವು. ಇಷ್ಟೂ ಅಲ್ಲದೆ ಅದರಲ್ಲೊಂದುಚಿಕ್ಕ ಉಗ್ರಾಣವೂ ಇತ್ತು. ಮಲಗುವ ವಿಭಾಗದಲ್ಲಿ ದೇವರ ಪಟ, ಇತರ ಕೆಲವು ಚಿತ್ರ, ಒಂದು ಗಡಿಯಾರ, ಮೊದಲಾದುವು ಇದ್ದುವು.ನಾನು ಮಲಗಲೋಸ್ಕರವೆಂದೇ ಒಂದು ಚಿಕ್ಕ ಕೋಣೆಯನ್ನು ಏರ್ಪಡಿಸಿದ್ದರು. ಅದರಲ್ಲಿ ಮಂಚ, ಕನ್ನಡಿ, ಚಿಕ್ಕದೊಂದು ಕಪಾಟುಮೊದಲಾದ ಅನುಕೂಲಗಳೂ ಇದ್ದುವು. ಇದನ್ನೆಲ್ಲ ನೋಡುವಾಗ ಅದೆಲ್ಲ ಇಂದ್ರಜಾಲವೋ, ವಾಸ್ತವಿಕವೋ ಎಂದು ನನಗೆ ಭ್ರಮೆಉಂಟಾಯಿತು. ನನ್ನ ಕೋಣೆಯಲ್ಲಿ ನನ್ನ ಎತ್ತರಕ್ಕೆ ತಕ್ಕದಾದಷ್ಟೇ ಎತ್ತರದಲ್ಲಿ ಒಂದು ಕನ್ನಡಿಯನ್ನಿಟ್ಟಿದ್ದರು. ಕೋಣೆಯ ಅಲಂಕಾರಕ್ಕಾಗಿಒಂದೆರಡು ರಮ್ಯವಾದ ಚಿತ್ರಪಟಗಳನ್ನು ತೂಗಾಡಿಸಿದ್ದರು. ನೀಲಿ ಬಣ್ಣದ ಉಡುಪನ್ನುಟ್ಟಿದ್ದ ಐಸಾಕನನ್ನು ಕೆಂಪುಬಣ್ಣದ ಉಡುಪನ್ನುಧರಿಸಿದ್ದ ಎಬ್ರಹಾಮನು ಕಡಿದು ದೇವರಿಗೆ ಸಮರ್ಪಿಸುವ ಚಿತ್ರವೂ, ಹಸುರು ಬಣ್ಣದ ಸಿಂಹಗಳ ಮಧ್ಯದಲ್ಲಿ ಹಳದಿ ಬಣ್ಣದ ಡೇನಿಯಲನುಎಸೆಯಲ್ಪಟ್ಟಿದ್ದ ಚಿತ್ರವೂ ನನ್ನ ಕೋಣೆಯಲ್ಲಿದ್ದುವು. ಈ ಪುರಾಣ ಕಥೆಗಳ ಚಿತ್ರಗಳ ಜತೆಗೆ ಚಿತ್ರಕಲೆ ಮತ್ತು ಶಿಲ್ಪಕಲೆ ಮಿಶ್ರವಾದಕಲಾಕೃತಿಯೊಂದು ನನ್ನ ಕೋಣೆಯಲ್ಲಿತ್ತು. ಸರ್ಹಜೇನಿನ ಹಡಗು ಚಿತ್ರವಾಗಿದ್ದುದರ ಜತೆಗೆ, ಅದರ ಒಂದು ತುದಿಗೆ ಚಿತ್ರಕ್ಕೆ ಜತೆಗೂಡುವಮರದ ಕೆತ್ತನೆಯ ಭಾಗವನ್ನು ಅಂಟಿಸಿದ್ದ ಆ ಕಲಾಕೃತಿ ಸರಕಾರದ ಪ್ರದರ್ಶನಾಲಯಗಳಲ್ಲಿ ಇಡಲು ತಕ್ಕದೆಂದು ನಾನು ಗ್ರಹಿಸಿಕೊಂಡೆ.

ಸ್ವಲ್ಪ ಹೊತ್ತಿನಲ್ಲಿ ಊಟದ ಏರ್ಪಾಡಾಯಿತು. ಊಟ ಮಾಡುತ್ತಾ ಹೋದ ಹಾಗೆ ಮನೆಯ ಯಜಮಾನರು ಮೀನುಗಾರಿಕೆಕಸಬಿನವರೆಂದು ತಿಳಿದುಕೊಂಡೆ. ಊಟ ಬಹು ಸೊಗಸಾಗಿದ್ದಿತು.

ಮನೆಯ ಯಜಮಾನ ಪೆಗಟಿಯ ಅಣ್ಣ. ಅವನ ಹೆಸರು ಮಿ. ಪೆಗಟಿ. ಆಕರ್ಷಣೀಯ ಮುಖವುಳ್ಳವನು; ನಡುಪ್ರಾಯ ದಾಟಿದವನು. ಅವನಮೈ ಮುಖದಲ್ಲೆಲ್ಲಾ ತುಂಬಾ ರೋಮವಿದ್ದುದೊಂದು ವಿಶೇಷವಾಗಿತ್ತು. ಅವನು ತನ್ನ ಸಂಸಾರದೊಂದಿಗೆ ಮಿಳಿತವಾಗಿ ಮಾತಾಡುತ್ತಿದ್ದಕ್ರಮ, ನಗೆ, ನುಡಿ ಎಲ್ಲವೂ ಅವನೊಬ್ಬ ಯೋಗ್ಯನಾದ ಗೃಹಸ್ಥನೆಂದು ತೋರಿಸುತ್ತಿದ್ದುವು. ಮಾತ್ರವಲ್ಲದೆ ಅವನು ಸಹವಾಸಕ್ಕೂವ್ಯವಹಾರಕ್ಕೂ ಸ್ನೇಹಕ್ಕೂ ಒಪ್ಪುವವನೆಂದು ನಾನು ತಿಳಿದೆ.

ಊಟದನಂತರ ಹೊರಗಿನ ಚಳಿಗಾಳಿ ಒಳಗೆ ಬರದಂತೆ ಬಾಗಿಲು ಹಾಕಿಕೊಂಡು ಮಾತಾಡುತ್ತಾ ಕುಳಿತೆವು. ಅತಿಥಿಯಾದ ನನಗೆಒಂದು ಚಿಕ್ಕಪೆಟ್ಟಿಗೆಯನ್ನು ಬೆಂಕಿಯ ಎದುರಿಟ್ಟು ನಾನು ಅದರ ಮೇಲೆ ಕುಳಿತುಕೊಳ್ಳುವಂತೆ ಕೇಳಿಕೊಂಡರು. ಅಲ್ಲಿ ಕುಳಿತುಅವರೆಲ್ಲರೊಡನೆ ಮಾತಾಡುತ್ತಾ ಅಲ್ಲಿನ ಅನೇಕ ವಿಷಯಗಳನ್ನು ತಿಳಿದುಕೊಂಡೆ. ಆ ಮುದ್ದುಮುದ್ದಾದ ಬಾಲಿಕೆಯ ಹೆಸರು ಎಮಿಲಿಎಂದು ತಿಳಿದುಕೊಂಡೆ. ಅವಳನ್ನು ನನ್ನ ಜತೆಯಲ್ಲೇ ಪೆಟ್ಟಿಗೆಯ ಅರ್ಧಭಾಗದಲ್ಲಿ ಕುಳ್ಳಿರಿಸಿದ್ದರು. ಅವಳಂತೂ ಬಹಳಸಂತೋಷದಿಂದಲೇ ಅಲ್ಲಿ ಕುಳಿತಿದ್ದಳು. ನಮ್ಮ ಕೋಣೆಯಲ್ಲೇ ಒಂದು ಮೂಲೆಯಲ್ಲಿ ಒಬ್ಬ ಮುದುಕಿ ದುಃಖದ ಮುಖ ಮಾಡಿಕೊಂಡುಕುಳಿತಿದ್ದಳು. ಅವಳು ಮಾತಾಡುವ ಕ್ರಮವನ್ನು ನೋಡಿದ್ದಾದರೆ ದುಃಖವನ್ನು ಪ್ರಸಾರ ಮಾಡುವ ಕಾರ್ಯವೂ, ಉದ್ದೇಶವೂಅವಳದಾಗಿದ್ದಂತೆ ತೋರುತ್ತಿತ್ತು. ಅವಳ ಹೆಸರು ಮಿಸೆಸ್ ಗಮ್ಮಿಜ್ ಎಂದು ತಿಳಿಸಿ, ಅವಳ ಪರಿಚಯವನ್ನು ಮಾಡಿಕೊಟ್ಟರು. ಮಿ. ಪೆಗಟಿನನ್ನೆದುರು ಕುಳಿತು ಸಿಗಾರ್ ಸೇದುತ್ತಿದ್ದನು. ಹೀಗೆ ಅತಿಥಿಯೊಡನೆ ಗಂಭೀರವಾದ ಕ್ರಮದಿಂದ ಕೂಡಿದ್ದ ನಮ್ಮ ಕೂಟಕ್ಕೆ ತಕ್ಕದಾಗಿ –ಕೇವಲ ಮರ್ಯಾದೆಗಾಗಿ – ನಾನೊಂದೆರಡು ಪ್ರಶ್ನೆ ಕೇಳುವುದು ನ್ಯಾಯವೆಂದು ನನಗೆ ತೋರಿತು. ಬಹು ಗಂಭೀರಮುಖಮುದ್ರೆಯಿಂದ ಮಿ. ಪೆಗಟಿಯನ್ನು ಕುರಿತು –

"ಅಲ್ಲ, ಮಿ. ಪೆಗಟಿ, ನಿಮ್ಮ ಮಗನಿಗೆ ಹೇಮ್ ಎಂದು ಹೆಸರಿಟ್ಟಿರುತ್ತೀರಷ್ಟೆ – ಪುರಾಣದ ಹೇಮನು ದೋಣಿಯಲ್ಲಿ ಜನಿಸಿರುವಂತೆ ನಿಮ್ಮಹೇಮನು ದೋಣಿಯಲ್ಲಿ ಜನಿಸಿದುದಕ್ಕಾಗಿ ಈ ಹೆಸರನ್ನಿಟ್ಟಿರುತ್ತೀರಿ ತಾನೆ?" ಎಂದು ವಿಚಾರಿಸಿದೆ.

"ಆ ಹೆಸರನ್ನಿಟ್ಟದ್ದು ನನ್ನ ತಮ್ಮ. ಹೇಮನು ನನ್ನ ತಮ್ಮನ ಮಗ, ಮಾಸ್ಟರ್ ಕಾಪರ್ಫೀಲ್ಡ್" ಅಂದನು ಮಿ. ಪೆಗಟಿ.

"ಆ ತಮ್ಮ ಈಗ ಎಲ್ಲಿದ್ದಾರೆ ಮಿ. ಪೆಗಟಿ?"

"ಆತನು ಸಮುದ್ರ ಪಾಲಾಗಿದ್ದಾನೆ."

"ಹಾಗೋ! ಅದಿರಲಿ, ಈ ಎಮಿಲಿ ನಿಮ್ಮ ಮಗಳು ತಾನೆ?"

"ಅಲ್ಲ ಸರ್, ಅವಳು ನನ್ನ ಭಾವನ ಮಗಳು."

ನನ್ನ ಈ ಎಲ್ಲಾ ಉಪಚಾರದ ಮಾತುಗಳಲ್ಲೂ ನಾನು ತಪ್ಪಿದ್ದನ್ನು ತಿಳಿದು ಸ್ವಲ್ಪ ನಾಚಿಕೆಯಾಯ್ತು. ಹೀಗಾಗಿ ಸ್ವಲ್ಪ ಯೋಚಿಸಿ,ಎಚ್ಚರಿಕೆಯಿಂದ, ಮೂಲೆಯಲ್ಲಿದ್ದ ಮುದುಕಿಯನ್ನು ತೋರಿಸುತ್ತಾ ನಾನು ಪ್ರಶ್ನಿಸಿದೆ –

"ಮಿ. ಪೆಗಟಿ, ಅವರು ನಿಮ್ಮ ಪತ್ನಿಯಷ್ಟೆ?"

"ಅಲ್ಲ, ಅವಳು ಮಿಸ್ಟರ್ ಗಮ್ಮಿಜ್ಜರ ಪತ್ನಿ" ಎಂದು ಉತ್ತರ ಸಿಕ್ಕಿತು. ನನ್ನ ಎಲ್ಲಾ ಪ್ರಶ್ನೆಗಳೂ ಹೀಗಾದುವಲ್ಲಾ ಎಂದು ನನಗೆ ತುಂಬಾನಾಚಿಕೆಯಾಯ್ತು. ನಾನು ವಿಶೇಷ ಮಾತಾಡಬಾರದೆಂದು ಪೆಗಟಿ ತನ್ನ ಹೊಲಿಗೆ ಕೆಲಸದ ಮಧ್ಯೆ ಕೈ ಸನ್ನೆಯಿಂದ ತಿಳಿಸಿದ ಮೇಲಂತೂಮತ್ತಷ್ಟು ನಾಚಿಕೆ ಪಡುತ್ತಾ ಮೌನದಿಂದ ಗಂಭೀರವಾಗಿ ಕುಳಿತೆ. ರಾತ್ರಿ ಮಲಗುವ ಮೊದಲು ಪೆಗಟಿ ಬಂದು ತನ್ನಣ್ಣನ ದಿವ್ಯಗುಣಗಳನ್ನೆಲ್ಲಾ ವರ್ಣಿಸಿದಳು. ಮಿಸೆಸ್ ಗಮ್ಮಿಜ್, ಹೇಮ್, ಎಮಿಲಿ ಮೂವರು ಅನಾಥರನ್ನು ಅವನು ತನ್ನ ಮಕ್ಕಳಂತೆ ಸಾಕುವುದನ್ನೆಲ್ಲವಿವರಿಸಿದಳು. ಅವನನ್ನು ಯಾರಾದರೂ ಇದಕ್ಕಾಗಿ ಹೊಗಳಿದರೆ ಅವನು ಆ ಕೂಡಲೇ, ಬಹುಕೋಪದಿಂದ, ತಾನು 'ಗೋರಂ'ಮಾಡಿಕೊಳ್ಳುವುದು ಖಂಡಿತವೆಂದು ಬೊಬ್ಬೆ ಹೊಡೆಯುತ್ತಿದ್ದನಂತೆ. ಒಮ್ಮೆ ಹಾಗೆ 'ಗೋರಂ' ಮಾಡಿಕೊಳ್ಳುವುದಾಗಿ ಹೇಳಿ ಮೇಜನ್ನುಕೋಪದಿಂದ ಗುದ್ದಿದಾಗ ಮೇಜೇ ಮುರಿದು ಹೋಗಿತ್ತಂತೆ. 'ಗೋರಂ' ಶಬ್ದದ ಅರ್ಥ ಯಾರಿಗೂ ತಿಳಿದಿರಲಿಲ್ಲವಾದರೂ ಅದು ಭಯಂಕರಪರಿಣಾಮ ಸೂಚಕ ಶಬ್ದವೆಂದು ಅವರೆಲ್ಲರೂ ತಿಳಿದಿದ್ದರು. ಅಣ್ಣನ ಗುಣವರ್ಣನೆ ಮಾಡುತ್ತಾ ಕೊನೆಗೆ ಪೆಗಟಿ –

"ಅವನಷ್ಟು ಉತ್ತಮ, ಕನಿಕರವುಳ್ಳವ, ದಯಾಮಯ ಪ್ರಪಂಚದಲ್ಲೇ ಇನ್ನೆಲ್ಲೂ ಇಲ್ಲ," ಎಂದಳು.

ಕೊನೆಗೆ ನಾವೆಲ್ಲರೂ ಮಲಗಿದೆವು. ಕೆಲವರು ತೂಗಾಡುವ ಬಲೆಗಳಲ್ಲೂ ನಾನು ಮಂಚದ ಮೇಲೂ ಮಲಗಿ ನಿದ್ರಿಸಿದೆವು. ಒಳಗಿನಹದಬಿಸಿಯ ವಾತಾವರಣ, ಮತ್ತು ಹೊರಗೆ ಬೀಸುತ್ತಿದ್ದ ಗಾಳಿಯ ಸೌಮ್ಯ ಶಬ್ದಗಳು ನನ್ನ ನಿದ್ರೆಗೆ ತುಂಬಾ ಸಹಾಯಕವಾದುವು.ಬೆಳಗಿನ ಜಾವದಲ್ಲಿ ಕಡಲ ಕಡೆಯಿಂದ ಕೇಳಿಬರುತ್ತಿದ್ದ ಸಮುದ್ರ ಘೋಷವನ್ನು ಕೇಳಿ ಸಮುದ್ರ ಉಕ್ಕಿ ಬಂದರೆ ನಾನು ಮನೆ ಸೇರುವುದುಹೇಗೆಂದೂ ಯೋಚಿಸಬೇಕಾಯ್ತು. ಆದರೆ, ಮಿ. ಪೆಗಟಿಯಂಥ ನಾವಿಕನ ಆಶ್ರಯವೂ, ನಮ್ಮ ಮನೆಯೇ ದೋಣಿಯಾಗಿರುವಸಂದರ್ಭವೂ ನೆನಪಿಗೆ ಬಂದು ನಾನು ಧೈರ್ಯಗೊಂಡೆ.

ಸಮುದ್ರ ಉಕ್ಕಿ ನಾವು ನಾಶವಾಗುವ ಬದಲು, ಮರುದಿನ ಬೆಳಗ್ಗೆ, ಎಮಿಲಿಯೂ ನಾನೂ ಏಳುವಾಗ ನವಚೇತನ ಪಡೆದೇ ಎದ್ದೆವು. ಆದಿನದ ಬೆಳಗ್ಗಿನ ನಮ್ಮ ಕಾರ್ಯಗಳ ಪೈಕಿ ಸಮುದ್ರ ದಂಡೆಯಲ್ಲಿ ತಿರುಗಾಡಿದುದರ ನೆನಪು ಈಗಲೂ ಬಹು ಚೆನ್ನಾಗಿ ಉಳಿದಿದೆ.ಎಮಿಲಿಯೂ ನಾನೂ ಮರಳಿನಿಂದ ಚಿಪ್ಪುಗಳನ್ನು ಹೆಕ್ಕುತ್ತಲೂ ಮರಳಿನಲ್ಲಿ ನಮ್ಮ ಹೆಸರುಗಳನ್ನು ಬರೆಯುತ್ತಲೂ, ಬೇಕುಬೇಕಾದಂತೆಮಾತಾಡುತ್ತಲೂ, ಆಟವಾಡುತ್ತಲೂ ಕಾಲ ಕಳೆದೆವು. ಒಮ್ಮೆ, ಎಮಿಲಿಯನ್ನೇ ನಾನು ನೋಡಿದಾಗ ಅವಳ ಕಣ್ಣಿನ ಬೊಂಬೆಯಲ್ಲಿಹಾಯಿ ಕಟ್ಟಿದ ಹಡಗನ್ನು ಕಂಡು ಆಶ್ಚರ್ಯಚಕಿತನಾಗಿ, ಆ ಚಮತ್ಕಾರವನ್ನು ನಾವು ಉಭಯತರೂ ಅನೇಕ ಸರ್ತಿ ಪರೀಕ್ಷಿಸಿನೋಡಿದೆವು. ಹೀಗೆ ನಾವು ಎಷ್ಟೇ ಸರಿಸಮಾನರೆಂದೇ ಆಟವಾಡಿದರೂ ಅವಳೊಬ್ಬ ಸ್ತ್ರೀ ಎಂದೂ, ನಾನು ಜವಾಬ್ದಾರಿ ಹೊತ್ತಿರುವಗಂಡುಸಾದ ಗೃಹಸ್ಥನೆಂದೂ ನಾನು ತಿಳಿಯುತ್ತಿದ್ದೆ. ಈ ಕಾರಣದಿಂದಲೇ ಗೃಹಸ್ಥಧರ್ಮಕ್ಕೆ ತಕ್ಕದಾಗಿ, ಎಮಿಲಿಯನ್ನು ಔಪಚಾರಿಕವಾಗಿಮಾತಾಡಿಸಿ ಗೌರವಿಸಬೇಕೆಂದು ಉದ್ದೇಶಿಸಿ, ಕೆಲವು ಪ್ರಶ್ನೆಗಳನ್ನು ಕೇಳಿದೆ.

"ನೀನು ಒಬ್ಬ ನಾವಿಕಳಷ್ಟೆ, ಎಮಿಲಿ?" ಎಂದು ಕೇಳಿದೆ.

"ಅಬ್ಬ! ನಾನು ನಾವಿಕಳು! ಸಮುದ್ರ ಅಂದರೆ ನನಗೆ ಭಯ," ಎಂದು ಅವಳು ಉತ್ತರವಿತ್ತಳು.

ಅವಳ ಅಂಜಿಕೆಯ ಸಮಯದಲ್ಲಿ ಗಂಡುಸಾದ ನಾನು ಧೈರ್ಯವಹಿಸಿ ಮಾತಾಡಬೇಕೆಂದು ಗ್ರಹಿಸಿದೆ. ನನ್ನ ಪ್ರಾಯ, ಎತ್ತರ, ಎಲ್ಲವೂಉಬ್ಬಿದುವು.

"ನನಗೆ ಅಂಜಿಕೆಯೆಂದರೆ ಏನೆಂದೇ ಗೊತ್ತಿಲ್ಲ!" ಅಂದೆ.

"ನೀನೇನೋ ಹಾಗೆ ಹೇಳಬಹುದು. ಆದರೆ ನನಗೆ ಮಾತ್ರ ಅಂಜಿಕೆ ಬಿಡುವುದಿಲ್ಲ. ನನ್ನ ತಂದೆ ಮತ್ತು ಕೆಲವರು ಸಮುದ್ರದಲ್ಲಿ ಸತ್ತದ್ದನ್ನುನಾನು ನೋಡಿರುವೆನು. ಎಂತೆಂಥ ಗಟ್ಟಿ ಹಡಗನ್ನೇ ಆದರೂ ಅದು ಮನಸ್ಸು ಮಾಡಿದರೆ ಪುಡಿಪುಡಿ ಮಾಡುವುದು" ಅಂದಳು ಎಮಿಲಿ.

ಹೀಗೆಲ್ಲಾ ನಾವು ಮಾತಾಡುತ್ತಾ ನಾನು ನನ್ನ ತಂದೆ ಸತ್ತು ಹೋಗಿದ್ದ ವಿಷಯವನ್ನೂ, ಅವನ ಗೋರಿ, ಇಗರ್ಜಿ ಕಾಂಪೌಂಡಿಗೆ ನಮ್ಮಮನೆ ಸಮೀಪವಿದ್ದುದರಿಂದ, ನಾವು ಆ ಗೋರಿ ಬಳಿ ಆಗಾಗ ಹೋಗಿಬರುತ್ತಿದ್ದ ಕಥೆಗಳನ್ನು ಎಮಿಲಿಗೆ ತಿಳಿಸಿದೆ. ಅವಳೂ ಸಹ ಅವಳಆತ್ಮಚರಿತ್ರೆಯನ್ನು ಕೈಸನ್ನೆ, ಕಣ್ಣುಸನ್ನೆ, ಹಾವ ಭಾವಗಳಿಂದ ನನಗೆ ತಿಳಿಸುತ್ತಾ ಅವಳ ತಂದೆಯ ಗೋರಿ ಭೋರ್ಗರೆಯುವ ಸಮುದ್ರಮಧ್ಯದಲ್ಲೇ ಇತ್ತೆಂದೂ, ಆ ಕಾರಣದಿಂದ ತಾನು ಹೋಗಿ ನೋಡುವ ಅನುಕೂಲವಿಲ್ಲವೆಂದೂ ಹೇಳುತ್ತಾ ವ್ಯಥೆಪಟ್ಟಳು.

ಹೀಗೆ ನಮ್ಮ ನಮ್ಮ ಪರಿಚಯವನ್ನು ಬೆಳೆಸುತ್ತಾ ಹೋಗುವಾಗ ಅವಳು ಬಡಬೆಸ್ತರ ಹುಡುಗಿ ಎಂದೂ, ಅವಳ ನೆಂಟರಿಷ್ಟರೆಲ್ಲ ಬೆಸ್ತರೇಎಂದು ತಿಳಿಸುತ್ತಾ, ಅವರೆಲ್ಲರ ಬಡತನ, ಕೀಳುತನಗಳನ್ನು ಗ್ರಹಿಸುತ್ತಾ, ಹೇಳಲೂ ಸ್ವಲ್ಪ ಸಂಕೋಚಪಟ್ಟುಕೊಳ್ಳುತ್ತಿದ್ದಳು. ಇದೇಸಮಯದಲ್ಲಿ ನಾನು ಕುಲೀನನು, ನನ್ನ ಬಂಧುಬಾಂಧವರೆಲ್ಲರೂ ಕುಲೀನರು, ನಾವು ಶ್ರೀಮಂತರು, ನಗರವಾಸಿಗಳು ಎಂದುಮೊದಲಾಗಿ ನಮ್ಮ ಗೌರವಗಳನ್ನು ಅವಳು ಬಹುವಾದ ಆನಂದದಿಂದ ಪ್ರಶಂಸಿಸಿ ಮಾತಾಡುತ್ತಿದ್ದಳು. ಆದರೆ ಅವಳು ತನ್ನ ಬಡತನ,ಕೀಳುತನದಿಂದ ಉದ್ಧರಿಸಿಕೊಂಡು ಶ್ರೀಮಂತಿಕೆ, ಕುಲೀನತೆಯನ್ನು ಪಡೆಯುವ ನಿರ್ಧಾರದಲ್ಲಿದ್ದಳು. ತಾನು ಸುಸಂಸ್ಕೃತ

ಕುಲೀನಗೃಹಿಣಿಯಾಗಿ, ಐಶ್ವರ್ಯವಂತಳಾಗಿ ತನ್ನ ಮಾವ ಪೆಗಟಿಗೆ ತುಂಬಾ ಉಡುಗೊರೆಗಳನ್ನು ಕೊಡುವುದಾಗಿಯೂ, ತನ್ನ ಕಡೆಯ ಬಡಬೆಸ್ತರೆಲ್ಲ ತನ್ನ ಉತ್ತಮ ಸ್ಥಿತಿಯಿಂದ ತುಂಬಾ ಸಹಾಯಗಳನ್ನು ತಾನು ಮಾಡಿಯೇ ಮಾಡುವವಳೆಂದೂ ಹೇಳಿದಳು. ಈ ರೀತಿ ನಮ್ಮಎರಡು ಹೃದಯಗಳು ನಮ್ಮ ಸಾಮಾಜಿಕ ಅಂತಸ್ತುಗಳನ್ನೆಲ್ಲ ಮರೆತು, ಪರಿಶುದ್ಧ ಪ್ರೇಮದಿಂದ ಬೆರೆತು, ನಲಿದು, ಸಂತೋಷಿಸಿದುವು.
ಅವಳ ಈ ಮಾತುಗಳನ್ನು ಕೇಳಿ ಎಮಿಲಿಗೆ ನಾವಿಕ ವೃತ್ತಿಯಲ್ಲಿ ಭಯವೇ ಇರಬೇಕೆಂದು ಊಹಿಸಿ ನಾನು ಕೇಳಿದೆ –
"ಸಮುದ್ರದ ಅಂಜಿಕೆಯಿಂದಾಗಿ ನಿನಗೆ ನಾವಿಕ ವೃತಿಯಲ್ಲೇ ಪ್ರೀತಿಯಿಲ್ಲವೇ, ಎಮಿಲಿ?"
"ವೃತ್ತಿಯ ಕುರಿತು ದ್ವೇಷವಿಲ್ಲ – ಪ್ರೀತಿಯೇ ಇದೆ. ಸಮುದ್ರದ ಕುರಿತು ನನಗೆ ಅಂಜಿಕೆಯೂ ಇಲ್ಲ. ನನ್ನ ಮುಖ್ಯ ಗುರಿ – ನಾನು ಒಬ್ಬಶ್ರೀಮಂತನ ಪತ್ನಿಯಾಗಿ ನನ್ನ ಬಡ ಮಾವ ಮಿ. ಪೆಗಟಿ ಮತ್ತು ಹೇಮರಿಗೆ ಸಹಾಯ ಮಾಡಬೇಕೆಂದು ಮಾತ್ರವಿದೆ. ಇಂಥ ಉತ್ತಮಶ್ರೀಮಂತಿಕೆಗೆ ಸಮುದ್ರ ವೃತ್ತಿ ಪ್ರಯೋಜನ ಬೀಳಬಹುದೇ ಎಂಬ ಶಂಕೆ ಮಾತ್ರ ನನಗಿದೆ."
ಎಮಿಲಿ ಇಷ್ಟು ಹೇಳಿ, ಸಮುದ್ರಕ್ಕೆ ಚಾಚಿಕೊಂಡಿದ್ದ ಒಂದು ದೊಡ್ಡ, ಉದ್ದದ, ಮರದ ತೋಳಿನ ಮೇಲೆ ಏರಿಕೊಂಡು ಹೋಗಿ, ಅದರತುದಿಯಲ್ಲಿ ನಿಂತು ತನ್ನ ಲಂಗದ ಇಬ್ಬದಿಯ ಅಂಚುಗಳನ್ನು ಎತ್ತಿ ಹಿಡಿದುಕೊಂಡು ಪತಂಗದಂತೆ ನಲಿದಳು.
ಆಗ್ಗೆ ನನಗೆ ಬಹುವಾದ ಭಯವೇ ಆಯ್ತು. ಅವಳು ಸಮುದ್ರಕ್ಕೆ ಬಿದ್ದರೆ ನಾನೇನೂ ಮಾಡುವಂತಿರಲಿಲ್ಲ. ಆದರೆ ಸ್ವಲ್ಪ ಸಮಯದನಂತರ,ಅವಳು ಏರಿಹೋಗಿದ್ದಷ್ಟೇ ಸುಲಭದಲ್ಲಿ ಕೆಳಕ್ಕೆ ಇಳಿದು ಬಂದಳು. ಈ ಅಪಾಯಕರ ಪ್ರಸಂಗ ನನ್ನ ಪ್ರಾಯಬಂದನಂತರ ಕೆಲವೊಂದುಬಾರಿ ನನ್ನೆದುರು ಒಂದು ತಾತ್ವಿಕ ಸಮಸ್ಯೆಯಾಗಿ ನಿಂತದ್ದುಂಟು.
ಈ ಸಾಹಸ ನಡೆದನಂತರ ನಾವು ಸಮುದ್ರದ ಕರೆಗಾಗಿ ಕೈ ಕೈ ಹಿಡಿದು ತಿರುಗುತ್ತಾ, ಎಳೆದಾಡಿಕೊಂಡು, ಆಲಿಂಗಿಸಿಕೊಂಡು, ಮುತ್ತುಕೊಟ್ಟು ಮುದ್ದಾಡಿಕೊಂಡು, ಮನೆಯನ್ನು ಸೇರಿದೆವು. ನಮ್ಮ ಅಂತರಂಗವನ್ನು ಬಿಚ್ಚಿ ಹೇಳುವುದಾದರೆ ನಮ್ಮೊಳಗೆ ಅನುರಾಗವೇಉಂಟಾಗಿತ್ತು. ಮನೆಯನ್ನು ಸೇರುವ ಮೊದಲು ನಾವು ಒಬ್ಬರನ್ನೊಬ್ಬರು ಚುಂಬಿಸಿದೆವು. ನೀಲಿವರ್ಣದ ಲಂಗಧರಿಸಿದ ಚಿಕ್ಕ ಎಮಿಲಿಸ್ವರ್ಗೀಯ ಪ್ರಭೆಯಿಂದ ಪ್ರಕಾಶಿಸುತ್ತಿದ್ದಳು. ಅವಳೊಬ್ಬ ಅಪ್ಸರೆಯೆಂದೇ ನಾನು ಅವಳ ಸೌಂದರ್ಯವನ್ನು ಕಂಡು ತಿಳಿದಿದ್ದೆ. ಒಂದು ದಿನಇದ್ದಕ್ಕಿದ್ದ ಹಾಗೆಯೇ ಅವಳಿಗೆ ರೆಕ್ಕೆ ಬಂದು ಸೂರ್ಯ ಪ್ರಕಾಶದಲ್ಲಿ ಪ್ರಭೆಯಾಗಿ ಹಾರಿ ಮಾಯವಾದರೆ ಅದೊಂದು ಆಶ್ಚರ್ಯದಸಂಗತಿಯಾಗದೆಂದು ನಾನು ತಿಳಿದಿದ್ದೆ. ನಮ್ಮ ಈ ನಿಷ್ಕಪಟ ಪ್ರೇಮ ಪ್ರಾಯಭರಿತರಾದವರಲ್ಲಿ ಇರಲಾರದೆಂದು ನನ್ನ ಅಭಿಪ್ರಾಯ.ನಾವು ಯಾರ್ಮತ್ತಿನಲ್ಲಿ ಹೀಗೆ ಪ್ರತಿದಿನವೂ ಆಟವಾಡುತ್ತಾ ಕಾಲಕಳೆಯುತ್ತಿದ್ದೆವು. ಕಾಲವೂ ಬೆಳೆಯದೆಯೇ ನಮ್ಮ ಜತೆಯಲ್ಲೇಎಳೆಯದಾಗಿ ಉಳಿದು, ನಮ್ಮ ನರ್ತನಗಳಲ್ಲಿ ತಾನೂ ನಲಿದು, ನಮ್ಮ ದಿನಗಳನ್ನೆಲ್ಲ ಸದಾ ಪ್ರಾತಃಕಾಲವನ್ನಾಗಿಯೇ ಮಾಡಿತ್ತು.ನಾನು ಎಮಿಲಿಯನ್ನು ಆಜನ್ಮವಾಗಿ ಪ್ರೀತಿಸುವೆನೆಂದು ಒಂದು ಪ್ರಸಂಗದಲ್ಲಿ ತಿಳಿಸಿಯೇ ಬಿಟ್ಟೆ. ಅಲ್ಲದೆ, ಅವಳೂ ಅದೇ ರೀತಿ ನನ್ನನ್ನುಪ್ರೀತಿಸುತ್ತಿಲ್ಲವೆಂದು ತಿಳಿದದ್ದಾದರೆ ಆ ಕೂಡಲೇ ನಾನು ಆತ್ಮಹತ್ಯೆ ಮಾಡಿಕೊಳ್ಳುವುದು ಖಂಡಿತವೆಂದೂ ತಿಳಿಸಿದೆ. ಅಷ್ಟಕ್ಕೇ ನಿಲ್ಲದೇ,ಅವಳ ಸುಂದರರೂಪವನ್ನೂ, ಅವಳೊಡನೆ ಕಳೆದ ದಿನಗಳ ದಿವ್ಯ ಸ್ಮರಣೆಯನ್ನೂ ಮನಸ್ಸಲ್ಲಿಟ್ಟುಕೊಂಡು ನಾನು ಮೃತ್ಯುವನ್ನುಆಲಿಂಗಿಸಬೇಕೋ, ಅಥವಾ, ನಾವೀರ್ವರೂ ಸಂತೋಷದಿಂದ ಬಾಳಲು ಬೇಕಾದ ಮರುತ್ತರವನ್ನು ಆಗಲೇ ಅವಳು ಕೊಡುವಳೋ,ಎಂದೂ ಸಹ ಕೇಳಿಬಿಟ್ಟೆ. ನನ್ನ ವೀರವಾಕ್ಯಗಳನ್ನು ಕೇಳಿ ಎಮಿಲಿಯು, ತಾನೂ ಸಹ ನನ್ನನ್ನು, ನನ್ನ ಮಟ್ಟದಿಂದಲೇಪ್ರೀತಿಸುತ್ತಿರುವುದಾಗಿ ತಿಳಿಸಿ, ಅದನ್ನು ಖಚಿತಪಡಿಸುವುದಕ್ಕೆಂದು ನನ್ನನ್ನು ಚುಂಬಿಸಿದಳು. ನಮ್ಮೀರ್ವರ ಆನಂದದ ಬೆಳಕು ಪೆಗಟಿಯಸಂಸಾರವನ್ನು ಬೆಳಗಿಸಿತು. ಸದಾ ದುಃಖದಲ್ಲೇ ಮುಳುಗಿರುತ್ತಿದ್ದ ಮಿಸೆಸ್ ಗಮ್ಮಿಜ್ಜಳೂ ಸಹ ನಮ್ಮ ಈ ಆನಂದದ ಬೆಳಕಿನಿಂದಹರ್ಷಗೊಂಡು ನಮ್ಮೊಡನೆ ಆಗಾಗ ಮಾತಾಡಿಬಿಡುತ್ತಿದ್ದಳು.
ಈ ರೀತಿ ಹದಿನೈದು ದಿನಗಳು ಕಳೆಯುತ್ತಾ ಬಂದು ನಾನು ನಮ್ಮ ಮನೆಗೆ ಹಿಂತಿರುಗಿ ಹೋಗಬೇಕಾದ ದಿನ ಬಂದೇ ಬಂತು. ಮಿ.ಪೆಗಟಿ, ಹೇಮ್ ಮೊದಲಾದವನ್ನು ಬಿಟ್ಟು ಹೊರಡುವುದೇ ನನಗೆ ದುಃಖಕರವಾಗಿತ್ತು. ಇನ್ನು ಎಮಿಲಿಯನ್ನು ಅಗಲುವುದುಹೃದಯಭೇದಕವೇ ಆಗಿತ್ತು. ಎಮಿಲಿಯೂ ನಾನು ಅಪ್ಪಿ ಮುತ್ತಿಟ್ಟುಕೊಂಡು ಅಳುತ್ತಾ ಅಗಲಿದೆವು.
ಯಾರ್ಮತ್ತನ್ನು ಬಿಟ್ಟು ಬ್ಲಂಡರ್ಸ್ಟನ್ನಿಗೆ ಹೊರಟು ಬಂಡಿಯನ್ನೇರಿದೆವು. ಬಂಡಿ ಮುಂದೆ ಸಾಗಿದಂತೆ ನನ್ನ ತಾಯಿ ಮತ್ತು ಮನೆಯನೆನಪಾಯಿತು. ನಮ್ಮ ಆನಂದಮಯ ಮನೆಯನ್ನೂ, ಮಮತೆಯ ಮಾತೆಯನ್ನೂ ಬಿಟ್ಟು ಪರಸ್ಥಳದಲ್ಲಿ ಸ್ವೇಚ್ಛೆಯಿಂದ ದಿನಕಳೆದುಆನಂದಿಸಿದ್ದನ್ನು ಗ್ರಹಿಸಿ ನೋಡಿದಂತೆ, ನಾನು ನಮ್ಮ ಮನೆ, ನನ್ನ ತಾಯಿಗೆ ಕೃತಘ್ನನೇ ಆಗಿಬಿಟ್ಟೆನೋ ಎಂಬ ಪಶ್ಚಾತ್ತಾಪವೂಆಗತೊಡಗಿತು. ಆದರೂ ತಾಯಿಯನ್ನು ಗ್ರಹಿಸಿದಂತೆಲ್ಲ ಅವಳ ಪ್ರೇಮ ವಾತ್ಸಲ್ಯದ ನಿರೀಕ್ಷಣೆಯಿಂದ ಮುಂದೆ ಸಿಗುವ ಸಂತೋಷವನ್ನುಕುರಿತು ನನ್ನಲ್ಲಿ ಉದ್ವೇಗವೇ ಉಂಟಾಗತೊಡಗಿತು. ಬ್ಲಂಡರ್ಸ್ಟನ್ನಿನ ಚಿರಪರಿಚಿತ ಮರಗಳನ್ನು ಕಾಣಲು ಪ್ರಾರಂಭವಾಗಿ ಕೊನೆಗೆನಮ್ಮ ಮನೆಯೇ ಎದುರು ನಿಂತಾಗ ನನ್ನ ಹೃದಯವೇ ಮನೆ ಕಡೆ ಹಾರಿತು. ನಾನು ಎಷ್ಟೇ ಉತ್ಸಾಹಭರಿತನಾಗಿದ್ದರೂ ಪೆಗಟಿ ಮಾತ್ರದುಃಖವನ್ನೇ ನಿರೀಕ್ಷಿಸುತ್ತಿದ್ದವಳಂತೆ ಮೌನವಾಗಿ ಉಳಿದಿದ್ದಳು. ನನ್ನೊಡನೆ ಅವಳು ಮಾತಾಡುತ್ತಿದ್ದ ಕ್ರಮವೆಲ್ಲ ನನ್ನ ಮುಂದಿನ ದುಃಖಶಮನಕ್ಕಿರುವ ಮಾರ್ಗದಲ್ಲಿದ್ದಂತೆ ನನಗೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ನಾವು ಮನೆಗೆ ತಲಪುವಾಗ ಸಂಜೆಯಾಗಿತ್ತು. ಅಂದಿನಸಂಜೆಯಲ್ಲಿ ಮೋಡಗಳು ಮುಸುಕಿದ್ದು, ಬೆಳಕಿಗಿಂತ ಕತ್ತಲೇ ಮನೆಯನ್ನು ಆವರಿಸಿತ್ತು. ಮನೆ ಮೆಟ್ಟಲು ಹತ್ತಿದ ಕೂಡಲೇ ಬಾಗಿಲುಗಳನ್ನುನೂಕಿಕೊಂಡು, ಅಮ್ಮನನ್ನು ಕರೆಯುತ್ತಾ, ತವಕದಿಂದ ಮುಂದೋಡಿದೆ. ನನ್ನ ಸ್ವರವನ್ನು ಕೇಳಿ ಅಮ್ಮ ಬರುತ್ತಿರುವಳೆಂದು ಮುಂದೆನೋಡುವಾಗ ಅಪರಿಚಿತ ಕೆಲಸದವಳೊಬ್ಬಳು ಎದುರು ಬಂದಳು. ಹೊಸ ಹೆಂಗಸನ್ನು ಕಂಡು ಆಶ್ಚರ್ಯವಾಯಿತು. ನಾನುಉತ್ಸಾಹಭಂಗಿತನಾಗಿ ಜತೆಯಲ್ಲಿದ್ದ ಪೆಗಟಿಯನ್ನು ಕೇಳಿದೆ –
"ಏನು ಪೆಗಟಿ, ಅಮ್ಮ ಮಿ. ಗ್ರೈಪರರ ಮನೆಯಿಂದ ಇನ್ನೂ ಬರಲಿಲ್ಲವೇ?"

“ಡೇವೀ, ನಾನು ಈ ಮೊದಲೇ ನಿನಗೆ ತಿಳಿಸಬೇಕಾದುದನ್ನು ಹೆದರಿಯೇ ನಿನಗೆ ತಿಳಿಸಿರುವುದಿಲ್ಲ” ಅಂದಳು.
ನನ್ನ ಕಣ್ಣಿನಲ್ಲಿ ನೀರು ತುಂಬಿತು. “ಅಮ್ಮ ಸತ್ತಿರುವಳೇ, ಪೆಗಟಿ?” ಎಂದು ಕೇಳಿದೆನು.
“ಇಲ್ಲ ಮಗು, ಇದ್ದಾಳೆ – ನಿನಗೊಬ್ಬ ಅಪ್ಪ ಬಂದಿದ್ದಾನೆ,” ಎಂದು ಹೇಳುತ್ತಾ ಪೆಗಟಿ ಅತ್ತಳು. ನನಗೂ ಬಲವಾಗಿ ಅಳು ಬಂತು. ಅಪ್ಪಬಂದಿದ್ದಾನೆ ಎಂಬ ಮಾತನ್ನು ಕೇಳಿದೊಡನೆಯೇ ಹೆದರಿಕೆ, ದುಃಖ, ತಂದೆಯ ಗೋರಿ, ಸತ್ತವರು ಎದ್ದು ಬಂದದ್ದನ್ನು ಕಂಡರೆಆಗಬಹುದಾದ ಮನಸ್ಸಿನ ಪರಿಸ್ಥಿತಿ – ಇವೆಲ್ಲವುಗಳ ನಾನಾ ಭಾವನೆಗಳು ಮನಸ್ಸಿನಲ್ಲಿ ಎದ್ದು ತೋರಿದುವು.
ನನ್ನನ್ನು ಸಮಾಧಾನಪಡಿಸದೆ ನಿರ್ವಾಹವಿಲ್ಲವೆಂದು, ನನ್ನನ್ನು ಅಪ್ಪಿ, ಆಲಿಂಗಿಸಿ, ಹೊಸ ಅಪ್ಪನನ್ನೂ ಅಮ್ಮನನ್ನೂ ತೋರಿಸುವೆನುಎಂದಂದುಕೊಂಡು, ನಮ್ಮ ಮನೆಯ ಮುಂಭಾಗದ ಸಡಗರದ ಕೋಣೆಗೆ ಕರೆದುಕೊಂಡು ಹೋಗಿ, ಬಾಗಿಲನ್ನು ತೆಗೆದು, ನನ್ನನ್ನು ಒಳಗೆಬಿಟ್ಟಳು.

ಒಳಗೆ ನನ್ನಮ್ಮನೂ ಮಿ. ಮರ್ಡ್ಸ್ಟನ್ನರೂ ತಮ್ಮ ಪಾದಗಳನ್ನು ಅಗ್ಗಿಷ್ಟಿಕೆಯ ಅಂಚಿನಲ್ಲಿಟ್ಟುಕೊಂಡು ಎದುರುಬದಿರಾಗಿ ಕುಳಿತಿದ್ದರು.ತಾಯಿ ತಲೆ ಅಡಿಗೆ ಹಾಕಿಕೊಂಡು ಏನೋ ಹೊಲಿಯುತ್ತಿದ್ದಳು.
ನನ್ನನ್ನು ಕಂಡಕೂಡಲೆ ತಾಯಿ ಸಂತೋಷಪಡುತ್ತಾ–
“ಬಾ ಮಗನೆ, ಮುದ್ದು,” ಎಂದಳು.
“ಕ್ಲೇರಾ, ಮನಸ್ಸನ್ನು ಬಿಗಿಹಿಡಿಯಬೇಕು” ಎಂದು ಮಿ. ಮರ್ಡ್ಸ್ಟನ್ನರು ನನ್ನ ತಾಯಿಗೆ ಬೋಧನೆಯಿತ್ತರು.
ನಾನು ಮಿ. ಮರ್ಡ್ಸ್ಟನ್ನರನ್ನು ನೋಡದೆ, ತಾಯಿಯ ಬಳಿಗೆ ಹೋಗಿ ತಾಯಿಯನ್ನು ಅಪ್ಪಿ, ಮುತ್ತಿಟ್ಟು ಸಂತೋಷಪಟ್ಟೆ. ಮಿ.ಮರ್ಡ್ಸ್ಟನ್ನರು ನಮ್ಮಿಬ್ಬರನ್ನೂ ಎಡೆಬಿಡದೆ ನೋಡುತ್ತಿದ್ದರೆಂದು ನಮಗಿಬ್ಬರಿಗೂ ಗೊತ್ತಿದ್ದಿತು. ನಮ್ಮ ಪ್ರೀತಿಯು ಅವರು ಮೆಚ್ಚದವಿಷಯವೆಂಬುದು ಹೇಗೋ ತಿಳಿದಿದ್ದೆವು.
“ಡೇವಿಡ್, ಹೇಗಿದ್ದೀಯಾ?” ಎಂದು ಮಿ. ಮರ್ಡ್ಸ್ಟನ್ನರು ವಿಚಾರಿಸಿದರು.
ಸಾಂಪ್ರದಾಯಿಕವಾಗಿ ನಾನು “ಕ್ಷೇಮ” ಎಂದುತ್ತರಕೊಟ್ಟು ಹಸ್ತ ಲಾಘವವನ್ನಿತ್ತೆ. ನನಗೂ ನನ್ನ ತಾಯಿಗೂ ಸಾಂಪ್ರದಾಯಿಕ ಶಿಸ್ತಿನನಡೆ, ನುಡಿಗಳಿಗಿಂತ ಹೆಚ್ಚು ಯಾವ ಸ್ವಾತಂತ್ರ್ಯವೂ ಇರಲಿಲ್ಲವೆಂದು ನಮಗೆ ಗೊತ್ತಿತ್ತು. ಅಲ್ಲಿ ನಿಲ್ಲಲಾರದ ನಾನು ಕೋಣೆಯಿಂದಹೊರಗೆ ಬಂದೆ. ಹೊರಗೂ ಯಾರೂ ಮಾತಾಡಲು ಜನರಿಲ್ಲದಿದ್ದುದರಿಂದ ನನ್ನ ಚಿರಪರಿಚಿತ ಮರಗಿಡಗಳನ್ನಾದರೂನೋಡೋಣವೆಂದು ಕಿಟಕಿಯ ಹೊರಗೆ ನೋಡಿದೆ. ಅಂಗಳದ ಕರೆಯಲ್ಲಿದ್ದ ಗಿಡಗಳು ಮಂಜಿನಿಂದಲೂ ಚಳಿಯಿಂದಲೂ ಮುದುಡಿಬಗ್ಗಿದ್ದುವು.

ಉಪ್ಪರಿಗೆಯ ನನ್ನ ಮಲಗುವ ಕೋಣೆಗೆ ಹೋಗಿ ನೋಡಿದೆನು. ಅಲ್ಲೂ ಅನೇಕ ಬದಲಾವಣೆ ನಡೆದಿತ್ತು. ನನ್ನ ಮಲಗುವ ಸ್ಥಳವನ್ನೇಬದಲಾಯಿಸಿದ್ದರು. ಮನೆಯಲ್ಲಿ ನಾನಿದ್ದ ಹಿಂದಿನ ದಿನಗಳ ಸವಿನೆನಪಿನಿಂದಲಾದರೂ ಇಂದಿನ ಕಹಿಯನ್ನು ಸ್ವಲ್ಪವಾದರೂ ಕಡಿಮೆಮಾಡಿಕೊಳ್ಳೋಣವೆಂದು ಮನೆಯ ಎಲ್ಲಾ ಭಾಗವನ್ನೂ, ವಠಾರವನ್ನೂ ಸುತ್ತಿ ನೋಡಿದೆ. ಎಲ್ಲೆಲ್ಲೂ ಬದಲಾವಣೆ ನಡೆದಿತ್ತು. ಮನೆಯಅಂಗಳದ ಮೂಲೆಗೆ ಹೋಗುವಾಗ ಹಠಾತ್ತಾಗಿ ಒಂದು ನಾಯಿ ನನ್ನನ್ನು ಕಂಡು ಬೊಗಳಿ ಹಾರಿಬಿತ್ತು. ನಾಯಿ ಗೂಡಿನೊಳಗಿದ್ದುದರಿಂದನನ್ನನ್ನು ಕಚ್ಚದಿದ್ದರೂ ಮಹಾಕೋಪದಿಂದ ಬೊಗಳಿತು. ಆ ನಾಯಿಗೂ ಅವನಿಗಿದ್ದಂಥ ಕಪ್ಪು ಕೂದಲೂ ಭಯಂಕರ ಸ್ವರವೂ ಇತ್ತು –ಅದೂ ಸಹ ನನ್ನನ್ನು ಕಂಡ ಮಾತ್ರಕ್ಕೇ ಕೋಪಗೊಂಡಿತ್ತು!

ಅಧ್ಯಾಯ ನಾಲ್ಕು

ನನ್ನ ಅಭಿಮಾನಭಂಗ

ನಾನು ನನ್ನ ಕೋಣೆಗೆ ತಲಪುವವರೆಗೂ ನಾಯಿ ಬೊಗಳುತ್ತಲೇ ಇತ್ತು. ಕೋಣೆಯಲ್ಲಿಒಬ್ಬಂಟಿಗನಾಗಿ ಕುಳಿತನಂತರ ನನ್ನ ದುಃಖವನ್ನೂ ಕೋಣೆಯೊಳಗಿನವಸ್ತುಗಳೆಲ್ಲವನ್ನೂ ವಿಚಾರ ದೃಷ್ಟಿಯಿಂದ ನೋಡತೊಡಗಿದೆ. ನನಗಾಗಿಕೋಣೆಯೊಳಗೆ ಇಡಲಾಗಿದ್ದ ವಸ್ತುಗಳೆಲ್ಲ ಹಳೆಯವೂ, ರೂಪವಿಲ್ಲದವೂ ಆಗಿದ್ದುವು.ಈ ದುಃಖದ ಹಿನ್ನೆಲೆಯಲ್ಲೇ ಸದ್ಯ ಬಿಟ್ಟುಬಂದಿದ್ದ ಯಾರ್ಮತ್ತೂ ಅಲ್ಲಿನ ಹಿಂದಿನ ಸುಖಸಂತೋಷದ ದಿನಗಳೂ ನಿಂತಿದ್ದುವು. ನನ್ನ ಪ್ರೀತಿಯ ಎಮಿಲಿ ನನ್ನೆದುರೇಸ್ಫುರದ್ರೂಪದಿಂದ ನಿಂತಿರುವಂತೆ ತೋರಿದಳು. ಎಮಿಲಿಯ ಜತೆಗೆ ನನ್ನ ಅಳುವೂಮತ್ತೊಬ್ಬ ಜತೆಗಾರನಂತೇ ಭಾಸವಾಗುತ್ತಿತ್ತು. ಕೊನೆಗೆ ಅಳುವುದೇ ನನ್ನಸ್ವಭಾವವೆಂದೂ ತೋರಿತು. ಹೀಗೆ ಅಳುತ್ತಾ, ಬಚ್ಚಿ, ಬೆಂಡಾಗಿ ಮಲಗಿ ನಿದ್ರಿಸಿದೆ.

ಹೀಗೆ ಎಷ್ಟು ಹೊತ್ತು ನಿದ್ರಿಸಿದೆನೆಂಬ ನೆನಪು ನನಗಿಲ್ಲ. ಈ ನಿದ್ರೆಯಲ್ಲಿದ್ದಾಗಲೇತಾಯಿಯೂ ಪೆಗಟಿಯೂ ಬಂದು ನನ್ನನ್ನು ಮೆಲ್ಲಗೆ ಎಬ್ಬಿಸಿದರು. ನಾನುತಾಯಿಯನ್ನು ಕುರಿತು ಸ್ವಲ್ಪ ಸಿಟ್ಟಿನಿಂದಲೇ ಇದ್ದೆನು. ತನ್ನ ಮಧುಮಾಸದ ಮಧ್ಯವೇತನ್ನ ಪ್ರೇಮದ ಪತಿ ಮಿ. ಮರ್ಡ್ಸ್ಟನ್ನರ ವಿರೋಧವಾಗಿ ನನ್ನನ್ನು ಪೆಗಟಿಹುರಿದುಂಬಿಸಬಾರದಿತ್ತೆಂದು ತಾಯಿ ಪೆಗಟಿಯನ್ನು ಬೈದಳು. ಪೆಗಟಿಯು ತನ್ನನಿರ್ದುಷ್ಟ ವರ್ತನೆಯನ್ನು ಮನಬಿಚ್ಚಿ ವಿವರಿಸತೊಡಗಿದಳು. ತಾಯಿಯು ನನ್ನನ್ನುಸಂತೈಸತೊಡಗಿದಳು. ನಾನು ಸ್ವಲ್ಪ ಸ್ವಲ್ಪ ಅಳುತ್ತ ತಾಯಿಯ ಸಮೀಪಕ್ಕೆ ಹೋಗಿಕುಳಿತೆನು. ನಾನು ಹೀಗೆ ಕುಳಿತು ತಾಯಿಯನ್ನು ಮುಟ್ಟುವಷ್ಟರಲ್ಲಿ ಒಂದು ಅಪರಿಚಿತಕೈ ನನ್ನ ಹೆಗಲ ಮೇಲೆ ಬಂದಿತು. ನಾನು ಅಳುವನ್ನು ನಿಲ್ಲಿಸುತ್ತಿದ್ದಾಗ ಮಿ.ಮರ್ಡ್ಸ್ಟನ್ನರಂದರು –

"ಕ್ಲೇರಾ, ಪ್ರಿಯಳೇ, ಮನಸ್ಸನ್ನು ಹಿಡಿತದಲ್ಲಿಡು – ತಪ್ಪು ಪ್ರೇಮ, ಅತಿಪ್ರೇಮದಿಂದ ಬಾಲಕನನ್ನು ಕೆಡಿಸಬೇಡ."

ನಾನು ದಾರಿತಪ್ಪಿ ನಡೆದಿರುವುದಾಗಿ ತಾಯಿ ಈ ಮಾತುಗಳಿಗೆ ಉತ್ತರವಾಗಿ ಹೇಳಿಕೊಂಡಳು. ಆ ಕಠಿಣ ಮನಸ್ಸಿನ ಮರ್ಡ್ಸ್ಟನ್ನರಕೈಯಲ್ಲಿ ಮನೋಧಾರ್ಢ್ಯವಿಲ್ಲದ, ಮೃದು ಮನಸ್ಸಿನ ನನ್ನ ತಾಯಿ, ಮರ್ಡ್ಸ್ಟನ್ನರು ತಿದ್ದಿ ಸರಿಪಡಿಸಲು ನಿಂತಿದ್ದ ಒಂದು ಮಯಣದಮೂರ್ತಿಯೇ ಆಗಿದ್ದಳು. ತಾಯಿಯ ಬುದ್ಧಿ, ಮನಸ್ಸೆಲ್ಲ ಮರ್ಡ್ಸ್ಟನ್ನರ ಮುಷ್ಟಿಯ ಹಿಡಿತದಲ್ಲಿದ್ದುವು.

ಮಿ. ಮರ್ಡ್ಸ್ಟನ್ನರು ತಾಯಿಯನ್ನು ಹೊರಗೆ ಕಳುಹಿಸಿದರು; ಅನಂತರ ಪೆಗಟಿಯನ್ನು ನೋಡಿ –

"ಈಗ ಅವಳು ಮಿಸೆಸ್ ಡೇವಿಡ್ ಕಾಪರ್ ಫೀಲ್ಡ್ ಅಲ್ಲ – ಈಗವಳು ಮಿಸೆಸ್ ಮರ್ಡ್ಸ್ಟನ್, ತಿಳಿಯಿತೇ" ಅಂದರು. ಮತ್ತುಪೆಗಟಿಯನ್ನು ಕೋಣೆಯಿಂದ ಹೊರಗೆ ಕಳುಹಿಸಿದರು. ಅನಂತರ ನನ್ನನ್ನು ನೋಡಿ ನಾನು ಮುಖ ತೊಳೆದುಬರುವಂತೆಆಜ್ಞಾಪಿಸಿದರು. ನಾನು ಕಣ್ಣೀರು ಸುರಿಸಿ ಮುಖ ತೊಳೆಯಬೇಕಾದಂತೆ ಆಗಿರುವೆನೆಂದು ಒಪ್ಪಲು ತಯಾರಿರಲಿಲ್ಲ. ಸ್ವಲ್ಪವಿರೋಧಿಸುತ್ತಾ ಮುಖವನ್ನು ತೊಳೆದು ಬಂದೆ. ಅನಂತರ ಮಿ. ಮರ್ಡ್ಸ್ಟನ್ನರು ಕೇಳಿದರು –

"ಒಂದು ಕುದುರೆ ನಾನು ಹೇಳಿದಂತೆ ನಡೆಯದಿದ್ದರೆ ನಾನೇನು ಮಾಡುವೆನು ಗೊತ್ತಿದೆಯೇ?"

"ಇಲ್ಲ."

"ಬಡಿದು ಬಗ್ಗಿಸುವೆನು – ಅದರ ಮೈ ರಕ್ತ ಸುರಿದರೂ ಚಿಂತೆಯಿಲ್ಲ. ನನ್ನ ಇಚ್ಛೆಯಂತೆ ಅದು ನಡೆಯತಕ್ಕದ್ದೇ ಸರಿ, ತಿಳಿಯಿತೇ – ಈವಿಧದ ಅಭಯವನ್ನು ಕೊಡುತ್ತಾ ಮಿ. ಮರ್ಡ್ಸ್ಟನ್ನರು ನನ್ನ ಕೈ ಹಿಡಿದು ಕರೆದುಕೊಂಡು ಹೋಗಿ ತಾಯಿಯ ಬಳಿ ಬಿಟ್ಟು –

"ನಮ್ಮ ಮಧುಮಾಸದಲ್ಲೇ ಇಂಥ ದುಷ್ಟರಿಂದ ನಾವು ಬಾಧಿಸಲ್ಪಡಬಾರದು. ಇವನನ್ನು ಸರಿದಾರಿಗೆ ತರೋಣ" ಅಂದರು.

ಎಳೆಯ ವಯಸ್ಸಿನ ನನ್ನ ಮೇಲೆ ಆ ಕಠಿಣ ವಾಕ್ಪ್ರಯೋಗ, ಅಂಥ ಭಯೋತ್ಪಾದನೆ ನಡೆಸದಿರುತ್ತಿದ್ದರೆ – ಇವುಗಳ ಬದಲುಮೃದುಮಾತು, ಸೌಮ್ಯ ವರ್ತನೆಗಳನ್ನು ಸ್ವಲ್ಪವಾದರೂ ತೋರಿಸಿದ್ದರೆ ನನ್ನ ಮುಂದಿನ ಜೀವನವೃತ್ತಾಂತವೇ ಬೇರೆಯಾಗಬಹುದಿತ್ತು.ಸರ್ವಸಾಧಾರಣವಾಗಿ ಚಿಕ್ಕವರನ್ನು ಸನ್ಮಾರ್ಗಕ್ಕೆ ಒಯ್ಯುವುದೆಂಬ ಕಾರ್ಯವೇ ಅಗತ್ಯವಿಲ್ಲ – ಅವರ ನಿಷ್ಕಲ್ಮಷ ಹೃದಯದ ಬಲವೇಸನ್ಮಾರ್ಗದ ಕಡೆಗೆ ಇರುವುದು, ಸ್ವಾಭಾವಿಕವಾದ ಮಾರ್ಗವನ್ನನುಸರಿಸದೆ ಎಷ್ಟೋಂದು ಜನ ಹಿರಿಯರು ದುಷ್ಟ, ಅಥವಾ ಕ್ರೂರವಚನಗಳನ್ನಾಡಿ ಬಾಲಕರ ಭವಿಷ್ಯವನ್ನೇ ಹಾಳು ಮಾಡುತ್ತಾರೆ!

ಈ ದಿನವೇ ಮಿ. ಮರ್ಡ್ಸ್ಟನ್ನರ ತಂಗಿಯೂ ಅವಳ ಆಗಮನವನ್ನು ಮಿ. ಮರ್ಡ್ಸ್ಟನ್ನರು ನಿರೀಕ್ಷಿಸುತ್ತಿದ್ದಂತೆ, ನಮ್ಮ ಮನೆಗೆ ತಕ್ಕಸಮಯದಲ್ಲೇ ಬಂದಳು. ಈ ಅಣ್ಣ ತಂಗಿಯರ ವಿಷಯ ಆಗ ನನಗೆ ಏನೂ ಗೊತ್ತಿರದಿದ್ದರೂ ಕೆಲವು ಕಾಲಾನಂತರ ಗೊತ್ತಾಯಿತು. ಆವಿಷಯ ಇಲ್ಲಿ ಹೇಳುವೆನು. ಅಣ್ಣ ತಂಗಿಯರಿಗೆ ಒಂದು ವೈನ್ ಕಂಪೆನಿಯಲ್ಲಿ ತುಂಬಾ ಪಾಲುಗಳಿದ್ದುವು. ತಂಗಿಗೆ ಮದುವೆಯಾಗಿರಲಿಲ್ಲ– ಮತ್ತು ಮದುವೆಯಾಗುವ ಆಲೋಚನೆಯೂ ಇರಲಿಲ್ಲ. ಈ ಕಾರಣದಿಂದ ಅವಳ ಸ್ವಂತ ಹಣವೂ ತನಗೆ ಸಿಕ್ಕಬಹುದೆಂದು ಸಹಮಿ.ಮರ್ಡ್ಸ್ಟನ್ನರು ತಂಗಿಯ ಸಂಗಡ ಬಹು ವಿನಯ, ಪ್ರೀತಿ, ಗೌರವಗಳಿಂದ ನಡೆಯುತ್ತಿದ್ದರು. ಅಣ್ಣ ತಂಗಿಯರ ರೂಪ, ಸ್ವರ, ನಡೆ,ನುಡಿಗಳೆಲ್ಲ ಬಹುವಾಗಿ ಹೋಲುತ್ತಿದ್ದುವು. ತಂಗಿ ಬರುವಾಗ್ಗೆ ಬೀಗಮುದ್ರೆಯ ಬಂದೋಬಸ್ತುಗಳಿದ್ದ ಪೆಟ್ಟಿಗೆಗಳನ್ನೂ, ಉಕ್ಕಿನಬಾಯಿಯಿದ್ದ ಹಣದ ಚೀಲಗಳನ್ನೂ ತಂದಿದ್ದಳು. ಅವಳ ಪೆಟ್ಟಿಗೆಗಳು, ಚೀಲಗಳಿದ್ದ ಸರಪಣಿಗಳು, ಕೈಯ್ಯಲ್ಲಿದ್ದ ಬೀಗದ ಕೈ ಗೊಂಚಲು– ಇವೆಲ್ಲವೂ ಉಕ್ಕಿನವೇ ಆಗಿದ್ದುವು. ಹೆಂಗುಸು ಅಣ್ಣನಷ್ಟೇ ದೀರ್ಘಕಾಯಳಾಗಿದ್ದಳು. ಅವಳು ಹೆಂಗುಸಾಗಿದ್ದ ಒಂದೇ ಕಾರಣದಿಂದಅವಳಿಗೆ ಸಮಾಜವೂ, ಸ್ವಭಾವವೂ ಮೀಸೆಗಳನ್ನು ಹೊರುವ ಗೌರವವನ್ನು ಕೊಟ್ಟಿರಲಿಲ್ಲ. ಆದರೆ, ಅಣ್ಣನಿಂದ ನಮ್ಮ ಮನೆಯಯಜಮಾನಿಕೆಯನ್ನೂ ಪಡೆದ ಈ ಹೆಂಗುಸು ತನ್ನ ಮೀಸೆಯ ಭಾಗದ ಕೂದಲನ್ನು, ಮೊದಲೇ ಇದ್ದ ಹುಬ್ಬಿಗೆ ಸೇರಿಸಿಕೊಂಡು,

ಬಹುದಪ್ಪ ಹುಬ್ಬುಗಳಿಂದ, ಮನೆಯನ್ನೂ, ಮನೆಯ ಜನ ಸಮಸ್ತರನ್ನೂ ಹೆದರಿಸಿ ನಡೆಸಿಬರುವ ಒಂದು ಉಕ್ಕಿನ ಮೂರ್ತಿಯೇ ಆಗಿದ್ದಳು.ಅಣ್ಣ ತಂಗಿಯ ಪರಿಚಯವನ್ನು – ನಮಗೆ ಅಗತ್ಯ ತೋರದಿದ್ದರೂ, ಶಿಸ್ತು ಸ್ಥಾಪನೆಗಾಗಿ – ಮಾಡಿಕೊಟ್ಟರು. ಅಣ್ಣ ತಂಗಿಯರ ಈಉಕ್ಕಿನಗುಂಡು, ಉಕ್ಕಿನ ಕಲ್ಲುಗಳ ಮಧ್ಯೆ ಮೃದುವಾದ ನನ್ನ ತಾಯಿ, – ಆ ಉಕ್ಕಿನ ಹೆಂಗುಸು ಮನೆಗೆ ಕಾಲಿಟ್ಟ ಕ್ಷಣದಿಂದಲೇ – ಸಿಕ್ಕಿ,ಪುಡಿಯಾಗಿ, ಅವರು ಇಚ್ಛೆಪಟ್ಟ ರೂಪವನ್ನು ಪಡೆಯತೊಡಗಿದಳು.

ನಮ್ಮ ಮನೆಯ ಅಧಿಕಾರವನ್ನು ಆ ಉಕ್ಕಿನ ಹೆಂಗುಸು ಪಡೆದ ಕ್ರಮ ಒಂದು ಆಶ್ಚರ್ಯತರದ್ದು. ತನ್ನಣ್ಣನಿಂದ ಪರಿಚಯಮಾಡಿಸಿಕೊಂಡನಂತರ ಮಿಸ್ ಮರ್ಡ್‌ಸ್ಟನ್ನಳು ನನ್ನ ತಾಯಿಯನ್ನು ಉದ್ದೇಶಿಸಿ –

"ಕ್ಲೇರಾ, ನೀನು ಪೂರಾ ಚಿಕ್ಕವಳು – ಗೃಹಕೃತ್ಯದ ಅನುಭವವಿಲ್ಲದವಳು. ನನಗೆ ಸಾಧ್ಯವಿರುವಷ್ಟೆಲ್ಲ ಸಹಕಾರವನ್ನು ಈ ಮನೆಯಲ್ಲಿನಾನು ಪತಿ–ಪತ್ನಿಯರಿಬ್ಬರಿಗೂ ಕೊಟ್ಟು ಬರುವೆನು – ಅದು ನನ್ನ ಪಾಲಿನ ಕರ್ತವ್ಯ. ಅದಕ್ಕಾಗಿ ನೀನು ನನ್ನನ್ನು ವಂದಿಸುವಅಗತ್ಯವಿಲ್ಲ. ನಿನ್ನಲ್ಲಿರುವ ಬೀಗದ ಕೈಗಳನ್ನೆಲ್ಲಾ ಇತ್ತ ಕೊಡು. ನಿನ್ನ ಮೃದುಮನಸ್ಸು ಇಂಥ ಜವಾಬ್ದಾರಿಯಿಂದ ವಿರಹಿತವಾಗಿ,ಹಗುರವಾಗಿ, ನೀನು ಅಣ್ಣನಲ್ಲಿ ಅನುರಕ್ತಳಾಗಿರು," ಅಂದಳು.

ಉಪಾಯ ತೋರದೆ ತಾಯಿ ಬೀಗದ ಕೈಗಳನ್ನೆಲ್ಲ ಮಿಸ್ ಮರ್ಡ್‌ಸ್ಟನ್ನಳಿಗೆ ಕೊಟ್ಟಳು. ಅವಳ ಉಕ್ಕಿನ ಭಂಡಾರ ಆ ಮಟ್ಟಿಗೆದೊಡ್ಡದೂ ಆಯಿತು. ಈ ವರ್ತನೆ ಮೇಲಿಂದ ಮೇಲೆ ಗ್ರಹಿಸಿದ್ದಾದರೆ ಬಹು ಸಾಧಾರಣದ್ದೆಂದು ತೋರಿದರೂ, ವಸ್ತು ಸ್ಥಿತಿಯಲ್ಲಿ ಬಹುಕ್ರೂರತರದ್ದೇ ಆಗಿತ್ತು. ನನ್ನ ತಾಯಿಗೆ ಇದರಿಂದ ಕೇವಲ ಎರಡನೆ – ಅಥವಾ – ಕೀಳುಸ್ಥಾನ ಕೊಡಲಾಯಿತು. ಈ ವರ್ತನೆಯಅರ್ಥವನ್ನು ತಾಯಿ ಅರಿತು ಅತ್ತಳು. ಈ ರೀತಿ ಅಂದಿನಿಂದ ತಾಯಿ, ಮಕ್ಕಳಾದ – ಆವರೆಗೆ ಮನೆಯ ಯಜಮಾನರಾದ –ನಾವಿಬ್ಬರೂ ಆ ಮನೆಯ ಉಪಕರಣಗಳು ಮಾತ್ರ ಆಗಿಬಿಟ್ಟೆವು.

ಬಾಲ್ಯದಿಂದಲೂ ನಾನು ಆ ಮನೆಯಲ್ಲಿ ಕಂಡು ಬರುತ್ತಿದ್ದ ದಿನವಹಿಯ ಕ್ರಮಗಳೆಲ್ಲ ತಪ್ಪಿದುವು. ಮನೆಯ ಸಾಮಾನುಗಳೆಲ್ಲಾ ಹೊಸಕ್ರಮದಲ್ಲಿ ಇಡಲಾದುವು. ನಮ್ಮ ಪೈಕಿ ಯಾರೋ ಆ ಮನೆಯಲ್ಲಿ ಒಬ್ಬ ಕೆಲಸದವನನ್ನು ಅಡಗಿಸಿಟ್ಟು ಕೆಲಸಮಾಡಿಸಿಕೊಳ್ಳುತ್ತಿದ್ದೇವೆಂಬ ಸಂಶಯದಿಂದ ಮಿಸ್ ಮರ್ಡ್‌ಸ್ಟನ್ನಳು ಆ ಕೆಲಸದ ಗಂಡಸನ್ನು ಸದಾ ಹುಡುಕುತ್ತಿರುವಂತೆಎಚ್ಚರದಲ್ಲಿರುತ್ತಿದ್ದಳು. ತಾನು ಗಂಡು ಸ್ವಭಾವದವಳಾಗಿದ್ದುದರಿಂದ ಈ ವಿಷಯದಲ್ಲಿ ಬಹು ಚಾತುರ್ಯವನ್ನರಿತವಳೆಂದುಗ್ರಹಿಸಿಕೊಂಡು ಹಠಾತ್ತಾಗಿ ಮನೆಯ ಕೋಣೆಗಳನ್ನೂ, ಕಪಾಟುಗಳನ್ನು ಸಂದರ್ಶಿಸುವುದೂ, ಬಾಗಿಲನ್ನು ಹಠಾತ್ತಾಗಿ ತೆರೆದುನೋಡುವುದೂ, ಇತ್ಯಾದಿ ತನಿಕೆಯನ್ನು ಆಗಾಗ ಮಾಡುತ್ತಿದ್ದಳು. ಮಿಸ್. ಮರ್ಡ್‌ಸ್ಟನ್ನಳು ನಿದ್ರಿಸುವಾಗ ಒಂದು ಕಣ್ಣನ್ನುಮನೆಕಾವಲಿಗಾಗಿ ತೆರೆದಿಟ್ಟೇ ನಿದ್ರಿಸುವಳು ಎಂದು ಪೆಗಟಿ ನನಗೆ ಗುಟ್ಟಾಗಿ ತಿಳಿಸಿದ್ದಳು. ನಾನು ಆ ರೀತಿ ಒಂದೇ ಕಣ್ಣು ಮುಚ್ಚಿ ನಿದ್ರೆಮಾಡಲು ಪ್ರಯತ್ನಿಸಿ ಸೋತು, ಆ ಕಾರಣದಿಂದ ಮಿಸ್ ಮರ್ಡ್‌ಸ್ಟನ್ನಳ ಆ ವಿಷಯದ ಶಕ್ತಿಗಾಗಿ ಮತ್ತಷ್ಟು ಹೆದರಿಕೊಂಡೆನು.

ಅಣ್ಣತಂಗಿಯರ ಜೀವನಮಂತ್ರವೇ ಶಿಸ್ತು ಆಗಿತ್ತು. ಈ ತತ್ವಾನುಷ್ಠಾನದಲ್ಲಿ ಮನುಷ್ಯ, ಮೃಗ, ಪಕ್ಷಿಗಳೆಲ್ಲ ಅವನ ಅಧಿಕಾರಕ್ಕೆ – ಶಿಸ್ತಿಗೆ – ಬಗ್ಗಲೇಬೇಕಾಗಿತ್ತು. ನನ್ನ ತಾಯಿ ಎಳೆಯ ಪ್ರಾಯದವಳೂ, ಸುಂದರಿಯೂ ಆಗಿದ್ದುದರಿಂದ ಅವಳಿಗೆ ನಿಯಮ – ಶಿಸ್ತುಗಳ ಅಗತ್ಯತೆಇತರರೆಲ್ಲರಿಗಿಂತ ಹೆಚ್ಚೇ ಆಗಿತ್ತು. ಈ ಗುರಿಯಿಂದ ನನ್ನ ತಾಯಿಯನ್ನು ಅವರ ಶಿಸ್ತುಗಳಿಗೆ ಒಳಪಡಿಸಿದರು. ಕಪ್ಪು ಪ್ರಧಾನವಾದ ಮಿ.ಮರ್ಡ್‌ಸ್ಟನ್ನರ ಮುಖ ವರ್ಚಸ್ಸಿನಂತೆಯಾ ಅವರ ಶಿಸ್ತು, ನಿಯಮ, ನಿಷ್ಠೆ, ನಡೆ, ನುಡಿಗಳೆಲ್ಲ ಕಪ್ಪು ಪ್ರಧಾನವಾಗಿ – ಮಾರಕವಾಗಿ – ಭಯಂಕರವಾಗಿ ತೋರುತ್ತಿದ್ದುವು. ಇಗರ್ಜಿಗೆ ಹೋಗುವುದೆಂದರೆ ಮೊದಲು ನಮಗೆ ಒಂದು ಸಂತೋಷದ ಮೆರವಣಿಗೆಯೇ ಆಗಿತ್ತು.ಆದರೆ ಇಂದು ನಾವು ಕೈದಿಗಳಂತೆ ದುಃಖದಿಂದ, ಅಣ್ಣ ತಂಗಿಯರ ಎಡೆಬಿಡದ ಕಾವಲಿನಿಂದ, ಇಗರ್ಜಿಗೆ ಹೋಗಿ ಬರಬೇಕಾಗಿದ್ದಿತು.ಇಗರ್ಜಿಗೆ ಹೋಗುವಾಗ ನನ್ನ ನಡಿಗೆ ಸರಿಯಾಗದೆ ರಸ್ತೆಯ ಅತ್ತಿತ್ತ ಸರಿದಾಗ, ಆ ತಂಗಿ, ನನ್ನನ್ನು ಕೈಯಲ್ಲಿ ಮುಟ್ಟಿ ಹೊಲಸುಮಾಡಿಕೊಳ್ಳದಂತೆ, ಅವಳ ಕೈಯ್ಯಲ್ಲಿರುತ್ತಿದ್ದ ಬೈಬಲ್ಲಿನ ಮೂಲೆಗಳಿಂದ ಇರಿದು ಸರಿಮಾಡುತ್ತಿದ್ದಳು. ಇಗರ್ಜಿಯಿಂದ ವಾಪಾಸುಬರುವಾಗಲೂ ಈ ಶಿಸ್ತು ಸಂಪೂರ್ಣ ಜಾರಿಯಲ್ಲಿರುತ್ತಿತ್ತು. ತನ್ನ ದೇಹ ಕಪ್ಪು ಬಣ್ಣ ಪ್ರಧಾನವಾಗಿದ್ದುದರ ಜತೆಗೆ ಆ ತಂಗಿ ಇಗರ್ಜಿಗೆಹೋಗುವಾಗ ಹೆಣಕ್ಕೆ ಮುಚ್ಚುವಂಥ ಕಪ್ಪು ಬಟ್ಟೆಯ ಜೋಲು ಕುಪ್ಪಸವನ್ನು ತೊಟ್ಟು, ಸರ್ವತ್ರ ಅಧಿಕಾರವನ್ನು ಬೀರುತ್ತಿದ್ದಳು.

ಇಗರ್ಜಿಯಿಂದ ಹಿಂತಿರುಗುವ ನಮ್ಮ ಕೂಟವನ್ನು ನೆರೆ ಕರೆಯವರು ಕುತೂಹಲದಿಂದಲೂ – ಸ್ವಲ್ಪ ದುಃಖದಿಂದಲೂ – ನೋಡುತ್ತಿದ್ದರು.ನಮ್ಮನ್ನು ನೋಡಿ ಅವರೊಳಗೇ ಏನೇನೋ ಪಿಸುಮಾತುಗಳನ್ನಾಡಿಕೊಳ್ಳುತ್ತಿದ್ದರು. ನನ್ನ ತಾಯಿಯ ಸುಂದರವಾದ ಮುಖ ಈಗಬಾಡಿರುತ್ತಿತ್ತು. ನಡೆಯುವಾಗ ಬಗ್ಗಿ ನಡೆಯುತ್ತಿದ್ದಳು. ಅಶಕ್ತ – ದುಃಖಪೂರಿತ ನಡೆ, ಎಡೆಬಿಡದೆ ಹಿಂಬಾಲಿಸುತ್ತಿದ್ದ ಶಿಸ್ತು ಇವುಗಳಕುರಿತೇ ಆ ಪಿಸುಮಾತು ನಡೆಯುತ್ತಿರಬೇಕೆಂದು ನಾನು ಊಹಿಸುತ್ತಿದ್ದೆ.

ನನ್ನನ್ನು ವಿದ್ಯಾಭ್ಯಾಸಕ್ಕಾಗಿ ದೂರದ ಒಂದು ಪಾಠಶಾಲೆಗೆ ಕಳುಹಿಸಬೇಕೆಂದು ಅಣ್ಣ ತಂಗಿಯರ ಅಭಿಪ್ರಾಯವಾಗಿತ್ತು. ಆದರೆತಾಯಿಯ ಬೇಡಿಕೆಗಳಿಂದ ನಾನು ಮನೆಯಲ್ಲೇ ತಾಯಿಯಿಂದ ಪಾಠ ಕಲಿಯುತ್ತಿದ್ದೆ. ತಾಯಿಯ ಎರಡನೆ ಮದುವೆಯ ಮೊದಲುನಾನು ಪಾಠ ಕಲಿಯುತ್ತಿದ್ದ ಸಮಯದ ಸಂತೋಷದ ಎದುರು ಇಂದು ಮಿಸ್ ಮರ್ಡ್‌ಸ್ಟನ್ನಳ ಸಮಕ್ಷಮದಲ್ಲಿ – ತಾಯಿಯೇಹೇಳಿಕೊಡುವುದಾಗಿದ್ದರೂ – ಕಲಿಯುವಾಗ ನನಗೆ ಹಿಂಸೆಯೇ ಆಗಿ ಸಮಯ ಭಾರವೆನಿಸುತ್ತಿತ್ತು. ಆ ಹಿಂದಿನ ದಿನಗಳಲ್ಲಿ ಒಂದು ಪಾಠಮುಗಿದು, ಮತ್ತೊಂದಕ್ಕಾಗಿ ದಪ್ಪದ ಪುಟವನ್ನು ಮಗುಚುವಾಗ ನನಗಾಗುತ್ತಿದ್ದ ಆನಂದ– ಹೆಮ್ಮೆ – ಅಷ್ಟಿಷ್ಟಲ್ಲ. ಕಿ, ಔ, ಖ ಅಕ್ಷರಗಳಸುಂದರ ಸುಲಭ ಆಕಾರ, ಅಕ್ಷರಗಳ ಜತೆಯಲ್ಲಿ ಅಚ್ಚಾಗಿರುತ್ತಿದ್ದ ಬಣ್ಣ ಬಣ್ಣಗಳ ಅಲಂಕಾರ, ಮೊಸಳೆ ಪುಸ್ತಕದಂಥ ಸುಂದರ ಕಥೆಗಳದಪ್ಪ ಪುಟಗಳ ಪುಸ್ತಕ, ಎಲ್ಲವೂ ನನ್ನ ಮೆಚ್ಚಿನ, ಸಂತೋಷದ ವಿಷಯಗಳೂ, ವಸ್ತುಗಳೂ ಆಗಿದ್ದುವು. ನನ್ನ ಭವಿಷ್ಯ ಎಂದೂಉತ್ತಮವಾಗುವ ಲಕ್ಷಣಗಳು ತೋರಿ ಬರುತ್ತಿಲ್ಲವೆಂದೆನ್ನುತ್ತಾ, ನನ್ನ ಶಕ್ತಿಯಲ್ಲೂ, ಭವಿಷ್ಯದಲ್ಲೂ ಸಂಪೂರ್ಣ ಸಂಶಯವೇ ಇದೆಯೆಂದುಸದಾ ಕಾದು ನೋಡುತ್ತಿದ್ದ ಮಿಸ್

ಮರ್ಡ್ಸ್ಟನ್ನಳ ಎದುರು ನಾನು ಪಾಠ ಕಲಿಯುವಾಗ ಆಗಿಂದಾಗ್ಗೆ ತಪ್ಪಿ ತಬ್ಬಿಬ್ಬಾಗುತ್ತಿದ್ದೆ. ಈಕಾಲದ ನನ್ನ ಒಂದು ಕಠೋರಾನುಭವವನ್ನು ಮಾತ್ರ ಇಲ್ಲಿ ಹೇಳುತ್ತೇನೆ.

ಪಾಠಕ್ಕಾಗಿ ನನ್ನ ತಾಯಿಯಿದ್ದ ಕೋಣೆಗೆ ಎಂದಿನಂತೆ ಒಂದು ದಿನ ಬೆಳಗ್ಗೆ ಹೋದೆ. ಅಲ್ಲಿ ಮಿ. ಮತ್ತು ಮಿಸ್ ಮರ್ಡ್ಸ್ಟನ್ನರಿದ್ದರು.ತಾಯಿ ನನ್ನ ಪಾಠವನ್ನು ಪ್ರಾರಂಭಿಸಿದಳು. ತಾನೊಂದು ಪುಸ್ತಕವನ್ನು ಓದುತ್ತಿದ್ದವರಂತೆ ಪುಸ್ತಕವನ್ನು ಹಿಡಿದುಕೊಂಡು ಕುಳಿತು ಮಿ.ಮರ್ಡ್ಸ್ಟನ್ನರು ನನ್ನನ್ನು ಓರೆಯಿಂದ ನೋಡುತ್ತಿದ್ದರು. ತಂಗಿ ಉಕ್ಕಿನ ಮಣಿಗಳನ್ನು ಜಪಸರಕ್ಕೆ ಪೋಣಿಸುತ್ತಾ ಕುಳಿತಿದ್ದಳು. ನಾನುಪಾಠಗಳನ್ನೆಲ್ಲ ಕಲಿತೇ ಬಂದಿದ್ದೆ. ಆದರೆ ಇಂಥ ಸನ್ನಿವೇಶದಲ್ಲಿ ಕಲಿತದ್ದನ್ನು ಹೇಳಲು ಪ್ರಾರಂಭಿಸಿದೊಡನೆ ಅಣ್ಣತಂಗಿಯರನ್ನು ಕಂಡು,ಉಕ್ಕಿನ ಮಣಿಗಳು ಸರಿಗೆಯಲ್ಲಿ ಜಾರಿದಂತೆ, ಕಲಿತದ್ದು ಜಾರಲು ಪ್ರಾರಂಭವಾಯಿತು. ನಾನು ಸೋಲಬಾರದೆಂದು ತಾಯಿಪುಸ್ತಕವನ್ನು ಓರೆಯಾಗಿ ಹಿಡಿದು ತೋರಿಸಿದಳು. ಅದನ್ನು ಅಣ್ಣತಂಗಿಯರಿಬ್ಬರೂ ಕಂಡರು. ಅವರು ಅದನ್ನು ಕಂಡರೆಂದು ತಾಯಿಗೆತಿಳಿದೊಡನೆ ಅವಳ ಮುಖ ಗಾಬರಿಯಿಂದ ಕೆಂಪಾಯಿತು. ತಾಯಿಯ ಮುಖವನ್ನು ನೋಡಿದ ಕೂಡಲೇ ನಾನು ಕಲಿತದ್ದೆಲ್ಲಾಸಂಪೂರ್ಣ ಅದೃಶ್ಯವೇ ಆಗಿಹೋಯಿತು. ನಾನು ಏನೇನೋ ಒದರಿದೆ; ಎಲ್ಲರೂ ಗದರಿಸಿದರು. ತಾಯಿ ತುಟಿಗಳನ್ನಲ್ಲಾಡಿಸಿ ಪಾಠಹೇಳಿಕೊಟ್ಟು ನನ್ನನ್ನುಳಿಸಲು ಪ್ರಯತ್ನಿಸಿದಳು.

"ಕ್ಲೇರಾ, ಶಿಸ್ತುಭಂಗ ಮಾಡಬೇಡ – ಎಲ್ಲದಕ್ಕೂ ಕ್ರಮವಿರಬೇಕು ಅಂದರು ಮಿ. ಮರ್ಡ್ಸ್ಟನ್ನರು.

"ಅವನಂತೂ ಮಡ್ಡಿ, ಮೂರ್ಖ. ನೀನೂ ಅವನ ಹಾಗೆ ಆಗಬೇಡ" ಅಂದಳು ಮಿಸ್ ಮರ್ಡ್ಸ್ಟನ್ನಳು.

ತಾಯಿಗೆ ನನ್ನನ್ನು ಕುರಿತು ಯಾವ ಹಿತಚಿಂತನೆಯೂ, ಸಂಬಂಧವೂ ಇಲ್ಲದಿದ್ದಂತೆ ಅಣ್ಣ ತಂಗಿಯರು ಮಾತಾಡಿದರು. ನಾನು ಆಕೊಠಡಿಗೆ ಹೋದದ್ದೇ ಏತಕ್ಕೆಂಬುದೇ ನನಗೆ ಮರೆತುಹೋಗಿತ್ತು. ಮಿಸ್ ಜೇನ್ ಮರ್ಡ್ಸ್ಟನ್ನಳ ಲಂಗ ತಯಾರಿಸಲು ಎಷ್ಟು ಗಜ ಬಟ್ಟೆಬೇಕಾಗಬಹುದು, ಮಿ. ಮರ್ಡ್ಸ್ಟನ್ನರ ಕ್ಷೌರದವನಿಗೆ ಎಷ್ಟು ಸಂಬಳ ಕೊಡುವರು, ಎಂಬಿತ್ಯಾದಿ ಅನೇಕ ವಿಷಯಗಳು ಮನಸ್ಸಿನಲ್ಲಿಮೂಡತೊಡಗಿದವು.

ಮಿ. ಮರ್ಡ್ಸ್ಟನ್ನರು ನನ್ನ ಕೈಯನ್ನು ಹಿಡಿದುಕೊಂಡು

"ಈ ಲೆಕ್ಕ ಮಾಡು – ಗ್ಲೌಸ್ಟರಿನ ಡಬ್ಬಿ ಹಾಲಿಗೆ, ಜೋಡು ಡಬ್ಬಿ ಒಂದಕ್ಕೆ ಅರ್ಧ ಶಿಲಿಂಗ್ ಕ್ರಯವಾದರೆ, ನಾನೂರ ಅರವತ್ತೈದು ಒಂಟಿಡಬ್ಬಿಗಳಿರುವ ಎರಡು ಸಾವಿರದ ಐನೂರ ಏಳು ಡಬ್ಬಿಗಳ ಪೆಟ್ಟಿಗೆಗಳಿಗೆ ಎಷ್ಟು ಪೌಂಡು, ಎಷ್ಟು ಶಿಲಿಂಗ್, ಎಷ್ಟು ಪೆನ್ಸ್?" ಅಂದರು. ನನಗದು ಅರ್ಥವಾಗಲಿಲ್ಲ. ನಾನು ಮಾತಾಡದೆ ನಿಂತುಬಿಟ್ಟೆ. ಮಿ. ಮರ್ಡ್ಸ್ಟನ್ನರು ನನ್ನ ರಟ್ಟೆ ಹಿಡಿದು ಎಳೆದು ಹೊರಗೆ ಹಾಕಿದರು. ಆದಿನ ಮಧ್ಯಾಹ್ನದಲ್ಲಿ ಅದೇ ಗ್ಲೌಸ್ಟರ್ ಹಾಲಿನಲ್ಲಿ ಅದ್ದಿದ್ದ ಬ್ರೆಡ್ ಒಂದು ತುಂಡನ್ನು ಮಾತ್ರ ನನಗೆ ಊಟಕ್ಕಾಗಿ ಕೊಟ್ಟು ನನ್ನ ಮಿದುಳುಶಕ್ತಿಯನ್ನು ವೃದ್ಧಿಸಲು ಪ್ರಯತ್ನಿಸಿದರು. ನನ್ನ ಎಲ್ಲ ಪಾಠಗಳೂ ಸಾಧಾರಣ ಇದೇ ಕ್ರಮದಲ್ಲಿ ಸಾಗುತ್ತಿದ್ದುವು. ಚಿಕ್ಕ ಬಾಲಕರು ಒಟ್ಟಾಗಿಆಡಿದರೆ ಅವರ ಮಿದುಳಿನಲ್ಲೊಂದು ವಿಧದ ವಿಷ ಉತ್ಪನ್ನವಾಗುವುದೆಂದೂ, ಅದೇ ವಿಷದಿಂದ ಕಲಿತ ಪಾಠಗಳನ್ನು ಬಾಲಕರುಮರೆಯುತ್ತಾರೆ ಮಾತ್ರವಲ್ಲದೆ, ಅವರ ಮಿದುಳಿನ ಶಕ್ತಿಯೇ ಕುಂದುವುದೆಂದೂ ಮರ್ಡ್ಸ್ಟನ್ ಸಹೋದರ–ಸಹೋದರಿಯರಅಭಿಮತವಾಗಿತ್ತು. ಈ ಕಾರಣದಿಂದ ನನ್ನನ್ನು ಯಾವ ಬಾಲಕರೊಂದಿಗೂ ಸೇರದಂತೆ ಒಂದು ವಿಧದ ಪಹರೆಯಲ್ಲೇ ಇಟ್ಟಿದ್ದರು.

ನಾನೇನಾದರೂ ಸುಮ್ಮಗೆ ಕುಳಿತದ್ದು, ನಿಂತದ್ದು ಕಂಡರೆ

"ಕ್ಲೇರಾ, ಮನುಷ್ಯನಿಗೆ ಕೆಲಸವಿರಬೇಕು; ಕೆಲಸವಿಲ್ಲದ ಮನಸ್ಸು ಬರಡಾಗುವುದು," ಎಂದು ಹೇಳಿ ಸ್ಲೇಟು, ಪುಸ್ತಕಗಳನ್ನು ಹಿಡಿಸಿದಣಿಸುತ್ತಿದ್ದರು. ಈ ಶಿಸ್ತುಗಳೇ ನನ್ನನ್ನು ಒಬ್ಬ ಹಟವಾದಿ – ಹಟಮಾರಿಯನ್ನಾಗಿ ಮಾಡದಿದ್ದುದು ನನ್ನ ಪುಣ್ಯ. ಹಟಮಾರಿಯಾಗದೆಉಳಿಯಲೂ ಒಂದು ಕಾರಣವಿತ್ತು. ತಮ್ಮ ಜವಾಬ್ದಾರಿಯನ್ನು ಹಗುರಮಾಡಿಕೊಳ್ಳುವುದೂ – ನನ್ನನ್ನು ಹಿಂಸಿಸುವುದೂ – ಮುಖ್ಯಗುರಿಯಾಗಿದ್ದುದರಿಂದ ಮಿ. ಮರ್ಡ್ಸ್ಟನ್ನರು ನನ್ನನ್ನು ಓದಲು ಮನೆಯ ಹಿಂಬದಿಗೆ ಅಟ್ಟಿಬಿಡುತ್ತಿದ್ದರು. ಅಲ್ಲಿ ನನಗೊಂದು ವಿಶೇಷತರದ– ಅವರು ಗ್ರಹಿಸದಿದ್ದ – ಅನುಕೂಲವಿತ್ತು. ಈ ಅನುಕೂಲವೇ ನನ್ನನ್ನು ಎಲ್ಲರಂತಾದರೂ ಉಳಿಯಲು ಕಾರಣವಾಗಿರಬೇಕೆಂದು ನನ್ನಅಭಿಪ್ರಾಯ.

ಪುಸ್ತಕಗಳು ಮೈಗಳ್ಳರ ಆಶ್ರಯಸ್ಥಾನವೆಂದು ತಿಳಿಯುತ್ತಿದ್ದ ಮರ್ಡ್ಸ್ಟನ್ ಅಣ್ಣ–ತಂಗಿಯರು ನನ್ನ ತಂದೆಯವರು ಸಂಗ್ರಹಿಸಿಟ್ಟಿದ್ದ ಎಲ್ಲಾಪುಸ್ತಕಗಳನ್ನು ನಾನು ಮಲಗುವ ಕೋಣೆಯ ಹೊರಬದಿ ಹಾಳು ಹರಕು ಮುರುಕು ವಸ್ತುಗಳ ಜತೆಯಲ್ಲಿ ರಾಶಿ ರಾಶಿಯಾಗಿಸುರಿದಿದ್ದರು. ಅವುಗಳಲ್ಲಿ ಅರ್ಥವಾಗುವವುಗಳನ್ನೆಲ್ಲ ಚೆನ್ನಾಗಿ ಓದತೊಡಗಿದೆ. ಇಗರ್ಜಿ ಕಾಂಪೌಂಡಿನಲ್ಲಿ ನನ್ನ ಪ್ರಾಯದ ಮಕ್ಕಳುಆಟವಾಡುತ್ತಿದ್ದಾಗಲೇ ನಾನು ನನಗೆ ರುಚಿಸಿದ ಪುಸ್ತಕಗಳನ್ನು ಅಮೂಲಾಗ್ರವಾಗಿ ಓದಿದೆ. ನಾನು ಓದಿದ ಕಥೆಗಳಲ್ಲಿನ ದುಷ್ಟಕಥಾನಾಯಕ– ನಾಯಕಿಯರನ್ನು ನಮ್ಮ ಮನೆಯಲ್ಲಿದ್ದ ಅಣ್ಣ–ತಂಗಿಯರಿಗೆ ಹೋಲಿಸಿಕೊಂಡು ಸಂತೋಷಪಡುತ್ತಿದ್ದೆ. ನನ್ನೆದುರಿನಮರ, ಮನೆ, ನೆಲ, ಗಾಳಿ ಬೆಳಕನ್ನು ಕಥೆಗಳ ಭಾವನೆಗೆ ತಕ್ಕಂತೆ ಹೊಂದಿಸಿಕೊಂಡು ಆ ಕಥೆಗಳನ್ನು ಪ್ರತ್ಯಕ್ಷ ಕಂಡೂ, ಕೇಳಿಯೂಅನುಭವಿಸುತ್ತಿದ್ದೆನು.

ಒಂದು ದಿನ ಬೆಳಗ್ಗೆ ಎಂದಿನಂತೆ ಬೈಠಖಾನೆಗೆ ಪಾಠಕ್ಕಾಗಿ ಹೋಗುವಾಗ ತಾಯಿ ಸ್ವಲ್ಪ ಗಾಬರಿಯಿಂದ ಕುಳಿತಿದ್ದಳು. ಮಿ.ಮರ್ಡ್ಸ್ಟನ್ನರು ತೆಳ್ಳಗಿನ ಒಂದು ಬೆತ್ತದ ತುದಿಗೆ ಚರ್ಮದ ಲಾಡಿಯನ್ನು ಕಟ್ಟುತ್ತಿದ್ದರು. ನನ್ನನ್ನು ನೋಡುತ್ತ ಮಿ. ಮರ್ಡ್ಸ್ಟನ್ನರು –

"ಪ್ರಿಯ ಕ್ಲೇರಾ, ಮಕ್ಕಳಿಗೆ ಪೆಟ್ಟಿನಿಂದ ತುಂಬಾ ಪ್ರಯೋಜನವಿದೆ; ನಾನು ಬಾಲ್ಯದಲ್ಲಿ ತುಂಬಾ ಪೆಟ್ಟು ತಿಂದಿದ್ದೇನೆ" ಅಂದರು.

"ಆದರೆ ನಿಮಗೆ ಅದರಿಂದ ಏನು ಪ್ರಯೋಜನವಾಗಿದೆ?" ಎಂದು ಕೇಳಿದಳು ತಾಯಿ.

“ನನಗೆ ಅದರಿಂದ ಏನೂ ಅಪಾಯವಾಗಿಲ್ಲವೆಂಬುದು ಸ್ಪಷ್ಟ; ಮತ್ತು ನಾನು ತಪ್ಪು ಮಾರ್ಗವನ್ನು ಹಿಡಿಯದಿರುವುದೇ ಆ ಪೆಟ್ಟಿನಪ್ರಭಾವದಿಂದ” ಎಂದನ್ನುತ್ತಾ, ಹೀಗೆಯೇ ಅವನನ್ನು ಬಿಟ್ಟರೆ ಆಗಲಿಲ್ಲಾ ಎಂದು ಹೇಳಿ ಬೆತ್ತವನ್ನು ಜಳಪಿಸಿದರು.

ಅನಂತರ ಪಾಠ ಪ್ರಾರಂಭವಾಯಿತು. ನಾನು ಎಷ್ಟೇ ಚೆನ್ನಾಗಿ ಪಾಠವನ್ನು ಕಲಿತಿದ್ದರೂ, ಆ ಅಣ್ಣ ತಂಗಿಯರೆದುರು ಯಾವಸತ್ಕಾರ್ಯವೂ – ಸತ್ಫಲವೂ – ಉಳಿಯಲಾರವಾದ್ದರಿಂದ, ನಾನು ಕಲಿತದ್ದೆಲ್ಲಾ ಈ ಲೋಕವನ್ನು ಬಿಟ್ಟು ದೇವಲೋಕಕ್ಕೇಪಲಾಯನವಾದುವು. ಬಾಯಿಪಾಠದಲ್ಲಿ ಸೋತೆ; ಬಾಯಿಲೆಕ್ಕದಲ್ಲೂ ಹಾಗೆಯೇ ಆಯಿತು. ಗ್ಲೌಸ್ಟರ್ ಹಾಲಿನ ಡಬ್ಬಿಗಳೂ ಸಹಹಾರಿಹೋದುವು. ಕೊನೆಗೆ ಉಳಿದಿದ್ದ ಪ್ರತ್ಯಕ್ಷ ಬೆತ್ತದ ಲೆಕ್ಕವನ್ನು ಪ್ರಾರಂಭಿಸಿದರು; ಅದರಲ್ಲೂ ಸೋತೆನು. ಆಗ ಅವರು ಬೆತ್ತವನ್ನುಜಳಪಿಸಿದರು –

ತಾಯಿ ಅಳಲಾರಂಭಿಸಿದಳು.

“ಕ್ಲೇರಾ, ಜಾಗ್ರತೆ” ಅಂದಳು ಜೇನ್ ಮರ್ಡ್ಸ್ಟನ್ನಳು.

“ಮನಸ್ಸನ್ನು ಬಿಗಿಹಿಡಿಯುವ ಪಾಠವನ್ನು ಅಷ್ಟು ಬೇಗ ಮರೆತೆಯೇನು, ಕ್ಲೇರಾ?” ಎಂದಂದರು ಮಿ. ಮರ್ಡ್ಸ್ಟನ್ನರು.

ತಾಯಿ ಅಳುತ್ತಾ ಎದ್ದು ನಿಂತಳು.

“ನಿಶ್ಶಕ್ತ – ಮೃದು – ಮನಸ್ಸಿನ ಕ್ಲೇರಾಳಿಗೆ ತನ್ನ ಮಗನ ದಡ್ಡತನ ಸಹಿಸದೆ ಆಗಿದೆ. ಆದ್ದರಿಂದ ಈ ಪಾಠ ಇಲ್ಲಿ ಬೇಡ” ಎಂದನ್ನುತ್ತಾಮಿ. ಮರ್ಡ್ಸ್ಟನ್ನರು ನನ್ನನ್ನು ದರದರನೆ ಎಳೆದುಕೊಂಡು ಹೊರಹೊರಟರು. ತಾಯಿ ಅಳುತ್ತಾ ಅಡ್ಡ ಬಂದಾಗ ಜೇನಳು ಮಾತಿನಿಂದಸಮಾಧಾನವನ್ನು ಸುರಿಯುತ್ತಾ, ಕೈಯಲ್ಲಿ ಕಠೋರವಾಗಿ ಅಮ್ಮನನ್ನು ದರದರನೆ ಎಳೆದು ಕುರ್ಚಿಗೆ ನೂಕಿ, ಅಲ್ಲಿ ಒತ್ತಿ ಕುಳ್ಳಿರಿಸಿದಳು.ಮಿ. ಮರ್ಡ್ಸ್ಟನ್ನರು ನನ್ನನ್ನು ಮಹಡಿಯ ಮೇಲಕ್ಕೆ ಎಳೆದುಕೊಂಡು ಹೋದರು. ಅಲ್ಲಿ ನನ್ನನ್ನು ಕಂಕುಳಲ್ಲಿ ಒತ್ತಿ ಹಿಡಿದು ಬೆತ್ತದಿಂದಹೊಡೆಯಲಾರಂಭಿಸಿದರು. ನನ್ನ ತಲೆಯು ಅವರ ಬೆನ್ನ ಕಡೆಗೆ ಇದ್ದು ನನ್ನ ಬೆನ್ನು, ತಿಕ, ಕಾಲುಗಳಿಗೆ ಬೆತ್ತದಿಂದ ಚೆನ್ನಾಗಿ ಹೊಡೆದರು.ಪೆಟ್ಟಿನ ಉರಿಯನ್ನು ಸಹಿಸಲಾರದೆ ಅತ್ತೆ – ಬಹಳವಾಗಿ ಅತ್ತೆ. ಎಷ್ಟು ಅತ್ತರೂ ಪೆಟ್ಟು ಮತ್ತಷ್ಟು ಹೆಚ್ಚುತ್ತಿತ್ತು; ಕೊನೆಗೆ ದಾರಿ ತೋಚದೆಮಿ. ಮರ್ಡ್ಸ್ಟನ್ನರ ಕೈಯನ್ನು ಬಲವಾಗಿ ಕಚ್ಚಿದೆ. ಕಚ್ಚಿದುದರಲ್ಲಿ ಅವರ ಮಾಂಸ ತುಂಡಾದುದೂ ನನಗೆ ತಿಳಿಯಿತು. ಕಚ್ಚಿದ ಕೂಡಲೆನನ್ನನ್ನು ಒಮ್ಮೆಗೆ ಬಿಟ್ಟರು. ಆದರೆ, ಮರುಕ್ಷಣವೇ ಮತ್ತೊಂದು ಕೋಣೆಗೆ ನನ್ನನ್ನು ಎಳೆದುಕೊಂಡು ಹೋಗಿ ಅವರಿಗೆ ತ್ರಾಣವಿದ್ದಷ್ಟೂಹೊಡೆದರು. ಗೊತ್ತುಗುರಿ, ಸ್ಥಳ, ಏನನ್ನೂ ಗ್ರಹಿಸದೆ ಸಿಕ್ಕಾಬಟ್ಟೆ ಹೊಡೆದರು. ಪೆಟ್ಟು ಸಹಿಸಲಾರದೆ, ಓಡಿಹೋಗಲು ಎಡೆಯಿಲ್ಲದೆ,ನೆಲಕ್ಕೆ ಉರುಳಿ, ಅಲ್ಲಿಯೂ ಪೆಟ್ಟು ತಿನ್ನುತ್ತಾ ಪ್ರಜ್ಞೆ ತಪ್ಪುವ ಸ್ಥಿತಿಗೇ ತಲಪಿದೆ. ಆಗಲೇ ಕೋಣೆಯ ಹೊರಗಿನಿಂದ ನನ್ನಮ್ಮಅಳುವುದೂ ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿ ಅಮ್ಮ ಒಳಗೆ ಬರಲು ಪ್ರಯತ್ನಿಸಿದಳು. ಮಿ. ಮರ್ಡ್ಸ್ಟನ್ನರು ಆ ಕೂಡಲೇ ಅಮ್ಮನನ್ನು ಹೊರನೂಕಿ, ತಾನೂ ಹೊರಗೆ ಹೋಗಿ, ನನ್ನನ್ನು ಕೋಣೆಯೊಳಗೇ ಕೂಡಿಟ್ಟು, ಬಾಗಿಲು ಬೀಗ ಬಂದೋಬಸ್ತು ಮಾಡಿ ಹೊರಟುಹೋದರು.

ಆ ದಿನ ರಾತ್ರಿಯಲ್ಲೂ ನಾನು ಅದೇ ಕೋಣೆಯಲ್ಲಿದ್ದೆ! ಜೇನ್ ಮರ್ಡ್ಸ್ಟನ್ನಳು ಬಂದು ಬ್ರೆಡ್ ಮತ್ತೂ ಹಾಲನ್ನೂ ಒಂದು ದೀಪವನ್ನೂಇಟ್ಟು ಬಾಗಿಲು ಹಾಕಿಕೊಂಡು ಹೋದಳು.

ಈ ರೀತಿಯಲ್ಲಿ ನಾನು ಐದು ದಿನಗಳನ್ನು ಕೈದಿಯಾಗಿ ಕಳೆದೆನು. ಈ ಐದು ದಿನಗಳಲ್ಲಿ ಒಂದು ನಿರ್ದಿಷ್ಟ ಪರಿಮಾಣದಷ್ಟು ಮಾತ್ರಆಹಾರ, ನೀರುಗಳನ್ನು ಒದಗಿಸುತ್ತಿದ್ದರು. ಮತ್ತು ಒಂದು ಕ್ಲುಪ್ತವಾದ ಕಾಲದಲ್ಲಿ ಸ್ವಲ್ಪ ತಿರುಗಾಡಿ ಬರಲೂ ಬಿಡುತ್ತಿದ್ದರು.

ಆರನೆಯ ದಿನ ರಾತ್ರಿ ಒಂದು ಪರಿಚಿತ ಸ್ವರ ಬಾಗಿಲ ಬೀಗದ ಕೈ ತೂತಿನ ಮುಖಾಂತರ ಕೇಳಿಸಿತು. ಆಲಿಸಿ ನೋಡಿದಾಗ ಅದುಪೆಗಟಿ ಮಾತಾಡಿದ್ದೆಂದು ಗೊತ್ತಾಯಿತು.

“ಡೇವೀ, ಮುದ್ದೂ ಬಾಗಿಲ ಸಮೀಪ ಬಾ” ಅಂದಳು ಪೆಗಟಿ.

ನಾನು ಒಳಗಡೆಯಿಂದ ಬಾಗಿಲ ತೂತಿಗೆ ಬಾಯಿಯನ್ನಿಟ್ಟು

“ಅಮ್ಮ ಹೇಗಿದ್ದಾಳೆ? ಅವಳು ಕೈ ಕಚ್ಚಿದ್ದಕ್ಕೆ ಸಿಟ್ಟಾಗಿದ್ದಾಳೋ?” ಎಂದು ಕೇಳಿದೆ.

“ಅಮ್ಮನಿಗೆ ಸಿಟ್ಟಿಲ್ಲ – ಅವಳಿಗೆ ಸುಖವಿಲ್ಲ” ಎಂದು ಹೇಳಿ, ಗಂಟಲು ಸರಿಪಡಿಸಿಕೊಂಡು –

“ನಿನ್ನನ್ನು ಲಂಡನ್ ಸಮೀಪದ ಯಾವುದೋ ಒಂದು ಶಾಲೆಗೆ ಓದಲು ಕಳುಹಿಸುತ್ತಾರಂತೆ – ಓದಿ ಬುದ್ಧಿವಂತನಾಗಿ ಬಾರಪ್ಪಾ.”

“ಅಮ್ಮನನ್ನು ಒಂದಾವೃತ್ತಿಯಾದರೂ ತೋರಿಸದೇ ಕಳುಹಿಸಿಬಿಡುತ್ತಾರೋ, ಪೆಗಟಿ?”

“ತೋರಿಸುತ್ತಾರೆ – ಅನಂತರ ನಾನು ನಿನಗೆ ಪತ್ರ ಬರೆಯುತ್ತಿರುತ್ತೇನೆ, ಮುದ್ದೂ” ಅಂದಳು ಪೆಗಟಿ.

“ನಾನು ಅನ್ಯಾಯ ಮಾಡಲಿಲ್ಲ, ಪೆಗಟಿ – ಅವರ ಹಿಂಸೆ ತಡೆಯಲಾರದೆ ಕಚ್ಚಿಬಿಟ್ಟೆ” ಅಂದೆ.

ಆ ಮನೆಯಲ್ಲಿ ಅಪಮಾನ, ದುಃಖಗಳೇ ತುಂಬಿಕೊಂಡಿದ್ದಿದ್ದರೂ, ಅದರಲ್ಲಿ ನನ್ನಮ್ಮನಿದ್ದಾಳೆಂಬ ಒಂದೇ ಒಂದು ಭಾವನೆ ಆಮನೆಯನ್ನು ನನ್ನ ಪ್ರೀತಿಯ ಸ್ಥಳವನ್ನಾಗಿ ಮಾಡಿತ್ತು. ಮರುದಿನವೇ ನನ್ನ ಪ್ರೀತಿಯ ತಾಯಿಯನ್ನೂ, ಪ್ರೀತಿಯ ಮನೆ,ಮನೆವಠಾರಗಳನ್ನೆಲ್ಲ ಬಿಟ್ಟು ಹೋಗಬೇಕಲ್ಲವೇ ಎಂದು ಬಹುವಾಗಿ ದುಃಖವಾಯಿತು. ರಾತ್ರಿ ಇಡೀ ಈ ದುಃಖವು ನನ್ನನ್ನುಬಾಧಿಸುತ್ತಿತ್ತು.

ಬೆಳಿಗ್ಗಿನ ನಿರ್ದಿಷ್ಟ ಆಹಾರ ಸೇವನೆಯಾದನಂತರ ನನ್ನನ್ನು ಕರೆದುಕೊಂಡು ಹೋಗಿ ತಾಯಿಯ ಎದುರು ನಿಲ್ಲಿಸಿದರು. ತಾಯಿಯಮುಖ ಮತ್ತೂ ಕಣ್ಣುಗಳು ಬಾತುಕೊಂಡಿದ್ದುವು. ಅವಳು ಮೆಲ್ಲಗೆ ಅಳುತ್ತಲೇ ಇದ್ದಳು.

“ಅಮ್ಮಾ ಕ್ಷಮಿಸಬೇಕು” ಎಂದು ನಾನು ಮಾತನ್ನು ಪೂರ್ತಿ ಆಡುವ ಮೊದಲೇ ಅವಳಿಗೂ, ನನಗೂ ಅಳು ಬಂತು. ಅವಳು ಅಳುತ್ತಾನನ್ನನ್ನು ಅಪ್ಪಿಕೊಂಡಳು.

"ನಿನ್ನನ್ನು ಪ್ರೀತಿಸುತ್ತಿರುವವರನ್ನು ನೀನು ಕಚ್ಚಬಹುದೇ?" ಎಂದು ಕೇಳಿದಳು. ತಾಯಿ ಇಲ್ಲದ ಸ್ಥಳದಲ್ಲಿ ನಡೆದಿದ್ದ ಸಂಗತಿಗಳನ್ನುಅವರಿಗೆ ಬೇಕಾದಂತೆ ಮಿ. ಮರ್ಡ್ಸ್ಟನ್ನರು ತಾಯಿಗೆ ತಿಳಿಸಿರಬೇಕೆಂದು ನಾನು ಊಹಿಸಿದ್ದೆ. ನಿಜಸ್ಥಿತಿಯನ್ನು ಹೇಳಿಕೊಳ್ಳಲು ನಾನುನಿಸ್ಸಹಾಯ ಪರಿಸ್ಥಿತಿಯಲ್ಲಿದ್ದುದನ್ನೂ ಅರಿತಿದ್ದೆ.

ಮಾರ್ಗದ ಕಡೆಯಿಂದ ಬಂಡಿ ಬರುತ್ತಿದ್ದ ಶಬ್ದ ಕೇಳಿಸಿತು. ನನ್ನ ಪೆಟ್ಟಿಗೆ, ದುಸ್ತು ಇತ್ಯಾದಿಗಳನ್ನು ಮಿಸ್ ಜೇನ್ ಮರ್ಡ್ಸ್ಟನ್ನಳುಬಂಡಿಯಲ್ಲಿಟ್ಟಳು. ತಾಯಿ ಎಡೆಬಿಡದೆ ಅಳುತ್ತಲೇ ಇದ್ದಳು. ಮಿ. ಮರ್ಡ್ಸ್ಟನ್ನರು ಅಲ್ಲೆಲ್ಲೂ ಗೋಚರಿಸಲಿಲ್ಲ.

"ಕ್ಲೇರಾ, ಧೈರ್ಯ ತಾಳು – ಡೇವಿಡ್ ಬಂಡಿಯನ್ನು ಹತ್ತು" ಅಂದಳು ಮಿಸ್ ಮರ್ಡ್ಸ್ಟನ್.

"ಅಮ್ಮಾ ನಮಸ್ಕರಿಸುವೆನು" ಎಂದು ಗದ್ಗದ ಕಂಠದಿಂದ ಹೇಳಿ ಬಂಡಿಯನ್ನೇರಿದೆ. ಆಗ ಮಿಸ್ ಮರ್ಡ್ಸ್ಟನ್ನಳು ಹತ್ತಿರ ಬಂದು –

"ಹುಡುಗಾ, ಹುಷಾರ್! ನಿನ್ನ ದುಷ್ಟಬುದ್ಧಿಯಿಂದ ನೀನಾಗಿಯೇ ನಾಶವಾಗುವ ಮೊದಲು ಅಣ್ಣನ ಕೈ ಕಚ್ಚಿದ್ದಕ್ಕಾಗಿಪಶ್ಚಾತ್ತಾಪವನ್ನಾದರೂ ಪಡು – ಇಲ್ಲದಿದ್ದರೆ ಬಹು ಕ್ಷಿಪ್ರದಲ್ಲೇ ಹಾಳಾಗಿ ಹೋಗುವೆ," ಎಂದು ಆಶೀರ್ವದಿಸಿದಳು.

ಹಿಂದೆ ನಾನು ಯಾರ್ಮತ್ತಿಗೆ ಹೋದ ಬಂಡಿಯೇ ಇಂದೂ ನನ್ನನ್ನೂ, ನನ್ನ ಸಾಮಾನುಗಳನ್ನೂ ಸಾಗಿಸತೊಡಗಿತು.

ಅಧ್ಯಾಯ ಐದು

ಮನೆಯಿಂದ ಬಹುದೂರಕ್ಕೆ ಕಳುಹಿಸಲ್ಪಟ್ಟೆನು

ನಾನು ಬಂಡಿಯಲ್ಲಿ ಅಳುತ್ತಲೇ ಮುಂದೆ ಸಾಗಿದೆ. ಕಣ್ಣೀರಿನಿಂದ ನನ್ನ ಕರವಸ್ತ್ರವೆಲ್ಲಒದ್ದೆಯಾಗಿತ್ತು. ಇನ್ನೂ ನಾವು ಒಂದು ಫರ್ಲಾಂಗು ಸಹ ದೂರ ಸಾಗಿರಲಿಲ್ಲ –ಅಷ್ಟರಲ್ಲೇ ರಸ್ತೆ ಕಡೆಯ ಬೇಲಿಯ ಮರೆಯಿಂದ ಪೆಗಟಿ ಓಡಿ ಬಂದಳು. ಬಂಡಿಯನ್ನುಸ್ವಲ್ಪ ನಿಲ್ಲಿಸಿ, ನನ್ನ ಜೇಬಿನೊಳಗೆ ತುಂಬಾ ತಿಂಡಿ ಪೊಟ್ಟಣಗಳನ್ನು ತುಂಬಿದಳು.ಒಂದು ಚಿಕ್ಕ ಹಣದ ಚೀಲವನ್ನೂ ಕೊಟ್ಟಳು. ಏನೂ ಮಾತಾಡದೆ ಈ ಕೆಲಸವನ್ನೆಲ್ಲಮಾಡಿ ನನ್ನನ್ನು ಬಲವಾಗಿ ಅಪ್ಪಿದಳು; ಅಪ್ಪುವುದರ ಜತೆಯಲ್ಲೇ ಅಳಲಾರಂಭಿಸಿದಳು.ಆದರೆ ನನಗೆ ಅಳು ಗೊತ್ತಾಗಬಾರದೆಂದು, ತಡೆದುಕೊಳ್ಳಲು ಪ್ರಯತ್ನಿಸಿ, ಸಾಧ್ಯವಾಗದೆ ನನ್ನನ್ನು ಬಿಟ್ಟು ಓಡಿಹೋದಳು. ಅಪ್ಪಿದುದರಲ್ಲಿ ಈ ಸರ್ತಿಯಂತೂ ಅವಳ ಜುಬ್ಬದ ಎಲ್ಲಾ ಗುಂಡಿಗಳೂ ಹಾರಿಹೋಗಿರಬೇಕು – ಒದೆರಡು ಗುಂಡಿಗಳನ್ನು ನಾನೇ ಹೆಕ್ಕಿ ಇಟ್ಟುಕೊಂಡು, ಪ್ರೀತಿಯ ನೆನಪಿಗಾಗಿ ಕಾಪಾಡಿಕೊಂಡು ಬಂದಿದ್ದೇನೆ.

ನನ್ನ ಅಳುವನ್ನು ತಡೆದು ನಿಲ್ಲಿಸಲು ಸಾಧ್ಯವಾಗದೆ ಅಳುತ್ತಲೇ ಇದ್ದೆ. ಒದ್ದೆಯಾಗಿದ್ದ ಕರವಸ್ತ್ರವನ್ನು ಕುದುರೆಯ ಬೆನ್ನಮೇಲೆ ಹರಗಿ ಒಣಗಿಸಿಕೊಂಡೆನು. ಗಾಡಿ ಮುಂದುವರಿದ ಹಾಗೆ ಹಣದ ಚೀಲವನ್ನೂ ಪರೀಕ್ಷಿಸಿದೆ. ಅದರೊಳಗೆ "ನನ್ನ ಮುದ್ದು ಡೇವಿಗೆ" ಎಂದು ತಾಯಿಯ ಕೈ ಬರಹದಲ್ಲಿ ಸುತ್ತಲ್ಪಟ್ಟಿದ್ದ ಕಾಗದದ ಒಳಗೆ ಎರಡು ಅರ್ಧ ಪವನುಗಳಿದ್ದುವು. ಇದಲ್ಲದೆ ಮೂರು ಶಿಲಿಂಗ್ ಬೆಲೆಯ ಇತರ ಚಿಲ್ಲರೆ ನಾಣ್ಯಗಳೂ ಇದ್ದುವು. ಅವು ಪೆಗಟಿಯದು ಇರಬೇಕೆಂದು ಊಹಿಸಿದೆ. ತಾಯಿಯ ಪತ್ರ ಮತ್ತು ಹಣವನ್ನು ಕಂಡು ಪುನಃ ಅಳಬೇಕಾಯ್ತು.

ಹೀಗೆ ಸ್ವಲ್ಪ ದೂರ ಹೋಗುವಾಗ ಗಾಡಿಯವನನ್ನು ಕೇಳಿದೆ

"ನೀವು ನನ್ನನ್ನು ಲಂಡನ್ ನಗರದವರೆಗೂ ಕರೆದುಕೊಂಡು ಹೋಗುವಿರೇನು?"

"ಅಷ್ಟು ದೂರ ಹೋದರೆ ನನ್ನ ಕುದುರೆ ಸತ್ತು ಹೋದೀತು. ನಾನು ಯಾರ್ಮತ್ತಿನಲ್ಲಿ ನಿನ್ನನ್ನು ಲಂಡನ್ ಬಂಡಿಗೆ ಮುಟ್ಟಿಸಿದರೆ ಆಯ್ತು" ಎಂದು ಗಾಡಿಯವನಂದನು. ನನ್ನ ಪ್ರಶ್ನೆಯಿಂದ ಗಾಡಿಯವನಿಗೆ ಬೇಸರವಾಗಿರಬೇಕೆಂದು ಹೆದರಿ, ನನ್ನ ಕೈಯ್ಯಲ್ಲಿದ್ದ ದೋಸೆಗಳಲ್ಲಿ ಒಂದನ್ನು ಅವನನ್ನು ಗೌರವಿಸಲೋಸ್ಕರ ಕೊಟ್ಟೆನು. ನಾನು ತಿನ್ನಲು ಅರ್ಧ ಘಂಟೆ ಸಮಯ ಬೇಕಾದಷ್ಟು ದೊಡ್ಡ ದೋಸೆಯನ್ನು ಗಾಡಿಯವನು ಒಂದೇ ಒಂದು ತುತ್ತಿಗೆ – ಆನೆ ನುಂಗಿದಂತೆ – ನುಂಗಿಬಿಟ್ಟನು. ಆ ದೋಸೆಯನ್ನು ಆನೆ ತಿಂದಿದ್ದರೆ ಅದರ ಮುಖದಲ್ಲಿ ತೋರಿಬರಬಹುದಾಗಿದ್ದಷ್ಟೇ ಈ ಗಾಡಿಯವನ ಮುಖದಲ್ಲೂ ದೋಸೆ ತಿಂದುದರ ತೃಪ್ತಿ ತೋರಿಬಂತು.

ಗಾಡಿಯು ಸಾಗುತ್ತಾ ಹೋದಾಗ ಗಾಡಿಯವನು – ನನ್ನ ಕಡೆ ನೋಡಿ–

"ಆ ತಿಂಡಿಯನ್ನು ಅವಳೇ ಮಾಡುತ್ತಾಳೇನು?" ಎಂದು ಹಠಾತ್ತಾಗಿ ಕೇಳಿದನು.

"ಅವಳೇ ಮಾಡುತ್ತಾಳೆ, ಮಿಸ್ಟರ್ ಬಾರ್ಕಿಸ್" ಎಂದೆ. ಇಷ್ಟರಲ್ಲೇ ಗಾಡಿಯವನನ್ನು ಇತರರು ಕರೆದು ಮಾತಾಡಿಸಿದ್ದುದನ್ನೆಲ್ಲ ಕೇಳಿ ಗಾಡಿಯವನ ಹೆಸರು ಮಿ. ಬಾರ್ಕಿಸ್ ಎಂದು ತಿಳಿದಿದ್ದೆ.

"ನಿಮ್ಮ ಮನೆಯ ತಿಂಡಿ, ತಿನಸು, ಅಡುಗೆಯನ್ನೆಲ್ಲ ಅವಳೇ ಮಾಡುತ್ತಾಳೆ ತಾನೆ?" ಎಂದು ಪುನಃ ಕೇಳಿದನು.

"ಹೌದು" ಅಂದೆ ನಾನು. ಈ ಉತ್ತರ ಕೇಳಿ ಅವನಿಗೆ ಸಂತೋಷವಾದಂತೆ ತೋರಿತು. ಅವನು ಶಿಳ್ಳು ಹಾಕುತ್ತಾ ಬಂಡಿ ಹೊಡೆಯುತ್ತಿದ್ದನು. ಸ್ವಲ್ಪ ಹೊತ್ತಾದ ಮೇಲೆ –

"ನಲ್ಲನಿಲ್ಲವೋ?" ಎಂದು ವಿಚಾರಿಸಿದನು.

ಈ ಪ್ರಶ್ನೆ ನನಗರ್ಥವಾಗಲಿಲ್ಲ. 'ನಲ್ಲ' ಅಂದರೆ ಬೆಲ್ಲವೋ ಹಲ್ವವೋ ಅಂತೂ ಯಾವುದೋ ಒಂದು ತಿಂಡಿ ನನ್ನಲ್ಲಿ ಇದೆಯೇ ಇಲ್ಲವೇ ಎಂಬುದಾಗಿ ವಿಚಾರಿಸಿದ್ದಾಗಿ ತಿಳಿದು –

"ನನ್ನ ಹತ್ತಿರ 'ನಲ್ಲ' ಇಲ್ಲ" ಅಂದೆನು.

"'ನಲ್ಲ' ಅಂದರೆ ತಿಂಡಿಯಲ್ಲ. ಗಂಡ – ಅವಳಿಗೆ ಗಂಡನಿಲ್ಲವೋ ಎಂದು ಕೇಳಿದೆ."

ಅವಳಿಗೆ ನಲ್ಲನಿಲ್ಲವೆಂದು ತಿಳಿಸಿದಾಗ ತುಂಬಾ ಸಂತೋಷಿಸಿದಂತೆ ತೋರಿದನು. ಅನಂತರ ಸ್ವಲ್ಪ ಸಮಯ ಕಳೆದ ಮೇಲೆ,

"ನೀನು ಅವಳಿಗೆ ಎಂದಾದರೂ ಪತ್ರ ಬರೆಯುವುದಿದೆಯೇ" ಎಂದು ಕೇಳಿದನು.

"ಇದೆ" ಅಂದೆ.

"ಹಾಗೆ ಬರೆಯುವಾಗ, ನನಗಾಗಿ, 'ಬಾರ್ಕಿಸನು ತಯಾರು' ಎಂದು ಬರೆಯಬೇಕು, ಏನು?" ಎಂದು ಹೇಳಿದನು. ಈ ಸೂಚನೆ ನನಗೊಂದು ಒಗಟಿನಂತೆ ತೋರಿತು. ಆದರೂ ಹಾಗೆ ಪತ್ರ ಬರೆಯಲು ಒಪ್ಪಿದೆನು. ಮತ್ತು ನಾನು ನಮ್ಮ ದಾರಿಯಲ್ಲೇ – ಅಂದರೆ, ಮಧ್ಯ ಸ್ಥಳವಾದ ಯಾರ್ಮತ್ತಿನಲ್ಲೇ – ಒಂದು ಪತ್ರವನ್ನು ಬರೆದು ಪೆಗಟಿಗೆ ಟಪಾಲು ದ್ವಾರ ಕಳುಹಿಸಿದೆ. ಅದರಲ್ಲಿ 'ಬಾರ್ಕಿಸನು ತಯಾರು' ಎಂದೂ ಬರೆದಿದ್ದೆ.

ಕೊನೆಗೆ ನಾವು ಯಾರ್ಮತ್ತಿಗೆ ತಲುಪಿದೆವು. ಅಲ್ಲಿ ನನ್ನನ್ನು ಬಾರ್ಕಿಸನು ಟಪಾಲಾಫೀಸಿನ ಎದುರು ಇಳಿಸಿ, ನನ್ನ ಪೆಟ್ಟಿಗೆಯನ್ನು ಇಳಿಸಿಟ್ಟು ತಾನು ಹೊರಟು ಹೋದನು. ಬಂಡಿ ನಿಂತಲ್ಲೇ ಒಂದು ವಿವಿಧೋದ್ದೇಶದ ಅಂಗಡಿ ಇತ್ತು. ಅಂದರೆ, ಇಲ್ಲಿ ಆಫೀಸು, ಅಂಗಡಿ, ಹೋಟೇಲು, ಇಂಥಾ ವಿವಿಧ ಕೆಲಸಗಳೆಲ್ಲ ಈ ಅಂಗಡಿಯಲ್ಲಿ ನಡೆಯುತ್ತಿತ್ತು. ಒಬ್ಬಳು ಹೆಂಗಸು ಬಂದು ನನ್ನನ್ನು ನೋಡಿ –
"ಬ್ಲಂಡರ್ಸ್ಟನ್ನಿನಿಂದ ಬಂದ ಗೃಹಸ್ಥರು ನೀವೇನು? ನಿಮ್ಮ ಹೆಸರು?" ಎಂದು ವಿಚಾರಿಸಿದಳು.
ನನ್ನ ಹೆಸರು ಡೇವಿಡ್ ಕಾಪರ್ಫೀಲ್ಡ್ ಎಂದುದಕ್ಕೆ ಅವಳು ತಾನು ಹುಡುಕುತ್ತಿದ್ದುದು ಮಾಸ್ಟರ್ ಮರ್ಡ್ಸ್ಟನ್ನರನ್ನು ಎಂದು ತಿಳಿಸಿದಳು. ಅವನೂ ನಾನೇ ಎಂದು ತಿಳಿಸಬೇಕಾಯಿತು; ನಾನು ಹಾಗೆ ತಿಳಿಸಿದೆ. ಅದಕ್ಕೆ ಅವಳಿಗೆ ಸ್ವಲ್ಪ ಸಿಟ್ಟಾಯಿತು. ಆದರೂ ತನ್ನ ಕರ್ತವ್ಯವನ್ನು ಮಾಡುವವಳಂತೆ ಒಬ್ಬ ಆಳನ್ನು ಕರೆದು ನನಗೆ ಊಟಬಡಿಸಬೇಕೆಂದು ಅಪ್ಪಣೆಯಿತ್ತಳು. ತಾನೊಬ್ಬ ದೊಡ್ಡ ಗೃಹಸ್ಥನಿಗೆ ಊಟ ಬಡಿಸುವ ಸಂದರ್ಭ ಸಿಕ್ಕಿತೆಂದು ಬಂದ ಆಳು ನನ್ನನ್ನು ಕಂಡ ಕೂಡಲೇ "ಫೂ, ಇಷ್ಟೇಯೋ" ಎಂದನ್ನುವಂತೆ ತನ್ನ ಮುಖದಲ್ಲಿ ಭಾವನೆ ಮೂಡಿಸಿಕೊಂಡು, ಅನೇಕ ಚಮುಚ, ಕತ್ತರಿ, ಚೂರಿಗಳನ್ನು ನನ್ನೆದುರು ತಂದಿಟ್ಟು, ಜತೆಯಲ್ಲೇ ಆಹಾರ ಪದಾರ್ಥಗಳನ್ನೂ ಮೇಜದ ಮೇಲಿರಿಸಿ, ನನ್ನೆದುರೇ ನಿಂತು ನನ್ನನ್ನೇ ನೋಡತೊಡಗಿದನು. ನಾನು ಸ್ವಲ್ಪ ದಿಗಿಲುಗೊಂಡೇ ಊಟ ಮಾಡತೊಡಗಿದೆ. ಊಟ ಪೂರೈಸುವ ಸಮಯಕ್ಕೆ ನನ್ನೆದುರು ಅರ್ಧ ಬಾಟ್ಲಿ ವೈನನ್ನು ತಂದಿಟ್ಟನು. ವೈನು ನನಗೆ ಬೇಡವೆಂದು ನಾನು ತಿಳಿಯುತ್ತಿದ್ದರೂ ಹಾಗೆ ಬೇಡವೆನ್ನುವುದು ಮರ್ಯಾದೆಯೋ, ನ್ಯಾಯವೋ – ಬೇಡವೆಂದು ತಿಳಿಸಿಬಿಡಲೋ – ಎಂದು ಗ್ರಹಿಸಿದೆ. ಅಷ್ಟರಲ್ಲೇ ಆ ಆಳು ಆ ವೈನನ್ನು ಒಂದು ಕುಪ್ಪಿ ಪಾತ್ರೆಗೆ ಹಾಕಿ ಬೆಳಕಿನ ಅಡ್ಡವಾಗಿ ಹಿಡಿದುಕೊಂಡು ನೋಡತೊಡಗಿದನು. ಅದರಲ್ಲೇನೋ ವಿಶೇಷವಿರಬಹುದೆಂದು ನಾನೂ ಆ ಕಡೆ ನೋಡತೊಡಗಿದೆ. ಆಗ ನನ್ನನ್ನು ಕುರಿತು ಆ ಆಳು –
"ಆ ಮರಸಿಗಿಯುವವನನ್ನು ನೀವು ನೋಡಿದ್ದೀರೇನು?" ಎಂದು ಕೇಳಿದ.
""ಯಾವ? ನಾನು ನೋಡಿಲ್ಲ" ಅಂದೆ ನಾನು.
"ಕಾಕಿ ಚಡ್ಡಿ, ಉದ್ದ ಟೋಪಿ ಹಾಕಿ, ಮೇಲೆ ನಿಂತು ಸಿಗಿಯುತ್ತಿದ್ದವನು? – ಕನ್ನಡಕವಿತ್ತು – ಅವನನ್ನು ಗೊತ್ತಿಲ್ಲವೇ?"
"ಇಲ್ಲ" ಅಂದೆ. ಆದರೂ ಎಲ್ಲರಿಗೂ ಪರಿಚಯವಿರಬೇಕಾದ ಅವನ ಪರಿಚಯ ನನಗಿಲ್ಲದುದಕ್ಕೆ ಸ್ವಲ್ಪ ನಾಚಿಕೆಪಟ್ಟುಕೊಂಡೆ.
"ಹಾಗಾದ್ರೆ ಕೇಳಿ, ಈ ವೈನು ಬಹಳ ಹಳತು – ಸಾಧಾರಣದವರಿಂದ ಜೀರ್ಣಿಸಿ ಜೈಸಲು ಸಾಧ್ಯವಿಲ್ಲದ್ದು. ಆ ಮರ ಸಿಗಿಯುವವನು ಎಷ್ಟೇ ದೃಢ ಕಾಯನಾಗಿದ್ದರೂ ಇದನ್ನು ಕುಡಿದು ಸ್ವಲ್ಪವೇ ಹೊತ್ತಿನಲ್ಲಿ ಸತ್ತೇಹೋದ. ನಮ್ಮ ದಾಸ್ತಾನು ಮಾಲನ್ನು ಕುಡಿದು ದಕ್ಕಿಸಲು ಎಲ್ಲರಿಂದ ಆಗುವಂಥದ್ದಲ್ಲ" ಅಂದನು ಆಳು.
ಈ ವರ್ತಮಾನ ನನಗೆ ದಿಗಿಲೆಬ್ಬಿಸಿತು. ನಾನು ಆ ವೈನು ಕುಡಿದರೆ ಸಾಯುವುದು ಖಂಡಿತವೆಂದೇ ನನಗೆ ಖಚಿತವಾಯ್ತು. ವೈನು ಬೇಡವೆನ್ನುವುದು ನನ್ನ ಗೌರವಕ್ಕೆ ಸ್ವಲ್ಪ ಕೊರತೆ ತರಬಹುದಾದರೂ ಸಾಯುವುದರಿಂದ ಪಾರಾಗುವುದು ಉತ್ತಮವೆಂದು ನನಗೆ ತೋರಿತು. ನನಗೆ ವೈನ್ ಬೇಡ, ಎಂದು ಕೊನೆಗೆ ತಿಳಿಸಿಯೇಬಿಟ್ಟೆನು.
ಆಳಿಗೆ ನನ್ನ ಮೇಲೆ ಸ್ವಲ್ಪ ಕನಿಕರವುಂಟಾಗಿರಬೇಕು; ಆದರೂ –
ಬೇಕೆಂದು ತರಿಸಿದನಂತರ ಬೇಡವೆನ್ನುವುದು ಈ ಹೋಟೇಲಿನ ಮರ್ಜಿಗೆ ಸ್ವಲ್ಪ ವಿರೋಧವಷ್ಟೇ ಎಂದಂದುಕೊಂಡು, ಸ್ವಲ್ಪ ಹಿಂದೆ ಮುಂದೆ ಆಲೋಚಿಸಿ, ನನ್ನ ಮೇಲಿನ ಕನಿಕರವನ್ನು ಕಣ್ಣಲ್ಲಿ ಬೀರುತ್ತಾ, ನನ್ನ ಜವಾಬ್ದಾರಿಯನ್ನು ಹಗುರಮಾಡಲು ನನ್ನೆದುರೇ ಆ ವೈನನ್ನೆಲ್ಲ ಒಮ್ಮೆಗೇ ಕುಡಿದುಬಿಟ್ಟನು. ಇಷ್ಟೂ ಅಲ್ಲದೆ, ಆ ವೈನಿನ ಘಾಟನ್ನು ಕಡಿಮೆ ಮಾಡಿ ಅವನ ಹೊಟ್ಟೆಯನ್ನು ಉಳಿಸುವುದಕ್ಕಾಗಿ ನನ್ನ ತಟ್ಟೆಯಲ್ಲಿದ್ದ ತಿಂಡಿಯನ್ನೆಲ್ಲಾ ತಿಂದನು. ಅದರಿಂದ ಪೂರ್ಣ ಗುಣ ಹೊಂದಲಾರನೆಂದೇ ನನಗಾಗಿ ಮತ್ತೂ ಸ್ವಲ್ಪ ತಿಂಡಿ ತರಿಸಿ ತಿಂದು, ಸಾಯದೆ, ನನ್ನ ಜವಾಬ್ದಾರಿಯನ್ನು ನಿರ್ವಹಿಸಿ, ಹೋಟೆಲ್ ಮರ್ಜಿಯನ್ನು ಉಳಿಸಿಕೊಟ್ಟನು. ನಾವೀರ್ವರೂ ಸುಖವಾಗಿ ಉಳಿದದ್ದಕ್ಕೆ ನಾನು ಸಂತೋಷಪಟ್ಟೆನು.

ಹೀಗೆ ನಾನು ಹೋಟೆಲಿನಲ್ಲಿರುವಾಗ್ಗೆ ಒಬ್ಬ ಅಪರಿಚಿತನು ಬಂದು ನನ್ನ ಸುಖದುಃಖವನ್ನೆಲ್ಲ ವಿಚಾರಿಸಿ, ತನ್ನ ಸಂಸಾರದ ಬಡತನ, ದಿನನಿತ್ಯದ ಕಷ್ಟಗಳನ್ನೆಲ್ಲ ಹೇಳಿಕೊಂಡನು.; ಅವನ ಸಂಸಾರದ ದುಃಖಗಳನ್ನು ಕೇಳಿಯೂ, ಅವನ ಕಣ್ಣೀರನ್ನು ಕಂಡೂ, ಪೆಗಟಿ ಕೊಟ್ಟಿದ್ದ ಒಂದು ಶಿಲಿಂಗನ್ನು ಅವನಿಗೆ ದಾನ ಕೊಟ್ಟೆನು. ನನ್ನ ದಾನ ಸಿಗುವ ಮೊದಲು ವಿನೀತನಾಗಿದ್ದವನು ದಾನ ಸಿಕ್ಕಿದನಂತರ ನನ್ನನ್ನು ಬಹು ಅಸಡ್ಡೆಯಿಂದ ಕಂಡು, ಆ ಶಿಲಿಂಗನ್ನು ಮೇಲಕ್ಕೆ ಹಾರಿಸಿ, ಕಳ್ಳ ನಾಣ್ಯವಲ್ಲವಷ್ಟೆ ಎಂದು ಪರೀಕ್ಷಿಸಿ, ನಾನು ಶಾಲೆಗೆ ಹೋಗಲಿದ್ದ ಒಬ್ಬ ಬಾಲಕನೆಂದು ತಿಳಿದಿದ್ದುದರಿಂದ, ನನ್ನ ಜಾಗ್ರತೆಗಾಗಿ ನಾನು ಹೋಗಲಿದ್ದ ಶಾಲೆಯನ್ನು ಕುರಿತು –
"ಆ ಶಾಲೆಯಲ್ಲಿ ಸದ್ಯ ಈಚೆಗೆ ನಿನ್ನಷ್ಟೇ ಪ್ರಾಯದ ಒಬ್ಬ ಹುಡುಗನನ್ನು ಹೊಡೆದು ಎರಡು ಪಕ್ಕೆಲುಬುಗಳನ್ನು ಮುರಿದಿರುತ್ತಾರೆ" ಎಂದು ಶುಭ ವರ್ತಮಾನವನ್ನು ತಿಳಿಸಿದನು.

ಇಷ್ಟು ಹೊತ್ತಿಗೆ ನನ್ನ ಮುಂದಿನ ಪಯಣದ ಬಂಡಿ ಬಂದಿತು. ಹೋಟೆಲಿನಲ್ಲಿ ನನ್ನ ಊಟದ ಚಾರ್ಜನ್ನು ಕೊಡುವಾಗ ಅಷ್ಟೊಂದು ಕ್ರಯದ ಆಹಾರವೆಲ್ಲ – ತಿಂಡಿ ತಿನಸೆಲ್ಲ – ನನ್ನ ಹೊಟ್ಟೆಯಲ್ಲಿ ಹೇಗೆ ಹಿಡಿಸಿರಬಹುದೆಂದು ಅಲ್ಲಿದ್ದವರೆಲ್ಲ ಅವರವರೊಳಗೆ ಮಾತಾಡಿಕೊಂಡರು.

ಸಾಧಾರಣ ಮೂರು ಘಂಟೆಗೆ ಯಾರ್ಮತ್ತನ್ನು ಬಿಟ್ಟು ಹೊರಟೆವು. ಮರುದಿನ ಬೆಳಗ್ಗೆ ಎಂಟು ಘಂಟೆಗೆ ನಮ್ಮ ಬಂಡಿ ಲಂಡನ್ನಿಗೆ ಮುಟ್ಟಬಹುದೆಂದು ಬಂಡಿಯಲ್ಲಿದ್ದವರು ಮಾತಾಡಿಕೊಳ್ಳುತ್ತಿದ್ದರು. ನಾನು ಚಿಕ್ಕವನಾದ್ದರಿಂದ ಬಂಡಿಯಿಂದ ಕೆಳಗೆ ಉರುಳಬಾರದೆಂದು ಪ್ರಾಯಹೋದ ಇಬ್ಬರ ಮಧ್ಯದಲ್ಲಿ ನನ್ನನ್ನು ಕುಳ್ಳಿರಿಸಿದರು. ನಾನು ಮೂರು ಜನರು ತಿನ್ನಬಹುದಾದಷ್ಟು ತಿಂಡಿ ತಿಂದದ್ದರಿಂದ ನನಗೆ ಮೂರು ಜನರ ಭಾರದ ಚಾರ್ಜು ಬಂಡಿಯಲ್ಲೂ ಮುಂದೆ ನಾನು ಶಾಲೆಗೆ ಸೇರಿದನಂತರ ಬೋರ್ಡಿಂಗಿನಲ್ಲೂ, ವಸೂಲ್ ಮಾಡದಿದ್ದರೆ ಬಂಡಿಯ ಮಾಲಿಕನೂ, ಬೋರ್ಡಿಂಗಿನ ಆಡಳಿತದಾರನೂ ದಿವಾಳಿಯಾಗಬಹುದೆಂದು ಬಂಡಿಯಲ್ಲಿ ಕುಳಿತವರು ಕೆಲವರು ಮಾತಾಡಿಕೊಳ್ಳುತ್ತಿದ್ದರು. ಮುಂಭಾರ, ಹಿಂಭಾರಗಳು ಹೆಚ್ಚು ಕಡಿಮೆಯೆಂದು ಬಂಡಿಯವನು ಹೇಳಿದಾಗಲೆಲ್ಲ ನನ್ನನ್ನೇ ತೋರಿಸಿಕೊಂಡು ನಗಾಡುತ್ತಿದ್ದರು. ನಮ್ಮ ಜತೆ ಪ್ರಯಾಣಿಕರು ಅಲ್ಲಲ್ಲಿ ತಿಂಡಿ ತಿನಸು, ಹಣ್ಣು ಹಂಪಲುಗಳನ್ನು ತಿನ್ನುತ್ತಿದ್ದರು. ನನ್ನೆದುರೇ ಅವರು ಹಣ್ಣುಗಳನ್ನು ತಿನ್ನುತ್ತಿದ್ದಾಗ ನನಗೆ ಯಾರೂ ಏನನ್ನೂ ಕೊಡುತ್ತಿರಲಿಲ್ಲ. ಕೊನೆಗೆ ಪೆಗಟಿ ಕೊಟ್ಟಿದ್ದ ತಿಂಡಿಯನ್ನಾದರೂ ತಿಂದು ಹಸಿವೆ ನಿವಾರಿಸಿಕೊಳ್ಳೋಣವೆಂದು ನೋಡಿದಾಗ ಆ ತಿಂಡಿ ಕಟ್ಟು ಯಾರ್ಮತ್ತಿನ ಹೋಟೆಲಿನಲ್ಲಿ ಮರೆತುಬಂದಿದ್ದೇನೆಂದು ಗೊತ್ತಾಯಿತು. ಅಮ್ಮನ ನೆನವರಿಕೆ, ಮತ್ತು ಹಸಿವೆಗಳಿಂದ ಗುಟ್ಟಾಗಿ ಅಳತೊಡಗಿದೆ. ರಾತ್ರಿ ಪೂರಾ ನನ್ನ ಜತೆಯಲ್ಲಿದ್ದವರು ನನ್ನನ್ನು ಸುತ್ತಲಿನಿಂದಲೂ ಒತ್ತುತ್ತಾ ನಿದ್ರಿಸಿ ಗೊರಕೆ ಹೊಡೆಯುತ್ತಿದ್ದರು. ಆದರೆ ಬೆಳಗಾದಾಗ ರಾತ್ರಿಯಿಡೀ ನಿದ್ದೆ ಬರಲಿಲ್ಲವೆಂದು ಅವರೇ ಅವರವರೊಳಗೆ ಬೊಬ್ಬೆ ಹೊಡೆದುಕೊಳ್ಳುತ್ತಿದ್ದರು. ಕೆಲವೊಮ್ಮೆ ಅವರ ನಿದ್ರಾ ಭಂಗಕ್ಕೆ ನಾನೇ ಕಾರಣನೆಂದೂ ಜಿಗುಪ್ಸೆಯಿಂದ ನನ್ನನ್ನು ನೋಡುತ್ತಿದ್ದರು.

ನಮ್ಮ ಬಂಡಿ ಮುಂದೆ ಸಾಗುತ್ತಿದ್ದಂತೆ ಕೆಲವು ಕಡೆ ಹಳ್ಳಿ ಹುಡುಗರು ಹಿಂಬದಿಯಿಂದ ಬಂಡಿಯಲ್ಲಿ ನೇತಾಡಿಕೊಂಡು ಸ್ವಲ್ಪ ದೂರ ಬರುತ್ತಿದ್ದರು. ದಾರಿಯ ಬದಿಯ ಮನೆಗಳಲ್ಲಿ ಹೆಂಗಸರು, ಮಕ್ಕಳು ಮನೆ ಒಳಗೂ ಹೊರಗೂ ಹೋಗುತ್ತಿದ್ದುದೂ. ತಂತಮ್ಮ ಕೆಲಸ ಮಾಡುತ್ತಿದ್ದುದೂ ಕಾಣಿಸುತ್ತಿತ್ತು. ಅಲ್ಲಿನ ಕೆಲವು ಮಕ್ಕಳನ್ನು ಕಾಣುವಾಗ ಅವರೆಗೆಲ್ಲ ತಾಯಿ ಇರಬಹುದೇ ಇಲ್ಲದಿದ್ದರೆ ಅವರೆಲ್ಲ ಹೇಗಿರಬಹುದು, ಅವರನ್ನು ಮನೆಯವರು ಹೇಗೆಲ್ಲ ಕಾಣುತ್ತಿರಬಹುದು. ಎಂದು ಮೊದಲಾಗಿ ತುಂಬಾ ಯೋಚನೆಗಳು ಬರುತ್ತಿದ್ದುವು. ಕೆಲವು ಕಡೆ ನಾಯಿಗಳು ಬಂಡಿಯನ್ನು ಕಂಡ ಕೂಡಲೇ ಬೊಗಳುತ್ತಾ ರಸ್ತೆಗೆ ಬಂದು ಬಂಡಿ ಸಮೀಪಿಸಿದ ಹಾಗೆ ಬೊಗಳುತ್ತಾ ದೂರ ಸರಿಯುತ್ತಿದ್ದುವು.

ಹೀಗೆ ಮುಂದುವರಿದ ಹಾಗೆ ಲಂಡನ್ನಿನ ಹೊರ ವಲಯಕ್ಕೆ ತಲುಪಿದೆವು. ಅಲ್ಲಿ ಮನೆಗಳ ಸಾಲುಗಳೂ, ಬೀದಿಗಳೂ, ಜನಸ್ತೋಮಗಳೂ ಕಾಣಿಸತೊಡಗಿದುವು. ಮತ್ತೂ ಮುಂದುವರಿದ ಹಾಗೆ ಲಂಡನ್ ನಗರಕ್ಕೆ ಬಂದು ತಲುಪಿದೆವು. ನಮ್ಮ ಬಂಡಿ ಒಂದು ಹೋಟೆಲಿನ ಬಳಿ ಬಂದು ನಿಂತಿತು. ಆ ಹೋಟೆಲು ಮಾಡಿನಲ್ಲಿ 'ನೀಲನಂದಿ'ಯೆಂದೋ 'ನೀಲ ಹಂದಿ'ಯೆಂದೋ ಅಂತೂ ನೀಲಿ ಬಣ್ಣದ ಯಾವುದೋ ಒಂದು ಮೃಗದ – ಚಿತ್ರ, ಮತ್ತೂ ದೊಡ್ಡ ಅಕ್ಷರಗಳಲ್ಲಿ ಅದರ ಹೆಸರು ಬರೆದಿದ್ದ ಒಂದು ಹಲಗೆಯನ್ನು ತೂಗಾಡಿಸಿದ್ದರು.

ನಾನು ಬಂಡಿಯಿಂದಿಳಿದ ಕೂಡಲೇ ಬಂಡಿಯವನು ಸುತ್ತಲೂ ನೋಡುತ್ತಾ "ಬ್ಲಂಡರ್ ಸ್ಟನ್ನಿನಿಂದ ಬಂದಿರುವ ಬಾಲಕನ್ನು ಕರೆದುಕೊಂಡು ಹೋಗುವವರು ಯಾರು? – ಯಾರು?" ಎಂದು ಕೆಲವು ಸರ್ತಿ ಕೂಗಿದನು. ಆದರೆ ಯಾರೂ ಬರದಿದ್ದುದನ್ನು ನೋಡಿ, ನನ್ನನ್ನು ಹೋಟೆಲಿನ ಜಗುಲಿಯಲ್ಲಿದ್ದ ದೊಡ್ಡ ತಕ್ಕಡಿಯ ಒಂದು ತ್ರಾಸಿನ ಮೇಲೆ ಕುಳ್ಳಿರಿಸಿದರು. ನಾನು ಅಲ್ಲೇ ಉಳಿದು ಹೋದರೆ ನನ್ನ ಮುಂದಿನ ಗತಿಯೇನೆಂದೂ ನಾನು ಯೋಚಿಸತೊಡಗಿದೆ. ಬೇಕೆಂದೇ ನನ್ನನ್ನು ಈ ರೀತಿ, ಒಂದು ವಿಧದಲ್ಲಿ, ಬಿಸಾಡಿಬಿಟ್ಟರೋ ? ನಾನು ಹೀಗೆ ಎಷ್ಟು ದಿನ ಕಾದು ಕುಳಿತುಕೊಳ್ಳಬಹುದು – ಕೊನೆಗೆ, ನನ್ನ ಕೈಯ್ಯಲ್ಲಿದ್ದ ಹಣವೆಲ್ಲ ಮುಗಿದನಂತರ ನನ್ನ ಊಟಕ್ಕೆ ನಾನು ಮಾಡುವುದೇನು – ಅಥವಾ ಅನ್ನವಿಲ್ಲದೆ ಸತ್ತರೆ ನನ್ನ ಶವಸಂಸ್ಕಾರ ಮಾಡುವವರು ಯಾರು, ಎಂಬಿತ್ಯಾದಿ ಯೋಚಿಸಿ, ಯೋಚಿಸಿ, ದುಃಖಿಸತೊಡಗಿದೆನು. ಇಷ್ಟರಲ್ಲೇ ಒಬ್ಬನು ಬಂದು ಬಂಡಿಗೆ ಟಿಕೆಟ್ ಕೊಡುವವನ ಹತ್ತಿರ ಏನೋ ಮಾತಾಡಿ, ಅನಂತರ ನನ್ನ ಹತ್ತಿರ ಬಂದು, ತಾನೇ ನನ್ನನ್ನು ಕರೆದುಕೊಂಡು ಹೋಗಲು ಬಂದವನೆಂದು ಹೇಳಿದನು. ಅನಂತರ ನಾವಿಬ್ಬರೂ ಮುಂದೆ ನಮ್ಮ ಮುಂದಿನ ಶಾಲಾಭಿಮುಖವಾಗಿ ಟಪ್ಪಾಲು ಬಂಡಿಯನ್ನೇರಿ ಹೋದೆವು. ನಮ್ಮ ಶಾಲೆ ಇನ್ನೂ ಸ್ವಲ್ಪ ದೂರದಲ್ಲಿದ್ದುದರಿಂದ ನಾವು ಹಾಗೆ ಹೋಗಬೇಕಾಗಿತ್ತು. ಹೀಗೆ ಸ್ವಲ್ಪ ದೂರ ಹೋದನಂತರ ಒಂದು ಸಾರ್ವಜನಿಕ ಅನಾಥಾಲಯದ ಸಮೀಪ ನಾವು ಬಂಡಿಯಿಂದಿಳಿದು ನಡೆದು ಹೋದೆವು.

ನನ್ನನ್ನು ಕರೆದುಕೊಂದು ಹೋಗಲು ಬಂದಿದ್ದವನು ರೋಗಿಷ್ಠನಂತೆ ತೋರುತ್ತಿದ್ದನು. ಅವನು ಕೃಶ ಕಾಯನಾಗಿದ್ದನು. ಪಾದದ ಕಡೆಗೆ ತಲಪುತ್ತಾ ಸಪುರವಾಗುತ್ತಿದ್ದ ನಮೂನೆಯ ಇಜಾರವನ್ನು ಧರಿಸಿದ್ದನು. ಅವನ ಕೋಟು ಮೈ ತುಂಬ ಮುಚ್ಚಿರಲಿಲ್ಲ. ಕೋಟಿನ ಒಳಗಡೆ ಶರ್ಟಾಗಲೀ, ಜುಬ್ಬವಾಗಲೀ ಇದ್ದಂತೆ ತೋರುತ್ತಿರಲಿಲ್ಲ. ಆತನ ಮುಖ ಒಣಗಿ, ಬತ್ತಿ, ಮುಖದಲ್ಲಿ ಒಂದು ವಿಧದ ಹಳದಿ ಬಣ್ಣ ಇತ್ತು. ಅವನು ಯಾರು, ಅವನ ಹೆಸರೇನೆಂದು ಇತರರಿಂದ ಗುಟ್ಟಾಗಿ ವಿಚಾರಿಸಿ ತಿಳಿದಾಗ ಅವನು, ನಾನು ಮುಂದೆ ಕಲಿಯಲು ಸೇರಬೇಕಾಗಿದ್ದ 'ಸೆಲಂ' ಶಾಲೆಯಲ್ಲಿನ ಒಬ್ಬ ಉಪಾಧ್ಯಾಯ ಮಿಸ್ಟರ್ ಮೆಲ್ ಎಂದು ತಿಳಿದೆನು. ಅವರ ಬಾಹ್ಯವು ಹೇಗೇ ಇದ್ದರೂ, ಲಂಡನ್ ನಗರದ ಸಮೀಪದ ಶಾಲೆಯ ಉಪಾಧ್ಯಾಯ ಅವರಾಗಿದ್ದುದರಿಂದ ಅವರ ಜ್ಞಾನಭಂಡಾರ ದೊಡ್ಡದೇ ಇರಬೇಕೆಂದು ತೀರ್ಮಾನಿಸಿಕೊಂಡೆನು. ಅನಂತರ ನಾನು ಅವರ ಹತ್ತಿರ ಬಹು ನಮ್ರತೆಯಿಂದಲೇ ಸಂಭಾಷಿಸಿ, ನಡೆದು ಹೋಗತೊಡಗಿದೆ.

ಪ್ರಥಮವಾಗಿ ನಾವು ಅನಾಥಾಲಯವನ್ನು ಪ್ರವೇಶಿಸಿದೆವು. ಅಲ್ಲಿ ಮಿ. ಮೆಲ್ಲರಿಗೆ ಸಂಬಂಧಪಟ್ಟ ಮುದುಕಿಯೊಬ್ಬರಿದ್ದರು. ಮಿ. ಮೆಲ್ಲರು ಆ ಮುದುಕಿಯೊಡನೆ ಸ್ವಲ್ಪ ಮಾತಾಡಿ, ಅವರ ಸಂತೋಷಕ್ಕಾಗಿ ತಮ್ಮ ಕೊಳಲನ್ನು ಊದಿದರು. ಸ್ವಲ್ಪ ಹೊತ್ತು ಅಲ್ಲಿದ್ದು, ನಾವು ನಮ್ಮ ಸೇಲಂ ಶಾಲೆಗೆ ಬಂದೆವು.

ಸೇಲಂ ಶಾಲೆಯ ಕಂಪೌಂಡು ನಾಲ್ಕೂ ಬದಿಗಳಲ್ಲಿ ಎತ್ತರವಾಗಿದ್ದ ಗೋಡೆಗಳಿಂದ ಆವೃತವಾಗಿತ್ತು. ಅದರ ಎದುರು ಬದಿಯಲ್ಲಿ ಮಾತ್ರ ಒಂದು ಎತ್ತರವಾಗಿಯೂ, ಅಗಲವಾಗಿಯೂ ಇದ್ದ ಬಾಗಿಲಿತ್ತು. ಈ ಹೆಬ್ಬಾಗಿಲಿನ ಮೇಲೆ ದೊಡ್ಡ ಅಕ್ಷರದಲ್ಲಿ 'ಸೇಲಂ ಶಾಲೆ' ಎಂದು ಅದರ ಹೆಸರನ್ನು ಬರೆದಿದ್ದರು. ಆ ಬಾಗಿಲಲ್ಲಿದ್ದ ಸರಳುಗಳಿಂದ ಒಳಗೂ, ಹೊರಗೂ ನೋಡಬಹುದಿತ್ತೇ ಹೊರತು, ಬಾಗಿಲು ಮುಚ್ಚಿದ್ದಾಗ ಯಾರೂ ಒಳಗೆ ಹೋಗದಿರುವಷ್ಟು ಭದ್ರವಾಗಿ ಅದಿತ್ತು. ನಮ್ಮನ್ನು ಕಂಡಾ ಕೂಡಲೇ ದಪ್ಪ ಕತ್ತಿನ, ಸಿಟ್ಟು ಮುಖದ ಪಹರೆಯವನು ಒಳಗಿನಿಂದಲೇ ಬೀಗ ತೆಗೆದು ನಮ್ಮನ್ನು ಒಳಗೆ ಬಿಟ್ಟನು. ನಾವು ಒಳನುಗ್ಗಿದ ಕೂಡಲೇ ಪೂರ್ವದಂತೆಯೇ ಬಾಗಿಲು ಬಂದೋಬಸ್ತು ಮಾಡಿದನು.

ಈ ಪಹರೆಯವನ ಮನೆ ಶಾಲಾ ಕಂಪೌಂಡಿನಲ್ಲೇ ಒಂದು ಕಡೆಯಲ್ಲಿ ಇತ್ತೆಂದೂ, ಅವನ ಎರಡು ಕಾಲುಗಳಲ್ಲಿ ಒಂದು ಮರದ (ಕೃತಕ) ಕಾಲು ಎಂದೂ ನಾನು ಹಿಂದಿನಿಂದ ತಿಳಿದುಕೊಂಡೆ. ನಾವು ಹೆಬ್ಬಾಗಿಲನ್ನು ದಾಟಿ ಮುಂದೆ ಹೋಗುತ್ತಿದ್ದ ಹಾಗೆ, ಪಹರೆಯವನು ತನ್ನ ಮನೆಗೆ ಹೋಗಿ ಎರಡು ಹಳತು ಬೂಟ್ಸುಗಳನ್ನು ತಂದು ಮಿ. ಮೆಲ್ಲ್ ಕಡೆಗೆ ಎಸೆದು, ಆ ಬೂಟ್ಸುಗಳಲ್ಲಿ ಮೂಲ ಭಾಗಕ್ಕಿಂತ ರಿಪೇರಿ ಭಾಗಗಳೇ ಹೆಚ್ಚಿದ್ದವೆಂದೂ, ಆದ್ದರಿಂದ ರಿಪೇರಿಗೆ ಅಸಾಧ್ಯವೆಂದೂ ಸಮಗಾರನು ತಿಳಿಸಿರುವುದಾಗಿ ಹೇಳಿದನು. ಹೇಗಿದ್ದರೂ ತಾನು ಧರಿಸಿದ್ದ ಬೂಟ್ಸುಗಳಿಗಿಂತ ಅವು ಉತ್ತಮ ತರದ್ದಾಗಿರುವುದರಿಂದ ಅವನ್ನು ಕಾಪಾಡಿಟ್ಟುಕೊಳ್ಳಬೇಕೆಂದೆನ್ನುತ್ತ ಮಿ. ಮೆಲ್ಲರು ಅವುಗಳನ್ನು ಹೆಕ್ಕಿ ತೆಗೆದುಕೊಂಡು ಶಾಲೆಯ ಕಡೆಗೆ ನಡೆದರು.

ಆ ಕಂಪೌಂಡಿನ ಮಧ್ಯದಲ್ಲಿ ಶಾಲಾ ಕಟ್ಟಡವಿತ್ತು. ಕಟ್ಟಡದ ಮಧ್ಯದ ವಿಶಾಲವಾಗಿದ್ದ ಒಂದು ಕೋಣೆಯಲ್ಲಿ ಉದ್ದಕ್ಕೂ ಮೂರು ಸಾಲುಗಳಾಗಿ ಬೆಂಚುಗಳನ್ನು ಡೆಸ್ಕುಗಳನ್ನು ಇಟ್ಟಿದ್ದರು. ಶಾಲೆಯಲ್ಲಿ ಆ ದಿನ ಯಾರೂ ಇರಲಿಲ್ಲ. ಆ ಕೋಣೆಯಲ್ಲಿ ಹರುಕು ಕಾಗದ, ಒಡಕು ಸ್ಲೇಟು, ಕಸ, ಬೋರ್ಡುಚಾಕು, ಚಿಂದಿಬಟ್ಟೆ, ದೂಳು ಮೊದಲಾದ್ದು ಎಲ್ಲಾ ಕಡೆಯೂ ಇತ್ತು. ಕೆಲವು ಕಡೆ ಕಸದ ರಾಶಿಯಿಂದ ಜೀವಂತ ಇಲಿಗಳು ಅತ್ತಿತ್ತ ಓಡುತ್ತಿದ್ದುವು. ಒಂದು ಮೂಲೆಯಲ್ಲಿ ಒಂದು ಚಿಕ್ಕ ಹಕ್ಕಿಗಿಂತಲೂ ಚಿಕ್ಕದಾಗಿದ್ದ, ಅರೆಜೀವದ ಗಿಳಿಯೊಂದು ಪಂಜರದಲ್ಲಿ ಕುಳಿತು ನಮ್ಮನ್ನೇ ನೋಡುತ್ತಿತ್ತು. ಮುಳ್ಳು ಹಂದಿಗೆ ಕೋಪಬಂದಾಗ ಅದರ ಮುಳ್ಳು ಎದ್ದುನಿಂತಂತೆ, ಗೋಡೆಗಳಿಂದ ನೂರಾರು ಮೊಳೆ, ಗೂಟ ಮೊದಲಾದ ಸಲಕರಣೆಗಳು ಎದ್ದು ನಿಂತಿದ್ದುವು. ಗೋಡೆಯೇ ವಿಕಾರವಾಗಿ ತೋರುತ್ತಿತ್ತು. ಒಂದು ಯುಗ ಪೂರ್ತಿಯಾಗಿ ಶಾಯಿಯ ಮಳೆ ಸುರಿದಿದ್ದು, ಆ ಎಲ್ಲಾ ಕಾಲದಲ್ಲೂ ಈ ಶಾಲೆಗೆ ಮಾಡೇ ಇಲ್ಲದಿದ್ದಿದ್ದರೆ ಗೋಡೆಯ ಮೇಲೆ ಎಷ್ಟು ಶಾಯಿ ತೋರಬಹುದಾಗಿತ್ತೋ ಅಷ್ಟರಮಟ್ಟಿನಲ್ಲಿ ಆ ಗೋಡೆಗಳಲ್ಲಿ ಶಾಯಿಯ ಕಲೆಗಳು ತುಂಬಿದ್ದುವು.

ಮಿ.ಮೆಲ್ಲರು ಒಂದುಕಡೆ ಕುಳಿತಿದ್ದಾಗ ನಾನು ಆಕೋಣೆಯನ್ನೆಲ್ಲಾ ಸುತ್ತಾಡಿ ನೋಡಿದೆ. ಒಂದು ಮೂಲೆಯಲ್ಲಿ 'ಎಚ್ಚರ, ಕಚ್ಚುತ್ತದೆ' ಎಂದು ಚಂದದ ಅಕ್ಷರಗಳಿಂದ ಬರೆದಿದ್ದ, ಹಗ್ಗ ಸಮೇತವಾಗಿದ್ದ ರಟ್ಟಿನ ತುಂಡೊಂದನ್ನು ಕಂಡೆನು. ಅಲ್ಲಿ ಒಂದು ನಾಯಿಯಿರಬೇಕೆಂದು ಹೆದರಿ ಹಠಾತ್ತಾಗಿ ಹಿಂದೆ ಹಾರಿದೆ. ನನ್ನ ಗಾಬರಿಯನ್ನು ಕಂಡು, ನಾನು ಆ ರೀತಿ ಹಾರಿದ್ದೇಕೆಂದು ಮಿ. ಮೆಲ್ಲರು ಕೇಳಿದರು.
"ನಾಯಿಗೆ ಹೆದರಿದೆ", ಅಂದೆನು ನಾನು.
"ಎಲ್ಲಿದೆ, ನಾಯಿ?" ಎಂದು ಮಿ. ಮೆಲ್ಲರು ಕೇಳಿದರು.
ಅವರಿಗೆ ರಟ್ಟಿನ ಮೇಲಿದ್ದ ಬರಹವನ್ನು ತೋರಿಸಿದೆನು.
"ಅದು ನಾಯಿಗಲ್ಲ ಇರುವುದು – ಹೇಳದೆ ನಿರ್ವಾಹವಿಲ್ಲ – ನಿನಗಾಗಿ ಇರುವುದು" ಅಂದರು ಮಿ. ಮೆಲ್ಲರು.
ನಾನು ಆಶ್ಚರ್ಯದಿಂದ ಅವರ ಮುಖ ನೋಡಿದೆನು.
"ನೀನು ನಿಮ್ಮನೆಯಲ್ಲಿ ಮಾಡಿದ ತಪ್ಪಿಗಾಗಿ ನಿನ್ನನ್ನು ಇಲ್ಲಿಗೆ ಕಳುಹಿಸಿರುವರು. ಈಗ ರಜೆಯಾದ್ದರಿಂದ ಇಲ್ಲಿ ಯಾರೂ ಇಲ್ಲ. ಇದನ್ನು ನಿನ್ನ ಬೆನ್ನಿಗೆ ಕಟ್ಟಬೇಕೆಂದು ನನಗೆ ಅಪ್ಪಣೆಯಾಗಿದೆ" ಎಂದು ಮಿ. ಮೆಲ್ಲರು ಸ್ವಲ್ಪ ಬೇಸರದಿಂದಲೇ ಹೇಳಿಕೊಳ್ಳುತ್ತಾ, ಆ ರಟ್ಟನ್ನು ನನ್ನ ಬೆನ್ನಿಗೆ ಕಟ್ಟಿದರು. ಅಂದಿನಿಂದ ಅದರಲ್ಲಿರುವ ವಿಷಯವನ್ನು ಪ್ರಕಟಿಸುವ ಖ್ಯಾತಿ ನನ್ನದಾಯಿತು. ರಜ ಮುಗಿದನಂತರ ಎಷ್ಟು ಜನ ವಿದ್ಯಾರ್ಥಿಗಳು ಬರಬಹುದು, ಅವರ ಮರ್ಜಿಗಳೆಲ್ಲ ಹೇಗಿರಬಹುದು, ಎಷ್ಟು ಜನರು ನನ್ನನ್ನು ಹಾಸ್ಯ ಮಾಡುವರು ಹೆದರಿಸುವರು ಎಂಬಿತ್ಯಾದಿಯಾಗಿ ನಾನು ತುಂಬಾ ಊಹಿಸಿ, ಕಲ್ಪಿಸಿಕೊಂಡು ಹೆದರಿದೆನು. ಶಾಲೆಯ ಹಿಂಬದಿಯ ಬಾಗಿಲ ಹಲಗೆಯ ಮೇಲೆ ಅನೇಕ ಹೆಸರುಗಳು ಕೆತ್ತಲ್ಪಟ್ಟಿದ್ದುವು. ಹಾಗೆ ತಂತಮ್ಮ ಚೂರಿಗಳಲ್ಲಿ ಹೆಸರು ಕೆತ್ತಿದ ಹುಡುಗರು ಬಹು ಜೋರಿನವರಿರಬೇಕೆಂದು ಊಹಿಸಿದೆನು. ಆ ಹೆಸರುಗಳಲ್ಲೆಲ್ಲ ಜೆ. ಸ್ಟಿಯರ್ ಫೋರ್ತ್, ಟೋಮಿ ಟ್ರೇಡಲ್, ಡೆಂಪಲ್ ಎಂಬ ಹೆಸರುಗಳು ಎದ್ದು ಕಾಣಿಸುತ್ತಿದ್ದುವು. ಜೆ. ಸ್ಟಿಯರ್ ಫೋರ್ತನು ನನ್ನನ್ನು ಎಷ್ಟು ಮಾತ್ರಕ್ಕೂ ಹಿಂಸಿಸದೆ ಬಿಡನೆಂದು ಊಹಿಸಿದೆನು. ನಾನು ಈ ರಟ್ಟಿನ ತುಂಡನ್ನು ನನ್ನ ಶರ್ಟಿನ ಮೇಲ್ಗಡೆ ಕಟ್ಟಿಕೊಂಡು ಹಗಲು ಇಡೀ ಇರಬೇಕಾಗಿತ್ತು. ನಾನು ಅಪ್ಪಿತಪ್ಪಿ ಗೋಡೆಗೋ ಮರಕ್ಕೋ ಒರಗಿ ನಿಂತ ಕೂಡಲೆ ಆ ಮರದ ಕಾಲಿನ, ಹೆಬ್ಬಾಗಿಲ ಪಹರೆಯವನು, ದೂರದಿಂದಲೇ ಕರೆದು –

"ಮಿಸ್ಟರ್ ಕಾಪರ್ ಫೀಲ್ಡ್, ರಿಪೋರ್ಟ್ರ್ ಮಾಡುತ್ತೇನೆ – ರಟ್ಟನ್ನು ಅಡಗಿಸಿ ನಿಲ್ಲಕೂಡದು" ಎಂದು ಆರ್ಭಟಿಸುತ್ತಿದ್ದನು.ನಮ್ಮ ವಠಾರದ ಅಡುಗೆಯವರು, ಅಗಸರು, ಕೆಲಸದವರೂ ಎಲ್ಲರೂ ಈ ರಟ್ಟನ್ನು ಓದಿಯೇ ಓದುವರೆಂದು ಊಹಿಸಿ ಹೆದರುತ್ತಿದ್ದೆನು. ಕೊನೆಗೆ, ನಾನೊಬ್ಬ ಭಯಂಕರ ಪ್ರಾಣಿಯೇ ಆಗಿರಬಹುದೋ ಎಂಬ ಸಂಶಯವು ನನಗೇ ತೋರತೊಡಗಿತು. ಶಾಲೆಯ ಹೆಡ್ ಮಾಸ್ಟರ್ ಮಿಸ್ಟರ್ ಕ್ರೀಕಲರು ಬಂದನಂತರ ಅಂಥ ಗೌರವಯುತ ಪ್ರಾಜ್ಞ ಗಂಭೀರ ವ್ಯಕ್ತಿಗಳ ಎದುರು ನನ್ನಂಥ ಅಲ್ಪ ದುಷ್ಟ ಪ್ರಾಣಿ ಹೇಗೆ ತಾನೇ ಸರಿಯಾಗಿ ನಡೆದುಕೊಳ್ಳುವುದೆಂದು ಅಂಜತೊಡಗಿದೆ. ನಾನು ಸುಮ್ಮನೆ ಕುಳಿತಾಗ, ಊಟ ಮಾಡುತ್ತಿದ್ದಾಗ, ಓದುತ್ತಿದ್ದಾಗ ಎಲ್ಲ ಸಮಯದಲ್ಲೂ 'ಎಚ್ಚರಿಕೆ, ಕಚ್ಚುತ್ತದೆ' ಎಂಬುದು ಎದ್ದು ಕಾಣುತ್ತಿದ್ದಿತು. ಮನೆ ಬಿಟ್ಟು ಬಂದ ದುಃಖವನ್ನು, ನಮ್ಮ ಮನೆ, ನನ್ನಮ್ಮ, ಪೆಗಟಿ ಮೊದಲಾದವರನ್ನು ನೆನಸಿ ಸಂತೋಷಿಸಿ ಹಗುರಮಾಡಿಕೊಳ್ಳೋಣವೆಂದು ಆಲೋಚಿಸಿದಾಗಲೂ ಈ 'ಎಚ್ಚರಿಕೆ, ಕಚ್ಚುತ್ತದೆ' ಎಂಬುದು ಹಿಂಬಾಲಿಸಿ ಬರುತ್ತಿತ್ತು. ಯಾರ್ಮತ್ತಿನ ವಿಶಾಲವಾದ ಸಮುದ್ರದ ದಂಡೆ, ಎಮಿಲಿ ನಮ್ಮ ಆಟ ಸಂತೋಷಗಳ ನೆನಪು – ಇವೆಲ್ಲ ಈ ಘೋರ ಶಬ್ದಗಳಿಂದ ಕಲುಷಿತವಾಗಿದ್ದುವು. ಹೀಗೆ ದುಃಖ, ದುಃಖಶಮನದ ಹಿಂದಿನ ಸವಿನೆನಪುಗಳ ಪ್ರವಾಹ, ಇವೆಲ್ಲ ಎದ್ದೆದ್ದು ಹರಿದು ಹೋದಲ್ಲೆಲ್ಲ 'ಎಚ್ಚರಿಕೆ, ಕಚ್ಚುತ್ತದೆ' ಎಂಬುದೂ ಬೆರೆತು, ಮನಸ್ಸಿನಲ್ಲಿ ಮಹಾ ವಿಪ್ಲವವೇ ಎದ್ದು, ಸಮಸ್ತವೂ ಹಿಂಸೆ ಮಾತ್ರವಾಗಿ ನನ್ನ ಪಾಲಿಗೆ ಬರುತ್ತಿದ್ದುವು.

ಇಂಥ ಪರಿಸ್ಥಿತಿಯ ಮಧ್ಯವೇ ನಾನು ಪಾಠಗಳನ್ನು ಸರಿಯಾಗಿ ಕಲಿಯುತ್ತಿದ್ದೆ. ಪಾಠವಿಲ್ಲದೆ ನನಗೆ ಕೆಲವು ಚಿಕ್ಕ ಕೆಲಸಗಳನ್ನುಕೊಡುತ್ತಿದ್ದರು. ಏನೇ ಇದ್ದರೂ ಮಿಸ್ಟರ್ ಮತ್ತು ಮಿಸ್ ಮರ್ಡ್ಸ್ಟನ್ ಅಣ್ಣ ತಂಗಿಯರಿದ್ದ ವಠಾರಕ್ಕಿಂತ ಈ ವಠಾರ ಸುಖಕರವಾಗಿತೋರಿತು.

ಮಿ. ಮೆಲ್ಲರು ನನ್ನ ಜತೆಯಲ್ಲೇ ಇದ್ದರು. ಅವರಿಗೆ ಮಾತು ಬಹು ಕಡಿಮೆ. ಕಾಗದಗಳಿಗೆ ಮತ್ತು ಪುಸ್ತಕಗಳಿಗೆ ಗೆರೆಯೆಳೆಯುವುದು,ಪುಸ್ತಕಗಳಲ್ಲಿ ಲೆಕ್ಕ ಬರೆಯುವುದು, ಶಾಲೆ ಮತ್ತು ಬೋರ್ಡಿಂಗಿನ ಲೆಕ್ಕ ಪುಸ್ತಕಗಳ ತಯಾರಿಕೆ ಮುಂತಾದ ಕೆಲಸಗಳನ್ನು ಈ ರಜಾಕಾಲದಲ್ಲಿ ಅವರು ಮಾಡುತ್ತಿದ್ದರು. ಮಿ. ಮೆಲ್ಲರು ನನ್ನ ಪಾಲಿಗೆ ಒಳ್ಳೆಯವರೇ ಆಗಿದ್ದರು. ಅವರು ನೀಲವರ್ಣದ ಪಿಂಗಾಣಿ ಪಾತ್ರದಲ್ಲಿಚಾ ಕುಡಿಯುತ್ತಿದ್ದಾಗ ಒಂದು ಟಿನ್ ಡಬ್ಬಿಯಲ್ಲಿ ನನಗೂ ಸ್ವಲ್ಪ ಚಾ ಕೊಡುತ್ತಿದ್ದರು.

ಮಿ. ಮೆಲ್ಲರಿಗೆ ಕೆಲವೊಂದು ವಿಶೇಷ ಗುಣಗಳಿದ್ದುವು. ಮೂರು ತುಂಡಾಗಿ ತಯಾರಿಸಲ್ಪಟ್ಟಿದ್ದ ಕೊಳಲನ್ನು ಒಂದಾಗಿ ಮಾಡಿಕೊಂಡು,ಅವರಿಗೆ ಪುರಸತ್ತು ಇದ್ದಾಗಲೆಲ್ಲಾ ಕೊಳಲೂದುತ್ತಿದ್ದರು. ಈ ಕೊಳಲ ಗಾನ ಅನಾಥಾಲಯದಲ್ಲಿ ಆ ಮುದುಕಿ ಎದುರು ಬಾರಿಸಿದ್ದಗಾನದಂತೆಯೇ ಇದ್ದು, ನಮ್ಮ ಶಾಲಾ ವಠಾರದಲ್ಲೆಲ್ಲ ನಿರುತ್ಸಾಹ, ದುಃಖ ಭಾವನೆಗಳನ್ನು ಪಸರಿಸುತ್ತಿತ್ತು. ಅವರು ಲೆಕ್ಕಬರೆಯುತ್ತಿದ್ದಾಗಲೆಲ್ಲ, ಯಾರೋ ಮತ್ತೊಬ್ಬರ, ಹತ್ತಿರ ತಾವು ಮಾತಾಡುತ್ತಿರುವಂತೆ, ಎಡೆಬಿಡದೆ ಮಾತಾಡುತ್ತಿದ್ದರು. ಕೆಲವುಸಂದರ್ಭಗಳಲ್ಲಿ – ಕೆಲವು ದಿನಗಳಲ್ಲಿ – ಹೀಗೆ ಮಾತಾಡುತ್ತಿದ್ದುದು ಮಾತ್ರವಲ್ಲದೆ, ಹಲ್ಲು ಕಡಿಯುತ್ತಾ, ಮಹಾ ರೋಷಾವೇಶದಿಂದಮೇಜನ್ನೂ ಬಲವಾಗಿ ಗುದ್ದುತ್ತಿದ್ದರು. ಇವೇ ಅವರ ವೈಶಿಷ್ಟ್ಯಗಳು.

ಅಧ್ಯಾಯ ಆರು

ನನ್ನ ಪರಿಚಯ ಕ್ಷೇತ್ರವನ್ನು ವಿಸ್ತರಿಸಿಕೊಂಡೆನು

ಈ ರೀತಿ ಮಿ. ಮೆಲ್ ಮತ್ತು ನಾನು ಶಾಲಾ ಕಟ್ಟಡದಲ್ಲೇ ಮನೆ ಮಾಡಿಕೊಂಡು ಸಾಧಾರಣ ಒಂದು ತಿಂಗಳಾಗುವಾಗ ಮರದ ಕಾಲಿನವನು ಕಸಬರಿಗೆ ಮತ್ತು ನೀರಿನ ಬಾಲ್ದಿಗಳನ್ನು ಹಿಡಿದುಕೊಂಡು ನಮ್ಮ ಶಾಲಾ ವಠಾರದಲ್ಲಿ ಅತ್ತಿತ್ತ ಹೋಗುತ್ತಿದ್ದುದ್ದನ್ನು ಕಂಡೆನು. ಸದ್ಯವೇ ಮಿ. ಕ್ರೀಕಲ್ ರವರೂ, ವಿದ್ಯಾರ್ಥಿಗಳೂ ಬರುವರೆಂದೂ, ಶಾಲೆ ಕ್ರಮಪ್ರಕಾರವಾಗಿ ಪ್ರಾರಂಭವಾಗುವುದೆಂದೂ ತಿಳಿದೆನು. ನಮ್ಮ ಶಾಲೆಯ ಕಟ್ಟಡವನ್ನು ಇಬ್ಬರು ಹೆಂಗುಸರೂ, ಆ ಮರದ ಕಾಲಿನವನೂ ಗುಡಿಸಿ ತೊಳೆಯಲು ಪ್ರಾರಂಭಿಸಿದರು. ಇದಕ್ಕಾಗಿ ನಾವಿಬ್ಬರೂ ನಮ್ಮ ಕೋಣೆಯನ್ನು ಬಿಟ್ಟು ಕೊಡಬೇಕಾಯಿತು. ಆ ದಿನ ನಾವು ಸೀನಿದಷ್ಟು ಸೀನು ಮುಂದೆ ಎಂದೂ ಸೀನಲಿಲ್ಲ. ಅವರು ಗುಡಿಸಿ ಧೂಳೆಬ್ಬಿಸಿದಾಗ ನಮ್ಮ ಶಾಲೆಯ ಕಟ್ಟಡವೇ ಇಂದು ನಸ್ಯದ ಡಬ್ಬಿಯಂತಾಗಿ ಎಲ್ಲರೂ ಸೀನುವಂತೆ ಮಾಡಿತು.

ಒಂದು ದಿನ ಸಾಯಂಕಾಲ ಮಿ. ಕ್ರೀಕಲರೂ ಅವರ ಸಂಸಾರದ ಇತರರೂ ಸೆಲಂ ಶಾಲೆಗೆ ಬಂದರು – ಅಂದರೆ, ಶಾಲಾವಠಾರದಲ್ಲಿದ್ದ ಅವರ ಮನೆಗೆ ಬಂದರು. ಮಿ. ಕ್ರೀಕಲರ ಮನೆಯೂ ಅದಕ್ಕೆ ಸಂಬಂಧಿಸಿದ ಚಿಕ್ಕ ಹೂದೋಟವೂ ಬಹು ಚೆನ್ನಾಗಿ ಇಡಲಾಗಿದ್ದುವು. ಆದರೆ, ನಮ್ಮ ಶಾಲೆಯ ಆಟದ ಮೈದಾನ ಮಾತ್ರ ಮರುಭೂಮಿಯಂತಿತ್ತು – ಆ ಮೈದಾನ ಒಂಟೆಗೆ ಬಹು ಸಂತೋಷಪ್ರದವಾದ ಸ್ಥಳವಾಗಬಹುದೆಂದು ನಾನು ಗ್ರಹಿಸುತ್ತಿದ್ದೆನು.

ಮಿ. ಕ್ರೀಕಲರು ಅವರ ಮನೆಗೆ ಬಂದ ಕೂಡಲೇ ಮರದ ಕಾಲಿನವನು ನನ್ನನ್ನು ಕರೆದುಕೊಂಡು ಹೋಗಿ ಮಿ. ಕ್ರೀಕಲರ ಎದುರು ನಿಲ್ಲಿಸಿದನು ಮತ್ತು ಅವನು ಅವರ ಬಹು ಸಮೀಪದಲ್ಲಿ ಕುಳಿತುಕೊಂಡನು. ಮಿ. ಕ್ರೀಕಲರ ಎಡಬದಿಯಲ್ಲಿ ಅವರ ಹೆಂಡತಿಯೂ ಮಗಳೂ ಕುಳಿತಿದ್ದರು.

ಮಿ. ಕ್ರೀಕಲರು ಸ್ಥೂಲದೇಹಿಗಳು. ಅವರ ತಲೆಯಲ್ಲಿ ಕೂದಲು ಸ್ವಲ್ಪ ಕಡಿಮೆಯೇ ಇತ್ತು. ಆದರೆ ಆ ಇದ್ದ ಕೂದಲನ್ನೇ ಇಲ್ಲದಿದ್ದ ಭಾಗಕ್ಕೆ ಬಾಚಿ ಬರಮಾಡಿಕೊಂಡು, ತಲೆಯಲ್ಲಿ ತಕ್ಕ ಮಟ್ಟಿಗೆ ಕೂದಲಿದ್ದವರಂತೆಯೇ ತೋರಿಸಿಕೊಳ್ಳುತ್ತಿದ್ದರು. ಅವರ ಹಣೆಯ ಮೇಲೂ ಮೇಲ್ಕೆನ್ನೆಗಳ ಮೇಲೂ ದಪ್ಪದ ರಕ್ತನಾಳಗಳು ಎದ್ದು ತೋರುತ್ತಿದ್ದುವು. ಕಣ್ಣುಗಳೆರಡು ಚಿಕ್ಕದಾಗಿದ್ದು, ಅವೂ ಸಹ ಗುಂಡಿಯಲ್ಲಿದ್ದುದರಿಂದ ಅವರ ಚಿಕ್ಕದಾದ ಮೂಗು ಎತ್ತಿ ಇಟ್ಟಂತೆ ತೋರುತ್ತಿತ್ತು. ಅವರ ಕುರಿತಾದ ಬಹು ವಿಶೇಷದ ಒಂದು ಸಂಗತಿಯೆಂದರೆ ಅವರ ಸ್ವರ. ಅದು ಬಹು ಸಣ್ಣ ಸ್ವರ – ಸಾಧಾರಣ ಏನೂ ಕೇಳಿಸದಷ್ಟು ಸಣ್ಣ ಸ್ವರ. ಸ್ವಲ್ಪ ಜೋರಾಗಿ ಮಾತಾಡಿದಾಗಲಂತೂ ಅದು ಬಹು ಕೀರುಧ್ವನಿಯದೇ ಆಗಿ ಹೋಗುತ್ತಿತ್ತು. ಅವರ ಮುಖ ಸದಾ ಉರಿಯುತ್ತಿರುವಂತೆ ತೋರುತ್ತಿತ್ತು ಮಾತ್ರವಲ್ಲದೆ, ಆ ಉರಿ ತೇಜಸ್ಸನ್ನು ಕಂಡವರೂ ಸಹ ಉರಿದು ಹೋಗಿಬಿಡುವಷ್ಟು ಕಠಿಣವಾಗಿತ್ತು. ಅವರು ನನ್ನನ್ನು ನೋಡಿ –

"ಇವನೇಯೋ ಹಲ್ಲು ಹರಿತದವನು – ತನ್ನ ಹಲ್ಲಿಗೆ ಅರ ಹಾಕಿಸಿಕೊಳ್ಳಲು ಬಂದವನು?" ಅಂದರು.

ಸಮೀಪದಲ್ಲಿದ್ದ ಮರದ ಕಾಲಿನವನಂದನು –

". . .ಅರ ಹಾಕಿಸಿಕೊಳ್ಳಲು ಬಂದವನು?"

"ತಿರುಗು, ನೋಡೋಣ" ಅಂದರು ಮಿ. ಕ್ರೀಕಲರು.

ಮರದ ಕಾಲಿನವನು ನನ್ನನ್ನು ತಿರುಗಿಸಿ, ಬೆನ್ನಿನಲ್ಲಿದ್ದ ರಟ್ಟು ಮತ್ತು ಅದರಲ್ಲಿ ಬರೆದಿದ್ದುದನ್ನು ಅವರು ನೋಡಿ ಓದುವಂತೆ ನಿಲ್ಲಿಸಿದನು. ಅನಂತರ ನನ್ನನ್ನು ಕರೆದುಕೊಂಡು ಹೋಗಿ ಮಿ. ಕ್ರೀಕಲರ ಬಹು ಸಮೀಪದಲ್ಲಿ ನಿಲ್ಲಿಸಿದನು. ಅವರು ನನ್ನ ಎಡಕಿವಿಯನ್ನು ಹಿಡಿದು ಜಿಗುಟುತ್ತಲೂ ತಿರುವುತ್ತಲೂ ಕೆಲವು ಬೆದರಿಕೆಯ ಮಾತುಗಳನ್ನಾಡತೊಡಗಿದರು. ಅವರು ಹೇಳ ತೊಡಗಿದರು –

"ನಾನು ಯಾರು ಗೊತ್ತಿದೆಯೇ?"

ಮರದ ಕಾಲಿನವನು ಪ್ರತಿಧ್ವನಿಯಂತೆ ನುಡಿದನು –

"ನಾನು ಯಾರು ಗೊತ್ತಿದೆಯೇ?"

"ನಾನೊಬ್ಬ ರಾಕ್ಷಸ – ಮಿ. ಮರ್ಡ್ಸ್ಟನ್ನರು ನನ್ನ ಸ್ನೇಹಿತರು" ಅಂದರು ಮಿ. ಕ್ರೀಕಲರು.

ಮರದ ಕಾಲಿನವನು –

"…ರಾಕ್ಷಸ ಸ್ನೇಹಿತರು" ಎಂದಂದನು.

ಪುನಃ ಮಿ. ಕ್ರೀಕಲರು –

"ನಾನು ಯಾರಿಗೂ ದಾಕ್ಷಿಣ್ಯ ತೋರಿಸುವವನಲ್ಲ – ನಾನು ಯಾರಿಗೂ ಬಗ್ಗುವವನಲ್ಲ – ನನ್ನ ಮನೆಯವರನ್ನೇ ಆದರೂ ಬಿಡುವವನಲ್ಲ – ಕೆಲಸಗಳೆಲ್ಲಾ ನನ್ನ ಇಚ್ಛೆಯಂತೆಯೇ ನಡೆಯಬೇಕು. ಮಿ. ಮರ್ಡ್ಸ್ಟನ್ನರೂ ನಾನೂ ಆಲೋಚಿಸಿದುದನ್ನೆಲ್ಲಾ ಸಾಧಿಸಿಯೇ ಸಾಧಿಸುವೆವು – ಮಾಡಿಸಿಯೇ ಮಾಡಿಸುವೆವು. ಶಿಸ್ತು, ಕ್ರಮಗಳನ್ನು ನಾವು ನಿರ್ದಾಕ್ಷಿಣ್ಯವಾಗಿ ಜಾರಿಗೊಳಿಸಿಯೇಗೊಳಿಸುವೆವು" ಅಂದರು.

ಪ್ರತಿಧ್ವನಿಯೂ ಹಾಗೆಯೇ ನುಡಿಯಿತು.

ಈ ಸ್ವಸ್ತಿವಾಚನ ನಡೆಯುತ್ತಿದ್ದ ಹಾಗೆಯೇ ಮಿ. ಕ್ರೀಕಲರು ನನ್ನ ಕಿವಿಯನ್ನು ಹಿಂಡುತ್ತಲೇ ಇದ್ದರು. ನನ್ನ ಕಿವಿ ಮುಖಗಳು ಕೆಂಪೇರುತ್ತಿದ್ದ ಹಾಗೆಯೇ ನನ್ನ ಕಣ್ಣುಗಳಲ್ಲಿ ನೀರು ತುಂಬತೊಡಗಿತು. ಇದೇ ಸಮಯದಲ್ಲಿ ಹಿಂಡಿದ ಕಿವಿ ನನ್ನದಾದರೂ ಸಿಟ್ಟಿನ ಮುಖ ಅವರದಾಗಿದ್ದುದರಿಂದ, ಅವರ ಮುಖ ಮೊದಲಿಗಿಂತಲೂ ಅಧಿಕವಾಗಿ ಕೆಂಪಾಗುತ್ತಾ ಸ್ವರ ತಾರಕಕ್ಕೆ ಏರಿತು. ಅರ್ಥಾತ್, ಪರಿಪೂರ್ಣ ಕೀರುಧ್ವನಿಗೆ ಮುಟ್ಟಿತು. ಕೀರು ಸ್ವರದ ಮಿ. ಕ್ರೀಕಲರಿಗೆ ಈಗಲಂತೂ ಮರದ ಕಾಲಿನವನ ಧ್ವನಿಯ ಮೇಳ ಅತ್ಯಗತ್ಯವಾಗಿತ್ತು. ಈತನು ಮಿ. ಕ್ರೀಕಲರ ಎಲ್ಲಾ ಭಾಷಣಗಳಲ್ಲೂ ಧ್ವನಿವರ್ಧಕ ಮೇಳವಾಗಿ ಸಹಕರಿಸುತ್ತಿದ್ದನು.
"ಈಗ ಅವನನ್ನು ಇಲ್ಲಿಂದ ಕರೆದುಕೊಂಡು ಹೋಗು – ಮತ್ತೆ ನೋಡುತ್ತೇನೆ" ಅಂದರು, ಮಿ. ಕ್ರೀಕಲರು.

ಈ ಸಮಯದ ನನ್ನ ದುಃಖ, ನಾಚಿಕೆಗೇಡು, ವೇದನೆಗಳಿಗೆಲ್ಲ ಹೆಚ್ಚಾಗಿ ನನಗಿದ್ದ ಇನ್ನೊಂದು ದುಃಖವನ್ನು ಅವರೊಡನೆ ಈಗಲೇ ಹೇಳಿಕೊಂಡರೆ – ಈಗಲೇ ಅವರಿಗೆ ಸಾಕಷ್ಟು ಬಲಿ ನನ್ನ ಕಡೆಯಿಂದ ಸಂದಿದ್ದುದರಿಂದ – ಮುಂದೆ ಸೌಮ್ಯದ ಅಭಯ ದೊರಕಬಹುದೆಂದು ಊಹಿಸಿ, ಧೈರ್ಯ ಮಾಡಿಕೊಂಡು –
"ಸರ್, ಸಿಟ್ಟು ಮಾಡಬೇಡಿ, ಕೇಳದೇ ನಿರ್ವಾಹವಿಲ್ಲ – ಕ್ಷಮಿಸಬೇಕು ಸರ್. ಎಲ್ಲಾ ಹುಡುಗರು ಬರುವ ಮೊದಲೇ ಈ ರಟ್ಟನ್ನು ಬಿಚ್ಚಿದರೆ ಆಗದೆ?" ಎಂದು ಕೇಳಿಯೇ ಬಿಟ್ಟೆ.

ನಾನು ಮಾತಾಡಲು ಪ್ರಾರಂಭಿಸುವಾಗಲೇ ಏಳಲು ಪ್ರಾರಂಭಿಸಿದ್ದ ಮಿ. ಕ್ರೀಕಲರು, ನನ್ನ ಮಾತು ಪೂರೈಸುವಷ್ಟರಲ್ಲಿ ತನ್ನ ಕುರ್ಚಿಯಿಂದ ಸಂಪೂರ್ಣ ಎದ್ದು, ಒಂದು ಹೆಜ್ಜೆ ಮುಂದಿಟ್ಟರು. ಈ ಕ್ರಮಗಳನ್ನೆಲ್ಲ ಕಂಡು ನಾನು, ಫಕ್ಕನೆ, ನಿಂತಲ್ಲಿಂದ ಹಾರಿ, ಓಡಿಕೊಂಡೇ ಹೋಗಿ ನನ್ನ ಕೋಣೆಯನ್ನು ಸೇರಿದೆನು. ದೇವರ ದಯೆಯಿಂದ ನನ್ನನ್ನು ಹಿಂಬಾಲಿಸಿ ಯಾರೂ ಬರಲಿಲ್ಲ.

ಶಾಲೆ ಪ್ರಾರಂಭವಾಗುವ ಮೊದಲು ವಿದ್ಯಾರ್ಥಿಗಳು ಪರಸ್ಪರ ಭೇಟಿಯಾಗಿ ಪರಿಚಯ ಮಾಡಿಕೊಳ್ಳುವ ಕ್ರಮವಿತ್ತು. ಎಲ್ಲ ವಿದ್ಯಾರ್ಥಿಗಳಿಗಿಂತ ಮೊದಲು ಬಂದವನು ಟೋಮಿಟ್ರೇಡಲ್ಸ್. ಅವನು ನನ್ನ ಬೆನ್ನ ಮೇಲಿದ್ದ ರಟ್ಟಿನ ಮುನ್ನೆಚ್ಚರಿಕೆಯನ್ನು ಓದಿ, ಮೊದಲು, ಬಿದ್ದು ಬಿದ್ದು ನಗಾಡಿದನು. ಅನಂತರ ನನ್ನನ್ನು ಕಂಡು ಹೆದರಿದವನಂತೆ ನಟಿಸಿ ಹಾಸ್ಯ ಮಾಡಿದನು. ಮತ್ತೆ ಏನೇನೋ ಅನ್ನುತ್ತ ತುಂಬಾ ಕುಚೇಷ್ಟೆ ಹಾಸ್ಯಗಳನ್ನೆಲ್ಲ ಮಾಡಿ, ಮುಂದೆ ಬರುವವರು ಮಾಡಿದ ಹಾಸ್ಯ, ಕುಚೇಷ್ಟೆಗಳನ್ನು ಸಹಿಸಲು ಬೇಕಾದಷ್ಟು ಅನುಭವವನ್ನೂ ಮೊಂಡುತನವನ್ನೂ ನನಗೆ ಕಲಿಸಿಕೊಟ್ಟನು. ಆದರೆ ಮತ್ತೆ ಬಂದ ಬಾಲಕರಲ್ಲಿ ಬಹು ಹೆಚ್ಚು ಮಂದಿಗೆಲ್ಲ ಅವರವರದೇ ವಿವಿಧ ರೂಪದ ದುಃಖಗಳಿದ್ದುದರಿಂದ, ನಾನು ಊಹಿಸಿದಷ್ಟು ಬಾಲಕರು ನನ್ನನ್ನು ಹಾಸ್ಯ ಮಾಡಲಿಲ್ಲ. ಕೊನೆಗೆ ಜೆ. ಸ್ಟಿಯರ್ಫೋರ್ತ್ ಬಂದನು.

ಸ್ಟಿಯರ್ಫೋರ್ತನು ನಮ್ಮೆಲ್ಲರಿಗಿಂತ ದೊಡ್ಡವನಾಗಿದ್ದನು. ನಮ್ಮೆಲ್ಲರಿಗಿಂತ ಸುಂದರನೂ ಬುದ್ಧಿವಂತನೂ ಮಾತುಗಾರಿಕೆಯವನೂ ಆಗಿದ್ದನು. ಅವನು ನಮ್ಮ ಮಧ್ಯಕ್ಕೆ ಬರುವಾಗಲೇ ಈ ವಿಷಯವನ್ನು ನಾವು ತಿಳಿಯಬಹುದಿತ್ತು. ಅವನು ಮಾತುಕಥೆ, ನಡೆನುಡಿಗಳಲ್ಲಿ ಚೆನ್ನಾಗಿ ನುರಿತವನಾಗಿದ್ದನು. ಬರುತ್ತಲೇ ಅವನು ನಮ್ಮೆಲ್ಲರ ಮುಖಂಡನಾದನು. ನಮ್ಮೆಲ್ಲರನ್ನು ಪರಸ್ಪರವಾಗಿ ವಿಚಾರಿಸಿ, ಪರಿಚಯ ಮಾಡಿಕೊಟ್ಟನು. ಅವನ ಮಾತುಗಾರಿಕೆಯ ಎದುರು ನನ್ನ ಅಂಜಿಕೆ, ನಾಚಿಕೆಗಳೆಲ್ಲ ಮಾಯವಾದವು. ಸರಳವಾದ, ಪ್ರೇಮಮಯ ಮಾತುಗಳಿಂದ ನನ್ನ ಮನೆ, ಕುಟುಂಬ, ಜೀವನದ ಕಥೆಗಳನ್ನೆಲ್ಲ ಆಗಲೇ ವಿಚಾರಿಸಿ ನನ್ನಿಂದ ಬಹು ಸುಲಭವಾಗಿ, ನನಗೆ ಸಂತೋಷವಾಗುವ ಕ್ರಮದಲ್ಲಿ, ತಿಳಿದುಕೊಂಡನು. ಸ್ವಲ್ಪ ಸಮಯದಲ್ಲೇ ನಮ್ಮ ಮುಖಂಡ ಸ್ಟಿಯರ್ಫೋರ್ತನು ನನ್ನ ಕಡೆಯವನೇ ಆಗಿ, ನಾನು ಯಾರಿಗೂ ಹೆದರುವ ಅಗತ್ಯವಿಲ್ಲವೆಂದೂ ನನಗೆ ಭರವಸೆ ದೊರಕಿತು.

ಹೀಗೆಲ್ಲಾ ನಾವು ಆ ದಿನ ಮಾತಾಡುತ್ತಾ, ಸ್ಟಿಯರ್ಫೋರ್ತನು ನನ್ನನ್ನು ನೋಡಿ,
"ಕಾಪರ್ ಫೀಲ್ಡ್, ನಿನ್ನ ಹತ್ತಿರ ಹಣವಿದ್ದರೆ ಇತ್ತ ಕೊಡು, ನಾನು ಜೋಪಾನವಾಗಿಟ್ಟುಕೊಳ್ಳುತ್ತೇನೆ" ಎಂದನ್ನುತ್ತಾ ತನ್ನ ಇಜಾರದ ಜೇಬಿನೊಳಗೆ ಕೈಯ್ಯನ್ನಿಟ್ಟುಕೊಂಡು ನನ್ನ ಹತ್ತಿರ ಬಂದು ನಿಂತನು.
"ಸ್ವಲ್ಪ ಹಣವಿದೆ – ಏಳು ಶಿಲ್ಲಿಂಗ್" ಎಂದು ನಾನಂದೆ.
"ಹಾಗಾದರೆ ಇತ್ತ ಕೊಡು" ಎಂದನ್ನುತ್ತಾ ಕೈ ನೀಡಿದನು. ನಾನು ನನ್ನಲ್ಲಿದ್ದ ಆ ಹಣವನ್ನೆಲ್ಲ ಅವನಿಗೆ ಕೊಟ್ಟೆನು.
ಅವನು ಅಷ್ಟಕ್ಕೇ ತೃಪ್ತನಾಗದೆ ನನ್ನ ಅಭೀಷ್ಟಗಳನ್ನು ನೆರವೇರಿಸುವ ಸೌಜನ್ಯದಿಂದ –
"ಅಲ್ಲ, ಕಾಪರ್ಫೀಲ್ಡ್, ನಿನಗೆ ಏನಾದರೂ ತಿಂಡಿಯೋ, ಪಾನೀಯವೋ ಬೇಕೆಂದಾದರೆ ತಿಳಿಸು, ದಾಕ್ಷಿಣ್ಯ ಮಾಡಬೇಡ" ಎಂದಂದನು.

ಇಷ್ಟರಲ್ಲೇ ನನ್ನ ಹಣವನ್ನು ಕೈಬಿಟ್ಟು ಇನ್ನೊಬ್ಬರ ವಶಕ್ಕೆ ಕೊಟ್ಟೆನಲ್ಲಾ ಎಂದು ನನಗೆ ಸ್ವಲ್ಪ ಬೇಸರವೂ ಆಗ ತೊಡಗಿತು. ಆ ಬೇಸರದಿಂದಲೇ ನಾನಂದೆ –
"ಏನೂ ಬೇಡ."

“ದಾಕ್ಷಿಣ್ಯ ಮಾಡಬೇಡ – ಇಂಥ ಪ್ರಾರಂಭದ ದಿನದಲ್ಲಿ, ಊಟವಾದ ನಂತರ ಕರ್‍ರೆಂಟು ವೈನನ್ನು ತರಿಸಿ ಎಲ್ಲರೂ ಸಂತೋಷದಿಂದ ಕುಡಿಯುವ ಕ್ರಮ ಲಾಗಾಯ್ತಿನಿಂದ ಇಲ್ಲಿ ಇದೆ – ಅದರ ಅನುಭವ ನಿನಗೆ ಇರಲು ಕಾರಣವಿಲ್ಲವಷ್ಟೆ? ಸ್ವಲ್ಪ ತರಿಸಲೇ?” ಅಂದನು ಸ್ಟಿಯರ್ಫೋರ್ತ್.

“ಆ ಕ್ರಮವಿದೆಯೆಂದು ನನಗೆ ಗೊತ್ತಿಲ್ಲ – ಹಾಗಾದರೆ ತರಿಸು” ಎಂದು ನಾನು ಸಮ್ಮತಿಯಿತ್ತೆ. ನನ್ನ ಹೆಡ್ಡುತನಕ್ಕೇ ನಾನು ನಾಚಿಕೊಳ್ಳುತ್ತಾ ಸ್ಟಿಯರ್ಫೋರ್ತನ ಸರಳತೆ, ಚಟುವಟಿಕೆ ಮೊದಲಾದ ಮಹಾ ಗುಣಗಳಿಗಾಗಿ ನಾನು ಸಂತೋಷಪಟ್ಟೆನು.

“ಬರೀ ಪಾನೀಯಗಳಿಂದ ಸಂತೋಷದ ಕೂಟ ಪೂರ್ಣವಾಗದು. ಕೂಟದ ಲಕ್ಷಣಕ್ಕಾಗಿ ತಿಂಡಿಗಳೂ ಜತೆಗೆ ಇರಲಿ. ನಮಗೆ ಸಂತೋಷಪಡಲು ಎಡೆಯಿದ್ದಾಗ, ಮತ್ತು ಅನುಕೂಲವಿದ್ದಾಗ, ನಾವು ಅದನ್ನು ಕಳೆದುಕೊಳ್ಳಬಾರದು,. ಅದರಲ್ಲೂ ಶಾಲಾ ಪ್ರಾರಂಭದ ಈ ದುಃಖದ ಸಮಯದಲ್ಲಿ ಇಂಥ ಸಂತೋಷಗಳು ಅತ್ಯಗತ್ಯ” ಎಂದಂದನು ಸ್ಟಿಯರ್ಫೋರ್ತ್.

“ಎಲ್ಲವನ್ನೂ ನಿನಗೊಪ್ಪಿಸಿದ್ದೇನೆ” ಎಂದಷ್ಟು ಮಾತ್ರ ನಾನು ಉತ್ತರವಿತ್ತು ಮುಂದಿನ ಕಾರ್ಯಗಳನ್ನು ಅವನಿಗೆ ವಹಿಸಿದೆ. ಸ್ಟಿಯರ್ಫೋರ್ತನ ಪರೋಪಕಾರ ಬುದ್ಧಿ, ದುರ್ಬಲರನ್ನು ಕುರಿತು ಶಕ್ತಿವಂತರಿಗಿರಬೇಕಾಗಿದ್ದ ಹಿರಿತನದ ಬುದ್ಧಿ, ಮುಂದಾಳುತನದ ಬುದ್ಧಿ, ಇವನ್ನೆಲ್ಲ ಕಂಡು ಅವನ ವ್ಯಕ್ತಿತ್ವಕ್ಕೆ ನಾನು ಮರುಳಾಗಿಹೋದೆ.

ತನ್ನ ಮಾತಿಗೆ ಅನುಗುಣವಾಗಿ ಸ್ಟಿಯರ್ಫೋರ್ತನು ಆ ದಿನ ರಾತ್ರಿ ತಿಂಡಿ ಪಾನೀಯಗಳನ್ನು ತರಿಸಿ, ನಮ್ಮ ಊಟವಾದನಂತರ, ಈ ಗುಟ್ಟಿನ ಕೂಟವನ್ನು ಏರ್ಪಡಿಸಿದನು. ಅಷ್ಟೊಂದು ಬಂದೋಬಸ್ತಿನ ಶಾಲಾ ಕಂಪೌಂಡಿನ ಒಳಕ್ಕೆ ಹೊರಗಡೆಯಿಂದ ಆ ವೈನ್, ತಿಂಡಿ ಮೊದಲಾದವುಗಳನ್ನು ಹೇಗೆ ತರಿಸಿದನೋ ನಾನರಿಯೆ! ಅಂದಿನ ಕೂಟದ ಖರ್ಚೆಲ್ಲ ನನ್ನ ಬಂಡುವಾಳದಿಂದ ನಡೆದಿದ್ದುದರಿಂದ ನಾನೇ ಕೂಟದ ಅಧ್ಯಕ್ಷನಾಗಬೇಕೆಂದು ಸ್ಟಿಯರ್ಫೋರ್ತನು ಸೂಚಿಸಿದುದಕ್ಕೆ ನಾನು ಸಮ್ಮತಿಸಲಿಲ್ಲ. ಸ್ಟಿಯರ್ಫೋರ್ತನಂಥಾ ಅನುಭವಸ್ಥನೂ ದಕ್ಷನೂ ಗೌರವಾನ್ವಿತನೂ ವಿಶಿಷ್ಟಗುಣಸಂಪನ್ನನೂ ಇರುವಲ್ಲಿ ನಾನು ಅಧ್ಯಕ್ಷನಾಗಲು ಹೆದರಿ, ನಾನೇ ಅವನನ್ನು ಅಧ್ಯಕ್ಷನಾಗಬೇಕೆಂದು ಕೇಳಿಕೊಂಡೆ. ಸಂತೋಷ ಸಮಾರಂಭಗಳಲ್ಲಿ ಯಾರ ಮನಸ್ಸನ್ನೂ ನೋಯಿಸಲೊಲ್ಲದ ಸ್ಟಿಯರ್ಫೋರ್ತನು ನಮ್ಮ ಅಂದಿನ ರಾತ್ರಿಯ ಕೂಟಕ್ಕೆ ಅಧ್ಯಕ್ಷನಾಗಿ ಕುಳಿತು, ತಿಂಡಿ ಪಾನೀಯಗಳನ್ನು ಕ್ರಮವಾಗಿ ಹಂಚಿ, ಕೂಟದ ಕಾರ್ಯವನ್ನು ಯಶಸ್ವಿಗೊಳಿಸಿದನು.

ಆ ಕೂಟದ ಅಂಗವಾಗಿ ನಾವೆಲ್ಲರೂ ಅವರವರಿಗೆ ತಿಳಿದ ವರ್ತಮಾನಗಳನ್ನೂ ಚರಿತ್ರೆಗಳನ್ನೂ ಸಭೆಗೆ ತಿಳಿಸಿದೆವು. ನಾನು ಆ ಶಾಲೆಯ ಶಿಕ್ಷಕರ, ಮತ್ತು ಇತರ ಅನೇಕ ವಿಷಯಗಳ ಕುರಿತಾಗಿ ಚರಿತ್ರೆಯನ್ನೂ ಹೇಳಿಕೆಗಳನ್ನೂ ಕೇಳಿ ತಿಳಿದುಕೊಂಡೆನು.

ಮರದ ಕಾಲಿನವನ ಚರಿತ್ರೆ, ಮಿ. ಕ್ರೀಕಲರ ಚರಿತ್ರೆ, ಮಿ. ಮೆಲ್ಲರ ಚರಿತ್ರೆ ಮೊದಲಾದುವುವನ್ನು ನಾವು ಕೇಳಿ ತಿಳಿದುಕೊಂಡೆವು. ಮಿ.ಕ್ರೀಕಲರು ಈ ವಿದ್ಯಾಸಂಸ್ಥೆಯ ಅತ್ಯಂತ ಮೇಲಿನ ಅಧಿಕಾರಿ ಮತ್ತು ಸಮಸ್ತ ವಿಷಯಗಳ ಯಜಮಾನ. ವಿದ್ಯಾ ವಿಭಾಗದಲ್ಲಿ ಮಿ. ಶಾರ್ಪರು ಮುಖ್ಯೋಪಾಧ್ಯಾಯರಾಗಿದ್ದಾರೆ. ಮಿ. ಕ್ರೀಕಲರೂ ಮರದ ಕಾಲಿನ ಟಂಗೆಯೂ ಜತೆ ಸೇರಿ, ಮಿ. ಕ್ರೀಕಲರ ಪತ್ನಿಯ ಸ್ವಂತ ಹಣವನ್ನು ಜತೆ ಸೇರಿಸಿಕೊಂಡು ಕಾಡು ಉತ್ಪತ್ತಿಗಳ ಸಂಗ್ರಹ ಮತ್ತು ಮಾರಾಟದ ವ್ಯಾಪಾರ ನಡೆಸಿದ್ದರಂತೆ. ಆದರೆ ಆ ವ್ಯವಾಟದಲ್ಲಿ ಅವರೀರ್ವರೂ ದಿವಾಳಿಯಾದುದು ಮಾತ್ರವಲ್ಲದೆ, ಕ್ರಿಮಿನಲ್ ಜೈಲಿನಿಂದ ಪಾರಾಗಲೇ ಬಹಳ ಕಷ್ಟವಾಗಿತ್ತಂತೆ. ಆಗ ಜೈಲನ್ನು ತಪ್ಪಿಸಿಕೊಳ್ಳಲು ಟಂಗೆ ತಯಾರಿಸಿಕೊಟ್ಟ ಕೃತಕ ರಿಕಾರ್ಡುಗಳು ಬಹುಮಟ್ಟಿಗೆ ಸಹಾಯವಾದುವಂತೆ. ಅಂಥಾ ಆಪತ್ಕಾಲದ ಸ್ನೇಹಿತನಾದ ಟಂಗೆಯನ್ನು ಬಿಡಲಾರದೆ, ಇಂದು ಮಿ. ಕ್ರೀಕಲರು ಟಂಗೆಗೆ ಈ ಶಾಲೆಯಲ್ಲಿ ಒಂದು ಕೆಲಸಕೊಟ್ಟು ಸಾಕುತ್ತಿರುವುದಂತೆ.

ಮಿ. ಕ್ರೀಕಲರ ನಿಯಮ ನಿಷ್ಠೆ, ಶಿಸ್ತುಗಳೆಲ್ಲ ಒಂದು ಪಂಥದಿಂದ ಹೊರಟವುಗಳಂತೆ. ಆ ಪಂಥದ ಶಿಸ್ತು, ನಿಯಮಗಳ ಕಾರಣವಾಗಿ ಮಿ. ಕ್ರೀಕಲರ ಪತ್ನೀ ಪುತ್ರಿಯರೂ ಸಹ, ಅವರ ಸ್ವಂತ ಮನೆಯಲ್ಲಾದರೂ ಮಿ. ಕ್ರೀಕಲರಿಗೆ ಸದಾ ಹೆದರಿಕೊಂಡೇ ಇರುತ್ತಿದ್ದರಂತೆ. ಮಿ. ಕ್ರೀಕಲರ ಏಕಮಾತ್ರ ಪ್ರಾಯಪ್ರಬುದ್ಧ ಮಗ ತಂದೆಯ ಶಿಸ್ತನ್ನು ಉಲ್ಲಂಘಿಸಿದುದಕ್ಕಾಗಿ ಮನೆಯಿಂದಲೂ ಊರಿನಿಂದಲೂ ಗಡಿಪಾರು ಮಾಡಲ್ಪಟ್ಟಿದ್ದನೆಂದು ತಿಳಿಯಿತು.

ಮಿ. ಶಾರ್ಪರೂ ಮತ್ತು ಮಿ. ಮೆಲ್ಲರೂ ವಿದ್ಯಾವಂತರಾಗಿದ್ದು ಶಾಲೆಯ ವಿದ್ಯಾ ವಿಭಾಗದ ವಿಶಿಷ್ಟ ಕೆಲಸಗಳನ್ನು ನಡೆಸುತ್ತಿದ್ದರು. ಮಿ. ಕ್ರೀಕಲರಿಗೆ ನಮ್ಮ ಶಾಲೆಯ ಒಂದನೆಯ ದರ್ಜೆಯ ಬಾಲಕರಷ್ಟೂ ವಿದ್ಯೆ ಬರುತ್ತಿರಲಿಲ್ಲವೆಂದು ನಮ್ಮ ಪೈಕಿ ಕೆಲವರು ಗುಟ್ಟಾಗಿ ತಿಳಿಸಿದರು. ಮಿ. ಶಾರ್ಪ್ ಮತ್ತು ಮಿ. ಮೆಲ್ಲರಿಗೆ ಹೇರಳ ಸಂಬಳ ಸಲ್ಲುತ್ತಿರುವುದಾಗಿ ವಿದ್ಯಾರ್ಥಿಗಳ ಹಿರಿಯರಲ್ಲಿ ನಂಬಿಕೆಯನ್ನುಂಟುಮಾಡಿ, ಅವರಿಂದ ಹೇರಳ ಹಣ ಪಡೆದು, ಈ ಇಬ್ಬರಿಗೆ ಬಹು ಕಡಿಮೆ ಸಂಬಳ ಕೊಟ್ಟು ಮಿ. ಕ್ರೀಕಲರು ಕೆಲಸ ಮಾಡಿಸುತ್ತಿದರೆಂದೂ ಕೇಳಿದೆ. ಮಿ. ಶಾರ್ಪರು ಕಾಣಲು ಬಹು ಜೋರಿನವರಂತೆ ಕಂಡರೂ, ನಿಜವಾಗಿಯೂ ಜೋರಿನವರಲ್ಲವೆಂದೂ ಅವರು ಧರಿಸಿದ್ದ ತಲೆ ಕೂದಲಿನ ಕವಚದ ಕಾರಣವಾಗಿ ಆತ ಹಾಗೆ ಕಾಣುತ್ತಿದ್ದರೆಂದೂ ಅವರು ಸಾಧಾರಣ ಮಿ. ಮೆಲ್ಲರಷ್ಟೇ ಸಾಧುಗಳೆಂದೂ ತಿಳಿದೆ.

ಮಿ. ಕ್ರೀಕಲರ ಜತೆಯಲ್ಲಿ ಭೋಜನ ಮಾಡುವ ಗೌರವ ಸ್ಟಿಯರ್ಫೋರ್ತಿಗೂ ಮಿ. ಶಾರ್ಪರಿಗೂ ಮಾತ್ರವಿತ್ತಂತೆ. ಸ್ಟಿಯರ್ಫೋರ್ತನನ್ನು ಯಾರೂ ಎಂದೂ ಗದರಿಸಿದ್ದಾಗಲೀ ಬೈದದ್ದಾಗಲೀ ಇಲ್ಲವಂತೆ. ಅವನಿಗೂ ಮಿ. ಕ್ರೀಕಲರ ಮಗಳಿಗೂ ‘ಒಳ್ಳೆಯದು’ ಇತ್ತಂತೆ. ಇನ್ನೂ

ಇಂಥ ವಿಷಯಗಳನ್ನೆಲ್ಲ ಮಾತಾಡಿದೆವು. ಕೆಲವು ಸಂದರ್ಭಗಳಲ್ಲಿ ಸ್ಟಿಯರ್ಫೋರ್ತನೆ ಅದೆಲ್ಲ ನಿಜವೆಂದೂ ಒಪ್ಪುತ್ತಿದ್ದ. ಮಿ. ಕ್ರೀಕಲರ ಜತೆಗೆ ಭೋಜನದಲ್ಲಿ ಉತ್ತಮತರದ್ದನ್ನೆಲ್ಲ ಅವರಿಗೂ ಮತ್ತು ಸ್ಟಿಯರ್ಫೋರ್ತನಿಗೆ ಮಾತ್ರ ಬಡಿಸಿ, ಸ್ವಲ್ಪ ಕೆಳತರದ ಆಹಾರ ವಸ್ತುಗಳನ್ನು ಮಿ. ಶಾರ್ಪರಿಗೆ ಬಡಿಸುತ್ತಿದ್ದರಂತೆ.

ಆ ದಿನದ ಸಮಾರಂಭ ನಿರ್ವಿಘ್ನವಾಗಿ ಕಳೆಯಿತು. ನಾನು ಅಲ್ಲಿನ ಹುಡುಗರಲ್ಲಿ ಒಬ್ಬ ಗಣನೀಯನೇ ಆಗಿಹೋದೆನು. ಸ್ಟಿಯರ್ಫೋರ್ತನ ಅನುಗ್ರಹದ ಕಾರಣವಾಗಿ ಇತರ ಬಾಲಕರು ನನ್ನನ್ನು ಹಾಸ್ಯಮಾಡದೆ, ಹಿಂಸಿಸದೆ ಬಿಟ್ಟರು. ನನ್ನ ತಾಯಿ ಕೊಟ್ಟಿದ್ದ ಹಣ ಪೂರ್ತಿ ಖರ್ಚಾಗಿದ್ದರೂ, ಆ ಕಾರಣದಿಂದ ನನ್ನ ಜೀವನ ಸುಖವಾಗಿ ಸಾಗುವ ಮಾರ್ಗವನ್ನು ಕಂಡೆನು.

ಅಂದಿನಿಂದಲೇ ಸ್ಟಿಯರ್ಫೋರ್ತನು ನನ್ನ ಸ್ನೇಹಿತನಾಗಿ, ರಕ್ಷಕನಾಗಿ, ಮಾರ್ಗದರ್ಶಕನಾಗಿ ಮೆರೆದನು, ನನಗೆ ಅಕ್ಕ ತಂಗಿಯಂದಿರಿದ್ದಿದ್ದರೆ ಅವರು ಸ್ಫುರದ್ರೂಪಿಗಳಾಗಿರುತ್ತಿದ್ದರೆಂದು ನಮ್ಮ ಮನೆಯವರನ್ನೇ ಪ್ರಶಂಸಿಸಿದನು. ಅಂದಿನ ಕೂಟ ವಿಸರ್ಜನೆಯಾದನಂತರ ನಾವು ಮಲಗಿ ನಿದ್ರಿಸಿದೆವು. ತನ್ನ ತೋಳಿನ ಮೇಲೆ ತಲೆಯನ್ನಿಟ್ಟುಕೊಂಡು ಮಲಗಿ ನಿದ್ರಿಸುತ್ತಿದ್ದ ಸ್ಟಿಯರ್ಫೋರ್ತನ ಮೇಲೆ ಕಿಟಕಿಗಾಗಿ ಬೆಳುದಿಂಗಳು ನುಗ್ಗಿ ಬಿದ್ದಿತ್ತು. ನಾನು ಅವನ ಸಮೀಪದಲ್ಲೇ ಮಲಗಿದೆನು. ನನ್ನ ನಿದ್ರೆ ಸ್ವಪ್ನಗಳಿಂದ ಬಾಧಿತವಾಗಿತ್ತು. ಅಂಥ ಸ್ವಪ್ನಗಳಲ್ಲಿ ಒಂದು ಆಶ್ಚರ್ಯಕರವಾದ ಸ್ವಪ್ನವೂ ಇತ್ತು. ಸ್ಟಿಯರ್ಫೋರ್ತನಿಗೆ ಈ ಪ್ರಪಂಚದಲ್ಲಿ ಮಾಡಿ ಪೂರೈಸಲಿದ್ದ ಕೆಲಸಗಳು ಅಪಾರವಾಗಿದ್ದುದರಿಂದ ಅವನು ನಿದ್ರಿಸದೆ, ನಮ್ಮ ಶಾಲಾ ಕಂಪೌಂಡಿನಲ್ಲಿ, ರಾತ್ರಿ ಸಹ ತುಂಬಾ ಕೆಲಸಗಳಲ್ಲಿ ಮಗ್ನನಾಗಿದ್ದಂತೆ ಒಂದು ಸ್ವಪ್ನ ಕಂಡೆನು. ಸ್ವಪ್ನವು ಆಶ್ಚರ್ಯಕರವಾಗಿ ತೋರಿ ಎಚ್ಚತ್ತು ಅದು ನಿಜವೇ ಎಂದು ಸುತ್ತಲೂ ನೋಡಿದಾಗ ಪಕ್ಕದಲ್ಲೇ ಮಲಗಿದ್ದ ಸ್ಟಿಯರ್ಫೋರ್ಥನನ್ನೇ ಕಂಡೆನು. ಅವನ ಸುಂದರ ರೂಪ ಮೊದಲಿನಂತೆಯೇ ಇದ್ದು, ಅವನು ತನ್ನ ತೋಳಿನ ಮೇಲೆ ತಲೆಯನ್ನಿಟ್ಟುಕೊಂಡು ಮಲಗಿ ನಿದ್ರಿಸುತ್ತಿದ್ದನು.

ಅಧ್ಯಾಯ ಏಳು

ಸೆಲಂ ಶಾಲೆಯಲ್ಲಿ ನನ್ನ ಪ್ರಥಮ ಅರ್ಧ ವರ್ಷ

ಮರುದಿನ ವಿಧಿವತ್ತಾಗಿ, ಶ್ರದ್ಧಾಪೂರ್ವಕವಾಗಿ, ಶಾಲೆ ಪ್ರಾರಂಭವಾಯಿತು. ವಿದ್ಯಾರ್ಥಿಗಳು ಮಾತು ನಗೆಗಳಿಂದ ಆವರಣವನ್ನೆಲ್ಲ ಹುರುಪುಗೊಳಿಸುತ್ತಿದ್ದರು. ಈ ರೀತಿ ಒಂದು ವಿಧದಲ್ಲಿ ಘೋರ್ಗರೆಯುತ್ತಿದ್ದ ಕ್ಲಾಸುಗಳು ಹಠಾತ್ತಾಗಿ ಶ್ಮಶಾನಸದೃಶವಾದ ನಿಶ್ಶಬ್ದತೆ ತಾಳಿದ್ದು ಕಂಡು ನಾನು ಬಾಗಿಲ ಕಡೆ ನೋಡಿದೆ. ಅಲ್ಲೇ, ಆಗತಾನೇ, ಮಿ. ಕ್ರೀಕಲರು ಟಂಗೆ ಸಮೇತರಾಗಿ ಬಂದು ನಿಂತಿದ್ದರು. ಕಟ್ಟು ಕಥೆಯ ರಾಕ್ಷಸ ತನ್ನ ಸೆರೆಯಾಳುಗಳನ್ನು ಭಕ್ಷಿಸುವ ಮೊದಲು ಅವರನ್ನೆಲ್ಲ ನಿಂತು ನೋಡಿ ಸಂತೋಷಪಡುವಂತೆ ಮಿ. ಕ್ರೀಕಲರು ನಮ್ಮನ್ನು ಅಧಿಕಾರ ಮತ್ತತೆಯ ಆನಂದದಿಂದ ನೋಡಿ ಸಂತೋಷಪಡುತ್ತಿದ್ದರು. ಮಿ. ಕ್ರೀಕಲರ ರೂಪವೂ, ಅಲ್ಲಿನ ಸನ್ನಿವೇಶವೂ ಕಥೆಯ ರಾಕ್ಷಸನ ರೂಪ, ಸನ್ನಿವೇಶಗಳಿಗಿಂತ ಭಯಂಕರವಾಗಿದ್ದುವು. "ಮಕ್ಕಳೇ, ಶಬ್ದ ಮಾಡಬೇಡಿರಿ" ಎಂದು ಟಂಗೆ ಆರ್ಭಟಿಸಿದುದು ಕೇವಲ ಸಾಂಪ್ರದಾಯಿಕ ಘೋಷಣೆಯಾಗಿತ್ತೇ ಹೊರತು ಹಾಗೆ ಎಚ್ಚರಿಸುವ ಅಗತ್ಯವೇ ಇಲ್ಲದಿದ್ದಷ್ಟರ ನಿಶ್ಶಬ್ದ ಪರಿಸ್ಥಿತಿ ಅಲ್ಲಿತ್ತು. ಮಿ. ಕ್ರೀಕಲರು ಮಾತಾಡಿದ್ದನ್ನು ನಾವೆಲ್ಲ ಕಂಡೆವು, ಜತೆಯಲ್ಲೇ ಟಂಗೆಯ ವಚನಗಳನ್ನು ಕೇಳಿದೆವು. ಅಂದಿನ ಪೀಠಿಕಾ ವಚನಗಳು ಈ ತೆರನಾಗಿದ್ದುವು –

"ಮಕ್ಕಳೇ ಹೊಸ ವರ್ಷಾರಂಭವು ಈ ದಿನವೇ ಆಗಿದೆ. ನೀವು ನಿಮ್ಮ ಪಾಠಗಳನ್ನು ಹೊಸ ಹುರುಪಿನಿಂದ ಕಲಿಯತಕ್ಕದ್ದು. ನಿಮಗೆ ಕಲಿಯುವ ಹುರುಪು ಕಡಿಮೆಯಾದರೆ ನನಗೂ, ನನ್ನ ಬೆತ್ತಕ್ಕೂ ಹುರುಪು ಹೆಚ್ಚುವುದು. ನಾನು ನಿರ್ದಾಕ್ಷಿಣ್ಯವಂತನು, ತಿಳಿಯಿತೇ? ಪಾಠಗಳನ್ನು ನೀವು ಆಲಸತನದಿಂದ ಮರೆತು ಮನಸ್ಸಿನಿಂದ ಮಾಸಿಕೊಳ್ಳಬಹುದಾದರೂ ನನ್ನ ಬೆತ್ತದಿಂದ ನಿಮ್ಮ ಬೆನ್ನಿನಲ್ಲಾಗುವ ಕಲೆಗಳು ಮಾಸಲಾರವು, ತಿಳಿಯಿತೇ? ಸರಿ, ಪ್ರಾಠಗಳು ಪ್ರಾರಂಭವಾಗಲಿ."

ಈ ಭಾಷಣವಾದನಂತರ ಅವರು ನನ್ನ ಹತ್ತಿರ ಬಂದು ನಿಂತು ಬೆತ್ತವನ್ನು ತೋರಿಸಿ –

"ಹೇಗೆ, ಈ ಬೆತ್ತ ಚುರುಕಾಗಿದೆಯೇ?" ಎಂದು ಕೇಳುತ್ತಾ ನನ್ನ ಶರ್ಟನ್ನು ಎತ್ತಿ ಹಿಡಿದುಕೊಂಡು ಬೆನ್ನಿಗೆ ಹೊಡೆಯಲಾರಂಭಿಸಿದರು.

"ಒಂದುಹಲ್ಲಿನ ರುಚಿ ಹೇಗೆ? – ಏ? ಎರಡು ಹಲ್ಲಿನ ರುಚಿ ಹೇಗೆ? –ಏ? ಕಚ್ಚಿದ ಮಾಂಸದ ರುಚಿ ಹೇಗೆ? – ಏ? ಕಚ್ಚಿದರೆ ಹೇಗಾಗುತ್ತೆ? ಗೊತ್ತಾಯಿತೇ", ಎಂದನ್ನುತ್ತಾ ಪ್ರತಿ ವಾಕ್ಯಕ್ಕೆ ಒಂದರಂತೆ – ಕೆಲವು ಸರ್ತಿ ಎರಡರಂತೆ – ಬೆತ್ತದಿಂದ ಹೊಡೆದು ಸೆಲಂ ಶಾಲೆಯ ರುಚಿ ತೋರಿಸಿದರು. ಪೆಟ್ಟಿನ ನೋವು ಭಾರಗಳಿಂದ ಮೈ ಬಿಸಿಯಾಯಿತು, ಮತ್ತು ಕಣ್ಣಲ್ಲಿ ನೀರು ಸುರಿಯಲಾರಂಭಿಸಿತು. ಶಾಲಾರಂಭದ ದಿನ ಈ ವಿಧದ ವೈಯಕ್ತಿಕವಾದ ಮರ್ಯಾದೆ ನನಗೆ ಮಾತ್ರ ಲಭಿಸಿದುದಲ್ಲ – ಶಾಲೆಯಲ್ಲಿದ್ದ ಬಾಲಕರಲ್ಲಿ ಅರ್ಧಾಂಶದಷ್ಟು ಬಾಲಕರಿಗೂ ಲಭಿಸಿತು. ಮಧ್ಯಾಹ್ನದೊಳಗೆ ಎಲ್ಲರೂ ಮೈ ಕೈ ಉಜ್ಜಿಕೊಂಡು ಅಲ್ಲಲ್ಲಿ ದುಃಖಿಸಿ ಅಳುತ್ತಿದ್ದರು. ಮೃದು ಚರ್ಮವಿದ್ದು ಉರುಟುರುಟಾಗಿ ಬೆಳೆದಿದ್ದವರ ಮೇಲೆ ಈ ವಿಧದ ಪ್ರಯೋಗ ಮಾಡಲಂತೂ ಮಿ. ಕ್ರೀಕಲರಿಗೆ ಬಹಳವಾದ ಉತ್ಸಾಹವೇ ಇತ್ತು. ಅಂಥ ಉತ್ಸಾಹ ಒಂದು ಆವೇಶವೇ ಆಗಿ ಪರಿಣಮಿಸುವುದೂ ಇತ್ತು.

ಆ ಮೂರ್ಖನನ್ನು ಜ್ಞಾಪಿಸಿಕೊಂಡಾಗಲೆಲ್ಲಾ ನನ್ನ ರಕ್ತ ಬಿಸಿಯೇರುತ್ತದೆ. ಅನಾಥ, ಆರ್ತ ಬಾಲಕರು ಆ ಕ್ರೂರ ದೇವತೆಗೆ ಬಲಿಯಾಗಿ ಪುಡಿ ಹೊಂದುತ್ತಿದ್ದ ಕ್ರಮವನ್ನೂ ವಿದ್ಯೆಯ ವಿಷಯದಲ್ಲಿ ಅವನಿಗಿದ್ದ ಅಲ್ಪತರದ ಜ್ಞಾನವನ್ನೂ, ಇಂತಹ ಜವಾಬ್ದಾರೀ ಸ್ಥಾನಗಳ ಕುರಿತಾಗಿ ಅವನಿಗೆ ಇದ್ದ ಇತರ ಅಯೋಗ್ಯತೆಯನ್ನೂ ಗ್ರಹಿಸಿದರೆ, ನಮ್ಮ ಸಮಾಜ ಸ್ವಲ್ಪವೂ ಆಲೋಚಿಸದೆಯೇ ಅಂಥ ಅಯೋಗ್ಯರ ವಶಕ್ಕೆ ತಮ್ಮ ಎಳೆ ಬಾಲಕರನ್ನು ಒಪ್ಪಿಸಿ, ಆ ವಿಧದಲ್ಲಿ ತಮ್ಮ ಮುಂದಿನ ಸಮಾಜವನ್ನೇ ಹಾಳುಮಾಡುತ್ತಿದೆಯಲ್ಲಾ ಎಂದು ವ್ಯಸನವಾಗುವುದು. ನೆಲ ಜಲಗಳ ಸೈನ್ಯಗಳ ಮಹಾಧಿಕಾರಿಗಳು ತಮ್ಮ ಕೈಯ್ಯೊಳಗಿನ ತರಬೇತಿಗಾಗಿ ಬರುವ ಸೈನಿಕರನ್ನು ತಮ್ಮ ಅಜ್ಞತೆ, ಅಯೋಗ್ಯತೆಗಳಿಂದ ಹಾಳುಮಾಡುವಾಗ ಆಗುವ ದೇಶದ್ರೋಹಕ್ಕಿಂತ ಹೆಚ್ಚಿನ ದೇಶದ್ರೋಹ ಇಂಥ ಉಪಾಧ್ಯಾಯ ವರ್ಗ ತಮ್ಮಲ್ಲಿಗೆ ಬಂದ ಬಾಲಕರ ಮಿದುಳನ್ನು ಹಾಳು ಮಾಡುವುದರಿಂದ ಆಗುತ್ತದೆಂದು ನನ್ನ ಅಭಿಪ್ರಾಯ.

ಕ್ಲಾಸಿನ ಒಂದು ತುದಿಯಲ್ಲಿ ಮಿ. ಕ್ರೀಕಲರು ಕುಳಿತುಕೊಳ್ಳುತ್ತಿದ್ದರು. ಒಬ್ಬ ಹುಡುಗನನ್ನು ಬಡಿದಪ್ಪಳಿಸಿದನಂತರ ಮತ್ತೊಬ್ಬನನ್ನು ಬಡಿಯುತ್ತಿದ್ದರು. ಟಂಗೆ ಬಾಲಕರನ್ನು ಕ್ರಮಬದ್ಧವಾಗಿ ಒಬ್ಬನಾದ ನಂತರ ಒಬ್ಬನಂತೆ ಕಳುಹಿಸಿ ಕೊಡುತ್ತಿದ್ದನು. ಬಾಲಕರು ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ ಸೋಲಬೇಕೆಂಬ ಉದ್ದೇಶದಿಂದಲೇ – ಆ ನಮೂನೆಯ – ಪ್ರಶ್ನೆ ಹಾಕುವುದೂ, ಈ ರೀತಿ ಅವರನ್ನು ಸೋಲಿಸಿ ಹೊಡೆಯುವುದೂ ಅವರ ಮುಖ್ಯ ಕೆಲಸವಾಗಿತ್ತು.

ಮಿ. ಕ್ರೀಕಲರ ಮನೆಯ ಸಾಧಾರಣ ಎಲ್ಲ ಕಿಟಕಿಗಳಿಂದಲೂ ನಮ್ಮ ಆಟದ ಮೈದಾನವನ್ನು ಕಾಣಬಹುದಾದಂತೆ ಮನೆಯ ಕಿಟಕಿಗಳಿದ್ದುವು. ಸ್ಟಿಯರ್ಫೋರ್ತನೊಬ್ಬನನ್ನು ಬಿಟ್ಟು ಇತರ ಎಂಥ ಬಾಲಕನೇ ಆದರೂ, ಎಂಥ ಆವೇಶಭರಿತ ನಗೆ, ಹಾರಾಟಗಳಲ್ಲೇ ಇದ್ದರೂ, ಮಿ. ಕ್ರೀಕಲರ ತಲೆಯ ಅತಿ ಚಿಕ್ಕ ಭಾಗವನ್ನೇ ಕಂಡದ್ದಾದರೂ, ಆ ಕೂಡಲೇ ಅವನ ಉತ್ಸಾಹ, ಹಾರಾಟವೆಲ್ಲ ನಿಂತುಬಿಡುತ್ತಿದ್ದುವು. ನಾವು ಯಾವ ಕಡೆಗೇ ಮುಖ ಹಾಕಿಕೊಂಡಿದ್ದರೂ ಮಿ. ಕ್ರೀಕಲರ ದೃಷ್ಟಿ ನಮ್ಮ ಮೇಲೇ ಇದೆಯೆಂದು ನಮ್ಮ ನಂಬಿಕೆ. ಅವರು ಅವರ ಮನೆಯಲ್ಲಿ ಇದ್ದರೂ ಇರದಿದ್ದರೂ, ಅವರು ಆ ಕನ್ನಡಿ ಕಿಟಕಿಗಳ ಮೂಲಕ ನಮ್ಮನ್ನು ನೋಡಬಲ್ಲರೆಂಬ ನಮ್ಮ ತಿಳಿವಳಿಕೆ ಆ ಕನ್ನಡಿಗಳಿಗೂ ಸಹ ಕ್ರೀಕಲರಷ್ಟೆ ನಮ್ಮನ್ನು ಭಯಗೊಳಿಸುವ ಶಕ್ತಿಯನ್ನು ಕೊಟ್ಟಿತ್ತು.

ಒಂದು ದಿನ ನಮ್ಮ ಆಟದ ಚೆಂಡು ಮಿ. ಕ್ರೀಕಲರ ಕಿಟಕಿಯ ಕನ್ನಡಿಯನ್ನು ಅಕಸ್ಮಾತ್ತಾಗಿ ಪುಡಿ ಮಾಡಿದಾಗ, ಆ ಪ್ರಸಂಗದಲ್ಲಿ ಗುರಿಯಾಗಿ ಸಿಕ್ಕಿದ ಟ್ರೇಡಲ್ಸನು ತುಂಬಾ ಪೆಟ್ಟು ತಿಂದಿರುತ್ತಾನೆ. ಆ ಪೆಟ್ಟು ಟ್ರೇಡಲ್ಸನಿಗಾದ್ದರಿಂದ ಮಾತ್ರ – ಸದಾ ಹರ್ಷ ಚಿತ್ತತೆಯಿಂದ ಇರುವ ಅವನ ಸ್ವಭಾವದಿಂದ – ವಿಶೇಷ ಯಾರಿಗೂ ಅದರ ನೋವು, ಅಥವಾ, ವೈಪರೀತ್ಯ ತಿಳಿಯಲಿಲ್ಲ. ತನ್ನ ದುಃಖ ಶಮನಕ್ಕಾಗಿ ಅವನು ಕಾಗದದ ಚೂರುಗಳಲ್ಲೂ, ಸ್ಲೇಟಿನಲ್ಲೂ ತುಂಬಾ ಅಸ್ತಿ ಪಂಜರಗಳ ನಕ್ಷೆ ಬಿಡಿಸಿ, ಪೆಟ್ಟು ತಿಂದ ವರದಿಯನ್ನು ತನ್ನ ಚಿಕ್ಕಪ್ಪನಿಗೆ ಬರೆದು ದುಃಖವನ್ನೂ ನೋವನ್ನೂ ಮರೆತನು.

ನಮ್ಮ ಶಾಲಾ ವಠಾರದಲ್ಲೆಲ್ಲ ಅತ್ಯಂತ ದೊಡ್ಡ, ಘನವ್ಯಕ್ತಿಯೆಂದರೆ ಸ್ಟಿಯರ್ಫೋರ್ತನು ಎಂದು ನಾನು ಗ್ರಹಿಸಿದ್ದೆ. ಸ್ಟಿಯರ್ಫೋರ್ತನ ಅನೇಕ ಮಹಾ ಗುಣ, ಪ್ರಭಾವಗಳ ಜತೆಯಲ್ಲಿ ಅವನ ಠೀವಿ, ಮರ್ಜಿಗಳೂ ಮಹತ್ತರದವೇ ಆಗಿದ್ದುವು. ಅವನು ಮಿ. ಕ್ರೀಕಲರ ಸಂಸಾರದೊಂದಿಗೆ ಇಗರ್ಜಿಗೆ ಹೋಗುವಾಗ ಕ್ರೀಕಲರ ಮಗಳ ಕೈಯನ್ನು ಹಿಡಿದುಕೊಂಡು ಅವರಿಬ್ಬರು ಸರಿಸಮಾನರಾಗಿ, ಠೀವಿಯಿಂದ ನಡೆದು ಹೋಗುತ್ತಿದ್ದ ಅಮೋಘ ದೃಶ್ಯವನ್ನು ನಾನೆಂದಿಗೂ ಮರೆಯೆನು. ಸ್ಟಿಯರ್ಫೋರ್ತನ ಅನಂತರದ ಎರಡನೇ ಸ್ಥಾನವನ್ನು ಮಿ. ಶಾರ್ಪರಿಗೂ ಮಿ. ಮೆಲ್ಲರಿಗೂ ನಾನು ಕೊಟ್ಟಿದ್ದೆ. ಅಷ್ಟೊಂದು ಜನ ವಿದ್ಯಾರ್ಥಿಗಳಿಗೆ ಜ್ಞಾನ ಒದಗಿಸುತ್ತಿದ್ದ ಅವರ ಜ್ಞಾನ ಭಂಡಾರವನ್ನು ಮೆಚ್ಚಿ ಮಾತ್ರ ಅವರಿಗೆ ಆ ಸ್ಥಾನವನ್ನು ಕೊಟ್ಟಿದ್ದೆ.

ಒಂದು ದಿನ ನಾವು ಸಂಜೆಯ ಸಮಯ ಜತೆ ಸೇರಿ ಮಾತಾಡುತಿದ್ದಾಗ ಒಬ್ಬ ಹುಡುಗನನ್ನು ಒಂದು ಕಥೆಯ ಕಥಾನಾಯಕನಿಗೆ ಅವನು ಹೋಲುತ್ತಾನೆಂದು ನಾನು ಹೇಳಬೇಕಾಯ್ತು. ನನ್ನ ಹೋಲಿಕೆಯನ್ನು ಕೇಳಿ ನನಗೆ ಕಥೆ ಬರುತ್ತಿದೆಯೆಂದು ಸ್ಟಿಯರ್ಫೋರ್ತನು ತಿಳಿದು, ನನ್ನಿಂದ ಕಥೆ ಹೇಳಿಸುವ ಕೂಟವನ್ನೇ ಏರ್ಪಡಿಸಿದನು.

ಸ್ಟಿಯರ್ಫೋರ್ತನಿಗೆ ನಿದ್ರೆ ಬಹು ಕಡಿಮೆ. ಅವನಿಗೆ ಮನೋರಂಜಕ ವಿಷಯಗಳೆಂದರೆ ಬಹು ಇಷ್ಟ. ಹೀಗಾಗಿ ನಾನು ಈ ಶಾಲೆಯಲ್ಲಿ ನನ್ನ ಪ್ರಥಮದ ಅರ್ಧ ವರ್ಷವಿಡೀ ಕಥೆ ಹೇಳಿರುತ್ತೇನೆ. ಈ ಕಥೆಗಳ ಕೂಟ ಏರ್ಪಾಡಾಗುವ ಸಮಯದಲ್ಲೇ ನಮ್ಮ ಮನೆಯಿಂದ ತಾಯಿ ಸ್ವಲ್ಪ ತಿಂಡಿ ಮತ್ತೂ ಒಂದೆರಡು ಕುಪ್ಪಿ ವೈನನ್ನು ಕಳುಹಿಸಿಕೊಟ್ಟಿದ್ದಳು. ತಿಂಡಿಯನ್ನು ಅದು ಬಂದ ದಿನವೇ ನಾವೆಲ್ಲಾ ಹಂಚಿಕೊಂಡು ತಿಂದೆವು. ಆದರೆ ವೈನನ್ನು ಸ್ಟಿಯರ್ಫೋರ್ತನು ನನಗಾಗಿ ಕಾದಿಟ್ಟಿದ್ದನು. ನಾನು ಕಥೆ ಹೇಳಿ ಸ್ವರ ಬೀಳುವಾಗ ಸ್ವಲ್ಪ ಸ್ವಲ್ಪ ವೈನನ್ನು ನನಗೆ ಕೊಡುತ್ತಾ ನನ್ನ ಸ್ವರವನ್ನು ಕಾಪಾಡುವುದಾಕ್ಕಾಗಿ ಈ ವೈನು ಉಪಯೋಗಿಸಲಾಯಿತು. ನನಗೆ ಕಥೆ ಹೇಳುವದರಲ್ಲಿ ಬಹಳ ಆಸಕ್ತಿಯಿತ್ತು. ದಿನಗಳು ದಾಟಿದ ಹಾಗೆಲ್ಲಾ ನನ್ನ ವ್ಯಾಸಂಗದಲ್ಲಿ ನಾನು ಅಭಿವೃದ್ಧಿ ಪಡೆಯುತ್ತಾ ಬಂದೆನು, ಈ ಕಾರಣದಿಂದ ನಮ್ಮ ಗುಂಪಿನಲ್ಲಿ ನಾನೊಬ್ಬ ಗಣನೀಯ ವ್ಯಕ್ತಿಯಾಗತೊಡಗಿದೆ. ನಾನು ಕಥೆ ಹೇಳುವಾಗ ಮೂಲ ಕಥೆಗಳಿಗೆ ಎಷ್ಟೆಲ್ಲಾ ಕೂಡಿಸಿರುವೆ ಅಥವ ಅವುಗಳಿಂದ ಎಷ್ಟೆಲ್ಲಾ ಅಡಗಿಸಿರುವೆ, ಎಂಬುದನ್ನು ಊಹಿಸಿ ನೋಡುವಾಗಲೇ ನನಗೆ ನಾಚಿಕೆಯಾಗುತ್ತದೆ. ನನ್ನ ಕಥೆಗಳಲ್ಲಿ ದುಃಖ ಪ್ರಸಂಗಗಳು ಬಂದಾಗ, ಅವುಗಳನ್ನು ಕೇಳುತ್ತಿದ್ದ ಮೃದು ಮನಸ್ಸಿನ ಟ್ರೇಡಲ್ಸನು ಒಮ್ಮೊಮ್ಮೆ ಅತ್ತು, ಆ ಕೂಡಲೇ ಮನಶ್ಶಾಂತಿಗಾಗಿ ಅಸ್ತಿಪಂಜರಗಳ ನಕ್ಷೆಗಳನ್ನು ಬಿಡಿಸುತ್ತಿದ್ದನು. ಆದರೆ, ಅದೇ ಟ್ರೇಡಲ್ಸನು ಸಂತೋಷ ಪ್ರಸಂಗಗಳನ್ನು ಕೇಳಿದಾಗ ಬಾಯಿ ಕಳೆದು ನಗಾಡುತ್ತಲೂ, ಭಯಂಕರ ಪ್ರಸಂಗಗಳನ್ನು ಕೇಳಿದಾಗ ಹಲ್ಲು ಕಚ್ಚಿಕೊಂಡು ನಡುಗುತ್ತಲೂ ಇದ್ದನು. ಇಂಥ ಒಂದು ಸಂದರ್ಭದಲ್ಲಿ ಅಡಗಿ ಗಸ್ತು ತಿರುಗುತ್ತಿದ್ದ ಮಿ. ಕ್ರೀಕಲರ ಗಮನಕ್ಕೆ ಅವನು ಬಿದ್ದು ತುಂಬಾ ಪೆಟ್ಟು ತಿಂದುದೂ ಉಂಟು.

ಮಿ.ಮೆಲ್ಲರು ನನ್ನನ್ನು ಕುರಿತು ವಿಶೇಷ ಗಮನ ಕೊಡುತ್ತಿದ್ದುದರಿಂದಲೂ ಸ್ಟಿಯರ್ಫೋರ್ತನ ಸಹವಾಸ ಮತ್ತೂ ಕಥಾಕಾಲಯಾಪನೆಗಳಿಂದ ನಾನು ಸ್ವಲ್ಪ ಸಂತೋಷದಿಂದಲೇ ಇರುತ್ತಿದ್ದುದರಿಂದಲೂ ನಾನು ಪಾಠಗಳನ್ನು ಚೆನ್ನಾಗಿ ಕಲಿಯುತ್ತಿದ್ದೆ. ನಾನು ಮಿ. ಮೆಲ್ಲರನ್ನು ಎಷ್ಟೇ ಮರ್ಯಾದೆಯಿಂದ ಕಾಣುತ್ತಿದ್ದರೂ ಸ್ಟಿಯರ್ಫೋರ್ತನು ಮಾತ್ರ ಅವರನ್ನು ಬಹು ಹೀನವಾಗಿ ಕಾಣುತ್ತಿದ್ದನು. ಮತ್ತೂ ಸಂದರ್ಭ ದೊರಕಿದಾಗಲೆಲ್ಲಾ ಇತರರಿಂದ ಅವರನ್ನು ಕುಚೇಷ್ಟೆ ಮಾಡಿಸುತ್ತಲೂ ಇದ್ದನು.

ಒಂದು ದಿನ ಒಂದು ಸಂದರ್ಭದಲ್ಲಿ ಸ್ಟಿಯರ್ಫೋರ್ತನಿಗೂ ಮಿ. ಮೆಲ್ಲರಿಗೂ ಒಂದು ವಿಧದ ವಾಗ್ಯುದ್ಧವಾಯಿತು. ಆ ಸಂದರ್ಭವನ್ನು ಇಲ್ಲಿ ಹೇಳಬೇಕಾಗಿದೆ. ಶನಿವಾರ ದಿನ ಮಧ್ಯಾಹ್ನದನಂತರ ಶಾಲೆಗೆ ರಜ ಕೊಡುವುದು ರೂಢಿಯಾಗಿದ್ದರೂ ಒಂದು ದಿನ ಮಿ. ಕ್ರೀಕಲರಿಗಾಗಿ ಶನಿವಾರ ಮಧ್ಯಾಹ್ನವೂ ಶಾಲೆ ನಡೆಸಬೇಕಾಯಿತು. ಅವರು ಅಸೌಖ್ಯವಾಗಿದ್ದುದರಿಂದ ವಿದ್ಯಾರ್ಥಿಗಳು ಗೌಜು ಗದ್ದಲ ಮಾಡದಂತೆ ತಡೆಯಲೋಸ್ಕರ ಶಾಲೆ ನಡೆಸಲಾಗಿತ್ತು. ಮಿ. ಮೆಲ್ಲರ ಕ್ಲಾಸಿನಲ್ಲಿ ಹುಡುಗರು ಗುಲ್ಲೆಬ್ಬಿಸಿ, ಅವ್ಯವಸ್ಥೆಯನ್ನೇ ಉಂಟುಮಾಡಿದರು. ಇದನ್ನೆಲ್ಲ ನೋಡುತ್ತಾ, ಒಂದು ರೀತಿಯಲ್ಲಿ ಪ್ರೋತ್ಸಾಹಿಸುತ್ತಾ ನಿಂತಿದ್ದ ಸ್ಟಿಯರ್ಫೋರ್ತನನ್ನು ನೋಡಿ, ಅವನಾದರೂ ಶಾಂತನಾಗಿರಬೇಕು, ಶಿಸ್ತಿನಿಂದಿರಬೇಕು ಎಂದು ಮಿ. ಮೆಲ್ಲರು ನುಡಿದರು. ಅವರು ಎಷ್ಟೇ ಮರ್ಯಾದೆಯಿಂದಲೇ ಮಾತಾಡಿದರೂ ಸ್ಟಿಯರ್ಫೋರ್ತನು ಬಹು ನಿಕೃಷ್ಟ ರೀತಿಯಲ್ಲೇ ಉತ್ತರ ಕೊಡತೊಡಗಿದನು. ಕೊನೆಗೆ ನಿರ್ವಾಹವಿಲ್ಲದೆ,

"ಮಿ. ಸ್ಟಿಯರ್ಫೋರ್ತ್, ನೀವು ಬುದ್ಧಿವಂತರು, ದೊಡ್ಡವರು, ದೊಡ್ಡವರ ಆಶ್ರಯವಿರುವವರು, ದಯಮಾಡಿ ಈ ಗಲಭೆ ನಿಲ್ಲಿಸಲು ನನ್ನೊಡನೆ ಸಹಕರಿಸಿ" ಎಂದುಮಿ. ಮೆಲ್ಲರು ಅಂದರು.

ಈ ಗಲಭೆ, ಚರ್ಚೆಗಳನ್ನೆಲ್ಲಾ ದೂರದಿಂದ ಕೇಳುತ್ತಿದ್ದ ಮಿ. ಕ್ರೀಕಲರು ಶಾಲೆಗೆ ಹಠಾತ್ತಾಗಿ ಪ್ರವೇಶಿಸಿ ಮಿ, ಮೆಲ್ಲರನ್ನೇ ವಿಚಾರಣೆ ಮಾಡತೊಡಗಿದರು. "ದೊಡ್ಡವರ ಆಶ್ರಯವಿರುವವರು" ಎಂಬ ವಾಕ್ಯ ತಮಗೆ ಅಪಮಾನಕರವೆಂದು ಕೊನೆಗೆ ಅವರು ನಿರ್ಧರಿಸಿ, ಮತ್ತೂ ಸ್ಟಿಯರ್ಫೋರ್ತನ ಋಜುವಾತುಗಳಲ್ಲಿ ಮಿ. ಮೆಲ್ಲರು ನಿರ್ಗತಿಕರು – ತಾಯಿಯನ್ನು ಅನಾಥಾಶ್ರಮದಲ್ಲಿ ಸಾಕಲು ಬಿಟ್ಟವರು– ಎಂದು ಮೊದಲಾಗಿ ತಿಳಿದು, ಆ ಕೂಡಲೇ ಮಿ. ಮೆಲ್ಲರನ್ನು ಶಾಲೆಯ ಉಪಾಧ್ಯಾಯ ಕೆಲಸದಿಂದ ಡಿಸ್ಮಿಸ್ ಮಾಡಿಬಿಟ್ಟರು.

ಮಿ. ಮೆಲ್ಲರು ತಿರುಕರೂ, ನೀಚರೂ ಮತ್ತು ತಮ್ಮ ಯೋಗ್ಯತೆಯನ್ನು ಆ ಮೊದಲೇ ತಿಳಿಸದಿದ್ದ ವಂಚಕರೂ ಎಂದು ಮೊದಲಾಗಿ ಮಿ. ಕ್ರೀಕಲರು ಹೇಳುತ್ತಾ ತಮ್ಮ ಘನ ವಿದ್ಯಾನಿಲಯದಲ್ಲಿ ಭ್ರಷ್ಟತನ ಪಸರಿಸದಂತೆ ಸಮಯೋಚಿತವಾಗಿ ಕಾದುಕೊಂಡು, ಗುಟ್ಟನ್ನು ರಟ್ಟುಪಡಿಸಿದುದಕ್ಕಾಗಿ, ಸ್ಟಿಯರ್ಫೋರ್ತನನ್ನು ಹೊಗಳಿ, ಹಸ್ತಲಾಘವವನ್ನಿತ್ತರು.

ಆದರೆ ಮಿ. ಮೆಲ್ಲರು ಡಿಸ್ಮಿಸ್ ಆದ ವಿಷಯದಲ್ಲಿ ಟ್ರೇಡಲ್ಸನೂ, ನಾನೂ ದುಃಖಿಸುತ್ತಿದ್ದೆವು. ಮಿ.ಮೆಲ್ಲರು ಅವರ ಪುಸ್ತಕಗಳನ್ನು ತೆಗೆದುಕೊಂಡು ನಮ್ಮೆದುರೇ ಶಾಲೆಯನ್ನು ಬಿಟ್ಟು – ಅದರಲ್ಲೂ ನನ್ನನ್ನು ಹರಸುತ್ತಾ ಬಿಟ್ಟು – ಹೋದದ್ದನ್ನು ಕಂಡು ಟ್ರೇಡಲ್ಸನು ಕಣ್ಣೀರು ಹಾಕಿದನು. ಇದನ್ನು ಕಂಡು ಮಿ. ಕ್ರೀಕಲರು "ಊರಿಂದೂರೇ ಮಿ. ಮೆಲ್ಲರು ಡಿಸ್ಮಿಸ್ ಆದುದಕ್ಕೆ ಸಂತೋಷಪಡುವಾಗ ದುಃಖಪಡುವ ಈ ಮೂರ್ಖನ್ಯಾರು" ಎಂದಂದುಕೊಂಡು ಟ್ರೇಡಲ್ಸನನ್ನು ಚೆನ್ನಾಗಿ ಹೊಡೆದರು. ಮಿ. ಕ್ರೀಕಲರು ಅವರ ಮನೆಗೆ ಹೋದ ಕೂಡಲೇ ಟ್ರೇಡಲ್ಸನು ಹತ್ತಾರು ಅಸ್ತಿಪಂಜರಗಳ ಚಿತ್ರ ಬಿಡಿಸಿ, ತನ್ನ ಪೂರ್ವದ ಹರ್ಷಚಿತ್ತತೆಗೆ ಬಂದನು. ನಾನು ಸ್ಟಿಯರ್ಫೋರ್ತನ ಕುರಿತು ಸ್ವಲ್ಪ ಅಸಮಾಧಾನಪಟ್ಟುಕೊಂಡೆನು.

ನಮ್ಮ ಶಾಲೆಯಲ್ಲಿನ ಇದೇ ಪ್ರಥಮ ಅರ್ಧ ವರ್ಷದಲ್ಲಿ ಜರುಗಿದ ಇನ್ನೊಂದು ವಿಶೇಷವೇನೆಂದರೆ: ಯಾರ್ಮತ್ತಿನಿಂದ ಮಿ. ಪೆಗಟಿ ಮತ್ತು ಹೇಮರು ನನ್ನನ್ನು ನೋಡಲು ಬಂದದ್ದು. ಅವರು ಬರುವಾಗ್ಗೆ ಬುತ್ತಿ, ತಿಂಡಿ, ಹಣ್ಣು ಮೊದಲಾದುವುಗಳನ್ನು ನನಗಾಗಿ ತಂದಿದ್ದರು. ಅವರನ್ನು ನಾನು ನೋಡಲು ಹೋಗುವ ಮೊದಲು ನನ್ನನ್ನು ಚೆನ್ನಾಗಿ ಮೀಯಿಸಿ, ಒಳ್ಳೆ ದುಸ್ತು ಮಾಡಿದ್ದರು. ಈ ಶಾಲೆಗೆ ಬಾಲಕರ ತಂದೆ ತಾಯಿಗಳೋ, ಅಥವಾ, ಸಂಬಂಧಪಟ್ಟವರೋ ತಮ್ಮ ಕಡೆಯ ಬಾಲಕರನ್ನು ನೋಡಲು ಬರುವಾಗಲೆಲ್ಲ ಇದೇ ರೀತಿ ಬಾಲಕರನ್ನು ಅಲಂಕರಿಸಿ ಕಳುಹಿಸುತ್ತಿದ್ದರು. ಶಾಲೆಯ ಏರ್ಪಾಡುಗಳನ್ನು ಬಂದವರು ಕಂಡು ಮೆಚ್ಚಿ, ಪ್ರತಿದಿನವೂ ಹಾಗೆಯೇ ಏರ್ಪಾಡುಗಳಿವೆಯೆಂಬ (ಟೊಳ್ಳಿನ) ಪ್ರದರ್ಶನಕ್ಕಾಗಿ ಹೀಗೆ ಮಾಡುತ್ತಿದ್ದರು.

ನಾನು ಸ್ಟಿಯರ್ಫೋರ್ತನಿಗೆ ಮಿ. ಪೆಗಟಿ ಮತ್ತು ಹೇಮರ ಪರಿಚಯ ಮಾಡಿಕೊಟ್ಟೆನು. ಈ ಪರಿಚಯ ಮಾಡಿಕೊಡುವ ಸಂತೋಷದಲ್ಲಿ ಅವರ ಮನೆ, ಮನೆಯ ವಠಾರ, ಅವರ ಆದರಾತಿಥ್ಯ, ಸರಳತೆ ಮೊದಲಾದುವುಗಳನ್ನೆಲ್ಲ ಹೃತ್ಪೂರ್ವಕವಾಗಿ ವರ್ಣಿಸಿ ಹೇಳಿದೆ. ಅವರ ಅನುಪಮ ಗುಣವರ್ಣನೆಯಂತೆಯೇ ನನ್ನ ಕಡೆಯ ಸ್ಟಿಯರ್ಫೋರ್ತನ ಗುಣವನ್ನೂ ಹೊಗಳಿದೆ. ಅವನು ನನ್ನ ಪರಮಸ್ನೇಹಿತ, ರಕ್ಷಕ, ಆದರ್ಶ ವಿದ್ಯಾರ್ಥಿ, ಪ್ರಾಯಕ್ಕೂ ಮೀರಿದ ಪ್ರಾಜ್ಞ, ವಿದ್ಯಾವಂತ, ಎಂದು ಮೊದಲಾಗಿ ಉತ್ಸಾಹ ಭರದಲ್ಲಿ ವರ್ಣಿಸಿದೆ.

ಈ ಪರಿಚಯದ ಸಂದರ್ಭದಲ್ಲಿ ಸ್ಟಿಯರ್ಫೋರ್ತನ ಸರಾಗವಾದ ವಿನಯಪೂರಿತ ಮಾತುಗಳನ್ನೂ ಗಾಂಭೀರ್ಯ, ಹರ್ಷಚಿತ್ತತೆ ಮೊದಲಾದ ಆಕರ್ಷಣೀಯ ಗುಣಗಳನ್ನೂ ಕಂಡು ಮಿ. ಪೆಗಟಿ ಮೆಚ್ಚಿಹೋದನು. ಸ್ಟಿಯರ್ಫೋರ್ತನು ಎಂದಾದರೂ ಯಾರ್ಮತ್ತಿಗೆ ಬಂದರೆ ತನ್ನ ಬಡ ಸಂಸಾರಕ್ಕೆ ಒಂದು ಭೇಟಿಯನ್ನು ಕೊಡಬೇಕಾಗಿ ವಿನಂತಿಸಿಕೊಂಡನು.

ಈ ರೀತಿ ಆರು ತಿಂಗಳ ಕಾಲ ನಮ್ಮ ಶಾಲೆ ನಡೆಯಿತು. ನನ್ನನ್ನು ನಮ್ಮ ಮನೆಗೆ ಕರೆಸಿಕೊಳ್ಳುವುದೇ ಅಸಂಭವವೆಂದು ಹೆದರುತ್ತಿದ್ದ ನನಗೆ ಗೃಹಾಭಿಮುಖವಾಗಿ ಬಂಡಿಯನ್ನೇರಿ ಹೋಗುವ ಮಹದಾನಂದವೇ ಬಂದೊದಗಿತು. ಬಂಡಿಯಲ್ಲಿ ನಿದ್ರಿಸುತ್ತಲೂ, ಸ್ವಪ್ನಗಳನ್ನು ಕಾಣುತ್ತಲೂ, ಎಚ್ಚತ್ತು ಹಿಂದೆ ಬಂದಿದ್ದ ಸ್ಥಳಗಳನ್ನು ನೋಡಿ ನೆನಪಿಗೆ ತಂದುಕೊಳ್ಳುತ್ತಲೂ ಯಾರ್ಮತ್ತಿನವರೆಗೆ ಬಂದು ತಲುಪಿದೆನು.

ಅಧ್ಯಾಯ ಎಂಟು

ರಜೆ ಸಮಯದಲ್ಲಿ – ಮುಖ್ಯವಾಗಿ, ಒಂದು ದಿನ ಅಪರಾಹ್ನ

ನಮ್ಮ ಬಂಡಿ ಯಾರ್ಮತ್ತಿಗೆ ತಲಪುವಾಗ ಪೂರ್ತಿ ಬೆಳಗಾಗಿರಲಿಲ್ಲ. ಬಂಡಿ ನಿಂತಿದ್ದು 'ಡೋಲ್ಫಿನ್' ಚಿತ್ರವಿದ್ದ ಒಂದು ಹೋಟೆಲಿನ ಎದುರು. ಈ ಹೋಟೆಲಿನಲ್ಲಿ ಎಲ್ಲವೂ ಡೋಲ್ಫಿನ್ ಸಮೇತದ್ದಾಗಿದ್ದುವು. ಡೋಲ್ಫಿನ್ ಮೇಜದ ಬಳಿ ಕುಳಿತು ಡೋಲ್ಫಿನ್ ಕಾಫಿಯನ್ನು ಕುಡಿದೆನು. ಡೋಲ್ಫಿನ್ ಹಾಸಿಗೆಯಲ್ಲಿ ಡೋಲ್ಫಿನ್ ರಗ್ಗು ಹೊದ್ದು ಮಲಗಿದೆನು. ಇದು ಚಳಿ ಸಮಯವಾಗಿದ್ದುದರಿಂದ ಡೋಲ್ಫಿನ್ ಸೌಕರ್ಯಗಳು ಬಹು ಅಗತ್ಯವಾಗಿದ್ದುವು. ನೀಲನಂದಿ ಹೋಟೆಲಿನ ಆಳಿನ ಜ್ಞಾಪಕ ನನಗೆ ಈಗಲೂ ಇದ್ದುದರಿಂದ ಈ ಹೋಟೆಲು ಸಿಕ್ಕಿದ್ದು ಬಹು ಅನುಕೂಲವೇ ಆಯಿತು.

ಬೆಳಗ್ಗೆ ಒಂಬತ್ತು ಘಂಟೆಗೆ ಬಾರ್ಕಿಸನ ಬಂಡಿ ಬಂತು. ನಾನು ನನ್ನ ಸಾಮಾನುಗಳ ಸಮೇತ ಬಂಡಿಯನ್ನೇರಿ ಬ್ಲಂಡರ್ಸ್ಟನ್ ಕಡೆಗೆ ಮುಂದರಿಸಿದೆವು. ಬಾರ್ಕಿಸನ ದಡ್ಡ ಕುದುರೆ ಮೊದಲಿನಂತೆಯೇ ಬಹು ಮಂದಗಮನದಿಂದ ಸಾಗುತ್ತಿತ್ತು. ಸಂಜೆಯಾಗುವ ಸಮಯಕ್ಕೆ ದೂರದಿಂದಲೇ ನಮ್ಮ ಮನೆ ಸಮೀಪದ ಎಲ್ಮ್ ಮರಗಳು ತೋರತೊಡಗಿದುವು.

ಬಾರ್ಕಿಸನು ನನ್ನಲ್ಲಿ ಪರಿಚಯವಿದ್ದವನಂತೆ ಕಾಣಿಸಿಕೊಳ್ಳಲಿಲ್ಲ. ಅವನಿಗೆ ಸಿಟ್ಟಾಗಿರಬಹುದೆಂದು ಹೆದರಿ ನಾನು ಪೆಗಟಿಗೆ ಪತ್ರ ಬರೆದಿದ್ದ ಸಂಗತಿಯನ್ನು ತಿಳಿಸಿದೆ. ಹೀಗೆ ತಿಳಿಸಿದುದರಿಂದ ಅವಳಿಂದ ಅವನಿಗೆ ಉತ್ತರ ಬರಲಿಲ್ಲವೆಂದು ಅವನು ನನಗೆ ತಿಳಿಸಿದನು. ಮದುವೆಯಾಗುವ ಇಚ್ಛೆಯಿಂದ ಪತ್ರ ಬರೆದುದಕ್ಕೆ ಯಾವ ಉತ್ತರವೂ ಬರದಿದ್ದಾಗ ಒಬ್ಬನು ಆ ರೀತಿ ಮೌನವಾಗಿರುವುದು ಸ್ವಾಭಾವಿಕವೆಂದು ನಾನು ಗ್ರಹಿಸಿಕೊಂಡೆ. ಮೊದಲೇ ಹೆಚ್ಚಿನ ಮೌನದಲ್ಲಿದ್ದವನು ಈಗಲಂತೂ ಪರಿಪೂರ್ಣ ಮೌನವಾಗಿ ಕುಳಿತಿದ್ದನು. ಆದರೆ, ನಾನು ಅವನನ್ನು ಅಷ್ಟಕ್ಕೇ ಬಿಡದೆ, ಇನ್ನಾದರೂ ಉತ್ತರ ಬರಬಾರದೇಕೆಂದು ತರ್ಕಿಸುತ್ತಾ, ಉತ್ತರ ತರಿಸುವ ಜವಾಬ್ದಾರಿಯನ್ನೇ ವಹಿಸಿಕೊಂಡೆನು.

ಕೊನೆಗೆ ಮನೆಯ ಸಮೀಪದಲ್ಲೇ ಬಂಡಿ ಬಂದು ನಿಂತಿತು. ಅಂದಿನ ಸಂಜೆಯಲ್ಲಿ ಸ್ವಲ್ಪ ಬಿರುಗಾಳಿ ಸ್ವಭಾವದಲ್ಲಿ ಗಾಳಿ ಬೀಸುತ್ತಿತ್ತು. ನಮ್ಮ ಮನೆ ಸಮೀಪದ ಆ ದೊಡ್ಡ ಮರಗಳು ಬೀಸುತ್ತಾ, ಒಂದರೊಳಗೆ ಒಂದು ನುಗ್ಗಿ ಹೊರಹೊರಡುವಂತೆ ಬೀಸಿ, ಬಗ್ಗಿ, ನೆಟ್ಟಗಾಗಿ ಪುನಃ ಬೀಸುತ್ತಾ, ಮುಷ್ಟಾಮುಷ್ಟಿ ಯುದ್ಧದಲ್ಲೇ ಇದ್ದಂತೆ ತೋರಿದುವು. ಆಗಿನ ಸಮಯ ಮತ್ತು ಸನ್ನಿವೇಶಗಳನ್ನು ನೋಡಿ ನಮ್ಮ ಮನೆಯಲ್ಲಿ ನನ್ನನ್ನು ಹೇಗೆ ಸ್ವಾಗತಿಸಲಿರುವರೋ – ಅಂಥಾ ಕ್ರೂರ ಬಾಂಧವ್ಯ ಮಾತ್ರ ಇರಬಹುದೋ – ಎಂದು ಹೆದರಿದೆ.
ಮನೆಯೊಳಗೆ ಮರ್ಡ್ಸ್ಟನ್ ಅಣ್ಣ ತಂಗಿಯರಿರಬಹುದೆಂಬ ಭೀತಿಯಿಂದಲೇ ಒಳಗೆ ಹೋದೆ. ಪುಣ್ಯವಶದಿಂದ ಅವರಿಬ್ಬರೂ ಅಲ್ಲಿರಲಿಲ್ಲ. ತನ್ನ ತಾಯಿಯ ಸವಿಮಾತುಗಳು ಮುಖ್ಯ ಬೈಠಖಾನೆಯಿಂದ ಕೇಳಿಸುತ್ತಿದ್ದುವು. ಆ ಪ್ರೀತಿಯ, ಇಂಪಾದ, ಮೃದು ಸ್ವರವನ್ನು ಆರು ತಿಂಗಳ ಹಿಂದೆ ಮಾತ್ರ ಕೇಳಿದ್ದ ನನಗೆ ಆದ ಆನಂದ ಅಷ್ಟಿಷ್ಟಲ್ಲ. ನಾನು ತಾಯಿಯಿದ್ದ ಕೋಣೆಯನ್ನು ಪ್ರವೇಶಿಸಿದೆನು. ತಾಯಿ ಒಂದು ಚಿಕ್ಕ ಮಗುವನ್ನು ತೊಡೆಯ ಮೇಲಿಟ್ಟುಕೊಂಡು ಆಡಿಸುತ್ತಾ, ತನಗೆ ತಾನೇ ಏನೋ ಒಂದು ಸಂತೋಷದ ಪದವನ್ನು ಹೇಳಿಕೊಳ್ಳುತ್ತಿದ್ದಳು. ತಾಯಿ ಹಾಡುತ್ತಿದ್ದ ಪದ ನಾನು ಚಿಕ್ಕದಾಗಿದ್ದಾಗ ಹಾಡಿದ ಪದವೇ ಎಂದು ಗ್ರಹಿಸತೊಡಗಿದೆನು. ಈ ಗ್ರಹಿಕೆ ತಪ್ಪಾಗಿರಲೂಬಹುದು. ಆದರೆ, ಇಂಥ ಗ್ರಹಿಕೆಗೇ ಆದರೂ ಹಿಂದಿನ ಪದ ಮತ್ತೂ ಸನ್ನಿವೇಶಗಳ ನೆನಪಿನ ಆಧಾರವಾದರೂ ಇರಲೇಬೇಕೆಂಬುದು ನಿರ್ವಿವಾದವಷ್ಟೆ. ಆ ಮಗುವನ್ನು ನೋಡಿ, ತಾಯಿಯ ಮೃದುಗಾನವನ್ನು ಕೇಳಿ ನಾನು ಭಾವನಾಪರವಶತೆಯಲ್ಲಿ ನನ್ನನ್ನೇ ಮರೆತುಕೊಂಡೆ. ಆ ಚಿಕ್ಕ ಮಗುವೇ ನಾನೆಂದೂ ನನ್ನನ್ನೆ ತಾಯಿ ಪದ ಹೇಳಿ ಆನಂದಿಸುತ್ತಿದ್ದಾಳೆಂದೂ ತಿಳಿದು ಆನಂದಪರವಶನಾದೆ. ಆದರೆ ನನ್ನ ಕಾಲಸಪ್ಪಳ ಕೇಳಿ ತಾಯಿ ಹಿಂತಿರುಗಿ ನೋಡಿದಳು. ನನ್ನನ್ನು ಕಂಡೊಡನೆ ಆ ಮಗುವಿನ ಸಮೇತ ಎದ್ದು ಬಂದು ನನ್ನನ್ನು ಅಪ್ಪಿಕೊಂಡಳು. ಒಂದು ಕ್ಷಣಕಾಲ ನಾವು ಮೂವರ ಹೃದಯಗಳೂ ಒಂದಾಗಿ ಆನಂದಿಸಿದೆವು. ಈ ಆನಂದದ ಸುಗ್ಗಿಯನ್ನು ಪೂರ್ಣಗೊಳಿಸಲು ಪೆಗಟಿಯೂ ಬಂದಳು – ಬಂದದ್ದೇ ತಡ ನನ್ನನ್ನೂ, ನನ್ನ ತಾಯಿಯನ್ನೂ ಅಪ್ಪಿಕೊಂಡು ಆನಂದಬಾಷ್ಪ ಸುರಿಸಿದಳು. ಈ ಸಂತೋಷದ ಶಿಖರದಲ್ಲಿದ್ದಾಗಲೇ, ಸದ್ಯ ಈಚೆಗೆ ಹೊಲಿದು ಸರಿಪಡಿಸಿಕೊಂಡಿದ್ದ ಲಂಗದ ಗುಂಡಿಗಳನ್ನು ಪುನಃ ಕಳೆದುಕೊಂಡಳು. ಅಂದಿನ ಸಂಧ್ಯಾಸಮಯ ಎಷ್ಟೊಂದು ಆನಂದಮಯವಾಗಿತ್ತೆಂದು ನಾನು ಹೇಳಿ ಪೂರ್ಣ ಚಿತ್ರಿಸಲಾರೆನು.

ನೆರೆಮನೆಗೆ ಹೋಗಿದ್ದ ಮರ್ಡ್ಸ್ಟನ್ ಅಣ್ಣ ತಂಗಿಯರು ಬರಲು ತುಂಬಾ ರಾತ್ರಿಯಾಗಬಹುದೆಂದೂ, ಅವರು ಬರುವ ಮೊದಲೇ ನಾವು ಊಟಮಾಡಲು ಅವರು ಅನುಮತಿಯಿತ್ತಿದ್ದರೆಂದೂ ತಿಳಿದು ನಾವು ಊಟ ಮುಗಿಸಿದೆವು. ನನ್ನ ಹಳೆ ಬಟ್ಟಲು, ಹಳೆ ಚಮಚ, ಕತ್ತರಿಗಳನ್ನಿಟ್ಟುಕೊಂಡು, ನನ್ನ ಚಿಕ್ಕಂದಿನ ಕಾಲದಲ್ಲು ಊಟಮಾಡುತ್ತಿದ್ದಂತೆಯೇ, ನಾವು ಮೂವರೂ ಸಂತೋಷದಿಂದಲೇ ಊಟಮಾಡಿದೆವು.
ಊಟವಾದನಂತರ ಪೂರ್ವ ಕ್ರಮದಲ್ಲೇ ಪೆಗಟಿ ಹೊಲಿಗೆ ಸಾಮಾನುಗಳನ್ನಿಟ್ಟುಕೊಂಡು ನನ್ನೆದುರು ಕುಳಿತಳು. ನನ್ನಿಂದ ಅದೇ ಹಳೆಯ ಮೊಸಳೆ ಕಥೆಯನ್ನು ಓದಿಸಿ ಕೇಳಿದಳು. ಮತ್ತೆ ನನ್ನ ಶಾಲೆಯ ವರ್ತಮಾನಗಳನ್ನೆಲ್ಲ ವಿವರವಾಗಿ ಕೇಳಿದಳು. ಕ್ರೀಕಲರ ಗುಣ, ಅವರನ್ನು ಕುರಿತಾದ ನನ್ನ ದುಃಖಮಯ ಪ್ರಸಂಗಗಳನ್ನು ನಾನು ಹೇಳುತ್ತಿದ್ದಾಗ ಪೆಗಟಿ ಕಣ್ಣೀರು ಸುರಿಸುತ್ತಿದ್ದಳು. ಕೊನೆಗೆ ರಜ ಸಿಕ್ಕಿದ

ವಿಷಯವನ್ನೂ, ಮೊದಲಿನ ಬಾರ್ಕಿಸನ ಬಂಡಿ ಪ್ರಯಾಣದ ಅನುಭವವನ್ನೂ, ಬಾರ್ಕಿಸ–ಪೆಗಟಿಯರಿಗೆ ಸಂಬಂಧಿಸಿದ ವಿಷಯವನ್ನೂ ತಿಳಿಸಿದೆ. ಬಾರ್ಕಿಸನ 'ಸದಾ ತಯಾರು' ಎಂಬ ಮಾತುಗಳ ಅರ್ಥ ತಾಯಿಗೆ ಆಗದೆ –
"ತಯಾರು ಯಾವುದಕ್ಕಂತೆ – ಮತ್ತೂ ಯಾರಂತೆ" ಎಂದು ಕೇಳಿದಳು.
ಇದಕ್ಕೆ ಪೆಗಟಿಯೇ ಉತ್ತರ ಕೊಟ್ಟಳು –
"ನಾನು ಅವನನ್ನು ಮದುವೆಯಾಗಬೇಕಂತೆ – ಮದುವೆಗೆ ಅವನು ತಯಾರಂತೆ" ಅಂದಳು ಪೆಗಟಿ.
ತಾಯಿ ಕೇಳಿದಳು – "ಆಗಬಾರದೇಕೆ?"
"ಅದು ಸಾಧ್ಯವಿಲ್ಲ", ಎಂದು ಪೆಗಟಿ ಹೇಳುತ್ತಾ, ಸಂದರ್ಭಗಳನ್ನು ವಿವರಿಸತೊಡಗಿದಳು –
"ಅದು ಸಾಧ್ಯವಿಲ್ಲ – ನಾನು ಮದುವೆಯಾಗಿ ಇಲ್ಲಿಂದ ಹೋದರೆ ನಿಮಗೆ ಮತ್ತೆ ಯಾರಿದ್ದಾರೆ, ನಿಮ್ಮವರಾಗಿ? ನಾನು ಇಲ್ಲಿಂದ ಹೋದರೆ ಮಿಸ್ ಮರ್ಡ್ಸ್ಟನ್ನಳಿಗೆ ಸಂತೋಷವಾಗಬಹುದು, ನಿಜ. ಅಷ್ಟೊಂದಾದರೂ ನನ್ನ ಕಡೆಯ ಸಂತೋಷವನ್ನು ನಾನು ಅವಳಿಗೆ ಕೊಡಲಾರೆ – ಅಷ್ಟಕ್ಕಾಗಿಯಾದರೂ ನಾನು ಮದುವೆಯಾಗುವುದಿಲ್ಲ."
"ಅಯ್ಯೋ ಹುಚ್ಚೀ, ಮಿಸ್ ಜೇನ್ ಮರ್ಡ್ಸ್ಟನ್ ನಿನಗೇನು ಮಾಡಿದ್ದಾಳೆ? ನೀನು ನನ್ನ ಹಿತಕ್ಕಾಗಿ ಇರುವಂತೆಯೇ ಅವಳೂ ನನ್ನ ಹಿತಕ್ಕಾಗಿಯೇ ಇರುವಳು" ಎಂದು ತಾಯಿ ನಗಾಡುತ್ತಾ ನುಡಿದಳು.
"ಅವಳು ನಿನ್ನ ಹಿತನೋಡುವ ಮಾತು ಹಾಗಿರಲಿ – ನಾನು ಮದುವೆಯಾಗುವುದಿಲ್ಲ, ಅಷ್ಟೇ" ಎಂದುತ್ತರವಿತ್ತು ಪೆಗಟಿ ದಿಟ್ಟತನದಿಂದ ಮೌನವಾಗಿ ಕುಳಿತಳು. ಆದರೂ, ಸ್ವಲ್ಪ ಆಲೋಚಿಸಿ ಕೇಳಿದಳು –
"ಆ ಹೊತ್ತು ಬಂದ ಬೆಟ್ಸಿ ಟ್ರಾಟೂಡ್ ಬರಲಾರಳೋ?"
"ಆ ಹೊತ್ತು ಕೋಪದಿಂದ ಹೋದವಳು ವಾಪಾಸು ಬರಲಿಲ್ಲ – ಈಗ ಅವಳು ಸಮುದ್ರದ ಕರೆಯಲ್ಲಿ ಏಕಾಂಗಿಯಾಗಿ ಜೀವಿಸುತ್ತಿರುವಳು – ಅವಳು ಬರುವವಳಲ್ಲ – ಅವಳಿಗೆ ಡೇವಿಡ್ಡನ ಮೇಲೆ ಕೋಪವಷ್ಟೆ" ಅಂದಳು ತಾಯಿ.
"ಆದರೆ, ಡೇವಿಡ್ಡನಿಗೆ ಒಬ್ಬ ತಮ್ಮ ಹುಟ್ಟಿರುವುದರಿಂದ, ಇನ್ನು ಡೇವಿಡ್ಡನನ್ನು ಪ್ರೀತಿಸಬಹುದಷ್ಟೆ" ಎಂದು ನಿಷ್ಕಪಟ ಬುದ್ಧಿಯಿಂದ ಪೆಗಟಿ ಕೇಳಿದಳು.
ಬೆಟ್ಸಿ ಟ್ರಾಟೂಡಳಿಗೆ ನನ್ನ ತಾಯಿ ಹೆತ್ತ ಮಗುವಿನ ಮೇಲೆ ಕೋಪವೆಂದಾದ ಪಕ್ಷಕ್ಕೆ, ಸದ್ಯ ಜನಿಸಿರುವ ಮಗುವಿನ ಮೇಲಕ್ಕೆ ಆ ಕೋಪವನ್ನು ವರ್ಗಾಯಿಸಬಹುದಷ್ಟೆ ಎಂಬ ಒಂದು ವಿಧದ ತರ್ಕದಿಂದ ಪೆಗಟಿ ಹಾಗೆ ಮಾತಾಡಿದ್ದಳು. ಏನಿದ್ದರೂ, ಪೆಗಟಿ ನನ್ನ ತಾಯಿ, ಮತ್ತು ನನ್ನ ಮೇಲಿನ ಸುಖ ಮತ್ತೂ ಹಿತಕ್ಕಾಗಿ ಮಾತ್ರ ಹಾಗೆ ಮಾತಾಡಿದ್ದಳೆಂಬುದು ಸ್ಪಷ್ಟವಾಗಿತ್ತು. ಆದರೆ ತಾಯಿಗೆ ಆ ಮಾತುಗಳು ಅರ್ಥವಾಗದೆ, ಅವಕ್ಕೆ ಅಪಾರ್ಥವನ್ನೇ ಕಲ್ಪಿಸಿಕೊಂಡು, ಬಹು ದುಃಖದಿಂದಲೂ, ಸಿಟ್ಟಿನಿಂದಲೂ ಪೆಗಟಿಗೆ ಕಠಿಣವಾಗಿ ಉತ್ತರಕೊಟ್ಟಳು.
"ಪೆಗಟೀ, ಕ್ರೂರಿ, ಹುಚ್ಚಿ – ಈ ಪುಟ್ಟ ಹುಡುಗ ಯಾರಿಗೆ ಏನು ಮಾಡಿದ್ದಾನೆ. ಈ ಹಸುಗೂಸನ್ನು ಬೆಟ್ಸಿ ಟ್ರಾಟೂಡಳಿಗೆ ಬಲಿಕೊಟ್ಟು ಡೇವಿಡ್ಡನನ್ನು ಉಳಿಸಬೇಕೆಂದು – ಇವರಿಬ್ಬರೊಳಗೆ – ಭೇದ ಕಲ್ಪಿಸಲು ಪ್ರಾರಂಭಿಸಿದೆಯೇನು? ನೀನೊಬ್ಬಳು ಮಾತ್ರ ನನ್ನ ಹಿತಚಿಂತಕಳೆಂದು ಗ್ರಹಿಸಿಕೊಂಡಿರುವೆಯೇನು? ಮಿ. ಮತ್ತು ಮಿಸ್ ಮರ್ಡ್ಸ್ಟನ್ನರು ಸ್ವಲ್ಪ ಕಠಿಣಸ್ಥರೆಂದು ತೋರುವುದು ನಿಜವಾದರೂ ಅವರೇನೂ ದೂರದವರಲ್ಲ – ಅವರೂ ನಮ್ಮ ಹಿತಚಿಂತಕರೇ ಹೌದು" – ಎಂದು ಮೊದಲಾಗಿ ಹೇಳುತ್ತಾ ತಾಯಿ ಅಳತೊಡಗಿದಳು.

ತಾಯಿಗೆ ಬುದ್ಧಿಯೇ ಶೂನ್ಯವಾಗತೊಡಗಿತ್ತೆಂದು ಹೇಳಲು ಬೇಸರವಾಗುತ್ತದೆ; ಅವಳ ವ್ಯಕ್ತಿತ್ವವೆಲ್ಲ ನಾಶವಾಗಿತ್ತು. ಅವಳ ದೇಹ, ದೇಹದ ರೂಪ ಮಾತ್ರ ಉಳಿದು, ಅವಳ ವ್ಯಕ್ತಿತ್ವವೆಲ್ಲ ಮರ್ಡ್ಸ್ಟನ್ ದ್ವಯರ ಮುಷ್ಟಿಯೊಳಗೆ ಅಡಗಿ ಪುಡಿಯಾಗಿತ್ತು. ಬುದ್ಧಿಶೂನ್ಯವಾದಾಗ ದುಃಖ ಬಂದಷ್ಟೇ ಬೇಗನೆ ಸಂತೋಷವೂ ಬರುವಂತೆ, ತಾಯಿಯು ಅತ್ತು ಮುಗಿಯುವುದರೊಳಗೆ ಪೆಗಟಿಯೊಡನೆ ರಾಜಿಯೂ ಆದಳು. ತನ್ನ ವ್ಯಕ್ತಿತ್ವ ನಾಶವಾದ ಅರಿವಿನ ಕಾರಣವಾಗಿ ಅದನ್ನು ಉಳಿಸುವ ಪ್ರಯತ್ನದಿಂದ ಒಮ್ಮೆ ಸಿಟ್ಟಾದರೂ, ಕೂಡಲೇ ತನ್ನ ಅಶಕ್ತತೆಯ ಅರಿವಿನಿಂದ ತನಗೆ ಸಹಾಯಕ್ಕೆ ಯಾರಾದರೂ ಬೇಕೆಂದು ಆಶಿಸಿ ಈ ರಾಜಿ ನಡೆದಿರಬೇಕು. ಪೆಗಟಿ ಕ್ಷಮೆ ಬೇಡಿದಳು. ಪುನಃ ಮೊಸಳೆ ಕಥೆ, ನನ್ನ ಶಾಲೆಯ ವರ್ತಮಾನ ಇವುಗಳನ್ನೆಲ್ಲ ಕೇಳತೊಡಗಿದರು. ಮಿ. ಪೆಗಟಿ ಮತ್ತೂ ಹೇಮರು ನಮ್ಮ ಶಾಲೆಗೆ ಬಂದ ವರ್ತಮಾನವನ್ನೂ ತಿಳಿಸಿದೆನು. ಪೆಗಟಿಗೆ ಈ ವರ್ತಮಾನ ಕೇಳಿ ಬಹಳ ಸಂತೋಷವಾಯಿತು. ನನ್ನ ಜೀವನ ವೃತ್ತಾಂತದ ಒಂದು ವಿಶೇಷ ಭಾಗವು ಇಲ್ಲಿಗೆ ಮುಗಿಯಿತೆಂದರೂ ಸರಿಯಾಗಬಹುದು,. ಅಂದಿನ ರಾತ್ರಿಯ ನಮ್ಮ ಮಾತು ಕಥೆ, ಸುಖದುಃಖ ಮಾತು – ಎಲ್ಲವೂ ನನಗೆ ಸದಾ ಸುಸ್ಪಷ್ಟವಾಗಿ ನೆನಪಿನಲ್ಲಿ ಉಳಿದಿವೆ.
ರಾತ್ರಿ ಸ್ವಲ್ಪ ಸಮಯವಾದನಂತರ ಅಣ್ಣ ತಂಗಿಯರು ಬಂದರು. ಅವರು ಮನೆ ಸೇರುವ ಮೊದಲೇ ನಾನು ಮಲಗಿರುವುದು ಉತ್ತಮವೆಂದು ಅವರು ಬರುವ ಶಬ್ದ ಕೇಳಿದೊಡನೆ ನಾನು ನನ್ನ ಕೋಣೆಯನ್ನು ಸೇರಿದೆನು. ಅಷ್ಟರವರೆಗೆ ಪ್ರೇಮ, ಉತ್ಸಾಹ, ಸಂತೋಷಗಳಿಂದ ತುಂಬಿದ್ದ ಮನೆ ಅವರು ಪ್ರವೇಶಿಸಿದೊಡನೆ ದುಃಖ, ಭಯಭೀತಿಗಳಿಂದ ತುಂಬಿತು.

ಬೆಳಗಾದಮೇಲೆ, ನಿರ್ವಾಹವಿಲ್ಲದೆ, ಮಿ. ಮರ್ಡ್ಸ್ಟನ್ನರ ಭೇಟಿಯನ್ನು ಹೆದರಿಕೊಂಡೇ ಮಾಡಿದೆನು. ಅವರಿಗೆ ನಮಸ್ಕರಿಸಿ ಹಸ್ತಲಾಘವಕ್ಕಾಗಿ ಕೈ ನೀಡಿದೆನು. ಅವರ ಕೈಯ್ಯನ್ನು ನಾನು ಕಚ್ಚಿದ್ದನಂತರ ಪುನಃ ನೋಡಿದ್ದು ಇಂದೇ ಆಗಿತ್ತು. ಅವರ ಕೈಯ್ಯನ್ನು ಕುಲುಕುವಾಗ ನಾನು

ಹಿಂದೆ ಕಚ್ಚಿದ್ದ ಸ್ಥಳ ಕೆಂಪಗೆ ಕಾಣುತ್ತಿತ್ತು. ಆದರೂ ಅವರು ನನ್ನನ್ನು ನಿರ್ದಯದ, ತಿರಸ್ಕಾರದ ಭಾವನೆಯಿಂದ ನೋಡಿದಾಗ ನನ್ನ ಮುಖ ಕೆಂಪಾದಷ್ಟು ಆ ಗಾಯ ಕೆಂಪಗಿರಲಿಲ್ಲವೆಂದು ನಾನು ತಿಳಿದಿದ್ದೆ. ನಾನು ಹೆದರಿಕೊಂಡೇ –

"ಅಂದಿನ ದುಷ್ಕೃತ್ಯಕ್ಕೆ ನನ್ನನ್ನು ದಯಮಾಡಿ ಕ್ಷಮಿಸಬೇಕು" ಎಂದೆನು.

"ಇಷ್ಟು ಹೇಳುವಷ್ಟಾದರೂ ನಿನಗೆ ಬುದ್ಧಿ ಬಂತಲ್ಲವೇ?" ಅಂದರು ಮಿ. ಮರ್ಡ್‌ಸ್ಟನ್ನರು.

"ಅತ್ತೆಯವರೇ ಕ್ಷೇಮವೇ" ಎಂದು ಅತ್ತೆ ಕಡೆ ನೋಡಿ ಕೇಳಿದೆ.

"ಇಷ್ಟಾದರೂ ವಿನಯ ಸ್ವಭಾವವು ನಿನ್ನೊಳಗಿತ್ತೇ" ಎಂದು ಅತ್ತೆ ಅಂದರು. ಮತ್ತೂ ಹಸ್ತ ಲಾಘವಕ್ಕೆ ನಾನು ಕೈ ನೀಡಿದ್ದಕ್ಕೆ ಅವರ ಕೈಯ್ಯಲ್ಲಿದ್ದ ಚಮಚವನ್ನು ನನಗೆ ತೋರಿಸಿದರು. ಅವರು ಚಾ ಮಾಡುತ್ತಿದ್ದಾಗ ಉಪಯೋಗಿಸುತ್ತಿದ ಚಮಚವೇ ಅವರ ಪ್ರತಿನಿಧಿಯಾಗಿತ್ತು – ಉಕ್ಕಿನಂಥ ಸ್ವಭಾವದವರ ಪ್ರತಿನಿಧಿ ಕಬ್ಬಿಣವಾದುದು ನ್ಯಾಯವೆಂದು ನನಗೆ ತೋರಿತು.

ಚಾ ಕುಡಿದಾದನಂತರ ಅಮ್ಮನ ಹತ್ತಿರ ಹೋಗಿ ತಮ್ಮನನ್ನು ಕೇಳಿ ಎತ್ತಿಕೊಂಡು ಕುಳಿತೆನು.

"ಕ್ಲೇರಾ! ಕ್ಲೇರಾ! ಅಲ್ಲಿ ನೋಡು, ಎಂಥಾ ಅಪಾಯ" ಎಂದು ಬಹು ಗಾಬರಿಯಿಂದ ಮಿಸ್ ಜೇನ್ ಮರ್ಡ್‌ಸ್ಟನ್ನಳು ಬೊಬ್ಬಿಟ್ಟಳು. ಅಲ್ಲೆಲ್ಲೋ ಏನೋ ಅಪಾಯಕರ ಪ್ರಸಂಗ ನಡೆಯುತ್ತಿರಬೇಕೆಂದು ತಾಯಿ ಅತ್ತ ಕಡೆ ನೋಡಿದಳು. ನಾನೂ ಅತ್ತೆ ಕಡೆ ನೋಡಿದೆ.

ಜೇನಳಿಗೆ ಸ್ವಲ್ಪ ಕೋಪವೇ ಬಂದು –

"ನೋಡು, ಆ ಹುಡುಗ ನಮ್ಮ ಮಗುವನ್ನು ಎತ್ತಿದ್ದಾನೆ – ಅಪಾಯ!" ಅಂದಳು ಜೇನ್, ನನ್ನನ್ನು ತೋರಿಸಿ.

ಈ ಮಾತನ್ನು ಕೇಳಿ ತಾಯಿಗೆ ದುಃಖ ಬಂತು. ಉತ್ತರ ಕೊಡಲು ಪ್ರಯತ್ನಿಸಿದಳು. ಆ ಪ್ರಯತ್ನ ಒಂದು ವಾದವೇ ಆಗಿತ್ತು. ಆದರೆ ಉಕ್ಕಿನ ಹೆಂಗಸಿನ ವಾದದಲ್ಲಿ ಮೃದು ಸ್ವಭಾವದ ನನ್ನ ತಾಯಿ ಸೋತಳು – ಸೋತದ್ದರಿಂದ ತನ್ನ ತಪ್ಪನ್ನೂ, ಜೇನಳ ಒಪ್ಪನ್ನೂ ಒಪ್ಪಿಕೊಂಡಳು. ಮತ್ತೂ ತನ್ನನ್ನು ಸರಿದಾರಿಗೆ ತಂದದ್ದಕ್ಕಾಗಿ ಜೇನಳನ್ನು ವಂದಿಸಿ, ತನ್ನಲ್ಲಿ ನಡೆದುಹೋಗಿದ್ದ ತಪ್ಪಿಗಾಗಿ ಕ್ಷಮಾಯಾಚನೆ ಮಾಡಿದಳು. ಈ ವಿಧದ ಶಿಸ್ತಿನ ಪರಮಾವಧಿ ಅನುಭವದಿಂದ ನನ್ನ ತಾಯಿ ಸರಿಯಾಗಿ ಅತ್ತೇ ಬಿಟ್ಟಳು. ಅನಂತರ ಅವಳ ಮಗನನ್ನು ನಾನು ಎಂದೂ ಮುಟ್ಟಬಾರದೆಂದು ತಾಯಿ ನನಗೆ ಅಪ್ಪಣೆಯಿತ್ತಳು.

ಈ ಎಲ್ಲಾ ಸಂಗತಿಗಳನ್ನು ನೋಡುತ್ತಲೂ ಕೇಳುತ್ತಲೂ ಇದ್ದ ಜೇನಳ ಮುಖದಲ್ಲಿ ತನ್ನ ತರಬೇತಿ ಇಷ್ಟಾದರೂ ಯಶಸ್ವಿಯಾಯಿತಲ್ಲ, ಎಂಬ ಸಂತೃಪ್ತಿ ನಲಿದಾಡುತ್ತಿತ್ತು.

ಇದೇ ರಜೆಯಲ್ಲಿ ಒಂದು ದಿನ ಅಮ್ಮ ನನ್ನ ಕಣ್ಣುಗಳೂ ನನ್ನ ತಮ್ಮನ ಕಣ್ಣುಗಳೂ ಒಂದೇ ತೆರನಾಗಿ ಮುದ್ದುಮುದ್ದಾಗಿವೆ, ಎಂದಂದಳು. ಈ ಮಾತನ್ನು ಕೇಳುತ್ತಿದ್ದ ಮಿಸ್ ಮರ್ಡ್‌ಸ್ಟನ್ನಳು ಬಹು ಜಿಗುಪ್ಸೆ ಮತ್ತು ಆಶ್ಚರ್ಯದಿಂದ –

"ಏನು? – ಇಬ್ಬರ ಕಣ್ಣುಗಳೂ ಒಂದೇ ನಮೂನೆಯೇ? ಯಾರು ಹೇಳಿದರು? ಮರ್ಡ್‌ಸ್ಟನ್ನನ ಮಗನೆಂದಿಗೂ ಕಾಪರ್ಫೀಲ್ಡ್‌ನಂತೆ ಆಗಲಾರನು – ದೇವರ ಅನುಗ್ರಹದಿಂದ ಹಾಗೆಂದಿಗೂ ಆಗದಿರಲಿ" ಎಂದು ಬಿಟ್ಟು ಬಾಗಿಲನ್ನು ಬಲವಾಗಿ ಬಡಿದು ಹಾಕಿಕೊಂಡು ನಮ್ಮ ಕೋಣೆಯನ್ನು ಬಿಟ್ಟೇ ಹೋದಳು.

ಈ ರೀತಿ ಆ ಮನೆಯಲ್ಲಿ – ನನ್ನಮ್ಮನ ಮನೆಯಲ್ಲೇ – ನನಗೆ ನನ್ನ ಜೀವನದ ಮೇಲೆಯೇ ಜಿಗುಪ್ಸೆ ತೋರತೊಡಗಿತು. ನನ್ನನ್ನು ಪ್ರೀತಿಸುವವರೆಲ್ಲರೂ ಅಡಗಿಯೇ ಪ್ರೀತಿಸಬೇಕಿತ್ತು. ನಾನು ಸಂತೋಷದಲ್ಲಿದ್ದೇನೆಂದು ಅವರಿಗೆ ಎಂದೂ, ಎಳ್ಳಷ್ಟೂ ಕಾಣಕೂಡದಷ್ಟು ಮರ್ಡ್‌ಸ್ಟನ್ ಅಣ್ಣ ತಂಗಿಯರು ಜಾಗ್ರತೆಯಲ್ಲಿದ್ದರು. ನನ್ನನ್ನು ದ್ವೇಷಿಸುವವರೆಲ್ಲ ಬಹಿರಂಗವಾಗಿಯೇ – ನನ್ನ ಎದುರೇ– ದ್ವೇಷಿಸುತ್ತಿದ್ದರು. ಮತ್ತೂ ಹೀನೈಸುತ್ತಿದ್ದರು. ನನ್ನ ಇರುವಿಕೆಯೇ – ಈ ವಿಧದ ಜೀವನದಿಂದ – ನನಗೆ ಭಾರವಾಗತೊಡಗಿತು. ನಾನೊಬ್ಬ ಮಂಕ, ನಿರಾಶಾವಾದಿ, ಕರ್ತವ್ಯಹೀನ, ಬಹಿಷ್ಕೃತ, ಅನಾಥ ಒರಟು ಪ್ರಾಣಿಯಂತೆಯೇ ಆಗಿಹೋದೆ. ಆ ಮನೆಯವರ ಸಂತೋಷದ ಪ್ರಭೆಗೆ ನಾನೊಬ್ಬ ಅನಪೇಕ್ಷಿತ ಕರಿಮೋಡದ ಮುಸುಕಿನಂತೆಯೇ ತೋರುತ್ತಿದ್ದೆ. ನಾನು ನನ್ನ ನಡೆನುಡಿಗಳಲ್ಲಿ ತಪ್ಪಿಬಿದ್ದು ನನ್ನ ಹಿರಿಯರ ಮನಸ್ಸನ್ನು ಎಲ್ಲಿ ನೋಯಿಸಿಬಿಡುವೆನೋ ಎಂದು ತಾಯಿ ನನ್ನ ಕುರಿತು ಸದಾ ಹೆದರುತ್ತಿದ್ದಂತೆಯೇ ನನ್ನ ದೆಸೆಯಿಂದ ತಾಯಿಗೆ ಎಲ್ಲಿ ದುಃಖ ಪ್ರಸಂಗ ಬಂದು ಬಿಡುವುದೋ ಎಂದು ನಾನೂ ಸಹ ಹೆದರುತ್ತಿದ್ದೆ. ಹೀಗಾಗಿ ನಾನು ಆದಷ್ಟು ಹೆಚ್ಚಿನ ಸಮಯ ತಾಯಿಯಿಂದ ದೂರವಾಗಿರುತ್ತ, ಅನುಕೂಲವಿದ್ದಾಗಲೆಲ್ಲ ನನ್ನ ಹಾಸಿಗೆಯಲ್ಲಿ ಮಲಗಿಕೊಂಡು ಕಥೆ ಪುಸ್ತಕಗಳನ್ನೋದಿ ಕಾಲಕಳೆಯುತ್ತಿದ್ದೆನು.

ನನ್ನ ದುಃಖಗಳು ಎಂದೂ ಕಡಿಮೆಯಾಗಬಾರದು, ಮತ್ತೂ ಹಗುರವಾಗಬಾರದೆಂಬಂತೆ, ಮಿ. ಮರ್ಡ್‌ಸ್ಟನ್ನರು ಒಂದು ಹೊಸ ಕ್ರಮವನ್ನು ಜಾರಿಗೆ ತಂದರು. ಈ ಹೊಸ ಕ್ರಮದಿಂದ ನನ್ನ ಏಕಾಂಗೀತ್ವವನ್ನು ತೊಲಗಿಸಿ, ಸಹಜೀವನದ ಶಿಸ್ತನ್ನೊದಗಿಸುವ ಗುರಿ ಮಿ. ಮರ್ಡ್‌ಸ್ಟನ್ನರಲ್ಲಿದ್ದಿರಬೇಕು, ಇದಕ್ಕಾಗಿ ಅವರು ನನ್ನನ್ನು ಕರೆದು –

"ಡೇವಿಡ್, ನಿನ್ನ ಹಟಮಾರಿತನ, ಅಪ್ರಸನ್ನ ಸ್ವಭಾವ ಇವನ್ನೆಲ್ಲ ಸರಿಪಡಿಸತಕ್ಕದ್ದಿದೆ. ಇಂಥಾದ್ದೆಲ್ಲ ನನ್ನೆದುರು ನಡೆಯಕೂಡದು. ನಮ್ಮ ಸಂಸರ್ಗವನ್ನೇ ಹಳಿದು ತಿರಸ್ಕರಿಸುವವನಂತೆ ನಿನ್ನ ಚರ್ಯೆಗಳಿವೆ. ಈ ವಕ್ರ ವಿಧಾನದ ದೂಷಣೆಯ ಅಪಮಾನವನ್ನು ಸಹಿಸುವವರು ನಾವಲ್ಲ. ನಿನಗೆ ಕೀಳು ಜನರ ಸಹವಾಸದಲ್ಲಿ ತುಂಬಾ ಇಷ್ಟವೆಂಬುದನ್ನು ನಾವು ತಿಳಿದಿದ್ದೇವೆ. ನಿನ್ನ ತಾಯಿ ಕ್ಲೇರಾಳ ಇಂಥ ಸ್ವಭಾವವನ್ನು ತಿದ್ದಿ ಸರಿಪಡಿಸಿರುವೆವು. ನಿಮ್ಮ ಪೆಗಟಿಯೊಡನೆ ನಿಮಗಿರುವ ಕೀಳ್ತನದ ಬಾಂಧವ್ಯ ನಮ್ಮ ಘನಸ್ತಿಕೆಗೆ ವಿರೋಧ– ಅಪಮಾನಕರ. ನೀನು ನಮ್ಮ ಕಣ್ಣೆದುರೇ ಇರಬೇಕು, ಏನು? ತಿಳಿದಿರು – ನನ್ನ ಆಜ್ಞೆಗಳನ್ನು ಮೀರಿದವರಿಲ್ಲವೆಂಬುದನ್ನು!" ಎಂದು ಭಯ ಗಂಭೀರವಾಗಿ ನುಡಿದರು.

ನಾಯಿಗೆ ಇತ್ತ ಅನುಜ್ಞೆಯನ್ನು ನಾಯಿ ಮಾತ್ರ ಪಾಲಿಸುವಂತೆ ನನಗಿತ್ತ ಆಜ್ಞೆಯನ್ನು ಅನಂತರ ಪರಿಪೂರ್ಣವಾಗಿ ಪಾಲಿಸಿದೆನು. ನನ್ನ ಕೋಣೆ, ನನ್ನ ಕಥೆ ಪುಸ್ತಕಗಳು, ಪೆಗಟಿ ಇವರೆಲ್ಲರಿಂದ ನಾನು ಪ್ರತ್ಯೇಕವಾಗಿ ಉಳಿಯತೊಡಗಿದೆನು.

ಹೀಗೆ ದಿನ ಸಾಗುತ್ತಾ ರಜೆಯ ಕಡೇ ದಿನವೂ ಸಮೀಪಿಸಿತು. ನಾನು ಮನೆಯಲ್ಲಿರುವ ದಿನಗಳನ್ನೆಲ್ಲ ಕೆಲೆಂಡರಿನಲ್ಲಿ ಪ್ರತಿ ದಿನಕ್ಕೆ ಒಂದು ತಾರೀಕಿನಂತೆ ಅಡ್ಡ ಗೆರೆಯೆಳೆದು ಸಂಪೂರ್ಣ ಅಳಿಸಿಬಿಡುತ್ತಿದ್ದ ಮಿಸ್. ಮರ್ಡ್ಸ್ಟನ್ನಳು ನನ್ನ ರಜೆಯ ಕೊನೆಯ ದಿನದ ತಾರೀಕಿಗೂ ಅಡ್ಡ ಗೆರೆಯೆಳೆದಳು. ಆಖೈರಿನ ಅಡ್ಡ ಗೆರೆಯಿಂದ ಜೇನಳಿಗೆ ತುಂಬಾ ಸಂತೋಷವಾಗಿರಬೇಕು; ಅವಳು ಆಖೈರಿನ ಚಾವನ್ನೂ ನನಗೆ ನೀಡಿದಳು. ಚಾ ಕುಡಿದಾಗುವಷ್ಟರಲ್ಲೇ ಬಾರ್ಕಿಸನ ಬಂಡಿ ಬಂದು ಮನೆಯೆದುರು ನಿಂತಿತು.

"ಕ್ಲೇರಾ, ಮನಸ್ಸನ್ನು ಬಿಗಿಹಿಡಿ" ಅಂದರು ಮಿ. ಮರ್ಡ್ಸ್ಟನ್ನರು.

ಅಮ್ಮ ಬಂದು ನನಗೆ ಮುತ್ತು ಕೊಟ್ಟು ಆಲಂಗಿಸಿದಳು. ನನ್ನ ತಮ್ಮನನ್ನು ಮುದ್ದಿಸಿ ನಾನು ಹೊರಟೆನು. ಬಾರ್ಕಿಸನ ಬಂಡಿಯನ್ನು ನಾನು ಏರಿದ ಕೂಡಲೇ ಅದು ಮಂದ ಗತಿಯಿಂದ ಮುಂದೆ ಸಾಗತೊಡಗಿತು.

ಬಂಡಿ ಮನೆಯಿಂದ ಹೋಗುವುದರೊಳಗೆ ತಾಯಿ ಗೇಟಿನ ಬಳಿಯಲ್ಲಿ ನಿಂತು ನನ್ನ ತಮ್ಮನನ್ನು ಎರಡು ಕೈಗಳಲ್ಲಿ ಎತ್ತಿ ಹಿಡಿದು, ನನ್ನನ್ನು ಮುದ್ದಾಗಿ ಕರೆದು, ಎತ್ತಿ ತೋರಿಸಿದಳು. ಆಗ ಒಂದಿಷ್ಟೂ ಗಾಳಿಯಿಲ್ಲದೆ, ತಾಯಿಯ ತಲೆಗೂದಲೂ ಸಹ ಅಲುಗಾಡುತ್ತಿರಲಿಲ್ಲ. ನನ್ನ ಮಮತೆಯ ತಾಯಿಯ ಪ್ರೇಮಪೂರಿತ ದೃಷ್ಟಿಯಿಂದ, ಸ್ಥಿರ ಪ್ರಸನ್ನತೆಯಿಂದ, ಶಿಲಾ ಪ್ರತಿಮೆಯಂತೆ ನನ್ನನ್ನೇ ನೋಡುತ್ತಾ ನಿಂತಿದ್ದಳು.

ಕಡೆಯದಾಗಿ ನಾನು ನನ್ನ ತಾಯಿಯನ್ನು ಕಂಡದ್ದು ಆ ರೀತಿ. ಅದೇ ರೂಪವನ್ನು ನಾನು ನಮ್ಮ ಶಾಲಾ ಬೋರ್ಡಿಂಗಿನಲ್ಲಿ ನಿದ್ರಿಸುತ್ತಿದ್ದಾಗ, ನನ್ನ ಹಾಸಿಗೆಯ ಬಳಿ ನಿಂತಿದ್ದಂತೆ ಕಂಡಿದ್ದೇನೆ– ಸ್ಥಿರವಾಗಿ, ಮೌನವಾದ ಪ್ರೇಮಪೂರಿತ ದೃಷ್ಟಿಯ, ಪ್ರಸನ್ನ ಮುಖದ ಆ ಪ್ರತಿಮೆ ತನ್ನ ಎರಡೂ ಕೈಗಳಲ್ಲಿ ಮಗುವನ್ನು ಎತ್ತಿ ತೋರಿಸುತ್ತಿದ್ದುದನ್ನು ಕಂಡಿದ್ದೇನೆ.

ಅಧ್ಯಾಯ ಒಂಬತ್ತು

ನನ್ನ ಚಿರಸ್ಮರಣೀಯವಾದ ಜನ್ಮದಿನ

ಮಾರ್ಚ್ ತಿಂಗಳ ಮಧ್ಯದಲ್ಲಿ ನನ್ನ ಜನ್ಮದಿನ ಬರುತ್ತದೆ. ಬ್ಲಂಡರ್ಸ್ಟನ್ನಿನಿಂದ ನಮ್ಮ ಶಾಲೆಗೆ ಬಂದು ಸಾಧಾರಣ ಎರಡೂ ತಿಂಗಳಾಗಿರಬಹುದು – ಅಂಥ ಒಂದು ದಿನ ನಾವೆಲ್ಲರೂ ನಮ್ಮ ನಮ್ಮ ಕ್ಲಾಸುಗಳಲ್ಲಿ ಕುಳಿತಿದ್ದೆವು. ಹಗಲಿನ ಬೆಳಕು ಸಾಕಾಗದೇ ಮಯಣದ ಬತ್ತಿಗಳನ್ನು ಹೊತ್ತಿಸಿಟ್ಟುಕೊಂಡಿದ್ದೆವು. ಚಳಿಯಿಂದ ಬಾಲಕರು ಕಷ್ಟಪಡುತ್ತಾ, ಬಟ್ಟೆಯಿಂದ ತಮ್ಮ ಮೈಮುಚ್ಚದಿದ್ದ ಭಾಗವನ್ನು ಕೈಯಿಂದ ತಿಕ್ಕಿ, ತೀಡಿ ಬಿಸಿ ಮಾಡಿಕೊಳ್ಳುತ್ತಿದ್ದರು.

ಹೀಗೆ ನಾವು ನಮ್ಮ ನಮ್ಮ ಕ್ಲಾಸುಗಳಲ್ಲಿದ್ದಾಗ ಮಿ. ಶಾರ್ಪರು ಬಂದು ನಾನು ಮಿ. ಕ್ರೀಕಲರ ಬೈಠಖಾನೆಗೆ ಹೋಗಬೇಕೆಂದು ತಿಳಿಸಿದರು. ಮಿ. ಕ್ರೀಕಲರ ಬೈಠಖಾನೆಗೆ ಹೋಗುವುದೆಂದರೆ ಒಂದು ಅಪೂರ್ವವಾದ ಗೌರವವಾಗಿತ್ತು. ನನ್ನನ್ನು ನೋಡಲು ಯಾರ್ಮತ್ತಿನಿಂದ ಮಿ. ಪೆಗಟಿಯೋ ಹೇಮನೋ ಯಾರಾದರೂ ಬಂದಿರಬಹುದೆಂದು ಊಹಿಸಿಕೊಂಡು ಉತ್ಸಾಹದಿಂದ ಅಲ್ಲಿಗೆ ಹೋದೆ. ನನ್ನ ಜತೆಯಲ್ಲಿ ಮಿ. ಶಾರ್ಪರು ನಾನು ಅವಸರದಿಂದ ಹೋಗುವ ಅಗತ್ಯವಿಲ್ಲವೆಂದು ಮೆಲ್ಲಗೆ ಸೂಚನೆಯಿತ್ತರು. ಅವರ ಮಾತುಗಳ ಕ್ರಮ, ಸ್ವರ, ಅಥವಾ ಅವರ ಮುಖವನ್ನು ಗಮನವಿಟ್ಟು ನೋಡಿದ್ದಾಗಿದ್ದರೆ ನನ್ನ ಉತ್ಸಾಹ ಕಡಿಮೆಯಾಗುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಆದರೆ ನನ್ನ ಅಂತರಂಗ ದೃಷ್ಟಿಯಿಂದ ನಾನು ಮಿ. ಪೆಗಟಿಯನ್ನೇ ಕಾಣುತ್ತಿದ್ದುದರಿಂದ ಶಾರ್ಪರ ಸ್ವರ, ಮುಖ, ಮೊದಲಾದುವುಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಮಿ. ಕ್ರೀಕಲರು ಒಂದು ಸಿಗಾರನ್ನು ಸೇದುತ್ತಾ, ಪತ್ರಿಕೆಯನ್ನು ಓದಿಕೊಂಡು ಕುಳಿತಿದ್ದರು. ಅವರ ಸಮೀಪದಲ್ಲಿ ಅವರ ಪತ್ನಿ ಕೈಯ್ಯಲ್ಲೊಂದು ಪತ್ರವನ್ನು ಹಿಡಿದುಕೊಂಡು ಕುಳಿತಿದ್ದಳು. ನಾನು ಅಲ್ಲಿಗೆ ತಲುಪಿದ ಕೂಡಲೇ ಅವರು ನನ್ನನ್ನು ಒಳಗೆ ಕರೆದುಕೊಂಡು ಹೋಗಿ ಒಂದು ಸೋಫಾದ ಮೇಲೆ ಕುಳ್ಳಿರಿಸಿದರು. ಅವರೂ ನನ್ನ ಸಮೀಪದಲ್ಲೇ ಕುಳಿತರು. ಈ ತೆರನಾದ ವಿಶೇಷವಾದ ಮರ್ಯಾದೆಗಳನ್ನು ಕಂಡು ನನಗೆ ದಿಗಿಲುಂಟಾಯಿತು. ಮಿಸೆಸ್ ಕ್ರೀಕಲರು ಬಹು ಕರುಣೆಯಿಂದ ನನ್ನನ್ನು ನೋಡುತ್ತಾ ಅಂದರು –

“ನೀನು ಮನೆ ಬಿಡುವಾಗ ಅಲ್ಲಿ ಎಲ್ಲರೂ ಕ್ಷೇಮದಲ್ಲಿದ್ದರು ತಾನೆ?”

“ಹೌದು, ಇದ್ದರು.”

“ನಿನ್ನ ತಾಯಿಯೂ ಕ್ಷೇಮದಲ್ಲಿದ್ದರಷ್ಟೆ?... ಆ ವಿಷಯ ಇರಲಿ – ಪ್ರಪಂಚದ ಅನುಭವವನ್ನು ನೋಡಿದರೆ ಯಾವುದೂ ಸ್ಥಿರವಲ್ಲ. ಇಂದು ಇದ್ದವರು ನಾಳೆ ಇಲ್ಲ. ನಾಳೆ ಇದ್ದವರು ಮತ್ತೆ ಯಾವಾಗ ಇಲ್ಲದೆ ಅಗುವರೋ, ಆ ದೇವನೇ ಬಲ್ಲ. ಈ ಅನುಭವವಾದರೋ ಒಬ್ಬೊಬ್ಬರಿಗೆ ಒಂದೊಂದು ಸಮಯದಲ್ಲಿ ಬರುತ್ತದೆ. ಕೆಲವರಿಗೆ ಬಾಲ್ಯದಲ್ಲಿ – ಕೆಲವರಿಗೆ ವೃದ್ಧಾಪ್ಯದಲ್ಲಿ – ಇನ್ನೂ ಕೆಲವರಿಗೆ ಸದಾ ಬರುತ್ತಿರುತ್ತದೆ.”

ಈ ಮಾತುಗಳನ್ನು ನಾನು ಕುತೂಹಲದಿಂದಲೂ, ಸ್ವಲ್ಪ ಭಯದಿಂದಲೂ ಆಲಿಸಿ ಕೇಳುತ್ತಿದ್ದೆ. ಮಿಸೆಸ್ ಕ್ರೀಕಲರು ಮುಂದುವರಿಸಿದರು –

“ನಿನ್ನ ತಾಯಿಗೆ ಸೌಖ್ಯವಿಲ್ಲವೆಂದು ವರ್ತಮಾನ” ಅಂದರು.

ಇದ್ದಕ್ಕಿದ್ದ ಹಾಗೆಯೇ ಮಿಸೆಸ್ ಕ್ರೀಕಲರು ನೀರಿನಲ್ಲಿ ತೊಯ್ದು ತೇಲಿದಂತೆ ತೋರಿದರು.

“ನಿನ್ನ ತಾಯಿಗೆ ಪ್ರಾಣಾಪತ್ತೆಂದು ಪತ್ರ ಬಂದಿದೆ” ಅಂದರು.

ನನಗೆ ಎಲ್ಲವೂ ಅರ್ಥವಾಯಿತು, ಅಳಲಾರಂಭಿಸಿದೆನು.

“ನಿನ್ನ ತಾಯಿ ಮೃತಪಟ್ಟಿದ್ದಾಳೆ” ಅಂದರು ಕ್ರೀಕಲರ ಪತ್ನಿ.

ನಾನು ಬಿಕ್ಕಿ ಬಿಕ್ಕಿ ಅತ್ತೆನು. ಆ ದಿನ ಹಗಲೆಲ್ಲಾ ಅಲ್ಲೇ ಇದ್ದೆನು. ನನ್ನ ಸಹಪಾಠಿಗಳು ಸ್ವಲ್ಪ ದೂರದಲ್ಲಿ ನಿಂತು ನನ್ನನ್ನು ತುಂಬಾ ನೋಡುತ್ತಾ, ಮೌನವಾಗಿ ಅಲ್ಲಿಂದ ಹಿಂದೆ ಸರಿಯುತ್ತಿದ್ದರು. ಆ ದಿನ ರಾತ್ರಿ ನಮ್ಮ ಕಥಾಕಾಲಕ್ಷೇಪವಿರಲಿಲ್ಲ.

ನಾನು ಮರುದಿನ ಶಾಲೆಯಿಂದ ಮನೆಗೆ ಕಳುಹಿಸಲ್ಪಟ್ಟೆನು. ನಾನು ಪುನಃ ಆ ಶಾಲೆಗೆ ಹೋಗುವುದಿಲ್ಲವೆಂದು ನನಗೆ ಆಗ ಗೊತ್ತಿರಲಿಲ್ಲ. ನನ್ನ ಸವಾರಿ ಬಂಡಿಯಲ್ಲಾಯ್ತು. ರಾತ್ರಿ ಬಂಡಿಯನ್ನೇರಿ ಬೆಳಗ್ಗೆ ಯಾರ್ಮತ್ತಿಗೆ ತಲುಪಿದೆನು ನನ್ನನ್ನು ಯಾರ್ಮತ್ತಿನ ಒಂದು ಅಂಗಡಿ ಎದುರು ಕರೆದುಕೊಂಡು ಹೋಗಿ ಬಿಟ್ಟರು. ನಾನು ಬಂದದ್ದು ತಿಳಿದ ಕೂಡಲೇ ಅಂಗಡಿಯೊಳಗಿನಿಂದ ಸ್ಥೂಲದೇಹಿ ಮುದುಕರೊಬ್ಬರು ಹೊರಬಂದು –

“ಸರ್, ಡೇವಿಡ್ ಕಾಪರ್ ಫೀಲ್ಡ್ ಅಂದರೆ ತಾವೇ ತಾನೆ” ಎಂದು ಕೇಳಿದರು.

“ಹೌದು” ಅಂದೆನು.

“ತಮಗೆ ಕೆಲವು ಸಾಹಿತ್ಯಗಳನ್ನೊದಗಿಸಿ ತಮ್ಮನ್ನು ಬ್ಲಂಡರ್ಸ್ಟನ್ನಿಗೆ ಕರೆದುಕೊಂಡು ಹೋಗಲು ನನಗೆ ಅಪ್ಪಣೆಯಾಗಿದೆ” ಅಂದರು ಆ ಮುದುಕರು.

ಮುದುಕರ ಹೆಸರು ಮಿ. ಓಮರ್ ಎಂದು ತಿಳಿದೆ. ಅವರು ಶವಸಂಸ್ಕಾರದ ಸಾಹಿತ್ಯಗಳನ್ನೊದಗಿಸುವ ಡಿಪೋ ಮೇನೇಜರರು, ಜವಳಿ ವ್ಯಾಪಾರಿ ಮತ್ತೂ ದರ್ಜಿಯೂ ಆಗಿದ್ದರು. ಅವರ ಅಂಗಡಿಯ ಬಾಗಿಲ ಮೇಲೆ ಒಂದು ಉದ್ದದ ಹಲಗೆಯಲ್ಲಿ ಈ ಮುಂದಿನಂತೆ ದೊಡ್ಡ, ಚಂದದ, ಅಕ್ಷರಗಳಲ್ಲಿ ಪ್ರಕಟಣೆ ಬರೆದಿದ್ದರು:–

“ಓಮರ್ – ಬಟ್ಟೆ ವ್ಯಾಪಾರಿ, ದರ್ಜಿ, ಚಿಲ್ಲರೆ ವ್ಯಾಪಾರಿ, ಮತ್ತೂ ಶವಸಂಸ್ಕಾರದ ಸಾಹಿತ್ಯ ವ್ಯಾಪಾರಿ.”

ಒಂದೂವರೆ ಘಂಟೆಯೊಳಗೆ ನನ್ನ ಕೆಲಸವನ್ನು ಪೂರೈಸಿ, ನನ್ನನ್ನು ಕರೆದುಕೊಂಡು ಬ್ಲಂಡರ್ಸ್ಟನ್ನಿಗೆ ಹೋಗುವುದಾಗಿ ಭರವಸೆಯಿತ್ತರು. ಅನಂತರ ನನ್ನ ಉದ್ದ, ದಪ್ಪ ಮೊದಲಾದ ಅಳತೆ ತೆಗೆದರು. ಅವರ ಅಂಗಡಿಯಲ್ಲಿ ತುಂಬಾ ಬಟ್ಟೆಯಿತ್ತು. ಒಂದು ಕಡೆ ಒಬ್ಬಳು ಸುಂದರ ಯುವತಿ ಕರಿ ಬಟ್ಟೆಯ ರಾಶಿಯನ್ನು ತನ್ನೆದುರು ಹಾಕಿಕೊಂಡು ಹೊಲೆಯುತ್ತಿದ್ದಳು. ಅಂಗಡಿಯ ಹಿಂಬದಿಯಿಂದ ತಾಳಹೊಡೆದಂತೆ, ಕ್ರಮವಾಗಿ, ರೇಟ್–ಟೇಟ್–ಟೇಟ್, ರೇಟ್–ಟೇಟ್–ಟೇಟ್ ಎಂದು ಶಬ್ದ ಕೇಳಿಬರುತ್ತಿತ್ತು.

ಸ್ವಲ್ಪ ಹೊತ್ತಿನಲ್ಲಿ ಸುಲಕ್ಷಣನಾಗಿದ್ದ ಯುವಕನೊಬ್ಬನು ಅಂಗಡಿಯ ಹಿಂದಿನಿಂದ ಬಂದು ಓಮರರ ಹತ್ತಿರ –

"ಆಯ್ತು" ಅಂದನು.

"ಸರಿ, ಬಟ್ಟೆಯೂ ಆಗುತ್ತಾ ಬಂತು" ಅಂದರು ಓಮರ್.

"ನನ್ನ ಕೆಲಸವನ್ನು ಬೇಗನೆ ಮುಗಿಸಿದರೆ ನಾನೂ ಮಿನ್ನಿಯೂ ನಿಮ್ಮ ಜತೆಯಲ್ಲಿ ಬರಬಹುದೆಂದು ನೀವು ಹೇಳಿದ್ದರಲ್ಲಾ ಹಾಗಾಗಿ ಕೆಲಸವನ್ನು ಬೇಗ ಮಾಡಿದ್ದೇನೆ – ನಾಜೂಕಾಗಿಯೂ ಮಾಡಿದ್ದೇನೆ" ಅಂದ ಯುವಕ.

ಯುವಕನ ಹೆಸರು ಜೋರಂ ಎಂದು ಅವರ ಮಾತುಗಳಿಂದ ತಿಳಿದೆನು. ಮಿನ್ನಿ ಎಂಬವಳು ಓಮರರ ಮಗಳು – ಅವಳೇ ನಾನು ಮೊದಲು ಕಂಡ – ಹೊಲಿಗೆ ಕೆಲಸದ – ಸುಂದರ ಯುವತಿ. ಓಮರ್ ಮತ್ತು ಜೋರಂರು ಅಂಗಡಿಯ ಹಿಂಬದಿಗೆ ಹೋಗಿ ಕೆಲಸವನ್ನು ನೋಡಿಕೊಂಡು ಬಂದರು. ಅನಂತರ ಓಮರರು ನನ್ನನ್ನು ನೋಡಿ ಅಂದರು –

"ಸರ್, ತಮ್ಮ ಸಂಬಂಧ ನಮಗೆ ಮೊದಲಿನಿಂದಲೂ ಇದೆ."

"ಅದು ಹೇಗೆ?" ಎಂದು ನಾನು ಕೇಳಬೇಕಾಯಿತು.

"ತಮ್ಮ ತಂದೆಯವರ ಬಗ್ಗೆ ಕಾಫಿನ್ ಮಾಡಿದ್ದೂ ನಾನು. ಅನಂತರ ಉತ್ತರಕ್ರಿಯೆಗೆ ಬಟ್ಟೆ ತಯಾರಿಸಿದ್ದೂ ನಾನೇ" ಅಂದರು.

"ಮತ್ತೆ?" ಎಂದು ನಾನು ಮನಸ್ಸಿನಲ್ಲೇ ಗ್ರಹಿಸುತ್ತಿದ್ದಾಗ ಅವರು ನನ್ನ ಮುಖ ನೋಡಿ ಅರ್ಥ ಮಾಡಿಕೊಂಡು –

"ಈಗ ತಮ್ಮ ಮಾತೃಶ್ರೀಯವರ ಮತ್ತು ತಮ್ಮನವರ ಬಗ್ಗೆ ಎಲ್ಲಾ ಕೆಲಸವೂ ನಮ್ಮದೇ" ಅಂದರು.

ಓಮರರು ಸ್ಥೂಲಕಾಯರಾಗಿದ್ದುದರಿಂದಲೂ, ಖಾಸಶ್ವಾಸಖಾಯಿಲೆಯುಳ್ಳವರು ಆಗಿದ್ದುದರಿಂದಲೂ ಇಷ್ಟು ಮಾತಾಡಿದ್ದೇ ಅವರಿಗೆ ಶ್ರಮವಾಗಿರಬೇಕು. ಅವರು ಉಬ್ಬಸಬಿಡುತ್ತಾ, ಕೆಮ್ಮ ತೊಡಗಿದರು. ನನ್ನ ತಾಯಿ ಮತ್ತು ತಮ್ಮನೂ ಮೃತಪಟ್ಟಿರುವ ವಿಷಯ ಪುನಃ ಕೇಳಿದ್ದರಿಂದ ನನಗೆ ದುಃಖ ಬಂದು ನಾನು ಅತ್ತೆನು.

"ತಮ್ಮ ತಂದೆಯವರ ಉದ್ದ ಐದೂಮುಕ್ಕಾಲು ಅಡಿ, ಅರೆ ಇಂಚು ಸರ್. ನಾನು ಮಾತ್ರ ಆರಡಿ ಉದ್ದವೇ ಮಾಡಿದೆ – ಅದಕ್ಕೆ ಬೇಸರವಿಲ್ಲ" ಅಂದರು ಓಮರರು.

ಅಷ್ಟರಲ್ಲಿ ಕೆಲಸ ಪೂರೈಸಿದ್ದ ಕಾಫಿನ್ ಮತ್ತು ಬಟ್ಟೆಗಳನ್ನು ನಮ್ಮೆದುರು ತಂದಿಟ್ಟರು. ಕಾಫಿನ್ ಮತ್ತು ಬಟ್ಟೆಗಳನ್ನು ಬಂಡಿಯೊಳಗಿಟ್ಟುಕೊಂಡು, ಮಿನ್ನಿ, ಜೋರಾಂ ನಾನೂ ಬಂಡಿಯನ್ನೇರಿದೆವು. ಓಮರರು ಮುಂದೆ ಕುಳಿತು ಬಂಡಿ ಹೊಡೆಯಲಾರಂಭಿಸಿದರು.

ಜೋರಂನು ಓಮರರ ಕೆಲಸದವನಾಗಿದ್ದನು. ಆದರೆ ಅವನ ಕೆಲಸದ ಯೋಗ್ಯತೆಗಳ ಕಾರಣವಾಗಿ ಅವನನ್ನು ಓಮರರು ತನ್ನ ಜತೆಗಾರನಂತೆಯೇ ಕಾಣುತ್ತಿದ್ದರು. ಮಿನ್ನಿಯೂ ಜೋರಾಂನೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಅವರು ತಮ್ಮೊಳಗೆ ಮುಂದೆ ವಿವಾಹ ನಡೆಯುವುದೆಂಬ ನಿಶ್ಚಯದಿಂದ ಮತ್ತು ಇದಕ್ಕೆ ಓಮರರ ಒಪ್ಪಿಗೆಯಿದ್ದುದರಿಂದ, ಈಗ ನಲ್ಲ ನಲ್ಲೆಯರಾಗಿ ವರ್ತಿಸುತ್ತಿದ್ದರು.

ಓಮರರ ಜೀವನ ತತ್ವವೇ ಹರ್ಷಚಿತ್ತತೆಯಾಗಿತ್ತು. ಮನುಷ್ಯ ಸದಾ ಹರ್ಷಚಿತ್ತನಾಗಿರಬೇಕೆಂಬುದನ್ನು ಅವರು ಅವರ ನಡೆ ನುಡಿಗಳಿಂದ ಮಾತ್ರವಲ್ಲ, ತಮ್ಮ ಖಾಸಶ್ವಾಸದ ಖಾಯಿಲವನ್ನೂ, ಸ್ಥೂಲದೇಹದ ಕಷ್ಟಗಳನ್ನೂ ಎದುರಿಸಿಯೂ ತೋರಿಸುತ್ತಿದ್ದರು. ಜೋರಾಂ ಮತ್ತು ಮಿನ್ನಿಯರು ಬಂಡಿಯೊಳಗೆ ಪರಸ್ಪರ ಆಲಿಂಗಿಸಿಕೊಂಡು, ಮುತ್ತಿಟ್ಟುಕೊಂಡು ಸಾಗುತ್ತಿದ್ದರು – ನಾನೊಬ್ಬ ಪರಕೀಯನಿದ್ದೆನೆಂಬುದನ್ನು ಗಮನಿಸುತ್ತಲೇ ಇರಲಿಲ್ಲ.

ನಮ್ಮ ಬಂಡಿ ಮನೆಗೆ ಸಮೀಪವಾದಂತೆ ನನಗೆ ಅಳು ಬರತೊಡಗಿತು. ನಾವು ಮನೆಗೆ ತಲಪುವ ಮೊದಲೇ ಪೆಗಟಿ ಬಂದು ನನ್ನನ್ನು ಅಪ್ಪಿಕೊಂಡು ಅತ್ತಳು. ಮನೆಯ ಕಿಟಕಿಗಳನ್ನೆಲ್ಲ ಮುಚ್ಚಿದ್ದರು. ನನ್ನಮ್ಮ ಅಲ್ಲಿಲ್ಲದುದರಿಂದ ಆ ಮನೆ ಕಣ್ಣಿಲ್ಲದ ಮುಖದಂತೆ ಕಂಡಿತು. ನಮ್ಮ ಮತ್ತು ಪೆಗಟಿಯ ಅಳುವಿನ ಶಬ್ದ ಹೊರತಾಗಿ ಅಲ್ಲಿ ಮತ್ತೆ ಯಾವ ಶಬ್ದವೂ ಇರಲಿಲ್ಲ.

ಮನೆಯೊಳಗೆ ಮಿ. ಮರ್ಡ್ಸ್ಟನ್ ಮತ್ತು ಅವರ ತಂಗಿ ಇದ್ದರು. ನಾನು ಬರುವಾಗ ನನ್ನ ಬಟ್ಟೆ ಬರೆಗಳನ್ನೆಲ್ಲ ಶಾಲೆಯಿಂದ ತಂದಿರುವೆನೋ ಎಂದು ಮಿಸ್ ಮರ್ಡ್ಸ್ಟನ್ನಳು ಕೇಳಿದಳು. ನಾನು ಅವನ್ನೆಲ್ಲ ತಂದಿರುವ ಸಂಗತಿಯನ್ನು ತಿಳಿಸಿದೆನು. ಮತ್ತೆ ಓಮರರ ಅಂಗಡಿಯಿಂದ ತರಬೇಕಾಗಿದ್ದ ಸಾಮಾನು, ಬಟ್ಟೆ ಮೊದಲಾದುವನ್ನೆಲ್ಲ ತಂದಿರುವೆನೋ ಎಂದೂ ವಿಚಾರಿಸಿದಳು. ಅವೂ ಬಂದಿರುವುದಾಗಿ ತಿಳಿಸಿದೆನು.

ಆ ದಿನ ರಾತ್ರಿ ಪೆಗಟಿ ನನ್ನನ್ನು ನನ್ನಮ್ಮನ ಕೋಣೆಗೆ ಕರೆದುಕೊಂಡು ಹೋಗಿ ಅಮ್ಮನ ಮತ್ತು ತಮ್ಮನ ಶವಗಳನ್ನು ತೋರಿಸಿದಳು. ಶುಭ್ರವಾದ ಬಿಳಿ ವಸ್ತ್ರದಲ್ಲಿ ಅಮ್ಮನನ್ನೂ, ತಮ್ಮನನ್ನೂ ಸುತ್ತಿ ಮಲಗಿಸಿದ್ದರು. ಪೆಗಟಿ ಶವಕ್ಕೆ ಮುಚ್ಚಿದ್ದ ಬಿಳಿ ಬಟ್ಟೆಯನ್ನೆಳೆದು ಅಮ್ಮನ ಮುಖವನ್ನು ಪೂರ್ಣ ತೋರಿಸುವ ಮೊದಲೇ ಅವಳ ಕೈಯನ್ನು ಎಳೆದು ಹಿಡಿದುಕೊಂಡು ಅಳಲು ಪ್ರಾರಂಭಿಸಿದೆನು.

ಶವ ಸಂಸ್ಕಾರಕ್ಕೆ ಡಾ ಚಿಲ್ಲಿಪ್ಪರೂ ಬಂದಿದ್ದರು. ಮರುದಿನ ಬೆಳಗ್ಗೆ ಸಂಪ್ರದಾಯ ಪ್ರಕಾರ ನಾವೆಲ್ಲರೂ ಶ್ಮಶಾನಕ್ಕೆ ಹೋದೆವು. ಓಮರರ ಕಡೆಯವರು ಶವದ ಪೆಟ್ಟಿಗೆಯನ್ನು ಹೊತ್ತುಕೊಂಡು ಮೆಲ್ಲ ಮೆಲ್ಲಗೆ ಸಾಗಿದರು – ಅಂಗಳ, ಗೇಟು, ಎಲ್ಮ್ ಮರಗಳನ್ನು ದಾಟಿ ಇಗರ್ಜಿ ಕಂಪೌಂಡಿಗೆ ತಲುಪಿದೆವು. ನನ್ನ ತಂದೆಯ ಗೋರಿಯ ಬಳಿ ಶವವನ್ನಿಟ್ಟರು. ಶವವನ್ನು ಇಳಿಸಿ ಮುಚ್ಚಬೇಕಾಗಿದ್ದ ಗುಂಡಿಯ ಸುತ್ತಲೂ ನಾವೆಲ್ಲ ನಿಂತೆವು. ಅಲ್ಲಿನ ನಿಶ್ಶಬ್ದತೆ ನನಗೆ ಸದಾ ಜ್ಞಾಪಕದಲ್ಲಿ ಉಳಿದಿದೆ. ನಾವು ಉಸಿರಾಡುವ ಶಬ್ದವೇ ಒಂದು ಗಲಭೆಯಂತೆ ನಮಗೆ ಭಾಸವಾಗುತ್ತಿತ್ತು. ಈ ನಿಶ್ಶಬ್ದತೆಯನ್ನು ಭೇದಿಸಿ ಇಗರ್ಜಿಯ ಗುರುಗಳು, ಸ್ಪಷ್ಟವಾದ ಶಬ್ದಗಳಿಂದ –

"ಜನ್ಮ ಮೃತ್ಯು ಜರಾತೀತನು ನಾನು" ಎಂದು ಪ್ರಾರಂಭಿಸುತ್ತಾ ಕೆಲವು ಧರ್ಮವಚನಗಳನ್ನು ಗಂಭೀರವಾಗಿ ನುಡಿದರು. ಈ ವಚನಗಳು ನಡೆಯುತ್ತಿದ್ದಂತೆಯೇ ಶವದ ಪೆಟ್ಟಿಗೆಯನ್ನು ಕ್ರಮವಾಗಿ ಕೆಳಗೆ ಇಳಿಸಿದರು. ಅನಂತರ ಮಣ್ಣು ಮುಚ್ಚಿ ನಾವು ಹಿಂತಿರುಗಿದೆವು.

"ಜನ್ಮ ಮೃತ್ಯು ಜರಾತೀತನು ನಾನು" ಎಂಬ ಗುರುಗಳ ಗಂಭೀರ ನುಡಿ ಈಗಲೂ ನನಗೆ ಕೇಳಿಸುತ್ತಿರುವಂತೆ ತೋರುತ್ತದೆ. ಆ ದಿನದ ಸೂರ್ಯಪ್ರಕಾಶವೇ ಮಸಕಾಗಿತ್ತು. ಆ ದಿನವೇ ಇತರ ದಿನಗಳಿಂದ ಒಂದು ವಿಧದ್ದಾಗಿ ಈಗಲೂ ಭಾಸವಾಗುತ್ತದೆ.

ನನ್ನ ತಾಯಿಯ ರಕ್ತ ಸಂಬಂಧಿಕರಾಗಿ ನಾವು ಈ ರೀತಿ ದುಃಖವನ್ನು ಅನುಭವಿಸುತ್ತಿದ್ದಾಗಲೇ, ಅವಳ ಪ್ರೇಮದ ಸಖಿಯಾಗಿ, ಕೆಲಸದ ಆಳಾಗಿ, ಅಂತಿಮ ಕಾಲದಲ್ಲೂ ಅವಳ ಸಮೀಪದಲ್ಲಿದ್ದ ಪೆಗಟಿ ನಮಗಿಂತ ಸ್ವಲ್ಪ ದೂರದಲ್ಲಿ ನಿಂತು ಎಡೆಬಿಡದೆ ಅಳುತ್ತಿದ್ದಳು. ಇದೇ ಸಮಯದಲ್ಲಿ ನನ್ನ ಸಮೀಪದಲ್ಲಿದ್ದ ಜೋರಾಂನು ಸ್ವಲ್ಪ ದೂರದಲ್ಲಿದ ಮಿನ್ನಿಯನ್ನು ನೋಡಿ ಕಣ್ಣು ಸನ್ನೆಯಿಂದಲೇ ಪ್ರಣಯ ಸಂಭಾಷಣೆಗೈಯ್ಯುತ್ತಿದ್ದನು.

ಅಂದು ರಾತ್ರಿ ಪೆಗಟಿ ಅಮ್ಮನ ಕಡೇ ದಿನಗಳ ವೃತ್ತಾಂತವನ್ನೆಲ್ಲ ನನಗೆ ತಿಳಿಸಿದಳು. ನನ್ನ ತಮ್ಮ ಜನಿಸಿದಂದಿನಿಂದಲೇ ನನ್ನಮ್ಮನಿಗೆ ಸದಾ ಖಾಯಿಲೆಯಿತ್ತು. ದೇಹಸುಖ ಕಡಿಮೆಯಾಗುತ್ತಾ, ನಿತ್ರಾಣ ಹೆಚ್ಚುತ್ತಾ ಬಂದ ಹಾಗೆಲ್ಲಾ ಅವಳು ಗಂಡನನ್ನೂ , ಗಂಡನ ತಂಗಿಯನ್ನೂ ಹೆಚ್ಚೆಚ್ಚು ಪ್ರೀತಿಸುತ್ತಾ, ಆಶ್ರಯಿಸುತ್ತಾ ಬಂದಳಂತೆ. ಅಶಕ್ತತೆಯಿಂದ ಅನ್ಯಾಶ್ರಯವನ್ನು ಆದರಿಸುತ್ತಾ, ಅವರೆಲ್ಲರಿಗೂ ಹೆದರುತ್ತಾ, ಕೊನೆಗೆ ತನ್ನ ದೇಹವನ್ನು ಮಾತ್ರ ತನ್ನ ವಶದಲ್ಲಿಟ್ಟುಕೊಂಡು, ಬುದ್ಧಿ, ಮನಸ್ಸನ್ನೆಲ್ಲ ಮಿಸ್ ಜೇನ್ ಮರ್ಡ್ಸ್ಟನ್ನಳಿಗೆ ಕೊಟ್ಟು ಬಿಟ್ಟಿದ್ದಳೆಂದು ಪೆಗಟಿ ತಿಳಿಸಿದಳು.

ಕೊನೆಯ ದಿನ ಪೆಗಟಿ ಒಂದರೆಕ್ಷಣ ಸಹ ತಾಯಿಯನ್ನು ಬಿಟ್ಟಿರದೆ ಕಾದು ಕುಳಿತಿದ್ದಳಂತೆ. ಪ್ರಾಣ ಹೋಗುವ ಮೊದಲು ತಾಯಿ ಪೆಗಟಿಯನ್ನು ಕರೆದು –

"ಪೆಗಟಿ, ಸ್ವಲ್ಪ ಬಾಯಾರಿಕೆ ಕೊಡು" ಅಂದಳು.

ಪೆಗಟಿ ಬಾಯಾರಿಕೆಯನ್ನಿತ್ತಳು.

"ನೀನು ದೂರ ನಿಂತಿರುವುದೇಕೆ – ಹತ್ತಿರ ಬಂದು ಕುಳಿತುಕೋ," ಅಂದಳಂತೆ. ಪೆಗಟಿ ನಿಜವಾಗಿಯೂ ತಾಯಿಯ ಬಹು ಸಮೀಪದಲ್ಲೇ ಇದ್ದಿದ್ದರೂ ಅವಳಿಗೆ ಪೆಗಟಿ ದೂರವಿದ್ದಂತೆ ಕಂಡಿರಬೇಕು. ಪೆಗಟಿ ಸ್ವಲ್ಪ ಅಲುಗಾಡಿ ಬಿಟ್ಟು ತಾಯಿಯ ಮುಖದೆದುರು ಕುಳಿತಳು.

"ಡೇವಿಯನ್ನು ಇನ್ನೊಮ್ಮೆ ನೋಡುವುದಿಲ್ಲವೆಂದು ಆ ದಿನವೇ ತಿಳಿದೆ, ಪೆಗಟೀ. ನಾನು ಸಾಯುವೆನು. ನಾನು ಡೇವಿಯನ್ನು ಹರಸಿದ್ದೇನೆ ಪೆಗಟಿ – ಸಾವಿರ ಸರ್ತಿ ಹರಸಿದ್ದೇನೆ, ತಿಳಿಸಿಬಿಡು" ಅಂದಳಂತೆ.

ಪೆಗಟಿ ತಾಯಿಯ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಆದರಿಸಿ ಕುಳಿತಳಂತೆ. ತಾಯಿ ಪುನಃ ಮಾತಾಡುತ್ತಾ –

"ನನ್ನ ಮಗು ಸತ್ತರೆ ಅದನ್ನು ನನ್ನ ತೋಳುಗಳ ಮೇಲಿಟ್ಟು ಮುಚ್ಚಬೇಕು, ಪೆಗಟೀ" ಅಂದಳಂತೆ ಅಮ್ಮ. ಪೆಗಟಿಗೆ ಉತ್ತರ ಹೊರಡದೆ ಅಳುವೇ ಬಂತು. ಪೆಗಟಿಯ ತೊಡೆಯಲ್ಲೇ ಅಮ್ಮನು ಆಖೈರು ಮಾತಾಡಿ ಮೃತಪಟ್ಟಳಂತೆ.

ಪೆಗಟಿ ಈ ವಿಷಯಗಳನ್ನೆಲ್ಲ ಸ್ವಲ್ಪ ಸ್ವಲ್ಪವಾಗಿ ಗದ್ಗದ ಕಂಠದಿಂದ ತಿಳಿಸಿದಳು. ಅಂದಿನ ದುಃಖದಲ್ಲಿ ಆಗಿನ ಪ್ರಜ್ಞೆಯೇ ನನ್ನಿಂದ ಮಾಯವಾಯಿತು. ನನ್ನ ಮನಸ್ಸು ನಮ್ಮ ಹಿಂದಿನ ದಿನಗಳಿಗೆ ಹಠಾತ್ತಾಗಿ ಪ್ರವೇಶಿಸಿ ನಾನೂ, ನನ್ನಮ್ಮ ಮತ್ತು ಪೆಗಟಿ ಆ ಬೈಠಖಾನೆಯಲ್ಲಿದ್ದ ಚಿತ್ರಗಳನ್ನು ಮಾತ್ರ ನನ್ನೆದುರಿಟ್ಟಿತು. ಮೃತಳಾಗಿ ಮಾಯವಾಗಿದ್ದ ನನ್ನ ತಾಯಿ ಒಮ್ಮೆಗೆ ಕಾಲವನ್ನೇ ವಂಚಿಸಿ, ಹಿಂದೆ ಬೈಠಖಾನೆಯಲ್ಲಿ ಮುಂಗುರುಳನ್ನು ಬೆರಳಿಗೆ ಸುತ್ತುತ್ತಾ ಪದ ಹೇಳುತ್ತಿದ್ದ ಸುಂದರ ರೂಪದಲ್ಲೇ ನನ್ನ ಕಣ್ಣೆದುರು ನಿಂತಿದ್ದಳು.

ಸಮಾಧಿಯಲ್ಲಿ ಮಲಗಿದ್ದ ತಾಯಿ ನನ್ನ ಬಾಲ್ಯದ ಮುದ್ದು ತಾಯಿ. ಅವಳ ತೋಳಿನ ಮೇಲೆ ಅಡಗಿ ಮಲಗಿರುವ ಆ ಚಿಕ್ಕ ಮಗುವೇ – ಹಿಂದೆ ಮಗುವಾಗಿ ನಲಿದಿದ್ದ – ನಾನು ನನ್ನ ಬಾಲ್ಯ ಜೀವನದ ಸುಖ ಸಂತೋಷಗಳ ಸಮಸ್ತ ಭಂಡಾರವೇ ಆ ಗೋರಿಯಲ್ಲಿ ಮಲಗಿ ಶಾಶ್ವತವಾಗಿ ಮರೆಯಾಯಿತು.

ಅಧ್ಯಾಯ ಹತ್ತು

ನನ್ನ ಹಿತವನ್ನು ಸಾಧಿಸುವವರಿಲ್ಲ – ಕೊನೆಗೊಂದು ವೃತ್ತಿಯನ್ನು ಕಲ್ಪಿಸಿಕೊಟ್ಟಿದ್ದಾರೆ

ನನ್ನ ತಾಯಿ ಸತ್ತನಂತರ ನನ್ನ ಮೇಲಿನ ನಿರ್ಬಂಧಗಳು ಸಡಿಲವಾದುವು. ಬೈಠಖಾನೆಯಿಂದ ಹೊರಗೆ ಹೋಗಲೂ ಪೆಗಟಿಯೊಡನೆ ಮಾತಾಡಲೂ ಯಾರದೂ ಆಕ್ಷೇಪವಿರಲಿಲ್ಲ. "ಆ ಹುಡುಗ ಹೇಗಾದರೂ ಉದ್ಧಾರವಾಗುವವನಲ್ಲ – ಅಣ್ಣನ ದುಃಖದಲ್ಲಿ ಅಂಥವನೊಬ್ಬ ಮನೆಯಲ್ಲಿದ್ದರೆ ಅಣ್ಣನಿಗೆ ಸ್ವಲ್ಪವೂ ಶಾಂತಿ ಸಿಕ್ಕದು", ಎಂದು ಮಿಸ್ ಮರ್ಡ್‌ಸ್ಟನ್ನಳು ನನಗೆ ಕೇಳುವಂತೆಯೇ ಬಂದವರೊಬ್ಬರ ಹತ್ತಿರ ಮಾತಾಡಿದ್ದನ್ನು ಕೇಳಿದ್ದೆ. ಒಂದು ತಿಂಗಳಿನಲ್ಲಿ ಪೆಗಟಿ ನಮ್ಮ ಮನೆ ಕೆಲಸದಿಂದ ನಿವೃತ್ತಳಾಗುವಳೆಂದು ಅಪ್ಪಣೆಯಾಗಿತ್ತು. ಅದೇ ರೀತಿಯ ಅಪ್ಪಣೆಯನ್ನು, ಎಡೆಯಿದ್ದಿದ್ದರೆ, ನನಗೂ ಕೊಡುತ್ತಿದ್ದರೆಂಬುದು ನಿರ್ವಿವಾದ. ಒಂದು ದಿನ ಮಿಸ್ ಮರ್ಡ್‌ಸ್ಟನ್ನಳು ಭರಣಿಯಿಂದ ಹುಳಿ ಉಪ್ಪಿನಕಾಯಿಯನ್ನು ತೆಗೆಯುತ್ತಿದ್ದಾಗ ಪೆಗಟಿ ಓರೆಯಲ್ಲಿ ನಿಂತು –
"ಒಂದೆರಡು ವಾರಗಳ ಮಟ್ಟಿಗೆ ಡೇವಿಯು ನಮ್ಮ ಯಾರ್ಮತ್ ಮನೆಯಲ್ಲಿ ಇದ್ದು ಬಂದರಾಗಬಹುದೇ ಯಜಮಾನಿ?" ಎಂದು ಮಿಸ್ ಮರ್ಡ್‌ಸ್ಟನ್ನಳನ್ನು ಕೇಳಿದಳು. ಅದಕ್ಕೆ ಅವಳು, ಭರಣಿಯೊಳಗಿದ್ದ ಹುಳಿಯನ್ನೆಲ್ಲ ತನ್ನ ಮುಖದಲ್ಲಿ ಇಟ್ಟುಕೊಂಡಿದ್ದವಳಂತೆ ತೋರುತ್ತಾ –
"ಅವನು ಎಲ್ಲಿದ್ದರೂ ಯಾರಿಗೂ ಉಪಕಾರಕ್ಕೆ ಬೀಳನು – ಕಡು ಸೋಮಾರಿ – ಅಣ್ಣನ ದುಃಖ ಶಮನಕ್ಕಾದರೂ ಅವನು ಹೋದರೆ ಉತ್ತಮ ಆಗಬಹುದು, ಹೋಗ್ಲಿ" ಅಂದಳು.

ಆ ಕೂಡಲೆ ನಾನು ಯಾರ್ಮತ್ತಿಗೆ ಹೋಗುವ ಏರ್ಪಾಡು ಆಯಿತು. ಬಾರ್ಕಿಸನ ಬಂಡಿಯೂ ಬಂತು. ಯಾವಾಗಲೂ ಗೇಟಿನವರೆಗೆ ಮಾತ್ರ ಬರುತ್ತಿದ್ದ ಬಾರ್ಕಿಸನು ಅಂದು ಮನೆಗೇ ಬಂದು ನಮ್ಮ ಸಾಮಾನುಗಳನ್ನು ತಾನೇ ಹೊತ್ತುಕೊಂಡು ಹೋಗಿ ಬಂಡಿಯಲ್ಲಿಟ್ಟನು. ಪೆಗಟಿಯೂ, ನಾನೂ ಬಂಡಿಯನ್ನೇರಿ ಹೊರಟೆವು.
ಬಂಡಿ ಹೋಗುತ್ತಿದ ಹಾಗೆ ಬಾರ್ಕಿಸನನ್ನು ಗೌರವಿಸಲೋಸ್ಕರವೆಂದು –
"ಸೌಖ್ಯವೇ ಮಿ. ಬಾರ್ಕಿಸ್" ಎಂದು ಕೇಳಿದೆನು.
"ಸೌಖ್ಯವಪ್ಪ, ಸೌಖ್ಯ. ನೀವು – ಅಂದರೆ, ನೀವಿಬ್ಬರೂ – ಸೌಖ್ಯವೇ?" ಎಂದು ಅವನು ಮರುಪ್ರಶ್ನೆ ಮಾಡಿದನು, ಮತ್ತೂ –
"ನಿಮಗೆ ಕುಳಿತುಕೊಳ್ಳಲು ಸ್ಥಳ ಸಾಕೇ?" ಎಂದೂ ಪ್ರಶ್ನಿಸಿದನು. ಸ್ಥಳ ಬೇಕಾದಷ್ಟಿದೆಯೆಂದು ನಾನು ಉತ್ತರವಿತ್ತರೂ ಬಾರ್ಕಿಸನು ಪುನಃ ಪುನಃ "ಸ್ಥಳ ಸಾಕೇ" ಎಂದನ್ನುತ್ತಾ, ನಮ್ಮ ಉತ್ತರವೇನಿದ್ದರೂ ಪ್ರಶ್ನೆಯ ಉತ್ಸಾಹದಲ್ಲಿ ನಮ್ಮಿಬ್ಬರನ್ನೂ ನೂಕುತ್ತಾ, ನೂಕುತ್ತಾ ಬಂಡಿಯ ಒಂದು ಮೂಲೆಗೆ ಅದುಮತೊಡಗಿದನು. ಕೊನೆಗೆ ನಮಗೆ ಸ್ಥಳ ಸಾಕೆಂದೂ ಸ್ಥಳಾನುಕೂಲ ಒದಗಿಸುವ ಉತ್ಸಾಹದಲ್ಲಿ ಇದ್ದ ಸ್ಥಳವೇ ಇಲ್ಲದಂತಾಗಿ ನಾನು ಕಷ್ಟಕ್ಕೀಡಾಗಿರುವೆನೆಂದೂ ಪೆಗಟಿ ಪರಿಹಾಸ್ಯವಾಗಿ ಹೇಳುವವರೆಗೂ ಈ ಪ್ರಶ್ನೆ ನಿಲ್ಲಲಿಲ್ಲ. ಆದರೂ ನಮ್ಮ ಪಯಣದ ವೇಳೆಯಲ್ಲಿ ಈ ಪ್ರಶ್ನೆ ಆಗಿಂದಾಗ್ಗೆ ಎದ್ದು ಬರುತ್ತಿತ್ತು. ಬಂಡಿಯ ಇನ್ನೊಂದು ತುದಿಯಲ್ಲಿ ನಾನಿದ್ದು, ಪೆಗಟಿ ಬಾರ್ಕಿಸನ ಸಮೀಪವಿದ್ದುದರಿಂದ, ಈ ಪ್ರಶ್ನೆ ಬಂದಾಗಲೆಲ್ಲಾ ನಾನು ಹೊರಗಿನ ಮರಗಳನ್ನೂ ಆಕಾಶವನ್ನೂ ನೋಡುತ್ತಾ ಪ್ರಕೃತಿ ಸೌಂದರ್ಯ ಚಿಂತನೆಯಲ್ಲಿ ಮಗ್ನನಾಗಿ ಬಿಡುತ್ತಿದ್ದೆನು.

ನಾವು ಯಾರ್ಮತ್ತನ್ನು ಸೇರುವಾಗ ಮಿ. ಪೆಗಟಿಯೂ ಹೇಮನೂ ನಮ್ಮೆದುರು ಬಂದು ನಿಂತರು. ಅವರು ನಮ್ಮ ಪೆಗಟಿಯ ಬಂಧುಗಳಾಗಿದ್ದುದರಿಂದ ಬಾರ್ಕಿಸನು ಅವರೊಡನೆ ನಾಲ್ಕು ಮಾತುಗಳನ್ನು ಆಡಿದನು. ಮಾತುಗಳು ಮನಃಪೂರ್ವಕವೆಂಬುದರಲ್ಲಿ ಸಂಶಯವಿಲ್ಲದಿದ್ದರೂ ಅವುಗಳಿಂದ ಬಾರ್ಕಿಸನ ಹೆಡ್ಡುತನ, ಮತ್ತೂ ಮೌಢ್ಯತನ ಮಾತ್ರ ಪ್ರದರ್ಶನವಾದುವೆಂದು ನಾನು ಗ್ರಹಿಸಿದೆನು. ಇದೇ ಸಂದರ್ಭದಲ್ಲಿ ಬಾರ್ಕಿಸನೂ ಪೆಗಟಿಯೂ ತಮ್ಮೊಳಗಿನ ಅನುರಾಗವನ್ನು ಮನಬಿಚ್ಚಿ ನನಗೆ ತಿಳಿಸಿದರು. ಬಾರ್ಕಿಸನನ್ನು ತಾನು ಮದುವೆಯಾಗುವುದರಲ್ಲಿ ನನ್ನದೇನಾದರೂ ಆಕ್ಷೇಪವಿದೆಯೇ ಎಂದು ಪೆಗಟಿ ನನ್ನನ್ನು ಕೇಳಿದಳು. ನಾನು ಸ್ವಲ್ಪ ಆಲೋಚಿಸಿ, ನನ್ನ ಅಕ್ಷೇಪವಿಲ್ಲವೆಂದು ತಿಳಿಸಿದೆನು. ಪೆಗಟಿಯು ಬಾರ್ಕಿಸನ್ನು ಮದುವೆಯಾಗಲು ಇದ್ದ ಕಾರಣಗಳಲ್ಲಿ ವಾರಕ್ಕೊಮ್ಮೆಯಾದರೂ ಬಾರ್ಕಿಸನ ಜತೆಯಲ್ಲಿ ಬ್ಲಂಡರ್ಸ್ಟನ್ನಿಗೆ ಬಂದು ನನ್ನನ್ನೂ ನನ್ನ ತಾಯಿಯ ಗೋರಿಯನ್ನೂ ನೋಡಲು ಸಿಗುವ ಅನುಕೂಲವೂ ಒಂದೆಂದು ಪೆಗಟಿ ಹೇಳಿದಳು. ಪೆಗಟಿಯೊಡನೆ ನಾನು ಈ ಎಲ್ಲಾ ಮಾತುಗಳನ್ನು ಆಡುವಾಗ ಬಾರ್ಕಿಸನು ನಮ್ಮನ್ನು ಬಹು ಗೌರವದಿಂದ ನೋಡುತ್ತಿದ್ದನು. ಆದರೆ ನಮ್ಮ ಮಾತುಗಳನ್ನು ಕುರಿತಾಗಿ ಅವನ ಅಭಿಪ್ರಾಯವೇನಿರಬಹುದೆಂದು ತಿಳಿಯುವುದು ನಮಗೆ ಅಸಾಧ್ಯವಾಗಿತ್ತು. ನಡೆಯದಿದ್ದ ಗಡಿಯಾರದ ಮುಖದಿಂದ ಘಂಟೆಯನ್ನು ತಿಳಿಯಬಹುದಾಗಿದ್ದಷ್ಟೆ ಬಾರ್ಕಿಸನ ಮುಖದಿಂದ ಅವನ ಅಭಿಪ್ರಾಯವನ್ನು ತಿಳಿಯಬಹುದಿತ್ತು.

ನಾವು ಮಿ. ಪೆಗಟಿಯ ಮನೆಗೆ ಬಂದಾಗ ಎಮಿಲಿ ಅಲ್ಲಿರಲಿಲ್ಲ. ಅವಳು ಶಾಲೆಗೆ ಹೋಗಿದ್ದಳೆಂದು ಕೇಳಿ ತಿಳಿದೆ. ಎಮಿಲಿಯನ್ನು ನೋಡಬೇಕೆಂಬ ಬಯಕೆ, ತವಕ ನನ್ನಲ್ಲಿದ್ದುದರಿಂದ, ನಾನು ವಿಶೇಷ ಉದ್ದೇಶ ಪಡದಿದ್ದರೂ ನನ್ನ ಕಾಲುಗಳು ತಾವಾಗಿಯೇ ನನ್ನನ್ನು ಎಮಿಲಿ ಬರುವ ಕಡೆಗೆ ಸಾಗಿಸಿದುವು. ಸ್ವಲ್ಪ ದೂರ ಹೋಗುವುದರೊಳಗೆ ಎಮಿಲಿಯು ಎದುರಾಗಿ ಬರುತ್ತಿದ್ದುದನ್ನು ಕಂಡೆನು.
ಅವಳು ಒಂದು ವರ್ಷದ ಹಿಂದೆ ಕಂಡಿದ್ದ ಎಮಿಲಿಯಂತೆ ಕಾಣುತ್ತಿರಲಿಲ್ಲ. ಸ್ವಲ್ಪ ಉದ್ದವಾಗಿಯೂ, ದಪ್ಪವಾಗಿಯೂ ಬೆಳೆದಿದ್ದಳು. ಅವಳ ಮುಖವೇನೋ ಮೊದಲಿನಂತೆ ಸೌಂದರ್ಯಯುತವೂ, ಮನೋಹರವೂ ಆಗಿತ್ತು. ಅವಳು ಹೆಂಗಸಾಗಿರಬೇಕೆಂಬ ಶಂಕೆಯಿಂದ ನನಗೆ

ಅವಳಲ್ಲಿ ಮೊದಲಿನ ಸಲಿಗೆ ಉಂಟಾಗಲಿಲ್ಲ. ಆದರೂ ಹತ್ತಿರ ನಿಂತು ನೋಡುತ್ತಾ ಹೋದ ಹಾಗೆಲ್ಲ ಮೊದಲಿನವಳೇ ಎಂಬ ಸಲಿಗೆಯೂ ಉಂಟಾಗುತ್ತಿತ್ತು. ಆದರೂ ನಾವೀರ್ವರೂ ಪ್ರಾಯದಲ್ಲಿ ಮುಂದುವರಿದಿದ್ದೇವೆಂಬ ಭಾವನೆಯೇ ನಮ್ಮ ಮನಸ್ಸಿನಲ್ಲಿ ಇಲ್ಲದ ನಾಚಿಕೆ, ಶಂಕೆ, ಅಂಜಿಕೆಗಳನ್ನು ತಂದೊಡ್ಡುತ್ತಿದ್ದುವು. ಅವಳನ್ನು ನೋಡಬೇಕು – ಅವಳೊಡನೆ ಮಾತಾಡಬೇಕೆಂದು ಬಹು ಇಚ್ಛೆಪಡುತ್ತಾ ಅವಳೊಡನೆ ಮಾತಾಡಲು ಪ್ರಾರಂಭಿಸುವಾಗಲೇ ಅವಳು ನನ್ನನ್ನೇ ನೋಡುತ್ತಿದ್ದಾಳೆಂಬ ತಿಳಿವೇ ನನಗೆ ಅಡ್ಡ ಬಂದು, ನಾನು ಮಾತನ್ನು ನಿಲ್ಲಿಸುವಂತೆ ಮಾಡುತ್ತಿತ್ತು. ಆದರೂ ಅವಳನ್ನು ನೋಡದವನಂತೆ ನಟಿಸಿ, ಅವಳೂ ಸಹ ನನ್ನನ್ನು ಕಾಣದವಳಂತೆ ನಟಿಸಿ ಮನೆ ಕಡೆ ನಡೆದಾಗ, ನಾನು ಅವಳನ್ನು ಹಠಾತ್ತಾಗಿ ಕಂಡವನಂತೆ ತೋರ್ಪಡಿಸಿಕೊಂಡು ಮಾತಾಡತೊಡಗಿದೆ. ಮಾತಾಡುತ್ತಾ ಕೈ ಹಿಡಿದುಕೊಂಡು ನಡೆದು, ಕ್ರಮೇಣವಾಗಿ ಪೂರ್ವಕ್ರಮದ ಮಾತು, ಆಲಿಂಗನ, ನಗೆ ಹಾರಾಟಗಳನ್ನು ಮಾಡಿದೆವು. ಆದರೂ ನಾನವಳಿಗೆ ಮುತ್ತಿಡಲು ಅವಳು ಬಿಡಲಿಲ್ಲ.

ರಾತ್ರಿ ಊಟವಾದನಂತರ ಹಿಂದೆ ನಾನು ಬಂದಿದ್ದಾಗ ಕುಳಿತ ಕ್ರಮದಲ್ಲೇ ಕುಳಿತು ಮನಸ್ವೀಯಾಗಿ ಮಾತಾಡತೊಡಗಿದೆವು. ಮಿ. ಪೆಗಟಿ ಅನೇಕ ವಿಷಯಗಳನ್ನು ಕುರಿತು ಮಾತಾಡುತ್ತಾ ನಮ್ಮ ಸೆಲಂ ಶಾಲೆಯನ್ನೂ ಕುರಿತು ಮಾತಾಡಿದರು.
"ನಿಮ್ಮ ಸ್ನೇಹಿತರ ಹೆಸರು ಮಿ. ಸ್ಟಿಯರ್ಫೋರ್ತ್ ಎಂದಲ್ಲವೇ?" ಎಂದು ಮಿ. ಪೆಗಟಿ ಕೇಳಿದರು.
"ರಡ್ಡರ್ ಫೋರ್ಡ್ ಎಂದಲ್ಲವೇ ?" ಎಂದು ಹೇಮನು ಕೇಳಿದನು.
"ಈ ಎರಡು ಹೆಸರುಗಳೂ ನಾವಿಕರಿಗೆ ಬಹು ಯೋಗ್ಯವಾದುವು. ಸ್ಟಿಯರ್ಫೋರ್ತ್ ಅಂದರೆ ಕಷ್ಟದ ಪ್ರಸಂಗಗಳಲ್ಲಿ ದಾರಿ ಬಿಡಿಸಿಕೊಂಡು ಮುಂದೆ ಹೋಗತಕ್ಕವನು ಎಂದರ್ಥ. ರಡ್ಡರ್ಫೋರ್ಡ್ ಅಂದರೆ ಚುಕ್ಕಾಣಿ ಹಿಡಿದು ಮುಂದೆ ಸಾಗು ಎಂದರ್ಥ" ಅಂದರು ಮಿ. ಪೆಗಟಿ.
"ಅವನ ವಿದ್ಯೆಯೇನು! ನಡೆನುಡಿಗಳೇನು! ಸಂಸ್ಕೃತಿಯೇನು! ಅವನ ಪ್ರಸನ್ನ ಸ್ವಭಾವವೇನು!" ಎಂದಂದೆನು ನಾನು.
"ಆ ದಿನ ಐದು ನಿಮಿಷದ ಸಂಭಾಷಣೆಯಲ್ಲಿ ಮಹಾ ವ್ಯಕ್ತಿ ಎಂಬುದು ಗೊತ್ತಾಗಿದೆ" ಅಂದರು ಮಿ. ಪೆಗಟಿ.
ನನ್ನ ಪ್ರಿಯ ಸ್ನೇಹಿತನನ್ನು ಹೊಗಳಿದ್ದು ಕೇಳಿ ನನಗೆ ಮಾತಾಡಲು ಒಂದು ವಿಧದ ಆವೇಶವೇ ಬಂತು. ನಾನು ಪುನಃ ಪುನಃ ಅಂತಃಕರಣಪೂರ್ವಕವಾಗಿ ಸ್ಟಿಯರ್ಫೋರ್ತನ ಗುಣಗಳನ್ನೆಲ್ಲ ವರ್ಣಿಸಿ ಹೇಳತೊಡಗಿದೆ.
"ಅವನು ಹಿಡಿದದ್ದು ಜಯ, ಬರೆದದ್ದು ಕಾವ್ಯ, ಹಾಡಿದ್ದು ಸಂಗೀತ. ಯಾವ ಆಟ ಕೇಳುತ್ತೀರಿ – ಅದರಲ್ಲೆಲ್ಲ ಅವನು ಪ್ರವೀಣ. ಕ್ರಿಕೆಟ್ ಆಟದಲ್ಲಂತೂ ಅವನು ಜಗತ್ತಿನಲ್ಲೇ ಪ್ರಥಮ ಸ್ಥಾನ ಪಡೆದವನು" ಎಂದಂದೆ.
"ಒಂದೂರಿಗೆ ಅಂಥವನೊಬ್ಬನಿದ್ದರೆ ಸಾಕು – ಆ ಊರಿಗೇ ಸುಖ ಸಿಗುತ್ತೆ. ಅವರು ನಮ್ಮೂರಿಗೆ ಬರಲಿ ನನ್ನ ಸ್ವಾಗತವು ಸದಾ ಇದೆ. ಅವರನ್ನು ಇನ್ನೂ ನೋಡಬೇಕು ಎಂದೆನಿಸುತ್ತದೆ" ಎಂದು ಮಿ. ಪೆಗಟಿಯವರು ನನ್ನನ್ನು ನೋಡುತ್ತಾ ಅಂದರು.
"ಅಂಥವರನ್ನು ಎಷ್ಟು ನೋಡಿದರೂ ಸಾಲದು – ನೋಡುವುದೇನು? ಸಹಪಾಠಿಯಾಗಿ, ಜತೆಯಲ್ಲಿ ಕಲೆತು, ಬೆರೆತು ನೋಡಬೇಕು. ಅವನಿಗಿರುವಂಥ ಧೈರ್ಯ, ಸಾಹಸ, ವ್ಯಕ್ತಿತ್ವ, ದೇಹಸಾಮರ್ಥ್ಯ, ಬುದ್ಧಿಶಕ್ತಿ, ಚುರುಕುತನ, ನಾಜೂಕು, ಸರಳ ಹರ್ಷತನ ಯಾರಿಗೂ ಇಲ್ಲ. ಇಷ್ಟೂ ಅಲ್ಲದೆ ಅವನ ತೇಜಸ್ಸು ಲಕ್ಷಣ, ಸುಂದರರೂಪ, ಎಲ್ಲವೂ ಅವನೊಬ್ಬನಿಗೇ ಇರುವ ವೈಶಿಷ್ಟ್ಯ" ಎಂದು ಮೊದಲಾಗಿ ನಾನು ವಿಪರೀತವಾಗಿ – ಸ್ವಲ್ಪ ಹದ ತಪ್ಪಿಯೇ – ವರ್ಣಿಸುತ್ತಲೂ ಮಾತಾಡಿದೆ.

ಈ ಎಲ್ಲಾ ಮಾತುಗಳನ್ನು ಎಮಿಲಿ ಕೇಳುತ್ತಿದ್ದಳು ಮಾತ್ರವಲ್ಲದೆ, ಎಲ್ಲವನ್ನೂ ಹೀರಿ ಜೀರ್ಣಿಸುವಂತೆ ಉಸಿರನ್ನೇ ಬಿಗಿ ಹಿಡಿದು ಏಕಾಗ್ರಚಿತ್ತದಲ್ಲಿ – ಈ ಮಾತುಗಳಿಂದ ತನ್ನಂತರಂಗದಲ್ಲೇ ಆಗುತ್ತಿದ್ದ ಚಿತ್ರಗಳನ್ನು – ನೋಡುತ್ತಲೂ ಇದ್ದಳು, ಎಂಬಂತೆ ಎವೆಯಿಕ್ಕದ ದೃಷ್ಟಿಯಿಂದ ನೋಡುತ್ತಿದ್ದಳು. ಆಗ್ಗೆ ಅವಳ ಎರಡು ಕಣ್ಣುಗಳೂ ವಜ್ರದ ಹರಳಿನಂತೆ ಪ್ರಕಾಶಿಸುತ್ತಿದ್ದುವು. ನಾವೆಲ್ಲರೂ ಅವಳನ್ನು ನೋಡಿ ಆಶ್ಚರ್ಯಗೊಂಡೆವು. ನಾವು ಅವಳನ್ನು ನೋಡಿದ್ದನ್ನು ಕಂಡು ನಾಚಿಕೆಪಟ್ಟುಕೊಂಡು ಅವಳು ಎದ್ದು ಹೋಗಿಬಿಟ್ಟಳು.
ಅನಂತರ ನಾವೆಲ್ಲರೂ ಹಿಂದಿನ ಕ್ರಮದಲ್ಲೇ ಅವರವರ ಸ್ಥಳದಲ್ಲಿ ಮಲಗಿದೆವು. ರಾತ್ರಿ ಸಮುದ್ರಘೋಷ ಬಹುವಾಗಿ ಕೇಳಿಸುತ್ತಿತ್ತು. ಅದು ಒಮ್ಮೊಮ್ಮೆ ಉಕ್ಕಿಬಂದು ನಮ್ಮ ಮನೆಯನ್ನೇ ಮುಳುಗಿಸಿಬಿಡುವುದೋ ಎಂಬಷ್ಟರವರೆಗೆ ಆ ಶಬ್ದ ಕೇಳಿಸುತ್ತಿತ್ತು. ನನ್ನ ನಿದ್ರೆಯಲ್ಲಿ ಸಮುದ್ರ ಘೋಷವೂ, ನನ್ನ ಬ್ಲಂಡರ್ಸ್ಟನ್ ಮನೆಯ ದುಃಖಪರಿಸ್ಥಿತಿಯೂ, ಎಮಿಲಿಯ ಸುಂದರ ಮೂರ್ತಿಯೂ – ಈ ಎಲ್ಲಾ ಶಬ್ದ, ಭಾವ, ರೂಪಗಳು ಬೆರೆತು ನಾನಾ ವಿಧವಾಗಿ ಸ್ವಪ್ನವಾಗಿ ರಾತ್ರಿಯಿಡೀ ತೋರುತ್ತಿದ್ದುವು.
ನಿದ್ರೆಯಿಂದೆಚ್ಚತ್ತಮೇಲೂ ಎಮಿಲಿಯ ಹಂಬಲಿಕೆಯು ನನ್ನನ್ನು ಆವರಿಸಿತ್ತು. ನಾನು ಅಲ್ಲಿದ್ದಾಗ, ಅನುಕೂಲವಿದ್ದಾಗಲೆಲ್ಲಾ ಅವಳ ಜತೆಯಲ್ಲಿ ಒಡನಾಡುತ್ತಿದ್ದೆನು. ಅವಳಿಗೆ ಕಥೆಗಳನ್ನೋದಿ ಹೇಳುತ್ತಿದ್ದೆನು. ಚರಿತ್ರೆಯನ್ನು ಹೇಳಿಕೊಡುತ್ತಿದ್ದೆನು. ಹೀಗೆ ಎಮಿಲಿಯ ಜತೆಯಲ್ಲಿ ನಾನು ಬಹು ಸಂತೋಷದಿಂದ ದಿನ ಕಳೆಯುತ್ತಿದ್ದೆನು.
ಮಿ. ಪೆಗಟಿಯ ಮನೆಯಲ್ಲಿ ನಾನು ಹೀಗೆ ದಿನ ಕಳೆಯುತ್ತಿದ್ದಾಗಲೇ ನನಗೆ ಬಾರ್ಕಿಸನ ಪರಿಚಯವೂ ಹೆಚ್ಚಾಗತೊಡಗಿತು. ಬಾರ್ಕಿಸನು ಪ್ರತಿದಿನವೂ ಆ ಮನೆಗೆ ಬಂದು ಏನಾದರೊಂದು ವಿಶೇಷ ವಸ್ತುವನ್ನು, ಪೆಗಟಿಗೆ ಹೇಗಾದರೂ ತಲುಪಲೆಂದು, ನಮಗೆ ಗೊತ್ತುಮಾಡದೆ – ತಾನು ಮರೆತುಬಿಟ್ಟು ಹೋಗಿರುವಂತೆ – ಬಿಟ್ಟು ಹೋಗುತ್ತಿದ್ದನು. ಹಣ್ಣುಗಳು, ಮಾಂಸ, ಲೋಲಾಕ್, ಕಾಲುಚೀಲಗಳು, ಗಿಳಿಪಂಜರ, ಕನ್ನಡಿ – ಈ ರೀತಿ ಯಾರೂ ಊಹಿಸಲಾರದಂಥ ವಸ್ತುಗಳನ್ನು – ತಂದೊಪ್ಪಿಸುತ್ತಿದ್ದನು.
ಕೊನೆಗೊಂದು ದಿನ ಬಾರ್ಕಿಸ್–ಪೆಗಟಿಯರ ಮದುವೆಯೂ ನಿಶ್ಚಯವಾಯಿತು. ಆದರೆ ಮದುವೆ ಆಡಂಬರವಿಲ್ಲದೆ ಜರುಗಬೇಕೆಂದು ಮಿ. ಪೆಗಟಿ ನಿಶ್ಚೈಸಿದ್ದುದರಿಂದ ಎಮಿಲಿ, ಪೆಗಟಿ, ಬಾರ್ಕಿಸ್ ಮತ್ತೂ ನಾನು ಮಾತ್ರ ಮದುವೆಗೆ ಹೋಗಬೇಕೆಂದು ಏರ್ಪಾಡಾಯಿತು. ಒಂದು

ಚಂದದ ಬಂಡಿಯನ್ನು ನಮ್ಮ ಮೆರವಣಿಗೆಗಾಗಿ ಬಾರ್ಕಿಸನು ತಂದನು. ಬಂಡಿಯನ್ನು ಅಲಂಕರಿಸಿದರು. ನಮ್ಮ ಪಯಣಕ್ಕೆ ಬೇಕಾದ ತಿಂಡಿ ತೀರ್ಥಗಳನ್ನು ಬಂಡಿಯಲ್ಲಿಟ್ಟರು.

ನಮ್ಮ ಪಯಣ ಸುಖವಾಗಿ ಸಾಗಲೆಂದು ಆಶೀರ್ವಾದಪೂರ್ವಕವಾಗಿ ಪಾದರಕ್ಷೆಗಳನ್ನು ಎಸೆಯಬೇಕಾದ ಕಾರ್ಯವನ್ನು ಮಿಸೆಸ್ ಗಮ್ಮಿಜ್ಜರು ಮಾಡಿದರು. ನಮ್ಮ ಬಂಡಿ ಇಗರ್ಜಿಯ ಬಳಿ ಬಂದಾಗ ನನ್ನನ್ನೂ ಎಮಿಲಿಯನ್ನೂ ಬಂಡಿಯಲ್ಲೇ ಬಿಟ್ಟು ಪೆಗಟಿಯೂ ಬಾರ್ಕಿಸನು ಇಗರ್ಜಿಗೆ ಹೋದರು. ಇಗರ್ಜಿಯ ಕಾರ್ಯಗಳಾದನಂತರ ಪೆಗಟಿ ಮತ್ತು ಬಾರ್ಕಿಸರು ನಮ್ಮ ಜತೆ ಸೇರಿದರು. ಅನಂತರ ನಾವು ಒಂದು ಹೋಟೆಲಿಗೆ ಹೋಗಿ ಊಟ ತಿಂಡಿ ಮುಗಿಸಿಕೊಂಡು ಯಾರ್ಮತ್ತಿನ ಕಡೆಗೆ ಮರುಪಯಣವನ್ನು ಪ್ರಾರಂಭಿಸಿದೆವು. ದಾರಿಯಲ್ಲಿ ಬಾರ್ಕಿಸನು, ಮುಗುಳ್ನಗೆಯಿಂದ ನನ್ನನ್ನು ನೋಡುತ್ತಾ –

"ಮಿ. ಕಾಪರ್ಫೀಲ್ಡ್, ಇವಳ ಹೆಸರೇನು, ಹೇಳಿ" ಎಂದು ಪೆಗಟಿಯನ್ನು ಮುಟ್ಟಿ ತೋರಿಸುತ್ತಾ ಕೇಳಿದನು.

"ಕ್ಲೇರಾ ಪೆಗಟಿ" ಅಂದೆನು ನಾನು.

"ಪೂರ್ತಿ ಸರಿಯಲ್ಲ – ಕ್ಲೇರಾ ಬಾರ್ಕಿಸ್ ಪೆಗಟಿ – ಸಿ.ಪಿ. ಬಾರ್ಕಿಸ್ ಎಂದಾಗಬೇಕು" ಎಂದು ಬಾರ್ಕಿಸನು ಅಂದನು. ಅನಂತರ ಇಗರ್ಜಿಯಲ್ಲಿ ಜರುಗಿಸಿದ ಕಾರ್ಯಗಳನ್ನೆಲ್ಲಾ ಅವನಿಂದ ಸಾಧ್ಯವಾದಷ್ಟು ವಿವರಿಸಿ ತಿಳಿಸಿದನು. ನಮ್ಮ ಬಂಡಿ ಬೇಕೆಂದೇ ಸಾವಧಾನದಿಂದ ಹೋಗುತ್ತಿತ್ತು. ಇಂಥ ಒಂದು ವಿಧದ ವಿರಾಮದಲ್ಲಿ, ಬಾರ್ಕಿಸನೂ ಪೆಗಟಿಯೂ ತಂತಮ್ಮೊಳಗೆ ಬೇಕಾದಷ್ಟೆಲ್ಲ ಮಾತಾಡಿಕೊಂಡರು.

ಎಮಿಲಿ ನಾನು ಸಹ ನಮ್ಮ ನಮ್ಮೊಳಗೆ ಬೇಕು ಬೇಕಾದಂತೆಲ್ಲ ಮಾತಾಡಿಕೊಳ್ಳುತ್ತಿದ್ದೆವು. ನಾವು ಮಾತಾಡಿ ಮುದ್ದಾಡಿಕೊಂಡಿದ್ದಕ್ಕೆ ಮಿತಿಯಿಲ್ಲ. ನಾವು ಒಂದು ನೂತನ ಪ್ರಪಂಚವನ್ನೇ ಸೃಷ್ಟಿಸಿಕೊಂಡು ಅದರಲ್ಲಿ ಸಂತೋಷದಿಂದ ವಿಹರಿಸುತ್ತಿದ್ದೆವು. ನಮ್ಮ ಸುಖಕ್ಕೆ ಬಾಹ್ಯದ ಪ್ರಕೃತಿ ಸೌಂದರ್ಯ ಸಹಾಯ ಕೊಟ್ಟದ್ದಕ್ಕಿಂತಲೂ ಹೆಚ್ಚಾಗಿ ನಮ್ಮ ಅಂತರಂಗದಲ್ಲಿನ ಬಯಕೆ, ಆಲೋಚನೆ, ಕಲ್ಪನೆಗಳೇ ಸಹಾಯ ಒದಗಿಸುತ್ತಿದ್ದುವು. ನನ್ನ ಆಲೋಚನೆ ಎಮಿಲಿಯೊಡನೆ ನಾನು ಮದುವೆಯಾಗುವವರೆಗೂ ತಲುಪಿತ್ತು.

ನಾನು ಎಮಿಲಿಯನ್ನು ಮದುವೆಯಾಗಿ, ನಾವೀರ್ವರೂ ವಿಶಾಲ ಮೈದಾನಗಳ ಮಧ್ಯದಲ್ಲಿ, ಜ್ವಲಿಸುವ ಬೆಳಕು ಸದಾ ಪ್ರಕಾಶಿಸುತ್ತಿರುವಾಗ, ಎತ್ತರವಾಗಿ ಬೆಳೆದ ದೊಡ್ಡ ದೊಡ್ಡ ಮರಗಳ ತಂಪಿನ ನೆರಳಿನಲ್ಲಿ, ಎಂದೂ ದೊಡ್ಡವರಾಗದೆ, ನಮ್ಮ ಅಂದಿನ ಸಂತೋಷ ಶಿಖರ ಕುಗ್ಗದೆ, ಹಾರಿ, ನಲಿದಾಡಿ, ಮುದ್ದಿಟ್ಟುಕೊಂಡು ಜೀವಿಸಬೇಕೆಂಬುದಾಗಿ ಯೋಚಿಸಿ ಸಂತೋಷಿಸುತ್ತಿದ್ದೆನು. ಒಮ್ಮೊಮ್ಮೆ ಬಂಡಿಯ ಅಲುಗಾಟದಿಂದ ನಾವು ಮನೋರಾಜ್ಯದಿಂದ ಕೆಳಗಿಳಿದು ಸುತ್ತಲಿನ ಅನುಭವವನ್ನು ಗ್ರಹಿಸುತ್ತಿದ್ದರೂ, ಎಮಿಲಿಯ ದಿವ್ಯ ಮುಖಾವಲೋಕನದಿಂದ ಪುನಃ ಕಲ್ಪನಾ ರಾಜ್ಯಗಳಿಗೆ ಹೋಗಿ ಮೊದಲಿನಂತೆಯೇ ಸುಖಿಸುತ್ತಿದ್ದೆನು. ಬಿಸಿಲೂ ನೆಳಲೂ ಇರುವಲ್ಲಿ, ಹಸಿರು ಹುಲ್ಲುಬೆಳೆದಿರುವ ಮೃದು ಮೈದಾನದಲ್ಲಿ, ಹಗಲೆಲ್ಲಾ ನಾವೀರ್ವರೂ ಜತೆಯಾಗಿ ನಲಿದಾಡಬೇಕು. ನಲಿದು ಬಳಲಿದಾಗ ಹೂಗಳ ಮಧ್ಯದಲ್ಲಿ ಆಕಾಶವನ್ನು ನೋಡುತ್ತಾ ಮಲಗಿ ವಿಶ್ರಮಿಸಬೇಕು. ರಾತ್ರಿಯಲ್ಲಿ ಮೆತ್ತನೆಯ ಹುಲ್ಲಿನ ಮೇಲೆ ಮಲಗಿ, ಮರದ ಪಾತಿಗಳ ತಲೆದಿಂಬನ್ನಿಟ್ಟುಕೊಂಡು ನಿದ್ರಿಸಿ, ನಿದ್ರೆಯಲ್ಲೇ ಅರಿಯದೆ ಸಾಯಬೇಕು. ಸತ್ತನಂತರ ಪಕ್ಷಿಗಳು ನಮ್ಮ ಸಮಾಧಿಯನ್ನು ಕಟ್ಟಿ ಸತತವೂ ಅದರ ಮೇಲೆ ಹಾರಾಡಬೇಕು – ಎಂದು ಮೊದಲಾಗಿ ಎಂದೂ ದುಃಖವನ್ನು ಕಾಣದೆ, ಆನಂದಮಯರಾಗಿ ಬದುಕುವ ಚಿತ್ರವನ್ನು ಕಲ್ಪಿಸಿಕೊಳ್ಳುತ್ತಿದ್ದೆನು. ಎಮಿಲಿಯ ಮನಸ್ಸಿನಲ್ಲೂ ಈ ತೆರನಾದ ಚಿತ್ರಗಳೂ ಹಂಬಲಗಳೂ ಏಳುತ್ತಿದ್ದುವೆಂದು ನಾನು ಮಾತಾಡಿ ತಿಳಿದೆ. ನಾವೀರ್ವರೂ ನಿಷ್ಕಪಟ ಮತ್ತು ನಿಷ್ಕಳಂಕ ಪ್ರೇಮದಿಂದ ಎರಡು ನಕ್ಷತ್ರಗಳಂತೆ ಬೆಳಗಿ, ಅವುಗಳಂತೆಯೇ ವಿಸ್ಮಯಕಾರಕರೂ ಆಗಿ, ಮದುವಣಿಗರ ಮೆರವಣಿಗೆಯಲ್ಲಿ ಶುಭೋದಯದ ಗ್ರಹಗಳಾಗಿ ಬೆಳಗಿದೆವು.

ಯಾರ್ಮತ್ತಿಗೆ ತಲುಪಿದನಂತರ ಈ ನೂತನ ದಂಪತಿಗಳು ಬಾರ್ಕಿಸನ ಮನೆಗೆ ಹೋದರು. ನಾನೂ ಎಮಿಲಿಯೂ ಮಿ. ಪೆಗಟಿಯ ಮನೆಗೆ ಹೋದೆವು. ಆ ದಿನ ರಾತ್ರಿ ಮಿ. ಪೆಗಟಿ ಮತ್ತು ಹೇಮರು ಬಲೆಯನ್ನು ತೆಗೆದುಕೊಂಡು ಸಮುದ್ರದ ಕಡೆಗೆ ಹೋದರು. ಎಮಿಲಿ ಮತ್ತು ಮಿಸೆಸ್ ಗಮ್ಮಿಜ್ಜರ ರಕ್ಷಣೆಯ ಭಾರವೆಲ್ಲ ನನ್ನದಾಯಿತು. ಇಂಥ ಜವಾಬ್ದಾರಿ ದೊರೆತದ್ದಕ್ಕಾಗಿ ನಾನು ಬಹಳ ಸಂತೋಷಪಟ್ಟೆನು. ಮತ್ತು ಇದರ ಸಂಪೂರ್ಣ ಫಲವನ್ನು ಪಡೆಯುವುದಕ್ಕಾಗಿ ಏನಾದರೊಂದು ವಿಶೇಷ ಘಟನೆ ಸಂಭವಿಸಿದರೂ ಆಗಬಹುದೆಂದು ನನಗೆ ತೋರುತ್ತಿತ್ತು. ಒಬ್ಬ ಭಯಂಕರ ರಾಕ್ಷಸನೋ ಒಂದು ಸಿಂಹವೋ ಬಂದು ನಮ್ಮ ಎಮಿಲಿಗೆ ಉಪದ್ರವ ಕೊಡಬೇಕಿತ್ತು, ಆಗ್ಗೆ ನನ್ನ ವೀರ ಸಾಹಸ, ತ್ಯಾಗ, ಪ್ರೇಮದ ಪರಿಪೂರ್ಣ ಪರಿಚಯವನ್ನು ಎಮಿಲಿಗೆ ಮಾಡಿಕೊಡುತ್ತಿದ್ದೆನೆಂದು ಮನಸ್ಸಿನಲ್ಲಿ ಹಂಬಲಗಳು ಏಳುತ್ತಿದ್ದುವು. ಆದರೆ ಸಿಂಹವಾಗಲೀ, ಹೆಬ್ಬಾವಾಗಲೀ ಬರದೇ, ನಾನು ನಿದ್ರಿಸಬೇಕಾಯಿತು. ಆದರೆ ನಿದ್ರೆಯಲ್ಲೊಬ್ಬ ಭಯಂಕರ ರಾಕ್ಷಸನನ್ನು ಸಂಹರಿಸಿ ಎಮಿಲಿಯನ್ನು ರಕ್ಷಿಸಿದ ಸ್ವಪ್ನವನ್ನಂತೂ ಕಂಡೆನು. ಈ ಪ್ರಸಂಗದಲ್ಲಿ ನಾನು ಕೂಗಿ, ಕನವರಿಸಿ ನಿದ್ರಿಸಿದ್ದೆನಾಗಿ ತಿಳಿದೆನು.

ಮರುದಿನ ನನ್ನನ್ನು ಬಾರ್ಕಿಸ್ ತನ್ನ ಬಂಡಿಯಲ್ಲಿ ಕರೆದುಕೊಂಡು ಹೋಗಿ ಬ್ಲಂಡರ್ಸ್ಟನ್ನಿನಲ್ಲಿ ಬಿಟ್ಟನು. ನನ್ನನ್ನು ಬೀಳ್ಕೊಡುವಾಗ ಪೆಗಟಿ ಅತ್ತಳು. ಪೆಗಟಿಯೂ ನನ್ನೊಡನೆ ಬಂಡಿಯಲ್ಲೇ ನಮ್ಮ ಮನೆಯವರೆಗೂ ಬಂದಿದ್ದಳು. ನಾನೂ ಮನೆಯೂ ಕಾಣುತ್ತಿದ್ದಷ್ಟು ಕಾಲ ಪೆಗಟಿ ಬಂಡಿಯಿಂದಲೇ ಹಿಂದೆ ಮುಖಮಾಡಿ ನೋಡುತ್ತಲೇ ಇದ್ದಳು.

ಬ್ಲಂಡರ್ಸ್ಟನ್ನಿನಲ್ಲಿ ನಾನು ಅನಂತರ ಕಳೆದ ದಿನಗಳ ದುಃಖವನ್ನು ವಿವರಿಸುವುದು ಅಸಾಧ್ಯ. ಅಲಕ್ಷ್ಯ, ಅನಾದರ, ಬಹಿಷ್ಕಾರ ಇವೇ ಮರ್ಡ್ಸ್ಟನ್ ದ್ವಯರಿಂದ ನನಗೆ ದೊರಕುತ್ತಿದ್ದ ಮಾನಸಿಕ ಆಹಾರ. ಜನರ ಸಹವಾಸವಿಲ್ಲ – ಕೆಲಸವಿಲ್ಲ – ಮನಸ್ಸಿಗೆ ವಿಶ್ರಾಂತಿಯು ಇಲ್ಲ.

ನಾನು ಹೇಗಾದರೂ ಹಾಳಾಗಿ ಹೋಗಬೇಕೆಂಬ ದುರುದ್ದೇಶದಿಂದಲೇ ನನ್ನನ್ನು ಹಾಗೆ ಬಿಟ್ಟಿದ್ದರೆಂದು ನಾನು ದೊಡ್ಡವನಾದ ಮೇಲೆ ಗ್ರಹಿಸಿದ್ದೇನೆ.

ಒಂದು ದಿನ ಮಿ. ಮರ್ಡ್ಸ್ಟನರ ಆಫೀಸಿಗೆ ಅವರ ಪೂರ್ವ ಸ್ನೇಹಿತ ಮಿ. ಕ್ವಿನಿಯನ್ನರು ಬಂದಿದ್ದರು. ನನ್ನನ್ನು ಹಿಂದೆ ಅವರು ಲೌಸ್ಟಾಫಿನಲ್ಲಿ ನೋಡಿದ್ದ ಜ್ಞಾಪಕದಿಂದ –
"ಮಿಸ್ಟರ್ ಬ್ರೂಕ್ಸ್, ಹೇಗಿದ್ದೀರಿ" ಎಂದು ಕೇಳಿದರು.
"ನಾನು ಡೇವಿಡ್ ಕಾಪರ್ಫೀಲ್ಡ್, ಸರ್" ಎಂದು ನಾನಂದೆನು.
"ಹುಡುಗ ಹುಶಾರಿದ್ದಾನೆ, ಅವನನ್ನು ಶಾಲೆಗೆ ಕಳುಹಿಸಬೇಕು" ಎಂದು ಮಿ. ಕ್ವಿನಿಯನ್ನರು ಸಲಿಗೆಯಿಂದ ಹೇಳಿದರು.
ಅನಂತರ ಮಿ. ಮರ್ಡ್ಸ್ಟನ್ ಮತ್ತು ಮಿ. ಕ್ವಿನಿಯನ್ನರು ತಮ್ಮೊಳಗೇ ಮಾತಾಡಿಕೊಂಡು, ಮಿ. ಮರ್ಡ್ಸ್ಟನ್ನರ ಪಾಲು ಬಂಡವಾಳವಿರುವ "ಮರ್ಡ್ಸ್ಟನ್ ಮತ್ತು ಗ್ರೀನ್ಬಿ" ಎಂಬ ಕಂಪೆನಿಯಲ್ಲಿ ನನಗೆ ಕೆಲಸ ಕೊಡಿಸುವುದಾಗಿ ಏರ್ಪಾಡಾಯಿತು. ಮಿ. ಕ್ವಿನಿಯನ್ನರು ಆ ಕಂಪೆನಿಯಲ್ಲಿ ಮೇನೇಜರರಾಗಿದ್ದುದರಿಂದ ಈ ದಾರಿ ಬಹಳ ಅನುಕೂಲವೆಂದೂ, ನನ್ನಂಥ ಮೈಗಳ್ಳ ಮತ್ತು ಹಟಮಾರಿತನವಿರುವವರನ್ನು ಸರಿದಾರಿಗೆ ತರಲು ಅಲ್ಲಿನ ಕೆಲಸ ಬಹು ಯೋಗ್ಯವೆಂದೂ ನನಗೆ ಕೇಳುವಂತೆಯೇ ಮಿ. ಮರ್ಡ್ಸ್ಟನ್ನರು ತಂಗಿಯ ಹತ್ತಿರ ಹೇಳುತ್ತಿದ್ದರು.
"ನಿನ್ನ ಊಟ, ಚಾ ಮತ್ತು ಇತರ ಖರ್ಚುಗಳ ಬಗ್ಗೆ ನಿನಗೆ ತಕ್ಕಷ್ಟು ಸಂಬಳ ದೊರಕುವ ಏರ್ಪಾಡು ಮಾಡಲಾಗಿದೆ. ಕೆಲಸಗಳನ್ನು ಸರಿಯಾಗಿ ಮಾಡಿ ಸಂಬಳ ಪಡೆದುಕೊಳ್ಳುವ ಜವಾಬ್ದಾರಿಯು ನಿನ್ನದು, ತಿಳಿಯಿತೆ?" ಅಂದರು ಮಿ. ಮರ್ಡ್ಸ್ಟನರು. ನನ್ನ ಖರ್ಚು ವೆಚ್ಚಗಳನ್ನು ಆಗಿಂದಾಗ್ಗೆ ತನಿಕೆ ಮಾಡುವ ಕೆಲಸ ತನ್ನದೆಂದು ಮಿಸ್ ಮರ್ಡ್ಸ್ಟನ್ನಳು ಅಂದಳು.
ಈ ರೀತಿಯ ವ್ಯವಸ್ಥೆಯನ್ನು ಮಾಡಿಸಿಕೊಂಡು, ಒರಟು ಬಟ್ಟೆಗಳ ಇಜಾರು ಕೋಟನ್ನೂ, ಹರಿದಿದ್ದ ಹೇಟನ್ನೂ ಧರಿಸಿ, ನನ್ನದಾಗಿ ಉಳಿದಿದ್ದ ಸಾಮಾನುಗಳನ್ನು ಒಂದು ಟ್ರಂಕಿನಲ್ಲಿ ತುಂಬಿಕೊಂಡು ಮರುದಿನ ನಾನು ಮಿ. ಕ್ವಿನಿಯನ್ನರ ಜತೆಯಲ್ಲಿ ಹೊರಟೆನು.
ತನ್ನ ಬಾಲ್ಯದ ಸಂಬಂಧಗಳನ್ನೆಲ್ಲ ಕಡಿದು, ಪರಗೃಹಸ್ಥರ ಜತೆಯಲ್ಲಿ ತನ್ನ ಜೀವನದ ಯುದ್ಧದಲ್ಲಿ ಯೋಧನಾಗಿ ಧುಮುಕಿ ಬಂಡಿಯನ್ನೇರಿ ಹೋಗುತ್ತಿದ್ದ – ಸದ್ಯ ಕೆಲವು ದಿನಗಳ ಹಿಂದೆ ತಾಯಿಯನ್ನು ಕಳೆದುಕೊಂಡಿದ್ದ – ಅನಾಥ ಬಾಲಕನನ್ನು ಓದುಗರು ತಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಬಹುದು. ಬಂಡಿಯ ಚಕ್ರಗಳು ಉರುಳಿದಂತೆ ನಮ್ಮ ಮನೆ, ಇಗರ್ಜಿ ಮೊದಲಾದುವೆಲ್ಲ ಕ್ರಮೇಣವಾಗಿ ಕಾಣದೇ ಆದುವು. ಇಗರ್ಜಿ ಕಂಪೌಂಡಿನಲ್ಲಿ ಶೋಭಿಸುತಿದ್ದ ವೃಕ್ಷಸಮೂಹ, ವೃಕ್ಷಗಳಡಿಯ ತಂಪಿನಲ್ಲಿ ತೋರುತ್ತಿದ್ದ ಗೋರಿಗಳೂ ಸಹ, ಬಂಡಿ ಸಾಗಿದಂತೆ ಅಡ್ಡಬಂದ ಕಟ್ಟಡಗಳಿಂದ ಉಜ್ಜಿ ತೆಗೆದಂತೆ, ಮಾಯವಾದುವು. ಕೊನೆಗೆ ನನ್ನ ಬಾಲ್ಯದ ಆಟದ ಮೈದಾನದಿಂದ ಆಕಾಶಕ್ಕೆ ಎದ್ದು ಶೋಭಿಸುತ್ತಿದ್ದ ಇಗರ್ಜಿ ಗೋಪುರವೂ ಮಾಯವಾಯಿತು. ನಾನು ಆಕಾಶದ ಶೂನ್ಯವನ್ನೂ, ನನ್ನ ಭವಿಷ್ಯದ ಶೂನ್ಯವನ್ನೂ ಮಾತ್ರ ನೋಡಿ ಕುಳಿತಿದ್ದೆ.

ಅಧ್ಯಾಯ ಹನ್ನೊಂದು

ನನ್ನ ಜೀವನ ವೃತ್ತಿಯನ್ನು ನಾನೇ ಕಲ್ಪಿಸಿಕೊಂಡದ್ದು ಮತ್ತು ಆ ವೃತ್ತಿಯಲ್ಲಿ ನನಗುಂಟಾದ ಜಿಗುಪ್ಸೆ

ಎಂಥ ಹೊಸ ಪರಿಸ್ಥಿತಿ ನನಗೆ ಬಂದೊದಗಿದರೂ ಆಶ್ಚರ್ಯಪಡದಷ್ಟು ಪ್ರಪಂಚದ ಅನುಭವ ನನಗೆ ಈಗಾಗಲೇ ಬಂದಿದ್ದರೂ ಈಗ ನನಗೆ ಒದಗಿದ್ದ ಹೊಸ ಜೀವನ ವೃತ್ತಿ ಮಾತ್ರ ಒಂದು ಆಶ್ಚರ್ಯದ ಸಂಗತಿಯಾಗಿಯೇ ತೋರಿತು. ವಿಷಯಗಳನ್ನು ವಿಮರ್ಶೆಯಿಂದ ತಿಳಿಯುವಷ್ಟು ಬುದ್ಧಿಯಿದ್ದು, ದೇಹ ಮನಸ್ಸುಗಳಲ್ಲಿ ಚಟುವಟಿಕೆಯಿದ್ದು, ಇನ್ನೂ ಕೇವಲ ಹತ್ತು ವರ್ಷಗಳ ಪ್ರಾಯ ಪೂರೈಸದ ನಾನು, ಕಾಯಕಷ್ಟದ ದುಡಿಮೆಯಲ್ಲಿ ನಿರತನಾಗಬೇಕಾದ ಒಬ್ಬ ಕಾರ್ಮಿಕನಾಗಿ, ಲಂಡನ್ ನಗರದ ಮರ್‌ಡ್ಸ್ಟನ್ ಮತ್ತು ಗ್ರೀನ್ಬಿ ಕಂಪೆನಿಯಲ್ಲಿ ಸೇರಿಸಲ್ಪಟ್ಟ ಸಂಗತಿ ನನಗೆ ಬಹು ಆಶ್ಚರ್ಯದ್ದೇ ಆಗಿತ್ತು.

ಮರ್ಡ್ಸ್ಟನ್ ಮತ್ತು ಗ್ರೀನ್ಬಿ ಕಟ್ಟಡಗಳಿಗೆ ಸಾಧಾರಣ ಒಂದು ನೂರು ವರ್ಷಗಳಾದರೂ ಆಗಿರಬಹುದೆಂದು ನಾನು ಅಂದಾಜು ಕಟ್ಟಿದೆ. ಈ ಕಟ್ಟಡದ ಎಲ್ಲಾ ಭಾಗಗಳೂ ಜರ್ಝರಿತವಾಗಿದ್ದುವು. ಈ ಕಟ್ಟಡದ ಒಂದು ಭಾಗ ಸಮುದ್ರದ ಕಡೆಗೆ ಮುಂದುವರಿದಿದ್ದು, ಆ ಭಾಗದ ತುದಿಯಲ್ಲಿ ಒಂದು ಧಕ್ಕೆಯೂ ಇತ್ತು. ಸಮುದ್ರದ ಭರತ ಸಮಯಗಳಲ್ಲಿ ಈ ಧಕ್ಕೆಯ ಬದಿಗೆ ದೋಣಿಗಳು ಬಂದು ಕಾರ್ಖಾನೆಯ ಮಾಲುಗಳನ್ನು ತುಂಬಿಕೊಂಡು ಹೋಗುತ್ತಿದ್ದುವು. ಸಮುದ್ರ ಇಳಿದಾಗ ಧಕ್ಕೆಯ ಅಡಿಯಲ್ಲೂ, ಸುತ್ತಲೂ ಕೆಸರು, ಜಿಗುಟು ಮಣ್ಣು, ಮಣ್ಣಿನಲ್ಲಿ ಹೂತು ಹೋಗಿದ್ದ ಹರಕು ಪೆಟ್ಟಿಗೆಗಳು, ಕಸಕಡ್ಡಿ ಮೊದಲಾದುವುಗಳು ಇರುತ್ತಿದ್ದುವು.

ಶತಮಾನಗಳಿಂದಲೇ ಕಸ ಗುಡಿಸದೆ ಉಳಿದಿದ್ದ, ಹಾಳು ಬಿದ್ದಿದ್ದ, ಕತ್ತಲೆಯ ಕೋಣೆಗಳೂ, ಕೆಲವೆಡೆ ಮುರಿದು ಬಿದ್ದಿದ್ದು ಕುಂಬಾಗಿ ಹೋಗಿದ್ದ ಮರದ ಕುಂಟೆಗಳೂ, ಹಗಲೇ ನಮಗೆ ಕಾಣುವಂತೆ ಮೂಲೆಯಿಂದ ಮೂಲೆಗೆ ಓಡುತ್ತಿದ್ದ ಇಲಿ, ಹೆಗ್ಗಣಗಳೂ ಈ ಕಟ್ಟಡದಲ್ಲಿದ್ದುವು. ನಮ್ಮ ಕಂಪೆನಿ ಈಸ್ಟ್ ಇಂಡೀಸ್, ಮತ್ತು ವೆಸ್ಟ್ ಇಂಡೀಸ್ ಮೊದಲಾದ ದೂರದ ದೇಶಗಳಿಗೆ ನಮ್ಮಲ್ಲಿ ತಯಾರಾದ ವೈನನ್ನು ಕಳುಹಿಸುತ್ತಿತ್ತು. ಈ ಕಂಪೆನಿಯಲ್ಲಿ ಬಾಟ್ಲಿ ತೊಳೆಯುವ ವಿಭಾಗಕ್ಕೆ ಮಿ. ಕ್ವಿನಿಯನ್ನರು ನನ್ನನ್ನು ಕರೆದುಕೊಂಡು ಹೋಗಿ, ಕೆಲಸಗಳನ್ನು ವಿವರಿಸಿ ಹೇಳಿ, ಕೆಲಸ ಮಾಡಲು ತೊಡಗಿಸಿದರು.

ನನ್ನ ವಿಭಾಗದಲ್ಲಿ ನನ್ನ ಸಮೇತವಾಗಿ ನಾಲ್ಕು ಜನ ಕೆಲಸದವರಿದ್ದೆವು. ನಮ್ಮ ಗುಂಪಿನ ಮುಖಂಡನ ಹೆಸರು ಮಿಕೆ ವಾಕರ್ ಎಂದು. ನೀಲವರ್ಣದ ಮಖಮಲ್ ಕುಲಾವಿಯನ್ನು ಧರಿಸಿ, ಲಂಡನ್ ನಗರದ ನಗರಸಭಾಧ್ಯಕ್ಷರ ಮೆರವಣಿಗೆಯಲ್ಲಿ ಪತಾಕೆಯನ್ನು ಹಿಡಿದು ನಡೆಯುವ ಮುಖ್ಯ ಮನುಷ್ಯನೇ ತನ್ನ ತಂದೆಯೆಂದು ಮಿಕೆ ವಾಕರನೇ ನನಗೆ ತಿಳಿಸಿದ್ದನು. ನಮ್ಮ ಜತೆಯ ಇನ್ನೊಬ್ಬ ಕೆಲಸಗಾರನ ಹೆಸರು 'ಕೊಳೆತ ಬಟಾಟೆ' ಎಂಬುದಾಗಿ ಮಿಕೆವಾಕರನು ನನಗೆ ತಿಳಿಸಿದನು. ಹೀಗೂ ಒಂದು ಹೆಸರಿರಬಹುದೇ ಎಂಬ ಸಂಶಯದಿಂದ ವಿಚಾರಿಸಿದಾಗ ಅವನ ಮುಖದ ಲಕ್ಷಣಕ್ಕಾಗಿ ಅವನನ್ನು ಹಾಗೆ ಕರೆಯದೆ ನಿರ್ವಾಹವಿಲ್ಲವೆಂದು ಮಿಕೆ ವಾಕರನು ಒಪ್ಪಿಕೊಂಡನು. ಇವನ ಕುಚೇಷ್ಟೆಯನ್ನು ಕಂಡು ನನಗೆ ಸ್ವಲ್ಪ ಹೆದರಿಕೆಯೇ ಆಯಿತು. ಅವನು ನನ್ನನ್ನೂ ಸಹ, ನಾಲ್ಕಾರು ದಿನಗಳಲ್ಲೇ 'ಕುಲೀನ ಶಿಶು' ಎಂದು ಕುಚೇಷ್ಟೆಯಿಂದ ಕರೆಯಲು ಪ್ರಾರಂಭಿಸಿದನು.

ಕುಪ್ಪಿಗಳನ್ನು ಬೆಳಕಿಗೆ ಹಿಡಿದು ನೋಡಿ, ಗೆರೆ, ಒಡಕು, ಮೊದಲಾದ ಕೊರತೆಗಳು ಇಲ್ಲದಿರುವುವುಗಳನ್ನು ಆರಿಸಿ ತೆಗೆದು, ತೊಳೆದು, ವೈನ್ ತುಂಬಿಸಿ, ಕಾರ್ಕ್ ಹಾಕಿ, ಅರಗಿನ ಮೊಹರು ಹಾಕಿ, ದೋಣಿಗೆ ಸಾಗಿಸಿಕೊಡುವುದೇ ನಮ್ಮ ಕೆಲಸವಾಗಿತ್ತು. ನಮ್ಮ ಕೆಲಸಗಳನ್ನು ಹೇಗೆ ಮಾಡುತ್ತಿದ್ದೇವೆಂದು ಮಿ. ಕ್ವಿನಿಯನ್ನರು ನಮ್ಮನ್ನು ಕಾಣುವಷ್ಟು ದೂರದಲ್ಲಿ ಒಂದು ಮೇಜಿನ ಎದುರು ಕುಳಿತು ನೋಡುತ್ತಾ, ತಮ್ಮ ಬರಹದ ಕೆಲಸವನ್ನು ಮಾಡುತ್ತಿದ್ದರು.

ಅವಿದ್ಯಾವಂತ, ಒರಟು, ದುಷ್ಟ ಬಾಲಕರೊಡನೆ ಕೂಡಿಕೊಂಡು ನಾನು ಕೆಲಸ ಮಾಡುತ್ತಿದ್ದಾಗ ನನಗಾಗುತ್ತಿದ್ದ ಹೃದ್ಗತ ವೇದನೆಯನ್ನು ನಾನು ಪೂರ್ಣ ವರ್ಣಿಸಲಾರೆನು. ನಾನು ಶಾಲೆಗೆ ಸೇರುವ ಮೊದಲಿನ ನನ್ನ ಬಾಲ್ಯದ ದಿನಗಳನ್ನೂ ಶಾಲೆಯಲ್ಲೇ ಆದರೂ ಟ್ರೇಡಲ್ಸ್, ಸ್ಟಿಯರ್‌ಫೋರ್ತ್ ಮೊದಲಾದವರ ಸಹವಾಸದಲ್ಲಿ ಶಾಲೆಗೆ ಹೋದ ದಿನಗಳನ್ನು ನೆನೆನೆದು ನನ್ನ ಅವಸ್ಥೆ ಇಷ್ಟೊಂದು ಹೀನತರದ್ದಾಯಿತಲ್ಲಾ ಎಂದು ದುಃಖಿಸುತ್ತಿದ್ದೆನು. ಈ ಅಂಧಕಾರಮಯ ಕೂಪದಲ್ಲಿ ದಿನಗಳು ದಾಟಿದಂತೆ ಮುಂದೆ ನಾನು ವಿದ್ಯೆ ಕಲಿತು, ಉತ್ತಮ ವೃತ್ತಿಗಳನ್ನು ಕೈಕೊಂಡು, ಸಮಾಜದ ಒಬ್ಬ ಗಣನೀಯ ವ್ಯಕ್ತಿಯಾಗಬೇಕು – ಆಗುವೆನು – ಎಂದು ಕಟ್ಟಿಕೊಂಡಿರುತ್ತಿದ್ದ ಯೋಚನಾ ಗೋಪುರಗಳೆಲ್ಲ ನುಚ್ಚು ನುರಿಯಾಗುತ್ತಾ ಮಾಯವಾದುವು. ನಾನೊಬ್ಬನೇ ಇದ್ದು ಕುಪ್ಪಿಗಳನ್ನು ತೊಳೆಯುತ್ತಿದ್ದಾಗ ತೊಳೆಯುವ ನೀರಿಗೆ ನನ್ನ ದುಃಖಾಶ್ರುಗಳನ್ನು ಬೆರೆಸಿಯೇ ತೊಳೆಯುತ್ತಿದ್ದೆನು. ಬಾಟ್ಲಿಗಳ ಒಡಕನ್ನು ಪರೀಕ್ಷಿಸುವಾಗ ನನ್ನ ಹೃದಯದ ಬಿರುಕು ಹಿರಿದಾಗುತ್ತಿದ್ದುದನ್ನು ಕಾಣುತ್ತಿದ್ದೆನು.

ನನ್ನ ಕೆಲಸದ ದಿನಗಳಲ್ಲಿ ನಾನು ವಾಸ ಮಾಡತಕ್ಕ ಮನೆಯನ್ನು ತೋರಿಸಿ, ಮನೆಯ ಯಜಮಾನನನ್ನು ಮಿ.ಕ್ವಿನಿಯನ್ನರು ಪರಿಚಯ ಮಾಡಿಕೊಟ್ಟರು. ನಾನು ಪ್ರಾಯದಲ್ಲಿ ಚಿಕ್ಕವನೆಂಬುದು ನಿಜವಾಗಿದ್ದಿದ್ದರೂ – ಅಥವಾ ದೇಹ ಸ್ಥಿತಿಯಲ್ಲೂ ಪುಟ್ಟವನಾಗಿಯೇ

ಇರುತ್ತಿದ್ದರೂ – ವೃತ್ತಿಯ ದೃಷ್ಟಿಯಲ್ಲಿ ಒಬ್ಬ ಕಾರ್ಮಿಕನೇ ಎಂದು ಪರಿಗಣಿಸಲ್ಪಡುತ್ತಿದ್ದ ಕಾರಣವಾಗಿ, ಈ ವಿಧದ ಎಲ್ಲಾ ಕ್ರಮಗಳನ್ನು ಅನುಭವಗಳನ್ನೂ ನಾನು ಪಡೆಯಬೇಕಾಗಿದ್ದಿತು.

ನಾನು ವಾಸಮಾಡುತ್ತಿದ್ದ ಮನೆಯ ಯಜಮಾನನ ಪರಿಚಯವು ಬೆಳೆದಂತೆಲ್ಲ ಅವರಲ್ಲಿನ ಅನೇಕ ವಿಷಯಗಳನ್ನು ಅಶ್ಚರ್ಯವೆಂದೇ ತಿಳಿಯತೊಡಗಿದೆನು. ಯಜಮಾನರಿಗೆ ಸಾಧಾರಣ ಐವತ್ತು ವರ್ಷ ಪ್ರಾಯ ದಾಟಿರಬಹುದು. ಅವರು ಸ್ವಲ್ಪ ಕುಳ್ಳರು, ಸ್ಥೂಲಕಾಯರು. ಅವರ ತಲೆಯಲ್ಲಿ ಸ್ವಲ್ಪವೂ ಕೂದಲಿರಲಿಲ್ಲ. ಒಂದು ದಪ್ಪದ ಕೋಳಿಮೊಟ್ಟೆಗೆ ಕಣ್ಣು ಮೂಗು ಬಾಯಿಗಳು ಬೆಳೆದಂತೆ ಅವರು ತೋರುತ್ತಿದ್ದರು. ಅವರ ಮುಖದ ವೈಶಾಲ್ಯವು ದೇಹದ ಇತರ ಎಲ್ಲಾ ಭಾಗಗಳಿಗಿಂತ ಅಸ್ವಾಭಾವಿಕವಾಗಿ ಬೆಳೆದಿತ್ತು. ಅವರಿಗೆ ನ್ಯಾಯವಾಗಿ ಇರಬೇಕಾಗಿದ್ದ ಅಳತೆಯ ಮುಖವನ್ನು ಮಾತ್ರ ಭೂತ ಕನ್ನಡಿಯಿಂದ ನೋಡುತ್ತಾ, ಅವರನ್ನು ನೋಡಿದ್ದರೆ ಆಗುವಷ್ಟರ ಅಗಲದ ಮುಖ ಅವರದು. ಅವರು ಬಿಗಿಯಾದ ಇಜಾರನ್ನು ತೊಟ್ಟು, ಸ್ವಲ್ಪ ಹರಿದಿದ್ದ, ಬಡತನದ ಬೂಟ್ಸನ್ನು ಧರಿಸುತ್ತಿದ್ದರು. ಆದರೆ ಅವರ ದುಸ್ತಿನ ಗೌರವ, ವೈಶಿಷ್ಟ್ಯವೆಲ್ಲ ಅವರ ಶರ್ಟಿನ ಕಾಲರಿನಲ್ಲಿ ಕಂಡುಬರುತ್ತಿತ್ತು. ಆ ಕಾಲರು ಇತರ ಯಾರಿಗೂ ಇರದಷ್ಟು ಚೆನ್ನಾಗಿಯೂ ಭೂಷಣಪ್ರಾಯವಾಗಿಯೂ ಇದೆಯೆಂದು ಅವರು ಸದಾ ತಿಳಿದಿರುತ್ತಿದ್ದಂತೆ ಅದರ ಪ್ರದರ್ಶನ ಮಾಡುತ್ತಿದ್ದರು. ನೆಯ್ಗೆಯ ಅಲಂಕಾರಗಳಿಂದ ಕೂಡಿದ ಗೊಂಡೆಯಿದ್ದ ಠೀವಿಯ ಒಂದು ದೊಣ್ಣೆಯನ್ನು ಅವರು ಸದಾ ಹಿಡಿದುಕೊಂಡೇ ಇರುತ್ತಿದ್ದರು. ಈ ದೊಣ್ಣೆಯೂ ಅವರದೇ ಒಂದು ವೈಶಿಷ್ಟ್ಯವೆನ್ನುವಂತಿತ್ತು. ಇಷ್ಟೂ ಅಲ್ಲದ ಅವರ ಜೇಬಿನಿಂದ ಈಗಲೇ ಜಾರಿ ಹೊರಬೀಳಲಿದೆಯೆಂದು ತೋರಿಬರುತ್ತಿದ್ದ ಒಂದು ಕನ್ನಡಕದ ಅಂಶವೂ ಕಾಣಿಸುತ್ತಿತ್ತು – ಆ ಕನ್ನಡಕವನ್ನು ಕಣ್ಣಿಗೆ ಇಟ್ಟು ನೋಡಿದ್ದಾದರೆ ಅದರಿಂದ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚಾಗುತ್ತಿತ್ತೆಂದೂ, ಆ ಕನ್ನಡಕವು ಅಲಂಕಾರಕ್ಕಾಗಿ ಉಪಯೋಗಿಸಲಾಗುತ್ತಿತ್ತೆಂದೂ ನಾನು ಕೆಲವು ಸಮಯದನಂತರ ತಿಳಿದೆನು. ಅವರ ಹೆಸರು ಮಿ. ವಿಲ್ಕಿನ್ಸ್ ಮೈಕಾಬರ್ ಎಂಬುದಾಗಿ ಮಿ. ಕ್ವಿನಿಯನ್ನರು ತಿಳಿಸಿದರು.

ಮಿ. ಕ್ವಿನಿಯನ್ನರು ಮಿ. ಮೈಕಾಬರರ ಪರಿಚಯವನ್ನು ನನಗೆ ಮಾಡಿಕೊಟ್ಟ ಕೂಡಲೇ, ಮಿ. ಮೈಕಾಬರರು ಬಹು ಸಲಿಗೆಯಿಂದಲೇ ನನ್ನೊಡನೆ ಮಾತಾಡಲು ಪ್ರಾರಂಭಿಸಿದರು. ನನ್ನ ಯೋಗ ಕ್ಷೇಮವನ್ನು ಸಾಂಪ್ರದಾಯಿಕವಾಗಿ ವಿಚಾರಿಸಿದನಂತರ –
"ಮಿ. ಕಾಪರ್ಫೀಲ್ಡ್, ಇಲ್ಲಿ ನಾನೊಬ್ಬ ಏಜಂಟನು. ನಮ್ಮ ನಿವಾಸವು ಆಧುನಿಕ ಬೇಬಿಲೋನಿನಂತಿರುವ ಈ ಲಂಡನ್ ಮಹಾನಗರದ ಒಂದು ಪ್ರಾಮುಖ್ಯ ವಿಭಾಗದಲ್ಲಿ ಉಪಸ್ಥಿತವಾಗಿದೆ. ನಿಮಗೆ ಈ ನಗರದ ಪರಿಚಯ ಭಾಗ್ಯವು ಪೂರ್ಣವಾಗುವ ಮೊದಲು ನಮ್ಮ ನಿವಾಸವನ್ನು ಕಂಡು ಹಿಡಿಯಲಾರಿರಿ. ಆದ್ದರಿಂದ ನಿಮಗೆ ಸಮಯಾನುಕೂಲವಿದ್ದಾಗ ನನಗೆ ತಿಳಿಸಿದರೆ ನಾನೇ ನಿಮ್ಮನ್ನು ನಮ್ಮ ನಿವಾಸಕ್ಕೆ ಕರೆದುಕೊಂಡು ಹೋಗಿ ತೋರಿಸುತ್ತೇನೆ" ಅಂದರು ಮಿ. ಮೈಕಾಬರರು.

ಆ ದಿನ ಸಂಜೆಗೇ ಅವರು ನನ್ನನ್ನು ಕರೆದುಕೊಂಡು ಹೋಗಿ ಅವರ ಮನೆಯನ್ನು ತೋರಿಸಿ ಕೊಟ್ಟರು. ವಿಂಡ್ಸರ್ ಟೆರೇಸಿನಲ್ಲಿ ಅವರ ಮನೆ. ತನ್ನ ದೊಣ್ಣೆಯನ್ನು ಕಂಕುಳಲ್ಲಿಟ್ಟುಕೊಂಡು, ಆ ಕಂಪೆನಿಯ ವಠಾರವನ್ನು ದಾಟಿದ ಮೇಲೆ ತಮ್ಮ ಅತ್ಮ ಸಂತೋಷಕ್ಕಾಗಿ ಚಿಕ್ಕ ಸ್ವರದಿಂದ ಏನನ್ನೋ ಹಾಡುತ್ತಾ, ಎದೆ ಮುಂದೆ ಮಾಡಿ, ನೆಟ್ಟನೆಯ ನಡಿಗೆಯಿಂದ ಮಿ. ಮೈಕಾಬರರು ನಡೆದುಹೋಗುತ್ತಿದ್ದ ಠೀವಿಯನ್ನು ನಾನು ಇನ್ನು ಯಾರಲ್ಲೂ ಕಂಡಿಲ್ಲ.

ಮಿ. ಮೈಕಾಬರರ ಸಂಸಾರದ ಪರಿಚಯವನ್ನೂ ಇಲ್ಲೇ ಮಾಡಿಕೊಡುವುದು ನ್ಯಾಯವಿದೆ. ಆ ಪರಿಚಯ ಪೂರ್ಣವಾಗಲು ನನಗೆ ತುಂಬಾ ಸಮಯ ಬೇಕಾಗಿದ್ದಿದ್ದರೂ, ಅವುಗಳಲ್ಲಿ ಕೆಲವಂಶವನ್ನಾದರೂ ಈಗಲೇ ತಿಳಿಸುವುದು ಉತ್ತಮ. ಮಿ. ಮೈಕಾಬರರ ಹೆಂಡತಿ ಮಕ್ಕಳ ಸಮೇತರಾಗಿ ಆ ಮನೆಯಲ್ಲಿ ವಾಸಿಸುತ್ತಿದ್ದರು. ಅವರಿಗೆ ನಾಲ್ಕು ಮಕ್ಕಳಿದ್ದರು. ಕೊನೆಯವರಿಬ್ಬರು ಅವಳಿ–ಜವಳಿ ಮಕ್ಕಳು. ನಾನು ಅವರನ್ನು ಪ್ರಥಮವಾಗಿ ನೋಡುವಾಗ ಆ ಮಕ್ಕಳಿಗೆ ಒಂದು ವರ್ಷ ಪ್ರಾಯ ಪೂರ್ತಿಯಾಗಿರಲಿಲ್ಲ. ಆ ಮಕ್ಕಳಿಗೆ – ಒಂದಲ್ಲದಿದ್ದರೆ ಇನ್ನೊಂದಕ್ಕೆ – ತಾಯಿ ಸದಾ ಮೊಲೆ ಕೊಟ್ಟುಕೊಂಡೇ ಇರುತ್ತಿದ್ದಳು. ಅಂದರೆ ಇಬ್ಬರು ಮಕ್ಕಳನ್ನೂ ಬಿಟ್ಟು ತಾಯಿ ಒಂಟಿಯಾಗಿದ್ದುದನ್ನೇ ನಾನು ಕಂಡಿರುವುದಿಲ್ಲ. ಇವರ ಪರಿಚಯ ಬೆಳೆದ ಹಾಗೆಲ್ಲಾ ಅವರಿಬ್ಬರ ಗುಣವೂ ಒಂದೇ ತೆರನಾಗಿದ್ದುವೆಂದು ನಾನು ಕಂಡುಕೊಂಡೆನು. ಸುಖದುಃಖಗಳನ್ನು ಗಣಿಸುವುದರಲ್ಲಿ ಅವರಿಬ್ಬರೂ ಒಂದೇ ವಿಧವಾಗಿ ವರ್ತಿಸುತ್ತಿದ್ದರು. ಈ ಕಾರಣದಿಂದಲೂ, ಇನ್ನೂ ಅವರ ಇತರ ಸ್ವಾಭಾವಿಕ ಗುಣಗಳ ಕಾರಣದಿಂದಲೂ, ಅವರ ದಾಂಪತ್ಯ ಬಹು ಅಚ್ಚು ಮೆಚ್ಚಿನದಾಗಿತ್ತೆಂದು ನಾನು ಊಹಿಸಿಕೊಂಡೆನು.

ಮಿ. ಮೈಕಾಬರರಿಗೆ ಮೈ ತುಂಬಾ ಸಾಲವಿತ್ತು. ಸಾಲ ಕೊಟ್ಟವರು ಆಗಿಂದಾಗ್ಗೆ ಬಂದು ಅವರೊಡನೆ ಜಗಳವಾಡುತಿದ್ದರು, ಬೈಯ್ಯುತ್ತಿದ್ದರು, ಇನ್ನೂ ಕೆಲವು ವೇಳೆ ಹೊಡೆಯಲೂ ಪ್ರಯತ್ನಿಸುತ್ತಿದ್ದರು. ಇಷ್ಟೊಂದು ಕಷ್ಟದಲ್ಲೇ ಅವರು ಇದ್ದದ್ದಾದರೂ ಅವರು ಸದ ಶುಭಾಕಾಂಕ್ಷಿಗಳು, ಶುಭ ನಿರೀಕ್ಷಕರೂ, ಸುಲಭವಾಗಿ ಹರ್ಷಚಿತ್ತತೆಯಲ್ಲಿ ಸ್ವಾಸ್ಥ್ಯ ಪಡೆಯಬಲ್ಲವರೂ ಆಗಿದ್ದರು. ಅವರ ನಡೆ, ನುಡಿ, ವರ್ತನೆ, ಶಬ್ದಗಳ ಪ್ರಯೋಗ, ಉದಾಹರಣೆ – ಇವೆಲ್ಲವುಗಳೂ ಅವರದೇ ಒಂದು ವಿಶಿಷ್ಟತರದ್ದಾಗಿದ್ದುವು. ಆಡಂಬರದ ಶಬ್ದ ಪ್ರಯೋಗ, ಮಹಾ ಸಾಹಿತಿಗಳ ಮಾತಿನ ಕ್ರಮದ ವಾಕ್ಯರಚನೆ, ಬಹು ಸಣ್ಣ ವಿಷಯವನ್ನು ವರ್ಣಿಸುವಂಥ ವರ್ಣನೆ, ಇದರಲ್ಲೆಲ್ಲ ಅವರಿಗೆ ಬಹು ಇಷ್ಟ. ಘನಸ್ತಿಕೆ, ಸಂಸ್ಕೃತಿ ಎಲ್ಲವನ್ನೂ ತಾವು ತಿಳಿದು ಅನುಷ್ಠಾನಕ್ಕೆ ತಂದಿರುವವರಂತೆ ಇವರು ವರ್ತಿಸುತ್ತಿದ್ದರೂ, ಇವರಲ್ಲಿ ಅಹಂಭಾವವಿರಲಿಲ್ಲ. ಇವರು ಬಹು ಸರಳ ಸ್ವಭಾವದವರೂ, ನಿಷ್ಕಪಟಿಗಳು ಎಂದು ಈ ಎಲ್ಲ ಆಡಂಬರದ ನಡೆನುಡಿಗಳ ಜತೆಯಲ್ಲೇ

ಕಂಡು ಬರುತ್ತಿದವು. ಕೆಲವೊಮ್ಮೆ ಇವರು ಚಿಕ್ಕ ವಿಷಯಕ್ಕಾಗಿ ದುಃಖಿಸಿ ಅಳುವುದೂ, ಆ ಅಳುವಿನ ಮಧ್ಯೆ ಏನಾದರೊಂದು ಚಿಕ್ಕ ಸಂತೋಷದ ಎಡೆ ಸಿಕ್ಕಿದ ಕೂಡಲೇ ಅದನ್ನೇ ಅಪ್ಪಿಕೊಂಡು ಆನಂದಾತಿಶಯದಲ್ಲಿ ತೇಲುವುದೂ ಇವರ ಸ್ವಭಾವ.

ಮಿ. ಕ್ವಿನಿಯನ್ನರ ಏರ್ಪಾಡಿನಂತೆ ನಾನು ಮಿ. ಮೈಕಾಬರರ ಮನೆಯ ಒಂದು ಚಿಕ್ಕ ಕೋಣೆಯನ್ನು ಮಾತ್ರ ನನ್ನದಾಗಿ ಉಪಯೋಗಿಸತೊಡಗಿದೆ. ಅವರ ಗೃಹಕೃತ್ಯ, ಸಂಸಾರ – ಈ ಎಲ್ಲವುಗಳನ್ನು ಕುರಿತು ನಾನು ಏನೂ ವಿಚಾರಿಸದಿದ್ದರೂ ಮಿ. ಮೈಕಾಬರ್ ಮತ್ತೂ ಅವರ ಪತ್ನಿ ನನ್ನೊಂದಿಗೆ ತಾವಾಗಿಯೇ ತಮ್ಮ ಕಷ್ಟ ಸುಖ, ಸಾಲ, ಮೂಲಗಳನ್ನೆಲ್ಲ ಹೇಳಿಕೊಳ್ಳುತ್ತಿದ್ದರು. ಅವರಿಗೆ ತುಂಬಾ ಸಾಲವಿತ್ತೆಂದೂ ತಿಳಿದೆ. ಅಷ್ಟೊಂದು ಸಾಲವಿದ್ದರೂ ಆ ಸಾಲವೆಲ್ಲ ಸದ್ಯವೇ ಪರಿಹಾರವಾಗುವುದೆಂದೂ, ಅಂಥ ಪರಿಹಾರಕ್ಕೆ ಸಂಬಂಧಿಸಿದ ಪ್ರಸಂಗಗಳು ಈಗಾಗಲೇ ಗೋಚರಿಸುತ್ತಿದ್ದುವೆಂದೂ ಅವರು ಸದಾ ನಿರೀಕ್ಷಿಸುತ್ತಲೂ, ನಿರೀಕ್ಷಣೆ ಕಾರ್ಯಗತವಾಗುವುದೆಂದು ನಂಬುತ್ತಲೂ ಇರುತ್ತಿದ್ದರು.

ನನ್ನ ವೃತ್ತಿ ನನಗೆ ಜಿಗುಪ್ಸಿತವಾಗಿಯೇ ತೋರುತ್ತಿತ್ತು. ನನ್ನ ಜತೆ ಕೆಲಸಗಾರರ ಸಹವಾಸ, ನಡೆನುಡಿ ಯಾವುದೂ ನನಗೆ ಮೆಚ್ಚುತ್ತಿರಲಿಲ್ಲ. ನಾನೊಬ್ಬ ಕುಲೀನ ಮನೆಯವನು, ವಿದ್ಯಾವಂತ, ಎಂದು ಮೊದಲಾಗಿ ಜತೆಯವರು ಹಾಸ್ಯ ಮಾಡುತ್ತಿದರು – ಕೆಲವೊಮ್ಮೆ ನಿಷ್ಕಪಟ ಬುದ್ಧಿಯಿಂದಲೇ ನನ್ನನ್ನು ಸ್ವಲ್ಪ ಅವರಿಗಿಂತ ಉತ್ತಮನೆಂದೂ ಅವರು ಕಾಣುತ್ತಿದ್ದರು. ನಾನು ನನ್ನ ಜತೆ ಕೆಲಸಗಾರರಿಂದ ದೂರವಿರಲೋಸ್ಕರ ರಜೆಯಿದ್ದಾಗಲೆಲ್ಲ ಲಂಡನ್ ನಗರದ ಬೇರೆ ಬೇರೆ ಸ್ಥಳಗಳನ್ನೂ ಚರಿತ್ರಾರ್ಹವಾದ ಕಟ್ಟಡಗಳನ್ನೂ, ವಸ್ತುಪ್ರದರ್ಶನಗಳನ್ನೂ ನಡೆದು ಹೋಗಿ ನೋಡಿಬರುತ್ತಿದ್ದೆನು. ನನಗೆ ಸಿಕ್ಕಿದ ಸಂಬಳದಲ್ಲಿ ಸ್ವಲ್ಪ ಅಂಶವನ್ನು ಪ್ರಯತ್ನಪಟ್ಟು ಉಳಿಸಿಕೊಂಡು, ಸಾಧಾರಣವಾಗಿ, ಪ್ರತಿ ಆದಿತ್ಯವಾರ ಒಂದು ಹೋಟೆಲಿನಲ್ಲಿ ಮನಸ್ಸು ಬಂದಂತೆ ತಿಂಡಿ ಪಾನೀಯಗಳನ್ನು ತೆಗೆದುಕೊಂಡು – ಯಾರೋ ನನಗೊಂದು ಔತಣ ಕೊಟ್ಟಂತೆ – ಸಂತೋಷಪಟ್ಟುಕೊಳ್ಳುತ್ತಿದ್ದೆನು. ನನ್ನ ಜತೆ ಕೆಲಸಗಾರರಿಗೂ, ಮಿ. ಮೈಕಾಬರರ ಮನೆ ಕೆಲಸದ ಒಬ್ಬ ಚಿಕ್ಕ ಹುಡುಗಿಗೂ ಒಂದೆರಡು ಸರ್ತಿ – ಅವರನ್ನು ನನ್ನ ಜತೆಗೆ ಸೇರಿಸಿಕೊಂಡು – ಔತಣ ಕೊಟ್ಟದ್ದುಂಟು.

ಮಿ. ಮೈಕಾಬರರು ನನ್ನಲ್ಲಿ ಸಾಲ ಕೇಳುತ್ತಿರಲಿಲ್ಲ. ಆದರೂ ಒಂದೆರಡು ಸರ್ತಿ ಅವರ ಕಷ್ಟ ನೋಡಲಾರದೆ ನನ್ನಲ್ಲಿದ್ದ ಸ್ವಲ್ಪ ಹಣವನ್ನಾದರೂ ಅವರಿಗೆ ಸಾಲ ಕೊಟ್ಟದ್ದೂ ಉಂಟು. ಆದರೆ, ಅಂಥ ಸಾಲ ಪಡೆದ ಸಂತೋಷದಲ್ಲಿ ಮಿ. ಮೈಕಾಬರರು ಹಾಗೆ ಸಾಲ ಪಡೆದ ಹಣವನ್ನು ಪೂರಾ ಖರ್ಚುಮಾಡಿ ನನಗೆ ಔತಣ ಕೊಟ್ಟು ತಾವೂ ಔತಣಭಾಗಿಗಳಾಗಿ ಮೆರೆದು ಸಂತೋಷಪಡುವುದೂ ಇತ್ತು.
ನಾನು ಮಿ. ಮೈಕಾಬರರ ಮನೆ ಸೇರಿ ಒಂದೆರಡು ತಿಂಗಳಾಗುವುದರೊಳಗೆ ಅವರ ಚರಸ್ವತ್ತುಗಳೆಲ್ಲ ಮಾರಾಟವಾಗಿಯೋ ಅಡವಿಟ್ಟೋ ಮುಗಿದಿದ್ದುವು. ಅವರ ವಸ್ತುಗಳನ್ನು ಮಾರುವ, ಅಥವಾ ಅಡವು ಇಡುವ ವಹಿವಾಟಗಳಲ್ಲಿ ನಾನು ಅವರಿಗೆ ತುಂಬಾ ಸಹಾಯ ಮಾಡುತ್ತಿದೆನು. ಬಹಿರಂಗವಾಗಿ ಅವರೇ ಬೇಂಕುಗಳಿಗೆ ಹೋಗಿ ಅಡವು ಇಡಲಾರರಾಗಿದ್ದಾಗಲೆಲ್ಲ ನಾನೇ ಆ ಕೆಲಸವನ್ನು ಮಾಡಿಕೊಡುತ್ತಿದ್ದೆ. ಚಿಕ್ಕವನಾಗಿದ್ದ ನನ್ನನ್ನು ಕಂಡು ಬೇಂಕಿನವರು ತಮ್ಮ ತಮ್ಮೊಳಗೆ ಪಿಸುಮಾತುಗಳಿಂದ ನನ್ನನ್ನು ಕುರಿತು ಹಾಸ್ಯ ಮಾಡುತ್ತಿದ್ದರೆಂದೂ ನಾನು ಊಹಿಸುತ್ತೇನೆ.

ನಾನು ಒಂದು ದಿನ ಏಕಾಂತವಾಗಿ ಉಂಡು ತಿಂದು ಸುಖಿಸಬೇಕೆಂದು ದೂರದ ಒಂದು ಹೋಟೆಲಿಗೆ ಹೋಗಿ ಎರಡು ಶಿಲ್ಲಿಂಗ್ ಪೂರ್ತಿ ಹೋಟೆಲಿನವನಿಗೆ ಕೊಟ್ಟು ಆ ಹಣಕ್ಕೆಲ್ಲ ನನಗೆ ತಿಂಡಿ, ಪಾನೀಯಗಳನ್ನು ಕೊಡಬೇಕೆಂದು ಹೇಳಿದನು. ಹೋಟೆಲಿನವನು ಅಷ್ಟು ಹಣಕ್ಕೆ ತಕ್ಕವಾದ ತಿಂಡಿ ಪಾನೀಯಗಳನ್ನು ಮೇಜಿನ ಮೇಲಿಟ್ಟು, ನನ್ನ ವಶಕ್ಕೆ ಒಪ್ಪಿಸಿ ಹೋದನು. ನಾನು ತಿಂಡಿಗಳನ್ನು ತಿನ್ನುತ್ತಿದ್ದ ಹಾಗೆಯೇ ಹೋಟೆಲಿನವರು – ನನ್ನ ಆಡಂಬರದ ಕ್ರಮಗಳನ್ನೆಲ್ಲ ಕಂಡು ಆಶ್ಚರ್ಯಗೊಂಡು – ಅವನ ಹೆಂಡತಿಯೂ ನನ್ನನ್ನು ನೋಡಬೇಕೆಂದು ಅವಳನ್ನು ಕರೆದುಕೊಂಡು ಬಂದು ನನ್ನಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿದನು. ನನ್ನನ್ನು ಕಂಡು ಹೋಟೆಲ್ ಮಾಲೀಕನ ಪತ್ನಿಗೆ ಬಹು ಕನಿಕರವುಂಟಾಗಿ ನನ್ನ ವೃತ್ತಿ, ತಂದೆ ತಾಯಿ, ಇತ್ಯಾದಿ ವಿಷಗಳನ್ನು ಕುರಿತು ಪ್ರೀತಿಯಿಂದ ವಿಚಾರಿಸಿದಳು. ನನ್ನ ಜೀವನ ಚರಿತ್ರೆಯನ್ನು ಸ್ವಲ್ಪ ಬದಲಾಯಿಸಿ, ಆದರೂ ಬಹುಮಟ್ಟಿಗೆ ಸತ್ಯಾಂಶವನ್ನು, ಅವಳಿಗೆ ತಿಳಿಸಿದೆನು. ಆ ಹೆಂಗುಸಿಗೆ ನನ್ನ ಮೇಲೆ ಕರುಣೆ ಉಂಟಾಗಿ ನಾನು ಕೊಟ್ಟಿದ್ದ ಹಣವನ್ನೆಲ್ಲ ನನಗೆ ವಾಪಸು ಕೊಟ್ಟು, ನನ್ನನ್ನು ತಬ್ಬಿ ಸಂತೋಷಪಟ್ಟು, ನಾನು ಒಳ್ಳೆಯವನಾಗಿ ಬಾಳಬೇಕೆಂದು ಹರಸಿ ಕಳುಹಿಸಿದಳು.

ದಿನಗಳು ದಾಟಿದ ಹಾಗೆಯೇ ಮಿ. ಮೈಕಾಬರರ ಸಾಲಗಳು ಹೆಚ್ಚುತ್ತಾ ಹೋದುವು. ಅವರ ಸಂಸಾರದ ನೆಮ್ಮದಿ ಕಡಿಮೆಯಾಯಿತು. ಕೊನೆಗೊಂದು ದಿನ ಸಾಲ ಕೊಟ್ಟವರ ಕಡೆಯಿಂದ ಅವರು ಕೈದು ಮಾಡಲ್ಪಟ್ಟು, ಸಿವಿಲ್ ಜೈಲಿಗೇ ಕಳುಹಿಸಲ್ಪಟ್ಟರು. ಹೀಗೆ ಅವರು ಕೆಲವು ಸಮಯ ಜೈಲಿನಲ್ಲೇ ಇದ್ದರು.

ನಾನು ಒಂದು ದಿನ ಅವರನ್ನು ನೋಡಿ ಮಾತಾಡಿ ಬರಲೆಂದು ಜೈಲಿಗೇ ಹೋದೆನು. ಅಲ್ಲಿ ನನ್ನೊಡನೆ ಅವರ ದುಃಖಗಳನ್ನೆಲ್ಲ ಹೇಳಿಕೊಂಡರು. ಹೀಗೆ ಮಾತಾಡುತ್ತಾ ಅವರ ಅವಿವೇಕಗಳಿಗಾಗಿ ಪಶ್ಚಾತ್ತಾಪಪಟ್ಟುಕೊಂಡು, ನನ್ನ ಅನುಭವಕ್ಕಾಗಿ –

"ನೋಡಿ ಮಿ. ಕಾಪರ್ಫೀಲ್ಡ್, ಒಬ್ಬನ ಒಂದು ವರ್ಷದ ಉತ್ಪತ್ತಿ ಇಪ್ಪತ್ತು ಪೌಂಡು ಇದ್ದು ಅವನು ಅದೇ ಒಂದು ವರ್ಷದಲ್ಲಿ ಹತ್ತೊಂಬತ್ತು ಪೌಂಡು, ಹತ್ತೊಂಬತ್ತು ಶಿಲಿಂಗ್, ಆರು ಪೆನ್ಸ್ ಖರ್ಚು ಮಾಡಿದರೆ – ಅವನು ಬದುಕುತ್ತಾನೆ, ಬಾಳುತ್ತಾನೆ. ಅದರ ಬದಲು ಇಪ್ಪತ್ತು ಪೌಂಡು ಒಂದು ಪೆನ್ಸ್ ಖರ್ಚು ಮಾಡಿದರೆ – ಅವನ ಬಾಳು ಬಾಳಲ್ಲ – ಅದು ಸಾವು!" ಎಂದಂದರು.

ಈ ಬೋಧನೆಯಾದ ನಂತರ ನನ್ನನ್ನು ಗೌರವಿಸಿ ಉಪಚರಿಸುವುದಕ್ಕಾಗಿ ನನ್ನಿಂದಲೇ ಒಂದು ಶಿಲಿಂಗ್ ಸಾಲ ತೆಗೆದುಕೊಂಡು ಆ ಹಣದಿಂದ ಹೋಟೆಲಿನಿಂದ ವಿಶೇಷದ ಊಟ ತರಿಸಿ ಉಂಡೆವು. ನಮಗೆ ಅಗತ್ಯ ಬಿದ್ದ ಚಮಚ, ಕತ್ತಿ ಮೊದಲಾದುವನ್ನು ಪಕ್ಕದ ಕೋಣೆಯಲ್ಲಿ ಅವರಂತೆಯೇ ಸಾಲಕ್ಕಾಗಿ ಜೈಲುವಾಸಿಯಾಗಿದ್ದ ಕೇಪ್ಟನ್ ಹಾಪ್ಕಿನ್ಸರಿಂದ ಎರವು ತಂದಿದ್ದರು.

ಮಿ. ಮೈಕಾಬರರು ಜೈಲಿನಲ್ಲಿರುವಾಗ ಅವರ ಇನ್ನುಳಿದಿದ್ದ ಚರಸ್ವತ್ತುಗಳೆಲ್ಲ ಅವರ ಪತ್ನಿ ಮತ್ತೂ ಮಕ್ಕಳ ಜೀವನದ ಖರ್ಚಿಗಾಗಿ ಮಾರಿ ಮುಗಿದವು. ಕೊನೆಗೆ ಅವರಿಗೆ ಮನೆ ಬಾಡಿಗೆಗೆ ತಕ್ಕಷ್ಟೂ ಹಣವಿಲ್ಲದೆ ಅವರ ಹೆಂಡತಿ ಮಕ್ಕಳೂ ಸಹ ಬಂದು ಜೈಲಿನಲ್ಲೇ ವಾಸ ಮಾಡತೊಡಗಿದರು. [ವಿಶೇಷ ಸೂಚನೆ: ಆಗಿನ ಕಾಲದಲ್ಲಿ ಸಿವಿಲ್ ಜೈಲುಗಳಲ್ಲಿ ಹೆಂಡತಿ ಮಕ್ಕಳೂ ಸಹ ಸರಕಾರಕ್ಕೆ ಖರ್ಚು ತೆತ್ತು, ಖೈದಿಯಾಗಿದ್ದ ಗಂಡನ ಜತೆಯಲ್ಲಿರುವ ಕ್ರಮ, ಶಾಸನಗಳಿದ್ದುವು.] ಮಿ. ಮೈಕಾಬರರ ಮನೆ ಕೆಲಸದ ಹುಡುಗಿಯೂ, ನಾನೂ ಜೈಲಿನ ಸಮೀಪದಲ್ಲೇ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ವಾಸ ಮಾಡತೊಡಗಿದೆವು.

ಮಿ. ಮೈಕಾಬರರ ಹೆಂಡತಿ ಮಕ್ಕಳ ಪೋಷಣೆ ಖರ್ಚನ್ನೂ ಅವರ ದೂರದ ನೆಂಟರೊಬ್ಬರು ಸರಕಾರಕ್ಕೆ ತೆತ್ತು, ಅವರ ಸಂಸಾರ ಜೈಲಿನಲ್ಲಾದರೂ ತಕ್ಕಮಟ್ಟಿನ ಸುಖದಲ್ಲಿರುವ ಏರ್ಪಾಡನ್ನು ಮಾಡಿದ್ದರು. ಹೀಗೆ ಮಿ. ಮೈಕಾಬರರಿಗೆ ಜೀವನಕ್ಕಾಗಿ ದುಡಿಯುವ ಅಗತ್ಯ ಬೀಳದೆ, ಅವರ ಸ್ವಭಾವಕ್ಕೆ ಸರಿಯಾಗಿ ಜೈಲಿನೊಳಗಿದ್ದ ಎಲ್ಲಾ ಸಿವಿಲ್ ಖೈದಿಗಳನ್ನೂ ಕಂಡು, ಮಾತಾಡಿ, ಪರಿಚಯ ಮಾಡಿಕೊಂಡರು. ಜೈಲಿನಲ್ಲಿ ಆ ಮೊದಲೇ ಖೈದಿಗಳಿಗೊಂದು ಕ್ಲಬ್ ಇತ್ತು. ಮಿ. ಮೈಕಾಬರರ ವಾಕ್ಶಕ್ತಿ, ಸರಳ ಸ್ವಭಾವ, ಠೀವಿ ಮೊದಲಾದುವುಗಳ ಕಾರಣವಾಗಿ ಇವರನ್ನು ಆ ಕ್ಲಬ್ಬಿನ ಅಧ್ಯಕ್ಷರನ್ನಾಗಿ ಮಾಡಿಕೊಂಡರು. ಇದೇ ಸಮಯದಲ್ಲಿ ಸಾಲಗಾರರು ದಿವಾಳಿ ಅರ್ಜಿಯನ್ನು ಬರೆದುಕೊಂಡರೆ, ಅರ್ಜಿಯ ತನಿಖೆಯಿಂದ ಜೈಲಿನಿಂದ ಬಿಡುಗಡೆ ಹೊಂದಬಹುದೆಂಬ ಕಾನೂನು ಜಾರಿಗೆ ಬಂದಿದ್ದು, ಈ ಅಭಿಪ್ರಾಯವನ್ನು ಮಿ. ಮೈಕಾಬರರು ಎಲ್ಲ ಖೈದಿಗಳ ಪರವಾಗಿ ಎತ್ತಿ ಹಿಡಿದರು. ಇದರ ಕುರಿತಾಗಿ ಮಿ. ಮೈಕಾಬರರು ಒಂದು ಮನವಿಯನ್ನು ತಯಾರಿಸಿದರು.

ಮನವಿ ತಯಾರಾದ ಕೂಡಲೇ ಕ್ಲಬ್ಬಿನ ಖೈದಿಗಳೆಲ್ಲ ಮನವಿಗೆ ದಸ್ಕತ್ತು ಮಾಡಿದರು. ಕೇಪ್ಟನ್ ಹಾಪ್ಕಿನ್ಸರು ಮನವಿಯನ್ನು ಎಲ್ಲ ಖೈದಿ ಸಭಾಸದರ ಅನುಭವಕ್ಕಾಗಿ ಓದಿ ಹೇಳಿದರು. ಮನವಿಯ ರಚಯಿತರೇ ಮಿ. ಮೈಕಾಬರರಾಗಿದ್ದುದರಿಂದ, ಕೇಪ್ಟನ್ ಹಾಪ್ಕಿನ್ಸರು ಅದನ್ನು ಓದುವಾಗ ಮಿ. ಮೈಕಾಬರರು ಒಬ್ಬ ಕವಿ ತನ್ನ ಕಾವ್ಯದ ಪ್ರಶಂಸೆಯನ್ನು ಕೇಳಿ ಸಂತೋಷಿಸುವಂತೆ ಬಹು ಗಾಂಭೀರ್ಯದಿಂದ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದಲ್ಲಿಂದಲೇ ಕೇಳಿ ಸಂತೋಷಿಸುತ್ತಿದ್ದರು.
"ಜನಪ್ರತಿನಿಧಿಗಳ ಬೃಹತ್ ಸಭಾ ಸಮ್ಮುಖದಲ್ಲಿ – ವಿಶ್ವವಿಖ್ಯಾತಿಯುತ ಜನತಾ ಪಾರ್ಲಿಮೆಂಟಿನ ಸನ್ನಿಧಿಯಲ್ಲಿ – ಅತ್ಯಂತ ವಿನಮ್ರ ಸೇವಕರಾದ ಈ ಮುಂದೆ ದಸ್ಕತ್ತು ಮಾಡಿರುವ ನಾವುಗಳು –
"ಕೃಪಾಪೂರ್ಣ ಮಹಾರಾಜರ ದಿವ್ಯ ಸನ್ನಿಧಿಯಲ್ಲಿ ದುರ್ದೈವೀ ಪ್ರಜಾವೃಂದದ ಹೃತ್ಪೂರ್ವವಾದ ವಿಜ್ಞಾಪನೆಗಳು" – ಮೊದಲಾದ ವಾಕ್ಯಗಳನ್ನು ಕೇಳುವಾಗ ಮಿ. ಮೈಕಾಬರರ ಮುಖದಲ್ಲಿ ಮಂದಹಾಸ ತೋರಿಬರುತ್ತಿತ್ತು. ತನ್ನ ಶಕ್ತಿ, ಪ್ರಭಾವಗಳ ಅರಿವು ಜನರಿಗೆ ಆಗಲಾದರೂ ಆಯಿತೇ ಎಂದು ಪ್ರಶ್ನಿಸುತ್ತಿರುವಂತೆಯೇ ಅವರ ದೇಹಮುಖಗಳನ್ನು ಮಾಡಿಕೊಂಡು ಮಿ. ಮೈಕಾಬರರು ಅಧ್ಯಕ್ಷಸ್ಥಾನದಲ್ಲಿ ಕುಳಿತಿದ್ದರು. ನಾನು ಈ ಸಭೆಯನ್ನು, ಇನ್ನೂ ಇಂಥಾ ದುಃಖಮಯ, ಚಮತ್ಕಾರಿಕ, ಹಾಸ್ಯಮಿಶ್ರಿತ ಕೂಟಗಳನ್ನು ಆಗಿಂದಾಗ್ಗೆ ನೋಡುತ್ತಿದ್ದೆನು. ನಾನು ಸಮಯವಿದ್ದಾಗಲೆಲ್ಲ ಆ ಮಹಾ ನಗರದಲ್ಲೆಲ್ಲ ಸಂಚರಿಸಿ, ನಗರದ ಪರಿಚಯವನ್ನು ಮಾಡಿಕೊಳ್ಳುತ್ತಿದ್ದೆನು. ಮಾತ್ರವಲ್ಲದೆ ಮಿ. ಮೈಕಾಬರರ ಕುಟುಂಬದಲ್ಲಿ ಕಲೆತು ಬೆರೆತು ಅವರ ಸಂಸಾರದ ಅನುಭವಗಳನ್ನು ತಿಳಿದುಕೊಳ್ಳುತ್ತಿದ್ದೆ. ಈ ಮಧ್ಯೆ ನನ್ನ ಜೀವನ ವೃತ್ತಿಯನ್ನು ಗ್ರಿನ್ಬಿ ಕಂಪೆನಿಯಲ್ಲಿ ಸಾಗಿಸುತ್ತಲೂ ಇದ್ದೆ. ಈ ಎಲ್ಲಾ ವಹಿವಾಟ, ಗೊಂದಲ, ಸಂಸರ್ಗಗಳಲ್ಲಿ ನಾನು ನನ್ನ ಪ್ರಾಯಕ್ಕೆ ಮೀರಿದ ರೀತಿಯಲ್ಲಿ ಬೆರೆತಿರುತ್ತಿದ್ದರೂ, ನನ್ನ ವ್ಯಕ್ತಿತ್ವವನ್ನು ಕಾಯ್ದುಕೊಂಡೇ ಇದ್ದೆ. ನನ್ನ ಜತೆಯವರೇ ನನ್ನನ್ನು ಇತರರೆಲ್ಲರಿಗಿಂತ ವಿಶಿಷ್ಟವಾದ ಗುಣ, ಅನುಭವ ಶಕ್ತಿ ಉಳ್ಳವನೆಂದು ಗ್ರಹಿಸಿಕೊಂಡಿದ್ದರು.

ಹಿಂದೆ ನಾನು ನಡೆದು, ನಡೆದು ರಸ್ತೆಯನ್ನು ಸವೆಯಿಸಿರುವ ಲಂಡನ್ ನಗರದ ಸೌತಾರ್ಕ್ ಮತ್ತು ಬ್ಲೇಕ್ಫೇರ್ಗಳ ಮಧ್ಯೆ ಈಗ ನಾನು ಹೋಗುವಾಗ ನನ್ನ ಹಿಂದಿನ ಕಾರ್ಯಗಳೆಲ್ಲ ನನ್ನೆದುರೇ ನಡೆಯುತ್ತಿರುವಂತೆ ನನಗೆ ತೋರುತ್ತದೆ. ಸಾತ್ವಿಕ ಗುಣವುಳ್ಳ, ಕಲ್ಪನಾಶೀಲನಾದ, ಎಳೆಯ ಪ್ರಾಯದ ಪೋರನೊಬ್ಬನು ತನ್ನ ದುಃಖಗಳ ಜತೆಯಲ್ಲಿ ಇತರರ ದುಃಖಗಳನ್ನು ಹೊತ್ತು, ಕಲ್ಪನಾಪ್ರಪಂಚದಲ್ಲಿ ಮಗ್ನನಾಗಿ ನಡೆದೂ ನಡೆದೂ ನನ್ನೆದುರೇ ಹೋಗುತ್ತಿರುವುದನ್ನು ನಾನು ಈಗಲೂ ಕಾಣಬಲ್ಲೆನು. ನನ್ನ ಬಾಲ್ಯದ ಅನುಭವಗಳನ್ನೆಲ್ಲ ಗ್ರಹಿಸಿದರೆ ನನಗೆ ಹೀಗೆ ಕಾಣುವುದೊಂದು ಆಶ್ಚರ್ಯವಲ್ಲ.

ಅಧ್ಯಾಯ ಹನ್ನೆರಡು

ಮಿ. ಮೈಕಾಬರರ ದಿವಾಳಿ ಅರ್ಜಿ ತನಿಕೆ ನಡೆದು ಅವರು ಜೈಲಿನಿಂದ ಬಿಡುಗಡೆ ಹೊಂದಿದರು. ಇದಕ್ಕಾಗಿ ಕೈದಿಗಳೆಲ್ಲ ಸೇರಿ, ಹೋಟೆಲು ಸರಬರಾಯಿಗಳಿಂದ, ಅವರ ಸನ್ಮಾನಾರ್ಥವಾಗಿ ಒಂದು ಔತಣವನ್ನು ಕೊಟ್ಟರು. ಮಿ. ಮೈಕಾಬರರು ಆ ಸಂತೋಷದ ಔತಣ ಪಡೆಯುವಾಗ ಮನೆಯವರು ಸಹ ಪಡೆಯಬೇಕೆಂದು ಮಿ. ಮೈಕಾಬರರ ಪತ್ನಿ ಮತ್ತು ನಾನೂ ಸೇರಿ, ನಮ್ಮ ಮನೆಯಲ್ಲೇ ಒಂದು ವಿಶೇಷ ಭೋಜನವನ್ನೇರ್ಪಡಿಸಿಕೊಂಡೆವು.

ನಮ್ಮ ಕೂಟದಲ್ಲೂ ಸಂತೋಷಕ್ಕೆ ಏನೂ ಕೊರತೆಯಿರಲಿಲ್ಲ. ಮಿಸೆಸ್ ಮೈಕಾಬರರು ಹೇಗೂ ತುಂಬಾ ಮಾತಾಡುವವರು. ಆ ದಿನವಂತೂ ಅವರು ಅವರ 'ಕುಟುಂಬ'ದವರ ಗುಣಗಳನ್ನು ಹೊಗಳತೊಡಗಿದರು. ಅವರ ಬಾಲ್ಯದ ಅನುಭವಗಳನ್ನೂ ತಾಯಿ ಮೃತಪಟ್ಟದ್ದೂ ತಂದೆ ಮೃತಪಟ್ಟದ್ದೂ ಗಂಡನ ಸಾಲಗಳು ಏರುತ್ತ ಬಂದದ್ದೂ ಇಂಥ ಅನೇಕ ಸಂಗತಿಗಳನ್ನು ಹೇಳಿದರು. ಅವರ ಕುಟುಂಬವೆಂದರೆ ತಾಯಿಯ ಮನೆಕಡೆಯವರು ಮಾತ್ರವೆಂಬಂತೆ, ತಾಯಿಯ ಕಡೆಯವರನ್ನೇ ಬಹು ಹೆಚ್ಚಾಗಿ ಹೊಗಳುವುದು ಅವರ ಅಭ್ಯಾಸವಾಗಿತ್ತು.

ಇಂಥ ಸಂತೋಷ ಕೂಟದಲ್ಲಿ ನಾನೂ ಸಹ ಸ್ವಲ್ಪವಾದರೂ ಮಾತಾಡುವುದು ಮರ್ಯಾದೆಯೆಂದು ಕೆಲವು ವಿಷಯಗಳನ್ನು ಮಾತಾಡಿದೆ. ಈ ಮಾತುಗಳಲ್ಲಿ, ಮುಂದೆ ಮಿ. ಮೈಕಾಬರರು ಜೈಲಿನಿಂದ ಹೊರಬಂದ ನಂತರ, ಅವರ ಕುಟುಂಬ ಯಾವ ಕಸಬನ್ನು ಕೈಕೊಳ್ಳುವುದೆಂದು ಸ್ವಾಭಾವಿಕವಾಗಿ ಕೇಳಿದೆ. ಅದಕ್ಕೆ ಮಿಸೆಸ್ ಮೈಕಾಬರರು ಬಹು ಉತ್ಸಾಹದಿಂದಲೇ ಉತ್ತರವಿತ್ತರು.

"ನಮ್ಮ ಮುಂದಿನ ಮಾರ್ಗ ಈಗಲೇ ನಿರ್ಣೀತವಾಗಿದೆ. ನಮ್ಮ ಕುಟುಂಬದವರ ಅಭಿಪ್ರಾಯ ಪ್ರಕಾರ, ನನ್ನ ಪತಿಯವರ ಉತ್ತಮ ಯೋಗ್ಯತೆಗೆ ತಕ್ಕಂಥ ಕೆಲಸ ಪ್ಲಿಮತ್ತಿನಲ್ಲಿದೆ, ಅಲ್ಲಿ ಸುಂಕದ ಇಲಾಖೆಯಲ್ಲಿ ಅವರಿಗೆ ಕೆಲಸ ಸಿಕ್ಕುವುದು" ಎಂದು ತಿಳಿಸಿದರು.
"ಹಾಗಾದರೆ, ಅವರು ಅಲ್ಲಿಗೆ ಸದ್ಯವೇ ಹೋಗಲಿದೆಯೇ ಅಥವಾ ನೀವೆಲ್ಲರೂ ಒಟ್ಟಾಗಿಯೇ ಹೋಗುವಿರೋ?" ಎಂದು ನಾನು ಕೇಳಿದೆ.
"ಸದ್ಯವೇ ಹೋಗಬಹುದು" ಎಂದರು ಮಿಸೆಸ್ ಮೈಕಾಬರರು. ನಾನು ಕುತೂಹಲದಿಂದ ಮತ್ತೂ ವಿಚಾರಿಸಿದೆ – "ಪ್ರಕೃತ ಅವರೊಬ್ಬರೇ ಹೋಗಿ, ಹಿಂದಿನಿಂದ ನೀವು ಹೋಗುವುದೋ ಅಥವಾ ನೀವೆಲ್ಲರೂ ಒಟ್ಟಾಗಿಯೇ ಹೋಗುವಿರೋ?"

ನನ್ನ ಈ ಸ್ವಾಭಾವಿಕವಾದ ಪ್ರಶ್ನೆ ಅವರ ಮನಸ್ಸಿನಲ್ಲಿ ಮಾತ್ರ ಸ್ವಲ್ಪ ಕಳವಳವನ್ನೇ ಎಬ್ಬಿಸಿತು. ಪತಿಪತ್ನಿಯರ ಅಗಲುವಿಕೆಗೆ ಸಂಬಂಧಪಟ್ಟು ಅವರು ಏನೇನೋ ವಿಚಿತ್ರವಾದ ಕಲ್ಪನೆಯನ್ನು ಮಾಡಿಕೊಂಡು, ಸ್ವಲ್ಪ ಮನಸ್ಸಿನ ವಿಕಲ್ಪವನ್ನೇ ತಂದುಕೊಂಡು ಅಳತೊಡಗಿದರು. ನಮ್ಮ ಊಟದ ಮಧ್ಯೆ ಮಧ್ಯೆ ಅವರು ಸೇವಿಸುತ್ತಿದ್ದ ಪಾನೀಯದ ಪ್ರಭಾವವೂ ಕೂಡಿಕೊಂಡು ಪೂರ್ಣ ಮತಿ ಕೆಟ್ಟವರಂತೆ ಏನೇನೋ ಮಾತಾಡುತ್ತಾ, ಪತಿ ಪತ್ನಿಯರ ಅಗಲುವಿಕೆ, ವೈಧವ್ಯ, ಇತ್ಯಾದಿಗಳನ್ನೆಲ್ಲ ಕಲ್ಪಿಸಿಕೊಂಡು ಸ್ಮೃತಿಯೇ ತಪ್ಪಬಹುದಾದಷ್ಟು ಬಲವಾಗಿ ದುಃಖದಿಂದ ರೋದಿಸತೊಡಗಿದರು. ಇಂಥ ಹದಗೆಟ್ಟ ಪರಿಸ್ಥಿತಿಯನ್ನು ಮಿ. ಮೈಕಾಬರರಿಗೆ ತಿಳಿಸದೆ ನಿರ್ವಾಹವಿಲ್ಲವೆಂದು ನಾನು ಆ ಕೂಡಲೇ ಜೈಲಿಗೆ ಓಡಿದೆನು.

ಜೈಲಿನ ಕ್ಲಬ್ಬಿನಲ್ಲಿ ಅವರೆಲ್ಲರ ಔತಣ ಸಮಾರಂಭ ನಡೆಯುತ್ತಿತ್ತು. ಉದ್ದವಾದ ಮೇಜಿನ ತುದಿಯಲ್ಲಿ ಮಿ. ಮೈಕಾಬರರೂ ಸಭಾಧ್ಯಕ್ಷರಾಗಿ ಕುಳಿತು, ತುಂಬಿದ್ದ ಒಂದು ವೈನ್ ಗ್ಲಾಸನ್ನು ಕೈಯ್ಯಲ್ಲಿ ಹಿಡಿದುಕೊಂಡು –
"ಕಷ್ಟವೆಲ್ಲ ಪಾರಾಯ್ತು, ಇಷ್ಟವೆಲ್ಲ ದೊರಕ್‌ಹೋಯ್ತು,
ಚದುರೇಯ ಜತೆಗೂಡಿ ಕುದುರೆ ಹತ್ತಿ ಓಡಿರೋ ಓಡಿರೋ!" ಎಂದು ಒಂದು ಪದವನ್ನು ಹೇಳುತ್ತಿದ್ದರು. ಸಭಿಕರೆಲ್ಲ ಆ ಪದವನ್ನು ಮೇಳೈಸಿ ಹಾಡುತ್ತಿದ್ದರು. ನಾನು ಅವರ ಸಮೀಪಕ್ಕೆ ಹೋಗಿ ನಮ್ಮಲ್ಲಿ ನಡೆದ ಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದೆನು. ಸಂತೋಷ ಶಿಖರದಲ್ಲಿದ್ದ ಮಿ. ಮೈಕಾಬರರು ಏಕಾಏಕಿ ದುಃಖದ ಕೂಪಕ್ಕೇ ಧುಮುಕಿದರು – ತಮ್ಮ ಕೈಯ್ಯಲ್ಲಿದ್ದ ಗ್ಲಾಸನ್ನು ಕೆಳಗಿಟ್ಟು, ಎದುರಿದ್ದ ಒಂದೆರಡು ತಿಂಡಿಗಳನ್ನು ಅವು ಏನೆಂದು ಗಣನೆಯಿಲ್ಲದೆ ಜೇಬಿನಲ್ಲಿ ತುರುಕಿಕೊಂಡು, ಸೀದಾ ನಮ್ಮ ಕೋಣೆಗೆ ಓಡಿಬಂದರು. ಬಂದದ್ದೇ ಹೆಂಡತಿಯನ್ನು ಎತ್ತಿ ಹಿಡಿದುಕೊಂಡು –
"ಏನು ಎಮ್ಮಾ, ನನ್ನ ಮುದ್ದು, ಏನಾಯಿತೇ ನಿನಗೆ?" ಎಂದು ಕೇಳಿದರು.
"ನಿಮ್ಮನ್ನು ನಾನೆಂದೂ ಬಿಟ್ಟಿರಲಾರೆನು" ಎಂದರು ಮಿಸೆಸ್ ಎಮ್ಮಾ ಮೈಕಾಬರರು.
"ಅದು ನನಗೆ ಗೊತ್ತಿದೆ ಕಣೇ" ಎಂದನ್ನುತ್ತಾ ಮಿ. ಮೈಕಾಬರರು ಪತ್ನಿಯನ್ನು ಅಪ್ಪಿಕೊಂಡರು.
"ನೀವು ನನ್ನ ಮಕ್ಕಳ ತಂದೆ – ನಮ್ಮ ಅವಳಿ ಮಕ್ಕಳ ಪ್ರೀತಿಯ ತಂದೆ – ನನ್ನ ಪ್ರೇಮದ ಸೇವೆಯನ್ನು ಸ್ವೀಕಸಿರುವ ಒಲವಿನ ಗಂಡ" ಎಂದನ್ನುತ್ತಾ ಚೀರುತ್ತಾ ದುಃಖಾವೇಶದಲ್ಲಿ ಬಳುಕಿ ಬೀಳುತ್ತಾ ಬೀಳುವುದನ್ನು ತಡೆದು ಚೇತರಿಸಿಕೊಳ್ಳುವುದಕ್ಕಾಗಿ ಶ್ರಮಪಟ್ಟು ಕಷ್ಟದ ಉಸಿರು ಬಿಡುತ್ತಾ ತನ್ನ ದುಃಖದ ಭರದಲ್ಲಿ ಪುನಃ –
"ನಾನೆಂದೆಂದಿಗೂ ಮಿ. ಮೈಕಾಬರರನ್ನು ಬಿಡೆನು – ಬಿಟ್ಟು ದೂರವಿರಲಾರೆ – ಇರಲಾರೆನಪ್ಪಾ" ಎಂದು ಬಹು ಕೀರು ಧ್ವನಿಯಿಂದ ಮತ್ತಷ್ಟು ಉದ್ದವಾಗಿ ಅತ್ತರು.

ಇದನ್ನೆಲ್ಲ ಕಂಡು ಮಿ. ಮೈಕಾಬರರು ಗಾಬರಿಗೊಂಡರು. ಕೊನೆಗೆ ಈ ಪ್ರಸಂಗ ಉದ್ಭವಿಸಿದ್ದು ಹೇಗೆ – ಎಮ್ಮನ ಕೋಮಲ ಹೃದಯದಲ್ಲಿ ಪತಿಯಿಂದ ಅಗಲುವುದೆಂಬ ಕೂರಲಗನ್ನು ಇರಿದವರು ಯಾರು – ಇತ್ಯಾದಿಯಾಗಿ, ಕಾದಂಬರಿಗಳಲ್ಲಿ ಕವಿಗಳು ಮಾತುಗಳನ್ನು ಪೋಣಿಸುವ ವಿಧಾನದಲ್ಲಿ, ಮಿ. ಮೈಕಾಬರರು ಪ್ರಶ್ನಿಸುತ್ತಾ ತಾವೂ ಅಳತೊಡಗಿದರು. ಇಷ್ಟರಲ್ಲಿ ಮಿಸೆಸ್ ಮೈಕಾಬರರು ದುಃಖದಿಂದ ಮೂರ್ಛಿತರೇ ಆಗಿದ್ದರು. ಇದನ್ನೆಲ್ಲಾ ಕಂಡೂ ಕೇಳಿಯೂ ನಾನೂ ಅಳತೊಡಗಿದೆನು. ಅಲ್ಲೇ ನಾನಿದ್ದರೆ ನನ್ನ ಅಳುವು ನಿಲ್ಲಲಾರದೆಂದು ತಿಳಿದು ನಾನು ಅಲ್ಲಿಂದ ಹೊರಗೆ ಹೋದೆನು.

ಸ್ವಲ್ಪ ಹೊತ್ತಿನಲ್ಲಿ ಮಿ. ಮೈಕಾಬರರು ಹೆಂಡತಿಯನ್ನು ಸಮಾಧಾನಪಡಿಸಿ ತಮ್ಮ ಕ್ಲಬ್ಬಿಗೆ ಹೊರಟುಹೋದರು.

ಈ ಸಂಗತಿಗಳು ನಡೆದು ಒಂದು ವಾರದಲ್ಲಿ ಅವರು ಸಂಸಾರ ಸಮೇತರಾಗಿ ಪ್ಲಿಮತ್ತಿಗೆ ಹೋಗುವ ದಿನ ಬಂತು. ಅವರು ಬಂಡಿಯನ್ನೇರುವ ಮೊದಲು, ಪ್ಲಿಮತ್ತಿನ ಒಬ್ಬ ದೊಡ್ಡ – ಗೌರವಾನ್ವಿತ – ಸರಕಾರದ ಅಧಿಕಾರಿಯ ಠೀವಿಯಿಂದ, ನನ್ನ ಭವಿಷ್ಯದ ಪ್ರಯೋಜನಕ್ಕೆಂದು ಈ ಮುಂದಿನಂತೆ ಕೆಲವು ಮಾತನ್ನಾಡಿದರು –

"ಮಿ. ಕಾಪರ್ಫೀಲ್ಡ್, ನಿಮಗೆ ಸ್ನೇಹಿತರಲ್ಲಿ, ಅನಾಥರಲ್ಲಿ – ಅರ್ಥಾತ್, ಸಮಾಜದ ದೀನ ದರಿದ್ರರಲ್ಲಿ – ಕರುಣವೂ, ಪ್ರೇಮವೂ ತುಂಬಾ ಇದೆ. ಈ ಗುಣಗಳ ಕಾರಣವಾಗಿ ನೀವು ದುಃಖದ ಕರ್ಮೋಡಗಳಲ್ಲಿ ಸಿಕ್ಕಿ ಬೆಳಕಿಗೆ ಬರಲಾರದ ಅಶಕ್ತ ಸ್ನೇಹಿತರನ್ನು ರಕ್ಷಿಸಿ, ಉದ್ಧರಿಸಿ, ಬೆಳಕಿಗೆ ತರಲು ಶಕ್ತರಾಗಿದ್ದೀರಿ. ನೀವು ಪ್ರಾಯದಲ್ಲಿ ಚಿಕ್ಕವರೂ ಜ್ಞಾನ ವ್ಯವಹಾರ ಕೌಶಲಗಳಲ್ಲಿ ಅನುಭವವೃದ್ಧರೂ ಆಗಿರುವಿರಿ. ಆದರೆ ನಾನು ಜ್ಞಾನವೃದ್ಧನೂ ವಯೋವೃದ್ಧನೂ – ಎರಡೂ – ಆಗಿರುವುದರಿಂದ, ಮತ್ತು ನಮ್ಮೀರ್ವರೊಳಗಿನ ಈವರೆಗಿನ ಪ್ರೇಮದ ಸಲಿಗೆಯಿಂದ – ನಿಮ್ಮ ಭಾವೀ ಅಭ್ಯುದಯಕ್ಕಾಗಿ ಎರಡು ಬುದ್ಧಿ ವಚನಗಳನ್ನು ಹೇಳಬಯಸುತ್ತೇನೆ. ಅಂದರೆ, ಯಾವ ವಿಷಯವನ್ನು ನಾನು ಪರಿಪೂರ್ಣವಾಗಿ ಅರಿತಿದ್ದರೂ ಅದನ್ನು ಅನುಷ್ಠಾನಕ್ಕೆ ತರದೆ ಇಂದು ಒಂದು ಜೀವಚ್ಛವವಾಗಿ ನಿಮ್ಮೆದುರು ನಿಂತಿದ್ದೇನೋ ಅಂಥಾ ಅರಿವಿನ ಮರ್ಮವನ್ನು ನಿಮಗೆ ತಿಳಿಸುವೆನು –

"ಮೈಗಳ್ಳನೇ ಸಮಯಗಳ್ಳ – ಅರ್ಥಾತ್, ವಿಲಂಬವೇ ಸರ್ವನಾಶ. ಇಂದು ಮಾಡಬೇಕಾದುದನ್ನು ನಾಳೆಗೆ ಎಂದು ಇಡಬೇಡಿ. ಇಂದೇ ಮಾಡಿ ಮುಗಿಸಿಬಿಡಿ. ಈ ತತ್ವಾನುಷ್ಠಾನವೇ ನಿಮ್ಮ ಅಭ್ಯುದಯಕ್ಕೆ ಬೇಕಾದ ಮಾರ್ಗ" ಅಂದರು ಮಿ. ಮೈಕಾಬರರು.

ಅಷ್ಟರಲ್ಲೇ – "ನಮ್ಮ ಕುಟುಂಬದಲ್ಲಿ ತಂದೆಯವರನ್ನುತ್ತಿದ್ದುದೂ ಇದನ್ನೇ" ಎಂದು ಮಿಸೆಸ್ ಮೈಕಾಬರರೆಂದರು.

"ನಿಜ, ನಿಜ – ನಿನ್ನ ತಂದೆಯವರ ಅಭಿಪ್ರಾಯವೂ ಹಾಗಿತ್ತು. ಅವರು ಮಹಾಜ್ಞಾನಿ. ಹಾಗಾಗಿ, ನಾಳೆ ಆಗಬೇಕಾದುದನ್ನು ಈ ಹೊತ್ತೇ ಮಾಡುವುದು ಉತ್ತಮವೆಂದೇ, ಸ್ವಲ್ಪ ಹಿಂದಿನಿಂದ ಆಗಬೇಕಾಗಿದ್ದ ನಮ್ಮಿಬ್ಬರ ಮದುವೆಯನ್ನು ಅಷ್ಟೊಂದು ಎಳೆ ಪ್ರಾಯದಲ್ಲೇ ಮಾಡಿಸಿದರು" ಹೀಗೆಂದು, ಮರುಕ್ಷಣ, ಈ ಮಾತುಗಳಿಂದ ತನ್ನ ಮಾವನನ್ನು ತಿಳಿಯದೇ ಹೀಯಾಳಿಸಿದಂತಾಯ್ತೆಂದು, ಪುನಃ ಅನ್ನತೊಡಗಿದರು –

"ಎಳೆ ಪ್ರಾಯದ ನನ್ನ ಮದುವೆಯ ಸಾಲವು ಇನ್ನೂ ಬಾಕಿಯಿರುವುದಾದರೂ ಆ ಬಡತನವೇ ನನ್ನನ್ನು ಇಂದು ಪ್ಲಿಮತ್ತಿನ ಮಾರ್ಗದಲ್ಲಿ ನಿಲ್ಲಿಸಿದೆಯಷ್ಟೆ? ಇಂದಿನ ಸ್ಥಿತಿ ಮುಂದಿನ ಪರಿಸ್ಥಿತಿಗೆ ಕಾರಣವೆಂಬ ತತ್ವವನ್ನೇ ವಿಚಾರಪೂರ್ವಕ ನೋಡಿದ್ದಾದರೆ, ಮುಂದಿನ ಏಳಿಗೆಗಳಿಂದ ಹಿಂದಿನ ಸಂದರ್ಭಗಳಿಗೆ ಬೆಲೆ ಕಟ್ಟಬಹುದಷ್ಟೆ. ನೋಡಿ, ಪ್ಲಿಮತ್ತಿನ ಸುಂಕದ ಇಲಾಖಾಧಿಕಾರದ ಸರ್ವತೋಮುಖವಾದ ಅಭ್ಯುದಯವನ್ನು ಗ್ರಹಿಸುವಾಗ – ಇದಕ್ಕೆಲ್ಲಾ ಕಾರಣವಾದ – ನಮ್ಮ ಮಾವನವರ ಮುಂಜಾಗ್ರತೆಗೆ ನಾವು ಋಣಿಗಳಾಗಿರಬೇಕು. ಅರ್ಥಾತ್, ವಿವೇಚನೆ ಬೇಕು– ಮನುಷ್ಯನಿಗೆ – ನನ್ನ ಹಿಂದಿನ ಮಾತುಗಳನ್ನು ನೆನಪಿನಲ್ಲಿಡಿ. ಇಪ್ಪತ್ತು ಪೌಂಡು ಉತ್ಪತ್ತಿ – ಹತ್ತೊಂಬತ್ತೂ ಮುಕ್ಕಾಲು ಪೌಂಡು ಖರ್ಚು – ಪರಿಣಾಮ: ಶಾಂತಿ, ಸುಖ. ಅದರ ಬದಲು ಇಪ್ಪತ್ತು ಪೌಂಡು ಉತ್ಪತ್ತಿ, ಖರ್ಚು ಇಪ್ಪತ್ತು ಪೌಂಡು ಒಂದು ಪೆನ್ನಿ – ಪರಿಣಾಮ: ದುರವಸ್ಥೆ, ದುಃಖ – ದುಃಖ ಮಾತ್ರವಲ್ಲ, ಜೀವನ ಲತೆಯೇ ಬಾಡಿ, ಮುದುಡಿ ನಶಿಸುವುದು. ಮನಸ್ಸಿನೆದುರು ಮರುಭೂಮಿಯ ಶೂನ್ಯತೆ, ಅಂಧಕಾರ – ಅರ್ಥಾತ್, ನಾನು ಇಂದು ಆಗಿರುವಂತೆ ನಿರ್ವೀರ್ಯ, ನಿಶ್ಶಕ್ತ, ನಿರ್ಜೀವ ಜಂತು!"

ಇಷ್ಟು ಹೇಳಿ, ದುಃಖಪಟ್ಟು, ದುಃಖಶಮನಕ್ಕಾಗಿ ಸ್ವಲ್ಪ ಬ್ರಾಂದಿಯನ್ನು ಕುಡಿದು ಬಂಡಿಯನ್ನೇರಿದರು. ಬಂಡಿಯನ್ನೇರಿ ಕುಳಿತ ಸಂತೋಷ – ಪ್ಲಿಮತ್ತಿನ ಮುಂದಿನ ಸಂಪದಭಿವೃದ್ಧಿ ಚಿತ್ರಗಳನ್ನೆಲ್ಲ ಗ್ರಹಿಸಿ – ಹರ್ಷಚಿತ್ತದಿಂದ ಕೊನೆಯ ನಾಲ್ಕು ಮಾತುಗಳನ್ನೂ ಆಡಿದರು –

"ಮಿ. ಕಾಪರ್ಫೀಲ್ಡ್ ನಿಮಗೆ ಅತ್ಯಂತ ಶುಭವೂ ಅಭಿವೃದ್ಧಿಯೂ ಆಗಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಕಾಲಚಕ್ರದ ಸೆರೆಯಲ್ಲಿ ಸಿಕ್ಕಿ ಬದುಕಬೇಕಾದ ನಿಮ್ಮ ಜೀವನಕ್ಕೆ ನನ್ನ ಜೀವನವು ಮಾರ್ಗದರ್ಶಕವಾಗಲಿ!" ಎಂದಂದು ಬಂಡಿಯನ್ನು ಹೋಗಗೊಡಿಸಿದರು.

ಒಂದೇ ಕುಟುಂಬದವರಂತೆ ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ಬಂದಿದ್ದ ನಾವು ಈ ದಿನ ಬೇರೆಯಾಗುವಾಗ ನನಗೆ ಬಹು ದುಃಖವೇ ಆಯಿತು. ನಮ್ಮ ಮನೆಕೆಲಸದ ಅನಾಥ ಬಾಲಕಿಯು ಅಂದೇ ಅನಾಥಾಲಯಕ್ಕೆ ಹೋದಳು. ನನ್ನ ಜತೆಗಾರರ ಸಹವಾಸ ನನಗೆ ಎಳ್ಳಷ್ಟು ಮೆಚ್ಚುತ್ತಿರಲಿಲ್ಲ. ಮಿ. ಮೈಕಾಬರರು ದೂರವಾದನಂತರ ಪ್ರಪಂಚದಲ್ಲಿ ನನ್ನ ಸಂಬಂಧಿಕರೆಂದು ಯಾರಾದರೂ ಇದ್ದರೆ, ನನ್ನ ಅತ್ತೆ ಮಾತ್ರ ಎಂದು ತಿಳಿಯತೊಡಗಿದೆನು. ಕೊನೆಗೆ ಹೇಗಾದರೂ ಮಾಡಿ ಅತ್ತೆಯ ಮನೆಯನ್ನು ಸೇರಲೇಬೇಕೆಂದು ನಿರ್ಧರಿಸಿದೆ. ನಾನು ಹುಟ್ಟಿದ ದಿನ ಅತ್ತೆಗೂ ನನ್ನ ತಾಯಿಗೂ ನಡೆದಿದ್ದ ಸಂಭಾಷಣೆಗಳನ್ನೆಲ್ಲ ತಾಯಿಯೂ ಪೆಗಟಿಯೂ ನನಗೆ ತಿಳಿಸಿದ್ದರು. ಅತ್ತೆಯ ಕೆಲವು ಮಾತುಗಳನ್ನೂ

ನನ್ನ ತಾಯಿಯ ಮೃದುಗೂದಲನ್ನೂ ಸವರುತ್ತಾ ಅವಳನ್ನು ಸಂತೈಸಿದ ಕಾರ್ಯವನ್ನೂ ತಿಳಿದು ಅತ್ತೆ ಮೃದುಸ್ವಭಾವದವಳೇ ಆಗಿರಬೇಕೆಂದು ಊಹಿಸಿದೆ. ಏನೇ ಇದ್ದರೂ, ನನ್ನ ಈ ವರೆಗಿನ ಜೀವನದ ಪರಿಸ್ಥಿತಿಗಿಂಥ ಅತ್ತೆಯ ಸಮೀಪದ ಪರಿಸ್ಥಿತಿ ಹಾಳಾಗಲಾರದೆಂದು ಊಹಿಸಿದೆ. ಯಾವುದೋ ಸಂದರ್ಭಕ್ಕಾಗಿ ಅತ್ತೆಯ ವಿಳಾಸವನ್ನು ತರಿಸಿಟ್ಟುಕೊಂಡೆ. ಅಲ್ಲದೆ, ಪೆಗಟಿಯಿಂದ ಅರ್ಧಗಿನಿ ಸಾಲವನ್ನೂ ತರಿಸಿಕೊಂಡೆ. ಪೆಗಟಿ ಕೊಟ್ಟ ಅತ್ತೆಯ ವಿಳಾಸ ಸಾಕಷ್ಟು ವಿವರವನ್ನೊಳಗೊಂಡಿರಲಿಲ್ಲ – ಡೋವರಿನಲ್ಲಿದ್ದಾಳೆಂದು ಮಾತ್ರ ಅವಳು ತಿಳಿಸಿದ್ದಳು.

ನಾನು ಯಾರಿಗೂ ತಿಳಿಸದೇ ಊರುಬಿಟ್ಟು ಹೋಗಬೇಕೆಂದು ನಿರ್ಧರಿಸಿಕೊಂಡಿದ್ದೆ. ಆದರೆ ನನ್ನ ಹೆಸರು ಹಾಳಾಗಬಾರದೆಂದು ಪ್ರತಿ ವಾರವೂ ವಾರದ ಪ್ರಾರಂಭದಲ್ಲೇ ಸಿಕ್ಕುತ್ತಿದ್ದ ಸಂಬಳದ ಕೆಲಸ ಪೂರ್ತಿಯಾದನಂತರ ಮಾತ್ರ ಊರು ಬಿಡಬೇಕೆಂದು ನಿಶ್ಚೈಸಿಕೊಂಡೆ. ಹಾಗಾಗಿ ಹೊಸ ವಾರದ ಪ್ರಾರಂಭದ ದಿನ ಸಂಬಳ ಬಟುವಾಡೆಯಾಗುವಾಗ ನಾನು ಹಾಜರಾಗಲಿಲ್ಲ.

ನನ್ನ ಬಟ್ಟೆ ಬರಿ ಮೊದಲಾದ ಸಾಮಾನುಗಳನ್ನು ಒಂದು ಪೆಟ್ಟಿಗೆಗೆ ತುಂಬಿ ಅದನ್ನು ನಮ್ಮ ಕಾರ್ಖಾನೆ ವಠಾರದಿಂದ ಸ್ವಲ್ಪ ದೂರ ಸಾಗಿಸಿದನಂತರ ಆ ಪೆಟ್ಟಿಗೆಯ ಮೇಲೆ ನನ್ನ ಹೆಸರು, ವಿಳಾಸಗಳನ್ನು – ಅಂದರೆ, ಡೋವರಿನ ಬಂಡಿ ನಿಲ್ದಾಣದಲ್ಲಿ ನಾನು ಕೇಳುವವರೆಗೆ ಕಾದಿಡಬೇಕೆಂದೆನ್ನುವ ಪತ್ರವನ್ನು – ಬರೆದಿಡಬೇಕೆಂದು ನಿಶ್ಚೈಸಿಕೊಂಡು, ಅಂಥಾ ಒಂದು ಪತ್ರವನ್ನು ಬರೆದು ಜೇಬಿನಲ್ಲಿಟ್ಟುಕೊಂಡು, ಬಾಡಿಗೆ ಬಂಡಿಯನ್ನು ಹುಡುಕುತ್ತಾ ಹೋದೆ.

ಸ್ವಲ್ಪ ದೂರ ಹೋಗುವುದರೊಳಗೆ ಒಬ್ಬ ಬಂಡಿಯವನನ್ನು ಕಂಡೆ. ಅವನನ್ನು ಕಾಣುವಾಗಲೇ ನನಗೆ ಭಯವಾಯಿತು. ನಾನು ಅವನ ಸಮೀಪಕ್ಕೆ ಹೋಗುವುದರ ಮೊದಲೇ, ನನ್ನನ್ನು ನೋಡುತ್ತಾ –
"ಮೂರುಪೆನ್ನಿ ಕ್ರಯದ ಎಳೇ ಕೋತಿ ಮುಖ ನೋಡಿ! ಆ ನಿಂಬೆ ಗಾತ್ರದ ಮುಖವನ್ನು ಎಲ್ಲಿ ಕಂಡರೂ ನಾನು ಗುರುತಿಸಿಯೇನು" ಎಂದು ಚೇಷ್ಟೆ ಮಾಡಿದನು. ಆದರೆ, ಅವನ ಸಹಾಯ ಅಗತ್ಯವಾಗಿದ್ದುದರಿಂದ, ಧೈರ್ಯ ತಂದುಕೊಂಡು ನಾನಂದೆ–
"ಸರ್, ನಮ್ಮ ಮನೆಯ ಒಂದು ಪೆಟ್ಟಿಗೆಯನ್ನು ಡೋವರ್ ಬಂಡಿ ನಿಲ್ದಾಣಕ್ಕೆ ಸಾಗಿಸಿಕೊಡುವ ಉಪಕಾರ ಮಾಡಬಹುದೆ?"
ಈ ಪ್ರಾರ್ಥನೆಗೆ ಅವನು ಒಲಿದನು. ಆರು ಪೆನ್ಸ್ ಬಾಡಿಗೆ ಕೊಡಬೇಕೆಂದು ನಿಶ್ಚಯವಾಯಿತು. ಅವನು ನಮ್ಮ ಮನೆಗೆ ಬಂದು ಪೆಟ್ಟಿಗೆಯನ್ನು ತಾನೇ ಎತ್ತಿ ಬಂಡಿಯಲ್ಲಿಟ್ಟುಕೊಂಡು ಹೊರಟನು. ಅದಕ್ಕೆ ಅಂಟಿಸಬೇಕಾಗಿದ್ದ ಹೆಸರು, ವಿಳಾಸ ಚೀಟಿಯನ್ನು ಜೈಲು ಪಾಗಾರ ಗೋಡೆಯ ಹೊರಬದಿಯವರೆಗೆ ಬಂಡಿ ತಲಪಿದಾಗ ಅಂಟಿಸುವೆನೆಂದೂ ಅವನಿಗೆ ತಿಳಿಸಿದೆ. ಬಂಡಿಯು ಹುಚ್ಚುಚ್ಚಾಗಿ ಓಡತೊಡಗಿತು. ನಾನೂ ಓಡಿದೆ. ಕೊನೆಗೆ ಜೈಲು ಬದಿ ಬಂಡಿ ನಿಂತಿತು.

ನಾನು ಜೇಬಿನಿಂದ ಚೀಟಿಯನ್ನು ಎಳೆದು ತೆಗೆಯುವಾಗ ಜೇಬಿನಲ್ಲಿದ್ದ ಅರ್ಧ ಗಿನಿಯ ನಾಣ್ಯ ಹೊರಬಿತ್ತು. ಆ ನಾಣ್ಯವನ್ನು ನಾನು ಬಾಯಲ್ಲಿಟ್ಟುಕೊಂಡು, ಪೆಟ್ಟಿಗೆಗೆ ಚೀಟಿಯನ್ನು ಅಂಟಿಸತೊಡಗಿದೆ. ಈ ಕೆಲಸವನ್ನು ನಾನು ಮಾಡುತ್ತಿದ್ದಾಗಲೇ ನನ್ನ ಹಿಂದಿನಿಂದ ಯಾರೋ ಬಂದು ನನ್ನ ದವಡೆಗಳನ್ನು ಒತ್ತಿ, ಅರ್ಧ ಗಿನಿ ನಾಣ್ಯವನ್ನು ತೆಗೆದರು. ಹಾಗೆ ತೆಗೆದವರು ಯಾರೆಂದು ಹಿಂತಿರುಗಿ ನೋಡುವಾಗ, ಆ ಬಂಡಿಯವನು ಆ ನಾಣ್ಯವನ್ನು ತನ್ನ ಕೈಯ್ಯಲ್ಲಿ ಹಿಡಿದುಕೊಂಡು, ಸೂಕ್ಷ್ಮವಾಗಿ ಅದನ್ನು ಪರೀಕ್ಷಿಸುತ್ತಾ–
"ಓಹೋ, ಇದು ಪೋಲಿಸ್ ಕೇಸು – ಕಳ್ಳ ನಾಣ್ಯ! ಕಳ್ಳ! ಬಾ ನಿನ್ನನ್ನು ಪೋಲಿಸಿಗೆ ಕೊಡುತ್ತೇನೆ" ಎಂದನ್ನುತ್ತಾ, ನನ್ನನ್ನು ದರದರನೆ ಎಳೆದುಕೊಂಡು ತನ್ನ ಬಂಡಿಯ ಕತ್ತೆಯ ಸಮೀಪಕ್ಕೆ ಹೋಗುತ್ತಾ – ಮೆಜಿಸ್ಟ್ರೇಟರಿಗೂ ಆ ಕತ್ತೆಗೂ ಸಂಬಂಧವಿದ್ದಂತೆ – ಅದನ್ನು ತೋರಿಸುತ್ತಾ ತನ್ನ ಬಂಡಿಯನ್ನೇರಿ, ಬಂಡಿಯನ್ನು ಓಡಿಸಿಕೊಂಡು ಹೋದನು.

"ಸರ್, ನನ್ನ ಹಣವನ್ನು ಕೊಟ್ಟು ಬಿಡಿ, ಪೆಟ್ಟಿಗೆಯನ್ನು ಕೊಡಿ" ಎಂದೆನ್ನುತ್ತ ನಾನು ಎಷ್ಟೇ ಗೋಳಿಟ್ಟು ಬಂಡಿಯನ್ನು ಹಿಂಬಾಲಿಸಿದರೂ ಬಂಡಿಯು ಓಡಿಯೇ ಹೋಯಿತು. "ಹಣ ಕೊಡಿರಿ, ದಮ್ಮಯ್ಯಾ" ಎಂದಂದುಕೊಳ್ಳುತ್ತಾ ಓಡುತ್ತಾ ಜಾರುತ್ತಾ ದಾರಿಯಲ್ಲಿ ಬಂದವರ ಮೈ ಒರಸಿ ಬೈಸಿಕೊಳ್ಳುತ್ತಾ ಕೆಲವು ಜಟಕದವರ ಬಾರುಕೋಲಿನ ಪೆಟ್ಟನ್ನು ತಿನ್ನುತ್ತಾ ನಾನು ಓಡಿ, ಓಡಿ ಕೊನೆಗೆ ಡೋವರ್ ರಸ್ತೆಯ ಮಧ್ಯದಲ್ಲಿ ಬಚ್ಚಿ ನಿಂತುಬಿಟ್ಟೆ. ನನ್ನ ಪೆಟ್ಟಿಗೆಯಿದ್ದ ಬಂಡಿಯೂ ಹಣವೂ ಮಾಯವಾದುವು.

ನಾನು ಈ ಲೋಕಕ್ಕೆ ಪ್ರಥಮವಾಗಿ ಕಾಲಿಟ್ಟು ನನ್ನತ್ತೆಗೆ ಸಿಟ್ಟು ಬರಿಸಿದ್ದ ಕಾಲದಲ್ಲಿ ನನ್ನಲ್ಲಿದ್ದ ವಸ್ತುಗಳಿಗಿಂತ ವಿಶೇಷ ಏನೂ ವಸ್ತುಗಳಿಲ್ಲದೆ, ಪ್ರಪಂಚದ ಸಮಸ್ತ ಜನರೆದುರು, ನಿರ್ಗತಿಕನಾಗಿ, ಮಾರ್ಗ ಮಧ್ಯದಲ್ಲಿ ನಾನು ನಿಂತುಬಿಟ್ಟೆ.

ಅಧ್ಯಾಯ ಹದಿಮೂರು

ಡೋವರಿನವರೆಗೂ ಓಡುವುದೇ ಅಗತ್ಯವೆಂದು ಬಂಡಿಯನ್ನು ಹಿಂಬಾಲಿಸಿ ಓಡುತ್ತಿದ್ದಾಗ ನಾನು ಗ್ರಹಿಸಿದ್ದರೂ ಓಡುತ್ತಾ ಬಚ್ಚಿದ ಮೇಲೆ ಹಾಗೆ ಓಡುವುದರ ಅಸಾಧ್ಯತೆ ತಿಳಿದುಬಂತು. ಕೊನೆಗೆ ಶ್ರಮಪರಿಹಾರಕ್ಕಾಗಿ ರಸ್ತೆ ಕರೆಯ ಒಂದು ಕಟ್ಟಡದ ಮೆಟ್ಟಿಲಲ್ಲಿ ಕುಳಿತುಕೊಂಡೆನು. ನನ್ನೆದುರೇ ಒಂದು ನೀರಿನ ಕಾರಂಜಿಯಲ್ಲಿ ಮೇಲಕ್ಕೆ ಹಾರಿ, ಹರಡಿ ಕೆಳಬೀಳುತ್ತಲೂ ಅದರ ಜತೆಯಲ್ಲೇ ಒಂದು ನಿಂಬೆಹಣ್ಣಿನಂತಿದ್ದ ಚೆಂಡು ನೀರು ಬುಗ್ಗೆಯ ಶಿಖರದಲ್ಲಿ ಸದಾ ನಲಿಯುತ್ತಿದ್ದುದನ್ನು ನೋಡುತ್ತಾ ಸ್ವಲ್ಪ ದಣಿವು ಆರಿಸಿಕೊಂಡೆನು. ಆಗ ರಾತ್ರಿಯಾಗಿತ್ತು. ಆದರೆ ಹವಾಮಾನ ಒಳ್ಳೆಯದಿದ್ದುದರಿಂದ ನಾನು ಕೆಂಟ್ ರಸ್ತೆಯಲ್ಲೇ ನಡೆದು ಮುಂದುವರಿಸಿದೆನು. ಇಷ್ಟರಲ್ಲೇ ನನ್ನಲ್ಲಿ ಏನೂ ಹಣವಿಲ್ಲವೆಂಬ ಜ್ಞಾಪಕ ಬಂದು, ನನ್ನ ಅಂಗಿ ಬಟ್ಟೆಗಳನ್ನಾದರೂ ಸ್ವಲ್ಪ ಮಟ್ಟಿಗೆ ಮಾರಿ ಹಣ ಮಾಡಬೇಕೆಂದು ನಿಶ್ಚೈಸಿದೆನು. ಮಿ. ಮೈಕಾಬರರ ಸಹವಾಸದಿಂದ ಹಳೆಬಟ್ಟೆ ಮಾರಾಟ ಮಾಡುವ ಅನುಭವ ನನಗಿದ್ದುದರಿಂದ, ನನ್ನ ವೇಸ್ಟ್ ಕೋಟನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ರಸ್ತೆ ಕರೆಯ ಹಳೆಬಟ್ಟೆ ವ್ಯಾಪಾರ ನಡೆಸುವ ಅಂಗಡಿಗಳಿವೆಯೋ ಎಂದು ಹುಡುಕುತ್ತಾ ಹೋದೆನು.
ಕೊನೆಗೆ ಮಿ. ಡೊಲೋಬಿ ಎಂಬವರ ಹಳೆಬಟ್ಟೆ ವ್ಯಾಪಾರದ ಅಂಗಡಿಯನ್ನು ಕಂಡು, ಅವರಲ್ಲಿಗೆ ಹೋಗಿ, 'ವೇಸ್ಟ್ ಕೋಟ'ನ್ನು ಮಾರಲು ಬಂದದ್ದಾಗಿ ಅವರಿಗೆ ತಿಳಿಸಿದೆನು. ಅವರು ನನ್ನಂಗಿಯನ್ನು ಹಿಡಿದು ನೋಡಿ –
"ಎಷ್ಟು ದುಡ್ಡು ಕೊಡಬೇಕು?" ಎಂದು ಕೇಳಿದರು.
"ನಿಮಗೆ ಗೊತ್ತಿದೆಯಲ್ಲ, ಸರ್" ಅಂದೆ ನಾನು.
"ಮಾರುವವನೂ ಕೊಳ್ಳುವವನೂ ಒಬ್ಬನೇ ಆಗಲಾರ – ನೀನೇ ಹೇಳು" ಎಂದು ಅವರೆಂದರು.
"ಹದಿನೆಂಟು. . ." ಎಂದು ನಾನು ಹದಿನೆಂಟು ಪೆನ್ಸು ಕ್ರಯ ಹೇಳುವ ಮೊದಲು ಅವರಂದರು –
"ಹದಿನೆಂಟು? ಒಂಬತ್ತು ಪೆನ್ಸ್ ಕೊಟ್ಟ ಪಕ್ಷಕ್ಕೇ ನನ್ನ ಕುಟುಂಬದ ಒಪ್ಪತ್ತಿನ ಊಟ ನಿಲ್ಲುತ್ತೆ – ಅದು ಅಸಾಧ್ಯ!"

ನನ್ನ ನಿರ್ದಾಕ್ಷಿಣ್ಯವಾದ ಕ್ರಯ ಕೊಟ್ಟು ಅವರ ಕುಟುಂಬ ಉಪವಾಸ ಬೀಳುವ ಸಂಭವ ಗ್ರಹಿಸಿ ನನಗೆ ಸ್ವಲ್ಪ ನಾಚಿಕೆಯಾಯಿತು. ಆದರೆ ನನ್ನ ಹಿತವನ್ನು ಮಾತ್ರ ಗ್ರಹಿಸಿ ಒಂಬತ್ತು ಪೆನ್ಸಿಗಿಂತ ಕಡಿಮೆ ಕ್ರಯಕ್ಕೆ ಕೊಡಲು ತಯಾರಿಲ್ಲವೆಂದು ನಾನು ಕಠಿಣವಾಗಿ ತಿಳಿಸಿಯೇ ಬಿಟ್ಟೆ. ಕೊನೆಗೆ ಬಹಳ ದುಃಖಪಟ್ಟುಕೊಂಡು ಸ್ವಲ್ಪ ಸ್ವಲ್ಪವಾಗಿ ಒಂಬತ್ತು ಪೆನ್ಸನ್ನು ಮಿ. ಡೊಲೋಬಿಯವರು ಕೊಟ್ಟರು. ಅಷ್ಟನ್ನು ತೆಗೆದುಕೊಂಡು ನಾನು ನನ್ನ ಪ್ರಯಾಣದಲ್ಲಿ ಮುಂದುವರಿದೆನು.

ನಾನು ನಡೆಯಬೇಕಾಗಿದ್ದ ದೂರವೆಷ್ಟು, ಅನುಭವಿಸಬೇಕಾಗ ಬಹುದಾದ ಕಷ್ಟಗಳೇನೇನಿರಬಹುದು, ಎಂಬ ಯಾವ ವಿಷಯವೂ ನನಗೆ ಗೊತ್ತಿರಲಿಲ್ಲ. ಆದರೂ ಆವರೆಗಿನ ನನ್ನ ಕಷ್ಟ ಪರಂಪರೆಗಳ ಅನುಭವದ ಅಳತೆಯಿಂದ ಮುಂದೆ ಎಂಥೆಂಥ ಭಯಂಕರ ಪ್ರಸಂಗಗಳು ಬರಬಹುದೋ ಎಂದು ಹೆದರಿಕೊಂಡೇ ದಾರಿ ನಡೆದೆ. ಕೊನೆಗೆ ನಾನು ಹಿಂದೆ ಹೋಗಿದ್ದ ಸೆಲಂ ಶಾಲೆಯ ವಠಾರ ಬಂತು. ಆ ಶಾಲಾ ಕಾಂಪೌಂಡಿನ ಹೊರಬದಿಯಲ್ಲಿದ್ದ ಒಂದು ಹುಲ್ಲು ಮುಂಡದ ಮರೆಯಲ್ಲಿ ಅಂದಿನ ರಾತ್ರಿ ನಿದ್ರಿಸಿದೆನು. ಮನೆಮಾರೆಲ್ಲ ದಾರಿಹೋಕ ದುಷ್ಟರಿಗೆ ಅಂಜಿ ಬಾಗಿಲು ಬಂದೋಬಸ್ತು ಮಾಡಿದನಂತರದ ಮಧ್ಯರಾತ್ರಿ ಕಾಲದಲ್ಲಿ – ನಮಗರಿಯದ ಕಾರಣಗಳಿಗಾಗಿ ನಾಯಿಗಳು ರಸ್ತೆ ಕಡೆ ನೋಡಿ, ಸಿಟ್ಟುಗೊಂಡು ಎಡೆಬಿಡದೆ ಬೊಗಳುವ ಶಬ್ದಗಳ ಮಧ್ಯೆ – ನಾನು ಪಾಠ ಕಲಿತು ಎಲ್ಲಾ ಬಾಲಕರಂತೆ ಊಟ ಆಟ – ಪಾಟಗಳಲ್ಲಿ ದಿನ ಕಳೆದಿದ್ದ ಶಾಲಾ ವಠಾರದ ಹೊರಬದಿ – ಮನೆಮಾರಿಲ್ಲದ ಪರಕೀಯ ಪೋಲಿಯೊಬ್ಬನಂತೆ ಆ ಶಾಲಾ ಬಾಲಕರಿಂದ ದೂರದಲ್ಲಿ, ಅಂದು ಏಕಾಂಗಿಯಂತೆ ಮಲಗಿದ್ದೆ. ಆ ದಿನದ ದೇಹ ಶ್ರಮದ ಕಾರಣವಾಗಿ ರಾತ್ರಿ ನಿದ್ರೆ ಚೆನ್ನಾಗಿ ಬಂದಿತ್ತು. ಹೀಗಾಗಿ ಬೆಳಗ್ಗಿನ ಬಿಸಿಲೂ ಸೆಲಂ ಶಾಲೆಯ ಘಂಟಾನಾದವೂ ನನ್ನನ್ನು ಎಬ್ಬಿಸುವವರೆಗೂ ನಿದ್ರಿಸುತ್ತಿದ್ದೆ. ನಾನೆದ್ದ ಕೂಡಲೆ ನನ್ನ ದಾರಿ ಹಿಡಿದು ನಡೆಯ ತೊಡಗಿದೆನು.

ಆ ದಿನ ಆದಿತ್ಯವಾರವಾಗಿತ್ತು. ಇಗರ್ಜಿ ಘಂಟೆಗಳ ಸ್ವರ ಇಂಪಾಗಿ ಕೇಳಿಸುತ್ತಿತ್ತು. ನಾನು ಸೆಲಂ ಶಾಲೆಯಲ್ಲಿ ದಿನ ಕಳೆದಾಗಿನ ಆದಿತ್ಯವಾರ ದಿನದ ಬೆಳಗ್ಗಿನ ಸಂತೋಷದ ಸವಿನೆನಪುಗಳನ್ನು ಸ್ಮರಿಸುತ್ತಾ ಮಾರ್ಗಸಾಗಿದೆನು. ದುಸ್ತು ಮಾಡಿಕೊಂಡು ಶಿಸ್ತಿನಿಂದ ನಡೆದುಹೋಗುತ್ತಿದ್ದ ಪ್ರಸನ್ನ ಮುಖಗಳು ನನ್ನೆದುರೇ ಇಗರ್ಜಿಗಳಿಗೆ ಆ ಬೆಳಗ್ಗೆ ಹೋಗುತ್ತಿದ್ದರು. ನಾನು ಮಾತ್ರ ನನ್ನ ಯಾತ್ರಾ ಪಥದಲ್ಲಿ ಬಿಡದೇ ಮುಂದೆ ಸಾಗಿದೆನು. ಆ ದಿನ ಸಂಜೆಗೆ ಇಪ್ಪತ್ತೂಮ್ರು ಮೈಲು ನಡೆದು ಚೇತೇಮಿಗೆ ತಲಪಿದೆನು.

ಚೇತೇಮಿಗೆ ತಲಪುವಾಗ ಬೆಳಗ್ಗೆ ಕಂಡಿದ್ದಂತೆಯೇ ಇಗರ್ಜಿಗಳಿಂದ ಸಂತೋಷಚಿತ್ತರಾಗಿ ವಾಪಸ್ಸು ಬರುತ್ತಿದ್ದ ಅನೇಕರನ್ನು ಕಂಡೆ. ಚೇತೇಮಿನ ನದಿಯೂ ನದಿಯಲ್ಲಿದ್ದ ಹಡಗುಗಳನ್ನೂ ಕೆಲವು ದೋಣಿಗಳನ್ನೂ ನೋಡುತ್ತಾ ಸೇತುವೆಗಳನ್ನೂ ಕಾಲುವೆಗಳನ್ನು ದಾಟುತ್ತಾ ಈ ಪಟ್ಟಣದಲ್ಲೇ ಮುಂದುವರಿದೆನು. ಕೊನೆಗೆ ಆ ಪಟ್ಟಣದ ಮತ್ತೊಂದು ಗಡಿಯಲ್ಲಿ, ಜನಸ್ತೋಮ, ಮನೆ ಮಠಗಳಿಂದ ದೂರದಲ್ಲಿದ್ದ, ಸೈನಿಕರ ಕವಾಯಿತು ಮೈದಾನಕ್ಕೆ ತಲಪಿದೆನು. ಅಲ್ಲಿ ಸೈನಿಕರ ಅಭ್ಯಾಸಕ್ಕಾಗಿ ನಿರ್ಮಿಸಿದ್ದ ಒಂದು ಎತ್ತರದ ಒಡ್ಡಿನ ಹೊರಬದಿ ನಾನು ಆ ದಿನ ರಾತ್ರಿ ನಿದ್ರಿಸಿದೆನು.

ನನಗೆ ಎಚ್ಚರವಾದಾಗ ಪ್ರಥಮವಾಗಿ ಕೇಳಿದ್ದು ತುತ್ತೂರಿ ತಮಟೆಗಳ ಶಬ್ದ. ಆ ಶಬ್ದ ಬಂದ ಕಡೆ ನಡೆಯುತ್ತಿದ್ದ ಸೈನಿಕರ ಕವಾಯತನ್ನೂ ಸ್ವಲ್ಪ ಸಮಯ ನೋಡುತ್ತಿದ್ದೆನು. ಅನಂತರ ಎದ್ದು ಮುಂದೆ ಸಾಗಲೆಂದು ಹೆಜ್ಜೆಯಿಡುವಾಗ ನನ್ನ ಕಾಲುಗಳು ಬಾತಿದ್ದುವೆಂದು ತಿಳಿಯಿತು. ನಡೆಯ ತೊಡಗಿದಾಗ ಬಹುವಾಗಿ ನೋಯತೊಡಗಿದುವು. ಆದರೂ ನನ್ನ ನಿರ್ಧಾರಶಕ್ತಿಯಿಂದಲೇ ನಡೆದು ಮುಂದುವರಿಯತೊಡಗಿದೆನು. ಈ ದಿನ ನನ್ನ ಆಹಾರಕ್ಕಾಗಿ ನನ್ನ ಹೊರ ಅಂಗಿಯನ್ನು ಮಾರಿದೆ. ಈ ದಿನದ ಬಟ್ಟೆ ಮಾರಾಟ ಸ್ವಲ್ಪ ಕಷ್ಟತರದ್ದಾಗಿತ್ತು. ಅಂಗಡಿಯವನಿಗೆ ಖಾಸಶ್ವಾಸವೋ – ಗೂರಲೋ – ಏನೋ ಒಂದು ರೋಗವಿದ್ದಿರಬೇಕು. ಅವನು ನನ್ನನ್ನು ಹಿಂಸಿಸುತ್ತಾ, ಕೊಡಬೇಕಾಗಿದ್ದ ಹಣಕ್ಕಿಂತ ಬಹು ಕಡಿಮೆ ಕೊಟ್ಟು ನನ್ನನ್ನು ಗದರಿಸಿ ಓಡಿಸಿದನು. ಅಂದು ರಾತ್ರಿ ರಸ್ತೆ ಕರೆಯಲ್ಲಿದ್ದ ಒಂದು ಹುಲ್ಲು ಮುಂಡದ ಆಶ್ರಯದಲ್ಲಿ ಮಲಗಿ ನಿದ್ರಿಸಿದೆನು.

ಮರುದಿನ ಏಳುವಾಗಲಂತೂ ನನ್ನ ಕಾಲುಗಳು ಮತ್ತಷ್ಟು ಬಾತುಕೊಂಡಿದ್ದುವು. ಆದರೂ ನನ್ನ ತಾಯಿಯ ನೆನಪೂ ಅತ್ತೆಯ ಆಶ್ರಯದ ಆಸೆಯೂ ನನ್ನ ನಿರ್ಧಾರದ ಶಕ್ತಿಯೂ ನನ್ನನ್ನು ಶಕ್ತಿಕೊಟ್ಟು ಮುಂದೆ ಸಾಗಿಸಿದುವು.

ದಾರಿಯಲ್ಲೊಬ್ಬ ಹೆಂಡಕುಡುಕನು ನನ್ನನ್ನು ಹೆದರಿಸಿ, ಬೈದು, ಚಳಿಗಾಗಿ ನನ್ನ ಕುತ್ತಿಗೆಗೆ ಸುತ್ತಿಕೊಂಡಿದ್ದ ಶಾಲು ತನ್ನದೆಂದು ಎಳೆದು ತೆಗೆದುಕೊಂಡನು. ಅವನು ಆ ರೀತಿ ಮಾಡಿದ್ದು ತಪ್ಪೆಂದು ಅಂದುಕೊಂಡು ನನ್ನ ಶಾಲನ್ನು ವಾಪಾಸು ಕೊಡಿಸಲು ಪ್ರಯತ್ನಿಸಿದ ಅವನ ಪತ್ನಿಗೆ ಆ ಹೆಂಡಕುಡುಕನು ಹೊಡೆದುದರಲ್ಲಿ ಅವಳ ಮೂಗಿನಿಂದ ರಕ್ತ ಸುರಿಯತೊಡಗಿತು. ಇದನ್ನೆಲ್ಲ ಕಂಡು ನಾನು ಶಾಲನ್ನು ಬಿಟ್ಟು ಅಲ್ಲಿಂದ ಓಡುತ್ತಾ ದೂರ ಸಾಗಿದೆನು. ಈ ಕಾರಣದಿಂದಾಗಿ ಕೊನೆಗೆ ದಾರಿಯಲ್ಲಿ ತುಂಬ ಜನ ಬರುವುದನ್ನು ಕಂಡಾಗಲೆಲ್ಲಾ ನಾನು ಅಡಗಿಯೇ ಮುಂದೆ ಸಾಗುತ್ತಿದ್ದೆನು.

ದಾರಿ ನಡೆಯುತ್ತಿದ್ದಾಗ ಏನೇನೋ ಭಯಂಕರ ಆಲೋಚನೆಗಳು ನನ್ನ ಮನಸ್ಸಿನಲ್ಲಿ ಏಳುತ್ತಿದ್ದುವು. ಕೈಯಲ್ಲಿ ಕಾಸಿಲ್ಲದೆ, ಮಾರಲು ನನ್ನದಾಗಿ ಏನೂ ಸಾಮಾನಿಲ್ಲದೆ, ಕೊನೆಗೆ ಆಹಾರವಿಲ್ಲದೆ ಸತ್ತಾಗ ನನ್ನನ್ನು ಪೋಲೀಸರು ದಫನ್ ಮಾಡಬೇಕಾಗಬಹುದೇ ಎಂಬಷ್ಟರವರೆಗೂ ಆಲೋಚಿಸಿ ಹೆದರುತ್ತಿದ್ದೆ. ಆದರೆ, ಎಂಥ ಮಾನಸಿಕ ಅಂಧಕಾರದಲ್ಲೂ ನನ್ನ ಮಾತೆಯ ಸೌಮ್ಯಮೂರ್ತಿ ಪ್ರಭೆಯಾಗಿ ತೋರಿ, ನನ್ನ ದೃಢ ನಿರ್ಧಾರಕ್ಕೆ ಮತ್ತಷ್ಟು ಶಕ್ತಿ ಕೊಟ್ಟು, ನನ್ನನ್ನು ಮುಂದೆ ಸಾಗಿಸುತ್ತಿತ್ತು. ಹೀಗೆಲ್ಲಾ ಮುಂದುವರಿದು ಕೊನೆಗೆ ಡೋವರ್ ಪಟ್ಟಣಕ್ಕೇ ತಲುಪಿದೆನು.

ಅಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನೂ ಗೋಪುರಗಳನ್ನೂ ತೋಪುಗಳನ್ನೂ ಮೈದಾನಗಳನ್ನೂ ದಾಟುತ್ತಾ ಸಾಗಿದೆನು. ಕೆಲವು ಕಡೆಗಳಲ್ಲಿ ಹರಕು ಮುರುಕು ಮನೆಗಳೂ ಚಿಲ್ಲರೆ ಅಂಗಡಿಗಳೂ ಹಾಳುಬಿದ್ದ ಕಟ್ಟಡಗಳೂ ಇದ್ದುವು. ಡೋವರಿನ ಪರಿಚಯವಿಲ್ಲದಿದ್ದ ನನಗೆ ಡೋವರಿನಲ್ಲೇ ಇದ್ದಾಗಲೂ ಅತ್ತೆಯ ಮನೆಯನ್ನು ಕುರಿತಾದ ವಿಷಯದಲ್ಲಿ ಲಂಡನ್ನಿನಲ್ಲಿ ಇದ್ದಷ್ಟೇ ಪ್ರಯೋಜನವಿತ್ತೆಂದು ದುಃಖಪಟ್ಟೆ.

ಅತ್ತೆಯ ಮನೆ ಸಮುದ್ರದ ಕರಾವಳಿಯಲ್ಲಿದ್ದುದು ಎಂಬ ವರದಿಯ ನೆನಪಿನಿಂದ ದಾರಿಯಲ್ಲಿ ಸಿಕ್ಕಿದ ಕೆಲವು ನಾವಿಕರೊಡನೆ ಅತ್ತೆಯನ್ನೂ ಅತ್ತೆಯ ಮನೆಯನ್ನೂ ಕುರಿತಾಗಿ ವಿಚಾರಿಸಿ ನೋಡಿದೆ. ನನ್ನ ಮಾತನ್ನು ಅರ್ಥ ಸಹ ಮಾಡಿಕೊಳ್ಳದೆ, ನಾನೊಬ್ಬ ತಿರುಕನಿರಬೇಕೆಂದು ಗ್ರಹಿಸಿ ಅವರು ನನ್ನನ್ನು ಗದರಿಸಿ ಓಡಿಸಿದರು. ಆ ದಿನ ಸಂಜೆಯವರೆಗೂ ಅಲೆದು ಅಲೆದು, ಅತ್ತೆಯ ಮನೆ ಸಿಗದೆ, ಬಳಲಿ, ಬಾಯಾರಿಕೆಯಿಂದಲೂ ದಣಿವಿನಿಂದಲೂ ದಾರಿ ತೋಚದೆ, ಎರಡು ರಸ್ತೆ ಸೇರುವ ಮೂಲೆಯಲ್ಲಿದ್ದ ಬಾಗಿಲು ಹಾಕಿದ್ದ ಒಂದು ಅಂಗಡೀ ಜಗುಲಿಯಲ್ಲಿ ಕುಳಿತುಬಿಟ್ಟೆ.

ಆಗಲೇ ನನ್ನೆದುರು ಒಂದು ಕುದುರೆಗಾಡಿಯು ದಾಟಿ ಹೋಯಿತು. ಗಾಡಿಯವನಿಗೆ ಅರಿಯದೇ ಅವನ ಕುದುರೆ ಮೈಮೇಲೆ ಅಲಂಕಾರಕ್ಕಾಗಿ ಹಾಕಿದ್ದ ಶಾಲು ಜಾರಿ ಮಾರ್ಗಕ್ಕೆ ಬಿತ್ತು. ನಾನು ಅದನ್ನು ಹೆಕ್ಕಿ ತೆಗೆದುಕೊಂಡು ಹೋಗಿ ಗಾಡಿಯವನಿಗೆ ಕೊಟ್ಟೆ. ಆ ಶಾಲನ್ನು ತೆಗೆದುಕೊಂಡ ಗಾಡಿಯವನು ಸ್ವಲ್ಪ ಕರುಣೆಯುಳ್ಳವನೆಂದು ಅವನ ಮುಖ ನೋಡಿದಾಗ ತಿಳಿಯಿತು. ಅವನೊಡನೆ ಅತ್ತೆಯನ್ನು ಕುರಿತು ವಿಚಾರಿಸಿದೆನು. ಅವನು ನಿಜವಾಗಿಯೂ ಕರುಣಾಳುವೇ ಆಗಿದ್ದನು. ಅವನು ನನ್ನನ್ನು ನೋಡಿ –
"ನೀನು ವಿಚಾರಿಸಿದ್ದು ಟ್ರಾಟೂಡ್ಡಳನ್ನು ತಾನೇ? ಆ ಮುದುಕಿಯನ್ನ?" ಅಂದನು.
"ಹೌದು" ಎಂದಂದೆ ನಾನು.
ಗಾಡಿಯವನು ತನ್ನ ಬೆನ್ನನ್ನು ನೆಟ್ಟಗೆ ಮಾಡಿ ತೋರಿಸಿ –
"ಗೂಟದಂತೆ ನಡೆಯುವವಳಲ್ಲವೆ?" ಅಂದನು.
"ಹೌದು" ಅಂದೆ.
"ಕೈಯ್ಯಲ್ಲಿ ಸದಾ ಒಂದು ಚೀಲವಿರುತ್ತೆ – ಮಾತಾಡಿದರೆ ಹೊಡೆಯೋಕೆ ಬರುವವಳಂತೆ ತೋರುತ್ತಾಳೆ, ಅವಳು ತಾನೆ?"
ಅದೆಲ್ಲ ಹೌದೆಂದು ನಾನೊಪ್ಪಿದೆ.

"ಹಾಗಾದರೆ, ಆ ಇಳಿಜಾರು ದಾಟಿದನಂತರ ಸಿಕ್ಕುವ ಮೊದಲಿನ ಜೀನಸಿನ ಅಂಗಡಿಗೆ ಹೋಗಿ ವಿಚಾರಿಸು – ಆ ಅಂಗಡಿಯವನಿಗೆ ಅವಳ ಪೂರ್ಣ ಪರಿಚಯವಿದೆ" ಎಂದು ಹೇಳಿ ಗಾಡಿಯವನು ತನ್ನ ಗಾಡಿಯನ್ನು ಓಡಿಸಿದನು.

ನಾನು ಆ ಅಂಗಡಿಯನ್ನು ಹೇಗೋ ಮಾಡಿ ಹುಡುಕಿ ಹಿಡಿದೆನು. ಆಗ ಅಂಗಡಿಯವನು ಒಬ್ಬಳು ಹೆಂಗುಸಿಗೆ ಕೆಲವು ಸಾಮಾನುಗಳನ್ನು ಕೊಡುತ್ತಿದ್ದನು. ಅಂಗಡಿಯವನೊಡನೆ ಅತ್ತೆಯನ್ನು ಕುರಿತಾಗಿ ವಿಚಾರಿಸಿದೆನು – ಆಗ ಸಾಮಾನು ಪಡೆಯುತ್ತಿದ್ದ ಹೆಂಗುಸು ನನ್ನ ಮಾತನ್ನು ಕೇಳಿ –
"ಏನು? ನಮ್ಮ ಯಜಮಾನೀನ ವಿಚಾರಿಸುತ್ತೀಯಾ – ಬೇಡೋದಕ್ಕೆ ತಾನೆ?" ಎಂದು ಕೇಳಿದಳು.

ಆ ಮಾತು ಅಪಹಾಸ್ಯವಾಗಿ ನನಗೆ ತೋರಿ ನನ್ನ ಮುಖ ಕೆಂಪೇರಿತು. ಆದರೆ, ನಾನು ಹೋಗುತ್ತಿದ್ದುದಾದರೂ ಬೇಡುವುದಕ್ಕೇ ತಾನೆ! – ಆಶ್ರಯವನ್ನು ಬೇಡುವುದಕ್ಕೆ! ಎಂದು ಗ್ರಹಿಸಿ, ಅಪಮಾನವನ್ನು ನುಂಗಿಕೊಂಡು –
"ಸ್ವಲ್ಪ ಮಾತಾಡುವ ಕೆಲಸವಿದೆ" ಎಂದಷ್ಟು ಮಾತ್ರ ಹೇಳಿದೆ. ನನ್ನ ಪುಣ್ಯವಶದಿಂದ ಅವಳು ಅಷ್ಟೊಂದು ಕ್ರೂರಿಯಾಗಿರಲಿಲ್ಲ – ಕಠಿಣಸ್ಥಳೂ ಆಗಿರಲಿಲ್ಲ. ಅವಳ ಒಪ್ಪಿಗೆಯಿಂದಲೇ ಅವಳನ್ನು ಹಿಂಬಾಲಿಸುತ್ತಾ ನಡೆದೆನು. ಆದರೆ ದಾರಿಯುದ್ದಕ್ಕೂ ನಾನು ಮಾತಾಡುವುದೇನು – ಹೇಗೆ – ಅತ್ತೆ ಒಲಿಯದಿದ್ದರೆ ನನ್ನ ಗತಿ ಏನು ಎಂಬಿತ್ಯಾದಿ ದುಃಖ, ಭಯಗಳಿಂದಲೇ ಆಲೋಚಿಸುತ್ತಿದ್ದೆ. ಹೀಗೆ ಸ್ವಲ್ಪ ದೂರ ನಡೆಯುವಾಗ, ಸ್ವಲ್ಪ ಮುಂದೆ, ನಮ್ಮೆದುರು ಚೊಕ್ಕಟವಾಗಿದ್ದ ಒಂದು ಬಯಲು ಪ್ರದೇಶದ ಮಧ್ಯೆ ನಿಂತಿದ್ದ ಒಂದು ಸುಂದರವಾದ ಮನೆಯನ್ನು ಕಂಡೆನು. ಮನೆಯ ಕಿಟಕಿ ಬಾಗಿಲುಗಳೆಲ್ಲ ಬಹು ಸುಂದರವಾಗಿದ್ದು, ಆ ಮನೆಯ ಸೌಂದರ್ಯಕ್ಕಾಗಿ ಅವುಗಳನ್ನಿಟ್ಟಿದ್ದಂತೆ ತೋರಿದುವು. ನಾವು ಮುಂದುವರಿದ ಹಾಗೆ ಮನೆಯ ಮುಂಭಾಗದಲ್ಲಿನ ಬಲು ಚಂದದ ಒಂದು ಹೂದೋಟವನ್ನು ಕಂಡೆನು. ಹೂಗಳು ಅಲ್ಲಿ ಬಲು ಸಮೃದ್ಧವಾಗಿದ್ದುವು. ಅಲ್ಲದೆ, ಆ ಕಡೆಯಿಂದ ಸುವಾಸನೆಯೂ ತೇಲಿ ಬರುತ್ತಿತ್ತು.

ನಾನು ಗೇಟಿಗೆ ಬರುವಾಗ ಮನೆಯ ಬೈಠಖಾನೆ ತೋರಿತು. ಬೈಠಖಾನೆಯೊಳಗಿದ್ದ ಒಂದು ದೊಡ್ಡ ಕುರ್ಚಿಯ ಒಂದು ಭಾಗವೂ ಬಾಗಿಲ ಪರದೆಯ ಸೆರೆಯಲ್ಲಿ ಕಾಣಿಸುತ್ತಿತ್ತು. ಆ ಕುರ್ಚಿಯಲ್ಲಿ ನನ್ನ ಅತ್ತೆ ಭೀಷಣ–ಗಾಂಭೀರ್ಯದಿಂದ ಕುಳಿತಿರಬಹುದೆಂದು ಊಹಿಸುತ್ತಾ ಹೆದರಿಕೊಂಡೇ ನಾನು ಮುಂದೆ ನಡೆದೆನು.

ಗೇಟು ದಾಟಿ ಮುಂದೆ ಹೋದಾಗ ಬೈಠಖಾನೆಯಲ್ಲಿ ಯಾರೂ ಇಲ್ಲವೆಂದು ಕಂಡಿತು. ಅತ್ತೆ ಅಲ್ಲಿಲ್ಲದಿದ್ದರೆ ನನ್ನ ಪಾಡೇನೆಂದು ಹೆದರುತ್ತಾ ಮನೆಯ ಮಹಡಿಯ ಕಡೆ ನೋಡಿದಾಗ ಅಲ್ಲಿಂದ ಒಬ್ಬ ಗಂಡಸು ಕಿಟಕಿಯ ಆಚೆಗೆ ನಿಂತು ನನ್ನನ್ನೇ ನೋಡುತ್ತಿದ್ದಾನೆಂದು ಗೊತ್ತಾಯಿತು. ಅವನಾದರೂ ಯಾರಿರಬಹುದೆಂದು ಅವನನ್ನೇ ನೋಡಿದಾಗ ಅವನು ನಸುನಗುತ್ತಾ ನನ್ನನ್ನು ಪರೀಕ್ಷಿಸಲೋಸ್ಕರ ಒಂದು ಕಣ್ಣನ್ನು ಮುಚ್ಚಿ ಒಂದೇ ಕಣ್ಣಿನಿಂದ ತುಸು ನೋಡಿದನು. ಅವನು ದುಂಡು ಮುಖದವನಾಗಿದ್ದು, ಸದಾ ಹರ್ಷಚಿತ್ತತೆಯಲ್ಲೇ ಇರುವವನಂತೆ ತೋರುತ್ತಿದ್ದನು. ಅವನು ನನ್ನನ್ನು ಈ ರೀತಿ ಒಂದು ಕಣ್ಣಿನಿಂದ ಪರೀಕ್ಷಿಸಿ, ಇದ್ದಕ್ಕಿದ್ದ ಹಾಗೆಯೇ ಅಲ್ಲಿಂದ ಮಾಯವಾದನು.

ನಾನು ಇನ್ನೇನು ಮಾಡುವುದೆಂದು ಹೆದರಿ ಅತ್ತಿತ್ತ ನೋಡುತ್ತಿದ್ದಾಗಲೇ ನನ್ನ ಎದುರು ಒಬ್ಬಳು ಹೆಂಗುಸು ಬರುತ್ತಿದ್ದುದನ್ನು ಕಂಡೆನು. ಹೆಂಗುಸಿಗೆ ದೀರ್ಘ ದೇಹವಿತ್ತು; ನೆಟ್ಟಗೆ ನಡೆಯುತ್ತಿದ್ದಳು. ಜಟ್ಟಿಯ ಮೈಕಟ್ಟು ನಿಲುವಿಕೆಗಳಿದ್ದುವು ಅವಳಲ್ಲಿ. ಎಡಗೈಯ್ಯಲ್ಲೊಂದು ಹೂದೋಟದ ಕತ್ತರಿಯನ್ನು ಹಿಡಿದುಕೊಂಡು ಬಲಗೈಯ್ಯಲ್ಲಿದ್ದ ಕತ್ತಿಯನ್ನು ಬೀಸುತ್ತಾ ಅವಳು ನನ್ನೆದುರು ಬರತೊಡಗಿದಳು. ನನ್ನ ತಾಯಿಯು ಮಾಡುತ್ತಿದ್ದ ವರ್ಣನೆಯನ್ನು ಕೇಳಿದ್ದುದರಿಂದ ಅವಳೇ ನನ್ನ ಅತ್ತೆಯಾಗಿರಬೇಕೆಂದು ನಿಶ್ಚೈಸಿಕೊಂಡೆನು. ಅತ್ತೆಯು ನನ್ನನ್ನು ನೋಡಿ –
"ನನಗೆ ಇಲ್ಲಿ ಹುಡುಗರ ಅಗತ್ಯವಿಲ್ಲ. ಹೊರಟು ನಡಿ ಇಲ್ಲಿಂದಾ" ಎಂದು ಗರ್ಜಿಸಿ, ತನ್ನ ಶತ್ರುಗಳ ಶಿರಚ್ಛೇದನಗೈದಂತೆ ಬಲಗೈಯ್ಯಿಂದ ಕತ್ತಿಯನ್ನು ಬೀಸಿದಳು. ಇಷ್ಟು ಹೇಳಿ ಅವಳ ಸಮೀಪದಲ್ಲಿದ್ದ ಒಂದು ಗಿಡವನ್ನು ಸರಿಮಾಡತೊಡಗಿದಳು. ನನ್ನ ಧೈರ್ಯವೆಲ್ಲಾ ಇಷ್ಟರಲ್ಲಿ ಮಾಯವಾಗಿ ಹೋಗಿತ್ತು. ಆದರೆ ಅತ್ತೆಯನ್ನು ಬಿಟ್ಟರೆ ನನಗೆ ಇನ್ಯಾರೂ ಗತಿಯಿಲ್ಲವೆಂಬ ಸ್ಪಷ್ಟವಾದ ಅರಿವೇ ಈ ನನ್ನ ಅವಸ್ಥೆಯಲ್ಲಿ ಧೈರ್ಯವಾಗಿ ರೂಪಾಂತರಗೊಂಡಿತು. ನನಗೊಂದು ಹುಚ್ಚು ಆವೇಶವೇ ಬಂದಿತು. ನಾನು ಅತ್ತೆಯ ಸಮೀಪಕ್ಕೆ ಹೋಗಿ, ಅವಳನ್ನು ತುದಿ ಬೆರಳಿನಿಂದ ಮುಟ್ಟುತ್ತಾ –
"ಅಮ್ಮಾ ಎರಡು ಮಾತು" ಎಂದು ಕೇಳಿಕೊಂಡೆ.
ಅತ್ತೆ ತಟ್ಟನೆ ನೆಟ್ಟಗೆ ನಿಂತು ನನ್ನನ್ನು ಬಹುವಾದ ಜಿಗುಪ್ಸೆಯಿಂದ ನೋಡಿದಳು. ಅವಳು ಹಾಗೆ ನೋಡಿ ಮಾತು ಪ್ರಾರಂಭಿಸುವ ಮೊದಲೇ ನಾನು ಪ್ರಾರಂಭಿಸಿ –
"ಅತ್ತೆ, ಎರಡೇ ಎರಡು ಮಾತು – ನಾನು ನಿನ್ನ ಅಳಿಯ" ಎಂದಂದೆನು.
ಈ ಮಾತನ್ನು ಕೇಳಿದಾಗ ಅವಳ ಮುಖದಲ್ಲಿ ಆದ ಬದಲಾವಣೆಯನ್ನು ನಾನು ಶಬ್ದಗಳಿಂದ ವರ್ಣಿಸಲಾರೆ. ಸಾಧಾರಣ, ಇನ್ನು ಪ್ರಪಂಚದಲ್ಲಿ ಇಂಥ ಒಂದು ಆಶ್ಚರ್ಯವೇ ನಡೆದದ್ದಿಲ್ಲದೆ, ಇದೇ ಪ್ರಥಮದ್ದಾಗಿದ್ದು, ಅದನ್ನೇ ಅವಳು ಕಾಣುತ್ತಿರುವಂತೆ ಅವಳ ಮುಖ

ಕಾಣುತ್ತಿತ್ತು. ಇಂಥ ಅದ್ಭುತದ ಆಶ್ಚರ್ಯವನ್ನು ಕಂಡು – ಕೇಳಿ – ಮಾತು ಹೊರಡದೆ, ಹತಾಶಳಾಗಿ ಅಲ್ಲೇ ಕುಳಿತು ನನ್ನನ್ನು ಕಾಲಿನಿಂದ ತಲೆಯವರೆಗೂ ನೋಡಿದಳು. ಅವಳ ಈ ವರ್ತನೆಗಳೆಲ್ಲ ನನ್ನ ಗಂಡಾಂತರವೇ ಎಂದು ನಾನು ತಿಳಿಯುತ್ತಾ ಬಂದದ್ದರಿಂದ, ಹೇಗೂ ನಾನು ಆಖೈರಾಗಿ ಕಡುಗಂಡಾಂತರಕ್ಕೇ ಬೀಳುವ ಮೊದಲು, ನನ್ನ ಕಡೆಯ ಹೇಳಿಕೆಗಳನ್ನೆಲ್ಲಾ ಹೇಳಿ ಪೂರೈಸಿಬಿಡುವೆನೆಂದೂ –
"ಸಫಕ್ಕಿನ ಬ್ಲಂಡರ್‌ಸ್ಟನ್ನಿನಲ್ಲಿ ಹುಟ್ಟಿದ ಡೇವಿಡ್ ಕಾಪರ್ಫೀಲ್ಡ್ ನಾನು, ಅತ್ತೆ. ನನ್ನ ಜನನದ ದಿನ ನೀವು ನಮ್ಮ ಮನೆಗೆ ಬಂದಿದ್ದರಂತೆ – ನನ್ನ ತಾಯಿಯನ್ನು ನೀವು ನೋಡಿದ್ದೀರಂತೆ – ನನ್ನ ತಾಯಿಯು ತೀರಿಹೋದಳು. ಅನಂತರ ನನ್ನಿಂದ ನನ್ನ ಪ್ರಾಯಕ್ಕೂ ಶಕ್ತಿಗೂ ಮೀರಿದ ಕೆಲಸ ಮಾಡಿಸಿದರು. ಹಿಂಸೆ ತಡೆಯಲಾರದೆ ನಿಮ್ಮಲ್ಲಿಗೆ ಓಡಿಬಂದೆ, ಅತ್ತೆ. ನನಗೆ ಯಾವ ವಿದ್ಯೆಯನ್ನೂ ಹೇಳಿಕೊಡಲಿಲ್ಲ. ತಾಯಿಯ ಮರಣಾನಂತರ ಸುಖ ಕಾಣದ ನನ್ನಿಂದ ನನ್ನಲ್ಲಿದ್ದುದನ್ನೆಲ್ಲಾ ನಿಮ್ಮಲ್ಲಿಗೆ ಹೊರಟು ಬರುವಾಗ ದಾರಿಯಲ್ಲಿ ಎಳೆದು ತೆಗೆದರು – ನನ್ನ ಸ್ಥಿತಿ ಎಂಥದ್ದೆಂದು ನನ್ನನ್ನು ನೋಡುವಾಗಲೇ ನಿಮಗೆ ಗೊತ್ತಾಗಬಹುದು" ಎಂದು ಮೊದಲಾಗಿ ಹೇಳುತ್ತಾ ಮಾತು ಸಾಕಾಗದೆ ಕೈಕರಣದಿಂದ ವಿವರಿಸಲು ಪ್ರಯತ್ನಿಸುತ್ತಾ ದುಃಖಾತಿಶಯದಿಂದ ಅಳಲು ಪ್ರಾರಂಭಿಸಿದೆ. ಅಷ್ಟರವರೆಗೆ ನನ್ನ ದೇಹಕ್ಕೆ ತ್ರಾಣ ಕೊಡುತ್ತಿದ್ದ ಮನೋದಾರ್ಢ್ಯ ಏಕಾಏಕಿ ಮಾಯವಾಗಿ ಹೋಯಿತು. ರೋದನದಿಂದಲೇ ದುಃಖ ಶಮನವಾಗಬೇಕೆಂದು ಪ್ರಕೃತಿ ನಿಯಮವೇ ಇರಬೇಕೆಂದು ತೋರುತ್ತದೆ. ನನಗೆ ಇಷ್ಟು ಮಾತಾಡುವುದರೊಳಗೆ ದುಃಖಸಾಗರವೇ ಉಬ್ಬಿ ಮೇರೆ ಮೀರಿ ಹರಿಯುವಂತೆ ನನ್ನ ಕಣ್ಣುಗಳಿಂದ ಕಣ್ಣೀರು ಉಕ್ಕಿ ಹರಿಯಿತು.

ಇದನ್ನು ಕಂಡು ಅತ್ತೆ ನನ್ನನ್ನು ಹಿಡಿದು ಎಳೆದುಕೊಂಡೇ ಮನೆಯ ಒಳಗೆ ಹೋದಳು. ಒಂದು ಸೋಫಾದ ಮೇಲೆ ಒಂದು ಬಟ್ಟೆಯನ್ನು ಹಾಸಿ ನನ್ನನ್ನು ಅದರ ಮೇಲೆ ಕುಳ್ಳಿರಿಸಿದಳು. ಅನಂತರ ನಾಲ್ಕಾರು ಕಪಾಟುಗಳ ಬಾಗಿಲು ತೆರೆದು ಹತ್ತೆಂಟು ಕುಪ್ಪಿಗಳಿಂದ ಏನೇನೋ ದ್ರಾವಕ, ವೈನು, ಸಾಂಬಾರ ಜೀನಸುಗಳ ಸಾರ, ನೀರು ಮೊದಲಾದುವನ್ನು ಅಳತೆ ಮಾಡಿ ಮಾಡಿ ನನ್ನ ಬಾಯಿಗೆ ಹುಯ್ದಳು. ನನ್ನ ಶ್ರಮ ಪರಿಹಾರಕ್ಕಾಗಿಯೂ ಆಹಾರಕ್ಕಾಗಿಯೂ ಈ ರೀತಿ ಮಾಡಿರಬೇಕೆಂದು ನಾನು ಊಹಿಸಿದೆನು.

ಅನಂತರ ಕೆಲಸದ ಹೆಂಗುಸನ್ನು ಕರೆದು–
"ಮಿ. ಡಿಕ್ಕರು ಈ ಕಡೇ ದಯಮಾಡಿ ಒಮ್ಮೆ ಬರುವಂತೆ ಹೇಳು, ಜೇನೆಟ್" ಎಂದು ಹೇಳಿದಳು. ಆ ಕೆಲಸದ ಹೆಂಗುಸೇ ನನ್ನನ್ನು ಅಂಗಡಿಯಿಂದ ಮನೆಯವರೆಗೆ ಕರೆತಂದವಳೆಂದು ಆಗ ತಿಳಿಯಿತು.

ಸ್ವಲ್ಪ ಹೊತ್ತಿನಲ್ಲಿಯೇ ಆ ಗೃಹಸ್ಥರು ಬಂದರು. ಅವರನ್ನು ಕಂಡೊಡನೆ ಮೊದಲು ನನ್ನನ್ನು ಮಹಡಿಯ ಮೇಲಿಂದ ಒಂದು ಕಣ್ಣಿನಿಂದ ನೋಡಿದವರೇ ಅವರೆಂದು ಗೊತ್ತಾಯಿತು. ಅವರು ನನ್ನನ್ನು ಕಂಡಕೂಡಲೇ ಕಣ್ಣಿನಿಂದ ನನಗೊಂದು ಸಂಜ್ಞೆ ಮಾಡಿದರು. ಅವರು ನನ್ನನ್ನು ಈ ಮೊದಲೇ ಕಂಡಿದ್ದ ಪರಿಚಯವನ್ನು ಅತ್ತೆಗೆ ತಿಳಿಸಬಾರದೆಂದೇ ಆ ಸಂಜ್ಞೆಯ ಅರ್ಥವಿರಬೇಕೆಂದು ನಾನು ಊಹಿಸಿದೆ. ಅತ್ತೆ ಅವರನ್ನು ನೋಡಿ –
"ಮಿ. ಡಿಕ್ಕ್ ಅವರೇ! ಎಂತಹ ವಿಪತ್ತಿನಿಂದಲೂ ಪಾರಾಗಲು ತಕ್ಕಂಥ ಆಲೋಚನೆಗಳನ್ನು ಮನಸ್ಸು ಮಾಡಿದ ಮಾತ್ರಕ್ಕೆ ಹೇಳಬಲ್ಲ ನೀವು ಈಗ ನನಗೆ ಬಂದೊದಗಿರುವ ಕಷ್ಟ ಪರಿಹಾರಕ್ಕೊಂದು ಮಾರ್ಗವನ್ನು ಹೇಳಬೇಕು. ನಿಮ್ಮ ವಾಡಿಕೆಯ ತಮಾಷೆಗಳನ್ನೆಲ್ಲ ಬದಿಗಿಟ್ಟು ಒಂದು ಸಲಹೆಯನ್ನು ಕೊಡಿ, ನೋಡೋಣ" ಅಂದಳು.

ಮಿ. ಡಿಕ್ಕರು ಪುನಃ ನನ್ನನ್ನು ನೋಡಿ, ಆ ಮೊದಲಿನ ಸಂಜ್ಞೆಯನ್ನೇ ಮಾಡಿ, ಅತ್ತೆ ಅವರ ಮೇಲೆ ಆವಾಹನೆ ಮಾಡಿದ್ದ ಜ್ಞಾನವನ್ನು ಮುಖದಲ್ಲಿ ತೋರಿಸಲೋಸ್ಕರ, ಗಾಂಭೀರ್ಯ ತಾಳಿ –
"ಒಂದಾಲೋಚನೆ ತಾನೆ? ಏನಾಗಬೇಕು, ಕೇಳಿ" ಅಂದರು.
ಮಿ. ಡಿಕ್ಕರು ಕೊಟ್ಟ ಉತ್ತರದಿಂದ ಅತ್ತೆ ತೃಪ್ತಿಪಟ್ಟು, ಅವರ ಅಭಿಪ್ರಾಯ ಕೊಡಲು ಅವರಿಗೆ ಬೇಕಾಗುವ ಸಮಸ್ಯೆಗಳನ್ನೆಲ್ಲ ವಿವರಿಸುವುದು ಅಗತ್ಯವೆಂದು, ಈ ರೀತಿ ಹೇಳತೊಡಗಿದಳು –
"ನಿಮ್ಮ ಶಕ್ತಿ ಎಷ್ಟಿದೆ, ನಿಮ್ಮ ಯೋಗ್ಯತೆ ಏನು – ಎಂಬುದನ್ನು ನೀವು ತಿಳಿದಿರುವುದಕ್ಕಿಂತಲೂ ಹೆಚ್ಚು ನಾನು ತಿಳಿದಿರುವೆನು. ಇತ್ತ ನೋಡಿ, ಇಲ್ಲಿಯವರೆಗೆ ಓಡಿ ಬಂದು ನಿಂತಿದ್ದಾನೆ ದೊಡ್ಡ ಡೇವಿಡ್ ಕಾಪರ್ಫೀಲ್ಡನ ಮಗ – ನಾನು ಆಗಾಗ ನಿಮ್ಮ ಹತ್ತಿರ ಪ್ರಸ್ತಾಪಿಸುತ್ತಿದ್ದೆನಲ್ಲಾ, ಅವನ ಮಗ. ಎಳೆಯ ಪ್ರಾಯದ ಈ ಡೇವಿಡ್ ಕಾಪರ್ಫೀಲ್ಡನು ತಂದೆಯ ಹಾಗೆಯೇ ಕಾಣುತ್ತಾನೆ. ಇವನ ಬುದ್ಧಿಯೂ ತಂದೆಯ ಬುದ್ಧಿಯಷ್ಟೇ ಇರಬೇಕೆಂದು ತೋರುತ್ತದೆ. ಇವನು ಸಾಕಿದವರಿಂದ ಹೇಳದೇ ಓಡಿ ಬಂದಿದ್ದಾನೆ. ಇವನ ತಂಗಿ ಆಗಿದ್ದರೆ, ಅಂದರೆ ಬೆಟ್ಸಿ ಟ್ರಾಟೂಡ್ ಕಾಪರ್ಫೀಲ್ಡಳು ಆಗಿದ್ದರೆ, ಹೀಗೆ ಓಡಿಬರುತ್ತಿರಲಿಲ್ಲ. ಈ ಗಂಡಾಂತರದ ಹುಡುಗ ನಮ್ಮಲ್ಲಿಗೆ ಬಂದಿದ್ದಾನಲ್ಲ. ಈಗ ನಾನೇನು ಮಾಡಬೇಕು, ಹೇಳಿ."

ಈ ಉದ್ದದ ಭಾಷಣವನ್ನು ಕೇಳಿ ಮಿ. ಡಿಕ್ಕರು ಸ್ವಲ್ಪ ಗಾಬರಿಗೊಂಡರು. ಇದನ್ನು ಕಂಡು ಅತ್ತೆ – ಇವರನ್ನು ಸರಿದಾರಿಗೆ ತರಲೋಸ್ಕರ – ಪುನಃ ಅಂದಳು –
"ಜವಾಬ್ದಾರಿ ದೊಡ್ಡದು – ನಿಮ್ಮಿಂದ ಅಸಾಧ್ಯವೆಂದು ತಪ್ಪಿಸಬಾರದು – ಸ್ವಲ್ಪ ಆಲೋಚಿಸಿ, ಚುಟುಕಾಗಿ ಉತ್ತರ ಕೊಡಿ."

ಮಿ. ಡಿಕ್ಕರು ಮಧ್ಯಪ್ರಾಯ ದಾಟಿದವರು. ಅವರ ತಲೆ ನರೆತಿತ್ತು. ಅವರಿಗಿದ್ದ ಒಂದು ಚಿಕ್ಕ ಕೊರತೆಯೆಂದರೆ ಅವರು ಎಳೆಮಕ್ಕಳಂತೆ ಸದಾ ಮುಗುಳ್ನಗೆಯಲ್ಲೇ ಇರುತ್ತಿದ್ದುದು ಮಾತ್ರ. ಈ ಮುಗುಳ್ನಗೆಯೊಂದನ್ನು ಬಿಟ್ಟಿದ್ದರೆ ಅವರ ಮುಖ ಬಹು ಗಂಭೀರತರದ್ದೇ ಆಗಿರುತ್ತಿತ್ತು. ಅವರು ಬಹು ಬುದ್ಧಿವಂತರಂತೆಯೂ ತೋರುತ್ತಿದ್ದರು. ಅವರ ಮೈಕಟ್ಟು, ನಿಲುವೂ – ಈ ಎಡೆಬಿಡದ ಹಾಸ್ಯ ಸ್ವಭಾವದ ಮುಗುಳ್ನಗೆಯೊಂದರ ಹೊರತು – ಬಹು ಯೋಗ್ಯ ಮಟ್ಟದ್ದೇ ಆಗಿತ್ತು. ಅತ್ತೆ ಪುನಃ ಎಚ್ಚರಿಸಿದ ಮಾತುಗಳಿಂದ ಅವರು ಸ್ವಲ್ಪ ಗಂಭೀರತೆ ತಾಳಿದರು. ನನ್ನನ್ನು ಚೆನ್ನಾಗಿ ನೋಡಿದರು. ಅರೆಕಣ್ಣು ಮುಚ್ಚಿಕೊಂಡು ಅಲೋಚಿಸಿದರು. ಕೊನೆಗೆ ಹಠಾತ್ತಾಗಿ ಆಲೋಚನೆ ಸ್ಫುರಿಸಿದಂತೆ ನುಡಿದರು –
"ಓಹೋ, ಡೇವಿಡ್ಡನ ಮಗನೇ ಇವನು? ಸ್ನಾನ ಮಾಡಿಸಿ, ಮೊದಲು."

ಅತ್ತೆಗೆ ಒದಗಿದ್ದ ಧರ್ಮಸಂಕಟವೂ ಮಾನಸಿಕ ಅಂಧಕಾರವೂ ಈ ಜ್ಞಾನ ಕಿರಣದಿಂದ ನಾಶವಾದುವು. ನನ್ನ ಸ್ನಾನದ ಏರ್ಪಾಡುಗಳನ್ನು ಮಾಡಿಸತೊಡಗಿದರು. ಬಿಸಿನೀರು ಕಾಯುವವರೆಗೆ ನನ್ನ ಸೋಫಾದ ಎದುರು ಅತ್ತೆ ಅತ್ತ ಇತ್ತ ತುಂಬಾ ಆಲೋಚನಾಪರವಶರಾಗಿ ತಿರುಗಾಡಿದರು. ಅವರ ತಿರುಗಾಟ ಕಾಲದಲ್ಲಿ ಅವರ ಮುಖದಿಂದ ಆಶ್ಚರ್ಯ, ಭಯ, ದೂಷ್ಯ ಮೊದಲಾದ ಭಾವನೆಗಳ ಉದ್ಗಾರ ಹೊರಹೊಮ್ಮುತ್ತಿತ್ತು. ನನಗೆ ಬಹುಮಟ್ಟಿನ ದೇಹಸುಖ ಆಗಲೇ ದೊರಕಿದ್ದರೂ ನನ್ನ ಅವಸ್ಥೆ ಮುಂದೇನಾಗಬಹುದೋ ಎಂದು ಮನಸ್ಸಿನಲ್ಲಿ ಕಷ್ಟಪಡುತ್ತಾ ನಾನು ಸುತ್ತಲಿನ ಎಲ್ಲಾ ವಸ್ತುಗಳನ್ನೂ ನೋಡುತ್ತಾ ಕುಳಿತಿದ್ದೆ.

ಅತ್ತೆ ದೃಢಕಾಯಳು. ಸಿಪಾಯಿಯಂತೆ ನೆಟ್ಟಗೆ ನಿಂತು, ಸಿಪಾಯಿಯಂತೆಯೇ ನಡೆಯುತ್ತಿದ್ದಳು. ಅಧಿಕಾರ, ಶಿಸ್ತುಗಳನ್ನು ಜಾರಿ ಮಾಡಬಲ್ಲಂಥ ಶಕ್ತಿ ಅವಳ ಮುಖದಲ್ಲಿ ಬಿಂಬಿಸುತ್ತಿತ್ತು. ಅವಳು ರೂಪವಂತಳೂ ಆಗಿದ್ದಳು. ತುಂಬಾ ಗಾಂಭೀರ್ಯಯುತಳೂ ಆಗಿದ್ದಳು. ಅವಳ ಈ ಸ್ಥಿರ ಭಾವನೆಗಳ ಮರೆಯಲ್ಲಿ ದುಃಖವೂ ಅನುಕಂಪವೂ ಕರುಣೆಯೂ ಅಡಗಿದ್ದುವೆಂಬುದನ್ನು ನಾನು ಅವಳ ಅಂದಿನ ವರ್ತನೆಗಳಿಂದ ತಿಳಿದುಕೊಂಡೆನು. ಅವಳ ದುಸ್ತುಗಳೆಲ್ಲ ಬಹು ಚೊಕ್ಕಟವಾಗಿ, ಶುಭ್ರವಾಗಿದ್ದುವು. ಅನಾವಶ್ಯಕವಾದ, ಅಥವಾ ಆಡಂಬರದ ಯಾವ ವಸ್ತುವನ್ನೂ ಅವಳು ಧರಿಸಿರಲಿಲ್ಲ. ಗಂಡುಸರಿಟ್ಟುಕೊಳ್ಳುವಂಥ ಗಡಿಯಾರ ಅವಳ ಅಂಗಿ ಜೇಬಿನಲ್ಲಿತ್ತು.

ನಾನು ಕುಳಿತಿದ್ದ ಕೋಣೆಯೂ ಬಹು ಚೊಕ್ಕಟವಾಗಿತ್ತು. ಅಲ್ಲಿನ ಎಲ್ಲ ವಸ್ತುಗಳೂ ಬಹು ಕ್ರಮವಾಗಿಯೇ ಇಡಲಾಗಿದ್ದುವು. ನನ್ನ ಸ್ನಾನದ ಏರ್ಪಾಡು ನಡೆಸುತ್ತಿದ್ದ ಕೆಲಸದ ಹೆಂಗುಸು ಜೇನೆಟ್ಟಳು ಹದಿನೆಂಟು– ಹತ್ತೊಂಬತ್ತು ವರ್ಷದ ಹೃಷ್ಟಪುಷ್ಟಳಾದ ಸುಂದರ ತರುಣಿ. ಜೇನೆಟ್ಟಳು ಅತ್ತೆಯ ಶಿಸ್ತನ್ನು ಚೆನ್ನಾಗಿ ಅಭ್ಯಸಿಸಿದ್ದು, ಅವಳ ನಡಿಗೆ, ನುಡಿ, ವರ್ತನೆಗಳೆಲ್ಲ ಅತ್ತೆಯ ನಡೆ ನುಡಿ ವರ್ತನೆಗಳನ್ನೇ ಹೋಲುತ್ತಿದ್ದುವು.

ಸ್ವಲ್ಪ ಸಮಯದಲ್ಲಿ ಬಿಸಿನೀರು ತಯಾರಾಯಿತು. ನನಗೆ ಜೇನುಮಿಶ್ರಿತ ಗಂಜಿಯನ್ನು ಅತ್ತೆಯೇ ಚಮಚದಲ್ಲಿ ಕುಡಿಸಿದಳು. ನಾನು ಆಹಾರವಿಲ್ಲದೇ ಕೆಲವು ದಿನ ಕಳೆದಿರಬೇಕೆಂದು ಊಹಿಸಿಯೇ ಅತ್ತೆ ಈ ರೀತಿಯ ಮುಂಜಾಗ್ರತೆ ವಹಿಸಿರಬೇಕೆಂದು ನಾನು ಊಹಿಸುತ್ತೇನೆ. ಹಾಗೆ ನನಗೆ ಗಂಜಿ ಕುಡಿಸುತ್ತಿದ್ದ ಮಧ್ಯದಲ್ಲಿ ಅತ್ತೆ ಹಠಾತ್ತಾಗಿ –
"ಜೇನೆಟ್, ಕತ್ತೆಗಳು" ಎಂದು ಒಂದು ವಿಧದ ಉದ್ಗಾರವನ್ನೇ ಮಾಡಿದಳು. ಅಷ್ಟೂ ಅಲ್ಲದೆ, ಗಂಜಿ ಚಮಚ ಸಮೇತವಾಗಿ ಅಂಗಳಕ್ಕೆ ಧುಮುಕಿದಳು. ಮಹಡಿಯ ಮೇಲಿಂದ ಓಡಿಬಂದು ಜೇನೆಟ್ಟಳೂ ಅತ್ತೆಯ ಜತೆ ಸೇರಿದಳು. ರಸ್ತೆಗೂ ಈ ಮನೆಯ ಮೂಂದಿನ ಹೂದೋಟಕ್ಕೆ ಮಧ್ಯವಿದ್ದ ಮೈದಾನವನ್ನು ಅತ್ತೆಯು ಬಹು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುತ್ತಿದ್ದಳಾದ್ದರಿಂದ, ಆ ಮೈದಾನಕ್ಕೆ ಯಾವ ಪ್ರಾಣಿಯಾದರೂ ಪ್ರವೇಶವಾದೊಡನೆ ಅವಳಿಗೆ ಬಹುವಾದ ಕೋಪ ಬರುತ್ತಿತ್ತು. ಹೀಗೆ ಅತ್ತೆ ಮತ್ತೂ ಜೇನೆಟ್ಟರು ಆ ಮೈದಾನಕ್ಕೆ ಆಗ ತಾನೆ ಕಾಲಿಟ್ಟಿದ್ದ ಎರಡು ಕತ್ತೆಗಳನ್ನು ಓಡಿಸಿ ಮನೆಗೆ ಬರುವಾಗ ಬಿಸಿನೀರು ಕಾದಿತ್ತು.

ನನ್ನನ್ನು ಬಿಸಿನೀರಲ್ಲಿ ತುಂಬಾ ಹೊತ್ತು ಸ್ನಾನ ಮಾಡಿಸಿದರು. ಸ್ನಾನದಿಂದ ನನಗೆ ಸುಖವೂ ಆಯಿತು. ಅನಂತರ ಮೈಗೆಲ್ಲಾ ಬಲವಾಗಿ ಬಟ್ಟೆ ಸುತ್ತಿ ಒಂದು ಸೋಫಾದ ಮೇಲೆ ಮಲಗಿಸಿದರು. ನನಗೆ ಸುಖವಾದ ನಿದ್ರೆ ಬಂತು. ನಾನು ನಿದ್ರೆ ಮಾಡಿದ್ದಾಗ ಅತ್ತೆ ನನ್ನನ್ನೇ ನೋಡುತ್ತಾ "ಪಾಪ ಬಹು ದಣಿದು ಹೋದ, ಹುಡುಗ – ಅನ್ನವಿಲ್ಲದೆ ಕೃಶವಾಗಿ ಹೋದ" ಎಂದಂತೆ ಸ್ವಪ್ನವನ್ನು ಕಂಡೆ. ಅದು ಸ್ವಪ್ನವೂ ಇರಬಹುದು – ಅಥವಾ ನಿಜವಾಗಿಯೂ ನಡೆದದ್ದನ್ನೇ ನಾನು ಅರೆನಿದ್ರೆಯಲ್ಲಿ ಗ್ರಹಿಸಿದ್ದೂ ಇರಬಹುದು. ನಾನು ನಿದ್ರೆಯಿಂದ ಎಚ್ಚತ್ತು ನೋಡುವಾಗ ಅತ್ತೆ ಕಿಟಕಿಯ ಸಮೀಪದಲ್ಲಿ ನಿಂತು ಸಮುದ್ರವನ್ನು ನೋಡುತ್ತಿದ್ದಳು.

ನನಗೆ ಎಚ್ಚರವಾದ ಮೇಲೆ ಊಟವಾಯಿತು. ಊಟ ಬಹು ರುಚಿಯಾಗಿತ್ತು. ಊಟವಾದನಂತರ ನನಗೆ ದ್ರಾಕ್ಷಾರಸಕ್ಕೆ ಬ್ರೇಂಡಿಯನ್ನು ಮಿಶ್ರ ಮಾಡಿಕೊಟ್ಟರು. ಮಿ. ಡಿಕ್ಕರ ಸಮಕ್ಷಮದಲ್ಲಿ ಅತ್ತೆ ನನ್ನ ಜೀವನ ವೃತ್ತಾಂತವನ್ನೆಲ್ಲ ವಿಚಾರಿಸಿ ಕೇಳಿದಳು. ನನಗೆ ತಿಳಿದದ್ದನ್ನೆಲ್ಲಾ ವಿವರವಾಗಿ ತಿಳಿಸಿದೆನು. ನನ್ನ ತಂದೆ, ತಾಯಿ ಇಬ್ಬರಿಗೂ ಬುದ್ಧಿ ಕಮ್ಮಿಯಾಗಿದ್ದುದರಿಂದಲೇ ನನ್ನ ಹೆಡ್ಡ ತಂದೆ ಬುದ್ಧಿಯಿಲ್ಲದ ನನ್ನ

ತಾಯಿಯನ್ನು ಮದುವೆಯಾದದ್ದೆಂತಲೂ ನನ್ನ ತಾಯಿ ಹೆಡ್ಡಳಾಗಿದ್ದುದರಿಂದಲೇ ಪುನಃ ಆ ಕ್ರೂರಿ – ಮರಣಕಾರಕನೆಂದು ಹೆಸರು ಇರುವ – ಎರಡನೆ ಗಂಡನನ್ನು ಮದುವೆಯಾದುದೆಂತಲೂ ಅತ್ತೆ ಹೇಳಿಕೊಂಡಳು.

ಅತ್ತೆ ಹಿಂದಿನ ನೆನವರಿಕೆಗಳನ್ನು ಮಾಡುತ್ತಾ–
"ಆ ಹುಚ್ಚು ಹುಡುಗಿ – ಇವನ ತಾಯಿ – ಬೇಕಾದ ಒಂದು ಹೆಣ್ಣು ಹುಡುಗಿಯನ್ನು ಹೆರುವ ಬದಲು ಈ ಪೋರ – ಸಾಕಿದವರನ್ನು ಬಿಟ್ಟೋಡುವ ಕಳ್ಳನನ್ನು ಹೆತ್ತಳು. ಮತ್ತೆ ಅಲ್ಲೊಬ್ಬ ತಲೆ ಓರೆಮಾಡಿ ನಡೆಯುವ – ಹಕ್ಕಿಗಿದ್ದಷ್ಟೂ ಮಿದುಳಿಲ್ಲದ – ಡಾಕ್ಟರನು ಗಂಡು ಹುಟ್ಟಿತೂ ನಾನು ಹುಟ್ಟಿಸಿದ್ದೂ ಎಂದನ್ನುವಂತೆ ಹಾರಾಡುತ್ತಿದ್ದ. ಇವರ ಈ ಕೂಟಕ್ಕೆ ಆ ಕಾಡು ಕುರುಬಿ ಪೆಗಟಿಯೂ ಬಹು ಯೋಗ್ಯಳೇ ಆಗಿದ್ದಳು. ಆ ಯಮನಂತಿದ್ದ – ಮಾರಣಕಾರಿ ನಾಮಧೇಯನನ್ನು – ಯಜಮಾನಿಗೆ ಮದುವೆ ಮಾಡಿಸಿ, ತಾನೊಬ್ಬ ರಾಕ್ಷಸನನ್ನು ಪತಿಯೆಂದು ಜತೆ ಸೇರಿ ಓಡಿದಳು. ಅಂಥ ಸ್ಥಳದಲ್ಲಿ ಇಂಥ ಬಾಲಕ ಜನಿಸಿದ್ದು ಆಶ್ಚರ್ಯವಲ್ಲ" ಎಂದು ಮೊದಲಾಗಿ ಸ್ವಲ್ಪ ದುಃಖದಿಂದಲೇ ಮಾತಾಡಿದಳು.

ನಾನು ನಿರ್ವಾಹವಿಲ್ಲದೆ ಪೆಗಟಿಯ ಯೋಗ್ಯತೆಯನ್ನು ಸ್ವಲ್ಪ ಹೊಗಳಿದೆ. ಅದನ್ನು ಕೇಳಿ ಅತ್ತೆಗೆ ಸ್ವಲ್ಪ ಸಂತೋಷವಾಗಿರಬೇಕು. ಅವಳು ಅಂದಳು –
"ಚಿಂತೆಯಿಲ್ಲ ಈ ಹುಡುಗ, ಆ ತಂದೆತಾಯಿಗಳಿಗಿಂತ ಸ್ವಲ್ಪ ಬುದ್ಧಿ ಹೆಚ್ಚಿರುವನೆಂದು ತೋರುತ್ತದೆ – ಸಾಕಿದವರನ್ನು ಸಮರ್ಥಿಸುವ ಬುದ್ಧಿಯಾದರೂ ಇವನಿಗಿದೆ."

ಇಷ್ಟು ಹೇಳುತ್ತಿದ್ದ ಹಾಗೆಯೇ ಅತ್ತೆಗೆ ಮಹತ್ತರವಾದ ಕೋಪ ಬಂದು –
"ಜೇನೆಟ್ ಕತ್ತೆಗಳು" ಎಂದಂದುಕೊಂಡು ಮೈದಾನಕ್ಕೆ ಓಡಿದಳು. ಜೇನಟ್ಟಳು ಜತೆ ಸೇರಿದಳು. ಕೆಲವು ಹುಡುಗರು ಕತ್ತೆಗಳ ಮೇಲೆ ಸವಾರಿ ಮಾಡಿಕೊಂಡು ಮನೆಯೆದುರಿನ ಮೈದಾನಕ್ಕೆ ಬಂದಿದ್ದರು. ಇಬ್ಬರೂ ಸೇರಿ ಆ ಹುಡುಗರನ್ನೂ ಕತ್ತೆಗಳನ್ನೂ ಹೊಡೆದೋಡಿಸಿದರು. ಆ ಸ್ಥಳ ಸರ್ಕಾರದ್ದಾಗಿತ್ತೋ ಅತ್ತೆಯದೋ ಎಂಬ ಸಂಶಯ ನನಗಿದ್ದರೂ ಅದನ್ನು ಕಾಪಾಡುವ ಹಕ್ಕು ತನ್ನದೆಂಬುದಾಗಿ ಅತ್ತೆ ತಿಳಿದಿದ್ದಂತೆ ಕಂಡುಬಂತು.
'ಕತ್ತೆ ನಿಷೇಧ' ಕಾನೂನನ್ನು ಸರ್ಕಾರವು ತಂದು ಕತ್ತೆಗಳನ್ನು ಸಾಕದಂತೆ ಏಕೆ ಮಾಡಲಿಲ್ಲವೆಂದು ಸರ್ಕಾರವನ್ನೇ ಶಪಿಸುತ್ತಾ ಅತ್ತೆ ಮರಳಿ ಬಂದು ತನ್ನ ಕುರ್ಚಿಯಲ್ಲಿ ಕುಳಿತಳು.

ಅನಂತರ ಮಿ. ಡಿಕ್ಕರನ್ನು ಕರೆದು–
"ನಿಮಗೆ ಇವನ ಕಥೆಯೆಲ್ಲಾ ಗೊತ್ತಿದೆಯಷ್ಟೆ – ಈವರೆಗೆ ಇವನ ಚರಿತ್ರೆಯನ್ನೆಲ್ಲ ಕೇಳಿದಿರಷ್ಟೆ. ಮುಂದೆ ಇವನನ್ನೇನು ಮಾಡಬೇಕು – ತಿಳಿಸಿರಿ. ಮನಸ್ಸು ಮಾಡಿದರೆ ಎಂಥ ಸಂದರ್ಭದಲ್ಲೂ ಯೋಗ್ಯ ಸಲಹೆ ಕೊಡಬಲ್ಲ ನೀವು ಉದಾಸೀನಮಾಡದೆ ಹೇಳಬೇಕು" ಎಂದು ಅತ್ತೆ ಹೇಳಿದಳು.
ತತ್‌ಕ್ಷಣವೇ ಮಿ. ಡಿಕ್ಕರು ಗಂಭೀರ ಮುಖಮುದ್ರೆಯನ್ನು ತಂದುಕೊಂಡು–
"ಡೇವಿಡ್ಡನ ಮಗನಲ್ಲವೇ – ಏನು ಮಾಡಬೇಕೆಂದು ಕೇಳಿದ್ದು?" ಎಂದು ಪ್ರಶ್ನಿಸಿದರು.
"ಹೌದು" ಎಂದಳು ಅತ್ತೆ.
"ಹಾಸಿಗೆಯಲ್ಲಿ ಮಲಗಿಸು" ಅಂದರು ಮಿ. ಡಿಕ್ಕರು. ಮಿ. ಡಿಕ್ಕರ ಮಾತಿಗೆ ಅಪ್ಪೀಲೇ ಇರಲಿಲ್ಲ. ಒಬ್ಬ ಕೈದಿಯನ್ನು ಸಾಗಿಸುವಂತೆ ಮುಂದೆ ಅತ್ತೆ, ಹಿಂದೆ ಜೇನೆಟ್ಟಳು ನಿಂತು, ಮಧ್ಯದಲ್ಲಿ ನನ್ನನ್ನು ನಿಲ್ಲಿಸಿ, ಮಹಡಿಯ ಮೇಲಕ್ಕೆ ಕರೆದುಕೊಂಡು ಹೋದರು. ಅಲ್ಲಿ ಮೊದಲೇ ತಯಾರಿಸಿಟ್ಟಿದ್ದ ಹಾಸಿಗೆಯಲ್ಲಿ ನನ್ನನ್ನು ಮಲಗಿಸಿದರು. ಅಷ್ಟರಲ್ಲೇ ಅತ್ತೆ ಬಹು ಗಾಬರಿಯಿಂದ, ಕತ್ತೆಗಳನ್ನು ಕಂಡಷ್ಟೇ ಗಾಬರಿಯಿಂದ, ಮಹಡಿಗೆ ಬರುತ್ತಿದ್ದ ದುರ್ವಾಸನೆಗೆ ಕಾರಣವೇನೆಂದು ತಿಳಿದು ಬರಲು ಜೇನೆಟ್ಟಳಿಗೆ ಆಜ್ಞೆಯಿತ್ತಳು. ಜೇನೆಟ್ಟಳು ಮಾತ್ರ ಗಾಬರಿಗೊಳ್ಳದೆ ಅದು ನನ್ನ ಸಮಸ್ತ ಬಟ್ಟೆಗಳನ್ನು ಬಚ್ಚಲ ಒಲೆಯಲ್ಲಿ ಸುಟ್ಟಿರುವುದರಿಂದ ಬರುವ ದುರ್ವಾಸನೆಯೆಂದು ಸಮಾಧಾನಪಡಿಸಿದಳು. ಅನಂತರ ಅತ್ತೆ ನನ್ನ ಕೋಣೆಯಲ್ಲೊಂದು ಮಯಣಬತ್ತಿಯನ್ನು ಹೊತ್ತಿಸಿಟ್ಟು, ಬಾಗಿಲು ಹಾಕಿಕೊಂಡು, ಹೊರಗಡೆಯಿಂದ ಬೀಗ ಬಂದೋಬಸ್ತು ಮಾಡಿಕೊಂಡು ಹೋದಳು. ಸಾಕಿದವರ ಮನೆಯಿಂದ ಕದ್ದೋಡುವ ದುಷ್ಟ ಚಟ ನನಗಿರಬೇಕೆಂದು ತಿಳಿದು ಅತ್ತೆ ಹಾಗೆ ಮುಂಜಾಗ್ರತೆ ಮಾಡಿರಬೇಕೆಂದು ನಾನು ಊಹಿಸಿದೆನು.

ನಾನು ಮಲಗಿದ್ದ ಕೋಣೆ ಚೊಕ್ಕಟವಾಗಿಯೂ ಬಹು ಅನುಕೂಲವಾಗಿಯೂ ಇತ್ತು. ನನ್ನ ಹಾಸಿಗೆಯ ಬದಿಯ ಕಿಟಕಿಯಿಂದ ಸಮುದ್ರ ಕಾಣಿಸುತ್ತಿತ್ತು. ಸಮುದ್ರಕ್ಕಿಂತ ಸ್ವಲ್ಪ ಎತ್ತರದಲ್ಲಿ ಚಂದ್ರನಿದ್ದುದರಿಂದ, ಚಂದ್ರ ಸಮುದ್ರದಲ್ಲಿ ಪ್ರತಿಫಲಿತವಾಗಿ, ಸಮುದ್ರ ಒಂದು ವಿಶಾಲವಾದ ಕನ್ನಡಿಯಂತೆ ತೋರುತ್ತಿತ್ತು. ಚಂದ್ರನ ಸೌಮ್ಯವಾದ ಬೆಳಕೂ ವಿಶಾಲ, ಶಾಂತ ಸಮುದ್ರದ ಚಂದ, ರಾತ್ರಿಯ ತಂಪಾದ, ಹದವಾಗಿ ಬೀಸುತ್ತಿದ್ದ ಗಾಳಿ, ಇವೆಲ್ಲವೂ ನನ್ನ ಮನಸ್ಸಿಗೆ ಬಹುವಾದ ಆನಂದವನ್ನು ಕೊಟ್ಟವು. ನನ್ನ ಕೋಣೆಯಲ್ಲಿನ ದೀಪ ಉರಿದು ಮುಗಿದಿತ್ತಾದುದರಿಂದ, ದೈವದತ್ತವಾದ ಚಂದ್ರ ಕಿರಣಗಳೇ ನನಗೆ ಬೆಳಕಾಗಿ ಒಳಗೆ ಬರುತ್ತಿದ್ದುವು. ನನ್ನ ಅಂತಃಪ್ರೇರಣೆಯಿಂದಲೇ ನಾನು

ನನ್ನ ಹಾಸಿಗೆಯಲ್ಲೇ ಎದ್ದು ಕುಳಿತು, ಮೊಣಕೈಯ್ಯನ್ನು ಹಾಸಿಗೆಯಲ್ಲಿ ಊರಿಕೊಂಡು ಸಮುದ್ರವನ್ನು ನೋಡಿದೆ. ಹಿಂದಿನ ನಾಲ್ಕಾರು ದಿನಗಳ ಶ್ರಮವನ್ನೂ ಅಂದಿನ ಅತ್ತೆಯ ಪ್ರೇಮಪೂರಿತ ಉಪಚಾರಗಳನ್ನೂ ಗ್ರಹಿಸುತ್ತಾ ಕೃತಜ್ಞತೆ, ಪ್ರೇಮ, ದೇವರಲ್ಲಿ ನಂಬಿಕೆ ಮೊದಲಾದ ಸದ್ಭಾವಗಳು ನನ್ನ ಮನಸ್ಸಿನಲ್ಲಿ ಮೂಡಿದುವು. ನನ್ನೆದುರು ತೋರಿಬರುತ್ತಿದ್ದ ಮಹಾ ಕನ್ನಡಿಯಲ್ಲಿ ನನ್ನ ಭವಿಷ್ಯ ಏನಿರಬಹುದೆಂದು ನೋಡಲು ಪ್ರಯತ್ನಿಸಿರುವಂತೆ, ಮುಂದೆ ನನ್ನನ್ನು ಏನು ಮಾಡುವರು, ನನ್ನ ಜೀವನ ಏನಾಗಬಹುದೆಂದು ಯೋಚಿಸತೊಡಗಿದೆ. ಸಮುದ್ರದಲ್ಲಿ ಪ್ರತಿಫಲಿತವಾಗಿ ಬರುತ್ತಿದ್ದ ಚಂದ್ರ ಪ್ರಭೆಯಲ್ಲೇ ನನ್ನ ತಾಯಿ ನಿಂತು ನನ್ನನ್ನೇ ನೋಡುತ್ತಿರುವಂತೆಯೂ ದೇವರು, ದೇವರ ಅಪಾರ ಕರುಣಾಕಟಾಕ್ಷಗಳೂ ಇವೆಲ್ಲ ನನ್ನನ್ನು ಸಮಾಧಾನ ಮಾಡುತ್ತಿರುವಂತೆಯೂ ನನಗೆ ಭಾಸವಾಗುತ್ತಿತ್ತು. ಆ ಸಂದರ್ಭ, ಸನ್ನಿವೇಶಗಳನ್ನು ತಂದುಕೊಟ್ಟಿದ್ದ ದೇವರು ನಿರಾಶ್ರಿತರ, ದೀನದರಿದ್ರರ, ಅನಾಥರ ಕುರಿತು ಅನುಕಂಪ, ದಯಾ, ವಾತ್ಸಲ್ಯ ಮೊದಲಾದ ಗುಣಗಳು ನನ್ನಲ್ಲಿ ಸದಾ ಉಂಟಾಗುವಂತೆ ಅನುಗ್ರಹಿಸಬೇಕೆಂದು ದೇವರನ್ನು ಪ್ರಾರ್ಥಿಸಿಕೊಂಡೆನು. ಹೀಗೆ ಸಮುದ್ರದ ಕಡೆಯ ತೇಜೋಮಯ ದೃಶ್ಯವನ್ನು ನೋಡುತ್ತಾ ಅಂದಿನ ಸುಖಾಂತ ಸನ್ನಿವೇಶಗಳನ್ನು ಗ್ರಹಿಸುತ್ತಾ ಮೃದುವಾಗಿ ಮೈ ಮರೆಯುತ್ತಾ ಸ್ವಪ್ನಮಯ ಪ್ರಪಂಚದಲ್ಲಿ ತೇಲಿಹೋದೆನು.

ಅಧ್ಯಾಯ ಹದಿನಾಲ್ಕು

ಮರುದಿನ ಬೆಳಗ್ಗೆ ಎದ್ದು ನಾನು ಊಟದ ಕೋಣೆಗೆ ಹೋಗುವಾಗ ಅತ್ತೆ ಬಹುವಾದ ಆಲೋಚನೆಯಲ್ಲಿ ಮಗ್ನಳಾಗಿ ಅಲ್ಲಿ ಕುಳಿತಿದ್ದಳು. ಆಲೋಚನೆಯಿಂದಲೇ ಅವಳು ಬಾಹ್ಯದ ವಿಷಯಗಳನ್ನು ಮರೆತು ಮೇಜಿನ ಮೇಲಿದ್ದ ಚಾ ಪಾತ್ರವನ್ನು ಮಗುಚಿ, ಮೇಜೆಲ್ಲಾ ಒದ್ದೆಯಾಗಿದ್ದುದೂ ಅವಳಿಗೆ ಗೊತ್ತಾಗಿರಲಿಲ್ಲ. ನನ್ನನ್ನು ಕುರಿತೇ ಅವಳು ಹಾಗೆ ಯೋಚಿಸುತ್ತಿರಬೇಕೆಂದು ನಾನು ಊಹಿಸಿದೆನು. ಅವಳ ಎದುರೇ ನಾನು ಕುಳಿತು ಊಟ ಮಾಡಿದರೂ ನನ್ನ ಕಡೆಗೇ ಅವಳು ನೋಡುತ್ತಿದ್ದರೂ ಅವಳು ನನ್ನನ್ನು ಗುರುತಿಸಲಿಲ್ಲವೆಂಬುದು ಖಂಡಿತ. ನಾನು ಮೇಜಿನ ಇನ್ನೊಂದು ಬದಿಯಲ್ಲಿ ಅವಳ ಎದುರೇ ಕುಳಿತಿದ್ದರೂ ಅವಳು ಮಾತ್ರ ನನ್ನನ್ನು ಅಲ್ಲಿದ್ದವನಂತೆ ಗ್ರಹಿಸದೆ, ನಾನು ಬ್ಲಂಡರ್ಸ್ಟನ್ನಿನಲ್ಲಿದ್ದಂತೆಯೂ ನನ್ನ ಚರಿತ್ರೆಯನ್ನೇ ಅವಳು ಪ್ರತ್ಯಕ್ಷ ನೋಡುತ್ತಿರುವಂತೆಯೂ ತೋರುತ್ತಿದ್ದಳು. ನನ್ನನ್ನೇ ಕುರಿತು ಅವಳು ಯಾವ ನಿರ್ಧಾರಕ್ಕೆ ಬರಬಹುದೆಂದು ನಾನು ಊಹಿಸಲು ಶಕ್ತನಾಗಿರಲಿಲ್ಲ. ನನ್ನ ಭವಿಷ್ಯವನ್ನು, ಅತ್ತೆಯ ದೀರ್ಘಾಲೋಚನೆಯನ್ನೂ ಗ್ರಹಿಸುತ್ತಾ ನಾನು ತಬ್ಬಿಬ್ಬಾಗಿ, ಚಾ ಕುಡಿಯುವಾಗ ಸೆರೆಸಿಕ್ಕಿ ಸ್ವಲ್ಪ ಕೆಮ್ಮಬೇಕಾಯಿತು. ಇದರಿಂದ ಅತ್ತೆ ಎಚ್ಚತ್ತು –

"ಡೇವಿಡ್, ನಾನವರಿಗೆ ಪತ್ರ ಬರೆದಿದ್ದೇನೆ" ಅಂದಳು.

"ಯಾರಿಗೆ?" ಎಂದು ನಾನು ಸ್ವಾಭಾವಿಕವಾಗಿ ಪ್ರಶ್ನಿಸಿದೆನಾದರೂ ಹಾಗೆ ಪತ್ರ ಬರೆದಿದ್ದುದು ಯಾರಿಗೆ ಎಂದು ಇಂಗಿತದಿಂದಲೇ ತಿಳಿದಿದ್ದೆ. ನಾನು 'ಯಾರಿಗೆ' ಎಂದು ಪೂರ್ತಿ ಅನ್ನುವ ಮೊದಲೇ. . .

"ನಿನ್ನ ಚಿಕ್ಕ ತಂದೆಗೆ – ಆತ ಇಲ್ಲಿಗೆ ಬಂದು ನಮ್ಮ ನಮ್ಮ ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸಿಕೊಳ್ಳಬೇಕೆಂದು ಅವನಿಗೆ ಪತ್ರ ಬರೆದಿರುತ್ತೇನೆ" ಎಂದು ಅತ್ತೆಯಂದಳು.

"ನನ್ನನ್ನು ಅವರಿಗೆ ಒಪ್ಪಿಸಿಬಿಡುತ್ತೀರೇನು, ಅತ್ತೆ?" ಎಂದು ನಾನು ಹೆದರಿಕೆ ಮತ್ತೂ ದುಃಖದಿಂದ ಕೇಳಿದೆನು.

"ಎಲ್ಲಾ ಅವರು ಬಂದನಂತರ ನಿಶ್ಚಯವಾಗಬೇಕು, ಅಷ್ಟೆ" ಎಂದಳು.

ಈ ವರ್ತಮಾನವನ್ನು ಕೇಳಿ ನನಗೆ ಆದ ದುಃಖವೂ ಭಯವೂ ಅಷ್ಟಿಷ್ಟಲ್ಲ. ಅತ್ತೆ ಆ ದಿನವಿಡೀ ಮೌನವಾಗಿಯೇ ಇದ್ದಳು. ಆದರೆ, ಕ್ರಮೇಣವಾಗಿ, ದಿನ ಹೋದಂತೆ, ಅತ್ತೆ ಎಂದಿನ ಶಾಂತತೆಯನ್ನು ಪಡೆದು ನನ್ನೊಡನೆ ಮಾತಾಡತೊಡಗಿದಳು. ಹೀಗೆ ಮಾತಾಡುತ್ತಾ ಒಂದು ದಿನ ನನಗೆ ಅವರ ಮನೆಯಲ್ಲಿ – ನಮ್ಮೆಲ್ಲರ ಜತೆಗಾರರಾಗಿ – ಇದ್ದ ಮಿ. ಡಿಕ್ಕರ ಜೀವನ ಚರಿತ್ರೆಯ ಕೆಲವಂಶವನ್ನು ಹೇಳಿದಳು.

ಅವರ ಚರಿತ್ರೆ, ನಾನು ಕೇಳಿದ ಅಂಶ, ಹೀಗಿತ್ತು:

ಮಿ. ಡಿಕ್ಕರಿಗೆ ಅವರ ತಂದೆಯವರ ಒಂದು ಉಯಿಲಿನ ಪ್ರಕಾರ ಹೇರಳ ಹಣ ಬರುವುದಿತ್ತಂತೆ. ಈ ಹಣವನ್ನು ತಾನು ಮಾತ್ರ ಪಡೆಯಬೇಕೆಂದು – ದುರುದ್ದೇಶದಿಂದ – ಅವರ ಖಾಸಾ ಅಣ್ಣ, ಮಿ. ಡಿಕ್ಕರು ಹುಚ್ಚರೆಂದು ಪ್ರಕಟಿಸಿ, ಕೆಲವು ದುಷ್ಟ ಸ್ನೇಹಿತರ ಸಹಾಯದಿಂದ, ಅವರನ್ನು ಹುಚ್ಚರ ಆಸ್ಪತ್ರೆಯಲ್ಲಿ ಇಡಿಸಿದ್ದನಂತೆ. ಮಿ. ಡಿಕ್ಕರು ಎಲ್ಲರಂತೆಯೇ ಬುದ್ಧಿಯುಳ್ಳವರಾಗಿದ್ದರೂ ಅವರ ಮೃದು ಮತ್ತು ಸರಳ ಸ್ವಭಾವದ ಕಾರಣವಾಗಿ, ಈ ಅನಿರೀಕ್ಷಿತ ವಿಶ್ವಾಸಘಾತುಕತೆಗೆ ಒಳಪಟ್ಟ ಘಟನೆಗಳಿಂದ ಸ್ವಲ್ಪ ಬುದ್ಧಿವಿಕಲ್ಪವನ್ನೇ ಪಡೆದರಂತೆ. ಅತ್ತೆ ಮಿ. ಡಿಕ್ಕರ ದೂರದ ಸಂಬಂಧಿಕಳಾಗಿದ್ದುದರಿಂದ ಈ ಕುತಂತ್ರ ಜಾಲದಿಂದ ಅವರನ್ನು ಬಿಡಿಸಿ, ತನ್ನ ಮನೆಗೆ ಕರೆತಂದು, ಮನೆಯವರಂತೆಯೇ ಪ್ರೇಮದಿಂದಲೂ ಮರ್ಯಾದೆಯಿಂದಲೂ ಸಾಕುತ್ತಿದ್ದಳು. ಮಿ. ಡಿಕ್ಕರ ನಿಜವಾದ ಹೆಸರು ಮಿ. ರಿಚಾರ್ಡ್ಸ್ ಬೇಬ್ಲಿ ಎಂದಾಗಿತ್ತು. ಆದರೆ, ತನ್ನ ಮನೆತನದ ಹೆಸರನ್ನು ಕೇಳಿದ ಕೂಡಲೇ ಅವರಿಗೆ ಬುದ್ಧಿಭ್ರಮಣೆಯುಂಟಾಗುವುದನ್ನು ಕಂಡು, ಅತ್ತೆ ಅವರಿಗೆ ಮಿ. ಡಿಕ್ಕ್ ಎಂದು ಹೆಸರು ಕೊಟ್ಟಿದ್ದರಂತೆ.

ಮಿ. ಡಿಕ್ಕರು ತನಗೆ ತನ್ನ ಕುಟುಂಬದವರಿಂದ ಆಗಿದ್ದ ಅನ್ಯಾಯವನ್ನು ಬರೆದು ಸರಕಾರಕ್ಕೆ ಒಂದು ಮನವಿಯ ರೂಪದಲ್ಲಿ ದೂರು ಕೊಡಬೇಕೆಂದು, ಮನವಿಯ ಬರವಣಿಗೆಯಲ್ಲಿ ನಿರಂತರವೂ ಮಗ್ನರಾಗಿರುತ್ತಿದ್ದರು. ಈಗ್ಗೆ ಹತ್ತು ವರ್ಷಗಳಿಂದಲೂ ತಯಾರಾಗುತ್ತಿದ್ದ ಮನವಿ ಈಗಲೂ ಅಪೂರ್ಣವಾಗಿಯೇ ಉಳಿದಿತ್ತು. ಮನವಿಯ ಮೂಲಕ ತಮ್ಮ ಕಷ್ಟ ಪರಿಹಾರವಾಗಬಹುದಾದ ಸಾಧ್ಯಾಸಾಧ್ಯತೆಯನ್ನು ತಿಳಿಯುವಷ್ಟು ಪೂರಾ ಅವರಿಗೆ ಬುದ್ಧಿಯಿಲ್ಲದಿದ್ದುದೇ ಈ ಅವಿಶ್ರಾಂತವಾದ ಮನವಿ ತಯಾರಿಕೆಗೆ ಕಾರಣವಾಗಿತ್ತಂತೆ. ಇಂಗ್ಲೆಂಡಿನ ಅರಸರಾಗಿದ್ದ ಎರಡನೆ ಚಾರ್ಲ್ಸರ ತಲೆಯನ್ನು ಪ್ರಜೆಗಳು ಕಡಿದ ಕ್ರೂರ ಚರಿತ್ರೆ ಅವರ ಮೃದು ಮನಸ್ಸಿಗೆ ತುಂಬಾ ಉಪದ್ರವ ಕೊಡುತ್ತಿತ್ತು. ಅವರು ಮನವಿಯನ್ನು ಬರೆಯುತ್ತಿದ್ದಾಗ ಮಧ್ಯೆ ಮಧ್ಯೆ "ರಾಜರಾದ ಚಾರ್ಲ್ಸರ ತಲೆ" ಎಂದೂ ಬರೆದುಬಿಡುತ್ತಿದ್ದರು. ಈ ತಪ್ಪನ್ನು ಕಂಡೊಡನೆ ಅವರು ಪುನಃ ಪ್ರಾರಂಭದಿಂದಲೇ ಮನವಿಯನ್ನು ಬರೆಯಲು ತೊಡಗುತ್ತಿದ್ದರು.

ಮಿ. ಡಿಕ್ಕರ ಈ ವಿಷಯವೆಲ್ಲ ಹೇಗಿದ್ದರೂ ಅತ್ತೆಯ ಮಟ್ಟಿಗೆ ಅವರು ಬಹು ಬುದ್ಧಿವಂತರೇ ಆಗಿದ್ದರು – ಅತ್ತೆ ಅವರನ್ನು ಆ ರೀತಿಯಾಗಿ ತಿಳಿದಿದ್ದಳು. ಮಿ. ಡಿಕ್ಕರ ಸರಳ ಮತ್ತು ನಿಷ್ಕಪಟ ಬುದ್ಧಿಯಿಂದ, ಅವರ ಮರ್ಮವನ್ನರಿತು ಪ್ರಶ್ನಿಸಿದ್ದಾದರೆ, ಎಂಥ ಸಮಸ್ಯೆಗೂ ಪರಿಹಾರಪ್ರದವಾದ ಸಲಹೆಗಳನ್ನು ಅವರು ಕೊಡಬಲ್ಲರೆಂಬುದು ಅತ್ತೆಯ ಪರಿಪೂರ್ಣ ನಂಬಿಕೆಯಾಗಿತ್ತು. ಆದ್ದರಿಂದಲೇ ಅತ್ತೆಯ ಎಲ್ಲಾ

ಕೆಲಸಗಳಲ್ಲೂ ಮಿ. ಡಿಕ್ಕರು ಸಲಹೆಗಾರರಾಗಿ ವರ್ತಿಸುತ್ತಿದ್ದರು. ಈ ಚರಿತ್ರೆಯನ್ನೆಲ್ಲ ತಿಳಿದ ನಾನು ಒಂದಾವೃತ್ತಿ ಅವರ ಕೋಣೆಗೆ ಹೋದೆನು.

ಮಿ. ಡಿಕ್ಕರ ಉಪಯೋಗಕ್ಕಾಗಿಯೇ ಆ ಕೋಣೆಯನ್ನು ಕೊಡಲಾಗಿತ್ತು. ಅವರಿಗೆ ಬೇಕಾದಷ್ಟು ಕಾಗದ, ಶಾಯಿ, ಲೇಖನಿ ಮೊದಲಾದುವೆಲ್ಲ ಆ ಕೋಣೆಯಲ್ಲಿ ಸದಾ ಇರುತ್ತಿದ್ದುವು. ಆ ಕೋಣೆಯ ಒಂದು ಮೂಲೆಯಲ್ಲಿ ಒಂದು ದೊಡ್ಡ ಗಾಳೀಪಟವೂ ಇತ್ತು. ನಾನು ಆ ಕೋಣೆಯನ್ನು ಪ್ರವೇಶಿಸಿದಾಗ ಮಿ. ಡಿಕ್ಕರು ಏಕಾಗ್ರತೆಯಿಂದ ಬರೆಯುತ್ತಿದ್ದರು. ಅವರ ಗಮನ ನನ್ನ ಕಡೆಗೆ ಹರಿಯದಂತೆ ನೋಡಿಕೊಂಡು ನಾನು ಆ ಗಾಳೀಪಟವನ್ನು ಕುತೂಹಲದಿಂದ ಪರೀಕ್ಷಿಸಿದೆನು. ಮಿ. ಡಿಕ್ಕರು ಬರೆದಿದ್ದ ಮನವಿಗಳ ಅಪೂರ್ಣ ಪ್ರತಿಗಳಿಂದಲೇ ಆ ಗಾಳೀಪಟ ಮಾಡಲಾಗಿತ್ತು. ನಾನು ಅದನ್ನು ನೋಡುತ್ತಿದ್ದುದನ್ನು ಹೇಗೋ ಕಂಡು ಮಿ. ಡಿಕ್ಕರು ನನ್ನೊಡನೆ ಮಾತಾಡತೊಡಗಿದರು –

"ಮಿ. ಕಾಪರ್ಫೀಲ್ಡ್, ಹೇಗಿದ್ದೀರಿ – ನಿದ್ರೆ ಬಂತೇ? ಅದಿರಲಿ, ನಿದ್ರೆಯು ಪ್ರತಿದಿನದ ಸ್ವಂತ ವಿಷಯವಾಯ್ತು – ನಿಮ್ಮ ಅನುಭವ ಪ್ರಕಾಶ ಪ್ರಪಂಚ ಹೇಗಿದೆ?" ಎಂದು ಅವರು ಕೇಳಿದರು.

ನಾನು ಯಾವ ಉತ್ತರವನ್ನೂ ಕೊಡಲಾರದೆ ಅವರನ್ನೇ ನೋಡಿದೆ. ಅವರೇ ತಮ್ಮ ಮಾತನ್ನು ಮುಂದುವರಿಸಿದರು –

"ನನ್ನ ಮಟ್ಟಿಗೆ ಪ್ರಪಂಚವೆಲ್ಲಾ ಹುಚ್ಚು; ಜನರಿಗೆ ಬುದ್ಧಿಯಿಲ್ಲದೆ ಏನೇನೋ ಗೊಂದಲಗಳಲ್ಲಿ ಸಿಕ್ಕಿ ಒದ್ದಾಡುತ್ತಾರೆ" ಎಂದು ಹೇಳಿ, ನಶ್ಯ ಸೇದಿ, ಪುನಃ ಕೇಳಿದರು –

"ನೀವು ಶಾಲೆಗೆ ಹೋಗಿದ್ದೀರಾ?"

"ಹೋಗಿದ್ದೇನೆ" ಅಂದೆನು ನಾನು.

"ಹಾಗಾದರೆ, ನಿಮಗೆ ಗೊತ್ತಿದ್ದರೆ ತಿಳಿಸಿ – ಚಾರ್ಲ್ಸ್ ದೊರೆಯ ತಲೆಯನ್ನು ಕತ್ತರಿಸಿದ ತಾರೀಕು ಯಾವುದು?" ಎಂದು ಕೇಳಿದರು.

"ಸಾವಿರದ ಆರುನೂರ ನಲವತ್ತೊಂಬತ್ತನೆ ಇಸವೀಂತ ಕಾಣುತ್ತದೆ" ಎಂದು ನಾನು ಉತ್ತರವಿತ್ತೆ. ಈ ಉತ್ತರದಿಂದ ಅವರಿಗೆ ಸಮಾಧಾನವಾಗಲಿಲ್ಲ. ನಾನು ಹೇಳಿದ್ದು ತಪ್ಪಾಗಿರಬಹುದೆಂಬಂತೆ ನನ್ನನ್ನು ನೋಡುತ್ತಾ ಲೇಖನಿಯ ತುದಿಯಿಂದ ತನ್ನ ತಲೆಯನ್ನು ತುರಿಸಿಕೊಳ್ಳುತ್ತಾ ಅವರಂದರು –

"ನೀವು ಹೇಳಿದ ತಾರೀಕು ಪುಸ್ತಕಗಳಲ್ಲಿ ಇವೆ, ಸರಿ. ಆದರೆ, ನೋಡಿ ಅಷ್ಟೊಂದು ಹಿಂದಿನ ಕಾಲದಲ್ಲೇ ಆ ತಲೆಯನ್ನು ಕತ್ತರಿಸಿದ್ದಾಗಿದ್ದರೆ, ಆ ತಲೆಯೊಳಗಿದ್ದ ದುಃಖವನ್ನೆಲ್ಲಾ ನನ್ನ ತಲೆಯೊಳಗೆ ತುಂಬಿಸಿದ್ದು ಹೇಗೆ? ಸ್ವಲ್ಪ ಗ್ರಹಿಸಿ ನೋಡಿ!"

ನನಗೆ ಯಾವ ಸಮರ್ಪಕವಾದ ಉತ್ತರವೂ ಗೋಚರಿಸಲಿಲ್ಲ. ನಾನು ಮೌನವಾಗಿದ್ದುದನ್ನು ಕಂಡು ಅವರು ಅವರ ಗಾಳೀಪಟ, ಅದರ ಹಗ್ಗ, ಅದರಲ್ಲಿ ಬರೆದಂಟಿಸಿದ್ದ ಮನವಿ, ಆ ಮನವಿಯ ಮಧ್ಯವಿದ್ದ 'ರಾಜರಾದ ಚಾರ್ಲ್ಸ್ ತಲೆ' ಎಂಬ ಬರೆಹ ಎಲ್ಲವನ್ನೂ ತೋರಿಸಿ –

"ಬೇಕಾದಷ್ಟು ಹಗ್ಗವಿದ್ದು ಗಾಳೀಪಟವನ್ನು ಹಾರಿಸಿದಾಗ ಅದು ಊರೂರಿಗೆಲ್ಲ ತೋರಿಬರುತ್ತದೆ. ಅದು ಎಷ್ಟೆಷ್ಟು ದೂರ, ಎಷ್ಟೆಷ್ಟು ಎತ್ತರ ಹಾರುತ್ತದೋ ಅಷ್ಟಷ್ಟೇ ಹೆಚ್ಚಾಗಿ ನನ್ನ ಮನವಿ ಪ್ರಚಾರಕ್ಕೆ ಬರುತ್ತದೆ. ಯಾವಾಗ್ಗೆ ಎಂದು ನಾನು ಈಗಲೇ ಹೇಳಲಾರೆನಾದರೂ ಈ ಗಾಳೀಪಟವನ್ನು ಹಾರಿಸುತ್ತಿದ್ದರೆ ಒಂದಲ್ಲದಿದ್ದರೆ ಒಂದು ದಿನ ನನ್ನ ಮನವಿಯು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ" ಎಂದು ಹೇಳಿದರು.

ಈ ಮಾತುಗಳನ್ನಾಡುವಾಗ ಅವರ ಮುಖ ಶಾಂತವಾಗಿತ್ತು. ಸಂತೋಷಭರಿತ ಗಾಂಭೀರ್ಯವೂ ಪೂಜ್ಯಭಾವವನ್ನು ಪ್ರಚೋದಿಸುವ ತೇಜಸ್ಸೂ ಆ ಮುಖದಲ್ಲಿತ್ತು. ಅವರ ಮುಖದ ಈ ಎಲ್ಲ ಲಕ್ಷಣಗಳೆದುರು ಈ ಎಲ್ಲ ಮಾತುಗಳು ಕೇವಲ ವಿನೋದಕ್ಕಾಗಿ ಆಡಿದವುಗಳು ಎಂಬಂತೆ ನನಗೆ ತೋರಿದುವು. ನಾವಿಬ್ಬರೂ – ಒಬ್ಬೊಬ್ಬರು ಒಂದೊಂದು ಕಾರಣಕ್ಕಾಗಿ – ನಗಾಡಿದೆವು. ಅನಂತರ ಅವರಿಗಾಗಿದ್ದ ಆನಂದಾತಿಶಯದಿಂದ ನಾವಿಬ್ಬರೂ ಆಜನ್ಮಾಂತ ಸ್ನೇಹಿತರಾಗಬೇಕೆಂದು ಅವರು ಅಂದರು – ಆ ಸ್ನೇಹದ ಪ್ರತಿಜ್ಞೆಗಾಗಿ ನನ್ನ ಕೈ ಹಿಡಿದು ಬಹು ಪ್ರೇಮದ, ಗೌರವದ, ಹಸ್ತ ಲಾಘವವನ್ನಿತ್ತರು.

ಹೀಗೆ ದಿನಗಳು ದಾಟಿದಂತೆ ನಾವಿಬ್ಬರು ಬಹು ಸ್ನೇಹಿತರೇ ಆಗಿಬಿಟ್ಟೆವು. ಅತ್ತೆ ನಮ್ಮಿಬರ ಹಿತೈಷಿಯಾಗಿದ್ದಳು. ಅತ್ತೆಯಲ್ಲಿ ನನಗಿದ್ದ ಅಂಜಿಕೆ ಮಾಯವಾಗುತ್ತಾ ಬಂದಿತು. ಅದರ ಅದಲು, ಪ್ರೀತಿಯೂ ಗೌರವವೂ ಹೆಚ್ಚುತ್ತ ಬಂದುವು. ಅನಾಥ ಮಿ. ಡಿಕ್ಕರ ರಕ್ಷಕಳಾಗಿರುವ ಅತ್ತೆ ನನ್ನ ಪಾಲಿಗೂ ಅಂಥ ರಕ್ಷಕಳಾಗಬಹುದೆಂದು ಧೈರ್ಯ ನನಗೆ ಉಂಟಾಯಿತು. ಒಂದು ದಿನ, ರಸ್ತೆಯಲ್ಲಿ ಹೋಗುತ್ತಿದ್ದ ಯುವಕನೊಬ್ಬನು ಜೇನೆಟ್ಟಳನ್ನು ಕಾಮುಕ ದೃಷ್ಟಿಯಿಂದ ನೋಡಿದನೆಂದು ಅತ್ತೆ ಆತನ ಕುರಿತು ಕೋಪಗೊಂಡದ್ದನ್ನು ಕಂಡ ಮೇಲಂತೂ ಅತ್ತೆಯ ಮೇಲಿನ ನನ್ನ ಗೌರವ ಮತ್ತಷ್ಟು ಹೆಚ್ಚಿತು.

ಹೀಗೆ ದಿನ ಕಳೆಯುತ್ತಿದ್ದಾಗ, ಒಂದು ದಿನ, ಊಟದ ಸಮಯದಲ್ಲಿ ಮಿ. ಮತ್ತು ಮಿಸ್ ಮರ್ಡ್ಸ್ಟನ್ನರು ಮರುದಿನ ಬರುವುದಾಗಿ ಅತ್ತೆ ನಮಗೆ ತಿಳಿಸಿದಳು. ಆ ಮರುದಿನ ಬಹು ಭಯಗ್ರಸ್ತನಾಗಿ, ಅವರು ಎಷ್ಟು ಹೊತ್ತಿಗೆ ಬರುವರೋ ಎಂದು ನಾನು ಆಲೋಚಿಸುತ್ತಾ ಅವರ ಬರೋಣವನ್ನು ಕಾದು ನೋಡುತ್ತಿದ್ದೆ.

ಆ ದಿನ ಬರುವವರ ನಿರೀಕ್ಷೆಯಿಂದ ನಮ್ಮ ಮಧ್ಯಾಹ್ನದ ಊಟ ಮಾಡದೆ ರಸ್ತೆ ನೋಡುತ್ತಾ ನಾವು ನಮ್ಮ ಬೈಠಖಾನೆಯಲ್ಲಿದ್ದೆವು. ಅಷ್ಟರಲ್ಲಿ ಅತ್ತೆ ಹಠಾತ್ತಾಗಿ –
"ಜೇನೆಟ್ ಕತ್ತೆಗಳು" ಎಂದು ಕೂಗಿದಳು. ಇಂದಿನ ಕತ್ತೆಗಳ ಸವಾರಿ ಹಿಂದೆಂದೂ ಆಗದಿದ್ದಷ್ಟು ಕಠಿಣತರದ್ದಿರಬೇಕೆಂದನ್ನುವಂತೆ ಅತ್ತೆಯ ಕೋಪವೂ ಬಹು ಉಗ್ರತರದ್ದೇ ಆಗಿತ್ತು. ರಸ್ತೆಯ ಕಡೆಗೆ ನಾನೂ ನೋಡಿದೆ. ಆಗಲೇ ಒಬ್ಬಳು ಹೆಂಗುಸು ಕತ್ತೆಯ ಮೇಲೆ ಕುಳಿತುಕೊಂಡು ಮೈದಾನದ ಮಧ್ಯಕ್ಕೆ ಬರುತ್ತಿದ್ದಳು. ನಾವು ನೋಡುತ್ತಿದ್ದ ಹಾಗೆಯೇ ಯಾರಿಗೂ ಅಂಜದವಳಂತೆ, ಭೀಕರ ಧೈರ್ಯದಿಂದ, ಆ ಹೆಂಗುಸು ಆ ಪವಿತ್ರ ಹಸುರು ಹುಲ್ಲುಗಾವಲ ನಡುವೆ ಕತ್ತೆಯಿಂದಿಳಿದು ನಿಂತಳು. ಅತ್ತೆ ಬಹು ಕೋಪದಿಂದ, ಆ ಹೆಂಗುಸನ್ನು ನೋಡುತ್ತ –
"ನಡಿ ಅಲ್ಲಿಂದ – ತೊಲಗು, ಗಂಡುಬೀರಿ – ನಿನ್ನ ಸ್ವರೂಪ ನನ್ನೆದುರು ಅರೆಘಳಿಗೆ ಇರಕೂಡದು – ನಡೀ" ಎಂದು ಜೋರಾಗಿ ಗದರಿಸಿ ಕೂಗಿದಳು. ಇಷ್ಟರಲ್ಲಿ ನಾನು ಅತ್ತೆಯ ಸಮೀಪಕ್ಕೆ ಹೋಗಿ ಮೈದಾನದಲ್ಲಿ ನಿಂತಿದ್ದವಳು ಮಿಸ್ ಮರ್ಡ್‌ಸ್ಟನ್ನಳೆಂದು ತಿಳಿಸಿದೆ. ಆಗಲೇ ಕತ್ತೆಯ ಲಗಾಮನ್ನು ಹಿಡಿದುಕೊಂಡು ಮಿ. ಮರ್ಡ್‌ಸ್ಟನ್ನರೂ ಸಹ ತಂಗಿಯ ಸಮೀಪಕ್ಕೆ ಬಂದು ನಿಂತರು. ಮಿ. ಮರ್ಡ್‌ಸ್ಟನ್ನರೇ ಅವರೆಂದು ಅತ್ತೆಗೆ ನಾನು ತಿಳಿಸಿದರೂ –
"ನನ್ನ ಸ್ಥಳವನ್ನು ಯಾರು ಅತಿಕ್ರಮವಾಗಿ ಪ್ರವೇಶಿಸಿದರೂ ನಾನು ಸಹಿಸೆನು" ಎಂದಂದುಕೊಂಡು ಕೈ ಮುಷ್ಟಿ ಮಾಡಿ ತೋರಿಸುತ್ತಾ ಮೈದಾನದ ಕಡೆಗೆ ಓಡಿದಳು. ಅಲ್ಲಿಗೆ ತಲಪಿದ್ದೇ ತಡ ಮರ್ಡ್‌ಸ್ಟನ್ ದ್ವಯರನ್ನು ಸಿಕ್ಕಾಬಟ್ಟೆ ಬೈದಳು. ಜೇನೆಟ್ಟಳು ಕತ್ತೆಗಳ ಲಗಾಮನ್ನು ಹಿಡಿದು ಒಂದು ಕಡೆಗೆ ಎಳೆಯತೊಡಗಿದಳು. ತಮ್ಮ ಕತ್ತೆಗಳನ್ನು ನಡೆಸುವವರು ತಾವೇ ಎಂದನ್ನುತ್ತಾ ಮಿ. ಮರ್ಡ್‌ಸ್ಟನ್ನರು ಕತ್ತೆಗಳನ್ನು ಮತ್ತೊಂದು ಕಡೆಗೆ ಎಳೆದರು. ಅತ್ತೆಯ ಈ ವಿಧದ ಸನ್ನಿವೇಶಗಳಲ್ಲಿ ಸಂತೋಷಿಸುತ್ತಿದ್ದ ನೆರೆಕರೆಯ ಪೋಕರೀ ಬಾಲಕರು ಜತೆ ಸೇರಿ ಅತ್ತೆಯನ್ನು ನೋಡಿಕೊಂಡು ಕೈ ಚಪ್ಪಾಳೆ ತಟ್ಟಿದರು. ಈ ಗೌಜು ಗಲಭೆಗಳನ್ನು ನೋಡುತ್ತಿದ್ದ ಕತ್ತೆಗಳು ಯಾವ ವಿಷಯಗಳ ಅರ್ಥ ಮಾಡುವುದಕ್ಕಿಂತಲೂ ಮೊದಲು ತಮ್ಮ ನಿಲುವನ್ನು ಭದ್ರ ಮಾಡಿಕೊಳ್ಳುವುದು ಉತ್ತಮವೆಂದು ತಮ್ಮ ನಾಲ್ಕೂ ಕಾಲುಗಳನ್ನು ನಾಲ್ಕೂ ದಿಕ್ಕುಗಳಿಗೆ ನೀಡಿ, ಕದಲದೆ ನಿಂತುಬಿಟ್ಟವು. ಈ ವಿಧದಲ್ಲಿ ಅಲ್ಲಿ ಒಂದು ವಿಧದ ಯುದ್ಧವೇ ಕ್ಷಣಕಾಲ ನಡೆದು ಹೋಯಿತು. ಅತ್ತೆಗೆ ಕೋಪ ತಡೆಯಲಾಗದೆ ಕೈಗೆ ಸುಲಭದಲ್ಲಿ ಸಿಕ್ಕಿದ ಒಬ್ಬ ಹುಡುಗನ ಕಿವಿ ಹಿಡಿದು ತಿರುವಿದಳು. ಅಂತೂ ಕೊನೆಗೆ ಕತ್ತೆಗಳು ಮೈದಾನವನ್ನು ಬಿಟ್ಟೋಡಿದುವು – ಅತ್ತೆಗೆ ಜಯವೇ ಆಯಿತು.

ಅತ್ತೆ ಮೌನವಾಗಿ ಬಂದು ತನ್ನ ಬೈಠಖಾನೆಯಲ್ಲಿ ಗಂಭೀರ ಮುಖಮುದ್ರೆಯಿಂದ ಕುಳಿತಳು. ಅವಳ ಮೈ ಬೆವರಿಹೋಗಿತ್ತು. ಮುಖ ಕೆಂಪು ಕೆಂಪಾಗಿಹೋಗಿತ್ತು. ಮರ್ಡ್‌ಸ್ಟನ್ನ್‌ದ್ವಯರು ಮನೆಗೆ ಬಂದರು. ಜೇನೆಟ್ಟಳ ಮೂಲಕ ತಾವು ಬಂದಿದ್ದ ಸಂಗತಿಯನ್ನು ತಿಳಿಸಿದರು. ಇದೆಲ್ಲವನ್ನೂ ನೋಡುತ್ತಲೂ ಕೇಳುತ್ತಲೂ ಇದ್ದ ಅತ್ತೆ ಕ್ರಮಬದ್ಧವಾಗಿ ಬಂದವರ ಪರಿಚಯವನ್ನು ಜೇನೆಟ್ಟಳು ಮಾಡುವವರೆಗೂ ಯಾರ ಬರೋಣವನ್ನೂ ಗಮನಕ್ಕೆ ತರದೆ ಮೌನವಾಗಿ ಕುಳಿತಿದ್ದಳು. ಪರಿಚಯದ ಮಾತುಕಥೆಗಳು ಆದನಂತರ ಅತ್ತೆ ನನ್ನನ್ನು ಅದೇ ಬೈಠಖಾನೆಯ ಒಂದು ಮೂಲೆಯಲ್ಲಿ ನಿಲ್ಲಿಸಿ, ನಾನು ಓಡಿಹೋಗದಂತೆ ನನಗಡ್ಡವಾಗಿ ಕೆಲವು ಕುರ್ಚಿಗಳನ್ನಿಟ್ಟಳು. ಅತ್ತೆ ಅವಳ ಎತ್ತರದ ಕುರ್ಚಿಯಲ್ಲಿ ಕುಳಿತು ನಾನು ಮೂಲೆಯಲ್ಲಿದ್ದದ್ದನ್ನು ನೋಡುವಾಗ ನಾನೋರ್ವ ಕೈದಿಯಂತೆಯೂ ಅವಳು ಒಬ ಜಡ್ಜಳಂತೆಯೂ ತೋರುತ್ತಿದ್ದೆವು. ಒಳಗೆ ಬಂದ ಮರ್ಡ್‌ಸ್ಟನ್ನ್‌ದ್ವಯರು ನಿಂತುಕೊಂಡೇ ಇದ್ದರು. ಅವರನ್ನೆಲ್ಲ ನಾನು ನೋಡುತ್ತಲೂ ಅವರ ಮಾತುಗಳನ್ನು ಕೇಳುತ್ತಲೂ ಇದ್ದೆ.

ಅತ್ತೆ ತನ್ನ ಕುರ್ಚಿಯಲ್ಲಿ ಕುಳಿತೇ ವಿಚಾರಣೆಯನ್ನು ಪ್ರಾರಂಭಿಸಿದಳು –
"ಬಂದದ್ದು ನೀವೆಂದು ನನಗೆ ಮೊದಲು ಗೊತ್ತಾಗಲಿಲ್ಲ. ಆದರೆ, ಯಾರೇ ಆ ಮೈದಾನಕ್ಕೆ ಬಂದರೂ ಆ ಸ್ಥಳದ ರಕ್ಷಣೆಯ ಏರ್ಪಾಡುಗಳು ಒಂದೇ ವಿಧದ್ದಾಗಿದೆ" ಎಂದು ಪೀಠಿಕಾ ರೂಪದ ಮಾತನ್ನಾಡಿ –
"ಕೋಕಿಲ ನಿವಾಸದ ನನ್ನ ಅಳಿಯ ಡೇವಿಡ್ಡನ ಹೆಡ್ಡು ವಿಧವೆಯನ್ನು ಮದುವೆಯಾದವರು ನೀವೇಯೋ?" ಎಂದು ಕೇಳುತ್ತಾ ಆತ್ಮಗತವಾಗಿ, "ಕೋಕಿಲ ನಿವಾಸವಂತೆ – ಕೋಕಿಲ! – ಖಾಲಿಗೂಡಿರುವ ಸ್ಥಳಕ್ಕೆ!" ಎಂದು ಹೇಳಿಕೊಂಡಳು.
"ಹೌದು" ಅಂದರು ಮಿ. ಮರ್ಡ್‌ಸ್ಟನ್ನರು.
"ನೋಡಿ – ಹಸುಗೂಸಿನಂತಿದ್ದ ಆ ವಿಧವೆಯನ್ನು ನೀವು ಮದುವೆಯಾದುದರಲ್ಲಿ ಎಷ್ಟೊಂದು ಅನ್ಯಾಯ ಮಾಡಿರುವಿರೆಂದು ಗೊತ್ತಿದೆಯೇ?" ಅಂದರು ಅತ್ತೆ.
"ಹಸುಗೂಸು ನಿಜ – ಅದರ ಫಲ – ಅನ್ಯಾಯವಾದುದು ನಮ್ಮಣ್ಣನಿಗೆ" ಅಂದಳು ಮಿಸ್ ಮರ್ಡ್‌ಸ್ಟನ್ನಳು.
"ನಿಮ್ಮಣ್ಣನ ಸಂದರ್ಭಕ್ಕೆ ನಿಮ್ಮ ಉತ್ತರ ಸರಿಯಾಗಲಿಲ್ಲ – ರೂಪ ಲಾವಣ್ಯಗಳಿಲ್ಲದ ನಿಮಗೂ ನನಗೂ ಚಿಕ್ಕ ಪ್ರಾಯದ ಸುಂದರಿ ಕ್ಲೇರಾಳ ವಿಷಯದಲ್ಲಿ ಹಾಗೆ, ಹೀಗೆ ಎಂದು ಅನುಭವ ಹೇಳಲು ಹಕ್ಕಿಲ್ಲ. ಅದರ ಬದಲು ಬುದ್ಧಿ, ಪ್ರಾಯ, ಲೋಕಾನುಭವವಿರಬೇಕಾದ ನಿಮ್ಮ ಅಣ್ಣ – ಕ್ಲೇರಾಳಿಗೆ ಬುದ್ಧಿಯಿಲ್ಲವೆಂದು ಗೊತ್ತಿದ್ದು – ಆ ಕಾರಣದಿಂದಲೇ – ಮದುವೆಯಾದದ್ದು ಬಹು ಅನ್ಯಾಯ" ಅಂದಳು ಅತ್ತೆ.

ಈ ಮಧ್ಯೆ ಅತ್ತೆ ಮಿ. ಡಿಕ್ಕರನ್ನು ಬರಮಾಡಿಕೊಂಡಿದ್ದಳು. ಮಿ. ಡಿಕ್ಕರಿಗೆ ಬಂದವರಿಬ್ಬರ ಪರಿಚಯವನ್ನು ಅತ್ತೆ ಸೂಕ್ಷ್ಮವಾಗಿ ಮಾಡಿಕೊಟ್ಟಳು. ಈ ಪರಿಚಯ ಮಾತುಗಳನಂತರ ಮಿ. ಮರ್ಡ್‌ಸ್ಟನ್ನರು ಅಂದರು –

"ಮಿಸ್ ಟ್ರಾಟೂಡ್, ನಿಮ್ಮನ್ನು ಮುಖತಃ ಕಂಡು ಮಾತಾಡುವುದೇ ಉಚಿತವೆಂದು ನಾವು ಇಲ್ಲಿಗೆ ಬಂದಿದ್ದೇವೆ. ಹುಡುಗನ ಯೋಗ್ಯತೆಗೆ ತಕ್ಕುದಾದ ಕಸಬಿನಲ್ಲಿ ಅವನನ್ನು ಹಾಕಿದ್ದೆನು. ಅವನು ಅಲ್ಲಿಂದ ಹೇಳದೇ ಓಡಿ ಬಂದಿದ್ದಾನೆ. ಈ ಸಂದರ್ಭದಲ್ಲಿ ನನ್ನ ಕರ್ತವ್ಯಗಳ ನಿರ್ವಹಣೆಗಾಗಿ ಎರಡು ಮಾತು ನಿಮ್ಮಲ್ಲಿ ಆಡಲು ಬಂದಿದ್ದೇನೆ."

ಮಿ. ಮರ್ಡ್ಸ್ಟನ್ನರು ಅಷ್ಟು ಹೇಳುವಾಗಲೇ ತಂಗಿ –
"ಡೇವಿಡ್ಡನ ಬುದ್ಧಿ, ಸ್ವರೂಪ, ಸ್ವಭಾವ ಎಲ್ಲವೂ ಒರಟು – ಮಹಾಮೂರ್ಖ – ತರ್ಕ, ಬೋಧನೆ, ಮೃದುವಚನಗಳಿಂದ ಸರಿಬಾರದಷ್ಟರ ಮೂರ್ಖ, ಅವನ ತಾಯಿಯಿದ್ದಾಗಲೇ ನಾವು ಪರೀಕ್ಷಿಸಿ ನೋಡಿ, ಸೋತು, ಅವನನ್ನು ಸರಿದಾರಿಗೆ ತರಲಾರದೆ, ಅವನ ಯೋಗ್ಯತೆಗೆ ತಕ್ಕಂಥ ಕಸಬಿನಲ್ಲಿ ಅವನನ್ನು ಸೇರಿಸಿದ್ದೇವೆ" ಎಂದಳು.
"ಇಷ್ಟು ಚಿಕ್ಕ ಬಾಲಕನ ವಿಷಯದಲ್ಲಿ ಅಷ್ಟು ಕಠಿಣತರದ ಅಭಿಪ್ರಾಯ ತಾನೆ, ನಿಮ್ಮದು!" ಎಂದು ಅತ್ತೆ ಸ್ವಲ್ಪ ಕುಚೇಷ್ಟೆಯಾಗಿ ಮಾತಾಡಿದಳು.
ಅದಕ್ಕೆ ಮಿ. ಮರ್ಡ್ಸ್ಟನ್ನರು –
"ಅವನ ಗುಣಗಳನ್ನು ನಾನು ಪೂರಾ ಬಲ್ಲೆ. ಆ ಗುಣಗಳಿಗೆ ತಕ್ಕದಾದ – ಮತ್ತು, ನನ್ನ ಹಣದ ಅನುಕೂಲಕ್ಕೆ ಸರಿಯಾದ – ಕಸಬಿನಲ್ಲಿ, ನನ್ನ ಸ್ನೇಹಿತರ ಸುಪರ್ದಿಯಲ್ಲಿ ಅವನನ್ನು ಬಿಟ್ಟಿದ್ದೆ. ಅಲ್ಲಿಂದ ಅವನು ಬೀದಿ ಭಿಕಾರಿಯಾಗಿ – ಚಿಂದಿ ಬಟ್ಟೆಯಲ್ಲಿ – ಪರಾರಿಯಾಗಿರುವನು. ಇಂಥವರಿಗೆಲ್ಲ ಆಶ್ರಯ ಕೊಡುವ ನಿಮ್ಮ ಜವಾಬ್ದಾರಿಯು ಎಷ್ಟಿದೆಯೆಂದು ಗೊತ್ತಿದೆಯೇ. ನಿಮಗೆ?" ಅಂದರು.
"ಅವನ ಪೂರ್ಣ ಪರಿಚಯವಾದಾಗ ಮಾತ್ರ ಅಣ್ಣನವರ ಮಾತಿನ ಪೂರ್ಣ ಅರ್ಥ ನಿಮಗಾಗಬಹುದು, ತಿಳಿಯಿತೇ?" ಎಂದು ವ್ಯಂಗ್ಯವಾಗಿ ಮಿಸ್ ಜೇನ್ ಮರ್ಡ್ಸ್ಟನ್ನಳಂದಳು.

"ಈ ಉದ್ದುದ್ದದ ಭಾಷಣಗಳು ಹಾಗಿರಲಿ – ನಿಮ್ಮ ಮಗನಾಗಿದ್ದಿದ್ದರೆ ಅವನನ್ನು ಆ ಕೆಲಸಕ್ಕೆ ನೀವು ಕಳುಹಿಸುತ್ತಿದ್ದಿರೇನು?" ಎಂದು ಅತ್ತೆ ಪ್ರಶ್ನಿಸಿದಳು.
"ಅಣ್ಣನ ಮಗನಿಗೆ ಅಂಥ ಹೀನ ಬುದ್ಧಿಯು ಬರುತ್ತಿರಲಿಲ್ಲ" ಅಂದಳು ಮಿಸ್ ಮರ್ಡ್ಸ್ಟನ್ನಳು.
"ಹಾಗೋ? ಇರಲಿ, ಡೇವಿಡ್ಡನ ತಾಯಿ ಬದುಕಿದ್ದಿದ್ದರೆ ಅವನನ್ನು ಹಾಗೆ ಕಳುಹಿಸಲು ಬಿಡುತ್ತಿದ್ದಳೇನು? – ಇದಕ್ಕೆ ಉತ್ತರ ಕೊಡಿ."
"ಖಂಡಿತವಾಗಿಯೂ ಅವಳೂ ಸಹ ಅವನನ್ನು ಕಳುಹಿಸುತ್ತಿದ್ದಳು. ಅವನ ಗುಣ, ಸಂದರ್ಭಗಳನ್ನೆಲ್ಲ ನಾವು ವಿವರಿಸಿ, ಆಲೋಚಿಸಿ ನಡೆದದ್ದಾಗಿದ್ದರೆ, ಕ್ಲೇರಾಳೂ ಸಹ ಅವನನ್ನು ಆ ರೀತಿ ಕಳುಹಿಸುತ್ತಿದ್ದಳು" ಅಂದಳು ಮಿಸ್ ಮರ್ಡ್ಸ್ಟನ್ನಳು.
"ಪಾಪ! ಅವಳು ಕಳುಹಿಸುತ್ತಿದ್ದಳಲ್ಲವೆ!" ಎಂದು, ಅವಳು ಎಂಬುದನ್ನು ಒತ್ತಿ ಹೇಳುತ್ತಾ –
"ನಿಮ್ಮಿಬ್ಬರ ಶಿಸ್ತಿನ ಶಿಕ್ಷೆಯಿಂದ ಕ್ಲೇರಾಳ ವ್ಯಕ್ತಿತ್ವವನ್ನೇ ಅಪಹರಿಸಿ, ಮತ್ತೆ ಅವಳು ಕಳುಹಿಸುತ್ತಿದ್ದಳು – ಅವಳು ಎಂದನ್ನುವುದೆಲ್ಲ ಏನು ಚಂದವಪ್ಪಾ! ಇನ್ನು ನಿಮ್ಮ ಹಣದ ಪರಿಸ್ಥಿತಿಯನ್ನು ಪ್ರಸ್ತಾಪಿಸಿದಿರಲ್ಲಾ, ಡೇವಿಡ್ಡನ ತಾಯಿಯ ಹೆಸರಿಗೆ ಬರುತ್ತಿದ್ದ – ಅವಳ ಮೊದಲಿನ ಗಂಡ ಇಟ್ಟಿದ್ದ – ವರ್ಷಾಸನದ ಹಣವೆಲ್ಲ ಏನಾಯಿತು? ಅವಳ ಮನೆ, ಹಿತ್ತಲು ಇವೆಲ್ಲಾ ಯಾರಿಗೆ ಸೇರಿವೆ?" ಎಂದು ಸ್ವಲ್ಪ ಕಠಿಣವಾಗಿಯೇ ಅತ್ತೆ ಪ್ರಶ್ನಿಸಿದಳು.

"ವರ್ಷಾಸನದ ಹಣ ಅವಳ ಮರಣದಿಂದ ಅಂತ್ಯವಾಯಿತು. ಅವಳ ಮನೆ, ಹಿತ್ತಲನ್ನೆಲ್ಲ ಅವಳಿಗೆ ಕುಷಿ ಬಂದಂತೆ ಅನುಭವಿಸುವ ಸ್ವಾತಂತ್ರ್ಯವನ್ನು ಅವಳ ಗಂಡನೇ ಉಯಿಲಿನಲ್ಲಿ ಕೊಟ್ಟಿದ್ದನಷ್ಟೆ" ಎಂದು ಮಿ. ಮರ್ಡ್ಸ್ಟನ್ನರು ಉತ್ತರವಿತ್ತರು.

"ಸರಿ, ಸರಿ, ನನಗೂ ಬುದ್ಧಿಯಿದೆ, ಅರ್ಥವಾಗುತ್ತೆ. ಅವಳಿಗೆ ಗಂಡ ಕೊಟ್ಟಿದ್ದ 'ಸ್ವಾತಂತ್ರ್ಯ' ಎಂದು ಹೇಳುತ್ತೀರಲ್ಲಾ. ಆ ಸ್ವಾತಂತ್ರ್ಯ ನಿಜವಾಗಿಯೂ ಅವಳಿಗಿತ್ತೇನು? ಅವಳ ಮನಸ್ಸನ್ನು ಮುರಿದು, ಕಾನೂನಿಗೆ ಸರಿದೋರುವಂತೆ, ನಿಮ್ಮ ಹೆಸರಿಗೆ ಅವಳದನ್ನೆಲ್ಲ ಬರೆಸಿಕೊಂಡು ಸ್ವಾತಂತ್ರ್ಯ, ಸ್ವಾತಂತ್ರ್ಯ ಎಂದು ಹೇಳುತ್ತೀರಲ್ಲಾ – ಇದೆಲ್ಲ ಯಾರ ಹತ್ತಿರ ಹೇಳುವ ಮಾತು! ಮಾಡಿದ್ದೆಲ್ಲ ಬಲಾತ್ಕಾರ. . ." ಎಂದು ಅತ್ತೆ ಚೆನ್ನಾಗಿ ಜರೆದು ಮಾತಾಡಿದಳು.
ಮಿ. ಮರ್ಡ್ಸ್ಟನ್ನರಿಗೆ ಸ್ವಲ್ಪ ಕೋಪ ಬಂತು. ಅವರಂದರು –
"ಮಿಸೆಸ್ ಮರ್ಡ್ಸ್ಟನ್ನಳು ಅವಳ ಗಂಡನಿಗೆ ಆಸ್ತಿ ಬರಕೊಟ್ಟ ವಿಷಯದಲ್ಲಿ ನಿಮ್ಮ ಅಯಾಚಿತ ಪ್ರವೇಶ ಅಗತ್ಯವಿಲ್ಲ. ಡೇವಿಡ್ಡನ ಭವಿಷ್ಯದ ಕುರಿತು ಮಾತ್ರ – ಮನಸ್ಸಿದ್ದರೆ – ಮಾತಾಡಿ. ಯಾವ ಶರ್ತವೂ ಇಲ್ಲದೆ ಡೇವಿಡ್ಡನನ್ನು ನನ್ನ ವಶಕ್ಕೆ ಒಪ್ಪಿಸಬೇಕು – ಇಲ್ಲದಿದ್ದರೆ ಇನ್ನು ಮುಂದಿನ ಅವನನ್ನು ಕುರಿತಾದ ವಿಶಿಷ್ಟ ಜವಾಬ್ದಾರಿಯೂ ನಿಮ್ಮದೇ ಆಗಿರಬೇಕು."

ಈ ಮಾತುಗಳು ನಡೆಯುತ್ತಿದ್ದಾಗ ಅತ್ತೆ ಒಬ್ಬ ನ್ಯಾಯಾಧಿಪತಿಯಂತೆ ಗಂಭೀರವಾಗಿ ಮಾತಾಡುತ್ತಿದ್ದಳು. ಅವಳು ಮಿಸ್ ಮರ್ಡ್ಸ್ಟನ್ನಳನ್ನು ನೋಡಿ –
"ಈ ವಿಷಯದಲ್ಲಿ ನೀವೇನಾದರೂ ಹೇಳುವುದಿದೆಯೇ?" ಎಂದು ಕೇಳಿದಳು.

"ಅಣ್ಣ ಹೇಳಿದ್ದು ಸಂಪೂರ್ಣ ಸರಿ. ಇನ್ನು ನಿಮ್ಮ ಕಡೆಯಿಂದ ನಮಗೆ ದೊರಕಿರುವ ನಯ – ನುಣುಪಿನ ಆದರಾತಿಥ್ಯಗಳನ್ನು ಕೊಂಡಾಡುವುದು ಮಾತ್ರ ಬಾಕಿಯಿದೆ" ಅಂದಳು ಮಿಸ್ ಮರ್ಡ್‌ಸ್ಟನ್ನಳು.
ಅನಂತರ ನಾನೇನಾದರೂ ಹೇಳುವುದಕ್ಕಿದೆಯೇ – ಅತ್ತೆಯ ಜತೆಯಲ್ಲಿರಲು ಸಮ್ಮತಿಯಿದೆಯೇ – ಅಥವಾ ಮಿ. ಮರ್ಡ್‌ಸ್ಟನ್ನರ ಜತೆಯಲ್ಲಿ ಹೋಗಲಿಚ್ಛಿಸುವೆನೇ – ಎಂಬಿತ್ಯಾದಿಯಾಗಿ ಅತ್ತೆ ನನ್ನನ್ನು ವಿಚಾರಿಸಿದಳು.

ಅತ್ತೆಯ ಮನೆಯಿಂದ ಹೋಗಲು ನನಗೆ ಇಷ್ಟವಿಲ್ಲವೆಂದು ತಿಳಿಸಿ, ಅತ್ತೆಯೇ ನನ್ನನ್ನು ಸಾಕಬೇಕೆಂದು ಪ್ರಾರ್ಥಿಸಿಕೊಂಡೆ. ಮಿ. ಮತ್ತು ಮಿಸ್ ಮರ್ಡ್‌ಸ್ಟನ್ನರು ನನ್ನ ವಿರೋಧಿಗಳೆಂದೂ ಹೇಳಿಕೊಂಡೆ. ನನ್ನ ತಾಯಿಯಿಂದ ನನ್ನನ್ನು ದೂರವಿಟ್ಟು, ನನ್ನ ಮೇಲೆ ತಪ್ಪು ಅಭಿಪ್ರಾಯಗಳನ್ನು ತಾಯಿಯಲ್ಲಿ ಉಂಟುಮಾಡಿದವರೇ ಅವರು, ಅಂದೆ. ನನ್ನನ್ನು ಒಂದು ವಿಧದಲ್ಲೂ ನನ್ನ ತಾಯಿಯನ್ನು ಇನ್ನೊಂದು ವಿಧದಲ್ಲೂ ಅವರು ಹಿಂಸಿಸಿರುವರೆಂದು ಹೇಳಿಕೊಂಡೆ. ನನ್ನ ತಾಯಿ ಸತ್ತನಂತರ ಬದುಕಿರಬೇಕಾದರೆ ಅವರಿಂದ ನಾನು ತಪ್ಪಿಸಿ ಓಡದೆ ನಿರ್ವಾಹವಿಲ್ಲದೆ ಓಡಿಬಂದೆನು, ಎಂದೆ. ನಾನು ಈ ಮಾತುಗಳನ್ನಾಡುತ್ತಿದ್ದಾಗ, ಮಿ.ಡಿಕ್ಕರು ತಮ್ಮ ಬಾಯೊಳಗೆ ಒಂದು ಬೆಟ್ಟನಿಟ್ಟುಕೊಂಡು ನನ್ನನ್ನೇ ಹಾಸ್ಯ, ಕನಿಕರ ಮಿಶ್ರವಾಗಿ ನೋಡುತ್ತಿದ್ದರು. ನನ್ನ ಹೇಳಿಕೆ ಪೂರೈಸಿದ ಕೂಡಲೇ ಅತ್ತೆಯು ಮಿ. ಡಿಕ್ಕರನ್ನು ನೋಡಿ –
"ಈ ಹುಡುಗನನ್ನು ಕುರಿತು ನೀವನ್ನುವುದೇನು?" ಎಂದು ಕೇಳಿದಳು.
ಮಿ. ಡಿಕ್ಕರು ಅತ್ತೆಯ ಪ್ರಶ್ನೆ ಬಿದ್ದ ಕೂಡಲೇ ಬಹು ಗಂಭೀರ ಭಾವವನ್ನು ತಾಳಿ –
"ದರ್ಜಿಯನ್ನು ಬರಮಾಡಿ ಹುಡುಗನಿಗೆ ಕೋಟು, ಶರ್ಟು, ಶರಾಯಿಗಳನ್ನು ಹೊಲಿಸಿರಿ" ಎಂದಂದರು.
ಅತ್ತೆಗೆ ಬಹಳ ಸಮಾಧಾನವಾಯಿತು. ಅಂಥ ಉತ್ತಮ ಸಲಹೆಯನ್ನು ಕೇಳಿ ಮಿ. ಡಿಕ್ಕರಿಗೆ ಹಸ್ತಲಾಘವವನ್ನಿತ್ತಳು. ಅನಂತರ ಮಿ. ಮರ್ಡ್‌ಸ್ಟನ್ನರನ್ನು ನೋಡಿ –
"ಹುಡುಗನನ್ನು ಸಾಕುವ ಜವಾಬ್ದಾರಿ ನನ್ನದು. ನಿಮಗೆ ಇಷ್ಟ ಬಂದಂತೆ ನಿಮ್ಮ ದಾರಿ ಹಿಡಿದು ಹೋಗಬಹುದು. ಹುಡುಗ ನೀವು ಹೇಳಿದಂಥವನೇ ಆಗಿದ್ದರೆ ನೀವು ಮಾಡಿದಷ್ಟು ಉಪಚಾರವನ್ನು ನಾನೂ ಅವನಿಗೆ ಮಾಡಬಲ್ಲೆ – ಆದರೆ, ನಾನು ನಿಮ್ಮ ಮಾತನ್ನು ಸ್ವಲ್ಪವೂ ನಂಬುವುದಿಲ್ಲ" ಅಂದಳು.
"ಎಂಥಾ ವಿನಯ" ಎಂದಂದುಕೊಂಡಳು ಮಿಸ್ ಮರ್ಡ್‌ಸ್ಟನ್ನಳು.
"ನಿಮ್ಮ ಸ್ವಂತ ಸ್ವಭಾವವನ್ನು ಸ್ವಲ್ಪ ಜ್ಞಾಪಿಸಿಕೊಳ್ಳಿ. ನಿಮ್ಮ ಕ್ರೂರ ದೃಷ್ಟಿಯು ಆ ಮೃದು ಹೃದಯದ ಕ್ಲೇರಾಳ ಮೇಲೆ ಬಿದ್ದಾಗಿನಿಂದ ಅವಳು ಬಾಡಿ, ಬಾಡಿ, ಕೊನೆಗೆ ಸತ್ತಳು. ಪ್ರೀತಿಸುವವರಂತೆ ನಟಿಸಿ, ಹೂವಿನಂತೆ ಮಾತಾಡಿ, ನಿಮ್ಮಣ್ಣ ಮದುವೆಯಾದರು. ಮದುವೆಯಾದ ಮರುದಿನದಿಂದಲೇ ನಿಮ್ಮ ಉಕ್ಕಿನ ಶಿಸ್ತಿನಿಂದ ಅವಳನ್ನು ಬಗ್ಗಿಸಿ, ಹದಮಾಡಿ, ಮುರಿದಿರಿ. ಮೃತ ಡೇವಿಡ್ಡನ ಸ್ಥಾನವನ್ನು ವಂಚಕತನದಿಂದ ಆಕ್ರಮಿಸಿ, ತಾಯಿ ಮಕ್ಕಳನ್ನೇ ಮನುಷ್ಯರಂತೆ ಬದುಕಲು ಬಿಡದೆ, ಮೃಗದಂತೆ ಇರಿಸಿದಿರಿ. ಯಾಂತ್ರಿಕ ಕ್ರೂರತನದ ಮಹಾವ್ಯಕ್ತಿಗಳಿಬ್ಬರ ಪರಿಚಯ ನನಗೆ ಇಂದು ಆದದ್ದು ಸಾಕಪ್ಪಾ ಸಾಕು! ನೀವಿಲ್ಲಿಂದ ಎಷ್ಟು ಬೇಗ ಹೋಗುತ್ತೀರೋ ಅಷ್ಟೆ ಸಂತೋಷ ನನಗಿದೆ!" ಎಂದು ಅತ್ತೆ ಮಿ. ಮತ್ತು ಮಿಸ್ ಮರ್ಡ್‌ಸ್ಟನ್ನರಿಗೆ ತಿಳಿಸಿದಳು.
"ಇದು ಬುದ್ಧಿಭ್ರಮಣದ ಪರಿಸ್ಥಿತಿಯೋ ಅಥವಾ ಅಮಲಿನ ಪ್ರತಾಪವೋ ನಾವರಿಯೆವು!" ಎಂದನ್ನುತ್ತ ಅಣ್ಣ ತಂಗಿಯರು ನಮ್ಮ ಮನೆಯಿಂದ ಹೊರಟು ಹೋದರು.
"ಪುನಃ ನಮ್ಮ ಹುಲ್ಲುಗಾವಲಿಗೆ ಕತ್ತೆ ಸವಾರಿ ಮಾಡಿಕೊಂಡು ಬಂದರೆ, ಜಾಗ್ರತೆ – ಆಗ ಕೊಡುವ ಮರ್ಯಾದೆಯೇ ಬೇರೆ" ಎಂದು ಅತ್ತೆ ಉತ್ತರವಿತ್ತು ಶಾಂತವಾಗತೊಡಗಿದಳು.
ಅನಂತರ ಅತ್ತೆ ಮಿ. ಡಿಕ್ಕರನ್ನು ನೋಡಿ –
"ಇನ್ನು ಮುಂದೆ ಈ ಬಾಲಕನಿಗೆ ನಾವಿಬ್ಬರೂ ಗಾರ್ಡಿಯನ್ನರು" ಅಂದಳು.
"ಡೇವಿಡ್ಡನ ಮಗನ ಗಾರ್ಡಿಯನ್ನು ನಾನು!" ಎಂದಂದುಕೊಂಡು ಮಿ. ಡಿಕ್ಕರು ಸಂತೋಷಪಟ್ಟರು.

ನನ್ನ ಜೀವನ ವೃತ್ತಾಂತದ ಒಂದಂಶವು ಇಲ್ಲಿಗೆ ಮುಗಿಯಿತು. ನನಗೆ ಹೊಸ ಬಟ್ಟೆಗಳು ಬಂದುವು. ಅವುಗಳಲ್ಲೆಲ್ಲ 'ಟ್ರಾಟೂಡ್ ಕಾಪರ್ಫೀಲ್ಡ್' ಎಂದು ಹೆಸರನ್ನೂ ಬರೆದರು. ಹೆಸರು, ಬಟ್ಟೆ, ಜೀವನ ಕ್ರಮ – ಎಲ್ಲವೂ ಹೊಸತೇ ಆದುವು. ಬ್ಲಂಡರ್ಸ್ಟನ್ನಿನ ನೆನಪುಗಳೆಲ್ಲ ಪರದೆಯ ಹಿಂದಿನ ದೃಶ್ಯಗಳಂತೆ ಮಾಯವಾದುವು. ಹಳೆ ಅನುಭವಗಳು ಸ್ವಪ್ನದಂತೆ ತೋರುತ್ತಿದ್ದಾಗಲೇ, ನನ್ನ ಹೊಸ ಪರಿಸ್ಥಿತಿಯೆಲ್ಲ ಸ್ವಪ್ನದ ಆಶ್ಚರ್ಯಗಳಂತೆಯೇ ಆಶ್ಚರ್ಯಮಯವಾಗಿ ತೋರಿದುವು. ಹಿಂದಿನ ನೆನಪುಗಳೆಲ್ಲ ದುಃಖಕರವೇ ಆಗಿದ್ದರೂ ಅವೆಲ್ಲ ನನ್ನದೇ ಅಂಶವೆಂಬ ಭಾವನಾಪಾಶವು ನನ್ನನ್ನು ಬಿಡುತ್ತಿಲ್ಲ. ಆದ್ದರಿಂದಲೇ ಇನ್ನೊಮ್ಮೆ ಪರದೆಯ ಹಿಂದೆ ನೋಡಿ, ಪರದೆಯನ್ನು ಇಳಿಬಿಡುವೆನು.

ಅಧ್ಯಾಯ ಹದಿನೈದು

ನನ್ನ ದ್ವಿಜನ್ಮ

ಮಿ.ಡಿಕ್ಕರೂ ನಾನೂ ಪ್ರೀತಿಯ ಮಿತ್ರರಾದೆವು. ನಾವು ಜತೆಯಾಗಿ ಗಾಳೀಪಟವನ್ನು ಬಿಡುತ್ತಿದ್ದೆವು. ಮಿ. ಡಿಕ್ಕರು ಮನವಿಯನ್ನು ಬರೆಯುವುದೂ ನಮಗೊಂದು ಪದ್ಧತಿಯೇ ಆಗಿಹೋಯಿತು. ಮನವಿಯ ಕಾರ್ಯಕ್ಕೆ ಎಂದಾದರೂ ಅಂತ್ಯವುಂಟೇ ಎಂದು ಗ್ರಹಿಸುವ ಗೋಜಿಗೆ ಮಿ. ಡಿಕ್ಕರು ಹೇಗೂ ಹೋಗುವವರಲ್ಲ – ನಾನೂ ಈ ವಿಷಯದಲ್ಲಿ ಏನನ್ನೂ ಸ್ಪಷ್ಟವಾಗಿ ಊಹಿಸಲಾರದೇ ಹೋಗಿದ್ದೆನು. ಏನೇ ಇದ್ದರೂ ಈ ಮನವಿ ಮಿ. ಡಿಕ್ಕರಿಗೆ ಕೊಡುತ್ತಿದ್ದ ಸಂತೋಷ ಅಷ್ಟಿಷ್ಟಲ್ಲ. ಹೀಗಾಗಿ ನಮ್ಮ ನಿತ್ಯ ಕಾರ್ಯಗಳಲ್ಲಿ ಒಂದು – ಜೀವನದ ಒಂದಂಶ – ಈ ಗಾಳೀಪಟವಾಗಿತ್ತು.

ಸಂಜೆಯ ಸಮಯದಲ್ಲಿ ಮಿ. ಡಿಕ್ಕರು ನೀಲಾಕಾಶದಲ್ಲಿ ಆ ಗಾಳೀಪಟವನ್ನು ತೇಲಿಬಿಟ್ಟು, ತಾನು ಹಸುರು ಹುಲ್ಲಿನ ಮೇಲೆ ಮಲಗಿ, ತನ್ನ ಮನಸ್ಸಿನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಿದ್ದರು. ಗಾಳೀಪಟ ಗಾಳಿಯಲ್ಲಿ ತೇಲುತ್ತಿದ್ದಾಗ ಮಿ. ಡಿಕ್ಕರ ಮುಖ ಹರ್ಷಪುಳಕಿತವಾಗಿ ಕಂಡಷ್ಟು ಇನ್ನು ಯಾವ ಸಂದರ್ಭದಲ್ಲೂ ಕಾಣುತ್ತಿರಲಿಲ್ಲ. ಇತರ ಸಮಯಗಳಲ್ಲಿ ಅವರ ಮುಖದಲ್ಲಿ ತೋರಿಬರುತ್ತಿದ್ದ ಅಕಾರಣವಾದ ಮುಗುಳ್ನಗೆ ಅಂಥ ಸಂದರ್ಭದಲ್ಲಿ ಇರುತ್ತಿರಲಿಲ್ಲ. ಆಗ ಅವರ ಮುಖದಲ್ಲು ಬಹುವಾದ ಗಾಂಭೀರ್ಯವೂ ಪ್ರಸನ್ನತೆಯೂ ತೋರಿಬರುತ್ತಿದ್ದುವು. ಮನವಿಯನ್ನು ಹೊತ್ತಿದ್ದ ಆ ಗಾಳೀಪಟ ನಮ್ಮಿಂದ ದೂರ ಸರಿದಷ್ಟು ಮಿ. ಡಿಕ್ಕರ ದುಃಖವೂ ದೂರ ಸರಿಯುತ್ತಿತ್ತು. ಗಾಳೀಪಟ ಹಿಂದೆ ಬಂದ ಹಾಗೆಯೇ ಅವರ ದುಃಖವೂ ಪುನಃ ಗೋಚರಿಸಿಕೊಂಡು, ಅದು ಅವರ ಬಳಿ ನಿಶ್ಚೇತನವಾಗಿ ಬಿದ್ದಿದ್ದಾಗ್ಗೆ ಮಿ. ಡಿಕ್ಕರು ದುಃಖದ ಪ್ರತೀಕವೇ ಆಗಿಬಿಡುತ್ತಿದ್ದರು.

ಅತ್ತೆಯ ಪ್ರೇಮ ನನ್ನ ಮೇಲೆ ಬೆಳೆಯುತ್ತಾ ಬಂತು. 'ಟ್ರಾಟೂಡ್' ಎಂದು ನನಗೆ ಹೆಸರಿಟ್ಟಿದ್ದುದನ್ನು ಬರೇ 'ಟಾಟ್' ಎಂದೇ ಮಾಡಿಕೊಂಡು ಪ್ರೀತಿಯಿಂದ ಕರೆಯತೊಡಗಿದರು. ಕೊನೆಗೆ ನನ್ನ ಕಾಲ್ಪನಿಕ ತಂಗಿ – ಬೆಟ್ಸಿ ಟ್ರಾಟೂಡ್ಡಳ – ಸ್ಥಾನವೇ ನನಗೆ ಅತ್ತೆಯ ಹೃದಯದಲ್ಲಿ ದೊರಕಿತು. ಹೀಗೆ ಕೆಲವು ದಿನ ಕಳೆಯುವುದರ ಒಳಗೆ ಅತ್ತೆಯೂ ಮಿ. ಡಿಕ್ಕರೂ ಆಲೋಚಿಸಿ ನನ್ನನ್ನು ಕೇಂಟರ್ಬರಿಯಲ್ಲಿ ಶಾಲೆಗೆ ಕಳುಹಿಸುವುದೆಂದು ನಿಶ್ಚೈಸಿದರು.

ಹೀಗೆ ನಿಶ್ಚಯವಾದ ಮರುದಿನವೇ ಅತ್ತೆ ನನ್ನನ್ನು ಕರೆದುಕೊಂಡು ಕೇಂಟರ್ಬರಿಗೆ ಹೊರಟಳು. ನನ್ನ ಅಗಲುವಿಕೆಯಿಂದ ಮಿ. ಡಿಕ್ಕರಿಗೆ ತುಂಬಾ ಬೇಸರವಾಯಿತು. ಅವರು ತನ್ನಲ್ಲಿದ್ದ ಹಣವನ್ನೆಲ್ಲಾ ನನಗೆ ಕೊಟ್ಟು, ನನ್ನನ್ನು ಹರಸಿ ಕಳುಹಿಸಲು ಮುಂದೆ ಬಂದರು. ಆದರೆ, ಅತ್ತೆ ಮಧ್ಯೆ ಪ್ರವೇಶಿಸಿ – ಒಂದು ವಿಧದ ಮಧ್ಯಸ್ಥಿಕೆಯಿಂದ – ಅವರು ಹತ್ತು ಶಿಲಿಂಗ್ ಮಾತ್ರ ನನಗೆ ಕೊಟ್ಟು ಹೊರಡುವ ಏರ್ಪಾಡಾಯಿತು.

ನಾವು ಕೇಂಟರ್ಬರಿಗೆ ಹೋದದ್ದು ಅತ್ತೆಯ ಕುದುರೆ ಬಂಡಿಯಲ್ಲಿ. ಅತ್ತೆಯೇ ಸ್ವತಃ ಬಂಡಿ ಹೊಡೆಯುವವನ ಎತ್ತರ ಸ್ಥಾನದಲ್ಲಿ ಕುಳಿತು – ರಾಜ ಮೆರವಣಿಗೆಯಲ್ಲಿ ಸಿಪಾಯಿ ಬಂಡಿ ಹೊಡೆಯುವ ಠೀವಿಯಿಂದ – ಬಂಡಿಯನ್ನು ಓಡಿಸಿದಳು. ದಾರಿಯಲ್ಲಿ ಮಾತಾಡುತ್ತಾ ನನ್ನನ್ನು ಕೇಂಟರ್ಬರಿಯ ಒಬ್ಬ ವಕೀಲರು ಶಿಫಾರಸ್ಸು ಮಾಡುವ ಶಾಲೆಗೆ ಕಳುಹಿಸುವುದೆಂದು ಅತ್ತೆ ತಿಳಿಸಿದಳು.

ನಾವು ಕೇಂಟರ್ಬರಿಗೆ ತಲುಪಿದ ದಿನ ಅಲ್ಲಿ ಆ ಊರಿನ ಸಂತೆ ನಡೆಯುತ್ತಿತ್ತು. ದಾರಿಯುದ್ದಕ್ಕೂ ಜನರೂ ವಾಹನಗಳೂ ಸಾಮಾನು ಸಾಗಿಸಿಕೊಂಡು ಹೋಗುತ್ತಿದ್ದರು. ಒಬ ಸ್ತ್ರೀ ಗಂಡಸಿನಂತೆ ಬಂಡಿ ಓಡಿಸುತ್ತಿದ್ದುದನ್ನು ಕಂಡು ಚೇಷ್ಟೆ ಮಾಡುತ್ತಿದ್ದ ಜನಗಳನ್ನಾಗಲೀ ಜನಸಂದಣಿಗಳನ್ನಾಗಲೀ ವಾಹನಗಳನ್ನಾಗಲೀ ಲಕ್ಷಿಸದೇ ಅತ್ತೆ ಬಂಡಿ ಹೊಡೆಯುತ್ತಿದ್ದಳು. ನಾವು ಹೋಗಬೇಕಾಗಿದ್ದುದು ಮಿ. ವಿಕ್ಫೀಲ್ಡ್ ಎಂಬ ಒಬ್ಬ ವಕೀಲರ ಮನೆಗೆಂದು ಅತ್ತೆ ಮೊದಲೇ ತಿಳಿಸಿದ್ದಳು.

ಮಿ. ವಿಕ್ಫೀಲ್ಡರ ಮನೆಗೆ ಸ್ವಲ್ಪ ಹೊತ್ತಿನಲ್ಲೇ ನಾವು ತಲುಪಿದೆವು. ಅವರ ಮನೆ ಮುಖ್ಯರಸ್ತೆಗೆ ಅಡ್ಡ ರಸ್ತೆಯೊಂದು ಬಂದು ಸೇರುವ ಮೂಲೆಯ ಮೊದಲನೆಯ ಮನೆಯಾಗಿತ್ತು. ಮನೆಯನ್ನು ನೋಡುವಾಗಲೇ ಅದೊಂದು ಬಹು ಪುರಾತನದ್ದಾಗಿರಬೇಕೆಂದು ತೋರುತ್ತಿತ್ತು. ಮನೆಯ ಕಿಟಕಿಗಳೆಲ್ಲಾ ಗೋಡೆಯಿಂದ ಹೊರಗೆ ಚಾಚಿಕೊಂಡು ಇಡಲ್ಪಟ್ಟಿದ್ದುವು. ಕಿಟಕಿಗಳೆಲ್ಲಾ ಬಹು ಚಂದದ ಕೆತ್ತನೆ ಕೆಲಸದಿಂದ ಮಾಡಿದ್ದಂತೆ ತೋರುತ್ತಿದ್ದುವು. ಮನೆಯ ಒಳಗಡೆಯ ಮುಚ್ಚಿಗೆಯ ಅಡ್ಡಗಳು ಸಾಲಾಗಿ, ಒಂದೇ ಮಾನದಿಂದ, ಗೋಡೆಯ ಹೊರ ಬದಿ ಸ್ವಲ್ಪ ಮೀರಿಕೊಂಡು ಬಂದು, ಗೋಡೆಗೆ ಒಂದು ವಿಧದ ಅಲಂಕಾರವನ್ನು ಮಾಡಿದ್ದುವು. ಆ ಅಡ್ಡಗಳ ತುದಿಯಲ್ಲಿ ಮನುಷ್ಯನ ತಲೆಯ ಆಕಾರಗಳನ್ನು ಕೆತ್ತಿಟ್ಟಿದ್ದರು. ಈ ತಲೆಗಳು ಕೆಳಗಡೆ ರಸ್ತೆಯಲ್ಲಿ ಹೋಗುತ್ತಿದ್ದವರನ್ನೆಲ್ಲಾ ಸತತವೂ ನೋಡುತ್ತಲೇ ಇರುತ್ತಿದ್ದುವು. ನಾವು ಬಂಡಿಯಿಂದಿಳಿದು ಮನೆಗೆ ಸಮೀಪವಾದಾಗ ಮನೆಯ ಹೆಬ್ಬಾಗಿಲೂ ಮೆಟ್ಟಲುಗಳೂ ತೋರಿದುವು. ಬಾಗಿಲಲ್ಲಿ ಬಹು ಚಂದದ ಕೆತ್ತನೆ ಕೆಲಸ ಮಾಡಿದ್ದರು. ಮನೆಯ ನೆಲ, ಗೋಡೆ ಎಲ್ಲವೂ ಚೊಕ್ಕಟವಾಗಿದ್ದು, ಪಳಪಳನೆ ಹೊಳೆಯುತ್ತಿದ್ದುವು. ಮನೆಯ ಮುಖ್ಯ

ಮೆಟ್ಟಲುಗಳು ಶ್ವೇತ ಶಿಲೆಯಿಂದ ಮಾಡಿದವಾಗಿದ್ದುವು. ಈ ರೀತಿ ಬಾಗಿಲು, ಕಿಟಕಿ, ಮೆಟ್ಟಲುಗಳೆಲ್ಲವೂ ಪರ್ವತಗಳಷ್ಟು ಪುರಾತನದವೂ ಪರ್ವತಗಳನ್ನು ಮುಚ್ಚುವ ಹಿಮದಷ್ಟು ನಿರ್ಮಲವೂ ಆಗಿದ್ದುವು.

ನಾವು ಮನೆಯ ಮೆಟ್ಟಲನ್ನು ಮುಟ್ಟುತ್ತಿದ್ದಾಗಲೇ ಮನೆಯ ಕಿಟಕಿಯಿಂದ ತಲೆ ಹೊರಹಾಕಿ ನೋಡುತ್ತಿದ್ದ ಒಂದು ಮುಖವನ್ನು ನಾನು ಕಂಡೆನು. ಆ ಮುಖವನ್ನು ನೋಡಿದಾಗ ನನಗೆ ಹೆಣದ ಮುಖ ಕಂಡಂತಾಯಿತು. ನಾವು ಮನೆಯೊಳಗೆ ನುಗ್ಗುವ ಮೊದಲೇ ಆ ಮುಖ ಹೊತ್ತ ಮನುಷ್ಯನು ಹೊರಗೆ ಬಂದು ನಮ್ಮತ್ತೆಯನ್ನು ಸ್ವಾಗತಿಸಿದನು. ಅವನ ಕೃಶ ದೇಹ, ನೀಳವಾದ ಕೈಗಳನ್ನು ಕಂಡು ನನಗೆ ಒಂದು ವಿಧದ ಜಿಗುಪ್ಸೆ ತೋರಿತು. ಅವನು ತಲೆಕೂದಲನ್ನು ಬಹು ಗಿಡ್ಡವಾಗಿ ಬೋಳಿಸಿಕೊಂಡಿದ್ದನು. ಕೂದಲ ಮೇಲೆಯೇ ಅವನಿಗೆ ದ್ವೇಷವಿದ್ದಂತೆ ಅವನ ಹುಬ್ಬುಗಳಲ್ಲೂ ಕಣ್ಣು ರೆಪ್ಪೆಗಳಲ್ಲೂ ಕೂದಲಿರಲಿಲ್ಲ. ಅವನನ್ನು ಸ್ವಲ್ಪ ವಿಚಾರದೃಷ್ಟಿಯಿಂದ ನೋಡಿದ ಹಾಗೆ ಅವನು ಕಣ್ಣು ರೆಪ್ಪೆಗಳನ್ನೇ – ಎಲ್ಲರೂ ಆಡಿಸುತ್ತಿರುವಂತೆ – ಆಡಿಸುತ್ತಿರಲಿಲ್ಲ. ಮನೆಯ ಯಜಮಾನರು ಮನೆಯಲ್ಲಿದ್ದಾರೋ ಎಂದು ಅವನೊಡನೆ ವಿಚಾರಿಸಿಕೊಂಡು ನಾವು ಮನೆಯೊಳಗೆ ಹೋದೆವು. ಅವನು ಮಿ. ವಿಕ್ಫೀಲ್ಡರ ಗುಮಾಸ್ತನೆಂದೂ ಅವನ ಹೆಸರು ಉರೆಯಾಹೀಪ್ ಎಂದೂ ಅತ್ತೆ ತಿಳಿಸಿದಳು. ಅವನಿಗೆ ಸಾಧಾರಣ ಹದಿನಾರು ವರ್ಷ ಪ್ರಾಯವಾಗಿರಬಹುದೆಂದು ನಾನು ಊಹಿಸಿದೆ.

ಉರೆಯಾಹೀಪನು ನಮ್ಮನ್ನು ಉದ್ದದ ಒಂದು ಕೋಣೆಯಲ್ಲಿ ಕುಳ್ಳಿರಿಸಿ, ಯಜಮಾನರಿಗೆ ತಿಳಿಸಲು ಒಳಗೆ ಹೋದನು. ನಾವು ಕುಳಿತಿದ್ದ ಕೋಣೆ ವಕೀಲರದೆಂದು ಗೊತ್ತಾಗುತ್ತಿತ್ತು. ಆ ಕೋಣೆಯಲ್ಲಿ ಮೇಜು, ಕುರ್ಚಿ, ಕಪಾಟುಗಳೂ ಇದ್ದುವಲ್ಲದೆ ಮೇಜಿನ ಮೇಲೆ ಕೆಂಪು ಲಾಡಿಗಳಿಂದ ಕಟ್ಟಲಾಗಿದ್ದ ರಿಕಾರ್ಡ್ ಕಟ್ಟುಗಳೂ ಕನ್ನಡಿ ಕಪಾಟಿನ ಒಳಗೆ ದಪ್ಪದಪ್ಪದ ಪುಸ್ತಕಗಳೂ ಇದ್ದುವು. ಆ ಕೋಣೆಗೆ ಮುಚ್ಚಿಗೆ ಇತ್ತು. ಮುಚ್ಚಿಗೆಗೆ ಒಂದೆರಡು ಮೊಳ ಕೆಳಗೆ, ಗೋಡೆಯಲ್ಲೇ ಎದ್ದು ಬರಿಸಿದ್ದ ಅಲಂಕಾರಿಕ ಚಡಿಯಲ್ಲಿ, ಒಬ್ಬ ಗೃಹಸ್ಥನದೂ ಮತ್ತು ಒಬ್ಬಳು ಗೃಹಿಣಿಯದೂ ಸುಂದರವಾದ ಎರಡು ತೈಲಚಿತ್ರಗಳು ಒಂದರಬದಿಯಲ್ಲಿ ಒಂದರಂತೆ ಇದ್ದುವು. ಗೃಹಸ್ಥನ ಹುಬ್ಬು, ಮೀಸೆಗಳು ಕಪ್ಪಗೇ ಇದ್ದರೂ ಅವನ ತಲೆಗೂದಲು ಬೆಳ್ಳಗಿತ್ತು. ಗೃಹಿಣಿ ಸುಂದರಿಯಾಗಿಯೂ ಶಾಂತ ಮುಖಮುದ್ರೆಯವಳೂ ಆಗಿದ್ದಳು. ಇಬ್ಬರೂ ಘನವಂತರೂ ಪ್ರಭಾವಶಾಲಿಗಳೂ ಎಂಬಂತೆ ತೋರುತ್ತಿದ್ದರು.

ಸ್ವಲ್ಪಹೊತ್ತಿನಲ್ಲಿ ನಮ್ಮೆದುರಿನ ಬಾಗಿಲಿಂದ ಒಬ್ಬ ಗೃಹಸ್ಥರು ಬಂದರು. ಅವರನ್ನು ಕಂಡೊಡನೆಯೇ ನಾನು ತೈಲಚಿತ್ರವನ್ನು ನೋಡುವಂತೆ ಆಯಿತು – ನಮ್ಮೆದುರು ಬಂದವರು ತೈಲಚಿತ್ರದಿಂದಲೇ ಎದ್ದು ಬಂದಿದ್ದವರಂತೆ ತೋರಿದರು. ಆದರೆ ತೈಲಚಿತ್ರದವರು ಸ್ವಲ್ಪ ಎಳೆಪ್ರಾಯದವರಾಗಿಬೇಕೆಂಬಂತಿದ್ದರು. ಬಂದವರು ನಮ್ಮನ್ನು ಕುಳಿತುಕೊಳ್ಳಲು ಹೇಳಿ –
"ಮಿಸ್ ಟ್ರಾಟೂಡ್, ನೀವು ಬಂದ ಕಾರ್ಯವೇನು? ಕೋರ್ಟು ಸಂಬಂಧವಲ್ಲವಷ್ಟೇ?" ಅಂದರು.
"ಕೋರ್ಟು ಸಂಬಂಧ ಬಂದದ್ದಲ್ಲ – ನನ್ನ ಅಳಿಯ ಬಂದಿದ್ದಾನೆ, ಚಿಕ್ಕವನು. ಅವನನ್ನು ಶಾಲೆಗೆ ಸೇರಿಸಬೇಕೆಂದು ಬಂದಿರುವೆನು" ಅಂದಳು ಅತ್ತೆ.
"ವ್ಯಾಜ್ಯ, ಕೋರ್ಟು, ಇವೆಲ್ಲಾ ಬೇಡವಮ್ಮಾ ಬೇಡ. ಅವುಗಳ ಅನುಭವ ನಮಗೆ ಇವೆ. ನಾನೇನೋ ಈ ವೃತ್ತಿಯಲ್ಲಿ – ನಿಮಗೆ ಗೊತ್ತಿದೆಯಲ್ಲ – ಆ ಒಂದು ಉದ್ದೇಶದಿಂದ ಕೆಲಸ ಮಾಡುತ್ತಿದ್ದೇನೆ. ನಿಮಗೊಬ್ಬ ಅಳಿಯನಿದ್ದಾನೆಂದು ನನಗೆ ಗೊತ್ತಿಲ್ಲ" ಅಂದರು ಮಿ. ವಿಕ್ಫೀಲ್ಡರು.
"ಇವನೇ ನನ್ನಳಿಯ – ದತ್ತಕನನ್ನಾಗಿ ಸ್ವೀಕರಿಸಿ ಸಾಕುತ್ತಿದ್ದೇನೆ" ಎಂದು ಹೇಳಿ ನನ್ನನ್ನು ತೋರಿಸಿದಳು.
"ಶಾಲೆಗೆ ಸೇರುವುದು ಸರಿ, ನಿಮ್ಮ ಗುರಿಯೇನು? ಎಂಥ ವಿದ್ಯೆ? ಮುಂದಿನ ಜೀವನದ ಉದ್ದೇಶಕ್ಕೆ ಸರಿಯಾಗಿ ಇಂದಿನ ವಿದ್ಯೆ ಏನಾಗಬೇಕೆಂದು ನಾವು ಗೊತ್ತುಮಾಡಿಕೊಳ್ಳಬೇಕು" ಅಂದರು ವಕೀಲರು.
"ಈ ವಕೀಲನ ಪ್ರಶ್ನೆಯು ಯಾವಾಗಲು ಒಂದೇ ವಿಧದ್ದಿರುತ್ತದೆ. 'ಉದ್ದೇಶ', 'ಗುರಿ', 'ಹೇತು' – ನೀವು ವಿಚಾರಿಸುವುದೇ ಹೀಗೆ. ನಮಗೆ ಅದಕ್ಕೆಲ್ಲಾ ಉತ್ತರ ತಿಳಿಯದು. ನಮ್ಮ ಬಾಲಕನು ವಿದ್ಯಾವಂತನಾಗಿ, ಸುಖಜೀವನವನ್ನು ನಡೆಸಲು ಸಾಮರ್ಥ್ಯ ಪಡೆಯಬೇಕು. ಅದೇ ನಮ್ಮ ಗುರಿ" ಅಂದಳು ಅತ್ತೆ.
"ಸರಿ ಹಾಗಾದರೆ, ಅರ್ಥವಾಯಿತು. ನಾನು ನಿಮ್ಮನ್ನು ಒಂದು ಶಾಲೆಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಅಲ್ಲದೆ, ಹುಡುಗನಿಗೆ ಅಲ್ಲೇ ಊಟವಸತಿಗಳ ಏರ್ಪಾಡೂ ಸಿಕ್ಕುವಂತೆ ಮಾಡಬಹುದು. ಹುಡುಗನು ಸದ್ಯ ಇಲ್ಲೇ ಇರಲಿ, ನಾವು ಹೋಗೋಣ" ಎಂದು ಹೇಳಿ ಮಿ. ವಿಕ್ಫೀಲ್ಡರು ಅತ್ತೆಯನ್ನು ಕರೆದುಕೊಂಡು ಹೋದರು.

ಉರೆಯಾಹೀಪನು ಅವನ ಪ್ರತ್ಯೇಕ ಕೋಣೆಯಲ್ಲಿದ್ದರೂ ಅವನಿಗೆ ನಮ್ಮ ಮಾತುಗಳೆಲ್ಲ ಕೇಳುವಷ್ಟರ ನೆರೆಕೋಣೆ ಅವನದಾಗಿತ್ತು. ನಾನು ಕುಳಿತಲ್ಲಿಂದ ಅವನು ಸರಿಯಾಗಿ ಕಾಣುತ್ತಿದ್ದನು. ನಮ್ಮ ಮಾತುಗಳನ್ನು ಕೇಳುತ್ತಿದ್ದರೂ ಏನೂ ಅರಿಯದವನಂತೆ ತೋರಿಸಿಕೊಳ್ಳುತ್ತಿದ್ದನೆಂದೂ ನಾನು ಊಹಿಸಿದೆನು. ಅವನ ಚರ್ಯೆಗಳು ನನಗೆ ಸಾಕಷ್ಟು ಅಂಥ ಅವಕಾಶವನ್ನು ಕೊಟ್ಟವು. ಉರೆಯನು ನನ್ನನ್ನೂ ಬಹುವಾಗಿ ನೋಡುತ್ತಿದ್ದನು. ಅವನ ನೋಟವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಾನು ಆ ಕೋಣೆಯ ಇನ್ನೊಂದು ಬದಿಗೆ ಹೋದೆನು.

ಸ್ವಲ್ಪ ಸಮಯದನಂತರ ಮಿ. ವಿಕ್ಫೀಲ್ಡರು ಅತ್ತೆಯೂ ಶಾಲೆಯನ್ನು ನೋಡಿಕೊಂಡು ಬಂದರು. ಅವರಿಗೆ ಶಾಲೆ ತೃಪ್ತಿಕರವಾಗಿತ್ತು. ಆದರೆ, ಊಟವಸತಿಗಳ ಅನುಕೂಲ ಅಲ್ಲಿರಲಿಲ್ಲ. ಇದ್ದರೂ ಸಾಕಷ್ಟು ಉತ್ತಮತರದ್ದಾಗಿರಲಿಲ್ಲವಂತೆ. ಕೊನೆಗೆ ಮಿ. ವಿಕ್ಫೀಲ್ಡರು ನನ್ನನ್ನು ತಮ್ಮ ಮನೆಯಲ್ಲೇ ಮಾಡಿಕೊಂಡು, ಊಟವಸತಿಗಳನ್ನು ಧರ್ಮಾರ್ಥವಾಗಿ ಒದಗಿಸುವುದಾಗಿ ಒಪ್ಪಿದರು. ಧರ್ಮಾರ್ಥ ಸಹಾಯ ಮಾಡಕೂಡದು – ಪ್ರತಿಫಲ ತೆಗೆದುಕೊಂಡೇ ಮಾಡಬೇಕು – ಎಂದು ತನ್ನ ಕಡೆಯ ಔದಾರ್ಯದಿಂದ ಅತ್ತೆ ವಾದಿಸಿದಳು. ತಾವು ಅಷ್ಟೊಂದು ಚಿಕ್ಕ ಧರ್ಮ ಸಹಾಯವನ್ನಾದರೂ ಮಾಡಿದರೆ ತಪ್ಪೇನು, ಆ ಮಟ್ಟಿಗೆ ಅತ್ತೆ ಒಪ್ಪಬೇಕು – ಎಂದು ಮಿ. ವಿಕ್ಫೀಲ್ಡರು ತಮ್ಮ ಔದಾರ್ಯವನ್ನು ವ್ಯಕ್ತಪಡಿಸಿದರು. ಕೊನೆಗೆ ಅತ್ತೆಯ ಅಪೇಕ್ಷೆಗೆ ಒಪ್ಪುವ ಔದಾರ್ಯವನ್ನು ಗೃಹಸ್ಥನು ಮಾಡಬೇಕೆಂಬ ತತ್ವಕ್ಕಾಗಿ ಮಿ. ವಿಕ್ಫೀಲ್ಡರು ಪ್ರತಿಫಲ ಸ್ವೀಕರಿಸಿಯೇ ನನ್ನನ್ನು ಒಪ್ಪಿದರು.

ಅನಂತರ ಮನೆಯ ಯಜಮಾನಿಯ ಪರಿಚಯ ಮಾಡಿಕೊಡುವುದಾಗಿ ಹೇಳುತ್ತಾ ಮಿ. ವಿಕ್ಫೀಲ್ಡರು ನಮ್ಮನ್ನು ಒಳಗೆ ಕರೆದುಕೊಂಡು ಹೋದರು. ಇವರ ವಾಸದ ವಿಭಾಗ ಮನೆಯ ಮಹಡಿಯ ಮೇಲಾಗಿತ್ತು. ಉಪ್ಪರಿಗೆ ಮೆಟ್ಟಲುಗಳನ್ನು ಹತ್ತಿ ಒಂದು ಬೈಠಖಾನೆಗೆ ಹೋದೆವು. ಅಲ್ಲಿ ಸುಸಜ್ಜಿತವಾದ ಸೋಫಾಗಳೂ ಒಂದೆರಡು ಚಿಕ್ಕ ಮೇಜುಗಳೂ ಕೆಲವು ಕುರ್ಚಿಗಳೂ ಸುಂದರವಾದ ಕೆಲವು ಕಪಾಟುಗಳೂ ಇದ್ದುವು. ಕಿಟಕಿಗಳ ರಚನಾಕ್ರಮದಲ್ಲಿ ಅವುಗಳ ಬುಡದಲ್ಲಿ ಕುಳಿತು ಹೊರಗಿನ ದೃಶ್ಯಗಳನ್ನು ನೋಡಬಹುದಾದಂಥ ಸೌಕರ್ಯವಿತ್ತು – ಕುಳಿತುಕೊಳ್ಳಲು ಬೇಕಾದಷ್ಟು ಅಗಲದ, ನುಣುಪಾದ, ಆಸಗಳು ಅಲ್ಲಿದ್ದುವು. ಮೇಜುಗಳ ಮೇಲೆ ಹೂಗೊಂಚಲುಗಳಿದ್ದ ಸುಂದರವಾದ ಚಿಕ್ಕ ಲೋಹದ ಪಾತ್ರೆಗಳನ್ನು ಅಲಂಕಾರಕ್ಕಾಗಿ ಇಟ್ಟಿದ್ದರು. ಬೈಠಖಾನೆಯು ನಿರ್ಮಲವಾಗಿ, ತಂಪಾಗಿ, ಬಹು ಶಾಂತಭಾವನೆ ಕೊಡುವಂತೆ ಇತ್ತು. ಅಲ್ಲಿನ ಗೋಡೆಗಳಲ್ಲಿ ತೂಗಗೊಡಿಸಿದ್ದ ಒಂದೆರಡು ಚಿತ್ರಗಳು ಕೊಠಡಿಯ ಶಾಂತಿಯನ್ನೂ ಸೌಂದರ್ಯವನ್ನೂ ಹೆಚ್ಚಿಸುತ್ತಿದ್ದುವು.

ಬೈಠಖಾನೆಯ ಇನ್ನೊಂದು ತುದಿಯ ಬಾಗಿಲನ್ನು ತಟ್ಟಿದೊಡನೆ ಸಾಧಾರಣ ನನ್ನಷ್ಟೇ ಪ್ರಾಯದ ಒಬ್ಬ ಬಾಲಕಿ ಒಳಗಿನಿಂದ ಬಂದಳು. ಅವಳು ಕೆಳಗಿನ ಕೊಠಡಿಯಲ್ಲಿದ್ದ ತೈಲಚಿತ್ರದ ಗೃಹಿಣಿಗೆ ಬಹುಮಟ್ಟಿಗೆ ಹೋಲುತ್ತಿದ್ದಳು. ತೈಲಚಿತ್ರವೇ ಈ ಬಾಲಕಿಯಾಗಿ ಎದ್ದು ಬಂದಂತೆ ಅವಳು ತೋರುತ್ತಿದ್ದರೂ ಈ ಬಾಲಕಿಯ ಮುಖದಲ್ಲಿದ್ದ ಬುದ್ಧಿ ವಿಕಾಸತೆ ತೈಲಚಿತ್ರದ ಹೆಂಗುಸಿನಲ್ಲಿರಲಿಲ್ಲ. ಆ ಹುಡುಗಿ ತನ್ನ ಮಗಳೆಂದೂ ಅವಳ ಹೆಸರು ಏಗ್ನೆಸ್ ಎಂದೂ ಮಿ. ವಿಕ್ಫೀಲ್ಡ್ ಹೇಳಿ ಅವಳ ಪರಿಚಯ ಮಾಡಿಕೊಟ್ಟರು.

ಅನಂತರ ನನಗಾಗಿ ಬಿಡಲಿದ್ದ ಕೋಣೆಗೆ ನಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದರು. ಆ ಕೋಣೆಯ ಕಿಟಕಿಗಳಿಗೆ ಕೆತ್ತಿ ಮಾಡಿದ ದಪ್ಪದ ಕನ್ನಡಿ ಬಾಗಿಲುಗಳಿದ್ದುವು. ಆ ಬಾಗಿಲುಗಳಿಂದ ಬೆಳಕು ಒಳಗೆ ಬರುವಾಗ ಇಗರ್ಜಿ ಒಳಗಿನ ಭಾಗಕ್ಕೆ ಹೊರಗಿನ ಬೆಳಕು ಬಂತಂಥ ಒಂದು ಸೌಮ್ಯತೆ ಕೂಡಿ ಬರುತ್ತಿತ್ತು. ಆ ಸೌಮ್ಯ ಬೆಳಕಿನಲ್ಲಿ ನಿಂತು ಏಗ್ನೆಸ್ಸಳು ನನ್ನದಾಗಲಿದ್ದ ಕೋಣೆಯನ್ನು ತೋರಿಸುತ್ತಾ ನಮ್ಮನ್ನು ಸ್ವಾಗತಿಸಿದಳು. ಇಗರ್ಜಿಯೊಳಗೆ ದೇವಕನ್ನೆಯರ ಚಿತ್ರಗಳು ಶೋಭಿಸುವಂತೆ ಏಗ್ನೆಸ್ಸಳು ಆಗ ನನಗೆ ತೋರಿಬಂದಳು. ಅಲ್ಲಿನ ಶಾಂತತೆ, ಅಲ್ಲಿನ ಬೆಳಕು, ಏಗ್ನೆಸ್ಸಳ ಪ್ರಸನ್ನ ಮುಖ ಎಲ್ಲವೂ ನನ್ನಲ್ಲಿ ಅವಳನ್ನು ಕುರಿತು ದೈವಿಕವಾದ ಭಕ್ತಿ, ಪ್ರೇಮಗಳನ್ನು ಪ್ರಚೋದಿಸಿದುವು.

ಈ ರೀತಿ ನಾವು ಮನೆಯನ್ನೆಲ್ಲ ನೋಡಿದನಂತರ ಅತ್ತೆ ಸ್ವಲ್ಪ ಲಘು ಉಪಾಹಾರ ತೆಗೆದುಕೊಂಡು, ನನ್ನನ್ನು ಆಶೀರ್ವದಿಸಿ ಹೊರಟುಹೋದಳು. ಅವಳು ಹೋದ ಕ್ರಮವನ್ನು ನೋಡುವಾಗ, ಅವಳಿಗೆ ನನ್ನನ್ನು ಅಗಲುವಾಗ ಆಗುತ್ತಿದ್ದ ಬೇಸರವನ್ನು ತೋರಿಸಬಾರದೆಂದೇ ಹಾಗೆ ಮಾಡಿದ್ದೆಂದು ನಾನು ಊಹಿಸಬೇಕಾಗಿತ್ತು.

ಸ್ವಲ್ಪ ಸಮಯದನಂತರ ಮಿ. ವಿಕ್ಫೀಲ್ಡ್ ಮತ್ತು ನನ್ನ ಊಟವಾಯಿತು. ಏಗ್ನೆಸ್ಸಳೇ ನಮಗೆ ಊಟ ಬಡಿಸಿದಳು. ಊಟವಾದನಂತರ ಮಿ. ವಿಕ್ಫೀಲ್ಡರು ಒಂದು ಆರಾಮ ಕುರ್ಚಿಯಲ್ಲಿ ಕುಳಿತು ಏಗ್ನೆಸ್ಸಳು ಕೊಟ್ಟ ವೈನನ್ನು ಕುಡಿದರು. ಆ ತಂದೆ ಮಕ್ಕಳ ಪ್ರೇಮ ಎಷ್ಟಿತ್ತೆಂಬುದು ದಿನ ಹೋದಂತೆ ನನಗೆ ಗೊತ್ತಾಯಿತು. ಪ್ರತಿದಿನವೂ ಏಗ್ನೆಸ್ಸಳು ಪಿಯಾನವನ್ನು ಬಾರಿಸುತ್ತಾ ಹಾಡುತ್ತಿದ್ದಳು. ಅವಳ ಮೃದುಮಧುರವಾದ ಗಾನವನ್ನು ಕೇಳದಿದ್ದರೆ, ಅವಳ ಕೈಯಿಂದ ಊಟಬಡಿಸಿಕೊಳ್ಳದಿದ್ದರೆ, ಅವಳ ಕೈಯಿಂದ ವೈನ್ ಹಾಕಿಸಿಕೊಂಡು ಕುಡಿಯದಿದ್ದರೆ, ಅವಳ ಜತೆಯಲ್ಲಿ ಕುಳಿತು ಮಾತಾಡದಿದ್ದರೆ ಮಿ. ವಿಕ್ಫೀಲ್ಡರ ಜೀವನವೇ ಒಂದು ಶೂನ್ಯವಾಗಿ, ಸಂತೋಷರಹಿತದ್ದಾಗುತ್ತಿತ್ತೆಂದು ನಾನು ದಿನ ಹೋದಂತೆ ತಿಳಿದೆನು.

ಆ ದಿನ ಸಂಜೆಯಲ್ಲಿ ನಾನು ಏಕಾಂಗಿಯಾಗಿ ಊರನ್ನು ಸುತ್ತಿ ನೋಡಿ ಬಂದೆ. ಮನೆಗೆ ಹಿಂತಿರುಗುವ ಸಮಯದಲ್ಲಿ ಉರೆಯಾಹೀಪನು ಎದುರು ಸಿಕ್ಕಿದನು. ಅಂದಿನ ನನ್ನ ಸಂತೋಷಗಳ ಕಾರಣವಾಗಿ, ಆ ಮನೆಗೆ ಸಂಬಂಧಪಟ್ಟ ಉರೆಯಾಹೀಪನೊಡನೆ ಮಾತಾಡುವುದು ನ್ಯಾಯವೆಂದು ತೋರಿತು. ಅವನೊಡನೆ ಮಾತಾಡಿ ಹೊರಡುವಾಗ ಅವನು ಹಸ್ತಲಾಘವವನ್ನಿತ್ತನು. ನನ್ನ ಈ ಉದಾರವರ್ತನೆಯ ಫಲವಾದ ಹಸ್ತಲಾಘವವನ್ನು ಮಾತ್ರ ನಾನು ಎಂದಿಗೂ ಮರೆಯಲಾರೆನು. ಅವನ ಉದ್ದವಾದ, ಸಪುರವಾದ ಕೈಬೆರಳುಗಳಿಂದ ಬೆವರು

ಅನವರತವೂ ಜಿನುಗುತ್ತಿರಬೇಕೆಂದು ನಾನು ತಿಳಿಯುತ್ತೇನೆ. ಆ ನೆನಪಿನ ಹಸ್ತಲಾಘವ ನನ್ನನ್ನು ಆ ದಿನ ಬಹುವಾಗಿ ಬಾಧಿಸಿತು. ಆ ಬೆವರನ್ನು ನನ್ನ ಬೆರಳುಗಳಿಂದ ಒರೆಸಿ ತೆಗೆದರೂ ಬೆವರಿನ ಸ್ಮರಣೆಯನ್ನು ಒರೆಸಿ ತೆಗೆಯಲಾರದೆ ಇದ್ದೆ.

ಮನೆಗೆ ತಲುಪಿದ ಕೂಡಲೆ, ನನ್ನ ಕೋಣೆಯ ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ತಂಪು ಗಾಳಿಯನ್ನು ಸೇವಿಸುತ್ತಾ ಬೆವರನ್ನು ಮರೆಯಲು ಪ್ರಯತ್ನಿಸಿದೆನು. ಕೋಣೆಯ ಹೊರಗೆ ನೋಡುತ್ತಿದ್ದ ಹಾಗೆ ಅಡ್ಡಗಳ ತುದಿಯಲ್ಲಿದ್ದ ಮುಖವೊಂದು ನನ್ನನ್ನೇ ನೋಡುತ್ತಿರುವಂತೆ ತೋರಿತು. ಉರೆಯನೇ ಅಡ್ಡದ ತುದಿಗೆ ತಲುಪಿ ನನ್ನನ್ನು ಹಿಂಬಾಲಿಸಿ ನೋಡುತ್ತಿರುವಂತೆ ನನಗೆ ತೋರಿ, ಅವಸರದಿಂದ ಕಿಟಕಿಯನ್ನು ಮುಚ್ಚಿ ಕುಳಿತೆನು

ಅಧ್ಯಾಯ ಹದಿನಾರು

ಯಾವ ರೀತಿಯಿಂದ ನೋಡಿದರೂ ನಾನೊಬ್ಬ ಹೊಸಬ

ಮರುದಿನ ಬೆಳಗ್ಗೆ ಮಿ. ವಿಕ್ಫೀಲ್ಡರೇ ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಿ ದಾಕಲು ಮಾಡಿಸಿದರು. ಕೇಂಟರ್ಬರಿಯಲ್ಲಿ ಶಾಲೆಯಿದ್ದ ವಠಾರವೇ ಗೌಜುಗಲಭೆಯಿಲ್ಲದಿದ್ದ – ಜನನಿಬಿಡವಾಗಿರದಿದ್ದ – ಬಹು ಶಾಂತ ವಾತಾವರಣದ್ದಾಗಿದ್ದಿತು. ಶಾಲಾ ಕಂಪೌಂಡು ಬಹು ವಿಶಾಲವಾಗಿತ್ತು. ಶಾಲಾ ಕಟ್ಟಡವು ಎತ್ತರವಾಗಿದ್ದು ಭವ್ಯವಾಗಿ ತೋರುತ್ತಿತ್ತು. ಶಾಲೆಯ ಒಂದು ಬದಿಯಲ್ಲಿ ಚೆನ್ನಾಗಿ ಬೆಳೆಸಿ ಕಾಪಾಡಿಕೊಂಡು ಬಂದಿದ್ದ ಚಂದದ ಹೂದೋಟ, ಇತರ ಎಲ್ಲ ಬದಿಗಳಲ್ಲೂ ಆಟದ ಅಥವಾ ತಿರುಗಾಡಲಿದ್ದ ಮೈದಾನಗಳಿದ್ದುವು. ಮೈದಾನಗಳ ಅಂಚಿನಲ್ಲಿ ತಿರುಗಾಡಲು ರಸ್ತೆಯನ್ನು ಮಧ್ಯದಲ್ಲಿಟ್ಟುಕೊಂಡು, ಎರಡೂ ಬದಿಗಳಲ್ಲಿ ಸಾಲಾಗಿ ನೆಟ್ಟಿದ್ದ ಮರಗಳ ಸಾಲುಗಳು ಇದ್ದವು. ಈ ಬಹು ಎತ್ತರವಾದ ಮರಗಳ ಹಸುರೆಲೆಯ ತಂಪು ಆ ವಠಾರಕ್ಕೆಲ್ಲ ಹರಡಿ ಬರುತ್ತಿತ್ತು. ಇನ್ನು ಶಾಲಾ ಕಂಪೌಂಡನ್ನೆಲ್ಲ ಆವರಿಸಿ ಬಂದಿದ್ದ ಆವರಣ ಗೋಡೆಯೂ ಆ ಗೋಡೆಗೆ ಒಂದೇ ದೂರದಲ್ಲಿ ಎದ್ದು ಬಂದಿದ್ದ ಬಲವಾದ ಚಂದದ ಸ್ತಂಭಗಳೂ ಇದ್ದು ಆವರಣವೂ ಬಹು ಅಲಂಕಾರವಾಗಿಯೇ ಇತ್ತು.

ನನ್ನನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಡಾಕ್ಟರ್ ಸ್ಟ್ರಾಂಗರವರ ಸಮಕ್ಷಮಕ್ಕೇ ಕರೆದುಕೊಂಡು ಹೋಗಿ ದಾಕ್ಲೆ ಮಾಡಿಸಿದ್ದುದರಿಂದ ನನಗೆ ಆ ದಿನವೇ ಅವರ ಪರಿಚಯ ದೊರಕಿತು.

ಡಾ. ಸ್ಟ್ರಾಂಗರು ನಡುಪ್ರಾಯ ದಾಟಿ ಕೆಲವು ವರ್ಷ ಆಗಿದ್ದವರು. ಅವರ ತಲೆಗೂದಲನ್ನು ಇಟ್ಟುಕೊಂಡಿದ್ದ ಕ್ರಮದಿಂದ ಪ್ರಾರಂಭಿಸಿ ಅವರ ಸಮಸ್ತ ವಸ್ತುಗಳನ್ನು ನೋಡಿದರೂ ಕಂಡುಬರುವುದೆಲ್ಲ ಅನಾಡಂಬರವೇ ಆಗಿತ್ತು. ಅವರು ಅನಾಡಂಬರವನ್ನೂ ದಾಟಿ, ಅಲಕ್ಷ್ಯದವರೆಗೂ ತಲುಪಿದ್ದರೆಂದರೂ ತಪ್ಪಾಗಲಾರದೆಂಬಷ್ಟರವರೆಗೆ ಹರಡಿ ಬಿದ್ದಿರುತ್ತಿದ್ದ ಅವರ ನರೆತ ತಲೆಗೂದಲೇ ಹೇಳುತ್ತಿತ್ತು. ಅವರ ಆಫೀಸಿಗೇ ನಾವು ಹೋಗಿ ಸ್ವಲ್ಪ ಹೊತ್ತು ಕುಳಿತಿದ್ದುದರಿಂದ ಅಲ್ಲಿನ ಏರ್ಪಾಡುಗಳನ್ನು ನಾನು ನೋಡಿ ತಿಳಿದೆನು. ಕುರ್ಚಿ, ಮೇಜು, ಪುಸ್ತಕಗಳೆಲ್ಲವೂ ಅವರ ಇತರ ಸ್ವಭಾವಕ್ಕನುಗುಣವಾಗಿದ್ದುವು – ಇಡಲಾಗಿದ್ದುವು – ಎಂದು ಮಾತ್ರ ನಾನು ಹೇಳಬಲ್ಲೆನು. ನಾವು ಅವರನ್ನು ಕಾಣಲು ಅವರ ಆಫೀಸಿಗೆ ನುಗ್ಗುತ್ತಿದ್ದಾಗ ಅಲ್ಲೊಬ್ಬ ತರುಣಿ ಅವರ ಕಾಲುಗಳಿಗೆ ಬೂಟ್ಸನ್ನು ತೊಡಿಸುತ್ತಿದ್ದಳು. ತರುಣಿ ಬಹು ಸುಂದರಿಯಾಗಿದ್ದಳು – ಬಾಲಿಕಾ ಅವಸ್ಥೆಯನ್ನು ಸದ್ಯ ದಾಟಿದವಳಂತಿದ್ದಳು. ಅವಳನ್ನು ಬಹು ವಾತ್ಸಲ್ಯದಿಂದ ಡಾ. ಸ್ಟ್ರಾಂಗರು 'ಅನ್ನಿ' ಎಂದು ಕರೆದು ಮಾತಾಡುತ್ತಿದ್ದಾಗ ಅವಳು ಡಾಕ್ಟರರ ಮಗಳೇ ಆಗಿರಬೇಕೆಂದು ಊಹಿಸಿದೆನು.

ನನ್ನನ್ನು ದಾಕಲು ಮಾಡಲು ಹೋಗಿದ್ದ ಸಮಯದಲ್ಲೇ ಇತರ ಯಾವುದೋ ವಕೀಲ ವೃತ್ತಿಗೆ – ಲೋಕ ಅಥವಾ ಸಾಂಸಾರಿಕ – ವ್ಯವಹಾರಕ್ಕೆ – ಸಂಬಂಧಿಸಿದ ಮಾತುಗಳನ್ನು ಆಡಿ ಪೂರೈಸಿಕೊಳ್ಳುವುದೂ ಉತ್ತಮವೆಂದು ಗ್ರಹಿಸಿ ಮಾತಾಡುತ್ತಿದ್ದವರಂತೆ ಮಿ. ವಿಕ್ಫೀಲ್ಡರೂ ಡಾಕ್ಟರ್ ಸ್ಟ್ರಾಂಗರೂ ತಮ್ಮೊಳಗೆ ಮಾತಾಡಿಕೊಂಡರು. ಹೇಗೂ ಕೆಲಸವಿಲ್ಲದೆ ಕುಳಿತಿದ್ದ ನಾನು ಆ ಮಾತುಗಳನ್ನು ಕೇಳಿ ಅರ್ಥಮಾಡಿಕೊಂಡ ಅಂಶ ಸಾಧಾರಣ ಈ ಮುಂದಿನಂತಿತ್ತು.

ಡಾಕ್ಟರು ಸ್ಟ್ರಾಂಗರ ಮಗಳೆಂದು ನಾನು ಗ್ರಹಿಸಿದ್ದ ಅನ್ನಿಯು ಅವರ ಪತ್ನಿ. ಎಳೆ ಪ್ರಾಯದ ಅನ್ನಿಯನ್ನು ಡಾಕ್ಟರರು ಮದುವೆಯಾಗಲು ಡಾಕ್ಟರರ ಸದ್ಗುಣಗಳೂ ಅವರ ಐಶ್ವರ್ಯವೂ ಮಾತ್ರ ಕಾರಣವಾಗಿದ್ದುವೇ ಹೊರತು ಅವರ ಪ್ರಾಯವಾಗಲೀ ಅಥವಾ ತರುಣ ತರುಣಿಯರೊಳಗೆ ಇರಬೇಕಾಗಿದ್ದ ಸ್ವಾಭಾವಿಕವಾದ ಪ್ರೇಮವಾಗಲೀ ಕಾರಣವಾಗಿರಲಿಲ್ಲ. ಅನ್ನಿಯನ್ನು ಮದುವೆಯಾಗಲು ಐಶ್ವರ್ಯ ಒಂದು ಹೊರತು ಮತ್ತೆಲ್ಲದರಲ್ಲೂ – ಅಂದರೆ, ಪ್ರಾಯ, ರೂಪ, ಸಂಬಂಧದಲ್ಲಿ – ಯೋಗ್ಯನೂ ಹಕ್ಕುದಾರನೂ ಆಗಿದ್ದವನು ಅನ್ನಿಯ ದೊಡ್ಡ ತಂಗಿಯ ಮಗ ಜಾಕ್ ಮಾಲ್ಡನ್ ಎಂಬವನಾಗಿದ್ದನು. ಡಾಕ್ಟರ್ ಅನ್ನಿಯನ್ನು ಮಗಳಂತೆ ಬಹು ಪ್ರೀತಿ ಸಲಿಗೆಗಳಿಂದ ಕಾಣುತ್ತಿದ್ದುದರಿಂದಲೂ ಅನ್ನಿಗೆ ಮದುವೆಯ ಕಾಲದಲ್ಲಿ ಪತಿ ಪತ್ನಿಯರ ಅನುರಾಗಕ್ಕೂ ತಂದೆ ಮಗಳಂದಿರ ಅನುರಾಗಕ್ಕೂ ಇರುವ ತಾರತಮ್ಯದ ಅರಿವು ಇದ್ದಿಲ್ಲವಾದುದರಿಂದಲೂ ಅನ್ನಿಯ ತಾಯಿಗೆ ಮಗಳ ಸುಖಕ್ಕಿಂತಲೂ ಹೆಚ್ಚಾಗಿ, ಬಡವಳಾದ ತನ್ನ ಸುಖದ ಕಡೆಗೇ ಗಮನವಿದ್ದು, ಈ ವೃದ್ಧ ಮತ್ತು ತರುಣಿಯರ ಸಂಬಂಧದಿಂದ ಅಂಥ ಸುಖ ದೊರಕುವ ಸಂಭವದ ಕಾರಣವಾಗಿಯೂ, ಈ ದಾಂಪತ್ಯ ನಡೆದುಹೋಗಿತ್ತು. ಆದರೆ, ಈ ದಾಂಪತ್ಯದ ಪ್ರತಿಫಲವಾಗಿ ಡಾಕ್ಟರ್ ಸ್ಟ್ರಾಂಗರು ಜಾಕ್ ಮಾಲ್ಡನ್ನನಿಗೆ ತನ್ನ ಪ್ರಯತ್ನ ಮತ್ತೂ ಖರ್ಚುಗಳಿಂದ ಜೀವನಕ್ಕೆ ತಕ್ಕದಾದ ವೃತ್ತಿಯನ್ನೂ ಒದಗಿಸುವ ಜವಾಬ್ದಾರಿಯನ್ನು ಹೊತ್ತಿದ್ದರು. ಅಂದು ನನ್ನೆದುರು ಅವರೊಳಗೆ ನಡೆದ ಮಾತುಕಥೆಗಳಲ್ಲಿ – ಕೆಲವು ಚರ್ಚೆಗಳಲ್ಲಿ – ಮಿ. ವಿಕ್ಫೀಲ್ಡರು ಡಾಕ್ಟರ್ ಸ್ಟ್ರಾಂಗರಿಗೋಸ್ಕರ, ಅವರ ಪ್ರತಿನಿಧಿಯಾಗಿ, ಜಾಕ್ ಮಾಲ್ಡನ್ನನಿಗೆ ಎಂದು ವೃತ್ತಿ – ಯಾವ ಊರಿನಲ್ಲಿ – ಸ್ವದೇಶದಲ್ಲೀ ಪರದೇಶಗಳಲ್ಲೀ ಎಂಬುದನ್ನು ನಿಶ್ಚೈಸಲು ಪ್ರಯತ್ನಿಸುತ್ತಿದ್ದರು.

"ವೃತ್ತಿಯಿಲ್ಲದವನು ಸೈತಾನನ ಆಳಾಗಿ ಅನ್ಯಾಯ ಗೈಯ್ಯುವನು" – "ನಿರುದ್ಯೋಗಿ ದುರುದ್ಯೋಗಿಯಾಗುವನು" – ಎಂಬಿತ್ಯಾದಿ ಗಾದೆಗಳನ್ನು ಡಾಕ್ಟರರು ವಿವರಿಸುತ್ತಾ ಈ ಗಾದೆಗಳನ್ನು ನಾನು ತಿಳಿದಿರುವೆನೇ ಎಂದು ನನ್ನನ್ನು ತಮಾಷೆಯಾಗಿಯೂ ಬುದ್ಧಿಗಾಗಿಯೂ

ವಿಚಾರಿಸುತ್ತಾ ಮಿ. ವಿಕ್ಫೀಲ್ಡರ ಪ್ರಶ್ನೆಗೆ ನೇರವಾದ – ಸ್ಪಷ್ಟವಾದ – ಉತ್ತರವನ್ನು ಕೊಡುತ್ತಿರಲಿಲ್ಲ. ಆ ದಿನದ ಮಾತುಗಳಿಂದ ನಾನು ತಿಳಿದದ್ದು ಅಷ್ಟೆ.

ಆದರೆ ಅಂದೇ ನಾವು ಮಿ. ವಿಕ್ಫೀಲ್ಡರ ಮನೆಯಲ್ಲಿ ಊಟಮಾಡುತ್ತಿದ್ದಾಗ ಸಣ್ಣದೊಂದು ಸಂಗತಿ ನಡೆಯಿತು. ನಮ್ಮ ಊಟದ ಕೊಠಡಿಯ ಹೊರಗೆ ನಿಂತು, ತನ್ನ ತಲೆ ನುಗ್ಗುವಷ್ಟು ಮಾತ್ರ ಬಾಗಿಲು ತೆಗೆದು ಉರೆಯನು ಮಿ. ವಿಕ್ಫೀಲ್ಡರೊಡನೆ ಕೆಲವು ಮಾತುಗಳನ್ನಾಡಿದನು. ಆಮೆ ತನ್ನ ಚಿಪ್ಪಿನೊಳಗಿಂದ ತಲೆ ಹೊರಹಾಕಿದಂತೆ ಉರೆಯನ ತಲೆ ಒಳಗೆ ಬಂದು ಮಾತಾಡುತ್ತಿದ್ದಾಗ – ಮಾತುಗಳು ಜಾಕ್ ಮಾಲ್ಡನ್ ಪುನಃ ಮಿ. ವಿಕ್ಫೀಲ್ಡರ ಭೇಟಿಯನ್ನು ಬಯಸಿದ್ದಾನೆಂಬುದನ್ನು ಕುರಿತಾಗಿ ಇದ್ದಿದ್ದರೂ – ಅವನ ದೃಷ್ಟಿಯೆಲ್ಲ ನಮ್ಮ ಊಟ, ಕೂಟ, ಸುಖ, ಇವುಗಳ ಕಡೆಗೇ ಇದ್ದು, ನಮ್ಮನ್ನು ಕುರಿತು ಮತ್ಸರಪಡುತ್ತಿದ್ದಂತೆ ತೋರಿತು. ಉರೆಯನು ಅಷ್ಟು ಮಾತಾಡುತ್ತಿದ್ದ ಹಾಗೆಯೇ ಜಾಕ್ ಮಾಲ್ಡನನೇ ಬಂದು ಉರೆಯನನ್ನು ಹಿಂದೆಳೆದು ತಾನೇ ಮಾತಾಡತೊಡಗಿದನು. ಅನ್ನಿಯನ್ನು ಡಾಕ್ಟರ್ ಸ್ಟ್ರಾಂಗರು ಮದುವೆಯಾಗುವ ಮೊದಲು ಅವರು ಕೊಟ್ಟಿದ್ದ ವಚನಗಳನ್ನು ಪಾಲಿಸುವುದು ಅವರ ಕರ್ತವ್ಯವಾಗಿತ್ತೆಂದೂ ಆ ಕರ್ತವ್ಯ ಪಾಲನೆಯಲ್ಲಿ ಆಗ ಲೋಪವಾಗಿತ್ತೆಂದೂ ಜಾಕ್ ಮಾಲ್ಡನ್ನನು ಜರೆದನು. ಮಿ. ವಿಕ್ಫೀಲ್ಡರು ಸ್ವಲ್ಪ ಕಠಿಣವಾಗಿಯೇ ಉತ್ತರವಿತ್ತರು. ತಾನು ಡಾಕ್ಟರರ ಹಿತಕ್ಕಾಗಿ, ಸಂದರ್ಭಗಳ ಔಚಿತ್ಯವನ್ನು ಗ್ರಹಿಸಿ, ನ್ಯಾಯವಿದ್ದಷ್ಟು ಕೆಲಸ ಮಾಡುವುದಾಗಿಯೂ ವಿಶೇಷ ಚರ್ಚೆಗಳು ತನ್ನಲ್ಲಿ ಅನಗತ್ಯವೆಂದೂ ತಿಳಿಸಿದರು. ಜಾಕ್ ಮಾಲ್ಡನ್ ಕೋಪಿಸಿಕೊಂಡೇ ಅಲ್ಲಿಂದ ಹೋದನು.

ನಾನು ಮಿ. ವಿಕ್ಫೀಲ್ಡರ ಮನೆಯಲ್ಲಿ ಊಟ ವಸತಿಗಳನ್ನು ಮಾಡಿಕೊಂಡು ಶಾಲೆಗೆ ಹೋಗುತ್ತಾ ದಿನಗಳು ಕಳೆಯುತ್ತ ಬಂದ ಹಾಗೆಲ್ಲ ಅನೇಕ ವಿಷಯಗಳು ನನಗೆ ಗೊತ್ತಾದವು. ವೃದ್ಧ ವಕೀಲರೂ ಅವರ ಮಗಳು ಬಾಲಕಿ ಏಗ್ನೆಸ್ಸಳೂ ನನ್ನನ್ನು ತಮ್ಮ ಮನೆಯವರಂತೆಯೇ ನೋಡಿಕೊಂಡು ಬರುತ್ತಿದ್ದರು.

ಮಿ. ವಿಕ್ಫೀಲ್ಡರು ಊಟವಾದನಂತರ ಪ್ರತಿದಿನವೂ ತುಂಬಾ ವೈನ್ ಕುಡಿಯುತ್ತಿದ್ದರು. ಮಿ. ವಿಕ್ಫೀಲ್ಡರಿಗೆ ಏನೋ ಒಂದು ಅಂತರಂಗದ ದುಃಖವಿರಬೇಕೆಂದೂ ಅದನ್ನು ಮರೆಯಲೋಸ್ಕರ ಹೀಗೆ ವೈನು ಕುಡಿಯುತ್ತಿದ್ದರೆಂದೂ ಮತ್ತು ಮಗಳ ಕೈಯ್ಯಿಂದ ಪಿಯಾನವನ್ನು ಬಾರಿಸಿ, ಬಾಯಿಯಿಂದ ಹಾಡಿಸಿ ಸಂತೋಷಪಟ್ಟುಕೊಳ್ಳುತ್ತಿದ್ದರೆಂದೂ ಊಹಿಸಲು ಬೇಕಾದಷ್ಟು ಕಾರಣಗಳು ನನಗೆ ಸಿಕ್ಕುತ್ತಿದ್ದುವು.

ಏಗ್ನೆಸಳ ಗುಣಗಳನ್ನು ನಾನು ವರ್ಣಿಸಿ ಪೂರೈಸಲಾರೆ. ಅವಳು ಶಾಲೆಗೆ ಹೋಗದಿದ್ದರೂ ಮನೆಯಲ್ಲೇ ತುಂಬಾ ಓದುತ್ತಿದ್ದು ಒಳ್ಳೆ ವಿದ್ಯಾವಂತೆಯೇ ಆಗಿದ್ದಳು. ಆ ಮನೆಯಲ್ಲಿ ನಾನಿದ್ದು, ಅವಳ ಸಹವಾಸದಿಂದ ನನ್ನ ಜೀವನವೇ – ನನಗೆ ಅರಿಯದೆಯೇ – ಸಂಸ್ಕೃತಿ ಹೊಂದುತ್ತಿತ್ತು. ಅವಳ ಸ್ವರ, ಮಾತುಗಳು, ಭಾವನೆಗಳು – ಎಲ್ಲವೂ – ಬಹು ಮೃದು ಮಧುರವಾಗಿದ್ದುವು. ಅವಳ ಸುಂದರಮೂರ್ತಿ, ಸೌಮ್ಯವಾದ ನಡೆನುಡಿ, ಹಿರಿಯರಿಗಿರಬೇಕಾದಂಥ ಶಾಂತಚಿತ್ತ ಪ್ರವೃತ್ತಿ, ಔದಾರ್ಯಗುಣ – ಎಲ್ಲವೂ ಅವಳನ್ನು ಆ ಮನೆಯ ದಿವ್ಯ, ಮಂಗಳ ಜ್ಯೋತಿಯನ್ನಾಗಿ ಬೆಳಗಿದ್ದುವು. ನಾನು ಎಮಿಲಿಯನ್ನು ಪ್ರೀತಿಸುತ್ತಿದ್ದೆನು – ಮತ್ತೂ ಏಗ್ನೆಸ್ಸಳನ್ನು ಪ್ರೀತಿಸುತ್ತಿದ್ದೆನು. ಆದರೆ ನನ್ನ ಈ ಇಬ್ಬರನ್ನು ಕುರಿತಾದ ಎರಡು ಭಾವನೆಗಳನ್ನು ಒಂದೇ ಶಬ್ದ ಪ್ರಯೋಗದಿಂದ ವಿವರಿಸಿದರೆ ಸರಿಯಾಗದೆಂದು ನನಗೆ ಭಾಸವಾಗುತ್ತಿದೆ. ಏಗ್ನೆಸ್ಸಳ ದಿವ್ಯ ಸನ್ನಿಧಿಯಲ್ಲಿ ಶಾಂತಿ, ಸುಖ, ನೆಮ್ಮದಿಗಳು ಶಾಶ್ವತವಾಗಿ ನೆಲಸಿರುವುವೆಂದೇ ನನ್ನ ನಂಬಿಕೆ.

ನಾನು ಆ ಮನೆಯಲ್ಲಿದ್ದಾಗ ಉರೆಯನ ಪರಿಚಯವೂ ಕ್ರಮೇಣವಾಗಿ ಆಗತೊಡಗಿತು. ಅವನು ಕಡುಬಡವ, ಕಡು ದೀನ, ಪಾಮರನೆಂದು ಸದಾ ಹೇಳಿಕೊಳ್ಳುತ್ತಿದ್ದನು. ಮಾತ್ರವಲ್ಲದೆ, ಹಾಗೆಯೇ ನಟಿಸುತ್ತಿದ್ದನು. ಆದರೆ, ತಾನು ಇತರರಂತೆ ಸಿರಿವಂತನೂ ಅಧಿಕಾರಾಪನ್ನನೂ ಆಗಿ ಮೆರೆಯಬೇಕೆಂಬ ಲವಲವಿಕೆಯೂ ಅವನಲ್ಲಿತ್ತು. ಆದರೆ, ಅಂಥ ಉತ್ತಮ ಸ್ಥಿತಿಗೆ ತಲುಪಲಿರುವ ಮಾರ್ಗವು ಕುತಂತ್ರ, ಕುತರ್ಕ, ಮತ್ಸರ, ನಟನೆ, ಎಂದೇ ಅವನು ತಿಳಿದಿದ್ದುದು ಅವನಿಗರಿಯದೇ ಹೊರಬೀಳುತ್ತಿತ್ತು. ಅವನು ಎಂದಾದರೊಂದು ದಿನ ಮಿ. ವಿಕ್ಫೀಲ್ಡರಂತೆಯೇ ತಾನೂ ಧನಿಕನೂ ಹತ್ತು ಜನರಿಂದ ಗೌರವಿಸಲ್ಪಡುವವನೂ ಆಗಬೇಕೆಂದೇ ಕೆಲವು ಕಾನೂನು ಪುಸ್ತಕಗಳನ್ನೂ ಓದುತ್ತಲೂ ಇತರ ಕಾರ್ಯಾಚರಣೆ ನಡೆಸುತ್ತಲೂ ಬರುತ್ತಿದ್ದನು. ಸದ್ಯ ಈಚೆಗೆ ಆ ಮನೆಗೆ ಬಂದು ಸೇರಿದ್ದ ನಾನು ಆ ಮನೆಯವನೇ ಆಗಿದ್ದು, ಅವನು ಮಾತ್ರ ಮೊದಲಿನ ಗುಮಾಸ್ತನೇ ಆಗಿರುವ ವಿಷಯದಲ್ಲಿ ಅವನಿಗೆ ನನ್ನನ್ನು ಕುರಿತು ಹೊಟ್ಟೆಕಿಚ್ಚೂ ಸ್ವಲ್ಪ ದ್ವೇಷವೂ ಇತ್ತೆಂದು ನಾನು ತಿಳಿದುಕೊಂಡೆನು. ಆದರೆ ಬಹಿರಂಗವಾಗಿ ಅವನು ದೀನನೆಂದೂ ಹೀನಕುಲದವನೆಂದೂ ಅನಗತ್ಯವಾಗಿ ಸಹ ಆಗಿಂದಾಗ್ಗೆ ತಿಳಿಸುತ್ತಾ ತನ್ನ ಹೀನ ಅಂತರಂಗವನ್ನು ಬಚ್ಚಿಡುತ್ತಿದ್ದನು.

ಇನ್ನು ನನ್ನ ಶಾಲಾ ಸಂಬಂಧವಾದ ಕೆಲವು ವಿಷಯಗಳನ್ನು ತಿಳಿಸುವುದು ಉಚಿತವಿದೆ. ಡಾಕ್ಟರ್ ಸ್ಟ್ರಾಂಗರ ಶಾಲೆಯೆಂದರೆ ವಿದ್ಯಾರ್ಥಿಗಳದೇ ಆಗಿದ್ದ ಸಾಮೂಹಿಕ ಜವಾಬ್ದಾರಿಯನ್ನು ಯಶಸ್ವಿಯಾಗಿ ಸಾಧಿಸಿ ಬರುತ್ತಿದ್ದ, ಒಂದು ಪವಿತ್ರ ಕ್ಷೇತ್ರವಾಗಿತ್ತು. ನಾವು ವಿದ್ಯಾರ್ಜನೆಗೈದು, ವಿದ್ಯಾವಂತರೂ ಸನ್ಮಾರ್ಗ ಪ್ರವರ್ತಕರೂ ಆದರ್ಶ ಪುರುಷರೂ ಆಗಿ ನಮ್ಮ ಶಾಲೆಯ ಹೆಸರನ್ನು ಪ್ರಖ್ಯಾತಿಗೊಳಿಸುವ ಜವಾಬ್ದಾರಿ ತಮ್ಮದಾಗಿರುವುದಕ್ಕಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳದೇ ಆಗಿದೆಯೆಂದು ಡಾಕ್ಟರ್ ಸ್ಟ್ರಾಂಗರು ನಮಗೆ ಬೋಧಿಸುತ್ತಿದ್ದರು. ನಾವೆಲ್ಲರೂ ಯೋಗ್ಯರೂ ಶಿಸ್ತುನಿಯಮಪಾಲಕರೂ ಎಂದು ಗ್ರಹಿಸಿ ನಮ್ಮೊಡನೆ ವರ್ತಿಸುವುದೇ ಅವರ ಅಧಿಕಾರ ಚಲಾವಣೆಯ ಮುಖ್ಯ

ತತ್ತ್ವ – ತಳಹದಿ – ಆಗಿತ್ತು. ನಾನು ಅವರ ಸಂಪರ್ಕದಿಂದ ಶಿಸ್ತು, ಮರ್ಯಾದೆಗಳನ್ನು ಅಭ್ಯಸಿಸಿದೆನು. ಶ್ರಮಪಟ್ಟು ಓದಿ ಕ್ರಮವಾಗಿ ತರಗತಿಗಳಲ್ಲಿ ಉತ್ತೀರ್ಣನಾಗತೊಡಗಿದೆನು. ಹೀಗೆ ಕ್ರಮೇಣವಾಗಿ ನಾನು ನಮ್ಮ ಶಾಲಾಪ್ರಪಂಚದಲ್ಲಿ – ಮುಖ್ಯವಾಗಿ, ವಿದ್ಯಾರ್ಥಿಗಳ ಪ್ರಪಂಚದಲ್ಲಿ – ಇತರ ಯಾರಿಗೂ ಎರಡನೆಯ ಸ್ಥಾನದವನಲ್ಲವೆಂದು ಪರಿಗಣಿಸಲ್ಪಟ್ಟೆನು.

ಮೇಲ್ತರಗತಿಯ ವಿದ್ಯಾರ್ಥಿಗಳು ಕೆಲವರು ಡಾಕ್ಟರ್ ಸ್ಟ್ರಾಂಗರ ಮನೆಯಲ್ಲೇ ತಮ್ಮ ಊಟ ವಸತಿಗಳನ್ನು ಮಾಡಿಕೊಂಡಿದ್ದರು. ಈ ವಿದ್ಯಾರ್ಥಿಗಳಿಗೂ ನನಗೂ ತುಂಬಾ ಸ್ನೇಹಪರಿಚಯಗಳಿದ್ದುದರಿಂದ, ಅವರು – ಅವಕ್ಕನುಗುಣವಾಗಿಯೂ ಡಾಕ್ಟರ್ ಸ್ಟ್ರಾಂಗರ ಸದ್ಗುಣಗಳ ಪ್ರಶಂಸೆಗಳಿಗಾಗಿಯೂ ಅವರ ದಿನಚರಿ, ಜೀವನ ಚರಿತ್ರೆ, ಸಂಸಾರದ ಕುರಿತೂ ಕೆಲವು ವಿಷಯಗಳನ್ನು ಹೇಳಿದರು. ಡಾಕ್ಟರ್ ಸ್ಟ್ರಾಂಗರ ಜೀವನವು ಪವಿತ್ರವಾಗಿದ್ದಿತು. ಅವರ ಜೀವನ ಚರಿತ್ರೆ ಸ್ವಾರಸ್ಯವುಳ್ಳದ್ದೂ ಆಗಿದ್ದಿತು. ಅನ್ನಿಯನ್ನು ಅವರು ಮದುವೆಯಾಗಿದ್ದುದು ಅವಳ ಸೌಂದರ್ಯಕ್ಕಾಗಿ ಆಗಿರಲಿಲ್ಲ ಅಥವಾ ಸ್ತ್ರೀ ವ್ಯಾಮೋಹದಿಂದಲೂ ಆಗಿರಲಿಲ್ಲ. ಅನ್ನಿಯ ಚಿಕ್ಕ ಪ್ರಾಯಕ್ಕಾಗಿ, ಬಾಲಕಿಯ ಮೇಲಿನ ವಾತ್ಸಲ್ಯದಿಂದ, ಅತ್ತೆಯ ಒತ್ತಾಯಕ್ಕೆ ಒಲಿದು ಮದುವೆಯಾಗಿದ್ದುದಂತೆ. ಒಪ್ಪತ್ತು ಊಟಕ್ಕೆ ಸಹ ಅನುಕೂಲವಿರದಿದ್ದ ಅನ್ನಿಯ ತವರು ಮನೆಯವರ ಮೇಲೆ ಕನಿಕರಪಟ್ಟು ಮದುವೆಯಾಗಿದ್ದುದಂತೆ. ಈ ಮದುವೆಯ ಕಾರಣವಾಗಿ ಅನ್ನಿಯ ತಾಯಿಯನ್ನೂ ತಾಯಿಯ ಕಡೆಯವರನ್ನೂ ಸಾಕುವ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದರು.

ಡಾಕ್ಟರ್ ಸ್ಟ್ರಾಂಗರು ಅವರಿಗೆ ಶಾಲೆಯಲ್ಲಿ ಕೆಲಸ ಮಾಡಬೇಕಾದ ಸಮಯದಲ್ಲಿ ಹೊರತಾಗಿ, ಇತರ ಬಿಡು ಸಮಯದಲ್ಲಿ ತನ್ನ ಸ್ವಂತ ವ್ಯಾಸಂಗಗಳಲ್ಲೇ ಕಾಲ ಕಳೆಯುತ್ತಿದ್ದರು. ಕೆಲವು ನವೀನ ಶೋಧನೆಗಳಿಗಾಗಿ ಅವರು ಕೆಲವೊಮ್ಮೆ ತುಂಬಾ ಆಲೋಚನಾಮಗ್ನರಾಗಿರುತ್ತಿದ್ದರು. ಅವರು ವನಸ್ಪತಿ ಶಾಸ್ತ್ರವನ್ನು ಬರೆಯುತ್ತಿರಬೇಕೆಂದು ನಾನೊಮ್ಮೆ ಗ್ರಹಿಸಿದುದುಂಟು. ಅವರೊಮ್ಮೆ ನೆಲವನ್ನೇ ನೋಡುತ್ತಾ ಶಾಲೆಯ ಮೈದಾನದಲ್ಲಿ ತಿರುಗುತ್ತಿದ್ದರು. ಸಮೀಪದ ಮರಗಳಲ್ಲಿ ವಾಸಿಸುತ್ತಿದ್ದ ರೂಕ್ ಪಕ್ಷಿಗಳು ತಮ್ಮ ನೀಳವಾದ ಕತ್ತುಗಳನ್ನು ನೀಡಿ ಡಾಕ್ಟರರನ್ನು ಮುಟ್ಟಲು ಪ್ರಯತ್ನಿಸುತ್ತಿದ್ದುದನ್ನು ಸಹ ಗಮನಕ್ಕೆ ತರದೆ ನೆಲವನ್ನೇ ನೋಡುತ್ತಾ ನಡೆಯುತ್ತಿದ್ದದ್ದರಿಂದ ಅವರು ಒಂದು ಅಪೂರ್ವ ಗಿಡವನ್ನೋ ಬೇರನ್ನೋ ಹುಡುಕುತ್ತಿರಬೇಕೆಂದು ನಾನು ಗ್ರಹಿಸಿದೆನು. ಆದರೆ, ಅನಂತರ ವಿಚಾರಿಸಿ ತಿಳಿದ ಪ್ರಕಾರ ಅವರು ಹುಡುಕುತ್ತಿದ್ದುದು ವನಸ್ಪತಿಗಳ ಮೂಲವನ್ನಲ್ಲ – ಗ್ರೀಕ್ ಮತ್ತು ಇಂಗ್ಲಿಷ್ ಶಬ್ದಗಳ ಮೂಲವನ್ನು. ಇವರು ಒಂದು ಮಹಾ ಶಬ್ದಕೋಶವನ್ನು (ನಿಘಂಟು) ತಯಾರಿಸುತ್ತಿದ್ದರು. ಇವರು ಮಹಾ ಕರುಣಾಳುಗಳು. ಪಾತ್ರಾಪಾತ್ರ ಜ್ಞಾನವಿಲ್ಲದೆ ದಾನಮಾಡುತ್ತಿದ್ದುದನ್ನು ಕಂಡು ವಿದ್ಯಾರ್ಥಿಗಳು, ಡಾಕ್ಟರರಿಗೆ ತಿಳಿಯದಂತೇ ಭಿಕ್ಷುಕರು ಅವರೆದುರು ಬರದಂತೆ ಮಾಡುತ್ತಿದ್ದರು. ಒಮ್ಮೆ ಓರ್ವ ಭಿಕ್ಷುಕನಿಗೆ ಕರುಣೆಯಿಂದ ತನ್ನ ಕಾಲಿನ ಎರಡೂ ಗೈಟರ್ಸನ್ನೇ ದಾನಮಾಡಿದ್ದರಂತೆ. ಒಂದು ದಿನ ಅವರು ಒಂದು ಅಂಗಡಿಯ ಬದಿಯಲ್ಲಿ ಹೋಗುತ್ತಿದ್ದಾಗ, ಅವೇ ಎರಡು ಗೈಟರ್ಸನ್ನು ಕಂಡು, ಅವುಗಳನ್ನು ಬಹುವಾಗಿ ಪರೀಕ್ಷಿಸಿ, ಅಷ್ಟು ಉತ್ತಮವಾದವುಗಳನ್ನು ಆ ಮೊದಲು ಅವರು ಎಲ್ಲೂ ಕಂಡಿರಲಿಲ್ಲವೆಂದಂದುಕೊಂಡು, ಅವುಗಳನ್ನು ಕ್ರಯಕ್ಕೆ ಪಡೆದುಕೊಂಡಿದ್ದರಂತೆ.

ಅನ್ನಿಯನ್ನು ಡಾಕ್ಟರರು ತನ್ನ ಸ್ವಂತ ಮಗಳಂತೆ ನೋಡಿಕೊಳ್ಳುತ್ತಿದ್ದರು. ಅನ್ನಿಯೂ ಸಹ ತಂದೆಯನ್ನು ಕಾಣುವಷ್ಟೇ ಪ್ರೀತಿಯಿಂದಲೂ ಗೌರವದಿಂದಲೂ ಡಾಕ್ಟರರನ್ನು ಕಾಣುತ್ತಿದ್ದಳು. ಈ ದಂಪತಿಗಳಲ್ಲಿ ಪ್ರಣಯಭಾವದ ಯಾವ ವರ್ತನೆಗಳೂ ಇರಲಿಲ್ಲ. ಅವರ ಪ್ರಾಯದ ಅಂತರ ಮಾತ್ರ ಇದಕ್ಕೆ ಕಾರಣವಾಗಿರಲಿಲ್ಲ – ಅವರ ಮಾನಸಿಕ – ಬೌದ್ಧಿಕ– ಬೆಳವಣಿಗೆ, ಅಥವಾ ಪರಿಸ್ಥಿತಿಗಳೇ ಇದಕ್ಕೆ ಕಾರಣವಾಗಿದ್ದುವು.

ಅನ್ನಿ ನನ್ನನ್ನು ಬಹು ಪ್ರೀತಿಯಿಂದ ಕಾಣುತ್ತಿದ್ದಳು. ಹಾಗೆಯೇ ಅವಳು ಏಗ್ನೆಸ್ಸಳನ್ನೂ ಪ್ರೀತಿಸುತ್ತಿದ್ದಳು. ಅನ್ನಿಯು ನಮ್ಮ ಮನೆಗೆ ಆಮಂತ್ರಿತಳಾಗಿ ಬರುವುದೂ ನಾವು ಆಮಂತ್ರಿತರಾಗಿ ಅವರ ಮನೆಗೆ ಹೋಗುವುದೂ ಇತ್ತು. ನಮ್ಮ ನಮ್ಮೊಳಗೇ ಎಷ್ಟೇ ಸ್ನೇಹ ಸಲಿಗೆಗಳಿದ್ದರೂ ಅನ್ನಿ ಮಿ. ವಿಕ್ಫೀಲ್ಡರನ್ನು ಸಲಿಗೆಯಿಂದ ಕಾಣುತ್ತಿರಲಿಲ್ಲ. ಅವರನ್ನು ಕಂಡರೆ ಅವಳಿಗೆ ಅಂಜಿಕೆಯೇ ಇತ್ತೆಂದು ತೋರುತ್ತದೆ. ಅವರ ಎದುರು ಇರುವುದನ್ನೇ ಆದಷ್ಟು ತಪ್ಪಿಸಿಕೊಳ್ಳುತ್ತಿದ್ದಳೆಂದರೂ ಸರಿಯಾಗಬಹುದು.

ಅನ್ನಿಯ ತಾಯಿಯ ಹೆಸರು ಮಿಸೆಸ್ ಮಾರ್ತಲ್ ಹೇಮ್, ಎಂದು. ನಮ್ಮ ಶಾಲೆಯ ವಿದ್ಯಾರ್ಥಿಗಳು ಅವಳನ್ನು 'ಮುದಿ ಸಿಪಾಯಿ' ಎಂದು ಕರೆಯುತ್ತಿದ್ದರು. ಅವಳು ಡಾಕ್ಟರ್ ಸ್ಟ್ರಾಂಗರ ಕರುಣೆಯನ್ನು ದುರುಪಯೋಗಪಡಿಸಿಕೊಂಡು ಅವರಿಂದ ತುಂಬಾ ಹಣ ಸುಲಿಯುತ್ತಿದ್ದಳಂತೆ.

ನಾನು ಶಾಲೆಗೆ ಸೇರಿ ಮೂರು ನಾಲ್ಕು ತಿಂಗಳು ಕಳೆಯುವುದರೊಳಗೆ, ಮಿ. ವಿಕ್ಫೀಲ್ಡರು ಏರ್ಪಾಡಿನ ಪ್ರಕಾರ ಜಾಕ್ ಮಾಲ್ಡನ್ನನು ಪರದೇಶಕ್ಕೆ ಹೋಗಲು ಅನುಕೂಲವಾಯಿತು. ಅವನನ್ನು ಕಳುಹಿಸಿಕೊಡುವ ದಿನ ಬಂತು. ಆ ದಿನವೇ ಡಾಕ್ಟರ್ ಸ್ಟ್ರಾಂಗರ ಜನ್ಮ ದಿನ ಸಹ ಬಂದದ್ದರಿಂದ ಡಾ. ಸ್ಟ್ರಾಂಗರ ಮನೆಯಲ್ಲಿ ಒಂದು ಔತಣ ಸಮಾರಂಭವೇ ಜರುಗಿತು. ಈ ಔತಣದ ಮಟ್ಟಿಗೆ ವಿದ್ಯಾರ್ಥಿಗಳ ಪೈಕಿ ಏಡೇಮನೂ ನಾನೂ ಮಾತ್ರ ಆಮಂತ್ರಿತರಾಗಿದ್ದೆವು. ಈ ಔತಣ ಮುಖ್ಯವಾಗಿ ಜಾಕ್ ಮಾಲ್ಡನ್ನನ ಸಂಬಂಧವಾಗಿದ್ದುದರಿಂದಲೂ

ಡಾಕ್ಟರರ ಜನ್ಮದಿನೋತ್ಸವವವೆಲ್ಲ ಸಂಜೆಯ ಮೊದಲೇ ಶಾಲೆಯಲ್ಲಿ ಎಲ್ಲ ವಿದ್ಯಾರ್ಥಿಗಳ ಕೂಡುವಿಕೆಯಿಂದ ನಡೆದು ಮುಗಿದಿತ್ತಾದ್ದರಿಂದಲೂ ಇತರ ವಿದ್ಯಾರ್ಥಿಗಳಿಗೆ ಆಮಂತ್ರಣವಿರಲಿಲ್ಲ. ಮಿ. ವಿಕ್ಫೀಲ್ಡರೂ ಏಗ್ನೆಸ್ಸಳೂ ಆಮಂತ್ರಿತರಾಗಿ ಔತಣಕ್ಕೆ ಬಂದಿದ್ದರು.

ಔತಣ ಜರುಗಿದ್ದು ರಾತ್ರಿ. ಡಾ. ಸ್ಟ್ರಾಂಗರು ಹಸನ್ಮುಖರಾಗಿ ಕುಳಿತು ಅವರದೇ ಒಂದು ವೈಶಿಷ್ಟ್ಯವಾಗಿದ್ದ ಸರಳ ಕ್ರಮದಿಂದ ನಮ್ಮೆಲ್ಲರನ್ನು ಮಾತಾಡಿಸಿ ಸಂತೋಷಪಡಿಸುತ್ತಿದ್ದರು. ಡಾಕ್ಟರರ ಪತ್ನಿ ಬಿಳಿ ಲಂಗವನ್ನುಟ್ಟು, ಕತ್ತಿಗೂ ಎದೆಗೂ ಕೆಂಪು ರಿಬ್ಬನ್ನುಗಳನ್ನು ಬಹು ನಾಜೂಕಾಗಿ ಕಟ್ಟಿಕೊಂಡಿದ್ದಳು. ಗಲ್ಲದ ಅಡಿಯಲ್ಲೇ ಎದೆಯಲ್ಲಿ ಎದ್ದು ತೋರುವಂತೆ ವಸ್ತ್ರದಿಂದ ತಯಾರಿಸಿದ್ದ ಚಂದದ ಒಂದು ಕೆಂಪು ಹೂವನ್ನು ತೂಗಿಬಿಟ್ಟಿದ್ದಳು. ಅನ್ನಿ ಅಂದಿನ ದಿನ ಬಹು ಸುಂದರಿಯಾಗಿ ರಂಜಿಸುತ್ತಿದ್ದಳು. ಅನ್ನಿಯ ತಾಯಿಗೆ ಅಂದು ತನ್ನ ಮಗಳ ರೂಪ ಲಾವಣ್ಯ, ಕಲಾ ನೈಪುಣ್ಯಗಳನ್ನೆಲ್ಲ ಪ್ರದರ್ಶಿಸಬೇಕೆಂದು ಬಹುವಾದ ಆಸೆಯಿದ್ದಿತು. ಅನ್ನಿ ಬೇಡವೆಂದು ಹಟ ಹಿಡಿದರೂ ಬಿಡದೆ, ಒತ್ತಾಯಿಸಿ, ಅನ್ನಿ ಪಿಯಾನ ಬಾರಿಸುವಂತೆ ಮಾಡಿದಳು. ಅನ್ನಿ ನಿರ್ವಾಹವಿಲ್ಲದೆ ಪಿಯಾನ ಬಾರಿಸುವಾಗ ಸಂಗೀತದ ಪುಸ್ತಕದ ಹಾಳೆಗಳನ್ನು ಜಾಕ್ ಮಾಲ್ಡನ್ನನು ಅವಳ ಬೆನ್ನ ಹಿಂದುಗಡೆಯೇ ನಿಂತು, ಅವಳಿಗೆ ಬೇಕಾದಂತೆ ಮಗುಚಿಕೊಡುತ್ತಿದ್ದನು. ಸಂಗೀತ ನಿಂತನಂತರ – ಎಲ್ಲರೂ ಬೇಡವೆಂದರೂ – ಬಹು ಒತ್ತಾಯದಿಂದಲೇ, ಮಿಸೆಸ್ ಮಾರ್ತಲ್ ಹೇಮಳು ಒಂದು ಭಾಷಣವನ್ನು ಮಾಡತೊಡಗಿದಳು.

ಅಂದಿನ ಸಮಾರಂಭದ ಮುಖ್ಯ ವ್ಯಕ್ತಿಗಳಾಗಿದ್ದ ಡಾಕ್ಟರ್ ಸ್ಟ್ರಾಂಗರಂಥವರಿಗೇ ಅತ್ತೆಯಾಗಿದ್ದ ಅವಳ ಸ್ಥಾನ ಗೌರವ ಮಿಸೆಸ್ ಮಾರ್ತಲ್ ಹೇಮಳಾ ಮಾತಿನಲ್ಲಿ ಎದ್ದು ತೋರುತ್ತಿತ್ತು. ಅವಳ ಭಾಷಣ ಸಾಧಾರಣ ಈ ತೆರನಾಗಿತ್ತು:

"ಇಂಥ ಸಮಾರಂಭದಲ್ಲಿ ಬಡವರಾದ ನಾವು ನಾಲ್ಕು ಮಾತುಗಳನ್ನಾದರೂ ನಜರಾಗಿ ಒಪ್ಪಿಸುವುದು ನಮ್ಮ ಕರ್ತವ್ಯ. ನನ್ನ ಕರ್ತವ್ಯಜ್ಞಾನ ನನಗೆ ಸ್ಪಷ್ಟವಾಗಿರುವಷ್ಟೇ ಸ್ಪಷ್ಟವಾಗಿ ಡಾಕ್ಟರ್ ಸ್ಟ್ರಾಂಗರ ಹೃದಯದ ಸೌಂದರ್ಯವನ್ನೆಲ್ಲ ನಾನು ತಿಳಿದಿದ್ದೇನೆ. ನಮ್ಮ ಶಕ್ತಿಗೆ ಮೀರಿದ ಲೌಕಿಕ ನಜರುಗಳಿಗಿಂತ ಹೃತ್ಪೂರ್ವಕವಾದ ಪ್ರೀತಿ, ಆದರ, ಗೌರವದ ಮಾತಿನ ನಜರೇ ಮೇಲೆಂದು ಡಾಕ್ಟರರ ಅಭಿಮತ. ಡಾಕ್ಟರರು ಪ್ರಾಯದಲ್ಲಿ ನಮಗೆಲ್ಲರಿಗಿಂತಲೂ ಹಿರಿಯರೆಂಬುದು ನಿಜವಾದರೂ ಅವರು ಅನ್ನಿಗೆ ಇನಿಯರಾಗಿಯೂ ನನಗೆ ಅಳಿಯನಾಗಿಯೂ ಇರುವುದರಿಂದ, ತಾತ್ವಿಕ ದೃಷ್ಟಿಯಲ್ಲಿ ನನಗೆ ಅವರು ಚಿಕ್ಕವರು" ಎಂದು ಉದ್ದುದ್ದವಾಗಿ ಮಾತಾಡತೊಡಗಿದಳು.

ಆಗ, ತಾವು ಅತ್ತೆಗೆ ಹೊಸಬರಲ್ಲವಾದುದರಿಂದ ಮತ್ತು ಅಲ್ಲಿ ಕೂಡಿದವರೆಲ್ಲರೂ ಹಳೆಯ ಪರಿಚಿತರೇ ಆಗಿರುವುದರಿಂದ, ಆ ರೀತಿಯ ಉಪಚಾರಗಳನ್ನು ಮಾಡಬಾರದಾಗಿ ಡಾಕ್ಟರ್ ಸ್ಟ್ರಾಂಗರೂ ಅವರ ಪತ್ನಿಯೂ ಕೇಳಿಕೊಂಡರು. ಈ ಕೇಳೋಣವೆ 'ಮುದಿ ಸಿಪಾಯಿ'ಯನ್ನು ಕೆರಳಿಸಿತು. ಅವಳು ಭಾಷಣವನ್ನು ಮುಂದುವರಿಸತೊಡಗಿದಳು.

"ನಾನು ವಿಶೇಷವೇನನ್ನೂ ಮಾತಾಡಿ ನಿಮ್ಮನ್ನು ಬೇಸರಿಸುವುದಿಲ್ಲ. ಅನ್ನಿಯ ಮದುವೆಯ ಸವಿನೆನಪುಗಳನ್ನು ಇಂಥ ಸಂದರ್ಭಗಳಲ್ಲಿ ಮಾಡಿಕೊಂಡರೆ ಸಮಾರಂಭವೇ ಬೆಳಗುವುದೆಂದು ಭಾವಿಸಿದರೆ ತಪ್ಪಾಗಲಾರದಷ್ಟೆ. ಅಂದು ಡಾಕ್ಟರರು – ನನ್ನಳಿಯ – ಬಂದು ಅನ್ನಿಯನ್ನು ಮದುವೆಯಾಗುವ ಬಯಕೆಯನ್ನು ತಿಳಿಸಿದಾಗ ನಮಗಾದ ಆಶ್ಚರ್ಯ, ಮತ್ತು ಸಂತೋಷವನ್ನು ಕುರಿತಾಗಿ ಮಾತ್ರ ಎರಡು ಮಾತುಗಳನ್ನು ಹೇಳುತ್ತೇನೆ.

"ಆ ಪ್ರಸ್ತಾಪ ಬಂದೊಡನೆ ನಾನು ಅನ್ನಿಯನ್ನು ಕರೆದು 'ಅನ್ನಿ ಡಾಕ್ಟರರಂಥ ಧನಿಕರೂ ಯೋಗ್ಯರೂ ನಿನ್ನನ್ನು ಕೈಹಿಡಿಯಲು ಬಯಸುತ್ತಾರೆ. ನಿನ್ನ ಹೃದಯ ಪರೀಕ್ಷಿಸಿ ನೋಡು – ಅದರಲ್ಲೇನಾದರೂ ಸ್ಥಳ ಅವರಿಗಿದೆಯೇ?' ಎಂದು ಕೇಳಿದೆ. ಆಗ ಒತ್ತಾಯ ಮಾಡಿದ್ದೇನೆಯೇ? ಅನ್ನಿ – ಹೇಳು. ಆಗ ಅನ್ನಿ ಅಂದಳು – ಆಶ್ಚರ್ಯದಿಂದಲೂ ಆನಂದದಿಂದಲೂ ಇರಬಹುದು. ಸ್ವಲ್ಪ ಅಳುತ್ತಾ – 'ನನಗೆ ಅನುಭವವಿಲ್ಲ ಅಮ್ಮಾ. ಹೃದಯಾಂದರೆ ಏನೂಂತ ಗೊತ್ತಿಲ್ಲ ಅಮ್ಮಾ. ಕೈ ಹಿಡಿಯುವುದೂ ಅಂದರೆ ಏನೂಂತ ಗೊತ್ತಿಲ್ಲ' ಎಂದು. ಆಗ ನನಗೆ ಸಂತೋಷವಾಯಿತು, ಸಮಾಧಾನವಾಯಿತು. ನಾನಂದೆ – 'ನಿನ್ನ ಹೃದಯದಲ್ಲಿ ಬೇರೆ ಯಾರೂ ಇಲ್ಲದಿದ್ದ ಮೇಲೆ ಸ್ಥಳ ಹೇಗೂ ಉಂಟು ಎಂದಾಯಿತಷ್ಟೆ. ಭಾವರಹಿತವಾದ ಹೃದಯದಲ್ಲಿ ಪ್ರೇಮದ ಅಂಕುರವನ್ನು ಊರಿದರೆ ಮುಂದೆ ನೀವು ಪ್ರೇಮಮಯ ದಂಪತಿಗಳಾಗಿ ಬೆಳೆದು ಬಾಳುವಿರಿ. ಡಾಕ್ಟರರು ನಿನ್ನ ಪತಿಯಾಗುವ ಭಾಗ್ಯ ಮಾತ್ರವಲ್ಲ, ನಮಗೆಲ್ಲರಿಗೂ ನಿನ್ನ ಪಿತನಂತೆ ಆಶ್ರಯದಾತರಾಗುವ ಭಾಗ್ಯವೂ ನಮ್ಮದು' ಎಂದು. ಅಲ್ಲಿಂದಲೇ ನಿಮ್ಮ ಮದುವೆಯು ಪ್ರಾರಂಭವಾಗಿ, ಇಂದು ಈ ಸಂತೋಷ ಸಮಾರಂಭದಲ್ಲಿ ಭಾಗಿಗಳಾಗಿದ್ದೇವೆ" ಹೀಗೆ, ಇನ್ನೂ ಇಂಥಾ ತುಂಬಾ ಮಾತುಗಳನ್ನು ಮುದಿಸಿಪಾಯಿ ಮಾತಾಡಿದನಂತರ ಸಭೆ ವಿಸರ್ಜನೆಯಾಯಿತು.

ಅನಂತರ ನಾವೆಲ್ಲಾ ಸೇರಿ ಜೈಕಾರ ಮಾಡಿ, ನಮಸ್ಕರಿಸಿ, ಆಶೀರ್ವದಿಸಿ, ಜಾಕ್ ಮಾಲ್ಡನ್ನನನ್ನು ಬಂಡಿಯಲ್ಲಿ ಕುಳ್ಳಿರಿಸಿ ಅವನ ಮುಂದಿನ ಪಯಣಕ್ಕಾಗಿ ಕಳುಹಿಸಿಕೊಟ್ಟೆವು. ಅನ್ನಿ ಬಹು ದುಃಖದಿಂದ ಸೊರಗಿದ್ದಳು. ಜಾಕ್ ಮಾಲ್ಡನ್ನನು ನಮಗೆಲ್ಲರಿಗೂ ನಮಸ್ಕರಿಸಿಯೇ

ಹೋದನು. ಅವನೂ ವಿಶೇಷ ಉತ್ಸಾಹದಿಂದ ಇದ್ದವನಂತೆ ತೋರುತ್ತಿರಲಿಲ್ಲ. ಅವನು ನಮಗೆ ನಮಸ್ಕರಿಸುತ್ತಿದ್ದಾಗ ಅವನ ಕೈಯ್ಯಲ್ಲಿ ಒಂದು ಕೆಂಪು ಹೂವೋ ಬಟ್ಟೆಯೋ – ಏನೋ ಇತ್ತು.

ಬಂಡಿ ಹೋದಮೇಲೆ ನಾವು ಡಾಕ್ಟರರ ಮನೆಗೆ ಬಂದು ನೋಡುವಾಗ ಅನ್ನಿ ಮುಖ್ಯ ಬೈಠಖಾನೆಯಲ್ಲಿ ಸ್ಮೃತಿ ತಪ್ಪಿ ಬಿದ್ದಿದ್ದಳು. ನಾವೆಲ್ಲರೂ ಕೂಡಿ, ಅವಳನ್ನು ಉಪಚರಿಸಿ, ಎತ್ತಿ ಹಾಸಿಗೆಯಲ್ಲಿ ಮಲಗಿಸಿದೆವು. ಆಗ ಅವಳ ಗಲ್ಲದ ಅಡಿಯಲ್ಲಿ ಮೊದಲು ಇದ್ದ ಆ ಕೆಂಪು ಹೂ ಇರಲಿಲ್ಲ.

ಮಿ. ವಿಕ್ಫೀಲ್ಡರು, ಏಗ್ನೆಸ್, ಮತ್ತು ನಾನು ನಮ್ಮ ಮನೆಗೆ ಹೊರಟೆವು. ಅಷ್ಟರಲ್ಲೇ ಏಗ್ನೆಸ್ಸಳು ಡಾಕ್ಟರರ ಮನೆಯಲ್ಲಿ ತನ್ನ ಕೈಚೀಲವನ್ನು ಮರೆತು ಬಂದಿರುವುದಾಗಿ ತಿಳಿಸಿದಳು. ಆ ಕೈ ಚೀಲವನ್ನು ತರಲೆಂದು ನಾನು ಡಾಕ್ಟರರ ಮನೆಗೆ ಬಂದು, ಡಾಕ್ಟರರ ಕೊಠಡಿಯಲ್ಲಿ ಬೆಳಕಿದ್ದುದರಿಂದ, ಅವರೊಡನೆ ವಿಚಾರಿಸಲೆಂದು ಒಳನುಗ್ಗುವ ಸಂದರ್ಭದಲ್ಲಿ ಒಳಗಿನ ದೃಶ್ಯ, ಅಲ್ಲಿಂದ ನಾನು ಕೇಳಿದ ಮಾತುಗಳೂ ನನ್ನ ನೆನಪಿನಲ್ಲಿ ಸದಾ ಉಳಿದಿವೆ. ನಾನು ನೋಡಿದ್ದಾಗಲೀ ಕೇಳಿದ್ದಾಗಲೀ ಅಡಗಿ ಮಾಡಿದ್ದಲ್ಲ – ಹೇಗೋ ನಡೆದು ಹೋದ ಸಂದರ್ಭ ಮಾತ್ರ ಅವು.

ನಾನು ಒಳನುಗ್ಗುವಾಗ ಡಾಕ್ಟರರು ಅನ್ನಿಯ ತಲೆಯನ್ನು ಸವರುತ್ತಾ ಅವಳು ನಿದ್ರೆ ಮಾಡಬೇಕೆಂದು ಒತ್ತಾಯಿಸುತ್ತಿದ್ದರು. ಅನ್ನಿ ಬಹು ಆರ್ತತೆಯಿಂದ "ನನ್ನನ್ನು ನಂಬುವಿರಾ – ನನ್ನ ಮೇಲೆ ಸಂಶಯವಿದೆಯೇ" ಎಂದು ಕೇಳುತ್ತಿದ್ದಳು. ಡಾಕ್ಟರರು ಏನೋ ಆಶ್ವಾಸನೆ ಕೊಟ್ಟ ನಂತರ ಅನ್ನಿ ತನ್ನೆರಡೂ ಕೈಗಳನ್ನು ಎತ್ತಿಕೊಂಡು – ಇಗರ್ಜಿಯಲ್ಲಿ ನಾವು ದೇವರಿಗೆ ನಮಸ್ಕರಿಸುವಂತೆ – ಪತಿಗೆ ನಮಸ್ಕರಿಸುತ್ತಿದ್ದಳು.

ಈ ಒಂದು ಸನ್ನಿವೇಶ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿ ಉಳಿದಿದೆ. ಇದು ನನ್ನ ಮೇಲೆಯೇ ತುಂಬಾ ಪರಿಣಾಮವನ್ನುಂಟು ಮಾಡಿದೆ. ಮುಂದೆ ಇದೇ ಚರಿತ್ರೆಯಲ್ಲಿ ಈ ಸಂಬಂಧವಾಗಿ ಪ್ರಸ್ತಾಪಿಸಲಿರುವೆನು.

ಅಧ್ಯಾಯ ಹದಿನೇಳು

ಅನಿರೀಕ್ಷಿತರೊಬ್ಬರ ದರ್ಶನ

ನಾನು ಡೋವರಿಗೆ ತಲುಪಿದ ಕೂಡಲೇ ಪೆಗಟಿಗೆ ಒಂದು ಪತ್ರವನ್ನು ಬರೆದಿದ್ದೆನು. ಸ್ವಲ್ಪ ದಿನ ಕಳೆದನಂತರ ಡಾಕ್ಟರ್ ಸ್ಟ್ರಾಂಗರ ಮತ್ತು ಮಿ. ವಿಕ್ಫೀಲ್ಡರ ಕುರಿತೂ ಸಹ ಪುನಃ ಒಂದು ಪತ್ರ ಬರೆದಿದ್ದೆ. ಅದರಲ್ಲಿ ಏಗ್ನೆಸ್ಸಳು, ನನ್ನ ಊಟ, ವಸತಿ, ವಿದ್ಯಾಭ್ಯಾಸದ ವಿವರಗಳನ್ನೆಲ್ಲ ತಿಳಿಸಿದ್ದೆನು. ಮಿ. ಡಿಕ್ಕರು ಕೊಟ್ಟಿದ್ದ ಉಚಿತಾರ್ಥ ಹಣದಿಂದ ಪೆಗಟಿಯ ಸಾಲವನ್ನು ತೀರಿಸಿದೆನು. ಪೆಗಟಿಯೂ ಮರುತ್ತರವನ್ನು ಬರೆದಳು. ಅವಳ ಪತ್ರದಲ್ಲಿ ತುಂಬಾ ಚಿತ್ತು ಕಲೆಗಳಿದ್ದರೂ ಅವೆಲ್ಲ ಪೆಗಟಿಯ ಆನಂದಾಶ್ರುಗಳಿಂದಲೇ ಆಗಿದ್ದುವೆಂದು ನಾನು ಊಹಿಸಿ ಸಂತೋಷಗೊಂಡೆ.

ಪೆಗಟಿಯ ಪತ್ರದಿಂದ ಅನೇಕ ವಿಷಯಗಳನ್ನು ತಿಳಿದುಕೊಂಡೆನು. ಮಿ. ಮತ್ತು ಮಿಸ್ ಮರ್ಡ್ಸ್ಟನ್ನರು ಮನೆಯನ್ನು ಬಿಟ್ಟು ಹೋಗಿದ್ದರು. ಮನೆಯನ್ನು ಮಾರುವ ಏರ್ಪಾಡೂ ನಡೆಯುತ್ತಿತ್ತು. ಮಾರುವುದರ ಪೂರ್ವಭಾವಿಯಾಗಿ ಮನೆಯಲ್ಲಿದ್ದ ಮೇಜು, ಕಪಾಟು, ಕುರ್ಚಿಗಳನ್ನೆಲ್ಲ ಮಾರಿದ್ದರು. ನನಗೆ ಆ ಮನೆಯಲ್ಲಿ ಯಾವ ವಿಧದ ಶಾಸನಬದ್ಧವಾದ ಹಕ್ಕಿಲ್ಲದಿದ್ದರೂ ಆ ಮನೆ ನನ್ನದಾಗಿತ್ತು. ಅದು ನನ್ನ ಬಾಲ್ಯದ ಕಾಲ ಕಳೆದ ಮನೆ, ಮಮತೆಯ ಮಾತೆಯ ಜತೆಯಲ್ಲಿ ದಿನ ಕಳೆದ ಸವಿನೆನಪುಗಳ ವಿಶಿಷ್ಟ ಆಗಾರ ಎಂಬ ಆತ್ಮೀಯತಾ ಭಾವನೆ ನನ್ನನ್ನು ದುಃಖಕ್ಕೀಡುಮಾಡಿತು. ಮನೆ ಪರಸ್ವಾಧೀನವಾಗುವುದರಲ್ಲಿ ನನ್ನ ದೇಹದ ಒಂದಂಶವೇ ಹರಿದುಹೋಗುತ್ತದೆಂಬಂತೆ ತೋರತೊಡಗಿತು. ಪೆಗಟಿಯ ವರ್ಣನೆಗಳು ನನ್ನ ಮನಸ್ಸಿನಲ್ಲಿ ನಾನಾ ರೂಪಗಳನ್ನೂ ಭಾವನೆಗಳನ್ನೂ ಉಂಟುಮಾಡಿದುವು. ಆ ಮನೆ ದುಃಖದ ಪ್ರತೀಕವೂ ಅದರ ವಠಾರ ದುಃಖಮಯ ಕ್ಷೇತ್ರವೂ ಆಗಿ ತೋರಿದುವು. ನಮ್ಮ ಹೂದೋಟದಲ್ಲಿ ಬೆಳೆದಿದ್ದ ಆಳುದ್ದದ ಕಳೆಯನ್ನು ಚಿತ್ರಿಸಿಕೊಂಡು ದುಃಖಿಸಿದೆನು. ಮರದಡಿಗಳಲ್ಲಿ, ಕಾಲುರಸ್ತೆಯಲ್ಲಿ, ಗುಂಡಿಗುಳುಪುಗಳಲ್ಲಿ ಎಲೆಬಿದ್ದು ಕೊಳೆತು ತೇವದಿಂದೆದ್ದ ಆವಿ ಮೇಲೇರಿ ಪಸರಿಸುವುದನ್ನು ಚಿತ್ರಿಸಿಕೊಂಡೆನು. ಚಳಿಗಾಲದ ಗಾಳಿ ಎಡೆಬಿಡದೆ ಬೀಸಿ, ಸಂದಿಗೊಂದುಗಳಿಗೆ ನುಗ್ಗಿ ನುಸುಳಿ ಬೇಸತ್ತು ರೋದಿಸುತ್ತಿದ್ದ ರೋದನವನ್ನು ಕೇಳಿದೆ. ಎಡೆಬಿಡದೆ ಮಳೆ ಕಿಟಕಿಗಳಿಗೆ ಹೊಡೆದು ಕೆಳಗಿಳಿದು ಬರುವ ದೃಶ್ಯವನ್ನು ಗ್ರಹಿಸಿ ಮನೆಯೇ ಬಿಕ್ಕಿ ಬಿಕ್ಕಿ ಅಳುತ್ತದೆಂದು ಭಾವಿಸಿದೆ. ಜೀವಕಳೆಯಿಂದ ತುಂಬಿ ಮೆರೆದಿದ್ದ ಮನೆಯನ್ನು ಇಂದು ಏಕಾಂಗಿಯಾಗಿ ನಿಂತಾಗ, ಯಾರು ನೋಡದಿದ್ದರೂ ನಿಶ್ಶಬ್ದವಾಗಿ ರಾತ್ರಿಯಲ್ಲಿ ಎದ್ದು ಬಂದ ಚಂದ್ರನು ನೋಡಿದ್ದರ ಭೀಷಣ ಏಕಾಂತತೆಯನ್ನು ಭಾವಿಸಿ ಚಿಂತಿಸಿದೆ. ಆ ನಿರ್ಜನ ಪ್ರದೇಶದಲ್ಲಿ ಚಂದ್ರನ ಬೆಳಕಿಗೆ ಮರದಡಿಯ ನೆರಳುಗಳು ಅಲುಗಿ, ಅಲ್ಲಾಡಿ, ಚಲಿಸಿ, ಪ್ರೇತಗಳಂತೆ ಕಂಡೂ ಕಾಣಿಸದ ಸ್ವರೂಪಗಳನ್ನು ಗ್ರಹಿಸಿ ನಡುಗಿದೆ. ಈ ಎಲ್ಲ ಭಾವನೆಗಳು ಅಂತ್ಯವಾಗಿ ಗೋರಿಗಳ ಪ್ರಶಾಂತತೆ, ಪ್ರಪಂಚಾತೀತ ಪರಿಸ್ಥಿತಿ, ಇವನ್ನೆಲ್ಲ ನಾನಾ ಭಾವನೆ – ರೂಪ – ಬಣ್ಣಗಳಿಂದ ಚಿತ್ರಿಸಿಕೊಂಡು ದುಃಖಿಸಿದೆನು.

ಇನ್ನು ಪೆಗಟಿಯ ಪತ್ರದಲ್ಲಿ ಬಾರ್ಕಿಸನ ಗುಣವರ್ಣನೆಯೂ ಇತ್ತು. ಅವರ ದಾಂಪತ್ಯ ಸುಖದ ವಿಚಾರವೂ ಇತ್ತು. ಬಾರ್ಕಿಸನ ಜಿಪುಣತ್ವ ಒಂದಷ್ಟು ಬಿಟ್ಟರೆ ಅವರ ಜೀವನ ಸುಖಮಯವಾಗಿತ್ತಂತೆ. ಮಿ. ಪೆಗಟಿ, ಹೇಮ್, ಗಮ್ಮಿಜ್, ಎಮಿಲಿಯರು ಸುಖವಾಗಿದ್ದರೆಂದೂ ತಿಳಿದೆ. ಎಮಿಲಿ ಬೆಳವಣಿಗೆಯಲ್ಲಿ ದೊಡ್ಡವಳಾಗಿದ್ದರೂ ಒಡನಾಟದಲ್ಲಿ ಮೊದಲಿನ ಮಗುವಾಗಿಯೇ ಇದ್ದಳಂತೆ.

ಹೀಗೆ ನಾನು ವಿದ್ಯಾ ವ್ಯಾಸಂಗದಲ್ಲಿರುವಾಗಲೇ ಅತ್ತೆ ಒಮ್ಮೊಮ್ಮೆ ಹಠಾತ್ತಾಗಿ ಕೇಂಟರ್ಬರಿಗೆ ಬಂದು ನನ್ನನ್ನು ವಿಚಾರಿಸಿಕೊಂಡು ಹೋಗುತ್ತಿದ್ದಳು. ಓಡಿಹೋಗುವ ಚಟ ನನ್ನಿಂದ ಪೂರ್ತಿಯಾಗಿ ನಾಶವಾಗಿರಲಾರದೆಂದು ಹೆದರಿಯೇ ಅತ್ತೆ ಈ ವಿಧದ ಹಠಾತ್ತಾದ ತನಿಕೆ – ಸಂದರ್ಶನಗಳನ್ನು ಮಾಡುತ್ತಿದ್ದಿರಬೇಕೆಂದು ನಾನು ಊಹಿಸಿಕೊಂಡೆನು.

ಮಿ. ಡಿಕ್ಕರೂ ವಾರಕ್ಕೊಮ್ಮೆ ಕೇಂಟರ್ಬರಿಗೆ ಬಂದು ನಮ್ಮ ಜತೆಯಲ್ಲಿದ್ದು ಹೋಗುತ್ತಿದ್ದರು. ಅತ್ತೆಯ ಶಿಸ್ತಿನ ಜೀವನ ಮಿ. ಡಿಕ್ಕರ ಮೇಲೂ ಪರಿಣಾಮ ಮಾಡಿತ್ತು. ಮಿ. ಡಿಕ್ಕರ ಹತ್ತಿರ ಯಾವಾಗಲೂ ಸ್ವಲ್ಪ ಹಣವನ್ನು ಅತ್ತೆ ಕೊಟ್ಟು ಇಟ್ಟಿರುತ್ತಿದ್ದರೂ ಆ ಹಣವನ್ನು ಖರ್ಚುಮಾಡಲು ಅವರಿಗೆ ಅತ್ತೆಯ ಅನುಮತಿ ಬೇಕೇಬೇಕಾಗಿತ್ತು. ಈ ವಿಧದ ನಿರ್ಬಂಧದ ಕಾರಣವಾಗಿಯೋ ಏನೋ ಒಂದು ದಿನ ಮಿ. ಡಿಕ್ಕರು ನನ್ನೊಡನೆ ಹಠಾತ್ತಾಗಿ ಅಂದರು –

"ಮಿ. ಕಾಪರ್ಫೀಲ್ಡ್, ನಮ್ಮ ಹೂತೋಟದಲ್ಲಿ ಅಡಗಿ ಕುಳಿತು ಅತ್ತೆಯನ್ನು ಹೆದರಿಸುತ್ತಾನಲ್ಲ, ಅವನ್ಯಾರು?"

"ನಮ್ಮ ಅತ್ತೆಯನ್ನು ಹೆದರಿಸುವುದೇ? ಯಾರು? ಯಾವಾಗ?" ಎಂದು ನಾನು ಆಶ್ಚರ್ಯದಿಂದ ಕೇಳಿದೆ.

"ಹೌದು ನಮ್ಮ ಅತ್ತೆಯನ್ನೇ – ಎರಡು ಬಾರಿ ನೋಡಿದ್ದೇನೆ. ಒಂದು ಬಾರಿ ಅವಳು ಹೆದರಿ ಸ್ಮೃತಿ ತಪ್ಪಿ ಬಿದ್ದಿದ್ದಳು" ಅಂದರು ಮಿ. ಡಿಕ್ಕರು.

"ಸಾಧಾರಣ ಯಾವ ಸಮಯದಲ್ಲಿ?" ಎಂದು ನಾನು ವಿಚಾರಿಸಿದೆ.

"ರಾತ್ರಿ ಸಮಯದಲ್ಲಿ – ಚಾರ್ಲ್ಸ್ ದೊರೆಯ ತಲೆ ಕಡಿದಾಗ – ಅಥವಾ ಆ ದೊರೆಯ ದುಃಖ ನನ್ನ ತಲೆಗೆ ನುಗ್ಗಿದ ಎರಡು ತಿಂಗಳ ನಂತರ" ಅಂದರು ಮಿ. ಡಿಕ್ಕರು.

"ಕಂಡದ್ದು ಮಾತ್ರ ತಾನೆ? ಸ್ಪಷ್ಟವಾದದ್ದು ಮತ್ತೇನೂ ಇಲ್ಲ ತಾನೆ?" ಎಂದು ನಾನು ಕೇಳಿದ್ದಕ್ಕೆ ಅವರು ಅಂದರು –

"ಅಷ್ಟು ಮಾತ್ರವಲ್ಲ – ಅತ್ತೆ ಹಣ ಲೆಖ್ಖ ಮಾಡಿ ಅವನಿಗೆ ಕೊಟ್ಟು ಕಳುಹಿಸಿದಳು. ಇದನ್ನು ನಾನು ಕಂಡದ್ದು ಎರಡನೆಯ ಬಾರಿ."

ಇದು ಮಿ. ಡಿಕ್ಕರ ಕಲ್ಪನೆಯಾಗಿರಬೇಕು ಅಥವಾ ಅವರನ್ನೇ ಅಪಹರಿಸಿ, ಅವರ ಮುಖಾಂತರ ಅತ್ತೆಯಿಂದ ಹಣ ಸುಲಿಯುವ ಹಂಚಿನಲ್ಲಿ ಯಾರಾದರೂ ಇದ್ದಾರೋ ಎಂದು ಸಂಶಯಪಟ್ಟೆನು.

ನನ್ನ ಮುಖಾಂತರ ಮಿ. ಡಿಕ್ಕರ ಪರಿಚಯ ನಮ್ಮ ಶಾಲಾ ಬಾಲಕರಿಗೂ ಡಾ. ಸ್ಟ್ರಾಂಗರಿಗೂ ಅವರ ಪತ್ನಿಗೂ ಆಯಿತು. ಬಾಲಕರ ಮಧ್ಯದಲ್ಲಿ ಮಿ. ಡಿಕ್ಕರಿದ್ದಾಗ ಅವರು ಬಾಲಕರಿಗಿಂತಲೂ ಹರ್ಷಚಿತ್ತರೂ ನಿಷ್ಕಪಟಿಗಳೂ ಆಗಿ ಬಿಡುತ್ತಿದ್ದರು. ಡಾ. ಸ್ಟ್ರಾಂಗರಿಗಂತೂ ತಮ್ಮ ನಿಘಂಟಿಗೆ ಸಂಬಂಧಿಸಿದ ಕ್ಲಿಷ್ಟ ಪದಗಳನ್ನು ಕುರಿತಾಗಿ ಚರ್ಚಿಸಲು, ವಿವರಿಸಲೂ ಅವರು ತಿರುಗಾಡುತ್ತಾ ಸಂಶೋಧನೆಗಳನ್ನು ಮಾಡುತ್ತಿದ್ದಾಗ ಸಹಪಾಟಿಗಳಾಗಿ ತಿರುಗಾಡಲೂ ಮಿ. ಡಿಕ್ಕರು ತುಂಬಾ ಪ್ರಯೋಜನ ಬೀಳುತ್ತಿದ್ದರು. ಮಿ. ಡಿಕ್ಕರು ಡಾ. ಸ್ಟ್ರಾಂಗರ ವಿದ್ವತ್ತಿಗಾಗಿ ಮೆಚ್ಚಿ, ಭ್ರಮಿಸಿಯೇ ಹೋಗಿದ್ದರು. ಡಾಕ್ಟರರನ್ನು ಅವರು ಒಂದು ವಿಧದಲ್ಲಿ ಪೂಜಿಸುತ್ತಲೂ ಇದ್ದರು. ತಮ್ಮ ಗೌರವವನ್ನು ಸೂಚಿಸಲೋಸ್ಕರ ಮಿ.ಡಿಕ್ಕರು ಡಾಕ್ಟರರ ಸಮ್ಮುಖದಲ್ಲಿದ್ದಾಗ ಎಂದೂ ಹೇಟನ್ನು ಧರಿಸುತ್ತಿರಲಿಲ್ಲ. ಹೇಟನ್ನು ಸದಾ ಕಂಕುಳಲ್ಲೇ ಇಟ್ಟುಕೊಂಡಿರುತ್ತಿದ್ದರು. ಮಿ. ಡಿಕ್ಕರೂ ಡಾ. ಸ್ಟ್ರಾಂಗರೂ ತಮ್ಮ ತಮ್ಮ ಹೃದಯ ಪರಿಶುದ್ಧತೆಯಲ್ಲಿ ಸರಿಸಮಾನಸ್ಥರೇ ಆಗಿದ್ದರು. ಆ ಮಹಾನುಭಾವರಿಬ್ಬರು ಶಾಲಾ ಮೈದಾನದಲ್ಲಿ ತಮ್ಮ ತಮ್ಮ ಯೋಚನೆಗಳಲ್ಲಿ ಮಗ್ನರಾಗಿ ನಡೆಯುತ್ತಿದ್ದ ದೃಶ್ಯವನ್ನು ನಾನು ಈಗಲೂ ಸ್ಪಷ್ಟವಾಗಿ ಕಾಣಬಲ್ಲೆನು.

ಇದೇ ಸಮಯದಲ್ಲಿ ನಾನು ಉರೆಯನ ಪರಿಚಯವನ್ನೂ ಮಾಡಿಕೊಂಡೆನು. ಅವನು ನನ್ನನ್ನು ಒಂದು ದಿನ ಸಂಜೆ ಕರೆದುಕೊಂಡು ಹೋಗಿ ತುಂಬಾ ಉಪಚರಿಸಿದನು. ಉರೆಯನು ವಕೀಲಿ ವೃತ್ತಿಗೆ ಬೇಕಾದ ಪುಸ್ತಕಗಳನ್ನು ಓದುತ್ತಿದ್ದನೆಂದೂ ಅವನ ಪರಿಶ್ರಮಗಳು, ಮನೆಯ ಏರ್ಪಾಡುಗಳು, ಎಲ್ಲವೂ ಬಡತನದಿಂದ ಶ್ರೀಮಂತಿಕೆಗೆ ಏರುವ, ಮತ್ತು ದೀನತನದಿಂದ ಗೌರವ ಪರಿಸ್ಥಿತಿಗೆ ಮುಟ್ಟುವ ಕುರಿತು ಇತ್ತೆಂದೂ ನಾನು ತಿಳಿದೆ.

ಉರೆಯನೂ ಅವನ ತಾಯಿಯೂ ತಾವು ದೀನ ದರಿದ್ರರು ಎಂದಂದುಕೊಂಡು, ನನ್ನನ್ನೂ ಮಿ. ವಿಕ್ಫೀಲ್ಡ್, ನಮ್ಮತ್ತೆ ಮೊದಲಾದವರು ಶ್ರೀಮಂತರು, ಸುಸಂಸ್ಕೃತರು, ಉತ್ತಮರು ಎಂದು ಹೊಗಳಿ ಸ್ತುತಿಸುತ್ತಾ ತಮ್ಮ ಬಡತನ, ತಮ್ಮ ಹಿರಿಯರ ದೀನತನ, ಮನೆತನದ ಅಲ್ಪತನಗಳನ್ನು ನನ್ನೆದುರು ವಿವರಿಸಿ, ನಿಷ್ಕಪಟಿಗಳೆಂದು ತೋರಿಸಿ, ಲೋಕಾನುಭವವಿಲ್ಲದ ನನ್ನ ಬಾಯಿಯಿಂದ ನನ್ನ ಬಾಲ್ಯದ ಚರಿತ್ರೆ, ಮಿ. ವಿಕ್ಫೀಲ್ಡ್ ಮತ್ತು ಏಗ್ನೆಸ್ಸಳ ದಿನಚರಿ, ಮಿ. ವಿಕ್ಫೀಲ್ಡರು ಒಂದು ವಿಧದ ಮನೋರೋಗದಿಂದಲೋ ಅಥವಾ ದುಃಖದಿಂದಲೋ ವಿಪರೀತವಾಗಿ ದ್ರಾಕ್ಷಾರಸವನ್ನು ಕುಡಿಯುತ್ತಿದ್ದ ಚರಿತ್ರೆ ಮೊದಲಾದ ವರ್ತಮಾನಗಳನ್ನೆಲ್ಲ ನನಗೆ ಅರಿಯದೆ, ನನ್ನಿಂದ ಎಳೆದು ತೆಗೆದರು. ಅವರಿಬ್ಬರು ಈ ತೆರನಾಗಿ ಮಾತಾಡುವುದರಲ್ಲಿ ನೈಪುಣ್ಯವನ್ನೇ ಪಡೆದಿದ್ದರು.

ನಾನು ಆ ದಿನ ಉರೆಯನ ಮನೆಯಲ್ಲಿದ್ದಾಗಲೇ ಮಿ. ಮೈಕಾಬರರು ನನ್ನನ್ನು ಮಾರ್ಗದಿಂದಲೇ ಕಂಡು, ನಾನಿದ್ದಲ್ಲಿಗೆ ಬಂದು ನನ್ನೊಡನೆ ಮಾತಾಡಿದರಲ್ಲದೆ, ಉರೆಯನ ಪರಿಚಯವನ್ನು ಮಾಡಿಕೊಂಡರು. ನನ್ನನ್ನು ಕಂಡೊಡನೆ ಅಂದರು –
"ಮಾನವ ಜೀವನದ ಸುಖದುಃಖಗಳ ಚಂಚಲತೆಯನ್ನು ಗೊತ್ತುಪಡಿಸುವುದಕ್ಕಾಗಿಯೇ ಎಂಬಂತೆ, ಒಂದು ಅನಿರೀಕ್ಷಿತ ಘಟನೆಯಾಗಿ, ನನ್ನ ಜೀವಮಾನದ ಪ್ರಾಮುಖ್ಯ ಭಾಗದಲ್ಲಿ ಜತೆಗಾರನಾಗಿದ್ದ, ಮಿ. ಕಾಪರ್ಫೀಲ್ಡರ ದರ್ಶನವಾದುದು ಒಂದು ಮಹತ್ವದ ಸಂಗತಿ" ಅಂದರು.

ಅವರನ್ನು ಕಂಡು ನನಗೂ ತುಂಬಾ ಸಂತೋಷವಾಗಿತ್ತು. ಹಾಗಾಗಿ ನಾನು ಅವರೊಡನೆ ಮಾತಾಡತೊಡಗಿದೆನು. ಅವರ ಹೆಂಡತಿ, ಮಕ್ಕಳ ಆರೋಗ್ಯ, ಕುಟುಂಬದ ಸುಖ ಮೊದಲಾದುವನ್ನೆಲ್ಲ ವಿಚಾರಿಸಿದೆನು. ಉರೆಯನನ್ನೂ ಅವನ ತಾಯಿಯನ್ನೂ ನೋಡಿ, ಅನಂತರ ನನ್ನನ್ನು ಕುರಿತು –
"ಈ ಕೊಠಡಿಯಲ್ಲಿರುವ – ನನಗೆ ಅಪರಿಚಿತರಾಗಿದ್ದರೂ ನನ್ನ ಸ್ನೇಹಿತರ ಸ್ನೇಹಸುಖದ ಭಾಗಿಗಳಾಗಿ, ಅರ್ಥಾತ್ ಆ ಮೂಲಕ ನನ್ನ ಸ್ನೇಹಿತರೆಂದರೆ ತಪ್ಪಾಗಲಾರದ – ಓರ್ವ ಗೃಹಿಣಿ ಮತ್ತೂ ಆ ಗೃಹಿಣಿಯಂತೆಯೇ ತೋರುವ ಗೃಹಸ್ಥ ಅರ್ಥಾತ್ ಮಗ – ಇವರಿಬ್ಬರ ಪರಿಚಯ ಭಾಗ್ಯವನ್ನು ನನಗೆ ದಯಮಾಡಿ ಒದಗಿಸಿರಿ" ಅಂದರು.

ನಾನು ಅವರಿಬ್ಬರ ಪರಿಚಯವನ್ನು ಮಾಡಿಕೊಟ್ಟೆನು. ಅನಂತರ ಮಿ. ಮೈಕಾಬರರು ಬಹು ಘನಸ್ಥಿಕೆಯಿಂದ –
"ಮಹಿಳಾಮಣಿಗಳೇ ಮತ್ತು ಮಹನೀಯರೇ ನಾನೊಬ್ಬ, ಇಂದು, ಬಹು ಭಾಗ್ಯವಂತ – ತಮ್ಮ ಪರಿಚಯದ ಲಾಭವು ನನ್ನದು" ಎಂದಂದರು.
"ನಾವು ಕೇವಲ ಬಡವರು, ಮಿ. ಕಾಪರ್ಫೀಲ್ಡರ ಸ್ನೇಹಿತರೆಂದು ಪರಿಗಣಿಸಲ್ಪಡತಕ್ಕಷ್ಟು ನಾವು ಯೋಗ್ಯರಲ್ಲ – ಕಡುಬಡವರು ನಾವು. ತಮ್ಮಂಥ ಘನಸ್ಥರ ಕೃಪಾದೃಷ್ಟಿ ನಮ್ಮ ಬಡ ಸಂಸಾರದ ಮೇಲೆ ಬಿದ್ದುದೇ ನಮ್ಮ ಭಾಗ್ಯ" ಎಂದು ಉರೆಯನ ತಾಯಿ ಉತ್ತರವಿತ್ತಳು.

ಇಷ್ಟೆಲ್ಲಾ ಮಾತಾದನಂತರ ಮಿ. ಮೈಕಾಬರರು ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ನಾವು ಅವರ ಮನೆಯಲ್ಲಿ ಕುಳಿತು ಅವರ ಪತ್ನೀಸಮೇತರಾಗಿ ಬೇಕು ಬೇಕಾದಂತೆ ಮಾತಾಡಿದೆವು. ಪ್ಲಿಮತ್ತಿನಲ್ಲಿ ಸುಂಕದ ಇಲಾಖೆಯವರಿಗೆ ಮಿ. ಮೈಕಾಬರರಷ್ಟು ಉತ್ತಮ ತರದ ಯೋಗ್ಯತೆಗಳಿದ್ದ ಅಧಿಕಾರಿಗಳು ಬೇಡವಾಗಿ ಅಲ್ಲಿಂದ ಅವರು ಹಿಂತಿರುಗಿದ್ದರಂತೆ. ಅನಂತರ ಮಿಡ್ವೆಯಲ್ಲಿನ ಕಲ್ಲಿದ್ದಲಿನ ಗಣಿ ಅವರನ್ನು ಆಕರ್ಷಿಸಿ, ಅದರ ಕಂಟ್ರಾಕ್ಟರರಾಗಿ ಸೇರಿದರಂತೆ. ಅದರೆ ಆ ಕೆಲಸದ ಮಟ್ಟಿಗೆ ಮಿ. ಮೈಕಾಬರರಿಗೆ ಎಷ್ಟೇ ಅನುಭವ, ವ್ಯವಹಾರ ಜ್ಞಾನವಿದ್ದಿದ್ದರೂ ಹಣದ ಶಕ್ತಿ ಬಹು ಕಡಿಮೆಯಾಗಿದ್ದುದರಿಂದ ಅವರು ಆ ಕೆಲಸವನ್ನು ಬಿಟ್ಟು, ದೈವಿಕ ಮಹತ್ವವಿರುವ ಕೇಂಟರ್ಬರಿಯಲ್ಲಿ ತಮ್ಮ ಶಕ್ತಿ ಯೋಗ್ಯತೆಗಳಿಗೆ ತಕ್ಕಂಥ ಕೆಲಸ ಸಿಕ್ಕುವುದರಲ್ಲಿ ಅಡ್ಡಿಯಿರಲಾರದೆಂದು ಕೇಂಟರ್ಬರಿಗೆ ಬಂದಿದ್ದರಂತೆ. ಈ ವಿವರಗಳನ್ನೆಲ್ಲಾ ಅವರ ಪತ್ನಿ ಬಹು ಸಂತೋಷದಿಂದ ತಿಳಿಸಿದರು. ಆ ಮಾತನ್ನೆಲ್ಲ ಕೇಳುತ್ತಿದ್ದ ಮಿ. ಮೈಕಾಬರರು –
"ಅದೆಲ್ಲ ಸಂತೋಷದ ಸಂಗತಿ – ಸದ್ಯವೇ ನನಗೆ ಉತ್ತಮ ಕೆಲಸವೊಂದು ದೊರಕಲಿದೆಯೆಂಬುದು ಸುಸ್ಪಷ್ಟ. ಆದರೆ ನೋಡಿ, ನನ್ನ ಎಂಥ ವಿಪತ್ಕಾಲದಲ್ಲೂ ನನ್ನ ಪರಮಸ್ನೇಹಿತನೊಬ್ಬನು ನನ್ನ ಜತೆಯಲ್ಲಿ ಸದಾ ಇರುವುದೊಂದು ಎಲ್ಲಾದಕ್ಕಿಂತಲೂ ಶುಭ" ಎಂದನ್ನುತ್ತಾ ಮಿ.ಮೈಕಾಬರರು ತನ್ನ ಕತ್ತನ್ನು ಕೊಯ್ದುಕೊಳ್ಳುವಂತೆ ಕೈಯಿಂದ ಸನ್ನೆ ಮಾಡಿ ತೋರಿಸಿದರು.
ನಾನು ಗಾಬರಿಯಿಂದ ವಿಪತ್ಕಾಲದ ಆ ಸ್ನೇಹಿತನು ಯಾರೆಂದು ವಿಚಾರಿಸಿದೆ, ಅದಕ್ಕವರು –
"ಕ್ಷೌರದ ಕತ್ತಿಯಿದೆಯಲ್ಲಾ, ಅದೇ ನನ್ನ ಪರಮಸ್ನೇಹಿತ" ಅಂದರು.

ಇಷ್ಟು ಹೇಳಿದ ಮರುಕ್ಷಣದಲ್ಲೇ ನನ್ನ ಅನಿರೀಕ್ಷಿತ ಭೇಟಿಯ ಸಂತೋಷಕ್ಕಾಗಿ ಒಂದು ಔತಣವನ್ನು ಏರ್ಪಡಿಸಿದರು. ನಾವೆಲ್ಲರೂ ಜತೆ ಸೇರಿ ಔತಣ ಪೂರೈಸಿ ನಾನು ನನ್ನ ಮನೆಗೆ ಹೊರಟು ಹೋದೆನು. ಔತಣದ ಮಧ್ಯೆ, ಕೇಂಟರ್ಬರಿಯನ್ನು ತಾವು – ಇದಕ್ಕಿಂತ ಹೆಚ್ಚಿನ ಒಂದು ಸಾಂಪತ್ತಿಕ ಪರಿಸ್ಥಿತಿ ದೊರಕಬಹುದಾದ ಸಂದರ್ಭದಲ್ಲಿ – ಕೂಡಲೇ ಬಿಡಲೂಬಹುದೆಂದು ತಿಳಿಸಿದ್ದರು.

ನಾನು ಮರುದಿನ ಮಿ. ಮೈಕಾಬರರ ಮತ್ತೂ ಅವರ ಸಂಸಾರದ ಅಭ್ಯುದಯವನ್ನು ಊಹಿಸಿ ಸಂತೋಷಿಸುತ್ತಿದ್ದಾಗಲೇ ಅವರದೊಂದು ಪತ್ರ ನನಗೆ ಬಂತು. ಆ ಪತ್ರವು ಹೀಗಿತ್ತು:

ಪ್ರಿಯ ಮಿತ್ರರೇ

ಬಾಣವು ಹೆದೆಗೆ ಏರಿಸಲ್ಪಟ್ಟಿದೆ – ಬಿಡುವುದು ಮಾತ್ರ ಬಾಕಿ. ನಿಮಗೆ ತಿಳಿಸುವುದಕ್ಕೂ ನಾನೇ ಗ್ರಹಿಸುವುದಕ್ಕೂ ಅನುಭವಿಸುವುದಕ್ಕೂ ಅಸಾಧ್ಯವಾದ ಅವಮಾನಾಸ್ಪದವಾದ ಪ್ರಸಂಗವನ್ನು ಸಂತೋಷ, ವಿಲಾಸಗಳ ಬಣ್ಣದಿಂದ ಅಡಗಿಸಿ ನಿಮ್ಮ ಜತೆಯಲ್ಲಿ ನಿನ್ನೆ ಸಮಯ ಕಳೆದದ್ದಾಯಿತು. ನಾನು ನಮ್ಮ ನೆಂಟರೊಬ್ಬರಿಂದ ತಾತ್ಕಾಲಿಕವಾದ ಸಾಲವನ್ನು ಬಯಸಿ ಪತ್ರ ಬರೆದಿದ್ದೆ. ಅಂಥ ನಿರೀಕ್ಷಣಾ ಹಣ ಈವರೆಗೂ ಬಂದಿರುವುದಿಲ್ಲ. ನಾವು ಇನ್ನೊಬ್ಬರ ಋಣಿಯಾಗಿರಬಾರದೆಂದು, ಇಂದಿನಿಂದ ಹದಿನಾಲ್ಕು ದಿನಗಳಲ್ಲಿ, ಕೇಳಿದ ಕೂಡಲೇ ಕೊಡುವ ಶರ್ತದಿಂದ ಒಂದು ಪ್ರೋನೋಟನ್ನು ನಾನಿಳಿದುಕೊಂಡಿರುವ ಈ ಹೋಟೆಲಿನವರಿಗೆ ಬರೆದು ಕೊಟ್ಟು ಸಾಲ ತೀರಿಸಿರುತ್ತೇನೆ.

ಆದರೆ, ಹಣದ ವಸೂಲಿಗೆ ಬರುವಾಗ ಹಣ ಕೊಡುವವರು ಮಾತ್ರ ಎಷ್ಟಕ್ಕೂ ಉಳಿದಿರುವುದಿಲ್ಲ. ಕಾರಣ? ಆತ – ಬರಕೊಟ್ಟವನು – ನಾಶವಾಗಿರುತ್ತಾನೆ. ಮಹಾ ವೃಕ್ಷವು ಬಿದ್ದೇ ತೀರಬೇಕೆಂಬುದು ಸುಸ್ಪಷ್ಟ – ವೃಕ್ಷಕ್ಕೆ ಸಾಕಷ್ಟು ಕೊಡಲಿಯ ಗಡಿಗಳು ಈಗಾಗಲೇ ಬಿದ್ದು ಮಹಾ ವೃಕ್ಷವು ಬಾಗತೊಡಗಿದೆ!

ಈ ಪತ್ರವನ್ನು ಬರೆಯುತ್ತಿರುವ ಮಹಾ ಪಾಪಿಯು ನಿಮ್ಮ ಜೀವನ ಪಥಕ್ಕೆ ಬೆಳಗುವ ಜ್ಯೋತಿಯಾಗಿರಲಿ. ಈ ಪಾಪಿಗೆ ಬದುಕಿರಲು ಇನ್ನು ಕೆಲವೇ ಅಂಧಕಾರಮಯ ದಿನಗಳು ಬಾಕಿ ಇವೆ. ಆದರೂ ನನ್ನ ಉದ್ದೇಶದಂತೆ ನನ್ನ ಜೀವನದ ಅನುಭವವು ನಿಮಗೆ ಮಾರ್ಗದರ್ಶಕವಾದರೆ, ಇಂದಿನ ಅಂಧಕಾರವು ಕಿಂಚಿತ್ತಾದರೂ ಪ್ರಕಾಶಮಾನವಾಗಬಹುದೆಂದು ಊಹಿಸುತ್ತೇನೆ.
ಇದು ನನ್ನ ಆಖೈರು ಪತ್ರವೆಂಬುದನ್ನು ದಯಮಾಡಿ ತಿಳಿದುಕೊಳ್ಳಿರಿ.
ಇಂತೀ ದೀನ, ಹೀನ, ಸಮಾಜದ್ರೋಹಿ
ವಿಲ್ಕಿನ್ಸ್ ಮೈಕಾಬರ್

ಈ ಪತ್ರವನ್ನು ಕಂಡು ನಾನು ಹೆದರಿದೆನು. ಮಿ. ಮೈಕಾಬರರು ಆತ್ಮಹತ್ಯೆ ಮಾಡಿಕೊಳ್ಳಬಹುದೆಂದು ಹೆದರಿ, ಅದನ್ನು ತಪ್ಪಿಸಲೋಸ್ಕರ ಅವರನ್ನು ನೋಡಲು ಅವರು ಇದ್ದ ಹೋಟೆಲು ಕಡೆಗೆ ಓಡಿದೆನು. ಆದರೆ ದಾರಿಯಲ್ಲೇ ಅವರು ತಮ್ಮ ಪತ್ನೀಪುತ್ರಿಯರ ಸಮೇತ ಬಂಡಿಯಲ್ಲಿ ಕುಳಿತು ಬರುತ್ತಿದ್ದುದನ್ನು ಕಂಡೆನು. ಅವರು ಒಂದು ಕಾಗದದ ಚಿಕ್ಕ ಪೊಟ್ಟಣದಿಂದ ದ್ರಾಕ್ಷಿಯನ್ನು ತಿನ್ನುತ್ತಾ ತನ್ನ ಹೆಂಡತಿ ಮಕ್ಕಳಿಗೆ ಕೊಡುತ್ತಾ ತಮ್ಮ ಶುಭ ನಿರೀಕ್ಷಣೆಯನ್ನು ಮುಖದಲ್ಲಿ ಬೀರುತ್ತಾ ಬಹು ಆನಂದದಲ್ಲಿ ಬಂಡಿಯಲ್ಲಿ ಕುಳಿತು ಬರುತ್ತಿದ್ದರು. ನಾನು ಅಡಗಿ ನೋಡುತ್ತಾ ಅವರ ಅಗಲುವಿಕೆಗಾಗಿ ಸ್ವಲ್ಪ ದುಃಖಪಟ್ಟರೂ ಅವರು ಬದುಕಿರೋಣವನ್ನು ಕಂಡು ಸಂತೋಷಪಟ್ಟೆನು.

ಅಧ್ಯಾಯ ಹದಿನೆಂಟು

ಒಂದು ಸಿಂಹಾವಲೋಕನ

ಬಾಲಕನೆಂದೇ ತಿಳಿಯುತ್ತಿದ್ದ ನಾನು ಪ್ರಾಯಭರಿತನಾಗತೊಡಗಿದ್ದೇನೆ. ನನ್ನ ಬಾಲ್ಯದಿಂದ ಪ್ರಾರಂಭವಾದ ದಿನಗಳು ಮೃದು ಹೆಜ್ಜೆಯಿಂದ ಮುಂದುವರಿಯುತ್ತಾ ಬರುತ್ತಿವೆ. ದಿನದಿಂದ ದಿನಕ್ಕೆ ಹೋಲಿಸಿ ನೋಡಿದರೆ ತಿಳಿಯಲಾಗದ – ಆದರೂ ಎಡೆಬಿಡದೆ ಬಂದಿರುವ – ಅಭಿವೃದ್ಧಿ, ವರ್ಷಗಳ ಅಂತರದಿಂದ ಅಳೆಯುವಾಗ ಸ್ಪಷ್ಟವಾಗಿ ಕಂಡು ಬರುತ್ತಿದೆ. ನನ್ನ ಜೀವನದ ನೂರಾರು ಘಟನೆ ಸಂದರ್ಭಗಳನ್ನೆಲ್ಲ ನೋಡುವಾಗ ಜೀವನವೇ ಒಂದು ಪ್ರವಾಹದಂತೆ ಹರಿದುಬರುವುದು ಕಂಡು ಬರುತ್ತಿದೆ. ಪ್ರವಾಹ ಹರಿಯುತ್ತಿದ್ದುದು, ಕೆಲವೆಡೆ ನಿಂತುದು, ಬತ್ತಿ ಹೋದುದು, ಕೆಲವೆಡೆ ಕಸಕಡ್ಡಿ, ಅಡ್ಡ ಮರಗಳಿಂದ ಕಾಣದೆ ಆದುದೂ ಇದೆ. ಆದರೂ ಒಂದು ಮುಂದಿನ ಕುರುಹುಗಳನ್ನು ಗುರುತಿಸುತ್ತಾ ಪ್ರವಾಹದ ಗತಿಯನ್ನೂ ದಿಕ್ಕನ್ನೂ ಗುರುತಿಸುತ್ತಿದ್ದೇನೆ.

ನನ್ನೆದುರಿನ ಶಾಲಾ ದಿನಗಳನ್ನು ನೋಡೋಣ: ಅವು ವಿಸ್ಮಯಕರವಾಗಿವೆ. ನನ್ನ ತರಗತಿಯಲ್ಲಿ ಒಂದನೆಯವನಾದ ಏಡೇಮನಿಗೂ ನನಗೂ ಯೋಗ್ಯತೆಯ ಗಣನೆಯಲ್ಲಿ ಬಹು ದೂರವಿದೆ! ಏಡೇಮನು ವಿದ್ಯಾರ್ಜನೆಯನ್ನು ಪೂರೈಸಿ ಲೋಕದ ಕಾರ್ಯರಂಗಕ್ಕೆ ಇಳಿದಾಗ ಅವನ ಯೋಗ್ಯತೆಗೆ ತಕ್ಕವಾದ ಕೆಲಸಗಳನ್ನು ಸಮಾಜ ಕೊಡಬಲ್ಲುದೇ ಎಂಬುದು ನನ್ನ ಸಂಶಯ. ಡಾ. ಸ್ಟ್ರಾಂಗರೆ ಅವನನ್ನು ಕೆಲವು ಮಹಾಸಭೆಗಳಲ್ಲಿ ಪ್ರಶಂಸಿಸುತ್ತಿದ್ದಾರೆ!

ಗತಕಾಲದ ಗಭೀರತೆಯಲ್ಲಿ ಎದ್ದು ಕಾಣುವ ಆ ಆಶ್ಚರ್ಯವೇನು? ಓಹೋ ಅದು ಮಿಸ್ ಶಪ್ಪರ್ಡ್ಸಳ ಚಿತ್ರ. ಅವಳ ಸೌಂದರ್ಯಕ್ಕೆ ನಾನು ಮರುಳಾಗಿ ಅವಳ ಸ್ನೇಹ ಸಂಪಾದನೆಗೆ ಪ್ರಯತ್ನಿಸುತ್ತಿದ್ದೇನೆ. ನಮ್ಮ ನರ್ತನ ಶಾಲೆಯಲ್ಲಿ ಅವಳ ಪರಿಚಯವಾಯಿತು. ನನ್ನ ಜತೆ ನರ್ತಕಿಯಾಗಿ ಅವಳನ್ನು ಪಡೆದು, ನಲಿದು, ಸುಖಿಸುತ್ತಿದ್ದೆನೆ! ನರ್ತನ ಶಾಲೆಯೇ ಸ್ವರ್ಗವಾಯಿತು! ಮತ್ತೇನಾಯಿತು? ಅವಳು ಮತ್ತೊಬ್ಬನೊಡನೆ ನಲಿಯುವುದನ್ನು ನೋಡಿ ಮತ್ಸರಪಟ್ಟೆ. ಅವಳು ನನ್ನನ್ನು ಅಣಕಿಸಿದಳು – ಮೈತ್ರಿಯ ಸ್ಥಾನಕ್ಕೆ ವೈರವು ಕಾಲಿಟ್ಟಿತು, ನರ್ತನಶಾಲೆ ನರಕವಾಯಿತು.

ಡಾ. ಸ್ಟ್ರಾಂಗರನ್ನು ಹೀಯಾಳಿಸಿ ಹಾಸ್ಯ ಮಾಡುತ್ತಿದ್ದ ಆ ಯುವಕನ್ಯಾರು? ಅವನೊಬ್ಬ ಕಟುಕ. ಕಟುಕನ ಗರ್ವಭಂಗಮಾಡದೆ ನಿರ್ವಾಹವಿಲ್ಲ. ಪಕ್ಷ ಕಟ್ಟಿಕೊಂಡು ಮಲ್ಲಯುದ್ಧ ಮಾಡಿದೆ. ಆತನ ಪೆಟ್ಟುಗಳಿಂದ ಪುಡಿಯಾಗಿ, ಒಂದು ವಾರ ಬೇಂಡೇಜು ಬಿಗಿದುಕೊಂಡು ತಲೆ ಮರೆಸಿಕೊಂಡು ಅಡಗಿದೆ. ಮುಂದೆ?

ನಾನು ಯುವಕನಾದದ್ದನ್ನು ಸ್ಪಷ್ಟವಾಗಿ ನಾನೇ ತಿಳಿಯಲಾರದೇ ಆಗಿದ್ದರೂ ಏಗ್ನೆಸ್ಸಳು ತರುಣಿಯಾದದ್ದನ್ನು ನಾನು ತಿಳಿದೆ. ಈಗ ಅವಳ ರೂಪ ಬದಲಾಗಿದೆ. ಬಾಲ್ಯದ ಸುಂದರ ರೂಪವೇ ಬದಲಾಗಿ ಅವಳು ಈಗ ತೈಲಚಿತ್ರದ ರೂಪವನ್ನು ಹೋಲುತ್ತಾಳೆ.

ಗತಕಾಲದ ಪಥದಲ್ಲಿ ಎದ್ದು ತೋರುವ ಮತ್ತೊಂದು ದೃಶ್ಯ: ಅದು ಮಿಸ್ ಲಾರ್ಕಿನ್ಸಳು – ಅಪ್ರತಿಮ ಸುಂದರಿ. ಅವಳ ಮೃದು ಮಧುರ ಸ್ವರದಂಥ ಸ್ವರ ಇನ್ನು ಯಾರಿಗೂ ಇಲ್ಲ. ಅವಳ ತಂದೆಗೆ ನನ್ನ ಪರಿಚಯವಿದ್ದುದರಿಂದ ಅವನ ಜತೆಯಲ್ಲಿ ಬರುತ್ತಿರುವ ಮಿಸ್ ಲಾರ್ಕಿನ್ಸಳೂ ನನಗೆ ನಮಸ್ಕರಿಸುತ್ತಿದ್ದಾಳೆ. ದಿನಕ್ಕೊಂದಾವೃತ್ತಿಯಾದರೂ ಅವಳನ್ನು ಕಂಡು ನಮಸ್ಕಾರಗಳನ್ನು ಕೊಟ್ಟು ಪಡೆಯದಿದ್ದರೆ, ಆ ದಿನವೆಲ್ಲ ದುಃಖಮಯವಾಗುತ್ತದೆ. ಅವಳ ಮನೆಯ ಸಮೀಪಕ್ಕಾಗಿ ದಾಟುವಷ್ಟು ಅನುಕೂಲದ, ಮತ್ತೂ ಸಮೀಪದ ದಾರಿ ನನಗೆ ಮತ್ತೆ ಯಾವುದೂ ಇರಲಿಲ್ಲ. ರಾತ್ರಿ ನಾನು ಒಮ್ಮೊಮ್ಮೆ ಮಾರ್ಗದಲ್ಲಿ ನಿಂತು ಆ ಸುರಸುಂದರಿಯನ್ನು ಕುರಿತು ಏನೇನೋ ಆಲೋಚಿಸುವುದಿದೆ. ಅವಳ ಮನೆಗೆ ಬೆಂಕಿಬಿದ್ದು, ಅವಳ ರಕ್ಷಣೆಗೆ ಯಾರೂ ಸಿಕ್ಕದಿದ್ದಾಗ ನಾನು ಬೆಂಕಿಗೆ ಧುಮುಕಿ ಅವಳನ್ನು ಎರಡೂ ಕೈಗಳಿಂದ ಎತ್ತಿತಂದು, ಅವಳ ಒಂದು ವಸ್ತು ಹಿಂದೆಯೇ ಉಳಿದು ಹೋಗಿದ್ದುದನ್ನು ತರಲೆಂದು ಪುನಃ ಬೆಂಕಿಗೆ ಹಾರಿ ನಶಿಸುವ ಆನಂದಾತಿಶಯವೂ ಕಾಣುತ್ತದೆ.

ಮಿಸ್ ಲಾರ್ಕಿನ್ಸಳ ಮನೆಯ ಸಂತೋಷ ಸಮಾರಂಭಗಳು ನನಗೂ ಸಂತೋಷಪ್ರದವೇ ಆಗಿವೆ. ಆ ಮನೆಯ ರಾತ್ರಿಯ ಸಂಭ್ರಮಗಳಲ್ಲಿ ನಾನು ರಸ್ತೆಯಲ್ಲಿ ನಿಂತು ಅವಳನ್ನು ನೋಡುತ್ತಿದ್ದೇನೆ! ಆಗ ನನಗೆ ಆಗುವ ಆನಂದ ಪ್ರಪಂಚದಲ್ಲಿ ಇತರ ಯಾರಿಗೂ ಆಗುತ್ತಿಲ್ಲವೆಂದೇ ನನ್ನ ಭಾವನೆ. ಆ ಸಭೆಗಳಲ್ಲಿ, ಪ್ರಜ್ವಲಿಸುವ ಬೆಳಕಿನಲ್ಲಿ, ಅತಿಥಿಗಳೊಂದಿಗೆ ಹಂಚಲಾಗುತ್ತಿದ್ದ ಹೂವಿನಂತೆ ಅವಳು ನಗಾಡುತ್ತಾ ಅತ್ತಿತ್ತ ತಿರುಗಾಡುತ್ತಿದ್ದ ಆನಂದಮಯ ದೃಶ್ಯವೂ ನನಗೆ ದುಃಖಮಯವಾದರೂ ಅದು ಪುನಃ ಪುನಃ ಬರಲೆಂದು ಬಯಸಿ, ಕಾಯುವಂಥಾದ್ದೂ ಆಗಿದೆ.

ಒಂದು ದಿನ ಅವಳ ಮನೆಯ ನರ್ತನಕೂಟಕ್ಕೆ ನನಗೂ ಆಮಂತ್ರಣ ದೊರಕಿತು – ನಾನು ಹೋದೆ. ನಾನು ಸದ್ಯವೇ ಶಾಲೆಯನ್ನು ಬಿಟ್ಟವನಾಗಿದ್ದುದರಿಂದ ನನ್ನನ್ನು ಯಾರೂ ನರ್ತನಕ್ಕೆ ಕರೆಯಲಿಲ್ಲ. ಆದರೆ, ಅದೂ ಒಂದು ನನ್ನ ಭಾಗ್ಯವೇ ಆಗಿದೆ. ಮಿಸ್ ಲಾರ್ಕಿನ್ಸಳು

ನಲಿಯುತ್ತಿದ್ದದ್ದನ್ನೇ ನೋಡಿ, ನೋಡಿ ನನ್ನ ಹೃದಯವನ್ನೇ ತುಂಬಿಕೊಂಡೆ. ಅಷ್ಟರಲ್ಲೇ ಆ ಸುಂದರಿ, ತನ್ನ ಮೃದು ಹೃದಯದ ಪ್ರೇರಣೆಯಿಂದ, ನನ್ನನ್ನೇ ತನ್ನ ಜತೆ ನರ್ತಕನನ್ನಾಗಿ ಆರಿಸಿದ್ದಾಳೆ. ಅನಂತರದ ಆನಂದ ಅವರ್ಣನೀಯ. ನೀಲ ವರ್ಣದ ಲಂಗವನ್ನು ತೊಟ್ಟು, ಹೂಗಳಿಂದಲಂಕೃತಳಾಗಿ, ಸುವಾಸನೆಯನ್ನು ಬೀರುತ್ತಿದ್ದ ಆ ಕೋಮಲಾಂಗಿಯನ್ನು ಒಂದು ಕೈಯಿಂದ ಮೈ ಬಳಸಿ ಸುತ್ತಿ, ಮತ್ತೊಂದರಿಂದ ಅವಳ ಮೃದು ಹಸ್ತವನ್ನು ಹಿಡಿದು ನಲಿದ ಅನುಭವವು ಅನಿವರ್ಚನೀಯವೇ ಸರಿ! ಅನಂತ ಕಾಲದಲ್ಲಿ, ಅನಂತ ಕ್ಷೇತ್ರದಲ್ಲಿ ನನ್ನ ಬರೋಣವನ್ನೇ ಮರೆತು, ಆನಂದಾನುಭವದ ಮೇಲೆ ಸತತವೂ ತೇಲುತ್ತಿದ್ದವನಂತೆ ಆಗ ನಲಿದೆನು! ನನ್ನ ನರ್ತನ ಕೌಶಲವನ್ನು ಅವಳು ಮೆಚ್ಚಿ, ನಾನು ಇಚ್ಛಿಸಿದ ಪಾರಿತೋಷಕವನ್ನು ಕೊಡುವುದಾಗಿ ತಿಳಿಸಿದಳು. ಆ ಪ್ರಶ್ನೆಗೆ ಸೀದಾ ಉತ್ತರ ಕೊಡುವಷ್ಟರ ಧೈರ್ಯ ನನಗಿರದೆ –

"ಬೆಲೆಗೆ ಸಿಗಲಾರದ – ಬೆಲೆ ಕಟ್ಟಲು ಅಸಾಧ್ಯವಾದ – ಅಮೂಲ್ಯ ಬೆಲೆಯುಳ್ಳ – ಒಂದು ವಸ್ತು ಮಾತ್ರ ನನಗೆ ಬೇಕು" ಎಂದಂದೆ.

ಈ ಒಗಟನ್ನು ಅರ್ಥ ಮಾಡದೆ, "ಅದು ಏನೆಂದು ತಿಳಿಸು, ಕೊಡುವೆನು" ಎಂದು ಅಭಯವಿತ್ತಳು.

ಅವಳ ಕೋಮಲಕಂಠದಲ್ಲಿ ಅಲಂಕೃತವಾಗಿ ಮೆರೆದಿದ್ದ ಹೂವೇ ಆ ವಸ್ತುವೆಂದು ತಿಳಿಸಿದೆ. ಅವಳು ಅದನ್ನು ಆ ಕೂಡಲೇ ತೆಗೆದುಕೊಟ್ಟಳು. ಅವಳೆದುರೇ ಹೂವನ್ನು ಚುಂಬಿಸಿ, ಲೋಭಿಯು ಬಂಗಾರವನ್ನು ಇಡುವಂತೆ ನನ್ನ ಹೃದಯಕ್ಕೆ ಮುಟ್ಟುವಂತೆ ಅದನ್ನಿಟ್ಟುಕೊಂಡೆ. ಇದನ್ನು ಕಂಡು ಹೂವಿನ ಕುರಿತು ನನಗೆ ಬಹಳ ಶ್ರದ್ಧೆ ಮತ್ತೂ ಪ್ರೇಮವಿರಬೇಕೆಂದು ನಂಬಿ, ಮಿಸ್ ಲಾರ್ಕಿನ್ಸಳು ಸಭೆಯಲ್ಲಿದ್ದ ಮಿ. ಚೆಸ್ಟರ್ ಎಂಬ ಹೂ ತೋಟಗಾರರೊಬ್ಬರ ಪರಿಚಯ ಮಾಡಿಕೊಟ್ಟಳು.

ಮಿಸ್ ಲಾರ್ಕಿನ್ಸಳು ಮಿ. ಚೆಸ್ಟರರನ್ನು ಮದುವೆಯಾದ ವರ್ತಮಾನ ಸಿಕ್ಕಿ ಒಂದು ವಾರ ನನಗೆ ಹಸಿವೆಯೇ ಇಲ್ಲ. ಮಿ. ಲಾರ್ಕಿನ್ಸಳ ವಿಯೋಗ ದುಃಖ ಮುಗಿಯುವುದರೊಳಗೆ ಕಟುಕರವನ ಗರ್ವಭಂಗದ ಪ್ರಶ್ನೆ ಬಂತು. ದುಃಖವೇ ಈಗ ಶಕ್ತಿಯಾಗಿ ಪರಿಣಮಿಸಿರಬೇಕು – ಈ ಸರ್ತಿ ನಾನು ಕಟುಕರ ಯುವಕನನ್ನು, ಸೋಲಿಸಿ ಮಲ್ಲಯುದ್ಧದಲ್ಲಿ ಗೆದ್ದೆನು.

ಅಧ್ಯಾಯ ಹತ್ತೊಂಬತ್ತು

ಲಕ್ಷ್ಯವಿಟ್ಟು ನೋಡಿದಾಗ ಹೊಸ ವಿಷಯವೊಂದನ್ನು ತಿಳಿದೆನು

ಈ ತೆರನಾಗಿ ನಾನು ನನ್ನ ಹದಿನೇಳನೆಯ ವರ್ಷದಲ್ಲಿ ಕಾಲಿಟ್ಟೆನು.

ಶಾಲೆಯನ್ನೂ ಡಾಕ್ಟರ್ ಸ್ಟ್ರಾಂಗರನ್ನೂ ಬಿಟ್ಟು ಹೊರಡಲು ನನಗೆ ದುಃಖವಾಯಿತೋ ಆಗಲಿಲ್ಲವೋ ಎಂಬುದು ನಿಶ್ಚೈಸಲಾಗದಿದ್ದ ಸಂಗತಿ. ನಮ್ಮ ಚಿಕ್ಕದೊಂದು ಪ್ರಪಂಚವೇ ಆಗಿದ್ದ ಶಾಲೆಯಲ್ಲಿ ನಾನು ಖ್ಯಾತಿ ಪಡೆದಿದ್ದೆ. ಡಾ. ಸ್ಟ್ರಾಂಗರ ನಂಬಿಕೆ ವಿಶ್ವಾಸಗಳಿಗೆ ಪಾತ್ರನಾಗಿ ಅವರ ಆತ್ಮೀಯನೇ ಆಗಿದ್ದೆ. ಹೀಗಿರುವಾಗ ಅಲ್ಲಿಂದ ಬಿಟ್ಟು ಹೊರಡುವುದೆಂದರೆ ಸ್ವಲ್ಪ ಬೇಸರದ ಸಂಗತಿ ನಿಜವಾಗಿತ್ತು. ಆದರೂ ನನ್ನ ಭವಿಷ್ಯವನ್ನು ನಿರ್ಮಿಸಿಕೊಳ್ಳುವ ಸಂಪೂರ್ಣ ಹಕ್ಕು ನನ್ನದಾಗಿತ್ತು. ಸಮಾಜದಲ್ಲಿ ಕಂಡು ಬರುವ ಸಹಸ್ರಾರು ತಪ್ಪುಗಳನ್ನು ತಿದ್ದಿ ಸಮಾಜವನ್ನು ಸರಿಪಡಿಸುವ ಹಕ್ಕು, ಶಕ್ತಿ, ಅವಕಾಶಗಳು ನನ್ನೆದುರಿಗೆ – ನನ್ನದಾಗಿ – ಕಾದು ನಿಂತಿರುವಾಗ ಶಾಲೆಯನ್ನು ಬಿಡುವುದು ದುಃಖಕ್ಕಿಂತಲೂ ಸಂತೋಷಕರ ಆಗಿತ್ತು. ನಾನಿನ್ನು ಯಾವ ವೃತ್ತಿಯನ್ನು ಕೈಗೊಳ್ಳಬೇಕು, ನನ್ನ ಗುರಿಯೇನು, ಎಂಬುದನ್ನು ಸ್ಪಷ್ಟವಾಗಿ ಆಗಲೇ ನಿಶ್ಚೈಸಿಕೊಳ್ಳಲಾರದವನೇ ಆಗಿದ್ದರೂ ನನ್ನ ತಾರುಣ್ಯ ಮತ್ತೂ ಸದ್ಯವೇ ವಿದ್ಯಾನಿಲಯದಿಂದ ಹೊರಬಂದ ಹೊಸ ಹುರುಪಿನ ಕಾರಣವಾಗಿ, ನಾನು ಯಾವ ಕೆಲಸವನ್ನು, ಎಲ್ಲಿಯೂ ಸಾರ್ಥಕವಾಗಿ ಮಾಡಿ ಪೂರೈಸಬಲ್ಲೆನೆಂದು ನನಗೆ ತೋರುತ್ತಿತ್ತು. ಪ್ರಪಂಚದ ಯಾವ ಭಾಗದಲ್ಲೇ ಆದರೂ – ನೆಲ, ಜಲ ಮಾರ್ಗಗಳಿಂದ ಪಯಣ ಬೆಳೆಸಿ – ಯಾವ ತರದ ಮಹತ್ವದ ಸಾಹಸ, ಶೋಧನೆ, ಅಥವಾ ಕಾರ್ಯಗಳನ್ನು ಕುರಿತು ಪ್ರವರ್ತಿಸಲೂ ಸಿದ್ಧನಾಗಿದ್ದೆ. ಮತ್ತೂ ಅಂಥ ಯಾವ ಕೆಲಸಗಳಿಗಾದರೂ ನಾನು ಸಂಪೂರ್ಣ ಶಕ್ತನೂ ಯೋಗ್ಯನೂ ಆಗಿದ್ದೇನೆಂದು ನಂಬಿದ್ದೆನು. ಅತ್ತೆಯ ಅಭಿಪ್ರಾಯದಲ್ಲಿ ಒಬ್ಬ ಯುವಕ ಸ್ವತಂತ್ರ ಜೀವನ ನಡೆಸಲು ದೇಶ ಸಂಚಾರ ಅಗತ್ಯವೆಂದು ಇತ್ತು. ಆದ್ದರಿಂದ ನಾನು ಒಂದು ತಿಂಗಳೋ ಅಥವಾ ಮೂರು ವಾರಗಳಷ್ಟು ಕಾಲದಲ್ಲೋ ಲಂಡನ್ ನಗರದಲ್ಲೂ ಮತ್ತು ನಮ್ಮ ದೇಶದ ಇತರ ಸ್ಥಳಗಳಲ್ಲೂ ತಿರುಗಿ ಬರಬೇಕೆಂದು ನಮ್ಮ ಅತ್ತೆ ಮತ್ತೂ ಮಿ. ಡಿಕ್ಕರು ಏರ್ಪಡಿಸಿದರು. ಈ ಪ್ರವಾಸ ಪ್ರಪಂಚವನ್ನೆಲ್ಲ ತಿರುಗಿದಷ್ಟೇ ಮಹತ್ವದ್ದೆಂದು ನನಗೆ ತೋರುತ್ತಿತ್ತು. ಅದಕ್ಕೆ ಅಗತ್ಯಬಿದ್ದ ಹಣ, ಕೈ ಪೆಟ್ಟಿಗೆ, ಮತ್ತಿತರ ವಸ್ತುಗಳನ್ನು ಅತ್ತೆ ನನಗೆ ಕೊಟ್ಟಳು. ಅಲ್ಲದೆ ನನ್ನನ್ನು ಕುರಿತು –
"ನಿನ್ನ ತಂದೆಯಲ್ಲಿ ಅನೇಕ ಸದ್ಗುಣಗಳಿದ್ದುವು. ಆದರೆ ಆ ಗುಣಗಳು ಅವನ ಜೀವನಕ್ಕೆ ಉಪಕಾರ ಗೈಯ್ಯಲಿಲ್ಲ. ಅವನ ಅನಿಶ್ಚಿತ ವ್ಯವಹಾರ ಧೋರಣೇ ಮತ್ತೂ ಆಲಸ್ಯ ಅವನನ್ನು ಅಂಥ ಕಷ್ಟ ಪರಿಸ್ಥಿತಿಗೆ ತಂದವು. ನೀನು ಎಚ್ಚರದಿಂದಿರು. ನಿನ್ನ ನಡೆನುಡಿಗಳು ಉತ್ತಮತರದ್ದಾಗಿರಲಿ. ನಿನ್ನ ವ್ಯಕ್ತಿತ್ವವನ್ನು ಬೆಳೆಸಿ ಕಾದುಕೊಂಡಿರು. ನಿನ್ನನ್ನು ಸತ್ಕಾರ್ಯಗಳಿಗೆ ಮಾತ್ರ ಇತರರು ಉಪಯೋಗಿಸಲು ಎಡೆ ಕೊಡು. ಅನ್ಯಥಾ ನಿನ್ನನ್ನು ಇತರರು ಉಪಯೋಗಿಸದಂತೆ ಜಾಗ್ರತನಾಗಿರು" ಎಂದು ಬುದ್ಧಿವಾದಗಳನ್ನು ಹೇಳಿ, ನನ್ನನ್ನು ಹರಸಿ ಕಳುಹಿಸಿಕೊಟ್ಟಳು.

ನನ್ನ ದೇಶಸಂಚಾರ ಪ್ರಾರಂಭದಲ್ಲೇ ಮಿ. ವಿಕ್ಫೀಲ್ಡರಿಗೆ ಈ ವರ್ತಮಾನಗಳನ್ನು ತಿಳಿಸುವುದು ನ್ಯಾಯವೆಂದು ನಾನು ಮಿ. ವಿಕ್ಫೀಲ್ಡರ ಮನೆಗೆ ಹೋದೆ. ಅಲ್ಲಿ ನಾನು ಮೊದಲು ಭೇಟಿಯಾದುದು ಏಗ್ನೆಸ್ಸಳನ್ನು. ನನ್ನನ್ನು ಕಂಡಕೂಡಲೇ ಅವಳು ಬಹಳ ಸಂತೋಷಪಟ್ಟು, ಒಂದು ಕುರ್ಚಿಯನ್ನು ಕೊಟ್ಟು ಕುಳಿತುಕೊಳ್ಳಲು ಹೇಳಿ, ನನ್ನೊಡನೆ ಮಾತನಾಡತೊಡಗಿದಳು –
"ನೀನು ಇಲ್ಲಿಂದ ಹೋದಮೇಲೆ ಇದು ಮೊದಲಿನ ಮನೆಯೇ ಆಗಿರಲಿಲ್ಲ, ಕಾಪರ್ಫೀಲ್ಡ್" ಅಂದಳು ಏಗ್ನೆಸ್.
"ನನಗೂ ಸಾಧಾರಣ ಅದೇ ನಮೂನೆಯ ಭಾವನೆ ತೋರುತ್ತದೆ, ಏಗ್ನೆಸ್. ನಾನು ನಿಮ್ಮ ಮನೆ ಬಿಟ್ಟನಂತರ ನಾನೊಬ್ಬ ಬೇರೆಯೇ ಮನುಷ್ಯನಂತೆ – ನನ್ನ ಬಲಗೈ ಕಳಕೊಂಡವನಂತೆ ತೋರುತ್ತಿದೆ, ಏಗ್ನೆಸ್" ಎಂದು ನಾನು ಹೇಳಿದೆ.
"ಬಲಗೈ ಕಳೆದುಕೊಂಡವನಂತೆ! ಆ ಮಹತ್ವವಿಲ್ಲೇನಿದೆ?" ಎಂದು ವಿನೋದವಾಗಿ ವಿಚಾರಿಸಿದಳು.
"ಮಹತ್ವವು ಇಲ್ಲಿಲ್ಲದಿದ್ದರೆ ಮತ್ತೆಲ್ಲಿರಬಲ್ಲುದು – ನಿನ್ನ ಬುದ್ಧಿಯ ಸಹಾಯವನ್ನು ಪಡೆದವರಿಗೆ ಮಾತ್ರ ಆ ವಿಷಯ ಗೊತ್ತು."
"ಏನು ಕಾಪರ್ಫೀಲ್ಡ್, ನನ್ನ ಪರಿಚಯವಾದವರಿಗೆಲ್ಲ ಈ ಹೊಗಳುವ ಬುದ್ಧಿ ಎಲ್ಲಿಂದ ಬಂತು!" ಎಂದು ಏಗ್ನೆಸ್ಸಳು ಪ್ರಶ್ನಿಸಿದಳು.
"ನೀನು ಹಾಗೆ ಗ್ರಹಿಸಬಾರದು ಏಗ್ನೆಸ್. ನಿನ್ನ ಶಾಂತ ಸ್ವಭಾವ, ಬುದ್ಧಿಶಕ್ತಿ, ದಯಾಮಯ ನಡೆನುಡಿಗಳೆಲ್ಲ ನಿನ್ನ ಪರಿಚಯವಾದವರ ಮೇಲೆ ಪರಿಣಾಮಗಳನ್ನು ತಂದೇ ತರುವುವು. ಇದು ಮುಖಸ್ತುತಿಯ ಮಾತಲ್ಲ – ಇತರರು ಅನ್ನುವುದೂ ಮುಖಸ್ತುತಿಯಲ್ಲ. ಇನ್ನೂ ಮನಬಿಚ್ಚಿ ಹೇಳುವುದಾದರೆ, ಏಗ್ನೆಸ್, ನಿನ್ನನ್ನು ಸ್ಮರಿಸಿ, ನಿನ್ನ ಸಹಾಯ ತೆಗೆದುಕೊಂಡು ಮಾಡಿದ ಕಾರ್ಯವೆಲ್ಲ ಮಂಗಳಕರವಾಗುವುದು – ಯಶಸ್ವಿಯಾಗುವುದು – ಇದು ಸ್ವಾನುಭವ" ಎಂದು ನಾನು ಆವೇಶದಿಂದ ಉತ್ತರ ಕೊಟ್ಟೆನು.

ಏಗ್ನೆಸ್ಸಳು ಸ್ವಲ್ಪ ನಾಚಿಕೆಪಟ್ಟುಕೊಂಡಳು. ಅನಂತರ ನಗಾಡುತ್ತಾ
"ಮಿಸ್ ಲಾರ್ಕಿನ್ಸಳನ್ನೂ ಇದೇ ರೀತಿಯಲ್ಲಿ ಹೊಗಳುತ್ತಿದ್ದೆಯಲ್ಲವೇ?" ಎಂದು ಕೇಳಿ, ನಾನು ಉತ್ತರ ಕೊಡುವ ಮೊದಲು, ಗಂಭೀರಭಾವವನ್ನು ತಂದುಕೊಂಡು –
"ಕಾಪರ್ಫೀಲ್ಡ್, ನಾನೊಂದು ವಿಷಯವನ್ನು ನಿನ್ನಲ್ಲಿ ವಿಚಾರಿಸಬೇಕೆಂದಿರುವೆನು. ನೋಡು, ನನ್ನ ತಂದೆಯವರ ದೇಹ ಮತ್ತು ಮಾನಸಿಕ ಸ್ಥಿತಿಯಲ್ಲಿ ಏನಾದರೂ ವ್ಯತ್ಯಾಸವಾದದ್ದನ್ನು ಕಂಡಿರುವಿಯೇನು?" ಎಂದು ಕೇಳಿದಳು.

"ಹೌದು, ಈ ಪ್ರಶ್ನೆಯು ನನ್ನ ಮನಸ್ಸಿನಲ್ಲಿಯೂ ಮೂಡಿದೆ. ಅವರು ಮೊದಲಿನ ಮಿ. ವಿಕ್ಫೀಲ್ಡರೇ ಅಲ್ಲವೆನ್ನುವಷ್ಟರ ವ್ಯತ್ಯಾಸವು ಅವರಲ್ಲಿ ಕಂಡು ಬರುತ್ತಿದೆ" ಎಂದು ನಾನು ಹೇಳಿದೆನು.

"ನನ್ನ ಅಭಿಪ್ರಾಯವೂ ಹಾಗಿರುವುದರಿಂದಲೇ ಈ ವಿಷಯದಲ್ಲಿ ನಿನ್ನನ್ನು ಕೇಳಿದೆ. ಅವರು ಈಗೀಗ ವಿಪರೀತ ವೈನ್ ಕುಡಿಯುತ್ತಾರೆ. ಅಲ್ಲದೆ, ಹೀಗೆ ಕುಡಿಯುತ್ತಾ ಕೆಲಸ ಮಾಡುತ್ತಾ ಪುನಃ ಕುಡಿಯುತ್ತಾ ರಿಕಾರ್ಡುಗಳ ಪರಿಶೀಲನೆ, ರಿಕಾರ್ಡುಗಳ ತಯಾರಿಕೆ, ತಂದಿರಿಸಿರುವ ರಿಕಾರ್ಡುಗಳಿಗೆ ದಸ್ಕತ್ತು ಹಾಕುವುದು ಮೊದಲಾದ ಕೆಲಸವನ್ನು ಮಾಡುತ್ತಾರೆ. ಯಾವ ಹೊಸ ಆಲೋಚನೆ ಮಾಡುವ ಮೊದಲು ವೈನ್ ಕುಡಿಯಲೇ ಬೇಕಾದ ಪರಿಸ್ಥಿತಿ ತೋರುತ್ತದೆ. ತುಂಬಾ ಬುದ್ಧಿ ಉಪಯೋಗಿಸಬೇಕಾದ ವಕೀಲ ವೃತ್ತಿಯಲ್ಲಿ ಈ ರೀತಿ ವೈನನ್ನು ಆಧರಿಸಿ ಕೆಲಸ ಮಾಡುವುದು ಸರಿಯಾಗದು. ಕಾರ್ಯಗಳು ಕೆಡಬಹುದು. ಇನ್ನು ಉರೆಯಾಹೀಪನೋ, ಅವನು ಯಾವುದನ್ನೂ ಆಲೋಚಿಸದೆ ಅವರಿಂದ ಸದಾ ಕೆಲಸ ಮಾಡಿಸುತ್ತಾನೆ. ತಾನೂ ಅವರ ಕುರಿತಾದ ಕೆಲಸವನ್ನು ಮಾಡುತ್ತಿರುತ್ತಾನೆ" ಎಂದಷ್ಟು ಮಾತ್ರ ಹೇಳಿ, ಏಗ್ನೆಸ್ಸಳು ಸ್ವಲ್ಪ ಆಲೋಚಿಸುತ್ತಿರುವಂತೆ ತೋರಿದಳು. ನನ್ನೊಡನೆ ಎಲ್ಲವನ್ನೂ ಹೇಳಬಹುದೋ, ಹೇಳಬೇಕೋ ಎಂದು ಆಲೋಚಿಸುತ್ತಿದ್ದಂತೆ ತೋರಿದಳು. ಅನಂತರ ಮೆಲ್ಲಮೆಲ್ಲಗೆ, ದುಃಖಪೂರಿತವಾಗಿ ಹೇಳಿದಳು –

"ಒಂದು ದಿನ ಉರೆಯನ ಸೂಚನೆ, ಸಲಹೆಗಳ ಪ್ರಕಾರ ತಂದೆಯವರು ತಮ್ಮ ಆಫೀಸಿನಲ್ಲಿ ಕೆಲಸಮಾಡಿ, ಅಲ್ಲಿಂದ ಬಂದು ಇಲ್ಲಿ ಕುಳಿತದ್ದೇ ತಡ, ಅವರು ತಲೆ ಅಡಿಗೆ ಹಾಕಿಕೊಂಡು ಕಂಬನಿ ಸುರಿಸುತ್ತಿದ್ದರು."

ಏಗ್ನೆಸ್ಸಳು ಈ ಮಾತನ್ನು ಮುಂದುವರಿಸಿ ಹೇಳುವುದರ ಒಳಗೆ ಮಿ. ವಿಕ್ಫೀಲ್ಡರು ಅಲ್ಲಿಗೆ ಬಂದರು. ನಾವು ಬೇರೆ ವಿಷಯಗಳನ್ನು ಮಾತಾಡುತ್ತಾ ಸ್ವಲ್ಪ ಸಮಯ ಅಲ್ಲೇ ಇದ್ದೆವು.

ಆ ದಿನ ರಾತ್ರಿ ಡಾ. ಸ್ಟ್ರಾಂಗರ ಮನೆಯಲ್ಲಿ ನಾವು ಕೆಲವರು ಕೂಡಿ ಆಗಬೇಕಾಗಿದ್ದ ವಿಶೇಷ ಕಾರ್ಯಗಳಿದ್ದುವು. ಆ ಕಾರ್ಯಗಳ ಜತೆಗೆ ಚಿಕ್ಕ ಒಂದು ಔತಣವನ್ನು ಏರ್ಪಡಿಸಿ ಮಿ. ವಿಕ್ಫೀಲ್ಡ್, ಏಗ್ನೆಸ್ ಮತ್ತೂ ನನ್ನನ್ನು ಆಮಂತ್ರಿಸಿದ್ದರು. ಡಾಕ್ಟರರ ಅತ್ತೆ ಮಿಸೆಸ್ ಮಾರ್ತಲ್ ಹೇಮಳೂ ಡಾಕ್ಟರರ ಮನೆಯಲ್ಲಿದ್ದಳು. ಡಾ. ಸ್ಟ್ರಾಂಗರು ತಮ್ಮ ವೃದ್ಧಾಪ್ಯದ ಕಾರಣವಾಗಿ ತಮ್ಮ ಕೆಲಸದಿಂದ ನಿವೃತ್ತಿ ಹೊಂದಿದ್ದರು.

ರಾತ್ರಿ ಭೋಜನವಾದನಂತರ ನಾವೆಲ್ಲಾ ಕುಳಿತು ನಮ್ಮ ಮುಖ್ಯ ಕಾರ್ಯಗಳನ್ನು ಕುರಿತು ಮಾತಾಡಿದೆವು. ಆಗಬೇಕಾಗಿದ್ದ ಕಾರ್ಯ ಮಿ. ವಿಕ್ಫೀಲ್ಡ್ ವಕೀಲರಿಂದ, ಡಾ. ಸ್ಟ್ರಾಂಗರಿಗಾಗಿ ಎಂಬುದು ಸ್ಪಷ್ಟವಾಗಿತ್ತು. ಜೇಕ್ ಮಾಲ್ಡನ್ನನ ಅನಾರೋಗ್ಯ, ಅವನು ಇಂಡಿಯದಿಂದ ಹಿಂತಿರುಗಿ ಬಂದನಂತರ ಅವನಿಗೆ ಜೀವನ ವೃತ್ತಿಯನ್ನು ಒದಗಿಸುವುದು, ಡಾ. ಸ್ಟ್ರಾಂಗರ ಆಸ್ತಿ, ಹಣಕಾಸು ಮೊದಲಾದುವುಗಳನ್ನು ಕುರಿತಾದ ಒಂದು ವ್ಯವಸ್ಥಾಪತ್ರ – ಇವೇ ಮೊದಲಾದ ವಿಷಗಳನ್ನು ಅವರೆಲ್ಲರೂ ಕೂಡಿ ಮಾತಾಡಿದರು.

ಇದೇ ಸಂದರ್ಭದಲ್ಲಿ ಜೇಕ್ ಮಾಲ್ಡನ್ನನಿಂದ ಅನ್ನಿಗೆ ಬಂದಿದ್ದ ಪತ್ರವನ್ನು ನಾವೆಲ್ಲರೂ ಕೇಳುವಂತೆ ಅನ್ನಿ ಓದಬೇಕೆಂದು ಅನ್ನಿಯ ತಾಯಿ ಒತ್ತಾಯಪಡಿಸಿದಳು. ಅನ್ನಿ ಓದಲು ನಿರಾಕರಿಸಿದುದಕ್ಕೆ ಸಿಟ್ಟುಗೊಂಡು ಮಿಸೆಸ್ ಮಾರ್ತಲ್ ಹೇಮಳೆ ಆ ಪತ್ರವನ್ನು ದೊಡ್ಡದಾಗಿ ಓದಿದಳು. ಪತ್ರದಲ್ಲಿ ಡಾ. ಸ್ಟ್ರಾಂಗರನ್ನು ಕುರಿತು ಕರ್ತವ್ಯ ಲೋಪ, ವಚನಭ್ರಷ್ಟತನ ಮೊದಲಾದ ದೂಷ್ಯಗಳಿದ್ದುವು. ಈ ಒಕ್ಕಣೆಗಳನ್ನು ಕೇಳಿ ಮಿ. ವಿಕ್ಫೀಲ್ಡರು ಸ್ವಲ್ಪ ಕೋಪಗೊಂಡರು. ಅಷ್ಟೂ ಅಲ್ಲದೆ, ಆ ಪತ್ರದ ದೂಷಣೆಗಳಿಗೆ ಅನ್ನಿಯ ಸಂಕುಚಿತ ಬುದ್ಧಿಯೇ ಕಾರಣವೆಂಬಂತೆಯೂ ಸಂದರ್ಭಾನುಸಾರವಾಗಿ ಪ್ರಚ್ಛನ್ನವಾಗಿ ತೋರಿಸಿದರು.

ನಮ್ಮ ಕಾರ್ಯಗಳು ಮುಗಿದು ನಾವು ಹೊರಡುವ ಸಂದರ್ಭದಲ್ಲಿ ನಡೆದ ಒಂದು ಪ್ರಸಂಗ ಸ್ವಲ್ಪ ದುಃಖದ ವಿಷಯ. ನಾವು ಹೊರಡುವ ಸಮಯದಲ್ಲಿ, ಬೀಳ್ಕೊಡುವಾಗ ಅನ್ನಿ ಏಗ್ನೆಸ್ಸಳಿಗೆ ಹಸ್ತಲಾಘವನ್ನಿತ್ತಳು. ಆಗಲೇ ಎಚ್ಚತ್ತವರಂತೆ ತೋರುತ್ತಿದ್ದ ಮಿ. ವಿಕ್ಫೀಲ್ಡರು ಏಗ್ನೆಸ್ಸಳನ್ನು ಅನ್ನಿ ಆಲಂಗಿಸಲು ಎದುರು ಬರುವ ಮಧ್ಯೆ – ಅರಿಯದೆ ಬಂದವರಂತೆ ಪ್ರವೇಶಿಸಿ, ಆಲಿಂಗನವನ್ನು ತಡೆ ಹಿಡಿದು ಮಗಳನ್ನು ಕರೆದುಕೊಂಡು ಹೋದರು. ಆಗ ಅನ್ನಿಯ ಮುಖ ಹಿಂದೊಮ್ಮೆ – ಜಾಕ್ ಮಾಲ್ಡನ್ನನು ಪರದೇಶಕ್ಕೆ ಹೊರಡಲಿದ್ದ ದಿನ ರಾತ್ರಿ ಕಂಡಂತೆ ಕಳಂಕ, ಪಶ್ಚಾತ್ತಾಪಯುತವಾಗಿ ತೋರಿತು. ಆಗ ನನ್ನ ಮನಸ್ಸಿನಲ್ಲಿ ಡಾಕ್ಟರ್ ಸ್ಟ್ರಾಂಗರಿಗೆ ಅವರ ವಿದ್ಯಾಪಾಂಡಿತ್ಯಕ್ಕೆ ತಕ್ಕಷ್ಟು ಲೌಕಿಕಜ್ಞಾನವಿರಲಿಲ್ಲವೆಂಬ ಭಾವನೆ ಮೂಡಿತು. ಈ ಭಾವನೆಗೆ ಕಾರಣವೇನಿರಬಹುದೆಂದು ನಾನು ನಿರ್ಧರಿಸಲಾರೆನಾಗಿದ್ದರೂ ಆ ಭಾವನೆ ನನ್ನಲ್ಲಿ ಬಲವಾಗಿ ಬೇರೂರಿತು.

ಆ ದಿನ ನಮ್ಮ ಮನೆಗೆ ಹಿಂತಿರುಗುವಾಗ ದಾರಿಯಲ್ಲಿ ಮಿ. ವಿಕ್ಫೀಲ್ಡರಿಗೆ ನಾನು ದೇಶಯಾತ್ರೆ ಮಾಡುವ ವಿಷಯವನ್ನು ತಿಳಿಸಿದೆನು.

ಮರುದಿನ ಬೆಳಗ್ಗೆ ನಾನು ಫಸ್ಟ್ ಕ್ಲಾಸ್ ಟಿಕೆಟ್ಟನ್ನು ತೆಗೆದುಕೊಂಡು ಲಂಡನ್ ಬಂಡಿಯನ್ನೇರಿ ನನ್ನ ಪ್ರವಾಸದ ಪ್ರಥಮ ಹಂತವನ್ನು ಪ್ರಾರಂಭಿಸಿದೆ. ನನ್ನ ಪ್ರಾಯ, ನನ್ನ ಬೆಳವಣಿಗೆಗಳನ್ನೆಲ್ಲ ಗ್ರಹಿಸಿಕೊಂಡು ಜನರು ನನ್ನನ್ನು ಹಗುರವಾಗಿ ಕಾಣಬಹುದೆಂಬ ಅಂತರಂಗದ ಸಂಶಯಯುತ ಭೀತಿ ನನ್ನನ್ನು ಬಾಧಿಸುತ್ತಿದ್ದ ಹಾಗೆಯೇ ಅಂದಿನ ಪ್ರಸಂಗವೂ ನಡೆಯಿತು. ನನ್ನ ಹಕ್ಕು, ಗೌರವಗಳನ್ನು ಕಾಯ್ದುಕೊಳ್ಳುವುದಕ್ಕಾಗಿಯೇ ನನ್ನ ನಡೆನುಡಿ, ಠೀವಿಗಳನ್ನು ಬದಲಾಯಿಸಿ ನಾನು ಫಸ್ಟ್ ಕ್ಲಾಸ್ ಸ್ಥಾನದಲ್ಲಿ ಕುಳಿತಿದ್ದರೂ ಬಂಡಿಯವನು

ಮರ್ಯಾದೆ ರೂಪದಿಂದ ತೋರುವ ನಯಮಾತುಗಳಿಂದ ನನ್ನನ್ನು ಬಲಾತ್ಕರಿಸಿ, ನನ್ನನ್ನು ಇನ್ನೊಂದು ಸ್ಥಳದಲ್ಲಿ ಕುಳ್ಳಿರಿಸಿ, ನನ್ನ ಸ್ಥಾನವನ್ನು ಒಬ್ಬ ಕುದುರೆ ಸಾಕಣೆ ತಜ್ಞನಿಗೆ ಒದಗಿಸಿದನು.

ಆ ದಿನ ಲಂಡನ್ನಿಗೆ ತಲುಪಿ, ರಾತ್ರಿ ಒಂದು ಹೋಟೆಲಿನಲ್ಲಿ ಉಳಿದುಕೊಂಡು ಅಂದೇ ಲಂಡನ್ನಿನಲ್ಲಿ ನಡೆಯುತ್ತಿದ್ದ 'ಜೂಲಿಯಸ್ ಸೀಸರ್' ನಾಟಕವನ್ನು ನೋಡಿದೆ. ಲೇಟಿನ್ ಭಾಷೆಯನ್ನಾಡುವ ರೋಮನ್ ಚಕ್ರವರ್ತಿಗಳೂ ಅವರ ಪರಿವಾರವೂ ನನ್ನ ಸಂತೋಷಕ್ಕಾಗಿ ಸಿಂಹಾಸವನ್ನೇರಿ, ಸಿಂಹಾಸನದಿಂದಿಳಿದು, ಅಂದಚಂದದ ಅಲಂಕಾರಗಳನ್ನು ಪ್ರದರ್ಶಿಸಿ, ತಕ್ಕ ಸಮಯದಲ್ಲಿ ಅದೃಶ್ಯರಾಗುವ ನಾಟಕವನ್ನು ತಿಳಿದು ಸಂತೋಷಿಸುವುದು ಅದೇ ಲೇಟಿನ್ ಭಾಷೆಯನ್ನು ಶಾಲೆಯಲ್ಲಿ ಅಭ್ಯಸಿಸುವುದಕ್ಕಿಂಥ ಎಷ್ಟೆಷ್ಟೋ ಸುಲಭವೆಂದು ತೋರಿತು. ನಾಟಕವನ್ನು ನೋಡಿ ಹಿಂತಿರುಗಿ ಹೋಟೆಲಿಗೆ ಬರುವಾಗ ಸ್ಟೀಯರ್ಫೋರ್ತನು ಜತೆ ಸಿಕ್ಕಿದನು. ಅವನು ಇದೇ ಹೋಟೆಲಿನ ಇನ್ನೊಂದು ಕೋಣೆಯಲ್ಲಿ ಇಳಿದಿದ್ದನು. ಅವನು ನನ್ನ ಕೋಣೆಯನ್ನು ನೋಡಿ ಸಿಟ್ಟುಗೊಂಡು, ಹೋಟೆಲಿನ ಯಜಮಾನನನ್ನು ಕರೆದು 'ಫಸ್ಟ್ ಕ್ಲಾಸ್ ರೂಮ್' ಎಂದು ಹೆಸರು ಕೊಟ್ಟು, ದುಡ್ಡು ಸೆಳೆದು 'ಥರ್ಡ್ ಕ್ಲಾಸ್ ರೂಮ್' ಕೊಡಬಾರದೆಂದು ಗದರಿಸಿದನು. ಅನಂತರ ನನ್ನನ್ನು ಇನ್ನೊಂದು ಸುಸಜ್ಜಿತವಾಗಿದ್ದ ಕೋಣೆಗೆ ಕರೆದುಕೊಂಡು ಹೋಗಿ ಬಿಟ್ಟರು. ನನ್ನನ್ನು ಹೋಟೆಲಿನವರು ವಂಚಿಸಿದ್ದ ಸಂಗತಿ ಆಗ ನನಗೆ ತಿಳಿಯಿತು.

ಆ ದಿನ ನಾನು ಸ್ಟೀಯರ್ಫೋರ್ತನಿಗೆ ನನ್ನ ದೇಶ ಸಂಚಾರದ ವಿಷಯ ತಿಳಿಸಿದೆನು. ಸ್ಟೀಯರ್ಫೋರ್ತನು ದೇಶಸಂಚಾರಕ್ಕೆ ಬೇಕಾದ ಅನುಭವಗಳು ಕೆಲವನ್ನು ತಿಳಿಸಿದನು. ಅವನ ನಡೆ, ನುಡಿ, ಲೋಕಾನುಭವ ಎಲ್ಲವೂ ಈ ಮೊದಲಿಗಿಂತಲೂ ಹೆಚ್ಚೇ ಆಗಿದ್ದುವು. ಅವನು ಹೋದಲ್ಲೆಲ್ಲಾ ಅವನೇ ಪ್ರಭುವಾಗಿ ಮೆರೆಸಬಲ್ಲ ಶಕ್ತಿಗಳು ಅವನಲ್ಲಿದ್ದುವು.

ನನ್ನ ದೇಶಸಂಚಾರದಲ್ಲಿ ಸ್ಟೀಯರ್ಫೋರ್ತನ ಮನೆಗೆ ಹೋಗುವುದೂ ಒಂದು ಅಂಗವಾಗಿ ಸೇರಿಸಿಕೊಳ್ಳಬೇಕೆಂದು ಅವನು ಹೇಳಿದ್ದಕ್ಕೆ ನಾನು ಸಮ್ಮತಿಸಿ, ಮರುದಿನವೇ ಅವನಲ್ಲಿಗೆ ಹೋಗುವುದಾಗಿ ಹೇಳಿದೆನು.

ಅಧ್ಯಾಯ ಇಪ್ಪತ್ತು
ಸ್ಟೀಯರ್ಫೋರ್ತನ ಮನೆ

ಮರುದಿನ ಮಧ್ಯಾಹ್ನಾನಂತರ ನಾವು ಸ್ಟೀಯರ್ಫೋರ್ತನ ಮನೆಗೆ ಜತೆಯಾಗಿ ಹೋದೆವು. ಅವನ ಮನೆಯಿದ್ದುದು ಹೈಗೇತಿನಲ್ಲಿ – ಒಂದು ಎತ್ತರದ ಪ್ರದೇಶದಲ್ಲಿ. ಆ ಮನೆಯ ಕೊಠಡಿಗಳಲ್ಲಿ ಕುಳಿತು ಹೊರಗೆ ನೋಡಿದ್ದಾದರೆ ಲಂಡನ್ ನಗರದ ಬಹುಭಾಗವೆಲ್ಲ ಕಾಣಿಸುತ್ತಿತ್ತು.

ನಾವು ಮನೆಯ ಜಗುಲಿಯನ್ನು ಹತ್ತುವಾಗಲೇ ಒಳಗಿನಿಂದ ಒಬ್ಬ ಬಹು ಗಂಭೀರ ಮುಖಮುದ್ರೆಯ ಸ್ತ್ರೀ ನಮ್ಮೆದುರು ಬಂದು ನಮ್ಮನ್ನು ಸ್ವಾಗತಿಸಿದಳು. ಅವಳು ತನ್ನ ತಾಯಿಯೆಂದನ್ನುತ್ತಾ ಸ್ಟೀಯರ್ಫೋರ್ತನು ಅವಳ ಪರಿಚಯ ಮಾಡಿಕೊಟ್ಟನು. ತಾಯಿ ಪ್ರಾಯಕಾಲದಲ್ಲಿ ಬಹುರೂಪವತಿಯಾಗಿದ್ದಿರಬೇಕೆನ್ನುವಷ್ಟು ಲಕ್ಷಣವಾಗಿ ಇದ್ದಳು. ಅವಳು ಮಗನನ್ನು ಕಂಡೊಡನೆ ಅಪ್ಪಿಕೊಂಡು, ನಮ್ಮನ್ನು ಮನೆಯ ಮುಖ್ಯ ಬೈಠಖಾನೆಗೆ ಕರೆದುಕೊಂಡು ಹೋದಳು.

ಆ ದಿನ ರಾತ್ರಿ ಊಟವಾದನಂತರ ನಾವೆಲ್ಲರೂ ಬೈಠಖಾನೆಯಲ್ಲಿ ಕುಳಿತು ಮಾತಾಡುತ್ತಲೂ ಪಗಡೆಯಾಟವಾಡುತ್ತಲೂ ಸ್ವಲ್ಪ ಸಮಯ ಕಳೆದೆವು. ಸ್ಟೀಯರ್ಫೋರ್ತನ ತಾಯಿ ಮಿಸ್ ಡಾರ್ಟಲ್ ಎಂಬವಳನ್ನು ಅವಳ ಬಾಲ್ಯದಿಂದಲೇ ಸಾಕುತ್ತಿದ್ದಳು. ಮಿಸ್ ಡಾರ್ಟಲಳು ನಮ್ಮ ಜತೆಯಲ್ಲಿ ಆಟಕ್ಕೆ ಸೇರುತ್ತಿದಳು. ಅವಳು ಸ್ಟೀಯರ್ಫೋರ್ತನಿಗಿಂತ ಪ್ರಾಯದಲ್ಲಿ ಸ್ವಲ್ಪ ಚಿಕ್ಕವಳಾಗಿ ತೋರುತ್ತಿದ್ದಳು. ಅವಳು ಸುಂದರಿಯಾಗಿದ್ದಳು. ಆದರೆ, ಸ್ವಲ್ಪ ಕೃಶದೇಹಿಯಾಗಿದ್ದುದರಿಂದಲೂ ಅವಳ ಮುಖದಲ್ಲಿದ್ದ ಬಲವಾದ ಒಂದು ಹಳೆಗಾಯದ ಗುರುತಿನಿಂದಲೂ ಅವಳ ಸೌಂದರ್ಯ ಗಮನವಿಟ್ಟರೆ ಮಾತ್ರ ಗೊತ್ತಾಗುತ್ತಿದ್ದಿತೇ ಹೊರತು, ಒಮ್ಮೆ ನೋಡಿದ ಮಾತ್ರಕ್ಕೆ ಗೋಚರಿಸುತ್ತಿರಲಿಲ್ಲ. ಗಾಯ ಕೆನ್ನೆಯಿಂದ ಪ್ರಾರಂಭಿಸಿ ಕೆಳತುಟಿಯವರೆಗೆ ಇಳಿದಿತ್ತು. ನಮ್ಮ ಪಗಡೆ ಆಟದ ಮಧ್ಯೆ ಮಧ್ಯೆ ನನ್ನ ದೇಶ ಸಂಚಾರವನ್ನು ಕುರಿತಾಗಿಯೂ ಮಾತಾಡುತ್ತಿದ್ದೆವು. ನಾನು ಸಫೊಕ್ಕಿಗೆ ಹೋಗುವುದಾಗಿಯೂ ಯಾರ್ಮತ್ತಿನಲ್ಲಿ ಪೆಗಟಿ, ಹೇಮ್ ಮೊದಲಾದವರನ್ನು ನೋಡಿ ಬರುವುದಾಗಿಯೂ ತಿಳಿಸಿದೆನು. ಈ ಸಂದರ್ಭದಲ್ಲಿ ಸ್ಟೀಯರ್ಫೋರ್ತನು "ಪೆಗಟಿ: ಅಂದರೆ ಆ ಒರಟು ಮನುಷ್ಯ ತಾನೆ? ಹೇಮ್ ಅಂದರೆ ಮಗನಷ್ಟೇ?" ಎಂದಂದನು. ಆಗ ನಾನು ಸ್ವಲ್ಪ ಬೇಸರಿಸಿಕೊಂಡು ಮಿ. ಪೆಗಟಿಯ ಮತ್ತೂ ಅಲ್ಲಿನ ಎಲ್ಲವರ ಗುಣ, ನಡತೆಗಳನ್ನು ವರ್ಣನೆ ಮಾಡಿ ಪ್ರಶಂಸಿಸಿದೆನು. ಪೆಗಟಿಯ ದಯಾಳುತನ, ಅತಿಥಿ ಸತ್ಕಾರ ಬುದ್ಧಿ, ದೀನ ಅನಾಥರ ಕುರಿತಾದ ಕರುಣೆ ಇವನ್ನೆಲ್ಲ ವರ್ಣಿಸಿ ಜನರ ಗುಣಗಳನ್ನು ತಿಳಿಯಬೇಕಾದರೆ ಒಡನಾಟದಿಂದ ಮಾತ್ರ ಸಾಧ್ಯವೆಂದಂದೆ. ಅಲ್ಲದೆ, ಸ್ಟೀಯರ್ಫೋರ್ತನು ಸಹ ಅವರೊಡನೆ ಒಡನಾಡಿ ನೋಡಿದರೆ ನನ್ನಂತೆಯೇ ಅವರನ್ನು ಕುರಿತು ಅಭಿಪ್ರಾಯ ಪಡುವುದು ಖಂಡಿತವೆಂದೂ ಹೇಳಿದೆ. ಇದರಿಂದ ಸ್ಟೀಯರ್ಫೋರ್ತನು ಉತ್ಸಾಹಭರಿತನಾಗಿ –

"ಹಾಗಾದ್ರೆ ನೋಡೋಣ – ನಿನ್ನ ಮಾತು ಸುಳ್ಳಾಗಿರಲಾರದೆಂದು ಒಪ್ಪುತ್ತೇನೆ. ಆ ನಮೂನೆಯ ಜನರನ್ನು ನೋಡಿದ ಹಾಗಾಯಿತು ಮತ್ತು ನಿನ್ನ ಜತೆಯಲ್ಲಿದ್ದ ಹಾಗೂ ಆಯಿತು" ಎಂದು ಹೇಳಿದನು.

ಮಿಸ್ ಡಾರ್ಟಲಳು ನಮ್ಮ ಮಾತುಗಳೆಲ್ಲವನ್ನು ಕೇಳುತ್ತಿದ್ದಳು ಮಾತ್ರವಲ್ಲದೆ, ಕೇಳಿ ಜೀರ್ಣಿಸಿ, ಅದರಿಂದ ಏನೇನೋ ಪರಿಣಾಮ ಹೊಂದುತ್ತಿರುವಳಂತೆಯೂ ತೋರುತ್ತಿದ್ದಳು. ಅವಳು ಸ್ಟೀಯರ್ಫೋರ್ತನ ಮಾತನ್ನು ಮುಂದುವರಿಸಿ –

"ಅವರು ಎಂಥವರು – ಯಾವ 'ನಮೂನೆ'ಯವರು?" ಎಂದು ಕೇಳಿದಳು.

ಸ್ಟೀಯರ್ಫೋರ್ತನಿಗೆ ಈ ಪ್ರಶ್ನೆ ಅಧಿಕಪ್ರಸಂಗವೆಂದು ತೋರಿರಬೇಕು. ಅವನು ಮಿಸ್ ಡಾರ್ಟಲಳನ್ನು ಬಾಯಿ ಮುಚ್ಚಿಸಲೋಸ್ಕರವೇ ಎಂಬಂತೆ –

"ಯಾರು? ಎಂಥಾದ್ದು?" ಎಂದು ಒರಟಾಗಿ ಕೇಳಿದನು.

ಮಿಸ್ ಡಾರ್ಟಲಳು ಸುಮ್ಮನಾಗಲಿಲ್ಲ – ಹಟವಾದಿಯಂತೆ,

"ನೀನೇ ಅಂದೆ 'ಆ ನಮೂನೆ' ಜನರೂಂತ ಹಾಗಾಗಿ ಮಾತ್ರ ನಾನು ವಿಚಾರಿಸಿದ್ದು. 'ನಮೂನೆ'ಯವರಾಗಲು ಅವರೂ ನಮ್ಮ ಹಾಗೆ ಮನುಷ್ಯರಲ್ಲವೋ ಅಥವಾ ಮೃಗಗಳೋ ಅಥವಾ ಮರಗಳೋ" ಎಂದು ಕೋಪಾವಿಷ್ಟಳಾಗಿಯೇ ಕೇಳಿದಳು.

ಈ ಸಮಯದಲ್ಲಿ ಅವಳ ಮುಖದಲ್ಲಿದ್ದ ಗಾಯವು ಕೆಂಪಗೆ ಎದ್ದು ಕಾಣಿಸುತ್ತಿತ್ತು. ಸ್ಟೀಯರ್ಫೋರ್ತನು ನನಗೆ ಅನಂತರ ತಿಳಿಸಿದ ಪ್ರಕಾರ, ಆ ಗಾಯವನ್ನು ಸ್ಟೀಯರ್ಫೋರ್ತನೇ ಇಬ್ಬರೂ ಚಿಕ್ಕವರಾಗಿದ್ದಾಗ ಉರುಡಾಡಿಕೊಂಡು, ಮಾಡಿದ್ದುದಂತೆ. ಜಗಳದ ಕೋಪದಲ್ಲಿ ತನ್ನ ಕೈಯಲ್ಲಿದ್ದ ಸುತ್ತಿಗೆಯನ್ನು ಅವಳ ಮುಖಕ್ಕೆ ಎಸೆದುದರಲ್ಲಿ ಆ ಗಾಯವಾಗಿತ್ತಂತೆ. ಮಿಸ್ ಡಾರ್ಟಲಳು ಬಹು ಕೋಪಿಷ್ಠೆ, ಮತ್ಸರಿ ಎಂದು ಮೊದಲಾಗಿಯೂ ಸ್ಟೀಯರ್ಫೋರ್ತನು ತಿಳಿಸಿದನು. ಅವಳಿಗೆ ಸಿಟ್ಟು ಬಂದಾಗ ಗಾಯದ ಮೇಲಿದ್ದ ತೆಳು ಚರ್ಮ ಮಾತ್ರ ಇತರ ಭಾಗಕ್ಕಿಂತ ಹೆಚ್ಚು ಕೆಂಪಾಗಿ, ಸಿಟ್ಟು ತಣಿದಾಗ ಗಾಯ ಅಸ್ಪಷ್ಟವಾಗಿ ಉಳಿಯುತ್ತದೆಂದೂ ಅವಳ ಕೋಪ, ಮತ್ಸರದಿಂದಲೇ ಅವಳು ಆ ರೀತಿ ಕೃಶವಾಗುತ್ತಿರುವುದಾಗಿಯೂ ಹೇಳಿದನು.

ಸ್ಟೀಯರ್ಫೋರ್ತನು ಡಾರ್ಟಲಳ ಪ್ರಶ್ನೆಗೆ ಶೀಘ್ರವಾಗಿಯೇ ಉತ್ತರವಿತ್ತನು. ಅವನಿಗೆ ಸಿಟ್ಟು ಬಂದಿದ್ದುದರಿಂದ ಆ ರೀತಿ ಉತ್ತರವಿತ್ತನೋ ಅಥವಾ ಅವನ ಸ್ಪಷ್ಟವಾದ ಅಭಿಪ್ರಾಯವೇ ಹಾಗಿತ್ತೋ ಎಂಬುದನ್ನು ನಾನು ಅರಿಯೆ. ಅವನ ಉತ್ತರ ಮಾತ್ರ ಈ ತೆರನಾಗಿತ್ತು:
"ನಮಗೂ ಅವರಿಗೂ ಬಹು ಭೇದಗಳಿವೆ. ಅವರು ನಮ್ಮಷ್ಟು ಸೂಕ್ಷ್ಮ ಬುದ್ಧಿಯವರಲ್ಲ – ನಯ, ವಿನಯವಂತರಲ್ಲ – ಒಂದು ವಿಧದ ಅಸಂಸ್ಕೃತ ಒರಟರು. ಹಾಸ್ಯ, ಅಪಹಾಸ್ಯ, ವಿನೋದಗಳನ್ನು ಶೀಘ್ರವಾಗಿ ಅರ್ಥಮಾಡಲಾರದವರು. ಒಂದು ವೇಳೆ ಕೆಲವು ವಿಷಯಗಳು ಒಮ್ಮೆಗೆ ಅರ್ಥವಾದರೂ ಅವುಗಳನ್ನು ಮನಸ್ಸಿಗೆ ಅಂಟಿಸಿಕೊಳ್ಳುವವರಲ್ಲ. ಅವರು ಒರಟರಾದುದರಿಂದಲೇ ಬಹು ನಿಷ್ಠಾವಂತರೆಂದು ಕೆಲವರಿಗೆ ಕಾಣುವುದುಂಟು. ತಮ್ಮ ಸಂಸಾರದೊಳಗೆ ನೆಂಟಸ್ಥಿಕೆ ನಡೆಸುವುದರಲ್ಲೂ ಬಳಸುವುದರಲ್ಲೂ ಬಹು ಎಚ್ಚರದಿಂದಿರುವರೆಂದೂ – ನಡತೆಯ ಪರಿಶುದ್ಧತೆಯುಳ್ಳವರೆಂದೂ – ಅವರನ್ನು ಕುರಿತಾಗಿ ಹೇಳುವವರಿದ್ದಾರೆ. ಒಟ್ಟಿನ ಮೇಲೆ ಅವರ ಒರಟು ಚರ್ಮದಂತೆಯೇ ಅವರ ಮನಸ್ಸು, ವ್ಯವಹಾರಗಳೆಲ್ಲ ಒರಟು ಆಗಿರುವುವು ಮಾತ್ರವಲ್ಲದೆ, ಜೀವನದಲ್ಲಿನ ಅಪಮಾನಗಳನ್ನೂ ಸಹ ಅಂಟಿಸಿಕೊಳ್ಳಲಾರದಷ್ಟರ ಒರಟರು ಅವರು."

ನಮ್ಮ ಈ ಮಾತುಗಳಾಗುತ್ತಿದ್ದಾಗ ಸ್ಟೀಯರ್ಫೋರ್ತನ ತಾಯಿ ನಮ್ಮ ಜತೆಯಲ್ಲೇ ಕುಳಿತಿದ್ದಳು. ಅವಳಿಗೆ ತನ್ನ ಮಗನಲ್ಲಿದ್ದ ಗುಣಗಳೆಲ್ಲಾ ಸದ್ಗುಣಗಳೇ ಆಗಿದ್ದುವು. ಅವಳು ಮಾತಾಡುವಾಗ – ಅದರಲ್ಲೂ ಮಗನಿಗೆ ಸಂಬಂಧಿಸಿ ಮಾತಾಡುವಾಗ – ಅವನನ್ನು ಎಷ್ಟು ಹೊಗಳಿದರೂ ಅವಳಿಗೆ ತೃಪ್ತಿಯಿರಲಿಲ್ಲ. ಅವನ ರೂಪ, ದೇಹ, ತೇಜಸ್ಸು, ಪ್ರತಿಭೆ, ಪ್ರಭಾವ, ಮನೆತನದ ಹಿರಿಮೆ, ಎಲ್ಲವೂ ಪರಮೋತ್ಕೃಷ್ಟತರದ್ದೆಂದು ಅವಳು ಹೇಳಿ ಸಂತೋಷಿಸುತ್ತಿದ್ದಳು. ಶಿಸ್ತು, ಶಿಕ್ಷೆ ಎಂಬುದೆಲ್ಲ ಬಾಲಕರ ಜನ್ಮ ಸಿದ್ಧವಾದ ಶಕ್ತಿಗಳನ್ನೆಲ್ಲ ಕುಂಠಿತಗೊಳಿಸುವವೆಂಬುದೇ ಅವಳ ಅಭಿಪ್ರಾಯ. ಇಷ್ಟೆಲ್ಲ ಗ್ರಹಿಸಿಯೇ – ಸ್ಟೀಯರ್ಫೋರ್ತನ ಕುಟುಂಬ ಗೌರವ, ಸ್ವಸಾಮರ್ಥ್ಯ, ಸ್ವಾತಂತ್ರ್ಯಗಳಿಗೆ ಧಕ್ಕೆ ಬಾರದಂಥ ಶಾಲೆ ತನ್ನ ಮಗನಿಗೆ ಸಿಗಬೇಕೆಂದೇ – ಸ್ಟೀಯರ್ಫೋರ್ತನ ತಾಯಿ ವಿಚಾರಿಸಿ, ಹುಡುಕಿ, ಮಗನನ್ನು ಮಿ. ಕ್ರೀಕಲರ ಶಾಲೆಗೆ ಕಳುಹಿಸಿದ್ದಳೆಂಬುದನ್ನು ನಾನು ಅಲ್ಲಿದ್ದಾಗ ಅವಳ ಮಾತುಗಳಿಂದ ತಿಳಿದೆನು.

"ಮನಸ್ಸು ಮಾಡಿದರೆ ನನ್ನ ಮಗನು ಯಾರನ್ನೂ ಯಾವ ವಿದ್ಯೆಯಲ್ಲೂ ಸೋಲಿಸಬಲ್ಲ. ಪ್ರಪಂಚವೇ ತನ್ನನ್ನು ಹಿಂಬಾಲಿಸಿ ಬರುವಂತೆ ಮಾಡಿಕೊಳ್ಳತಕ್ಕಷ್ಟರ ಮುಂದಾಳುತನ ಅವನಿಗಿದೆ" ಎಂದು ಅವನ ತಾಯಿ ನನ್ನೊಡನೆ ಹೇಳಿದಳು.

ಅಲ್ಲಿನ ಊಟೋಪಚಾರಗಳೂ ಮಲಗುವ ಕೋಣೆ, ಉದ್ಯಾನವನ, ಮನೆ, ವಠಾರ – ಎಲ್ಲವೂ ಬಹು ಉತ್ತಮತರದ್ದಾಗಿತ್ತು. ಘನಸ್ಥಿಕೆಯದ್ದಾಗಿತ್ತು. ಕಥೆಗಳಲ್ಲಿ ಮಾತ್ರ ಕೇಳಿದ್ದ ವೈಭವದ ವರ್ಣನೆಗಳನ್ನು ಮೀರಿಸಬಲ್ಲಂಥ ಸುಂದರ, ಸಾಂಪತ್ತಿಕ, ಸಾಂಸ್ಕೃತಿಕ, ಸೌಖ್ಯದ ಉಪಕರಣಗಳೂ ಅಲಂಕಾರಗಳೂ ಅನುಕೂಲ್ಯಗಳೂ ಅವನ ಮಲಗುವ ಕೋಣೆಯಲ್ಲಿದ್ದುವು. ಅವುಗಳನ್ನು ನಾನು ವರ್ಣಿಸಲೇ ಶಕ್ತನಲ್ಲ. ಆ ಕೋಣೆಯಲ್ಲೇ ಬಹು ತೇಜಸ್ವಿಯಾದ ತೈಲ ಚಿತ್ರವೊಂದೂ ಇತ್ತು. ಅದು ಸ್ಟೀಯರ್ಫೋರ್ತನ ತಾಯಿಯದಾಗಿತ್ತು. ಅದು ಹತ್ತಾರು ವರ್ಷಗಳ ಹಿಂದಿನದಾಗಿರಬೇಕೆಂದು ನಾನು ಊಹಿಸಿದೆ.

ಆ ದಿನದ ನನ್ನ ಹೊಸ ಪರಿಚಯ, ಹೊಸ ಸನ್ನಿವೇಶಗಳೆಲ್ಲ ನನ್ನ ಮನಸ್ಸಿನಲ್ಲಿ ನಾನಾ ಭಾವನೆಗಳನ್ನೆಬ್ಬಿಸಿದುವು. ತಾಯಿಯ ಮಹತ್ತರವಾದ ಪ್ರೇಮ, ಅಭಿಮಾನ – ಸ್ಟೀಯರ್ಫೋರ್ತನ ಸಕಲ ಸದ್ಗುಣಗಳ ನಡುವೆ ಕುರೂಪವಾಗಿ ಅಡಗಿ ತೋರುವ ಸ್ವೇಚ್ಛಾವರ್ತನ, ಮತ್ತೂ ಆ ಸ್ವೇಚ್ಛಾವರ್ತನೆಯಲ್ಲೂ ಮೆರೆದು ಎದ್ದು ನಿಲ್ಲುವ ಅವನ ವ್ಯಕ್ತಿತ್ವ – ಮಿಸ್ ಡಾರ್ಟಲಳ ಸೂಕ್ಷ್ಮ ಬುದ್ಧಿ, ಸಂಶಯ, ಅಸಂತುಷ್ಟಿ, ಮತ್ಸರ, ಕ್ರೋಧ – ಈ ಎಲ್ಲಾ ವಿಧದ ಸ್ವಭಾವವಿದ್ದ ಜನರು ಅಲ್ಲಿ ಒಂದೇ ಮನೆಯಲ್ಲಿ ಸಂಸಾರ ಸಾಗಿಸುತ್ತಿದ್ದುದೊಂದು ಆಶ್ಚರ್ಯದ ಸಮಸ್ಯೆಯಾಗಿಯೇ ನನಗೆ ತೋರುತ್ತಾ ಅದನ್ನೇ ಪುನಃ ತರ್ಕಗಳಿಂದ ವಿಮರ್ಶಿಸುತ್ತಾ ನಾನು ನಿದ್ರೆ ಮಾಡಿದೆನು.

ಅಧ್ಯಾಯ ಇಪ್ಪತ್ತೊಂದು

ಒಲವಿನ ಎಮಿಲಿ

ಸ್ಟೀಯರ್ಫೋರ್ತನು ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗಲೇ ಇದ್ದ ಅವನ ಕೆಲಸದವನೊಬ್ಬನು ಈಗಲೂ ಅವನ ಮನೆಯಲ್ಲಿ ಸೇವಕನಾಗಿದ್ದನು. ಅವನು ಕೆಲಸದವನು – ಸೇವಕನು – ಎಂದಂದುಬಿಡಬಹುದಾದವನಂತೆ ಎಂದೂ ಇರುತ್ತಿರಲಿಲ್ಲ. ಗೌರವಕ್ಕೆ ಅರ್ಹತೆಯುಳ್ಳವರು ಯಾರಾದರೂ ಇರುವುದಾದರೆ ಹಾಗೆ ಇರುವವನೇ ಅವನು, ಎಂಬಷ್ಟರ ಮಟ್ಟಿಗೆ ಅವನು ಗೌರವಯೋಗ್ಯ ಮೂರ್ತಿಯಾಗಿದ್ದನು. ಒಂದು ವೇಳೆ, ಈ ಮಾತುಗಳು ಉತ್ಪ್ರೇಕ್ಷೆಯವು ಎಂದು ಯಾರಾದರೂ ಆಕ್ಷೇಪಿಸುವುದಿದ್ದರೆ, ಅವನ್ನೇ ಸ್ವಲ್ಪ ಬದಲು ಮಾಡಿ, ಅವನ ವೃತ್ತಿಯಲ್ಲಿ ಇರುವವರಲ್ಲೆಲ್ಲ, ಅತ್ಯಂತ ಗೌರವಾನ್ವಿತನಾಗಿರಲು ಬೇಕಾದ ದೇಹ, ಮುಖವರ್ಚಸ್ಸು, ನಡೆನುಡಿ, ಅವನ ವೃತ್ತಿಯ ತಜ್ಞತೆ, ಲೋಕಾನುಭವ, ಮೊದಲಾದ್ದೆಲ್ಲ ಅವನಿಗೆ ಇತ್ತು ಎಂದಾದರೂ ಹೇಳಲೇಬೇಕಾದಂತೆ ಅವನಿದ್ದನು. ಅವನ ಮುಖ ಗಾಂಭೀರ್ಯವಾಗಿತ್ತು ಅವನ ಸ್ವರವೂ ಗಂಭೀರತರದ್ದಾಗಿತ್ತು. ತನಗಿಂತ ಮೇಲ್ತರಗತಿಯವರನ್ನು ಕಂಡುಕೊಂಡು ಅವರೊಡನೆ ವಿನಯದಿಂದ ವರ್ತಿಸಿ ತನಗಿಂತ ಕೀಳ್ತರಗತಿಯವರಲ್ಲೆಲ್ಲ ಬಹು ಘನಸ್ತಿಕೆಯಿಂದ ಮೆರೆದು, ಒಂದೆಡೆ ಆಳಾಗಿ – ಇನ್ನೊಂದೆಡೆ ಯಜಮಾನನಾಗಿ – ಇರುವ ಅನುಭವಸಂಪನ್ನನೇ ಈ ಆಳು. ತನ್ನ ಸಂಪರ್ಕಕ್ಕೆ ಬಂದ ಜನ, ಸನ್ನಿವೇಶ, ಸಂದರ್ಭಗಳನ್ನು ಸೂಕ್ಷ್ಮವಾಗಿ, ವಿಚಾರಿಸಿ ನೋಡಿ, ಮನಸ್ಸಿನಲ್ಲಿ ಕಾದಿಟ್ಟು, ಯಜಮಾನನಿಗೆ ಬೇಕಾದಾಗ, ಬೇಕಾದಷ್ಟು ಮಾತ್ರ ಒದಗಿಸಬಲ್ಲ ಕಾರ್ಯಚತುರನಿವನು.

ಅವನ ಪ್ರಾಯ ತಿಳಿದವರಿಲ್ಲ – ವಿಚಾರಿಸಲು ಯಾರಿಗೂ ಧೈರ್ಯವಿದ್ದಿರಲಾರದು. ಅವನ ಹೆಸರನ್ನೂ ಪೂರ್ತಿಯಾಗಿ ಅರಿತವರಿಲ್ಲ. ಅದಕ್ಕೆ ಮುಂದಾಗುವ ಎದೆಗಾರಿಕೆಯವರೂ ಇದ್ದಿರಲಾರರು. ನನ್ನ ಅಂದಾಜಿನಲ್ಲಿ ಅವನ ಪ್ರಾಯ ನಲವತ್ತೂ ಆಗಿರಬಹುದು –ಅರವತ್ತೂ ಆಗಿರಬಹುದು. ಎಲ್ಲರೂ ತಿಳಿದಿರುವ ಪ್ರಕಾರದ ಅವನ ಹೆಸರು ಲಿಟ್ಮರ್ ಎಂದಾಗಿತ್ತು.

ನಮ್ಮನ್ನು ನೋಡುವಾಗಲೆಲ್ಲ ಅವನು, ಸ್ವಲ್ಪ ಬಗ್ಗಿಯೇ ನಿಲ್ಲುತ್ತಿದ್ದನು. ನಮ್ಮನ್ನೆಂದೂ ಅವನು ದೃಷ್ಟಿಸಿ ನೋಡುತ್ತಿರಲಿಲ್ಲ. ನಮ್ಮೊಡನೆ ಮಾತಾಡುವಾಗಲೆಲ್ಲ 'ಸರ್', 'ಸ್ವಾಮೀ', 'ತಾವು' ಎಂದು ವಿನಯದಿಂದ, ಮೃದುವಾಗಿ, ವಿಶೇಷವೆಂದು ತೋರ್ಪಡದಂತೆ ಪ್ರಯೋಗಿಸಿ ನಾವು ಬಯಸಿದಾಗ ಮಾತ್ರ ಎದುರಿಸುತ್ತಾ, ಯಾರೂ ಇರಬಾರದೆಂದು ನಾವು ಗ್ರಹಿಸುವ ಮೊದಲೇ ಕಾಣದೇ ಆಗುತ್ತಾ ಎಂದೂ ಕಾಲು ಸಪ್ಪಳವನ್ನಾಗಲೀ ಇತರ ಶಬ್ದಗಳನ್ನಾಗಲೀ ಮಾಡದೇ ಎಂದೂ ಯಾವ ತಪ್ಪನ್ನು ಮಾಡದ ಆಳು ಅಂದರೆ ಈ ಲಿಟ್ಮರನಾಗಿದ್ದನು. ನನ್ನಂಥ ಚಿಕ್ಕವರಿಗೆ ಅಷ್ಟೊಂದು ಲೋಕಾನುಭವವಿದ್ದವನ ಎದುರು ಕುಳಿತಿರುವುದೆಂದರೇ ಹೆದರಿಕೆಯ ಪ್ರಸಂಗವೆಂದು ತೋರುತ್ತಿತ್ತು.

ಇಂಥ ಶಕ್ತಿವಂತ, ಗಾಂಭೀರ್ಯಯುತ, ಸೇವಕನನ್ನು ಆಳಾಗಿ ನಡೆಸಿ ಬರುತ್ತಿದ್ದ ಸ್ಟೀಯರ್ಫೋರ್ತನ ಶಕ್ತಿ ಇನ್ನೆಷ್ಟಿರಬೇಕೆಂದು ನಾನು ಆಶ್ಚರ್ಯಪಡುತ್ತಿದ್ದೆ. ನಾನು ಸ್ಟೀಯರ್ಫೋರ್ತನ ಮನೆಯಲ್ಲಿ ಇದ್ದ ಒಂದೆರಡು ದಿನಗಳಲ್ಲಿ ಈ ಲಿಟ್ಮರನ ಪರಿಚಯ ನನಗೆ ಸಾಕಷ್ಟು ಆಗಿತ್ತು. ಆ ಮನೆಯಲ್ಲಿ ನಾನು ಬಹು ಸುಖವಾಗಿಯೂ ಸಂತೋಷವಾಗಿಯೂ ಆ ಒಂದೆರಡು ದಿನಗಳನ್ನು ಕಳೆದೆನು. ಆದರೂ ಲಿಟ್ಮರನು ನನ್ನೆದುರು ಇದ್ದಾಗ ನನಗೆ ಆಗುತ್ತಿದ್ದ ಕಷ್ಟವೊಂದಿಲ್ಲದಿರುತ್ತಿದ್ದರೆ, ನನ್ನ ಸಂತೋಷವು ಇನ್ನಷ್ಟು ಹೆಚ್ಚೇ ಆಗಿರುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ.

ನಾನೂ ಸ್ಟೀಯರ್ಫೋರ್ತನೂ ಜತೆಯಾಗಿಯೇ ಯಾರ್ಮತ್ತಿಗೆ ಹೋಗುವುದೆಂದೂ ಯಾರ್ಮತ್ತಿಗೆ ತಲುಪಿದನಂತರ ನಾವು ನಮಗೆ ಕುಷಿ ಕಂಡಂತೆ ಬೇರೆ ಬೇರೆಯಾಗಿ ಹೋಗಿ, ಕೊನೆಗೆ ಮಿ. ಪೆಗಟಿಯ ಮನೆಗೆ ಜತೆಯಾಗಿಯೇ ಹೋಗುವುದೆಂದು ನಿಶ್ಚಯಿಸಿಕೊಂಡೆವು. ಇಷ್ಟೆಲ್ಲಾ ನಿಶ್ಚೈಸಿಕೊಂಡು ನಾವು ಟಪಾಲು ಬಂಡಿಯನ್ನೇರಿ ಯಾರ್ಮತ್ತಿಗೆ ಪ್ರಯಾಣ ಬೆಳೆಸಿದೆವು.

ಯಾರ್ಮತ್ತಿಗೆ ತಲುಪಿದನಂತರ ನಾನು ಓಮರರ ಮನೆಗೆ ಹೋದೆನು. ಮಿ. ಓಮರರು, ಅವರ ಖಾಸಶ್ವಾಸದ ಖಾಯಿಲವನ್ನು ತನ್ನ ಜೀವನದ ಒಂದು ಅಂಶವೆಂದೇ ಅಂಗೀಕರಿಸಿಕೊಂಡು, ಮೊದಲಿನಂತೆಯೇ ತನ್ನ ಜೀವನದಲ್ಲಿನ ಸಂತೃಪ್ತಿ ಸಂತೋಷಗಳಿಂದ ಆನಂದದಲ್ಲೇ ಇದ್ದರು. ಅವರ ಅಂಗಡಿಯ ಬೋರ್ಡು ಈಗ 'ಓಮರ್ ಮತ್ತು ಜೋರಾಂ' ಎಂಬ ಹೆಸರಿನಿಂದಿತ್ತು. ಓಮರರು ನನ್ನನ್ನು ಕಂಡಕೂಡಲೇ ಗುರುತಿಸಲಾರದೆ, "ಓಮರರಿದ್ದಾರೆಯೇ?" ಎಂದು ನಾನು ವಿಚಾರಿಸಿದ್ದಕ್ಕೆ –
"ಇದ್ದೇನೆ ಸರ್, ನನ್ನಿಂದೇನಾಗಬೇಕು, ದಯಮಾಡಿ ತಿಳಿಸಿ" ಅಂದರು. ನಾನು ಹಸ್ತಲಾಘವವನ್ನಿತ್ತಾಗ ಸ್ವಲ್ಪ ಅನುಮಾನದಿಂದಲೇ ತಮ್ಮ ಕೈ ನೀಡಿದರು. ಆಗ ನಾನು –
"ಜ್ಞಾಪಿಸಿಕೊಳ್ಳಿರಿ, ಮಿ. ಓಮರ್, ಆ ದಿನ ನಾನು, ಒಂದು ಶವ ದಫನ್ ಸಂಬಂಧ ಬಂದಿದ್ದೆ. ನಿಮ್ಮ ಮಗಳು, ಮಿ. ಜೋರಾಂ, ನೀವೂ ನಾನೂ ಬ್ಲಂಡರ್ಸ್ಟನ್ನಿಗೆ ಹೋದೆವು" ಎಂದನ್ನುವಾಗಲೇ
" ಆ ದಿನದ ಮುಖ್ಯ ಪಾತ್ರಿ – ಒಬ್ಬ ಸ್ತ್ರೀ ಅಲ್ಲವೇ?" ಅಂದರು.
"ನನ್ನ ತಾಯಿ" ಎಂದು ನಾನಂದೆ.
"ಜತೆಯಲ್ಲೊಂದು ಚಿಕ್ಕ ಮಗುವೂ ಇತ್ತು" ಎಂದನ್ನುತ್ತಾ ನನ್ನನ್ನು ನೋಡಿ ಬಹು ಆಶ್ಚರ್ಯಪಟ್ಟುಕೊಂಡು,

"ಓ ದೇವರೇ ನೀವೆಷ್ಟು ದೊಡ್ಡವರಾಗಿರುತ್ತೀರಪ್ಪಾ" ಎಂದಂದು ನನ್ನನ್ನು ಒಳಗೆ ಕರೆದು ಕುರ್ಚಿಯಲ್ಲಿ ಕುಳಿತುಕೊಳ್ಳಲು ಹೇಳಿದರು. ಅನಂತರ ನಾವು ಅನೇಕ ವಿಷಯಗಳನ್ನು ಮಾತಾಡಿದೆವು.

ಮೊದಲು ಅವರ ಕೆಲಸಗಾರನಾಗಿದ್ದ ಜೋರಾಂನು ಓಮರರ ಮಗಳು ಮಿನ್ನಿಯನ್ನು ಮದುವೆಯಾಗಿ, ಓಮರರ ಪಾಲುಗಾರನಾಗಿ ಆ ಅಂಗಡಿಯನ್ನು ಇಬ್ಬರು ನಡೆಸುತ್ತಿದ್ದರು. ಎಮಿಲಿಯೂ ಅಲ್ಲಿದ್ದಳು. ಅವಳು ನನ್ನನ್ನು ಕಂಡು ಮುಗುಳ್ನಗೆ ನಕ್ಕು ಅಡಗಿಕೊಂಡಳು. ಆಗಲೇ ಎಮಿಲಿಯ ಪ್ರಸ್ತಾಪವೂ ಬಂತು. ಎಮಿಲಿಯು ತನ್ನ ಕುಟುಂಬದ ವೃತ್ತಿಯನ್ನು ಬಿಟ್ಟು ಹೊಲಿಗೆ ಕೆಲಸವನ್ನು ಕಲಿಯುತ್ತಿದ್ದಳಂತೆ. ಈ ವಿಷಯವನ್ನು ತಿಳಿಸುವಾಗ ಮಿನ್ನಿಯೂ ಜತೆ ಕೂಡಿದಳು. ಎಮಿಲಿಗೆ ತನ್ನ ಕುಟುಂಬದ ವೃತ್ತಿಯ ಮೇಲಿನ ಪ್ರೀತಿಗಿಂತ ಹೆಚ್ಚಾದ ಪ್ರೀತಿ ಮೇಲ್ತರಗತಿ ಸಂಸಾರಗಳ – ಶ್ರೀಮಂತರ – ವೃತ್ತಿಗಳ ಮೇಲೆ ಇತ್ತೆಂದು ಮಿನ್ನಿ ತಿಳಿಸಿದಳು. ಹೊಲಿಗೆ ಕೆಲಸವು ಶ್ರೀಮಂತರ ಸಂಸರ್ಗಕ್ಕೆ ಹೆಚ್ಚು ಅನುಕೂಲವೆಂದೂ – ತಮ್ಮ ಕುಟುಂಬದ ವೃತ್ತಿಗಿಂತ ಮೇಲಾದದ್ದೆಂದೂ ಎಮಿಲಿ ಭಾವಿಸಿಯೇ ಆ ವೃತ್ತಿಯಲ್ಲಿ ತರಬೇತು ಹೊಂದುತ್ತಿದ್ದುದಂತೆ. ಎಮಿಲಿ ತಮ್ಮ ಆನುವಂಶಿಕವಾದ ವೃತ್ತಿಯನ್ನು ಬಿಟ್ಟು ಈ ರೀತಿ ಇರುವುದನ್ನು ಕುರಿತು ಮಿ. ಪೆಗಟೀ, ಹೇಮ್ ಮೊದಲಾದವರು ಬೇಸರಪಡುತ್ತಿದ್ದರೆಂದೂ ತಿಳಿದೆನು.

ಅನಂತರ ನಾನು ಬಾರ್ಕಿಸನ ಮನೆಗೆ ಹೋದೆನು. ಬಾರ್ಕಿಸನು ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದನು. ಪೆಗಟಿ–ಬಾರ್ಕಿಸರ ಸಂಸಾರ ಸುಖಕರವಾಗಿಯೇ ನಡೆದಿತ್ತೆಂದೂ ಈಗಲೂ ನಡೆಯುತ್ತಿದೆಯೆಂದೂ ಪೆಗಟಿ ತಿಳಿಸಿದಳು. ಬಾರ್ಕಿಸನ ಕೊರೆತೆಯೆಂದ ಪಕ್ಷಕ್ಕೆ ಅವನ ಜಿಪುಣತ್ವ ಮಾತ್ರವಾಗಿತ್ತಂತೆ. ಅದಕ್ಕೆ ಉದಾಹರಣೆಯಾಗಿ ಒಂದು ಚಿಕ್ಕ ಸಂಗತಿಯನ್ನೇ ಪೆಗಟಿ – ತಮಾಶೆಗಾಗಿ – ತಿಳಿಸಿದಳು. ಬಾರ್ಕಿಸನು ಮಲಗಿದ್ದ ಹಾಸಿಗೆಯ ಅಡಿಯಲ್ಲಿ, ತಲೆ ಕಡೆಯಲ್ಲಿ ಒಂದು ಪೆಟ್ಟಿಗೆ ಇತ್ತು. ಅವನ ಒಂದು ಕೈಯ್ಯನ್ನು ಅವನು ಸದಾ ಅತ್ತ ಕಡೆ ಇಟ್ಟುಕೊಂಡಿರುತ್ತಿದ್ದನು. ಅಷ್ಟೂ ಅಲ್ಲದೆ ಅವನ ಕೋಣೆಗೆ ಯಾರಾದರೂ ಬಂದು ಹೋದ ಕೂಡಲೇ ಒಂದು ಚಿಕ್ಕ ಗೂಟದಿಂದ ಪೆಟ್ಟಿಗೆ ಕಡೆಗೆ ನೂಕಿ ನೂಕಿ ಅದು ಅಲ್ಲೇ ಉಂಟೋ ಎಂದೂ ಪರೀಕ್ಷಿಸಿಕೊಳ್ಳುತ್ತಿದ್ದನಂತೆ. ಮತ್ತೆ, ಈ ಗೂಟವನ್ನು ಲಾಡಿಯಿಂದ ಕಟ್ಟಿ, ತನ್ನ ಹಾಸಿಗೆಗೆ ಲಾಡಿಯ ಒಂದು ತುದಿಯನ್ನು ಹೊಲೆದಿದ್ದನಂತೆ. ಈ ವಿಧದ ಜಿಪುಣತ್ವವೇನಿದರೂ ಆ ದಂಪತಿಗಳ ಸಂಸಾರ ಸುಖವಾಗಿ ಸಾಗುತಿತ್ತು ಎಂದು ತಿಳಿದೆನು. ಪೆಗಟಿ ಅವಳ ಮನೆಯಲ್ಲಿ ಈಗಲೂ ನನ್ನ ಬಾಲ್ಯದ ಕೆಲವು ವಸ್ತುಗಳನ್ನೂ ನನ್ನ ಮೊಸಳೆ ಪುಸ್ತಕ, ಮತ್ತೆ ಕೆಲವು ಚಿತ್ರಗಳನ್ನೂ ಬಹು ಎಚ್ಚರಿಕೆಯಿಂದ ಕಾಪಾಡಿಟ್ಟುಕೊಂಡಿದ್ದುದನ್ನು ತೋರಿಸಿದಳು. ಪೆಗಟಿಯ ಮನೆಯಲ್ಲಿ ಹೀಗೆ ಸ್ವಲ್ಪ ಹೊತ್ತು ಇದ್ದು, ಅವಳು ಕೊಟ್ಟ ಹಣ್ಣು ಹಂಪಲುಗಳನ್ನು ತಿಂದು, ಮಿ. ಪೆಗಟಿಯ ಮನೆ ಕಡೆಗೆ ಹೊರಟೆನು. ದಾರಿಯಲ್ಲೇ – ನಾವು ಮೊದಲೇ ಏರ್ಪಡಿಸಿಕೊಂಡಿದ್ದಂತೆ – ಸ್ಟೀಯರ್ಫೋರ್ತನೂ ನನ್ನ ಜತೆ ಸೇರಿದನು.

ನಾವು ಮಿ. ಪೆಗಟಿಯ ಮನೆಗೆ ಸಮೀಪಿಸುತ್ತಿದ್ದ ಹಾಗೆ ಆ ಮನೆಯೊಳಗಿನ ಮಾತುಗಳೂ ನಗಾಡುವ ಶಬ್ದವೂ ಕೇಳಿಸತೊಡಗಿತು. ನಾವು ಅಲ್ಲಿಗೆ ಹಠಾತ್ತಾಗಿ ಪ್ರವೇಶಿಸಿ ಅವರನ್ನು ಭೇಟಿ ಮಾಡಬೇಕೆಂದಿದ್ದುದರಿಂದ, ಮಾತಾಡದೆ, ಬಾಗಿಲು ತೆಗೆದು, ಒಳಗೆ ಪ್ರವೇಶಿಸಿದೆವು.

ನಾವು ನುಗ್ಗುವಾಗ ಮೊದಲು ಕಂಡದ್ದು ಮಿಸೆಸ್ ಗಮ್ಮಿಜ್ಜಳ ಹರ್ಷೋದ್ಗಾರ – ಅವಳು ಕೈ ಚಪ್ಪಾಳೆ ತಟ್ಟಿ ನಗಾಡುತ್ತಿದ್ದಳು. ಮಿಸೆಸ್ ಗಮ್ಮಿಜ್ಜಳೇ ಈ ಪರಿಸ್ಥಿತಿಗೆ ಬಂದಿರುವಾಗ ಅಲ್ಲಿನ ಸಂತೋಷದ ಸಂದರ್ಭಗಳು ಹೇಗಿರಬಹುದೆಂದು ನನಗೆ ಆಶ್ಚರ್ಯವಾಯಿತು. ಮಿ. ಪೆಗಟಿ ಮುಖದಲ್ಲಿ ಸಂತೋಷ ಸಂತೃಪ್ತಿಗಳು ತುಂಬಿ ತುಳುಕುತ್ತಿದ್ದು, ತನ್ನ ಎರಡು ಕೈಗಳನ್ನು ಅಗಲಿಸಿ ಹಿಡಿದುಕೊಂಡು, ತನ್ನೆದುರು ನಿಂತಿದ್ದ ಎಮಿಲಿಯನ್ನು ಅಪ್ಪಿಕೊಳ್ಳಲು ಸಿದ್ಧನಾಗಿದ್ದನು. ಹೇಮನು ರೂಪ ಲಾವಣ್ಯಗಳನ್ನು ಮೆಚ್ಚಿ ಸಂತೋಷಿಸುತ್ತಾ ಅವನ ಸ್ವಾಭಾವಿಕವಾದ ಹೆಡ್ಡುತನ ಮತ್ತು ನಾಚಿಕೆಗಳಿಂದ ಸ್ವಲ್ಪ ಮಾತ್ರ ನಗುತ್ತಾ ಆದರೂ ಅಲ್ಲಿ ನಡೆದಿದ್ದ ಪ್ರಸಂಗವನ್ನು ಸಂಪೂರ್ಣ ತಿಳಿದು ಆನಂದಿಸುತ್ತಾ ಎಮಿಲಿಯನ್ನು ಮಿ. ಪೆಗಟಿಗೆ ಅರ್ಪಿಸುವ ಸಿಧ್ಧತೆಯಲ್ಲಿದ್ದನು. ನವ ತರುಣಿ, ಸುಂದರಿ ಎಮಿಲಿ ಅಲ್ಲಿದ್ದ ಎಲ್ಲರ ಮುದ್ದು ಕೂಸಿನಂತೆ ಮಾತ್ರ ಬೆಳೆದು ಬಂದು, ಇಂದು ಈ ಪ್ರಸಂಗದಲ್ಲಿನ ಹೇಮನ ಸಂಪರ್ಕ, ಸಂಬಂಧಗಳ ಅರಿವನ್ನು ಗ್ರಹಿಸಿ, ಸಂತೋಷಿಸಿ, ಮುಖದಲ್ಲಿ ನಸುಗೆಂಪು ತಂದುಕೊಂಡು ಹೇಮನ ಕೈಯಿಂದ ಬಿಟ್ಟು ಮಿ. ಪೆಗಟಿಯ ಬಳಿ ಸೇರಲು ಒಂದು ಹೆಜ್ಜೆಯನ್ನಿತ್ತಿದ್ದಳು.

ನಮ್ಮ ಪ್ರವೇಶ ಈ ಸನ್ನಿವೇಶದಲ್ಲೇ ಆಗಿದ್ದುದರಿಂದ ಎಮಿಲಿ ನಿಂತಲ್ಲೇ ನಿಂತುಬಿಟ್ಟಳು. ನಮ್ಮ ಹಠಾತ್ತಾದ ಪ್ರವೇಶ ಅಲ್ಲಿನ ಆನಂದಮಯ ಪರಿಸ್ಥಿತಿಯನ್ನು ಏಕಾಏಕಿಯಾಗಿ ಕರಗಿಸಿ ಮಾಯಗೊಳಿಸಿತು. ಅಲ್ಲಿ ಎಲ್ಲರ ಮುಖದಲ್ಲಿ ಆಗ ಇದ್ದದ್ದು ಒಂದು ವಿಧದ ಶೂನ್ಯತೆ. ಮತ್ತೆ ಕ್ರಮೇಣವಾಗಿ ಚೇತರಿಸಿ ಬಂದ ಆಶ್ಚರ್ಯ. ನಾವೂ ಸ್ವಲ್ಪ ಗಾಬರಿಗೊಂಡು ಸ್ತಬ್ಧವಾಗಿ ಹೋದೆವು. ಕೊನೆಗೆ ನಾನು "ಮಿ. ಪೆಗಟಿ ನನ್ನ ಗುರುತು ಸಿಕ್ಕಲಿಲ್ಲವೇ" ಎಂದು ಕೇಳಿದೆ.

ಅಷ್ಟರಲ್ಲಿ ಹೇಮನಿಗೆ ನನ್ನ ಗುರುತು ಸಿಕ್ಕಿತು –
"ಮಾಸ್ಟರ್ ಡೇವಿ, ಮಾಸ್ಟರ್ ಡೇವಿ" ಎಂದು ಅವನು ಸಂತೋಷದಿಂದ ಕೂಗಿಕೊಂಡನು. ಸ್ಟೀಯರ್ಫೋರ್ತನ ಪರಿಚಯ ಮಿ. ಪೆಗಟಿ, ಹೇಮರಿಗೆ ಹೇಗೂ ಇದ್ದುದರಿಂದಲೂ ಸ್ಟೀಯರ್ಫೋರ್ತನ ಸುಲಭವಾದ, ಸಲಿಗೆಯ ಸರಳ ಸ್ವಭಾವದ ಮಾತುಗಳಿಂದಲೂ ನಾವೆಲ್ಲರೂ

ಅರೆಕ್ಷಣದಲ್ಲೇ ಚಿರಪರಿಚಿತರಂತೆ ಕಲೆತು ಮಾತಾಡತೊಡಗಿದೆವು. ನನ್ನ ಪರಿಚಯ ಹೇಮನಿಗೆ ನನ್ನ ಬಾಲ್ಯಾರಭ್ಯ ಇದ್ದುದನ್ನು ತಿಳಿಸುತ್ತಾ ಬಹು ಸಂತೋಷದಿಂದ –
"ಮಾಸ್ಟರ್ ಡೇವಿ ಈಗ ದೊಡ್ಡವನಾಗಿದ್ದಾನೆ. ಜ್ಞಾನ ಭಂಡಾರವೇ ಈಗ ನಮ್ಮೆದುರು ಬಂದು ನಿಂತಿದ್ದಾನೆ – ವಿದ್ಯಾಸಾಗರನಾಗಿದ್ದಾನೆ ನಮ್ಮ ಡೇವಿ" ಅಂದನು ಹೇಮನು.

ಈ ಸಂತೋಷಕೂಟದಲ್ಲಿ ಒಬ್ಬರು ಇನ್ನೊಬ್ಬರಿಗಿಂತ ಹೆಚ್ಚು ಸಂತೋಷಪಡುತ್ತಿದ್ದರೆಂಬಂತೆ, ಮಿ. ಪೆಗಟಿ ಆವೇಶದಿಂದ ಅನ್ನತೊಡಗಿದನು –
"ಮಹನೀಯರುಗಳೇ – ತೋರುವಿಕೆಯಲ್ಲಿ ಇಬ್ಬರಾಗಿದ್ದರೂ ನಿಮ್ಮೊಳಗಿನ ಪ್ರೇಮದ ಕಟ್ಟಿನಿಂದ ಒಬ್ಬರೇ ಆಗಿರುವ ಮಹನೀಯರೇ – ನಾನೊಬ್ಬ ಒರಟು ನಾವಿಕ. ಅನೇಕ ವಿಷಯಗಳಲ್ಲಿ ಒರಟನಾದರೂ ಪ್ರೀತಿಸುವುದರಲ್ಲೂ ಒಬ್ಬರನ್ನು ನಂಬುವುದರಲ್ಲೂ ಉಕ್ಕಿನಂತೆ ಸ್ಥಿರವಾಗಿರುವವನು. ನನ್ನ ಒರಟುತನ ತಮಗೆ ಆಶ್ಚರ್ಯಕರವಾಗಿ ತೋರಿದರೆ ನನಗೆ ಬೇಸರವಿಲ್ಲ. ಅದು ತಮಗೆ ಅಸಹ್ಯವಾಗಿ ಕಂಡರೆ, ನನ್ನನ್ನು ದಯಮಾಡಿ ಕ್ಷಮಿಸಿರಿ. ತಮಗೆ ಇಂದಿನ ದಿನ, ಇಲ್ಲಿನ ಸಂದರ್ಭಗಳು, ವಿಶೇಷವಾಗದಿರಬಹುದು. ಆದರೆ ನನ್ನ ಮಟ್ಟಿಗೆ ಇಂದಿನ ದಿನಕ್ಕಿಂತ ಮಹತ್ವದ ಸುದಿನ ಬೇರೊಂದಿಲ್ಲ. ನನ್ನನ್ನೇ ಪ್ರೀತಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಪ್ರೀತಿಸಿ, ಸಲಹಿ, ಸಾಕಿಬಂದಿರುವ ನನ್ನ ಮುದ್ದು ಎಮಿಲಿಯನ್ನು, ಪುಟ್ಟು ಎಮಿಲಿಯನ್ನು, ಯೋಗ್ಯನಾದ, ದೃಢಕಾಯ, ಸರಳ, ಶಕ್ತಿವಂತ ನಾವಿಕನೊಬ್ಬನಿಗೆ ಮದುವೆ ಮಾಡಿಕೊಡುವ ನಿರ್ಧಾರ ಈಗಲೇ ಆಗಿದೆ. ಮದುಮಗನಾಗತಕ್ಕವನನ್ನೂ ನಾನು ಸಾಕಿ ಬಂದಿರುತ್ತೇನೆ. ಅವನು ತನ್ನ ಸಂಸಾರವನ್ನು ಮರ್ಯಾದೆಯಿಂದ ನಡೆಸಿ ಬರಲು ತ್ರಾಣವಿರುವ ಯುವಕ. ಈ ತರುಣ ತರುಣಿಯರು ಅನಾಥರಾಗಿ ನನ್ನ ಲಾಲನೆಪಾಲನೆಯಲ್ಲಿದ್ದುದು ಮಾತ್ರವಲ್ಲ – ನನ್ನ ಶರೀರದಲ್ಲಿ ಹೃದಯದ ಬಡಿತವಿರುವವರೆಗೆ ಅವರನ್ನು ನನಗೆ ಮಕ್ಕಳಿದ್ದಿದ್ದರೆ ಆ ಮಕ್ಕಳನ್ನು ಪ್ರೀತಿಸುತ್ತಿರಬಹುದಾದುದಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ. ಅವರ ಅಭಿವೃದ್ಧಿ, ಸುಖಸಂತೋಷಗಳಿಗಾಗಿಯೇ ನನ್ನ ಇನ್ನು ಮುಂದಿನ ಜೀವನವೂ ನಡೆಯಬೇಕೆಂದು ನಿಶ್ಚೈಸಿರುವೆನು,"
ಹೀಗಂದುಕೊಂಡು, ತನ್ನ ಬಲವಾದ ಎದೆಯನ್ನು ಮುಟ್ಟಿ ತೋರಿಸಿಕೊಂಡು, ಎಮಿಲಿಯನ್ನು ನೋಡಿ –
"ಮುದ್ದು, ಎಮಿಲೀ, ಈ ಕಡೆ ಬಾ. ನಿನ್ನ ಬಾಲ್ಯದ ಸ್ನೇಹಿತರಾದ ಮಿ. ಡೇವಿಡ್ಡರೂ ಅವರ ಆಪ್ತ ಸ್ನೇಹಿತರಾದ ಮಿ. ಸ್ಟೀಯರ್ಫೋರ್ತರೂ ಇಂದಿನ ಈ ಸುಮುಹೂರ್ತದಲ್ಲೇ ಬಂದಿರುವವರು. ಅದೂ ಒಂದು ಮಹತ್ವದ ಸಂಗತಿಯೇ ಸರಿ. ಅವರು ನಿನ್ನೊಡನೆ ಮಾತಾಡಿ, ನಿನ್ನ ಶುಭವನ್ನು ಕೋರಿ ಹರಸುವರು, ಇತ್ತ ಬಾ ಅಮ್ಮಾ" ಎಂದು ಕರೆದನು.

ಸ್ಟೀಯರ್ಫೋರ್ತನು ಈ ಸಂದರ್ಭಕ್ಕೆ ತಕ್ಕದಾಗಿ, ಗಂಭೀರತೆಯನ್ನು ತಾಳಿ –
"ನೀನೊಬ್ಬ ಬಹುಯೋಗ್ಯ ಗೃಹಸ್ಥ. ಸಂತೋಷದಿಂದ ಬಾಳಿ ಬದುಕಲು ಪರಿಪೂರ್ಣ ಅರ್ಹತೆಯುಳ್ಳವನು. ನಿಮ್ಮ ಹೇಮನೂ ಹಾಗೆಯೇ – ಉತ್ತಮ ಯುವಕನು. ನಿಮಗೆಲ್ಲ ಶುಭವಾಗಲಿ" ಅಂದನು.

ಮಿ. ಪೆಗಟಿಯ ಉತ್ಸಾಹ ಇಳಿಯಲಿಲ್ಲ. ಪುನಃ ಆವೇಶದಿಂದಲೇ ಹೇಳತೊಡಗಿದನು –
"ನನ್ನ ಜೀವಮಾನದ ಕೊನೆಯ ಸಂತೋಷವೇ ಇಂದಿನದು. ನೆಂಟರಿಷ್ಟರ ಸಮಕ್ಷಮದಲ್ಲಿ ಪುಟ್ಟ ಎಮಿಲಿಯ ಭವಿಷ್ಯವನ್ನೆಲ್ಲ ಯೋಗ್ಯ ಪತಿಯ ಕೈಗೆ ಒಪ್ಪಿಸುವ ಇಂದು ದೊರಕಿರುವಂಥ ಮುಹೂರ್ತ ಪುನಃ ಎಂದಿಗೂ ದೊರಕಲಾರದು. ನಾನು ಇಂದೇ ಈಗಲೇ ಸತ್ತರೂ ನಾನು ಸ್ವಲ್ಪವೂ ಚಿಂತಿಸೆನು. ನಾನು ಇನ್ನು ಎಂದು ಸತ್ತರೂ ನನ್ನ ಮನಸ್ಸಿಗೆ ಸಮಾಧಾನವಿದೆ. ಕತ್ತಲೆಯ ರಾತ್ರಿ ಸಮಯ ಸಮುದ್ರದಲ್ಲಿ ಬಿರುಗಾಳಿಯೆದ್ದು, ಯಾರ್ಮತ್ತನ್ನೆ ಅಲೆಗಳು ಬಡಿದು ನಡುಗಿಸುವಾಗ, ನಾನೊಬ್ಬನೇ ಸಮುದ್ರದಲ್ಲಿ ಏಕಾಂಗಿಯಾಗಿ ಊರನ್ನು ಸೇರಲು ಬರುವಾಗ, ಅಲೆಗಳ ಜತೆಯಲ್ಲಿ ಯುದ್ಧಗೈದು, ಸೋತು ಸಮುದ್ರಗತವಾಗುತ್ತಿರುವಾಗ ಯಾರ್ಮತ್ತಿನ ಬೆಳಕನ್ನು ನಾನು ಕೊನೆಯದಾಗಿ ಕಂಡು ಮಡಿಯಬೇಕಾಗುವ ಪ್ರಸಂಗವೇ ಬಂದರೂ ನಾನು ಬೆದರೆನು. ನನ್ನ ಒಲವಿನ ಎಮಿಲಿಯನ್ನು ರಕ್ಷಿಸಿ, ಪೋಷಿಸುವ ಸಮರ್ಥ ಈ ಸ್ಥಳದಲ್ಲಿದ್ದಾನೆಂಬ ನನ್ನ ನಂಬಿಕೆಯೇ ನನ್ನ ಮರಣ ಕಾಲದಲ್ಲು ಸ್ಥಿರ ಶಾಂತಿಯನ್ನು ಕೊಡಬಲ್ಲುದು. ಅಲ್ಲವೇ ಹೇಮ್?" ಎಂದು ಹೇಳುತ್ತಾ ತನ್ನ ಅಭಿಪ್ರಾಯದ ಸಮರ್ಥನೆಗೆ ಹೇಮನ ಕಡೆ ನೋಡಿದನು.

ಹೇಮನು ತನ್ನ ಮುಖಭಾವದಿಂದ ಮುಖ್ಯವಾಗಿಯೂ ಕೈಕರಣ, ಶಬ್ದಗಳಿಂದ ಎರಡನೆಯದಾಗಿಯೂ ಮಿ. ಪೆಗಟಿಯ ಮಾತುಗಳನ್ನು ಸಂತೋಷದಿಂದ ಸಮರ್ಥಿಸಿದನು.

ಹೀಗೆ ನಾವು ಮನಸ್ವೀಯಾಗಿ ಮಾತುಗಳನ್ನು ನಡೆಸಿ, ಅನಂತರ ಊಟ ಮಾಡಿದೆವು. ಊಟವಾದನಂತರ ಕಥೆ, ಚರಿತ್ರೆ, ಪ್ರವಾಸಗಳ ಅನುಭವ ಇತ್ಯಾದಿಗಳನ್ನು ಒಬ್ಬೊಬ್ಬರೇ ತಂತಮಗೆ ತಿಳಿದಷ್ಟನ್ನು ಹೇಳುತ್ತಾ ಕಾಲ ಕಳೆದೆವು. ಈ ಕಥೆ ಹೇಳುವುದರಲ್ಲೂ ಸ್ಟೀಯರ್ಫೋರ್ತನು ಬಹು ಕೌಶಲವುಳ್ಳವನಾಗಿದ್ದನು. ಅವನ ವಾಕ್ಚಾತುರ್ಯ, ವಿವರಣೆಗಳನ್ನೆಲ್ಲ ಎಲ್ಲರೂ ನಿಶ್ಶಬ್ದದಿಂದ ಕೇಳಿ ಆನಂದಿಸಿದರು. ಸ್ಟೀಯರ್ಫೋರ್ತನು ಜನ, ಸಂದರ್ಭಗಳಿಗೆ ತಕ್ಕವಾಗಿ ನಜರು, ಸಹಾಯ ಮೊದಲಾದುವನ್ನು ಕೊಡುವ ಮಾಡುವ ಅನುಭವಿಯಾಗಿದ್ದುದರಿಂದ, ಇಲ್ಲಿಗೆ ಬರುವಾಗಲೇ ಮಿ. ಪೆಗಟಿಗಾಗಿ ಒಂದು ಬಾಟ್ಲಿ (ನಾವಿಕರಿಗೆ ಬಹುಪ್ರಿಯವಾದ ನಮೂನೆಯ)

ವೈನನ್ನು ತಂದಿದ್ದನು. ಅದನ್ನು ಅವನು ಮಿ. ಪೆಗಟಿಗೆ ನಜರಾಗಿ ಕೊಟ್ಟನು. ಅದನ್ನು ಎಲ್ಲರೂ ಸ್ವಲ್ಪ ಸ್ವಲ್ಪ ಕುಡಿದರು. ಅಂದಿನ ಸಂತೋಷಕ್ಕೆ ಒಂದು ಪದವನ್ನು ಹಾಡಬೇಕೆಂದು ಮಿ. ಪೆಗಟಿಗೆ ತೋರಿ ಅವನು ನಾವಿಕರ ಒಂದು ಪದವನ್ನು ಹಾಡಿದನು. ಅವನು ಹಾಡಿದ್ದೋ ಆರ್ಭಟಿಸಿದ್ದೋ ಎಂಬುದನ್ನು ಅವರವರ ಅಭಿರುಚಿ ಪ್ರಕಾರ ನಾವು ಗ್ರಹಿಸಿಕೊಂಡೆವು. ಸ್ಟಿಯರ್ಫೋರ್ತನು ಪ್ರತಿಯಾಗಿ ಒಂದು ಪದವನ್ನು ಹಾಡಿದನು. ಅವನ ಹಾಡುಗಾರಿಕೆ ಎಲ್ಲರನ್ನೂ ಮುಗ್ಧಗೊಳಿಸಿತು. ಸ್ಟೀಯರ್ಫೋರ್ತನ ನಡೆನುಡಿ, ಸಂಗೀತ, ಕಥೆ, ಪ್ರತಿಭೆಗಳನ್ನು ಎಲ್ಲರೂ ಕಂಡು ಬೆರಗಾಗಿ – ಮರುಳಾಗಿ – ಮೈಮರೆತು ಎಲ್ಲರೂ ಒಂದೇ ಸಂಸಾರದವರಂತೆ – ನಾಚಿಕೆ, ಹೇಡಿತನಗಳನ್ನು ಬಿಟ್ಟು – ಬೆರೆತು ಸಂತೋಷಿಸಿದೆವು. ನಮ್ಮ ಕೂಟದ ಪ್ರಾರಂಭ ಭಾಗದಲ್ಲಿ ಸ್ವಲ್ಪ ನಾಚಿಕೆಯಿಂದ ಅಡಗಿ ಕುಳಿತಿದ್ದ ಎಮಿಲಿಯೂ ಸಹ ನಮ್ಮೆಲ್ಲರಂತೆ ಸಲಿಗೆಯಿಂದ ಕೂಟದ ಆನಂದಗಳಲ್ಲಿ ಭಾಗಿಯಾಗಿದ್ದಳು.

ಈ ಸಂತೋಷಕೂಟ ಮುಕ್ತಾಯವಾದನಂತರ ಸ್ಟೀಯರ್ಫೋರ್ತನೂ ನಾನೂ ಅಲ್ಲಿಂದ – ಅವರೆಲ್ಲರಿಂದ ಬೀಳ್ಕೊಳ್ಳಲ್ಪಟ್ಟು – ಹೊರಟೆವು. ನಾವು ಸ್ವಲ್ಪ ದೂರ ಜತೆಯಲ್ಲೇ ಹೋಗಿ, ಅನಂತರ ನಮ್ಮ ನಮ್ಮ ಕಡೆಯ ಸ್ಥಳಗಳಿಗೆ ಹೋಗಬೇಕಾಗಿದ್ದಿತು. ನಾವು ಜತೆಯಲ್ಲೇ ಹೋಗುತ್ತಿದ್ದಾಗ ಸ್ಟೀಯರ್ಫೋರ್ತನು ತುಂಬಾ ಆಲೋಚನೆಗಳಲ್ಲಿದ್ದಂತೆ ತೋರಿದನು. ಅಂತೂ ಆಲೋಚನೆಯೇ ಸ್ಫೋಟನವಾದಂತೆ –
"ಆ ಒರಟು ಕರಡಿ ಹೇಮನು ಸುಂದರೀಮಣಿ ಎಮಿಲಿಗೆ ತಕ್ಕಂಥ ಗಂಡ ಎಷ್ಟು ಮಾತ್ರಕ್ಕೂ ಅಲ್ಲ" ಎಂದನು.
ಸ್ಟೀಯರ್ಫೋರ್ತನು ಬಡವರನ್ನು ಕುರಿತಾಗಿ ಮಾತಾಡುತ್ತಿದ್ದುದೇ ಹೆಚ್ಚಾಗಿ ಹಾಗೆಂದು ತಿಳಿದಿದ್ದ ನಾನು ಸ್ವಲ್ಪ ಬೇಸರದಿಂದಲೇ –
"ಪ್ರೇಮಕ್ಕೆ ಅಂತರಂಗದ ಸೊಬಗು ಮಾತ್ರ ಪ್ರಧಾನವಾದುದು. ಬಹಿರಂಗದ ಒರಟುತನ ನಿರ್ಲಕ್ಷ್ಯವಾದುದಲ್ಲವೇನು, ಸ್ಟೀಯರ್ಫೋರ್ತ್?" ಎಂದು ಕೇಳಿದೆನು.

ಇದಕ್ಕೆ ಸ್ಟೀಯರ್ಫೋರ್ತನು ಯಾವ ಉತ್ತರವನ್ನೂ ಕೊಡದೇ ನಡೆಯುತ್ತಿದ್ದನು. ಸ್ವಲ್ಪ ದೂರ ಹೋಗುತ್ತಾ ಕಳವಳದಿಂದಲೇ ಎಂಬಂತೆ ಮತ್ತೂ ಬಹ್ವಂಶ ಆತ್ಮಗತವೇ ಎಂಬಂತೆ, ನನ್ನನ್ನು ನೋಡಿ ಅವನಂದನು –
"ಡೇವೀ ನಿನ್ನ ಪ್ರಶ್ನೆಗೆ ಉತ್ತರಕೊಡುವ ವಿಷಯ ಹಾಗಿರಲಿ. ನನ್ನ ಮನಸ್ಸಿನ ಗತಿಯನ್ನು ನಿನಗೆ ತಿಳಿಸಲಿಚ್ಛಿಸುತ್ತೇನೆ, ನೋಡು. ನನಗೆ ನಾನೇ ಶತ್ರುವಾಗಿರುವೆನೆಂಬ ಭಾವನೆಯು ನನಗೆ ಕೆಲವೊಮ್ಮೆ ಮೂಡುವುದಿದೆ! ಬಾಲ್ಯದಲ್ಲಿ ಶಿಸ್ತಿಲ್ಲದೆ ಬೆಳೆದವರ ಬಾಳೆಲ್ಲ ಹೀಗೆಯೇ! ಶಿಸ್ತನ್ನು ಬೋಧಿಸಿ ನನ್ನನ್ನು ಬೆಳೆಸಬಲ್ಲ ತಂದೆ ನನಗೆ ಬಾಲ್ಯದಲ್ಲಿ ಇರಬೇಕಿತ್ತು, ಡೇವಿ. ನಿನ್ನ ಪ್ರಶ್ನೆಗೆ ಉತ್ತರಿಸದೆ – ಅಥವಾ ನನ್ನ ಮಾತುಗಳಿಂದ ನಿನಗೆ ನೋವಾದರೆ ಕ್ಷಮಿಸು, ಡೇವಿ. ನಿನಗೆ ಶುಭವಾಗಲಿ!"

ಈ ಮಾತುಗಳು ಅವನ ಅಂತರಂಗದ ವೇದನೆಯಿಂದ ಹೊರಬಂದಂತೆ ತೋರಿದುವು.

ಅನಂತರ ನಾವು ಮುಂದುವರಿಯುವಾಗ, ಸದಾ ಹರ್ಷಚಿತ್ತನಾಗಿರುವ ಅವನ ಸ್ವಭಾವಕ್ಕೆ ಸರಿಯಾಗಿ ಸ್ಟೀಯರ್ಫೋರ್ತನು ಮಿ. ಪೆಗಟಿ ಆರ್ಭಟಿಯಂತೆ ಹಾಡಿದ್ದ ಪದವನ್ನೇ ಬಹು ಮಧುರವಾಗಿ ಹಾಡುತ್ತಾ ನಡೆದನು. ಈ ರೀತಿ ನಾವು ಯಾರ್ಮತ್ ಪಟ್ಟಣದ ಕಡೆಗೆ ಸಾಗಿದೆವು.

ಅಧ್ಯಾಯ ಇಪ್ಪತ್ತೆರಡು

ಹಳೆ ದೃಶ್ಯಗಳನ್ನೂ ಹೊಸ ದೃಶ್ಯಗಳನ್ನೂ ನೋಡುವುದು

ಸ್ಟೀಯರ್ಫೋರ್ತನೂ ನಾನೂ ಸಾಧಾರಣ ಎರಡು ವಾರಗಳವರೆಗೆ ಯಾರ್ಮತ್ತಿನಲ್ಲೇ ಇದ್ದೆವು. ನಾವು ಜತೆಯಿಂದ ತಿರುಗಾಡುವುದೂ ಇತ್ತು. ಒಬ್ಬಂಟಿಗರಾಗಿ ತಿರುಗಾಡುವುದೂ ಇತ್ತು. ಸ್ಟೀಯರ್ಫೋರ್ತನಿಗೆ ನಾವಿಕ ವೃತ್ತಿ ಉಲ್ಲಾಸ ಕೊಡತಕ್ಕ ಒಂದು ಹವ್ಯಾಸವೇ ಆಗಿತ್ತು. ಅವನು ಅದನ್ನೂ ಅಭ್ಯಾಸ ಮಾಡಿದನು. ಅವನು ನಾವಿಕರ ಜತೆಯಲ್ಲಿದ್ದಾಗ ಅವರಿಗಿಂತಲೂ ಒಬ್ಬ ದೊಡ್ಡ ನಾವಿಕನೇ ಆಗಿಬಿಡುತ್ತಿದ್ದನು. ಅವರ ಕುಟುಂಬಗಳಲ್ಲೇ ಜನಿಸಿದ ಒಬ್ಬ ನಾವಿಕನಂತೆ ಅವನು ಅವರೊಡನೆ ವ್ಯವಹಾರ ನಡೆಸುತ್ತಿದ್ದನು. ಮಿ. ಪೆಗಟಿ ಬಹು ಹೊಗಳುತ್ತಿದ್ದ 'ಮೆಚ್ಚಿನ ಮನೆ' ಎಂಬ ಹೆಸರಿನ ಹೋಟೆಲಿನಲ್ಲಿ ಅವನು ನಾವಿಕರಿಗೆಲ್ಲ ಔತಣ ಕೊಡಿಸುವುದೂ ಇತ್ತು. ಕೆಲವೊಮ್ಮೆ ಅವನು ಸಮುದ್ರದಲ್ಲಿ ತಾನೊಬ್ಬನೇ ಕುಳಿತು ದೋಣಿ ಬಿಟ್ಟುಕೊಂಡು ಹೋಗುವುದೂ ಇತ್ತು. ಇಂಥ ಸಂದರ್ಭಗಳಲ್ಲಿ ಸಮುದ್ರದ ಪ್ರಕೋಪಗಳಲ್ಲಿ ಸಿಕ್ಕಿ, ತನ್ನ ಚಮತ್ಕಾರ, ಶಕ್ತಿಗಳನ್ನು ಪ್ರಯೋಗಿಸಿ, ವಿಪತ್ತಿನಿಂದ ಪಾರಾಗಿ ಬಂದಿದ್ದ ಕಥೆಗಳನ್ನೂ ನನಗೆ ತಿಳಿಸುತ್ತಿದ್ದನು. ಈ ವಿಧವಾಗಿ ಅವನು ಅಲ್ಲಿ ತನ್ನ ಕಾಲವನ್ನು ಬಹು ಸಂತೋಷದಿಂದ ಕಳೆಯುತ್ತಿದ್ದನು.

ಸ್ಟೀಯರ್ಫೋರ್ತನು ಈ ವಿಧದ ಸಾಹಸಗಳಲ್ಲಿ ಕಾಲಕಳೆಯುತ್ತಿದ್ದಾಗ ನಾನು ಬ್ಲಂಡರ್ಸ್ಟನ್ನಿಗೆ ಹೋಗಿ ಅಲ್ಲಿ ನಮ್ಮ ಹಳೆ ಮನೆ, ಇಗರ್ಜಿ, ಇಗರ್ಜಿ ವಠಾರದಲ್ಲಿದ್ದ ನನ್ನ ತಂದೆ ತಾಯಿಯರ ಗೋರಿಗಳನ್ನೆಲ್ಲ ನೋಡಿ ಬಂದೆ. ನಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ಒಬ್ಬ ಹುಚ್ಚನನ್ನು ವೈದ್ಯಕೀಯ ಚಿಕಿತ್ಸೆಗಾಗಿ ನಮ್ಮ ಮನೆಯಲ್ಲಿಟ್ಟು ಸಾಕುತ್ತಿದ್ದರು. ಹೂದೋಟ, ಹಣ್ಣಿನ ತೋಟಗಳಲ್ಲೆಲ್ಲ ತುಂಬ ಕಳೆ ಬೆಳೆದಿತ್ತು. ನಮ್ಮ ಎಲ್ಮ್ ಮರಗಳ ಗೆಲ್ಲುಗಳನ್ನೆಲ್ಲ ಕಡಿದು, ಮರದ ಕಾಂಡಗಳು ಮಾತ್ರ ತೆಪ್ಪದಂತೆ ಕಾಣಿಸುತ್ತಿದ್ದುವು. ಮಿ. ಗ್ರೈಪರರ ಕುಟುಂಬ ಅಮೆರಿಕಕ್ಕೆ ಹೋಗಿ ಅಲ್ಲಿ ನೆಲೆಸಿರುವುದಾಗಿ ತಿಳಿದೆನು. ಡಾ. ಚಿಲ್ಲಿಪ್ಪರು ಅವರಿಗಿಂತ ಸ್ವಲ್ಪ ಹೆಚ್ಚು ಪ್ರಾಯವಾಗಿದ್ದ ಹೆಂಗುಸೊಬ್ಬಳನ್ನು ಮದುವೆಯಾಗಿ, ಅವರಿಗೊಬ್ಬ ಗಂಡು ಮಗ ಹುಟ್ಟಿದ್ದ. ಆ ಮಗುವನ್ನೂ ನಾನು ನೋಡಿ ಬಂದೆ. ಡಾಕ್ಟರರ ಮಗುವಾಗಿದ್ದರೂ ಅದು ಬಹು ಕೃಶವಾಗಿತ್ತು. ಅದರಲ್ಲಿ ಎದ್ದು ಕಾಣುವುದು ಮಗುವಿನ ಉಬ್ಬಿದ ಎರಡು (ಪೋಳೆ) ಕಣ್ಣುಗಳು. ತನ್ನಂಥ ಕೃಶದೇಹೀ ಮಗುವನ್ನು ಜನಿಸಲು ಎಡೆಕೊಟ್ಟದ್ದೇಕೆ ಎಂದು ಅದನ್ನು ನೋಡಿದವರನ್ನೆಲ್ಲ ಅದು ಪ್ರಶ್ನಿಸುತ್ತಿರುವಂತೆ ಮಗುವು ನಮ್ಮನ್ನು ನೋಡುತ್ತಿತ್ತು.

ಒಂದಾವೃತ್ತಿ ನಾನು ಸ್ಟೀಯರ್ಫೋರ್ತನನ್ನು ಯಾರ್ಮತ್ತಿನಲ್ಲಿ ಹಠಾತ್ತಾಗಿ ನೋಡಿ ಬರಬೇಕಾದ ಪ್ರಸಂಗ ಬಂತು. ಹಾಗೆ ನಾನು ಸ್ಟೀಯರ್ಫೋರ್ತನನ್ನು ನೋಡಲು ಹೋದಾಗ ಅವನು ಬಹು ಗಾಢವಾದ ಆಲೋಚನೆಯಲ್ಲಿ ಮಗ್ನನಾಗಿದ್ದನು. ಅವನ ಮನಸ್ಸಿನಲ್ಲಿ ಯಾವುದೋ ಒಂದು ಧರ್ಮ ಸಂಕಟವೋ ಅಥವಾ ವ್ಯಾಕುಲವೋ ಇದ್ದವನಂತೆ ಅವನು ತೋರಿದನು. ಇದೇ ಸಮಯದಲ್ಲಿ ಲಿಟ್ಮರನು ಅವನ ತಾಯಿಂದ ಒಂದು ಪತ್ರವನ್ನು ತಂದು ಸ್ಟೀಯರ್ಫೋರ್ತನಿಗೆ ಕೊಟ್ಟಿದ್ದ. ಆ ಪತ್ರದ ಕಾರಣವಾಗಿ ಅವನು ಆ ರೀತಿ ಇದ್ದನೋ ಏನೋ ಎಂದು ನಾನು ಹೇಳಲಾರೆ. ನನ್ನನ್ನು ಗುರುತಿಸಿದ ಕೂಡಲೆ ಅವನು ಮೊದಲಿನ ಸ್ಟೀಯರ್ಫೋರ್ತನೇ ಆಗಿ, ಸಂತೋಷದಿಂದ ಎಂದಿನಂತೆಯೇ ನನ್ನೊಡನೆ ಮಾತಾಡಿದನು. ಅಂತೂ ಆ ದಿನದ ನಾ ಕಂಡ ಅವನ ಮುಖ, ಲಿಟ್ಮರನು ಅಲ್ಲಿಗೆ ಬಂದ ಪ್ರಸಂಗ ಇವೆಲ್ಲ ನನ್ನ ಮನಸ್ಸಿನಲ್ಲಿ ಬಲವಾಗಿ ಚಿತ್ರಿತವಾಗಿವೆ.

ಸ್ಟೀಯರ್ಫೋರ್ತನು ಇತರ ಎಲ್ಲಾ ಗುಣಗಳಲ್ಲೂ ಅಪ್ರತಿಮನೇ ಆಗಿದ್ದಂತೆ, ಔದಾರ್ಯದಲ್ಲು ಅಪ್ರತಿಮನೇ ಆಗಿದ್ದನು. ಮಿ. ಪೆಗಟಿಯ ಆತಿಥ್ಯವನ್ನು ಮೆಚ್ಚಿಯೋ ಅಥವಾ ಮಿ. ಪೆಗಟಿಯ ಜೀವನ ಕ್ರಮಗಳನ್ನು ತಾನೂ ಅಭ್ಯಸಿಸಬೇಕೆಂದೋ ಅಥವಾ ಈ ಎರಡೂ ಸಂದರ್ಭಗಳನ್ನು ಒಂದೇ ಕಾರ್ಯದಿಂದ ನಿರ್ವಹಿಸಲೆಂದೋ ಅವನು ಮಿ. ಪೆಗಟಿಗೆ ಒಂದು ದೋಣಿಯನ್ನು ಉಚಿತವಾಗಿ ಕೊಟ್ಟನು. ಆ ದೋಣಿಗೆ ಮೊದಲಿದ್ದ 'ಮರ್ತುಅವಿಹಾರಿ' ಎಂಬ ಹೆಸರನ್ನು ಬದಲಾಯಿಸಿ, ಈ ಉಚಿತವಾದ ಕೊಡುಗೆಯ ಮೊದಲು 'ಒಲವಿನ ಎಮಿಲಿ' ಎಂದು ಹೆಸರಿಟ್ಟಿದ್ದನು. ಈ ದೋಣಿಯನ್ನು ಕೊಟ್ಟದ್ದನ್ನೂ ಮತ್ತು ಅದರ ಹೆಸರನ್ನೆಲ್ಲ ಹೇಳುವಾಗಲು ಸ್ಟೀಯರ್ಫೋರ್ತನ ಮುಖ ಹಿಂದೊಮ್ಮೆ ನಾನು ಕಂಡಿದ್ದಂತೆ ಒಂದು ಧರ್ಮಸಂಕಟದಲ್ಲೋ ವ್ಯಾಕುಲದಲ್ಲೋ ಇದ್ದಂತೆ ತೋರುತ್ತಿತ್ತು.

ಒಂದು ದಿನ ಸಂಜೆಯಲ್ಲಿ ಸ್ಟೀಯರ್ಫೋರ್ತನೂ ನಾನೂ ಸಮುದ್ರ ದಂಡೆಯಲ್ಲಿ ತಿರುಗಾಡುತ್ತಿದ್ದಾಗ ಎಮಿಲಿಯೂ ಹೇಮನೂ ಕೈ ಕೈ ಹಿಡಿದುಕೊಂಡು ನಮ್ಮ ಎದುರಿನಿಂದ ಬಂದು, ನಮ್ಮನ್ನು ದಾಟಿ ಹೋದರು. ನಮ್ಮನ್ನು ಕಂಡ ಮರುಕ್ಷಣ ಅವರ ನಡುಗೆ ಸ್ವಲ್ಪ ಬದಲಾಯಿತು. ಮಾತ್ರವಲ್ಲದೆ, ಅವರು ಕೈಯ್ಯನ್ನು ಬಿಟ್ಟು ಸ್ವಲ್ಪ ದೂರ ದೂರವಿದ್ದೇ ನಡೆಯುತ್ತಿದ್ದರು. ಇದನ್ನು ತೋರಿಸುತ್ತಾ ಸ್ಟೀಯರ್ಫೋರ್ತನು –
"ನೋಡು ಕಾಪರ್ಫೀಲ್ಡ್, ವೀರ ಯೋಧನು ರಮಣೀಮಣಿಯನ್ನು ರಕ್ಷಿಸುವ ಕ್ರಮ" ಎಂದು ಪರಿಹಾಸ್ಯ ಮಾಡಿದನು. ನಾನು ಯಾವ ಉತ್ತರವನ್ನು ಕೊಡಲಿಲ್ಲ. ಅಷ್ಟರಲ್ಲೇ ನಮ್ಮ ಎದುರಿನಿಂದಲೇ ಮೊದಲು ಹೋದವರಿಬ್ಬರನ್ನು ಬೆನ್ನಟ್ಟಿ ಬರುತ್ತಿದ್ದವಳಂತೆ, ಸಣ್ಣ ಪ್ರಾಯದ ಭಿಕ್ಷುಕಿಯಂತಿದ್ದ, ಕೃಶದೇಹಿ ತರುಣಿಯೊಬ್ಬಳು ಬಂದು ನಮ್ಮನ್ನು ದಾಟಿ ಅವಳ ದಾರಿಯಲ್ಲೆ ತ್ವರಿತದಿಂದ ಹೋದಳು. ಅವಳನ್ನು ಕಂಡು ನನಗೆ ಸ್ವಲ್ಪ ಭಯವೂ ಆಶ್ಚರ್ಯವೂ ಆಯಿತು.

ಮರುದಿನ ಬೆಳಗ್ಗೆ ನಾವು ಕಾಫಿತಿಂಡಿ ತೀರಿಸಿ ಕುಳಿತಿದ್ದಾಗ ಮಿಸ್ ಮೌಚರಳೆಂಬುವಳೊಬ್ಬಳು ಬಂದಿರುವುದಾಗಿ ಲಿಟ್ಮರನು ತಿಳಿಸಿದನು. ಮಿ. ಮೌಚರಳು ಬಂದು ಸ್ಟೀಯರ್ಫೋರ್ತನೊಡನೆ ಮಾತಾಡುವುದನ್ನು ಕಂಡಾಗ ಅವಳ ಪರಿಚಯ ಸ್ಟೀಯರ್ಫೋರ್ತನಿಗೆ ಮೊದಲೇ ಇದ್ದಿರಬೇಕೆಂದು ಗೊತ್ತಾಯಿತು.

ಅವಳೊಬ್ಬ ಕ್ಷೌರಗಿತ್ತಿ. ನಡುಪ್ರಾಯದ ಹೆಂಗುಸು. ಲಕ್ಷಣವಾಗಿದ್ದಳು. ಆದರೆ ಅವಳು ಬಹು ಕುಳ್ಳಿ. ಸೊಂಟದಿಂದ ಮೇಲ್ಭಾಗ ಇತರರಷ್ಟೇ ಎತ್ತರವಾಗಿತ್ತು ಮತ್ತು ಸ್ಥೂಲವಾಗಿದ್ದ ಶರೀರದ ಭಾಗ ಅದಾಗಿತ್ತು. ಅವಳ ಕೈಕಾಲುಗಳೆಲ್ಲ ಬಹು ಗಿಡ್ಡವಾಗಿದ್ದುವು. ತನ್ನ ಚಿರಪರಿಚಿತ ಸ್ಟೀಯರ್ಫೋರ್ತನನ್ನು ಈ ಸ್ಥಳದಲ್ಲಿ ಕಂಡು ಬಹು ಆಶ್ಚರ್ಯದಿಂದ –
"ಅಪ್ಪಾ ಸ್ಟೀಯರ್ಫೋರ್ತ್, ಏನು ಹೊಸ ಸಂಗತಿ ನಡೆಯಲಿದೆ?" ಎಂದು ಕೇಳಿದಳು.

ಸ್ಟೀಯರ್ಫೋರ್ತನಿಗೆ ಅವಳ – ಸಾಧಾರಣ ಎಲ್ಲ ಕ್ಷೌರಿಕರಂತೆ – ವಾಚಾಳಿತನ ಗೊತ್ತಿದ್ದುದರಿಂದಲೋ ಏನೋ ಅವಳ ಉತ್ಸಾಹವೆಲ್ಲಾ ಮಾತಾಡಿ ಮುಗಿಯಲೆಂದು ಮೌನವಾಗಿಯೇ ಕುಳಿತಿದ್ದನು. ಅವಳು ತನ್ನ ಪೂರ್ವದ ಉತ್ಸಾಹದಿಂದಲೇ –
"ಪೋರಾ ಎತ್ತಲಿಂದ ಆಗಮಿಸಿದೆ – ಅದ್ಯಾವ ಹುಡುಗಿಗಾಗಿ? ರಕ್ತ ಕೆಂಪಿರುವವಳೇ? ಗುಲಾಬಿ ವರ್ಣದವಳೇ? ನಿನಗೆ ಯಾವ ಕ್ಷೌರ ಆಗಬೇಕು ಈಗ? ಮೀಸೆ ಬರಿಸಬೇಕೇ? ಗಡ್ಡ ಬೋಳಿಸಬೇಕೇ? ಕ್ರಾಪ್ ಆಗಬೇಕೇ? ರಶ್ಯದ ಚಕ್ರವರ್ತಿಯ ಮೀಸೆ ನಿನಗಿಡಬೇಕೇ? ಹೇಳು, ತಯಾರಿದ್ದೇನೆ" ಎಂದಂದಳು.

ಲಿಟ್ಮರನು ಕ್ಷೌರಕ್ಕಾಗಿ ಮೇಜು ಕುರ್ಚಿಗಳನ್ನು ಹತ್ತಿರವಿಟ್ಟು ಅವಳ ಕಾರ್ಯಕ್ಕೆ ಅಣಿ ಮಾಡಿಕೊಟ್ಟನು. ಮಿಸ್ ಮೌಚರಳು ಕುರ್ಚಿಗೆ ಹತ್ತಿ, ಕುರ್ಚಿಯಿಂದ ಮೇಜಿಗೆ ಹತ್ತಿ, ಮೇಜಿನ ಮೇಲೆ ನಿಂತು ಕುರ್ಚಿಯಲ್ಲಿ ಕುಳಿತ ಸ್ಟೀಯರ್ಫೋರ್ತನಿಗೆ ತನ್ನ ಕತ್ತರಿ, ಕತ್ತಿಗಳಿಂದ ಬಹು ಚುರುಕಾಗಿ ಕ್ಷೌರದ ಕೆಲಸ ಮಾಡತೊಡಗಿದಳು. ಆದರೆ ಅವಳ ಕಸಬಿನ ಪ್ರಚಾರ ಪ್ರಕಟಣೆಗಳನ್ನು ನನಗೆ ತೋರಿಸಲೋಸ್ಕರವೋ ಅಥವಾ ಸ್ವಾಭಾವಿಕವಾಗಿಯೋ ಕತ್ತರಿ ಕೆಲಸದ ಜತೆಗೆ ಅಷ್ಟೇ ಚುರುಕಿನಿಂದ ಮಾತನ್ನೂ ಆಡಲಾರಂಭಿಸಿದಳು. ಅವಳು ನನಗೆ ನಗೆಯಾಡುತ್ತಾ ಅನ್ನತೊಡಗಿದಳು –
"ನಾನು ಎಲ್ಲರಿಗೂ ಬೇಕಾದವಳು. ರಾಜ ಮಹಾರಾಜರಿಗೂ ಶ್ರೀಮಂತರಿಗೂ ವೃದ್ಧರಿಗೂ ತರುಣರಿಗೂ ಬೇಕಾದವಳು. ಮಣಿ ಮಂತ್ರೌಷಧಗಳನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸಬಲ್ಲವಳು. ಎಂಥೆಂಥವರನ್ನು ಮಂತ್ರ ಶಕ್ತಿಯಿಂದ ವಶಪಡಿಸಿಕೊಡಬಲ್ಲೆ. ಕುರೂಪಿಗಳನ್ನು ಸ್ಫುರದ್ರೂಪಿಗಳನ್ನಾಗಿ ಮಾಡಬಲ್ಲೆ. ಕರಿಕೂದಲನ್ನು ಕೆಂಚು, ಕೆಂಚನ್ನು ಕರಿದು, ಬಿಳಿದನ್ನು ಕರೀದು ಮಾಡಬಲ್ಲೆ. ಮೀಸೆಯಿಲ್ಲದವರಿಗೆ ಮೀಸೆಯಿಡ ಬಲ್ಲೆ, ಸ್ಟಿಯರ್ಫೋರ್ತ, ನಿನ್ನ ದೃಷ್ಟಿ ಈಗ ಯಾವ ಮೋಹಿನಿಯ ಮೇಲಿದೆ? ನಿನ್ನ ತಲೆ ಕೂದಲು ಗುಂಗುರು ಗುಂಗುರಾಗಿರಬೇಕೇ? ಅಲೆಯಲೆಯಾಗಿರಬೇಕೇ? ಯಾವ ಹುಡುಗೀ ಮೇಲೆ ಕಣ್ಣಿಟ್ಟಿದ್ದೀ? ನಿನ್ನ ಹೊಸ ಸ್ನೇಹಿತನ ತಂಗೀನೇನಾದರೂ ನೋಡಿದ್ದೀಯೇ? ಯಾರದು, ಹೇಳು" ಎಂದು ಮೊದಲಾಗಿ ವಾಗ್ಝರಿಯನ್ನು ಸುರಿಸಿದಳು.
"ಯಾರ ಮೇಲೂ ಕಣ್ಣಿಡಲಿಲ್ಲ – ಒಬ್ಬ ನಾವಿಕ ಬಾಲಕಿಯ ರೂಪಕ್ಕೆ ಬೆರಗಾಗಿದ್ದೇನೆ ಅಷ್ಟೆ" ಅಂದನು ಸ್ಟೀಯರ್ಫೋರ್ತ್.
"ಅವಳ ಹೆಸರೇನು? 'ಪಾಲೀ' ಎಂದಲ್ಲವೇ?" ಎಂದಂದುಕೊಂಡು ಪಾಲೀ ಹಕ್ಕಿ ನೋಡುವಂತೆ ನನ್ನನ್ನು ನೋಡಿದಳು.
"ಪಾಲಿ ಅಲ್ಲ ಎಮಿಲಿ" ಅಂದನು ಸ್ಟೀಯರ್ಫೋರ್ತ್.
"ಓಹೋ ಎಮಿಲಿ, ತಾನೆ – ಎಲ್ಲರಿಗೂ ಮಿಗಿಲಾದ ಎಮಿಲಿ. ಮಿಲಿಯ ಕೊಟ್ಟರೂ ದೊರಕದ ಎಮಿಲಿ. ಅವಳನ್ನು ಪ್ರೀತಿಸಿದಷ್ಟೇ ದ್ವೇಷಿಸುತ್ತಿದ್ದೀಯ ತಾನೆ? ಏಕೆಂದರೆ, ಅವಳು ಇನ್ನೊಬ್ಬನಲ್ಲಿ ಅನುರಕ್ತಳು. ಒಲವಿಗಾಗಿ ಹಲವು ಆಕರ್ಷಣೆಯನ್ನು ಪ್ರದರ್ಶಿಸಿ ಹಾರಿಸುವ ಎಮಿಲಿ, ನಿನ್ನ ಥಳುಕಿಗೆ ಬಳುಕಿ, ನಿನಗೆ ಬಲಿಯಾಗಲಿರುವ ಎಮಿಲಿ!" ಎಂದು ಕುಚೇಷ್ಟೆ, ವಿನೋದಗಳಿಂದ ಒಂದು ಕವಿತ್ವವನ್ನು ಮೆರೆಸಿದಳು, ಮಿಸ್ ಮೌಚರ್.

"ಹಾಗೇನೂ ಇಲ್ಲ. ಎಮಿಲಿ ಕಡೆಯವರೆಲ್ಲಾ ಯೋಗ್ಯ ಜನರು. ಅವರನ್ನು ಕುರಿತು ಹಗುರವಾಗಿ ಮಾತಾಡಬಾರದು. ಎಮಿಲಿಗೆ ಗಂಡನಾಗುವವನು ಅವಳಿಗೆ ತಕ್ಕಂಥವನಲ್ಲವೆಂಬುದು ಮಾತ್ರ ನನ್ನ ಅಭಿಪ್ರಾಯ" ಎಂದು ಹೇಳಿ, ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದು ಪ್ರಶ್ನಿಸುವವನಂತೆ ಸ್ಟೀಯರ್ಫೋರ್ತನು ನನ್ನ ಮುಖವನ್ನು ನೋಡಿದನು. ಮಿಸ್ ಮೌಚರ್ ಮತ್ತು ಲಿಟ್ಮರನೂ ಸಹ ನನ್ನನ್ನು ಅದೇ ರೀತಿಯಿಂದ ನೋಡಿದರು. ನಾನು ಉತ್ತರವೀಯದೆ ಮೌನವಾಗಿ ಕುಳಿತಿದ್ದೆ. ಕ್ರಮೇಣವಾಗಿ, ನಾನೊಬ್ಬ ತಿಳಿವಳಿಕೆಯಿಲ್ಲದ ಬಡಪಾಯಿ – ಲೋಕಾನುಭವ ಅತಿ ಸ್ವಲ್ಪ ಮಾತ್ರ ಇರುವವನು ಎಂಬ ಅಭಿಪ್ರಾಯ ಅವರೆಲ್ಲರಿಗೂ ಇದ್ದಂತೆ ಅವರ ಮುಖಗಳು ತೋರಿದುವು. ಲಿಟ್ಮರನ ಗಾಂಭೀರ್ಯದ ಹಿಂದೆ ನನ್ನ ಈ ನ್ಯೂನತೆಯನ್ನು ಕುರಿತಾದ ಪರಿಹಾಸ್ಯ ಅಡಗಿ ನಿಂತಿದ್ದಂತೆ ನಾನು ತಿಳಿದೆ!

ಸ್ಟಿಯರ್ಫೋರ್ತನ ಕ್ಷೌರವಾದೊಡನೆ, ಅಲ್ಲಿ ಕ್ಷೌರ ಬೇಕಾದವರು ಬೇರೆ ಯಾರೂ ಇಲ್ಲದಿದ್ದುದರಿಂದ ಮಿಸ್ ಮೌಚರಳು ತನ್ನ ಚಿಕ್ಕ ಕಾಲುಗಳಿಂದ ಪುಟಪುಟನೆ ನಡೆದು ಮಾಯವಾದಳು.

ನಾನು ಆ ದಿನ ರಾತ್ರಿ ಬಾರ್ಕಿಸನ ಮನೆಯಲ್ಲಿರುವುದಾಗಿ ನಿಶ್ಚೈಸಿಕೊಂಡು ಅಲ್ಲಿಗೆ ಹೋದೆನು. ಹೇಮನು ಮನೆಯ ಹೊರಗೆ ನಿಂತಿದ್ದನು. ಮನೆಯ ಒಳಗಿನಿಂದ ಯಾರೋ ಮಾತಾಡುವುದು ಕೇಳಿಸುತ್ತಿತ್ತು. ಹೇಮನು ಒಬ್ಬನೇ ಹೊರಗೆ ನಿಂತಿದ್ದುದು ಏಕೆಂದು ವಿಚಾರಿಸಿದೆನು. ಒಳಗೆ ಮಾತಾಡುತ್ತಿದ್ದವರಿಗೆ ಸ್ವಲ್ಪ ಸಮಯ ಬೇಕಾಗಬಹುದೆಂದು ತಿಳಿಸುತ್ತಾ ಹೇಮನು ಕೆಲವು ವಿಷಯಗಳನ್ನು ಹೇಳಿದನು.

ಒಳಗೆ ಮಾರ್ಥ ಎಂಬ ಹೆಸರಿನ ಒಬ್ಬ ಹೆಂಗುಸಿನೊಡನೆ ಎಮಿಲಿ ಮಾತಾಡುತ್ತಿದ್ದುದೆಂದು ಹೇಳಿದನು. ಮಾರ್ಥಳೂ ಎಮಿಲಿಯೂ ಜತೆಯಲ್ಲೇ ಶಾಲೆಗೆ ಹೋದವರೂ ಜತೆಯಲ್ಲೇ ಓಮರರ ಅಂಗಡಿಯಲ್ಲಿ ಹೊಲಿಗೆ ಕೆಲಸ ಕಲಿತವರೂ ಆಗಿದ್ದರಂತೆ. ಮಾರ್ಥಳು ದುರ್ದಶತೆಗೆ ಬಿದ್ದು, ಈಗ ಎಲ್ಲರಿಂದಲೂ ತ್ಯಜಿಸಲ್ಪಟ್ಟು, ಅನಾಥಳೂ ದರಿದ್ರಳೂ ಆಗಿದ್ದಳಂತೆ. ಹೀಗಾಗಿ ಮಾರ್ಥಳು ಯಾರ್ಮತ್ತನ್ನೇ ಬಿಟ್ಟು ಲಂಡನ್ ಕಡೆಗೆ ಹೋಗಲಿರುವಳೆಂದೂ ಅವಳಿಗೆ ತನ್ನಿಂದ ಸಾಧ್ಯವಿದ್ದಷ್ಟು ಧನ ಸಹಾಯ ನೀಡಬೇಕೆಂದು ಎಮಿಲಿಯೊಡನೆ ಬೇಡಿಕೊಂಡಿದ್ದಳೆಂದೂ ಎಮಿಲಿಯ ಸಮಾಧಾನ ಸಂತೋಷಕ್ಕಾಗಿ ಹೇಮನು ಸ್ವಲ್ಪ ಹಣವನ್ನು ಮಾರ್ಥಳಿಗೆ ಕೊಡುವ ಬಗ್ಗೆ ಎಮಿಲಿಯ ವಶಕ್ಕೆ ಕೊಟ್ಟಿರುವನೆಂದೂ ಆ ಸಂಬಂಧವಾಗಿಯೇ ಅವರು ಮಾತಾಡುತ್ತಿದ್ದರೆಂದೂ ಹೇಮನು ಹೇಳಿದನು.

ಸ್ವಲ್ಪ ಸಮಯದಲ್ಲಿ ಪೆಗಟಿ ಮನೆಯ ಬಾಗಿಲು ತೆರೆದು ನಾವಿಬ್ಬರೂ ಒಳಗೆ ಹೋಗಬೇಕಾಗಿ ತಿಳಿಸಿದಳು. ನಾವಿಬ್ಬರೂ ಒಳಗೆ ಹೋದೆವು. ಆಗ ನಾನು ಅಲ್ಲಿ ಕಂಡ ಸ್ತ್ರೀಯನ್ನು ಸ್ವಲ್ಪ ಮಟ್ಟಿಗೆ – ಒಂದು ವಿಧದಲ್ಲಿ – ಗುರುತಿಸಿದೆ. ಸ್ಟೀಯರ್ಫೋರ್ತನೂ ನಾನೂ ಸಮುದ್ರ ದಂಡೆಯಲ್ಲಿ ತಿರುಗಾಡುತ್ತಿದ್ದಾಗ ಹೇಮನನ್ನು ಎಮಿಲಿಯನ್ನೂ ಬೆನ್ನು ಹಿಡಿದು ಹೋಗಿದ್ದ ಸ್ತ್ರೀ ಇವಳೇ ಎಂಬುದನ್ನು ತಿಳಿದೆನು.

ನಾವು ಒಳಗೆ ಹೋದೊಡನೆ ಎಮಿಲಿ ಹೇಮನನ್ನು ನೋಡಿ –
"ಮಾರ್ಥಳು ಲಂಡನ್ನಿಗೆ ಹೋಗಬೇಕೆಂದಿರುವಳು" ಅಂದಳು.
"ಲಂಡನ್ನಿನಲ್ಲಿ ಮಾಡುವುದೇನಂತೆ" ಎಂದು ಹೇಮನು ಕೇಳಿದ.
ಮಾರ್ಥಳು ಈ ಪ್ರಶ್ನೆಯಿಂದ ಬಹು ವೇದನೆ ಪಟ್ಟಿರುವಂತೆ ತೋರಿದಳು. ಹೇಮನಿಗೆ ಎಲ್ಲವೂ ಗೊತ್ತಿದ್ದೂ ಹೀಗೆ ಪ್ರಶ್ನಿಸಬಹುದೇ ಎಂಬಂತೆ ಹೇಮನನ್ನು ನೋಡುತ್ತಾ ಅವಳಂದಳು –
"ಅಲ್ಲಿ ನನ್ನನ್ನು ಯಾರಿಗೂ ಗೊತ್ತಿಲ್ಲಾ. . . " ಎಂದಷ್ಟೇ ಹೇಳಿ ಅತ್ತಳು.
"ಅವಳು ನ್ಯಾಯವಾದ ರೀತಿಯಲ್ಲಿ ದುಡಿದು ಜೀವಿಸುವ ಸಂಕಲ್ಪ ಮಾಡಿರುವಳು. ಆ ವಿಷಯವನ್ನೆಲ್ಲ ಅವಳು ಅತ್ತೆ ಪೆಗಟಿಯವರ ಹತ್ತಿರ ಹೇಳಿರುತ್ತಾಳೆ. ಈಗ ಅವಳು ಕೇಳಿದಂತೆ ಅವಳಿಗೆ ಸ್ವಲ್ಪ ಹಣ ಕೊಡುತ್ತೇನೆ" ಎಂದು ಹೇಳುತ್ತಾ ಎಮಿಲಿ ಮಾರ್ಥಳಿಗೆ ತನ್ನ ಕೈಯ್ಯಲ್ಲಿದ್ದ ಹಣವನ್ನೆಲ್ಲ ಕೊಟ್ಟಳು.
ಮಾರ್ಥಳು ಅಳುತ್ತ ನಮಗೆಲ್ಲರಿಗೂ ನಮಸ್ಕರಿಸಿ ಅಲ್ಲಿಂದ ಹೋದಳು. ಮಾರ್ಥಳು ಹೋದನಂತರ ಎಮಿಲಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಹೇಮನಿಗೆ ದುಃಖವಾಗಿ –
"ಅಳಬೇಡ ಮುದ್ದೂ. ಅಳುವಷ್ಟರ ಸಂಗತಿ ಏನಾಗಲಿಲ್ಲವಲ್ಲಾ!" ಎಂದು ಹೇಳುತ್ತಾ ಅವಳ ತಲೆಯನ್ನು ಸವರುತ್ತಾ ಸಂತೈಸಲು ಪ್ರಯತ್ನಿಸಿದನು.
"ಹೇಮ್, ನಿನಗೆ ನನ್ನ ಮನಸ್ಸಿನ ಪರಿಸ್ಥಿತಿ ತಿಳಿಯದು" ಎಂದು ಹೇಳಿ ಪೂರೈಸುವುದರೊಳಗೆ ಪುನಃ ಅಳತೊಡಗಿದಳು. ಮತ್ತು, ಅಳುವಿನ ಮಧ್ಯವೇ
"ನಾನು ಇರಬೇಕಾದಷ್ಟು ಒಳ್ಳೆಯ ಹುಡುಗಿಯಲ್ಲ. ನಿಮ್ಮೆಲ್ಲರ ಪ್ರೀತಿ, ಆದರ, ಉಪಕಾರಗಳಿಗೆ ತಕ್ಕವಾದ ಕೃತಜ್ಞತೆಯಿಂದಿರುವವಳು ನಾನಲ್ಲ. ಇದನ್ನು ಗ್ರಹಿಸಿಯೇ ದುಃಖಿಸುತ್ತೇನೆ" ಅಂದಳು ಎಮಿಲಿ.
"ಹಾಗೆ ನೀನನ್ನಬಾರದು ಎಮಿಲೀ. ನೀನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದೀಯಾ. ಪ್ರೀತಿಗಿಂತ ಹೆಚ್ಚಿನದು ನಮಗೇನು ಬೇಕು. ನಿನ್ನ ಗುಣಗಳನ್ನೆಲ್ಲ ನಾ ಬಲ್ಲೆ. ನಿನ್ನಲ್ಲಿ ಯಾವ ದುರ್ಗುಣವೂ ಇಲ್ಲ. ಅರಿಯದ ಹಸುಳೆಯಾಗಿ ಏನೇನೋ ಕಲ್ಪಿಸಿಕೊಂಡು ಅಳುತ್ತಿರುವೆ – ದುಃಖಿಸಬೇಡ" ಅಂದನು ಹೇಮ್.
"ಇಲ್ಲ ಹೇಮ್, ನಿನಗೆ ಗೊತ್ತಿಲ್ಲ. ನಿನಗಿದ್ದಷ್ಟು ಸಮಾಧಾನ ಚಿತ್ತ ನನಗಿಲ್ಲ. ಕ್ಷಮಾಗುಣವೂ ನನಗಿಲ್ಲ. ನಿನ್ನಂತೆಯೇ ಸದ್ಗುಣಿಯಾಗಿರಬೇಕೆಂದು ನಾನು ಬಹುವಾಗಿ ಪ್ರಯತ್ನಿಸಿಯೂ ಸೋತಿದ್ದೇನೆ. ನನ್ನ ಮನಸ್ಸು ಬಹು ಚಂಚಲ. ಅದಕ್ಕಾಗಿಯೇ ದುಃಖಿಸುತ್ತೇನೆ" ಎಂದು ಹೇಳಿ, ಎಮಿಲಿ ನನ್ನನ್ನೂ ಪೆಗಟಿಯನ್ನೂ ನೋಡುತ್ತಾ –
"ಅತ್ತೆ, ನಾನು ಉತ್ತಮ ಮಗಳಾಗುವಂತೆ ನನ್ನನ್ನು ಹರಸು. ಹೇಮ್, ನನ್ನ ಮನಸ್ಸಿನ ಚಾಂಚಲ್ಯದಿಂದ ನಿನ್ನ ದುಷ್ಟ ಪತ್ನಿಯಾಗದಿರುವಂತೆ ಉದ್ಧರಿಸು. ಮಿ. ಡೇವಿಡ್, ನೀವು ನನ್ನ ಬಾಲ್ಯದ ಸ್ನೇಹಿತರು – ಹಿಂದಿನ ನಮ್ಮ ಸ್ನೇಹವನ್ನು ನೆನೆದು ನನ್ನನ್ನು ಉದ್ಧರಿಸಿರಿ. ನನ್ನ ಮನಸ್ಸಿನಲ್ಲಿ ಇಂದು ಎದ್ದಿರುವ ಚಂಡಮಾರುತವನ್ನು ನಿಲ್ಲಿಸುವವರು ಯಾರೂ ಇಲ್ಲವೇ!" ಎಂದನ್ನುತ್ತಾ ವಿಪರೀತವಾಗಿ ಎಮಿಲಿ ಅತ್ತಳು. ತನ್ನ ಬಾಲ್ಯದ ಸ್ನೇಹಿತೆ – ಓಮರರಲ್ಲೂ ಶಾಲೆಯಲ್ಲೂ ಒಟ್ಟಿಗೆ ಕಲಿತವರು ಎಂಬುದಾಗಿ ಮಾರ್ಥಳನ್ನು ಗ್ರಹಿಸಿಯೇ ಎಮಿಲಿ ಹೀಗೆ ಅಳುವುದೆಂಬುದನ್ನು ಗ್ರಹಿಸಿ, ನಮಗೆ ತಿಳಿದ ದಾರಿಗಳಿಂದೆಲ್ಲ ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದೆವು. ಕೊನೆಗೆ ಹೇಗೋ ಅವಳು ಸಮಾಧಾನ ಹೊಂದಿದಳು. ಅನಂತರ ಎಮಿಲಿ ಹೇಮನ ಜತೆಯಲ್ಲಿ ಮಿ. ಪೆಗಟಿಯ ಮನೆಯ ಕಡೆಗೆ ಹೋದಳು.

ಅಧ್ಯಾಯ ಇಪ್ಪತ್ಮೂರು

ಮಿ. ಡಿಕ್ಕರ ಅಭಿಪ್ರಾಯ ಸರಿದೋರಿ ನಾನೊಂದು ವೃತ್ತಿಯನ್ನು ಅವಲಂಬಿಸಿದೆನು

ಮರುದಿನ ಬೆಳಗ್ಗೆ ನಾನು ಎದ್ದ ನಂತರವೂ ಹಿಂದಿನ ದಿನದ ಘಟನೆಗಳು ಮನಸ್ಸಿನಲ್ಲಿ ಎದ್ದು ಕಾಣುತ್ತಿದ್ದುವು. ಅದರಲ್ಲೂ ಮಾರ್ಥಳು ಹೋದನಂತರ ಎಮಿಲಿ ನಮ್ಮೊಡನೆ ಹೇಳಿಕೊಂಡು ಅತ್ತ ಕ್ರಮ, ಮತ್ತೂ ವಿಷಯಗಳು ನನ್ನ ಮನಸ್ಸಿನಲ್ಲಿ ವೇದನೆ ಕೊಡುತ್ತಾ ಕಾಣಿಸಿಕೊಳ್ಳುತ್ತಿದ್ದುವು. ಆ ಎಲ್ಲಾ ವಿಷಯಗಳೂ ನನಗೆ ಪ್ರಸಂಗವಶದಿಂದ ಮಾತ್ರ ಗೊತ್ತಾದುವೇ ಹೊರತು, ಇಲ್ಲದಿದ್ದರೆ ಅವೆಲ್ಲಾ ಗೋಪ್ಯವಾಗಿಯೇ ಉಳಿಯುತ್ತಿದ್ದುವು, ಮತ್ತು ಉಳಿಯತಕ್ಕವುಗಳೂ ಆಗಿದ್ದುವು. ಆದ್ದರಿಂದ ಆ ವಿಷಯಗಳನ್ನೆಲ್ಲ ನಾನೂ ಸಹ ಗೋಪ್ಯವಾಗಿಡುವುದು ನನ್ನ ಕರ್ತವ್ಯವೆಂದು ತಿಳಿದೆನು. ಪರಸಂಸಾರದ ಅಂತರಂಗದ ಭಾವನೆಗಳು, ದುಃಖಗಳು, ಲೋಪದೋಷಗಳು ಬಹು ಗಹನವಾದುವೂ ಮತ್ತು ಗೋಪ್ಯವಾಗಿರಬೇಕಾದುವೂ ಎಂದು ಗ್ರಹಿಸಿಯೇ ನಾನು ಈ ಯಾವ ವಿಷಯವನ್ನು ಸ್ಟೀಯರ್ಫೋರ್ತನಿಗೆ ಸಹ ತಿಳಿಸಲಿಲ್ಲ. ಹಿಂದಿನ ದಿನದ ಎಮಿಲಿಯನ್ನು ಕುರಿತಾದ ಅನುಭವ ಅವಳ ಮೇಲೆ ನನಗಿದ್ದ ಬಾಲ್ಯದ ಪ್ರೇಮವನ್ನು ಮತ್ತಷ್ಟು ಹೆಚ್ಚಿಸಿತು. ಆದ್ದರಿಂದಲೇ ಅವಳನ್ನು ಕುರಿತಾದ ವಿಶಿಷ್ಟ ವಿಷಯಗಳೂ ನನಗೆ ಬಹು ಪೂಜ್ಯವಾಗಿ ತೋರಿದುವು. ಪೂಜ್ಯತೆಯಿಂದಲೇ ಅವನ್ನು ನಾನು ಗೋಪ್ಯವಾಗಿಟ್ಟುಕೊಂಡೆನು.

ಈ ಸಮಯದಲ್ಲೇ ನನಗೆ ಅತ್ತೆಯಿಂದ ಒಂದು ಪತ್ರ ಬಂತು. ನಾನು ನನ್ನ ಜೀವನವೃತ್ತಿಯಾಗಿ ಯಾವುದಾದರೊಂದು ಉತ್ತಮ ವೃತ್ತಿಯನ್ನು ಅವಲಂಬಿಸಬೇಕಾದ ಕಾಲ ಬಂದಿದೆಯೆಂದೂ ಮಿ. ಡಿಕ್ಕರು ಸಹ ಅದೇ ಅಭಿಪ್ರಾಯದಲ್ಲಿರುವರೆಂದೂ ಪತ್ರದಲ್ಲಿ ಬರೆದಿದ್ದಳು. ನಾವು ಆ ಕೂಡಲೇ ಯಾರ್ಮತ್ತಿನಿಂದ ಹೊರಟೆವು.

ನಮ್ಮನ್ನು ಕಳುಹಿಸಿಕೊಡಲು ತುಂಬಾ ಜನರು ನೆರೆದಿದ್ದರು. ನಾವು ಬಂಡಿಯನ್ನೇರಿ, ಬಂಡಿ ಮುಂದುವರಿಯುವಾಗ ಲಿಟ್ಮರನು ಬಹು ಗಂಭೀರವಾಗಿ ನಮಗೆ ನಮಸ್ಕರಿಸುತ್ತ ರಸ್ತೆ ಬದಿಯಲ್ಲಿ ನಿಂತಿದ್ದನು. ಸ್ಟೀಯರ್ಫೋರ್ತನ ಬಾಕಿಯಿದ್ದ ಕೆಲವು ಕೆಲಸಗಳನ್ನು ಪೂರೈಸಿ ಲಿಟ್ಮರನು ಹಿಂತಿರುಗುವುದಾಗಿ ಸ್ಟೀಯರ್ಫೋರ್ತನು ಹೇಳಿದನು.

ನಾವು ಲಂಡನ್ನಿಗೆ ತಲಪಿದ ಕೂಡಲೇ ಸ್ಟೀಯರ್ಫೋರ್ತನು ಅವನ ಕೆಲಸಗಳಿಗಾಗಿ ಬೇರೆ ಕಡೆಗೆ ಹೋದನು. ನಾನು ಅತ್ತೆ ತಿಳಿಸಿದ್ದ ಸ್ಥಳಕ್ಕೆ ಹೋದೆನು. ನಮ್ಮ ತತ್ಕಾಲದ ವಸತಿಗಾಗಿ ಅತ್ತೆ ಲಂಡನ್ನಿನಲ್ಲಿ ಒಂದು ಮನೆಯನ್ನೇ ಬಾಡಿಗೆಗೆ ತೆಗೆದುಕೊಂಡಿದ್ದಳು. ಅತ್ತೆಗೆ ಕತ್ತೆಗಳ ಭಯವಿದ್ದಂತೆಯೇ ಬೆಂಕಿಯ ಭಯವೂ ತುಂಬಾ ಇದ್ದುದರಿಂದ, ಈ ಬಾಡಿಗೆಗೆ ತೆಗೆದುಕೊಂಡಿದ್ದ ಮನೆಯನ್ನು ಬಹುವಾಗಿ ಹುಡುಕಿ ನೋಡಿಯೇ ತೆಗೆದುಕೊಂಡಿದ್ದಳು. ಹಿಂದೆ ಲಂಡನ್ ನಗರಕ್ಕೆ ಬೆಂಕಿ ಬಿದ್ದಿದ್ದ ಚರಿತ್ರೆಯೇ ಅವಳ ಇಂದಿನ ಭೀತಿಗೆ ಕಾರಣವಾಗಿತ್ತು. ಡೋವರಿನ ಮನೆಯನ್ನು ಕತ್ತೆಗಳಿಂದ ರಕ್ಷಿಸುವುದಕ್ಕಾಗಿ ಅತ್ತೆ ಮಿ. ಡಿಕ್ಕರನ್ನು ಡೋವರಿನಲ್ಲೇ ಬಿಟ್ಟು, ಈ ಮನೆಗೆ ಜೇನೆಟ್ಟಳನ್ನು ಮಾತ್ರ ಕರೆದುಕೊಂಡು ಬಂದಿದ್ದಳು. ನಾವು ಈ ಲಂಡನ್ ಮನೆಯಲ್ಲಿ ಕೆಲವು ದಿನಗಳ ಕಾಲ ವಾಸಮಾಡಿಕೊಂಡಿರಬೇಕಾಗಿ ಬಂತು. ಆದರೂ ಅವಳಿಗೆ ಡೋವರಿನ ಕತ್ತೆಯ ಭಯವೂ ಲಂಡನ್ನಿನ ತರಕಾರಿ, ಹಾಲು, ಬೆಣ್ಣೆ, ಮಾಂಸಗಳನ್ನು ಕುರಿತಾದ ಜಿಗುಪ್ಸೆಯೂ ಸ್ವಲ್ಪ ಮಟ್ಟಿಗೆ ಬಾಧಿಸುತ್ತಿದ್ದುವು. ಮಿ. ಡಿಕ್ಕರು ಕತ್ತೆಗಳನ್ನು ಓಡಿಸುವಷ್ಟು ಶಕ್ತರಲ್ಲವೆಂಬುದೇ ಡೋವರಿನ ಮನೆಯ ಕುರಿತಾದ ಭಯ. ಮತ್ತೆ ಲಂಡನ್ ನಗರದ ತರಕಾರಿ, ಹಾಲು ಬೆಣ್ಣೆಗಳೆಲ್ಲ ಹಳ್ಳಿಗಳಲ್ಲಿ ಬೆಳೆಯುವ – ತಯಾರಿಸುವ – ಮಾಲುಗಳಷ್ಟು ರುಚಿಕರವೂ ಹಿತಕರವೂ ಅಲ್ಲವೆಂಬ ಅತ್ತೆಯ ಸಿದ್ಧಾಂತವೇ ಲಂಡನ್ ನಗರದ ಜೀವನದಲ್ಲಿನ ಜಿಗುಪ್ಸೆಯಾಗಿತ್ತು. ನನ್ನ ಜೀವನವೃತ್ತಿ ಯಾವುದಾಗಬಹುದು – ಆಗಬೇಕು – ಎಂಬುದನ್ನೆಲ್ಲ ನಾವು ದಿನದಿನ ವಿಚಾರಿಸಿ, ಆಲೋಚಿಸಿ, ಕೊನೆಗೆ ನಾನು ಒಬ್ಬ 'ಪ್ರೋಕ್ಟರ್' ಆಗುವುದು ಉತ್ತಮವೆಂದು ನಿರ್ಧರಿಸಿದೆವು. ಪ್ರೋಕ್ಟರ್ ಅಂದರೆ ವಕೀಲ ವೃತ್ತಿಯೇ ಆಗಿದ್ದರೂ ವಕೀಲರು – ಎಡ್ವೊಕೇಟರು – ಎಂದನ್ನಿಸಿಕೊಳ್ಳುವ ವೃತ್ತಿಗಿಂತ ಸ್ವಲ್ಪ ಕೆಳಮಟ್ಟದ್ದೆಂದು ತಿಳಿದೆವು. ಈ ವೃತ್ತಿಯಲ್ಲಿ ವಕೀಲರ ಇತರ ಎಲ್ಲಾ ಕೆಲಸಗಳಿದ್ದರೂ ಜಡ್ಜರ ಎದುರು ವಾದಿಸುವ ಅಧಿಕಾರ ಈ ವೃತ್ತಿಯವರಿಗಿರಲಿಲ್ಲ. ಕೊನೆಗೆ ಒಂದು ದಿನ ಈ ಪ್ರೋಕ್ಟರ್ ವೃತ್ತಿಗೆ ಸೇರುವುದು ಎಂದೂ ಆ ಬಗ್ಗೆ ಅತ್ತೆಯೂ ನಾನೂ ಹೋಗುವುದೆಂದೂ ನಿಶ್ಚೈಸಲಾಯಿತು. ಪ್ರೋಕ್ಟರನಾಗಿ ತರಬೇತಿ ಹೊಂದಲು ನಾನು – ನನಗೆ ತರಬೇತಿ ಕೊಡುವ ವಕೀಲರಿಗೆ – ಒಂದು ಸಾವಿರ ಪವನು ಫೀಸು ಕೊಡಬೇಕೆಂಬ ವಿಷಯ ನನಗೆ ಕೆಲವು ಆಲೋಚನೆಗಳನ್ನೆಬ್ಬಿಸಿದುವು. ಅಷ್ಟೊಂದು ಹಣವನ್ನು ನಾನು ಅತ್ತೆಯಿಂದ ಖರ್ಚು ಮಾಡಿಸುವುದು ನ್ಯಾಯವೇ. ಅತ್ತೆಗೆ ಅದು ಸಾಧ್ಯವೇ, ಎಂದು ಹೆದರತೊಡಗಿದೆ. ಹೀಗಾಗಿ, ನಾನೂ ಒಂದು ದಿನ ರಾತ್ರಿ ಅತ್ತೆಯೊಡನೆ ಈ ರೀತಿಯಾಗಿ ಹೇಳಿಕೊಂಡೆನು –

"ಅತ್ತೆ, ನೀನು ನನ್ನ ತಂದೆತಾಯಿಯರ ಸ್ಥಾನದಲ್ಲಿದ್ದು, ಅವರಿಂದಲೂ ಅಸಾಧ್ಯವಾಗಿರಬಹುದಾದ ಉತ್ತಮ ರೀತಿಯಲ್ಲಿ ಸಾಕಿ, ವಿದ್ಯಾದಾನ ಮಾಡಿ, ನನ್ನನ್ನು ಇಂದಿನ ಉತ್ತಮ ಸ್ಥಿತಿಗೆ ತಂದಿರುವೆ. ನಿನ್ನ ಸಹಾಯ, ರಕ್ಷಣೆಗಳಿಲ್ಲದಿದ್ದಿದ್ದರೆ ನಾನೊಬ್ಬ ಅನಾಮಧೇಯ ಕೂಲಿ ಕಸಬಿನವನಾಗಿ ಬದುಕಿರುತ್ತಿದ್ದೆ. ಈವರೆಗಿನ ನನ್ನ ಸಾಕುವಿಕೆಯ ಬಗ್ಗೆ ನಿನಗೆ ತುಂಬಾ ಹಣ ಖರ್ಚಾಗಿರಬೇಕೆಂಬುದು ನಿಸ್ಸಂಶಯ. ಈ ಖರ್ಚಿನ ಜತೆಗೆ ಮುಂದೆ ಈ ಪ್ರೋಕ್ಟರ್ ಕೆಲಸದ ಬಗ್ಗೆ ನಿನ್ನಿಂದ ಪುನಃ ಇಷ್ಟೊಂದು ಹಣ ಖರ್ಚು ಮಾಡಿಸುವುದು ಅನ್ಯಾಯವೆಂದು ನನಗೆ ತೋರುತ್ತದೆ. ಈವರೆಗಿನ ನಿನ್ನ ಸಹಸ್ರಾರು ಉಪಕಾರಗಳನ್ನೆಲ್ಲ ಒಪ್ಪಿ, ಅವುಗಳನ್ನು ಕುರಿತು ತುಂಬಾ ಕೃತಜ್ಞನಾಗಿರುತ್ತಾ ಇನ್ನು

ಮುಂದೆ ಸ್ವಸಾಮರ್ಥ್ಯದಿಂದಲೇ ಜೀವನ ನಡೆಸಬೇಕೆಂದಿದ್ದೇನೆ. ಆದರೆ, ನಾನು ಯಾವ ವೃತ್ತಿಯನ್ನು ಅವಲಂಬಿಸುವುದಿದ್ದರೂ ನಿನ್ನ ಒಪ್ಪಿಗೆ ಬೇಕು. ನಿನ್ನ ಮನಸ್ಸಿಗೆ ಅದರಿಂದ ಸಂತೋಷವಾಗಬೇಕು. ನಿನ್ನ ಅಭಿಪ್ರಾಯವೇನೆಂದು ದಯಮಾಡಿ ತಿಳಿಸಬೇಕು."

ಅತ್ತೆ ಈ ಮಾತುಗಳನ್ನು ಸಾವಧಾನದಿಂದ ಕೇಳಿದಳು. ಅನಂತರ ತುಂಬಾ ಪ್ರೀತಿಯ ಭಾವನೆಗಳನ್ನು ಮುಖದಲ್ಲೂ ಸ್ವರದಲ್ಲೂ ತೋರಿಸುತ್ತಾ –
"ನೀನು ಏನೇನೋ ಗ್ರಹಿಸುತ್ತಿರುವಂತೆ ತೋರುತ್ತದೆ. ನಿನ್ನ ಹೊರತು ನನಗೆ ಬೇರೆ ಬಂಧುಗಳಿಲ್ಲವೆಂಬುದನ್ನು ನೀನು ಮರೆತಿರುವಂತೆ ತೋರುತ್ತದೆ. ನನ್ನ ಜೀವನ ವೃತ್ತಿಯೇ ನಿನ್ನ ಜೀವನವನ್ನು ಸುಖಮಯವಾಗಿ ಮಾಡುವುದೇ ಆಗಿರುವಾಗ, ನಿನ್ನ ಸುಖವು ದೊರಕಿದಾಗಲೇ ನನ್ನ ಸುಖವು ಪೂರ್ಣವಾಯಿತೆಂದು ನಾನು ತಿಳಿಯುತ್ತೇನೆ. ನಿನ್ನ ತಂಗಿ ಬೆಟ್ಸಿಯು ನನಗೆ ಮೋಸ ಕೊಟ್ಟು ಅವಳ ಸ್ಥಾನದಲ್ಲಿ ನೀನು ಎಂದು ಡೋವರಿಗೆ ಬಂದು ನನ್ನನ್ನು ಆಶ್ರಯಿಸಿದೆಯೋ ನಾನು ನಿನ್ನನ್ನು ಸಾಕುವೆನೆಂದು ಮಾತು ಕೊಟ್ಟೆನೋ ಅಂದಿನಿಂದ ನನ್ನ ಜೀವನದಲ್ಲಿ ಸ್ಥಿರವಾದ ಆನಂದಮಯ ಜ್ಯೋತಿಯೇ ಬೆಳಗುತ್ತಿರುವಂತೆ ನನಗೆ ಭಾಸವಾಗುತ್ತದೆ. ಮಗೂ ಚಿಂತಿಸಬೇಡ – ನಿನ್ನ ವಿದ್ಯಾ ವ್ಯಾಸಂಗಕ್ಕೋ ವೃತ್ತಿ ಶಿಕ್ಷಣಕ್ಕೋ ಬೇಕಾಗುವಷ್ಟು ಹಣ ನನ್ನಲ್ಲಿದೆ. ನಿನ್ನ ಜೀವನವು ಉತ್ತಮ ಸ್ಥಿತಿಯಲ್ಲಿ ಸಾಗಿ, ನೀನು ಸಮಾಜದ ಉತ್ತಮ ವರ್ಗದಲ್ಲಿ ಒಬ್ಬ ಗಣನೀಯನಾಗಬೇಕೆಂದು ನಾನು ಈ ಪ್ರಯತ್ನದಲ್ಲಿ ತೊಡಗಿರುವೆನು" ಎಂದು ಆನಂದಾಶ್ರುಗಳನ್ನು ಸುರಿಸುತ್ತಾ ನನ್ನ ಎರಡೂ ಹಸ್ತಗಳನ್ನು ತನ್ನ ಹಸ್ತದಲ್ಲಿಟ್ಟುಕೊಂಡು, ಪ್ರೀತಿಯಿಂದ ಒತ್ತುತ್ತಾ ನನ್ನ ಮನಸ್ಸಿಗೆ ಅಂಟುವಂತೆ ಹೇಳಿದಳು.

ಮರುದಿನ ಅತ್ತೆಯೂ ನಾನೂ ವಕೀಲರ ಸಂಘಕ್ಕೆ ಹೋದೆವು. ನಮ್ಮ ಆ ದಿನದ ತಿರುಗಾಟದ ಒಂದು ಪ್ರಸಂಗವನ್ನು ಇಲ್ಲಿ ಹೇಳಬೇಕಾಗಿದೆ. ಲಂಡನ್ ನಗರದಲ್ಲಿ ಅತ್ತೆಗೆ ಬೆಂಕಿಯ ಭಯವಿದ್ದಂತೆಯೇ ಕಳ್ಳರ ಭಯವೂ ಇತ್ತು. ಇದಕ್ಕಾಗಿ ಅವಳ ಹತ್ತಿರವಿದ್ದ ಹಣದ ಚೀಲವನ್ನು ನನ್ನ ವಶಕ್ಕೆ ಒಪ್ಪಿಸಿದಳು. ಅದರಲ್ಲಿ ಸ್ವಲ್ಪ ಚಿಲ್ಲರೆ ನಾಣ್ಯಗಳೂ ಇಪ್ಪತ್ತೊಂದು ಪವನೂ ಇದ್ದುವು. ನಾವಿಬ್ಬರೂ ವಕೀಲರ ಸಂಘದ ಕಡೆಗೆ ನಡೆದು ಹೋಗುತ್ತಿದ್ದಾಗ, ಇದ್ದಕ್ಕಿದ್ದ ಹಾಗೆಯೇ ಅತ್ತೆಯ ಮುಖವು ವಿವರ್ಣವಾಯಿತು. ಅವಳ ಗಾಬರಿಗೆ ಕಾರಣವೇನಿರಬೇಕೆಂದು ನಾನು ಅತ್ತಿತ್ತ ನೋಡುವಾಗ ನಮ್ಮ ಹಿಂದುಗಡೆಯೇ ದೃಢಕಾಯನಾಗಿದ್ದ ಭಿಕ್ಷುಕನೊಬ್ಬನು ಬರುತ್ತಿದ್ದುದನ್ನು ಕಂಡೆನು. ಈ ಭಿಕ್ಷುಕನನ್ನು ಕಂಡು ಅತ್ತೆ ಗಾಬರಿಗೊಂಡದ್ದಿರಬಹುದೆ" ಎಂದು ನಾನು ಯೋಚಿಸಿ, ಅವನನ್ನು ಗದರಿಸಬೇಕೆನ್ನುವಷ್ಟರಲ್ಲೇ ಅತ್ತೆ –
"ಡೇವಿಡ್, ಒಂದು ಜಟ್ಕಾ ತೆಗೆದುಕೊಂಡು ಬಾ – ಕೂಡಲೇ ಬಾ – ನಾನು ಅವನ ಜತೆಯಲ್ಲಿ ಹೋಗಬೇಕು" ಎಂದಂದಳು. ಅತ್ತೆಯ ಕ್ರಮ ನಿಯಮಗಳನ್ನೆಲ್ಲ ನಾನು ಅರಿತಿದ್ದುದರಿಂದ, ಮುಂದೇನೂ ಮಾತಾಡದೆ ಜಟ್ಕವನ್ನು ತರಲು ಹೋದೆನು. ನಾನು ಜಟ್ಕವನ್ನು ತರಲು ಹೊರಟಾಗಲೇ ಅತ್ತೆ ಹಣದ ಚೀಲವನ್ನು ನನ್ನಿಂದ ತೆಗೆದುಕೊಂಡಳು. ನಾನು ಜಟ್ಕವನ್ನು ತಂದ ಕೂಡಲೆ – ನಾನು ಅರ್ಧ ಘಂಟೆಯ ನಂತರ ವಕೀಲರ ಸಂಘದ ಎದುರುಗಡೆ ಸಿಕ್ಕಬೇಕೆಂದು ಅತ್ತೆ ನನಗೆ ತಿಳಿಸಿ – ಅವರಿಬ್ಬರೂ ಜಟ್ಕದಲ್ಲಿ ಕುಳಿತು ಓಡಿದರು.

ನಾನು, ಗಾಬರಿಯಿಂದಲೂ ಆಶ್ಚರ್ಯದಿಂದಲೂ ಕೌತುಕದಿಂದಲೂ ವಕೀಲರ ಸಂಘದ ಕಡೆಗೆ ನಡೆದೆನು. ಒಬ್ಬ ಹುಚ್ಚ ಅತ್ತೆಯನ್ನು ಹೆದರಿಸಿದನೆಂದು ಹಿಂದೆ ನಾನು ಮಿ. ಡಿಕ್ಕರು ಹೇಳಿದ್ದ ಸಂಗತಿಗೂ ಇಂದಿನ ಪ್ರಸಂಗಕ್ಕೂ ಏನಾದರೂ ಸಂಬಂಧವಿರಬಹುದೇ ಎಂಬ ಕೌತುಕವೂ ನನ್ನಲ್ಲುಂಟಾಯಿತು.

ನನ್ನತ್ತೆಯಂಥ ಧೈರ್ಯಸ್ಥೆ, ದೃಢಮನಸ್ಸಿನವಳನ್ನು ಹೆದರಿಸಿದ್ದ ಈ ಭಿಕ್ಷುಕ ಯಾರಿರಬಹುದೆಂದು ನಾನು ತಿಳಿಯಲಾರದೆ ಹೋದೆನು. ಅರ್ಧ ಘಂಟೆಯನಂತರ ಅತ್ತೆ ಬಂದು ನನ್ನ ಜತೆ ಸೇರಿದಳು. ಆಗಲೂ ಅತ್ತೆ ಪೂರ್ಣ ಶಾಂತವಾದಂತೆ ತೋರಲಿಲ್ಲ. ಅವಳು ಶಾಂತವಾಗುತ್ತ ಹೋದ ಹಾಗೆ ಅವಳ ಕೈಯ್ಯಲ್ಲಿದ್ದ ಹಣದ ಚೀಲವನ್ನು ಪುನಃ ನನ್ನ ವಶಕ್ಕೆ ಕೊಟ್ಟಳು. ಆಗ ಆ ಚೀಲದಲ್ಲಿ ಚಿಲ್ಲರೆ ನಾಣ್ಯಗಳು ಮಾತ್ರವಿದ್ದುವೇ ಹೊರತು ಪವನುಗಳು ಇರಲಿಲ್ಲ.

ಅನಂತರ ನಾವು 'ಸ್ಪೆನ್ಲೋ ಮತ್ತೂ ಜಾರ್ಕಿನ್ಸ್' ಎಂಬ ಇಬ್ಬರು ವಕೀಲರ ಜತೆ ಕೂಟದ ಆಫೀಸಿಗೆ ಹೋದೆವು. ಆ ಕೂಟ ಒಂದು ಸಾವಿರ ಪವನು ಫೀಸನ್ನು ಪಡೆದುಕೊಂಡು ನನಗೆ ಪ್ರೋಕ್ಟರ್ ಕೆಲಸದಲ್ಲಿ ತರಬೇತಿ ಕೊಡಲು ಒಪ್ಪಿತ್ತು. ಆ ಕೂಟದ ಮುಖ್ಯ ಪಾಲುಗಾರರ ಆಫೀಸಿಗೆ ನಾವು ಹೋಗಿ ಕುಳಿತೆವು. ಮಿ. ಸ್ಪೆನ್ಲೋರವರು ಬಹು ವಿನಯ ಸಂಪನ್ನರು. ತುಂಬಾ ಹಿಟ್ಟು ಬೆರೆಸಿ ಇಸ್ತ್ರಿ ಮಾಡಿದ್ದ ಕರಿಕೋಟನ್ನೂ ಅದಕ್ಕೆ ತಕ್ಕದಾದ ಕಪ್ಪು ಶರಾಯಿಯನ್ನೂ ಧರಿಸಿ, ತಮ್ಮ ಕುರ್ಚಿಯಲ್ಲಿ ನೆಟ್ಟಗೆ ಕುಳಿತು ಮಾತಾಡಿದರು. ಅವರು ಅತ್ತೆಯೊಡನೆ ಮೊದಲೇ ಮಾತಾಡಿದ್ದುದರಿಂದ, ನನ್ನನ್ನು ನೋಡಿ –
"ನಿಮ್ಮನ್ನು ಇಲ್ಲಿ ಸೇರಿಸುವುದನ್ನು ಕುರಿತು ಮಿಸ್ ಟ್ರಾಟೂಡರವರು ಈ ಮೊದಲೇ ನನ್ನೊಡನೆ ಎಲ್ಲಾ ವಿವರಗಳನ್ನೂ ವಿಚಾರಿಸಿಕೊಂಡಿರುವರು. ಆದರೂ ಪ್ರೋಕ್ಟರ್ ಆಗಲಿರುವ ನಿಮ್ಮ ಅಭಿಪ್ರಾಯವನ್ನು ನಾನು ವಿಚಾರಿಸುವುದು ಅಗತ್ಯ. ನಿಮ್ಮದೇನಾದರೂ ಅಭಿಪ್ರಾಯವಿದ್ದರೆ ತಿಳಿಸಿ" ಅಂದರು.

“ಸರ್, ಈ ವೃತ್ತಿಯಲ್ಲಿ ನನಗೆ ಮನಸ್ಸಿದೆ. ಆದರೆ ಮುಂಗಡವಾಗಿ ಕೊಡಬೇಕಾದ ಹಣವನ್ನು ಸ್ವಲ್ಪವಾದರೂ ಕಡಿಮೆ ಮಾಡಲು ಅನುಕೂಲವಿದೆಯೇ? ಮತ್ತೂ ಕೆಲವು ದಿನಗಳಾದರೂ ಪರೀಕ್ಷಾರ್ಥವಾಗಿ ನಾನಿಲ್ಲಿ ಅಭ್ಯಾಸ ಮಾಡಿ ನೋಡಿ, ನನಗೆ ಒಪ್ಪಿಗೆಯಾದರೆ ಮಾತ್ರ ಪೂರ್ಣ ಫೀಯನ್ನು ಕೊಟ್ಟು ಬರಬಹುದೇ ಎಂಬ ವಿಷಯದಲ್ಲಿ ತಮ್ಮ ಕಂಪೆನಿಯ ಅಭಿಪ್ರಾಯವನ್ನು ತಿಳಿಸಿದರೆ ಆಗಬಹುದು” ಅಂದೆನು ನಾನು.

ಅದಕ್ಕೆ ಮಿ. ಸ್ಪೆನ್ಲೋರವರು –
“ನಿಮ್ಮ ಪ್ರಶ್ನೆಯು ಬಹು ನ್ಯಾಯವಾದುದು. ನಾವು ಅಗತ್ಯವಾಗಿ ಗ್ರಹಿಸಬೇಕಾದುದು. ಸಾವಿರ ಪವನೆಂದರೆ ಅಲ್ಪದ ಮೊಬಲಗಲ್ಲ. ನಮ್ಮ ಸ್ನೇಹಿತರ ಹಿತವನ್ನು ಸಹ ನಾವು ಗಮನಿಸಿದರೇನೇ ನಮ್ಮ ವೃತ್ತಿಯು ಸಾಗುವುದು. ಸರಿ, ನೀವಂದಂತೆಯೇ ಪರೀಕ್ಷಾರ್ಥ ಕಾಲವಾಗಿ ನೀವು ಒಂದು ತಿಂಗಳನ್ನು ಉಪಯೋಗಿಸಿಕೊಳ್ಳಬಹುದು. ಅನಂತರವೇ ನಮ್ಮ ಎಗ್ರಿಮೆಂಟನ್ನು ರಿಜಿಸ್ಟ್ರಿ ಮಾಡಿಕೊಳ್ಳೋಣ. ಇನ್ನು ಸಾವಿರ ಪವನಿಗಿಂತ ಕಡಿಮೆ ಫೀಸು ಮಾಡುವ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ನಿಮ್ಮ ಕೈಯಿಂದ ಒಂದು ಸಾವಿರ ಪವನು ಹೋಗುವುದು ನಿಜವಾದರೂ ನಮ್ಮ ಕೈಗೆ ಅಷ್ಟೆಲ್ಲ ಹಣ ಪೂರ್ತಿಯಾಗಿ ಬರುವುದಿಲ್ಲ. ಅದರಿಂದಲೇ ಸ್ಟಾಂಪ್ ಡ್ಯೂಟಿ, ರಿಜಿಸ್ಟ್ರೇಷನ್ ಫೀ ಮೊದಲಾದದ್ದು ಸಲ್ಲಬೇಕಷ್ಟೆ. ಇದು ಅಲ್ಲದೆ – ಇದಕ್ಕಿಂತಲೂ ಹೆಚ್ಚಾಗಿ – ನಮ್ಮಲ್ಲಿಗೆ ಬರುವವರ ವ್ಯವಹಾರ ಜ್ಞಾನವಿರುವ ನಾನೊಬ್ಬನೇ ಈ ಕಂಪೆನಿಯ ಪಾಲುಗಾರನಲ್ಲವೆಂಬುದನು ನಿಮಗೆ ತಿಳಿಸಬೇಕಾಗಿದೆ. ಜತೆ ಕೂಟಗಳಲ್ಲಿ ಕೂಟದವರ ಅಭಿಪ್ರಾಯದಂತೆ ನಡೆಯದಿದ್ದರೆ, ಕೂಟಗಳೇ ಉಳಿಯಲಾರವಷ್ಟೆ. ಮಿ. ಜಾರ್ಕಿನ್ಸರು ನಮ್ಮ ಕೂಟದ ಇನ್ನೊಬ್ಬ ಪಾಲುಗಾರರು – ಸ್ವಲ್ಪ ಖಂಡ ತುಂಡವಾಗಿ ವರ್ತಿಸುವವರು. ನಾನು ಹೇಳಿರುವ ಫೀಸಿಗಿಂತ ಸ್ವಲ್ಪ ಹೆಚ್ಚನ್ನೇ ಫೀಸಾಗಿ ವಸೂಲ್ಮಾಡಬೇಕೆಂದು ಹೃತ್ಪೂರ್ವಕವಾಗಿ ಹೇಳಲು ಹೆದರುವವರಲ್ಲ. ನಿಮಗೆ ಯುಕ್ತ ಕಂಡರೆ ಅವರನ್ನೂ ಬೇಕಾದರೆ ವಿಚಾರಿಸೋಣ” ಅಂದರು.

ಇಷ್ಟೊಂದು ವಿನಯಸಂಪನ್ನರೂ ತಮ್ಮ ಸ್ನೇಹಿತರ ಹಿತರಕ್ಷಕರೂ ಆಗಿರುವ ಮಿ. ಸ್ಪೆನ್ಲೋರವರನ್ನು ಮೀರಿ, ಖಂಡ ತುಂಡವಾಗಿ ನಿರ್ದಾಕ್ಷಿಣ್ಯದಿಂದ ವರ್ತಿಸುವ ಮಿ. ಜಾರ್ಕಿನ್ಸರನ್ನು ಕಾಣುವ ಅಗತ್ಯವಿಲ್ಲವೆಂದು ನಾನು ಆ ದಿನವೇ ಅವರ ಕೈಕೆಳಗಿನ ತರಬೇತಿಯ ಬಗ್ಗೆ ಆ ಜತೆಕೂಟದಲ್ಲಿ ದಾಖ್ಲು ಆದೆನು.

ಆದರೆ ನಾನು ಈ ಜತೆಕೂಟವನ್ನು ಸೇರಿ, ಅವರ ಪೈಕಿಯವನೇ ಒಬ್ಬನಾಗಿ ಪಾಠಗಳನ್ನು ಅಭ್ಯಾಸ ಮಾಡುವಾಗ ಉಗ್ರಸ್ವಭಾವದವರೆಂದು ಗ್ರಹಿಸಲ್ಪಡುತ್ತಿದ್ದ ಮಿ. ಜಾರ್ಕಿನ್ಸರ ಪರಿಚಯವು ನನಗೆ ಆಗುತ್ತಾ ಬಂತು. ಮಿ. ಜಾರ್ಕಿನ್ಸರಿಗೆ ಮಾತಾಡಲೂ ಸಾಕಷ್ಟು ಬರುತ್ತಿರಲಿಲ್ಲ – ಅವರು ಬರೇ ಹೆಡ್ಡರಾಗಿದ್ದರು. ಬಾಹ್ಯದಿಂದ ಕಠೋರವಾಗಿ ಕಾಣುತ್ತಿದ್ದ ವ್ಯಕ್ತಿಯನ್ನು ತೋರಿಸಿ, ಅವರನ್ನು ಕುರಿತಾಗಿ ಅಗತ್ಯಬಿದ್ದಂತೆ ವರ್ತಮಾನಗಳನ್ನು ನಿರ್ಮಿಸಿ, ಪ್ರಕಟಿಸಿ, ತಮ್ಮ ಜತೆಕೂಟದ ಹಣ ಸಂಪಾದನೆಯ ಅತಿಯಾದ ಲಾಲಸೆಯನ್ನು ತೃಪ್ತಿಗೊಳಿಸಿಕೊಂಡು ಹಣ ಸಂಗ್ರಹಿಸುತ್ತಿದ್ದುದು ಬಾಹ್ಯದಲ್ಲಿ ಬಹು ನಯವಿನಯವಂತರಾಗಿದ್ದ ಮಿ. ಸ್ಪೆನ್ಲೋರವರಾಗಿದ್ದರು. ನಮ್ಮ ನಗರದ ಅನೇಕ ಕೂಟ ಸಂಸ್ಥೆಗಳಲ್ಲೆಲ್ಲ ಈ ವಿಧದ ದ್ವಿಮುಖ ವ್ಯವಸ್ಥೆಯಿದೆಯೆಂದು ಕ್ರಮೇಣವಾಗಿ ನಾನು ತಿಳಿದುಕೊಂಡೆನು. ಇಲ್ಲಿ ಮಿ. ಸ್ಪೆನ್ಲೋರವರ ಬಹು ವಿನಯ, ಗಾಂಭೀರ್ಯ, ಠೀವಿ, ವಾಕ್ಚಾತುರ್ಯಗಳಿಂದ ಜನರನ್ನೂ ಹಣವನ್ನೂ ಆಕರ್ಷಿಸಿ, ತಮ್ಮ ಸಂಸ್ಥೆಯನ್ನು ಅಭಿವೃದ್ಧಿಗೊಳಿಸುತ್ತಿದ್ದರು.

ಅಲ್ಲಿನ ಕೋರ್ಟುಗಳನ್ನೆಲ್ಲಾ ಮೊದಲ ಬಾರಿಗೆ ಕರೆದುಕೊಂಡು ಹೋಗಿ ತೋರಿಸಿದವರೂ ಮಿ. ಸ್ಪೆನ್ಲೋರವರೇ. ಕಪ್ಪು ಬಣ್ಣದ ದೊಡ್ಡ ದೊಡ್ಡ ಕೋಟುಗಳನ್ನು ಧರಿಸಿದ್ದ ವಕೀಲರುಗಳಿಂದಲೂ ಈ ಅದೇ ಬಣ್ಣದ ಅದೇ ಮಾದರಿಯ ಉಡಿಗೆಯಿದ್ದು ಎತ್ತರದಲ್ಲಿ ಬಹು ಭೂಷಣಪ್ರಾಯವಾದ ಆಸನಗಳಲ್ಲಿ ಕುಳಿತಿರುತ್ತಿದ್ದ ಜಡ್ಜರುಗಳಿಂದಲೂ ನಾನಾ ಪ್ರಾಯ, ಸ್ವರೂಪ, ಅವಸ್ಥೆಗಳಲ್ಲಿದ್ದ ಕಕ್ಷಿಕಾರರಿಂದಲೂ ಪೇದೆ, ಪೋಲೀಸ್, ನೌಕರರ ಸಮೂಹಗಳಿಂದಲೂ ಕೋರ್ಟೂ, ಕೋರ್ಟ್ ವಠಾರವೂ ತುಂಬಿಹೋಗಿತ್ತು. ಅಲ್ಲಿನ ಮಾನಸಿಕ ವಾತಾವರಣವೇ ಗಾಂಭೀರ್ಯದಿಂದ ತುಂಬಿತ್ತು. ಗಾಂಭೀರ್ಯದ ಜತೆಗೆ ಸ್ವಲ್ಪ ಭೀತಿಯೂ ಕೂಡಿದಂತಿತ್ತು. ಅಲ್ಲಿನ ಸನ್ನಿವೇಶಗಳೂ ವ್ಯವಸ್ಥೆಗಳೂ ಅನಾದಿಯಿಂದ ಮೂಂದುವರಿದು ಬಂದು, ಮುಂದೆ ಶಾಶ್ವತವಾಗಿ ಇರುವುದೆಂಬಂತೆ ತೋರುತ್ತಿದ್ದುವು. ಸಮಾಜವಿದ್ದಷ್ಟು ದಿನ ಆ ಕೋರ್ಟುಗಳೂ ಇರುತ್ತ ಸಮಾಜದ ಸುವ್ಯವಸ್ಥೆಗೆ ಆಧಾರಭೂತವಾಗಿರುವ ಆ ನ್ಯಾಯಾಲಯಗಳಲ್ಲಿ ವೃತಿಯನ್ನು ಕೈಕೊಳ್ಳುವ ಘನಸ್ಥಿಕೆಯನ್ನು ಗ್ರಹಿಸಿ, ನನಗೆ ನನ್ನ ವೃತ್ತಿಯಲ್ಲಿ ಅಭಿರುಚಿಯುಂಟಾಯಿತು.

ನನ್ನ ಪ್ರೋಕ್ಟರ್ ತರಬೇತಿ ಕಾಲದಲ್ಲಿ ನಾನಿರಲು ನನಗೊಂದೆರಡು ಬಾಡಿಗೆ ಕೋಣೆಗಳನ್ನೂ ನನ್ನ ಗೃಹಕೃತ್ಯದ ಆನುಕೂಲ್ಯಗಳನ್ನು ಒದಗಿಸಿ, ಸರಿಮಾಡಿಟ್ಟು ಬರಲು ತಕ್ಕಂಥ ಕೆಲಸದವಳೊಬ್ಬಳನ್ನು ಅತ್ತೆಯೇ ಏರ್ಪಡಿಸಿ ಕೊಟ್ಟಳು. ನನ್ನ ಕೋಣೆಗಳು ಬಾಡಿಗೆಯವಾಗಿದ್ದುವು. ಮಿಸೆಸ್ ಕೃಪ್ಸ್ ಎಂಬಾಕೆ ಸಂಬಳದ ಕೆಲಸದವಳಾಗಿ, ಗೃಹಕೃತ್ಯ ವಹಿಸಿದ್ದಳು.

ಅಧ್ಯಾಯ ಇಪ್ಪತ್ನಾಲ್ಕು

ದುರ್ವ್ಯಸನದ ನನ್ನ ಪ್ರಥಮ ಅನುಭವ

ಸ್ವಂತ ಮನೆ, ಸ್ವಂತವಾದ ಅಡಿಗೆಯ ಏರ್ಪಾಡುಗಳು, ಇಷ್ಟ ಬಂದಾಗ ಮನೆಯಿಂದ ಹೊರಹೋಗಲೂ ಇಷ್ಟ ಬಂದಾಗ ಮನೆಗೆ ಬಂದು ಸೇರಲೂ ಸ್ವಾತಂತ್ರ್ಯ, ಬೇಕಾದವರನ್ನು ಮನೆಗೆ ಆಮಂತ್ರಿಸಿ ಉಪಚರಿಸುವ ಅನುಕೂಲ್ಯಗಳು, ಮನೆ ಬೀಗದ ಕೈಗಳನ್ನು ಜೇಬಿನಲ್ಲಿಟ್ಟುಕೊಂಡು ಲಂಡನ್ ನಗರದಲ್ಲಿ ಎಲ್ಲಿ ಬೇಕಾದರಲ್ಲಿ ತಿರುಗಾಡಿ ಬರಲೂ ನನ್ನ ತರಬೇತಿಗೆ ಸಂಬಂಧಪಟ್ಟು, ಆ ಬಗ್ಗೆ ಬೇಕಾಗುವಷ್ಟೂ ಸಹ ನನಗೆ ದೊರಕಿದ್ದ ಸಮಯದ ಅನುಕೂಲ್ಯ – ಈ ಎಲ್ಲವೂ ಏಕಕಾಲದಲ್ಲಿ ದೊರೆತ ಪ್ರಥಮಾನುಭವ ಬಹು ಸಂತೋಷಕರವಾಗಿತ್ತು. ಈ ಸಂತೋಷದ ಜತೆಯಲ್ಲೇ ಮಿ. ವಿಕ್ಫೀಲ್ಡರ ಮನೆಯಲ್ಲಿ ಕಳೆದಿದ್ದ ದಿನಗಳ ನೆನವರಿಕೆ ಮತ್ತೂ ಏಗ್ನೆಸ್ಸಳ ಸ್ನೇಹ ಪರಿಚಯಗಳ ನೆನವರಿಕೆಗಳು ನನ್ನ ಈ ಏಕಾಂಗೀ ಜೀವನಕ್ಕೆ ಸ್ವಲ್ಪ ಬೇಸರವನ್ನೂ ಬೆರೆಸಿದ್ದುವು. ಆದರೂ ನನ್ನ ಜೀವನದಲ್ಲಿನ ಮುಖ್ಯ ಗುರಿ ನಿಶ್ಚಯವಾಗಿದ್ದು, ಆ ಗುರಿ ಸಾಧನೆಯನ್ನು ಕುರಿತು ನಾನು ಶ್ರದ್ಧೆ ವಹಿಸುತ್ತಿದ್ದುದರಿಂದ ಈ ನೂತನ ಜೀವನ ಕ್ರಮ ಬಹುಮಟ್ಟಿಗೆ ಸಂತೋಷದಾಯಕವೇ ಆಗಿತ್ತು.

ಸ್ಟೀಯರ್ಫೋರ್ತನನ್ನು ಕಾಣದೆ ಸ್ವಲ್ಪ ಬೇಸರವಾಗುತ್ತಿತ್ತು. ಹಾಗಾಗಿ ಅವನನ್ನು ಹುಡುಕುತ್ತಾ ಒಂದು ದಿನ ಅವನ ಮನೆಗೇ ಹೋದೆನು. ಆದರೆ ಅಲ್ಲಿಯೂ ಸ್ಟೀಯರ್ಫೋರ್ತನಿರಲಿಲ್ಲ. ಅವನು ತನ್ನ ಆಕ್ಸ್ಫರ್ಡ್ ಸ್ನೇಹಿತರೊಂದಿಗೆ ಪರಸ್ಥಳಕ್ಕೆ ಹೋಗಿದ್ದುದಾಗಿ ಅವನ ತಾಯಿ ತಿಳಿಸಿದಳು. ನಾನು ಆ ದಿನ ಮಧ್ಯಾಹ್ನದ ಊಟವನ್ನು ಅಲ್ಲೇ ಮಾಡುವಂತೆ ಸ್ಟೀಯರ್ಫೋರ್ತನ ತಾಯಿ ಒತ್ತಾಯಿಸಿದ್ದರಿಂದ, ಅಲ್ಲೇ ನಿಂತೆನು.

ನಮ್ಮ ಊಟ ಮುಗಿದನಂತರ ನಾವು ಹಲವು ವಿಷಯಗಳನ್ನು ಮಾತಾಡುತ್ತ ಸ್ವಲ್ಪ ಸಮಯ ಕುಳಿತಿದ್ದೆವು. ನಮ್ಮ ಮಾತುಕಥೆಗಳಲ್ಲಿ ಮಿಸ್ ಡಾರ್ಟಲ್ಲಳೂ ಕೂಡುತ್ತಿದ್ದಳು. ಸ್ಟೀಯರ್ಫೋರ್ತನ ತಾಯಿ ಅವಳ ಸ್ವಭಾವಸಿದ್ಧವಾಗಿದ್ದಂತೆ ತನ್ನ ಮಗನ ಗುಣಗಳನ್ನೂ ಸಾಹಸಗಳನ್ನೂ ತುಂಬಾ ಪ್ರಶಂಸಿಸಿಯೇ ಮಾತಾಡಿದಳು. ಇಂಥ ಪ್ರಶಂಸೆಗಳಲ್ಲಿ ನಾನೂ ಭಾಗವಹಿಸಿ, ಆ ತಾಯಿಯನ್ನು ಮೀರಿಸುವಷ್ಟು ಸ್ಟೀಯರ್ಫೋರ್ತನ ಗುಣಗಳನ್ನು ಹೊಗಳಿದೆ. ಈ ಸಂದರ್ಭಗಳಲ್ಲಿ ಯಾರ್ಮತ್ತಿನಲ್ಲಿ ನಾವು ಮಿ. ಪೆಗಟಿಗೆ ಕೊಟ್ಟಿದ್ದ ಭೇಟಿಯನ್ನೂ ಅಲ್ಲಿನ ದಿನಗಳನ್ನೂ ಕಾರ್ಯಗಳನ್ನೂ ತಕ್ಕ ಮಟ್ಟಿಗೆ ಹೇಳುತ್ತಾ ಬಂದೆ. ಸ್ಟೀಯರ್ಫೋರ್ತನು ಅಲ್ಲಿನ ಜನರೆಲ್ಲರ ಮೆಚ್ಚುಗೆಯನ್ನು ಪಡೆದಿದ್ದ ಕ್ರಮವನ್ನು ಬಹು ವಿವರವಾಗಿಯೇ ತಿಳಿಸಿದೆ. ಡಾರ್ಟಲ್ಲಳು ಅರಿಯದ ಹೆಡ್ಡಳಂತೆ ಪ್ರಶ್ನೆ ಹಾಕಿ, ಅಡಗಿರಬಹುದಾದ ವಿಷಯಗಳನ್ನೂ ಇಂಗಿತಗಳನ್ನೂ ಒಕ್ಕಿ ತೆಗೆಯುವ – ಅವಳದೇ ಆಗಿದ್ದ – ಕ್ರಮದಿಂದ ಸ್ಟೀಯರ್ಫೋರ್ತನನ್ನು ಕುರಿತು ಅನೇಕ ಸಂಗತಿಗಳನ್ನು ಸಂಗ್ರಹಿಸಿಕೊಂಡಳು.

ಡಾರ್ಟಲ್ಲಳು ಅಂದು ಬಹು ಸೌಮ್ಯವಾಗಿ, ಶಾಂತತೆಯಿಂದ, ಮೃದುವಾಗಿ ಮಾತಾಡಿದಳು. ಈ ಸೌಮ್ಯತೆಯ ಕಾರಣವಾಗಿ ಅವಳ ಮುಖದ ಗಾಯ ಕಾಣಿಸುತ್ತಲೇ ಇರಲಿಲ್ಲ. ಅವಳ ಮಾತು, ಸಾಮೀಪ್ಯ, ಇವುಗಳ ಅನುಭವವೆಲ್ಲ ಆಗುತ್ತಾ ಬಂದ ಹಾಗೆ ಅವಳು ಬಹು ಸುರೂಪಿಯಾಗಿಯೇ ತೋರಿದಳು. ನಾನು ಹೀಗೆ ಸ್ವಲ್ಪ ಹೊತ್ತು ಅಲ್ಲಿದ್ದು ಮನೆಗೆ ಬಂದೆನು. ರಾತ್ರಿ ನಮ್ಮ ಮನೆಯಲ್ಲಿ ನಾನು ಏಕಾಂತವಾಗಿ ಯೋಚಿಸುತ್ತಾ ಕುಳಿತಿದ್ದಾಗ ಮಿಸ್ ಡಾರ್ಟಲ್ಲಳಾದರೂ ಹಾಗೆ ಇದ್ದದ್ದಾಗಿದ್ದರೆ ನನ್ನ ಜೀವನ ಎಷ್ಟೊಂದು ಆನಂದಮಯವಾಗಿರುತ್ತಿತ್ತೆಂದು ಯೋಚಿಸಿದೆನು.

ಮರುದಿನ ಬೆಳಗ್ಗೆ ಸ್ಟೀಯರ್ಫೋರ್ತನು ನನ್ನ ಮನೆಗೆ ಹಠಾತ್ತಾಗಿ ಬಂದೇ ಬಂದನು. ನನ್ನ ಮನೆಯ ಅನುಕೂಲ್ಯಗಳನ್ನೆಲ್ಲ ನೋಡಿ, ಮೆಚ್ಚಿ, ಪ್ರಶಂಸಿಸಿದನು. ಲಂಡನ್ ನಗರದ ಈ ಭಾಗದಲ್ಲಿ ಅವನು ಇರಬೇಕಾದ ಸಂದರ್ಭ ಬಂದಾಗಲೆಲ್ಲಾ ಅವನು ನನ್ನ ಮನೆಯನ್ನು ತನ್ನದರ ಹಾಗೆಯೇ ಉಪಯೋಗಿಸಿಕೊಳ್ಳುವುದಾಗಿ ತಿಳಿಸಿದನು. ಅವನ ಈ ವಿಧದ ಹೊಗಳಿಕೆಯನ್ನು ಕೇಳಿ ನನ್ನ ಮನೆ ಒಳ್ಳೆಯದೇ ಇರಬೇಕೆಂದು ನಾನು ತಿಳಿಯುತ್ತಾ ಸಂತೋಷಪಟ್ಟೆನು. ಸ್ಟೀಯರ್ಫೋರ್ತನು, ಈಗಲೇ, ಬಂದಿರುವಾಗಲೇ ನನ್ನ ಮನೆಯಲ್ಲಿ ಊಟಮಾಡಬೇಕೆಂದು ಒತ್ತಾಯಿಸಿದೆನು. ಅವನು ಆ ದಿನ ಊಟ ಮಾಡಲು ಸಿದ್ಧನಿಲ್ಲವೆಂದೂ – ಅವನಿಗೆ ತುಂಬಾ ಕೆಲಸವಿದೆಯೆಂದೂ – ಹೇಳಿ, ಆದರೆ, ಸದ್ಯವೇ ತನ್ನ ಸ್ನೇಹಿತರನ್ನು ಕರೆದುಕೊಂಡು ಬಂದು ನನ್ನಲ್ಲೇ ಒಂದು ಔತಣದ ಊಟ ಮಾಡುವುದಾಗಿ ಭರವಸೆಯಿತ್ತನು. ಭರವಸೆ ಮಾತ್ರವಲ್ಲದೆ, ಔತಣದ ದಿನವನ್ನೂ, ಸಮಯವನ್ನೂ ಬರುವ ಜನರು ಎಷ್ಟೆಂಬುದನ್ನೂ ಆಗಲೇ ನಿಶ್ಚೈಸಿ ತಿಳಿಸಿದನು. ಈ ರೀತಿ ನನ್ನ ಹೊಸ ಮನೆಯಲ್ಲಿ ಸ್ನೇಹಿತರ ಒಂದು ಸಂತೋಷಕೂಟವನ್ನು ಏರ್ಪಡಿಸುವ ಭಾಗ್ಯ ನನ್ನದಾಯಿತು.

ಸ್ಟೀಯರ್ಫೋರ್ತನ ಇಚ್ಛೆ ಪ್ರಕಾರ, ಗೊತ್ತಾಗಿದ್ದ ದಿನದಲ್ಲಿ ಔತಣವನ್ನು ಏರ್ಪಡಿಸಿದೆನು. ಮನೆಯಲ್ಲಿದ್ದ ಕೆಲಸದವರು ಸಾಕಾಗಲಾರರೆಂದು ಒಬ್ಬಳು ಹೆಂಗುಸನ್ನೂ ಒಬ್ಬ ಗಂಡುಸನ್ನು ಕೆಲಸಕ್ಕಾಗಿ ಹೊಸತಾಗಿ, ನೇಮಿಸಿಕೊಂಡೆ. ಮಿಸೆಸ್ ಕ್ರೂಪ್ಪಳ ಸಲಹೆ ಪ್ರಕಾರ ಅವಳು ಹೇಳಿದಷ್ಟು ಔತಣದ ಸಾಹಿತ್ಯಗಳನ್ನು ಸಂಗ್ರಹಿಸಿಟ್ಟೆನು. ಔತಣದ ದಿನ ಸ್ಟೀಯರ್ಫೋರ್ತನು, ಅವನ ಇಬ್ಬರು ಸ್ನೇಹಿತರೊಂದಿಗೆ ನಿಶ್ಚಿತ ಸಮಯಕ್ಕೆ ಸರಿಯಾಗಿ ಬಂದನು. ಸ್ಟೀಯರ್ಫೋರ್ತನು ಅಂದಿನ ಸಮಾರಂಭಕ್ಕೆ ಸ್ವಾಭಾವಿಕವಾಗಿಯೇ ಅಗ್ರಸ್ಥಾನವನ್ನು – ಯಜಮಾನಿಕೆಯನ್ನೂ –

ವಹಿಸಿಕೊಂಡನು. ಈ ಕಾರಣದಿಂದ ನನ್ನ ಅಜ್ಞತೆ ಹೊರಬೀಳಲಿಲ್ಲ. ಔತಣದ ಗಾಂಭೀರ್ಯವನ್ನು ಸ್ಟೀಯರ್ಫೋರ್ತನು ಅವನ ಅಗ್ರಸ್ಥಾನದಿಂದ ತುಂಬಾ ಹೆಚ್ಚಿಸಿದನು. ನಾನು ಸಂಗ್ರಹಿಸಿದ್ದ ಸಾಹಿತ್ಯ ಹದಿನಾಲ್ಕು ಜನರಿದ್ದರೂ ತಿಂದುಳಿಯುವಷ್ಟಿದೆಯೆಂದು ಸ್ಟೀಯರ್ಫೋರ್ತನು ಅಂದಾಗ ನನಗೆ ಆದ ಸಂತೋಷವಷ್ಟಿಷ್ಟಲ್ಲ.

ನಾವು ನಾಲ್ವರೂ ಕುಳಿತು ಊಟಮಾಡಿ ಸರಾಯಿ, ವೈನುಗಳನ್ನು ಕುಡಿದು ಆನಂದಿಸಿದೆವು. ನಮ್ಮ ಹೊಸ ಆಳಂತೂ ಬಹು ನಮ್ರತೆಯಿಂದ ನಾವು ಕರೆದಾಗ ಮಾತ್ರ ಎದುರು ಬರುತ್ತಲೂ ಕರೆಯದಿದ್ದಾಗಲೆಲ್ಲ ಹೊರ ಕೋಣೆಯಲ್ಲೇ ಇರುತ್ತಲೂ ನಮ್ಮ ಕೆಲಸವನ್ನು ಬಹು ಶ್ರದ್ಧೆಯಿಂದ ಮಾಡುತ್ತಿದ್ದನು. ಕೆಲವೊಮ್ಮೆ ಮಾತ್ರ ಈ ನಮ್ರತೆ ಹದ ಮೀರಿ, ಅಗತ್ಯ ಬಿದ್ದಾಗಲೂ ಅವನು ಹೊರ ಕೋಣೆಯಲ್ಲೇ ನಿಂತು ಬಿಡುವವರೆಗೂ ಇತ್ತು. ಇಂಥ ಒಂದು ಸಂದರ್ಭದಲ್ಲಿ ನಾನು ಹೊರ ಕೋಣೆಯನ್ನು ನೋಡಿದಾಗ – ಅವನು ಎದುರು ಇದ್ದಿಲ್ಲವಾದರೂ – ಅವನ ನೆರಳು ಒಂದು ಬಾಟ್ಲಿಯನ್ನು ಬಾಯಿಗೆ ಬಗ್ಗಿಸಿಕೊಳ್ಳುವುದನ್ನು ಕಂಡೆನು. ಈ ನೆರಳನ್ನು ಋಜುಪಡಿಸುವಂತೆ ಸ್ವಲ್ಪವೇ ಸಮಯದಲ್ಲಿ ಮಾತೇ ಹೊರಡದ ಅವಸ್ಥೆಗೆ ಅವನು ತಲುಪಿದನು. ಇದೇ ಸಮಯದಲ್ಲಿ ನಮ್ಮ ನಾಲಿಗೆಯ ಮೇಲೂ ನಮಗೆ ಅಧಿಕಾರ ಕಡಿಮೆಯಾಗತೊಡಗಿತು. ನಮಗೆ ನಮ್ಮದೇ ಆಗಿದ್ದ ಪ್ರತಿಗಳು ಕಂಡು ಬಂದು, ನಮ್ಮ ಮೊದಲ್ನುಡಿಗಳನ್ನು ನಾವೇ ಕೇಳಿ, ನಮ್ಮ ತಪ್ಪುಗಳನ್ನು ನಾವೇ ಕಂಡು, ಹೀಗೂ ಆಗುವುದಿದೆಯೇ ಎಂದು ನಮ್ಮ ನಮ್ಮ ಪ್ರತಿಗಳನ್ನು ಕುರಿತು ಆಶ್ಚರ್ಯಪಡತೊಡಗಿದೆವು. ನಾನು ಸುಮ್ಮನೆ ಕುಳಿತಿದ್ದರೂ ಮಿ. ಡೇವಿಡ್ ಕಾಪರ್ಫೀಲ್ಡನು ಹಾಡ ತೊಡಗಿದನು. ಈ ವಿಧದ ರೋಗ ಅತಿಥಿಯೊಬ್ಬನಿಗೂ ಅಂಟಿ, ಅವನೂ ಹಾಡತೊಡಗಿದನು. “ಮಾನವ ಹೃದಯವು ದುಃಖದ ಭಾರದಿ...” ಎಂಬ ಪದವನ್ನು ಹಾಡಿದಾಗ ನನಗೆ ಅಳೋಣವೆಂದು ತೋರಿತು. ಅಷ್ಟರಲ್ಲೇ ಅವನು “ಇನಿಯಳ ಕೂಡಿ ದಣಿಯದೆ ನಲಿದೂ...” ಎಂಬ ಪದವನ್ನು ಹಾಡಲು ಪ್ರಾರಂಭಿಸಿದನು. ಆ ಪದ ಪೂರ್ಣ ಆಗುವುದರೊಳಗೆ, ಮದುವೆಯಾಗದವರ ಸಭೆಯಲ್ಲಿ “ಇನಿಯಳ ಕೂಡಿ...” ಎಂಬ ಶಬ್ದ ಪ್ರಯೋಗ ತಪ್ಪೆಂದೂ – ಅಪಹಾಸ್ಯವೆಂದೂ – ನಾನು ಆಕ್ಷೇಪವೆತ್ತಿದೆನು. ಈ ವಿಧದ ವಾದಗಳಿಂದ ಕ್ರಮವಾದ ಜಗಳವೇ ಆರಂಭಿಸಿತು. ಆದರೆ ಅಷ್ಟರಲ್ಲೇ ಯಾರೋ ಒಬ್ಬರು ನನ್ನನ್ನು ಬಹುವಾಗಿ ಹೊಗಳಿ ಒಂದೊಂದು ಗ್ಲಾಸು ವೈನನ್ನು ಕೊಟ್ಟರು. ವೈನು ಕುಡಿಯುತ್ತಾ ನಾವು ಸಂತೋಷ ಶಿಖರಕ್ಕೇ ಏರಿದೆವು.

ನಮ್ಮ ಅಂದಿನ ಸಂಭ್ರಮದ ಪೂರ್ಣತೆಗೆ ನಾವು ನಾಟಕ ನೋಡುವುದು ಅಗತ್ಯವೆಂದು ಸ್ಟೀಯರ್ಫೋರ್ತನೆಂದನು. ಅವನ ಇಷ್ಟ ಪ್ರಕಾರ ನಾವೆಲ್ಲರೂ ನಾಟಕಕ್ಕೆ ಹೋಗಲು ಮಹಡಿಯಿಂದ ಇಳಿಯತೊಡಗಿದೆವು. ಇಳಿಯುವಾಗ ಯಾರೋ ಒಬ್ಬರು ಉರುಳುತ್ತಾ ಕೆಳಗೆ ತಲುಪಿದರು. ಉರುಳಿ ಬಿದ್ದವನನ್ನು ಸ್ಟೀಯರ್ಫೋರ್ತ್ ಮೊದಲಾದವರು ಎಬ್ಬಿಸಿ ನಿಲ್ಲಿಸಿದರು. ನಿಲ್ಲಿಸಿದರೂ ನಿಲ್ಲಲಾರದವನು ಯಾರೆಂದು ನಾನು ಕಣ್ಣು ತೆರೆದು ನೋಡುವಾಗ, ಅದು ಮಿ. ಡೇವಿಡ್ ಕಾಪರ್ಫೀಲ್ಡನೆಂದು ತಿಳಿದು, ನಾನು ಬಿದ್ದು ಬಿದ್ದು ನಗಾಡಿದೆನು.

ನಾಟಕ ಶಾಲೆಗೆ ಟಿಕೇಟು ದೊರಕುವುದೇ ನಮಗೆ ಕಷ್ಟವಾಯಿತು. ಕೊನೆಗೆ ಸ್ಟೀಯರ್ಫೋರ್ತನ ವ್ಯಕ್ತಿತ್ವ ಶಕ್ತಿಯಿಂದ ಮಾತ್ರ ಟಿಕೇಟೂ ಸಿಕ್ಕಿ, ನಾವು ರಂಗಸ್ಥಳದ ಸಮೀಪದಲ್ಲೇ ಹೋಗಿ ಕುಳಿತೆವು. ರಂಗಸ್ಥಳದಿಂದ ಬರುತ್ತಿದ್ದ ಬೆಳಕಿನ ಕಾರಣವಾಗಿ ನಾನು ನನ್ನ ಮುಂದುಗಡೆಯಿದ್ದ ಕುರ್ಚಿ ಸಾಲುಗಳಿಗಿಂತ ಮುಂದೆ ನೋಡಲಾರದೆ ಆಗಿದ್ದೆ. ನನ್ನ ಎದುರು ಸಾಲಿನಲ್ಲಿ ಏಗ್ನೆಸ್ಸಳು ಕುಳಿತಿದ್ದುದನ್ನು ಕಂಡು ನನಗೆ ಆದ ಸಂತೋಷ ಅಷ್ಟಿಷ್ಟಲ್ಲ. ನಾಟಕ ನನ್ನ ಪಾಲಿಗೆ ಹೇಗೂ ಇಲ್ಲದೇ ಆಗಿದ್ದುದರಿಂದ ಏಗ್ನೆಸ್ಸಳನ್ನು ಕರೆದು ಮಾತಾಡಿಸತೊಡಗಿದೆ. ಆಗ ಯಾರೋ “ಸೈಲೆನ್ಸ್” ಎಂದು ಕೂಗಿಕೊಂಡರು. ಯಾರಿಗೋ ಅಂದಿದ್ದ “ಸೈಲೆನ್ಸ್” ಶಬ್ದದಿಂದ ಏಗ್ನೆಸ್ಸಳು ಚಕಿತಳಾಗಿ, ನಾನು ರಂಗಸ್ಥಳವನ್ನು ದಯಮಾಡಿ ಬಿಟ್ಟು ಹೋಗಬೇಕೆಂದು ಕೈ ಮುಗಿದು ಬೇಡಿಕೊಂಡಳು. ಅದಕ್ಕೆ ನಾನು –
“ಏಗ್ನೆಸ್ – ನಿಂಗೆ ಸೌಖ್ಯವೇ” ಎಂದಂದೆ.
“ನನ್ನ ಸುಖ ಹಾಗಿರಲಿ. ನೀನು ಮನೆಗೆ ಹೋಗುವುದು ಒಳ್ಳೆಯದಲ್ಲವೇ?” ಎಂದವಳಂದಳು.

ಅವಳ ಮಾತಿನಿಂದ ನಾನು ಬಹುವಾಗಿ ಸಿಟ್ಟುಗೊಂಡು, ಅಲ್ಲಿಂದ ಎದ್ದೇ ಹೋಗಿಬಿಟ್ಟೆ. ಅನಂತರ ನನ್ನನ್ನು ಕಂಡದ್ದು ನನ್ನ ಹಾಸಿಗೆಯಲ್ಲೇ!

ಮರುದಿನ ಬೆಳಿಗ್ಗೆ ಏಳುವಾಗ ಅಮಲೆಲ್ಲ ಬಿರಿದಿತ್ತು. ಹಿಂದಿನ ರಾತ್ರಿ ನಡೆದಿದ್ದುದನ್ನೆಲ್ಲ ಗ್ರಹಿಸಿ ನಾಚಿಕೆಯೂ ದುಃಖವೂ ಆಯಿತು. ಏಗ್ನೆಸ್ಸಳು ನನ್ನನ್ನು ಆ ಸ್ಥಿತಿಯಲ್ಲಿ ಕಂಡದ್ದೇ ನನ್ನ ನಾಚಿಕೆಯನ್ನೂ ದುಃಖವನ್ನೂ ಹೆಚ್ಚಿಸಿತು. ಮಿಸೆಸ್ ಕ್ರಪ್ಸಳು ಬೆಳಿಗ್ಗೆ ಕ್ಲುಪ್ತ ಸಮಯದಲ್ಲಿ ಆ ದಿನವೇ ಕ್ರಯಕೊಟ್ಟು ತಂದಿದ್ದ ವಸ್ತುಗಳನ್ನೆಲ್ಲ ನನ್ನ ಊಟಕ್ಕೆ ಬಡಿಸಿದಳು. ಹಿಂದಿನ ದಿನದ ಸಾಹಿತ್ಯಗಳೆಲ್ಲ ಪೂರ್ತಿ ಮುಗಿದಿತ್ತಂತೆ. ಇದೂ ಒಂದು ಹೆಡ್ಡುತನ ಮತ್ತು ನಷ್ಟವೆಂದು ತಿಳಿದುಕೊಂಡೆನು. ಇಲ್ಲಿ ನನಗೆ ಆಗಿದ್ದ ನಷ್ಟಕ್ಕಾಗಿ ದುಃಖಿಸುವುದಕ್ಕಿಂತಲೂ ಹೆಚ್ಚಾಗಿ, ನನ್ನ ಅಂದಿನ ದುರ್ವ್ಯಸನಕ್ಕಾಗಿ ದುಃಖಿಸಿದೆ – ಪಶ್ಚಾತ್ತಾಪಪಟ್ಟೆನು.

ಅಧ್ಯಾಯ ಇಪ್ಪತ್ತೈದು

ಶುಭಾಶುಭ ದೇವತೆಗಳು

ನಾನು ಬುದ್ಧಿಗೆಟ್ಟು ವರ್ತಿಸಿದ ನಂತರದ ಮಾರನೇ ದಿನ ಬೆಳಗ್ಗೆ ನಾನೆದ್ದು ಮನೆಯಿಂದ ಹೊರಹೊರಡುವಾಗ ಒಬ್ಬ ಆಳು ನನಗೊಂದು ಪತ್ರ ತಂದುಕೊಟ್ಟನು. ಪತ್ರ ಏಗ್ನೆಸ್ಸಳದೇ ಆಗಿರಬೇಕೆಂಬ ಇಂಗಿತ ಬಲವತ್ತರವಾಗಿತ್ತು. ಅಲ್ಲದೆ ಅದನ್ನು ಓದುವುದು ತಾನೆ ಹೇಗೆಂದು ಬಹುವಾಗಿ ಹೆದರಿದೆ. ನಾಟಕ ಶಾಲೆಯಲ್ಲಿ ಏಗ್ನೆಸ್ಸಳು ಕಂಡಿದ್ದ ನನ್ನ ದುರ್ನಡತೆಯನ್ನು ಕುರಿತಾಗಿ ಅವಳು ಏನು ಬರೆದಿರಬಹುದೋ ಎಂಬುದೇ ನನ್ನ ಹೆದರಿಕೆಯಾಗಿತ್ತು. ಪತ್ರಕ್ಕೆ ಉತ್ತರ ಕೊಡಬೇಕೆಂಬುದಾಗಿ ಆಳು ತಿಳಿಸಿದುದರಿಂದ ಆಳನ್ನು ಹೊರಗೆ ನಿಲ್ಲಿಸಿ, ನಾನು ಒಳಗೆ ಬಂದು ಮೇಜಿನ ಬಳಿ ಕುಳಿತು ಪತ್ರ ಓದಿದೆ. ಅದು ಏಗ್ನೆಸ್ಸಳದೇ ಆಗಿತ್ತು. ನನಗೆ ಅನುಕೂಲವಾದ ಸಮಯವನ್ನು ತಿಳಿಸಿ, ಅಂಥಾ ಸಮಯದಲ್ಲಿ ನಾನು ಅವಳನ್ನು ಮಿ. ವಾಟರ್ ಬ್ರೂಕ್ಸ್ ಎಂಬವರ ಮನೆಯಲ್ಲಿ ಕಾಣಬೇಕೆಂದು ಬರೆದಿದ್ದಳು. ಅವಳ ತಂದೆಯ ಜತೆಯಲ್ಲಿ ಒಂದು ಕಾರ್ಯದ ನಿಮಿತ್ತವಾಗಿ ಅವರಿಬ್ಬರೂ ಮಿ. ವಾಟರ್ ಬ್ರೂಕ್ಸರ ಮನೆಗೆ ಬಂದಿರುವುದಾಗಿಯೂ ಬರೆದಿದ್ದಳು. ನನ್ನ ದುರ್ವರ್ತನೆಯನ್ನು ಎಳ್ಳಷ್ಟೂ ಪ್ರಸ್ತಾಪಿಸದಿದ್ದ ಪತ್ರಕ್ಕೆ ಏನುತ್ತರ ಬರೆಯುವುದೆಂದೇ ಗೊತ್ತಾಗದೆ ಕಷ್ಟಪಟ್ಟೆ. ನನ್ನ ತಪ್ಪನ್ನು ಪ್ರಥಮವಾಗಿ ಒಪ್ಪಿ, ಅನಂತರ ಕ್ಷಮಾಯಾಚನೆ ಮಾಡುವುದು ವಿಹಿತವೆಂದು ನಿಶ್ಚೈಸಿಕೊಂಡೆ. ಆದರೂ ಪ್ರಾರಂಭಿಸುವುದು ಹೇಗೆಂದು ನಿರ್ಧರಿಸಲಾರದೇ ಕಷ್ಟಪಡತೊಡಗಿದೆ. "ನಿನ್ನ ಮನಸ್ಸಿನಲ್ಲಿ ನಾನೇ ಚಿತ್ರಿಸಿರುವ ನನ್ನ ಅಮಂಗಲ ಸ್ವರೂಪವನ್ನು ಹೇಗೆ ಮರೆಸಲಿ?" ಎಂದು ಬರೆದು ನೋಡಿದೆ. ಅದು ಸರಿದೋರದೆ ಮತ್ತೊಂದು ವಿಧದಿಂದ ಪ್ರಾರಂಭಿಸಿದೆ. ಷೇಕ್ಸ್ಪಿಯರ್ ಕವಿಯ ಮಾತನ್ನು ಉಪಯೋಗಿಸಿ "ತಮ್ಮ ವೈರಿಯನ್ನೇ ಬಾಯೊಳಗೆ ಬಚ್ಚಿಡುವ ಮರುಳರಿದ್ದಾರಲ್ಲವೇ!" ಎಂದು ಬರೆದು ಪ್ರಾರಂಬಿಸಿ, ಅದೂ ಸರಿದೋರದೆ, ಕೊನೆಗೆ ಇಷ್ಟೇ ಬರೆದೆನು –

ಪ್ರಿಯ ಏಗ್ನೆಸ್,

ನಿನ್ನ ಪತ್ರ ನಿನ್ನ ದಿವ್ಯ ಸ್ವರೂಪದ ಪ್ರತಿಬಿಂಬವೇ ಆಗಿದೆ. ಇಷ್ಟಕ್ಕಿಂತ ಹೆಚ್ಚೇನನ್ನೂ ಹೇಳಲಾರೆ. ನಾನು ನಾಲ್ಕು ಗಂಟೆಗೆ ಬರುವೆನು.

ಇಂತೀ

ನಿನ್ನ ಪ್ರೀತಿಯನ್ನು ಬಯಸುವ, ಪಶ್ಚಾತ್ತಾಪಪಡುತ್ತಿರುವ

ಟ್ರಾಟೂಡ್ ಕಾಪರ್ಫೀಲ್ಡ್

ನಾನು ಒಪ್ಪಿಕೊಂಡ ಸಮಯಕ್ಕೇ ಅವಳಿದ್ದಲ್ಲಿಗೆ ಹೋಗಲು ನನಗೆ ಅನುಕೂಲವಾಗಲಿಲ್ಲ. ನಾನು ಅಮಲುಕೋರನಾಗಿದ್ದ ಅವಸ್ಥೆ ಕಂಡಿದ್ದ ಏಗ್ನೆಸ್, ಅಂದಿನ ರಾತ್ರಿಯ ವಿಷಯವನ್ನು ಪ್ರಸ್ತಾಪಿಸಿದರೆ ಉತ್ತರ ಕೊಡುವುದೇನು? ಅವಳನ್ನು ಕಂಡು ಮಾತನ್ನಾರಂಭಿಸುವುದೂ ಸಹ ಹೇಗೆ? ಎಂಬಿತ್ಯಾದಿಯಾಗಿ ಆಲೋಚಿಸುತ್ತಾ ತಡವಾಗಿ ಹೋಯಿತು. ಅಂತೂ ಅವಳು ತಿಳಿಸಿದ್ದ ಮನೆಗೆ ತಲುಪಿದೆ. ನನ್ನ ಆಗಮನ ನಿರೀಕ್ಷಿಸುತ್ತಾ ಏಗ್ನೆಸ್ ಒಂದು ಕೋಣೆಯಲ್ಲಿ ಒಬ್ಬಳೇ ಕುಳಿತಿದ್ದಳು. ಮಿ. ವಿಕ್ಫೀಲ್ಡರ ಮನೆಯಲ್ಲಿ ನಾನಿದ್ದಾಗ ಅವಳು ಯಾವ ರೀತಿಯಲ್ಲಿದ್ದಳೋ ಹಾಗೆಯೇ ಇಂದೂ ಪ್ರಸನ್ನಳಾಗಿ, ನನ್ನ ಆಗಮನದಿಂದುಂಟಾದ ಸಂತೋಷವನ್ನು ಮುಖದಲ್ಲಿ ಸೂಚಿಸುತ್ತಾ ಕುಳಿತಿದ್ದಳು. ನನ್ನ ಅಂಜಿಕೆಗೆ ಕಾರಣಗಳಾಗಿದ್ದ ವಿಷಯವನ್ನೇ ತಿಳಿಯದವಳಂತೆ ಅವಳು ನನ್ನೊಡನೆ ಮಾತಾಡತೊಡಗಿದಳು. ಪಶ್ಚಾತ್ತಾಪಪಡುತ್ತಿದ್ದ ನನಗೆ ಅವಳ ಈ ಗುಣ ಆನಂದಬಾಷ್ಪವನ್ನೇ ಸುರಿಯುವಂತೆ ಮಾಡಿತು.

"ಏಗ್ನೆಸ್, ಆ ದಿನ ರಾತ್ರಿ ನನ್ನನ್ನು ಇನ್ನು ಯಾರು ನೋಡಿದ್ದರೂ ಸಹ ನೀನು ನೋಡಿದ್ದರಿಂದ ನಾನು ನೊಂದುಕೊಂಡ ಅರ್ಧಪಾಲೂ ನೊಂದುಕೊಳ್ಳುತ್ತಿರಲಿಲ್ಲ. ನಿನ್ನನ್ನು ಪುನಃ ನೋಡುವುದಕ್ಕಿಂತ ಸಾಯುವುದೇ ಲೇಸೆಂಬುವವರೆಗೂ ನನಗೆ ತೋರಿದೆ. ನನ್ನನ್ನು ದಯಮಾಡಿ ಕ್ಷಮಿಸು" ಎಂದು ನಾನು ಬಿನ್ನೈಸಿಕೊಂಡೆನು.

ಏಗ್ನೆಸ್ ನನ್ನ ಕೈಯನ್ನು ಹಿಡಿದುಕೊಂಡು –

"ಟ್ರಾಟೂಡ್, ನಿನ್ನ ದುಃಖವನ್ನಾಗಲೀ ಪಶ್ಚಾತ್ತಾಪವನ್ನಾಗಲೀ ನನ್ನ ಹತ್ತಿರ ಹೇಳದೆ ಇನ್ನು ಯಾರ ಹತ್ತಿರ ಹೇಳಬಲ್ಲೆ? ಅದು ನನಗೆ ಗೊತ್ತಿದೆ. ಕಳೆದುಹೋದುದನ್ನು ಯೋಚಿಸಬೇಡ. ನಾನಂತೂ ಅದನ್ನು ಸಂಪೂರ್ಣ ಮರೆತಿದ್ದೇನೆ. ನಾನು ಕ್ಷಮಿಸಬೇಕಾದಂಥ ಅನ್ಯಾಯವನ್ನೇನೂ ನೀನು ಮಾಡಿರುವುದಿಲ್ಲ. ಏನಾದರೂ ಬಹು ಸ್ವಲ್ಪ ನಡೆದು ಹೋಗಿದ್ದರೂ ಅದು ಅರಿತು ಮಾಡಿದ್ದಲ್ಲ" ಅಂದಳು. ಅವಳ ಮೃದು ಸ್ಪರ್ಷವೂ ಮೃದು ಸ್ವರವೂ ನನಗೆ ತುಂಬಾ ಸಮಾಧಾನ ಕೊಟ್ಟಿತು.

"ನೀನು ನನ್ನ ಶುಭದೇವತೆ – ಭಾಗ್ಯದೇವತೆ" ಅಂದೆನು ನಾನು.

"ಟ್ರಾಟೂಡ್, ಸ್ಟೀಯರ್ಫೋರ್ತನ ಸಹವಾಸ ಹಿತವಲ್ಲ – ಶುಭವಲ್ಲ" ಅಂದಳು ಏಗ್ನೆಸ್.

"ಆ ದಿನದ ಒಂದೇ ಒಂದು ಪ್ರಸಂಗಕ್ಕಾಗಿ ನನ್ನ ಅತ್ಯಂತ ಪ್ರಿಯ ಮಿತ್ರನಾದ, ತಿಳಿವಳಿಕೆಯುಳ್ಳ ಸ್ಟೀಯರ್ಫೋರ್ತನನ್ನು ಕುರಿತು ಹಾಗೆ ಗ್ರಹಿಸಬಾರದು ಏಗ್ನೆಸ್" ಅಂದೆ ನಾನು.

"ನನಗೆ ನಿನ್ನ ಮೇಲಿರುವ ಪ್ರೀತಿಯಿಂದ, ನಿನ್ನ ಹಿತಚಿಂತನೆಯಿಂದ, ಮನಬಿಚ್ಚಿ ಹೇಳುವೆನು, ಕೇಳು. ಆತ ನಿನ್ನ ಅಶುಭದೇವತೆ. ನನ್ನ ಅಂತರಂಗದಲ್ಲಿ ಆ ರೀತಿ ಭಾಸವಾಗುತ್ತದೆ. ನೀನು ಆಗಿಂದಾಗ ಅವನನ್ನು ನಿರ್ವಂಚನೆಯಿಂದ ಹೊಗಳಿದ ಸಂಗತಿಗಳನ್ನು ನನ್ನ ಬುದ್ಧಿಗೆ ತಕ್ಕಂತೆ ವಿಮರ್ಶಿಸಿ ಈ ಅಭಿಪ್ರಾಯಕ್ಕೆ ಬಂದಿದ್ದೇನೆ. ನಿನ್ನ ಮನಸ್ಸಿಗೆ ನೋವಾದರೆ ಕ್ಷಮಿಸು" ಅಂದಳು ಏಗ್ನೆಸ್.

ಸ್ಟೀಯರ್ಫೋರ್ತನು ನನಗೆಂದಿಗೂ ಕೆಡುಕನ್ನು ಗೈಯ್ಯಲಾರನೆಂದು ನಾನು ಮನಸ್ಸಿನಲ್ಲಿ ತರ್ಕಿಸುತ್ತಿದ್ದ ಹಾಗೆಯೇ ಏಗ್ನೆಸ್ ಅಳುಕದೆ, ಗಂಭೀರವಾಗಿ, ಸದುದ್ದೇಶದಿಂದ ಹೇಳಿದ ಮಾತುಗಳನ್ನು ನಾನು ಪುನಃ ಪುನಃ ಯೋಚಿಸಿ, ವಿಮರ್ಶಿಸಿದಂತೆಲ್ಲ, ಅಂಥಾ ವಿಮರ್ಶೆ ನನ್ನ ಮನಸ್ಸಿನಲ್ಲಿ ಸ್ಟೀಯರ್ಫೋರ್ತನನ್ನು ಕುರಿತು ತುಂಬಾ ಪರಿಣಾಮವನ್ನುಂಟುಮಾಡಿತು. ನನ್ನ ಅಂತರಂಗದ ಚಿತ್ರದಲ್ಲಿ ಸ್ಟೀಯರ್ಫೋರ್ತನು ವಿಮರ್ಶಾನಂತರ ಸ್ವಲ್ಪ ಕುರೂಪಿಯೂ ಕುಮಾರ್ಗಿಯೂ ಆಗಿ ತೋರತೊಡಗಿದನು. ಅವನ ಸುತ್ತಲೂ ನಾನು ನಿರ್ಮಿಸಿಕೊಂಡಿದ್ದ ಪ್ರಭೆಯೂ ಸ್ವಲ್ಪ ಮಸಕಾಯಿತು.

ಏಗ್ನೆಸ್ಸಳು ನನ್ನೊಡನೆ ಇನ್ನೂ ಅನೇಕ ವಿಷಯಗಳನ್ನು ಕುರಿತು ಮಾತಾಡಿದಳು. ಅವಳು ಲಂಡನ್ನಿಗೆ ಬಂದ ಉದ್ದೇಶವೇನೆಂದು ತಿಳಿಸಿದಳು. ಮಿ. ವಿಕ್ಫೀಲ್ಡರ ಮನೆಯಲ್ಲಿ – ಗೃಹಕೃತ್ಯದಲ್ಲಿ ಆಗಿದ್ದ ಬದಲಾವಣೆಗಳನ್ನು, ಅವರ ವೃತ್ತಿ, ವ್ಯವಹಾರಗಳಲ್ಲಿ ಆಗಿದ್ದ ಮಾರ್ಮಿಕವಾದ ಬದಲಾವಣೆಗಳನ್ನೂ ಹೇಳಿದಳು. ಮಿ. ವಿಕ್ಫೀಲ್ಡರನ್ನು ಉರೆಯನು ಯಾರಿಗೂ ಗೊತ್ತಾಗದ ರೀತಿಯಲ್ಲಿ ತನ್ನ ಅಂಕಿತದಲ್ಲಿ – ಮುಷ್ಟಿಯೊಳಗೆ – ಇಟ್ಟುಕೊಂಡಿದ್ದನಂತೆ. ಮಿ. ವಿಕ್ಫೀಲ್ಡ್ ಮತ್ತು ಏಗ್ನೆಸ್ಸರ ವಾತ್ಸಲ್ಯ, ಪ್ರೀತಿ, ಕೌಟುಂಬಿಕ ವ್ಯವಹಾರಗಳಲ್ಲೂ ಉರೆಯನ ಪ್ರವೇಶ ಬಹು ಸೂಕ್ಷ್ಮವಾಗಿ ನಡೆಯುತ್ತಿತ್ತಂತೆ. ದಿನದಿಂದ ದಿನಕ್ಕೆ ಮಿ. ವಿಕ್ಫೀಲ್ಡರ ಮಾನಸಿಕ ಸ್ಥಿತಿ ಬಹು ಶೋಚನೀಯಾವಸ್ಥೆಗೆ ಬರುತ್ತಿರುವುದನ್ನು ಏಗ್ನೆಸ್ ಕಾಣುತ್ತಿದ್ದಳಂತೆ. ಉರೆಯನಿಗೆ ತನ್ನ ಮೇಲಿರುವ ಗೋಪ್ಯವಾದ ಅಧಿಕಾರದ ಕಾರಣವಾಗಿ, ಅಂಜಿಕೆಯಿಂದಲೇ ಮಿ. ವಿಕ್ಫೀಲ್ಡರು ಅವನನ್ನು ತನ್ನ ಪಾಲುಗಾರನನ್ನಾಗಿ ಮಾಡಿಕೊಂಡಿದ್ದಾರೆಂದೂ ಈಗ ಮಿ. ವಿಕ್ಫೀಲ್ಡರ ವಕೀಲಿ ಅಫೀಸಿನ ಹೆಸರು 'ವಿಕ್ಫೀಲ್ಡ್ ಮತ್ತು ಹೀಪ್' ಎಂದಾಗಿತ್ತೆಂದೂ ತಿಳಿಸಿದಳು. ಈ ಬದಲಾವಣೆಯ ಕಾರಣವಾಗಿ ಮಿ. ವಿಕ್ಫೀಲ್ಡರು ಮೊದಲಿಗಿಂತಲೂ ಹೆಚ್ಚೆಚ್ಚು ವೈನನ್ನು ದುಃಖಶಮನಕ್ಕಾಗಿ ಕುಡಿಯುತ್ತಿದ್ದಾರಂತೆ. ಈ ವಿಷಯಗಳನ್ನೆಲ್ಲ ತಿಳಿಸುವಾಗ ಏಗ್ನೆಸ್ಸಳಿಗೆ ಸ್ವಲ್ಪ ಕಣ್ಣೀರು ಬರುತ್ತಿತ್ತು. ಆದರೆ ಮನೆಯೊಳಗಿನ ಈ ಎಲ್ಲಾ ವಿಷಯಗಳೂ ಬಹು ಗೋಪ್ಯವಾಗಿರಬೇಕೆಂದೂ ಹಾಗಿಲ್ಲದಿದ್ದರೆ ತಂದೆಯ ದುಃಖ, ಕಷ್ಟಗಳು ಇನ್ನಷ್ಟು ಹೆಚ್ಚಬಹುದೆಂದೂ ತಾನು ತನ್ನ ತಂದೆಗೋಸ್ಕರ ಎಂಥ ಕಷ್ಟವನ್ನಾದರೂ ಸಹಿಸಲು ಸಿದ್ಧಳೆಂದೂ ಯಾವ ತ್ಯಾಗವನ್ನಾದರೂ ಮಾಡಲು ಸಿದ್ಧಳೆಂದೂ ನನಗೆ ತಿಳಿಸಿದಳು.

ಇಷ್ಟೆಲ್ಲ ಮಾತು ಮುಗಿಯುವ ಸಮಯದಲ್ಲಿ ಮಿಸೆಸ್ ವಾಟರ್ ಬ್ರೂಕ್ಸರು ನಮ್ಮ ಕೋಣೆಗೆ ಬಂದರು. ಏಗ್ನೆಸ್ ನನ್ನ ಪರಿಚಯವನ್ನು ಅವರಿಗೆ ಮಾಡಿಕೊಟ್ಟಳು. ನನ್ನನ್ನು ಅವರು ನಾಟಕ ಶಾಲೆಯಲ್ಲಿ ನೋಡಿರಬೇಕೆಂದು ನಾನು ಸಂಶಯಪಡುತ್ತಿದ್ದಾಗಲೇ ಅಂದಿನ ನನ್ನ ಅಮಲುಕೋರವರ್ತನೆಯನ್ನು ನೆನೆದು ಅವರು ಭಯಪಡುತ್ತಿರುವಂತೆಯೂ ನಾನು ತಿಳಿದೆನು! ಆದರೂ ಏಗ್ನೆಸ್ಸಳ ಪರಿಚಯದ ಕಾರಣವಾಗಿ ಅವರು ನನ್ನೊಡನೆ ಗೌರವದಿಂದ ಮಾತಾಡುತ್ತಾ ಮರುದಿನವೇ ಅವರ ಮನೆಯಲ್ಲಿ ಜರುಗಲಿದ್ದ ಒಂದು ಔತಣಕೂಟಕ್ಕೆ ಆಮಂತ್ರಣವನ್ನಿತ್ತರು. ನಾನು ಆಮಂತ್ರಣವನ್ನು ಸ್ವೀಕರಿಸಿ ನನ್ನ ಮನೆಗೆ ಹೋದೆನು.

ಆಮಂತ್ರಣ ಪ್ರಕಾರ ನಾನು ಮರುದಿನ ಮಿ. ವಾಟರ್ ಬ್ರೂಕ್ಸರ ಮನೆಗೆ ಕ್ಲುಪ್ತ ಸಮಯಕ್ಕೆ ಹೋದೆ. ಉರೆಯನಿಗೂ ಅಮಂತ್ರಣವಿದ್ದಿರಬೇಕೆಂದು ತೋರುತ್ತದೆ. ಅವನ ಈಗಿನ ಸ್ಥಾನಮಾನಕ್ಕೆ ಸರಿಯಾಗಿ ದುಸ್ತು ಮಾಡಿಕೊಂಡು ಉರೆಯನೂ ಅಲ್ಲಿಗೆ ಬಂದಿದ್ದನು.

ಮಿ. ವಾಟರ್ ಬ್ರೂಕ್ಸರು ಆಗರ್ಭ ಶ್ರೀಮಂತರು. ಜನನದಿಂದಲೇ ಅಭಿವೃದ್ಧಿಯ ಪಥದಲ್ಲಿ ಕಾಲಿರಿಸಿದವರು. ಹಿಂದೆ ಬೀಳುವುದು, ಬಡತನ ಎಂಬುದನ್ನೆಲ್ಲ ಎಷ್ಟೂನ್ನೂ ಅರಿಯದವರು. ಶ್ರೀಮಂತಿಕೆಯ ಶಿಖರವನ್ನೇರಿ ಅಲ್ಲಿ ಭದ್ರವಾಗಿ ಕುಳಿತು ಮೆರೆಯುವವರು. ಅಭಿವೃದ್ಧಿಯ ಶಿಖರದಲ್ಲಿದ್ದವರಿಗೆ ಕೆಳಗಿನ ಜನಸ್ತೋಮ ಕುಬ್ಜವಾಗಿ ತೋರುವುದು ಸ್ವಾಭಾವಿಕವಷ್ಟೆ. ಈ ಸ್ವಭಾವದಿಂದಲೇ ಅವರು ತಮ್ಮ ಶ್ರೀಮಂತಿಕೆಯನ್ನು ಸದಾ ಸ್ಮರಣೆಯಲ್ಲಿ ಸ್ಪಷ್ಟವಾಗಿಟ್ಟುಕೊಂಡಿರುತ್ತಾ ಬಡತನ – ಕೀಳ್ತನಗಳ ಸ್ಪಷ್ಟತೆಯನ್ನು (ಆತ್ಮರಕ್ಷಣೆಗಾಗಿ) ಸದಾ ಸ್ಮರಣೆಯಲ್ಲಿಟ್ಟುಕೊಂಡಿರುತ್ತಿದ್ದರು. ಈ ಸಂಬಂಧದ ಗುಣದೋಷಗಳು ಅವರ ರಕ್ತದಲ್ಲಿ ಬೆರೆತುಹೋಗಿ, ನಡೆನುಡಿಗಳಲ್ಲಿ ಸುಲಭವಾಗಿ ಹೊರಹೊಮ್ಮುತ್ತಿದ್ದುವು. ಈ ಕಾರಣದಿಂದಲೇ ಅವರನ್ನು ಯಾರೂ ಸಲಿಗೆಯಿಂದ ಗುರುತಿಸುವುದನ್ನು ಅವರು ಮನಸಾ ವಾಚಾ ನಿಷೇಧಿಸುತ್ತಿದ್ದರು.

ಔತಣಕೂಟಕ್ಕೆ ಆಮಂತ್ರಿತರಾದವರಲ್ಲಿ ಬಹು ಹೆಚ್ಚಿನವರೆಲ್ಲರ ಮಾತಿನ ಕ್ರಮವೂ ಶ್ರೀಮಂತಿಕೆಯನ್ನು ಪ್ರಧಾನವಾಗಿಟ್ಟುಕೊಂಡದ್ದೇ ಆಗಿತ್ತು. ಎಷ್ಟು ಮಾತಾಡಿದರೆ, ಯಾವ ಮಾತಾಡಿದರೆ, ಶ್ರೀಮಂತಿಕೆಯ ಪ್ರಭೆ ಎದ್ದು ಕಾಣುವುದೋ ಅಂಥ ಮಾತುಗಳನ್ನು ಮಾತ್ರ ಅಭ್ಯಸಿಸಿ ಬಂದಿದ್ದವರಂತೆ ಅವರೆಲ್ಲರೂ ಮಾತಾಡುತಿದ್ದರು.. ನರೆತ ತಕೆಕೂದಲಿನವರೊಬ್ಬರು ಮಿ. ವಾಟರ್ ಬ್ರೂಕ್ಸರ ಶ್ರೀಮಂತಿಕೆಯನ್ನು – ಹಿಮವದ್ಗಿರಿಯು ಮೌನವಾಗಿದ್ದು, ತನ್ನ ಧವಳ ಶೋಭೆಯಿಂದ ಪ್ರಪಂಚದ ಶೋಭೆಯನ್ನು ಹೆಚ್ಚಿಸುತ್ತಿರುವಂತೆ – ತಮ್ಮ ಬೋಳು

ತಲೆಯನ್ನು ಅಲ್ಲಾಡಿಸುವುದು ಮಾತ್ರದಿಂದ ಪ್ರಶಂಶಿಸುತ್ತಿದ್ದರು. ಆ ದಿನದ ಕೂಟದಲ್ಲಿ ಟ್ರೇಡಲ್ಸನೂ ಇದ್ದನು. ಅವನು ಮಿ. ವಾಟರ್ ಬ್ರೂಕ್ಸರ ಕೈಕೆಳಗೆ ವಕೀಲಿವೃತ್ತಿ ಅಭ್ಯಾಸ ಮಾಡುತ್ತಿದ್ದ ಕಾರಣವಾಗಿಯೂ ನಿಜವಾಗಿಯೂ ಅಂದು ಅಲ್ಲಿ ಇರಬೇಕಾಗಿದ್ದ 'ಆಗರ್ಭ ಶ್ರೀಮಂತ' ಮಿ. ಹೆನ್ರಿ ಸ್ಪೈಕರರು ಬರದಿದ್ದುದರಿಂದ ಖಾಲಿ ಬಿದ್ದ ಸ್ಥಾನದ ಭರ್ತಿಗಾಗಿಯೂ ಅಂದು ಆಮಂತ್ರಿತನಾಗಿದ್ದುದೆಂದು ಮಿ. ವಾಟರ್ ಬ್ರೂಕ್ಸರು ಬಹಿರಂಗವಾಗಿ, ಸ್ಪಷ್ಟವಾಗಿ, ಅಳುಕು, ನಾಚಿಕೆ, ದಾಕ್ಷಿಣ್ಯವಿಲ್ಲದೆ ತಿಳಿಸಿದರು.

ಕೊನೆಗೆ ಔತಣದ ಊಟ ನಡೆಯಿತು. ಎಲ್ಲರೂ ಶ್ರೀಮಂತಿಕೆಯ ಶಿಸ್ತಿನ ಪ್ರಕಾರ ಮಾತ್ರ ಊಟ ಮಾಡಿದರು. ಊಟವಾದನಂತರ ಎಲ್ಲರೂ ಕುಳಿತು ಮಾತಾಡಿದರು. ಮಾತೂ ಶ್ರೀಮಂತಿಕೆ, ಕುಲ, ಮೊದಲಾದ ಘನ ಗೌರವದ ಕುರಿತಾದದ್ದೇ ಆಗಿತ್ತು. ಒಬ್ಬ ಶ್ರೀಮಂತ ಮಾತಾಡುತ್ತಾ ಹೇಳಿದರು –
"ಯಾವ ಕೆಲಸವೇ ಆದರೂ ಉತ್ತಮ ರೀತಿಯಲ್ಲಿ ಪೂರ್ತಿಗೊಳ್ಳಬೇಕಾದರೆ ಯೋಗ್ಯ ಮನೆತನದವರೇ ಅಂಥ ಕೆಲಸವನ್ನು ವಹಿಸಿಕೊಳ್ಳಬೇಕು. ಅಂದರೆ ಮನೆತನವನ್ನು ಪ್ರಮುಖವಾಗಿಟ್ಟುಕೊಂಡೇ ಸರಕಾರದ ಉಚ್ಚ ಪದವಿಗಳಿಗೆ ಅಧಿಕಾರಿಗಳನ್ನು ನೇಮಿಸಬೇಕು".
"ವಿದ್ಯೆ, ಡಿಗ್ರಿ, ಇವೆಲ್ಲಾ ಅವಶ್ಯವಿರಬಹುದಾದರೂ ರಕ್ತ, ಮನೆತನ ಅವುಗಳಿಗೂ ಮೇಲಾದವು" ಅಂದರು ಮತ್ತೊಬ್ಬರು.

ಅವರ ಮಾತುಗಳಲ್ಲಿ ಯಾರೊಬ್ಬರ ಹೆಸರನ್ನು ಪೂರ್ತಿಯಾಗಿ ಹೇಳದೇ – ತಮ್ಮೊಳಗೆ ಬಳಕೆಯಲ್ಲಿರುವುವೆಂದು ಹೆಮ್ಮೆಪಟ್ಟುಕೊಳ್ಳುವುದಕ್ಕಾಗಿ – ಕೆಲವು ಸಂಕೇತಾಕ್ಷರಗಳನ್ನು ಮಾತ್ರ ಉಪಯೋಗಿಸಿ ಮಾತಾಡುತ್ತಿದ್ದರು. ಹಣದ ಲೆಖ್ಖ ಮಾತಾಡುವಾಗ ದಶಸಾವಿರ, ಮಿಲಿಯದ ಅಂಕೆಗಳಿಗಿಂತ ಕೆಳಗಿನ ಅಂಕೆಗಳೇ ಅವರ ಬಾಯಿಯಲ್ಲಿ ಬರುತ್ತಿರಲಿಲ್ಲ.

ಈ ವಿಧದ ಮಾತನ್ನರಿಯದ ಟ್ರೇಡಲ್ಸನೂ ನಾನೂ ಒಂದು ಮೂಲೆಯಲ್ಲಿ ಕುಳಿತು ನಮ್ಮ ನಮ್ಮ ಬಳಕೆಯ ವಿಷಯಗಳನ್ನು ಮಾತಾಡಿದೆವು. ಆ ಸಭೆಯಲ್ಲಿ ನಮ್ಮಂಥ ಅನಾಮಧೇಯರು ಆ ಔತಣಕೂಟದ ಸಂತೋಷ, ಗೌಜು, ಗಲಭೆಯ ವರ್ಧನೆಗಾಗಿ ಇದ್ದ 'ಜನಹಿಂಡು' ಮಾತ್ರವಾಗಿ ಹೋಗಿದ್ದೆವು. ಆದರೆ ಇದೇ ಸಮಯದಲ್ಲಿ ಅತಿ ಶ್ರೀಮಂತಿಕೆಗೆ ಪರಮ ವಿರೋಧ ದಿಕ್ಕಿನಲ್ಲಿದ್ದ, ದೀನ, ದರಿದ್ರ, ಅನಾಮಧೇಯ ಉರೆಯನು ತಗ್ಗಿ, ಬಗ್ಗಿ ತನ್ನ ಬಡತನ, ಅಲ್ಪತನಗಳನ್ನು ಬಹಿರಂಗವಾಗಿ, ಒಪ್ಪುತ್ತಾ ಕೈಗಳನ್ನು ಬಳುಕಿಸಿ, ತಿರುಚಿಸಿ, ಇತರರ ಸಂತೋಷದಿಂದ ತಾನು ಸಂತೋಷಪಡುತ್ತಿರುವುದಾಗಿ ನಟಿಸಿ ಅರೆನಗೆ ನಗುತ್ತಿದ್ದನು. ಅವನ ವಂಚಕತನದ ನಟನೆಗಳನ್ನು ಕಂಡು ಅವನನ್ನು ಒದ್ದು ಹೊರಗೆ ಅಟ್ಟಿದ್ದರೆ ಉತ್ತಮವಿತ್ತೆಂದು ನನಗೆ ತೋರುತ್ತಿತ್ತು.

ಉರೆಯನ ವಿನೀತತೆ ನಟನೆಯೆಂದು ನನಗೆ ಗೊತ್ತಿದ್ದರೂ ನನ್ನ ಭಾವನೆಗಳನ್ನು ವ್ಯಕ್ತಪಡಿಸುವುದರಿಂದ ಮಿ. ವಿಕ್ಫೀಲ್ಡರಿಗಾಗಲೀ ಏಗ್ನೆಸ್ಸಳಿಗಾಗಲೀ ತೊಂದರೆಯಾಗಬಹುದೆಂದು ಹೆದರಿ, ನಾನು ಉರೆಯನನ್ನು ಕಂಡು ಸಂತೋಷಪಟ್ಟವನಂತೆಯೇ ನಟಿಸಿ ವರ್ತಿಸಿದೆ. ನಾನು ಕೆಲವೊಮ್ಮೆ ಏಗ್ನೆಸ್ಸಳ ಹತ್ತಿರ ಮಾತಾಡುತ್ತಿದ್ದೆ. ಆಗ ಉರೆಯನು ಎಡೆಬಿಡದೆ ನಮ್ಮನ್ನು ನೋಡುತ್ತಾ ನಾವು ಏನೇನು ಮಾತಾಡುತ್ತಿದ್ದೇವೆಂದು ಸೂಕ್ಷ್ಮವಾಗಿ ಆಲಿಸಿ ಕೊಂಡಿರುತ್ತಿದ್ದನೆಂದೂ ನಾನು ತಿಳಿದೆನು.

ಆ ದಿನ ಕೂಟ ಸಮಾಪ್ತವಾದನಂತರ ನಾವು ನಮ್ಮ ನಮ್ಮ ಮನೆಗೆ ಹೊರಟೆವು. ಆಗ, ಕೇವಲ ಸಾಂಪ್ರದಾಯಿಕವಾಗಿ, ನಾನು ಉರೆಯನನ್ನು ನನ್ನ ಮನೆಗೆ ಬರಲು ಆಮಂತ್ರಿಸಿದೆನು. ಉರೆಯನು ಅಮಂತ್ರಣವನ್ನು ಬಹು ವಿನೀತನಾಗಿ ಸ್ವೀಕರಿಸಿ, ನನ್ನ ಜತೆಯಲ್ಲೇ ನನ್ನ ಮನೆಗೆ ಬಂದನು.

ಅತಿಥಿಗೆ ತಕ್ಕದಾಗಿ ಉರೆಯನನ್ನು ಸೋಫಾದಲ್ಲಿ ಕೂರಿಸಿ ನಾನು ಕುರ್ಚಿಯಲ್ಲಿ ಕುಳಿತು ಕಾಫಿ ಕುಡಿಯುತ್ತಾ ಮಾತಾಡಿದೆವು. ಉರೆಯನು ತನ್ನ ಉದ್ದವಾದ ಕಾಲುಗಳನ್ನು ನೀಡಿ, ಅವುಗಳ ಮೇಲೆ ತನ್ನ ನೀಳವಾದ ಕೈಗಳನ್ನು ಬಳುಕಿಸಿಟ್ಟುಕೊಂಡು, ಅಂಗ, ಮುಖ ವಿನ್ಯಾಸಗಳಲ್ಲಿ ದೀನತೆ, ನಮ್ರತೆ, ಬಡತನವನ್ನು ಸೂಚಿಸುತ್ತಾ
"ಮಾಸ್ಟರ್ ಕಾಪರ್ಫೀಲ್ಡ್ – ಅಲ್ಲ, ಕ್ಷಮಿಸಿ, ಮಿ. ಕಾಪರ್ಫೀಲ್ಡ್, ಈ ದಿನದ ನಮ್ಮಿಬ್ಬರ ಇಲ್ಲಿನ ಭೇಟಿಯು ನನ್ನ ಪಾಲಿಗೆ ಬಹು ವಿಶೇಷವಾದುದು. ಹಿಂದೊಮ್ಮೆ ನೀನು ನನಗೊಂದು ಸೂಚನೆಯಿತ್ತಿದ್ದೆ. ಆ ಪ್ರಕಾರವೇ ದೇವರ ದಯೆಯಿಂದ, ನನ್ನ ಕಾರ್ಯಗಳು ಯಶಸ್ವಿಯಾಗಿವೆ. ಆ ಸಂತೋಷದ ಸಂಗತಿಯನ್ನು ನಿನಗೆ ತಿಳಿಸುವ ಸಂದರ್ಭ ಈಗ ಬಂದಿದೆ" ಅಂದನು.

ಈ ರೀತಿಯ ವಕ್ರ, ವಿನಮ್ರ, ವಂಚನೆಯ ವಿಷಯಗಳನ್ನು ಹೇಳುವ ಪೀಠಿಕೆಯನ್ನು ಕೇಳುತ್ತಾ ನನಗೆ ಕೋಪ ಏರುತ್ತಿದ್ದರೂ ಶಿಷ್ಟಾಚಾರಕ್ಕಾಗಿ ಸಿಟ್ಟನ್ನು ತಡೆಹಿಡಿದು –
"ಏನದು ಅಂಥಾ ಮಹತ್ವದ ಘಟನೆ" ಎಂದು ಏನೂ ಅರಿಯದವನಂತೆ ಕೇಳಿದೆ.
"ಮಿ. ವಿಕ್ಫೀಲ್ಡರ್‌ಂಥವರ ಜತೆ ಪಾಲುಗಾರನಾಗಿ, ಅವರ ವೃತ್ತಿಯನ್ನು ನಾನೂ ನಡೆಸುವ ಸಂದರ್ಭ ಬಂದಿದೆ. ಹಿಂದೆ ಒಮ್ಮೆ ನೀನಿತ್ತುದು ಒಂದು ಸೂಚನೆಯೇ ಆಗಿದ್ದರೂ ಅದು ಆಶೀರ್ವಾದವಾಗಿ ಪರಿಣಮಿಸಿ, ಆಶೀರ್ವಾದ ಕಾರ್ಯಗತವಾಗಿದೆ. ನಮ್ಮಂಥ ಬಡವರಿಗೆ ದೊರಕಿರುವ ಈ ಉತ್ತಮ ಪರಿಸ್ಥಿತಿಯನ್ನು ಕುರಿತು – ಬಡವನಾದರೂ ನನ್ನ ಹೃದಯದಲ್ಲಿ ತುಂಬಿರುವ ಕೃತಜ್ಞತೆಯನ್ನು ನಿನಗೆ

ತಿಳಿಸಬೇಕಾಗಿದೆ. ಇದಕ್ಕಾಗಿ ನಾನು ನಿನ್ನನ್ನು ವಂದಿಸುತ್ತೇನೆ. ದೀನರೂ ದರಿದ್ರರೂ ಸಹ ನಮಗಿಂತ ಮೇಲ್ತರಗತಿಯವರಿಗೆ ಸಹಾಯಮಾಡಬಹುದಾದ ಸಂದರ್ಭಗಳನ್ನು ದೇವರು ಕಲ್ಪಿಸುವನು. ದೇವನೇನೋ ಕರುಣೆಯಿಂದ ನನಗೂ ಮಿ. ವಿಕ್ಫೀಲ್ಡರಿಗೂ ಹಿತವಾಗುವಂಥ – ಅಂಥ ಸಂದರ್ಭವನ್ನೇ ಒದಗಿಸಿರುತ್ತಾನೆ, ಮಿ. ಕಾಪರ್ಫೀಲ್ಡ್. ಮಿ. ವಿಕ್ಫೀಲ್ಡರ ವಹಿವಾಟುಗಳೆಲ್ಲಾ ಬಹು ಅವ್ಯವಸ್ಥಿತ ಸ್ಥಿತಿಯಲ್ಲಿದ್ದುವು. ಅವುಗಳನ್ನು ನಾನು ಅವರ ವಿನಮ್ರ ಸೇವಕನಾಗಿ ಸರಿಪಡಿಸಿರುತ್ತೇನೆ. 'ನಾನು ಉಪಕಾರ ಮಾಡಿದೆ, ನಾನು ಮಾತ್ರ' ಎಂದು ನಾನು ಹೇಳುವುದು ನ್ಯಾಯವಾಗಲಾರದು. ಉಪಕಾರವು ಪರಸ್ಪರವಾಗಿ ನಡೆದಿದೆ – ಮಿ. ವಿಕ್ಫೀಲ್ಡರಿಂದ ನನಗೆ ತುಂಬಾ ಉಪಕಾರವಾಗಿದೆ. ಮಿ. ಮತ್ತು ಮಿಸ್ ವಿಕ್ಫೀಲ್ಡರ ಹಿತಕ್ಕಾಗಿಯೇ ನಾನು – ಕೃತಜ್ಞತಾಬುದ್ಧಿಯಿಂದ – ನನ್ನ ಕಡೆಯ ಸಹಾಯವನ್ನು ಕೊಟ್ಟಿರುತ್ತೇನೆ. ನಮ್ಮಂಥವರಿಗೂ ನೀತಿ, ಧರ್ಮಗಳ ಜ್ಞಾನವಿರುತ್ತದೆ, ಕೃತಜ್ಞತೆಯಿರುತ್ತದೆ. ನಾನಿದ್ದ ಸ್ಥಾನ, ಸಂದರ್ಭಗಳಲ್ಲಿ ಇನ್ನೊಬ್ಬನಿರುತ್ತಿದ್ದರೆ, ಮಿ. ವಿಕ್ಫೀಲ್ಡರು ಮಾಡಿರುವ ಅಜಾಗ್ರತೆ, ತಪ್ಪು ಮೊದಲಾದುವುಗಳನ್ನು ಉಪಯೋಗಿಸಿಕೊಂಡು, ಅವರನ್ನು ತನ್ನ ಅಂಕಿತದೊಳಗೆ – ಮುಷ್ಠಿಯೊಳಗೆ, ಇಟ್ಟುಕೊಳ್ಳುತ್ತಿದ್ದನು. ಅವರ ವಹಿವಾಟುಗಳ ಪರಿಸ್ಥಿತಿ ಹಾಗಿತ್ತು" ಎಂದು ಉರೆಯನಂದನು. 'ಅಂಕಿತದೊಳಗೆ' ಎಂದು ಅವನು ಹೇಳುತ್ತಿದ್ದಾಗ ಅವನ ತಿರುಟಲು ಕೈಯ್ಯ ಹೆಬ್ಬೆರಳನ್ನು ಮೇಜಿನ ಮೇಲೆ ಒತ್ತಿ ಇಟ್ಟು, ಆ ಒತ್ತಿ ಇಟ್ಟಾ ಕ್ರಮದಿಂದ ಮೇಜಿಗೂ ತನ್ನ ಹೆಬ್ಬೆರಳಿಗೂ ಮಧ್ಯದಲ್ಲಿರುವ ಮಿ. ವಿಕ್ಫೀಲ್ಡರು ಅವನ ವಶಕ್ಕೆ – ಅಧಿಕಾರಕ್ಕೆ, ಒಳಪಟ್ಟಿಲ್ಲವೇ ಎಂದು ನಾನು ನೋಡಿ ನಿಶ್ಚೈಸಬಹುದೆಂಬಂತೆ ನನ್ನನ್ನೆ ನೋಡಿದನು.

ಉರೆಯನ ಮಾತುಗಳೂ ನೋಟವೂ ನನಗೆ ಸಹಿಸಲಾರದವೇ ಆಗಿದ್ದರೂ ಏಗ್ನೆಸ್ಸಳ ಹಿತವನ್ನು ಗ್ರಹಿಸಿ – ಅವಳು ಹಿಂದೆ ಹೇಳಿದ್ದ ಎಚ್ಚರಿಕೆಯ ಮಾತುಗಳನ್ನು ನೆನೆಸಿಕೊಂಡು – ತಾಳ್ಮೆಯಿಂದಲೇ ಮಾತಾಡತೊಡಗಿದೆನು.

"ಮಿ. ಕಾಪರ್ಫೀಲ್ಡ್, ನಾನು ಮಿಸ್ ಏಗ್ನೆಸ್ಸಳಿಗಾಗಿಯೂ ಆ ರೀತಿ ಮಿ. ವಿಕ್ಫೀಲ್ಡರಿಗೆ ಸಹಾಯ ಮಾಡಬೇಕಾಯಿತು. ಮಿಸ್ ಏಗ್ನೆಸ್ಸಳು ಯೋಗ್ಯ ತರುಣಿಯಲ್ಲವೇ?" ಎಂದು ಉರೆಯ ಕೇಳಿದ.

"ನಿಜ – ನಿನ್ನ ಮಾತು ಪರಿಪೂರ್ಣ ನಿಜ. ಅವಳಷ್ಟು ಸದ್ಗುಣ ಸಂಪನ್ನೆಯನ್ನು ನಾನು ಎಲ್ಲೂ ನೋಡಿರುವುದಿಲ್ಲ. ಅವಳು ಯಾರ ಸಮೀಪದಲ್ಲಿದ್ದರೂ ಅವರೆಲ್ಲರಿಗಿಂತ ಉತ್ತಮಳಾಗಿ ಅವಳು ಸ್ವಾಭಾವಿಕವಾಗಿ ಮೆರೆಯುವಳು" ಎಂದು ನಾನು ಉತ್ತರವಿತ್ತೆ.

"ಅವಳ ಯೋಗ್ಯತೆಯನ್ನು ಪ್ರಶಂಸಿಸಿದುಕ್ಕಾಗಿ ನಿನಗೆ ವಂದನೆಗಳು" ಎಂದು ಉರೆಯನು ನನಗೆ ವಂದಿಸಿದನು.

ಉರೆಯನು ಏಗ್ನೆಸ್ಸಳನ್ನು ವಂದಿಸಿದುದೇ ಏಗ್ನೆಸ್ಸಳಿಗೆ ಅಪಮಾನಕರವೆಂದು ನಾನು ತಿಳಿದೆ. ಆದರೂ ಅದನ್ನು ತೋರಿಸದೆ –

"ಏಗ್ನೆಸ್ಸಳ ಯೋಗ್ಯತೆ ಯಾರ ಪ್ರಶಂಸೆಯಿಂದಲೂ ಬದಲಾಗಲಾರದು. ಅದು ಪ್ರಶಂಸೆಗೆ ಒಳಗಾಗತಕ್ಕದ್ದಲ್ಲ. ಮತ್ತು ನನ್ನ ಪ್ರಶಂಸೆಗೆ ನಿನ್ನ ವಂದನೆಗಳು ಅನಗತ್ಯ, ಉರೆಯ" ಎಂದು ನಾನು ಹೇಳಿಬಿಟ್ಟೆ.

ಉರೆಯನು ಮತ್ತಷ್ಟು ವಿನೀತತೆಯಿಂದ–

"ಮಿ. ಕಾಪರ್ಫೀಲ್ಡ್, ನೀನು ನನ್ನನ್ನು 'ಉರೆಯಾ' ಎಂದು ಮಾತ್ರ ಕರೆದರೆ ಸಾಕು. ನಾನು ಬಡವ – ನನ್ನ ತಾಯಿಯೂ ಬಡವಿ. ನಮ್ಮ ಸ್ಥಾನದ ಅರಿವು ನಮಗೆ ಸದಾ ಇದ್ದೇ ಇದೆ. ಆದರೆ, ಇಂದು ನಿನ್ನಲ್ಲಿ ಇದನ್ನೆಲ್ಲ ಹೇಳಲು ಕಾರಣ ನಮ್ಮ ಬಾಲ್ಯದ ಪರಿಚಯ ಮತ್ತು ಸ್ನೇಹ ಮಾತ್ರವಾಗಿದೆ. ನಮ್ಮಂಥ ಬಡವರಿಗೂ ಮನಸ್ಸು, ಹೃದಯ, ಪ್ರೇಮಭಾವನೆ ಇವೆಯಷ್ಟೆ. ಆ ಕಾರಣವಾಗಿ, ನನ್ನ ಬಾಲ್ಯದ ಸ್ನೇಹಿತನ ಹತ್ತಿರ ಮಾತ್ರ, ಈಗ ನನ್ನ ಹೃದಯವನ್ನು ಬಿಚ್ಚಿ ತೋರಿಸುತ್ತಿದ್ದೇನೆ. ನಾನು ಏಗ್ನೆಸ್ಸಳನ್ನು ಪ್ರೀತಿಸುತ್ತಿದ್ದೇನೆ. ಅವಳ ದಿವ್ಯ ಹಸ್ತವನ್ನು ದಾಂಪತ್ಯದ ಕಟ್ಟಿನಿಂದ ಹಿಡಿದು ಬಾಳುವ ಅಭಿಲಾಶೆ ನನಗಿದೆ" ಅಂದನು.

ಉರೆಯ ಅವನ ಅಂತರಂಗವನ್ನು ನನ್ನಲ್ಲಿ ಬಿಚ್ಚಿ ಹೇಳಲು ನಮ್ಮ ಸ್ನೇಹ ಕಾರಣವಾಗಿರಲಿಲ್ಲವೆಂದೂ ಅವನ ದುರುದ್ದೇಶ ಸಾಧನೆಗೆ ಈ ಕ್ರಮದ ಮಾತುಗಳು ಅಗತ್ಯವೆಂದೂ ಅವನು ತಿಳಿದಿದ್ದನೆಂದೂ ನನಗೆ ಗೊತ್ತಾಯಿತು. ಆಗ ನನಗೆ ಆಗಿದ್ದ ಕೋಪ ಹೇಳತೀರದು. ತರ್ಕಗಳಿಂದ ಗೊತ್ತುಪಡಿಸಲಾಗದ ಭಾವನೆಗಳು ಮನಸ್ಸಿನಲ್ಲೆದ್ದು – ಆಶ್ಚರ್ಯ, ದುಃಖ, ಕ್ರೋಧಗಳ ನಾನಾ ಸ್ವರೂಪಗಳು ನನ್ನನ್ನು ಬಾಧಿಸಿದುವು. ಆದರೂ ನನ್ನ ಸಿಟ್ಟಿನ ಆವೇಶದಿಂದ ಏಗ್ನೆಸ್ಸಳಿಗೂ ಮಿ. ವಿಕ್ಫೀಲ್ಡರಿಗೂ ಬಾಧಕವಾಗಬಾರದೆಂಬ ಒಂದೇ ಒಂದು ಕಾರಣಕ್ಕಾಗಿ ನಾನು ಮೌನವಾಗಿರುತ್ತಾ ಅವನನ್ನೇ ಮಾತಾಡಲು ಎಡೆಕೊಟ್ಟೆನು. ಹಾಗಾಗಿ ಉರೆಯನು ಮಾತಾಡತೊಡಗಿದನು –

"ನನ್ನ ಸ್ಥಿತಿಯನ್ನು ತಿಳಿಸುತ್ತೇನೆ, ಕೇಳು. ನಾನು ಬಡವ. ನಮ್ಮ ಮನೆ ಚಿಕ್ಕದು. ಈ ಪಾಲುದಾರಿಕೆಯ ಜತೆಕೂಟವು ನನಗೆ ಪೂರ ಹೊಸತು. ಅದು ಸ್ಥಿರವಾಗಲೂ ಸಮಯ ಬೇಕು. ನನ್ನ ಈ ಎಲ್ಲಾ ಕುಂದು ಕೊರತೆಗಳನ್ನು ಜ್ಞಾಪದಲ್ಲಿಟ್ಟುಕೊಂಡು, ಏಗ್ನೆಸ್ಸಳನ್ನು ಪಡೆಯಲು ಅರ್ಹತೆ ಸಂಪಾದಿಸುವುದಕ್ಕಾಗಿ ಹಗಲಿರುಳು ದುಡಿಯುವೆನು. ಇಂಥ ಅರ್ಹತೆ ಪಡೆಯಲು – ಮಿ. ಕಾಪರ್ಫೀಲ್ಡ್ – ನಿನ್ನ ಸಹಾಯವೂ ಅಗತ್ಯವಿದೆ. ನನ್ನ ಬಾಲ್ಯದ ಸ್ನೇಹಿತನಾಗಿ, ನನ್ನ ಮತ್ತು ಏಗ್ನೆಸ್ಸಳ ಗುಣಗಳನ್ನು ಬಲ್ಲ – ಈ ಎಲ್ಲ ಪರಿಸ್ಥಿತಿಗಳನ್ನು ಅರ್ಥಮಾಡಿ ವರ್ತಿಸಬಲ್ಲ – ನೀನೊಬ್ಬನು ನನಗೆ ಸಹಾಯ ಮಾಡಿದರೆ ನನಗೆ ನನ್ನ ಬಯಕೆ ಸಿದ್ಧಿಯಾಗುವುದು ಖಂಡಿತ. ನೀನು ನನಗೆ ಅಡ್ಡ ಬರದಿರಬೇಕಾದುದೇ ಇದರಲ್ಲಿ ಪ್ರಥಮವಾದ, ಮುಖ್ಯ, ವಿಷಯ. ಎಲ್ಲವನ್ನೂ ಗ್ರಹಿಸಿ ನೋಡು. ತಂದೆಯ ಸುಖಕ್ಕಿಂತ ಬೇರೆ ಯಾವ ಸುಖವೂ ತನಗಿಲ್ಲವೆಂದು ಏಗ್ನೆಸ್ಸಳು ತಿಳಿಯುತ್ತಿದ್ದಾಳೆ. ಅವಳ ತಂದೆಯನ್ನು ಕಷ್ಟ ನಿಷ್ಠುರಗಳಿಂದ ರಕ್ಷಿಸಿ ಪೋಷಿಸಲು ತಕ್ಕ ತ್ರಾಣ, ಅವಕಾಶವುಳ್ಳ ನನ್ನಲ್ಲಿ ಅವಳು ಅನುರಕ್ತಳಾಗದಿರಲು ಕಾರಣವಿಲ್ಲ. ತುಂಬಾ ವಿವೇಕವಿದ್ದು ಪೂರ್ವಾಪರ ಗ್ರಹಿಸಬಲ್ಲ ಏಗ್ನೆಸ್ಸಳಿಗೆ ಈ ಸಂದರ್ಭ ಪೂರ್ಣ ಅರ್ಥವಾಗದಿರದು. ಬೇಕಾದುದು ನಿನ್ನೊಬ್ಬನ ಸಹಾಯ ಮಾತ್ರ. ನಾನು ಬಡವನಾದರೂ ನನ್ನ ಪರಿಶ್ರಮಗಳಿಂದ

ಸಾಕಷ್ಟು ಯೋಗ್ಯತೆಯನ್ನು ಸಂಪಾದಿಸಬಲ್ಲೆ" ಎಂದು ಮೊದಲಾಗಿ ಉರೆಯನು ಹೇಳಿದನು. ನಾನೊಬ್ಬ ಅವನ ಸ್ನೇಹಿತನೆಂದು ಶಬ್ದಗಳಲ್ಲಿ ತೋರಿಸುತ್ತಾ ಅರ್ಥದಿಂದ ನಾನು ಅವನ ಪ್ರತಿಸ್ಪರ್ಧಿ, ವಿರೋಧಿ ಎಂಬಂತೆ ಕಾಣಿಸುತ್ತಾ ನಾನು ಪ್ರೀತಿಸಿ ಗೌರವಿಸುವ ಆ ತಂದೆ ಮಗಳಂದಿರ ಹಿತಕ್ಕಾಗಿಯೇ ನಾನು ಅವನನ್ನು ವಿರೋಧಿಸಬಾರದೆಂದು ನನ್ನನ್ನು ಎಚ್ಚರಿಸುತ್ತಾ ಅವನ ಅಧಿಕಾರ, ಅಂಕಿತದೊಳಗೆ ಆ ತಂದೆ ಮಗಳಂದಿರು ಇದ್ದಾರೆಂಬುದನ್ನು ಉದ್ದೇಶಪೂರ್ವಕವಾಗಿ, ವಕ್ರವಾಗಿ ತಿಳಿಸುತ್ತಾ ಉರೆಯನು ಮಾತಾಡಿದನು.

ಉರೆಯನ ಬಡತನ ಪ್ರದರ್ಶನ, ವಿನೀತತೆಗಳೆಲ್ಲಾ ಬರೇ ಸೋಗು ಎಂದೂ ಮಿ. ವಿಕ್ಫೀಲ್ಡರ ಮೇಲೆ ಏನೋ ಒಂದು ಬಲವಾದ ಮತ್ತು ಗುಪ್ತವಾದ ಹಿಡಿತ ಇವನಿಗೆ ಇದೆಯೆಂದೂ ನನಗೆ ತಿಳಿಯಿತು – ಹಾಗೆ ತಿಳಿಯುತ್ತಾ ಹೆದರಿದೆನು.

ಆ ರಾತ್ರಿ ಅವನು ನನ್ನ ಮನೆಯಲ್ಲೇ ಮಲಗಿದನು. ಕಪ್ಪು ಬಟ್ಟೆಯ ದುಸ್ತನ್ನು ತೊಟ್ಟಿದ್ದ ಉರೆಯ ದುಸ್ತನ್ನು ಕಳಚದೆ ಮಲಗಿ ನಿದ್ರಿಸುತ್ತಿದ್ದಾಗ ಒಂದು ಹೆಣದಂತೆಯೇ ತೋರುತ್ತಿದ್ದನು. ನನಗೆ ನಿದ್ರೆ ಬರದೆ ಕಷ್ಟಪಡುತ್ತಿದ್ದಾಗ ಉರೆಯ ನಿಜವಾಗಿಯೂ ಹೆಣವೇ ಆಗಿರಬಹುದೇ ಎಂದು ಆಗಿಂದಾಗ್ಗೆ ಅವನನ್ನು ನೋಡುತ್ತಿದ್ದೆ. ಆಗ ಉರೆಯ ಟಪಾಲು ಪೆಟ್ಟಿಗೆಯಂತೆ ಅರ್ಧ ತೆರೆದಿಟ್ಟ ಬಾಯಿಯಿಂದ ಉಸಿರೆಳೆದು ಮೂಗು ಗಂಟಲುಗಳಲ್ಲಿ ತೂರಿ ಒಳಬಿಡುವಾಗ ನೀರು ನಳಿಗೆಯಲ್ಲಿ ಹರಿದಂತೆ ಶಬ್ದ ಕೇಳಿಸುತ್ತಿತ್ತು.

ಉರೆಯ ಬೆಳಗ್ಗೆ ನಮ್ಮ ಮನೆಯಿಂದ ಹೊರ ಹೊರಟಾಗ ಭಯಂಕರವಾದ ಆ ವರೆಗಿನ ರಾತ್ರಿಯೂ ತೊಲಗಿತು. ನಾನು ಆ ದಿನ ವಕೀಲ್ ಆಫೀಸಿಗೆ ಹೋಗುವ ಮೊದಲು ಮನೆಯ ಎಲ್ಲಾ ಕಿಟಕಿಗಳನ್ನು ತೆರೆದಿಟ್ಟು, ಗಾಳಿ ಬೆಳಕು ಒಳನುಗ್ಗಿ ಉರೆಯನ ಎಲ್ಲಾ ವಿಧದ ಸೋಗು ಸಂಬಂಧಗಳನ್ನೂ ಉಚ್ಚಾಟನೆಯಾಗುವಂಥ ಏರ್ಪಾಡು ಮಾಡಿದ್ದೆನು.

ಅಧ್ಯಾಯ ಇಪ್ಪತ್ತಾರು

ನಾನು ಮೋಹಪರವಶನಾದೆನು

ಉರೆಯ ಏಗ್ನೆಸ್ಸಳನ್ನು ಮದುವೆಯಾಗಲು ಹವಣಿಸುತ್ತಿದ್ದಾನೆಂಬುದು ನನ್ನ ಮನಸ್ಸನ್ನು ಕೊರೆಯತೊಡಗಿತು. ಈ ವಿಷಯವನ್ನು ಏಗ್ನೆಸ್ಸಳಿಗೆ ತಿಳಿಸಬೇಕೇ ಬೇಡವೇ ಎಂದು ಆಲೋಚಿಸಿ, ಸದ್ಯ ತಿಳಿಸದಿರುವುದೇ ಲೇಸೆಂದು ನಿರ್ಧರಿಸಿದೆ. ಏಗ್ನೆಸ್ಸಳ ಪ್ರೇಮ ತಂದೆಯ ಮೇಲೆ ಎಷ್ಟಿದೆಯೆಂಬುದನ್ನು ನಾನು ಅರಿತಿತ್ತುದರಿಂದ, ಅವಳು ತಂದೆಯ ರಕ್ಷಣೆಗಾಗಿ, ಸುಖಕ್ಕಾಗಿ, ಉರೆಯನನ್ನೇ ಒಲಿಸುವವರೆಗೂ ತ್ಯಾಗ ಮಾಡುವಳೆಂದು ತಿಳಿದು ಹೆದರುತ್ತಾ ನಾನು ದುಃಖಿಸಿದೆನು. ಮಗಳ ಈ ವಿಧದ ಪ್ರೇಮವೇ ತನ್ನ ಇಚ್ಛೆಯ ಸಾಫಲ್ಯಕ್ಕಿರುವ ಸಾಧನವೆಂದು ಉರೆಯ ತಿಳಿದ ವಿಷಯವಂತೂ ನನಗೆ ಸಹಿಸಲಾರದ ಬಾಧೆಯಾಗಿ ತೋರಿತು. ಈ ಎಲ್ಲಾ ಭಾವನೆಗಳು ಜತೆಗೂಡಿ ನನ್ನ ಜೀವನವೇ ಭಾರವೂ ದುಃಖಮಯವೂ ಆಗತೊಡಗಿತು. ಏಗ್ನೆಸ್ಸಳು ನನ್ನ ಪತ್ನಿಯಾಗಬೇಕೆಂಬ ಗುರಿಯಿಂದ ನಾನವಳನ್ನು ಪ್ರೀತಿಸುತ್ತಿರಲಿಲ್ಲವಾದರೂ ಇತರರು ಅವರಲ್ಲೂ ಉರೆಯನಂಥವರು ಅವಳನ್ನು ವರಿಸಲು ಪ್ರಯತ್ನಿಸುತ್ತಿರುವುದು ನನಗೆ ದುಃಖಕರ ವಿಷಯವಾಗಿ ತೋರುತ್ತಿತ್ತು. ನನ್ನ ಹೃದಯದ ಒಂದಂಶದಲ್ಲಿ ಈ ವಿಧದ ದುಃಖವಿದ್ದಾಗಲೇ ನನ್ನ ಜೀವನ ವೃತ್ತಿಯಾದ ಪ್ರೋಕ್ಟರ್ ಕೆಲಸವೂ ಬಹು ನಿರುತ್ಸಾಹದಾಯಕವೇ ಆಗಿದ್ದುದ್ದು ಮನಸ್ಸಿನ ಒಂದು ಭಾಗದಲ್ಲಿ ಬಹು ಬೇಸರ, ಆಲಸ್ಯಗಳನ್ನೆಬ್ಬಿಸಿತು. ಈ ರೀತಿಯಾಗಿ ನನ್ನ ಅಂದಿನ ದಿನಗಳೆಲ್ಲಾ ನಿರುತ್ಸಾಹಕರವೂ ದುಃಖಮಯವೂ ಆಗಿದ್ದುವು.

ನನ್ನ ತರಬೇತಿಯ ಪರೀಕ್ಷಾರ್ಥ ಕಾಲವಾಗಿದ್ದ ಒಂದು ತಿಂಗಳೂ ದಾಟಿ ನಾನು ನಿಯಮಾನುಸಾರವಾಗಿ ಸ್ಪೆನ್ಲೋ ಮತ್ತು ಜರ್ಕಿನ್ಸರ ಇಲಾಖೆಯಲ್ಲಿ ಒಬ್ಬ ಕ್ರಮಾಗತ ಪ್ರೋಕ್ಟರನಾಗಿಯೇ ದಾಖಲು ಮಾಡಲ್ಪಟ್ಟೆನು. ಹೀಗೆ ದಾಖಲಾದ ದಿನ ನಾನು ನನ್ನ ಸಹೋದ್ಯೋಗಿಗಳಿಗೂ ನಮ್ಮ ಇಲಾಖೆಯ ಗುಮಾಸ್ತರುಗಳಿಗೂ ಒಂದು ಔತಣ ಕೊಟ್ಟೆನು. ಔತಣಕ್ಕೆ ಮಿ. ಸ್ಪೆನ್ಲೋರವರೂ ಬಂದಿದ್ದರು. ಅವರು ಔತಣದಲ್ಲಿ ಭಾಗವಹಿಸುತ್ತಾ ತಾನೂ ಒಂದು ಔತಣವನ್ನು ನಮಗೆಲ್ಲರಿಗೂ ಅವರ ಮನೆಯಲ್ಲಿ ಕೊಡುವುದಾಗಿ ಹೇಳಿದರು. ಆದರೆ, ಔತಣದ ದಿನವನ್ನು ಮಾತ್ರ, ಸ್ವಲ್ಪ ಹಿಂದಿನಿಂದ – ಪೇರಿಸ್ಸಿನಲ್ಲಿ ವಿದ್ಯಾಭ್ಯಾಸಕ್ಕೆ ಹೋಗಿದ್ದ ಅವರ ಮಗಳು ಮರಳಿ ಬಂದ ಕೂಡಲೇ ತಿಳಿಸುವುದಾಗಿಯೂ ಹೇಳಿದರು.

ನಾಲ್ಕಾರು ದಿನಗಳು ಕಳೆಯುವುದರಲ್ಲೇ ಔತಣದ ದಿನವು ಗೊತ್ತು ಮಾಡಲ್ಪಟ್ಟು ನಮಗೆಲ್ಲ ಆಮಂತ್ರಣ ಬಂದಿತು. ಆಗ ನಮ್ಮ ಆಫೀಸಿನ ಹಳೆ ಗುಮಾಸ್ತರುಗಳು ಅನೇಕ ವಿಷಯಗಳನ್ನು ಮಾತಾಡತೊಡಗಿದರು. ಹಳೆ ಗುಮಾಸ್ತರುಗಳು ಮಿ. ಸ್ಪೆನ್ಲೋರವರ ಔತಣಗಳಲ್ಲಿ ಹಿಂದೆ ಅವರು ಭಾಗವಹಿಸಿದ್ದ ಹೆಮ್ಮೆಗಾಗಿಯೇ ಅಲ್ಲಿನ ವೈಶಿಷ್ಟ್ಯಗಳನ್ನು ವರ್ಣಿಸಿದರು.

ಮಿ. ಸ್ಪೆನ್ಲೋರವರು ಆ ರೀತಿಯ ಔತಣಗಳನ್ನು ಈ ಮೊದಲು ಅನೇಕ ಸಲ ಏರ್ಪಡಿಸಿದ್ದರಂತೆ. ಆಮಂತ್ರಣವಿಲ್ಲದೆ ಎಂಥವರಿಗೂ ಹೋಗಿ, ನೋಡಿ, ತಿಳಿಯಲು ಅನುಕೂಲವಿಲ್ಲದಷ್ಟು ಗೋಪ್ಯವಾಗಿ, ಗಹನವಾಗಿ, ಗಂಭೀರ ಕ್ರಮಗಳಿಂದ, ಅವರ ವಸ್ತು ಒಡವೆಗಳೂ ಶಿಸ್ತು ಮರ್ಯಾದೆಗಳೂ ಇದ್ದುವಂತೆ. ಬೆಳ್ಳಿಯ ಮತ್ತು ಅತಿ ಉತ್ತಮ ತರದ ಚೈನಾ ತಟ್ಟೆಗಳನ್ನು ಮಾತ್ರ ಮಿ. ಸ್ಪೆನ್ಲೋರವರು ಉಪಯೋಗಿಸುತ್ತಿದ್ದರಂತೆ. ಅವರು ಕಡಿಮೆ ತರದ ಮಾಲುಗಳನ್ನು ಕಣ್ಣಿನಿಂದಲೂ ಸಹ ನೋಡರಂತೆ! ಊಟದಲ್ಲೂ ಸಹ ಹಾಗೆಯೇ ಅತ್ಯುತ್ಕೃಷ್ಟ ತರದ ತಿಂಡಿ ಪಾನೀಯಗಳನ್ನು ಮಾತ್ರ ಅವರು ಬಡಿಸುತ್ತಿದ್ದರಂತೆ. ಅವನ್ನೂ ಬೇಕು ಬೇಕಾದಷ್ಟೆಲ್ಲ ಬಹು ಸಂತೋಷದಿಂದ ಬಡಿಸುವ ಏರ್ಪಾಡು ಅವರದ್ದಾಗಿತ್ತಂತೆ. ಒಟ್ಟಿನಲ್ಲಿ ಅವರ ಬಂಗಲೆಯಷ್ಟು, ಅವರ ಹೂದೋಟದಷ್ಟು, ಅವರ ಊಟೋಪಚಾರಗಳಷ್ಟು, ಅವರ ಮನೆಯ ಚಿನ್ನ, ಬೆಳ್ಳಿ, ವಸ್ತ್ರ, ಉಡಿಗೆ, ಕುರ್ಚಿ, ಮೇಜು ಕಪಾಟುಗಳಷ್ಟು ಉತ್ತಮತರದ್ದು ಇನ್ನೆಲ್ಲಿಯೂ ಖಂಡಿತವಾಗಿಯೂ ಇರಲಿಲ್ಲವಂತೆ. ಅಲ್ಲಿನ ಔತಣಕ್ಕೆ ದೊರಕುವ ಆಮಂತ್ರಣವೇ ಮಹತ್ವದ್ದೆಂದೂ ಗುಮಾಸ್ತರುಗಳು ಮಾತಾಡಿಕೊಳ್ಳುತ್ತಿದ್ದರು.

ಮಿ. ಸ್ಪೆನ್ಲೋರವರು ತಾವೇ ಬಂದು ನನಗೆ ಆಮಂತ್ರಣವನ್ನಿತ್ತು, ನನ್ನನ್ನು ತನ್ನ ಜತೆಯಲ್ಲಿ ಸಾರೋಟಿನಲ್ಲಿ ಕರೆದುಕೊಂಡು ಹೋಗುವುದಾಗಿ ತಿಳಿಸಿದರು. ಔತಣದ ದಿನ – ನಾವು ಸಾರೋಟನ್ನು ಏರುವ ಮೊದಲು – ಆಫೀಸಿನ ಪೇದೆಗಳೂ ಗುಮಾಸ್ತರುಗಳೂ ಬಹು ಭಯ ಭಕ್ತಿಯಿಂದ, ಮೌನವಾಗಿರುತ್ತಾ ನಮ್ಮ ಸಾಮಾನುಗಳನ್ನು ಸಾರೋಟಿನಲ್ಲಿಟ್ಟರು. ಚೆನ್ನಾಗಿ ದುಸ್ತು ಮಾಡಿಕೊಂಡು ಮಿ.ಸ್ಪೆನ್ಲೋರವರೂ ನಾನೂ ಸಾರೋಟನ್ನು ಹತ್ತಿದೆವು. ಸಾರೋಟು ಬಹು ನಾಜೂಕಾಗಿತ್ತು. ಮಾತ್ರವಲ್ಲದೆ ಆ ಕುದುರೆಗಳೂ ಒಂದೇ ರೂಪ, ಬಣ್ಣ, ಠೀವಿಯಲ್ಲಿದ್ದುವು. ಒಂದು ರಾಜ ಮೆರವಣಿಗೆ ಮುಂದುವರಿಯುವಂತೆ ನಾವು ಮುಂದರಿಸಿದೆವು. ಮಜಭೂತಾದ ಆ ಕುದುರೆಗಳು ತಮ್ಮ ಉದ್ದ ಕತ್ತನ್ನು ಗರ್ವದಿಂದ ಎತ್ತಿ ಮುಂದೊತ್ತಿ ಕಾಲು ತೆಗೆಯುವಾಗ ಅವು ಮಿ. ಸ್ಪೆನ್ಲೋ ವಕೀಲರದಲ್ಲದೆ ಇನ್ನು ಯಾರದೂ ಅಲ್ಲವೆಂದು ಕುದುರೆಗಳೇ ಹೇಳುತ್ತಿರುವಂತೆ ತೋರಿದುವು.

ಔತಣಕ್ಕೆ ತುಂಬಾ ಜನರು ಬಂದಿದ್ದರು. ವಕೀಲರೆಲ್ಲ ಬಹು ಸೊಗಸಾದ ಬಟ್ಟೆಗಳನ್ನು ತೊಟ್ಟು, ಅವರ ಇಸ್ತ್ರಿಯ ಹಿಟ್ಟಿನ ಹೊಳಪಿನಿಂದ, ಆ ಕೂಟಕ್ಕೇ ಒಂದು ಅಸಾಧಾರಣ ಪ್ರಭೆಯನ್ನು ಕೊಟ್ಟಿದ್ದರು, ಎಂದರೆ ವಿಶೇಷವಾಗಲಾರದು.

ಮಿ. ಸ್ಪೆನ್ಲೋರವರ ನಮ್ಮ ಸವಾರಿಯ ಕಾಲದಲ್ಲಿ ಅನೇಕ ವಿಷಯಗಳನ್ನು ಬಹು ಮಾರ್ಮಿಕವಾಗಿ ವಿವರಿಸಿದರು. ವಕೀಲಿ ವೃತ್ತಿಯಲ್ಲಿನ ಲಾಭ ನಷ್ಟಗಳು, ಸುಖ, ಸಂತೋಷ, ಪ್ರತಿಷ್ಠೆಗಳು, ಅವುಗಳ ನಿರ್ವಹಣದಲ್ಲಿನ ನಮ್ಮ ಜವಾಬ್ದಾರಿ – ಕೆಲವರು ವರ್ತಿಸುವ ಬೇಜವಾಬ್ದಾರಿ ಮೊದಲಾದುವನ್ನೆಲ್ಲ ವಿವರಿಸಿದರು. ವಕೀಲಿ ವೃತ್ತಿ ಇತರ ಎಲ್ಲಾ ವೃತ್ತಿಗಳಂತೆಯೇ ಒಂದು ಜೀವನ ವೃತ್ತಿಯೇ ಆಗಿರುವುದಾದರೂ ಸರಕಾರದ ಶಾಸನ, ಸೂತ್ರ, ಧೋರಣೆಗಳನ್ನು ಅರ್ಥಮಾಡಿ, ವಿಮರ್ಶೆ ಮಾಡಿ, ಸಮಾಜದ ಕಲ್ಯಾಣವನ್ನು ಸಾಧಿಸಿ, ರಕ್ಷಿಸಿ, ಅವ್ಯವಸ್ಥೆಗಳನ್ನು ವ್ಯವಸ್ಥೆಗೊಳಿಸುವ ವೃತ್ತಿ ಅದೆಂದೂ ಈ ಕಾರಣದಿಂದಾಗಿ, ಜನರು ಸರಕಾರವನ್ನು ಗೌರವಿಸುವಂತೆಯೇ ವಕೀಲರನ್ನೂ ಗೌರವಿಸುವರೆಂದೂ ಸಮಾಜದ ಹಿತಾಭಿವೃದ್ಧಿಗಳಿಗೆ ಈ ವೃತ್ತಿ ಸಂಬಂಧಿಸಿರುವುದರಿಂದ ಇದೊಂದು ಧರ್ಮಪರ ವೃತ್ತಿಯೆಂದೂ ಸಮಾಜ ಕಲ್ಯಾಣ – ನ್ಯಾಯ ಧರ್ಮಗಳ ಸಮರ್ಥನೆ – ಗುರಿಯಿಂದ ಈ ವೃತ್ತಿಯನ್ನು ಅನುಸರಿಸಿದರೆ, ಇದೊಂದು ಪರಮ ಯೋಗ್ಯ ವೃತ್ತಿಯಾಗಬಲ್ಲುದೆಂದೂ ಆದರೆ, ಕೆಲವು ವಕೀಲರು ಅನುಸರಿಸುವಂತೆ – ಪರಾರ್ಥವನ್ನು ಮರೆತು ವೃತ್ತಿ ನಡೆಸಿದ್ದಾದರೆ, ಸ್ವಾರ್ಥ ಮಾತ್ರ ಉಳಿದು, ವೃತ್ತಿ ಧರ್ಮಬಾಹಿರವೂ ಸಮಾಜ ಘಾತುಕವೂ ಆಗಬಲ್ಲುದೆಂದೂ ಹೇಳಿದರು. ಒಂದು ಸಿವಿಲ್ ಕೇಸಿನಲ್ಲಿ, ಕೇಸಿಗೆ ಸಂಬಂಧಪಟ್ಟು ಆಸ್ತಿಗಳೂ ಪಾರ್ಟಿಗಳೂ ತುಂಬಾ ಇದ್ದದ್ದಾದರೆ, ವೃತ್ತಿಯ ದೃಷ್ಟಿಯಿಂದ, ಅಂಥಾ ಕೇಸು ಉತ್ತಮ. ಅದರಲ್ಲೂ ಆ ಕೇಸುಗಳಲ್ಲಿ ಅಪೀಲುಗಳೂ – ಸಿವಿಲ್ಲಿಗೆ ಸಂಬಂಧಿಸಿ ಕ್ರಿಮಿನಲ್ ಕೇಸುಗಳೂ ಇದ್ದದ್ದಾದರೆ ವಕೀಲರ ಅನುಭವ ಹೆಚ್ಚಾಗುವುದು ಮಾತ್ರವಲ್ಲದೆ, ಹಣ ಸಂಪಾದನೆಯೂ ಹೆಚ್ಚುವುದು – ಎಂದು ಮೊದಲಾಗಿ, ಕೋರ್ಟ್ಗೂ ಕಮಿಟಿ, ಪಾರ್ಲಿಮೆಂಟು ಇವೆಲ್ಲವುಗಳನ್ನು ಕುರಿತೂ ಮಾತಾಡಿದರು.

ನನ್ನ ಈ ಭಾಗ ಜೀವನ ವೃತ್ತಾಂತದಲ್ಲಿ ಸ್ವಲ್ಪ ಅಪ್ರಾಸಂಗಿಕವಾಗಿ ತೋರಬಹುದಾದರೂ ಮಿ. ಸ್ಪೆನ್ಲೋರವರ ಮತ್ತು ನನ್ನ ಪರಿಚಯ ಈ ರೀತಿಯಾಗಿಯೇ ಬೆಳೆದುದರಿಂದ, ಇಷ್ಟಾದರೂ ಹೇಳದೆ ನಿರ್ವಾಹವಿಲ್ಲವೆಂದು ತೋರಿ, ಇದನ್ನು ಬರೆದಿರುತ್ತೇನೆ.

ನಾವು ಮಾರ್ಗವನ್ನು ಬಿಟ್ಟು ಅವರ ಬಂಗಲೆಗೆ ತಲುಪುವ ಮೊದಲೇ ಅವರ ಹೂದೋಟ, ವಿಶ್ರಾಂತಿ ಕಟ್ಟೆ, ಕಾರಂಜಿ, ಸಾಲುಮರ ಮೊದಲಾದ ಸುಂದರ ದೃಶ್ಯಗಳನ್ನು ಕಂಡೆನು. ಅವುಗಳನ್ನು ದಾಟಿಯೇ ನಾವು ಮನೆಗೆ ತಲುಪಿದೆವು. ರಸ್ತೆಗಳೂ ಕಾಲು ರಸ್ತೆಗಳೂ ಸಮತಟ್ಟಾಗಿಯೂ ನೇರವಾಗಿಯೂ ಸಾಲುಮರಗಳ ನೆರಳಿನಿಂದ ಸುಂದರವಾಗಿಯೂ ತಂಪಾಗಿಯೂ ಇದ್ದುವು. ಹೂದೋಟದ ಮಧ್ಯಭಾಗದಲ್ಲಿ, ಶಿಲಾಚ್ಛಾದಿತವಾದ, ನುಣುಪಾಗಿ ಹೊಳೆಯುತ್ತಿದ್ದ, ಕಾಲುದಾರಿಗಳಿದ್ದುವು. ಇವನ್ನೆಲ್ಲ ನೋಡುತ್ತಾ ಮುಂದುವರಿಯುವಾಗ 'ಇಲ್ಲಿ ಮಿ. ಸ್ಪೆನ್ಲೋರವರ ಮಗಳು ಸಂಜೆಯಲ್ಲಿ ತಿರುಗಾಡಬಹುದು', 'ಇಲ್ಲಿ ಅವಳು ಉದ್ಯಾನದ ಶೋಭೆಯನ್ನು ಕುಳಿತು ನೋಡಿ ಆನಂದಿಸಬಹುದು' ಎಂದು ಗ್ರಹಿಸುತ್ತಿದ್ದೆನು.

ನಾವು ಮನೆಯನ್ನು ಪ್ರವೇಶಿಸುವ ಮೊದಲೇ ಮನೆಯ ಎಲ್ಲಾ ಕೊಠಡಿಗಳಲ್ಲು ದೀಪ ಹಚ್ಚಿದ್ದರು. ಬೈಠಖಾನೆ ಹೊಸಬರನ್ನು ತನ್ನ ಗಾಂಭೀರ್ಯದಿಂದಲೇ ದಿಗಿಲುಗೊಳಿಸುವಂತಿತ್ತು. ಬೈಠಖಾನೆಯ ಯಜಮಾನರ ಸ್ಥಾನಮಾನ ಪ್ರತಿಷ್ಠೆಗಳನ್ನು ಸದಾ ಎಚ್ಚರಿಸಿ ತೋರಿಸುತ್ತಿರುವಂತೆ ಗೋಡೆಗಳಲ್ಲಿದ್ದ ತೂಗುಗೂಟಗಳಲ್ಲಿ ತುಂಬಾ ಕ್ರಯವಿರುವ ಹೇಟುಗಳೂ ನಿಲುವಂಗಿಗಳೂ ಕುದುರೆ ಸವಾರಿ ದುಸ್ತುಗಳೂ ಚಾಟಿಗಳೂ ಕಡಚಲಿನ ದೊಣ್ಣೆಗಳೂ ಇದ್ದುವು. ನಾವು ಮನೆಯೊಳಗೆ ಹೋದಾಗ ನಮ್ಮೆದುರು ಬಂದ ಆಳನ್ನು ಸಂಬೋಧಿಸಿ "ಡೋರಾ ಎಲ್ಲಿ" ಎಂದು ಮಿ. ಸ್ಪೆನ್ಲೋರವರು ಕೇಳಿದರು. ನಾವು ಈವರೆಗೆ ನೋಡುತ್ತಾ ಬಂದಿದ್ದ ಮಿ. ಸ್ಪೆನ್ಲೋರವರ ಸಕಲ ವಸ್ತುಗಳ ಸೌಂದರ್ಯ ಮತ್ತೂ ಪ್ರಾಶಸ್ತ್ಯವನ್ನು ಅರಿತಿದ್ದ ನನಗೆ 'ಡೋರಾ' ಎಂಬ ಆ ಹೆಸರು ಸಹ ಸುಂದರವೂ ಪ್ರಶಸ್ತವೂ ಮೃದುವೂ ಪ್ರಿಯವೂ ಆಗಿ ತೋರಿತು. ಅಷ್ಟರಲ್ಲೇ ಪಕ್ಕದ ಕೋಣೆಯಿಂದ ಡೋರಾ ಬಂದಳು. ಅವಳ ಆಗಮನದ ಪ್ರಥಮ ದರ್ಶನವೇ ನನ್ನ ಮನಸ್ಸನ್ನು ತಳಮಳಗೊಳಿಸಿತು.

"ಮಿ. ಕಾಪರ್ಫೀಲ್ಡ್, ಇವಳೇ ನನ್ನ ಮಗಳು, ಡೋರಾ ಮತ್ತು ಇವಳ ಜತೆಯಲ್ಲಿರುವವಳು ಇವಳ ಸಖಿ" ಎಂದು ಮಿ. ಸ್ಪೆನ್ಲೋರವರು ನನ್ನೊಡನೆ ಹೇಳಿದರು. ಡೋರಾಳ ಸನ್ನಿಧಿಯಲ್ಲಿ ಭ್ರಾಂತನಂತೆಯೇ ಆಗಿ ಹೋಗಿದ್ದ ನನಗೆ ಆ ಮಾತುಗಳನ್ನು ಯಾರೋ – ಎಲ್ಲಿಂದಲೋ – ಹೇಳಿದ್ದಂತೆ ತೋರಿತು. ಮಾತುಗಳು ಯಾರಿಂದ ಬಂದದ್ದೆಂದು ಯೋಚಿಸಲು ನನ್ನ ಮನಸ್ಸಿನಲ್ಲಿ ಎಡೆಯೇ ಇರದಂತೆ, ನನ್ನ ಮನಸ್ಸು ನನ್ನೆದುರು ಬರುತ್ತಿದ್ದ, ದಿವ್ಯಮೂರ್ತಿಯ ಧ್ಯಾನದಲ್ಲಿ ತಲ್ಲೀನವಾಗಿ ಹೋಗಿತ್ತು. ನಾನು ಜನ್ಮವೆತ್ತಿದುದರ ಸಂಪೂರ್ಣ ಸಾಮರ್ಥ್ಯವನ್ನೇ ಅಲ್ಲಿ ಕಂಡೆನು. ಡೋರಾಳ ದಿವ್ಯ ತೇಜಸ್ಸಿನಲ್ಲಿ ಮುಳುಗಿ ಮೈ ಮರೆತ ನಾನು ಆನಂದಾತಿಶಯದಲ್ಲೇ ಇದ್ದೆನು. ನಾನು ಆ ಮುಹೂರ್ತದಲ್ಲಿ ಡೋರಾಳನ್ನು ಎಂದೆಂದೂ – ಯಾರೂ ಪ್ರೀತಿಸದಷ್ಟು ಪ್ರೀತಿಸಿ, ಪ್ರೇಮ ಪರವಶತೆಯಿಂದ ಆನಂದತುಂದಿಲನಾಗಿ ಹೋದೆ. ಮಿಸ್ ಸ್ಪೆನ್ಲೋ ಡೋರಾಳು ಒಬ್ಬ ಅಪ್ರತಿಮ ಸೌಂದರ್ಯದ ಅಪ್ಸರೆಯಾಗಿ – ಎಲ್ಲರೂ ಅಪೇಕ್ಷಿಸುವ – ಯಾರೂ ಕಂಡಿರದ – ಸಮಸ್ತ ಸೌಂದರ್ಯದ ಜೀವಂತ ಪ್ರತಿಮೆಯಾಗಿ, ನನ್ನ ಮನೋಹರಿಯಾಗಿ, ನನ್ನ ಮನದಲ್ಲಿ ನಲಿದಳು.

ಅಂತೂ ಕ್ರಮೇಣವಾಗಿ, ನಾನು ನನ್ನ ಸುತ್ತಲಿನ ಸನ್ನಿವೇಶವನ್ನು ತಿಳಿದೆನು. ಡೋರಾಳ ಜತೆಯಲ್ಲಿ ಮಿಸ್ ಮರ್ಡ್ಸ್ಟನ್ನಳಿದ್ದಳೆಂದು ಗೊತ್ತಾಯಿತು. ನಾನು ಅವಳನ್ನು ಗುರುತಿಸಿದಂತೆಯೇ ಅವಳೂ ನನ್ನನ್ನು ಗುರುತಿಸಿದಳು. ಮಿಸ್ ಮರ್ಡ್ಸ್ಟನ್ನಳು ಮಿ. ಸ್ಪೆನ್ಲೋರವರ ಪರಿಚಯದ ಮಾತುಗಳಿಗಾಗಿ –

"ಮಿ. ಕಾಪರ್ಫೀಲ್ಡರ ಪರಿಚಯ ನನಗೆ ಈ ಮೊದಲೇ ಇದೆ" ಅಂದಳು.

ಮಿ. ಸ್ಪೆನ್ಲೋರವರು "ಎಳೆಯ ಪ್ರಾಯದ ನನ್ನ ಮಗಳಿಗೆ ವಿವೇಕವುಳ್ಳ ಒಬ್ಬಳು ಸಖಿ ಬೇಕೆಂದು ಮಿಸ್ ಮರ್ಡ್ಸ್ಟನ್ನಳನ್ನು ನೇಮಿಸಿಕೊಂಡಿದ್ದೇನೆ. ಮಿ. ಕಾಪರ್ಫೀಲ್ಡರ ಪರಿಚಯ ಮಿ. ಮರ್ಡ್ಸ್ಟನ್ನಳಿಗೆ ಮೊದಲೇ ಇರುವ ಸಂಗತಿ ತಿಳಿದು ಸಂತೋಷವಾಯಿತು" ಎಂದು ನನ್ನನ್ನು ನೋಡಿ ಹೇಳಿದರು.

ರಾತ್ರಿ ಊತಣದ ಭೋಜನ ನಡೆಯಿತು. ಭವ್ಯವಾದ ಒಂದು ವಿಶಾಲ ಕೊಠಡಿಯಲ್ಲಿ ಸುಂದರವಾದ ಮೇಜಿನ ಸುತ್ತಲೂ ನಾವು ಕುಳಿತು ಭೋಜನ ಮಾಡಿದೆವು. ಡೋರಾಳು ನನ್ನ ಪಕ್ಕದಲ್ಲೇ ಕುಳಿತಿದ್ದಳು. ಅವಳ ಸಾಮೀಪ್ಯದ ಅರಿವಿನ ಆನಂದದಿಂದ ಸಭೆಯಲ್ಲಿ ಯಾರೆಲ್ಲ ನೆರೆದಿದ್ದರು – ಏನೆಲ್ಲ ನಮಗೆ ಬಡಿಸಿದರು – ನಾನು ಏನೆಲ್ಲ ತಿಂದೆ, ಯಾವುದನ್ನೆಲ್ಲ ಬೇಡವೆಂದು ನಿರಾಕರಿಸಿ ಡೋರಾಳ ಧ್ಯಾನದಲ್ಲಿದ್ದೆ ಎಂದು ನಿಶ್ಚೈಸಲಾರದೆ ಆದೆ. ನಾನು ತಿಂದದ್ದು, ಕುಡಿದದ್ದು, ಕಂಡದ್ದು, ಎಲ್ಲವೂ ಡೋರಾಳನ್ನು ಮಾತ್ರವಾಗಿತ್ತು – ಕೇಳಿದ್ದು, ಆಲೋಚಿಸಿದ್ದೂ ಸಹ ಡೋರಾಳನ್ನೇ!

ಊಟ ಮುಗಿಸಿ ನಾವು ಸ್ವಲ್ಪ ಅತ್ತಿತ್ತ ತಿರುಗಾಡುತ್ತಿದ್ದಾಗ ಮಿಸ್ ಮರ್ಡ್ಸ್ಟನ್ನಳು ನನ್ನನ್ನು ಒಂದು ಪಕ್ಕಕ್ಕೆ ಕರೆದು ಕೆಲವು ಮಾತುಗಳನ್ನಾಡಿದಳು. ಉಕ್ಕಿನ ಮಣಿಗಳು ಈಗಲೂ ಅವಳ ಕೈಯ್ಯಲ್ಲಿದ್ದುವು. ಈಗಲೂ ಅವಳು ಪೂರ್ವದ ಉಕ್ಕಿನ ಸ್ತ್ರೀಯೆ ಆಗಿದ್ದಳು. ಆದರೂ ಉಕ್ಕೂ ಸಹ ಸವೆಯುವಂತೆ, ಈಗ ಅವಳು ಸ್ವಲ್ಪ ನುಣುಪಾಗಿ ತೋರಿದಳು. ನಮ್ಮಿಬ್ಬರ ಅಲ್ಲಿನ ಸಂಬಂಧ, ಪರಿಸ್ಥಿತಿಗಳನ್ನು ಗ್ರಹಿಸಿ ನಾವೀರ್ವರೂ ಒಂದು ವಿಧದ ಸಂಧಾನಕ್ಕೆ ಬರಬೇಕೆಂಬುದಾಗಿ ತಿಳಿಸಿದಳು. ಅವಳ ಮತ್ತೂ ಅವಳ ಅಣ್ಣನ ಆರ್ಥಿಕ ಪರಿಸ್ಥಿತಿ ಕೆಟ್ಟಿದ್ದುದರಿಂದ ಅವಳು ಇಂದಿನ 'ಸಖೀ' ವೃತ್ತಿಯನ್ನು ತೊಡಗಬೇಕಾಗಿತ್ತೆಂದಳು. ಅವಳ ಮಾತುಗಳು ಈಗಲೂ ಪೂರ್ವದ ಗರ್ವದಿಂದಲೇ ಕೂಡಿದ್ದು, ಮೆಲ್ಲಗೆ ನನ್ನ ಅತ್ತೆಯನ್ನೇ ಬೈಯ್ಯುವವರೆಗೂ ತಲುಪಿತು. ಆಗ ನಾನೂ ಅವಳ ಕ್ರಮದಿಂದಲೇ – ಅಷ್ಟೇ ಕಠಿಣವಾಗಿ ಉತ್ತರ ಕೊಟ್ಟೆ. ಕೊನೆಗೆ, ನಾವಿಬ್ಬರೂ ಯಾರ ಹತ್ತಿರವೂ ನಮ್ಮ ಪೂರ್ವಚರಿತ್ರೆ, ಪರಿಚಯಗಳ ಪ್ರಸ್ತಾಪವೆತ್ತಬಾರದೆಂಬ ಸಂಧಾನ ಮಾಡಿಕೊಂಡೆವು.

ಊತಣದ ಮರುದಿನ ಬೆಳಗ್ಗೆ ನಾನು ಹೂದೋಟದಲ್ಲಿ ತಿರುಗಾಡುತ್ತಿದ್ದಾಗ ನನ್ನ ಎದುರುಗಡೆಯಿಂದಲೇ ಡೋರಾಳು ಬಂದಳು. ಅವಳ ದರ್ಶನವಾದ ಕ್ಷಣದಲ್ಲೇ ನನ್ನ ದೇಹದಲ್ಲಿ ವಿದ್ಯುತ್ ಪ್ರವಾಹ ಪ್ರವೇಶಿಸಿದಂತೆ ನನಗೆ ಬೋಧೆಯಾಯಿತು. ನಾನು ಈಗ ಅದನ್ನು ಬರೆಯುತ್ತಿರುವಾಗಲೂ ಅಂದಿನ ಅನುಭವವುಂಟಾಗುತ್ತಿದೆ. ಅಂಥ ಒಂದು ಹಿತಕರವಾದ ನವಸ್ಫೂರ್ತಿ – ಚೇತನ ನನ್ನಲ್ಲಿ ತೋರುತ್ತಾ ನಾನು ಡೋರಾಳನ್ನು ಉದ್ದೇಶಿಸಿ –
"ಮಿಸ್ ಸ್ಪೆನ್ಲೋ ನೀವು ಇಷ್ಟು ಬೆಳಗ್ಗೆಯೇ ತಿರುಗಾಡಲು ಹೊರಟಿರುವಿರಷ್ಟೆ" ಎಂದು ಸ್ವಲ್ಪ ಆಶ್ಚರ್ಯ ಸೂಚಿಸಿದೆನು. ಹಾಗಂದಿರಬೇಕೆಂದು ನನ್ನ ಭಾವನೆ – ಡೊರಾಳನ್ನು ಕುರಿತಾದ ನನ್ನ ಧ್ಯಾನದ ಏಕಾಗ್ರತೆಯಲ್ಲಿ ನಾನಂದದ್ದು ಏನೆಂಬ ಸ್ಪಷ್ಟವಾದ ಜ್ಞಾನ ನನಗಿರಲಿಲ್ಲ.

"ಮರೆಯೊಳಗೇ ಮುಚ್ಚಿ ಕುಳಿತಿರಬೇಕೆನ್ನುವುದು ಹುಚ್ಚುತನ. ಬೆಳಗ್ಗಿನ ಹವ ಸಾಕಷ್ಟು ಬಿಸಿಯೋ, ಪಕ್ವವೋ ಆಗುವ ಮೊದಲು ನಾವು ತಿರುಗಾಡಬಾರದೆಂದು ಮಿಸ್ ಮರ್ಡ್ಸ್ಟನ್ನಳು ಅನ್ನುತ್ತಾಳೆ. ಆ ಮಾತಿಗೆ ನಾನು ಒಪ್ಪುವುದಿಲ್ಲ. ಪಕ್ವವಾಗುವುದಂತೆ, ಪಕ್ವ! ಬೆಳಗ್ಗಿನಷ್ಟು ಸುಖಕರ, ಸಂತೋಷಕರ ಸಮಯ ಇಡೀ ದಿನದಲ್ಲಿ ಸಿಗದಿರುವಾಗ ಅವಳ ಮಾತು ಕೇವಲ ಹುಚ್ಚು! ನಾನು ನನ್ನ ತಂದೆಗೆ ತಿಳಿಸಿ ಇಲ್ಲಿ ತಿರುಗಾಡಲು ಬಂದಿದ್ದೇನೆ" ಅಂದಳು ಡೋರಾ.

ಈ ಮಾತಿಗೆ ಹಿಂದೆಮುಂದೆ ಗ್ರಹಿಸದೆ, ನನ್ನ ಉತ್ತರ ತಾನಾಗಿಯೇ ಹೊರಟೇ ಹೋಯಿತು –
"ಹೌದು, ಬೆಳಗ್ಗೆ ತಿರುಗಾಡಲು ಸುಖವೆಂದು ನಾನೂ ಹೊರಟಿದ್ದರೂ ನಾನು ಬಂದಾಗ ಬೆಳಕು ಸಾಕಷ್ಟಿರಲಿಲ್ಲ. ಬೆಳಕು ಸಾಲದೆಂದು ನಾನು ಅಭಿಪ್ರಾಯಪಡುತ್ತಿದ್ದಾಗಲೇ ಈಗ ಈ ಸ್ಥಳವು ಬಹು ಪ್ರಭಾಮಯವಾಗಿದೆ!" ಎಂದು ಹೇಳಿದೆ.
ಪಾಪ! ಅವಳಿಗೆ ನನ್ನ ಮಾತು ಪೂರ್ತಿ ಅರ್ಥವಾಗಲಿಲ್ಲವೆಂದು ತೋರುತ್ತದೆ. ಅವಳು ಪ್ರಶ್ನಿಸಿದಳು –
"ನನ್ನ ಬರೋಣವನ್ನು ಕುರಿತಾಗಿ ನೀವು ಹೊಗಳಿದಿರೇ ಅಥವಾ ಪ್ರಕೃತಿಯೇ ಹಾಗಿತ್ತು, ಹಾಗಾಯಿತು ಎಂದು ಹೇಳಿದಿರೇ ನೀವು?"
ನಾನು ಗಾಬರಿಗೊಂಡು ಏನೇನೋ ಹೇಳಿ, ಅಂತೂ ಪ್ರಕೃತಿ ಸ್ಥಿತಿಯನ್ನು ಹಾಗೆ ವಿವರಿಸಿದ್ದಲ್ಲ. ಅವಳ ಸಮಾಗಮದಿಂದ ಮಾತ್ರ ಅಲ್ಲಿ ಬೆಳಕಾಯಿತು, ಎಂದು ಹೇಳಿದೆ.

ನನ್ನ ಈ ಮಾತುಗಳಿಂದ ಅವಳ ಮುಖದಲ್ಲಿ ಕೆಂಪು ಕಳೆಯೇರಿತು. ಅವಳ ಕರಿ ಗುಂಗುರು ಕೂದಲು ಮುಖದ ಕಾಂತಿಯನ್ನು ಬಚ್ಚಿಡಲು ಪ್ರಯತ್ನಿಸಿದರೂ ಮುಖದ ಕಾಂತಿ ಮತ್ತಷ್ಟು ಸುಂದರವಾಗಿ ಹೊರಹೊಮ್ಮಿತು. ಡೋರಾಳಿಗೊಬ್ಬಳ ಹೊರತಾಗಿ ಇನ್ನು ಯಾರಿಗೂ ಅಂಥ ಸುಂದರ ತಲೆಗೂದಲಿಲ್ಲವೆಂಬುದನ್ನು ನಾನು ಆಗಲೇ ನಿಶ್ಚೈಸಿದೆ. ಅವಳನ್ನು ಸಮಾಧಾನಪಡಿಸಲು, ಏನಾದರೂ ಮಾತಾಡಬೇಕೆಂದು –

"ನೀವು ಪೇರಿಸ್ಸಿನಿಂದ ಸದ್ಯ ತಾನೆ ಬಂದದ್ದು?" ಎಂದು ಕೇಳಿದೆ.
"ಹೌದು, ನೀವು ಪೇರಿಸ್ಸಿಗೆ ಹೋಗಿದ್ದೀರೇನು?"
"ಇಲ್ಲ."
"ಈವರೆಗೆ ಹೋಗದಿದ್ದರೆ, ಇನ್ನಾದರೂ ಅಲ್ಲಿಗೆ ಹೋಗಿರಿ" ಅಂದಳು ಡೋರಾ.
ನಾನು ಆಗ ಕೇಳಿದ್ದು ಮಾತನ್ನಲ್ಲ – ಸಂಗೀತವನ್ನು. ಮಾತಿನ ಅರ್ಥವನ್ನು ನಾನು ಮಾಡಿದುದಕ್ಕಿಂತಲೂ ಅವಳ ಮುಖದ ಸೌಂದರ್ಯವನ್ನು ಅರ್ಥಮಾಡಿದೆ. ನಾನು ಒಂದು ವಿಧದಲ್ಲಿ ಸ್ಥೈರ್ಯ ತಪ್ಪಿದವನಾಗಿ ಏನೇನೋ ಅಂದೆ – ಯಾವ ಪ್ರಾಪಂಚಿಕ ಲಾಭ ಸಂಪಾದನೆಗಾಗಿ ಸಹ ನಾನು ಇಂಗ್ಲೆಂಡನ್ನು – ಅವಳು ನಿಂತಿರುವ ಸ್ಥಳವನ್ನು – ಬಿಟ್ಟು ಹೋಗಲಾರೆನೆಂದು ಹೇಳಿದೆ. ಡೋರಾಳಿಂದ ದೂರ ಸರಿಯಲು ನನ್ನ ಕಾಲುಗಳೇ ಒಪ್ಪವು ಎಂಬವರೆಗೂ ನಾನು ಹೇಳಿದೆ. ನನ್ನ ಮಾತುಗಳನ್ನು ಡೋರಾ ಅರ್ಥ ಮಾಡಿದಳು. ಅರ್ಥದಿಂದ ಅವಳ ಮುಖದ ಕಳೆ ಮತ್ತಷ್ಟು ಹೆಚ್ಚಿತು. ಮಾತುಗಳಿಂದ ಉತ್ತರಿಸಲಾರದೆ ಅವಳು ಮುಖವನ್ನು ಅಲುಗಾಡಿಸಿ, ಆ ಗುಂಗುರು ಕೂದಲಿನಿಂದ ಮುಖದ ಕಳೆಯನ್ನು ತೋರಿಸಿ ಬಚ್ಚಿಡುವಂತೆ ಮಾಡಿದಳು. ಅವಳ ಕೂದಲಿನ ಅಲುಗಾಟ ನನ್ನ ಪ್ರಜ್ಞೆಯನ್ನೇ ಅಲುಗಾಡಿಸಿತು. ಇನ್ನು ನಮ್ಮೊಳಗೆ ಯಾವ ವಿಧದ ಸಂಭಾಷಣೆ ನಡೆಯಬಹುದಾಗಿತ್ತೋ ಎಂಬುದನ್ನು ನಾನು ಊಹಿಸಲಾರೆ. ಆದರೆ, ಆಗಲೇ ಡೋರಾಳ ಪ್ರೀತಿಯ ಪುಟ್ಟ ನಾಯಿ ಜಿಪ್ ಓಡಿ ಬಂತು – ಓಡಿಬಂದು ನಮ್ಮೀರ್ವರನ್ನೂ ರಕ್ಷಿಸಿತು.

ಆ ನಾಯಿಗೆ ನನ್ನನ್ನು ಕಂಡರೆ ಬಹು ಕೋಪ – ಅದು ಹುಚ್ಚುಚ್ಚಾಗಿ ಬೊಗಳತೊಡಗಿತು. ಡೋರಾ ಜಿಪ್ಪನನ್ನು ಎತ್ತಿ ಬಿಗಿದಪ್ಪಿಕೊಂಡಳು. ನಾನು ಅದನ್ನು ನೋಡಿ ಸಹಿಸಲಾರದೆ ಆದೆ. ಜಿಪ್ಪನ ಅದೃಷ್ಟವೇ ಎಂದನಿಸಿತು ನನಗೆ. ನನ್ನ ಮೇಲೆ ಕೋಪವಿಡಬಾರದೆಂದು ಅವಳು ಜಿಪ್ಪನನ್ನು ಅಪ್ಪಿ ಹಿಡಿದು, ತಲೆಯನ್ನು ತನ್ನ ಮೃದು ಹಸ್ತದಿಂದ ಸವರಿದಳು. ಅದು ಬೊಗಳ ಬಾರದೆಂದು ಅದರ ಬಾಯಿಗೆ ತನ್ನ ಸುಂದರ ಬೆರಳುಗಳಿಂದ ಮುದ್ದಾಗಿ ಹೊಡೆದಳು. ಮುದ್ದು ಬೆರಳಿನ ಪೆಟ್ಟಿನಿಂದ ಜಿಪ್ ಸಮಾಧಾನಗೊಂಡಿತು; ಅದೇನಾಶ್ಚರ್ಯ! ನಾಯಿ ಆ ಹಸ್ತ ಸ್ಪರ್ಷದಿಂದ ಸಮಾಧಾನಪಡುವುದಿರಲಿ – ಯಾವ ಮನುಷ್ಯನು ತಾನೇ ಅವಳ ಕೈಯ್ಯಿಂದ ಪೆಟ್ಟು ತಿಂದು ಸಂತೃಪ್ತಿ ಸಮಾಧಾನ ಪಡೆಯದೆ ಇರಬಲ್ಲ!

ಡೋರಾ ಜಿಪ್ಪನನ್ನು ಕೈಯಲ್ಲಿ ಹಿಡಿದು ಕೊಂಡು, ನನ್ನನ್ನು ನೋಡಿ –
"ಮಿಸ್ ಮರ್ಡ್ಸ್ಟನ್ನಳ ಹತ್ತಿರ ನಿಮಗೆ ವಿಶೇಷ ಪರಿಚಯವಿಲ್ಲ ತಾನೆ?" ಎಂದು ಪ್ರಶ್ನಿಸಿ, ಹಾರಲು ಪ್ರಯತ್ನಿಸುತ್ತಿದ್ದ ಜಿಪ್ಪನನ್ನು ಕುರಿತು,
"ನನ್ನ ಮುದ್ದು" ಎಂದಂದು ಮತ್ತಷ್ಟು ಬಲವಾಗಿ ಅದನ್ನಪ್ಪಿಕೊಂಡಳು. ಕಡೇ ಎರಡು ಶಬ್ದಗಳು ಜಿಪ್ಪನಿಗೆ ಆಗಿ ಹೋದುವಲ್ಲಾ ಎಂದು ನಾನು ದುಃಖಿಸಿದೆ. ಮತ್ತೂ
"ಮಿಸ್ ಮರ್ಡ್ಸ್ಟನ್ನಳ ಹತ್ತಿರ ವಿಶೇಷ ಪರಿಚಯವಿಲ್ಲ" ಎಂದು ಉತ್ತರವಿತ್ತೆ.
"ಯಾರಿಗೂ ಒಗ್ಗದಂಥ ಸ್ವಭಾವದವಳು ಅವಳು. ಶಿಸ್ತು–ಕ್ರಮಗಳನ್ನು ಒತ್ತಾಯಿಸಲಿರುವ ಉಪದ್ರವಕಾರಿ!" ಅಂದಳು ಡೋರಾ.
ನಾನು ವಿಶೇಷ ಏನನ್ನೂ ಹೇಳಲಾರದೆ, ಆದರೂ ಏನಾದರೂ ಅನ್ನಬೇಕೆಂದು –
"ಒಬ್ಬಳೆ ಇರುವಾಗ ಜತೆಗಾದರೂ ಒಬ್ಬಳು ಬೇಕಷ್ಟೆ" ಅಂದೆ.
"ಜತೆಗೆ ಅವಳೇಕೆ? ಅವಳಿಗಿಂತ ಉತ್ತಮ – ಎಲ್ಲಾ ವಿಧದಲ್ಲೂ ಈ ನನ್ನ ಜಿಪ್ ಇದೆ" ಅಂದಳು ಡೋರಾ.
ತನ್ನ ಹೆಸರು ಕೇಳಿ ನಾಯಿ ಯಜಮಾನಿಯ ಮುಖ ನೋಡಿ ಬಾಲ ಅಲ್ಲಾಡಿಸಿತು. ಮಿಸ್ ಮರ್ಡ್ಸ್ಟನ್ನಳನ್ನು ಗ್ರಹಿಸಿದಂತೆಲ್ಲ ಡೋರಾಳಿಗೆ ಸಿಟ್ಟು ಬರುತ್ತಿರಬೇಕು – ಅವಳು ಎಳೆ ಮಕ್ಕಳಂತೆ ನುಡಿದಳು –
"ಮಿಸ್ ಮರ್ಡ್ಸ್ಟನ್ನಳು ನನ್ನ ಮನೋಬುದ್ಧಿಗಳ ವಿಕಸನಕ್ಕೆ ಸಹಾಯ ಮಾಡಲಿರುವಳಂತೆ! ಆ ಒರಟು ಹೆಂಗುಸಿಗೆ ಅಂತರಂಗವನ್ನು ಯಾರು ತಾನೆ ತಿಳಿಸಬಯಸಬಹುದು! ನನಗೆ ಪ್ರಿಯರಾದವರು, ಸ್ನೇಹಿತರಾಗಬಲ್ಲವರು ಯಾರೆಂದು ಚುನಾಯಿಸಿ ಒದಗಿಸುವ ನಿಪುಣೆಯಂತೆ ಅವಳು. ಇದು ಯಾವ ಕ್ರಮವೋ ನಾನರಿಯೆ. ಸ್ನೇಹಿತರನ್ನು ಇತರರ ಮುಖಾಂತರ ಚುನಾಯಿಸುವುದಾದ ಪಕ್ಷಕ್ಕೆ ಆ ಸ್ನೇಹಕ್ಕೆ ಬೆಲೆಯೆಷ್ಟು! ಅಲ್ಲವೇ ಜಿಪ್?" ಎಂದು ಮಗುವಿನಂತೆ ಈ ಎಲ್ಲಾ ಮಾತುಗಳನ್ನು ಆತ್ಮಗತವಾಗಿ ಮಾತ್ರ ಹೇಳುತ್ತಿದ್ದವಳಂತೆ ಗ್ರಹಿಸುತ್ತ – ಜಿಪ್ಪನ್ನು ಎತ್ತಿಕೊಂಡು, ಅದನ್ನೇ ನೋಡುತ್ತಲೂ ಹೇಳಿದಳು. ಜಿಪ್ಪ ಆನಂದಕ್ಕೆ ಮಿತಿಯಿರಲಿಲ್ಲ. ಅದು ಯಜಮಾನಿಯ ಮಾತನ್ನು ಪ್ರೀತಿಯಿಂದ ಆಲಿಸುತ್ತ ಬಾಲ ಅಲ್ಲಾಡಿಸುತ್ತಲೇ ಇತ್ತು. ಜತೆಯಲ್ಲೇ ಹೂಗುಟ್ಟುವಂತೆ, ಮೃದುವಾಗಿ ಗುರುಗುರು ಎಂದನ್ನುತ್ತಿತ್ತು.

ಅವಳ ಮನಸ್ಸು ಮಿಸ್ ಮರ್ಡ್ಸ್ಟನ್ನಳಿಂದ ಬಹುವಾಗಿ ಘಾಸಿಯಾಗಿರಬೇಕು – ಏನೋ ತಂದೆಯ ದಾಕ್ಷಿಣ್ಯಕ್ಕಾಗಿ ಮರ್ಡ್ಸ್ಟನ್ನಳನ್ನು ಅಪ್ಪರಲ್ಲೇ ಬೇಡವೆಂದು ಓಡಿಸಿರಲಿಲ್ಲ. ಡೋರಾ ಜಿಪ್ಪೊಡನೆ ಮತ್ತೂ ಮುಂದರಿಸಿ –
"ನನಗೆ ಪ್ರೀತಿಸುವ ತಾಯಿಯಿಲ್ಲ – ಮನೆಯಲ್ಲಿ ಜನರಿಲ್ಲ. ಆ ಅಳಮೋರೆಯ ಕ್ರೂರಿ ಮಿಸ್ ಮರ್ಡ್ಸ್ಟನ್ನಳ ಸಹಾಯವನ್ನು ಪಡೆದು ಸಂತೋಷಿಸುವುದು ಹೇಗೂ ಇಲ್ಲವಾದ ಮೇಲೆ, ಅವಳನ್ನು ದ್ವೇಷಿಸಿ, ಸಾಧ್ಯವಾದರೆ ಅವಳ ಶಿಸ್ತನ್ನು ಮುರಿದು ಹಿಂಸಿಸಿ, ಹಾಗಾದರೂ ನಾವು ಸಂತೋಷಿಸೋಣ, ಅಲ್ಲವೇ ಜಿಪ್" ಎಂದನ್ನುತ್ತಾ ತನ್ನ ಮುದ್ದು ಮುಖವನ್ನೂ ಗುಂಗುರು ಕೂದಲನ್ನೂ ಅಲ್ಲಾಡಿಸುತ್ತಾ ನನ್ನ ನಯನೋತ್ಸವಕ್ಕಾಗಿ ದೇವರು ಒದಗಿಸಿರುವ ಸಂದರ್ಭವಾಗಿ ಮುದ್ದುಮುದ್ದಾಗಿ, ಮೃದು ಹೃದಯದ ವೇದನೆಗಳನ್ನು ಹೇಳಿದಳು. ಇಂಥ

ಸನ್ನಿವೇಶದಲ್ಲಿ ನನ್ನ ಅಂತರಂಗವನ್ನು ಅವಳಲ್ಲಿ ತೋರಿಸಿ ಅವಳಿಗೆ ಸಮಾಧಾನಗೊಳಿಸಿ ನಾನು ತೃಪ್ತಿಪಟ್ಟುಕೊಳ್ಳಲೋಸ್ಕರ, ಅವಳ ಕಾಲ ಬಳಿ ಕುಳಿತುಕೊಳ್ಳುವಾಗಲೇ ಮಿಸ್ ಮರ್ಡ್ಸ್ಟನ್ನಳು ಬಂದು ಡೋರಾಳನ್ನು ಕರೆದುಕೊಂಡು ಹೋದಳು.

ಅನಂತರ ಬೆಳಗ್ಗಿನ ಊಟ, ಚಹಗಳನ್ನು ತೆಗೆದುಕೊಂಡೆವು. ನನಗೆ ಊಟ ಮತ್ತು ಚಹಗಳನ್ನು ಬಡಿಸಿದವಳು ಡೋರಾಳೇ ಆಗಿದ್ದುದರಿಂದ, ಅಂದು ನಾನು ಉಂಡಷ್ಟು, ಹಿಂದೆಂದೂ ಉಂಡಿರಲಿಲ್ಲ. ಡೋರಾಳ ಕೋಮಲ ಕರಗಳಿಂದ ಕೊಡಲಾಗುತ್ತಿದ್ದ ಚಹವನ್ನು ಎಷ್ಟು ಕುಡಿದರೂ ಸಾಕೆನ್ನಲು ಮನಸ್ಸು ಬರದೆ, ಅನುಭವವಿಲ್ಲದಿದ್ದ ಅವಳು ನನಗೆ ತೃಪ್ತಿಯಾಗಲಿಲ್ಲವೆಂದು ನಂಬಿ, ಪುನಃ ಪುನಃ ಚಹ ಕೊಡುತ್ತಿದ್ದುದರಿಂದ, ಅಂದು ನಾನು ಚಹ ಕುಡಿದಷ್ಟು ಹಿಂದೆಂದೂ ಕುಡಿದಿರಲಿಲ್ಲ. ಚಹ ಸೇವನೆಯಾದನಂತರ ನನ್ನ ಹೃದಯವನ್ನೇ ಆ ಮನೆಯಲ್ಲಿ ಬಿಟ್ಟು ಬಂದಷ್ಟರ ದುಃಖದಿಂದ ನನ್ನ ಮನೆಗೆ ವಾಪಾಸು ಬಂದೆ.

ಡೋರಾಳನ್ನು ಬಿಟ್ಟು ಬಂದನಂತರ ನನ್ನ ಜೀವನ ಕ್ರಮವನ್ನು ವಿವರಿಸುವುದೇ ಅಸಾಧ್ಯ. ನನ್ನ ಎಲ್ಲಾ ಕೆಲಸಗಳೂ ಡೋರಾಳ ಧ್ಯಾನದ ಜತೆಯಲ್ಲೇ ಸಾಗುತ್ತಿದ್ದುವು. ಅವಳ ಪ್ರೀತ್ಯರ್ಥವಾಗಿಯೇ ಆಗುತ್ತಿದ್ದುವು. ಡೋರಾಳ ಜತೆಯಲ್ಲಿ ಜೀವನ ನಡೆಸಬೇಕಾದರೆ ಏನೇನು ಅನುಕೂಲಗಳನ್ನು ಒದಗಿಸಿಕೊಳ್ಳಬೇಕು, ನಾವು ಹೇಗೆ ನಡೆದರೆ ಡೋರಾಳು ನನಗೆ ದೊರಕಬಹುದು, ಈ ತೆರನಾಗಿಯೇ ಸತತವೂ ನನ್ನ ಆಲೋಚನೆಗಳು ಹರಿಯುತ್ತಿದ್ದುವು. ನಮ್ಮ ಕೋರ್ಟಿನಲ್ಲಿ ಆಗಿದ್ದ ತೀರ್ಪಿನ ಪ್ರಕಾರ ಒಂದು ಉಯಿಲಿನ ಹಣವನ್ನು ನಾವು ಹಂಚುವಾಗ ಆ ಹಣ ನನಗೆ ದೊರಕಿದ್ದರೆ ನಾನು ಡೋರಾಳ ಜತೆಯಲ್ಲಿ ಹೇಗೆ ಸಂಸಾರ ನಡೆಸುತ್ತಿದ್ದೆನೆಂದು ಚಿತ್ರಗಳನ್ನು ಕಲ್ಪಿಸಿಕೊಳ್ಳುತ್ತಿದ್ದೆ. ದಾಂಪತ್ಯ ವಿಚ್ಛೇದನದ ಒಂದು ವ್ಯಾಜ್ಯ ಬಂದಾಗ ಡೋರಾಳಂಥ ಒಬ್ಬ ಕೋಮಲ, ಸುಂದರ ಸ್ತ್ರೀಯನ್ನು ಕುರಿತು ಯಾರಿಗಾದರೂ ದಾಂಪತ್ಯ ವಿಚ್ಛೇದನದ ಆಲೋಚನೆ ಬರಲು ಸಾಧ್ಯವಿದೆಯೇ ಎಂದು ತರ್ಕಿಸಿಕೊಳ್ಳುತ್ತಿದ್ದೆನು. ನೌಕಾ ಸಂಬಂಧವಾಗಿ ನಡೆಯುತ್ತಿದ್ದ ಒಂದು ವ್ಯವಹರಣೆಯಲ್ಲಿ, ನೌಕೆಯ ಹೆಸರನ್ನು ಹೇಳುವಾಗ ಡೋರಾ ಎಂಬ ಹೆಸರಿನ ನೌಕೆಯಿದ್ದಿದ್ದರೆ ಅದರ ಗಾಂಭೀರ್ಯ ಎಷ್ಟಿರಬಹುದು. ಅದರಲ್ಲಿ ಪ್ರಯಾಣ ಮಾಡುವ ಆನಂದ ಏನಿರಬಹುದೆಂದೂ ಊಹಿಸಿಕೊಂಡು ಸಂತೋಷಪಡುತ್ತಿದ್ದೆನು.

ಇಷ್ಟೂ ಅಲ್ಲದೆ, ಒಳ್ಳೊಳ್ಳೆ ದುಸ್ತು ಮಾಡಿಕೊಂಡು, ತಲೆಯಲ್ಲಿ ಡೋರಾಳನ್ನು ಆನಂದದಿಂದ ಹೊತ್ತುಕೊಂಡು ಲಂಡನ್ ನಗರದ ಬೀದಿಗಳಲ್ಲಿ ತಿರುಗಾಡಲು ಪ್ರಾರಂಭಿಸಿದೆನು. ನನ್ನ ಪಾದಗಳಿಗೆ ತಕ್ಕಂಥ ಅಳತೆಯ ಬೂಟ್ಸುಗಳನ್ನು ಧರಿಸುವ ಬದಲು, ಡೋರಾಳ ಪತಿಯಾಗಲು ಪಾದಗಳ ಅಂದವನ್ನು ಹೆಚ್ಚಿಸಲೋಸ್ಕರ ಚಿಕ್ಕ ಅಳತೆಯ ಬೂಟ್ಸನ್ನು ಧರಿಸಿ ನಡೆದು ಕಷ್ಟಪಟ್ಟೂ ಸಂತೋಷಿಸಿದೆನು. ಡೋರಾ ಇಂಥಿಂಥ ರಸ್ತೆಗಳಲ್ಲಿ ತಿರುಗಾಡಬಹುದೆಂದು ಊಹಿಸಿ ಆ ರಸ್ತೆಗಳಲ್ಲೇ ನನ್ನ ಹೆಚ್ಚಿನ ತಿರುಗಾಟವನ್ನು ಸಾಗಿಸಿದೆನು. ನನ್ನ ಸಮೀಪದಲ್ಲಿ ಓಡುವ ಜಟಕಗಳಿಂದ ಯಾರಾದರೂ ಬಗ್ಗಿ ಕರವಸ್ತ್ರವನ್ನು ಬೀಸಿದರೆ ನನ್ನ ಡೋರಾಳೇ ನನ್ನನ್ನು ಕರೆದುದಾಗಿರಬೇಕೆಂದು ನಂಬಿ ಜಟ್ಕದ ಹಿಂದೆ ಓಡಿದುದೂ ಇದೆ.

ನನ್ನ ಮನೆಯ ಯಜಮಾನಿ ಮಿಸೆಸ್ ಕೃಪ್ಸಳು ನನ್ನ ಈ ಅವಸ್ಥೆಯನ್ನು ಕಂಡು, ಇದು ಅನುರಾಗಜನ್ಯವೆಂದೂ ನಾನು ಯಾವಳೋ ಒಬ್ಬ ಹುಡುಗಿಯನ್ನು ಅಪಹರಿಸಿಕೊಂಡು ಓಡುವ ಏರ್ಪಾಡುಗಳನ್ನು ಕುರಿತಾದ ಆಂತರಿಕ ದುಃಖದಲ್ಲಿರುವೆನೆಂದು ಊಹಿಸಿಕೊಂಡಳು. ಹೀಗೆ ಊಹಿಸಿಕೊಂಡಳೆಂಬುದಕ್ಕೆ ತಕ್ಕದಾಗಿ, ತನ್ನ ತಾಯಿತನದ ಅನುಭವಗಳನ್ನೂ ನನಗೆ ಓರೆ ಮಾತುಗಳಿಂದಲೇ ನುಡಿದಳು. ಅಲ್ಲದೆ, ನನ್ನ ಮನೋರೋಗಕ್ಕೆ ಬ್ರಾಂದಿ ಸೇವನೆಯೂ ಸ್ಕಿಟಲ್ಸ್ ಆಟವೂ ಪರಿಹಾರಕವೆಂದೂ ತಿಳಿಸಿದಳು. ಇದಕ್ಕಾಗಿ ಅವಳು ಬ್ರಾಂದಿ ಬಾಟ್ಲಿಯನ್ನು ತಂದಿರಿಸಿ, ನನ್ನ ಸಮಾಧಾನಕ್ಕೆಂದು ತಾನು ಸೇವಿಸಿ, ಈ ವಿಧದಿಂದ ನನ್ನನ್ನು ಕುರಿತು ಬಹುವಾದ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದಳು. ನನ್ನ ಮನಸ್ಸಿನ ಸ್ಥಿತಿ ಅವಳಿಗೆ ಗೊತ್ತಾಗಿದೆಯೆಂದು ನಾನು ತಿಳಿದು, ಮುಂದೆ ಇಂಥ ವಿಷಯದಲ್ಲಿ ಜಾಗ್ರತೆಯಿಂದಿರಬೇಕೆಂದು ನಿಶ್ಚೈಸಿಕೊಂಡೆನು.

ಅಧ್ಯಾಯ ಇಪ್ಪತ್ತೇಳು
ಟೋಮಿ ಟ್ರೇಡಲ್ಸ್

ನಮ್ಮ ಮನೆಯ ಹೆಂಗುಸು ಸ್ಕಿಟಲ್ಸ್ ಆಟದ ಹೆಸರೆತ್ತಿದುದರಿಂದಲೋ ಏನೋ – ಕಿವಿಗೆ ಸ್ಕಿಟಲ್ಸನಂತೆಯೂ ಫಕ್ಕನೆ ತೋರುವ ಟ್ರೇಡಲ್ಸನ ಹೆಸರು ನನಗೆ ಜ್ಞಾಪಕಕ್ಕೆ ಬಂತು. ನಾನು ಟ್ರೇಡಲ್ಸನ ಮನೆಗೆ ಹೋಗಬೇಕೆಂದು ನನ್ನನ್ನು ಅವನು ಆಮಂತ್ರಿಸಿ ಕೆಲವು ದಿನಗಳಾಗಿದ್ದದ್ದರಿಂದ, ಈಗಿನ ಮನೋವ್ಯಾಕುಲದ ಸಮಯದಲ್ಲಾದರೂ ಅವನನ್ನು ಕಂಡು ಬರೋಣವೆಂದು ತೋರಿತು. ಆ ಪ್ರಕಾರ ಅವನ ಮನೆಯನ್ನು ಹುಡುಕಿಕೊಂಡು ಹೊರಟೆನು. ಕೊನೆಗೆ ಮನೆ ಸಿಕ್ಕಿತು. ಒಂದು ಕಾಲದಲ್ಲಿ ತುಂಬಾ ವೈಭವದಿಂದ ಮೆರೆದಿದ್ದು ಈಗ ಹಳತಾಗಿ, ಹಾಳು ಬಿದ್ದಿದ್ದ, ಒಂದು ವಠಾರದಲ್ಲಿತ್ತು ಅವನ ಮನೆ.

ನಾನು ಆ ಮನೆಯ ಒಳ ಹೋಗಬೇಕೆಂದಿರುವಾಗಲೇ ಹಾಲು ಮಾರಾಟದವನೊಬ್ಬನು ಮನೆ ಬಾಗಿಲ ಎದುರು ಮಾರ್ಗದಲ್ಲಿ ನಿಂತುಕೊಂಡು, ಬಾಗಿಲ ಬಳಿ ಪಾತ್ರೆ ಹಿಡಿದು ನಿಂತುಕೊಂಡಿದ್ದ ಒಬ್ಬ ಚಿಕ್ಕ ಹುಡುಗಿಯ ಹಿಂಬದಿಯ – ಬಾಗಿಲ ಒಳಗಿನ – ಕತ್ತಲೆಯನ್ನೇ ಪರೀಕ್ಷಿಸಿ ನೋಡುತ್ತ ಬೈಯ್ಯುತ್ತಿದ್ದನು.
"ಈ ದಿನದ್ದೂ ಕೂಡಿ ಮೂವತ್ತು ದಿನದ್ದಾಯ್ತು. ಹಣ ಕೊಡದೆ, ನಾಳೆಯೂ ಹಣ ಕೊಡದಿದ್ದರೆ ನಾನು ಮಾಡುವ ಕೆಲಸವೇ ಬೇರೆ – ಏನು?" ಎಂದು ಗದರಿಸಿ ಹಾಲಿನವನು ಸಿಟ್ಟಿನಿಂದ ಹೋದನು.
"ಇದು ಮಿ. ಟೋಮಿ ಟ್ರೇಡಲ್ಸರವರ ಮನೆಯೇನು?" ಎಂದು ನಾನು ಹುಡುಗಿಯನ್ನು ಕೇಳಿದ್ದಕ್ಕೆ ಒಳಗಿನ ಬಾಗಿಲ ಹಿಂದಣ ಕತ್ತಲು "ಹೌದು" ಎಂದು ಉತ್ತರ ಕೊಟ್ಟಿತು. ಮತ್ತು ಆ ಉತ್ತರದನಂತರ ಹಾಲಿಗಾಗಿ ಹೊರಗೆ ಬಂದಿದ್ದ ಹುಡುಗಿಯೂ "ಹೌದು" ಅಂದಳು.
"ಒಳಗೆ ದಯಮಾಡಿಸಿರಿ, ತೋರಿಸುತ್ತೇನೆ" ಎಂದು ಕತ್ತಲೆ ಪುನಃ ಹೇಳಿದೊಡನೆಯೇ ಹುಡುಗಿಯೂ ಹಾಗೆಯೇ ಅಂದಳು. ಮುಖ್ಯವಾಗಿ, ಒಳಗಿನ ಪ್ರೇರಣೆಯಿಲ್ಲದೆ ಯಾವ ಸಂಗತಿಯೂ ಆ ಮನೆಯಿಂದ ಹೊರೆಗೆ ಬರಕೂಡದೆಂಬ ನಿಯಮ ಅಲ್ಲಿದ್ದಂತೆ ತೋರಿತು. ನಮ್ಮ ಈ ಮಾತುಗಳನ್ನೆಲ್ಲ ಟ್ರೇಡಲ್ಸನು ಎಲ್ಲಿಂದಲೋ ಕೇಳಿಯೋ ಏನೋ ಅವನೇ ನಾನು ಪೂರ್ತಿ ಒಳಗೆ ಹೋಗುವುದರ ಒಳಗೇ ನನ್ನ ಎದುರು ಬಂದು ನನ್ನನ್ನು ಅವನ ಕೋಣೆಗೆ ಕರೆದುಕೊಂಡು ಹೋದನು.

ಅವನು ಒಂದು ದೊಡ್ಡ ಕಟ್ಟಡದ ಒಂದು ಚಿಕ್ಕ ಭಾಗದಲ್ಲಿ ಮಾತ್ರ ಬಾಡಿಗೆಗೆ ಇದ್ದುದೆಂದೂ ಹಾಲಿನವರ ಜಗಳ ಜಂಜಾಟಕ್ಕೂ ಅವನಿಗೂ ಏನೂ ಸಂಬಂಧವಿಲ್ಲವೆಂದೂ ಅವನ ಕೋಣೆಯಲ್ಲಿ ಕುಳಿತು ಮಾತಾಡುವಾಗ ತಿಳಿಯಿತು.

ನಾನು ಅನಿರೀಕ್ಷಿತವಾಗಿ ಅಲ್ಲಿಗೆ ಹೋದದ್ದು ಟ್ರೇಡಲ್ಸನಿಗೆ ಬಹಳ ಸಂತೋಷವಾಯಿತು. ನಾವು ಮಾತಾಡುತ್ತಿದ್ದಾಗಲೇ ಅವನ ಕೋಣೆಯನ್ನೆಲ್ಲಾ ನೋಡಿದೆ. ಕೋಣೆ ಚಿಕ್ಕದಾಗಿತ್ತು. ಅವನ ಸಾಮಾನುಗಳನ್ನೆಲ್ಲಾ ಬಹು ಕ್ರಮದಿಂದ ಇಟ್ಟು, ಕೋಣೆಯನ್ನು ಚೊಕ್ಕಟವಾಗಿಟ್ಟುಕೊಂಡಿದ್ದನು. ಮಾತಾಡುತ್ತಾ ಅವನ ಆವರೆಗಿನ ಜೀವನ ಚರಿತ್ರೆಯನ್ನು ತಿಳಿದೆನು. ಅವನಿಗೊಬ್ಬ ಚಿಕ್ಕಪ್ಪನಿದ್ದು, ಆ ಚಿಕ್ಕಪ್ಪನಿಗೆ ಮಕ್ಕಳಿಲ್ಲದೆ ಅವನಿಂದ ಸ್ವಲ್ಪ ಹಣ ಟ್ರೇಡಲ್ಸನಿಗೆ ಸಿಕ್ಕಬಹುದೆಂದು ತೋರುತ್ತಿದ್ದಾಗಲೇ ಚಿಕ್ಕಪ್ಪನು ಪುನರ್ವಿವಾಹ ಮಾಡಿಕೊಂಡು, ಟ್ರೇಡಲ್ಸನಿಗೆ ಯಾವ ಸಹಾಯವೂ ಸಿಗದಂತಾಯಿತು. ಅವನ ಜೀವನ ನಿರ್ವಹಣಕ್ಕಾಗಿ ಅನೇಕ ವಿಧದ ಕೆಲಸಗಳನ್ನು ಮಾಡಿ ನೋಡಿ, ಈಗ ವಕೀಲಿ ವೃತ್ತಿಯನ್ನು ಅವಲಂಬಿಸಿರುವುದಾಗಿ ತಿಳಿದೆ. ಅವನ ಪ್ರೇಮ ಜೀವನದ ಅನುಭವವನ್ನೂ ತಿಳಿಸುತ್ತ, ಈಗ ಅವನು ಒಬ್ಬ ಪಾದ್ರಿಯ ಮಗಳನ್ನು ಮದುವೆಯಾಗಲು ಒಪ್ಪಂದ ಮಾಡಿಕೊಂಡಿದ್ದನಂತೆ. ಅವಳು ಬಹು ಸುಂದರಿಯಂತೆ. ಅವಳ ಮುಖದಷ್ಟು ಮುದ್ದಾದ ಮುಖ, ಅವಳ ಗುಣದಷ್ಟು ಒಳ್ಳೆಯ ಗುಣ, ಇನ್ನು ಯಾರಿಗೂ ಇರಲಾರದೆಂದೂ ತಿಳಿಸಿದನು. ಅವಳ ಹೆಸರು ಸೋಫಿ ಎಂದಾಗಿತ್ತು. ಸದ್ಯ ಟ್ರೇಡಲ್ಸನು ಮದುವೆಯಾಗಿ ಸಂಸಾರ ಸಾಗಿಸಬಲ್ಲಷ್ಟು ಸಂಪಾದನೆ ಮಾಡುತ್ತಿಲ್ಲವಾದ್ದರಿಂದ, ತನ್ನ ಸಂಸಾರ ಸಾಕಲು ಶಕ್ತನಾಗುವವರೆಗೆ – ಟ್ರೇಡಲ್ಸನಿಗೆ ಅರುವತ್ತು ವರ್ಷ ಪ್ರಾಯವೇ ಆದಾಗ ಮಾತ್ರ ಸಾಕಷ್ಟು ಶಕ್ತನಾಗಬಹುದಾದರೂ ಆವರೆಗೂ ಕಾದಿದ್ದು, ಆಗ ಮದುವೆಯಾಗಲು ಒಪ್ಪಿದ್ದಳಂತೆ, ಸೋಫಿ. ಟ್ರೇಡಲ್ಸನು ಬಾಲ್ಯದಲ್ಲಿದ್ದಂತೆಯೇ ಬಹು ದಾಕ್ಷಿಣ್ಯವಂತನಾಗಿಯೂ ಸದಾ ಸಂತುಷ್ಟಿ ಸಂತೃಪ್ತಿ ಸ್ವಭಾವದವನಾಗಿಯೂ ನಿಗರ್ವಿಯಾಗಿಯೂ ಸರಳ ಸ್ವಭಾವದವನಾಗಿಯೂ ಇದ್ದನು.

ನಾವು ಈ ರೀತಿ ಕುಳಿತು ಮಾತಾಡುತ್ತಿದ್ದ ಹಾಗೆಯೇ ನಮ್ಮ ಕೋಣೆಯ ಬಾಗಿಲನ್ನು ಯಾರೋ ತಟ್ಟಿದರು. ಬಾಗಿಲು ತಟ್ಟಿದ ಶಬ್ದ ಮಿ. ಮೈಕಾಬರರನ್ನು ನನಗೆ ಜ್ಞಾಪಕಕ್ಕೆ ತಂದಿತು. ಇಷ್ಟರಲ್ಲಿ ಮಿ. ಮೈಕಾಬರರೇ ಒಳಗೆ ಬಂದು ನಿಂತರು. ನನ್ನನ್ನು ಅವರು ಕಂಡ ಕೂಡಲೇ ಸಂತೋಷದಿಂದ ತನ್ನ ಪತ್ನಿಯನ್ನು ಕರೆದರು. ಅವರ ಪತ್ನಿ ಬಂದದ್ದೇ ತಡ, ಅವರ ಸಂತೋಷವನ್ನು ತಡೆಯಲಾರದೆ, ಬಹು ಧೀರರಂತೆ ಎದೆ ಮುಂದೆ ಮಾಡಿಕೊಂಡು ನಿಂತು, ಒಂದು ಮಹಾಸಭೆಗೆ ಪ್ರಸ್ತಾವನಾ ಭಾಷಣ ಮಾಡುವವರಂತೆ, ಬಹು ಗಂಭೀರ ಮುಖಭಂಗಿಯಿಂದ –
"ಜೀವನ ಪಥದಲ್ಲಿ ಏರಿಳಿತಗಳಿರುವುದು ಬಹು ಸ್ವಾಭಾವಿಕವು. ಮಿ. ಮೈಕಾಬರರ ಕುಟುಂಬವು ಸದ್ಯ ಅತ್ಯಂತ ಶೋಚನೀಯವಾದ ಇಳಿತದಲ್ಲಿರುವುದರ ಮರ್ಮವು, ಅರ್ಥಾತ್, ಲಕ್ಷಣವು, ಮುಂದೆ – ಶೀಘ್ರದಲ್ಲೇ – ಅವರ ಕುಟುಂಬಕ್ಕೆ ಒದಗಲಿರುವ ಉಚ್ಛ್ರಾಯ ಸ್ಥಿತಿಯನ್ನೇ ತೋರಿಸುವುದಾಗಿದೆ. ಇದರಲ್ಲೇನೂ ಸಂಶಯವಿಲ್ಲ. ಇಳಿತವು ಏರುವಿಕೆಯ ಮೂಲವೆಂದಾದ ಪಕ್ಷಕ್ಕೆ ನಮ್ಮ ಪ್ರಸ್ತುತದ

ಅನುಭವವು ಭವಿಷ್ಯದ ಶುಭ ಪ್ರಸಂಗವನ್ನೇ ತೋರಿಸುತ್ತದೆ. ನಮ್ಮ ಕುಟುಂಬದಲ್ಲಿ ಹೊಸತೊಂದು ವ್ಯಕ್ತಿಯ ಪ್ರವೇಶವಾಗುವ ಯೋಗವು ನಮ್ಮ ಪತ್ನಿಯವರಲ್ಲಿ ಕಂಡು ಬರುತ್ತಿದೆ. ಇಂಥ ಮಹಾಯೋಗದಲ್ಲೇ – ನಮ್ಮ ಹಿಂದಿನ ಕಷ್ಟ ಕಾಲಗಳಲ್ಲಿ ಭುಜಕ್ಕೆ ಭುಜ ಕೊಟ್ಟು ಸಹಾಯವಿತ್ತು ಸಹಜೀವನ ನಡೆಸಿರುವ ಮಿ. ಕಾಪರ್ಫೀಲ್ಡರು ಇಲ್ಲಿ ಪ್ರವೇಶವಾದುದಂತೂ ನಮ್ಮ ಬಹು ಶೀಘ್ರದ ಶುಭೋದಯವನ್ನೇ ಸೂಚಿಸುತ್ತದೆ" ಎಂದು ಮೊದಲಾಗಿ, ಆವೇಶಯುಕ್ತವಾಗಿ ಮಾತಾಡಿದರು.

ನಾನೂ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರವಿತ್ತು ಮಾತಾಡಿದೆ. ಮಿ. ಮೈಕಾಬರರು ಅದೇ ಕಟ್ಟಡದ ಇನ್ನೊಂದು ಭಾಗದಲ್ಲಿ ವಾಸಮಾಡುತ್ತಿದ್ದರು. ಆದಿನ ಮಧ್ಯಾಹ್ನಕ್ಕೆ ನಾನು ಅವರಲ್ಲಿಗೆ ಊಟಕ್ಕೆ ಹೋಗಬೇಕೆಂದು ಒತ್ತಾಯಿಸಿದರು. ಆದರೆ ನನಗೆ ಇತರ ಕೆಲಸ ಆಗಲೇ ಇದೆಯೆಂದುಕೊಂಡು, ಅವರ ಆಮಂತ್ರಣಕ್ಕೆ ಸಮ್ಮತಿಸಲಿಲ್ಲ. ಆದರೆ, ಅದೇ ಸಂದರ್ಭದಲ್ಲಿ ಮಿ. ಮೈಕಾಬರರೂ ಮಿಸೆಸ್ ಮೈಕಾಬರರೂ ಟ್ರೇಡಲ್ಸನೂ ನನ್ನ ಮನೆಗೆ ಬಂದು ನನ್ನದೊಂದು ಔತಣವನ್ನು ಸ್ವೀಕರಿಸಬೇಕೆಂದು ಅವರೆಲ್ಲರಲ್ಲಿ ವಿನಂತಿಸಿಕೊಂಡೆನು. ಔತಣದ ದಿನವನ್ನು ನಿಶ್ಚೈಸಿ ಅವರು ಆಮಂತ್ರಣವನ್ನು ಸ್ವೀಕರಿಸಿದನಂತರ ನಾನು ನನ್ನ ಮನೆಗೆ ಹೊರಟು ಹೋದೆನು.

ಅಧ್ಯಾಯ ಇಪ್ಪತ್ತೆಂಟು

ಮಿ. ಮೈಕಾಬರರ (ಸಮಾಜವೇ ಇತ್ಯರ್ಥಿಸಬೇಕಾದ) ಒಂದು ಮಹತ್ವದ ಪ್ರಶ್ನೆ

ನಾನು ಗೊತ್ತುಮಾಡಿದ ಔತಣದ ದಿನ ಬಂತು. ನನಗೆ ಆವರೆಗೆ ಆಹಾರವಿದ್ದುದು, ಹೆಚ್ಚಿನ ಅಂಶ, ಡೋರಾ ಮತ್ತು ಕಾಫಿ ಮಾತ್ರ. ಮನಸ್ಸಿಗೆ ಸ್ವಾಸ್ಥ್ಯವಿಲ್ಲದಿದ್ದಾಗ ಜಠರಾಗ್ನಿ ಮಂದವಾಗುವುದೆಂಬ ಮಾತಿನ ಅನುಭವ ನನಗೆ ತುಂಬಾ ಆಗಿತ್ತು. ಡೋರಾಳನ್ನು ಮನಸ್ಸಿನಿಂದ ಮರೆಸಿ ಹಸಿವು ಎದುರು ಬರುವುದಾದರೆ, ಅಂಥ ಹಸಿವೆ ಡೋರಾಳಿಗೆ ಅಮಂಗಲವೆಂದೇ ನಾನು ನಂಬಿದ್ದೆ. ಆದರೂ ನಾನಾಗಿಯೇ ಆಮಂತ್ರಿಸಿದ್ದ ಅತಿಥಿಗಳ ಔತಣದ ಏರ್ಪಾಡುಗಳನ್ನು ಮಾಡುವುದು ನನ್ನ ಕರ್ತವ್ಯವೆಂದೇ ಆ ಏರ್ಪಾಡುಗಳನ್ನೆಲ್ಲ ಮಾಡಿದೆ. ಅತಿಥಿಗಳನ್ನು ಎದುರು ನೋಡುತ್ತಿದ್ದ ಹಾಗೆಯೇ ಅವರೆಲ್ಲರೂ ಕ್ಲುಪ್ತ ಸಮಯದಲ್ಲಿ ನನ್ನ ಮನೆಗೆ ಬಂದರು.

ಮಿ. ಮೈಕಾಬರರು ಅವರ ಬಿಗಿಯಾದ ಇಜಾರು, ರಟ್ಟಿನಂಥ ಮತ್ತೂ ದೊಡ್ಡ ಶರ್ಟುಕಾಲರನ್ನು ಕಾಣಿಸಿಕೊಂಡು, ಬಹು ಹರ್ಷಪುಳಕಿತರಾಗಿ ಬಂದರು. ಅವರ ಹಿಂದಿನಿಂದ ಟ್ರೇಡಲ್ಸ್ ಬಂದನು. ಟ್ರೇಡಲ್ಸನ ಜತೆಯಲ್ಲಿ ಅವನ ಕೈಯ್ಯನ್ನು ಗೌರವಕ್ಕಾಗಿ ಆಧರಿಸಿಕೊಂಡು, ಮಿಸೆಸ್ ಮೈಕಾಬರರು ಬಂದರು. ಅವರೆಲ್ಲರನ್ನು ಸ್ವಾಗತಿಸಿ, ಮರ್ಯಾದೆಯಿಂದ ಕೂರಿಸಿ ಕುಶಲ ಪ್ರಶ್ನೆಗಳನ್ನು ಮಾಡಿದೆನು. ಮಿಸೆಸ್ ಮೈಕಾಬರರು ಊಟಕ್ಕೆ ಮೊದಲಿನ ಅಲಂಕಾರಗಳನ್ನು ಮಾಡಿಕೊಳ್ಳುವುದಕ್ಕಾಗಿ ಪಕ್ಕದ ಕೋಣೆಯಲ್ಲಿ ತಕ್ಕ ಏರ್ಪಾಡನ್ನು ಮಾಡಿದ್ದೆ. ನಾನು ಊಟದ ವ್ಯವಸ್ಥೆ ಮಾಡುತ್ತಿದ್ದ ಸಮಯದಲ್ಲಿ ಮಿಸೆಸ್ ಮೈಕಾಬರರು ಅಲಂಕಾರ ಮಾಡಿಕೊಳ್ಳತೊಡಗಿದರು. ನನ್ನ ಏರ್ಪಾಡನ್ನು ಮೆಚ್ಚಿ ಮಿಸೆಸ್ ಮೈಕಾಬರರು ಪತಿಯನ್ನು ಕರೆದು ಅವುಗಳನ್ನೆಲ್ಲ ತೋರಿಸಿದರು.

"ಈ ಏರ್ಪಾಡುಗಳನ್ನೆಲ್ಲ ನೋಡುವಾಗ, ನಮ್ಮ ಲಗ್ನದ ಮೊದಲಿನ ಪ್ರಣಯದ ದಿನಗಳು ನೆನಪಿಗೆ ಬರುತ್ತದಲ್ಲವೆ, ಎಮ್ಮಾ" ಎಂದಂದುಕೊಂಡರು ಮಿ. ಮೈಕಾಬರರು.

ಅನಂತರ ಊಟವನ್ನು ಪ್ರಾರಂಭಿಸಿದೆವು. ಊಟದ ಮುಖ್ಯ ವಸ್ತುವಾಗಿದ್ದ 'ಪಂಚ್' ಪಾನೀಯವನ್ನು ತಯಾರಿಸುವ ಗೌರವವನ್ನು ಮಿ. ಮೈಕಾಬರರು ವಹಿಸಿಕೊಂಡರು. ಆ ಪಾನೀಯಕ್ಕೆ ಬೇಕಾದ ಸಕ್ಕರೆ, ಪರಿಮಳ ದ್ರವ್ಯ, ನಿಂಬೆಹಣ್ಣು, ಬ್ರಾಂದಿ, ಕುದಿಯುವ ನೀರು, ಆಗ ತಾನೆ ಸುಲಿದು ತೆಗೆದ ನಿಂಬೆ ಹಣ್ಣಿನ ಸಿಪ್ಪೆ ಇವೆಲ್ಲವನ್ನು, ಕ್ರಮ ಪ್ರಕಾರ ತೂಕ, ಅಳತೆ, ಹಾಳಿತಗಳಿಂದ ಬೆರೆಸಿ ತಯಾರಿಸುವ ಕೌಶಲ ಮಹತ್ವದ್ದೇ ಆಗಿದ್ದಂತೆ ಮಿ. ಮೈಕಾಬರರು ತೋರುತ್ತಿದ್ದರು. ಊಟ ಬಡಿಸಲು ಒಬ್ಬ ಕೆಲಸದ ಹುಡುಗಿಯನ್ನು ಗೊತ್ತುಮಾಡಿಕೊಂಡಿದ್ದೆ. ಅವಳು ಸಾರನ್ನು ತರುವಾಗ ಸ್ವಲ್ಪ ಅಂಶವನ್ನು ತಿಳಿಯದೆ ಮೈಗೆ ಸುರಿದುಕೊಂಡಳು. ಊಟದ ಮಟ್ಟಿಗೂ ಬಡಿಸೋಣದರ ಮಟ್ಟಿಗೂ ಅಂದಿನ ಔತಣ ಬಹು ಪರಿಷ್ಕಾರವಾಗಿಯೇ ನಡೆದಿದ್ದರೂ ಆ ಸಾರು ಚೆಲ್ಲಿದ ಮಟ್ಟಿಗೆ ಮಾತ್ರ ಸ್ವಲ್ಪ ಕೊರತೆಯೂ ನಡೆದಿತ್ತು. ನಾನು ಅತಿಥಿಗಳನ್ನು ಸಂತೋಷಪಡಿಸುತ್ತಾ ಉಪಚಾರಕ್ಕಾಗಿ ಬಡಿಸೋಣದರ ತಪ್ಪನ್ನು ಒಪ್ಪಿ ಕ್ಷಮೆ ಕೇಳಿಕೊಂಡೆನು. ಇದನ್ನು ಕೇಳಿ ಮಿ. ಮೈಕಾಬರರು ನನ್ನ ಸಮಾಧಾನಕ್ಕಾಗಿಯೂ ಅವರೆಲ್ಲರ ತೃಪ್ತಿ ಸಂತೋಷಗಳಿಗಾಗಿಯೂ ಕೆಲವು ಮಾತುಗಳನ್ನಾಡಿದರು –

"ನನ್ನ ಧರ್ಮಪತ್ನಿ ಎಮ್ಮನಿಗೂ ನನಗೂ ಇರುವ ಅನುಭವ ಮಿ. ಕಾಪರ್ಫೀಲ್ಡ್, ನಿಮಗಿರಲು ಸಾಧ್ಯವಿಲ್ಲ. ಎಂಥ ಶಿಸ್ತುಳ್ಳ ಸಂಸಾರದ ಔತಣಗಳಲ್ಲಾದರೂ ಅವುಗಳ ಪಾವಿತ್ರ್ಯವನ್ನು, ಅವುಗಳ ಪರಿಷ್ಕಾರತೆಯನ್ನೂ ಹೆಚ್ಚಿಸಿ ಬೆಳಗಿಸುವ ಶಕ್ತಿ, ಅರ್ಥಾತ್ ಆ ದೈವಿಕ ಶಕ್ತಿಯ ಪೂರ್ಣ ಸ್ವರೂಪಳಾದ 'ಪತ್ನಿ' ಎಂಬವಳಿಲ್ಲದಿದ್ದಲ್ಲಿ ಇಂಥಾ ಸಂದರ್ಭಗಳು ಬಂದೇ ಬರುವುವು. ಒಂದು ಅಗ್ಗಿಷ್ಟಿಕೆ, ಬಾಣಲೆ, ಮತ್ತಿತರ ವಸ್ತುಗಳನ್ನು ಇಲ್ಲಿ ತಂದುಕೊಟ್ಟರೆ, ನಾವು ಊಟಮಾಡುತ್ತ ಕಜ್ಜಾಯವನ್ನೂ ಬೇಯಿಸಿಕೊಳ್ಳಬಹುದು" ಎಂದಂದರು ಮಿ. ಮೈಕಾಬರರು.

ಇಂಥ ಕೆಲಸಗಳಲ್ಲಿ ತುಂಬಾ ಕೌಶಲವಿರುವ ಮಿ. ಮೈಕಾಬರರು, ಅವರು ಕೇಳಿದ ವಸ್ತುಗಳನ್ನು ಒದಗಿಸಿಕೊಟ್ಟ ಕೂಡಲೇ ಕಜ್ಜಾಯವನ್ನು ತಯಾರಿಸುತ್ತಲೂ ಬಡಿಸುತ್ತಲೂ ಬಂದರು. ಈ ವಿಧದಿಂದ ನಾವು ಊಟ, ಉಪಚಾರಗಳ ಸಂತೋಷ ಶಿಖರದಲ್ಲಿದ್ದಾಗಲೇ ಬಹು ಮೃದು ಹೆಜ್ಜೆಯಿಂದ ಲಿಟ್ಮರನು ಬಾಗಿಲ ಬಳಿ ಕಾಣಿಸಿಕೊಂಡನು. ಅವನ ಗಾಂಭೀರ್ಯವನ್ನು ಕಂಡು ನಮ್ಮ ಹರ್ಷೋದ್ಗಾರ ಒಂದು ಸ್ಥಿಮಿತಕ್ಕೆ ಬಂತು. ಲಿಟ್ಮರ್ ನಮ್ಮೆಲ್ಲರನ್ನೂ ಅಲ್ಲಿನ ವ್ಯವಸ್ಥೆಗಳನ್ನೂ ನೋಡುತ್ತಾ ಬಹು ವಿನಯದಿಂದ –

"ನನ್ನ ಅನಿರೀಕ್ಷಿತ ಪ್ರವೇಶದ ಬಗ್ಗೆ ನನ್ನನ್ನು ದಯಮಾಡಿ ಕ್ಷಮಿಸಬೇಕು, ಸರ್. ನಮ್ಮ ಯಜಮಾನರೇನಾದರೂ ಇಲ್ಲಿಗೆ ಬಂದಿರುವರೇ ಎಂದು ವಿಚಾರಿಸಿಕೊಳ್ಳಲು ಇಲ್ಲಿಗೆ ಬಂದೆ ಸರ್" ಎಂದನು.

"ಸ್ಟೀಯರ್ಫೋರ್ತ್ ಇಲ್ಲಿಗೆ ಬರಲಿಲ್ಲ. ಅವರು ಆಕ್ಸಫರ್ಡಿನಲ್ಲಿದ್ದಾರೆಯೇ?"

"ಅವರು ಎಲ್ಲಿರುವರೆಂದು ತಿಳಿಯಲು ನಾ ಬಂದದ್ದು, ಸರ್."

"ಅವರು ಆಕ್ಸಫರ್ಡಿಗೆ ಹೋಗುವರಾಗಿ ತಿಳಿಸಿದ್ದರು. ಅದು ಗೊತ್ತಿದೆಯೇ?"

"ನಾನೇ ಬಡಿಸಿಬಿಡುತ್ತೇನೆ, ಸರ್" ಎಂದನ್ನುತ್ತಾ – ನನ್ನ ಪ್ರಶ್ನೆಗೆ ಉತ್ತರಕೊಡಬೇಕಾದುದನ್ನು ತಪ್ಪಿಸಿ, ಮಿ. ಮೈಕಾಬರರ ಕೈಯ್ಯಿಂದ ಪಾತ್ರೆ ತೆಗೆದುಕೊಂಡು, ಬಡಿಸುವುದಕ್ಕಾಗಿಯೇ ನಾವು ಅವನನ್ನು ಬರಮಾಡಿಕೊಂಡಿದ್ದಂತೆ ಲಿಟ್ಮರನು ನಮಗೆ ಬಹು ಎಚ್ಚರಿಕೆಯಿಂದ, ಪರಿಷ್ಕಾರತೆಯಿಂದ, ವಿನಯದಿಂದ – ಆದರೂ ಎದ್ದು ಕಾಣುವ ಗಾಂಭೀರ್ಯದಿಂದ ಬಡಿಸತೊಡಗಿದನು. ಅವನ ಯಜಮಾನನ

ಕುರಿತಾಗಿದ್ದ ವಿಷಯಗಳ ಗೋಪ್ಯತೆಯನ್ನು ಅವನ ಉತ್ತರದಲ್ಲಿ– ಅಂತರ್ಗತವಾಗಿ – ನನಗೆ ತಿಳಿಸಿದ್ದ ಲಿಟ್ಮರನನ್ನು ನೋಡುತ್ತಿದ್ದ ಹಾಗೆಯೇ ನಾನು ಬಹು ಚಿಕ್ಕವನಾಗಿ ಹೋದೆನು. ನಮ್ಮ ಊಟವಾದನಂತರ ನಮ್ಮ ಎಂಜಲು, ಪಾತ್ರೆಗಳನ್ನೂ ಅನಗತ್ಯವಾಗಿದ್ದ ಇತರ ಎಲ್ಲಾ ವಸ್ತುಗಳನ್ನೂ ಹೊರಗೆ ತೆಗೆದುಕೊಂಡು ಹೋಗಿ ಇರಿಸಿ, ನಿಶ್ಶಬ್ದವಾಗಿ ಬಾಗಿಲ ಕಡೆಗೆ ಸರಿಯುತ್ತಾ ನಮಗೆ ನಮಸ್ಕರಿಸಿ ಲಿಟ್ಮರನು ಮಾಯವಾದನು.

ಲಿಟ್ಮರ್ ಹೋದನಂತರ ನಮ್ಮ ಹಿಂದಿನ ಉತ್ಸಾಹವೆಲ್ಲ ಬಂತು. ಮಿ. ಮೈಕಾಬರರು ಜೀವನದ ಅನೇಕ ಸಮಸ್ಯೆಗಳನ್ನು ಕುರಿತಾಗಿ ಮಾತಾಡಿದರು. ಒಬ್ಬ ಯೋಗ್ಯ ಪ್ರಜೆಯನ್ನು ಕುರಿತು ಸಮಾಜಕ್ಕೂ ಸರಕಾರಕ್ಕೂ ಇರುವ ಜವಾಬ್ದಾರಿಕೆಗಳು ಏನೆಂಬುದನ್ನು ವಿವರಿಸಿದರು. ಗಂಡನಿಗಿದ್ದಷ್ಟೆ ಸಂಸಾರದ ಸುಖದುಃಖಗಳ ಅನುಭವವಿದ್ದ ಮಿಸೆಸ್ ಮೈಕಾಬರರು ಇನ್ನೂ ಹೆಚ್ಚು ಮಾತಾಡಿದರು. ಅವರು ಉತ್ಸಾಹದಲ್ಲಿ ತನ್ನ ಪತಿಯನ್ನೂ ಮೀರಿಸುತ್ತಿದ್ದರು. 'ನಮ್ಮ ಎಮ್ಮ ಹುಡುಗಿಯಾದರೂ ಹುಡುಗರಿಗಿಂತಲೂ ಹೆಚ್ಚಾದ ಬುದ್ಧಿಶಕ್ತಿ ಮತ್ತು ಕಾರ್ಯನಿರ್ವಹಣಾಶಕ್ತಿ ಉಳ್ಳವಳು' ಎಂದು ಅವರ ತಂದೆ ಅವರನ್ನು ಕುರಿತಾಗಿ ಹೇಳುತ್ತಿದ್ದ ಮಾತುಗಳನ್ನು ಪುನಃ ಪುನಃ ನಮಗೆ ತಿಳಿಸುತ್ತಾ ಆ ಮಾತನ್ನು ನಿದರ್ಶನಗಳ ಮೂಲಕವೇ ರುಜುಪಡಿಸುತ್ತಿದ್ದರು. ಇದೇ ಧಾಟಿಯಿಂದ ಮಿಸೆಸ್ ಮೈಕಾಬರರು ಮಾತಾಡುತ್ತಾ – "ಸಮಾಜದಲ್ಲಿ ಉದ್ಭವಿಸಿ, ಸಮಾಜದ ಸ್ವಂತ ಒಂದು ಫಲದಂತಿರುವ ಮಿ. ಮೈಕಾಬರರವರನ್ನು ಕಾಪಾಡಿಕೊಂಡು, ಅವರ ಅಮೋಘ ಶಕ್ತಿಗಳನ್ನುಪಯೋಗಿಸಿಕೊಂಡು ಸಮಾಜ ಲಾಭ ಪಡೆಯಬಹುದು ಮತ್ತೂ ಸುಖ ಪಡೆಯಬಹುದು. ಅಥವಾ ಅದೇ ಸಮಾಜ ತನ್ನ ಬುದ್ಧಿ ಸಂಕುಚಿತತೆಯಿಂದ ತನ್ನದೇ ಒಂದಂಶವಾದವರನ್ನು ದುರ್ಲಕ್ಷಿಸಿ, ಅವರನ್ನೂ ಅವರ ಶಕ್ತಿಗಳನ್ನೂ ಸಾಯಿಸಿ ತನ್ನ ಕರ್ತವ್ಯಭ್ರಷ್ಟತೆಯಿಂದ ಸಮಾಜ ಶಿಥಿಲವಾಗುತ್ತಾ ಕೊನೆಗೆ ಲಯವಾಗಲೂಬಹುದು" ಎಂದರು. ಪತ್ನಿ ಈ ರೀತಿಯಲ್ಲಿ ಸಂದರ್ಭಗಳನ್ನು ವಿವರಿಸುತ್ತಿದ್ದಾಗ ಮಿ. ಮೈಕಾಬರರು ಸೊಂಟವನ್ನು ನೆಟ್ಟಗೆ ಮಾಡಿಕೊಂಡು, ಗಂಭೀರತೆಯನ್ನು ತಾಳಿ, ತನ್ನ ಶಕ್ತಿ ಎಷ್ಟಿದೆಯೆಂಬುದನ್ನು ಸಮಾಜ ಈಗಲಾದರೂ ಗ್ರಹಿಸಿ – ಈವರೆಗಿನ ಉಪೇಕ್ಷೆಯನ್ನು ತೊರೆದು, ಅಗತ್ಯವಿದ್ದ ರೀತಿಯಲ್ಲಿ ತನ್ನ ಶಕ್ತಿಯನ್ನು ಉಪಯೋಗಿಸಿಕೊಂಡು ತಾನು ನಾಶವಾಗುವುದನ್ನು ತಪ್ಪಿಸಿಕೊಳ್ಳುವುದೇ ಎಂದು ಪ್ರಶ್ನಿಸುತ್ತಿರುವಂತೆ ನಮ್ಮೆಲ್ಲರನ್ನು ನೋಡಿದರು.

ಮಿಸೆಸ್ ಮೈಕಾಬರರು 'ಪಂಚ್' ಪಾನೀಯವನ್ನು ಬೇಕಷ್ಟು ಕುಡಿದಿದ್ದರು. ಅವರ ಮಾತಿನ ಸ್ಫೂರ್ತಿ ಹೆಚ್ಚುತ್ತಿತ್ತು. ಅವರು ಮಾತನ್ನು ಮುಂದುವರಿಸುತ್ತಾ –
"ಸಮಾಜದ ಜವಾಬ್ದಾರಿಯಿರುವಂತೆಯೇ ನಮ್ಮದೂ ಜವಾಬ್ದಾರಿಯಿದೆಯೆಂದು ನಾನು ಒಪ್ಪುತ್ತೇನೆ. ನಾವು ನಮ್ಮ ಕಡೆಯ ಜವಾಬ್ದಾರಿಯನ್ನು ಒಪ್ಪುತ್ತೇವೆ, ನಿರ್ವಹಿಸಿರುತ್ತೇವೆ. ನಾವು ಗೋಧಿಯ ವ್ಯಾಪಾರ ಮಾಡಿದೆವು, ಪ್ರಯೋಜನವಾಗಲಿಲ್ಲ. ಕಲ್ಲಿದ್ದಲಿನ ಕೈಗಾರಿಕೆಯನ್ನು ತೊಡಗಿದೆವು – ತೊಡಗಿದಂತೆಯೇ ಬಿಡಬೇಕಾದ ಪ್ರಸಂಗ ಬಂತು. ಸರಾಯಿ ಕಾರ್ಖಾನೆಗಳಿಗೆ ಹೋದೆವು. ನನ್ನ ಪತಿಯವರ ಅಮೂಲ್ಯ ಶಕ್ತಿ ಕೌಶಲಗಳನ್ನು ಪರೀಕ್ಷಿಸಿ ನೋಡುವಷ್ಟು ಮನಸ್ಸೂ ಸಹ ಕಾರ್ಖಾನೆ ಮಾಲೀಕರಿಗಿರಲಿಲ್ಲ. ಈ ರೀತಿ ಉದ್ಯೋಗನಿರತನಾಗಿರಲು ತಯಾರಿದ್ದರೂ ಉದ್ಯೋಗವೇ ದೊರಕದಿದ್ದರೆ ನಮ್ಮ ತಪ್ಪೇನು, ನಮ್ಮ ಗತಿಯೇನಾಗಬೇಕು? ನಾವು ಅಳಿಯಬೇಕೋ? ಉಳಿಯಬೇಕೋ? ಇದು ಒಂದು ವಿಧದ ಒಗಟೇ ಆಗಿದೆ. ಮಿ. ಮೈಕಾಬರರಂಥ ಚೈತನ್ಯ ಪುರುಷರಿನ್ನೊಬ್ಬರಿಲ್ಲ. ಚೈತನ್ಯ ಎಂದೂ ನಾಶವಾಗದಷ್ಟೆ. ಹಾಗಾದರೆ ಅಂಥ ಚೈತನ್ಯವನ್ನು ಉಪಯೋಗಿಸಲು ಅವಕಾಶ ಕೊಡದ ಸಮಾಜಕ್ಕೆ ನಾವು ಏನನ್ನಬೇಕು? ಮಿ. ಮೈಕಾಬರರು ಸಮಾಜಕ್ಕೆ ಈ ಪ್ರಶ್ನೆಯನ್ನು ಹಾಕುತ್ತಾರೆ – ಸಮಾಜವೇ ಎದುರು ಬಂದು ಉತ್ತರ ಕೊಡಲಿ" ಅಂದರು ಮಿಸೆಸ್ ಮೈಕಾಬರರು.

ಈ ಪ್ರಶ್ನೆ ಮಹತ್ತಾದದ್ದೆಂದು ನನಗೆ ತೋರಿತು. ನಾವು ಉತ್ತರ ಕೊಡಲಾರದೇ ಇದ್ದೆವು. ಇನ್ನೂ ಇದೇ ವಿಧದ ಗಹನವಾದ ವಿಷಯಗಳನ್ನು ಅವರು ಮಾತಾಡಿದರು. ಸಾರ್ವಜನಿಕ ಬಂಡವಾಳವೆತ್ತಿ ಒಂದು ವಿಧದ ಬೇಂಕ್ ವಹಿವಾಟು ನಡೆಸಲು ಮಿ. ಮೈಕಾಬರರು ನಿಶ್ಚೈಸಿರುವುದಾಗಿಯೂ ಅದರ ಪ್ರಾರಂಭದ ಖರ್ಚುಗಳ ಬಗ್ಗೆ ಪಾಲು ಬಂಡವಾಳದ ಮೇಲೆ ಡಿಸ್ಕೌಂಟ್ ಬಿಟ್ಟು ಅಂಥ ಡಿಸ್ಕೌಂಟನ್ನು ಉಪಯೋಗಿಸುವುದಾಗಿಯೂ ಮಿಸೆಸ್ ಮೈಕಾಬರರು ತಿಳಿಸಿದರು. ಈ ಮಾತುಗಳನ್ನು ಮೆಚ್ಚಿ ನಾವು ಕರತಾಡನ ಮಾಡಿದೆವು.

ಅನಂತರ ಚಹ ಸೇವಿಸಿ, ಅವರ ದೊಡ್ಡ ನಿಲುವಂಗಿಯನ್ನು ಟ್ರೇಡಲ್ಸರ ಸಹಾಯದಿಂದ ತೊಟ್ಟುಕೊಂಡು, ಪತ್ನೀ ಸಮೇತರಾಗಿ ಮಿ. ಮೈಕಾಬರರು ಅವರ ಮನೆ ಕಡೆಗೆ ಹೊರಟು ಹೋದರು.

ಮಿ. ಮೈಕಾಬರರಿಗೆ ಟ್ರೇಡಲ್ಸನು ನಿಲುವಂಗಿಯನ್ನು ತೊಡಿಸುತ್ತಿದ್ದಾಗಲೇ ಅವನಿಗೆ ಗೊತ್ತಾಗದಂತೆ, ಅವರು ನನಗೊಂದು ಪತ್ರವನ್ನು ತೆಗೆದು ಕೊಟ್ಟಿದ್ದರು. ಅಲ್ಲದೆ, ಅವರು ನಮ್ಮ ಮನೆಯಿಂದ ಹೋದನಂತರ ಮಾತ್ರ ಆ ಪತ್ರವನ್ನು ನಾನು ಓದಬೇಕೆಂದು ಅಂದಿದ್ದರು.

ಟ್ರೇಡಲ್ಸನು ನಮ್ಮ ಮನೆಯಿಂದ ಹೋಗುವ ಮೊದಲು ಅವನಿಗೆ ಗುಟ್ಟಾಗಿ, ಮಿ. ಮೈಕಾಬರರಿಗೆ ಹಣ ಸಾಲ ಕೊಡುವ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯಿಂದಿರಬೇಕೆಂದು ನಾನು ಸೂಚನೆಯಿತ್ತೆನು. ಅವನು ಅವನ ಸರಳ ಸ್ವಭಾವಕ್ಕೆ ಸರಿಯಾಗಿ –

“ಹಣವೇ ಇಲ್ಲದವನಿಗೆ ಸಾಲಕೊಟ್ಟು ಕಳೆದುಕೊಳ್ಳುವ ಭಯವೂ ಇರಬೇಕಾದ್ದಿಲ್ಲವಷ್ಟೆ!” ಎಂದಂದನು.
“ಹಣವಿಲ್ಲದಿದ್ದರೂ ಹೆಸರಾದರೂ ಇದೆಯಲ್ಲ?” ಅಂದೆ, ನಾನು.
“ಹೆಸರಿನ ಸಾಲವನ್ನು ಹೇಗೂ ಕೊಟ್ಟಾಗಿದೆ” ಎಂದು ಅವನು ಹೇಳಿ ನಗಾಡಿಕೊಂಡು ಹೊರಟು ಹೋದನು.

ಅವರೆಲ್ಲರೂ ಹೋಗಿ ಒಂದೆರಡು ನಿಮಿಷಗಳಾಗುವುದರೊಳಗೆ ಸ್ಟೀಯರ್ಫೋರ್ತನು ಬಂದನು. ಅವನು ಬಂದ ಮರುಕ್ಷಣವೇ ಏಗ್ನೆಸ್ಸಳ ದಿವ್ಯ ಮೂರ್ತಿಯೂ ನನ್ನೆದುರು ಬಂದು ನಿಂತಂತೆ ನನ್ನ ಮನಸ್ಸಿನಲ್ಲಿ ಹೊಳೆಯಿತು. ಆ ದಿವ್ಯ ದೇವತೆಯ ಸಾನ್ನಿಧ್ಯದಲ್ಲಿ ಸ್ಟೀಯರ್ಫೋರ್ತನು ತೇಜೋಹೀನನಾಗಿಯೂ ಅಮಂಗಲಕಾರಕನಾಗಿಯೂ ಅಪಾಯಕಾರಿಯಾಗಿಯೂ ಕಾಣತೊಡಗಿದನು. ನನ್ನ ಪರಮಮಿತ್ರನನ್ನು ಕುರಿತು ಮನಸ್ಸು ತುಂಬಾ ತರ್ಕಮಾಡತೊಡಗಿತು. ನನ್ನ ಈ ಭಾವನೆಗಳೆಲ್ಲ ಭ್ರಮೆಯಲ್ಲವೇ ಅನ್ಯಾಯವಲ್ಲವೇ ನಿರಾಧಾರವಾದವುಗಳಲ್ಲವೇ ಎಂದು ತರ್ಕಿಸಿ ಸಿದ್ಧಾಂತಕ್ಕೆ ಬರದೆ ಸೋತೆನು. ತರ್ಕದಿಂದ ಸಿದ್ಧಾಂತಪಡಿಸಲಾಗದ ಆದರೂ ಮನಸ್ಸಿನಲ್ಲಿ ಇದೆಯೆಂದು ತಿಳಿಯುವ ಕೊರತೆಗಳು ಸ್ಟೀಯರ್ಫೋರ್ತನಲ್ಲಿ ತೋರಿದುವು.

ಆದರೆ ಸ್ವಲ್ಪ ಹೊತ್ತು ಅವನೊಡನೆ ಮಾತಾಡುತ್ತಿದ್ದ ಹಾಗೆ ಆ ಭಾವನೆಗಳೆಲ್ಲ ಮಾಯವಾದುವು. ನನ್ನ ಅಭಿಪ್ರಾಯವನ್ನು ತಿದ್ದಿ, ಸರಿಪಡಿಸಿಕೊಂಡು, ಪಶ್ಚಾತ್ತಾಪಪಡುತ್ತಾ ಅಂತರಂಗದಲ್ಲೇ ಅವನ ಕ್ಷಮೆಯನ್ನೂ ಬೇಡಿದೆನು. ಅವನ ಅನೇಕ ಸಾಹಸಗಳನ್ನು ಬಹು ರಸವತ್ತಾಗಿ ತಿಳಿಸಿದನು. ಅವನದೊಂದು ನಾವೆಯೇ ಇದೆಯೆಂದೂ ಅದರಲ್ಲಿ ಪರೀಕ್ಷಾರ್ಥವಾಗಿ ಸಮುದ್ರ ಪ್ರಯಾಣ ಮಾಡಿ ನೋಡಿದನೆಂದೂ ಹೇಳಿದನು. ತನ್ನ ಸಮುದ್ರದ ಅನುಭವಗಳಿಗಾಗಿ ಸ್ವಲ್ಪ ಸಮಯ ತಾನು ಯಾರ್ಮತ್ತಿನಲ್ಲಿದ್ದುದಾಗಿಯೂ ತಿಳಿಸಿ, ಆಗಲೇ ಜ್ಞಾಪಕಕ್ಕೆ ಬಂದು ಪೆಗಟಿಯದೊಂದು ಪತ್ರ ನನಗೆ ಇದೆಯೆಂದು ಜೇಬಿನಲ್ಲಿ ಹುಡುಕತೊಡಗಿದನು. ನಾಲ್ಕಾರು ಪತ್ರಗಳನ್ನು ಒಂದೊಂದಾಗಿ ಓದಿ ನೋಡಿ ಕೊನೆಗೆ ಪೆಗಟಿಯ ಪತ್ರವನ್ನೇ ತೆಗೆದುಕೊಟ್ಟನು. ಒಂದು ಪತ್ರವನ್ನು ಅವಸರದಿಂದ ಓದುವಾಗ “…ಸ್ಟೀಯರ್ಫೋರ್ತ್ರಿಂದ ಬರಬೇಕಾದ ಮೊಬಲಗು…” ಎಂದಷ್ಟನ್ನು ಮಾತ್ರ ಓದಿ, ಅದನ್ನು ಬದಿಗಿಟ್ಟನು.

ಪೆಗಟಿಯ ಪತ್ರದಲ್ಲಿ ಬಾರ್ಕಿಸನ ಅಸೌಖ್ಯವನ್ನು ಕುರಿತಾಗಿ ಬರೆದಿದ್ದಳು. ಬಾರ್ಕಿಸನು ಹಾಸಿಗೆ ಹಿಡಿದಿದ್ದನು – ಬದುಕುವುದೇ ಕಷ್ಟವೆಂಬ ಪರಿಸ್ಥಿತಿಗೆ ತಲುಪಿದ್ದನು. ಈ ಪತ್ರ ಓದಿದನಂತರ ನಾನು ಯಾರ್ಮತ್ತಿಗೆ ಒಮ್ಮೆ ಹೋಗಿ ಬರುವುದು ಅಗತ್ಯವೆಂದು ಸ್ಟೀಯರ್ಫೋರ್ತನೊಡನೆ ಹೇಳಿದೆನು. ಸ್ಟೀಯರ್ಫೋರ್ತನು ಅರೆ ನಗೆ ನಕ್ಕು,
“ಅದಕ್ಕೆಲ್ಲ ಗಾಬರಿಯಾಗಬಾರದು, ಡೆಯ್ಸಿ (ನನ್ನನ್ನು ಸಲಿಗೆಯಿಂದ ಕರೆಯುವಾಗ ಅವನು ಡೆಯ್ಸಿ ಎಂದು ಕರೆಯುತ್ತಿದ್ದನು). ಮರಣವೆಂಬುದು ದುಃಖದ ವಿಷಯ ಹೌದಾದರೂ ಅದು ಸೂರ್ಯನ ದಿನಂಪ್ರತಿಯ ಅಸ್ತಮಾನದಂತೆ ಉದಯಿಸಿದವನಿಗೆಲ್ಲ ಇರುವ ಒಂದು ಅಂತ್ಯ. ನಮ್ಮ ಸುತ್ತಲೂ ಸದಾ ಕಾಲವೂ ಒಬ್ಬರಲ್ಲದಿದ್ದರೆ ಒಬ್ಬರು ಸಾಯುತ್ತಲೇ ಇರುತ್ತಾರೆ. ಪ್ರತಿ ಮನೆ ಬಾಗಿಲಲ್ಲೂ ನಿಂತು ಕರೆಯುವ ಮರಣಕ್ಕೆ ಅಂಜಿದರೆ ಪ್ರಾಪಂಚಿಕ ಜೂಜಿನಲ್ಲಿ ಸೋಲಲೇಬೇಕಾಗುವುದು” ಎಂದು ಸ್ಟೀಯರ್ಫೋರ್ತನು ಹೇಳಿದನು. ಅವನು ಈ ರೀತಿ ಸಮಾಧಾನಚಿತ್ತದಿಂದ ಮಾತಾಡುತ್ತಿದ್ದರೂ ಅವನ ಮನಸ್ಸಿನಲ್ಲಿ ತುಂಬಾ ಕಳವಳವೋ ಉದ್ವಿಗ್ನತೆಯೋ ವ್ಯವಹಾರ ಗೊಂದಲವೋ ಇರಬೇಕೆಂಬಂತೆ ತೋರುತ್ತಿತ್ತು. ಅವನ ಎದುರಿದ್ದ ಅಗ್ಗಿಷ್ಟಿಕೆಯ ಕೆಂಡವನ್ನೇ ನೋಡುತ್ತಾ ಕೆಂಡಗಳನ್ನು ಕೆದರಿ, ಕಿಡಿ ಎಬ್ಬಿಸುತ್ತಾ ಕಾರ್ಯವೆಸಗೋಣಕ್ಕೂ ಆಲೋಚನೆಗೂ ಸಂಬಂಧವಿರದಂತೆ ವರ್ತಿಸುತ್ತಿದ್ದನು. ಜೂಜು – ಪ್ರಾಪಂಚಿಕ ಜೂಜು, ಎಂದಂಥ ವಿಷಯ ಏನಿರಬಹುದೆಂದು ಆಲೋಚಿಸಿ –
“ಎಂಥ ಜೂಜು, ಜೀವನ ಜೂಜಾಗುವುದು ಹೇಗೆ?” ಎಂದು ನಾನು ಕೇಳಿದೆ. ಅದಕ್ಕೆ ಅವನು –
“ಸುಖಪಡೆಯಲೋಸ್ಕರ ನಡೆಸುವ ಜೀವನವು ಒಂದು ಜೂಜು. ಆ ಜೂಜಿನಲ್ಲಿ ಓಡಿ ಗೆದ್ದವರಿಗೆ ಮಾತ್ರ ಸುಖ ಸಿಕ್ಕುವಾಗ, ಜೂಜಿನಲ್ಲಿ ಓಡುವವರು ಪಾದದಡಿಯ ಕ್ಷುದ್ರ ಜಂತುಗಳ ಸುಖವನ್ನು ವರ್ಣಿಸಲಾರರು. ನೋಡು, ಡೆಯ್ಸಿ, ಜೂಜಿನ ಕ್ರಮವೇ ಇದು. ಅನುಕೂಲವಿದ್ದರೆ ಯಾರನ್ನೂ ನೋಯಿಸದೆ ಜೂಜನ್ನು ನಡೆಸು. ಅನುಕೂಲವಿಲ್ಲವೆಂದಾದರೆ ಯಾರನ್ನೂ ಗಣನೆಗೆ ತಾರದೆ ತುಳಿದು ಮುಂದೋಡು. ಇದೇ ಪ್ರಪಂಚದಲ್ಲಿ ಬದುಕಿ ಸುಖ ಬಯಸುವವರ ಆದರ್ಶ ಧರ್ಮ. ಆ ಬಡ ಕುಟುಂಬದವರ ದುಃಖದ ಸಹಾನುಭೂತಿಯಿಂದ ನೀನು ಅವಸರಪಟ್ಟು ಯಾರ್ಮತ್ತಿಗೆ ಓಡುವುದು ಅನಗತ್ಯ. ಒಂದು ವೇಳೆ ನೀನು ಅಲ್ಲಿಗೆ ಹೋಗುವುದಾದರೂ ನಮ್ಮ ಮನೆಗೆ ಬಂದು ಒಂದು ದಿನವಾದರೂ ಇದ್ದು, ಅಲ್ಲಿಂದಲೇ ಯಾರ್ಮತ್ತಿಗೆ ಹೋಗು” ಎಂದಂದನು.

ಆ ದಿನ ಸ್ಟೀಯರ್ಫೋರ್ತನು ನನ್ನ ಮನೆಯಲ್ಲೇ ಊಟ ಮಾಡಿ, ಒಬ್ಬ ರಾಜನಿಗೂ ತೃಪ್ತಿಕೊಡಬಲ್ಲಂಥ ಊಟವನ್ನು ನಾನು ಕೊಟ್ಟೆನೆಂದು ಹೊಗಳಿಕೊಂಡು ಹೊರಟು ಹೋದನು.

ಮಲಗುವ ಮೊದಲು ಅಂಗಿ ಬಿಚ್ಚುವಾಗ ಮಿ. ಮೈಕಾಬರರು ಕೊಟ್ಟಿದ್ದ ಪತ್ರ ಜ್ಞಾಪಕಕ್ಕೆ ಬಂತು. ಆ ಪತ್ರವನ್ನು ಅವರು ತಮ್ಮ ಮನೆಯಿಂದ ಹೊರಡುವ ಮೊದಲೇ ಬರೆದಿರಬೇಕೆಂದು ಪತ್ರ ಓದುವಾಗ ತಿಳಿಯಿತು. ಪತ್ರ ಹೀಗಿತ್ತು:–
ಸರ್,
‘ಮಿ. ಕಾಪರ್ಫೀಲ್ಡ್’ ಎಂದು ಧೈರ್ಯವಾಗಿ ನಿಮ್ಮನ್ನು ಸಂಬೋಧಿಸುವಷ್ಟೂ ನನಗೆ ಪುರುಷತ್ವವಿಲ್ಲ.

ಈ ಕೆಳಗೆ ದಸ್ಕತ್ತು ಮಾಡುವ ವ್ಯಕ್ತಿಯು ಕಷ್ಟಗಳಿಂದ ನುಚ್ಚುನೂರಾಗಿದ್ದಾನೆಂಬುದನ್ನು ನಿಮಗೆ ತಿಳಿಸುವುದು ಉಚಿತವಾಗಿದೆ. ನಿಮ್ಮ ಮನೆ ಊಟದ ಮಧ್ಯೆ ದುಃಖದ ಮುಗಿಲು ಎದ್ದು ಗೋಚರಿಸಬಾರದೆಂದು ನಾನು ಪ್ರಯತ್ನಿಸುತ್ತಿದ್ದುದನ್ನು ನೀವು ಕಂಡಿರಲೂಬಹುದು. ಇರಲಿ, ಆಶಾರವಿಯು ದಿಗಂತದಲ್ಲಿ ಅಸ್ತಂಗತನಾದನು. ಈ ಬರಹಗಾರನು ಜೀವನ್ಮೃತನಾಗಿರುವನು.

ಬಾಡಿಗೆಯ ಬಾಕಿಗಳ ವಸೂಲಿಗಾಗಿ ವಾರಂಟು ತಂದಿರುವ ಕ್ರೋಧಾವಿಷ್ಟ – ಕುಡಿದು ಮತ್ತನಾಗಿರುವವನೆಂದರೂ ತಪ್ಪಾಗಲಾರದ ವ್ಯಕ್ತಿಯ ಸಮ್ಮುಖದಲ್ಲಿ ಇದನ್ನು ಬರೆಯುತ್ತಿದ್ದೇನೆ. ನಮ್ಮ ಮನೆ, ಮನೆಯೊಳಗಿನ ಎಲ್ಲಾ ಚರಸ್ವತ್ತುಗಳೂ ಜಪ್ತಾಗಿವೆ. ಜಪ್ತಾಗಿರುವ ಸ್ವತ್ತುಗಳಲ್ಲಿ ನಿರ್ದೋಷಿಯಾದ, ನನ್ನ ಸಾಲಗಳಿಗೆ ಎಳ್ಳಷ್ಟೂ ಸಂಬಂಧಿಸದ, ಮರ್ಯಾದಸ್ಥ ಮಿ. ಟ್ರೇಡಲ್ಸ್‌ರವರ ಸಕಲ ಚರಸ್ವತ್ತುಗಳೂ ಸೇರಿವೆ – ಇದೊಂದು ದುಃಖದ ವಿಷಯ.

ಈ ಎಲ್ಲಾ ದುಃಖಗಳು ನನ್ನನ್ನು ಬಾಧಿಸುತ್ತಿರುವಾಗಲೇ – ನನ್ನ ದುಃಖಕ್ಕೆ ಮಿತಿಯಿರಬಾರದೆಂಬಂತೆ – ಎಲ್ಲದಕ್ಕಿಂತಲೂ ಅನಿರೀಕ್ಷಿತವಾದ ಒಂದು ಘಟನೆ ನಡೆದು ಹೋಗಿದೆ. ಅದನ್ನು ನಿಮಗೆ ತಿಳಿಸದೆ ಮನಸ್ಸು ಕೇಳದು: ಇದೇ ಮಿ. ಟ್ರೇಡಲ್ಸರವರು ನನಗೆ ಸಾಲ ಕೊಡುವುದಾಗಿ ವಾಗ್ದಾನ ಮಾಡಿದ್ದ ಪೌಂಡ್ ೨೩, ಶಿಲಿಂಗ್ ೪ ಮತ್ತು ಪೆನ್ಸ್ ೯ ೧/೨ಯನ್ನು ಈ ವರೆಗೂ ಕೊಡದೆ ನನ್ನನ್ನು ಕೊಂದಿರುವರು.

ಇನ್ನೂ ಒಂದು ಸಂಗತಿಯನ್ನು ತಿಳಿಸಬಯಸುತ್ತೇನೆ – ಸಾಧಾರಣ ಇಂದಿನಿಂದ ಆರು ಚಾಂದ್ರಮಾನ ಮಾಸಗಳೊಳಗೆ ನಮ್ಮ ಕುಟುಂಬದ ದುಃಖದ ಭಾರವನ್ನು ಹೆಚ್ಚಿಸಲು ಇನ್ನೊಂದು ಜೀವ ನಮ್ಮಲ್ಲಿ ಜನಿಸತಕ್ಕದ್ದಿದೆ.
ಇಂತೀ
ದುಃಖಿ, ದರಿದ್ರ, ದಲಿತ, ಪಾಮರ
ವಿಲ್ಕಿನ್ಸ್ ಮೈಕಾಬರ್

ಪತ್ರವನ್ನು ಓದಿದೆ. ಮಿ. ಮೈಕಾಬರರ ಸಾಲುಗಳ ಗೊಂದಲದಲ್ಲಿ ಸಿಕ್ಕಿಬಿದ್ದ ಸರಳ ಹೃದಯದ ಟ್ರೇಡಲ್ಸನ ಮೌನ ತ್ಯಾಗವೂ ಅರುವತ್ತು ವರ್ಷಗಳ ಕಾಲವಾದರೂ ಕಾದು ಕುಳಿತಿರಲು ತಯಾರಿದ್ದ ಅವನ ಇನಿಯಳ ಪವಿತ್ರ ಪ್ರೇಮವೂ ನನ್ನ ಮನಸ್ಸನ್ನು ನೋಯಿಸಿದುವು. ಆಲೋಚನಾ ಪರಂಪರೆಗಳಿಂದ ಆ ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ.

ಅಧ್ಯಾಯ ಇಪ್ಪತ್ತೊಂಬತ್ತು

ನಾನು ಸ್ಟೀಯರ್ಫೋರ್ತನ ಮನೆಗೆ ಪುನಃ ಹೋದುದು

ಸ್ಟೀಯರ್ಫೋರ್ತನ ಮನೆಗೆ ಹೋಗಲು ಮತ್ತು ಅಲ್ಲಿಂದ ಯಾರ್ಮತ್ತಿಗೆ ಹೋಗಲು ಸಹ, ಒಂದೆರಡು ದಿನ ರಜೆ ಪಡೆದುಕೊಂಡೆನು. ಸ್ಪೆನ್ಲೋ ಮತ್ತು ಜಾರ್ಕಿನ್ಸ್ ಒಕ್ಕೂಟದಲ್ಲಿ ನನಗೆ ಸಂಬಳವೆಂದು ಹಣ ಸಲ್ಲತಕ್ಕದ್ದಿಲ್ಲದಿದ್ದುದರಿಂದ ರಜೆ ಸುಲಭವಾಗಿ ಸಿಕ್ಕಿತು. ರಜ ಕೇಳಲು ಮಿ. ಸ್ಪೆನ್ಲೋರವರ ಸಮಕ್ಷಮಕ್ಕೆ ಹೋಗಿದ್ದಾಗ ಮಿಸ್ ಸ್ಪೆನ್ಲೋಳು ಕ್ಷೇಮದಲ್ಲಿದ್ದಾಳೆಯೇ ಎಂದು ವಿಚಾರಿಸಿದೆನು. ಹಾಗೆ ವಿಚಾರಿಸುವಾಗಲೇ ನನ್ನ ಗಂಟಲು ಕಟ್ಟತೊಡಗಿತು. ಮತ್ತು ಕಣ್ಣು ದೃಷ್ಟಿ ಮಸುಕಾಗತೊಡಗಿತ್ತು. ಆದರೆ ನನ್ನ ಮನಸ್ಸಿನ ಪರಿಸ್ಥಿತಿ ಹಾಗಿದ್ದರೂ ಮಿ. ಸ್ಪೆನ್ಲೋರವರು ನಾನು ಯಾರೋ ಒಬ್ಬ ಅಗಣ್ಯ ವ್ಯಕ್ತಿಯನ್ನು ಕುರಿತು ಕೇವಲ ಸಾಂಪ್ರದಾಯಿಕವಾಗಿ ವಿಚಾರಿಸಿದವನೆಂಬಂತೆ ಗ್ರಹಿಸಿ, ಅವಳು ಕ್ಷೇಮವಾಗಿದ್ದಾಳೆಂದು ತಿಳಿಸಿದರು.

ಈ ಸರ್ತಿ ನಾನು ಸ್ಟೀಯರ್ಫೋರ್ತನ ಮನೆಗೆ ಹೋದಾಗ ಅಲ್ಲಿ ಲಿಟ್ಮರನಿರಲಿಲ್ಲ. ಅವನ ಸ್ಥಾನದಲ್ಲೊಬ್ಬ ಸೌಮ್ಯವದನೆ ಹುಡುಗಿಯಿದ್ದಳು.

ಊಟವಾದನಂತರ ನಾವೆಲ್ಲರೂ ಜತೆಯಲ್ಲಿ ಕುಳಿತು ತುಂಬಾ ಮಾತಾಡುತ್ತಾ ಸ್ವಲ್ಪ ಸಮಯ ಕಳೆದೆವು. ಸ್ಟೀಯರ್ಫೋರ್ತನೂ ಅವನ ತಾಯಿಯೂ ಅವರ ಪೂರ್ವಕ್ರಮದಲ್ಲಿ ಬಹು ಪ್ರೀತಿಯಿಂದ ಮಾತಾಡುತ್ತಿದ್ದರೂ ಮಿಸ್ ಡಾರ್ಟಲಳ ಸ್ವಭಾವವೋ ವರ್ತನೆಯೋ ಸ್ವಲ್ಪ ಬದಲಾಗಿತ್ತು. ಅವಳು ಸ್ವಲ್ಪ ವಿಚಾರಮಗ್ನಳಾಗಿರುವಂತೆ, ಮತ್ತು ನಮ್ಮೆಲ್ಲರನ್ನೂ ಯಾವುದೋ ಒಂದು ಶೋಧನೆಗಾಗಿ ಪರೀಕ್ಷಿಸುತ್ತಿರುವಂತೆ, ಮೌನವಾಗಿಯೂ ಬಹು ಸೂಕ್ಷ್ಮವಾಗಿ ಅಲ್ಲಿನ ಎಲ್ಲಾ ನಡೆನುಡಿಗಳನ್ನು ಗ್ರಹಿಸುತ್ತಲೂ ಕುಳಿತಿದ್ದಳು. ಸ್ವಲ್ಪ ಹೊತ್ತು ಹೀಗೆ ಕಾಲ ಕಳೆದನಂತರ ಸ್ಟೀಯರ್ಫೋರ್ತನೂ ಅವನ ತಾಯಿಯೂ ಮಾತಾಡುತ್ತಾ ಮನೆಯ ಹೊರಗೆ ಹೋಗಿ ಹೂವಿನ ತೋಟದಲ್ಲಿ ತಿರುಗಾಡುತ್ತಿದ್ದರು.

ಅವರಿಬ್ಬರು ಹೊರಗಿದ್ದಾಗ ಮಿಸ್ ಡಾರ್ಟಲ್ಲಳೂ ನಾನೂ ಒಳಗೇ ಕುಳಿತು ಮಾತಾಡುತ್ತಿದ್ದೆವು. ತನ್ನ ಸಂಶಯ ನಿವೃತ್ತಿಗಾಗಿ ಎಂದು ತೋರುವಂತೆ – ಆದರೂ ತನ್ನ ನಿಶ್ಚಿತಾಭಿಪ್ರಾಯದ ಸಮರ್ಥನೆ ದೊರಕಬಹುದೆಂಬ ಉತ್ತರ ದೊರಕುವ ನಿರೀಕ್ಷಣೆಯಿಂದ – ಮಿಸ್ ಡಾರ್ಟಲ್ಲಳು ಸ್ಟೀಯರ್ಫೋರ್ತನ ಕಾರ್ಯಭಾರಗಳನ್ನು ಕುರಿತಾಗಿ ತುಂಬಾ ವಿಚಾರಿಸಿದಳು. ನನಗೆ ತಿಳಿದಷ್ಟು ಅವಳಿಗೆ ನಿಸ್ಸಂಕೋಚವಾಗಿ ತಿಳಿಸುವಾಗ ಅವಳ ಸಂಶಯ ಮೊದಲಿನಂತೆಯೇ ಉಳಿದಿರುವಂತೆ ಅವಳ ಮುಖದಿಂದ ಮತ್ತು ಕೆಲವು ಮಾತುಗಳಿಂದ ತೋರಿಬಂತು.

ಆ ರಾತ್ರಿ ಸ್ಟೀಯರ್ಫೋರ್ತನು ಬಹು ಜಾಣ್ಮೆಯಿಂದ ವರ್ತಿಸಿ ಮಿಸ್ ಡಾರ್ಟಲ್ಲಳನ್ನು ಬಹು ಶಾಂತಭಾವಕ್ಕೆ ತಂದಿದ್ದನು. ಯಾವುದೋ – ಅವಳಿಗೆ ಮಾತ್ರ ತಿಳಿದಿದ್ದ ಕಾರಣಗಳಿಂದಲೋ ಅಥವಾ ಅವಳ ಸ್ವಭಾವವೇ ಹಾಗಿದ್ದ ಕಾರಣದಿಂದಲೋ ಸದಾ ಅತೃಪ್ತಿ, ಸಂಶಯ, ಅಸಂತುಷ್ಟಿ, ಸಿಟ್ಟನಿಂದಿರುತ್ತಿದ್ದವಳು ಆ ರಾತ್ರಿ ಬಹು ಸೌಮ್ಯತೆಯನ್ನು ಪಡೆದಿದ್ದಳು. ಸ್ಟೀಯರ್ಫೋರ್ತನ ಅಪೇಕ್ಷೆ ಮೇರೆಗೆ ಅವಳು ಪಿಯಾನವನ್ನು ಬಾರಿಸುತ್ತಾ ಒಂದು ಸುಂದರವಾದ ಪದವನ್ನು ಹಾಡಿದಳು. ಅವಳ ಹಾಡು ಉದ್ವೇಗಪೂರಿತವಾಗಿ, ಭಾವಪ್ರದವಾಗಿ, ಸುಶ್ರಾವ್ಯವಾಗಿ, ದೇವ ಗಂಧರ್ವರ ಗಾನವೇ ಎಂಬಷ್ಟು ಮನೋಹರವಾಗಿ ಹಾಡಲಾಗಿತ್ತು. ಸ್ಟೀಯರ್ಫೋರ್ತನು ತನ್ನ ವಾಕ್ಚಾತುರ್ಯ, ಪ್ರತಿಭೆ, ಚಮತ್ಕಾರ, ವ್ಯಕ್ತಿತ್ವದಿಂದ ಒಲಿಸಿಕೊಂಡು ಈ ಸ್ಥಿತಿಗೆ ತಂದಿದ್ದ. ಮಿಸ್ ಡಾರ್ಟಾಲ್ಲಳನ್ನು ಒಮ್ಮೆ ಮೈಮುಟ್ಟಿ ಮಾತಾಡಿಸಿಬಿಡೋಣವೆಂದು ಅವನು ಪ್ರಯತ್ನಿಸಿದಾಗ ಮಾತ್ರ ಮಿಸ್ ಡಾರ್ಟಲ್ಲಳು ಸಿಟ್ಟುಗೊಂಡ ಬೆಕ್ಕಿನಂತೆ ಹಠಾತ್ತಾಗಿ ಕ್ರೋಧ ತಾಳಿ, ಕುಳಿದಲ್ಲಿಂದ ಹಾರಿ ಮಾಯವಾದಳು.

ನಾವು ಮಲಗುವ ಮೊದಲು ನಾವಿಬ್ಬರು ಮಾತ್ರ ಒಟ್ಟಿಗೆ ಕುಳಿತು ಸ್ವಲ್ಪ ಮಾತಾಡಿದೆವು. ಆಗ ಸ್ಟೀಯರ್ಫೋರ್ತನು ತಮಾಷೆಗಾಗಿ –
"ಇಲ್ಲ ಡೆಯ್ಸಿ, ನಾನು ನಿನ್ನನ್ನು ಡೆಯ್ಸಿ ಎಂದು ಕರೆಯುವಾಗ, ನೀನು ನಿಷ್ಕಪಟಿ, ಪರಿಶುದ್ಧನು ಎಂಬ ಅರ್ಥದ ಹೆಸರನ್ನು ಪ್ರಯೋಗಿಸುತ್ತಿದ್ದೇನಷ್ಟೆ. ಹಾಗೆಯೇ ನೀನು ನನ್ನನ್ನು ನಿಷ್ಕಪಟಿ ಎಂದು ಸಂಬೋಧಿಸಬಲ್ಲೆಯೇನು?" ಎಂದು ಕೇಳಿದನು.
"ಖಂಡಿತವಾಗಿಯೂ ಹಾಗೆ ಸಂಬೋಧಿಸಬಲ್ಲೆ. ನಿನ್ನ ಗುಣಗಳನ್ನು ಮೆಚ್ಚಿ ತಾನೆ ನಾನು ನಿನ್ನ ಸ್ನೇಹಿತನಾದುದು?" ಎಂದು ನಾನಂದೆ.
ನನ್ನ ಈ ಉತ್ತರವನ್ನು ಕೇಳಿ ಸ್ವಲ್ಪ ಹೊತ್ತು ಅವನು ಸುಮ್ಮನೆ ಕುಳಿತನು. ಅನಂತರ, ಸ್ವಲ್ಪ ಅಂಜುತ್ತಿದ್ದವನಂತೆಯೂ ಹಿಂಜರಿಯುತ್ತಿದ್ದವನಂತೆಯೂ ತೋರುತ್ತ, ಅವನ ಸ್ವಭಾವ ಸಿದ್ಧವಾದ ಧೈರ್ಯ ಮತ್ತು ಚಾತುರ್ಯದಿಂದ, ನಗಾಡುತ್ತಾ ಅಂದನು –
"ನೋಡು ಡೆಯ್ಸಿ, ಏನಾದರೂ ಕಾರಣಗಳಿಂದ ನಾವು ಪರಸ್ಪರವಾಗಿ ಕಾಣದಿರುವ ಸಂದರ್ಭ ಬಂದರೆ ನನ್ನನ್ನು ನನ್ನ ಉತ್ತಮ ಗುಣಗಳಿಂದ ಮಾತ್ರ ಗಣಿಸಿ ನೆನೆಯಬಲ್ಲೆಯೇನು?"
"ನಿನ್ನನ್ನು ಕಂಡಾಗಲೂ ಕಾಣದಿರುವಾಗಲೂ ನಾನು ಗ್ರಹಿಸುವುದೇ ನಿನ್ನ ಗುಣಗಳನ್ನು, ಆ ಗುಣಗಳೆಲ್ಲ ಅತ್ಯುತ್ತಮವಾದವುಗಳೇ ತಾನೆ?" ಅಂದೆನು ನಾನು.
"ನನ್ನ ಉತ್ತಮ ಗುಣಗಳಿಂದ ಮಾತ್ರ ಗಣಿಸಿ ನೆನೆಯುವುದಾಗಿ ಅಭಯ ಕೊಡಬಲ್ಲೆಯಾ?" ಎಂದೂ ಕೇಳಿದನು. ಈ ಪ್ರಶ್ನೆಯಲ್ಲಿ ಸ್ವಲ್ಪ ದುಃಖದ ಛಾಯೆಯಿದ್ದಂತೆ ತೋರಿತು.

ನಾನಂದೆ–
"ನೀನು ಸರ್ವತ್ರ – ಸದಾ – ಉತ್ತಮನೇ ಆಗಿರುತ್ತೀ. ನಾನು ನಿನ್ನನ್ನು ನಿನ್ನ ಉತ್ತಮಗುಣಗಳಿಂದ ಮಾತ್ರ ಗ್ರಹಿಸಬಲ್ಲೆನು ಮತ್ತು ಗ್ರಹಿಸುವೆನು."

ಮರುದಿನ ಬೆಳಗ್ಗೆ ಸ್ಟೀಯರ್ಫೋರ್ತನು ಏಳುವ ಮೊದಲೇ ನಾನು ಅಲ್ಲಿಂದ ಹೊರಹೋಗುವುದಾಗಿ ಹೇಳಿ, ಅವನಿಗೆ ಹಸ್ತಲಾಘವವನ್ನಿತ್ತು ನನ್ನ ಕೋಣೆಗೆ ಬಂದು ಮಲಗಿದೆನು. ನನ್ನ ಏರ್ಪಾಡಿನಂತೆ ನಾನು ಬೆಳಗ್ಗೆ ಎದ್ದು ಆ ಮನೆಯಿಂದ ಹೊರಟೆನು. ಹಾಗೆ ಹೋಗುವಾಗ, ನನ್ನ ಪಕ್ಕದ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದ ಸ್ಟೀಯರ್ಫೋರ್ತನನ್ನು ಒಮ್ಮೆ ನೋಡಿದೆನು.

ಸ್ಟೀಯರ್ಫೋರ್ತನು ಶಾಲೆಯಲ್ಲಿದ್ದಾಗ ಮಲಗಿ ನಿದ್ರಿಸುತ್ತಿದ್ದ ಕ್ರಮದಲ್ಲೇ ತನ್ನ ತೋಳಿನ ಮೇಲೆ ತಲೆಯನ್ನಿಟ್ಟುಕೊಂಡು ಸುಖವಾಗಿ ನಿದ್ರಿಸುತ್ತಿದ್ದನು. ಆ ದಿನ ಅರುಣೋದಯದಲ್ಲಿ ನಾನು ಸ್ಟೀಯರ್ಫೋರ್ತನನ್ನು ನೋಡಿದ ನಂತರ ಮತ್ತೆಂದೂ ನೋಡಲಿಲ್ಲವೆಂಬುದನ್ನು ಗ್ರಹಿಸಿದಾಗಲೆಲ್ಲ ನನಗೆ ದುಃಖವಾಗುತ್ತದೆ. ತನ್ನ ಜೀವನದ ಸ್ಫೂರ್ತಿಯಲ್ಲಿ ನನ್ನ ಕೈಯ್ಯನ್ನು ಕುಲುಕಿದ ಕೈಯ್ಯನ್ನು ಪುನಃ ಅದೇ ರೀತಿ ಕುಲುಕಿ ಕುಲಕಿಸಿಕೊಳ್ಳುವ ಯೋಗ ಮತ್ತೆ ದೊರಕಲಿಲ್ಲವೆಂಬುದು ಬಹು ದುಃಖದ ಸಂಗತಿ. ಪ್ರಪಂಚ ಜೀವನದಲ್ಲಿ – ಸೂಕ್ಷ್ಮವಾಗಿ ವಿಚಾರಿಸಿದರೆ – ಮನುಷ್ಯನ ಕೈ ಎಷ್ಟು ಸ್ವಲ್ಪ ಮಾತ್ರವಿದೆ! ಎಲ್ಲವೂ ಆ ಅಪಾರ ಮಹಿಮ ದೇವರ ಕೈಯ್ಯಲ್ಲಿ ಮಾತ್ರವಿದೆ! ದೇವರು ಅವನನ್ನು ರಕ್ಷಿಸಲಿ!

ಅಧ್ಯಾಯ ಮೂವತ್ತು

ದುಃಖದ ಒಂದು ಘಟನೆ

ನಾನು ಯಾರ್ಮತ್ತಿಗೆ ಸಾಯಂಕಾಲ ತಲುಪಿದೆನು. ಮಿ. ಬಾರ್ಕಿಸರ ಮನೆಗೆ ಹೋಗುವ ದಾರಿಯಲ್ಲೇ ಓಮರ್ ಮತ್ತು ಜೋರಾಮರ ಅಂಗಡಿಯಿದ್ದುದರಿಂದ ಮಿ. ಓಮರರೊಡನೆ ಸ್ವಲ್ಪ ಮಾತಾಡಿ ಹೋಗೋಣವೆಂದು ನಾನು ಅವರ ಅಂಗಡಿಗೆ ಹೋದೆನು. ಮಿ. ಓಮರರು ಅವರ ಆರಾಮ ಕುರ್ಚಿಯಲ್ಲಿ ಕುಳಿತು ಸಿಗರೇಟ್ ಸೇದುತ್ತಿದ್ದರು. ಅವರ ಖಾಸಶ್ವಾಸದ ನಿಮಿತ್ತ ಅವರು ಹೆಚ್ಚಾಗಿ ಆರಾಮ ಕುರ್ಚಿಯಲ್ಲೇ ಕುಳಿತಿರುತ್ತಿದ್ದರೆಂದು ತಿಳಿದೆ. ನನ್ನನ್ನು ಕಂಡು ಅವರಿಗೆ ಬಹಳ ಸಂತೋಷವಾಯಿತು. ನನಗೆ ಆಸನ ಕೊಟ್ಟರು. ಉಭಯ ಕುಶಲ ಪ್ರಶ್ನೆಗಳನ್ನಾಡಿದೆವು. ಅನಂತರ ನಾನು ವಿಚಾರಿಸಿದೆ –

“ಮಿ. ಬಾರ್ಕಿಸರ ಖಾಯಿಲೆ ಯಾವ ಸ್ಥಿತಿಯಲ್ಲಿದೆಯೆಂದು ನಿಮಗೇನಾದರೂ ಗೊತ್ತಿದೆಯೇ ಮಿ. ಓಮರ್?”

“ಆ ಪ್ರಶ್ನೆಯನ್ನು ನಾನೇ ಕೇಳಬೇಕೆಂದಿದ್ದೆ, ಮಿ. ಕಾಪರ್ಫೀಲ್ಡ್” ಎಂದು ಹೇಳುತ್ತಾ ನಗಾಡಿದರು. ನಗೆಯಿಂದ ನೇವಸ, ಉಬ್ಬುಸ ತಲೆದೋರಿ, ಸ್ವಲ್ಪ ಸಮಾಧಾನವಾಗುವುದರೊಳಗೆ, ಉತ್ಸಾಹದಿಂದಲೇ ಮಾತಾಡಲಾರಂಭಿಸಿದರು –

“ನಮ್ಮ ಶವಸಂಸ್ಕಾರ ಸಾಹಿತ್ಯದಂಗಡಿಗಳಿಗೆ ಇರುವ ಒಂದು ವಿಶೇಷ ಅವಗುಣವೆಂದರೆ, ಅಂಗಡಿ ಮಾಲೀಕರಿಗೆ ಇತರರ ಖಾಯಿಲ ಹೇಗಿದೆ, ಅವರ ಆರೋಗ್ಯ ಹೇಗಿದೆ ಎಂದು ಕೆಲವು ಸಂದರ್ಭಗಳಲ್ಲಿ ಕೇಳಲು ಅನುಕೂಲವಿಲ್ಲದಿರುವುದು! ನೋಡಿ, ‘ಓಮರ್ ಮತ್ತು ಜೋರಾಮರ ನಮಸ್ಕಾರ’ ಎಂದು ಕೇವಲ ಸಾಂಪ್ರದಾಯಿಕವಾಗಿ ಪತ್ರ ಬರೆದರೂ ಜನರ ಮುಖಾಂತರ ವಿಚಾರಿಸಿದರೂ ಖಾಯಿಲಸ್ಥರಿರುವ ಮನೆಯವರು ಅಪಾರ್ಥವನ್ನೇ ಕಲ್ಪಿಸಿಕೊಳ್ಳುವರು.” ಇಷ್ಟು ಹೇಳುವಾಗಲೇ ಪುನಃ ಕೆಮ್ಮು ಬಂತು. ಸ್ವಲ್ಪ ಕಷ್ಟಪಟ್ಟರು, ಅಂತೂ ಬಿಡದೆ ಪುನಃ –

“ಮಿ. ಬಾರ್ಕಿಸರನ್ನು ಕುರಿತು ವರ್ತಮಾನ ಸಂಗ್ರಹಿಸಲು ಅನುಕೂಲವಿದೆ – ಸ್ವಲ್ಪ ತಡೆಯಿರಿ, ಎಮಿಲಿ ಅಲ್ಲಿಗೆ ಹೋದವಳು ಸದ್ಯ ಬರಬಹುದು” ಎಂದೆಂದರು.

ಎಮಿಲಿಯ ಹೆಸರು ಕೇಳಿದ ಕೂಡಲೆ – ನನ್ನ ಬಾಲ್ಯದ ಪ್ರೀತಿಯ ಎಮಿಲಿಯನ್ನು ಜ್ಞಾಪಿಸಿಕೊಂಡು – ಅವಳು ಹೇಗಿದ್ದಾಳೆಂದು ವಿಚಾರಿಸಿದೆ.

“ಎಮಿಲಿ ಕ್ಷೇಮವಾಗಿದ್ದಾಳೆ” ಎಂದು ಉತ್ತರವಿತ್ತು, ಹೇಳಲು ಇನ್ನೂ ಏನೋ ಇರುತ್ತಾ, ಹೇಳಬಹುದೋ ಬಾರದೋ ಎಂದು ಗ್ರಹಿಸುತ್ತಿರುವಂತೆ ಸ್ವಲ್ಪ ಅತ್ತಿತ್ತ ನೋಡಿದರು. ಕೊನೆಗೆ ಒಂದು ನಿರ್ಧಾರಕ್ಕೆ ಬಂದವರಂತೆ ಕೆಮ್ಮಿಕೊಂಡು –

“ಆದರೆ ಅವಳಿಗೆ ಬೇಗ ಲಗ್ನವಾಗಬೇಕೆಂದು ನಮ್ಮೆಲ್ಲರ ಆಸೆ” ಎಂದಂದರು.

“ಅದೇಕೆ ಹಾಗೆ ಹೇಳುತ್ತೀರಿ? ಹೇಮನಿಗೆ ಕೊಟ್ಟು ಮದುವೆಯಾಗುವುದೆಂದಿತ್ತಲ್ಲಾ, ಅದೇನಾಯ್ತು? ಅಂದೆ ನಾನು.

“ಆ ಅಭಿಪ್ರಾಯ ಈಗಲೂ ಊರ್ಜಿತಲ್ಲಿದೆ, ಸದ್ಯ ಆಗಲೂ ಬಹುದು. ಮಿ. ಪೆಗಟಿ, ಹೇಮ್ ಎಲ್ಲರೂ ಆ ಕಾರ್ಯದಲ್ಲಿದ್ದಾರೆ. ಹೇಮನು ಒಂದು ಸ್ವಂತ ಮನೆಯನ್ನು ಕಟ್ಟಿಸಿ ಅದಕ್ಕೆ ಬೇಕಾದ ಸಾಮಾನುಗಳನ್ನು ಒದಗಿಸಿ ಸಜ್ಜುಮಾಡಿಟ್ಟಿರುತ್ತಾನೆ. ಮಿ. ಬಾರ್ಕಿಸರ ಖಾಯಿಲವೊಂದಲ್ಲದಿದ್ದರೆ ಇಷ್ಟರಲ್ಲೇ ಮದುವೆಯಾಗಿ ಹೋಗುತ್ತಿತ್ತು” ಅಂದರು ಮಿ. ಓಮರ್.

“ಎಷ್ಟು ದಿನ ಹೀಗೆ ಕಾದಿರುವುದೆಂದೇನಾದರೂ ನಿಶ್ಚಯವಾಗಿದೆಯೇ?” ನನ್ನ ಪ್ರಶ್ನೆ.

ಅವರಂದರು –

“ಆ ವಿಷಯ ಗೊತ್ತಿಲ್ಲ. ಆದರೆ ಹಾಗೆ ಕಾಯುವುದೇ ಅಪಾಯಕರವೆಂದು ನಮ್ಮ ಅಭಿಪ್ರಾಯ. ಮದುವೆಯಾಗಲಿಲ್ಲವೆಂದು ಅವಳೇನೂ ನೋಡುವ ಮಟ್ಟಿಗೆ ಬಡವಾಗಲಿಲ್ಲ, ಮುಖ ಬಾಡಿಲ್ಲ. ದುಃಖಿಸಿರುವಳೇ ಅಂದರೆ, ಅದೂ ಇಲ್ಲ. ಅವಳು ಸುಂದರಿಯಾಗಿ, ದೊಡ್ಡವಳಾಗಿ ತರುಣಿಯಾಗಿ ಶೋಭಿಸುತ್ತಿದ್ದಾಳೆ. ಆದರೆ ಅವಳ ಮನಸ್ಸಿನ ಚಾಂಚಲ್ಯ, ಅನುರಾಗದ ಉದ್ವೇಗ, ಸರಳ ಸ್ವಭಾವ – ಇವುಗಳ ಕಾರಣವಾಗಿ ಅವಳ ಸ್ಥಿತಿ ಕೆಡಬಹುದೆಂದು ನಮ್ಮ ಬೆದರಿಕೆ. ಅವಳನ್ನು ಪೋಷಿಸಿ, ರಕ್ಷಿಸಬಲ್ಲ ಒಂದು ಶಕ್ತಿ ಈಗ ಅವಳ ಜತೆಯಲ್ಲಿರಬೇಕು” ಎಂದಷ್ಟು ಹೇಳಿ, ಇನ್ನೂ ಏನೋ ಗಹನವಾದ ಕಾರಣಗಳನ್ನು ಅವರು ಊಹಿಸಿದ್ದಂತೆ ತೋರಿದರು. ನಾನು,

“ಮಿ. ಪೆಗಟಿ ಇದ್ದಾರಲ್ಲ – ಅವರು ಸಾಲದೆ?” ಎಂದು ಕೇಳಿದೆ.

“ಮಿ. ಪೆಗಟಿ ಇದ್ದಾರೆಂಬುದು ನಿಜ. ಅವಳು ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದಾಳೆಂಬುದೂ ಅವಳು ಮಾವ ಮಿ. ಪೆಗಟಿಯನ್ನು ಮೊದಲಿಗಿಂತಲೂ ಹೆಚ್ಚಾಗಿಯೇ ಅಂಟಿಕೊಂಡು ಹಿಂಬಾಲಿಸುತ್ತಿದ್ದಾಳೆಂಬುದೂ ನಿಜ. ನಮಗೆಲ್ಲಾ ಗೊತ್ತಿರುವ ವಿಷಯ, ಅದು. ಆದರೆ ಈ ಪ್ರೀತಿಯೇ ಅಪಾಯಕ್ಕೆ ಕಾರಣ. ಮಾವನನ್ನು ಮತ್ತಷ್ಟು ಬಲವಾಗಿ ಅಂಟಿಕೊಂಡು ಪ್ರೀತಿಸುತ್ತಿರುವುದೂ ಅಪಾಯದ ಚಿಹ್ನೆ. ತನ್ನ ಚಂಚಲ ಮನಸ್ಸಿಗೆ ತಾನೇ ಹೆದರಿ ಮಾವನನ್ನು ಹಾಗೊಂದು ಅಂಟಿಕೊಂಡು ತಿರುಗುತ್ತಿದ್ದಾಳೆಂದು ನಮ್ಮ ಊಹೆ. ನೋಡಿ ಮಿ. ಕಾಪರ್ಫೀಲ್ಡ್, ಬಡತನದಲ್ಲಿ ಬೆಳೆದ ಎಮಿಲಿಗೆ ಭಾಗ್ಯವಂತರ ಮನೆ ಸೇರಬೇಕೆಂದು ಬಹುವಾದ ಲವಲವಿಕೆಯಿದೆ. ಹೇಮನನ್ನು ಪ್ರೀತಿಸಿ, ಮಿ. ಪೆಗಟಿಯನ್ನು ಪೂಜಿಸಿ, ತನ್ನ ಬಳಗದವರ ಸಂತೋಷದಂತೆ ತಾನಿರಬೇಕೆಂದು ಅವಳು ತಿಳಿಯುತ್ತಿರುವುದರ ಜತೆಯಲ್ಲೇ ಎಲ್ಲವನ್ನೂ ಬಿಟ್ಟು ತಾನೂ ಶ್ರೀಮಂತಿಕೆಯನ್ನೂ ದಲಿತ, ದರಿದ್ರರ ರಕ್ಷಣಾಶಕ್ತಿಯನ್ನೂ ಪಡೆಯಬೇಕೆಂದೂ ಇಚ್ಛಿಸುತ್ತಿದ್ದಾಳೆ ಎಮಿಲಿ. ಈ ವಿಧದ ಮನಸ್ಸುಳ್ಳ ಅವಳ ಚರ್ಯೆ, ವ್ಯವಹಾರಗಳಲ್ಲಿ ಅವಳು ಸುತ್ತಲಿನ ವಸ್ತುಸ್ಥಿತಿಯನ್ನೇ ಮರೆತು ಕಲ್ಪನಾ ರಾಜ್ಯಕ್ಕೆ ಧುಮುಕಿ ಕಷ್ಟಪಡುತ್ತಿದ್ದಾಳೆಂದೂ ನಾವು ತಿಳಿದಿದ್ದೇವೆ. ಅವಳ ಅಸ್ಥಿರವಾದ ಮನಸ್ಸು ನ್ಯಾಯವಾದ ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಬಲ್ಲ

ಮಾರ್ಗದರ್ಶಕ – ಬೋಧಕ, ಅವಳಿಗೆ ಈಗ ನೆರವಿಗೆ ಬರಬೇಕು" ಅಂದರು ಮಿ. ಓಮರರು. ಇಷ್ಟರಲ್ಲೇ ಮಿ. ಓಮರರ ಮಗಳು ಮಿ. ಬಾರ್ಕಿಸರ ವರ್ತಮಾನವನ್ನು ತಂದಳು. ಡಾ। ಚಿಲ್ಲಿಪ್ಪರ ಅಭಿಪ್ರಾಯ ಪ್ರಕಾರ ಮಿ. ಬಾರ್ಕಿಸರು ಇಹಲೋಕವನ್ನು ಬಿಡಲು ಹೆಚ್ಚು ಸಮಯವಿಲ್ಲವೆಂದು ಅವಳು ತಿಳಿಸಿದಳು. ಹಾಗಾಗಿ ನಾನು ಆ ಕೂಡಲೇ ಅಲ್ಲಿಂದ ಹೊರಟೆನು.

ಮಿ. ಬಾರ್ಕಿಸರ ಮನೆಗೆ ತಲುಪಿ ಹೊರಗಿನಿಂದ ಬಾಗಿಲು ತಟ್ಟುವಾಗ ಒಳಗಿನಿಂದ ಏನೂ ಶಬ್ದ ಕೇಳಿಸಲಿಲ. ಮಿ. ಪೆಗಟಿ ಬಂದು ಬಾಗಿಲು ತೆರೆದರು. ಒಳಗೆ ಎಮಿಲಿಯೂ ಹೇಮನೂ ಇದ್ದರು. ಅವರು ಮೌನವಾಗಿ ನಿಂತಿದ್ದರು. ಮರಣದ ಸಮ್ಮುಖದಲ್ಲಿ ಬದುಕಿದ್ದವರು ಬಾಡಿ ಬಗ್ಗುವುದು ಸ್ವಾಭಾವಿಕವೇ ತಾನೆ.

ಮಿ. ಬಾರ್ಕಿಸರು ಹೇಗಿದ್ದಾರೆಂದು ಪಿಸುಮಾತಿನಿಂದ ವಿಚಾರಿಸಿದೆನು. ಬದುಕುವುದು ಅಸಾಧ್ಯವೆಂದೂ ಸಮುದ್ರದ ಇಳಿತದ ಕಾಲದಲ್ಲಿ ಬಾರ್ಕಿಸರ ಜೀವವೂ ಹೋಗಬಹುದೆಂದು ಮಿ. ಪೆಗಟಿ ತಿಳಿಸಿದರು. ಮಿ. ಬಾರ್ಕಿಸರು ಮಲಗಿದ್ದ ಕೋಣೆಗೆ ಹೋಗಿ ನೋಡಿದೆನು. ವೇದನೆಯಿಂದ ಅವರ ಮೈ ಡೊಂಕಿತ್ತು; ಅವರು ಬಲಭಾಗಕ್ಕೆ ಬಗ್ಗಿ ಹೋಗಿದ್ದರು. ಮಂಚದ ಪಕ್ಕದಲ್ಲಿ ಅವರ ಬಲಭಾಗದಲ್ಲಿದ್ದ, ಒಂದು ಕಾಲುಮಣೆಯ ಮೇಲೊಂದು ಪೆಟ್ಟಿಗೆಯಿತ್ತು. ಈ ಪೆಟ್ಟಿಗೆಯ ಮೇಲೆ ಮಿ. ಬಾರ್ಕಿಸರು ಅವರ ಕೈಯ್ಯನ್ನಿಟ್ಟುಕೊಂಡಿದ್ದರು. ಮಿ. ಬಾರ್ಕಿಸರು ಸೌಖ್ಯವಾಗಿದ್ದಾಗ ಅವರ ತಲೆಯಡಿಯಲ್ಲಿರುತ್ತಿದ್ದ ಪೆಟ್ಟಿಗೆಯೇ ಅದೆಂದೂ ಅವರು ಖಾಯಿಲೆಯಲ್ಲಿ ಕಠಿಣಾವಸ್ಥೆಗೆ ಬರುವ ಮೊದಲೇ ಅವರ ಇಷ್ಟ ಪ್ರಕಾರವೇ ಆ ಪೆಟ್ಟಿಗೆಯನ್ನು ಅಲ್ಲಿ ಇಡಲಾಗಿತ್ತೆಂದೂ ಅಲ್ಲಿದ್ದವರು ತಿಳಿಸಿದರು. ಮಿ. ಬಾರ್ಕಿಸರಿಗೆ ಮಾತಾಡುವ ಶಕ್ತಿಯಿದ್ದಾಗ ಬಂದಿದ್ದವರೊಬ್ಬರ ಹತ್ತಿರ ಪೆಟ್ಟಿಗೆಯನ್ನು ಮುಟ್ಟಿ "ಹಳೆ ಬಟ್ಟೆ ಮಾತ್ರ" ಎಂದಂದಿದ್ದರಂತೆ ಅವರು.

ಪೆಗಟಿ ಮಿ. ಬಾರ್ಕಿಸರ ಸಮೀಪ ಹೋಗಿ, ಅವರ ಕಿವಿಯ ಹತ್ತಿರ ಮುಖವಿಟ್ಟು,
"ಮಿ. ಬಾರ್ಕಿಸ್, ಮಿ. ಕಾಪರ್ಫೀಲ್ಡ್ ಬಂದಿದ್ದಾನೆ. ನಮ್ಮ ಕಾಪರ್ಫೀಲ್ಡ್, ಮದುವೆಯನ್ನು ನಿಶ್ಚೈಸಿದ ಕಾಪರ್ಫೀಲ್ಡ್ ಬಂದಿದ್ದಾನೆ" ಅಂದಳು. ಮಿ. ಬಾರ್ಕಿಸರಿಗೆ ಪೆಗಟಿಯ ಮಾತು ಕೇಳಿಸಲಿಲ್ಲವೆಂದು ತೋರುತ್ತದೆ – ಅವರಿಂದ ಯಾವ ಉತ್ತರವೂ ಬರಲಿಲ್ಲ.
"ಸಮುದ್ರ ಇಳಿಯುವಾಗ – ರಾತ್ರಿ ಮೂರೂವರೆಗೆ ಘಂಟೆಗೆ, ಬಾರ್ಕಿಸರೂ ಇಳಿಯಬಹುದು. ಆ ಕಾಲ ತಪ್ಪಿದರೆ, ಒಮ್ಮೆ ಸಮುದ್ರ ಏರಿ ಪುನಃ ಇಳಿಯುವಾಗಲಂತೂ ಅವರು ಉಳಿಯಲಾರರು" ಅಂದರು ಮಿ. ಪೆಗಟಿ.

ಆ ರಾತ್ರಿ ನಾನು ಅಲ್ಲೇ ಉಳಿದೆನು. ರಾತ್ರಿ ಇಡೀ ನಾವು ಏನೇನೋ ಮಾತಾಡಿಕೊಂಡು ಕಾಲ ಕಳೆದೆವು. ಮಿ. ಬಾರ್ಕಿಸರು ಖಾಯಿಲದ ಸಮಯದಲ್ಲೂ ನನ್ನನ್ನು ಹೊಗಳಿ ಹೊಗಳಿ ಸಂತೋಷಿಸುತ್ತಿದ್ದರಂತೆ, ಪತ್ನಿ ಪೆಗಟಿ, ಅವರ ಪೆಟ್ಟಿಗೆ, ಮತ್ತೂ ನಾವು ಕೆಲವರು ಮಾತ್ರ ಅವರ ನೆನಪಿನಲ್ಲಿ ಉಳಿದಿದ್ದವೆಂದು ಪೆಗಟಿ ತಿಳಿಸಿದಳು.

ಪ್ರಪಂಚದ ಹೊರ ಬಾಗಿಲನ್ನು ದಾಟಿ ಹೋಗಲು ಕಾದು ನಿಂತಿದ್ದ ಮಿ. ಬಾರ್ಕಿಸರ ಅಂತಿಮ ದರ್ಶನವನ್ನು ನಾವು ಏಕಾಗ್ರತೆಯಿಂದ ಬಯಸುತ್ತಿದ್ದುದರಿಂದಲೋ ಅಥವಾ ಇನ್ನು ಯಾವ ಕಾರಣದಿಂದಲೋ ಏನೋ ರಾತ್ರಿ ಮೂರೂವರೆ ಘಂಟೆಗೆ ಮಿ. ಬಾರ್ಕಿಸರು ಕಣ್ಣು ತೆರೆದರು.

"ಬಾರ್ಕಿಸನು ನೋಡುತ್ತಾನೆ" ಅಂದಳು ಪೆಗಟಿ.
ಮಿ. ಪೆಗಟಿಯವರು ನನ್ನನ್ನು ಮುಟ್ಟಿ –
"ಮಿ. ಬಾರ್ಕಿಸನೂ ಸಮುದ್ರವೂ ಜತೆಯಲ್ಲೇ ಇಳಿಯುವರು" ಎಂದು ಅಂದರು.
"ಪ್ರಿಯ ಪತಿ ಬಾರ್ಕಿಸ್" ಎಂದು ಅಳುತ್ತಾ ಕರೆದಳು ಪೆಗಟಿ.
"ಸಿ.ಪಿ. ಬಾರ್ಕಿಸ್ – ಅತ್ಯುತ್ತಮ ಹೆಂಡತಿ" ಎಂದು ಹೆಂಡತಿಯನ್ನು ಗುರುತಿಸಿ ಮಿ. ಬಾರ್ಕಿಸರು ಹೇಳಿದರು.
"ಇತ್ತ ನೋಡು, ಮಾಸ್ಟರ್ ಡೇವಿಡ್ ಬಂದಿದ್ದಾನೆ" ಎಂದು ಹೇಳಿ ಪೆಗಟಿ ನನ್ನನ್ನು ತೋರಿಸಿದಳು. ನನ್ನ ಗುರುತು ಅವರಿಗೆ ಸಿಕ್ಕಿತು ಎಂಬುದಕ್ಕಾಗಿಯೇ ಆಗಿರಬೇಕು –
"ಬಾರ್ಕಿಸನು ತಯಾರಿದ್ದಾನೆ" ಎಂದು ಅವರು ಹೇಳಿದರು.

ಅವರು ಮಾತಾಡಿದ್ದು ಅಷ್ಟೇ. ಅದರಲ್ಲಿ ಹಿಂದಿನ ಚರಿತ್ರೆಯೆಲ್ಲ ಅಡಗಿದೆ. ಸಮುದ್ರದ ಏರಿಕೆ ದಡದಿಂದ ಇಳಿದು ಹೋಗುವುದರ ಜತೆಯಲ್ಲೇ ಅವರೂ ಇಳಿದು ನಮ್ಮೆಲ್ಲರನ್ನು ಬಿಟ್ಟು ಹೋದರು.

ಅಧ್ಯಾಯ ಮೂವತ್ತೊಂದು

ಮತ್ತೂ ದುಃಖತರ ಘಟನೆ

ಯಾರ್ಮತ್ತನ್ನು ಬಿಟ್ಟು ಹೋಗಲು ಮೊದಲೇ ಬೇಸರಪಡುತ್ತಿದ್ದ ನಾನು ಪೆಗಟಿ ನನ್ನನ್ನು ಕೇಳಿಕೊಂಡ ಮೇಲಂತೂ ಅಲ್ಲಿಂದ ಹೊರಡುವುದನ್ನು ನಿಲ್ಲಿಸಿದೆನು. ಮಿ. ಬಾರ್ಕಿಸರ ಅಂತಿಮ ಕ್ರಿಯೆಯೆಲ್ಲ ಪೂರೈಸುವವರೆಗೆ ನಾನು ಅಲ್ಲೇ ಇದ್ದೆನು. ನನ್ನ ತಾಯಿಯ ಮೇಲಿನ ಪ್ರೇಮದಿಂದಾಗಿ ಪೆಗಟಿ ಬ್ಲಂಡರ್ಸ್ಟನ್ನಿನ ಇಗರ್ಜಿಯ ಶವ ಹೂಳುವ ಸ್ಥಳದಲ್ಲೇ ತನ್ನ ಬಗ್ಗೆಯೂ ಮಿ. ಬಾರ್ಕಿಸನ ಬಗ್ಗೆಯೂ ಸ್ವಲ್ಪ ಸ್ಥಳವನ್ನು ಹಣ ಕೊಟ್ಟು ಕಾದಿಡಿಸಿದ್ದಳು.

ಉತ್ತರ ಕ್ರಿಯೆಗೆ ನಾಲ್ಕಾರು ದಿನಗಳು ಬೇಕಾಗಿದ್ದುದರಿಂದ, ಆ ಕೆಲಸವನ್ನು ಓಮರ್ ಮತು ಜೋರಾಂ ಕಂಪೆನಿಯವರಿಗೆ ವಹಿಸಿಕೊಟ್ಟು, ಮಿ. ಬಾರ್ಕಿಸರ ಮನೆ ಕಡೆಯ ಕಾರ್ಯಗಳನ್ನು ಕುರಿತು ಮಿ. ಪೆಗಟಿ ಮತ್ತು ನಾನೂ ಗಮನ ಕೊಟ್ಟೆವು. ಮಿ. ಬಾರ್ಕಿಸರು ಉಯಿಲೇನಾದರೂ ಬರೆದಿಟ್ಟಿರುವರೋ ಎಂದು ಆ ಊರಿನ ಕೆಲವು ಗೃಹಸ್ಥರ ಸಮಕ್ಷಮದಲ್ಲಿ ನಾವು ಶೋಧಿಸುವಾಗ ಒಂದು ಉಯಿಲನ್ನೂ ಆ ಉಯಿಲಿಗೆ ಸಂಬಂಧಪಟ್ಟ ಚರಸ್ವತ್ತುಗಳನ್ನೂ ಕಂಡೆವು.

ಉಯಿಲಿನ ಒಕ್ಕಣೆ ಬಹು ಸ್ಪಷ್ಟವಾಗಿಯೂ ಸರಳವಾಗಿಯೂ ಇತ್ತು. ತನ್ನ ಕಾಯಕಷ್ಟದಿಂದ ಸಂಪಾದಿಸಿದ್ದ ಹಣ ಮತ್ತೂ ವಸ್ತುಗಳನ್ನು ಕುರಿತು ಅವರಿಗೆ ಇದ್ದ ಆಸೆ, ಆಸಕ್ತಿಗಳು ಉಯಿಲಿನಲ್ಲೂ ಅವರು ಕಾದು ಕಾಪಾಡಿಟ್ಟಿದ್ದ ಸಾಮಾನುಗಳಲ್ಲೂ ಕಾಣಬಹುದಾಗಿತ್ತು. ಅವರ ಬಾಹ್ಯ ಸ್ವರೂಪ ಸ್ವಲ್ಪ ಒರಟುತರದ್ದೇ ಆಗಿದ್ದರೂ ಅವರ ಅಂತರಂಗದ ವ್ಯಕ್ತಿತ್ವ ಬಹು ಯೋಗ್ಯ, ಸೌಮ್ಯ, ಸುಂದರತರದ್ದೇ ಆಗಿತ್ತು. ಪತ್ನಿಯ ಮೇಲಿನ ಅವರ ಪ್ರೇಮ, ನೆಂಟರಿಷ್ಟರ ಮೇಲಿನ ನಂಬಿಕೆ, ಮರ್ಯಾದೆ, ತನ್ನ ಮನಸ್ಸಿಗೆ ಒಪ್ಪಿದವರನ್ನು ಕುರಿತಾಗಿ ತೋರಿಸುತ್ತಿದ್ದ ಪ್ರೇಮ, ಔದಾರ್ಯ – ಇವೆಲ್ಲವೂ ಆ ಉಯಿಲಿನಲ್ಲಿ ಕಂಡು ಬರುತ್ತಿದ್ದುವು.

ಪೆಟ್ಟಿಗೆಯೊಳಗೆ ಈ ಮುಂದೆ ಕಾಣಿಸುವ ವಸ್ತುಗಳಿದ್ದುವು:
ಕುದುರೆಯ ದುಡಿ–ಚೀಲದೊಳಗೆ ಹುಲ್ಲಿನಲ್ಲಿ ಸುತ್ತಿಟ್ಟಿದ್ದ ಚಿನ್ನದ ಗಡಿಯಾರ ಮತ್ತೂ ಸರಪಣಿ (ಈ ಗಡಿಯಾರ ಅವರ ಮದುವೆಯ ದಿನ ಮಾತ್ರ ಬೆಳಕನ್ನು ಕಂಡಿತ್ತಾಗಿ ತಿಳಿದೆನು), ನಿಂಬೆ ಹಣ್ಣಿನ ಆಕಾರ ಮತ್ತು ಗಾತ್ರದ ಒಂದು ಕರಡಿಗೆಯ ಒಳಗೆ ಚಿಕ್ಕ ತಟ್ಟೆ ಬಟ್ಟಲುಗಳು ತುಂಬಿಕೊಂಡಿದ್ದುವು. (ಇವು ನಾನು ಚಿಕ್ಕವನಾಗಿದ್ದಾಗ ನನಗೆ ಇನಾಂ ಕೊಡಬೇಕೆಂದು ಕ್ರಯಕ್ಕೆ ತಂದು, ಅನಂತರ ಹಣ ಕೊಟ್ಟು ತಂದದ್ದನ್ನು ಕಳೆದುಕೊಳ್ಳಲು ಮನಸ್ಸು ಬರದೆ, ಅಲ್ಲೇ ಉಳಿದವು ಆಗಿರಬೇಕು), ಎಂಬತ್ತೇಳು ಇಡೀ ಗಿನಿ ನಾಣ್ಯಗಳು ಅರ್ಧ ಗಿನಿ ಬೆಲೆಯ ಚಿಲ್ಲರೆ ನಾಣ್ಯಗಳು, ಇನ್ನೂರಹತ್ತು (ಬಹು ಚೊಕ್ಕಟವಾಗಿದ್ದ) ಪೌಂಡು (ಸರಕಾರದ) ನೋಟುಗಳು, ಒಂದು ಲಾಳ, ಒಂದು ಕರ್ಪೂರದ ತುಂಡು, ಉಜ್ಜಿ ನುಣುಪು ಮಾಡಲಾಗಿದ್ದ ಮುತ್ತಿನ ಚಿಪ್ಪು ಒಂದು. (ಮುತ್ತು ತಯಾರಿ ಕೆಲಸದಲ್ಲಿ ಅವರಿಗೆ ಒಂದಾವೃತ್ತಿ ಅಭಿರುಚಿಯುಂಟಾಗಿ, ಯಾವುದೋ ಕಾರಣದಿಂದ ಆ ಕೆಲಸವನ್ನು ಬಿಟ್ಟಿದ್ದರಾಗಿ ಊಹಿಸಿದೆವು). ಹೊಗೆ ಸೊಪ್ಪಿನ ಬೆಳ್ಳಿ ಕರಡಿಗೆ ಒಂದು. ಕೆಲವು ರಶೀದಿಗಳು ಮತ್ತು ಅವರ ಉಳಿತಾಯ ಮೂರು ಸಾವಿರ ಪವನುಗಳನ್ನು ತೋರಿಸುವ ರಿಕಾರ್ಡುಗಳು.

ಈ ಮೂರು ಸಾವಿರ ಪವನುಗಳಲ್ಲಿ ಒಂದು ಸಾವಿರ ಪವನಿನ ಬಡ್ಡಿ ಮಿ. ಪೆಗಟಿ ಬದುಕಿರುವವರೆಗೆ ಅವರಿಗೆ ಸಲ್ಲುತ್ತಿದ್ದು, ಅವರು ಮರಣಪಟ್ಟನಂತರ, ಎಮಿಲಿ, ನಾನು ಮತ್ತೂ ಅವರ ಪತ್ನಿ ಪೆಗಟಿ ಸಮಪಾಲಿನಿಂದ ಹಂಚಿಕೊಳ್ಳಬೇಕೆಂದೂ ಉಳಿದ ಎಲ್ಲಾ ಹಣ, ಮನೆ, ಮತ್ತೂ ವಸ್ತುಗಳು ಪೂರಾ ಪತ್ನಿ ಪೆಗಟಿಗೇ ಇರಬೇಕೆಂದೂ ಉಯಿಲಿನಲ್ಲಿತ್ತು.

ಶವವನ್ನು ಹೂಳುವ ದಿನ ನಾನೂ ಬ್ಲಂಡರ್ಸ್ಟನ್ನಿಗೆ ಹೋಗಿದ್ದೆ. ಮಿ. ಓಮರರ ಕಡೆಯವರಿಂದ ಆ ಕೆಲಸ ನಡೆಯಿತು. ಅನಂತರ ಇತರ ಎಲ್ಲರೂ ಯಾರ್ಮತ್ತಿಗೆ ಹೋದರು. ನಾನು ಒಬ್ಬನು ಮಾತ್ರ ಹೋಗದೆ ಬ್ಲಂಡರ್ಸ್ಟನ್ನಿನ ಇಗರ್ಜಿ ವಠಾರದಲ್ಲಿ ಸ್ವಲ್ಪ ಹೊತ್ತು ಹಿಂದಿನ ದಿನಗಳನ್ನೆಲ್ಲಾ ನೆನೆದುಕೊಂಡು ನಿಂತಿದ್ದೆ.

ಸ್ವಲ್ಪ ಸಮಯಾನಂತರ ನಾನು ಯಾರ್ಮತ್ತಿನ ಕಡೆಗೆ ಹೊರಟೆ. ಬ್ಲಂಡರ್ಸ್ಟನ್ನಿನ ನೆನಪೇನೂ ಸಂತೋಷ ಪ್ರದವಾಗಿರಲಿಲ್ಲ. ಹಾಗೆಯೇ ಯಾರ್ಮತ್ತನ್ನು ಗ್ರಹಿಸುತ್ತಾ ಆ ಕಡೆ ನೋಡುವಾಗಲೂ ಮನಸ್ಸಿನಲ್ಲಿ ದುಃಖವೇ ಅಧಿಕವೆಂಬಂತೆ ಭಾಸವಾಗುತ್ತಿತ್ತು. ಬ್ಲಂಡರ್ಸ್ಟನ್ನಿಗೂ ಯಾರ್ಮತ್ತಿಗೂ ನಾನು ಬೆಳೆಯಿಸಿಕೊಂಡು ಬಂದಿದ್ದ ಸಂಬಂಧಗಳು ಹೇಗೆ ಒಂದೊಂದಾಗಿ ತುಂಡಾಗುತ್ತಾ ಬರುತ್ತಿವೆಯೆಂದು ದುಃಖದಿಂದಲೇ ಮನಸ್ಸಿನ ಪಟದಲ್ಲಿ ನೋಡುತ್ತಾ ದಾರಿ ನಡೆದೆನು. ನನ್ನೆದುರಿಗೆ ದೂರದಲ್ಲಿ ಯಾರ್ಮತ್ತು ಹರಡಿ ಬಿದ್ದಿರುವಂತೆ ತೋರುತ್ತಿತ್ತು. ಯಾರ್ಮತ್ತನ್ನೆಲ್ಲ ಒಂದು ಬಹು ದೊಡ್ಡ ಕಾರ್ಮುಗಿಲು ಎತ್ತರದಿಂದ ಮುಚ್ಚತೊಡಗಿತ್ತು. ನಾನು ನಡೆದು ಮುಂದುವರಿಯುತ್ತಿದ್ದ ಹಾಗೆಯೇ ಎತ್ತರದಲ್ಲಿದ್ದ ಆ ಕಾರ್ಮುಗಿಲು ಭೂತಳಕ್ಕೆ ಕ್ರಮೇಣವಾಗಿ ಇಳಿಯುತ್ತಲೂ ಇತ್ತು. ಅಂದಿನ ಸ್ಥಳ, ಘಟನೆಗಳು, ಆ ಕಾರ್ಮೋಡ – ಎಲ್ಲವೂ ನನಗೆ ವಿವರಿಸಲಸಾಧ್ಯವಾದ ಭಯವನ್ನುಂಟುಮಾಡಿದುವು.

ರಾತ್ರಿ ಸಮಯದಲ್ಲೇ ನಾನು ಯಾರ್ಮತ್ತಿಗೆ ತಲುಪಿದೆನು. ಆಗ ಸಮುದ್ರದ ಭಾಗದಲ್ಲಿ ಮಳೆ ಬರುತ್ತಿತ್ತು. ಅಸ್ತಂಗತನಾಗಲು ಸಮೀಪಿಸುತ್ತಿದ್ದ ಚಂದ್ರನ ಪ್ರಭೆ ಮೋಡಗಳ ಮಧ್ಯಕ್ಕಾಗಿ ಭೂಭಾಗಕ್ಕೆ ಬಂದು ಯಾರ್ಮತ್ತನ್ನು ಒಂದು ಭಯಾನಕ ಬೆಳಕಿನಿಂದ ಆಛ್ಛಾದಿಸಿತ್ತು. ಅಂದಿನ ಸಮಯ ಸನ್ನಿವೇಶಗಳ ಕಾರಣವಾಗಿ, ಏನೋ ಒಂದು ಭೀತಿ ನನ್ನ ಅಂತರಂಗವನ್ನು ಪ್ರವೇಶಿಸುತ್ತಿದ್ದಂತೆ ತೋರುತ್ತಿತ್ತು.

ನಾನು ಮಿ. ಪೆಗಟಿಯ ಮನೆಗೆ ಹೋದೆ. ಆ ಮನೆಯ ಪರಿಚಯ ನನಗೆ ತುಂಬಾ ಇದ್ದುದರಿಂದ ಬಾಗಿಲು ತಟ್ಟದೆಯೆ ನಾನು ಮನೆಯೊಳಗೆ ಪ್ರವೇಶಿಸಿದೆನು. ಅಲ್ಲಿ ಮಿಸೆಸ್ ಗಮ್ಮಿಜ್, ಮಿಸೆಸ್ ಬಾರ್ಕಿಸ್ ಪೆಗಟಿ, ಮಿ. ಪೆಗಟಿ ಎಲ್ಲರೂ ಹಿಂದೆ ಅವರವರು ಕುಳಿತಿದ್ದ ಸ್ಥಳಗಳಲ್ಲೇ ಕುಳಿತಿದ್ದರು. ಅಲ್ಲಿನ ಸಕಲ ವಸ್ತುಗಳೂ ನನ್ನ ಬಾಲ್ಯಕಾಲದಲ್ಲಿ ನಾನು ಕಂಡಂತೆಯೇ ಇದ್ದುವು. ಅವನ್ನು ಕಾಣುವಾಗ ಹಿಂದಿನ ಸಂತೋಷದ ದಿನಗಳ ನೆನಪು ಚೆನ್ನಾಗಿ ಉಂಟಾಯಿತು. ಅಲ್ಲಿ ಎಮಿಲಿ ಮತ್ತು ಹೇಮ್ ಇವರಿಬ್ಬರು ಮಾತ್ರ ಇರಲಿಲ್ಲ. ಅವರ ಬರೋಣವನ್ನೇ ಮಿ. ಪೆಗಟಿಯವರು ಎದುರು ನೋಡುತ್ತಾ ಕುಳಿತಿದ್ದರು. ಅವರು ಕೊಟ್ಟ ಆಸನದಲ್ಲಿ ನಾನು ಕುಳಿತು ಅವರೊಡನೆ ಮಾತಾಡತೊಡಗಿದೆನು. ನನ್ನನ್ನು ಉದ್ದೇಶಿಸಿ –

"ನೀವು ಮೊದಲು ಬಂದಿರಿ. ಬಾಕಿಯವರು ಬರಲಿದ್ದಾರೆ" ಎಂದು ಮಿ. ಪೆಗಟಿ ಅಂದರು. ಆಗ ಮಿಸೆಸ್ ಗಮ್ಮಿಜ್ಜಳ ದುಃಖ ಯಾರ್ಮತ್ತಿಗಿಂತಲೂ ಹೆಚ್ಚಾಗಿಯೇ ಇತ್ತು. ಅದಕ್ಕಾಗಿಯೇ ಮಿ. ಪೆಗಟಿ ಏನೇನೋ ತಮಾಷೆಯ ಮಾತುಗಳನ್ನಾಡಿ, ತಮ್ಮ ಉತ್ಸಾಹ, ಹರ್ಷಿತ ಸ್ವಭಾವದಿಂದ, ಮಿಸೆಸ್ ಗಮ್ಮಿಜ್ಜಳನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಆದರೆ ರಾತ್ರಿ ಮುಂದುವರಿಯುತ್ತಾ ಹೋದರೂ ಹೇಮನಾಗಲೀ ಎಮಿಲಿಯಾಗಲೀ ಬರಲಿಲ್ಲ.

ತಾವು ನಿರೀಕ್ಷಿಸಿ, ನಿರೀಕ್ಷಿಸಿ ಹೊತ್ತು ದಾಟುತ್ತಿದ್ದುದರಿಂದ ಮಿ. ಪೆಗಟಿಗೂ ಅಸಮಾಧಾನವಾಗತೊಡಗಿತು. ಅವರು ಕಿಟಕಿಯ ಬಾಗಿಲನ್ನು ತೆರೆದು ಹೊರಗಿನ ವಿಶಾಲ ಪ್ರದೇಶವನ್ನೆಲ್ಲ ನೋಡಿದರು. ಅಲ್ಲಿ ಯಾರ ಬರೋಣವನ್ನೂ ಕಾಣದೆ, ಸರ್ವತ್ರ ಕತ್ತಲೆ ಮಾತ್ರ ಪಸರಿಸಿದ್ದುದನ್ನು ಕಂಡರು. ಈ ಕತ್ತಲೆ ನಿವಾರಣೆಗೆಂದು ಅವರು ಒಂದು ಮಯಣದ ಬತ್ತಿಯನ್ನು ಹತ್ತಿಸಿ, ಕಿಟಕಿಯ ಹೊಸ್ತಿಲಿನಲ್ಲಿಟ್ಟರು. ಮಿ. ಪೆಗಟಿಯವರಿಗೇ ಅಸಮಾಧಾನವಾಗುತ್ತಿದ್ದ ಸಮಯದಲ್ಲಿ ಮಿಸೆಸ್ ಗಮ್ಮಿಜ್ಜಳ ದುಃಖ ಮೊದಲಿಗಿಂತಲೂ ಹೆಚ್ಚಾಗತೊಡಗಿತು. ಮಿ.ಪೆಗಟಿಗೆ ಮಿಸೆಸ್ ಗಮ್ಮಿಜ್ಜಳ ದುಃಖಶಮನಕ್ಕಾಗಿಯೂ ಹಾಗೆ ಪರಿಚಿತನೂ ಸ್ನೇಹಿತನೂ ಆದ ನನ್ನ ಆಗಮನದ ಸಂತೋಷಕ್ಕಾಗಿಯೂ ತುಂಬಾ ಮಾತಾಡಬೇಕೆಂಬ ಉತ್ಸಾಹ ಹೆಚ್ಚಿತು. ಅವರು ಮಿಸೆಸ್ ಗಮ್ಮಿಜ್ಜಳನ್ನು ನೋಡಿ –

"ಮಿಸೆಸ್ ಗಮ್ಮಿಜ್, ಬೇಸರಪಡಬೇಡಿ. ನನ್ನ ಈ ಕೆಲಸ ನೋಡಿ. ಈ ದೀಪ ಹೊತ್ತಿಸಿಟ್ಟ ಪ್ರಯೋಜನ ಏನೂಂತ ಗೊತ್ತಿದೆಯೆ, ನಿಮಗೆ? ರಾತ್ರಿಯ ಈ ಕತ್ತಲಲ್ಲಿ ಎಮಿಲಿ ಬರುವಾಗ ಅವಳ ದಾರಿಗೆ ಬೆಳಕಾಗಲೀ ಎಂತ ದೀಪ ಹಚ್ಚಿದ್ದೇನೆ. ದಾರಿ ಕಾಣೋದಕ್ಕೆ ಬೇಕಾದಷ್ಟು ಬೆಳಕಲ್ಲದಿದ್ದರೂ ಈ ಕಡೆ ನಮ್ಮ ಮನೆ ಉಂಟೂಂತ, ನೆಟ್ಟಗೆ ಬರೋದಕ್ಕೆ ಮಾರ್ಗವಾದರೂ ಆಗುತ್ತಷ್ಟೆ ಎಂತ ಹಚ್ಚಿದ್ದೇನೆ" ಎಂದಂದರು.

"ನೀನು ಚಿಕ್ಕ ಮಗುವಿನ ಹಾಗೆ ಮಾಡುತ್ತೀಯಲ್ಲ, ಅಣ್ಣಾ!" ಎಂದು ಪೆಗಟಿ ಹಾಸ್ಯ ಮಾಡಿದಳು.

"ಕೆಲವು ವಿಷಯದಲ್ಲಿ ನಾನು ಮಗುವಾಗುವುದೂ ನಿಜ, ಕ್ಲೇರಾ ನಿನ್ನಣ್ಣ ಒಬ್ಬ ಮಗೂಂತ ಅಥವಾ ಸಮುದ್ರದ ಮುಳ್ಳು ಹಂದಿ ಮಗೂಂತ ಬೇಕಾದರೂ ಗ್ರಹಿಸಿಕೋ, ಬೇಕಾದರೆ. ಎಮಿಲಿ ಹತ್ತಿರ ನನ್ನ ಕ್ರಮವೇ ಹಾಗೆ, ಕ್ಲೇರಾ" ಎಂದು ಅದಕ್ಕೆ ಉತ್ತರವಿತ್ತರು ಮಿ. ಪೆಗಟಿ. ಹೀಗಂದುಕೊಂಡು, ಗಹಗಹಿಸಿ ನಗಾಡುತ್ತಾ ಮತ್ತೂ ಮಾತು ಮುಂದುವರಿಸಿದರು –

"ನೋಡು ಕ್ಲೇರಾ, ಎಮಿಲಿಯನ್ನು ಗ್ರಹಿಸಿದರೆ ನಾನು ಮಗುವಿನ ಹಾಗೆಯೇ ಆಗಿಬಿಡುತ್ತೇನೆ. ಅವಳ ಹೇಟನ್ನು ಕಂಡರೂ ಅವಳ ಜಾಕೆಟ್ಟನ್ನು ಕಂಡರೂ ಅವಳದು ಏನನ್ನು ಕಂಡರೂ ನನಗೆ ಆಗುವ ಸಂತೋಷ ಅಷ್ಟಿಷ್ಟಲ್ಲ. ನನ್ನ ಮೊಣಕಾಲಿಗೆ ಮುಟ್ಟುವಷ್ಟು ಚಿಕ್ಕ ಮಗುವಾಗಿದ್ದಾಗಲೇ ನಾನು ಎಮಿಲಿಯೊಡನೆ ಆಟವಾಡಿದ್ದೇನೆ. ಅವಳು ಅಂದರೆ, ನನಗೆ ಎಲ್ಲಾ ಆಗಿಹೋಯಿತು! ಅವಳಿಗೂ ಹಾಗೆಯೇ, ನನ್ನನ್ನು ಕಂಡರೆ ಆಗುವ ಸಂತೋಷವೇ ಅಷ್ಟು ತುಂಬಾ! ಹಾಗಿರುವಾಗ ಒಂದು ದೀಪ ಉರಿಸಿಟ್ಟರೆ ಆಗುವ ತಪ್ಪು ಏನು? ಈ ದೀಪದಿಂದ ಹೊರಗಿನ ಮೈದಾನ ಮಾತ್ರ ಬೆಳಕಾಗುವುದಿಲ್ಲ, ನನ್ನ ಎಮಿಲಿಯ ಮನಸ್ಸೇ ಬೆಳಕಾಗುತ್ತೆ. ಅವಳು ಮದುವೆ ಆಗಿ ಹೋದರೂ ಈ ಬೆಳಕು ನನಗಾಗಿಯೂ ಅವಳಿಗಾಗಿಯೂ ಅಲ್ಲಿ ಉರೀತಿರಬೇಕು. ಎಮಿಲಿ ಆಡಿ ಬೆಳೆದ ಈ ಮನೆಯನ್ನು ಎಷ್ಟೇ ಐಶ್ವರ್ಯ ಬಂದರೂ ನಾನು ಬಿಡುವ ಹಾಗಿಲ್ಲ. ಅವಳು ಬೆಳಗಿಸಿದ ಮನೆ ಇದು. ಅವಳು ಗಂಡನ ಮನೆಯಲ್ಲಿ ಸಂತೋಷಪಟ್ಟರೆ, ಅವಳ ಸಂತೋಷಕ್ಕಾಗಿ ನಾವು ಈ ಮನೇಲಿ, ದೀಪ ಇಟ್ಟು, ಸಂತೋಷಪಡೋಣ – ಆ ದೀಪ ನಮ್ಮ ಎಮಿಲಿ! ಹೀಗೆ ಮಾತಾಡೋದೇನು ತಪ್ಪೇ? ಹಾಗೆ ಮಾತಾಡಿದರೆ ಮುಳ್ಳು ಹಂದಿ ಮಗುವಾಗಿ ಬಿಡ್ತೇನೇನು?" ಎಂದು ಆನಂದ ಪರವಶತೆಯಿಂದ ಮಿ. ಪೆಗಟಿ ಮಾತಾಡಿದರು. ಆನಂದಬಾಷ್ಪವನ್ನು ಸುರಿಸುತ್ತಾ –

"ದೀಪ ಹಚ್ಚಿದ ಚಮತ್ಕಾರ ಬೇಕಾದರೆ ನೋಡು – ಎಮಿಲಿ ಈಗಾಗಲೇ ದೀಪ ಕಂಡಿದ್ದಾಳೆ. ತನ್ನ ಮನೆ ಇದೂಂತ ಓಡಿ ಬರುತ್ತಿದ್ದಾಳೆ. ಅಕೋ ಬಂದಳು ಎಮಿಲಿ" ಎಂದು ಹೇಳಿ, ಹೊರಗಿನ ಕಾಲು ಸಪ್ಪಳ ಕೇಳಿ, ಎಮಿಲಿಯನ್ನು ಎತ್ತಿ ಅಪ್ಪಿಕೊಳ್ಳಲು ಕೈ ನೀಡುವಾಗ, ಹೊರಗಿನಿಂದ ಹೇಮನು ಅವಸರದಿಂದ ಒಳ ನುಗ್ಗಿದನು. ಹೇಮನು ಗಾಬರಿಯಾಗಿದ್ದನು. ಏನೂ ಮಾತಾಡದೆ, ಕೈ ಸನ್ನೆ ಮಾಡಿ ನನ್ನನ್ನು ಕರೆದುಕೊಂಡು ಹೊರಗೆ ಹೋದನು. ಹೇಮನನ್ನು ಕಂಡು ನಾನು ಗಾಬರಿಗೊಂಡೆ –

"ಏನು ಹೇಮ್, ಏನಾಗಿದೆ?" ಎಂದು ಪ್ರಶ್ನಿಸಿದೆ.

"ಮಾಸ್ಟರ್ ಡೇವೀ" ಎಂದು ಮಾತ್ರ ಹೇಳಿ ಬಿಕ್ಕಿಬಿಕ್ಕಿ ಅತ್ತನು.
"ಏನಾಯಿತು ಹೇಳು."
"ನನ್ನೆಮಿಲೀ – ಪ್ರಿಯ ಎಮಿಲೀ – ಹೃದಯ ದೇವತೇ – ಕಾಣುವುದಿಲ್ಲ – ಕಾಣುವುದಿಲ್ಲ. ಮಾತ್ರವಲ್ಲ – ಓಡಿಹೋಗಿದ್ದಾಳೆ – ಅವಳನ್ನು ಹಾರಿಸಿಕೊಂಡು ಹೋಗಿದ್ದಾರೆ" ಎಂದನ್ನುತ್ತಾ ಹೇಮನು ಅತ್ತನು.

ಹೇಮನ ಪ್ರಲಾಪವನ್ನು ಕೇಳಿ ಒಳಗಿದ್ದವರೆಲ್ಲ ಹೊರಗೆ ಬಂದರು. ನಡೆದ ಸಂಗತಿಯನ್ನೆಲ್ಲ ಸೂಕ್ಷ್ಮವಾಗಿ ತಿಳಿದರು. ಅವರೂ ಬಿಕ್ಕಿ ಬಿಕ್ಕಿ ಅಳತೊಡಗಿದರು. ಎಲ್ಲರೂ ದುಃಖದ ವೇದನೆಯಲ್ಲಿ ನಡುಗುತ್ತಿದ್ದರು. ನಾವು ಮನೆ ಒಳಗೆ ಹೋದನಂತರ, ನಾನು ಓದಿ ಹೇಳಲೋಸ್ಕರ ಒಂದು ಪತ್ರವನ್ನು ನನಗೆ ಕೊಟ್ಟನು.

ನಾನು ಪತ್ರವನ್ನು ಓದುವಾಗ ಮಿ.ಪೆಗಟಿ ನನ್ನ ಎದುರೇ ಇದ್ದರು. ದುಃಖದ ಆವೇಶದಲ್ಲಿ ಅವರ ಶರಟು ಹೇಗೋ ಹರಿದುಹೋಗಿತ್ತು. ಅವರ ಉಬ್ಬಿದ ಎದೆ ಕಾಣುತ್ತಿತ್ತು. ಕಣ್ಣುಗಳು ಉಬ್ಬಿ ಹೊರಗೆ ಹೊರಟು ಬರುವಂತಿದ್ದುವು. ಬಾಯಿಯಿಂದ ರಕ್ತವು ತೊಟ್ಟಿಕ್ಕುತ್ತಾ ಎದೆಯ ಮೇಲೆ ಹರಿದು ಇಳಿಯುತ್ತಿತ್ತು. ಎರಡೂ ಕೈಗಳನ್ನು ಡೊಂಕಿಸಿಕೊಂಡು, ಮುಂದಕ್ಕೆ ಬಗ್ಗಿ, ಮಂಕನಂತೆ ನಿಂತಿದ್ದರು. ಪತ್ರದ ಒಕ್ಕಣೇ ಹೀಗಿತ್ತು. ನಾನು ಓದಿದ್ದನ್ನು ಮರಣದ ಸಾನ್ನಿಧ್ಯದಲ್ಲಿರುವ ನಿಶ್ಶಬ್ದದಿಂದ ಎಲ್ಲರೂ ಕೇಳಿದರು –
"ನನಗೆ ಬುದ್ಧಿ ಬರುವ ಮೊದಲೇ ಪ್ರೀತಿಸಿ, ಈಗಲಂತೂ ನನ್ನ ಯೋಗ್ಯತೆಗೆ ಮೀರಿ ಪ್ರೀತಿಸುವ ನೀನು ಈ ಪತ್ರವನ್ನು ಓದುವಾಗ ನಾನು ಬಹುದೂರ ತಲುಪಿರುತ್ತೇನೆ."

ನಾನು ಇಷ್ಟು ಓದುವಾಗ ಮಿ. ಪೆಗಟಿ ದುಃಖದ ಭ್ರಮೆಯಿಂದ –
"ಬಹುದೂರ ತಲುಪಿರುತ್ತೇನೆ' ಎಮಿಲೀ ನಿಲ್ಲು" ಅಂದರು.
ನಾನು ಪತ್ರವನ್ನು ಮುಂದರಿಸಿ ಓದಿದೆ –
"ಬೆಳಗ್ಗೆ ನನ್ನ ಮನೆ, ನನ್ನ ಮಮತೆಯ ಮನೆಯನ್ನು ಬಿಡುವಾಗ ಒಂದು ಶಪಥ ಹಾಕಿಕೊಂಡಿದ್ದೇನೆ. ನಾನು ವಾಪಸ್ಸು ಬರುವುದಾದರೆ ಒಂದು ಕುಲೀನ ಸಂಸಾರದ ಗೃಹಿಣಿಯಾಗಿ, ಇಲ್ಲದಿದ್ದರೆ ನನ್ನ ಮುದ್ದಿನ ಮನೆಯನ್ನು ಮುಂದೆಂದೂ ಸೇರೆನು, ಎಂದು. ಕುಲೀನ ಗೃಹಿಣಿಯನ್ನಾಗಿ ಮಾಡುವ ಜವಾಬ್ದಾರಿ ಅವರದು, ಅವರನ್ನು ನಂಬಿದ್ದೇನೆ. ಎಷ್ಟೇ ಯಾರಲ್ಲಿ ನಂಬಿಕೆಯಿದ್ದರೂ ನಡೆದುಹೋದುದೆಲ್ಲವನ್ನು ಗ್ರಹಿಸಿ ದುಃಖಿಸುತ್ತೇನೆ. ದುಃಖದಿಂದ ನನ್ನ ಎದೆ ಒಡೆದುಹೋಗಿದೆ. ನಿಮಗೆ ನಾನು ಮಾಡಿರುವ ಅಪರಾಧ ಅಪಾರವಿದೆ. ನೀವು ಕ್ಷಮಿಸಿ ಪೂರೈಸದಷ್ಟು ಅಪರಾಧ ಮಾಡಿದ್ದೇನೆ. ನನ್ನ ಅಪರಾಧಕ್ಕಾಗಿ ನನ್ನನ್ನು ನೀವು ಶಿಕ್ಷಿಸುವ ಮನಸ್ಸಿರುವವರಲ್ಲವೆಂದೂ ನನಗೆ ಗೊತ್ತಿದೆ. ನೀವು ಸಹೃದಯರು, ಕ್ಷಮಾವಂತರು ಎಂಬ ನಿಮ್ಮ ಗುಣಕ್ಕಾಗಿಯೇ ನನ್ನ ದುಃಖ ಮತ್ತಷ್ಟು ಕಠಿಣವಾಗಿದೆ. ಆ ದುಃಖವೆಷ್ಟೆಂದು ನಾನು ಬರೆದು ಪೂರೈಸೆನು. ಪೆಗಟಿ ಮಾವನಿಗೆ ಹೀಗೆಂದು ತಿಳಿಸಬೇಕು: ಮಾವನನ್ನು ನಾನು ಈ ಹೊತ್ತು ಪ್ರೀತಿಸಿ, ಹಂಬಲಿಸಿ, ಅವನಿಗಾಗಿ ದುಃಖಿಸಿದಷ್ಟು – ಇದರ ಅರ್ಧ ಪಾಲು ಸಹ, ಇದಕ್ಕೆ ಮೊದಲು ಎಂದೂ ನಾನು ಪ್ರೀತಿಸಿರುವುದಿಲ್ಲ, ಹಂಬಲಿಸಿರುವುದಿಲ್ಲ, ದುಃಖಿಸಿರುವುದಿಲ್ಲ. ನನ್ನ ಪ್ರಿಯ ಮಾವ ನನ್ನ ಮೇಲೆ ಎಷ್ಟೊಂದು ಕರುಣೆಯನ್ನು ಧಾರೆ ಧಾರೆಯಾಗಿ ಎರೆದಿದ್ದಾನೆಂದು ಹಿಂತಿರುಗಿ ಆಲೋಚಿಸದಿರಲಿ. ಅವನು ಹಾಗೆ ಆಲೋಚಿಸಿ ದುಃಖಿಸುವನೆಂದು ನಾನು ಗ್ರಹಿಸಿ ಸಹಿಸಲಾರೆ. ದಯಮಾಡಿ ನನ್ನನ್ನು ಮರೆತುಬಿಡಲಿ. ನನ್ನನ್ನು ಸುಟ್ಟು, ಹೂಳಿ, ಪೂರೈಸಲಾಗಿದೆಯೆಂದು ದೃಢ ಮಾಡಿಕೊಂಡು ಶಾಂತನಾಗಲಿ. ನೀನು ಹಿರಿಯಾಸೆಗಳಿಲ್ಲದ ಒಬ್ಬ ಸರಳ ಬಾಲಿಕೆಯನ್ನು ಮದುವೆಯಾಗಿ ಸುಖವಾಗಿರು. ಅವಳು ಮಾವನ ಬಳಿಯ ನನ್ನ ಸ್ಥಾನವನ್ನು ಸೇರಲಿ.

"ನನ್ನನು ಕುಲೀನ ಗೃಹಿಣಿಯಾಗಿ ಅವನು ಮರಳಿ ತರದಿದ್ದರೆ ಇದೇ ನನ್ನ ಅಂತಿಮ ನಮಸ್ಕಾರ. ನಾನು ನನಗಾಗಿ ಅಲ್ಲದಿದ್ದರೂ ನನ್ನ ಇಂದಿನ ಉದ್ದೇಶ ಸಿದ್ಧಿಗಾಗಿಯೂ ನಿಮ್ಮೆಲ್ಲರ ಕ್ಷೇಮಕ್ಕಾಗಿಯೂ ದೇವರನ್ನು ಪ್ರಾರ್ಥಿಸುತ್ತೇನೆ.
"ನನ್ನ ಅಂತಿಮ ಅಶ್ರುಬಿಂದುಗಳನ್ನೂ ನನ್ನ ಅನಂತ ನಮಸ್ಕಾರಗಳನ್ನೂ ಆಜನ್ಮ ಸ್ಮರಣೆಗಳನ್ನೂ ಮಾವನು ನನ್ನ ಮೇಲಿರಿಸಿರುವ ಪ್ರೀತಿಗಾಗಿ ಅವನ ಪಾದಗಳಿಗೆ ಸಮರ್ಪಿಸುವೆನು."

ಪತ್ರದಲ್ಲಿ ಇದ್ದದ್ದು ಅಷ್ಟೆ.
ನಾನು ಪತ್ರವನ್ನು ಓದಿ ಮುಗಿಸಿದರೂ ಮಿ. ಪೆಗಟಿ ಮೊದಲಿನಂತೆಯೇ ಮೌನವಾಗಿ, ಅಲುಗಾಡದೆ, ಮಂಕನಂತೆ ಸ್ವಲ್ಪ ಹೊತ್ತು ನಿಂತಿದ್ದನು. ಅನಂತರ ಹಠಾತ್ತಾಗಿ ವಿಚಾರಿಸಿದನು –
"ಆ ಜನ ಯಾರು – ಅವಳನ್ನು ಅಪಹರಿಸಿದವರು?"

ನಾನು ಗಾಬರಿಗೊಂಡೆನು. ಹೇಮನು ಈಗ ಮಾತಾಡಬೇಕೆಂದಿದ್ದನು. ಆದರೆ, ನನ್ನೆದುರು ಮಾತಾಡುವುದು ಸರಿಯಲ್ಲವೆಂದು ತಿಳಿದು, ನಾನು ಸ್ವಲ್ಪ ಸಮಯ ಹೊರಗೆ ಹೋದರಾಗಬಹುದೆಂದು ವಿನಯದಿಂದ ಸೂಚಿಸಿದನು. "ಆ ಜನ ಯಾರು. . ." ಎಂದು ಮಿ. ಪೆಗಟಿ ಅಂದಾಗಲೇ ಪ್ರಾರಂಭವಾಗಿದ್ದ ನನ್ನ ಹೆದರಿಕೆ ಹೇಮನ ಮಾತಿನಿಂದ ಹೆಚ್ಚಿತು. ಒಂದು ವಿದ್ಯುತ್ ಪ್ರವಾಹವು ದೇಹದಲ್ಲುಂಟಾಯಿತು. ನನ್ನ

ಬುದ್ಧಿಯೇ ವಿಕಲ್ಪ ಹೊಂದುತ್ತಿದಂತೆ ಭಾಸವಾಯಿತು. ದೃಷ್ಟಿ ಮಂದವಾಯಿತು. ಹೇಮನಿಗೆ ಉತ್ತರ ಕೊಡಲು ನನಗೆ ಸ್ವರವೇ ಬರದಂತಾಯಿತು. ಇಷ್ಟರಲ್ಲಿ ಮಿಸೆಸ್ ಬಾರ್ಕಿಸ್ ಪೆಗಟಿ ಬಂದು ನನ್ನ ಹತ್ತಿರ ನಿಂತಳು. ನನಗೆ ಕಾಲುಗಳೇ ಬರದೆ ನಿಂತಲ್ಲೇ ನಿಂತುಬಿಟ್ಟೆ. ನಿರ್ವಾಹವಿಲ್ಲದೆ ಹೇಮನು ಮಾತಾಡಿದನು –

"ಸ್ವಲ್ಪ ದಿನಗಳಿಂದೀಚೆಗೆ ಒಬ್ಬ ಗೃಹಸ್ಥನೂ ಅವನ ಆಳೂ ನಮ್ಮೂರಲ್ಲಿ ಗೂಢವಾಗಿ ಕೆಲವು ಕೆಲಸಗಳನ್ನು ಮಾಡಿಕೊಂಡಿದ್ದರು. ಆ ಆಳು ನಿನ್ನೆ ರಾತ್ರಿ ನಮ್ಮ ಹಸುಳೆ ಎಮಿಲಿಯ ಸಂಗಡ ಇದ್ದದ್ದನ್ನು ಕಂಡವರಿದ್ದಾರೆ. ಪೇಟೆ ಹೊರಗಡೆ ನಾರ್ವಿಜ್ ರಸ್ತೆಯಲ್ಲಿ ನವೀನ ಕ್ರಮದ ಒಂದು ಮುಚ್ಚಿದ್ದ ಕುದುರೆ ಗಾಡಿ ನಿಂತಿತ್ತು. ಈ ಮೊದಲು ಹೇಳಿದ ಆಳು ಆ ಗಾಡಿಯೊಳಗೆ ಹೋದದ್ದೂ ಹೊರಗೆ ಬಂದದ್ದೂ ಪುನಃ ಒಳಗೆ ಹೋದದ್ದೂ ಪುನಃ ಒಳನುಗ್ಗುವಾಗ ಎಮಿಲಿಯು ಅವನ ಜತೆಯಲ್ಲಿದ್ದದ್ದೂ ಬೆಳಗ್ಗೆ ಕಂಡವರಿದ್ದಾರೆ. ಆ ಗಾಡಿಯ ಒಳಗೇ ಇನ್ನೊಬ್ಬನಿದ್ದ. ಒಳಗಿದ್ದವನೇ ಆ ಜನ" – ಎಂದು ಹೇಮ್ ಹೇಳಿದನು.

"ದೇವರೇ! ದೇವರಿಲ್ಲವೆಂದರೂ ಸರಿ, ತಾನೆ! ಓ ದೇವರೇ ಆ ಜನ ಸ್ಟೀಯರ್ಫೋರ್ತ್ ಎಂದು ಮಾತ್ರ ಇನ್ನು ಹೇಳುವುದು ಬೇಡ" ಎಂದು ಮಿ. ಪೆಗಟಿ ಹೇಳುತ್ತಾ – ಆ ಕಲ್ಪನೆ, ಕಲ್ಪನೆ ಮಾತ್ರವಾಗಿ ಉಳಿಯಲಿ, ಮುಂದೆ ಬರುವುದು ಬೇಡ, ಎಂದು ಪ್ರಯತ್ನಿಸುವಂತೆ, ಮಿ. ಪೆಗಟಿ ಅದನ್ನು ಹಿಂದಕ್ಕೆ ತಳ್ಳುತ್ತಿರುವಂತೆಯೂ ಅದೇ ಮುಂದೊತ್ತಿ ಬರುತ್ತಿರುವುದನ್ನು ಅವರು ಪುನಃ ಪುನಃ ಹಿಂದೆ ತಳ್ಳುತ್ತಿರುವಂತೆಯೂ ತನ್ನ ಎರಡು ಕೈಗಳನ್ನು ಹಿಂದಕ್ಕೂ ಮುಂದಕ್ಕೂ ಬೀಸುತ್ತಿದ್ದರು.

ನಾನು ಹೆಣದಂತೆ ಸ್ತಬ್ದನಾಗಿ ಮೂಲೆಯಲ್ಲಿ ಕುಳಿತು ದುಃಖಿಸುತ್ತಲೂ ಪಶ್ಚಾತ್ತಾಪಪಡುತ್ತಲೂ ಇದ್ದೆ. ಮಿ. ಪೆಗಟಿ ಎಮಿಲಿಯನ್ನು ಅಗತ್ಯಬಿದ್ದರೆ ಪ್ರಪಂಚವಿಡೀ ಹುಡುಕಿ ಹಿಡಿಯಬೇಕೆಂದು ತನ್ನ ಕೋಟನ್ನು ಧರಿಸಿ ಹೊರಟರು. ಆದರೆ ಆಗ ನಾವೆಲ್ಲರೂ ಅಡ್ಡಗಟ್ಟಿ, ಅವರನ್ನು ಸಮಧಾನಪಡಿಸಲು ಪ್ರಯತ್ನಿಸುತ್ತಾ ಆ ರಾತ್ರಿಯೇ ಹೋಗದಂತೆ ನಿಲ್ಲಿಸಿದೆವು.

ಮಿ. ಪೆಗಟಿ ದುಃಖ ಸಹಿಸಲಾರದೆ ಕೊನೆಗೆ ಅಳಲು ಪ್ರಾರಂಭಿಸಿದರು. ಅಳುತ್ತಾ ಅಳುತ್ತಾ ಅವರು ಸ್ವಲ್ಪ ಶಾಂತರೂ ಆಗತೊಡಗಿದರು. ಸ್ಟೀಯರ್ಫೋರ್ತನ ಪರಿಚಯವನ್ನು ನಾನು ಅವರಿಗೆ ಮಾಡಿಕೊಟ್ಟುದರ ದುಷ್ಫಲವನ್ನು ನೆನೆನೆದು ನಾನು ಅವರ ಪಾದಗಳಿಗೆರಗಿ ಕ್ಷಮೆಯನ್ನು ಯಾಚಿಸಬೇಕೆಂದು ನನಗೆ ತೋರಿತು. ದುಃಖ ಪಶ್ಚಾತ್ತಾಪಗಳು ನನ್ನನ್ನು ಅತಿಯಾಗಿ ಬಾಧಿಸಿದುವು. ಸ್ವಲ್ಪವಾದರೂ ಶಾಂತಿ ಸಿಗಬೇಕಾದರೆ ಅಳುವುದೊಂದೆ ಇರುವ ಮಾರ್ಗವೆಂದು ಪ್ರಕೃತಿದತ್ತವಾಗಿ ತೋರಿ ನಾನೂ ಅತ್ತೆನು.

ಅಧ್ಯಾಯ ಮೂವತ್ತೆರಡು

ಯಾತ್ರಾರಂಭ

ಇಂಥ ಪ್ರಸಂಗದಲ್ಲಿ ನಮ್ಮ ಮನಸ್ಸಿನಲ್ಲುಂಟಾಗುವ ಭಾವನೆಗಳು ಸಾಧಾರಣ ಎಲ್ಲರಿಗೂ ಒಂದೇ ವಿಧದ್ದಾಗಿರುತ್ತದೆಂದು ನಾನು ನಂಬಿದ್ದೇನೆ. ಆದ್ದರಿಂದ ಸ್ಟೀಯರ್ಫೋರ್ತನನ್ನು ಕುರಿತಾದ ನನ್ನ ಮನಸ್ಸಿನ ಭಾವನೆಗಳನ್ನು ಬಚ್ಚಿಡದೆ ತಿಳಿಸುವುದು ನ್ಯಾಯವಿದೆ. ಅವನ ಈ ದುಷ್ಟ ಕಾರ್ಯ, ದುರ್ನಡತೆ ನನಗೆ ತಿಳಿದ ಕೂಡಲೆ ಮೊದಲು ಆದುದು ದುಃಖ ಮತ್ತು ಆ ದುಃಖದ ಮಧ್ಯವೇ ಆತನ ಸಕಲ ಸದ್ಗುಣಗಳು ಎದ್ದು ಕಾಣತೊಡಗಿದುವು. ಅವನು, ಅವನ ತೇಜಸ್ಸು, ಪ್ರತಿಭೆ, ಸಾಮರ್ಥ್ಯಗಳಿಂದ ಎಂಥ ಉತ್ತಮ ವ್ಯಕ್ತಿ – ಕೀರ್ತಿ ಪ್ರತಿಷ್ಠಾಯುತ ಪ್ರಜೆ, ಆಗಿ ಸಮಾಜದಲ್ಲಿ ಬೆಳಗಬಹುದಿತ್ತೆಂದು ಈಗ ಚಿತ್ರಿಸಿಕೊಂಡದ್ದಕ್ಕಿಂಥ ಸ್ಪಷ್ಟವಾಗಿ ನಾನು ಹಿಂದೆಂದೂ ಚಿತ್ರಿಸಿ ನೋಡಿರಲಿಲ್ಲ. ನಿಷ್ಕಳಂಕ ಬಡ ಸಂಸಾರಕ್ಕೆ ಅವನು ತಂದೊಡ್ಡಿದ ಭ್ರಷ್ಟತೆಯಲ್ಲಿ ನನ್ನ ಜವಾಬ್ದಾರಿ ತಿಳಿಯದೆಯೇ ಆದರೂ ಎಷ್ಟಿತ್ತೆಂದು ಅರಿಯುತ್ತಾ ದುಃಖಿಸಿದೆನು. ಆದರೆ ಇದೇ ಚಿಂತನೆಗಳಿದ್ದಾಗಲೇ ಅವನೇ ಹಠಾತ್ತಾಗಿ ನನ್ನೆದುರು ಬಂದು ನಿಂತು ಮಾತಾಡತೊಡಗಿದ್ದರೆ ನಾನು ಎಷ್ಟು ಮಾತ್ರಕ್ಕೂ ಅವನನ್ನು ನಿಂದಿಸದೆ, ಬೈಯ್ಯದೆ, ಮೌನವಾಗಿರುತ್ತಿದ್ದೆನೆಂಬುದನ್ನು ನಾನು ಅರಿತಿದ್ದೆ. ಈ ಎಲ್ಲ ಆಲೋಚನೆಗಳ ಗೊಂದಲದ ಮಧ್ಯದಲ್ಲೇ ಅವನ ಅಪರಾಧ ಅಕ್ಷಮ್ಯವಾಗಿತ್ತೆಂಬುದು ನನಗೆ ಸ್ಪಷ್ಟವಾಗಿ ಗೊತ್ತಿತ್ತು. ಮತ್ತು ಮುಂದೆ ಅವನ ಸ್ನೇಹ, ವರ್ಚಸ್ಸುಗಳು ನನ್ನ ಮೇಲೆ ಪರಿಣಾಮಗಳನ್ನು ತರಲು ಎಡೆ ಕೊಡಕೂಡದೆಂಬ ದೃಢ ನಿರ್ಧಾರ ಮಾಡಿಕೊಂಡೆನು.

ಮರುದಿನ ಬೆಳಗ್ಗೆ ನಾನು ಸಮುದ್ರದ ಕರೆಯಲ್ಲಿ ತಿರುಗಾಡುತ್ತಿದ್ದಾಗ ಜನರು ತಂತಮ್ಮೊಳಗೇ ಈ ವಿಷಯವನ್ನು ಮಾತಾಡಿಕೊಳ್ಳುತ್ತಿದ್ದರು. ಹೆಚ್ಚಿನ ಜನರು ಎಮಿಲಿಯ ಮೇಲೆ ತಪ್ಪನ್ನೂ ಕೆಲವು ಜನರು ಸ್ಟೀಯರ್ಫೋರ್ತನ ಮೇಲೆ ತಪ್ಪನ್ನೂ ಆರೋಪಿಸುತ್ತಿದ್ದರು. ಆದರೆ ಮಿ. ಪೆಗಟಿಯ ಮತ್ತೂ ಹೇಮನ ದುಃಖವನ್ನು ಎಲ್ಲರೂ ತಿಳಿದು, ತಾವೂ ದುಃಖಿಸಿ, ಅವರಿಬ್ಬರು ಕಾಣಸಿಕ್ಕಿದಾಗ ದೂರ ಸರಿದು ನಿಂತು, ಅವರನ್ನು ಕುರಿತು ಬಹು ಮೆದುಸ್ವರದಿಂದ, ಮರ್ಯಾದೆಯುಕ್ತವಾಗಿ ಮಾತಾಡಿಕೊಳ್ಳುತ್ತಿದ್ದರು.

ಮರುದಿನ ಬೆಳಗ್ಗೆ ಮಿ. ಪೆಗಟಿ ಮತ್ತೂ ನಾನು ಲಂಡನ್ನಿಗೆ ಹೋಗುವುದೆಂದು ನಿಶ್ಚೈಸಿಕೊಂಡೆವು. ಹೇಮನು ಅವನ ಅತ್ತೆ ಪೆಗಟಿಯ ಜತೆಯಲ್ಲಿ ಇನ್ನು ಮುಂದೆ ಇರುವುದು ಯುಕ್ತವೆಂದೂ ಮಿ. ಪೆಗಟಿಯ ಮನೆಯಲ್ಲಿ ಹೇಮನ ಉಸ್ತುವಾರಿಯೊಳಗೆ ಮಿಸೆಸ್ ಗಮ್ಮಿಜ್ ಇರುವುದೆಂದೂ ನಿಶ್ಚೈಸಿದೆವು. ಅಂತೂ ಈ ದುಃಖದ ಮನೆಯ ಭವಿಷ್ಯದ ವಿಷಯ ಸ್ವಲ್ಪ ಮಾತಾಡಿದೆವು. ಆಗ ಮಿ. ಪೆಗಟಿ ತಮ್ಮ ಕೆಲವು ಸಲಹೆಗಳನ್ನು ಅನುಜ್ಞೆಗಳನ್ನೂ ಇತ್ತರು.

"ನೋಡಿ ಮಿ. ಕಾಪರ್ಫೀಲ್ಡ್, ಈ ಮನೆಯನ್ನು ಎಲ್ಲರೂ ಬಿಟ್ಟು ಹೋಗಕೂಡದು. ಹಾಗಾಗಿಯೇ ಮಿಸೆಸ್ ಗಮ್ಮಿಜ್ಜಳೂ ಇಲ್ಲೇ ಇರುವಳು. ಎಮಿಲಿಗೆ ಮನಸ್ಸು ಬಂದಾಗ, ಹಗಲಾದರೆ ಹಗಲು, ರಾತ್ರಿಯಾದರೆ ರಾತ್ರಿ, ಈ ಮನೆಗೆ ಬರಲು ಎಡೆಯಿರಬೇಕು. ಜೀವವಿದ್ದು ಸುಖವಾಗಿ ಬರಲಿ. ಕೊನೆಗೆ ಪ್ರೇತವಾಗಿ ದುಃಖಿಸಿ, ಅವಳು ಜೀವಂತವಾಗಿದ್ದಾಗ ಸದಾ ಸಮುದ್ರವನ್ನು ನೋಡುತ್ತಿದ್ದ ಕಿಟಕಿಯ ಕಂಡಿಯಿಂದ ಇಣಿಕಿ ನೋಡಲೋಸ್ಕರ ಬರಲಿ. ಹೇಗೇ ಎಂದೇ ಬಂದರೂ ಅವಳಿಗೆ ಈ ಮನೆಯಲ್ಲಿ ಪ್ರೇಮ ಆದರಪೂರ್ವಕವಾದ ಸ್ವಾಗತವಿದೆ. ಅವಳು ಯಾವತ್ತು ಬೇಕಾದರೂ ಬಂದು ಅವಳಿಗಾಗಿ ಕಾದಿರುವ ಆಸನದಲ್ಲಿ ಕುಳಿತು ಮಿಸೆಸ್ ಗಮ್ಮಿಜ್ಜಳ ಸೆರಗಿನಲ್ಲಿ ತನ್ನ ದುಃಖಾಶ್ರುಗಳನ್ನೊರಸಿ, ಶಾಂತಿ ಸಮಾಧಾನ ಪಡೆದುಕೊಳ್ಳಬಹುದು. ಮಿಸೆಸ್ ಗಮ್ಮಿಜ್ಜಳು ಎಮಿಲಿಯನ್ನು ಸದಾ ನಿರೀಕ್ಷಿಸುತ್ತ ಇಲ್ಲಿ ಕುಳಿತಿರುವಳು."

ನನಗೆ ದುಃಖದಿಂದ ಮಾತೇ ಹೊರಡದೆ ಆಯಿತು. ಅವರು ಪುನಃ ತಮ್ಮ ಮಾತುಗಳನ್ನು ಮುಂದರಿಸಿದರು –
"ಪ್ರತಿ ರಾತ್ರಿಯೂ ಆ ಕಿಟಕಿಯಲ್ಲಿ ಬೆಳಕನ್ನು ಹೊತ್ತಿಸಿ ಇಡಬೇಕು ಹೇಮ್, ಮರೆಯಬಾರದು. ಆ ಬೆಳಕನ್ನು ಎಮಿಲಿ ಕಂಡರೆ ಅದು ತನ್ನನ್ನು 'ಬಾರಮ್ಮಾ, ಕಂದಾ' ಎಂದು ಕರೆಯುತ್ತಿರುವುದಾಗಿ ಗ್ರಹಿಸುವಳು. ಜ್ಞಾಪಕದಲ್ಲಿಟ್ಟಿರು ಹೇಮ್. ಎಮಿಲಿ ಬಂದು ಬಾಗಿಲು ತಟ್ಟಿದರೆ, ಅವಳ ಪುಟ್ಟ ಕೈ ಬೆರಳಿನ ಶಬ್ದ ಕೇಳಿಸಿದಾಗ, ನೀನೇ ಹೋಗಿ ಬಾಗಿಲು ತೆರೆಯಬೇಡ. ಅವಳು ಅಂಜಿಕೊಂಡಾಳು, ಗಮ್ಮಿಜ್ಜಳು ತೆಗೆಯಲಿ. ಗಮ್ಮಿಜ್ಜಳು ಅವಳನ್ನು ಮೆಲ್ಲಗೆ ಒಳಗೆ ಕರೆತರಲಿ" ಅಂದರು.

ನಮ್ಮ ಜತೆಯಲ್ಲೇ ನಿಂತಿದ್ದ ಹೇಮನೊಡನೆ ಸ್ವಲ್ಪ ಮಾತಾಡಲಿದೆಯೆಂದು ನಾನು ಅವನನ್ನು ಎಷ್ಟು ಕರೆದರೂ ಅವನಿಗೆ ಗೊತ್ತಾಗಲಿಲ್ಲ – ಅವನು ಒಂದು ಮರದ ಗೂಟದಂತೆ ಅಲುಗಾಡದೆ ನಿಂತು ಸಮುದ್ರವನ್ನೇ ನೋಡುತ್ತಿದ್ದನು. ನಾನು ಪುನಃ ಅವನನ್ನು ಎಚ್ಚರಿಸಿ ಕರೆಯುವುದರೊಳಗೆ ಅವನು ಹೇಳಿದನು –
"ಮಾಸ್ಟರ್ ಡೇವೀ, ನೋಡು – ನನಗೊಂದು ಆಲೋಚನೆ ಎದ್ದೆದ್ದು ತೋರುತ್ತದೆ. ಈಗ ನಡೆದಿರುವ ದುಃಖ ಇಷ್ಟಕ್ಕೆ ಮುಗಿಯಲಿಲ್ಲ. ಇದು ಪ್ರಾರಂಭ. ಇನ್ನು ಈ ಘಟನೆಯು ಪ್ರಾರಂಭವಾದಲ್ಲೇ ಅದರ ಅವಸಾನವೂ, ದುಃಖದ ಪೂರೈಕೆಯೂ ಆಗಲಿದೆ. ಇದೇ ಸ್ಥಳದಲ್ಲಿ ಮುಂದೆ ಇನ್ನೊಂದು ಮಹತ್ವದ ದುಃಖ ಆಗಲಿದೆಯೆಂಬ ಭವಿಷ್ಯದ ಚಿತ್ರ ಅಸ್ಪಷ್ಟವಾಗಿ ನನಗೆ ಎದ್ದೆದ್ದು ತೋರುತ್ತಿದೆ."
ಹೇಮನ ಈ ಮಾತುಗಳಿಗೆ ಏನುತ್ತರ ಕೊಡುವುದೆಂದು ಅರಿಯದೆ ಸುಮ್ಮನಿದ್ದೆ ನಾನು.

ಆ ದಿನ ಸಂಜೆ ನಾನು ಮಿಸೆಸ್ ಬಾರ್ಕಿಸ್ ಪೆಗಟಿಯ ಮನೆಗೆ ಹೋದೆ. ಅಲ್ಲಿ ಅವಳು ಅಳುತ್ತಲೇ ಇದ್ದಳು. ನಾನು ಅವಳೊಡನೆ ಮಾತಾಡುವ ಅನುಕೂಲ ತೋರದೆ ಹೊರಗಿನ – ಎದುರು ಕೋಣೆಯಲ್ಲಿ, ಒಬ್ಬಂಟಿಗನಾಗಿ ಕುಳಿತು ಏನೇನೋ ಆಲೋಚಿಸುತ್ತಿದ್ದೆ. ಆಗ ಬಾಗಿಲು ತಟ್ಟಿದ ಶಬ್ದ ಕೇಳಿಸಿತು. ನಾನು ಬಾಗಿಲು ತೆರೆದೆ. ಆಗ ನಾನು ಮೊದಲು ಕಂಡದ್ದು ಬಿಚ್ಚಿದ್ದ ಒಂದು ಕೊಡೆಯನ್ನು. ಅದನ್ನು ಮುಚ್ಚಿದಾಗ, ಕೊಡೆಯಷ್ಟೇ ಎತ್ತರದ ಮಿಸ್ ಮೌಚರಳು ನನ್ನ ಎದುರು ನಿಂತಿದ್ದಳು. ಸ್ಟೀಯರ್ಫೋರ್ತನಿಗೂ ಅವಳಿಗೂ ತುಂಬಾ ಪರಿಚಯವಿದ್ದುದನ್ನು ನಾನು ತಿಳಿದಿದ್ದುದರಿಂದಲೂ ಅವಳ ವಾಚಾಳಿತನ ಮುಖಭಂಗಿ, ಮೊದಲಾದ ನಡೆ ನಟನೆಗಳನ್ನು ನಾನು ಸ್ವತಃ ಕಂಡಿದ್ದುದರಿಂದಲೂ ಅವಳಿಗೂ ಸದ್ಯ ನಡೆದ ಎಮಿಲೀ ಪ್ರಸಂಗದಲ್ಲಿ ಭಾಗವಿದ್ದಿರಬೇಕೆಂದು ನಾನು ಊಹಿಸಿದ್ದೆನು. ಹಾಗಾಗಿ ಅವಳು ಮನೆಯೊಳಗೆ ಪ್ರವೇಶಿಸಬಾರದೆಂದು ತಿಳಿಯುತ್ತಾ ಅವಳಿಗೆ ನಾನು ಅಡ್ಡವಾಗಿ ನಿಲ್ಲಬೇಕೆಂದು ಯೋಚಿಸಿದ್ದಾಗಲೇ ಅವಳು ಸರಸರನೆ ನಡೆದು ಅಗ್ಗಿಷ್ಟಿಕೆಯ ಬೆಂಕಿ ಕಾಯಿಸಿಕೊಂಡು, ತನ್ನ ಎರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅಳತೊಡಗಿದಳು.

ಆ ರಾತ್ರಿ ಅವಳು ನಮ್ಮಲ್ಲಿಗೆ ಬಂದುದು ಏಕೆ, ನನ್ನಿಂದ ಅವಳಿಗೆ ಏನಾಗಬೇಕು ಎಂದು ಮೊದಲಾಗಿ ನಾನು ವಿಚಾರಿಸಿದೆನು. ಅವಳು ಬಹು ಸ್ಪಷ್ಟವಾಗಿ, ಸರಳವಾಗಿ, ನಂಬಲರ್ಹವಾದಷ್ಟು ಪರಿಷ್ಕಾರವಾಗಿ ತನ್ನ ಜೀವನ ವೃತ್ತಾಂತವನ್ನೂ ಅಲ್ಲಿಗೆ ಬಂದ ಉದ್ದೇಶವನ್ನೂ ತಿಳಿಸಿದಳು.

ಯಾರ್ಮತ್ತಿನಲ್ಲಿ ನಡೆದಿದ್ದ ಸ್ಟೀಯರ್ಫೋರ್ತನ ದುಷ್ಟ ಪ್ರಸಂಗದ ವರ್ತಮಾನವನ್ನು ಕೇಳಿ ಅವಳು ಬಂದದ್ದಾಗಿತ್ತು. ಸ್ಟೀಯರ್ಫೋರ್ತನ ಕಾರ್ಯಗಳು ಅನ್ಯಾಯವಾದುದೆಂದು ಅವಳು ತಿಳಿದೇ ತನ್ನ ಭಾಗ ಅದರಲ್ಲಿ ಎಷ್ಟು ಇರಬಹುದೆಂದು ಸಂಶಯಪಟ್ಟು, ವಿಚಾರಿಸಿಕೊಂಡು, ಇರಬಹುದಾದ ಸಂಶಯವನ್ನು ನಿವಾರಿಸಿಕೊಂಡು, ತನ್ನಿಂದಾಗುವ ಸಹಾಯಗಳನ್ನು ಒದಗಿಸುವುದಕ್ಕಾಗಿ ಬಂದಿದ್ದುದಂತೆ. ಸ್ಟೀಯರ್ಫೋರ್ತನು ಕೊಟ್ಟಿದ್ದ ಒಂದು ಪತ್ರವನ್ನು ಅವಳು ಎಮಿಲಿಗೆ ಬಟವಾಡೆ ಮಾಡಿದ್ದಷ್ಟರ ತಪ್ಪು ಆಗಿರಬಹುದೆಂದು ಅವಳಿಗೆ ವಿಷಯಗಳನ್ನೆಲ್ಲ ತಿಳಿದ ಮೇಲೆ ಗೊತ್ತಾಯಿತಂತೆ. ಕಾಗದ ಪತ್ರಗಳ ಬಟವಾಡೆ ಕೆಲಸ ಅವಳ ಜೀವನ ವೃತ್ತಿಯ ಒಂದು ಅಂಶವೂ ಆಗಿದ್ದು, ಸಂಬಳದ ಆಸೆಗಾಗಿ ಮಾಡಿದ್ದಂತೆ. ಇದನ್ನೆಲ್ಲ ಬಹು ಪಶ್ಚಾತ್ತಾಪಯುತವಾಗಿ ಹೇಳುತ್ತಾ ತನ್ನ ಜೀವನ ವೃತ್ತಿಗೆ ಈ ಚಿಕ್ಕ ಭಾಗದ ತನ್ನ ಜವಾಬ್ದಾರಿ ತೊಂದರೆಯನ್ನೊಡ್ಡಬಾರದಾಗಿ ವಿಜ್ಞಾಪಿಸಿಕೊಂಡು ಅತ್ತಳು.

ಇಷ್ಟೆಲ್ಲ ಅವಳು ಹೇಳುವ ಮಧ್ಯೆ ಮಧ್ಯೆ ಅವಳ ಕುಬ್ಜತೆ, ವೃತ್ತಿ, ಸಂಸಾರದ ಕಷ್ಟಗಳನ್ನೂ ಹೃದ್ರಾವಕವಾಗಿ ವಿವರಿಸಿಕೊಂಡಳು. ಇವಳಿಗೆ ಕೆಲವು ಜನ ತಮ್ಮಂದಿರಿದ್ದರಂತೆ. ಅವರೆಲ್ಲರೂ ಇವಳಂತೆಯೇ ಬಹು ಕುಳ್ಳರಾಗಿದ್ದು, ಸಂಪಾದನೆ ಮಾಡಲು ಅಸಮರ್ಥರಾಗಿ, ಸಂಸಾರದ ಭಾರ ಪೂರಾ ಇವಳ ಮೇಲೆಯೇ ಬಿದ್ದಿತು. ಇವಳು ಎಲ್ಲರ ಮನಸ್ಸನ್ನು ಅರಿತು, ಎಲ್ಲರನ್ನೂ ಅನುಸರಿಸಿ, ಅವರ ಇಂಗಿತದಂತೆ ಕಾರ್ಯಗಳನ್ನು ಮಾಡಿಕೊಟ್ಟು, ಸಿಕ್ಕಿದಷ್ಟು ಪ್ರತಿಫಲವನ್ನು ನಗುಮುಖದಿಂದ ಪಡೆಯಬೇಕಿತ್ತು. ಇವಳನ್ನು ಜನರು ಹೀನವಾಗಿ, ದಲ್ಲಾಳಿ ಎಂದು ಕರೆಯುತ್ತಿದ್ದರು. ಇವಳ ವೃತ್ತಿ ಕ್ಷೌರದ ಕೆಲಸ ಮುಖ್ಯವಾಗಿದ್ದು, ಇತರ ಅನೇಕ ಉಪವೃತ್ತಿಗಳನ್ನು ಇವಳು ಕೈಕೊಳ್ಳುತ್ತಿದಳು. ಧನಿಕ, ಬಡವ, ಹುಡುಗ, ಮುದುಕರೆಲ್ಲರಿಗೂ ಸಂದರ್ಭಾನುಸಾರ ಕೆಲಸ ಮಾಡಿಕೊಡುತ್ತಿದ್ದಳು. ಆದರೆ, ಅವರೇ ಇವಳನ್ನು ತಮ್ಮ ಸ್ಥಾನ, ಪ್ರಾಯ, ಹಣ, ದೇಹಬಲಗಳಿಂದ ಹಗುರವಾಗಿ ಕಂಡು, ಹೀಯಾಳಿಸಿ, ಚೇಷ್ಟೆ ಮಾಡುತ್ತಿದ್ದರು.

ಇವಳಿಗೂ ಹೃದಯವಿತ್ತು, ಸಂಸಾರವಿತ್ತು. ಆದ್ರೆ ತನ್ನ ಪ್ರಕೃತಿದತ್ತವಾದ ಅಂಗವಿಲಕ್ಷಣದ ಕಾರಣವಾಗಿ ಎಲ್ಲರ ನಿಂದನೆ, ಅಪಹಾಸ್ಯ, ಕುತಂತ್ರಗಳನ್ನು ಸಹಿಸುತ್ತಾ ಕ್ಷೌರ, ಸಂಧಾನ, ಅಲಂಕಾರ, ಚಮತ್ಕಾರ, ಹಾಸ್ಯ, ನಟನೆ, ವಿನೋದ, ಠಕ್ಕುಗಳಿಂದ ಜೀವಿಸುತ್ತಿದ್ದಳು. ಆದರೆ ಸದ್ಗುಣ – ದುರ್ಗುಣಗಳನ್ನು ವಿವೇಚಿಸಿ, ಅರಿತು, ಅತಿರೇಕಗಳಲ್ಲಿ ಪ್ರವೇಶಿಸದೆ ವೃತ್ತಿಯನ್ನು ಸಾಗಿಸುತ್ತಿದ್ದಳು. ಅಂಗನ್ಯೂನತೆಗೂ ಮನಸ್ಸಿನ ನ್ಯೂನತೆಗೂ ಸಂಬಂಧ ಕಲ್ಪಿಸಬಾರದೆಂದು ಇವಳು ದುಃಖಯುತವಾಗಿ ವಿಜ್ಞಾಪಿಸಿಕೊಳ್ಳುತ್ತಿದ್ದಳು.

ಮಿಸ್ ಮೌಚರಳ ಮಾತುಗಳನ್ನು ಕೇಳಿ ನನಗೆ ಅವಳನ್ನು ಕುರಿತು ಸಮಾಧಾನವೂ ಕನಿಕರವೂ ಉಂಟಾಯಿತು. ನಾನು ಅವಳಿಗೆ ಸಮಾಧಾನಕರವಾದ ಮಾತುಗಳನ್ನು ಹೇಳಿ ಸಂತೈಸಿದೆನು. ನಮಗೆ ಅವಳಿಂದ ಆಗಬೇಕಾದ ಸಹಾಯ ಸದ್ಯ ಏನೂ ಇಲ್ಲವೆಂದು ಅಂದ ಮೇಲೆ ಅವಳು ಹೊರಟು ಹೋದಳು.

ನಾನು ಈ ಮೊದಲೇ ಯಾರ್ಮತ್ತಿನಲ್ಲಿ ನಡೆದಿದ್ದ ಕೆಲವು ವರ್ತಮಾನವನ್ನು ಸೂಕ್ಷ್ಮವಾಗಿ ಮಿಸೆಸ್ ಸ್ಟೀಯರ್ಫೋರ್ತಳಿಗೆ ಪತ್ರ ಬರೆದು ತಿಳಿಸಿದ್ದೆ. ಅಲ್ಲದೆ ಅವಳನ್ನು ಕಂಡು ಮಾತಾಡುವ ಉದ್ದೇಶದಿಂದ ಮಿ. ಪೆಗಟಿಯೂ ನಾನೂ ಲಂಡನ್ನಿಗೆ ಬರುವುದಾಗಿಯೂ ಬರೆದಿದ್ದೆ.

ಮರುದಿನ ಬೆಳಗ್ಗೆ ಮಿ. ಪೆಗಟಿ, ಬಾರ್ಕಿಸ್ ಪೆಗಟಿ ಮತ್ತು ನಾನು ಲಂಡನ್ನಿಗೆ ಹೋದೆವು. ಬಾರ್ಕಿಸ್ ಪೆಗಟಿಯನ್ನು ನನ್ನ ಮನೆಯಲ್ಲೇ ಬಿಟ್ಟು, ಮಿ. ಪೆಗಟಿಯೂ ನಾನೂ ಮಿಸೆಸ್ ಸ್ಟೀಯರ್ಫೋರ್ತಳ ಮನೆಗೆ ಹೋದೆವು. ಪ್ರಕೃತದ ಸಂದರ್ಭದಲ್ಲಿ ಸ್ಟೀಯರ್ಫೋರ್ತನ ತಾಯಿ ನಮಗೆ ಭೇಟಿಕೊಡುವುದು ಸ್ವಾಭಾವಿಕವಾಗಿಯೇ ಅಸಂಭವವೆಂದು ನಾನು ತಿಳಿದಿದ್ದರೂ ನನ್ನ ಪರಿಚಯ ಅವಳಿಗೆ ಮೊದಲೇ ಇದ್ದುದರಿಂದಲೂ ನಾನು ಪತ್ರವನ್ನು ಅವರಿಗೆ ಆ ಮೊದಲೇ ಬರೆದಿದ್ದುದರಿಂದಲೂ ಅವಳು ನಮಗೆ ಭೇಟಿಕೊಟ್ಟಳು.

ಸ್ಟೀಯರ್ಫೋರ್ತನ ತಾಯಿ ನೋಡಲು ಸ್ಟೀಯರ್ಫೋರ್ತನಂತೆಯೇ ಇದ್ದುದರಿಂದ ಅವಳನ್ನು ಕಂಡೊಡನೆಯೇ ನಮಗೆ ಸ್ಟೀಯರ್ಫೋರ್ತನ ಜ್ಞಾಪಕ ಬಂತು. ಮಿ. ಪೆಗಟಿಗಂತೂ ಈ ಹೋಲಿಕೆ ಬಹು ಆಶ್ಚರ್ಯವನ್ನುಂಟುಮಾಡಿರಬೇಕು. ಅವಳ ಸದಾ ಇರುವ ಮುಖದ ಗಾಂಭೀರ್ಯವು ಮೊದಲಿನಂತೆಯೇ ಇದ್ದರೂ ಮುಖ ಸ್ವಲ್ಪ ಬಾಡಿದಂತೆಯೇ ಇತ್ತು. ತಾನು ಕುರ್ಚಿಯಲ್ಲೇ ಕುಳಿತಿದ್ದು ಮಿ. ಪೆಗಟಿಗೆ ಒಂದು ಕುರ್ಚಿಯನ್ನು ತೋರಿಸಿ ಕುಳಿತುಕೊಳ್ಳಲು ಹೇಳಿದಳು. ಅನಂತರ ನಮ್ಮನ್ನು ನೋಡಿ –

"ನನ್ನಿಂದೇನಾಗಬೇಕು, ನಿಮಗೆ" ಅಂದಳು.

ಮಿ. ಪೆಗಟಿ ಎಮಿಲಿ ಅರೆದಿದ್ದ ಪತ್ರವನ್ನು ಅವಳಿಗೆ ಕೊಟ್ಟನು. ಅವಳು ಅದನ್ನು ಓದಿ ಮಿ. ಪೆಗಟಿಗೆ ವಾಪಾಸ್ ಕೊಟ್ಟಳು. ಅವಳು ಏನೂ ಮಾತಾಡದಿದ್ದುದರಿಂದ, ಮಿ. ಪೆಗಟಿ 'ನನ್ನನ್ನು ಕುಲೀನ ಗೃಹಿಣಿಯಾಗಿ ಅವನು ಮರಳಿ ತರದಿದ್ದರೆ' ಎಂಬ ಪತ್ರದ ವಾಕ್ಯವನ್ನು ಎತ್ತಿ ತೋರಿಸಿ –

"ಅವನು ತನ್ನ ಮಾತಿನಂತೆಯೇ ನಡೆಯುವನೇ?" ಎಂದು ಮಿಸೆಸ್ ಸ್ಟೀಯರ್ಫೋರ್ತಳನ್ನು ಕೇಳಿದನು.

"ಇಲ್ಲ" ಅಂದಳು ಮಿಸೆಸ್ ಸ್ಟೀಯರ್ಫೋರ್ತ್.

"ಯಾಕೆ?" ಪೆಗಟಿ.

"ಅದು ಅಸಾಧ್ಯ. ಅವನ ಸ್ಥಾನಮಾನವನ್ನು ಗ್ರಹಿಸಬೇಕು, ಎಮಿಲಿಯ ಕೀಳುತನದ ವಿಷಯ ನಿಮಗೆ ನಾನು ತಿಳಿಸುವ ಅಗತ್ಯವಿಲ್ಲವಷ್ಟೆ?"

ಈ ರೀತಿಯ ಒಂದು ವಿಧದ ವಾಗ್ಯುದ್ಧವನ್ನೇ ಮಿಸೆಸ್ ಸ್ಟೀಯರ್ಫೋರ್ತಳು ಹೂಡಿದಳು. ಅವಳು, ಮಿ. ಪೆಗಟಿ ಮತ್ತೂ ಅವರ ಸಂಸಾರವನ್ನು ನಿಷೇಧಿಸುತ್ತಾ ತನ್ನ ಗೌರವವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಾ ಸ್ವಲ್ಪ ಕಠಿಣವಾಗಿಯೇ ಮಾತಾಡತೊಡಗಿದಳು.

"ಅವಳ ಬಂಧುಗಳ ಸಂಬಂಧವನ್ನು ಬೆಳೆಸಲು ನಾವು ತಯಾರಿಲ್ಲ. ಈ ಮಾತನ್ನು ಆಡಬಾರದೆಂದು ನಾನಿದ್ದರೂ ನೀವೇ ಅದನ್ನು ಹೊರಡಿಸಿದಿರಿ" ಅಂದಳು, ಮಿಸೆಸ್ ಸ್ಟೀಯರ್ಫೋರ್ತ್.

"ಅಮ್ಮಾ ಸ್ವಲ್ಪ ಆಲೋಚಿಸಿ ನೋಡಿ. ಮದುವೆಯಾಗದೆ ಅವಳನ್ನು ನಾವು ಸ್ವೀಕರಿಸುವುದರಲ್ಲಿ ನಮಗೆ ಅಪಮಾನವಿಲ್ಲವೇ? ಅವಳು ಗಂಡನ ಜತೆಯಲ್ಲಿ ಸುಖವಾಗಿರಲಿ, ಅವಳ ಮಾನವೊಂದು ಉಳಿಯಲಿ. ನಿಮ್ಮ ಬಂಧುತ್ವವನ್ನು ಬಳಸುವ ಅಭಿಲಾಷೆ ನಮಗಿಲ್ಲ. ಅವಳನ್ನು ವಾಪಾಸು ಪಡೆಯಲು ನಾನು ವಿಶ್ವದ ಐಶ್ವರ್ಯವನ್ನೇ ತೆರಬೇಕಾಗಿದ್ದು, ಅಷ್ಟು ಐಶ್ವರ್ಯ ನನ್ನಲ್ಲಿದ್ದರೂ ನಾನು ಸಂತೋಷದಿಂದ ತೆತ್ತು ಅವಳನ್ನು ಪಡೆಯಲು ಸಿದ್ಧನಿದ್ದೇನೆ. ಆದರೆ ಅವಳ ಮಾನದ ಮಟ್ಟಿಗೆ ನಾನು ಒತ್ತಾಯಪಡಿಸಬೇಕಾಗಿದೆ. ಅವಳ ಸಂತತಿಯವರಾದರೂ ಕುಲೀನರಾಗಿ ಬಾಳಬಹುದಷ್ಟೆ. ಅವರಿಬ್ಬರ ಮದುವೆಗೆ ಅಡ್ಡಿಯಿದೆಯೇ ಎಂಬುದು ನನ್ನ ಪ್ರಶ್ನೆ" ಅಂದರು ಮಿ. ಪೆಗಟಿ.

"ಅದೆಲ್ಲ ನನಗೆ ಸಂಬಂಧವಿಲ್ಲ. ಆ ಕುರಿತು ಮಾತು ಬೆಳೆಸುವ ಅಗತ್ಯವಿಲ್ಲ. ಅವಳನ್ನು ಮದುವೆಯಾಗಿ ನನ್ನ ಮಗನ ಸಮಾಜದೊಳಗಿನ ಮಾನ ಮರ್ಯಾದೆ, ಭವಿಷ್ಯಗಳನ್ನು ಕಳೆದುಕೊಳ್ಳಲು ನಾವು ತಯಾರಿಲ್ಲ. ನಿಮಗೆ ಪರಿಹಾರ ದ್ರವ್ಯ ಬೇಕಾದ್ರೆ. . ." ಎಂದು ಮಿಸೆಸ್ ಸ್ಟೀಯರ್ಫೋರ್ತಳು ಹೇಳಿ ಮುಂದುವರಿಸುವುದರೊಳಗೆ, ಮಿ. ಪೆಗಟಿಯು ಮಾತಿನಲ್ಲಿ ಧುಮುಕುವವರಂತೆ –

"ನಮ್ಮ ಮನೆಯ ಪವಿತ್ರ ಸ್ಥಳದಲ್ಲಿ, ಬೆಂಕಿಯ ಬುಡದಲ್ಲಿ ಸುಖವಾಗಿ ಕುಳಿತು ಸಂತೋಷಿಸಿ, ನಮ್ಮನ್ನೆಲ್ಲ ಮುಗುಳ್ನಗೆ, ಸವಿ ಮಾತುಗಳಿಂದ ನಂಬಿಸಿ, ಅರಿಯದ ಚಿಕ್ಕ ಬಾಲಿಕೆಯನ್ನು ಒಲಿಸಿ ಬಗಲಲ್ಲಿಟ್ಟುಕೊಂಡು, ತನ್ನ ಕರಾಳ ಹೃದಯದ ಉದ್ದೇಶಗಳನ್ನು ಅಡಗಿಸಿ, ಮಾಡಬಾರದ ಹೀನ ಕಾರ್ಯವನ್ನು ಮಾಡಿರುವ ಅವನ ಮುಖವನ್ನು ನೆನಸಿದಂತೆಲ್ಲ ಅವನನ್ನು ಹಿಡಿದು ರಕ್ತಹೀರಿ ತಿಂದುಬಿಡೋಣವೆಂದೆನ್ನಿಸುತ್ತದೆ. ಆ ಕ್ರೂರಿ ಕೃತಘ್ನನ ಮುಖದಂತೆಯೇ ಇರುವ ಮುಖದ ಎದುರು ನಾನು ನನ್ನ ಮಗುವಿನ ಸರ್ವನಾಶವಾದ ದುಃಖವನ್ನು ಈ ವರೆಗೆ ಹೇಳಿಕೊಂಡಿರುವೆನು. ಹಣ ಕೊಟ್ಟು ಹೃದಯದ ವೇದನೆಯನ್ನು ನಿವೃತ್ತಿಪಡಿಸುವ ಆಲೋಚನೆ ನಿಮಗೆ ತೋರಿದ್ದೇ ಆಶ್ಚರ್ಯದ, ವಿಷಾದಕರವಾದ ಸಂಗತಿ. ಹಣದ ಪ್ರಸ್ತಾಪವನ್ನು ನನ್ನ ಹತ್ತಿರ ಎತ್ತುವುದಿರಲಿ, ಅಂಥ ಆಲೋಚನೆ ನಿಮ್ಮ ಅಂತರಂಗದಲ್ಲಿ ಮೂಡಿದಾಗಲೇ ನೀವು ಪಶಾತ್ತಾಪಪಟ್ಟು, ನಿಮ್ಮ ಪಶ್ಚಾತ್ತಾಪ ಮುಖದಲ್ಲಿ ತೋರಬೇಕಿತ್ತು. ಇದರ ಬದಲು ಗೌರವ, ಹೆಗ್ಗಳಿಕೆ, ಸಿರಿವಂತಿಕೆಗಳನ್ನು ಮೆರೆಸಲು ಮಾತಾಡುವ ನಿಮ್ಮ ಮುಖ ಆ ಅಧಮಾಧಮನ ಮುಖದಂಥಾದ್ದೇ ಎಂಬುದು ನಿಸ್ಸಂಶಯವು" ಎಂದು ಹೇಳಿ ಬಿಟ್ಟನು.

ಈ ರೀತಿಯ ಸಂಭಾಷಣೆಯ ಕಾವು ಏರುತ್ತಿದ್ದಾಗಲೇ ಮಿಸ್ ಡಾರ್ಟಲ್ಲಳೂ ಮಾತಾಡತೊಡಗಿದಳು. ಅವಳು ಸ್ಟೀಯರ್ಫೋರ್ತನನ್ನು ಬಹುವಾಗಿ ಪ್ರೀತಿಸಿ, ಮದುವೆಯಾಗಲು ಬಯಸುತ್ತಿದ್ದುದರಿಂದ, ಎಮಿಲಿ ತನ್ನ ವಿರೋಧಿಯೆಂದು ತಿಳಿದು ಮಾತಾಡಿದಳು. ಅವಳೂ ತಮ್ಮ ಕುಲದ ಹೆಗ್ಗಳಿಕೆಯನ್ನು ಹೇಳಿಕೊಳ್ಳುತ್ತಾ ಎಮಿಲಿಯ ಮತ್ತು ಅವಳ ಬಂಧುಗಳ ಬಡತನವನ್ನು ಹೀನೈಸಿ, ಜರೆದು ಮಾತಾಡಿದಳು.

ಆದರೂ ಮಿ. ಪೆಗಟಿ ಆ ವಾಗ್ಬಾಣಗಳನ್ನೆಲ್ಲ ಸಹಿಸಿ, ತನ್ನ ಔದಾರ್ಯ ಸ್ವಭಾವದಿಂದಲೇ ಅಲ್ಲಿಂದ ಹೊರಟನು. ತಾನು ಮಾಡಬೇಕಾಗಿದ್ದ ಕರ್ತವ್ಯಗಳನ್ನು ತಾನು ಮಾಡಿರುವೆನೆಂಬ ತೃಪ್ತಿ ಅವನಿಗೆ ಇತ್ತು. ಆನಂತರ ನಾವು ನನ್ನ ಮನೆ ಕಡೆಗೆ ಹೊರಟು ಬಂದೆವು.

ಆ ದಿನ ನಾವೆಲ್ಲರೂ ನನ್ನ ಮನೆಯಲ್ಲೇ ಊಟ ಮಾಡಿದೆವು. ಊಟವಾದನಂತರ ಮಿ. ಪೆಗಟಿ ಎಮಿಲಿಯನ್ನು ಹುಡುಕಲಿರುವ ಯಾತ್ರೆಯನ್ನಾರಂಭಿಸಿದರು. ಮಿ. ಬಾರ್ಕಿಸರ ಉಯಿಲಿನ ಪ್ರಕಾರ ಅವನಿಗೆ ಸಲ್ಲಬೇಕಾಗಿದ್ದ ಹಣದಿಂದ, ಒಂದು ತಿಂಗಳಿನ ಖರ್ಚಿಗೆ ಬೇಕಾಗಬಹುದಾದಷ್ಟು ಹಣವನ್ನು ತಂಗಿ ಪೆಗಟಿಯಿಂದ ಪಡೆದುಕೊಂಡು, ಕೈಚೀಲ, ದೊಣ್ಣೆ ಮತ್ತು ಹೇಟನ್ನು ತೆಗೆದುಕೊಂಡು, ಪರಾರಿಯಾಗಿದ್ದ ತನ್ನ ಪ್ರೀತಿಯ ಸೊಸೆ ಎಮಿಲಿಯನ್ನು ಹುಡುಕಿ ತರಲು, ತನ್ನ ಊರು, ಮನೆ, ಬಂಧು ಬಾಂಧವರನ್ನು ತೊರೆದು, ದೃಢಸಂಕಲ್ಪನಾಗಿ ಅವನು ಹೊರಟು ನಿಂತನು. ನಾವೆಲ್ಲರೂ ಅವನಿಗೆ ನಮಸ್ಕರಿಸಿದೆವು. ಅವನು ನಮ್ಮನ್ನು ಹರಸುತ್ತಾ ಅಂದನು –
"ನಿಮ್ಮೆಲ್ಲರಿಗೂ ಶುಭವಾಗಲಿ. ದೇಶವಿದೇಶಗಳಲ್ಲೆಲ್ಲ ಹುಡುಕಬೇಕಾದರೂ ಹುಡುಕಿ ಅವಳನ್ನು ತರುವೆನು. ತಂದನಂತರ ಜನನಿಂದೆ ತಟ್ಟದ ಸ್ಥಳದಲ್ಲಿ ಏಕಾಂತವಾಗಿ ಬದುಕುವೆವು. ನಾನು ಇಲ್ಲಿಗೆ ಬರುವ ಮೊದಲೇ ಅವಳೇನಾದರೂ ಇಲ್ಲಿಗೆ ಬಂದರೆ ಅಥವಾ ನಾನು ಅಕಸ್ಮಾತ್ ಮೃತನಾದರೆ, ನನ್ನ ಅಂತಿಮ ಆಶೀರ್ವಾದವನ್ನು ಅವಳಿಗೆ ತಿಳಿಸಿರಿ. ನಾನು ಅವಳನ್ನು ಕ್ಷಮಿಸಿದ್ದೇನೆ. ನನ್ನ ಸ್ಥಿರವಾದ ಪ್ರೇಮವು ಮುದ್ದು ಎಮಿಲಿಯ ಮೇಲೆ ಸದಾ ಸಂಪೂರ್ಣ ಇದೆ – ಎಂದು ತಿಳಿಸಿರಿ."

ಈ ಮಾತುಗಳನ್ನು ನುಡಿಯುತ್ತಿದ್ದಾಗ ಅವನ ಮುಖ, ದೇಹವೆಲ್ಲ ದೈವಸನ್ನಿಧಿಯಲ್ಲಿ ಒಂದು ಪ್ರತಿಜ್ಞೆಗೈಯ್ಯುವಂತೆ ಇದ್ದುವು. ಈ ಪ್ರತಿಜ್ಞಾ ವಾಕ್ಯಗಳಾದನಂತರ ಅವನು ಹೇಟನ್ನು ಧರಿಸಿ, ಕೈಯ್ಯಲ್ಲಿ ಚೀಲ ದೊಣ್ಣೆಗಳನ್ನು ಹಿಡಿದುಕೊಂಡು ಮಾರ್ಗಕ್ಕೆ ಇಳಿದು ನಡೆದುಹೋದನು. ಏನೂ ತೋಚದೆ ನಾವೂ ಸ್ವಲ್ಪ ದೂರ ಅವನನ್ನು ಹಿಂಬಾಲಿಸಿದೆವು. ಕೊನೆಗೆ ಅವನು ಜನಸಂದಣಿಯಲ್ಲಿ ಬೆರೆತು ಕಾಣದೆ ಹೋದನು.

ಆ ದಿನದ ಆ ಸಮಯದಂತೆ ಸಮಯ ತೋರಿದಾಗಲೆಲ್ಲ – ಕನಸಿನ ಕನವರಿಕೆಗಳಿಂದ ಎಚ್ಚತ್ತು ಕುಳಿತಾಗ – ತೇಲುವ ಚಂದ್ರನನ್ನೇ ನೋಡುತ್ತಾ ಒಬ್ಬಂಟಿಗನಾಗಿ ಕುಳಿತಾಗ – ಹನಿ ಹನಿ ಮಳೆಸುರಿದು ಬೀಸುವ ಗಾಳಿಯು ರೋದಿಸುತ್ತಿರುವಂತೆ ಕೇಳಿದಾಗ, ಒಂಟಿಗನಾಗಿ, ಕೈಚೀಲ ಹಿಡಿದು ಎಡೆಬಿಡದೆ ನಡೆದು ಹೋಗುತ್ತಿದ್ದ ಆ ಮಹಾ ವ್ಯಕ್ತಿಯ ಚಿತ್ರವೂ ಅವನ ಪ್ರತಿಜ್ಞಾ ವಾಕ್ಯಗಳೂ ನನ್ನ ಮನಸ್ಸಿನಲ್ಲಿ ತೋರುತ್ತಿದ್ದುವು.

ಅಧ್ಯಾಯ ಮೂವತ್ಮೂರು

ಆನಂದ ಪರವಶತೆ

ಈ ಸಮಯದಲ್ಲಿ ಡೋರಾಳ ಮೇಲಿನ ನನ್ನ ಪ್ರೇಮ ಏನೂ ಕಡಿಮೆಯಾಗಿರಲಿಲ್ಲ. ಅದು ಎಳೆಯುತ್ತಲೇ ಇತ್ತು. ನನ್ನ ದುಃಖಗಳಲ್ಲಿ, ಅಪಜಯಗಳಲ್ಲಿ, ಕಷ್ಟಗಳಲ್ಲಿ ಶಾಂತಿ ಕೊಡುತ್ತಿದ್ದ ಸಾಧನವೆಂದರೆ ಡೋರಾಳ ಚಿಂತನೆ ಒಂದು ಮಾತ್ರವಾಗಿತ್ತು. ದಿನದಿನದ ಜೀವನದ ಅನುಭವಗಳಲ್ಲಿ ಕಂಡು ಬರುತ್ತಿದ್ದ ಕಷ್ಟ ನಿಷ್ಠುರಗಳ ಕತ್ತಲು ಹೆಚ್ಚಿದಂತೆಲ್ಲ ಡೋರಾಳ ಪ್ರಭೆ ಹೆಚ್ಚೆಚ್ಚಾಗಿ ಶೋಭಿಸುತ್ತಿತ್ತು. ಈ ಲೋಕದ ಸಮಸ್ತ ಜನಗಳಿಗಿಂತ ಶ್ರೇಷ್ಠಳೇ ಡೋರಾ ಆಗಿದ್ದಳು. ಅವಳು ಈ ಲೋಕದವಳೇ ಅಲ್ಲದೆ, ದೈವಾಂಶ ಸಂಭೂತಳೇ ಅವಳೆಂದು ನಂಬಿ ಸಂತೋಷಿಸುತ್ತಿದೆನು. ಅವಳು ಪ್ರಪಂಚದ ಇತರರೆಲ್ಲರಿಗಿಂತಲೂ ಮೇಲ್ತರಗತಿಯವಳೆಂಬುದರಲ್ಲಿ ನನಗೆ ಲವಲೇಶವೂ ಸಂಶಯವಿರಲಿಲ್ಲ. ಅವಳ ಚಿಂತನೆಯನ್ನು ಬಿಟ್ಟು ಇನ್ನು ಯಾವುದರಲ್ಲೂ ನಾನು ಮಗ್ನನಾಗಿರುತ್ತಿರಲಿಲ್ಲ. ಹಾಗೆ ಮಗ್ನನಾಗಿರಲು ಬಿಡುವೇ ಇರುತ್ತಿರಲಿಲ್ಲ. ಅವಳ ಚಿಂತನೆಯಲ್ಲಿ ನಾನು ಸದಾ ಮುಳುಗಿಕೊಂಡೇ ಇರುತ್ತಿದ್ದು ನನ್ನ ರಕ್ತ, ಅಸ್ತಿ, ಮಾಂಸಗಳೂ ಸಹ ಡೋರಾಳನ್ನು ಕುರಿತಾದ ಜ್ಞಾನದಿಂದ ಪೂರಿತವಾಗಿದ್ದುವು. ಡೋರಾಳು ಈ ಲೋಕದವಳಲ್ಲ – ದೇವಲೋಕದವಳು. ಅವಳು ಎಲ್ಲರಿಗಿಂತಲೂ ಮಿಗಿಲಾದವಳು, ಎಂಬ ನನ್ನ ಅಭಿಪ್ರಾಯವನ್ನು ತಪ್ಪೆಂದು ಕೇವಲ ಸಂಶಯದಿಂದ ಚರ್ಚಿಸಿದವರೊಡನೆ ನಾನು ಯುದ್ಧವನ್ನೇ ಮಾಡಲು ತಯಾರಿದ್ದೆ.

ನನ್ನ ಅನುಭವಗಳನ್ನೆಲ್ಲ ಬಾರ್ಕಿಸ್ ಪೆಗಟಿಗೆ ತಿಳಿಸಿದೆನು. ನನ್ನಂಥವರಿಗಲ್ಲದೆ ಇನ್ನು ಯಾರಿಗೆ ತಾನೆ ಮಿ. ಸ್ಪೆನ್ಲೋರವರ ಮಗಳು ಪತ್ನಿಯಾಗಬಲ್ಲಳೆಂದು ಅವಳು (ನನ್ನನ್ನು ಕುರಿತು) ಹೆಮ್ಮೆ ಪಟ್ಟುಕೊಂಡಳು. ಜತೆಯಲ್ಲೇ ಮಿ. ಸ್ಪೆನ್ಲೋರಂಥ ಸಂಬಂಧ ದೊರಕಬಹುದಾದುದಕ್ಕೆ ಸಂತೋಷಪಟ್ಟಳು.

ನನ್ನ ವಕೀಲಿ ವೃತ್ತಿಯ ಸಂಬಂಧವಾಗಿ ನಾನು ಮಿ. ಸ್ಪೆನ್ಲೋರವರ ಸಮಕ್ಷಮದಲ್ಲಿ ಹೆಚ್ಚಾಗಿ ಇರುತ್ತಿದ್ದೆನು. ಈ ವಿಧದ ಒಡನಾಟದಲ್ಲಿ ನಾನು ಮಿ. ಸ್ಪೆನ್ಲೋರವರ ಆಫೀಸು, ಮರ್ಜಿ, ಠೀವಿಗಳನ್ನು ಕಂಡು ಹೆಮ್ಮೆಪಡುತ್ತಿದ್ದೆ. ಬಾರ್ಕಿಸ್ ಉಯಿಲನ್ನು ಜಾರಿಗೆ ತಂದು ಹಣದ ವಿಲೆವಾರಿ ಆದದ್ದೂ ನಮ್ಮ ಸ್ಪೆನ್ಲೋ ಕಂಪೆನಿಯಲ್ಲೇ. ಈ ಸಮಯದಲ್ಲೇ ಮಿ. ಮರ್ಡ್ಸ್ಟನ್ನರನ್ನು ಅನಿರೀಕ್ಷಿತವಾಗಿ ಕಂಡೆನು. ಒಂದು ಪುನರ್ವಿವಾಹದ ಲೈಸೆನ್ಸು ಸಂಬಂಧವಾಗಿ ಅವರು ನಮ್ಮಲ್ಲಿಗೆ ಬಂದಿದ್ದರು. ಈ ಸರ್ತಿ ಅವರು ಮದುವೆಯಾಗುತ್ತಿದ್ದುದೂ ಒಬ್ಬ ವಿಧವೆಯನ್ನೆಂದೂ ಆ ವಿಧವೆಗೂ ಸ್ವಲ್ಪ ಆಸ್ತಿಯಿತ್ತೆಂದೂ ತಿಳಿದೆನು. ಮಿ.ಸ್ಪೆನ್ಲೋರವರು ಇಂಥ ಎಲ್ಲ ವ್ಯವಹಾರಗಳಲ್ಲೂ ಮಿ. ಜಾರ್ಕಿನ್ಸರಿಗಿಂತ ಎಷ್ಟೆಷ್ಟೋ ಕರುಣಾಳುಗಳು – ದಾಕ್ಷಿಣ್ಯವಂತರು. ಬಾರ್ಕಿಸನ ಉಯಿಲಿನ ಬಗ್ಗೆ ಅವರು ಫೀಸು ತೆಗೆದುಕೊಳ್ಳುವಾಗ ಅವರ ಜತೆಗಾರ ಮಿ. ಜಾರ್ಕಿನರ ಕಾಠಿಣ್ಯ, ಕಾರ್ಪಣ್ಯ ಎಷ್ಟಿತ್ತೆಂಬುದರ ಅರಿವು ನನಗೆ ಆಗಿದೆ. ಸಮಾಜವೂ ಸರಕಾರವೂ ಈಗಿರುವಂತೆಯೇ ಇರುವಷ್ಟು ಕಾಲ ವಕೀಲರಾದವರು ಆ ರೀತಿ ಫೀಸು ತೆಗೆದುಕೊಳ್ಳಲೇ ಬೇಕಾಗುತ್ತದೆಂದೂ ಅವರ ಕ್ರಮ ಮರ್ಜಿಗಳೆಲ್ಲ ಆ ರೀತಿ ಇರಲೇಬೇಕೆಂದೂ ಅವರು ತಿಳಿಸಿದ್ದರು. ಅವರ ಅಗಲವಾದ ಮೇಜಿನ ಮೇಲೆ ಬಿದ್ದಿದ್ದ ದಪ್ಪ ದಪ್ಪದ ಪುಸ್ತಕಗಳೂ ರಿಕಾರ್ಡು ಕಟ್ಟುಗಳೂ ಮೊದಲಾದ ಅಮೂಲ್ಯ ವಸ್ತುಗಳ ಎದುರು ಕುಳಿತು ಠೀವಿಯಿಂದ ಅಧಿಕಾರ ಚಲಾಯಿಸುತ್ತಿದ್ದಾಗ ಅವರಷ್ಟು ಬುದ್ಧಿವಂತರೂ ಘನವಂತರೂ ಬೇರೊಬ್ಬರಿಲ್ಲವೆಂದು ನಾನು ತಿಳಿಯುತ್ತಿದ್ದೆನು. ಅಂಥ ಕಟುವಾದ ಕಾನೂನಿನ ಸಮಸ್ಯೆಗಳನ್ನು ಒಳಗೊಂಡ ಪುಸ್ತಕ, ರಿಕಾರ್ಡುಗಳ ಮಧ್ಯೆ ಅವರು ಸಮುದ್ರಮಧ್ಯದ ದೀಪಸ್ತಂಭದಂತೆ ರಾರಾಜಿಸುತ್ತಿದ್ದರು.

ಮಿ. ಸ್ಪೆನ್ಲೋರವರು ಹೀಗೆ ಅನೇಕ ವಿಷಯಗಳನ್ನು ನನಗೆ ತಿಳಿಸುತ್ತಲೂ ಹೇಳಿಕೊಡುತ್ತಲೂ ನನ್ನನ್ನು ಸಾಧಾರಣ ಅವರ ಆಪ್ತನಂತೆ ಮಾಡಿಕೊಂಡಿದ್ದರು. ಒಂದು ದಿನ ಅವರ ಮಗಳ ಜನ್ಮದಿನದ ನೆನಪು ಬಂದು ಆ ದಿನದಲ್ಲಿ ಸಮಾರಂಭವನ್ನು ಏರ್ಪಡಿಸಿ, ನನಗೂ ಆ ಸಮಾರಂಭಕ್ಕೆ ಆಮಂತ್ರಣವಿತ್ತರು. ನನಗೆ ಆಮಂತ್ರಣ ದೊರೆತ ಮೇಲಿನ ನನ್ನ ಮನಸ್ಸಿನ ಭಾವನೆಗಳನ್ನೆಲ್ಲ ವಿವರಿಸುವುದು ಅಸಾಧ್ಯ. ಆದರೂ ಕೆಲವೊಂದು ವಿಷಯಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಕ್ರಯ ಬಾಳುವ ಒಂದು ಅಂಗವಸ್ತ್ರವನ್ನೂ ಹೊಸತಾದ ಒಂದು ಜತೆ ಬೂಟ್ಸುಗಳನ್ನೂ ಒಂದು ಕೈಬುಟ್ಟಿಯಲ್ಲಿ ಡೋರಾಳಿಗೆ ಅರ್ಪಿಸುವುದಕ್ಕಾಗಿ ಬಹು ಸುಂದರವಾದ ಹೂಗೊಂಚಲೊಂದು, ಕೆಲವು ಬಿರುಸು ಬಾಣಗಳೂ ಸ್ವಲ್ಪ ತಿಂಡಿ ಇತ್ಯಾದಿಗಳನ್ನೂ ತೆಗೆದುಕೊಂಡೆನು. ಅಲ್ಲದೆ ಆ ದಿನ ನಾನು ಮಿ. ಸ್ಪೆನ್ಲೋರವರ ಮನೆಗೆ ಹೋಗಲೋಸ್ಕರ ಠೀವಿಯ ಒಂದು ಕುದುರೆಯನ್ನು ಬಾಡಿಗೆಗೆ ತೆಗೆದುಕೊಂಡೆನು.

ಡೋರಾಳ ಜನ್ಮದಿನದ ಬೆಳಗ್ಗೆ ಚೆನ್ನಾಗಿ ದುಸ್ತು ಮಾಡಿ, ಕುದುರೆಯನ್ನೇರಿ ಮಿ. ಸ್ಪೆನ್ಲೋರವರ ನಾರ್ವುಡ್ಡಿನ ಮನೆ ಕಡೆಗೆ ಹೊರಟೆನು. ಪಾದಗಳ ಸೌಂದರ್ಯವನ್ನು ಹೆಚ್ಚಿಸುವುದಕ್ಕಾಗಿ ಅಳತೆಯಲ್ಲಿ ಚಿಕ್ಕದಾಗಿದ್ದ ಬೂಟ್ಸನ್ನು ನಾನು ಧರಿಸಿದ್ದು, ಆ ಬೂಟ್ಸಿನ ಬಾಧೆಯೊಂದಲ್ಲದಿದ್ದರೆ ಆ ಸವಾರಿ ಬಹು ಸೊಗಸಾಗಿತ್ತು. ಕೈದಿಗಳನ್ನೋ ಶತ್ರುಗಳನ್ನೋ ಹಿಂಸಿಸಲು ಪೂರ್ವ ಕಾಲದಲ್ಲಿ ಏರ್ಪಡಿಸಿಕೊಂಡಿದ್ದ ಸಾಧನಗಳಲ್ಲಿ ಒಂದು ಆಗಬಹುದಾದಂಥ ಬೂಟ್ಸುಗಳನ್ನು ಧರಿಸಿದುದರ ವೇದನೆ ಅಷ್ಟೊಂದಿತ್ತು. ಆದರೂ ಆ ವೇದನೆ, ನಾರ್ವುಡ್ಡಿಗೆ ಇದ್ದ ದೂರ ಎಲ್ಲವೂ ಬಹು ಅಲ್ಪವಾಗಿ ತೋರಿ, ನಾನು ಬಹು ಬೇಗನೇ ಮಿ.ಸ್ಪೆನ್ಲೋರವರ ಸ್ಥಳಕ್ಕೆ ತಲುಪಿದೆನು.

ಮಿ.ಸ್ಪೆನ್ಲೋರವರ ಆ ಸುಂದರ ಮಹಲೂ ಆ ಸಿಂಗಾರದ ಹೂದೋಟವೂ ಪ್ರಪಂಚದ ಅತ್ಯಂತ ರಮ್ಯ ಸ್ಥಳಗಳಲ್ಲಿ ಒಂದನೆಯದಾಗಿದ್ದುವು. ನಾನು ಮನೆಗೆ ತಲುಪುವ ಮೊದಲೇ ದೂರದಿಂದಲೇ ಡೋರಾಳನ್ನು ಕಂಡೆನು. ಅವಳನ್ನು ಕಂಡದ್ದರಿಂದ ನನ್ನ ಇರೋಣವನ್ನೇ ಮರೆಯ ತೊಡಗಿದೆ. ಆದರೂ ಸಮಾಜದ ನಿರ್ಬಂಧ, ನಿಯಮಗಳ ಭಯದಿಂದ, ನಾನು ಸೀದಾ ಮನೆಗೆ ಹೋದೆ. ಹೋದವನು ಬಲ ಬದಿಗೆ ತಿರುಗಿದಾಗ ಅಕಸ್ಮಾತ್ತಾಗಿ ಅವಳನ್ನು ಕಂಡವನಂತೆ ನಟಿಸಿ, ಅವಳನ್ನು ಪೂರ್ಣ ನೋಡಿದೆನು.

ಆವರೆಗೆ ನನ್ನನ್ನು ಹಿಂಸಿಸುತ್ತಿದ್ದ ಬೂಟ್ಸುಗಳ ಇರೋಣವೇ ನನಗೆ ಈಗ ಮರೆತು ಹೋಯಿತು. ಡೋರಾಳ ಧ್ಯಾನ, ಅವಳನ್ನು ಏನೆಂದು ಮಾತಾಡಿಸುವುದು, ಹೇಗೆ, ಎಂಬ ಯೋಚನೆಗಳಿಂದ ಕೂಡಿ, ಡೋರಾಳ ಸಾಮೀಪ್ಯವನ್ನೇ ಪಡೆದೆನು.

ಹಸುರೆಲೆಗಳಿಂದ ತುಂಬಿ ಬೆಳೆದಿದ್ದ ವಿಶಾಲ ವೃಕ್ಷದಡಿಯ ತಂಪಿನ ನೆರಳಿನಲ್ಲಿ, ನೀಲಬಣ್ಣದ, ಮೈಗೊಪ್ಪುವ ಲಂಗವನ್ನು ಧರಿಸಿ, ರಕ್ತವರ್ಣದ ಉತ್ತರೀಯವನ್ನು ಹೊದೆದು, ಪುಷ್ಕಳವಾಗಿಯೂ ಮೃದುವಾಗಿಯೂ ಬೆಳೆದು ಚದರಿ ಬರುತ್ತಿದ್ದ ಗುಂಗುರು ತಲೆಗೂದಲನ್ನು ಒತ್ತಿಡುತ್ತಿದ್ದ ಟೊಪ್ಪಿಯನ್ನು ಧರಿಸಿ, ಸುಂದರವಾದ ಹಿನ್ನೆಲೆಯ ಮೇಲೆ ಚಿತ್ರಿಸಿದ್ದ ಒಂದು ಸುಂದರವಾದ ಹೂವಿನಂತೆ, ಡೋರಾ ಒಂದು ಆಸನದ ಮೇಲೆ ಕುಳಿತಿದ್ದಳು – ಕುಳಿತು ಶೋಭಿಸುತ್ತಿದ್ದಳು.

ಮೈಯಲ್ಲಿ ನಡುಗದಿದ್ದರೂ ಮನಸ್ಸಿನಲ್ಲೇ ಭಾವಪರವಶತೆಯಿಂದ ನಡುಗುತ್ತ, ನಾನು ತೆಗೆದುಕೊಂಡು ಹೋಗಿದ್ದ ನಜರನ್ನು ಬಗ್ಗಿ ನಿಂತು ಅವಳಿಗೆ ಸಮರ್ಪಿಸಿದೆ. ನಾನು ಅರ್ಪಿಸಿದ ಹೂಗೊಂಚಲನ್ನು ನೋಡಿ ಸಂತೋಷಿಸುತ್ತಾ ಅವಳು –
"ಬಹು ಚಂದದ ಗೊಂಚಲಲ್ಲವೇ ಮಿ. ಕಾಪರ್ಫೀಲ್ಡ್, ಇದು" ಎಂದು ಕೇಳಿದಳು.

ಡೋರಾಳಿಂದ ಮೂರು ಮೈಲು ದೂರದಲ್ಲಿದ್ದಾಗಲೇ ಅವಳೊಡನೆ ಮಾತಾಡಲು ನಿಶ್ಚೈಸಿಕೊಂಡಿದ್ದ ಪ್ರೇಮಮಯ ವಚನಭಂಡಾರವೇ ಆಗ ನನ್ನಿಂದ ತೊಲಗಿ ಮಾಯವಾಯಿತು. ಅವಳ ಸಮೀಪದಲ್ಲಿ ನಾನು ಪ್ರತ್ಯೇಕ ಒಬ್ಬ ವ್ಯಕ್ತಿಯಾಗಿದ್ದು, ಆಲೋಚಿಸಿ ವರ್ತಿಸುವ ನನ್ನ ವ್ಯಕ್ತಿಯೇ ಕಾಣದೆ ಆಯಿತು. ನಾನೆಂಬುದೇ ಉಳಿಯದೆ ಅಲ್ಲಿದ್ದುದೆಲ್ಲ ಡೋರಾ ಮಾತ್ರವಾಗಿ ಹೋಯಿತು. ನಾ ಕೊಟ್ಟ ಹೂಗಳನ್ನು ಅವಳು ಒಮ್ಮೆ ತನ್ನ ಮೃದು ಕಪೋಲಗಳಿಗೆ ಒತ್ತಿಟ್ಟುಕೊಂಡು ನೋಡಿದಳು. ಅನಂತರ ತನ್ನ ಕೋಮಲ ನಾಸಿಕಕ್ಕೆ ಅಲಂಕಾರವಾಗಿರಿಸಿ ನೋಡಿದಳು. ಅನಂತರ ಅದನ್ನು ಆ ಸುಂದರ ನಾಸಿಕದಡಿ ಹಿಡಿಯುತ್ತಾ ಆಘ್ರಾಣಿಸುತ್ತಾ ಸುವಾಸನೆಯ ಸಂತೋಷದಿಂದ ತುಂಬಿದ ಕಣ್ಣುಗಳಿಂದ ನನ್ನನ್ನು ನೋಡಿದಳು. ಅವಳು ನನ್ನನ್ನು ನೋಡಿದ ಆ ಕಣ್ಣುಗಳನ್ನು ನಾನು ಕಂಡು ನನಗೆ ಆದ ಆನಂದಾತಿಶಯ ಅವರ್ಣನೀಯ. . ಆನಂದಾತಿಶಯದಿಂದ ನನ್ನ ಇರವೇ ನನಗೆ ಮರೆತು ಹೋಯಿತು. ನಾನು ಮೊಣಕಾಲನ್ನೂರಿಕೊಂಡು ಕತ್ತನ್ನು ಬಗ್ಗಿಸಿ, "ನನ್ನನ್ನು ದಯಮಾಡಿ ಈ ಕೂಡಲೇ ಸಂಹರಿಸಿ ನನ್ನ ಈಗಿನ ಆನಂದವು ಬದಲಾಗದಂತೆ ಅನುಗ್ರಹಿಸು ದೇವೀ" ಎಂದು ಹೇಳದಿದ್ದುದು ನನ್ನ ಪುಣ್ಯ! ಹಾಗೆ ಹೇಳಿಬಿಡಬೇಕೆಂದೇ ನನಗೆ ಬಹುವಾಗಿ ತೋರಿತು.

ಆ ಹೂಗೊಂಚಲನ್ನು ಡೋರಾ ತನ್ನ ಜಿಪ್ಪನ ಮೂಗಿಗೂ ಹಿಡಿದಳು. ಜಿಪ್ಪ್ ಅದನ್ನು ಮೂಸಿ ನೋಡಲಿಲ್ಲ. ಅದಕ್ಕಾಗಿ ಅದನ್ನು ಹೊಡೆದಳು. ನಾನೇ ಜಿಪ್ಪನಾಗಿ ಅವಳ ಮೃದು ಹಸ್ತದಿಂದ ಪೆಟ್ಟು ತಿನ್ನಬಹುದಿತ್ತಷ್ಟೆ, ಎಂದು ನಾನು ಜಿಪ್ಪನನ್ನೆ ಮಾತ್ಸರ್ಯದಿಂದ ನೋಡಿದೆನು.

"ಮಿ.ಕಾಪರ್ಫೀಲ್ಡ್, ಮಿಸ್ ಮರ್ಡ್ಸ್ಟನ್ನಳು ಅವಳ ಅಣ್ಣನ ಮದುವೆಗಾಗಿ ರಜೆಯಲ್ಲಿ ಹೋಗಿದ್ದಾಳೆ – ಮೂರು ವಾರಗಳ ಒಳಗೆ ಬರುವ ಹಾಗಿಲ್ಲ. ಆ ಮಾರಿ ಹೋದದ್ದು ಬಹು ಸುಖವಾಯಿತು, ಅಲ್ಲವೇ?" ಎಂದು ಕೇಳಿದಳು ಡೋರಾ. ಈ ವಿಷಯವನ್ನೇ ಮಾತಾಡುತ್ತಾ ಮಿಸ್ ಮರ್ಡ್ಸ್ಟನ್ನಳ ಬದಲಿಗೆ ಬಂದಿದ್ದ ಮಿಸ್ ಜೂಲಿಯಾ ಮಿಲ್ಸಳ ಪರಿಚಯವನ್ನು ಮಾಡಿಕೊಟ್ಟಳು. ಅವಳು ಸಾಧಾರಣ ಇಪ್ಪತ್ತು ವರ್ಷ ಪ್ರಾಯವಾಗಿದ್ದವಳಂತೆ ತೋರುತ್ತಿದ್ದಳು. ಅವಳ ಹೆಚ್ಚಿನ ಪರಿಚಯ ಅನಂತರ – ಕ್ರಮೇಣವಾಗಿ – ಆದದ್ದಾದರೂ ಆಗಿನ ಮೊದಲಿನ ಪರಿಚಯದಲ್ಲೇ ಅವಳು ಮಿಸ್ ಮರ್ಡ್ಸ್ಟನ್ನಳಿಗಿಂತ ಎಷ್ಟೆಷ್ಟೋ ಸೌಮ್ಯ ಸ್ವಭಾವದವಳೆಂದು ತಿಳಿಯಿತು.

ಅನಂತರ ತಿಳಿದು ಬಂದ ಪ್ರಕಾರ, ಅವಳು ಒಬ್ಬ ವಿರಕ್ತೆಯಾಗಿದ್ದಳು. ಅವಳು ಓರ್ವ ಅಪರಿಚಿತನಲ್ಲಿ ತನ್ನ ಪ್ರೇಮವನ್ನು ವಿಶ್ವಾಸನ್ನೂ ಇಟ್ಟು, ಆತನ ವಿಶ್ವಾಸಘಾತದಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಈ ಜನ್ಮದಲ್ಲಿ ತಾನು ಮದುವೆಯಾಗುವುದಿಲ್ಲವಾಗಿ ಪ್ರತಿಜ್ಞೆ ಮಾಡಿದ್ದಳಂತೆ. ಆದರೂ ಪ್ರೇಮದ ಅನುಭವ ಅವಳಿಗೆ ಇದ್ದುದರಿಂದ ನಮ್ಮಲ್ಲಿ ಸಹಾನುಭೂತಿಯುಳ್ಳವಳಾಗಿದ್ದು, ನಮ್ಮ ಸ್ವಾಭಾವಿಕ ಮತ್ತು ಸಾಂಪ್ರದಾಯಿಕ ಪ್ರೇಮ ವಿಕಾಸಕ್ಕೆ ತುಂಬಾ ಸಹಕಾರಿಯಾಗಿದ್ದಳು. ನಾವು ಮೂವರೂ ಕುಳಿತು ಮಾತಾಡುತ್ತಿದ್ದಲ್ಲಿಗೆ ಮಿ. ಸ್ಪೆನ್ಲೋರವರು ಬಂದು ವನಭೋಜನಕ್ಕೆ ಹೋಗಲು ನಾವು ಸಿದ್ಧರಾಗಬೇಕೆಂದು ತಿಳಿಸಿದರು. ನಮಗೆ ವಿಶೇಷ ಸಿದ್ಧತೆಯೇನೂ ಅಗತ್ಯವಿಲ್ಲದಿದ್ದುದರಿಂದ ನಾವು ಆ ಕೂಡಲೇ ಹೊರಟೆವು.

ನಾವು ಹೋಗಬೇಕಾಗಿದ್ದ ಸ್ಥಳ ಮಿ. ಸ್ಪೆನ್ಲೋರವರ ಬಂಗಲೆಯಿಂದ ಕೆಲವು ಮೈಲು ದೂರದ ಒಂದು ಸಾರ್ವಜನಿಕ ವಿಹಾರ ಕ್ಷೇತ್ರವಾಗಿತ್ತು. ಮಿ. ಸ್ಪೆನ್ಲೋ, ಡೋರಾ ಮತ್ತು ಮಿಸ್ ಜೂಲಿಯಾ ಮಿಲ್ಸರು ಒಂದು ಕುದುರೆ ಸಾರೋಟಿನಲ್ಲಿ ಕುಳಿತು ಹೊರಟರು. ಮಿ.ಸ್ಪೆನ್ಲೋರವರು ಮುಂದೆ ಮುಖ ಹಾಕಿ ಸಾರೋಟಿನ ಮುಂಭಾಗದಲ್ಲೂ ಹಿಮ್ಮುಖವಾಗಿ ಹಿಂಬದಿಯಲ್ಲಿ ಡೋರಾಳೂ, ಮಿಸ್ ಮಿಲ್ಸಳೂ ಕುಳಿತಿದ್ದರು. ನಾನು ನನ್ನ ಕುದುರೆಯಲ್ಲಿ ಕುಳಿತು ಸಾರೋಟನ್ನು ಹಿಂಬಾಲಿಸಿ ಹೋದೆನು. ನಮ್ಮ ವನಭೋಜನದ ತಿಂಡಿ ತಿನಸು, ಸಂಗೀತದ ಸಾಹಿತ್ಯ ಮೊದಲಾದುವೆಲ್ಲ ಸಾರೋಟಿನಲ್ಲಿದ್ದುವು. ನಾನು ಡೋರಾಳನ್ನು ನೋಡಿಕೊಂಡೇ ಹಿಂಬಾಲಿಸಿದೆನು. ಹಾಗೊಂದು ನೋಡಿಯೂ ದಣಿಯದೆ, ನನ್ನ ಕುದುರೆಯನ್ನೇ ದಾಟಿ, ಆ ಸಾರೋಟಿಗೇ ಹಾರೋಣವೆಂಬಂತೆಯೇ ನನಗೆ ತೋರುತ್ತಿತ್ತು. ಅಂದಿನ ನನ್ನ ಕುದುರೆ ಸವಾರಿಯನ್ನು ನಾನೆಂದಿಗೂ ಮರೆಯೆನು – ಅಂಥ ಸವಾರಿಯನ್ನು ನಾನು ಇನ್ನೆಂದಿಗೂ ಮಾಡಲಾರೆನು. ಸವಾರಿಯ ಸಂತೋಷದಲ್ಲಿ ದಾರಿಯಲ್ಲಿ ಏಳುತ್ತಿದ್ದ ಧೂಳನ್ನೂ ಗ್ರಹಿಸಲಿಲ್ಲ. ರಸ್ತೆಯಲ್ಲಿ ಏಳುತ್ತಿದ್ದ ಧೂಳನ್ನು ತೋರಿಸಿ ಮಿ. ಸ್ಪೆನ್ಲೋರವರು ನಾನು ಸ್ವಲ್ಪ ಮುಂದೋ ಅಥವಾ ಇನ್ನು ಸ್ವಲ್ಪ ಹಿಂದೋ ಬಂದರೆ ಉತ್ತಮವಲ್ಲವೇ ಎಂದು ಬುದ್ಧಿವಾದ ಹೇಳಿದರು. ನಾನು ಧೂಳನ್ನು ಗಮನಿಸದಿದ್ದಂತೆಯೇ ಅವರ ಮಾತನ್ನು ಗಮನಿಸದೆ, ಸಾರೋಟನ್ನು ಹಿಂಬಾಲಿಸಿದೆನು. ನನ್ನ ದೃಷ್ಟಿಯಲ್ಲಿ ಸ್ಥಿರವಾಗಿ ಗೋಚರವಾಗಿದ್ದುದು ಡೋರಾಳೂ ಮತ್ತು ಅವಳ ಸುತ್ತಲೂ ಹರಡಿ ನನ್ನ ಮನಸ್ಸಿಗೂ ದೃಷ್ಟಿಗೂ ಅತುಳವಾದ ಆನಂದವನ್ನು ಕೊಡುತ್ತಿದ್ದ ಪ್ರೇಮದ ಪ್ರಭಾವಳಿ ಮಾತ್ರ!

ಕೊನೆಗೆ ನಾವು ಆ ಸ್ಥಳಕ್ಕೆ ತಲುಪಿದೆವು. ಆ ಸ್ಥಳ ಯಾವುದೆಂದು ನಾನು ಈಗ ಗುರುತಿಸಿ ಹೇಳಲಾರೆನು – ಆ ದಿನ ನನಗೆ ಆ ಸ್ಥಳ ಈ ಲೋಕದ್ದಾಗಿರಲಿಲ್ಲ. ಅರೆಬಿಯನ್ ನೈಟ್ಸಿನ ದಂತಕಥೆಗಳಲ್ಲಿ ಮಂತ್ರವಾದಿಯಿಂದ ನಿರ್ಮಿತವಾದ ಭವ್ಯ ಕ್ಷೇತ್ರ ಮಾತ್ರವಾಗಿತ್ತು. ನಾವು ಕುಳಿತ ಸ್ಥಳದಿಂದ ನೋಡಿದರೆ ನಮ್ಮ ದೃಷ್ಟಿ ತಲುಪುವವರೆಗೆ ಮೈದಾನ ಮತ್ತು ಚಿಕ್ಕ ಗುಡ್ಡಗಳ ಹಸುರು ದೃಶ್ಯಗಳನ್ನು ಕಾಣಬಹುದಿತ್ತು. ಆ ಪ್ರದೇಶವೆಲ್ಲಾ ಹಸುರು ಕಂಬಳಿಯಿಂದ ಆಚ್ಛಾದಿತವಾಗಿದ್ದಂತೆ ಬೆಳೆದಿದ್ದ ಹುಲ್ಲಿನಿಂದ ಹಸುರಾಗಿತ್ತು. ಬೆಟ್ಟದ ಇಳಿಜಾರಿನಲ್ಲಿ ಸುಂದರವಾದ ಮರದ ತೋಪುಗಳೂ ಕಂಡು ಬರುತ್ತಿದ್ದುವು.

ನಾವು ಹೋದ ಸ್ಥಳದಲ್ಲಿ ನಮ್ಮನ್ನೇ ಎದುರು ನೋಡುತ್ತಿದ್ದ ಕೆಲವು ಗೃಹಸ್ಥರೂ ಗೃಹಿಣಿಯರೂ ಕುಳಿತಿದ್ದರು. ಅವರೆಲ್ಲರೂ ನಮ್ಮ ಅಂದಿನ ಔತಣಕ್ಕೆ ಆಮಂತ್ರಿತರಾಗಿ ಬಂದಿದ್ದರು. ನಾವೆಲ್ಲಾ ಚೊಕ್ಕಟವಾದ ಮತ್ತು ಅನುಕೂಲ ತೋರಿದ ಒಂದು ಸ್ಥಳದಲ್ಲಿ ಭೋಜನಕ್ಕೆ ಕುಳಿತೆವು. ನಾವೂ ಬಂದ ಇತರರೂ ಸಮಾರಂಭ ನಮ್ಮೆಲ್ಲರದೂ ಎಂಬಂತೆ ತಿಂಡಿ ತಿನಿಸುಗಳನ್ನು ಬಡಿಸುವುದರಲ್ಲಿ, ಹಂಚುವುದರಲ್ಲಿ ಸಹಕರಿಸಿದೆವು. ಆದರೆ, ಅಲ್ಲಿಗೆ ಬಂದಿದ್ದವರ ಪೈಕಿ ಕೆಂಪು ಮೀಸೆಯ ಗೃಹಸ್ಥನೊಬ್ಬನು ನಮ್ಮ ಊಟ, ಮಾತು, ಹಾಸ್ಯ – ಎಲ್ಲದರಲ್ಲೂ ನನಗಿಂತ ಹಿರಿಯವನಂತೆ ವರ್ತಿಸಿ, ಆ ಕಾರಣವಾಗಿ ನನ್ನನ್ನು ಹಿಂದಿರಿಸಿ, ನನಗೆ ಬಹುವಾದ ಹಿಂಸೆಯನ್ನು ಕೊಡುತ್ತಿದ್ದನು. ಹಣ್ಣುಗಳ ಸಾಲಡ್ಡನ್ನು – ತಾನು ಅದರ ತಯಾರಿಯಲ್ಲಿ ಬಹು ನುರಿತವನೆಂದಂದುಕೊಂಡು, ತಾನೇ ತಯಾರಿಸಿ ನಮಗೆಲ್ಲರಿಗೂ ಬಡಿಸಿದನು. ನಾನು ಅದನ್ನು ತುದಿನಾಲಿಗೆಯಲ್ಲೂ ಮುಟ್ಟಲಿಲ್ಲ. ವೈನ್ ಹಂಚುವುದರಲ್ಲೂ ಹಣ್ಣು ಹಂಚುವುದರಲ್ಲೂ ಅವನೇ ಕೈ ಹಾಕುತ್ತಾ ಈ ರೀತಿ ಎಲ್ಲಾ ಕಡೆ – ಡೋರಾಳ ಸಮೀಪದಲ್ಲೂ – ಎಲ್ಲದರಲ್ಲೂ ಬುದ್ಧಿವಂತನಾಗಿ ಮೆರೆದನಲ್ಲದೆ (ಈಗ ಬರೆಯುವಾಗಲೂ ನನಗೆ ರೋಷವೇರುತ್ತದೆ!), ಅವನು ಡೋರಾಳ ಕಾಲು ಬುಡದಲ್ಲೇ ಒಂದು ತಟ್ಟೆ ತುಂಬ ತಿಂಡಿಯನ್ನು ಹಾಕಿಕೊಂಡು ಅವಳೊಡನೆ ಮಾತಾಡುತ್ತಾ ಕುಳಿತನು. ಆಗಲಂತೂ ನನಗೆ ಆದ ಹಿಂಸೆ, ಅವನ ಮೇಲಿನ ದ್ವೇಷ ವರ್ಣಿಸಲಸಾಧ್ಯ. ಆ ಕೆಮ್ಮೀಸೆಯವನನ್ನು ನನ್ನ ಆಜನ್ಮ ವೈರಿಯೆಂದೇ ನಿರ್ಧರಿಸಿದೆನು.

ನಾನು ಒಬ್ಬ ನೇರಳೆ ಬಣ್ಣದ ಲಂಗ ಧರಿಸಿದ್ದ, ಹೊಳೆಯುವ ಕಣ್ಣುಗಳೇ ಪ್ರಧಾನವಾಗಿ ಮುಖದಲ್ಲಿ ರಂಜಿಸಿ ತೋರಿಬರುತ್ತಿದ್ದ, ಮಿಸ್ ಕ್ಕಿಟಲ್ಸ್ ಎಂಬ ಹುಡುಗಿಯ ಜತೆಯಲ್ಲಿ ಕುಳಿತು ಊಟಮಾಡಿದೆ, ವೈನ್ ಕುಡಿದೆ, ಹಾಡಿದೆ, ಒಂದು ವಿಧದಲ್ಲಿ ಸಂತೋಷದಿಂದ ಹಾರಾಡಿದೆ – ಸ್ವಲ್ಪ ಉದ್ವೇಗದಿಂದಲೇ ಎಲ್ಲವನ್ನೂ ಮಾಡಿದೆ. ಆದರೆ ಈ ಎಲ್ಲಾ ಕಾರ್ಯಗಳಲ್ಲೂ ನನ್ನ ಅಂತರಂಗದಲ್ಲಿ ಮಾತ್ರ ಸದಾ ಜನ್ನ ಜತೆಯಲ್ಲಿದ್ದುದು ಡೋರಾಳೇ ಆಗಿದ್ದಳು. ನಾನು ವೈನ್ ಕುಡಿದಾಗಲೆಲ್ಲ ಡೋರಾಳ ಆರೋಗ್ಯವರ್ಧನೆಯನ್ನು ಬಯಸಿಯೇ ಕುಡಿದೆನು.

ಊಟ ಮುಗಿದನಂತರ ನಾವು ಅಲ್ಲೇ ಸ್ವಲ್ಪ ದೂರ ಬೇರೆ ಬೇರೆ ಚದರಿ ತಿರುಗಾಡಿದೆವು. ನಾನೊಬ್ಬನೇ ಇದ್ದ ಸ್ಥಳಕ್ಕೆ ಡೋರಾಳೂ ಮಿಸ್ ಜೂಲಿಯಾ ಮಿಲ್ಸಳೂ ಬಂದರು. ಮಿಸ್ ಮಿಲ್ಸ್ ನನ್ನನ್ನು ನೋಡಿ –

"ಮಿ. ಕಾಪರ್ಫೀಲ್ಡ್, ಏನು, ಸ್ವಲ್ಪ ಬೇಸರದಲ್ಲಿರುವಂತೆ ತೋರುತ್ತೀರಿ" ಅಂದಳು.

"ಇಲ್ಲ ಸಂತೋಷವಾಗಿಯೇ ಇದ್ದೇನೆ" ಎಂದು ಉತ್ತರವಿತ್ತೆ.

"ನಿಮ್ಮ ಹಾಗೆಯೇ ಡೋರಾಳೂ ದುಃಖದಲ್ಲಿರುವಂತೆ ತೋರುತ್ತಾಳೆ" ಅಂದಳು ಮಿಸ್ ಮಿಲ್ಸ್.

"ಇಲ್ಲ" ಅಂದಳು ಡೋರಾ.

"ಹಾಗನ್ನಬಾರದು – ನೀವಿಬ್ಬರೂ ಎಳೆಯ ಪ್ರಾಯದವರು, ಅನುಭವವಿಲ್ಲದವರು" ಎಂದು ಹೇಳಿ, ಹಿಂದಿನ ಕಾಲದ ಅವಳ ಪ್ರೇಮಮಯ ಅನುಭವಗಳನ್ನು ನೆನಸಿಕೊಂಡು, ಅವಳ ಅನುಭವವನ್ನು ಲೋಕಕಲ್ಯಾಣಕ್ಕಾಗಿ ಜ್ಞಾನ ವೃದ್ಧೆಯಾದ ತಾನು ಒದಗಿಸುವುದು ಕರ್ತವ್ಯವೆಂದು, ಮಾತನ್ನು ಮುಂದುವರಿಸುತ್ತಾ –
"ಈ ರೀತಿ ಮನವನ್ನು ಮರೆಮಾಚಿ ಹೃದಯವನ್ನು ಹಿಂಸಿಸಿಕೊಳ್ಳಬಾರದು. ಅರಳಲಿರುವ ಮೊಗ್ಗನ್ನು ಹೂವಾಗಲು ಬಿಡಬೇಕು. ಮೊಗ್ಗನ್ನು ಹಿಸುಕಿದರೆ ಹೂವಾಗದೆ ಉದುರುವುದು. ತಿಳಿನೀರಿನ ಒರತೆಯನ್ನು ಕೆಸರೆರಚಿ ಮುಚ್ಚದಿರಿ. ಮರುಭೂಮಿಯ ದಾಹದಲ್ಲಿ ದಣಿವಾರಿಸುವ ತಟಾಕವನ್ನು ಅಲಕ್ಷಿಸಬಾರದು. ನಿಮಗೆ ದೈವದತ್ತವಾಗಿ ಸ್ಫುರಿಸುವ ಪ್ರೇಮಭಾವವನ್ನು ವೃದ್ಧಿಸಿರಿ, ಅದರಿಂದ ಆನಂದಿಸಿರಿ, ಆನಂದದಿಂದ ಬಾಳಿರಿ. ಈವರೆಗೆ ಸಂದರ್ಭವಶದಿಂದ ಬೇರೆ ಬೇರೆಯಾಗಿದ್ದ ನೀವಿಬ್ಬರು ಈಗಲಾದರೂ ಕೂಡಿ ಆನಂದಿಸಿರಿ" ಎಂದು ಹೇಳಿ, ನಮ್ಮ ಜತೆಯನ್ನು ಬಿಟ್ಟು ಬೇರೆ ಕಡೆಗೆ ಹೊರಟಳು.

ಮಿಸ್ ಮಿಲ್ಸಳ ಪ್ರೇಮಾನುಭವವನ್ನು ಹೇಳುವಾಗ ಪದ್ಯರೂಪದಲ್ಲೋ ಸಾಹಿತ್ಯ ರೂಪದಲ್ಲೋ ಹೇಳುವ ಕ್ರಮ ಅವಳದು. ಅವಳಂಥ ಪರೋಪಕಾರಿ, ದೈವಿಕಶಕ್ತಿ ಸಂಪನ್ನೆ, ಮತ್ತೊರ್ವಳಿಲ್ಲವೆಂದು ತಿಳಿದೆ. ಡೋರಾಳೂ ನಾನೂ ಮಾತ್ರ ಅಲ್ಲಿ ಕುಳಿತಾಗ ನನಗೆ ಆದ ಅನುಭವವನ್ನು ವರ್ಣಿಸುವುದು ಅಸಾಧ್ಯ. ಪ್ರಥಮವಾಗಿ ಮರುಭೂಮಿಯ ಬಿಸಿಲಿನ ತಾಪದಂಥ ತಾಪವೇ ನನ್ನ ಪಾಲಿಗೆ ಬಂತು. ಡೋರಾಳ ಹಸ್ತವನ್ನು ಹಿಡಿದು ಮರ್ಯಾದೆ ಪೂರ್ವಕವಾಗಿ ಮುತ್ತಿಟ್ಟೆನು. ನಮ್ಮ ಪ್ರೇಮಪಥದಲ್ಲಿ ಆಚಾರ್ಯಸ್ವರೂಪಿಣಿಯಾಗಿ ಲಭಿಸಿದ್ದ ಮಿಸ್ ಜೂಲಿಯಾ ಮಿಲ್ಸಳಿಗೂ ಇದೇ ಕ್ರಮದ ಮರ್ಯಾದೆಯಿತ್ತೆನು. ಅನಂತರ ನಾನು ಡೋರಾಳ ಕೈಹಿಡಿದುಕೊಂಡು ಸೀದಾ ಸ್ವರ್ಗಕ್ಕೇ ತಲುಪಿದೆನು. ನಾವು ಇಬ್ಬರೇ ಜತೆಯಾಗಿಯೂ ತಿರುಗಾಡಿದೆವು, ಮಾತಾಡಿದೆವು, ನಕ್ಕೆವು – ಅಂತೂ ನಾವು ಇದ್ದುದು ಏಳನೇ ಸ್ವರ್ಗದಲ್ಲಿ!

ಇಷ್ಟರಲ್ಲೇ ಯಾರೋ ಡೋರಾಳನ್ನು ಕರೆದ ಹಾಗೆ ಕೇಳಿಸಿತು. ನಾವು ಅತ್ತ ಕಡೆ ಹೋದೆವು. ನಾವೆಲ್ಲರೂ ಒಟ್ಟು ಸೇರಿದ ಕೂಡಲೇ ಅಲ್ಲಿದ್ದವರು ಡೋರಾಳು ಪದ ಹಾಡಬೇಕೆಂದು ಒತ್ತಾಯಿಸಿದರು. ಹಾಡಲು ಜತೆಗೆ ಬೇಕಾಗಿದ್ದ ಗಿಟಾರ್ ವಾದ್ಯವು ಸಾರೋಟಿನಲ್ಲೇ ಉಳಿದದ್ದನ್ನು ತಿಳಿದು ಅದನ್ನು ತಾನು ತರುವುದಾಗಿ ಕೆಮ್ಮೀಸೆಯವನು ಹೊರಟನು. ನಾನಲ್ಲದೆ ಇತರರಿಗೆ ಅದು ಸರಿಯಾಗಿ ಸಿಕ್ಕಲಾರದೆಂದು ಡೋರಾಳೇ ಆಗ ನುಡಿದಳು. ಡೋರಾಳ ಮುಖದಿಂದಲೇ ಹೊರಟ ನನ್ನನ್ನು ಕುರಿತಾದ ಇಂಥ ಅಮೋಘ ಪ್ರಾಶಸ್ತ್ಯ ನನಗೆ ಸಿಕ್ಕಿದ ಮೇಲೆ ನನ್ನ ಕಾರ್ಯ ಕೇಳಬೇಕೇ? ಗಿಟಾರನ್ನು ತರಲು ನಾನು ಹೊರಟೆನು. ಅದು ಇದ್ದ ಸ್ಥಳ ನನಗೆ ಗೊತ್ತಿತ್ತು. ಡೋರಾಳ ದೃಷ್ಟಿಯಲ್ಲಿ ನಾನು ಮುಖ್ಯನಾದೆ. (ನನ್ನ ದೃಷ್ಟಿಯಲ್ಲಿ ಕೆಮ್ಮೀಸೆಯವನು ಇಷ್ಟರಲ್ಲೇ ಸತ್ತು ಮೂರು ದಿನಗಳಾಗಿದ್ದುವು!) ಗಿಟಾರಿನ ಪೆಟ್ಟಿಗೆಯ ಬಾಗಿಲನ್ನು ತೆರೆದದ್ದೂ ಗಿಟಾರನ್ನು ಡೋರಾಳ ಕೈಗೆ ಒಪ್ಪಿಸಿದ್ದೂ ನಾನು. ಡೋರಾಳ ಕರವಸ್ತ್ರ ಮತ್ತು ಕೈಚೀಲಗಳನ್ನು ಅವಳ ಅನುಕೂಲಕ್ಕಾಗಿ ಹಿಡಿದುಕೊಂಡು, ಮುಡಿಪನ್ನು ಕಾದು ಕುಳಿತಂತೆ ಅವಳನ್ನೇ ನೋಡುತ್ತಾ ಸಮೀಪದಲ್ಲಿ ಕುಳಿತ ಭಾಗ್ಯಶಾಲಿ ನಾನು. ಅವಳು ಹಾಡಿದ್ದು ನನಗಾಗಿ, ಅವಳ ಮಧುರಗಾನದ ಭಾವನೆಗಳನ್ನು ಸರಿಯಾಗಿ ಅರ್ಥಮಾಡಿದವನೂ ನಾನೊಬ್ಬ ಮಾತ್ರ. ಅಲ್ಲಿ ಯಾರೂ ಇದ್ದಿರಬಹುದು, ಯಾರೂ ಸಂಗೀತವನ್ನು ಕೇಳಿರಬಹುದು. ಆದರೆ ಅವಳ ಇಂಪಾದ ಸ್ವರ, ಸಂಗೀತ, ಸುಂದರ ಸ್ವರೂಪಗಳನ್ನು ನನ್ನ ಕಿವಿಗಳಿಂದ ಕೇಳಿ, ನನ್ನ ಕಣ್ಣುಗಳಿಂದ ನೋಡಿ, ನಾನು ತಿಳಿದಷ್ಟು ಇನ್ನು ಯಾರೂ ತಿಳಿಯಲಿಲ್ಲ.

ಡೋರಾಳು ಹಾಡಿದನಂತರ ಮಿಸ್ ಜೂಲಿಯಾ ಮಿಲ್ಸ್ ಹಾಡಿದಳು: 'ಪ್ರೇಮಮಯ ನಾದಾ । ಜ್ಞಾಪಕದ ಕಂದರದಿ । ತುಸ ಕೇಳಿ ಅಡಗೀ' ಎಂಬ ಪದವನ್ನು ಸಾಧಾರಣ ನೂರು ವರ್ಷದ ವಿರಕ್ತಳಂತೆ ಹಾಡಿದಳು. ಸಂಗೀತದ ನಂತರ ಚಹಾ ಸೇವಿಸಿದ್ದಾಯಿತು, ವೈನ್ ಕುಡಿದದ್ದಾಯಿತು. ಕೊನೆಗೆ ಅಲ್ಲಿಂದ ಹೊರಟೆವು. ಮಿ. ಸ್ಪೆನ್ಲೋರವರು ಸಾರೋಟಿನ ಒಂದು ಕರೆಯಲ್ಲಿ ಅಮಲು ಏರಿ ಮಲಗಿದ್ದರು. ಮಿಸ್ ಮಿಲ್ಸಳು ಸಾರೋಟಿನ ಮುಂಭಾಗದಲ್ಲಿ, ಮುಂದುಗಡೆಗೆ ಮುಖ ಹಾಕಿ ಕುಳಿತಳು. ಡೋರಾಳು ಹಿಂಬದಿ ಕುಳಿತು, ಹಿಂಬಾಲಿಸಿ ಬರುತ್ತಿದ್ದ ನನ್ನನ್ನೇ ಅರೆನಾಚಿಕೆಯಿಂದ ನೋಡುತ್ತಿದ್ದಳು. ಮಿ.ಸ್ಪೆನ್ಲೋರವರು ಕುಡಿದಿದ್ದ ವೈನಿನ ದ್ರಾಕ್ಷಿ ಬೆಳೆದಿದ್ದ ಮಣ್ಣಿಗೂ ದ್ರಾಕ್ಷಿಯನ್ನು ಹಣ್ಣಾಗಿಸಿದ ಬಿಸಿಲಿಗೂ ವೈನಿಗೆ ಅಮಲು ಕೂಡಿಸಿಟ್ಟ ವ್ಯಾಪಾರಿಗೂ ನನ್ನ ವಂದನೆಗಳನ್ನು ನಾನು ಅರ್ಪಿಸುತ್ತಾ ಸಾರೋಟನ್ನು ಹಿಂಬಾಲಿಸಿದೆನು. ನಾವು ರಾತ್ರಿಯಾಗುವ ಮೊದಲೇ ನಾರ್ವುಡ್ಡಿಗೆ ತಲುಪಿದೆವು. ನಾನು ಆ ರಾತ್ರಿ ಅಲ್ಲೇ ಇದ್ದೆ.

ಮರುದಿನ ಬೆಳಗ್ಗೆ ನಾನು ನನ್ನ ಮನೆಗೆಂದು ಹೊರಡುವ ಮೊದಲು ಮಿಸ್ ಜೂಲಿಯಾ ಮಿಲ್ಸಳನ್ನು ತನ್ನ ಮನೆಗೆ ಡೋರಾಳು ಬಂದು ಒಂದೆರಡು ದಿನ ಅಲ್ಲೇ ಇದ್ದು ಬರುವುದಾಗಿ ತಿಳಿಸಿದಳು. ಅಷ್ಟು ಅಲ್ಲದೆ, ನಾನು ಅವಳ ಮನೆಗೆ ಹೋದರೆ ಅವಳ ತಂದೆಯವರು ತುಂಬಾ ಸಂತೋಷಪಡುವರೆಂದೂ ತಿಳಿಸುತ್ತಾ ಡೋರಾ ಅವಳ ಮನೆಯಲ್ಲಿರುವ ದಿನಗಳಲ್ಲಿ ಅಲ್ಲಿಗೆ ಹೋಗುವಂತೆ ನನಗೆ ಆಮಂತ್ರಣವನ್ನಿತ್ತಳು. ಅನಂತರ ನಾನು ನನ್ನ ಮನೆಗೆ ಬಂದೆ. ಡೋರಾಳ ಸಮೀಪದಲ್ಲಿ ಕಳೆದಿದ್ದ ಹಿಂದಿನ ದಿನವನ್ನು ನೂರಾರು ಸರ್ತಿ ನೆನೆನೆನೆದು ಸಂತೋಷಪಟ್ಟೆನು.

ಮಿಸ್ ಜೂಲಿಯಾ ಮಿಲ್ಸ್ ಹೇಳಿದ ದಿನವೇ ನಾನು ಅವಳ ಮನೆಗೆ ಹೋದೆನು. ಅಲ್ಲಿ ಆ ದಿನ ಅವಳ ತಂದೆ ಮನೆಯಲ್ಲಿರಲಿಲ್ಲ. ಅದು ನಮಗೆ ತುಂಬಾ ಅನುಕೂಲವೇ ಆಯ್ತು. ನನ್ನನ್ನು ಮದುವೆಯಾಗುವ ವಿಷಯದವರೆಗೂ ಡೋರಾಳೊಡನೆ ಈ ದಿನ ಮಾತಾಡುವುದೆಂದು ನಿಶ್ಚೈಸಿಕೊಂಡಿದ್ದೆ ಮತ್ತೂ ಮಾತಾಡುವುದು ಹೇಗೆಂಬುದನ್ನೆಲ್ಲ ಮೊದಲೇ ನಿಶ್ಚೈಸಿಕೊಂಡಿದ್ದೆ.

ನಾನು ಅಲ್ಲಿ ಹೋದಾಗ ಡೋರಾಳು ಒಂದು ಸುಸಜ್ಜಿತವಾದ ಕೋಣೆಯಲ್ಲಿ ಕುಳಿತು ಹೂವಿನ ಗೊಂಚಲ ಚಿತ್ರ ಒಂದನ್ನು ಬರೆಯುತ್ತಿದ್ದಳು. ಚಿತ್ರದ ಗೊಂಚಲು ನಾನು ಅವಳಿಗೆ ನಜರಾಗಿ ಒಪ್ಪಿಸಿದ್ದ ಗೊಂಚಲನ್ನು ಸ್ವಲ್ಪ ಮಟ್ಟಿಗೆ ಹೋಲುತ್ತಿತ್ತು. ಡೋರಾಳನ್ನು ಕಂಡಿದ್ದ ಕ್ರಮ, ಸಂದರ್ಭ, ಎಲ್ಲ ಒಂದು ಶುಭ ಸೂಚನೆಯೆಂದು ಸಂತೋಷಪಟ್ಟೆ. ನಾನು ಮೊದಲು ಮಾತಾಡಬೇಕೇ ಅವಳು ನನ್ನನ್ನು ನೋಡಿದ ಮೇಲೆ ಮಾತಾಡಬೇಕೇ ಎಂದಾಲೋಚಿಸಿ ಮುಂದುವರಿಯುವುದರ ಮೊದಲು, ಡೋರಾಳೇ ನನ್ನನ್ನು ನೋಡಿ, ನಗುಮೊಗದಿಂದ –

"ಮೊನ್ನೆ ನಿನ್ನ ಕುದುರೆಗೆ ತುಂಬಾ ಆಯಾಸವಾಗಿರಬೇಕಲ್ಲವೇ?" ಎಂದು, ಆ ದಿನದ ಸಂತೋಷದ ಕುದುರೆ ಸವಾರಿಯನ್ನು ನೆನೆಸಿ ಕೇಳಿದಳು. ಅವಳ ದಿವ್ಯ ಮುಖವನ್ನು ನೋಡಿ, ಅವಳ ಸ್ವರ ಕೇಳಿದೊಡನೆ, ಆಗಲೇ ನನ್ನ ಹೃದಯವನ್ನು ಅವಳೆದುರು ಬಿಚ್ಚಿಡಬೇಕೆಂದು ಉದ್ದೇಶಿಸಿ ನಾನಂದೆ –

"ಸ್ವಲ್ಪ ಶ್ರಮವಾಗಿರಬಹುದು. ಶ್ರಮವನ್ನು ಶ್ರಮ ಮಾಡತಕ್ಕ ವಸ್ತು ವಿಶೇಷವು ಅದರ ಪಾಲಿಗೆ ಇರಲಿಲ್ಲ ತಾನೆ!"

ಡೋರಾಳ ಸರಳ ಮುಖದಲ್ಲಿ ನಾನಂದ ಮಾತಿನ ಅರ್ಥ ಆದಂತೆ ತೋರಲಿಲ್ಲ. ಕೇವಲ ಹಸುಗೂಸಿನ ಸಂಶಯದಂತೆ ಅವಳು ಮುಖದಲ್ಲಿ ಸಂಶಯವನ್ನು ಸೂಚಿಸುತ್ತಾ –

"ಆ ಹೊತ್ತು ಅದಕ್ಕೆ ಹುರುಳಿ ಕೊಟ್ಟಿರಲಿಲ್ಲವೇನು?" ಎಂದು ಕೇಳಿದಳು.

ಡೋರಾಳ ಈ ವಿಧದ ಎಳೆತನವನ್ನು ಕಂಡು ಇಂದು ಯಾವ ಪ್ರಸ್ತಾಪವೂ ಬೇಡವೆಂದೆನಿಸಿತು. ಆದರೂ ನನ್ನ ಮನಸ್ಸು ತಳಮಳವಾಗಿದ್ದುದರಿಂದ ಮಾತು ಮುಂದುವರಿಸಿ ಹೋಯಿತು –

"ಕುದುರೆ ಮಟ್ಟಿಗೆ, ಹುರುಳಿ ಕೊಟ್ಟಾಗಿತ್ತು. ನನ್ನ ಶ್ರಮ ಪರಿಹಾರಕ್ಕೆ ನಿನ್ನ ದಿವ್ಯ ಮೂರ್ತಿ ನನ್ನೆದುರು ಇದ್ದಂತೆ, ಕುದುರೆಗೆ ಯಾವ ವಿಧದ ಆಕರ್ಷಣವೂ ಇರಲಿಲ್ಲವೆಂದು ಮಾತ್ರ ನಾನಂದದ್ದು" ಎಂದು ಅಂದೆನು.

"ಇರಬಹುದು, ಆದರೆ ನೀನು ಮಿಸ್ ಸ್ಕಿಟಲ್ಸಳ ಹತ್ತಿರ ಕುಳಿತುಕೊಂಡಿದ್ದಾಗ ನನ್ನನ್ನು ಕುರಿತಾದ ಸಂತೋಷ ಎಲ್ಲಿ ಹೋಗಿತ್ತು? ನಿನಗೆ ಮನಬಂದಂತೆ ವರ್ತಿಸುವ ಹಕ್ಕೇನೋ ಇದೆ, ಆದರೆ…" ಎಂದು ಮಾತ್ರ ಹೇಳಿ, ನಾನು ಮಿಸ್ ಸ್ಕಿಟಲ್ಸಳ ಹತ್ತಿರ ಕುಳಿತಿದ್ದುದರ ಬೇಸರದಿಂದ, ಮುಖ ತಗ್ಗಿಸಿ, ಜಿಪ್ಪನನ್ನು ಕರೆದಳು.

ಡೋರಾಳು ಇಷ್ಟು ಹೇಳಿ ಪೂರೈಸುವಷ್ಟರಲ್ಲೇ ನಾನು ಹಾಗೆ ವರ್ತಿಸಿದ್ದು ಹೇಗೆಂಬುದನ್ನು ತರ್ಕಬದ್ಧವಾಗಿ ಹೇಳಲಾರೆನು. ಆದರೆ ನಾನು ಡೋರಾಳನ್ನು ಹಿಡಿದು ಎತ್ತಿಬಿಟ್ಟೆನು, ಏನೇನೋ ಮಾತಾಡಿದೆನು. ಆ ಶಬ್ದಗಳನ್ನೆಲ್ಲ ಹೇಳದಿರುವುದೇ ಲೇಸೆಂದು ತೋರುತ್ತದೆ. ಅವಳಿಲ್ಲದಿದ್ದರೆ ನಾನು ಬದುಕಿರಲಾರೆ. ಅವಳು ನನ್ನ ಆರಾಧ್ಯ ಪರಮಪೂಜ್ಯ ದೇವತೆ. ನನ್ನ ಜೀವನದ ಸರ್ವಸ್ವ ಎಂದು ಮೊದಲಾಗಿ ಹೇಳಿಬಿಟ್ಟೆ. ನನ್ನ ಈ ಮಾತುಗಳನ್ನು ಆಡುತ್ತಿದ್ದಾಗಲೆಲ್ಲ ಜಿಪ್ಪ್ ನನ್ನನ್ನು ನೋಡಿ ಬೊಗಳುತ್ತಲೇ ಇತ್ತು. ನನ್ನ ಮಾತುಗಳನ್ನು ಕೇಳುತ್ತಾ ಡೋರಾಳು ತಲೆತಗ್ಗಿಸಿ, ನಗಾಡುತ್ತಾ ಸಂತೋಷದಿಂದ ಕಣ್ಣೀರು ಸುರಿಸುತ್ತಾ ಕುಳಿತಿದ್ದಳು. ನಾನು ಅವಳು ಕುಳಿತಿದ್ದ ಸೋಫಾದ ಮೇಲೆಯೇ ಅವಳ ಜತೆಯಲ್ಲಿ ಕುಳಿತು ಮಾತಾಡಿದೆ. ಪತಿ – ಪತ್ನಿಯರಾಗುವ ವಾಗ್ದನವೂ ನಮ್ಮೊಡನೆ ನಡೆಯಿತು. ಅವಳ ಉಂಗುರ ಬೆರಳಿನ ಅಳತೆಯನ್ನು ಸಹ ನಾನು ತೆಗೆದುಕೊಂಡೆನು.

ಈ ರೀತಿಯ ಆನಂದಮಯ ಸಮಯವನ್ನು ಅಲ್ಲಿ ಕಳೆದು ತಿಂಡಿ, ಚಹವನ್ನೆಲ್ಲ ತಿಂದು ಕುಡಿದು, ಮಿಸ್ ಮಿಲ್ಸಳನ್ನು ತುಂಬಾ ವಂದಿಸಿ ನಾನು ನನ್ನ ಮನೆಗೆ ಬಂದೆನು. ಕೆಲವು ದಿನ ಕಳೆಯುವುದರ ಒಳಗೆ ಕಿಡಿಗಳನ್ನು ಇಟ್ಟು ಉಂಗುರವೊಂದನ್ನು ಅವಳಿಗೆ ಮಾಡಿಸಿ ಕೊಟ್ಟೆನು. ನನ್ನ ಈ ಹೊತ್ತಿನ ಚಿಕ್ಕ ಮಗಳ ಕೈಯ್ಯಲ್ಲಿರುವ ಕಿಡಿಯುಂಗುರವನ್ನು ನೋಡುವಾಗ ಡೋರಾಳಿಗೆ ಆ ದಿನ ಕೊಟ್ಟ ಉಂಗುರವೂ ಅವಳ ಬೆರಳೂ ಜ್ಞಾಪಕಕ್ಕೆ ಬರುತ್ತವೆ.

ಇಂಥ ಪ್ರಸಂಗಗಳ ರುಚಿಯನ್ನು ಹೆಚ್ಚಿಸುವಂಥ ಚಿಕ್ಕ ಜಗಳವೂ ನಮ್ಮೊಡನೆ ಒಂದಾವೃತ್ತಿ ಆಯಿತು. ಉಂಗುರ ಕೊಟ್ಟ ಒಂದೆರಡು ವಾರಗಳೊಳಗೇ ಡೋರಾಳಿಂದಲೇ ಕಲ್ಪಿತವಾದ ಕಾರಣಗಳಿಂದ ಅವಳಿಗೆ ನನ್ನ ಮೇಲೆ ಸಿಟ್ಟಾಗಿ ನನ್ನ ಉಂಗುರ ವಾಪಾಸು ಬಂತು. ಆದರೆ, ಮಿಸ್ ಜೂಲಿಯಾ ಮಿಲ್ಸಾಳು ಎಲ್ಲವನ್ನೂ ತಿಳಿದು, ಸಂದರ್ಭಕ್ಕೆ ತಕ್ಕದಾಗಿ, ಸ್ವಾನುಭವದಿಂದ ಬೇಕಾದಂತೆ ಮಾತಾಡಿ ನಮ್ಮನ್ನು ರಾಜಿ ಮಾಡಿಸಿದಳು. ಈ ಜಗಳದಿಂದ ಪಾರಾದನಂತರ ನಾವು ಪರಸ್ಪರವಾಗಿ ದಿನಕ್ಕೆ ಒಂದು ಪತ್ರಕ್ಕೆ ಕಡಿಮೆಯಾಗದಂತೆ ಪತ್ರಗಳನ್ನು ಬರೆದುಕೊಳ್ಳುತ್ತಿದ್ದೆವು.

ನಮ್ಮಿಂದ ಸರಿದು, ಕಾಲವಶದಲ್ಲಿರುವ ಅಂದಿನ ದಿನಗಳನ್ನು ಗ್ರಹಿಸಿ ನೋಡಿದ್ದಾದರೆ, ಅಂತಹ ಮಿತಿ ಕಾಣದ ಆನಂದಮಯ ದಿನಗಳನ್ನು ಇನ್ನೆಲ್ಲಿಯೂ ಕಾಣೆ. ಆ ದಿನಗಳು, ಒಂದು ದೃಷ್ಟಿಯಿಂದ ವಿರಕ್ತ–ಹಾಸ್ಯದಂತೆ ತೋರಿದರೂ ಮತ್ತೆಲ್ಲ ದೃಷ್ಟಿಯಿಂದ ನನಗೆ ಪರಮಪೂಜ್ಯವೂ ಪರಮಪ್ರಿಯವೂ ಆಗಿ ಉಳಿದಿವೆ.

ಅಧ್ಯಾಯ ಮೂವತ್ನಾಲ್ಕು

ಅತ್ತೆಯ ಅನಿರೀಕ್ಷಿತ ವರ್ತನೆ

ಡೋರಾಳ ಮತ್ತೂ ನನ್ನೊಳಗೆ ನಡೆದಿದ್ದ ಮಾತುಕತೆ, ವಾಗ್ದಾನಗಳನ್ನು ಕುರಿತಾಗಿ ಏಗ್ನೆಸಳಿಗೆ ಸೂಕ್ಷ್ಮವಾಗಿ ನಾನೊಂದು ಪತ್ರ ಬರೆದೆನು. ನನ್ನ ಜೀವನವೇ ಉದ್ವೇಗಯುತವಾಗಿ ಸಾಗುತ್ತಿರುವಂತೆ ತೋರುತ್ತಿತ್ತು. ಏಗ್ನೆಸ್ಸಳ ಅಭಿಪ್ರಾಯಗಳಿಗೆ ನಾನು ತುಂಬಾ ಬೆಲೆಕೊಡುತ್ತಿದ್ದುದರಿಂದ ನನ್ನ ಈವರೆಗಿನ ಕಾರ್ಯಗಳನ್ನು ಏಗ್ನೆಸ್ಸಳು ಒಪ್ಪುವಳೋ ಆಕ್ಷೇಪಿಸುವಳೋ ಎಂಬ ಹೆದರಿಕೆಯೂ ನನಗಿತ್ತು. ಏಗ್ನೆಸ್ಸಳ ಒಪ್ಪಿಗೆಯಿದ್ದು ನಡೆದ ಕಾರ್ಯವೆಲ್ಲ ಶುಭಪ್ರದವಾಗುವುದೆಂಬ ಭಾವನೆಯೂ ನನ್ನಲ್ಲಿದ್ದುದರಿಂದ, ಅವಳ ಸಮ್ಮತಿಯನ್ನೂ ಹಾರೈಸುತ್ತಿದ್ದೆನು. ಡೋರಾಳ ರೂಪ, ಗುಣ, ಲಾವಣ್ಯ ಎಲ್ಲವನ್ನೂ ವಿವರಿಸಿ ಬರೆದಿದ್ದೆ. ಅಲ್ಲದೆ, ನಾನು ಸಾವಧಾನವಾಗಿಯೇ ಮುಂದುವರಿಯುತ್ತಿದ್ದೆನಾಗಿಯೂ ಪತ್ರದಲ್ಲಿ ಬರೆದಿದ್ದೆನು. ಅವಳಲ್ಲಿ ದೋಷಗಳೇನೂ ಇಲ್ಲವೆಂದೂ ಬರೆದಿದ್ದೆನು.

ನನ್ನ ಪತ್ರಕ್ಕೆ ಏಗ್ನೆಸ್ಸಳಿಂದ ಮರು ಟಪಾಲಿಗೇ ಉತ್ತರ ಬಂತು. ಅವಳು ಮುಖತಃ ನನ್ನೊಡನೆ ಮಾತಾಡಿದ್ದರೆ ಹೇಗೆ ಹೇಳುತ್ತಿದ್ದಳೋ ಅದೇ ಪರಿಣಾಮ ಕೊಡಬಲ್ಲಂಥ ಉತ್ತರವನ್ನೇ ಬರೆದಿದ್ದಳು. ಅವಳು ಯಾವುದನ್ನೂ ಆಕ್ಷೇಪಿಸಲಿಲ್ಲ – ಸಹೃದಯಳಾಗಿ, ಸೌಮ್ಯವಾಗಿ, ನನ್ನ ಸಂತೋಷದಲ್ಲಿ ಭಾಗಿಯಾಗುವ ಪ್ರಿಯ ಭಗಿನಿಯ ಮೃದು ಭಾವನೆಗಳು ಮಾತ್ರ ಪತ್ರದಲ್ಲಿದ್ದುವು.

ಟ್ರೇಡಲ್ಸನೂ ಇದೇ ಸಮಯದಲ್ಲಿ ನನ್ನ ಮನೆಗೆ ಬಂದನು. ಅವನೊಡನೆ ಮಾತಾಡುತ್ತಾ ಅವನ ಕಷ್ಟ ಸುಖಗಳ ವರದಿಯನ್ನು ಕೇಳಿದೆ. ಮಿ. ಮೈಕಾಬರರ ಸಾಲಕ್ಕಾಗಿ ಅವನ ಸಾಮಾನುಗಳು ಸಹ ಕೋರ್ಟು ಹರಾಜಿನಲ್ಲಿ ಮಾರಾಟವಾಗಿ ಹೋದ ಕಥೆಗಳನ್ನೆಲ್ಲ ಹೇಳಿದನು. ಮಿ. ಮೈಕಾಬರರಿಗೆ ಜಾಮೀನು ನಿಂತಿದ್ದ ಜವಾಬ್ದಾರಿ ಪೂರ್ಣ ಮುಗಿಯಲಿಲ್ಲವೆಂದೂ ಟ್ರೇಡಲ್ಸನು ಹೇಳಿದನು. ಈ ಕಥೆಗಳನ್ನೆಲ್ಲ ತಾನು ಯಾರದೋ ಬೇರೊಬ್ಬನ ಕಥೆ ಹೇಳುವವನಂತೆ ನಿರುದ್ವೇಗದಿಂದ ಹೇಳಿದನು.

ಟ್ರೇಡಲ್ಸನು ತನ್ನ ಅತ್ತೆ ಮನೆಯ ಅನೇಕ ಸ್ವಾರಸ್ಯದ ಸಂಗತಿಗಳನ್ನೂ ತಿಳಿಸಿದನು. ಇವನು ಮದುವೆಯಾಗಲಿದ್ದ ಸೋಫಿ ಸಮೇತಳಾಗಿ ಅತ್ತೆಗೆ ಒಂಬತ್ತು ಜನ ಹೆಣ್ಣುಮಕ್ಕಳಿದ್ದರು. ಅತ್ತೆ ಸದಾ ರೋಗಿಯೇ ಆಗಿದ್ದುದರಿಂದ ಅವಳು ಮನೆಗೆಲಸವನ್ನು ಸ್ವಲ್ಪವೂ ಮಾಡುತ್ತಿರಲಿಲ್ಲ. ಸೋಫಿಯ ಅಕ್ಕ ಎಲ್ಲರಿಗಿಂತ ಸುಂದರಿಯಾಗಿದ್ದುದರಿಂದ – ಆ ವಿಷಯದಲ್ಲಿ (ಸೋಫಿ ಸಮೇತವಾಗಿ) ಅವರ ಸಂಸಾರವೇ ಹೆಮ್ಮೆ ಪಡುತ್ತಿತ್ತು. ಆ ಅಕ್ಕ ಅವಳ ಸೌಂದರ್ಯವನ್ನು ಕಾಪಾಡಿಕೊಳ್ಳಲು ತಕ್ಕಷ್ಟು ಮತ್ತೂ ತಕ್ಕಂಥ ಕೆಲಸಗಳನ್ನು ಮಾತ್ರ ಮಾಡುತ್ತಿದ್ದಳು. ಇನ್ನುಳಿದ ಏಳು ಜನ ತಂಗಿಯವರು ಚಿಕ್ಕವರೇ ಆಗಿದ್ದುದರಿಂದ ಅವರೆಲ್ಲರ ಕೆಲಸವನ್ನೂ ಸೋಫಿಯೇ – ಹದಿನೆಂಟು ಕೈಗಳಿದ್ದವಳಂತೆ, ಮಾಡುತ್ತಿದ್ದಳು. ಸೋಫಿಯೇ ಆ ಮನೆ ಕೆಲಸವನ್ನು ಮಾಡಿ ಕಷ್ಟಪಡುತ್ತಿದ್ದಳೆಂಬುದು ಟ್ರೇಡಲ್ಸನ ಗಮನಕ್ಕೆ ವಿಶೇಷವಾಗಿ ಬಂದಿರಲಿಲ್ಲ. ಆದರೆ, ಸೋಫಿಯು ಎಂಥ ಗುಣಸಂಪನ್ನೆ, ಕಾರ್ಯ, ಕರ್ತವ್ಯತತ್ಪರಳು ಎಂಬುದನ್ನು ಮಾತ್ರ ಗಮನಿಸಿ, ಗ್ರಹಿಸಿ, ಸಂತೋಷಿಸುತ್ತಿದ್ದನು. ಸೋಫಿಯ ಅವಳ ಸಂಸಾರದ ಭಾರವನ್ನು ಹೊರುತ್ತಿದ್ದ ಕಷ್ಟವನ್ನೂ ಟ್ರೇಡಲ್ಸನು ಬಹು ಸಮಾಧಾನದಿಂದ – ಒಂದು ವಿಧದ ನಿರ್ಲಿಪ್ತತೆಯಿಂದ ಸುಧಾರಿಸಿಕೊಂಡು ಹೇಳುತ್ತಿದ್ದನೇ ಹೊರತು, ಈ ವಿಷಯವನ್ನು ನಾನು ಕೇಳಿ ಸಿಟ್ಟುಗೊಂಡಷ್ಟು ಅವನು ಸಿಟ್ಟುಗೊಂಡಿರಲಿಲ್ಲ. ಟ್ರೇಡಲ್ಸನು ಇನ್ನು ಒಂದು ವಿಷಯವನ್ನು ತಿಳಿಸಿದನು. ಮಿ.ಮೈಕಾಬರರು ತಮ್ಮ ಸಾಲಿಗರ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮಿ. ಮಾರ್ಟಿಮರ್ ಎಂಬ ಹೊಸ ಹೆಸರಿನಿಂದ, ತಮ್ಮ ಪೂರ್ವ ಕ್ರಮದಲ್ಲೇ ಜೀವನ ನಡೆಸುತ್ತಿದ್ದರೆಂದೂ ಅವನಿಂದ ತಿಳಿದೆನು.

ನಾನು ಒಂದು ದಿನ ತಿರುಗಾಡಿ ಮನೆಗೆ ಬರುವಾಗ ಅನಿರೀಕ್ಷಿತವಾಗಿ ನನ್ನ ಅತ್ತೆ ನಮ್ಮ ಮನೆಗೆ ಬಂದು ಕುಳಿತಿದ್ದುದನ್ನು ಕಂಡೆನು. ಕೆಲವು ಪೆಟ್ಟಿಗೆಗಳು, ಮೂಟೆಗಳು, ಅವಳ ಹಕ್ಕಿಯ ಪಂಜರ, ಬೆಕ್ಕು, ಮತ್ತಿತರ ಕೆಲವು ವಸ್ತುಗಳನ್ನು ರಾಶಿ ಹಾಕಿಕೊಂಡು – ರಾಬಿನ್ಸನ್ ಕ್ರೂಸೋವಿನಂತೆ, ಅವಳ ಸಾಮಾನುಗಳ ಮಧ್ಯೆ ಕುಳಿತಿದ್ದಳು. ಮಿ. ಡಿಕ್ಕರೂ ಅವರ ಗಾಳೀಪಟ ಸಮೇತರಾಗಿ, ಅಲ್ಲೇ ಸಮೀಪದಲ್ಲಿ ಕುಳಿತಿದ್ದರು.

ಈ ರೀತಿಯ ಅನಿರೀಕ್ಷಿತ ಆಗಮನವನ್ನು ಕಂಡು ನಾನು ಗಾಬರಿಯಾದೆನು. ಈ ನೂತನ ಸಂದರ್ಭವನ್ನು ಕುರಿತು ಅತ್ತೆ ತಾನಾಗಿಯೇ ತಿಳಿಸುವ ಮೊದಲು ನಾನು ವಿಚಾರಿಸುವುದು ಸರಿಯಲ್ಲವೆಂದು, ಇತರ ವಿಷಯಗಳನ್ನು ಕುರಿತಾಗಿ ಮಾತಾಡತೊಡಗಿದೆನು. ನಮಗೆ ಚಹಾ ತಂದುಕೊಡುವಂತೆ ಪೆಗಟಿಗೆ ಹೇಳಿದೆನು. ನಾನು ಮಾತಾಡುತ್ತಿದ್ದ ಹಾಗೆಯೇ ಪೆಗಟಿ ಚಹ ತಂದುಕೊಟ್ಟಳು. ಪೆಗಟಿಯನ್ನು ಕಂಡೊಡನೆ ಅತ್ತೆ ಕೇಳಿದಳು–

“ನನ್ನ ಗುರುತು ಸಿಕ್ಕಿತೇ ನಿನಗೆ? ನಿನ್ನ ಹೆಸರು? ಅದೇನೋ – ಒಂದು ನೀಗ್ರೋ ಹೆಸರಿನಂತೆ – ಅವಳು ತಾನೆ, ನೀನು?”

“ನನ್ನ ಹೆಸರು ಕ್ಲೇರಾ ಪೆಗಟಿ ಬಾರ್ಕಿಸ್” ಎಂದು ಪೆಗಟಿ ಅಂಜಿಕೆಯಿಂದಲೇ ಹೇಳಿದಳು.

“ಪೆಗಟಿ’ ಒಂದನ್ನು ಮಾತ್ರ ತೆಗೆದು ಮತ್ತೇನಂದರೂ ಕೇಳೋಣ – ಕೇಳಬಹುದೂಂತ ತೋರುತ್ತೆ” ಎಂದು ಅತ್ತೆ ಮುಗುಳು ನಗೆ ಆಡುತ್ತಾ ತಮಾಶೆಗೆಂದು ಗೊತ್ತಾಗುವಂತೆ ಹೇಳಿದಳು.

ಚಹ ಸೇವನೆಯನಂತರ ಅತ್ತೆ ಹಠಾತ್ತಾಗಿ ನನ್ನನ್ನು ಪ್ರಶ್ನಿಸಿದಳು –
"ನಾನು ಈ ಆಸನದಲ್ಲಿ ಇಷ್ಟೊಂದು ಸ್ಥಿರವಾಗಿ ಕುಳಿತಿರುವುದು ಏಕೆಂದು ಗೊತ್ತಿದೆಯೇ, ಟ್ರಾಟ್?"
"ಇಲ್ಲ."
"ನಾನು ಕುಳಿತಿರಬೇಕಾದುದು ನನ್ನ ಆಸ್ತಿಯಲ್ಲಿ ತಾನೆ? ಹಾಗಾಗಿ ಹೀಗೆ ಕುಳಿತಿದ್ದೇನೆ" ಅಂದಳು ಅತ್ತೆ, ಅರೆ ನಗೆ ನಕ್ಕು.
"ಅದೆಲ್ಲ ಕಾಣುತ್ತದೆ – ನನಗೆ ಏನೂ ಅರ್ಥವಾಗಲಿಲ್ಲ – 'ಆಸ್ತಿ' ಅಂದರೇನು" ಎಂದು ನಾನು ಕೇಳಿದೆನು.
"ನನ್ನ 'ಆಸ್ತಿ' ಅಂದರೆ ನಾನು ಇಲ್ಲಿ ತಂದಿರುವುದು ಮಾತ್ರ ನನ್ನ ಆಸ್ತಿ – ಅಷ್ಟಲ್ಲದೆ ನನಗೆ ಇನ್ನೇನೂ ಇಲ್ಲ?" ಅಂದಳು ಅತ್ತೆ.

ನನಗೆ ವಿಶೇಷ ಅರ್ಥವಾಗದೆ ನಾನು ಆಶ್ಚರ್ಯಪಟ್ಟೆನು. ಮಿ. ಡಿಕ್ಕರು ನನ್ನನ್ನೂ ನನ್ನತ್ತೆಯನ್ನೂ ನೋಡುತ್ತಾ ಬಹು ದುಃಖಪಡುತ್ತಿರುವವರಂತೆ ತೋರಿದರು.

"ಡೋವರಿನ ಮನೆ, ಮತ್ತು ಅಲ್ಲಿನ ಹಿತ್ತಲೂ ಈಗ ಇಲ್ಲಿರುವ ಸಾಮಾನುಗಳು ಇಷ್ಟು ಮಾತ್ರ ನನ್ನ ಇಂದಿನ ವಿಶಿಷ್ಟವಾದ ಆಸ್ತಿ ಟ್ರಾಟ್ – ಬಾಕಿ ಎಲ್ಲವನ್ನೂ ಅಪಹರಿಸಿರುತ್ತಾರೆ" ಎಂದು ಅತ್ತೆ ತಿಳಿಸಿದಳು.

ನನಗೆ ಆಶ್ಚರ್ಯವೂ ದುಃಖವೂ ಆಯಿತು. ನನ್ನ ದುಃಖವನ್ನು ಕಂಡು ಅತ್ತೆ ನನ್ನನ್ನು ತಬ್ಬಿಕೊಂಡು ಅತ್ತಳು. ತನಗಾಗಿ ತಾನು ಎಂಥ ಕಷ್ಟವನ್ನಾದರೂ ಸಹಿಸಲು ಸಿದ್ಧಳಾಗಿದ್ದರೂ ನನಗೆ ಇದರಿಂದ ಕಷ್ಟವಾಗಬಹುದೆಂದು ಯೋಚಿಸಿ ತಾನು ದುಃಖಿಸುತ್ತಿರುವುದಾಗಿ ತಿಳಿಸಿದಳು. ಹೀಗೆ ಹೇಳಿ ಸ್ವಲ್ಪ ಹೊತ್ತು ಅತ್ತೆ ಮೌನವಾಗಿ ಕುಳಿತಿದ್ದಳು. ಕೊನೆಗೆ ಅವಳ ಸ್ವಭಾವಸಿದ್ಧವಾದ ಮನೋದಾರ್ಢ್ಯದಿಂದ ಅತ್ತೆ –

"ನಮ್ಮ ಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು, ಟ್ರಾಟ್. ನಾವು ಪರಿಸ್ಥಿತಿಗಳನ್ನು ಸರಿಪಡಿಸತಕ್ಕ ಅವುಗಳ ಯಜಮಾನರೇ ಆಗಬೇಕೇ ಹೊರತು, ಪರಿಸ್ಥಿತಿಗಳೇ ನಮ್ಮನ್ನು ನಡೆಸಬಹುದಾದಂಥ ಅವುಗಳ ಅಡಿಯಾಳಾಗಕೂಡದು. ಸೋಲುಗಳನ್ನು ಮೆಟ್ಟಿ ಮೇಲೆದ್ದು ನಿಂತು ಧೀರರಾಗಿ ವರ್ತಿಸುವ ಪಾತ್ರವನ್ನು ಮಾತ್ರ ನಾವು ಈ ಪ್ರಾಪಂಚಿಕ ಜೀವನರಂಗದಲ್ಲಿ ವಹಿಸಬೇಕು" ಎಂದು ಸ್ಫೂರ್ತಿಯುತವಾಗಿ ನುಡಿದಳು.

ಅಧ್ಯಾಯ ಮೂವತ್ತೈದು

ಮಾನಸಿಕ ಮುಗ್ಧ

ಎಷ್ಟೇ ದುಃಖ ಬಂದರೂ ನಮ್ಮ ದಿನ ನಿತ್ಯದ ಕಾರ್ಯಗಳನ್ನು ಮಾಡದೇ ನಿರ್ವಾಹವಿಲ್ಲವಷ್ಟೆ. ಹೀಗಾಗಿ ನಮ್ಮ ಹೊಸ ಪರಿಸ್ಥಿತಿಗೆ ತಕ್ಕಂಥ ಕೆಲವು ಏರ್ಪಾಡುಗಳನ್ನು ನಾವು ಮಾಡಿಕೊಳ್ಳಬೇಕಾಯಿತು. ನಮ್ಮ ನೆರೆಯವರೊಬ್ಬರ ಅಂಗಡಿಯ ಮೇಲಿನ ಒಂದು ಚಿಕ್ಕ ಕೋಣೆಯನ್ನು ಕುರಿತು ಮಿ. ಡಿಕ್ಕರಿಗೋಸ್ಕರ ಬಾಡಿಗೆಗೆ ಮಾಡಿಕೊಟ್ಟೆನು. ಆ ಕೋಣೆಯನ್ನು ಕುರಿತು ಮಿ. ಡಿಕ್ಕರಿಗೆ ತುಂಬಾ ಸಮಾಧಾನವಾಯಿತು, ಹಾಗಾಗಿ ಅವರು ಒಮ್ಮೆ ನಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟ ಮಿಸೆಸ್ ಕೃಪ್ಸಳಿಗೆ ತೋರಿಸಿ ಹೊಗಳಿದರಂತೆ, ತಾನು ಬಾಡಿಗೆಗೆ ಕೊಟ್ಟಿದ್ದ ಮನೆ ಹೊರತಾಗಿ ಇನ್ನೊಂದು ಕಡೆಯ ಮನೆ ಬಾಡಿಗೆಗೆ ಹೋದದ್ದಕ್ಕೆ ಅವಳಿಗೆ ಸ್ವಲ್ಪ ಸಿಟ್ಟಾಗಿರಬೇಕೆಂದು ತೋರುತ್ತದೆ. ಅವಳು ಅಂದಳಂತೆ "ಅದರಲ್ಲಿ ಒಂದು ಬೆಕ್ಕನ್ನು ತೂಗಹಾಕಲೂ ಸಹ ಸ್ಥಳ ಸಾಲದು" ಎಂದು. ಆ ಮಾತಿಗೆ ಮಿ. ಡಿಕ್ಕರು ಉತ್ತರವಿತ್ತರಂತೆ "ನನ್ನಲ್ಲಿ ತೂಗಹಾಕಲು ಬೆಕ್ಕೂ ಇಲ್ಲ, ಮತ್ತೇನು?" ಎಂದು.

ಅತ್ತೆಯ ಈಗಿನ ಬಡತನದ ಸ್ಥಿತಿಯನ್ನು ಗ್ರಹಿಸಿ ಮಿ. ಡಿಕ್ಕರು ಬಹುವಾಗಿ ಹೆದರಿಕೊಂಡಿದ್ದರು. ಅವರ ಮುಖದ ಲಕ್ಷಣವೇ ಮೊದಲಿನಂತಿರಲಿಲ್ಲ. ಸದಾ ಮುಗುಳ್ನಗೆಯಲ್ಲಿದ್ದು ಸಂತೃಪ್ತಿ ಸೂಚಿಸುತ್ತಿದ್ದ ಮುಖದಲ್ಲಿ ದುಃಖ ಭಾವ ಮಾತ್ರ ಇಂದು ಇತ್ತು. ಬಡತನವೆಂದರೆ ಕ್ಷಾಮಕಾಲದ ಪರಿಸ್ಥಿತಿಯೆಂದು ಅವರು ಅರ್ಥ ಮಾಡಿರಬೇಕು. ಅವರು ಕೆಲವು ಸಮಯಗಳಲ್ಲಿ ಅತ್ತೆಯನ್ನೇ ದೃಷ್ಟಿಸಿ ನೋಡುತ್ತಿದ್ದು, ಅನಂತರ ಅಡಗಿ ಅಳುತ್ತಿದ್ದರು. ಅವರಿಗೆ ಕೊಡುತ್ತಿದ್ದ ರೊಟ್ಟಿಯಲ್ಲಿ ಸಾಧಾರಣ ಅರೆವಾಸಿಯಷ್ಟನ್ನು ಗುಟ್ಟಾಗಿ ಅಡಗಿಸಿ ಶೇಖರಿಸುತ್ತಿದರು. ಕ್ಷಾಮವು ಪ್ರತ್ಯಕ್ಷ ಬಂದಾಗ ನಮ್ಮೆಲ್ಲರ ಸಹಾಯಕ್ಕಾಗಿ ಅವರು ಈ ವಿಧದ ಆಹಾರದ ಒಂದು ನಿಧಿಯನ್ನೇ ಕಾದಿಟ್ಟಿದ್ದರು. ಇಷ್ಟೂ ಅಲ್ಲದೆ ಅವರು ಪಾರ್ಲಿಮೆಂಟಿಗೂ ಒಂದು ಮನವಿಯನ್ನು ಕ್ಷಾಮದ ಸಂಬಂಧವಾಗಿ ಒಪ್ಪಿಸಬೇಕೆಂದು ಅಂಥಾ ಒಂದು ಮನವಿಯನ್ನು ಬರೆಯತೊಡಗಿದ್ದರು.

ಅತ್ತೆಗೆ ನನ್ನ ಕಡೆಯ ವರ್ತಮಾನವಾಗಿ ಡೋರಾಳಿಗೂ ನನಗೂ ನಡೆದಿದ್ದ ಪ್ರೇಮಬಂಧನದ ಕುರಿತು ತಿಳಿಸಿದೆ. ಡೋರಾಳ ಸೌಂದರ್ಯವನ್ನೂ ಗುಣಗಳನ್ನೂ ಅವಳಿಗೆ ವರ್ಣಿಸಿ ತಿಳಿಸಿದೆ. ಅತ್ತೆ ನನ್ನ ಮಾತುಗಳನ್ನೆಲ್ಲ ಸಾವಧಾನವಾಗಿ ಕೇಳಿ ನನಗೆ ಕೆಲವು ಪ್ರಶ್ನೆಗಳನ್ನು ಹಾಕಿದಳು –
"ನಿನ್ನ ಡೋರಾಳ ಬುದ್ಧಿ ಹೇಗಿದೆ – ಚುರುಕಾಗಿದೆಯೇ, ಹೆಡ್ಡಳೇ, ಹಿಡಿದ ಕೆಲಸವನ್ನು ಮಾಡಿ ಪೂರೈಸುವಷ್ಟು ಹಟವಿರುವ ಸ್ವಭಾವದವಳೇ, ಶಿಸ್ತು, ಕ್ರಮ ಮರ್ಯಾದೆಗಳನ್ನು ತಿಳಿದು ಅಭ್ಯಸಿಸಿರುವಳೇ, ಸ್ವಸಾಮರ್ಥ್ಯ, ಧೈರ್ಯವಿರುವವಳೇ ಅಥವಾ ಎಲ್ಲದರಲ್ಲೂ ನಿನ್ನ ಶಕ್ತಿಯನ್ನೇ ಆಧರಿಸಿ ಅವಲಂಬಿಸಬಹುದಾದವಳೇ. . ." ಎಂದು ಮೊದಲಾಗಿ ಕೇಳಿದಳು.

ಈ ವಿಧದ ದೃಷ್ಟಿಕೋನಗಳಿಂದ ನಾನು ಡೋರಾಳನ್ನು ನೋಡಿರುವುದಿಲ್ಲವೆಂಬುದು ನನಗೆ ಆಗಲೇ ಅರಿವಾಯಿತು. ಅಷ್ಟೊಂದು ಸುಂದರ, ಸರಳ, ದೈವಿಕ ಪ್ರಭಾವದ ಡೋರಾಳಲ್ಲಿ ಎಲ್ಲಾ ಸದ್ಗುಣಗಳು ಇರಲೇಬೇಕೆಂಬ ದೃಢ ನಂಬಿಕೆಯಿಂದ ಮಾತ್ರ ನಾನು ಅವಳನ್ನು ಮೆಚ್ಚಿ ಒಪ್ಪಿದ್ದೆನಷ್ಟೆ. ಹಾಗಾಗಿ ನಾನು ಅತ್ತೆಯ ಪ್ರಶ್ನೆಗೆ ಕ್ರಮವಾದ ಉತ್ತರ ಕೊಡಲಾರದೆ ಮೌನವಾಗಿದ್ದೆ.

ಅತ್ತೆ ಸ್ವಲ್ಪ ಹೊತ್ತು ಆಲೋಚಿಸುತ್ತ ಕುಳಿತಿದ್ದು, ಅನಂತರ ಮುಗುಳ್ನಗೆ ಆಡುತ್ತಾ –
"ಯೌವ್ವನದ ಮನಸ್ಸು, ಎಳೆ ಮನಸ್ಸು, ಕುರುಡು ಕುರುಡಪ್ಪಾ ಕುರುಡು!" ಎಂದಂದಳು. ಅನಂತರ ಸ್ವಲ್ಪ ಹೊತ್ತು ಕಳೆದು –
"ಚಿಂತೆಯಿಲ್ಲ, ದೇವರು ನಿನಗೆ ಒಳ್ಳೆಯದೇ ಮಾಡುವನು; ನಿನಗೆ ಶುಭವಾಗಲಿ!" ಅಂದಳು.

ಅತ್ತೆಯ ಅತೃಪ್ತಿ ನನಗೆ ಸ್ವಲ್ಪ ಬೇಸರವುಂಟುಮಾಡಿದರೂ ಸ್ವಲ್ಪ ಯೋಚಿಸುತ್ತಾ ಹೋದ ಹಾಗೆ, ಅತ್ತೆಗೆ ಡೋರಾಳ ಪರಿಚಯವಾದ ಪಕ್ಷಕ್ಕೆ ಸಂಪೂರ್ಣ ಸಮಾಧಾನವಾಗುವುದರಲ್ಲಿ ಸಂಶಯವಿಲ್ಲವೆಂದು ನಾನು ಬೇಸರ ಪರಿಹರಿಸಿಕೊಂಡು ಸಮಾಧಾನಪಟ್ಟುಕೊಂಡೆ.

ನನ್ನ ಪ್ರಾಕ್ಟರ್ ವೃತ್ತಿ ಸಂಪಾದನೆಗೆ ತಕ್ಕಷ್ಟು ಮುಂದರಿಯದಿದ್ದುದರಿಂದ ಅದನ್ನೇ ಬಿಟ್ಟು, ಈಗಿನ ಬಡತನದ ಪರಿಸ್ಥಿತಿಯಲ್ಲಿ ಸಾಕಷ್ಟು ಸಂಪಾದಿಸಬಲ್ಲ ಇತರ ಯಾವುದಾದರೊಂದು ವೃತ್ತಿಯನ್ನು ಕೈಕೊಂಡರಾಗಬಹುದೆಂದು ನನಗೆ ತೋರಿತು. ಇದಕ್ಕಾಗಿ, ಮೊದಲು ಮಿ.ಸ್ಪೆನ್ಲೋರವರೊಡನೆ ನಾನು ಪ್ರಸ್ತಾಪಿಸಿದಾಗ, ನಾನು ಪ್ರಾಕ್ಟರ್ ಅಭ್ಯಾಸವನ್ನು ನಿಲ್ಲಿಸಲು ಅವರು ನನಗಾಗಿ ಅನುಮತಿಯಿತ್ತರೂ ಮುಂಗಡದ ಹಣವನ್ನು ವಾಪಾಸು ಕೊಡಲು ಅವರ ಜತೆಗಾರ ಮಿ. ಜಾರ್ಕಿನ್ಸರ ನಿರ್ದಾಕ್ಷಿಣ್ಯ ಸ್ವಭಾವದ ಕಾರಣವಾಗಿ ಅನನುಕೂಲವೆಂದು ಉತ್ತರವಿತ್ತರು.

ಒಂದು ದಿನ ಈ ನಮ್ಮ ಮನೆಗೆ ಏಗ್ನೆಸ್ಸಳು ಹಠಾತ್ತಾಗಿ ಬಂದಳು. ಈಗಲೂ ಅವಳು ನನ್ನ ಬಾಲ್ಯದ ವಿದ್ಯಾಭ್ಯಾಸ ಕಾಲದ ಏಗ್ನೆಸ್ಸಳಂತೆಯೇ ಬಹು ಶಾಂತ ಸ್ವಭಾವದವಳಾಗಿಯೇ ತೋರುತ್ತಿದ್ದಳು. ಅವಳು ನಮ್ಮೆಲ್ಲರ ಸುಖ ದುಃಖಗಳನ್ನು ಕೇಳಿ ತಿಳಿದುಕೊಳ್ಳುತ್ತಾ

ನಾವು ಕೇಳಿದರೆ ಮಾತ್ರ ತನ್ನ ಕಡೆಯ ವರ್ತಮಾನಗಳನ್ನು ತಿಳಿಸುತ್ತಾ ಬಂದು ಸ್ವಲ್ಪ ಹೊತ್ತಿನಲ್ಲೇ ನಮ್ಮ ಮನೆಯವರ ಪೈಕಿ ಅವಳೂ ಒಬ್ಬಳಂತೆ ಆಗಿಹೋದಳು. ಅವಳ ತಂದೆಯ ಆರೋಗ್ಯ, ವೃತ್ತಿಯ ಅಭಿವೃದ್ಧಿ ಅವರ ಗೃಹಕೃತ್ಯದ ಸುಖ ದುಃಖ ಇವುಗಳನ್ನೆಲ್ಲ ನಾವು ವಿಚಾರಿಸಿ ಮಾತಾಡಿದೆವು. ಏಗ್ನೆಸ್ಸಳು ಆ ಎಲ್ಲಾ ವಿಷಯವನ್ನು ನಿರುದ್ವಿಗ್ನತೆಯಿಂದಲೇ ಹೇಳಿದಳು. ಆದರೂ ಅವಳ ಮಾತಿನಲ್ಲಿ ಸ್ವಲ್ಪ ದುಃಖವು ಕೂಡಿತ್ತು.

ಉರೆಯನೂ ಅವನ ತಾಯಿಯೂ ಈಗ ಮಿ. ವಿಕ್ಫೀಲ್ಡರ ಮನೆಯಲ್ಲೇ ವಾಸಿಸುತ್ತಿದ್ದರಂತೆ. ಮಿ. ವಿಕ್ಫೀಲ್ಡ್ ಮತ್ತು ಹೀಪ್ ಜತೆಕೂಟವು ಕೆಲಸ ಮಾಡತೊಡಗಿದ ಮೇಲೆ ಮಿ. ವಿಕ್ಫೀಲ್ಡರು ಸಂಪೂರ್ಣ ಹಿಂದೆ ನಿಲ್ಲುತ್ತಾ ಕೂಟದ ಮುಖ್ಯಸ್ಥನೇ ಹೀಪ್ ಎಂಬಂತೆ ಅಲ್ಲಿನ ಕೆಲಸ ಕಾರ್ಯಗಳು ಜರುಗುತ್ತಿದ್ದುವಂತೆ. ನಾನು ಶಾಲೆಗೆ ಹೋಗುತ್ತಿದ್ದಾಗ ವಾಸವಾಗಿದ್ದ ಕೋಣೆಯಲ್ಲಿ ಇಂದು ಉರೆಯನೂ ಏಗ್ನೆಸ್ಸಳ ಕೋಣೆಗೆ ಪಕ್ಕದ ಕೋಣೆಯಲ್ಲಿ ಉರೆಯನ ತಾಯಿಯೂ ವಾಸಿಸುತ್ತಿದ್ದರಂತೆ. ಉರೆಯನ ತಾಯಿಗೆ ಬೇಸರವಾದಾಗಲೆಲ್ಲ ಅವಳು ಏಗ್ನೆಸ್ಸಳ ಕೋಣೆಗೆ ಬಂದು ತನ್ನ ಬೇಸರ ಪರಿಹಾರ ಮಾಡಿಕೊಳ್ಳುತ್ತಿದ್ದಳಂತೆ. ಮತ್ತು, ಅವಳಿಗೆ ಅಂಥ ಬೇಸರ ಆಗಿಂದಾಗ್ಗೆಯೇ ಉಂಟಾಗುತ್ತಿದ್ದುವಂತೆ. ಉರೆಯನ ತಾಯಿಯ ಬೇಸರ ಪರಿಹಾರಕ್ಕಾಗಿ ಮಾತಾಡುವಾಗಲೆಲ್ಲ ಅವಳು ಉರೆಯನನ್ನು ಹೊಗಳುತ್ತಾ ಅವನ ಗುಣಕಥನದಿಂದಲೇ ಬೇಸರ ಪರಿಹರಿಸಿಕೊಳ್ಳುತ್ತಿದ್ದಳಂತೆ. ಈ ವಿಧದ ಜೀವನ ಕ್ರಮ – ತಮ್ಮ ಗೃಹಕೃತ್ಯದ ಅವಸ್ಥೆ, ಬಂದಿದ್ದುದರಿಂದ ಈಗೀಗ ಏಗ್ನೆಸ್ಸಳಿಗೆ ತನ್ನ ತಂದೆಯ ಜತೆಯಲ್ಲಿ ಹೆಚ್ಚು ಕಾಲ ಇರಲೂ ಅನುಕೂಲವಿಲ್ಲದೇ ಆಗಿತ್ತಂತೆ.

ಹೀಗೆ ನಾವೆಲ್ಲಾ ಅವರವರ ಕಷ್ಟನಷ್ಟಗಳನ್ನು ಮಾತಾಡುತ್ತಾ ಆತ್ತೆಯೂ ಅವಳ ಕಡೆಯ, ಸದ್ಯ ಈಚಿನ, ಪರಿಸ್ಥಿತಿಗಳನ್ನು ಏಗ್ನೆಸ್ಸಳೊಂದಿಗೆ ಹೇಳಿಕೊಂಡಳು. ಅತ್ತೆಗೆ ಏಗ್ನೆಸ್ಸಳ ಬುದ್ಧಿವಂತಿಕೆಯಲ್ಲೂ ವ್ಯವಹಾರ ಜ್ಞಾನದಲ್ಲೂ ತುಂಬಾ ನಂಬಿಕೆಯಿದ್ದುದರಿಂದ ಈ ಮಾತುಗಳನ್ನು ಸುಖದುಃಖವನ್ನಾಗಿ ಮಾತಾಡುವುದರ ಜತೆಯಲ್ಲೇ ಅಭಿಪ್ರಾಯ ವಿನಿಮಯ, ವಿಮರ್ಶೆಗಳಿಗಾಗಿಯೂ ಮಾತಾಡುತ್ತಿದ್ದಳೆಂದು ನಾನು ತಿಳಿದುಕೊಂಡೆ.

ಅತ್ತೆ ಮಿ. ವಿಕ್ಫೀಲ್ಡರ ಸಲಹೆಯಂತೆ ತನ್ನ ಹಣವನ್ನು ಬಡ್ಡಿಗಾಗಿ ಅಡವಿನ ಮೇಲೆ ಹಾಕಿದ್ದಳು. ಅಂಥ ಅಡವಿನ ಮರುಪಾವತಿಯ ಅವಧಿ ದಾಟಿ ಒಮ್ಮೆ ಹಾಕಿದ್ದ ಹಣವೆಲ್ಲಾ ಅತ್ತೆಗೆ ಮರುಪಾವತಿಯಾಗಿ ಬಂದಿತು. ಇದೇ ಸಮಯದಲ್ಲಿ ಮಿ.ವಿಕ್ಫೀಲ್ಡರ ಆರೋಗ್ಯ ಕೆಡುತ್ತ ಬಂದುದರಿಂದ ಹೀಗೆ ಜಮೆಯಾದ ಹಣವನ್ನು ಅತ್ತೆ ಸ್ವತಂತ್ರವಾಗಿ ಅನೇಕ ಕಂಪೆನಿಗಳ ವಹಿವಾಟದಲ್ಲಿ ಹಾಕಿದಳು. ಅತ್ತೆಯ ದುರದೃಷ್ಟದಿಂದ ಆ ಕಂಪೆನಿಗಳೆಲ್ಲ ದಿವಾಳಿಯಾಗಿ ಅತ್ತೆಗೆ ಇಂದಿನ ಸ್ಥಿತಿ ಬಂದಿತ್ತು. ಈಗ ಅತ್ತೆಯ ಕೈಯ್ಯಲ್ಲಿ ಸ್ವಲ್ಪ ಹಣ ಉಳಿದಿದ್ದುದನ್ನಾದರೂ ಉತ್ತಮ ವ್ಯವಸ್ಥೆಯಿಂದ ಎಲ್ಲಿ, ಹೇಗೆ ಇಡುವುದೆಂಬ ಆಲೋಚನೆಯನ್ನು ಅತ್ತೆ ಮಾಡುತ್ತಿದ್ದಳು. ಆ ವಿಷಯದಲ್ಲಿ ಏಗ್ನೆಸ್ಸಳ ಅಭಿಪ್ರಾಯವನ್ನೂ ಅತ್ತೆ ಕೇಳಿದಳು. ಈ ಮಾತು ನಡೆಯುತ್ತಿದ್ದಾಗಲೇ ಅಲ್ಲಿಗೆ ಮಿ. ವಿಕ್ಫೀಲ್ಡರು ಬಂದರು ಮತ್ತೂ ಅವರ ನೆರಳಿನಂತೆ ಉರೆಯನೂ ಬಂದನು.

ಮಿ. ವಿಕ್ಫೀಲ್ಡರಿಗೆ ಅವರ ಜತೆಕೂಟದ ಒಂದು ಕೆಲಸವಿದ್ದು, ಆ ಕೆಲಸದ ಬಗ್ಗೆ ಉರೆಯನ ಜತೆಯಲ್ಲಿ ಲಂಡನ್ನಿಗೆ ಬಂದಿದ್ದವರೇ ನಮ್ಮ ಮನೆಗೆ ಬಂದದ್ದೆಂದೂ ನಮ್ಮಲ್ಲಿ ಬೇರೆ ಏನೂ ಕೆಲಸವಿಲ್ಲವೆಂದೂ ಕುಳಿತ ಹಾಗೇ ತಿಳಿಸಿದರು. ಉರೆಯನೂ ತನ್ನ ಮೈಯ್ಯನ್ನು ಡೊಂಕಿಸಿಕೊಂಡು ಒಂದು ಕಡೆ ಕುಳಿತನು. ಮಿ. ವಿಕ್ಫೀಲ್ಡರ ರೂಪವೇ ಬಹು ಬದಲಾಗಿತ್ತು. ಅವರ ಕೈ ಮೊದಲಿಗಿಂತಲೂ ಹೆಚ್ಚು ನಡುಗುತ್ತಿತ್ತು. ನಮ್ಮ ಜತೆಯಲ್ಲಿ ಆಗ ಅವರು ಮಾತಾಡುತ್ತಿದ್ದುದನ್ನು ಸೂಕ್ಷ್ಮವಾಗಿ ನೋಡಿದಾಗ ಅವರು ಉರೆಯನು ತನ್ನ ಜತೆಯಲ್ಲಿರುವುದನ್ನು ಸದಾ ಜ್ಞಾಪಕದಲ್ಲಿಟ್ಟುಕೊಂಡು – ಆ ಕಾರಣವಾಗಿ ಸ್ವಲ್ಪ ಅಂಜಿಕೆಯಿಂದಲೇ ಇರುವವರಂತೆ ಇರುತ್ತಿದ್ದರು. ಅವರ ಅಂದಿನ ನಡೆ, ನುಡಿಗಳೆಲ್ಲವೂ ನನ್ನ ಈ ಅಭಿಪ್ರಾಯವನ್ನು ಸಮರ್ಥಿಸುತ್ತಿದ್ದುವು.

ನಮ್ಮೊಳಗೆ ಕುಶಲ ಪ್ರಶ್ನೆ, ಇನ್ನಿತರ ಕೆಲವು ಮಾತುಗಳು ನಡೆದನಂತರ, ಅತ್ತೆಯ ಸ್ವಾಭಾವಿಕವಾದ, ವೈಶಿಷ್ಟ್ಯವಾದ ಕ್ರಮದಿಂದ ಹಠಾತ್ತಾಗಿ ತನ್ನ ಆರ್ಥಿಕ ಪರಿಸ್ಥಿತಿಗಳನ್ನು ಕುರಿತು ಮಾತಾಡತೊಡಗಿದಳು –
"ಮಿ. ವಿಕ್ಫೀಲ್ಡರೇ ದಯಮಾಡಿ ಸ್ವಲ್ಪ ಕೇಳಿ – ನೀವು ಇಲ್ಲಿಗೆ ಬರುವ ಮೊದಲು, ಈಗ ತಾನೇ ನಾವು ಮಾತಾಡುತ್ತಿದ್ದ ವಿಷಯವದು. ನನ್ನ ಹಣವೆಲ್ಲ ಕೆಲವು ಕಾರಣ, ಸಂದರ್ಭಗಳಲ್ಲಿ ನಷ್ಟವಾಗಿ ಹೋಗಿ, ಇನ್ನುಳಿದಿರುವ ಹಣವನ್ನು ನಾನು ಬಂದೋಬಸ್ತಿನಿಂದ ಉತ್ತಮ ಬಡ್ಡಿ ಸಿಗುವಂತೆ, ಸಂಚಯವಾಗಿ ಇಡುವುದು ಹೇಗೆ, ಎಲ್ಲಿ, ಎಂದು ನಿಮ್ಮ ಮಗಳ ಹತ್ತಿರ ಕೇಳುತ್ತಿದ್ದೆ. ನಿಮ್ಮನ್ನು ನಾನು ಕೇಳಬಹುದಿತ್ತಾದರೂ ನಿಮ್ಮ ಮಗಳೂ ಸಹ ಯೋಗ್ಯ ಸಲಹೆ ಕೊಡಬಲ್ಲಳೆಂಬ ನನ್ನ ಅಭಿಪ್ರಾಯದಿಂದ ಅವಳನ್ನೇ ವಿಚಾರಿಸಿದೆನು. ನಿಮ್ಮ ಮಗಳೊಬ್ಬಳ ಅಭಿಪ್ರಾಯವೇ ಆದರೂ ಅದು ನಿಮ್ಮ ಜತೆಕೂಟದ ಅಭಿಪ್ರಾಯದಷ್ಟೇ ಘನವಾದುದೆಂದು ನನಗೆ ಗೊತ್ತಿದೆ" ಎಂದಂದಳು ಅತ್ತೆ.

ಉರೆಯ ಈ ಸಂದರ್ಭದಲ್ಲಿ ಎರಡು ಮಾತಾಡಬೇಕೆಂಬ ತವಕದಲ್ಲಿದ್ದಂತೆ ತೋರುತ್ತಿದ್ದ. ಅವನು ತನ್ನ ಕೈಕಾಲುಗಳನ್ನು ತಿರುಟಿಸಿಕೊಂಡು, ಅತ್ತೆಯನ್ನು ನೋಡುತ್ತಾ –

"ಈ ಸಂದರ್ಭದಲ್ಲಿ ನನ್ನ ಎರಡು ಮಾತುಗಳನ್ನು ತಾವುಗಳು ದಯಮಾಡಿ ಲಾಲಿಸಬೇಕು. ಮಿಸ್ ಟ್ರಾಟೂಡ್ಡರವರು ಹೇಳಿದ ಮಾತುಗಳು ಬಹು ಸತ್ಯವಾದವು. ಮಿಸ್ ಏಗ್ನೆಸ್ಸರು ನಮ್ಮ ಜತೆಕೂಟದಷ್ಟೇ ಅನುಭವವುಳ್ಳವರೆಂಬುದು ನಿಜವಾದುದೇ. ಅವರು ನಮ್ಮ ಜತೆಕೂಟದ ಒಬ್ಬ ಪಾಲುಗಾರರಾದ ಪಕ್ಷಕ್ಕೆ ಕೂಟದ ಯೋಗ್ಯತೆಯು ಇನ್ನೂ ಹೆಚ್ಚದಿರದು. ಅಂಥ ಸಂದರ್ಭವನ್ನು ನಾವು ಆನಂದದಿಂದ ನಿರೀಕ್ಷಿಸುತ್ತಿದ್ದೇನೆ" ಎಂದನು.

ಅತ್ತೆಯ ಮುಖವನ್ನು ನೋಡಿ ಅವಳ ಮನಸ್ಸಿನ ಅಭಿಪ್ರಾಯವನ್ನು ಊಹಿಸುವುದು ಅಸಾಧ್ಯ. ಮೌನವಾಗಿ ಕುಳಿತು ಈ ಮಾತುಗಳನ್ನು ಕೇಳುತ್ತಿದ್ದ ಅತ್ತೆಯನ್ನು ನೋಡಿ, ನಮ್ಮ ಕೂಟದವರೊಡನೆ ಸರಿಸಮಾನನಾಗಿ ಬೆರೆತು ಮಾತಾಡಿ, ತನ್ನ ಸ್ಥಾನ ಗೌರವವನ್ನು ಹೆಚ್ಚಿಸಲಿಚ್ಛಿಸುತ್ತಿದ್ದ ಉರೆಯನಿಗಂತೂ ಅತ್ತೆಯ ಅಂತರಂಗದ ಹೊಳಹು ಸ್ವಲ್ಪವೂ ಗೋಚರಿಸಲಿಲ್ಲ. ಅತ್ತೆ ಸ್ವಲ್ಪವೂ ಅಂಜಿಕೆ, ದಯಾ, ದಾಕ್ಷಿಣ್ಯವಿಲ್ಲದೆ, ಉರೆಯ ಕನಸಿನಲ್ಲೂ ನಿರೀಕ್ಷಿಸದಂತಿದ್ದ ರೀತಿಯಲ್ಲಿ –
"ಉರೆಯಾ ನಿನ್ನನ್ನು ಇಲ್ಲಿ ಕೇಳಿದವರಿಲ್ಲ – ನಿನ್ನ ಪ್ರವೇಶ ನಮಗೆ ಅನಗತ್ಯ. ಮೊದಲು ನೀನು ನಿನಗೆ ದೊರಕಿರುವ ಸ್ಥಾನವನ್ನು ಉಳಿಸಿಕೋ. ಮತ್ತೆ ಅವರಿವರನ್ನು ಜತೆಕೂಟಕ್ಕೆ ಸೇರಿಸಿಕೊಳ್ಳುವ ಆಲೋಚನೆ ಮಾಡಬಹುದು" ಎಂದು ಅಂದಳು.

ಉರೆಯ ತಬ್ಬಿಬ್ಬಾದನು. ಈ ಕಠಿಣ ಪ್ರಸಂಗದಲ್ಲಿ ಅವನ ಸಹಾಯಕ್ಕಾಗಿ ಇದ್ದದ್ದು ಅವನ ಕೈಯಲ್ಲಿದ್ದ ರಿಕಾರ್ಡು ಕಟ್ಟು ಮಾತ್ರವಾಗಿತ್ತು. ಉರೆಯನು ಅತ್ತೆಗೆ ಉತ್ತರಕೊಡದೆ, ರಿಕಾರ್ಡು ಕಟ್ಟನ್ನು ಸವರುತ್ತಾ ಇದ್ದವರಲ್ಲಿ ನಾನು ಸುಲಭನೆಂದು, ನನ್ನೊಡನೆ ಮಾತಾಡಿದನು.

"ಮಾಸ್ಟರ್ ಕಾಪರ್ಫೀಲ್ಡ್ – ಅಲ್ಲ ಮಿ. ಕಾಪರ್ಫೀಲ್ಡ್, ನೀವು ಸೌಖ್ಯವಾಗಿದ್ದೀರಷ್ಟೆ" ಎಂದು ಕೇಳುತ್ತಾ ನಮ್ಮ ಇಂದಿನ ಬಡತನದ ಪರಿಸ್ಥಿತಿಯನ್ನು ತಾನು ಅರಿತು ಸಂತೋಷಿಸುತ್ತಿದ್ದವನಂತೆ ತೋರುತ್ತಾ ಮಾತನ್ನು ಮುಂದರಿಸಿ –
"ನಿಮ್ಮ ಹಿತಚಿಂತಕರಿಗೆಲ್ಲ ದುಃಖಕರವಾಗಿರುವ ಪರಿಸ್ಥಿತಿ ನಿಮಗೆ ಈಗ ಬಂದಿದೆ ನಿಜ. ಆದರೆ ನಿಮ್ಮ ಯೋಗ್ಯತೆ, ಗೌರವಕ್ಕೆ ಅದು ಅಷ್ಟೊಂದು ಸಂಬಂಧಿಸಿಲ್ಲ. ಮನುಷ್ಯನ ಯೋಗ್ಯತೆಗೆ ಹಣವು ಪ್ರಧಾನವಲ್ಲವಷ್ಟೆ. ಯೋಗ್ಯತೆ ಯಾವುದರಿಂದ ಬರುತ್ತದೆಂದು ವಿವರಿಸುವ ಸಾಮರ್ಥ್ಯ ನನಗಿಲ್ಲ. ಆದರೂ ಹಣದಿಂದ ಮಾತ್ರ ಮನುಷ್ಯನ ಯೋಗ್ಯತೆಯು ಗಣನೆಯಾಗಬಾರದೆಂದೇ ನನ್ನ ಅಭಿಪ್ರಾಯ" ಎಂದು ಹೇಳಿದನು. ಉರೆಯ ಇಷ್ಟು ಮಾತಾಡುವಾಗ, ಮಾತುಗಳಲ್ಲಿ ನನ್ನ ಹಳೆ ಪರಿಚಯಸ್ಥನೆಂಬ ಸಲಿಗೆ ಕಂಡುಬಂದರೂ ಹೇಳುವ ಕ್ರಮ ಠೀವಿಗಳಲ್ಲಿ, ಮುಖಭಂಗಿಯಲ್ಲಿ, ತಾನು ಜತೆಕೂಟದ ಒಬ್ಬ ಗಣ್ಯ ಪಾಲುಗಾರನೆಂಬುದನ್ನೂ ತನ್ನ ಯೋಗ್ಯತೆಯ ಫಲವಾಗಿ, (ನಾವು ವಿರೋಧಿಸುತ್ತಿದ್ದರೂ) ಅವನು ಜಯಶೀಲನಾಗಿ, ಆ ಸ್ಥಾನಕ್ಕೆ ಬಂದವನೆಂಬುದನ್ನು ತೋರಿಸುತ್ತಿದ್ದನು.

ಉರೆಯನು ಪುನಃ ನಮ್ಮ ಮಾತುಗಳ ಮಧ್ಯೆ ಪ್ರವೇಶಿಸಿ, ನಮ್ಮ ಸರಿಸಮಾನಸ್ಥನು ತಾನೆಂದು ಸಿದ್ಧಾಂತಪಡಿಸಿಕೊಳ್ಳುವಂತೆ ತೋರುತ್ತಾ ಪೂರ್ವದ ವಿನೀತತೆಗಳನ್ನೆಲ್ಲ ಬದಿಗಿಟ್ಟು, ಮಿ. ವಿಕ್ಫೀಲ್ಡರನ್ನು ನೋಡುತ್ತಾ –
"ಮಿ. ಕಾಪರ್ಫೀಲ್ಡ್, ಮಿ. ವಿಕ್ಫೀಲ್ಡರು ಈಗ ಮೊದಲಿಗಿಂತ ಆರೋಗ್ಯವಂತರಾಗಿಯೂ ಹುಮ್ಮಸ್ಸುಳ್ಳವರಾಗಿಯೂ ತೋರುವುದಿಲ್ಲವೇನು? ವಯಸ್ಸು ಅವರಲ್ಲಿ ವಿಶೇಷ ಬದಲಾವಣೆಯನ್ನು ತಂದಿಲ್ಲ. ಅದು ಏನಾದರೂ ಬದಲಾವಣೆ ತಂದಿದ್ದರೆ, ಆ ಬದಲಾವಣೆ ಅವರ ಹೃದಯದ ಮೇಲೆ ನಡೆದಿದೆ. ನನ್ನನ್ನೂ ನನ್ನ ತಾಯಿಯನ್ನೂ ಉತ್ತಮ ಸ್ಥಿತಿಗೆ ತಂದಿರುತ್ತಾರೆ. ನಮ್ಮ ಉದ್ಧಾರಗೈದ ಮೃದು ಹೃದಯ ಅವರದು. ಅವರ ವೃತ್ತಿಯ, ಜೀವನದ ಮುಖ್ಯ ಗುರಿಯೇ ನಮ್ಮಂಥವರ ಉದ್ಧಾರ ಮತ್ತು ಅವರ ರೂಪವಂತೆ ಮಗಳು ಏಗ್ನೆಸ್ಸಳ ಭವಿಷ್ಯದ ಅಭ್ಯುದಯ ಮಾತ್ರವಾಗಿದೆ. ಇಂಥ ದೃಷ್ಟಿಕೋನವನ್ನು, ಹೃದಯ ಪರಿವರ್ತನೆಯನ್ನು ಮಾತ್ರ ಅವರಲ್ಲಿ ಪ್ರಾಯವು ತಂದಿದೆ" ಎಂದು ಉರೆಯ ಬಹು ವಿನಯದಿಂದೆಂಬಂತೆ ಕೈ ಮೈ ಡೊಂಕಿಸಿಕೊಂಡು ಹೇಳಿದನು. ಅವನ ಮೈ ಕೈ ಅಲುಗಾಟ, ಬಳುಕಾಟಗಳಿಂದ ಅವನ ಅಂತರಂಗದ ಮಾತ್ಸರ್ಯ, ವಕ್ರತೆ, ಉತ್ತಮರ ಮೇಲಿನ ವೈರವೆಲ್ಲ ಹೊರಬೀಳುತ್ತಿತ್ತು. ಅತ್ತೆಗೆ ಅವನನ್ನು ನೋಡಿದಷ್ಟೆಲ್ಲ ಸಿಟ್ಟು ಹೆಚ್ಚುತ್ತಿತ್ತು. ಅವಳು ಸಿಟ್ಟಿನಿಂದ ಗುಡುಗುಟ್ಟುತ್ತಾ –
"ಏನಾಗಿದೆಯೇ ಅವನಿಗೆ? ಭೂತ ಹಿಡಿದವನ ಹಾಗೆ ಮೈ ಅಲ್ಲಾಡಿಸುತ್ತಾನೆ – ಭೂತ ಹೊರಲಿ, ಅವನನ್ನು" ಅಂದಳು ಅತ್ತೆ, ಅವನಿಗೆ ಕೇಳುವ ಹಾಗೆಯೇ!

"ನೀವು ಸ್ವಲ್ಪ ಗಾಬರಿಗೊಳ್ಳತಕ್ಕ ಸ್ವಭಾವದವರು. ಈ ವಿಧದ ಕೃತಜ್ಞತಾಪೂರ್ವಕವಾದ ಬಡವರ ಮಾತನ್ನು ಕೇಳಿರಲಾರಿರಿ" ಅಂದನು ಉರೆಯ.
"ಗಾಬರಿಯೂ ಇಲ್ಲ, ಹೆದರಿಕೆಯೂ ಇಲ್ಲ. ನಿನ್ನ ಸ್ವಭಾವ ನೋಡಿ ಜಿಗುಪ್ಸೆ ಮಾತ್ರ ಆಗುತ್ತಿದೆ. ನೀನು ಮನುಷ್ಯನಾಗಿದ್ದರೆ ಮನುಷ್ಯನಂತೆ ವರ್ತಿಸು. ಹೊಡೆದು ಹಾಕಿದ, ಅರೆಜೀವದ ಹಾವಿನಂತೆ ಮೈಕೈ ಡೊಂಕಿಸಿ ಠಕ್ಕು ವಿನಮ್ರತೆ ತೋರಿಸಬೇಡ" ಎಂದು ಅತ್ತೆ ಪುನಃ ಉರೆಯನನ್ನು ಗದರಿಸಿದಳು.

ಈ ಮಾತಿನಿಂದ ಉರೆಯ ನಿಜವಾಗಿಯೂ ಹೆದರಿಹೋದ. ಅತ್ತೆಯ ಈಗಿನ ಪರಿಸ್ಥಿತಿಯಲ್ಲಿ ಅವಳು ಮಾತನ್ನೂ ಮುಂದರಿಸಿ ಕೈ ಮಾಡದೆ ತನ್ನನ್ನು ಬಿಟ್ಟದ್ದು ಪುಣ್ಯವೆಂದೇ ಉರೆಯ ಅಂದುಕೊಂಡು, ಸ್ವಲ್ಪ ಎಚ್ಚರಿಕೆಯಿಂದಲೇ ನುಡಿದನು –

"ನಮ್ಮಿಬ್ಬರಿಂದ ನಿಮಗೆ ಏನಾದರೂ ಸಹಾಯವಾಗಬೇಕೇ ಎಂದು ವಿಚಾರಿಸಲೋಸ್ಕರವೇ ನಾವು ಇಲ್ಲಿಗೆ ಈಗ ಬಂದಿರುವೆವು."
"ಉರೆಯ ಅವನ ವೃತ್ತಿಯಲ್ಲಿ ತುಂಬಾ ನುರಿತವನು. ನನ್ನ ವೃದ್ಧಾಪ್ಯದಲ್ಲಿ ನನಗೆ ತುಂಬಾ ಸಹಾಯ ಮಾಡುತ್ತಿರುವವನು. ಅವನನ್ನು ನನ್ನ ಜತೆಗೆ ಸೇರಿಸಿಕೊಂಡನಂತರ ನನ್ನ ಕೆಲಸ ಬಹು ಹಗುರವಾಗಿದೆ, ಸುಖಕರವಾಗಿದೆ" ಎಂದು ಮಿ. ವಿಕ್ಫೀಲ್ಡರು (ಉರೆಯ ಈ ಮಾತನ್ನು ಕೇಳಿ ಸಂತೋಷಪಡಬಹುದೆಂದು ನಂಬುತ್ತಿರುವವರಂತೆ ತೋರುತ್ತಾ) – ಹೇಳಿದರು. ಈ ಮಾತುಗಳನ್ನಾಡುವಾಗ ಮಿ. ವಿಕ್ಫೀಲ್ಡರು ತಾವು ಯಾವ ಮಾತುಗಳಿಂದ ಉರೆಯನನ್ನು ಒಲಿಸಬಹುದೆಂದು ತವಕಿಸುತ್ತಿರುವಂತೆಯೂ ಎಲ್ಲಿ ತಪ್ಪಿ ಬೀಳುವರೋ ಎಂದು ಅಂಜುತ್ತಿರುವವರಂತೆಯೂ ತೋರುತ್ತಿದ್ದರು.

"ಎಂಥಾ ಅಮೂಲ್ಯ ಆಶೀರ್ವಚನಗಳು, ಬಹುದೊಡ್ಡ ಬಹುಮಾನ. ಮಿ. ವಿಕ್ಫೀಲ್ಡರ ಜವಾಬ್ದಾರಿಯ ಭಾರಗಳನ್ನು ನನ್ನ ಶಕ್ತ್ಯನುಸಾರ ಹೊತ್ತು ನಾನವರ ಸೇವೆ ಮಾಡುತ್ತಿರುವೆನು" ಎಂದು ಉರೆಯ ನಮ್ರವಾಗಿ ಉತ್ತರವಿತ್ತನು.

ಉರೆಯನನ್ನು ನಮ್ಮ ಮನೆಯಿಂದ ಹೊರನೂಕುವ ದಾರಿ ಏನೆಂದು ಏಗ್ನೆಸ್ಸಳು ಗ್ರಹಿಸುತ್ತಾ ಅದಕ್ಕಾಗಿಯೇ ಅವಳು ತನ್ನ ತಂದೆಯ ಸಮೀಪಕ್ಕೆ ಬಂದು ನಿಂತು –
"ಅಪ್ಪಾ, ನೀವು ಮಿಸ್ ಟ್ರಾಟೂಡ್ಡರ ಹತ್ತಿರ ಮಾತಾಡಲಿದೆಯೆಂದು ಹೇಳಿದಿರಲ್ಲವೇ. ಆ ಮಾತನ್ನು ಊಟ ತೀರಿಸಿದನಂತರ ನೀವಿಬ್ಬರೇ ತಿರುಗಾಡುತ್ತ ಮಾತಾಡಬಹುದಲ್ಲವೇ?" ಎಂದು ಕೇಳಿದಳು.

ಈ ಮಾತಿಗೆ ಉತ್ತರವನ್ನು ಏನೆಂದು ಕೊಡಬೇಕೆಂದು ಮಿ. ವಿಕ್ಫೀಲ್ಡರು ಉರೆಯನನ್ನು ಕೇಳುವುದರಲ್ಲಿದ್ದಂತೆ ತೋರಿದರು. ಅದನ್ನು ಕಂಡೇ ಉರೆಯ ತಾನು ಅಲ್ಲಿ ನಿಂತಿದ್ದು ಮಿ. ವಿಕ್ಫೀಲ್ಡರ ಮೇಲೆ ತನಗಿದ್ದ ಹಿಡಿತವನ್ನು ಪ್ರದರ್ಶಿಸಬಾರದೆಂದು ಆ ಕೂಡಲೆ, ನಮಗೆ ನಮಸ್ಕರಿಸಿ, ತಮ್ಮ ಜತೆಕೂಟದ ಪ್ರತಿನಿಧಿಯಾಗಿ ಮಿ. ವಿಕ್ಫೀಲ್ಡರು ಅಲ್ಲಿದ್ದರೆ ಸಾಕೆಂದು ಹೇಳುತ್ತಾ ಹೊರಟು ಹೋದನು.

ಮಿ. ವಿಕ್ಫೀಲ್ಡರು ಈಗ ಸ್ವಲ್ಪ ಸ್ವಾಭಾವಿಕ ಸ್ಥಿತಿಗೆ ಬಂದರು. ಅಂದರೆ, ಉರೆಯನ ನಿರ್ಗಮನದನಂತರ ಅವರು ನನ್ನ ಬಾಲ್ಯಕಾಲದ ಮಿ. ವಿಕ್ಫೀಲ್ಡರೇ ಆಗಿ ತೋರಿದರು. ಮತ್ತು, ಅವರ ನಡೆನುಡಿ, ಮುಖಭಾವಗಳೆಲ್ಲ ಸಂತೋಷ ಸಮಾಧಾನಗಳನ್ನು ಸೂಚಿಸತೊಡಗಿದುವು. ನಮ್ಮ ಶಾಲಾ ದಿನಗಳಲ್ಲಿ ನಾನು ಅವರ ಮನೆಯಲ್ಲಿದ್ದದ್ದನ್ನು ನೆನೆನೆದು ಸಂತೋಷಿಸಿಕೊಂಡೆವು. ನನ್ನ ಜೀವನದ ಮುಂದಿನ ವೃತ್ತಿ ಏನಾಗಬಹುದೆಂದು ಆಲೋಚಿಸಿದರು. ಆಗಲೇ ಏಗ್ನೆಸ್ಸಳಿಗೆ ಡಾಕ್ಟರ್ ಸ್ಟ್ರಾಂಗರ ನೆನಪಾಗಿ, ಅವರಲ್ಲಿ ಕಾರ್ಯದರ್ಶಿ ಕೆಲಸವೊಂದು ಖಾಲಿಯಿದ್ದು ಯೋಗ್ಯ ಕಾರ್ಯದರ್ಶಿಯನ್ನು ಹುಡುಕುತ್ತಿದ್ದರಾಗಿ ತಿಳಿಸಿದಳು. ಡಾ। ಸ್ಟ್ರಾಂಗರು ಪೆನ್ಶನ್ ಆದನಂತರ ಲಂಡನ್ನಿನಲ್ಲಿ ನೆಲೆಸಿ ಅಲ್ಲಿ ಅವರ ಬರೆಹದ ಕೆಲಸವನ್ನು ಮಾಡುತ್ತಿದ್ದರಂತೆ. ಏಗ್ನೆಸ್ಸಳ ಸಲಹೆಯಂತೆ ನಾನು ಆ ಕೂಡಲೇ ಡಾ। ಸ್ಟ್ರಾಂಗರಿಗೊಂದು ಪತ್ರ ಬರೆದು ನಾನು ಮರುದಿನ ಅವರನ್ನು ಕಂಡು ಮಾತಾಡಲು ಬರುವುದಾಗಿ ತಿಳಿಸಿದೆನು.

ಆ ದಿನ ಮಿ. ವಿಕ್ಫೀಲ್ಡರೂ ಏಗ್ನೆಸ್ಸಳೂ ನಮ್ಮ ಮನೆಯಲ್ಲೇ ಇದ್ದರು. ಅಪೂರ್ವವಾಗಿ ಬಂದಿದ್ದ – ಮನೆಗೆ ಬಹು ಪ್ರಿಯರೂ, ಗೌರವಾನ್ವಿತರೂ ಆಗಿದ್ದ – ಅವರಿಬ್ಬರ ಜತೆಯಲ್ಲಿ ಆ ದಿನ ನಾವು ಬಹು ಸಂತೋಷದಿಂದ ಕಳೆದೆವು.

ಅತ್ತೆಯೂ ಮಿ. ವಿಕ್ಫೀಲ್ಡರೂ ಹೊರಗೆ ತಿರುಗಾಡುತ್ತಾ ತುಂಬಾ ಮಾತಾಡುತ್ತಿದ್ದರು. ನಾನೂ ಏಗ್ನೆಸ್ಸಳೂ ನನ್ನ ಕೋಣೆಯಲ್ಲಿ ಕಿಟಕಿಯ ಬದಿಯಲ್ಲಿ ಕುಳಿತು ಬೇಕು ಬೇಕಾದಂತೆಲ್ಲ ಮಾತಾಡಿದೆವು. ನಮ್ಮ ಕೋಣೆಯಲ್ಲಿ ದೀಪ ಉರಿಸಿರಲಿಲ್ಲ. ಸೂರ್ಯನು ಆಗ ತಾನೇ ಅಸ್ತಂಗತನಾಗಿದ್ದುದರಿಂದ ಆಕಾಶದಲ್ಲಿ ಎದ್ದು ಬಂದಿದ್ದ ನಕ್ಷತ್ರ, ಪಶ್ಚಿಮದ ಕಡೆಯಿಂದ ಕ್ರಮೇಣವಾಗಿ ಕಡಿಮೆಯಾಗುತ್ತಿದ್ದ ಸುವರ್ಣ ವರ್ಣದ ಬೆಳಕು ಬರುತ್ತಿತ್ತು. ಒಂದು ವಿಧದ ಅರುಣೋದಯ ಕಾಲದಲ್ಲಿ ಕುಳಿತು ಮಾತಾಡುತ್ತಿದ್ದಂತೆ ನಾವು ಬಹು ಸಂತೋಷದಿಂದ ಮಾತಾಡಿದೆವು. ನಾನು ಡೋರಾಳನ್ನು ಕುರಿತಾಗಿಯೂ ಏಗ್ನೆಸ್ಸಳೊಂದಿಗೆ ಮಾತಾಡಿದೆನು. ಡೋರಾಳ ಗುಣಗಳನ್ನೆಲ್ಲ ಕೇಳಿ ಅವಳು ಶ್ಲಾಘಿಸಿದಳು. ಏಗ್ನೆಸ್ಸಳ ಶ್ಲಾಘನೆ ದೊರಕಿದ ಮೇಲಂತೂ ಡೋರಾಳು ಮತ್ತಷ್ಟು ಪ್ರಿಯಳೂ ಪವಿತ್ರಳೂ ಆಗಿ ತೋರಿದಳು. ಡೋರಾಳ ಪ್ರಭೆ, ಪ್ರಭಾವ ಎಷ್ಟೇ – ಎಂಥಾದ್ದೇ ಇದ್ದರೂ ಏಗ್ನೆಸ್ಸಳೂ ಸಹ ನನಗೆ ಇನ್ನೊಂದು ವಿಧದಲ್ಲಿ ಒಬ್ಬ ದಿವ್ಯ ದೇವತೆಯಂತೆಯೇ ತೋರುತ್ತಿದ್ದಳು. ಆ ಸಂಜೆಯ ಅರುಣಕಾಂತಿಯಲ್ಲಿ, ಏಗ್ನೆಸ್ಸಳ ಸೌಮ್ಯ ಸ್ವಭಾವ, ಬುದ್ಧಿ ಜ್ಞಾನಯುತವಾದ ಅವಳ ಮಾತುಗಳು, ಇವುಗಳಿಂದೆಲ್ಲ ಏಗ್ನೆಸ್ಸಳು ನನ್ನ ಜೀವನಪಥದ ಮಾರ್ಗದರ್ಶಕ ಜ್ಯೋತಿಯಂತೆ, ನನ್ನ ಶ್ರೇಯೋಭಿವೃದ್ಧಿಯ ತಾರೆಯಂತೆ, ಶೋಭಿಸಿದಳು. ನನ್ನ ಬುದ್ಧಿಯ ಎಷ್ಟೊಂದು ನ್ಯೂನತೆಗಳನ್ನು ಅವಳು ತಿದ್ದಿ ಸರಿಪಡಿಸಿ, ನನ್ನನ್ನು ಉದ್ಧರಿಸಿರುವಳೆಂಬುದನ್ನು ನಾನೆಂದಿಗೂ ಮರೆಯೆನು.

ಓ ಏಗ್ನೆಸ್, ಪ್ರಿಯ ಭಗಿನೀ – ನಿನ್ನ ಅಂತರಂಗದಲ್ಲಿ ಆಗಲೂ ಬಚ್ಚಿಟ್ಟಿದ್ದ ಅಭಿಪ್ರಾಯವನ್ನು ನಾನು ಬಹುಕಾಲದನಂತರ ಮಾತ್ರ ತಿಳಿದುದರ ಬದಲು ಅಂದೇ ನಾನು ತಿಳಿದಿದ್ದರೆ!

ಏಗ್ನೆಸ್ಸಳ ಹತ್ತಿರ ಹೀಗೆ ತುಂಬಾ ಹೊತ್ತು ಮಾತಾಡಿದನಂತರ ನಾನು ಒಂದು ಕೆಲಸದ ನಿಮಿತ್ತ ಹೊರಗೆ ಹೋದೆ. ಏಗ್ನೆಸ್ಸಳು ಮೊದಲು ಕುಳಿತಿದ್ದಲ್ಲೇ ಕುಳಿತು ಹೊರಗೆ ನೋಡುತ್ತಿದ್ದಳು. ನಾನು ಏಗ್ನೆಸ್ಸಳ ದಿವ್ಯ ಸ್ವರೂಪ, ಸನ್ನಿಧಿಯನ್ನು ನೆನೆನೆದು ಮಾರ್ಗದಲ್ಲಿ ಹೋಗುತ್ತಿದ್ದ ಹಾಗೆಯೇ ನನ್ನೆದುರಿನಿಂದ ಬೇಡಿಕೊಂಡು ಬರುತ್ತಿದ್ದ ಕುರುಡನೊಬ್ಬನು –

"ಕುರುಡಾ, ಕುರುಡನಪ್ಪಾ ಕುರುಡಾ" ಎಂದು ರೋದಿಸಿ ನನ್ನಲ್ಲಿ ದಿಗಿಲೆಬ್ಬಿಸಿದನು. ನನ್ನ ಅತ್ತೆ ಪ್ರೇಮವನ್ನು ಕುರಿತಾಗಿ ಅಂದೇ ಬೆಳಗ್ಗೆ ನನ್ನೊಡನೆ ಹೇಳಿದ್ದ ಮಾತುಗಳ ಪ್ರತಿಧ್ವನಿಯೇ ಇದೆಂಬಂತೆ ತೋರಿ ನನಗೆ ಭಯವೂ ಭ್ರಮೆಯೂ ಉಂಟಾಯಿತು.

ಅಧ್ಯಾಯ ಮೂವತ್ತಾರು

ಹುಮ್ಮಸ್ಸು

ಅತ್ತೆಯ ಬಡತನದ ಪರಿಸ್ಥಿತಿ ತಿಳಿದು ಬಂದನಂತರ ನನ್ನ ಜೀವನ ಕ್ರಮಗಳನ್ನೆಲ್ಲ ಬದಲಾಯಿಸತೊಡಗಿದ್ದೆ. ಅನೇಕ ವಿಷಯಗಳಲ್ಲಿ ಬದಲಾವಣೆಯನ್ನೇ ತಂದಿದ್ದೆ. ಇಂಥ ಕಷ್ಟ ಕಾಲದಲ್ಲಾದರೂ ಸಹ ಅತ್ತೆಗೆ ಒಪ್ಪುವ ವಿಧದಲ್ಲಿ, ಅವಳಂತೆಯೇ ಧೈರ್ಯದಿಂದ ಕಷ್ಟಗಳನ್ನು ಸಹಿಸಿ, ಅಭ್ಯುದಯದ ಮಾರ್ಗವನ್ನು ನಿರ್ಮಿಸಿ, ನನ್ನ ಮೇಲೆ ಅವಳು ಈವರೆಗೆ ತೋರಿಸಿದ್ದ ಪ್ರೀತಿ ವಿಶ್ವಾಸಕ್ಕಾಗಿ ಕೃತಜ್ಞತೆಯಿಂದ ವರ್ತಿಸಿ ಅವಳ ಶ್ಲಾಘನೆಯನ್ನೇ ಪಡೆಯಬೇಕೆಂದೂ ನಿರ್ಧರಿಸಿದ್ದೆನು.

ಮರುದಿನ ಬೆಳಗ್ಗೆ ಹೈಗೇಟಿನಲ್ಲಿದ್ದ ಡಾ। ಸ್ಟ್ರಾಂಗರ ಮನೆಗೆ ಹೊರಡುವ ಮೊದಲು ತಣ್ಣೀರಿನಲ್ಲಿ ಸ್ನಾನ ಮಾಡಿದೆ. ಒಳ್ಳೊಳ್ಳೆ – ಹೆಚ್ಚು ಕ್ರಯದ ಉಡುಪುಗಳನ್ನೆಲ್ಲ ಮಾರಿ, ಸಾಧಾರಣ ಕ್ರಯದ, ಮತ್ತು ಹಳೆ ಉಡುಪುಗಳನ್ನು ಮಾತ್ರ ಉಪಯೋಗಿಸ ತೊಡಗಿದ್ದುದರಿಂದ, ಈ ದಿನವೂ ಹಳೆ ಉಡುಪುಗಳನ್ನು ಧರಿಸಿ ಹೊರಟೆ. ಹೀಗೆ ಹಳೆ ಉಡುಪು ಧರಿಸುವುದೇ ಒಂದು ಪ್ರಶಂಸನೀಯ ಕಾರ್ಯವೆಂದೇ ತಿಳಿದು ನನ್ನ ಮಾರ್ಗದಲ್ಲಿ ಹುರುಪಿನಿಂದ ಸಾಗಿದೆ.

ನನ್ನ ನಡಿಗೆಯ ಜತೆಯಲ್ಲೇ ನನ್ನ ಭವಿಷ್ಯದ ಕಾರ್ಯಕ್ರಮಗಳನ್ನು ಆಲೋಚಿಸುತ್ತಾ ನಿರ್ಧರಿಸುತ್ತಾ ಹೋದೆ. ದೇಹ ಮತ್ತು ಮಾನಸಿಕ ಪರಿಶ್ರಮಗಳಿಂದ ಸಾಕಷ್ಟು ಹಣ ಸಂಪಾದಿಸಿ, ಡೋರಾಳನ್ನು ಪಡೆದು ಪೂಜಿಸುವ ಗುರಿಯನ್ನು ನನ್ನ ಮಾನಸಿಕ ದೃಷ್ಟಿಪಥದಲ್ಲಿಟ್ಟುಕೊಂಡೆನು. ಕೈಯ್ಯಲ್ಲಿ ಕೊಡಲಿ ಹಿಡಿದು ಡೋರಾಳನ್ನು ಸೇರಲಿರುವ ಕಷ್ಟಗಳ ಗೊಂಡಾರಣ್ಯವನ್ನು ಬೇಧಿಸಿ, ಪ್ರಖ್ಯಾತನಾಗಿ, ಡೋರಾಳ ಬಳಿ ಸೇರುವುದೂ ಆ ಮಾರ್ಗವಲ್ಲದಿದ್ದರೆ, ಕೈಯ್ಯಲ್ಲಿ ಚಮ್ಮಟಿ ಹಿಡಿದು ಕರ್ಗಲ್ಲಿನ ಪರ್ವತಗಳನ್ನಾದರೂ ಪುಡಿ ಮಾಡಿ ಡೋರಾಳ ಬಳಿ ಸೇರುವುದೂ ಇಂತಹ ಯಾವುದಾದರೊಂದು ನ್ಯಾಯ ಸಮ್ಮತವಾದ, ಎಷ್ಟೇ ಕಡಿದಾದ ಕೆಲಸವನ್ನಾದರೂ ಮಾಡಿ ಡೋರಾಳನ್ನು ಪಡೆಯುವುದೂ ನನ್ನ ಜೀವನದ ಗುರಿಯಾಗಿ ಇಟ್ಟುಕೊಂಡೆನು. ಈ ತೆರನಾಗಿ ಆಲೋಚಿಸುತ್ತಾ ಡಾ। ಸ್ಟ್ರಾಂಗರ ಮನೆಗೆ ತಲುಪಿದೆನು.

ಡಾಕ್ಟರರು ಕೇಂಟರ್ಬರಿಯಲ್ಲಿದ್ದಂತೆಯೇ ಆಲೋಚನಾಮಗ್ನರಾಗಿ ಹೂದೋಟದಲ್ಲಿ ತಿರುಗಾಡುತ್ತಿದ್ದರು. ಅವರ ಕೈಯ್ಯಲ್ಲಿ, ಕಂಕುಳಲ್ಲಿ ಮತ್ತು ಜೇಬಿನಲ್ಲಿ ಕಾಗದಗಳಿದ್ದುವು. ಅವರು ನೆಲವನ್ನೇ ನೋಡುತ್ತಾ ಒಂದು ನಿರ್ದಿಷ್ಟ ದೂರಕ್ಕೆ ಮಾತ್ರ ಹಿಂದಕ್ಕೂ ಮುಂದಕ್ಕೂ ಹೋಗುತ್ತಾ ಯಾರ ಕಡೆ ಮುಖವಿದ್ದರೂ ಎದುರಿದ್ದವರು ಯಾರನ್ನು ಗುರುತಿಸದೆ, ತಮ್ಮ ಘನವಾದ ಡಿಕ್ಷನರಿಯನ್ನು ಕುರಿತಾಗಿ ಆಲೋಚಿಸುತ್ತಿದ್ದರು.

ಡಾಕ್ಟರರು ನನ್ನನ್ನು ನೋಡುವಂತೆ ಮಾಡಿಕೊಂಡು ಅವರಿಗೆ ನಮಸ್ಕರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಿದೆನು. ಅವರೂ ನಮ್ಮ ಮನೆಯವರ ಯೋಗಕ್ಷೇಮವನ್ನು ವಿಚಾರಿಸಿದರು. ಆಗಲೇ ಅವರು ತಮ್ಮ ಪತ್ನಿಯನ್ನು ಕರೆದು ನಾನು ಮಧ್ಯಾಹ್ನದ ಊಟಕ್ಕೆ ಅವರಲ್ಲೇ ಇರುವೆನಾಗಿ ತಿಳಿಸಿದರು. ಅನಂತರ ಕೆಲವು ಸಂಗತಿಗಳನ್ನು ಮಾತಾಡುತ್ತಾ ಕುಳಿತೆವು.

ನಮ್ಮ ಊಟದ ಸಮಯದಲ್ಲಿ ನಾನು ಬಂದ ಕಾರ್ಯವನ್ನು ಏಗ್ನೆಸ್ಸಳು ನನಗೆ ತಿಳಿಸಿದ್ದ ವಿಷಯಗಳನ್ನೂ ಡಾಕ್ಟರರಿಗೆ ತಿಳಿಸಿದೆನು. ಆದರೆ ನನ್ನಷ್ಟು ಯೋಗ್ಯತೆಯುಳ್ಳವನಿಗೆ ಅವರು ಕೊಡಬಹುದಾದ ಕೆಲಸವು ಭೂಷಣವಲ್ಲವೆಂದು ಅವರು ತರ್ಕ ಮಾಡಿದರು. ಕೊನೆಗೆ ನನ್ನ ಒತ್ತಾಯಕ್ಕಾಗಿ ಅವರು ನನ್ನನ್ನು ದಿನಕ್ಕೆ ನಾಲ್ಕು ಘಂಟೆಯಂತೆ, ವಾರಗಳಲ್ಲಿ ಐದು ದಿನಗಳಲ್ಲಿ ಕೆಲಸ ಮಾಡುವ ಗುಮಾಸ್ತಿಕೆಗೆ ನೇಮಿಸಿಕೊಂಡರು. ಈ ನನ್ನ ಕೆಲಸಕ್ಕೆ ಬೋನಸ್ ಅಲ್ಲದೆ ವರ್ಷ ಒಂದರ ಎಪ್ಪತ್ತು ಪೌಂಡು ಸಂಬಳ ಕೊಡುವುದಾಗಿಯೂ ತಿಳಿಸಿದರು.

ಆ ದಿನ ಅಲ್ಲಿ ಜಾಕ್ ಮಾಲ್ಡನ್ನನೂ ಇದ್ದನು. ಅನಾರೋಗ್ಯದ ಕಾರಣವಾಗಿ ಅವನು ಇಂಡಿಯಾದಿಂದ ಹಿಂತಿರುಗಿದ್ದನಂತೆ. ಆ ದಿನ ಊಟವಾದನಂತರ ನಾನು ನಮ್ಮ ಮನೆಗೆ ಬಂದೆ. ಆದರೆ, ನಮ್ಮ ಮಾತುಗಳ ಮಧ್ಯೆ ಜಾಕ್ ಮಾಲ್ಡನ್ನನು ಡಾ। ಸ್ಟ್ರಾಂಗರ ಒಪ್ಪಿಗೆಯನ್ನು ಪಡೆದೇ ಅವರ ಪತ್ನಿ ಮಿಸೆಸ್ ಅನ್ನಿಯನ್ನು ರಾತ್ರಿ ನಾಟಕಕ್ಕೆ ಹೋಗೋಣವೆಂದು ಎಷ್ಟೇ ಒತ್ತಾಯಿಸಿದರೂ ಮಿಸೆಸ್ ಅನ್ನಿಯು ಜಾಕ್ ಮಾಲ್ಡನ್ನನ ಜತೆಯಲ್ಲಿ ಹೋಗಲು ನಿರಾಕರಿಸಿದ ಸಂಗತಿ ನನ್ನ ಮನಸ್ಸಿನಲ್ಲಿ ಒಂದು ವಿಶೇಷದ ಅನುಭವವಾಗಿ ಉಳಿಯಿತು.

ನನಗೆ ಸಂಪಾದನೆ ಮಾಡಲೆಡೆಯಿದ್ದ ಒಂದು ವೃತ್ತಿ ಸಿಕ್ಕಿದಂತೆಯೇ ಮಿ. ಡಿಕ್ಕರಿಗೂ ಒಂದು ಸಂಪಾದನೆಯ ಮಾರ್ಗವನ್ನು ನಾನೂ ಟ್ರೇಡಲ್ಸನೂ ಸೇರಿ ಕಂಡು ಹಿಡಿದೆವು. ಮಿ. ಡಿಕ್ಕರ ಕೈ ಬರಹದ ಅಕ್ಷರ ಬಹು ಸೊಗಸಾಗಿದ್ದುದರಿಂದ ಅವರನ್ನು ರಿಕಾರ್ಡುಗಳ ನಕಲು ತೆಗೆಯುವ ಕೆಲಸಕ್ಕೆ ನೇಮಿಸಬೇಕೆಂದು ಇಚ್ಛಿಸಿದೆವು. ಆದರೆ ಅವರಿಗೆ ಅವರ ಬರಹಗಳಲ್ಲು ತಪ್ಪದೆ ಬಂದುಬಿಡುತ್ತಿದ್ದ 'ಚಾರ್ಲ್ಸ್ ದೊರೆಯ ತಲೆ'ಯನ್ನು ತಪ್ಪಿಸುವುದು ಹೇಗೆಂಬುದೇ ನಮ್ಮೆದುರಿದ್ದ ಕಷ್ಟವಾಯಿತು. ಕೊನೆಗೆ ಆ ಕಷ್ಟ ನಿವಾರಣಾ ಮಾರ್ಗವನ್ನೂ ಕಂಡು ಹಿಡಿದೆವು.

ಮಿ. ಡಿಕ್ಕರು ನಕಲು ತೆಗೆಯಲು ಉಪಯೋಗಿಸುತ್ತಿದ್ದ ಮೇಜದ ಪಕ್ಕದಲ್ಲೇ ಇನ್ನೊಂದು ಮೇಜು, ಕಾಗದ, ಲೇಖನಿ ಮೊದಲಾದುವನ್ನು ಇಟ್ಟು, ಮಿ. ಡಿಕ್ಕರಿಗೆ 'ಚಾರ್ಲ್ಸ್ ದೊರೆಯ ತಲೆ' ಕಂಡಕೂಡಲೇ ಅದನ್ನು ಮಾತ್ರ ಈ ಪಕ್ಕದ ಮೇಜಿನಲ್ಲಿ ಕುಳಿತು ಬರೆದು, ಮೊದಲಿನ ಮೇಜಿನಲ್ಲಿ ನಿಜವಾದ ನಕಲು ತಯಾರಿ ಕೆಲಸ ಮಾಡಬಹುದೆಂದು ಕಂಡುಹಿಡಿದೆವು.

ಮಿ.ಡಿಕ್ಕರು ಹೇಗಾದರೂ ತಾನು ಹಣ ಸಂಪಾದನೆ ಮಾಡಿ ಅತ್ತೆಯನ್ನು ಸಂತೋಷಪಡಿಸಬೇಕೆಂಬ ಅವರ ಆಸೆ ಉತ್ಸಾಹಗಳ ಕಾರಣವಾಗಿ ಒಂದೆರಡು ಸರ್ತಿ ಈ ವಿಧದ ಪ್ರಯತ್ನ ಮಾಡಿ ಅಭ್ಯಾಸ ಮಾಡಿದನಂತರ ನಕಲು ತೆಗೆಯುವ ಕೆಲಸದಲ್ಲಿ ಯಶಸ್ವಿಯಾದರು. ಇದರ ಫಲಿತಾಂಶವಾಗಿ ಮೊದಲಿನ ವಾರದಲ್ಲೇ ಮಿ. ಡಿಕ್ಕರು ಹತ್ತು ಶಿಲಿಂಗ್ ಒಂಬತ್ತು ಪೆನ್ಸ್ ಸಂಪಾದಿಸಿದರು. ತನ್ನ ಸಂಪಾದನೆಯ ಹಣವನ್ನೆಲ್ಲಾ ಆರು ಪೆನ್ಸುಗಳ ನಾಣ್ಯಗಳನ್ನಾಗಿ ಮಾಡಿಕೊಂಡು, ಒಂದು ತಟ್ಟೆಯಲ್ಲಿ ಒಂದು ಚಿತ್ರದಂತೆ ಆ ನಾಣ್ಯಗಳನ್ನೆಲ್ಲ ಇಟ್ಟುಕೊಂಡು, ಕಣ್ಣುಗಳಲ್ಲಿ ಆನಂದಬಾಷ್ಪ ಸುರಿಸುತ್ತಾ ಮುಖದಲ್ಲಿ ಸ್ವಲ್ಪ ಹೆಮ್ಮೆಯನ್ನೇ ತೋರಿಸುತ್ತಾ ಮಿ. ಡಿಕ್ಕರು ತನ್ನ ಸಂಪಾದನೆಯನ್ನು ಅತ್ತೆಗೆ ಒಪ್ಪಿಸಿದ ಚಿತ್ರವನ್ನು ನಾನೆಂದಿಗೂ ಮರೆಯೆನು. ಮಿ. ಡಿಕ್ಕರು ನನ್ನನ್ನು ನೋಡಿ ಹಿಗ್ಗುತ್ತಾ ಅಂದರು –
"ಟ್ರಾಟೂಡ್, ಇನ್ನು ಹೆದರಬೇಡಿ. ಅತ್ತೆಯ ಜೀವನದ ದಾರಿ ನನ್ನ ಕೈಯ್ಯಲ್ಲಿ ಸುರಕ್ಷಿತವಾಗಿದೆ" ಹೀಗೆ ಹೇಳಿ ಅವರು ತನ್ನ ಕೈಬೆರಳುಗಳನ್ನು ಎತ್ತಿ ಹಿಡಿದು ತೋರಿಸಿ, ಆ ಬೆರಳುಗಳೇ ತನ್ನ ಹಣದ ಬೇಂಕು ಎಂಬಂತೆ ಸಂತೋಷಪಟ್ಟರು. ಹೀಗೆ ನಾವು ಒಂದೊಂದು ವಿಧದಲ್ಲಿ ಜೀವನ ವೃತ್ತಿಯನ್ನು ಕೈಕೊಂಡೆವು.

ಒಂದು ದಿನ ಟ್ರೇಡಲ್ಸನು ನಮ್ಮ ಮನೆಗೆ ಬಂದು ಮಿ. ಮೈಕಾಬರರ ಒಂದು ಪತ್ರವನ್ನು ತಂದು ಕೊಟ್ಟನು. ಆ ಪತ್ರವು ನನಗೇ ಬರೆಯಲ್ಪಟ್ಟಿದ್ದುದಾದರೂ ಅದರ ಮೇಲ್ಗಡೆ 'ಮಿ.ಟ್ರೇಡಲ್ಸ್ ವಕೀಲರು ನೋಡಿ, ಮಿ. ಕಾಪರ್ಫೀಲ್ಡರಿಗೆ ತಲುಪಿಸುವುದು' ಎಂದು ಬರೆಯಲಾಗಿತ್ತು. ಪತ್ರವು ಈ ಮುಂದೆ ತೋರುವಂತಿತ್ತು:
ಪ್ರಿಯ ಕಾಪರ್ಫೀಲ್ಡ್,
ನಾನು ನಿರೀಕ್ಷಿಸುತ್ತಿದ್ದ ಅಭ್ಯುದಯವು ಸದ್ಯವೇ ಸಿದ್ಧಿಸಲಿದೆಯೆಂಬ ವರ್ತಮಾನ ಕೇಳಿದರೆ ನಿಮಗೆ ಆಶ್ಚರ್ಯವಾಗದು. ಏಕೆಂದರೆ ನನ್ನ ಸಂದರ್ಭಗಳು ಈ ತೆರನಾಗಿ ಮುಂದುವರಿಯುತ್ತಿದ್ದ ವಿಷಯವನ್ನು ನಾನು ನಿಮಗೆ ಈ ಮೊದಲೇ ತಿಳಿಸಿರುವೆನಷ್ಟೆ.

ದೈವಾನುಗ್ರಹವುಳ್ಳ ನಮ್ಮ ಇಂಗ್ಲೆಂಡಿನ ಹೆಸರುಗೊಂಡ ಒಂದು ನಗರದಲ್ಲಿ ನಾನು ಕುಟುಂಬ ಸಮೇತನಾಗಿ ಒಂದು ವೃತ್ತಿಯನ್ನು ತೊಡಗಿ, ಸದ್ಯವೇ ಅಲ್ಲಿ ನೆಲೆಸಲಿರುವೆನು. ಕಲಾವಿದರಿಂದಲೂ ಕೃಷಿ ಕುಶಲಿಗಳಿಂದಲೂ ಸಮ್ಮಿಶ್ರಿತವಾಗಿರುವ ಈ ಪಟ್ಟಣದಲ್ಲಿ ನಾನು ಅವಲಂಬಿಸುವ ವೃತ್ತಿಯು ನ್ಯಾಯ, ಧರ್ಮ, ಪಾಂಡಿತ್ಯಗಳಿಗೆ ಸಂಬಂಧಿಸಿರುವಂಥಾದ್ದೆಂದು ಸ್ವಲ್ಪ ಹೆಮ್ಮೆಯಿಂದಲೇ ತಿಳಿಸುತ್ತಿದ್ದೇನೆ. ನನ್ನ ಧರ್ಮಪತ್ನಿಯೂ ನಮ್ಮ ಔರಸ ಕುಟುಂಬವೂ ಈ ಪ್ರಸಂಗದಲ್ಲಿ ಭಾಗವಹಿಸುವರು. ನಮ್ಮ ಅಭ್ಯುದಯವು ಈ ರೀತಿಯಲ್ಲಿ ಮುಂದುವರಿದು, ಭವಿಷ್ಯತ್ಕಾಲದಲ್ಲಿ ನಮ್ಮ ಪಾರ್ಥಿವ ಶರೀರವು ಇದೇ ಜಗದ್ವಿಖ್ಯಾತ ನಗರದ ಪವಿತ್ರ ಶ್ಮಶಾನದಲ್ಲಿ, ಇತರ ಮಹಾತ್ಮರುಗಳ ಚಿರಸ್ಮರಣೀಯ ಕುರುಹುಗಳ ಎಡೆಯಲ್ಲಿ ಸ್ಥಾಪಿಸಲ್ಪಡುವ ಸುಯೋಗವನ್ನು ಇಂದು ಊಹಿಸಿ ಸಂತೋಷಿಸಿದರೆ ತಪ್ಪಾಗಲಾರದು.

ಸಂಸಾರದ ಸುಖದುಃಖಗಳನ್ನು ಅನುಭವಿಸಿ ನೆಲೆಸಿದ್ದ ನಮ್ಮ ಸುರಪುರ ಸದೃಶ ಲಂಡನ್ ನಗರವನ್ನು ನಾವು ಇಂದು ಬಿಟ್ಟು ಹೊರಟ ಮೇಲೆ ಪುನಃ ಈ ಕಡೆಗೆ ಬರದೇ ಇರಬಹುದು. ಹಾಗೆಯೇ ನಮ್ಮ ಕೌಟುಂಬಿಕ ಜೀವನದಲ್ಲಿ ಬೆರೆತು ಕಲೆತು ನಮ್ಮವರೇ ಆಗಿದ್ದ ನಿಮ್ಮನ್ನು ಶಾಶ್ವತವಾಗಿಯೋ ಅಥವಾ ದೀರ್ಘ ಕಾಲವೋ ಅಗಲುವ ಸಂಭವವೂ ಇರಬಹುದು. ಇಂತಹ ಮಹತ್ವದ ಸಂದರ್ಭಕ್ಕೆ ತಕ್ಕಂತೆ, ಮಿ. ಥಾಮಸ್ ಟ್ರೇಡಲ್ಸರವರನ್ನು ಜತೆಗೂಡಿಕೊಂಡು, ನೀವು ಈ ದಿನವೇ ನಮ್ಮ ಭವನಕ್ಕೆ ಬರುವ ಮಹದುಪಕಾರವನ್ನು ಮಾಡಬೇಕೆಂದು ಪ್ರಾರ್ಥಿಸುವ
ನಿಮ್ಮ ಚಿರಸ್ನೇಹಾಭಿಲಾಷಿ
ವಿಲ್ಕಿನ್ಸ್ ಮೈಕಾಬರ್

ಈ ಆಮಂತ್ರಣವನ್ನು ಸ್ವೀಕರಿಸದಿರುವುದು ಅಸಾಧ್ಯವಾಗಿತ್ತು. ನಾವು ಆ ದಿನವೇ ಮಿ. ಮೈಕಾಬರರ ಮನೆಗೆ ಹೋದೆವು. ಮಿ. ಮತ್ತೂ ಮಿಸೆಸ್ ಮೈಕಾಬರರು ಬಹು ಘನಸ್ಥಿಕೆಯಿಂದ ನಮ್ಮನ್ನು ಸ್ವಾಗತಿಸಿದರು. ನಮ್ಮನ್ನು ಉಚಿತವಾದ ಆಸನಗಳಲ್ಲಿ ಕುಳ್ಳಿರಿಸಿ, ನಮ್ಮ ಯೋಗಕ್ಷೇಮಗಳನ್ನು ವಿಚಾರಿಸಿ, ಔತಣದ ಬಗ್ಗೆಯ ಕೆಲಸವನ್ನು ಮಾಡತೊಡಗಿದರು. ಆ ಮಧ್ಯೆ ಪತಿಪತ್ನಿಯರು ತಂತಮ್ಮೊಳಗೆ ಪತಿಯ ಮುಂದಿನ ಘನಹುದ್ದೆಯನ್ನು ಕುರಿತೂ ಮಾತಾಡಿಕೊಳ್ಳುತ್ತಿದ್ದರು. ನಾವೂ ಅವರ ಮಾತುಗಳಲ್ಲಿ ಸಂದರ್ಭಾನುಸಾರ ಭಾಗವಹಿಸಿದೆವು. ತಮ್ಮ ಮುಂದಿನ ಘನವೃತ್ತಿಯನ್ನು ಕುರಿತಾಗಿ ನಮ್ಮೊಡನೆ ಮಾತಾಡಬೇಕೆಂದು ಮಿ.ಮೈಕಾಬರರು ತುಂಬಾ ತವಕಪಡುತ್ತಿದ್ದರು. ಕೊನೆಗೆ ಅವರು ಮಾತು ಪ್ರಾರಂಭಿಸಿದರು.

"ಮಿ. ಕಾಪರ್ಫೀಲ್ಡರೇ ಮತ್ತು ಮಿ. ಟ್ರೇಡಲ್ಸರವರೇ

"ಸ್ವಲ್ಪ ಸಮಯದ ಹಿಂದೆ ನಾನು ನಮ್ಮ ದೇಶದ ಜನರಿಗೆ ಪತ್ರಿಕೆಗಳ ಮೂಲಕ ಒಂದು ಕರೆಯನ್ನು ಕೊಟ್ಟಿದ್ದೆ. ಸಮಾಜವು ನಮ್ಮಂಥವರಿಗೆ ವೃತಿಯನ್ನು ಕೊಟ್ಟು ತನ್ನ ಅಭ್ಯುದಯವನ್ನು ಸಾಧಿಸುವುದೇ ಅಥವಾ ಆಲಸ್ಯದಿಂದ ಸುಮ್ಮನಿದ್ದು ತನ್ನ ಅಧಃಪತನವನ್ನೇ ತಂದುಕೊಳ್ಳುವುದೇ ಎಂಬ ಒಂದು ಪ್ರಶ್ನೆಯನ್ನು ಮಿಸೆಸ್ ಮೈಕಾಬರಳು, ನನ್ನ ಕರೆಯ ಪೂರ್ವಭಾವಿಯಾಗಿ, ಸಮಾಜಕ್ಕೆ ಹಾಕಿದ್ದಳಷ್ಟೆ. ಆ ಕರೆಗೆ ಯಾರು ಉತ್ತರ ಕೊಡದಿದ್ದರೂ ಕೇಂಟರ್ಬರಿ ನಗರದ ವಕೀಲ ಜತೆಕೂಟದ – ಅಂದರೆ, ವಿಕ್ಫೀಲ್ಡ್ ಮತ್ತು ಹೀಪ್ ಜತೆಕೂಟದ, ಪ್ರಮುಖ ಪಾಲುದಾದರಾದ ಮಿ. ಹೀಪ್ ಎಂಬವರು ಉತ್ತರ ಕೊಟ್ಟಿರುವರು. ಅವರಿಗೂ ನನಗೂ ಮಾತುಕಥೆಗಳು ನಡೆದು, ಪ್ರಕೃತ ನನ್ನನ್ನು ಅವರು ತಮ್ಮ ಸ್ವಂತ ಕಾರ್ಯದರ್ಶಿಯಾಗಿ ನೇಮಿಸಿರುತ್ತಾರೆ. ನನ್ನ ಅನುಭವವು ಬೆಳೆದಂತೆ ಇದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ನನಗೆ ಕೊಡಲು ಒಪ್ಪಿರುವರು. ಈಗ ನನಗೆ ನಿಶ್ಚೈಸಿರುವ ಸಂಬಳ ವಿಶೇಷ ಆಕರ್ಷಣೀಯವಾಗಿಲ್ಲವಾದರೂ ನನ್ನ ಅನಿವಾರ್ಯವಾದ ಸಾಲಗಳನ್ನೆಲ್ಲ ಅವರೇ ಹಣಕೊಟ್ಟು ಪರಿಹರಿಸಿರುವ ಸಂಗತಿಯೇ ಅವರ ಔದಾರ್ಯವನ್ನು ಸೂಚಿಸುತ್ತದೆ. ನಾನಿನ್ನು ಕಾನೂನಿನ ಗಹನ ವಿಚಾರವನ್ನು ಸ್ವಲ್ಪ ಪರಿಶ್ರಮದಿಂದ ಅಭ್ಯಸಿಸಿದರೆ ಆಯಿತು. ಮುಂದೆ ನಮ್ಮ ಕುಟುಂಬದ ಔನ್ನತ್ಯವು ತಾನಾಗಿಯೇ ಸಿದ್ಧಿಸುವುದು" ಅಂದರು ಮಿ. ಮೈಕಾಬರರು.

ಮಿ.ಮೈಕಾಬರರ ಮಾತನ್ನು ಕುರಿತು ಅವರ ಪತ್ನಿಯು ಸ್ವಲ್ಪ ಆಕ್ಷೇಪಿಸುತ್ತಾ –
"ಎಲ್ಲವನ್ನೂ ನೀವು ಅಷ್ಟೊಂದು ಮುಂದಾಗಿಯೇ ಹೇಳಬಾರದು. ನೀವು ಹೇಳುವುದೆಲ್ಲ ನಿಜವಾದ ಸಂಗತಿಗಳೇ ಆದಾಗ್ಯೂ ಕೇವಲ ಮರ್ಯಾದೆ ದೃಷ್ಟಿಯಿಂದಲಾದರೂ ಭವಿಷ್ಯವನ್ನು ಈಗಲೇ ಚಿತ್ರಿಸಬಾರದು. ವಿಕ್ಫೀಲ್ಡ್ ಮತ್ತೂ ಹೀಪ್ ಜತೆಕೂಟದಲ್ಲಿ ಕ್ರಮೇಣವಾಗಿ ಒಬ್ಬ ಪಾಲುಗಾರರೇ ಆಗುವುದೂ ನ್ಯಾಯಶಾಸ್ತ್ರವನ್ನು ನೀವು ವ್ಯಾಸಂಗಮಾಡಿ, ಈಗಲೇ ಸಿವಿಲ್ ವಿಭಾಗದಲ್ಲಿ ಪ್ರತಿವಾದಿ ಸ್ಥಾನದ ಕಾನೂನು ಕಾಯಿದೆಗಳ ಅನುಭವ ನಿಮಗಿರುವುದರ ಜತೆಗೆ, ಹೊಸ ಹೊಸ ಅನುಭವ ಪಡೆದು ಕೊನೆಗೆ ಜಡ್ಜರೇ ಆಗುವುದೂ ಈ ಎಲ್ಲ ವಿಷಯಗಳನ್ನು ಈಗಲೇ ಮಾತಾಡುವುದು ನ್ಯಾಯವಾಗಲಾರದು" ಎಂದು ಅವರಂದರು.

ಪತ್ನಿಯ ಅಭಿಪ್ರಾಯ ಸರಿಯೆಂದು ಮಿ. ಮೈಕಾಬರರು ಒಪ್ಪಿ, ಈ ವಿಧದ ಮಾತನ್ನು ನಿಲ್ಲಿಸಿದರು. ಅನಂತರ ನಮ್ಮ ಊಟವಾಯಿತು. ಮಿ. ಮೈಕಾಬರರು ಮಾತ್ರ ಪರಿಷ್ಕಾರವಾಗಿ ತಯಾರಿಸಬಲ್ಲ ಪಂಚು ಪಾನೀಯವನ್ನು ಅವರೇ ತಯಾರಿಸಿದರು – ನಾವೆಲ್ಲಾ ಕುಡಿದೆವು. ಪಂಚನ್ನು ಕುಡಿಯುತ್ತಾ ಮಿ. ಮೈಕಾಬರರು ಅಂದಿನ ಸಮಾರಂಭದ ಉದ್ದೇಶ ಮತ್ತೂ ಗೌರವವನ್ನು ಅರಿಯತೊಡಗಿದರು. ಕೊನೆಗೆ ಒಂದು ವಿದಾಯಕೂಟದ ಉಪಸಂಹಾರ ಭಾಷಣ ಕ್ರಮದಿಂದ ಅವರು ಮಾತಾಡತೊಡಗಿದರು –
"ನನ್ನ ಯೌವ್ವನ ಕಾಲದ ಜತೆಗಾರರಾಗಿದ್ದ ಸನ್ಮಿತ್ರ ಮಿ. ಕಾಪರ್ಫೀಲ್ಡರೇ ಅನಂತರ ಪರಿಚಯವಾದವರಾದಾಗ್ಯೂ ಮೊದಲಿನವರಷ್ಟೇ ಪ್ರಿಯರಾದ ಮಿತ್ರ ಮಿ. ಥಾಮಸ್ ಟ್ರೇಡಲ್ಸರೇ ಈ ದಿನ ತಾವುಗಳು ನಮ್ಮ ಮನೆಗೆ ಆಗಮಿಸಿ, ನಮಗೆ ಶುಭವನ್ನು ಬಯಸಿ ಹರಸಿದುದಕ್ಕೆ ನಾನು ನನ್ನ ಪರವಾಗಿಯೂ ನನ್ನ ಸಹಧರ್ಮಿಣಿಯ ಪರವಾಗಿಯೂ ನಮ್ಮ ಕುಟುಂಬದವರೆಲ್ಲರ ಪರವಾಗಿಯೂ ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಾವು ಸದ್ಯವೇ ಪರಪ್ರಾಂತ್ಯಕ್ಕೆ ಪಯಣ ಬೆಳೆಸಲಿರುವೆವು. (ಅವರು ಈ ಮಾತುಗಳನ್ನು ಉಚ್ಚರಿಸಿದಾಗ ಕೇಂಟರ್ಬರಿಯು ಲಂಡನ್ನಿನಿಂದ ಕೊನೆಯ ಪಕ್ಷ ಐನೂರು ಮೈಲುಗಳ ದೂರದಲ್ಲಿ ಇರಬೇಕೆಂಬ ಭಾವನೆ ನಮಗುಂಟಾಯಿತು.) ನಾವು ಕೈಕೊಳ್ಳಲಿರುವ ವೃತ್ತಿಯಲ್ಲಿ ನಾವು ನಿಷ್ಠೆಯಿಂದಲೂ ಘನಸ್ಥಿಕೆಯಿಂದಲೂ ಮಿಸೆಸ್ ಮೈಕಾಬರಳ ಕುಟುಂಬದ ಮತ್ತೂ ನಮ್ಮ ಕುಟುಂಬದ ಕೀರ್ತಿ ಹೆಚ್ಚುವಂತೆಯೂ ನಡೆಯುವೆವು. ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿ ದುಃಖಿಸುತ್ತಿದ್ದ ನನ್ನ ಮಾನಸಿಕ ಆಕಾಶವು ಇಂದು ಶುಭ್ರವಾಗಿದೆ. ನಮ್ಮ ನವಜೀವನ ಜ್ಯೋತಿಯು, ಪರ್ವತ ಶಿಖರದ ಮೇಲಿರುವ ಪ್ರಸ್ತಭೂಮಿಗೆ ಬೀಳುವ ಸೂರ್ಯಪ್ರಭೆಯಂತೆ, ನಮ್ಮ ಭವಿಷ್ಯದ ಸುಂದರ ಪ್ರದೇಶದ ಮೇಲೆ ಪ್ರಭೆಯನ್ನು ಬೀರಿ, ಈಗಾಗಲೇ ನಮ್ಮ ಉನ್ನತ ಭವಿಷ್ಯವು ಎದ್ದು ಬೆಳಗುತ್ತಿದೆ! ಸೋಮವಾರ ದಿನ ಸಂಜೆಯಲ್ಲಿ, ಕೇಂಟರ್ಬರಿಗೆ ಹೋಗುವ ಕುದುರೆ ಬಂಡಿಯಲ್ಲಿ ನೀವು ಕಾಣುವ ವ್ಯಕ್ತಿಯೇ ಮಿ. ಮೈಕಾಬರ್. . ." ಎಂದು ಘೋಷಿಸಿದರು. ". . .ವ್ಯಕ್ತಿಯೇ ಮಿ. ಮೈಕಾಬರ್. ." ಎಂದು ಅವರು ನುಡಿಯುವಾಗ ಅವರ ಪ್ರಕೃತದ ಹೆಸರು ಮಿ. ಮಾರ್ಟಿಮರ್ ಎಂಬುದು ನಮಗೆ ಜ್ಞಾಪಕಕ್ಕೆ ಬಂತು. ಇಷ್ಟು ಹೇಳಿ, ಪುನಃ ಒಂದು ಗ್ಲಾಸ್ ಪಂಚ್ ಪಾನೀಯವನ್ನು ಕುಡಿದು, ಪುನಃ ಮಾತಾಡತೊಡಗಿದರು.

"ಇಂಗ್ಲೆಂಡಿನ ರಾಜಧಾನಿಯಾದ ಈ ಲಂಡನ್ ಮಹಾ ನಗರದಿಂದ ಪರದೇಶಕ್ಕೆ ಹೋಗುವ ಮೊದಲು ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸಿ ಪೂರೈಸುವ ಕರ್ತವ್ಯವು ನನ್ನ ಚಿಂತನೆಯಲ್ಲಿ ಸದಾ ಇದೆ. ಮುಂದೆ ನಾನು ಪ್ರವೇಶಿಸಲಿರುವ ವೃತ್ತಿಯು ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಮೇಲಂತೂ ಆ ಜವಾಬ್ದಾರಿಯನ್ನು ಮತ್ತಷ್ಟು ತೀವ್ರವಾಗಿ ಗ್ರಹಿಸಿರುತ್ತೇನೆ. ಒಬ್ಬರಿಗೆ ನಮ್ಮಿಂದ ಹಣ ಸಲ್ಲತಕ್ಕದ್ದಿದ್ದರೆ ನಾವು ಹಣವನ್ನೇ ಕೊಡಬೇಕು. ಒಂದು ವೇಳೆ ಹಣವಿಲ್ಲದಿದ್ದರೆ ಹಣಕ್ಕೆ ಸರಿಸಮಾನವಾದ ರಿಕಾರ್ಡನ್ನು ಮಾಡಿಕೊಡಬೇಕು. ಅರ್ಥಾತ್, ಕೇಳಿದ ಕೂಡಲೇ ಪಾವತಿಯಾಗತಕ್ಕ, ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸಬಲ್ಲ, ಪ್ರಾಮಿಸರಿ ನೋಟನ್ನು ಬರಕೊಡಬೇಕು. ಈ ತೆರನಾದ ನ್ಯಾಯಬದ್ಧ ಸರಳ ಕ್ರಮವನ್ನು ಬಲ್ಲ ನನ್ನಂಥವರು ಮಿ. ಥಾಮಸ್ ಟ್ರೇಡಲ್ಸರವರಿಗೆ ಸಲ್ಲಬೇಕಾದ ನಲವತ್ತೊಂದು ಪೌಂಡು, ಹತ್ತು ಶಿಲಿಂಗ್, ಹನ್ನೊಂದೂವರೆ ಪೆನ್ಸನ್ನು ಈ ಪ್ರೋನೋಟು ಮೂಲಕ ಸಲಾಯಿಸುವೆನು. ನಮ್ಮೊಳಗಿನ ಲೆಕ್ಕಾಚಾರದ ಬಗ್ಗೆ ಈ ಪ್ರೋನೋಟನ್ನು ನೀವು ಸ್ವೀಕರಿಸಿ, ಸಮಾಜದೆದುರು ಸಾಲದ ಭಾರದಿಂದ ಬೆನ್ನು ಬಗ್ಗಿಸಿ ನಡೆಯುವ ಪ್ರಜೆಯೊಬ್ಬನ ಬೆನ್ನು ಪುನಃ ನೆಟ್ಟಗಾಗುವಂತೆ ಸಹಾಯ ನೀಡಬೇಕು" ಎಂದು ಹೇಳುತ್ತ ಪ್ರೋನೋಟನ್ನು ಅವರು ಟ್ರೇಡಲ್ಸನಿಗೆ ಕೊಟ್ಟರು. ಮಿ. ಮೈಕಾಬರರ

ಭಾಷಣದಿಂದ ಆವೇಶಭರಿತನಾಗಿದ್ದ ಟ್ರೇಡಲ್ಸನು ಆ ನೋಟು ಹಣವೇ ಹೌದೆಂಬಷ್ಟು ನಂಬುತ್ತಾ ಅದನ್ನು ಸ್ವೀಕರಿಸಿದನು. ಟ್ರೇಡಲ್ಸನು ಈ ರೀತಿಯಲ್ಲಿ ತಾನು ಸಂತೋಷಪಟ್ಟನಲ್ಲದೆ ಮಿ. ಮೈಕಾಬರರನ್ನೂ ಸಂತೋಷಗೊಳಿಸಿದನು.

ಈ ರೀತಿಯ ನಮ್ಮ ಊಟೋಪಚಾರ ಭಾಷಣಗಳೆಲ್ಲ ಮುಗಿದ ಮೇಲೆ ನಾವು ಸಂತೋಷದಿಂದ ಹೊರಟು ಬಂದೆವು. ನಮ್ಮನ್ನು ಕಳುಹಿಸಿಕೊಡುವ ಗೌರವಕ್ಕಾಗಿಯೇ ಮಿ. ಮೈಕಾಬರರು ನಮ್ಮ ಜತೆಯಲ್ಲಿ ಸ್ವಲ್ಪ ದೂರ ನಡೆದು ಬಂದರು. ಸಾಲದ ಭಾರದಿಂದ ನಿವೃತ್ತರಾಗಿದ್ದ ಅವರು ಈಗ ಮೊದಲಿಗಿಂತ ಎಷ್ಟೆಷ್ಟೋ ನೆಟ್ಟಗೆ ನಡೆಯುತ್ತಿದ್ದರು. ಅವರ ಎದೆಯು ಮೊದಲಿದ್ದುದರ ಒಂದೂವರೆ ಪಾಲಿನಷ್ಟು ಉಬ್ಬಿ, ಅವರ ಮಾನಸಿಕ ನೆಮ್ಮದಿಯ ಉಬ್ಬನ್ನೂ ಸೂಚಿಸುತ್ತಿತ್ತು.

ನನ್ನನ್ನು ನನ್ನ ಬಾಲ್ಯದಿಂದಲೇ ತಿಳಿದಿದ್ದ ಮಿ. ಮೈಕಾಬರರು, ತನ್ನ ಶಕ್ತಿಯನ್ನೂ ಎಳೆತನದ ಕಾರಣವಾಗಿದ್ದ ನನ್ನ ಅಶಕ್ತಿಯನ್ನೂ ತಿಳಿದಿದ್ದೂ ಸಹ ನನ್ನಲ್ಲಿ ಸಾಲ ಕೇಳಲಿಲ್ಲವೆಂಬುದನ್ನು ಗ್ರಹಿಸಿ ಅವರ ಮೇಲಿನ ಗೌರವ ನನ್ನಲ್ಲಿ ಹೆಚ್ಚಿತು.

ಅಧ್ಯಾಯ ಮೂವತ್ತೇಳು

ಉತ್ಸಾಹಭಂಗ

ನನ್ನ ಹೊಸ ವಿಧದ ಜೀವನಕ್ರಮವನ್ನು ಅನುಸರಿಸುತ್ತ ಒಂದು ವಾರದ ಮೇಲೆ ಸಮಯ ದಾಟಿತು. ಜೀವನಕ್ಕಾಗಿ ಎಂಥ ಪರಿಶ್ರಮಗಳನ್ನಾದರೂ ಕೈಗೊಳ್ಳಲೇಬೇಕು, ಎಂಥ ತ್ಯಾಗಗಳನ್ನಾದರೂ ಮಾಡಲೇಬೇಕೆಂಬ ನನ್ನ ಮೊದಲಿನ ನಿರ್ಧಾರ ಈಗಲೂ ಉಜ್ವಲವಾಗಿಯೇ ಉಳಿದಿತ್ತು. ಇಷ್ಟರಲ್ಲೇ ಮೆಲ್ಲಗೆ ನಡೆಯುವ ಅಭ್ಯಾಸವನ್ನೇ ಮರೆತುಬಿಟ್ಟಿದ್ದೆ. ಎಷ್ಟೆಷ್ಟು ಚುರುಕಾಗಿ ನಡೆದು ಎಷ್ಟೆಷ್ಟು ಬೆವರು ಸುರಿಸಿ ದುಡಿವೆನೋ ಅಷ್ಟಷ್ಟೇ ತುಂಬಾ ನಾನು ಡೋರಾಳ ಸಾಮೀಪ್ಯಕ್ಕೆ ತಲಪುತ್ತಿದ್ದೇನೆಂದು ಗ್ರಹಿಸುತ್ತಿದ್ದೆನು. ನನ್ನನ್ನೇ ಡೋರಾಳಿಗೆ ಆಹುತಿಯಾಗಿ ಸಮರ್ಪಿಸಬೇಕಾಗಿ ಬಂದಿದ್ದರೂ ನಾನದಕ್ಕೆ ತಯಾರಾಗಿಯೇ ಇದ್ದೆನು. ಖರ್ಚುಗಳನ್ನೆಲ್ಲ ಆದಷ್ಟು ಕಡಿಮೆ ಮಾಡಿದೆ. ಈ ಉದ್ದೇಶಕ್ಕಾಗಿಯೇ ಶಾಖಾಹಾರವನ್ನು ಮಾತ್ರ ಸೇವಿಸಬೇಕೆಂದೂ ನಿರ್ಧರಿಸಿದೆನು. ಈ ಎಲ್ಲ ತ್ಯಾಗಗಳಿಂದ ಡೋರಾಳನ್ನು ಪಡೆಯಲಿರುವ ಯಜ್ಞವನ್ನೇ ಮಾಡುತ್ತಿದ್ದೆನು.

ಮಿ. ಡಿಕ್ಕರು ಕ್ರಮವಾಗಿ ಹಣ ಸಂಪಾದಿಸುತ್ತಿದ್ದರು. ಇದರಿಂದ ಅವರ ಆನಂದಕ್ಕೆ ಪಾರವೇ ಇರಲಿಲ್ಲ. ನಮ್ಮೆಲ್ಲರನ್ನು ಪೋಷಣೆ ಮಾಡುವ ಜವಾಬ್ದಾರಿಯನ್ನು ತಾನು ಹೊತ್ತಿರುವವರಂತೆ ಅವರು ಬಹು ಠೀವಿಯಿಂದ ಅತ್ತಿತ್ತ ತಿರುಗುವುದೇ ಒಂದು ಆನಂದದ ದೃಶ್ಯವಾಗಿತ್ತು. ಮಿ. ಡಿಕ್ಕರು ಹೀಗೆ ಗ್ರಹಿಸುತ್ತಿದ್ದಾಗ ಅತ್ತೆ ಇನ್ನೊಂದು ವಿಧದಲ್ಲಿ ಗ್ರಹಿಸಿ ಸಂತೋಷಿಸುತ್ತಿದ್ದಳು. ಮಿ.ಡಿಕ್ಕರ ಯೋಗ್ಯತೆ ತಿಳಿಯದಿದ್ದವರೆಲ್ಲ ಈಗಲಾದರೂ ತಿಳಿಯುವ ಸಂದರ್ಭ ಬಂದಿದೆಯೆಂಬುದು ಅವಳ ಸಂತೋಷ. ನಮ್ಮ ಮನೆಯೊಳಗಿನ ವ್ಯವಸ್ಥೆಯನ್ನು ಅತ್ತೆಯೇ ನೋಡಿ ಸರಿಪಡಿಸುತ್ತಿದ್ದಳು. ಮಿಸೆಸ್ ಕೃಪ್ಸಳು ಅತ್ತೆಯಿಂದ ಪರಾಜಿತಳಾಗಿ – ಅವಳ ಸೋಲನ್ನು ಒಪ್ಪಿ, ಅತ್ತೆಯ ಎದುರು ಬರುವುದನ್ನೇ ನಿಲ್ಲಿಸಿಬಿಟ್ಟಳು.

ಈ ಸಮಯದಲ್ಲಿ ಬಾರ್ಕಿಸ್ ಪೆಗಟಿ ಯಾರ್ಮತ್ತಿಗೆ ಹೋದಳು. ಅವಳು ಹೋಗುವ ಮೊದಲು, ಹಿಂದಿನ ಅವಳ ಕ್ರಮದಿಂದಲೇ ನನ್ನನ್ನು ಅಪ್ಪಿಕೊಂಡು, ಅಳುತ್ತಾ ತನ್ನ ಸಹಾಯವನ್ನು ಯಾವತ್ತು ಬೇಕಾದರೂ ನಾನು ಪತ್ರ ಬರೆದು ಅಪೇಕ್ಷಿಸಬಹುದೆಂದು ಹೇಳಿದಳು. ಅಷ್ಟು ಅಲ್ಲದೆ ನಾನು ಹಣದ ಸಹಾಯ ಬೇಕಾದರೂ ಪತ್ರ ಬರೆಯಬಹುದೆಂದೂ ತಿಳಿಸಿದಳು. ಕೊನೆಗೆ, ನಾನು ಡೋರಾಳನ್ನು ಮದುವೆಯಾಗಿ, ಸ್ವಂತ ಗೃಹಕೃತ್ಯ ನಡೆಸುವಾಗ ಆ ಮನೆಯನ್ನು ಸಜ್ಜುಗೊಳಿಸುವ ಕೆಲಸವನ್ನು ತನ್ನಿಂದಲೇ ನಾನು ಮಾಡಿಸುವುದಾಗಿಯೂ ನನ್ನಿಂದ ವಾಗ್ದಾನ ಪಡಕೊಂಡಳು.

ನನ್ನ ಬಡಸ್ತಿಕೆಯನ್ನು ಕುರಿತು ಡೋರಾಳಿಗೆ ತಿಳಿಸುವುದು ನನ್ನ ಕರ್ತವ್ಯವೆಂದು ನಿಶ್ಚೈಸಿಕೊಂಡು, ಒಂದು ದಿನ, ನನಗೆ ರಜವಿದ್ದಾಗ, ಮಿ. ಸ್ಪೆನ್ಲೋರ ಮನೆಗೆ ಹೋದೆನು. ಮಿ. ಸ್ಪೆನ್ಲೋರು ಆ ದಿನ ಸ್ವಲ್ಪ ಹೆಚ್ಚು ಹೊತ್ತು ಮನೆಯಲ್ಲಿದ್ದುದರಿಂದ, ನಾನು ಸ್ವಲ್ಪ ಹೊರಗೆ ರಸ್ತೆಯಲ್ಲಿ ಕಾಯಬೇಕಾಗಿತ್ತು. ಮಿ. ಸ್ಪೆನ್ಲೋರು ಮನೆಯಿಂದ ಹೊರಗೆ ಹೋದ ಸಂಕೇತವಾಗಿ ಏರ್ಪಡಿಸಿಕೊಂಡಿದ್ದ ಗಿಳಿಪಂಜರವು ಡೋರಾಳ ಕಿಟಕಿಯ ಹೊರಗೆ ತೂಗಾಡಿಸಿದ್ದು ಕಂಡಮೇಲೆ ನಾನು ಮನೆಯನ್ನು ಪ್ರವೇಶಿಸಿದೆನು.

ಡೋರಾಳು ನನ್ನನ್ನು ಜಿಪ್ಪ್ ಸಮೇತವಾಗಿ ಬಂದು ಎದುರುಗೊಂಡು ತನ್ನ ಕೋಣೆಗೆ ಕರೆದುಕೊಂಡು ಹೋದಳು. ಅಪೂರ್ವಕ್ಕೆ ನಡೆದಿದ್ದ ಈ ಭೇಟಿಯಲ್ಲಿ ನಾನು ಹೇಗೆಲ್ಲ ಮಾತಾಡಬೇಕೆಂದು ಮೊದಲೇ ನಿಶ್ಚೈಸಿಕೊಂಡೇ ಅಲ್ಲಿಗೆ ಹೋಗಿದ್ದರೂ ಡೋರಾಳ ದರ್ಶನದ ಮರುಕ್ಷಣ ಆ ಮಾತೆಲ್ಲ ಮರೆತುಹೋಯಿತು. ನಾನು ಸ್ವಲ್ಪ ಅಚಾತುರ್ಯದಿಂದಲೇ ಮಾತನ್ನು ಪ್ರಾರಂಭಿಸಿದೆನು.
"ಮುದ್ದು ಡೋರಾ, ನಮ್ಮೊಳಗಿನ ಅನುರಾಗವೆಲ್ಲ ಸರಿ. ಆದರೆ, ನೀನು ಒಬ್ಬ ದರಿದ್ರನನ್ನು, ತಿರುಕನನ್ನು ಪ್ರೀತಿಸಬಲ್ಲೆಯಾ?" ಎಂದು ಕೇಳಿಹೋಯಿತು.
"ಏನು ಹುಚ್ಚು ಹಿಡಿದಿದೆಯೋ ನಿನಗೆ! ತಿರುಕನನ್ನು ಪ್ರೀತಿಸಬೇಕು ನಾನೂಂತ ಹೇಳ್ತಿಯೇನು!" ಎಂದು ತುಟಿ ತಿರುಟಿಸಿಕೊಂಡು, ನಸು ನಗುತ್ತಾ ಕೇಳಿದಳು ಡೋರಾ.
"ಡೋರಾ, ನನ್ನ ಪರಮಪ್ರಿಯ ಡೋರಾ, ಆ ದರಿದ್ರನೇ, ತಿರುಕನೇ ನಾನು"
"ನನ್ನೆದುರಿಗೆ ಕುಳಿತು ಏನೇನಾದರೂ ಹರಟಿದರೆ ಜೋಕೆ! ಜಿಪ್ಪನನ್ನು ಛೂ ಬಿಡುತ್ತೇನೆ ನೋಡು!" ಅಂದಳು ಡೋರಾ.
ನನ್ನ ಮಾತನ್ನು ಡೋರಾ ಅರ್ಥಮಾಡಿರಲಿಲ್ಲವೆಂಬುದು ಸ್ಪಷ್ಟ. ನನ್ನ ಮುಖದಿಂದಲೂ ಅವಳು ತಿಳಿಯಲಿಲ್ಲ. ಅವಳು ಕೇವಲ ಹಸುಳೆಯಂತೆ ಸರಳವಾಗಿ, ವಿನೋದಪ್ರಿಯಳಾಗಿ ವರ್ತಿಸತೊಡಗಿದಳು.
"ನನ್ನ ಆಸ್ತಿಗಳೆಲ್ಲಾ ಕೈತಪ್ಪಿ ಹೋಗಿವೆ. ನಾನು ಕೇವಲ ಬಡವ ಡೋರಾ" ಎಂದಂದದ್ದಕ್ಕೆ,
"ಈ ಠಕ್ಕು ವಿದ್ಯವನ್ನೆಲ್ಲ ಎಲ್ಲಿ ಕಲಿತೆ! ನೋಡು, ಇನ್ನೂ ಹಾಗೆ ಮಾತಾಡಿದರೆ ಜಿಪ್ಪನನ್ನು ಖಂಡಿತವಾಗಿಯೂ ಬಿಡುತ್ತೇನೆ" ಅಂದಳು.

ಕೊನೆಗೆ ನಾನು ಅವಳ ಪಾದದ ಸಮೀಪ ಕುಳಿತು, ಅವಳ ಕೈಗಳನ್ನು ಹಿಡಿದುಕೊಂಡು, ನಮ್ಮ ಮನೆಯ ಪರಿಸ್ಥಿತಿಯನ್ನೆಲ್ಲಾ ವಿವರಿಸಿ ತಿಳಿಸಿದೆನು. ಅವಳು ಎಲ್ಲವನ್ನೂ ಕೇಳುತ್ತಾ ಮಾತಾಡುವ ಬದಲು ಅಳಲಾರಂಭಿಸಿದಳು.

"ನನ್ನ ಇಂದಿನ ಸ್ಥಿತಿ ಹೀಗಿದ್ದಾಗ್ಯೂ ನಿನ್ನನ್ನು ಹೊಂದಲು ಬೇಕಾದ ಸಕಲ ಯೋಗ್ಯತೆಗಳನ್ನೂ ಮೊದಲು ಪಡೆದೇ ನಿನ್ನ ಬಳಿಗೆ ಬರುವೆನು ಡೋರಾ. ಅನುದಿನವೂ ಕೆಲಸಮಾಡಿ ಹಣ ಸಂಪಾದಿಸುವೆನು. ಹಣವಂತನಾಗಿ ನಾನು ನಿನ್ನಲ್ಲಿಗೆ ಬಂದು ನಿನ್ನ ಪ್ರೇಮವನ್ನು ಯಾಚಿಸಿದರೆ ಆಗ ದಯಪಾಲಿಸುವೆಯಾ ಡೋರಾ" ಎಂದು ಗದ್ಗದ ಕಂಠದಿಂದ ಕೇಳಿದೆನು.

ನನ್ನ ಸ್ಥಿತಿಯನ್ನು ನೋಡಿ ಅವಳಿಗೆ ಸಹಿಸಲಾರದೆ ಆಗಿರಬೇಕು. ನನ್ನನ್ನು ಪರಿಪೂರ್ಣವಾಗಿ ಪ್ರೀತಿಸುತ್ತಿದ್ದುದ್ದರಿಂದ, ನನ್ನ ಈ ಬಡತನದ ವಿವರಗಳೆಲ್ಲ ಬಹು ವಿಘ್ನಕಾರಿಗಳಾಗಿ ತೋರಿ, ನನ್ನ ಈ ವಿಧದ ಮಾತನ್ನು ನಿಲ್ಲಿಸುವುದಕ್ಕಾಗಿ ಸಹ, ಸಂತೋಷದಿಂದಲೇ ಅಂದಳು –
"ನಾನು ಯಾವುದಕ್ಕೂ ತಯಾರು. ನಾನು ನಿನ್ನವಳೇ ಆಗಿರುವೆನು. ನಿನ್ನ ಸಂತೋಷವೇ ನನ್ನ ಸಂತೋಷ. ಇನ್ನಾದರೂ ಆ ಒರಟು ಮಾತು ಬಿಡು."
"ನೀನು ಅಷ್ಟು ತಿಳಿಸಿದ್ದು ಸಮಾಧಾನ. ನಾನು ಕೆಲಸಮಾಡಿ, ಹಣ ಸಂಪಾದಿಸಿ, ಊಟ ತಿಂಡಿಗಳಲ್ಲಿ ಬಿಗಿಹಿಡಿದು, ಶಿಲ್ಲಿಂಗ್ ಪೆನ್ನಿಗಳನ್ನು ಕೂಡಿಟ್ಟು ಶ್ರೀಮಂತನಾಗಲು ಸ್ವಲ್ಪ ಸಮಯ ಬೇಕಾಗಬಹುದು. ನೀನು ಎಲ್ಲವನ್ನು ಆಲೋಚಿಸಬೇಕು – ತಿಳಿಯದೆ, ಆವೇಶ ಭರದಿಂದ, ಉತ್ತರ ಕೊಡಬಾರದು" ಎಂದಂದೆನು.

ಡೋರಾ ನನ್ನನ್ನು ಅಪ್ಪಿ ಹಿಡಿದುಕೊಂಡು, ಎಳೆಗೂಸು ನೋಡುವಂತೆ ನನ್ನನ್ನೇ ಮೌನವಾಗಿ ಸ್ವಲ್ಪ ನೋಡಿ, ಗಾಬರಿಯಿಂದಲೂ ದುಃಖದಿಂದಲೂ –
"ನೋಡು, ನೀನು ಆ ರೀತಿಯಲ್ಲೆಲ್ಲ ನನ್ನನ್ನು ಹೆದರಿಸಬಾರದು – 'ಬಿಗಿ ಹಿಡಿದು', 'ಶಿಲ್ಲಿಂಗ್ ಪೆನ್ನಿ' – ಹೀಗೆಲ್ಲಾ ಹೇಳಿ ಹೆದರಿಸಬಾರದು. ಏನೇ ಆದರೂ ನನಗೂ ಜಿಪ್ಪನಿಗೂ ಸದಾ ತಿಂಡಿ ಬೇಕೇ ಬೇಕು. ಜೋಕೆ, ಇನ್ನು ಹೆದರಿಸಬೇಡ" ಅಂದಳು.

ಅವಳನ್ನು ಸಮಾಧಾನಪಡಿಸುವುದಕ್ಕಾಗಿ ಅನಂತರ ನಾನು ಕೆಲವು ಮಾತುಗಳನ್ನಾಡಬೇಕಾಯಿತು. ನಮ್ಮ ಮನೆಯೊಳಗಿನ ಸಕಲ ವ್ಯವಸ್ಥೆಗಳಿಗೆ ಅತ್ತೆಯಿರುತ್ತಾಳೆ. ನಾನು ಬೆಳಗ್ಗೆ ಎದ್ದು ನನ್ನ ಹೊರಗಿನ ಕೆಲಸವನ್ನು ಮಾಡಿಕೊಂಡು ಬರುವೆನು. ಡೋರಾಳು ಬೇಕಾದರೆ ತಡವಾಗಿ ಏಳಬಹುದು. ಮನೆ ಖರ್ಚಿನ ಲೆಖ್ಖಗಳನ್ನು ಡೋರಾಳು ಬರೆದಿಡಬೇಕು. ಅತ್ತೆಯ ಶಿಸ್ತು, ಅವಳ ಪ್ರೇಮ, ನಮ್ಮ ಸಂಸಾರದ ಹಿತವನ್ನು ಬಯಸಿ ಕೆಲಸಮಾಡುವ ಅವಳ ಶ್ರದ್ಧೆ – ಇವುಗಳನ್ನೆಲ್ಲ ಡೋರಾಳಿಗೆ ತಿಳಿಸಿದೆನು. ಹೀಗೆ ನಾವು ನಡೆದದ್ದಾದರೆ ನಮ್ಮ ಕಷ್ಟವೆಲ್ಲ ಪಾರಾಗಿ, ನಾವು ಸುಖ ಸಂತೋಷವನ್ನು ಕಾಣುವೆವು – ಎಂಬಿತ್ಯಾದಿಯಾಗಿ ವಿವರಿಸಿದೆನು. ಅವಳ ಎಳೆ ಮನಸ್ಸಿಗೆ ನನ್ನ ಮಾತುಗಳು ಅರ್ಥವಾಗಲಿಲ್ಲ. ಅವಳು ಅಪಾರ್ಥವನ್ನೇ ಕಲ್ಪಿಸಿಕೊಂಡಿರಬೇಕು. ನಾನೊಬ್ಬ ಕಾರ್ಮಿಕ ದಿನಕೂಲಿಯವನೆಂದೂ ಅತ್ತೆ ಶಿಸ್ತಿನ ಭೀಕರ ಸ್ವರೂಪಳೆಂದೂ ಲೆಖ್ಖ ಪತ್ರಗಳನ್ನಿಡುವ ಕೆಲಸ ಅವಳಿಗೆ ಕೊಡಲಾಗುವ ಹಿಂಸೆಯೆಂದೂ ಅವಳು ಅರ್ಥಮಾಡಿರಬೇಕು. ನನ್ನ ವಿವರವನ್ನು ಕೇಳಿ ಪೂರೈಸುವಷ್ಟರಲ್ಲೇ ಮುಖದಲ್ಲಿ ಬಿಳುಪೇರಿ ಅವಳು ಸ್ಮೃತಿ ತಪ್ಪಿ ಬಿದ್ದಳು.

ನಾನು ಗಾಬರಿಯಾದೆನು. ಈವರೆಗೆ ಉದ್ದೇಶಪೂರ್ವಕವಾಗಿಯೇ ಕೋಣೆಯ ಹೊರಗಿದ್ದ ಮಿಸ್ ಮಿಲ್ಸಳು ನಾನು ಕರೆದ ಕೂಡಲೇ ಒಳಗೆ ಬಂದು ನೋಡಿದಳು. ಡೋರಾಳ ಪರಿಸ್ಥಿತಿಯಿಂದ ವಿಶೇಷ ಗಾಬರಿಗೊಳ್ಳದೆ ಸ್ವಲ್ಪ ತಣ್ಣೀರು ತಂದು ಅವಳ ಮುಖದ ಮೇಲೆ ಚಿಮುಕಿಸಿ, ಅವಳನ್ನು ಎಬ್ಬಿಸಿದಳು. ಅನಂತರ ಡೋರಾಳೊಡನೆ ತುಂಬಾ ಮಾತಾಡಿ ಅವಳನ್ನು ಸಮಾಧಾನಗೊಳಿಸಿದಳು. ಡೋರಾ ನನ್ನ ಮೇಲೆ ಸಿಟ್ಟಾಗಿರಲಿಲ್ಲ. ನನ್ನನ್ನು ಸಂತೋಷಗೊಳಿಸಬೇಕೆಂದೇ ಒಂದು ಪದವನ್ನೂ ಅವಳು ಹಾಡಿದಳು.

ಅನಂತರ ನಾನು ನಮ್ಮ ಮನೆಗೆ ಹೊರಟು ಬಂದೆನು. ಅನಂತರದ ದಿನಗಳಲ್ಲಿ ನಾನು ಡೋರಾಳಿಗೋಸ್ಕರ ಶ್ರಮಪಟ್ಟದ್ದಕ್ಕೆ ಮಿತಿಯಿಲ್ಲ. ಕಬ್ಬಿಣವನ್ನು ಕಾಯಿಸಿ ಬಡಿಯುವಂತೆ ದೇಹಶ್ರಮವನ್ನು ವಿವಿಧ ರೂಪದಲ್ಲಿ ವಹಿಸಿ ಹಣ ಸಂಪಾದಿಸತೊಡಗಿದೆನು. ಇಂಥ ಶ್ರಮಗಳನ್ನು ಕೈಗೊಳ್ಳುತ್ತಿದ್ದಾಗಲೆಲ್ಲ ನನ್ನ ಆ ಪರಿಸ್ಥಿತಿಯನ್ನು ಡೋರಾಳು ತಿಳಿದರೆ ಅವಳ ಮೇಲೆ ಎಂಥಾ ಪರಿಣಾಮವಾಗಬಹುದೋ ಎಂದು ಹೆದರುತ್ತಿದ್ದೆನು.

ಒಮ್ಮೊಮ್ಮೆ ಈ ತೆರನಾದ ಕಾಯಕಷ್ಟದ ಕೆಲಸಗಳನ್ನು ಬಿಟ್ಟು ಡೋರಾಳಿಗಾಗಿ ಮೃದು–ಮಧುರ ರೀತಿಯಿಂದ ಹಣ ಸಂಪಾದಿಸಲು ಸಾಧ್ಯವಾಗಬಹುದೇ ಎಂದೂ ಆಲೋಚಿಸುತ್ತಿದ್ದೆನು. ಆದರೆ, ಇಂಥ ಮೃದು–ಮಧುರ ವೃತ್ತಿಗಳಿಂದ ಡೋರಾಳನ್ನು ಸೇರುವುದಾದ ಪಕ್ಷಕ್ಕೆ, ನಮ್ಮಿಬ್ಬರ ನಡುವೆ ಇದ್ದ ದಾರಿದ್ರ್ಯದ ಕಾಡನ್ನು ವೀಣೆ ಮೃದಂಗಗಳಿಂದ ನಾಶಮಾಡಲು ಸಾಧ್ಯವಾಗಬಹುದೇ, ಕೊಡಲಿ ಚಮ್ಮಟಿಗಳನ್ನು ಬಿಟ್ಟು ಈ ಮಾರ್ಗದಿಂದ ಮುಂದುವರಿದಾಗ, ಗುರಿಗೆ ತಲುಪುವಾಗ ನನ್ನ ತಲೆ ನರೆದು ನಾನೊಬ್ಬ ಮುದುಕನೇ ಆಗಿಬಿಡಬಹುದಲ್ಲವೇ ಎಂದು ಹೆದರುತ್ತಿದ್ದೆನು.

ಅಧ್ಯಾಯ ಮೂವತ್ತೆಂಟು

ಜತೆಗಾರಿಕೆಯ ವಿಸರ್ಜನೆ

ಪಾರ್ಲಿಮೆಂಟಿನ ವರದಿಗಾರನಾಗಿ ಹಣ ಸಂಪಾದಿಸಬೇಕೆಂದು ವರದಿಗಾರನಿಗೆ ಗೊತ್ತಿರಬೇಕಾದ ಶೀಘ್ರಲಿಪಿಯನ್ನು ಕಲಿಯತೊಡಗಿದೆನು. ಆ ಶೀಘ್ರ ಲಿಪಿ ನಮ್ಮನ್ನು ಹಿಂಸಿಸುವುದಕ್ಕಾಗಿಯೇ ನಿರ್ಮಾಣವಾದಂತೆ ಬಹು ಚಂಚಲ ಸ್ವಭಾವದ್ದು, ಸುಲಭವಾಗಿ ಕೈಗೆ ಎಟಕುವಂಥಾದ್ದಲ್ಲ! ನಮ್ಮನ್ನು ಎಷ್ಟೆಷ್ಟೆಲ್ಲ ಹಿಂಸಿಸಿದರೂ ಅದಕ್ಕೆ ತೃಪ್ತಿಯಿದ್ದಂತೆ ತೋರುತ್ತಿರಲಿಲ್ಲ. ಚುಕ್ಕಿಗಳೂ ನೊಣದ ಕಾಲೂ ಎಲ್ಲವೂ ಸಂಕೇತಗಳೇ! ಚುಕ್ಕಿಗಳು ಒಂದೊಂದು ಕಡೆಯಿದ್ದಾಗ ಒಂದೊಂದು ಅರ್ಥ. ನೊಣದ ಕಾಲಿನವುಗಳ ಚಮತ್ಕಾರವೇ ಇನ್ನೊಂದು ವಿಧದ್ದು! ವೃತ್ತಗಳೋ – ಅವು ಅನರ್ಥಕಾರಿಗಳು. ಇವೆಲ್ಲವೂ ಮಾಯಾವಿಗಳು. ಅವುಗಳನ್ನು ಕಲಿತಿದ್ದೇನೆ, ಸಂಗ್ರಹಿಸಿದ್ದೇನೆ ಎಂದು ಧೈರ್ಯಪಟ್ಟು ಪರೀಕ್ಷಿಸುವಾಗಲೇ ಎಲ್ಲವೂ ಮಾಯವಾಗುವುವು. ಅವು ಎಂಥವುಗಳೇ ಆದರೂ ಅವುಗಳನ್ನು ಬಿಡಲು ನನಗೆ ಅನುಕೂಲವಿರಲಿಲ್ಲ. ಹಾಗಾಗಿ ಶ್ರಮ ಪಟ್ಟು ಅಭ್ಯಾಸ ಮಾಡತೊಡಗಿದೆನು. ಈ ಅಭ್ಯಾಸಕ್ಕೆಲ್ಲ ತಕ್ಕ ಸ್ಫೂರ್ತಿಯನ್ನೂ ಶಕ್ತಿಯನ್ನೂ ಡೋರಾಳ ದಿವ್ಯ ಮೂರ್ತಿ ಕೊಡುತ್ತಿತ್ತು! ಅಂತೂ ಅದನ್ನು ಕಲಿತೆನು.

ಹೀಗೆ ನನ್ನ ವ್ಯಾಸಂಗದಲ್ಲಿ ನನಗೆ ತೃಪ್ತಿಯುಂಟಾಗಿ, ಡೋರಾಳನ್ನು ಪಡೆಯುವ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾಗ, ಒಂದು ದಿನ ಮಿ. ಸ್ಪೆನ್ಲೋರವರು ನನ್ನನ್ನು ಕರೆದು, ಕಾಮನ್ಸ್ ಕೋರ್ಟಿನ ಹಿಂಬದಿ ಬರ ಹೇಳಿ, ನಾವಿಬ್ಬರೂ ಅಲ್ಲಿಗೆ ಹೋದೆವು. ಅಲ್ಲಿ ಅವರು ನನ್ನನ್ನು ಒಂದು ಖಾಲಿ ಕೋಣೆಗೆ ಕರೆದುಕೊಂಡು ಹೋಗಿ, ಅಲ್ಲಿ ಮೊದಲೇ ಇದ್ದ ಮಿಸ್ ಮರ್ಡ್‌ಸ್ಟನ್ನಳ ಎದುರು ಹಠಾತ್ತಾಗಿ ನಿಲ್ಲಿಸಿದರು. ಅಲ್ಲಿ ನಾವು ಮೂವರೂ ಕುಳಿತುಕೊಂಡನಂತರ ಮಿಸ್ ಮರ್ಡ್‌ಸ್ಟನ್ನಳು ನನ್ನನ್ನು ಕುರಿತಾಗಿ ಅವರೊಡನೆ ಹೇಳಿದ್ದ ಮಾತುಗಳನ್ನು ಪುನಃ ನನ್ನ ಸಮಕ್ಷಮದಲ್ಲು ಹೇಳಬೇಕೆಂದು ಮಿ. ಸ್ಪೆನ್ಲೋರವರು ಮಿಸ್ ಮರ್ಡ್‌ಸ್ಟನ್ನಳಿಗೆ ಆಜ್ಞೆಯಿತ್ತರು. ಆ ಮೊದಲೇ ನಾನು ಸ್ವಲ್ಪ ಗಾಬರಿಗೊಂಡಿದ್ದರೂ ಮಿಸ್ ಮರ್ಡ್‌ಸ್ಟನ್ನಳು ನನ್ನ ಕೆಲವು ಅಪರಾಧಗಳನ್ನು ಕಂಡು ಹಿಡಿದು ಅವನ್ನೇ ಬಹಿರಂಗಪಡಿಸಲು ತವಕ ಪಡುತ್ತಿದಂತೆ ತೋರುವಾಗ, ನನಗೆ ಮತ್ತಷ್ಟು ಗಾಬರಿಯೂ ಆಶ್ಚರ್ಯವೂ ಆಯಿತು. ಅವಳು ಬಹು ನಿರುದ್ವಿಗ್ನತೆಯಿಂದ –
"ಮಾನುಷ ಹೃದಯದ ದುಷ್ಟ ಚಟಗಳಲ್ಲಿ ಒಂದಾದ . . ." ಎಂದು ಪ್ರಾರಂಭಿಸಿ ಮುಂದುವರಿಯುವ ಮೊದಲು ಅವಳನ್ನು ತಡೆದು, ಮಿ. ಸ್ಪೆನ್ಲೋರವರು –
"ಅದೆಲ್ಲ ಅನಗತ್ಯ. ನಡೆದಿರುವ ಸಂಗತಿ ಹೇಳಿ, ನಿನ್ನೊಡನೆ ಇರುವ ರಿಕಾರ್ಡು ತೋರಿಸು. ಅದಕ್ಕಿಂತ ಹೆಚ್ಚಿನ ವಿಷಯ ಅನಗತ್ಯ" ಎಂದು ಹೇಳಿದರು.

ಮಿಸ್ ಮರ್ಡ್‌ಸ್ಟನ್ನಳು ಕೂಡಲೇ –
"ಹಾಗಾದರೆ" ಎಂದಂದು ನಾನು ಡೋರಾಳಿಗೆ ಬರೆದಿದ್ದ ಪತ್ರಗಳ ಒಂದು ಕಟ್ಟನ್ನು ನನಗೆ ಕೊಟ್ಟು "ನಾನು ನನ್ನ ಅಣ್ಣನ ಮದುವೆ ತೀರಿಸಿ ಪೂರ್ವದ ಕೆಲಸಕ್ಕೇ ಸೇರಿದಾಗ, ಒಂದು ದಿನ ಅಕಸ್ಮಾತ್ತಾಗಿ ಜಿಪ್ಪನು ಒಂದು ಪತ್ರವನ್ನು ಕಚ್ಚಿಕೊಂಡು ಆಡುತ್ತಿದ್ದುದನ್ನು ಕಂಡೆನು. ಜಿಪ್ಪನನ್ನು ಹಿಡಿದು ಹೆದರಿಸಿ, ಅದರ ಬಾಯಿಯಲ್ಲಿದ್ದ ಪತ್ರವನ್ನು ತೆಗೆದು ಓದುವಾಗ ಅದು ಕಾಪರ್ಫೀಲ್ಡ್ ಡೋರಾಳಿಗೆ ಬರೆದ ಪತ್ರವೆಂದು ಗೊತ್ತಾಯಿತು. ಈ ವಿಷಯವನ್ನು, ಸಂಶಯವನ್ನು ನಿವೃತ್ತಿಪಡಿಸಿಕೊಳ್ಳಲು ಡೋರಾಳನ್ನು ಒಂದು ವಿಧದಿಂದ ಸ್ವಲ್ಪ ಹೆದರಿಸುವಾಗ ಈ ಎಲ್ಲ ಪತ್ರಗಳೂ ಸಿಕ್ಕಿದುವು" ಎಂದು ಹೇಳಿ, ಬಾಕಿ ಕೆಲವು ವಿಷಯಗಳನ್ನೂ ಅವಳ ಅಭಿಪ್ರಾಯವನ್ನೂ ಹೇಳಿದಳು.

ಅನಂತರ ಮಿ.ಸ್ಪೆನ್ಲೋರವರು ಸ್ವಲ್ಪ ಸಿಟ್ಟಿನಿಂದ, ಮತ್ತು ತುಂಬಾ ಘನಸ್ಥಿಕೆಯ ಮರ್ಜಿಯಿಂದ ಮಾತಾಡಲಾರಂಭಿಸಿದರು.

"ಮಿ. ಕಾಪರ್ಫೀಲ್ಡ್, ನೀವು ಗೃಹಸ್ಥರು, ನಂಬಿಕೆಗೆ ಅರ್ಹರು ಎಂದು ನಮ್ಮ ಮನೆಗೆ ಪ್ರವೇಶಿಸಲು ಎಡೆಕೊಟ್ಟೆ. ನೀವು ನನ್ನ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು, ನನ್ನ ಅರಿಯದ ಚಿಕ್ಕ ಮಗಳಿಗೆ ಅನುರಾಗವೆಂಬ ತಪ್ಪು ಅಭಿಪ್ರಾಯವನ್ನು ಮೂಡುವಂತೆ ಮಾಡಿ, ಅದನ್ನೇ ಪ್ರೋತ್ಸಾಹಿಸಿ, ಪತ್ರ ಬರೆಯಲಾರಂಭಿಸಿದಿರಿ. ಆದರೂ ಚಿಂತೆಯಿಲ್ಲ. ಹಿಂದೆ ಬರೆದುದನ್ನು ಮರೆತು ನಮ್ಮ ಕೋರ್ಟು ಸಂಬಂಧದ ಕೆಲಸಗಳಲ್ಲಿ ಮಾತ್ರ ಇನ್ನು ಮುಂದೆ ನಮ್ಮ ಮನೆಗೆ ಬಂದು ಹೋಗತಕ್ಕದ್ದೇ ಹೊರತು, ಬೇರೆ ಸಂಬಂಧವಾಗಿ ಬರಕೂಡದು. ಅಲ್ಲದೆ, ಇನ್ನು ಮುಂದೆ ನಮ್ಮ ಸಂಸಾರ, ಮತ್ತು ನನ್ನ ಮಗಳ ಪ್ರಸ್ತಾಪವನ್ನು ಬಿಟ್ಟುಬಿಡಿ" ಎಂದು ಹೇಳಿದರು.

ಈ ಮಾತುಗಳನ್ನಾಡುವಾಗ ಮಿ.ಸ್ಪೆನ್ಲೋರವರ ಮುಖವು ಹಿಂದೆಂದೂ ನಾನು ಕಾಣದಿದ್ದಷ್ಟು ಸಿಟ್ಟಿನಿಂದ ಕೆಂಪಾಗಿತ್ತು. ಅವರ ಹಿರಿತನಕ್ಕೂ ಅವರ ಪ್ರಾಯಕ್ಕೂ ನಾನು ಅವರನ್ನು ಗೌರವಿಸುತ್ತಾ ಸ್ವಲ್ಪ ಅಂಜಿಕೆಯಿಂದ ಮಾತನಾಡಲಾರಂಭಿಸಿ –
"ಡೋರಾಳಿಗೆ. . ." ಎಂದು ಹೇಳುವಷ್ಟರಲ್ಲೇ ಅವರು ಹೇಳಿದರು –
"ಮಿಸ್ ಸ್ಪೆನ್ಲೋ ಎಂದು ಮಾತ್ರ ಕರೆಯುವ ನೆನಪಿಟ್ಟುಕೊಳ್ಳಿ" ಎಂದು.
ನಾನು ಈ ಎಚ್ಚರಿಕೆಯನ್ನು ನೆನಪಿಟ್ಟುಕೊಂಡು –

"ಮಿಸ್ ಸ್ಪೆನ್ಲೋಳಿಗೆ ನಾನು ಧರ್ಮ ಮತ್ತು ನ್ಯಾಯ ಪ್ರಕಾರ ನನ್ನ ಹೃದಯದ ಪವಿತ್ರ ಭಾವನೆಯನ್ನು ತಿಳಿಸಿ ಅವಳಿಂದ ಸಹಾನುಭೂತಿಯಿಂದ ಉತ್ತರವನ್ನು ಪಡೆದಿರುತ್ತೇನೆ. ನನ್ನ ಪ್ರಕೃತದ ಬಡತನ ಕುರಿತು ನಿಮಗೆ ಜಿಗುಪ್ಸೆ ಇರುವುದಾದರೆ ನನ್ನ ಸಂಪಾದನೆಯು ಹೆಚ್ಚುವವರೆಗೆ ನನಗೆ ದಯಮಾಡಿ ಪುರುಸೊತ್ತು ಕೊಡಿರಿ" ಅಂದೆ.
"ನಿಮ್ಮ ಪ್ರಾಯ, ಸ್ಥಾನ, ನನ್ನ ಮಗಳ ಪ್ರಾಯ, ಸ್ಥಾನ ಮತ್ತು ಅವಳ ಭವಿಷ್ಯವನ್ನು ಕುರಿತಾದ ನನ್ನ ಅಭಿಪ್ರಾಯ, ಇವು ಯಾವುದನ್ನಾದರೂ ನೀವು ಗ್ರಹಿಸಿರುವಿರೇನು? ಅದರ ಬದಲು ನನಗೆ ಹಣವಿದೆ, ಆಸ್ತಿಯಿದೆ ಎಂದು ತಿಳಿಯುತ್ತಾ ನನಗಿರುವುದು ಒಬ್ಬಳೇ ಮಗಳೆಂಬುದನ್ನೂ ಗ್ರಹಿಸಿ. . ." ಎಂದು ಹೇಳುತ್ತಾ ಮುಂದುವರೆಯುವ ಮೊದಲೇ ನಾನಂದೆ –
"ನಿಮ್ಮ ಐಶ್ವರ್ಯವನ್ನು ಕಂಡು ನಾನು ಹೀಗೆ ವರ್ತಿಸಿರುವುದಿಲ್ಲ. ದಯಮಾಡಿ ನನ್ನ ಅಭಿಪ್ರಾಯವನ್ನು ಸ್ವಲ್ಪ ಗ್ರಹಿಸಿರಿ. ನಿಮ್ಮ ಮಗಳನ್ನು ತಪ್ಪಿತಸ್ಥಳೆಂದು ದಯಮಾಡಿ ಗ್ರಹಿಸಬೇಡಿರಿ. ಇದೆಲ್ಲದಕ್ಕೂ ನಾನೇ ಜವಾಬ್ದಾರನು – ನನಗೆ ದಯಮಾಡಿ ಪುರುಸೊತ್ತು ಕೊಡಿರಿ."

"ನನ್ನ ಮಗಳನ್ನು ವಿಚಾರಿಸಿಕೊಳ್ಳುವ ಅಥವಾ ಅವಳನ್ನು ಕುರಿತು ಅಭಿಪ್ರಾಯಪಡುವ ಹಕ್ಕು, ಜವಾಬ್ದಾರಿಗಳು ನಮಗೆ ಮಾತ್ರ ಇರುವಂಥವು. ನಿಮ್ಮ ಅನುಕೂಲ ಅವಕಾಶಗಳನ್ನು ವಿಚಾರಿಸಿ, ಸಮಾಧಾನಪಡಿಸುವ ಕೆಲಸವೂ ನಮ್ಮದಲ್ಲ. ನಿಮಗೆ ಪುರಸೊತ್ತು ಕೊಡುವುದು ಬೇರೊಂದು ವಿಷಯಕ್ಕೆ – ಆ ಪುರುಸೊತ್ತೂ ಸಹ ಒಂದು ವಾರದ್ದು ಮಾತ್ರ. ಆ ಒಂದು ವಾರದೊಳಗೆ ಈ ವರೆಗೆ ನಿಮಗೂ ಮಿಸ್ ಸ್ಪೆನ್ಲೋಳಿಗೂ ನಡೆದಿರುವ ಸಂಗತಿಗಳನ್ನೆಲ್ಲಾ ಮರೆತುಬಿಡಬೇಕು" ಎಂದು ಮಿ. ಸ್ಪೆನ್ಲೋರವರು ಹೇಳಿ ಮಾತನ್ನು ಸ್ಪಷ್ಟವಾಗಿ ಮುಗಿಸಿದರು.

ನಾನು ತಲೆ ಬಗ್ಗಿಸಿಕೊಂಡು, ದುಃಖಪಡುತ್ತಾ ಮನೆಗೆ ಬಂದೆನು. ಈ ವರ್ತಮಾನವನ್ನು ಅತ್ತೆಗೂ ತಿಳಿಸಿದೆನು. ಅವಳು ದುಃಖಪಟ್ಟಳು. ನನಗೆ ಮೂಂದೇನೂ ದಾರಿತೋಚದೆ ಒಂದು ಮೂಲೆಯಲ್ಲಿ ಕುಳಿತುಬಿಟ್ಟೆನು. ಈ ಸಂಗತಿಯನ್ನು ನಾನು ಮಿಸ್ ಮಿಲ್ಸಳಿಗೆ ತಿಳಿಸಿದೆನು. ಅವಳು ಸಹಾನುಭೂತಿಯುತವಾಗಿ ಮಾತಾಡಿ, ತನ್ನ ಅನುಭವ, ಉದಾಹರಣೆಗಳಿಂದ, ನನಗೆ ಬುದ್ಧಿ ಹೇಳಿ, ಧೈರ್ಯ ಕೊಟ್ಟಳು.

ಮರುದಿನ ಶನಿವಾರವಾಗಿತ್ತು. ಎಂದಿನಂತೆ ನಾನು ಕಾಮನ್ಸ್ ಕೋರ್ಟಿಗೆ ಹೋದೆನು. ಅಲ್ಲಿ ನನಗೆ ಆಶ್ಚರ್ಯವಾಗುವಂತೆ, ಎಂದಿನಂತೆ ಕೆಲಸ ನಡೆಯುತ್ತಿರಲಿಲ್ಲ. ಇದೇನು ಹೀಗಾಗಿದೆಯೆಂದು ಗಾಬರಿಗೊಂಡು ಗುಮಾಸ್ತ ಮಿ. ಟೆಫಿಯನ್ನು ವಿಚಾರಿಸಿದೆನು.

"ನಿಮಗೆ ಗೊತ್ತಿಲ್ಲವೇ" ಎಂದು ಅವರು ನನಗೆ ಮರುಪ್ರಶ್ನೆಯಿತ್ತರು.
"ಇಲ್ಲ."
"ಮಿ. ಸ್ಪೆನ್ಲೋರವರು ಮೃತಪಟ್ಟಿರುವರು."

ಈ ವರ್ತಮಾನವನ್ನು ಕೇಳಿದ ಕೂಡಲೇ ನನಗೆ ಸುತ್ತಲಿನ ಪ್ರದೇಶವೆಲ್ಲ ಅಲುಗಾಡಿದಂತೆ ತೋರಿತು, ಮತ್ತೆ ನನಗೆ ಮೂರ್ಛೆ ಹೋಯಿತು. ನನ್ನನ್ನು ನೀರು ಹಾಕಿ ಅಲ್ಲಿದ್ದವರು ಎಚ್ಚರಿಸಿದರು. ಎಚ್ಚರವಾದ ಮೇಲೆ ಸಂಗತಿಗಳನ್ನೆಲ್ಲ ತಿಳಿದೆನು.

ಮಿ. ಸ್ಪೆನ್ಲೋರವರು ಅವರ ಮನೆಗೆ ಪ್ರತಿದಿನವೂ ಹೋಗುತ್ತಿದ್ದಂತೆ ಆ ದಿನವೂ ತಮ್ಮ ಕುದುರೆ ಗಾಡಿಯಲ್ಲಿ ಕುಳಿತು, ತಾವೇ ಗಾಡಿ ಹೊಡೆದುಕೊಂಡು ಹೋದರಂತೆ. ಆದರೆ ಮಿ. ಸ್ಪೆನ್ಲೋರವರು ಅವರ ಮನೆಗೆ ತಲುಪಲಿಲ್ಲ. ಕುದುರೆಗಳು ಖಾಲಿ ಬಂಡಿಯನ್ನೆಳೆದುಕೊಂಡು ಮನೆಗೆ ತಲುಪಿದವಂತೆ. ಅವುಗಳ ಲಗಾಮು ತುಂಡಾಗಿ ಕೆಲವಂಶ ಕಾಣೆಯಾಗಿದ್ದುವು. ಮಿ. ಸ್ಪೆನ್ಲೋರವರ ಮನೆ ಆಳುಗಳು ಗಾಡಿ ಬಂದಿದ್ದ ದಾರಿಯಲ್ಲೇ ಹುಡುಕುತ್ತಾ ಬಂದಾಗ, ಮನೆಯಿಂದ ಒಂದು ಮೈಲು ಒಳಗೇ ಮಿ. ಸ್ಪೆನ್ಲೋರವರು ಮೃತಪಟ್ಟು ಮಾರ್ಗದಲ್ಲಿ ಬಿದ್ದಿದ್ದರಂತೆ.

ಈ ಘಟನೆಯ ವರ್ತಮಾನವು ಊರಲ್ಲೆಲ್ಲಾ ಹಬ್ಬಿತು. ಮಿ. ಜಾರ್ಕಿನ್ಸರು ಬಂದು ಕೆಲವು ಗೃಹಸ್ಥರನ್ನು ಮಹಜರಿಗಾಗಿ ಇಟ್ಟುಕೊಂಡು ಮಿ.ಸ್ಪೆನ್ಲೋರವರ ಆಫೀಸನ್ನು ಶೋಧನೆ ಮಾಡಿದರು. ಇಷ್ಟೊಂದು ಹೆಸರುವಾಸಿಗಾಗಿದ್ದ ಮಿ. ಸ್ಪೆನ್ಲೋರವರ ಆಸ್ತಿ ಹೇರಳವಾಗಿರಬಹುದೆಂದೂ ಅವರು ಒಂದು ಉಯಿಲನ್ನು ಮಾಡಿಟ್ಟಿರಬಹುದೆಂದೂ ಎಲ್ಲರೂ ಊಹಿಸುತ್ತಾ ಶೋಧನೆ ಕಾಲದಲ್ಲಿ ತುಂಬಾ ಕುತೂಹಲಿಗಳಾಗಿದ್ದರು. ಆದರೆ ಶೋಧನೆಯಲ್ಲಿ ಕಂಡುಬಂದ ಆಸ್ತಿಯೇನಂದರೆ – ನಾರ್ವುಡ್ಡಿನ ಅವರ ಮನೆ ಮತ್ತೂ ಹಿತ್ತಲು, ಸಾಧಾರಣ ಒಂದು ಸಾವಿರ ಪೌಂಡು ಬೆಲೆಬಾಳುವ ಚರಸ್ವತ್ತುಗಳು ಮಾತ್ರ.

ಮಿ.ಸ್ಪೆನ್ಲೋರವರ ಮರಣದ ಕುರಿತೂ ಜೀವನದ ಕುರಿತೂ ಜನರು ನಾನಾ ವಿಧವಾಗಿ ಮಾತಾಡಿಕೊಳ್ಳುತ್ತಿದ್ದರು. ಮಿ. ಸ್ಪೆನ್ಲೋರವರು ಬಹು ಆಡಂಬರದ ಜೀವನ ನಡೆಸುತ್ತಿದ್ದರೆಂದೂ ಮಾತಾಡಿಕೊಳ್ಳುತ್ತಿದ್ದರು. ಈ ವಕೀಲ ವೃತ್ತಿಯವರು ಒಬ್ಬರನ್ನೊಬ್ಬರು ಅನುಕರಿಸಿಯೂ ಮೀರಿಸಬೇಕೆಂದೂ ತುಂಬಾ ಆಡಂಬರ ಮತ್ತು ಶೀವಿಯಿಂದ ಮೆರೆಯುವುದು ವಾಡಿಕೆಯೆಂದು ಕೆಲವರ ಅಭಿಪ್ರಾಯವಾಗಿತ್ತು. ಕಕ್ಷಿದಾರರ ಹಣ ಕೈಗೆ ಬರುತ್ತಲೂ ಹೋಗುತ್ತಲೂ ಇದ್ದುದರಿಂದ, ಅವರ ಸ್ವಂತ ಅಂಶ ಎಷ್ಟೆಂದು ಯಾವತ್ತೂ ಅವರು ಯೋಚಿಸುತ್ತಿರಲಿಲ್ಲವೆಂಬಂತೆ

ಅವರ ವಹಿವಾಟುಗಳು ತೋರುತ್ತಿದ್ದುವು. ಅವರು ಇತರರ ವಹಿವಾಟುಗಳನ್ನು ವ್ಯವಸ್ಥೆಯಿಂದ ನಡೆಸುವ ಪ್ರಯತ್ನದಲ್ಲಿದ್ದರೂ ತಮ್ಮ ವಹಿವಾಟುಗಳನ್ನು ಮಾತ್ರ ಬಹುವಾದ ಅವ್ಯವಸ್ಥೆಯಲ್ಲೆ ಇಟ್ಟುಕೊಂಡಿದ್ದರಂತೆ. ತಮಗೂ ಮರಣವಿದೆ ಎಂಬುದನ್ನೇ ಅವರು ಗ್ರಹಿಸುತ್ತಿರಲಿಲ್ಲವಂತೆ.

ಮಿ. ಸ್ಪೆನ್ಲೋರವರ ಉತ್ತರ ಕ್ರಿಯೆ ಲಂಡನ್ನಿನ ಪುಟ್ನಿ ಎಂಬಲ್ಲಿ ಜರುಗಿತು. ಅವರಿಗೆ ಯಾರೂ ಕುಟುಂಬದ ಬಂಧು ಬಾಂಧವರಾಗಿ ಇರಲಿಲ್ಲವಂತೆ. ಅವರ ಖಾಸಾ ಅಕ್ಕಂದಿರು ಪುಟ್ನಿಯಲ್ಲಿದ್ದ ತಮ್ಮ ಮನೆಯಲ್ಲಿ ಉತ್ತರ ಕ್ರಿಯೆಯನ್ನು ನಡೆಸಿದರು. ಉತ್ತರ ಕ್ರಿಯೆಗೆ ಡೋರಾಳನ್ನೂ ಅವರು ಕರೆದುಕೊಂಡು ಹೋಗಿದ್ದರು. ಈ ಅಕ್ಕಂದಿರಿಗೂ ಮಿ.ಸ್ಪೆನ್ಲೋರವರಿಗೂ ಅಷ್ಟೊಂದು ಒಳ್ಳೆಯದಿರಲಿಲ್ಲ. ಮಿಸೆಸ್ ಸ್ಪೆನ್ಲೋರವರು ಡೋರಾಳ ನಾಮಕರಣಕ್ಕೆ ಈ ಅಕ್ಕಂದಿರಿಗೆ ಆಮಂತ್ರಣವನ್ನು ಕಳುಹಿಸುವಾಗ ಚಹಾ ಸತ್ಕಾರಕ್ಕೆ ಮಾತ್ರ ಆಮಂತ್ರಿಸಿದ್ದರಂತೆ. ಮಿ. ಸ್ಪೆನ್ಲೋರವರ ಶ್ರೀಮಂತ ಸ್ನೇಹಿತರಿಗೆ ಅದೇ ದಿನ, ಅದೇ ನಾಮಕರಣದ ಉದ್ದೇಶ, ಒಂದು ದೊಡ್ಡ ಊಟವನ್ನೇ ಏರ್ಪಡಿಸಿದ್ದರಂತೆ. ಈ ವಿಧದಲ್ಲಿ ತಮ್ಮನ್ನು ಬಡವರೆಂದು ಮಿಸೆಸ್ ಸ್ಪೆನ್ಲೋರವರು ಕಡೆಗಣಿಸಿದ್ದಕ್ಕಾಗಿ ಈ ಅಕ್ಕಂದಿರು ತಮ್ಮ ಬಡತನ ತಮಗೆ ದೊಡ್ಡದೆಂದು, ಮಿಸೆಸ್ ಸ್ಪೆನ್ಲೋರವರು ಜೀವಿಸಿರುವವರೆಗೆ ಅವರ ಮನೆಗೆ ಹೋಗಿರಲಿಲ್ಲ. ಅಭ್ಯಾಸದ ಕಾರಣವಾಗಿ, ಅತ್ತಿಗೆಯ ಮರಣಾನಂತರವೂ ಈ ಅಕ್ಕಂದಿರು ದೂರವಾಗಿಯೇ ಇದ್ದರು. ಈ ಸೋದರತ್ತೆಯವರು ಡೋರಾಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುವಾಗ, ಮಿಸ್ ಜೂಲಿಯಾ ಮಿಲ್ಸಳನ್ನು ಕೇಳಿಕೊಂಡು, ಡೋರಾಳ ಅನುಕೂಲಕ್ಕಾಗಿ ಕೆಲವು ದಿನಗಳಾದರೂ ತಮ್ಮ ಮನೆಯಲ್ಲಿ ನಿಲ್ಲಿಸಿಕೊಳ್ಳುವುದಕ್ಕಾಗಿ ಅವಳನ್ನೂ ಜತೆಯಲ್ಲೇ ಕರೆದುಕೊಂಡು ಹೋಗಿದ್ದರು.

ಮಿಸ್ ಜೂಲಿಯಾ ಮಿಲ್ಸಳು ಡೋರಾಳ ಜತೆಯಲ್ಲಿದ್ದುದು ಡೋರಾಳಿಗೆ ತುಂಬಾ ಅನುಕೂಲ ಮತ್ತು ಪ್ರಯೋಜನವಾಗಿರಬೇಕು. ಮತ್ತೂ ನನ್ನ ಮನಸ್ಸಿಗೂ ತುಂಬಾ ಸಮಾಧಾನ ಕೊಟ್ಟಿತು. ಇಷ್ಟೂ ಅಲ್ಲದೆ ನನಗೂ ಡೋರಾಳಿಗೂ ಸಂದರ್ಭದಿಂದಲೇ ಒಂದು ವಿಧದ ಸಂಪರ್ಕವನ್ನೂ ಮಿಸ್ ಮಿಲ್ಸಳು ಊರ್ಜಿತದಲ್ಲಿರಿಸಿದಳು.

ಮಿಸ್ ಜೂಲಿಯಾ ಮಿಲ್ಸಳು ದಿನದಿನದ ವರದಿಯನ್ನು ತನ್ನ ಡೈರಿಯಲ್ಲಿ ಬರೆದಿಡುತ್ತಿದ್ದಳು. ನಾನು ಪ್ರತಿ ದಿನವೂ ಪುಟ್ನಿಗೆ ಹೋಗಿ ಆ ಡೈರಿಯನ್ನು ಓದಿ ಬರುತ್ತಿದ್ದೆ. ಡೈರಿಯಲ್ಲಿ ಮಿಸ್ ಮಿಲ್ಸಳು ಈ ಮುಂದಿನಂತೆ ಬರೆದಿದ್ದಳು.

"ಸೋಮವಾರ – ಡೋರಾ ಅಳು ನಿಲ್ಲಿಸಿರುತ್ತಾಳೆ – ತಲೆನೋವು – ಮಾತು ಜಿಪ್ಪನ ಹತ್ತಿರ ಮಾತ್ರ – ಜಿಪ್ಪನ ಆಟ ನೋಡಿ ಅತ್ತಳು. (ಅಶ್ರು ಬಿಂದುಗಳು ಹೃದಯದ ಸಾರತಾನೆ! [ಜೂ.ಮಿ])"

"ಮಂಗಳವಾರ – ಡೋ ನಿತ್ರಾಣ. ಬಂಡಿಯಲ್ಲಿ ಗಾಳಿಸವಾರಿ. ಜಿ. ದಾರಿಗರನ್ನು ಕಂಡು ಬೊಗಳಿತು – ಡೋ ನಕ್ಕಳು. (ಜೀವಮಾನದ ಸರಪಳಿಯ ಕೊಣಿಕೆಗಳೇ ಈ ನಗೆಯಷ್ಟೆ! – [ಜೂ. ಮಿ])"

"ಶುಕ್ರವಾರ – ಒಂದು ಘಟನೆ, ಜಿಪ್ ಕಳವಾಯಿತು. ಡೋ ಮೂರ್ಛಿತಳಾದಳು. ಪೋಲಿಸರು ಹುಡುಕಿದರು, ಒಂದು ಪೌಂಡು ಕೊಟ್ಟರೆ ನಾಯಿ ಪತ್ತೆಂತ ಹುಡುಗನೊಬ್ಬ ತಿಳಿಸಿದ. ಪೌಂಡು ತೆತ್ತು ನಾಯಿ ಬಂತು. ಡೋ ಹರ್ಷಯುತಳು. ಜಿ ಹತ್ರ ಮುದ್ದಾಡಿದಳು, ನಲಿದಳು. ಕಾಪರ್ಫೀಲ್ಡ್ ಹೆಸರು ಹೇಳಿದಾಗ ಅತ್ತಳು. ಮೌನ, ಊಟ ತಿಂಡಿ ಬಿಟ್ಟು ನಿದ್ರೆ. (ಕಾ.ಫೀ. ಕಾಲಚಕ್ರದ ಗತಿಯನ್ನು ಕಾದು ಕುಳಿತಿರುವುದು ಲೇಸಲ್ಲವೇ? [ಜೂ.ಮಿ])"

ಹೀಗೆ ಆ ಕಾಲದಲ್ಲಿ ನನಗೆ ಶಾಂತಿ ಸಮಾಧಾನ ಕೊಡುತ್ತಿದ್ದುದು ಆ ಡೈರಿ ಮಾತ್ರವಾಗಿತ್ತು. ಇತರ ಎಲ್ಲಾ ವಿಧದಲ್ಲೂ ನಾನು ಹತಾಶನಾಗಿ ದುಃಖಿಸಿ ಕಾಲ ಕಳೆಯುವಂತೆ ಆಗಿತ್ತು. ದಿನ ದಾಟಿದಂತೆ ಡೋರಾಳು ಶಾಂತಚಿತ್ತವಾಗುತ್ತ ನನ್ನ ಜ್ಞಾಪಕವನ್ನು ತಂದುಕೊಳ್ಳಬಹುದು ಎಂದು ನಿರೀಕ್ಷಿಸುತ್ತಿದ್ದುದೆಲ್ಲಾ ನಿಷ್ಪ್ರಯೋಜನವೆಂಬಂತೆ ತೋರಿತು. ಡೋರಾಳ ಸುತ್ತಲೂ ಮಿಸ್ ಮಿಲ್ಸಳ ಸಹಾಯದಿಂದ ನಾನು ನಿರ್ಮಿಸುತ್ತ ಬಂದಿದ್ದ ಸುಂದರ ಗೋಪುರವನ್ನು ಯಾವನೋ ಒಬ್ಬ ಮಾಯಾವಿಯು ತನ್ನ ಮಾಯೆಯಿಂದ ನೂಕಿ ಉರುಳಿಸಿಬಿಟ್ಟಂತೆ ದಿನ ಹೋದಂತೆಲ್ಲ ನನಗೆ ಕಾಣತೊಡಗಿತು. ನನ್ನ ಸಮಸ್ತ ಸುಖದುಃಖಗಳ ಜವಾಬ್ದಾರಿಯನ್ನು ದೇವರ ಮೇಲಿಟ್ಟು ಮನಶ್ಶಾಂತಿ ತರಲು ಪ್ರಯತ್ನಿಸಿದೆ. ಕೊನೆಕೊನೆಗೆ ಈ ಲೋಕದ ಕೋಟ್ಯನುಕೋಟಿ ಜನರನ್ನು ಸಾಗಿಸಿ ಅವರ ದುಃಖಗಳನ್ನು ಅಂತ್ಯಗೊಳಿಸುವ ಕಾಲ ಚಕ್ರವೇ ನನ್ನ ದುಃಖವನ್ನೂ ಶಮನ ಮಾಡಬಹುದೆಂದು ಗ್ರಹಿಸತೊಡಗಿದೆನು.

ಅಧ್ಯಾಯ ಮೂವತ್ತೊಂಬತ್ತು

ವಿಕ್ಫೀಲ್ಡ್ ಮತ್ತು ಹೀಪ್

ನಾನು ಈ ರೀತಿ ಸದಾ ಆಲೋಚನಾಪರನಾಗಿರುವುದನ್ನು ಕಂಡು ಅತ್ತೆಗೆ ತುಂಬಾ ಅಸಮಾಧಾನವಾಗತೊಡಗಿತ್ತು. ಅವಳು ಒಂದು ದಿನ, ಹಠಾತ್ತಾಗಿ, ಏನೋ ಒಂದು ಮಹತ್ವದ ಕೆಲಸ ಮರೆತುಹೋಗಿದ್ದುದನ್ನು ಜ್ಞಾಪಿಸಿಕೊಂಡಂತೆ, ನನ್ನನ್ನು ಕರೆದು, ನಾನು ಡೋವರಿಗೆ ಹೋಗಿ ಕೆಲವು ಕೆಲಸಗಳನ್ನು ಮಾಡಿ ಬರಬೇಕೆಂದು ಹೇಳಿದಳು. ಡೋವರಿನಲ್ಲಿ ಅವಳ ಮನೆಯನ್ನು ಬಾಡಿಗೆಗೆ ವಹಿಸಿಕೊಂಡಿದ್ದ ಒಕ್ಕಲಿನಿಂದ ಅವಧಿಯನ್ನು ಇನ್ನೂ ಮುಂದುವರಿಸಿದ ಒಂದು ಬಾಡಿಗೆ ಚೀಟನ್ನು ಬರೆಸಿಕೊಂಡು ಬರಬೇಕೆಂಬುದೂ ಜೇನೆಟ್ಟಳನ್ನು ಕುರಿತಾದ ಕೆಲವು ಕೆಲಸಗಳೂ ಅವುಗಳಲ್ಲಿ ಮುಖ್ಯವಾದವುಗಳಾಗಿದ್ದುವು. ಮೇಲಿಂದ ಮೇಲೆ ನೋಡಿದರೆ ಈ ಕೆಲಸಗಳು ಮುಖ್ಯವೆಂದು ತೋರಿಬರಬಹುದಾದರೂ ಅತ್ತೆಯ ಉದ್ದೇಶವೇ ಬೇರೆ ಇತ್ತೆಂದು ನಾನು ಊಹಿಸಿದೆನು. ಸ್ಥಳ ಮತ್ತು ಕೆಲಸಗಳನ್ನು ಸ್ವಲ್ಪ ಬದಲಿಸುವುದರಿಂದ ನನಗೆ ಮನಸ್ಸಿನ ಸ್ವಲ್ಪ ಶಾಂತಿ ಉಂಟಾಗುವುದೆಂದೇ ಅತ್ತೆ ಈ ಏರ್ಪಾಡನ್ನು ಮಾಡಿರಬೇಕು.

ಡೋವರಿಗೆ ಹೋಗುವುದರಲ್ಲಿ ನನಗೂ ತುಂಬಾ ಸಂತೋಷವಿತ್ತು. ಅತ್ತೆಯ ಕೆಲಸವನ್ನು ನಾನು ಹೇಗೂ ಮಾಡತಕ್ಕವನೇ ಇದ್ದುದರ ಜತೆಗೆ ಕೇಂಟರ್ಬರಿಯಲ್ಲಿದ್ದ ಏಗ್ನೆಸ್ಸಳನ್ನು ನಾನು ದಾರಿಯಲ್ಲಿ ನೋಡಿ ಬರುವ ಸಂದರ್ಭವೂ ನನಗೆ ದೊರಕಿತು. ಮಿ. ಸ್ಪೆನ್ಲೋರವರ ನಿಧನದಿಂದ ಅವರ ಜತೆಕೂಟವು ಹೀನಸ್ಥಿತಿಗೆ ಬಂದಿತು. ಇದೇ ಸಮಯದಲ್ಲಿ ಒಳವಕೀಲರ – ದಲ್ಲಾಳಿ ವಕೀಲರ, ಸಂಖ್ಯೆ ಏರುತ್ತಾ ಬಂದು ವಕೀಲರ ಸಂಪಾದನೆ ಕಡಿಮೆಯಾಗುತ್ತಾ ದಲ್ಲಾಳಿಗಳ ಸಂಪಾದನೆ ಹೆಚ್ಚುತ್ತಾ ಬಂದಿತ್ತು. ಹೀಗಾಗಿ, ನನಗೆ ಬೇಕಾದಷ್ಟು ಸಮಯದ ಅವಕಾಶವಿದ್ದುದರಿಂದ, ಡಾ। ಸ್ಟ್ರಾಂಗರಿಂದ ಮೂರು ದಿನದ ರಜೆ ಪಡೆದುಕೊಂಡು ನಾನು ಡೋವರಿಗೆ ಹೋದೆನು.

ಡೋವರಿನಲ್ಲಿ ಮೊದಲು ಒಕ್ಕಲಿನ ಬಾಡಿಗೆ ಚೀಟನ್ನು ಬರೆಸಿಕೊಂಡೆನು. ಅನಂತರ ಜೇನೆಟ್ಟಳೊಡನೆ ವಿಚಾರಿಸಿ ಅವಳ ಕೆಲವು ಚರಿತ್ರೆಗಳನ್ನು ತಿಳಿದು, ನನ್ನ ಕಡೆಯ ಕೆಲಸವನ್ನು ಮಾಡಿ ಪೂರೈಸಿದೆನು. ಜೇನೆಟ್ಟಳು ಒಬ್ಬ ನಾವಿಕನನ್ನು ಮದುವೆಯಾಗುವ ಆಲೋಚನೆಯಲ್ಲಿದ್ದಳು. ಆದರೆ ಆ ನಾವಿಕ ಸಾಕಷ್ಟು ಯೋಗ್ಯನಲ್ಲವೆಂಬುದು ವಿಚಾರಣೆಯಿಂದ ಖಚಿತವಾಯಿತು. ಈ ಎಲ್ಲ ವಿಷಯವನ್ನು ಜೇನೆಟ್ಟಳೊಡನೆ ಮಾತಾಡಿ, ಆ ನಾವಿಕನನ್ನು ಜೇನೆಟ್ಟಳು ಮದುವೆಯಾಗದಂತೆ ಮಾಡಿದೆ. ಜೇನೆಟ್ಟಳೂ ಸಂದರ್ಭಗಳನ್ನು ನ್ಯಾಯವಾಗಿ ಅರ್ಥಮಾಡಿ ನಾವಿಕನನ್ನು ತಿರಸ್ಕರಿಸಿದಳು. ಅನಂತರ ಜೇನೆಟ್ಟಳು ಡಾ। ಸ್ಟ್ರಾಂಗರ ಮನೆಗೆಲಸಕ್ಕೆ – ನನ್ನ ಸಲಹೆ, ಶಿಫಾರ್ಸು ಪ್ರಕಾರ ಸೇರಿದಳು. ಹೆಂಗುಸರು ಮದುವೆಯಾಗದಿರುವುದೇ ಲೇಸೆಂಬ ಅತ್ತೆಯ ಅಭಿಪ್ರಾಯವನ್ನು ಅಂಗೀಕರಿಸಿ ಜೇನೆಟ್ಟಳು ತನ್ನ ಮದುವೆಯನ್ನು ನಿಲ್ಲಿಸಿದ್ದೆಂದು ಅತ್ತೆ ಗ್ರಹಿಸಿ ಸಂತೋಷಪಟ್ಟಳು.

ಡೋವರಿನಿಂದ ಕೇಂಟರ್ಬರಿಗೆ ನಾನು ನಡೆದೇ ಹೋದೆನು. ಮಿ.ವಿಕ್ಫೀಲ್ಡರ ಮನೆಗೆ ಹೋಗುವಾಗ ಅವರ ಆಫೀಸ್ ಬಾಗಿಲು ತೆರೆದಿತ್ತು. ಹಿಂದೆ ಉರೆಯಾಹೀಪನು ಗುಮಾಸ್ತನಾಗಿ ಕುಳಿತಿದ್ದ ಸ್ಥಳದಲ್ಲಿ ಕಪ್ಪು ಕೋಟನ್ನು ಧರಿಸಿ, ಕನ್ನಡಕವನ್ನಿಟ್ಟುಕೊಂಡು ಜಡ್ಜನೊಬ್ಬನು ತನ್ನ ಗದ್ದುಗೆಯಲ್ಲಿ ಕುಳಿತಿರುವ ಠೀವಿಯಲ್ಲಿ, ಮಿ. ಮೈಕಾಬರರು ಕುಳಿತು ಏನೋ ಬರೆಯುತ್ತಿದ್ದರು.

ನನ್ನನ್ನು ಕಂಡ ಕೂಡಲೇ ಅವರು ಬಹು ಸಂತೋಷಪಟ್ಟರು. ಉರೆಯನ ಪರಿಚಯವನ್ನು ನನಗೆ ಮಾಡಿಕೊಡುವುದಾಗಿ ತಿಳಿಸಿದರು. ಉರೆಯನ ಪರಿಚಯವು ನನಗೆ ಮೊದಲೇ ಇದೆಯೆಂದು ಹೇಳಿ, ಅವರ ಸಂಸಾರದ ಯೋಗಕ್ಷೇಮವನ್ನೂ ಈ ಹೊಸ ವೃತ್ತಿಯಲ್ಲಿನ ಅವರ ಅನುಭವ, ಅಭಿಪ್ರಾಯಗಳನ್ನೂ ವಿಚಾರಿಸಿದೆನು.

ಆದರೆ ನನ್ನ ವಿಚಾರಣೆಯಿಂದ ಅವರು ಸ್ವಲ್ಪ ಗಾಬರಿಗೊಂಡಿದ್ದಂತೆ ತೋರಿದರು. ಉರೆಯನ ಪರಿಚಯವು ನನಗೆ ಮೊದಲೇ ಇದ್ದದ್ದೂ ಅವರ ವೃತ್ತಿಯ ಮರ್ಮವನ್ನು ವಿಚಾರಿಸಿದ್ದೂ ಅವರನ್ನು ಗಾಬರಿಗೊಳಿಸಿರಬೇಕೆಂದು ಊಹಿಸಿದೆನು. ಸ್ವಲ್ಪ ಗಾಬರಿಯಿಂದಲೇ ಅವರು ಉತ್ತರ ಕೊಟ್ಟರು.

"ಮಿ. ಕಾಪರ್ಫೀಲ್ಡ್, ಕೆಲಸವೇನೋ ಚೆನ್ನಾಗಿಯೇ ಇದೆ. ಆದರೆ ಮನಸ್ಸಿನ ವಿಹಾರಕ್ಕೆ ಈ ವೃತಿಯಲ್ಲಿ ಎಡೆಯಿಲ್ಲ. ಕಾರ್ಯರಂಗಕ್ಕೆ ಇಳಿದು, ಅತಿ ಚಿಕ್ಕ ವಿಷಯಗಳಿಗೆ ಸಹ ಗಮನವಿಟ್ಟು ಶ್ರಮಪಡಬೇಕಾದ ಶ್ರಮ ಜೀವನದ ಕೆಲಸವಿದು. ಈ ಕೆಲಸದಲ್ಲಿ ಯಾರಿಗೂ ನಮ್ಮ ಮನಮೆಚ್ಚುವಂತೆ, ಸೊಗಸಾಗಿ, ದೀರ್ಘವಾಗಿ ಪತ್ರ ಬರೆಯಲನುಕೂಲವಿಲ್ಲ. ಅದರ ಬದಲು ಪತ್ರಗಳನ್ನು ಕಾನೂನು ಬದ್ಧವಾಗಿಯೂ ಶಬ್ದಗಳನ್ನೂ ಅಭಿಪ್ರಾಯಗಳನ್ನೂ ತೂಕಮಾಡಿ, ಅಗತ್ಯವಿದ್ದಂತೆ ಕತ್ತರಿಸಿ, ಚುಟುಕಾಗಿ, ಗೂಢವಾಗಿ, ಮಾತ್ರ ಬರೆಯಬೇಕು. ನಮ್ಮಂಥಾ ಸಾಹಿತ್ಯ, ಕಲೆ ಮೊದಲಾದುವುಗಳ ಪ್ರೇಮಿಗಳಿಗೆ ಈ ವೃತ್ತಿಯು ತಕ್ಕದಾದದ್ದಲ್ಲ" ಅಂದರು ಮಿ. ಮೈಕಾಬರರು.

ಅನಂತರ ತಮ್ಮ ಸಂಸಾರದ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು. ಉರೆಯನು ತನ್ನ ತಾಯಿಯ ಸಮೇತನಾಗಿ ಮಿ. ವಿಕ್ಫೀಲ್ಡರ ಮನೆಗೆ ಬಂದು ನೆಲಸಿದನಂತರ, ಖಾಲಿಬಿದ್ದ ಉರೆಯನ ಮನೆಗೆ ಮಿ. ಮೈಕಾಬರರು ಸಂಸಾರ ಸಮೇತರಾಗಿ ಹೋಗಿ ನೆಲೆಸಿರುವರಾಗಿ

ತಿಳಿಸಿದರು. ನಾನು ಅವರ ಮನೆಗೆ ಹೋಗಿ ಅವರ ಪತ್ನಿಯವರೊಡನೆ ಮಾತಾಡಿ ಹೋಗಬೇಕೆಂದೂ ನನ್ನನ್ನು ಕೇಳಿಕೊಂಡರು. ಅವರ ಈ ಎಲ್ಲಾ ಮಾತುಗಳಲ್ಲೂ ಮೊದಲಿನ ಸರಳತೆಯಿರಲಿಲ್ಲ – ಮಾತುಗಳನ್ನು ಬಹು ಎಚ್ಚರದಿಂದ ಆಡುತ್ತಿದ್ದರು. ಒಂದು ಹೊಸ ಶಿಸ್ತನ್ನು ಅಭ್ಯಾಸ ಮಾಡುತ್ತಿದ್ದವರಂತೆ ತೋರುತ್ತಿದ್ದರು. ಅವರಲ್ಲು ಉಂಟಾಗಿದ್ದ ಬದಲಾವಣೆಯನ್ನು ನಾನು ಕಂಡಿರಬೇಕೆಂದು ತಿಳಿದೂ ನಾಚಿಕೆಪಡುತ್ತಿದ್ದಂತೆ ತೋರುತ್ತಿದ್ದರು. ಅವರ ವೃತ್ತಿಯ ಪ್ರಧಾನ ಲಕ್ಷಣ ಗೋಪ್ಯತೆಯೆಂದು ತಿಳಿಸುತ್ತಾ ಉರೆಯ ಅವನ ವೃತ್ತಿಯಲ್ಲಿ ತುಂಬಾ ಬುದ್ಧಿವಂತನೂ ನುರಿತವನೂ ಎಂದು ಹೊಗಳಿದರು. ಉರೆಯ ಅವರಿಗೆ ಸಂಬಳವನ್ನು ಪ್ರತಿ ತಿಂಗಳಲ್ಲೂ ತಪ್ಪದೆ ಕೊಡುತ್ತಿದ್ದನು. ಮಾತ್ರವಲ್ಲದೆ, ಅಗತ್ಯ ಬಿದ್ದಾಗ ಸಂಬಳವನ್ನು ಮುಂದಾಗಿಯೇ ಕೊಡುತ್ತಿದ್ದನು. ಈ ವಿಷಯಗಳನ್ನೆಲ್ಲಾ ಹೇಳುತ್ತಾ ಅವರು ಮಿ. ವಿಕ್ಫೀಲ್ಡರನ್ನು ಕುರಿತೂ ತಮ್ಮ ಅಭಿಪ್ರಾಯವನ್ನು ಪ್ರಸ್ತಾಪಿಸಿದರು.

"ಮಿ. ವಿಕ್ಫೀಲ್ಡರು ಬಹು ಘನವಂತರು ನಿಜ. ಆದರೆ, ಕೇವಲ ಸಂಪ್ರದಾಯವಾದಿಗಳು. ಹೊಸ ಪರಿಸ್ಥಿತಿಗೆ ತಕ್ಕಂತೆ ತಮ್ಮ ಕ್ರಮ, ಶಿಸ್ತುಗಳನ್ನು ಬದಲಾಯಿಸಿಕೊಳ್ಳಲು ಅಸಮರ್ಥರು" ಅಂದರು ಮಿ. ಮೈಕಾಬರರು.
"ಉರೆಯನೇ ಅವರನ್ನು ಹಾಗೆ ಮಾಡಿದ್ದಿರಬೇಕು" ಎಂದು ನಾನಂದೆನು.

ನನ್ನ ಮಾತನ್ನು ಕೇಳಿ ಅವರು ಸ್ವಲ್ಪ ಗಾಬರಿಗೊಂಡಂತೆ ತೋರಿದರು. ಏನು ಉತ್ತರಕೊಡುವುದೆಂದು ಗ್ರಹಿಸುತ್ತಿರುವವರಂತೆ ಸ್ವಲ್ಪ ಹೊತ್ತು ಸುಮ್ಮನಿದ್ದು, ಕೊನೆಗೆ –
"ಮಿ. ಕಾಪರ್ಫೀಲ್ಡ್, ನನ್ನ ಒಂದು ಮಾತನ್ನು ದಯಮಾಡಿ ಕೇಳಬೇಕು. ನಾನು ಈ ಆಫೀಸಿನಲ್ಲಿ ಒಬ್ಬ ಜವಾಬ್ದಾರಿಯಿರುವ ಅಧಿಕಾರಿಯಾಗಿದ್ದೇನೆ. ನಾನು ಮೊದಲೇ ಅಂದಿರುವಂತೆ ಇಲ್ಲಿ ಗೋಪ್ಯತೆ ಬಹು ಮುಖ್ಯ. ಮನಸ್ಸಿನಲ್ಲಿ ಇದ್ದುದನ್ನು ಬಿಚ್ಚಿ ಮಾತಾಡಲು ಅನುಕೂಲವಿಲ್ಲ. ಬಹು ಬುದ್ಧಿವಂತಳಾಗಿರುವ ನನ್ನ ಪತ್ನಿಯೊಡನೆ ಸಹಾ ನಾನು ಹೇಳದಿರುವಷ್ಟರ ಗುಟ್ಟಿನ ಸಂಗತಿಗಳು ಇಲ್ಲಿಗೆ ಬರುತ್ತವೆ. ಈ ಮಾತುಗಳನ್ನಾಡಿದೆನೆಂದು ದಯಮಾಡಿ ಬೇಸರಿಸಬೇಡಿ. ನಿಮ್ಮನ್ನು ಅಪಮಾನಗೊಳಿಸಲು ಈ ರೀತಿ ನಾನು ಮಾತಾಡುತ್ತಿರುವುದಲ್ಲ" ಎಂದು ಹೇಳಿದರು.

ಮಿ. ಮೈಕಾಬರರು ಯಾವುದೋ ಒಂದು ನಿರ್ಬಂಧದಲ್ಲಿದ್ದಾರೆಂದು ನಾನು ಊಹಿಸಿದೆನು. ಅವರ ಮಾತು, ಅಭಿಪ್ರಾಯಗಳನ್ನು ಸಮರ್ಥಿಸಿಯೇ ನಾನು ಮಾತನಾಡಿ, ಅನಂತರ ಏಗ್ನೆಸ್ಸಳನ್ನು ನೋಡಲು ಮನೆಯ ಒಳಗೆ ಹೋದೆನು.

ಏಗ್ನೆಸ್ಸಳು ಒಂದು ಮೇಜದ ಎದುರು ಕುಳಿತು ಏನೋ ಬರೆಯುತ್ತಿದ್ದಳು. ನನ್ನನ್ನು ಕಂಡು ಸಂತೋಷಪಟ್ಟಳು. ಅವಳು ಹಿಂದೆ ತನ್ನದಾಗಿ ಉಪಯೋಗಿಸುತ್ತಿದ್ದ ಕೋಣೆಯಲ್ಲೇ ಈಗ ಕುಳಿತಿದ್ದಳು. ನಾನು ಅವಳ ಸಮೀಪಕ್ಕೆ ಹೋಗಿ ಮೊದಲು ಕುಳಿತಿರುತ್ತಿದ್ದಂತೆಯೇ ಅವಳ ಸಮೀಪದಲ್ಲೇ ಕುಳಿತು ಮಾತನಾಡತೊಡಗಿದೆನು. ಅನೇಕ ವಿಷಯಗಳನ್ನು ಪೂರ್ವದ ಸ್ನೇಹ ಸಲಿಗೆಗಳಿಂದಲೇ ಮಾತಾಡಿದೆವು. ಹೀಗೆ ಮಾತಾಡುತ್ತಾ ನಾನಂದೆ –
"ಏಗ್ನೆಸ್, ನಾನು ನಿನ್ನ ಸಮೀಪಕ್ಕೆ ಬಂದಾಗ ನನ್ನ ಮನಸ್ಸಿನ ಪರಿಸ್ಥಿತಿಯೇ ಪರಿವರ್ತನಗೊಳ್ಳುತ್ತಿದೆ. ಆ ಪರಿವರ್ತನೆಯೂ ಉತ್ತಮತರದ್ದು, ಉಲ್ಲಾಸ ಉತ್ಸಾಹಪೂರಿತವಾದುದು. ನಿನ್ನ ಸಮೀಪದಲ್ಲಿ ಮಾತಾಡುತ್ತಿರುವಾಗಲೆಲ್ಲ ನನ್ನ ಮನಸ್ಸು ಪರಿಪೂರ್ಣ ಶಕ್ತಿಯುತವೂ ಉತ್ಸಾಹಪೂರಿತವೂ ಆಗಿದ್ದು, ನಿನ್ನಿಂದ ದೂರ ಸರಿದ ಹಾಗೆಲ್ಲ ಅದು ಅಪೂರ್ಣವೂ ನಿಶ್ಶಕ್ತವೂ ಆಗುತ್ತದೆ. ನಾನು ಹಿಂದೆ ನಿನ್ನ ಸಮೀಪದಲ್ಲಿ ಇರುತ್ತಿದ್ದಾಗಲೆಲ್ಲ ನಾನು ಆಲೋಚಿಸಿ ನಿರ್ಧರಿಸಬೇಕಾದುದನ್ನೆಲ್ಲ ನೀನೇ ಆಲೋಚಿಸಿ ನಿರ್ಧರಿಸಿ ಬಿಡುತ್ತಿದ್ದೆ. ನನ್ನ ಮನಸ್ಸಿನ ಭಾರವನ್ನು ಹಗುರಪಡಿಸಿಬಿಡುತ್ತಿದ್ದೆ. ಈಗ ನನ್ನ ದುಃಖಗಳನ್ನೆಲ್ಲ ನಿನ್ನ ಸಮೀಪಕ್ಕೆ ಹೊತ್ತು ತಂದಿರುತ್ತೇನೆ" ಅಂದೆನು.

"ಕಾಪರ್ಫೀಲ್ಡ್, ನನ್ನ ಗುಣ ಹಾಗಿರಲಿ. ನನ್ನ ಬಹು ಸ್ವಲ್ಪ ಗುಣವನ್ನಾದರೂ ಮಹತ್ವದ್ದೆಂದೇ ಗ್ರಹಿಸಿ ಸಂತೋಷಿಸುವುದೇ ನಿನ್ನದೊಂದು ವಿಶೇಷ ಗುಣ. ನನ್ನಲ್ಲಿರುವ ಮಹತ್ವ ಏನೆಂಬುದನ್ನು ಬೇಕಾದರೆ ಮತ್ತೆ ನೋಡೋಣ. ನಿನ್ನ ಕಷ್ಟಗಳೂ ದುಃಖಗಳೂ ಏನೆಂಬುದನ್ನು ಮೊದಲು ತಿಳಿಸು" ಅಂದಳು ಏಗ್ನೆಸ್.

"ನಾನು ನಿನ್ನನ್ನು ಮುಖಸ್ತುತಿ ಮಾಡುತ್ತಿಲ್ಲ, ಏಗ್ನೆಸ್. ಆ ಹೊತ್ತು ನೀನು ನಮ್ಮ ಮನೆಗೆ ಬರುವ ಮೊದಲು ನನ್ನ ಮನಸ್ಸಿನಲ್ಲಿ ತರ್ಕದಿಂದ ಗೊತ್ತು ಹಚ್ಚಲಾಗದಿದ್ದ – ಆದರೂ ನಿಜವಾಗಿಯೂ ಇದ್ದ, ಹೆದರಿಕೆಗಳು ನೀನು ಬಂದೊಡನೆ ಮಾಯವಾದುವು. ಈ ಮೊದಲು, ಏಗ್ನೆಸ್, ನನ್ನ ಮನಸ್ಸನ್ನೇ ನಾನು ಅರ್ಥಮಾಡಲಾರದಂಥ ಸ್ಥಿತಿಯಲ್ಲಿದ್ದೆ. ಆದರೆ, ಈಗ ಇಲ್ಲಿಗೆ ಬರುವ ಮೊದಲಿನ ಸ್ಥಿತಿಗಿಂತ ಉತ್ತಮ ಸ್ಥಿತಿಗೆ ಬಂದಿದ್ದೇನೆ. ಜೀವಿಸಿರುವುದಕ್ಕೆ ಆಸಕ್ತಿಯೂ ಜೀವನದಲ್ಲಿ ಉತ್ಸಾಹವೂ ಈಗ ಚುರುಕುಗೊಂಡಿವೆ. ನಿನ್ನಿಂದ ದೂರವಿದ್ದಾಗ ಬಹು ಚಿಕ್ಕ ವಿಷಯಗಳಲ್ಲೂ ಸಹ ನಾನು ಗಾಬರಿಯಾಗುವುದಿದೆ. ಆದರೆ ಮನೆಬಿಟ್ಟು, ದಾರಿತಪ್ಪಿ, ಊರೆಲ್ಲಾ ಅಲೆದು, ಮನೆಯನ್ನು ಗುರುತಿಸಿ, ಹಿಂದೆ ಮನೆಗೆ ಬಂದಾಗ ಆಗುವ ಶಾಂತಿ, ಸುಖ ನೆಮ್ಮದಿಯ ಉತ್ಸಾಹವೂ ಬುದ್ಧಿ ಚುರುಕೂ ನಿನ್ನ ಬಳಿಗೆ ಬಂದಾಗ ಕಂಡು ಬರುತ್ತವೆ."

ಏಗ್ನೆಸ್ಸಳು ಮೌನವಾಗಿಯೇ ಕುಳಿತಿದ್ದಳು. ಅವಳ ಮುಖವೇ ಮಾತಿನಷ್ಟೇ ಸ್ಪಷ್ಟವಾದ ಉತ್ತರವನ್ನು ಕೊಡುತ್ತಿತ್ತು. ನನ್ನನ್ನು ಆಶೀರ್ವದಿಸಿ, ಉತ್ತಮನಾಗಿಸುವ ದೈವಿಕ ಪ್ರಭೆ ಅವಳ ಮುಖದಲ್ಲಿತ್ತು. ಅವಳು ತನ್ನ ಹಸ್ತವನ್ನು ನೀಡಿದಳು. ಅವಳು ಆಡಿದ್ದ ಮಾತುಗಳು, ಆ ಮಾತಿನ ಸ್ವರ, ನೀಡಿದ್ದ ಹಸ್ತ, ಪ್ರಸನ್ನ ಮುಖ ಇವೆಲ್ಲವುಗಳ ಸಮ್ಮಿಶ್ರಣದಿಂದ ಆದ ಭಾವ – ನನ್ನನ್ನು ದೇವಸನ್ನಿಧಿಯಲ್ಲಿ ತೋರಿ ಬರುವಂಥ ಭಾವಪರವಶತೆಗೆ ಮುಟ್ಟಿಸಿತು. ನಾನು ಮೂಕನಂತೆ ಅವಳನ್ನು ನೋಡುತ್ತಾ ಕುಳಿತೆನು.

"ನೀನು ಭಾವಪರವಶನಾಗಿ ಕುಳಿತಂತೆ ಕಾಣುತ್ತದೆ. ಕಾಪರ್ಫೀಲ್ಡ್, ನಿನ್ನ ಕಷ್ಟಗಳು ಏನೆಂದು ತಿಳಿಯಬೇಕೆಂಬ ಮನಸ್ಸು ನನಗಿದೆ – ಆಕ್ಷೇಪವಿಲ್ಲದಿದ್ದರೆ ತಿಳಿಸು" ಅಂದಳು ಏಗ್ನೆಸ್.

"ಆಕ್ಷೇಪವೇ ಅದರಲ್ಲೂ ಏಗ್ನೆಸ್ಸಳಿಗೆ ನನ್ನ ಮನಸ್ಸನ್ನು ಬಿಚ್ಚಿ ತೋರಿಸಲು ಆಕ್ಷೇಪವೇ? ಎಲ್ಲವನ್ನೂ ಹೇಳುವೆನು" ಎಂದು ಉದ್ವೇಗದಿಂದ ನಾನು ಮಾತಾಡತೊಡಗಿದೆನು. ನನ್ನ ಜೀವನದ ಕ್ರಮಗಳಲ್ಲು ಉಂಟಾಗಿದ್ದ ಬದಲಾವಣೆ, ಮಿ. ಸ್ಪೆನ್ಲೋರವರ ಮರಣ, ನಮ್ಮ ಬಡತನ, ಡೋರಾಳನ್ನು ಕುರಿತಾದ ನನ್ನ ದುಃಖ, ಇವೆಲ್ಲವನ್ನೂ ತಿಳಿಸಿ ಅವಳ ಅಭಿಪ್ರಾಯ ಮತ್ತೂ ಬುದ್ಧಿವಾದಗಳನ್ನು ಯಾಚಿಸಿದೆನು. ಡೋರಾಳ ಅತ್ತೆಯಂದಿರ ಜೀವನದ ಸೂಕ್ಷ್ಮಪರಿಚಯ, ಅವರ ಸ್ವಭಾವ, ಇವೆಲ್ಲವನ್ನೂ ಅವಳಿಗೆ ತಿಳಿಸಿದೆನು.

ಏಗ್ನೆಸ್ಸಳು ಸ್ವಲ್ಪ ನಗಾಡುತ್ತಾ – ಇವುಗಳಲ್ಲಿ ಕೆಲವು ಸಂಗತಿಗಳ ಮಟ್ಟಿಗೆ ತನಗಿಂತಲೂ ಡೋರಾಳೇ ಪ್ರೇರಕಳೂ ಮಾರ್ಗದರ್ಶಕಳೂ ಆಗಬೇಕೆಂದನ್ನುತ್ತಾ, ನನಗೆ ಈ ತೆರನಾಗಿ ಬುದ್ಧಿ ಹೇಳಿದಳು –

"ನೋಡು, ಕಾಪರ್ಫೀಲ್ಡ್, ನಿನ್ನ ಕಾರ್ಯಗಳು ಯಶಸ್ವಿಯಾಗುವುದರ ಜತೆಯಲ್ಲೇ ನಿನ್ನ ಘನಸ್ಥಿಕೆಯೂ ಏರಬೇಕು, ಕೊನೆಯ ಪಕ್ಷ ಉಳಿಯಬೇಕು. ನಿನಗೂ ಡೋರಾಳಿಗೂ ನಡೆದಿದ್ದ ಅನುರಾಗದ ಮತ್ತೂ ಮಾತು ಕಥೆಗಳನ್ನು ಕುರಿತು ಮಿ ಸ್ಪೆನ್ಲೋ ಸಹೋದರಿಯವರಿಗೆ ಒಂದು ಪತ್ರವನ್ನು ಬರೆದು ತಿಳಿಸು. ಇತರರ ಮುಖಾಂತರ ಇಂಥ ವಿಷಯದಲ್ಲಿ ಸಂಧಾನ ನಡೆಸುವುದು ಭೂಷಣವಲ್ಲ."

ಆಗ ನಾನು "ನನ್ನ ಘನಸ್ಥಿಕೆಯನ್ನೋ ಯೋಗ್ಯತೆಯನ್ನೋ ಕಾದುಕೊಳ್ಳುತ್ತಿರುವ ನಿನ್ನ ಸ್ನೇಹಪರ ಸಹಾಯಗಳಿಗಾಗಿ ನಾನು ತುಂಬಾ ಋಣಿಯಾಗಿರುವೆನು. ಆದರೆ ಡೋರಾಳು ನನ್ನ ಪತ್ರದ ವರ್ತಮಾನವನ್ನು ತಿಳಿದು ಗಾಬರಿಗೊಂಡು ಅಳಲಾರಂಭಿಸಿದರೆ ಮಾಡುವುದೇನು?" ಎಂದು ಕೇಳಿದೆ.

"ಹಾಗಾಗಲಾರದು. ನಿನ್ನ ಪತ್ರದಲ್ಲೇ ಅಗತ್ಯವುಳ್ಳ ಎಚ್ಚರಿಕೆಗಳನ್ನು ಬರೆದು ತಿಳಿಸು. ಡೋರಾಳ ಮನಸ್ಸು, ಮಾತಾಡುವ ಸಂದರ್ಭ, ಇವನ್ನೆಲ್ಲಾ ನೋಡಿಕೊಂಡು ಅವಳೊಡನೆ ಮಾತಾಡಬೇಕೆಂದೂ ತಿಳಿಸು. ಮತ್ತೂ ಆ ಸಹೋದರಿಯರು ಒಪ್ಪುವುದಾದರೆ, ಯಾವುದಾದರೂ ನಿಯಮ ನಿರ್ಬಂಧಗಳನ್ನೇ ಬೇಕಾದರೆ ನೀನೊಪ್ಪಿಕೊಂಡು, ನೀನು ಅವರ ಮನೆಯಲ್ಲೇ ಡೋರಾಳ ಹತ್ತಿರ ಮಾತಾಡ ಬಯಸುವೆಯಾಗಿ ತಿಳಿಸಿ, ಇದಕ್ಕೆ ಬೇಕಾದ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದೂ ಅಂಥ ಎಲ್ಲದರ ವಿಷಯ ಉತ್ತರ ಬರೆಯುವಾಗ ಡೋರಾಳನ್ನು ವಿಚಾರಿಸಿಕೊಂಡೇ ಉತ್ತರ ಬರೆಯಬೇಕೆಂದೂ ಅವರಿಗೆ ತಿಳಿಸು" ಎಂದು ಏಗ್ನೆಸ್ಸಳು ತುಂಬಾ ಅಲೋಚಿಸಿ, ಸಮಾಧಾನವಾಗಿ ನನಗೆ ಬೋಧಿಸಿದಳು.

ಏಗ್ನೆಸ್ಸಳು ಹೇಳಿದ್ದು ನ್ಯಾಯವೆಂದು ನನಗೂ ತೋರಿತು. ನಾನು ಪತ್ರ ಬರೆಯುವುದಕ್ಕಾಗಿ ಅವಳ ಮೇಜನ್ನು ಏಗ್ನೆಸ್ಸಳು ಬಿಟ್ಟುಕೊಟ್ಟಳು. ಆ ದಿನ ಮಧ್ಯಾಹ್ನದನಂತರ ಬಹು ಹೊತ್ತಿನವರೆಗೆ ನಾನು ಪತ್ರ ಬರೆಯುವ ಕೆಲಸದಲ್ಲೇ ಇದ್ದೆನು. ಆದರೆ ಪತ್ರ ಬರೆಯಲು ಪ್ರಾರಂಭಿಸುವ ಮೊದಲು ಇದೇ ಮನೆಯಲ್ಲಿದ್ದ ಉರೆಯನನ್ನೂ ಅವನ ತಾಯಿಯನ್ನೂ ನೋಡಿ ಮಾತಾಡಿ ಬರುವ ಕಟ್ಟು ಕಟ್ಟಳೆಯನ್ನು ತೀರಿಸಿಬಿಡೋಣವೆಂದು ಉಪ್ಪರಿಗೆಯಿಂದಿಳಿದು ಉರೆಯನ ಆಫೀಸಿಗೆ ಹೋದೆನು.

ಉರೆಯ ಅವನ ಹೊಸ ಸ್ಥಾನಕ್ಕೆ ಸರಿಯಾದ ಉಡುಪನ್ನು ಧರಿಸಿಕೊಂಡು ಅವನ ಆಫೀಸಿನಲ್ಲಿ ಕುಳಿತಿದ್ದ. ಅವನ ಸಮೀಪದಲ್ಲಿ ಮಿ. ವಿಕ್ಫೀಲ್ಡರು ಪ್ರಾಯದಿಂದಲೂ ದುಃಖದಿಂದಲೂ ಜರ್ಝರಿತರಾಗಿ ಕುಳಿತಿದ್ದರು. ಉರೆಯ ಅಧಿಕಾರಕ್ಕೆ ಬಂದನಂತರ ಆ ಆಫೀಸನ್ನು ನಾನು ಪ್ರಥಮವಾಗಿ ನೋಡಿದ್ದು ಆ ದಿನವೇ ಆಗಿತು. ಆ ಆಫೀಸು, ಹೊರಗಿನ ಹೂದೋಟ ಎಲ್ಲವೂ ದೀನ ದರಿದ್ರತೆ ಅಲಕ್ಷ್ಯದ ಬಣ್ಣದಿಂದ ಮುಚ್ಚಿಹೋಗಿದ್ದುವು.

ಮಿ. ವಿಕ್ಫೀಲ್ಡರ ಕ್ಷೇಮ ಸಮಾಚಾರವನ್ನು ವಿಚಾರಿಸಿದೆನು. ಸ್ವಲ್ಪ ಹೊತ್ತು ನಮ್ಮ ಮಾತುಗಳು ಸಾಗುತ್ತಾ ಮಿ. ವಿಕ್ಫೀಲ್ಡರು ನಾನು ಅವರ ಮನೆಯಲ್ಲಿ ಆ ಹೊತ್ತು ನಿಲ್ಲಬೇಕೆಂದು, ಉರೆಯನ ಅನುಮೋದನೆಯನ್ನು ಬಯಸುತ್ತಿರುವಂತೆ ಅವನನ್ನೇ ನೋಡುತ್ತ ನನ್ನನ್ನು ಆಮಂತ್ರಿಸಿದರು. ಉರೆಯ ನಮ್ರವಾಗಿಯೇ ತನ್ನ ಅನುಮೋದನೆಯನ್ನು ಕೊಟ್ಟನು.

ಅನಂತರ ಉರೆಯನ ಮತ್ತು ಅವನ ತಾಯಿಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು, ಏಗ್ನೆಸ್ಸಳ ಕೋಣೆಗೆ ಹೋದೆನು. ಆ ಕೋಣೆಯಲ್ಲೇ ಕುಳಿತು ಮಿಸ್ ಸ್ಪೆನ್ಲೋ ಸಹೋದರಿಯವರಿಗಿದ್ದ ಪತ್ರವನ್ನು ಬರೆದೆನು. ಆ ಪತ್ರವನ್ನು ಏಗ್ನೆಸ್ಸಳಿಗೆ ಓದಿ ಹೇಳಿ,

ಅವಳೊಡನೆ ಮಾತಾಡಬೇಕೆಂದು ಉದ್ದೇಶಿಸಿ, ಓದುವ ಮೊದಲು ಉರೆಯನ ತಾಯಿ ತನ್ನ ಹೊಲಿಗೆ ಸಾಹಿತ್ಯಗಳ ಸಮೇತವಾಗಿ ನಾವು ಕುಳಿತಿದ್ದ ಕೋಣೆಗೆ ಬಂದಳು. ಬಂದವಳೊಡನೆ ನಾನು ಮಾತಾಡಬೇಕೆನ್ನುವಷ್ಟರಲ್ಲೇ –

"ಒಬ್ಬಳೆ ನನ್ನ ಕೋಣೆಯಲ್ಲಿ ಕುಳಿತಿರಲು ಬೇಸರವಾಗಿ ನೀವುಗಳೆಲ್ಲಾ ಇರುವಲ್ಲಿ ಬಂದುಬಿಟ್ಟೆ" ಎಂದು ನಮಗೆ ಸಮಾಧಾನ ಹೇಳಿದಳು. ಆಗ ನಾನು ಪ್ರಶ್ನಿಸಿದೆ –

"ಕ್ಷೇಮವೇ ಮಿಸೆಸ್ ಹೀಪ್?"

"ನಮ್ಮದೇನು ಕ್ಷೇಮ – ಬಡವರದು. ಇದ್ದ ಮಟ್ಟಿಗೆ ಕ್ಷೇಮ" ಅಂದಳು ಮಿಸೆಸ್ ಹೀಪ್.

"ಉರೆಯನ ಹತ್ತಿರ ಈಗ ತಾನೆ ಮಾತಾಡಿ ಬಂದೆ; ಕ್ಷೇಮ ಎಂದು ತಿಳಿಸಿದ. ಸಂತೋಷ, ಮಿಸೆಸ್ ಹೀಪ್" ಅಂದೆ ನಾನು.

"ಎಂಥ ಕ್ಷೇಮ! ಮಿ. ವಿಕ್ಫೀಲ್ಡರ ದಯೆಯಿಂದ ನಾಲ್ಕು ಪೆನ್ಸು ಹಣ ಸಂಪಾದಿಸಿದರೆ ಕ್ಷೇಮವಾಯಿತೆ? ಉರೆಯನು ಇರಬೇಕಾದಷ್ಟು ಕ್ಷೇಮದಲ್ಲಿಲ್ಲ ಮಿ. ಕಾಪರ್ಫೀಲ್ಡ್" ಅಂದಳು.

"ನನಗೆ ಹಾಗೆ ತೋರುವುದಿಲ್ಲ."

"ಮಾತೆಯ ದೃಷ್ಟಿಯಿಂದ ನೀವು ನೋಡಲಾರಿರಿ ತಾನೆ? ಅವನಿಗೆ ಒಂದು ಮನೋರೋಗವಿದೆ – ತಾಯಿಯ ಹೃದಯಕ್ಕೆ ಮಾತ್ರ ತಿಳಿಯುವ ರೋಗ. ಇದರಿಂದ ಅವನು ದಿನೇ ದಿನೇ ಕೃಶನಾಗುತ್ತಿದ್ದಾನೆ" ಎಂದು ಮಾತೆಯ ದೃಷ್ಟಿ ವೈಶಿಷ್ಟ್ಯವನ್ನು ವಿವರಿಸಿ ನುಡಿದಳು.

ಆ ಮಾತೆಯ ದೃಷ್ಟಿ ಮಗನೊಬ್ಬನ ಹೊರತಾಗಿ ಇತರರಿಗೆ ಮಾರಿಯ ದೃಷ್ಟಿಯೇ ಆಗಿತ್ತೆಂದು ನನಗೆ ಗೊತ್ತಿದ್ದಿದ್ದರೂ ಸಭ್ಯಾಚಾರಕ್ಕಾಗಿ –

"ನಿಮ್ಮ ಮಾತು ನಿಜವಿರಬಹುದು. ನಮಗೆಲ್ಲಾ ಗೋಚರಿಸದಿದ್ದರೂ ನಿಮಗೆ ಗೊತ್ತಾಗಬಹುದು. ಅದೆಂಥ ರೋಗ?" ಎಂದು ನಾನು ಕೇಳಿದೆನು.

"ಇದೆ, ರೋಗವೇನೋ ಇದೆ. ಚಿಂತಿಸಿ, ಚಿಂತಿಸಿ ಬಡವಾಗುತ್ತಿದ್ದಾನೆ. ಮಿಸ್ ವಿಕ್ಫೀಲ್ಡಳು ಆ ಸಂಗತಿ ಕಂಡಿಲ್ಲವೇ" ಎಂದನ್ನುತ್ತಾ ಏಗ್ನೆಸ್ಸಳನ್ನು ನೋಡಿದಳು.

"ಇಲ್ಲ, ಅವನು ಸುಖವಾಗಿಯೇ ಇದ್ದಾನೆ" ಎಂದು ಏಗ್ನೆಸ್ಸಳು ಸ್ಪಷ್ಟವಾಗಿ, ಗಂಭೀರವಾಗಿ, ಪುನಃ ಉರೆಯನ ತಾಯಿ ಆ ಮಾತನ್ನೆತ್ತದಂತೆ, ಹೇಳಿದಳು. ಅಷ್ಟು ಅಲ್ಲದೆ, ಸ್ವಲ್ಪ ಜಿಗುಪ್ಸೆಯಿಂದಲೇ ಎಂಬಂತೆ ಏಗ್ನೆಸ್ಸಳು ಅಲ್ಲಿಂದೆದ್ದು ಹೊರಗೆ ಹೋದಳು. ಆ ದಿನವಿಡೀ ಮಿಸೆಸ್ ಹೀಪಳು ಒಂದಲ್ಲದಿದ್ದರೆ ಮತ್ತೊಂದು ನೆಪದಿಂದ ಏಗ್ನೆಸ್ಸಳಿಗೆ ಪಹರೆ ಕುಳಿತಿರುತ್ತಿದ್ದಳು. ಅಷ್ಟೂ ಅಲ್ಲದೆ, ನಾನೂ ಏಗ್ನೆಸ್ಸಳು ತಿರುಗಾಡಲು ಹೋಗಬೇಕೆಂದಿದ್ದುದನ್ನು ಉಪಾಯದಿಂದ ತಡೆ ಹಿಡಿದು ನಾನೊಬ್ಬನೆ ತಿರುಗಾಡಲು ಹೋಗುವಂತೆಯೇ ಮಾಡಿದಳು.

ಹೀಗೆ ನಾನು ರೇಮ್ಸ್ ಗೇಟ್ ರೋಡಿನಲ್ಲಿ ಏಕಾಂಗಿಯಾಗಿ ತಿರುಗಾಡುತ್ತ ಹೋಗಿ, ಒಂದು ಜನಸಂದಣಿ ಕಡಿಮೆಯಿದ್ದ ಚಿಕ್ಕ ರಸ್ತೆಯಲ್ಲೇ ಹೋಗುತ್ತಿದ್ದಾಗ, ಹಿಂದಿನಿಂದ ಯಾರೋ ಹಿಂಬಾಲಿಸಿ ಬರುತ್ತಿದ್ದುದನ್ನು ತಿಳಿದೆನು. ಅದು ಉರೆಯನೇ ಇರಬೇಕೆಂದೇ ಇಂಗಿತದಿಂದ ತಿಳಿದು ಏನೂ ಅರಿಯದವನಂತೆ ನಾನು ಜೋರಾಗಿ ನಡೆದರೂ ಆ ಹಿಂಬಾಲಕನು ನನ್ನನ್ನು ಗುರುತಿಸಿ ಮಾತಾಡಿದನು. ಅವನು ಉರೆಯನೇ ಆಗಿದ್ದನು. ನನ್ನ ಹತ್ತಿರ ಬಂದ ಕೂಡಲೇ ನನಗೆ ಹಸ್ತಲಾಘವವನ್ನಿತ್ತು, ಸಲಿಗೆಯಿಂದ ಮಾತಾಡತೊಡಗಿದನು. ಅವನ ಬೆವರು ಕೈ, ಕೃತಕ ಸ್ನೇಹದ ವರ್ತನೆ, ಅವನ ತಾಯಿ ಆ ದಿನವೇ ಏಗ್ನೆಸ್ಸಳಿಗೆ ಪಹರೆ ಕುಳಿತು ಕೊಟ್ಟಿದ್ದ ಹಿಂಸೆ – ಇವೆಲ್ಲವನ್ನೂ ಗ್ರಹಿಸಿ ನನಗೆ ಉರೆಯನ ಮೇಲೆ ತುಂಬಾ ಕೋಪ ಬಂದಿತು. ಇನ್ನಷ್ಟು ಸಲಿಗೆಗೆ ಎಡೆ ಸಿಕ್ಕದಂತೆ, ಸ್ವಲ್ಪ ಕಠಿಣವಾಗಿಯೇ ನಾನು ಪ್ರಶ್ನಿಸಿದೆನು –

"ನನ್ನ ಹತ್ತಿರ ನಿನಗೇನಾಗಬೇಕು?"

"ನೀನು ಒಬ್ಬನೇ ಹೋಗುತ್ತಿದ್ದುದನ್ನು ನೋಡಿ ಬಂದೆನು – ಹಳೆ ಸ್ನೇಹಿತನಲ್ಲವೇ?"

"ಅದೆಲ್ಲಾ ಮತ್ತೆ. ದಿನವಿಡೀ ಬೇಡದ ಜನರ ಜತೆಯಲ್ಲಿ ಸಿಕ್ಕಿ ಬೇಸತ್ತು, ಈಗಲಾದರೂ ಒಬ್ಬಂಟಿಗನಾಗಿ ತಿರುಗಾಡಬೇಕೆಂದು ಬಂದಿರುತ್ತೇನೆ. ಆದ್ದರಿಂದ....." ಎಂದು ನಾನು ಮಾತು ಮುಂದರಿಸುವುದರ ಮೊದಲೇ ಉರೆಯನು –

"ಯಾರ ಜತೆ – ನನ್ನ ತಾಯಿ ಮತ್ತು ಏಗ್ನೆಸ್ಸಳ ಜತೆ ತಾನೆ?"

"ಹೌದು, ನಿನ್ನ ತಾಯಿಯ ಜತೆಯಲ್ಲಿ ಕುಳಿತೂ ಮಾತು ಕೇಳಿಯೂ ಸಾಕಾಗಿದೆ" ಅಂದೆನು ನಾನು.

"ಹಾಗನ್ನಬಹುದೇ ಕಾಪರ್ಫೀಲ್ಡ್ – ಅಲ್ಲ, ಮಿ. ಕಾಪರ್ಫೀಲ್ಡ್? ತಾಯಿಯ ಮಾತು ಬಡವರ ಮಾತು, ನಿಮ್ಮಂಥವರಿಗೆ ರುಚಿಸದು. ಆದರೂ ಬಡವರೂ ಬದುಕಬೇಡವೇ? ಬದುಕುವ ಪ್ರಯತ್ನಕ್ಕಾಗಿ ತಾಯಿಯು ಎರಡು ಮಾತು ಮಾತಾಡಿರಬೇಕು. ಅಷ್ಟೆ."

"ಹಾಗಂದರೆ ಏನು ಹೇಳಿದ ಹಾಗಾಯಿತು, ನನಗೆ ಅರ್ಥವಾಗುವುದಿಲ್ಲ ಉರೆಯ."

"ತಿಳಿಸಬೇಕೇ, ಮಿ.ಕಾಪರ್ಫೀಲ್ಡ್? ಕೇಳಿ, ನಾವು ಸದ್ಯ ದೀನರು, ಬಡವರು. ಆದರೆ, ಹೃದಯಕ್ಕೆ ಈ ಭೇದಭಾವಗಳಿಲ್ಲವಷ್ಟೆ. ನಾನು ಏಗ್ನೆಸ್ಸಳನ್ನು ಪ್ರೀತಿಸುತ್ತಿದ್ದೇನೆ. ನಾನು ಬಡವನಾದರೂ ಪ್ರೀತಿಯೆಂಬುದು ನನ್ನ ಹೃದಯದಲ್ಲು ಇದೆ. ನನ್ನ ಎದುರಾಗಿ ನೀನು ಏಗ್ನೆಸ್ಸಳ ಹತ್ತಿರ ಸ್ನೇಹ ಸಲಿಗೆಯಿಂದ ಮಾತಾಡುತ್ತಿದ್ದರೆ ನನಗೆ ಏಗ್ನೆಸ್ಸಳು ಲಭಿಸಲು ಸಾಧ್ಯವಿದೆಯೇ – ಗ್ರಹಿಸಿ ನೋಡು. ಅದಕ್ಕಾಗಿ, ಬಡವಿ, ನನ್ನ ತಾಯಿಯು ಅವಳಿಗೆ ತಿಳಿಯುವ ಕ್ರಮದಲ್ಲಿ ಪಹರೆ ಕುಳಿತಿದ್ದಳು" ಎಂದು ಹಾವು ಬಳುಕಿದಂತೆ ಬಳುಕುತ್ತಾ ಹೆಣಮುಖದ ಉರೆಯ ಹೇಳಿದನು.

ಇಷ್ಟರಲ್ಲೇ ನನ್ನ ಕೋಪದ ಸ್ಥಾಯಿಯು ಏರತೊಡಗಿತ್ತು. ಆದರೂ ಕೋಪವನ್ನು ತಡೆದುಕೊಂಡು ಕೇಳಿದೆನು –

"ಹಾಗಾದರೆ ನಿಮ್ಮ ಪಹರೆ ಅಂದ ಪಕ್ಷಕ್ಕೆ ನಿರ್ಬಂಧವೇ ತಾನೆ? – ಏಗ್ನೆಸ್ಸಳ ಸ್ವಂತ ಮನೆಯಲ್ಲೇ ಅವಳ ಮೇಲೆ ನಿರ್ಬಂಧವೇನು?"
"ನಮ್ಮಂಥ ಬಡವರು ಹೇಗೆ ತಾನೆ ನಿರ್ಬಂಧ ಹಾಕಬಲ್ಲೆವು? ನಿಮ್ಮಂಥವರು ಈ ರೀತಿ ಆರೋಪಣೆ ಮಾಡಬಾರದು, ಮಿ. ಕಾಪರ್ಫೀಲ್ಡ್."
"ಮಾತಿನಲ್ಲಿ ಬಡತನ ದೀನತನಗಳನ್ನು ನುಡಿಯುತ್ತಾ ಕಾರ್ಯಗಳಲ್ಲಿ ಮತ್ತೊಂದು ವಿಧವಾಗಿ, ಕ್ರೂರವಾಗಿ ವರ್ತಿಸುವುದನ್ನು ನಾನು ಸಹಿಸೆನು. ಈ ಸಂಬಂಧವಾಗಿ ಕೆಲವು ಗುಟ್ಟುಗಳನ್ನು ನಿನಗೆ ಹೇಳಿ ನಿನ್ನನ್ನು ಸರಿ ದಾರಿಗೆ ತರಬಹುದಾದರೂ ಆ ಕರ್ತವ್ಯ ನನ್ನದಲ್ಲ. ಅಥವಾ ನಾನು ಪ್ರಯತ್ನಿಸಿದರೂ ಸಾರ್ಥಕವಾಗಲಾರದೆಂದು ನನ್ನ ನಂಬಿಕೆ. ನಿನಗೆ ಬುದ್ಧಿ ಹೇಳುವುದಕ್ಕಿಂತ ಆ ಜೇಕ್ ಕೆಚ್ಚನಿಗೆ ಹೇಳುವುದು ಉತ್ತಮ" ಎಂದಂದೆನು ನಾನು.
"ಯಾರಿಗೆ ಯಾರಿಗೆ?" ಎಂದು ತನ್ನ ಕತ್ತನ್ನು ಉದ್ದ ಮಾಡಿಕೊಂಡು ಉರೆಯನು ಕೇಳಿದನು.
"ಜೇಕ್ ಕೆಚ್' ಅಂದರೆ ಕತ್ತಿಗೆ ನೇಣು ಹಾಕಿ ತೂಗಹಾಕುತ್ತಾನಲ್ಲ, ಜೈಲಿನಲ್ಲಿ, ಅವನು" ಅಂದೆ ನಾನು. ಜೇಕ್ ಕೆಚ್ಚನ ನೆನಪು ತಾನಾಗಿಯೇ ನನ್ನಲ್ಲಿ ಸ್ಫುರಿಸಿದ್ದು, ನನ್ನ ಎದುರೇ ಇದ್ದ ಉರೆಯನ ಹೆಣಮುಖವೇ ಆ ಪಾಶಿಗಾರನ ಹೆಸರನ್ನು ನನ್ನ ಆಲೋಚನೆಗೆ ತಂದಿರಬೇಕು.

"ಆ ತಮಾಷೆಯಲ್ಲಾ ಹಾಗಿರಲಿ ಮಿ. ಕಾಪರ್ಫೀಲ್ಡ್. ನನಗೆ ನೀನು ತಿಳಿಸಲು ಬಯಸಿರುವ ಗುಟ್ಟೇನು, ದಯಮಾಡಿ ತಿಳಿಸಿಬಿಡು" ಎಂದು ಉರೆಯ ಅಂಗಲಾಚಿ ಬೇಡಿಕೊಂಡನು.
"ನಾನು ಮಿ. ವಿಕ್ಫೀಲ್ಡಳನ್ನು ಸಹೋದರಿಯಂತೆ ಮಾತ್ರ ಕಾಣುತ್ತಾ ಮಾತಾಡುತ್ತಾ ಇದ್ದೇನೆ. ನನ್ನ ಪ್ರೇಮವು ಇನ್ನೊಬ್ಬ ಚಿಕ್ಕ ಪ್ರಾಯದ ಕುಲೀನ ಬಾಲಿಕೆಯ ಮೇಲೆ ನೆಲೆಸಿದೆ, ಉರೆಯಾ. ಮಿಸ್ ವಿಕ್ಫೀಲ್ಡಳನ್ನು ಮಾತ್ರ ದೇವರು ರಕ್ಷಿಸಲಿ" ಎಂದು ನಾನು ಉತ್ತರವಿತ್ತೆನು.

"ರಕ್ಷಿಸಲಪ್ಪಾ ರಕ್ಷಿಸಲಿ! ಅದು ನಿಜವೇ? ನೀನು ಇನ್ನೊಬ್ಬಳನ್ನು ಪ್ರೀತಿಸುತ್ತಿರುವುದು ನಿಜವಾದರೆ ನಿನಗೆ ಅನೇಕ ವಂದನೆಗಳು" ಎಂದನ್ನುತ್ತಾ ಮೈ ಕೈ ಡೊಂಕಿಸಿಕೊಂಡು, ಆಕಾಶದಲ್ಲಿ ಎದ್ದು ಬಂದಿದ್ದ ಚಂದ್ರನ ಬೆಳಕಿನಲ್ಲಿ ತನ್ನ ಹೆಣ ಮುಖವನ್ನು ತಿರಿಚುತ್ತ ನನ್ನನ್ನು ಪುನಃಪುನಃ ವಂದಿಸಿದನು.

ಅಂಥ ಗೌರವಾನ್ವಿತೆ, ದೇವಕನ್ಯೆಯಂತೇ ರೂಪ ಗುಣಸಂಪನ್ನೆಯಾಗಿರುವ ಏಗ್ನೆಸ್ಸಳ ಮೇಲೆ ನೀಚ, ಕ್ರೂರಿ, ರಾಕ್ಷಸಾಧಮ ಉರೆಯ ತನ್ನ ಅನುರಾಗದ ದೃಷ್ಟಿಯನ್ನಿಟ್ಟದ್ದು ತಿಳಿದು ನನಗೆ ಆದ ವೇದನೆಯೂ ಕೋಪವೂ ಅಷ್ಟಿಷ್ಟಲ್ಲ. ಆದರೂ ಕೋಪವನ್ನು ತಡೆ ಹಿಡಿದು –
"ಆದರೆ ಉರೆಯಾ, ಸ್ಥಾನಮಾನಗಳ ಯೋಗ್ಯತೆಯಲ್ಲಿ ನಿನಗೂ ಏಗ್ನೆಸ್ಸಳಿಗೂ ಇರುವ ಅಂತರ ಈಗ ನಿನಗೂ ಆ ಚಂದ್ರನಿಗೂ ಇರುವಷ್ಟೇ ಇದೆಯೆಂಬುದನ್ನು ನೀನು ಮರೆತಿರುವೆಯೇನು? ಏಗ್ನೆಸ್ಸಳು ನಿನಗೆ ಎಂದೂ ಲಭಿಸಲಾರಳು – ಇದನ್ನು ತಿಳಿದಿರು" ಎಂದು ಮಾತ್ರ ಹೇಳಿದೆನು.

ಇದಕ್ಕೆ ಉರೆಯ ಸುದೀರ್ಘವಾಗಿ ನನಗೆ ಉತ್ತರವಿತ್ತನು. ಮಿ. ವಿಕ್ಫೀಲ್ಡರ ಮತ್ತು ಏಗ್ನೆಸ್ಸಳ ಹಿತವನ್ನು ಗ್ರಹಿಸಿ, ಅವನ ಉತ್ತರವನ್ನು ಕೇಳಿದೆ. ಉರೆಯ ಹೇಳತೊಡಗಿದನು.
"ನಿಮ್ಮ ಅಭಿಪ್ರಾಯಗಳನ್ನೆಲ್ಲ ನಾ ಬಲ್ಲೆ, ಮಿ. ಕಾಪರ್ಫೀಲ್ಡ್. ನಿಮ್ಮ ಉನ್ನತಿ, ನಮ್ಮ ಹೀನತೆಯನ್ನು ನಾನು ಬಲ್ಲೆ. ಆದರೆ ನಮಗೂ ಸ್ಥಾನಮಾನಗಳು ಬೇಕೆಂದು ಬಯಸುವುದು ಸ್ವಾಭಾವಿಕವಲ್ಲವೇ? ಅಂಥ ಸ್ಥಾನಮಾನಗಳು ದೊರಕಬೇಕಾದರೆ ಉನ್ನತಿಯವರ ಸಂಬಂಧ ಸಂಪರ್ಕಗಳಿಂದ ಮಾತ್ರ ಸಾಧ್ಯವಷ್ಟೆ. ನನ್ನ ಕುಟುಂಬದ ಚರಿತ್ರೆಯನ್ನು ನೀನು ತಿಳಿದಿರಲಾರೆ – ಸ್ವಲ್ಪ ಕೇಳು. ನನ್ನ ತಂದೆಯೂ ತಾಯಿಯೂ ಧರ್ಮಛತ್ರದ ಅನ್ನ ಉಂಡು, ಅನಾಥ ಬಾಲಕರ ಶಾಲೆಗೆ ಹೋಗಿ, ಕೆಳತರಗತಿಯ ವಿದ್ಯೆ ಮಾತ್ರ ಕಲಿತವರು. ನಾನೂ ಸಹ ಅನಾಥಾಲಯದಲ್ಲೇ ಬೆಳೆದು ಶಾಲೆಗೆ ಹೋದವನು. ನಮ್ರತೆ, ವಿನೀತತೆ, ಹೀನತಾ ಭಾವಗಳನ್ನು ಶಿಸ್ತು ನಿಯಮ ಪ್ರಕಾರ ನಮಗೆಲ್ಲರಿಗೂ ಎಲ್ಲ ಕಡೆಗಳಲ್ಲೂ ಹಗಲಿರುಳು ಕಲಿಸುತ್ತಿದ್ದರು. ಉದ್ಯೋಗಸ್ಥನೊಬ್ಬನನ್ನು ಕಂಡರೆ ಟೊಪ್ಪಿ ತೆಗೆದು, ತಲೆ ತಗ್ಗಿಸಿ ನಿಲ್ಲಬೇಕು. ಅವನಿಗಿಂತ ಮೇಲಿನವನೊಬ್ಬನನ್ನು ಕಂಡರೆ ಚರಂಡಿಯಲ್ಲಿ ನಿಂತು ಅವನಿಗಾಗಿ ನಾವು ರಸ್ತೆಯನ್ನು ಪೂರ್ಣ ಬಿಟ್ಟು ಕೊಡಬೇಕು. ನಮ್ಮ ಅನಾಥಾಲಯಕ್ಕೆ ಬರುವ ಯಾರನ್ನು ಕಂಡರೂ 'ಅವರೆಲ್ಲರಿಗಿಂತಲೂ ನಾನು ಹೀನನು, ದೀನನು, ದರಿದ್ರನು. ಅವರೆಲ್ಲರೂ ನನಗಿಂತ ಸರ್ವವಿಧದಲ್ಲೂ ಉತ್ತಮರು' ಎಂಬ ಭಾವನೆಯನ್ನು ತಾಳುವಂತೆ ನಮಗೆ ಸತತವೂ ಅಭ್ಯಾಸ ಮಾಡಿಸಿರುವರು. ಆ ಭಾವನೆಯು ನಮ್ಮ ಅಸ್ತಿ, ಮಾಂಸ, ರಕ್ತದಲ್ಲಿ ಬೆರೆತು ಹೋಗಿದೆ – ಬೇಕೆಂದೇ ಬೆರೆಸಿರುವರು. ನಮ್ಮ ಅನಾಥಾಲಯಕ್ಕೆ ಬಂದವರ ಎದುರು ನಿಂತರೆ, ನಗಾಡಿದರೆ, ನಾವು ಸುಖವಾಗಿದ್ದೇವೆಂದು ಕಾಣಿಸಿಕೊಂಡರೆ, ಅವರ ಮನ ನೋಯುವುದೆಂದು ನಮ್ಮನ್ನು ಅಧಿಕಾರಿಗಳು ಹೆದರಿಸಿ (ನಾವು ಹೆದರಿ) ಬೆಳೆದವರು. ಈ ಕಾರಣಗಳಿಂದ, ಅಂಥ ಮರೆಯಲಾರದ, ಮಾಸಲಾರದ ಭಾವನೆಗಳನ್ನು ಬದಿಗಿಟ್ಟು, ಸ್ವಾಭಾವಿಕವಾದ ಜೀವನದ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ನಮಗೆ ನಿಮಗಿಂತ ಹೆಚ್ಚು ಕಷ್ಟ. ವಿನೀತತೆಯ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದುದಕ್ಕಾಗಿಯೇ ನನ್ನ ತಂದೆಗೆ ಶ್ಮಶಾನದ ಪಾರುಪತ್ಯ ದೊರಕಿತ್ತು. ತಂದೆಯವರ ಆದರ್ಶ ವಾಕ್ಯಗಳೇ 'ತಾಳ್ಮೆಯೂ ವಿನೀತತೆಯೂ ಎಂದೂ ಸೋಲವು' ಎಂಬವು. ಮಿ.ಕಾಪರ್ಫೀಲ್ಡ್, ಈ ಎಲ್ಲಾ ಸಂಗತಿಯನ್ನೂ ದಯಮಾಡಿ ಗ್ರಹಿಸಿ, ನಾನು ತಿಂದ ಆಹಾರ, ಕುಡಿದ ನೀರು ಬಡವರದು, ದೀನ ದರಿದ್ರರಿಗೆ ತಕ್ಕದಾದದ್ದು. ಕಲಿತ ವಿದ್ಯೆ, ನನ್ನ ಸ್ಥಾನಕ್ಕೆ ತಕ್ಕಷ್ಟು ಮಾತ್ರ. ಲೇಟಿನ್ ಭಾಷೆಯನ್ನು ನೀನು ನನಗೆ ಕಲಿಸುವುದಾಗಿ ಹೇಳಿದ್ದಕ್ಕೆ ಆ ಹೊತ್ತು ನಾನು ಆ ವಿದ್ಯೆ ಬೇಡವೆಂದದ್ದೂ ಈ ಕಾರಣದಿಂದಲೇ. ನನ್ನ ತಂದೆಯವರು ಸದಾ ಎಚ್ಚರಿಸುತ್ತಿದ್ದರು –

'ನಿನಗಿಂತ ಮೇಲಿನವರಿಗೆ ನಿನ್ನ ಉನ್ನತಿಯು ಅಸಹ್ಯವಾಗುವುದು. ಮತ್ತು ಅವರ ಅಸಹ್ಯವೇ ನಿನ್ನನ್ನು ಪಾತಾಳಕ್ಕೂ ಅಟ್ಟಿಬಿಡುವುದು!' ಎಂದು. ನಾನು ಆ ಕಾರಣದಿಂದ ಲೇಟಿನ್ ಭಾಷೆಯನ್ನು ಕಲಿಯಲಿಲ್ಲ." ಉರೆಯ ಈ ಮಾತುಗಳನ್ನಾಡುವಾಗ ಅವನ ದೀನ ಹೀನತೆಯ ಭಾವದೊಂದಿಗೆ ದ್ವೇಷ ಮತು ಕ್ರೋಧವೂ ಬೆರೆತಿತ್ತು. ಇಷ್ಟೂ ಅಲ್ಲದೆ ಅವನ ಮಾತಿನಲ್ಲಿ ಸೇಡು ತೀರಿಸಿಕೊಳ್ಳುವ ಕಾಂಕ್ಷೆಯೂ ಅಹಂಕಾರ, ಧೈರ್ಯ, ವೈರ ಎಲ್ಲವೂ ಬೆರೆತಿದ್ದುವು. ಅವನು ಪುನಃ ಹೇಳತೊಡಗಿದನು –
"ಮಿ. ಕಾಪರ್ಫೀಲ್ಡ್, ಈಗ ನೀನು ಒಂದು ವಿಷಯವನ್ನು ಮರೆತಂತಿದೆ. ಅಥವಾ ಅದನ್ನೇ ನಾನು ಸ್ಪಷ್ಟವಾಗಿ ನಿನಗೆ ತಿಳಿಸಲಿಚ್ಛಿಸುತ್ತೇನೆ. ಅದೇನೆಂದರೆ, ನನಗೆ ಈ ಹೊತ್ತು ಶಕ್ತಿ ಬಂದಿದೆ. ಅಧಿಕಾರ ದೊರಕಿದೆ. ನನ್ನ ವಿರೋಧಿಗಳಿಗೆ ತಕ್ಕ ಶಾಸ್ತಿ ಮಾಡುವ ಶಕ್ತಿ ನನ್ನಲ್ಲಿದೆ."

ಈ ಮಾತುಗಳಿಂದ ಉರೆಯನ ನಿಜ ಸ್ವರೂಪ ದರ್ಶನವು ನನಗೆ ಆಯಿತು. ಮಿ. ವಿಕ್ಫೀಲ್ಡರ ಮೇಲೆ ಅವನಿಗೆ ಮಹತ್ತರವಾದ ಅಧಿಕಾರವಿದೆಯೆಂದು ನಾವು ಊಹಿಸಬೇಕೆಂದೇ ಅವನ ಮಾತಿನಲ್ಲಿ ಈ ವಿಧದ ಎದೆ ನಮಗೆ ಕೊಡುತ್ತಿದ್ದನು. ಅಷ್ಟೂ ಅಲ್ಲದೆ ಏಗ್ನೆಸ್ಸಳ ಹಿತಚಿಂತಕರನ್ನೂ ಸಹ ವಕ್ರ ರೀತಿಯಿಂದ ಹೆದರಿಸಿ, ಏಗ್ನೆಸ್ಸಳ ಮತ್ತು ಮಿ. ವಿಕ್ಫೀಲ್ಡರ ಸಹಾಯಕ್ಕೆ ಬರದಂತೆ ಮಾಡುವ ಉದ್ದೇಶವೂ ಅವನಲ್ಲಿದ್ದಿರಬೇಕೆಂಬುದು ನಿಸ್ಸಂಶಯ. ಅವನ ಮಾತುಗಳಿಗೆ ತಕ್ಕದಾದ ಉತ್ತರವನ್ನು ನಾನು ಕೊಡಲು ಇಷ್ಟಪಡುತ್ತಿದ್ದರೂ ಮಿ. ವಿಕ್ಫೀಲ್ಡ್ ಮತ್ತು ಏಗ್ನೆಸ್ಸರಿಬ್ಬರಿಗಾಗಿ ನಾನು ಬಹು ಸಮಾಧಾನದ ನಾಲ್ಕು ಮಾತುಗಳನ್ನು ಮಾತ್ರ ಆಡಿ, ಅವನ ಜತೆಯಿಂದ ತಪ್ಪಿಸಿಕೊಂಡು, ನನ್ನ ತಿರುಗಾಟ ಮುಗಿಸಿ ಮಿ. ವಿಕ್ಫೀಲ್ಡರ ಮನೆಗೆ ಬಂದೆನು.

ಆ ದಿನ ನಾನು ಅಲ್ಲೇ ಇರಬೇಕೆಂದು ಮಿ. ವಿಕ್ಫೀಲ್ಡರು ಇಷ್ಟಪಟ್ಟ ಪ್ರಕಾರ, ಅಲ್ಲೇ ಇದ್ದೆ. ರಾತ್ರಿ ಊಟವಾದನಂತರ ಉರೆಯ, ಮಿ. ವಿಕ್ಫೀಲ್ಡ್ ಮತ್ತೂ ನಾನು ಮಾತ್ರ ಬೈಠಖಾನೆಯಲ್ಲಿ ಕುಳಿತು ಮಾತನಾಡುತ್ತಿದ್ದೆವು. ಮಿ. ವಿಕ್ಫೀಲ್ಡರು ಸ್ವಲ್ಪ ಸ್ವಲ್ಪವಾಗಿ ವೈನ್ ಕುಡಿಯುತ್ತಿದ್ದರು. ಉರೆಯನೂ ಸಹ ಸ್ವಲ್ಪ ಸ್ವಲ್ಪ ಕುಡಿಯುತ್ತಿದ್ದನು. ಮಾತೂ ವೈನೂ ಮುಂದುವರಿದ ಹಾಗೆ, ಉರೆಯ – ಸಂಪ್ರದಾಯಕ್ಕನುಸಾರವಾಗಿ ಮಾತ್ರವಲ್ಲದೆ, ಇನ್ನೊಂದು ಉದ್ದೇಶವಿರುವವನಂತೆ ತೋರುತ್ತಾ ತನ್ನ ಗ್ಲಾಸಿಗೆ ಸ್ವಲ್ಪ ವೈನ್ ಹಾಕಿಕೊಂಡು, ನನ್ನನ್ನು ನೋಡುತ್ತಾ –
"ನನ್ನ ಪ್ರಿಯ ಮಿತ್ರರಾದ ಮಿ. ವಿಕ್ಫೀಲ್ಡರೇ ಮಾಸ್ಟರ್ ಕಾಪರ್ಫೀಲ್ಡರ ಆರೋಗ್ಯವರ್ಧನೆಗಾಗಿ ವೈನ್ ಕುಡಿಯೋಣ" ಎಂದು ಹೇಳಿ ಗ್ಲಾಸಿನಲ್ಲಿದ್ದ ವೈನನ್ನು ಕುಡಿದನು. ಅನಂತರ ಇದೇ ಕ್ರಮದಲ್ಲಿ ನನ್ನತ್ತೆ, ಮತ್ತಿತರ ಕೆಲವರ ಹೆಸರನ್ನೆತ್ತಿ ವೈನನ್ನು ಕುಡಿದನು. ಪುನಃ ಗ್ಲಾಸಿಗೆ ವೈನ್ ಹಾಕಿಕೊಂಡು –
"ಮಿ. ವಿಕ್ಫೀಲ್ಡ್, ಈ ತೈಲ ಚಿತ್ರದ ಗೃಹಿಣಿಯು ಮಹಾ ವ್ಯಕ್ತಿಯು. ಅವಳ ಸ್ಮರಣೆಗಾಗಿ ಇದನ್ನು ಸೇವಿಸುವೆನು" ಎಂದು ಹೇಳಿ ಅದನ್ನು ಕುಡಿದನು.

ಮಿ. ವಿಕ್ಫೀಲ್ಡರು ದುಃಖದಿಂದ ತನ್ನ ಪತ್ನಿಯ ತೈಲಚಿತ್ರ ನೋಡುತ್ತಾ ಉರೆಯನ ಬಹು ಸಲಿಗೆಯ ಮಾತುಗಳನ್ನು ಸಹಿಸಲಾರದೆ, ಮುಖ ತಗ್ಗಿಸಿ, ತಲೆಗೆ ಕೈ ಇಟ್ಟುಕೊಂಡು ಕುಳಿತರು. ಉರೆಯ ವೈನನ್ನು ಪುನಃ ಗ್ಲಾಸಿಗೆ ಹಾಕಿ ಹಿಡಿದುಕೊಂಡು –
"ಏಗ್ನೆಸ್ – ಮಿ. ವಿಕ್ಫೀಲ್ಡರ ಮಗಳು, ಸ್ತ್ರೀಯರಲ್ಲಿ ಪರಮ ಪವಿತ್ರಳು, ಅಂಥವಳ ಪಿತನಾಗಿರುವುದೇ ಭಾಗ್ಯ, ಆದರೆ, ಅಂಥವಳ ಪತಿಯಾಗಲು ಹಕ್ಕು. ..." ಎಂಬಷ್ಟು ಉರೆಯ ಉಚ್ಚರಿಸುವಾಗಲೇ ಮಿ. ವಿಕ್ಫೀಲ್ಡರು ಮಹಾ ಆರ್ತತೆಯ ಸ್ವರದಿಂದ "ಅಯ್ಯೋ" ಎಂದು ಕೂಗಿಯೇ ಬಿಟ್ಟರು. ಆದರೆ ಉರೆಯನು ಸ್ವಲ್ಪವೂ ತನ್ನ ಠೀವಿಯನ್ನು ಬದಲಿಸದೆ –
"ಗಂಡಸಾದ ನನಗೆ ಇತರರಿಗಿರುವಷ್ಟೇ – ಏಕೆ, ಅದಕ್ಕಿಂತಲೂ ಹೆಚ್ಚು – ಇದ್ದೇ ಇದೆ" ಎಂದು ಗದರಿಸಿದನು.

ಮಿ. ವಿಕ್ಫೀಲ್ಡರ ಕೋಪವೂ ದುಃಖವೂ ಹೆಚ್ಚಾಗತೊಡಗಿತು. ಅವರ ಈ ಸ್ಥಿತಿ ಅಪಾಯಕರವೆಂದು ಗ್ರಹಿಸಿ, ನಾನು ಅವರಿಗೆ ಸಮಾಧಾನ ಹೇಳತೊಡಗಿದೆನು. ನನ್ನ ಮಾತನ್ನು ಕೇಳುತ್ತಾ –
"ನೋಡು, ಅವನನ್ನು ನೋಡು – ಆ ಕ್ರೂರಿ, ಹಿಂಸಕಾರಿ, ಉರೆಯನನ್ನು ನೋಡು. ಯಾರಿಗಾಗಿ ನಾನು ನನ್ನ ಜೀವ ಮತ್ತು ಮರ್ಯಾದೆಗಳನ್ನು ಕಾಪಾಡಿಕೊಂಡು ಬದುಕಿದ್ದೇನೋ ಆ ಮುದ್ದು ಮಗಳ ಮೇಲೆ ಆ ಪಾಪಿಯ ದೃಷ್ಟಿ ಬಿದ್ದದ್ದು ನೋಡು" ಎಂದು ಗದ್ಗದ ಕಂಠದಿಂದ ವಿಕ್ಫೀಲ್ಡರು ಅಂದರು.

"ನಿಮ್ಮ ಮನೆ, ನಿಮ್ಮ ಹೆಸರು, ನಿಮ್ಮ ಮರ್ಯಾದೆ, ನಿಮ್ಮ ಮನಶ್ಶಾಂತಿ ಎಲ್ಲವನ್ನೂ ಕಾಪಾಡಿಕೊಂಡು ಬಂದಿರುವವನು ನಾನು. ಅಂಥ ನಿಮ್ಮ ಹಿತಚಿಂತಕನ ಮಾತೇ ನಿಮಗೆ ದುಃಖಕರವಾದರೆ, ಸದ್ಯ ಆ ವಿಷಯವೇ ಬೇಡ, ನಾನು ಪ್ರಸ್ತಾಪಿಸುವುದಿಲ್ಲ. ಬಡವನಾದ ನಾನು ಮುಂದರಿದ ಹಾಗೆಯೇ ಹಿಂದೆ ಸರಿಯಲೂ ಸಿದ್ಧನಾಗಿರುವೆನು" ಎಂದು ಕುತಂತ್ರಿ ಉರೆಯ ನಯ ವಿನಯದಿಂದ ಹೇಳಿ ಶಾಂತನಾಗಿ ಕುಳಿತುಬಿಟ್ಟನು.

"ನಾನು ನಿನ್ನ ಮುಷ್ಠಿಯೊಳಗಿದ್ದೇನೆಂದು ನೀನು ಈ ರೀತಿ ಮಾಡುತ್ತಿರುವೆ. ನಿನ್ನಂಥವನ ಅಡಿಯಾಳಾಗಿ ಹೋದ ನನಗೆ ಇನ್ನು ಇತರರ ಅಧಿಕಾರಕ್ಕೊಳಪಡುತ್ತಾ ಮರ್ಯಾದೆ ಹೋಗುವುದೆಂದು ಇದೆಯೇ?" ಎಂದು ದುಃಖದಿಂದ ಹೇಳಿಕೊಂಡರು ಮಿ. ವಿಕ್ಫೀಲ್ಡ್.

ಮಿ. ವಿಕ್ಫೀಲ್ಡ್ ಮಾತನ್ನು ಮುಂದುವರಿಸಿ ಏನೋ ಒಂದು ವಿಧದ ಸ್ಫೋಟನವನ್ನೇ ತಂದು ಬಿಡುವವರಂತೆ ತೋರುತ್ತಿದ್ದರು. ಬಂದದ್ದೆಲ್ಲ ಬರಲಿ, ಉರೆಯನ ಬೆದರಿಕೆಗೆ ಬಗ್ಗ ಬಾರದೆಂಬಂತೆ ಅವರಿರುವಂತೆ ತೋರಿದರು. ಆಗ ಉರೆಯ ಹೇಳಿದನು –

"ಮಿ. ಕಾಪರ್ಫೀಲ್ಡ್, ನೀನು ಅವರ ಹಿತಚಿಂತಕನಾಗಿರುವವನಾದರೆ, ಮಿ. ವಿಕ್ಫೀಲ್ಡರು ಬಾಯಿ ಮುಚ್ಚಿಕೊಳ್ಳುವಂತೆ ಮಾಡು. ಇಲ್ಲದಿದ್ದರೆ ಅವರ ಸರ್ವನಾಶ ನಿಶ್ಚಯ. ನಿದ್ರಿಸಿರುವ ನಾಯನ್ನು ಎಬ್ಬಿಸಿ ಕಚ್ಚಿಸಿಕೊಳ್ಳಬಾರದೆಂಬ ಅಭಿಪ್ರಾಯವನ್ನು ಅವರಿಗೆ ತಿಳಿಸು."

"ಮಿ. ಟ್ರಾಟೂಡ್, ನಾನು ಮೈಮರೆತು ಕಷ್ಟಕ್ಕೆ ಈಡಾಗಿದ್ದೇನೆ. ಮೈ ಮರೆತಂದಿನಿಂದ ನಾನು ಹಣ, ಮಾನ ಮರ್ಯಾದೆಗಳಲ್ಲೆಲ್ಲ ಅಧೋ ಮುಖವಾಗಿ ಇಳಿಯುತ್ತಿದ್ದೇನೆ. ನಾನೇಕೆ, ಹೇಗೆ, ಹೀಗಾಗಿರುವೆನೆಂದು ಇತರರಿಗೆ ತಿಳಿಸಲು ಅಂಜುತ್ತೇನೆ. ನನಗಿದ್ದ ಒಂದು ದುಃಖದ ಶಮನಕ್ಕಾಗಿ ಮೈಮರೆತು ಸಂಗ್ರಹಿಸಿಕೊಂಡಿರುವ ಇನ್ನೊಂದು ದುಃಖವನ್ನು ನಾನು ಅನುಭವಿಸಿಯೇ ತೀರಬೇಕು. ನಾನು ಇದರಿಂದ ಪಾರಾಗುವಂತಿಲ್ಲ" ಎಂದನ್ನುತ್ತಾ ಮಿ. ವಿಕ್ಫೀಲ್ಡರು ಅತ್ತರು.

ಇಷ್ಟೆಲ್ಲಾ ನಡೆಯುತ್ತಿದ್ದಾಗ ಏಗ್ನೆಸ್ಸಳು ಹಠಾತ್ತಾಗಿ ನಾವು ಇದ್ದ ಕೋಣೆಗೆ ಬಂದು ತಂದೆಯನ್ನು ಸಮಾಧಾನ ಮಾಡುತ್ತಾ ತನ್ನ ಕೋಣೆಗೆ ಕರೆದುಕೊಂಡು ಹೋದಳು. ಅವಳ ಮುಖ ನೋಡಿದಾಗ ಅವಳು ಅತ್ತುಕೊಂಡೇ ಇದ್ದಂತೆ ತೋರಿದಳು. ನಮ್ಮ ಕೋಣೆಯಲ್ಲಿ ನಡೆದುದನ್ನೆಲ್ಲಾ ಅವಳು ಹೇಗೋ ನೋಡಿಯೂ ಕೇಳಿಯೂ ಇರಬೇಕೆಂದು ನಾನು ಊಹಿಸಿದೆನು.

ಮರುದಿನ ಬೆಳಗ್ಗೆ ನಾನು ಎಲ್ಲರೂ ಏಳುವ ಮೊದಲೇ ಎದ್ದು ಬಂಡಿ ನಿಲ್ದಾಣಕ್ಕೆ ಹೋಗಿ ನಮ್ಮ ಮನೆ ಕಡೆಯ ಬಂಡಿಯನ್ನೇರಿದೆನು. ಎಲ್ಲೋ ಏತಕ್ಕೋಸ್ಕರವಾಗಿಯೋ ನಿಂತಿದ್ದ ಉರೆಯ ತನ್ನ ಬಾಯೊಳಗಿದ್ದ ಏನನ್ನೋ ಜಗಿಯುತ್ತಾ ಬಾಯಿ ಚಪ್ಪರಿಸುತ್ತಾ ನನ್ನ ಬಂಡಿಯ ಬಳಿಗೆ ಬಂದನು. ನನ್ನನ್ನು ನೋಡಿ –

"ಮಿ. ಕಾಪರ್ಫೀಲ್ಡ್, ವೈನಿನ ಮತ್ತತೆಯಿಂದ ನಾವು ನಿನ್ನೆ ಸ್ವಲ್ಪ ದಾರಿ ತಪ್ಪಿ ಮಾತಾಡಿದೆವು. ಆದ್ರೆ ನಾನು ಮಿ. ವಿಕ್ಫೀಲ್ಡರೊಡನೆ ಕ್ಷಮೆ ಬೇಡಿಕೊಂಡು ಸ್ನೇಹವನ್ನು ಸರಿಪಡಿಸಿಕೊಂಡಿದ್ದೇನೆ. ಕ್ಷಮಾಯಾಚನೆ ನಮ್ಮಂಥ ಬಡವರಿಗೆ ಬಹು ಸ್ವಾಭಾವಿಕ. ನಾನು ಹೇಳಿದ ಮಾತುಗಳೇನೋ ಯಥಾರ್ಥವಾದವುಗಳೇ ಹೌದು. ಆದರೆ ಅವನ್ನು ಅಷ್ಟು ಅವಸರದಿಂದ ಆಡಬಾರದಿತ್ತು. ಬೆಳೆಯದ ಫಲವನ್ನು ಕೊಯ್ಯಲು ಪ್ರಯತ್ನಿಸಿದರೆ ಸಿಕ್ಕುವ ಫಲ ಇಂಥಾದ್ದೇ. ಎಲ್ಲವೂ ಬೆಳೆಯಲಿ, ಹಣ್ಣಾಗಲಿ. ಆಗ ತಾವಾಗಿಯೇ ಉದುರಿ ನಮ್ಮ ಕೈಗೆ ದೊರಕುವುವು. ಆಗ – ಈಗ ಮುಚ್ಚಿರುವ ಬಾಯ್ದೆರೆದು ಹಣ್ಣನ್ನು ನುಂಗಿದರಾಯ್ತು!" ಎಂದಂದುಕೊಂಡು, ನನಗೆ ನಮಸ್ಕರಿಸಿ, ಭಯಂಕರವಾದ ಉರೆಯ ನಿರೀಕ್ಷಿಸುತ್ತಿದ್ದ ಹಣ್ಣನ್ನೇ ಜಗಿದು ಸವಿನೋಡುತ್ತಿದ್ದವನಂತೆ ಬಾಯಿ ಆಡಿಸುತ್ತಾ ಹೊರಟುಹೋದನು.

ಅಧ್ಯಾಯ ನಲ್ವತ್ತು

ದುಃಖಿತನಾದ ದೇಶಸಂಚಾರಿ

ಆ ರಾತ್ರಿ ನಾವು ಮಲಗುವಾಗ ಬಹಳ ಹೊತ್ತಾಗಿತ್ತು. ಮಿ. ವಿಕ್ಫೀಲ್ಡರ ಮನೆಯಲ್ಲಿ ನಡೆದ ಸಂಗತಿಗಳನ್ನೆಲ್ಲಾ ಅತ್ತೆಗೆ ತಿಳಿಸಿದೆನು. ಅತ್ತೆಗೆ ಅದನ್ನೆಲ್ಲಾ ಕೇಳಿ ಬಹಳ ಅಸಮಾಧಾನವಾಯಿತು. ತನ್ನ ಅಸಮಾಧಾನವನ್ನು ಸಹಿಸಲಾರದೆ ಅವಳು ತನ್ನ ಎರಡೂ ಕೈಗಳನ್ನು ಎದೆಗೆ ಅಡ್ಡವಾಗಿಟ್ಟುಕೊಂಡು ನಮ್ಮ ಕೋಣೆಯಲ್ಲಿ ಅತ್ತಿತ್ತ ತಿರುಗಾಡಿದಳು. ಅವಳ ಮನಸ್ಸಿನಲ್ಲಿ ತಳಮಳವೆದ್ದಾಗಲೆಲ್ಲಾ ಅವಳು ಇದೇ ರೀತಿ ತಿರುಗುವುದು ಅವಳ ಅಭ್ಯಾಸ. ಈ ಹೊತ್ತಿನ ಅಸಮಾಧಾನ ಬಲವಾದದ್ದೇ ಎಂಬುದನ್ನು ಅವಳು ತಿರುಗಿದ ಸ್ಥಳ ಮತ್ತು ಸಮಯದಿಂದ ತಿಳಿಯಬಹುದಿತ್ತು. ಇಂದು ಅವಳು ಎಂದಿನ ಕೋಣೆ ಮಾತ್ರವಲ್ಲದೆ ಅದರಿಂದಲೂ ಮುಂದುವರಿದು ಮತ್ತೊಂದು ಕೋಣೆಯನ್ನು ಈ ರೀತಿಯ ನಡಿಗೆಗೆ ಉಪಯೋಗಿಸಿಕೊಂಡಳು. ಈ ರೀತಿ ಅವಳು ಸಾಧಾರಣ ಎರಡು ಘಂಟೆ ಕಾಲ ತಿರುಗಾಡಿದಳು. ಮಲಗುವ ಮೊದಲು ಅತ್ತೆ ಯಾವಾಗಲೂ ಸೇವಿಸುತ್ತಿದ್ದ ಪಾನೀಯ ಬೆಳಗ್ಗೆ ನೋಡುವಾಗಲೂ ಮೇಜಿನ ಮೇಲೆ ಇಟ್ಟಂತೆಯೇ ಇತ್ತು. ಆ ಮರುದಿನ ನಾನು ಅನೇಕ ವಿಧದಿಂದ ಆಲೋಚಿಸಿ ಮಿಸ್ ಸ್ಪೆನ್ಲೋ ಸಹೋದರಿಯವರಿಗೆ ಒಂದು ಪತ್ರವನ್ನು ಬರೆದೆನು.

ಈ ಸಮಯದಲ್ಲಿ ಒಂದು ದಿನ ನಾನು ಡಾ। ಸ್ಟ್ರಾಂಗರ ಮನೆಯಿಂದ ಬರುವಾಗ ರಾತ್ರಿಯಾಗಿತ್ತು. ರಸ್ತೆ, ಮನೆ, ಮೈದಾನ ಎಲ್ಲಾ ಕಡೆಗಳಲ್ಲೂ ಹಿಮ ಬಿದ್ದು, ರಸ್ತೆಯೇ ಬಹ್ವಂಶ ತೋರದಂತೆ ಆಗಿತ್ತು. ಜನರ ನಡಿಗೆಯ, ಅಥವ ವಾಹನ ಚಲಾವಣೆಯ ಯಾವ ಶಬ್ದವೂ ಕೇಳಿಸುತ್ತಿರಲಿಲ್ಲ. ಹೀಗಾಗಿ ನಾನು ಆದಷ್ಟು ಸಮೀಪದ ರಸ್ತೆಗಾಗಿ ಮನೆಗೆ ಬರುವುದು ಒಳ್ಳೆಯದೆಂದು ಸೈಂಟ್ ಮಾರ್ಟಿನ್ ಇಗರ್ಜಿ ಎದುರಿನ ರಸ್ತೆಯಲ್ಲೇ ಮನೆ ಕಡೆ ನಡೆಯತೊಡಗಿದೆನು.

ಆಗಲೇ ನನ್ನ ಸಮಸಮಕ್ಕೆ ರಸ್ತೆಯ ಇನ್ನೊಂದು ಕರೆಯಲ್ಲಿ ಇಗರ್ಜಿ ಕಡೆಗೆ ಒಬ್ಬ ವ್ಯಕ್ತಿ ನಡೆದು ಹೋಗುತ್ತಿದ್ದುದನ್ನು ಕಂಡೆನು. ಆ ವ್ಯಕ್ತಿಯನ್ನು ಗುರುತಿಸಬೇಕೋ ಗುರುತಿಸಿದರೆ ಆಗಬಹುದೋ ಕರೆಯಬಹುದೋ ಎಂದು ಯೋಚಿಸುತ್ತಿರುವಾಗಲೇ ಆ ವ್ಯಕ್ತಿ ಮಾಯವಾಯಿತು. ಅಷ್ಟರಲ್ಲೇ ಆ ವ್ಯಕ್ತಿಯನ್ನೇ ಹುಡುಕುತ್ತಾ ಹಿಂಬಾಲಿಸಿ ಬಂದಿರಬೇಕೆನ್ನುವಷ್ಟು ಕ್ಷಿಪ್ರದಲ್ಲೇ ಮತ್ತೊಂದು ವ್ಯಕ್ತಿ ಬಂದು ನನ್ನನ್ನು ದಾಟಿ ಹೋಗಿ ಇಗರ್ಜಿ ಮೆಟ್ಟಲಲ್ಲಿ ನಿಂತಿತು. ಈ ಎರಡನೇ ವ್ಯಕ್ತಿಯ ಸಮೀಪಕ್ಕೆ ನಾನು ತಲುಪುವಾಗ ಅದು ಮಿ. ಪೆಗಟಿಯವರೆಂದು ಗೊತ್ತಾಯಿತು. ಇವರನ್ನು ಗುರುತು ಹಚ್ಚಿದುದರ ಮೂಲಕ, ಮನಸ್ಸಿನ ಚಮತ್ಕಾರದಿಂದ ಅಥವಾ ಬುದ್ಧಿಗೂ ಮಿಕ್ಕಿದ ಇಂಗಿತದಿಂದ, ಮೊದಲಿನ ವ್ಯಕ್ತಿ ಹೆಣ್ಣು ಎಂದೂ ಅವಳು ಮಾರ್ಥಾ ಎಂದೂ ನಿಶ್ಚೈಸಿದೆನು.

ನಾನು ಮಿ. ಪೆಗಟಿಯವರನ್ನು ಕಂಡು ಸಂತೋಷಪಡುತ್ತಾ ಅವರಿಗೆ ಹಸ್ತಲಾಘವವನ್ನಿತ್ತೆನು. ನನ್ನನ್ನು ಕಂಡು ಅವರೂ ತುಂಬಾ ಸಂತೋಷಪಟ್ಟರು. ಅವರಿಗೆ ನನ್ನೊಡನೆ ಮಾತಾಡುವ ಸಂಗತಿ ತುಂಬಾ ಇರಬೇಕೆಂದು ಊಹಿಸಿ, ಸಮೀಪದಲ್ಲಿ ಬೆಂಕಿ ಹೊತ್ತಿಸಿಕೊಂಡು ಬೆಚ್ಚಗಿದ್ದ ಒಂದು ಕುದುರೆ ಲಾಯಕ್ಕೆ ಅವರನ್ನು ಕರೆದುಕೊಂಡು ಹೋದೆನು. ಅಲ್ಲಿ ಬೆಂಕಿ ಉರಿಸಿಟ್ಟು, ಆ ಲಾಯಕ್ಕೆ ಸಂಬಂಧಪಟ್ಟವರು ಎಲ್ಲಿಗೋ ಹೋಗಿದ್ದುದರಿಂದ ನಮಗೆ ಮಾತಾಡಲು ಬಹಳ ಅನುಕೂಲವಾಯಿತು. ಅಲ್ಲಿ ನಾವು ತುಂಬಾ ಮಾತಾಡಿದೆವು. ಮಿ. ಪೆಗಟಿಯ ತಲೆಗೂದಲು ಮೊದಲಿಗಿಂತಲೂ ಹೆಚ್ಚು ನರೆದಿತ್ತು. ಅವರ ಗಡ್ಡಮೀಸೆಗಳು ಬೆಳೆದು ಅವರನ್ನು ಎದುರೆದುರೇ ನೋಡಿದರೂ ಗುರುತಿಸುವುದು ಕಷ್ಟವಾಗುವಂತೆ ತೋರುತ್ತಿದ್ದರು. ಮುಖದಲ್ಲಿ ನೆರಿಗೆಗಳು ಹೆಚ್ಚಿದ್ದುವು. ಅವರು ಕೃಶರಾಗುತ್ತಾ ಬಾಡಿ ಕುಗ್ಗಿದ್ದರು. ಅವರ ದೇಹವು ಈ ತೆರನಾಗಿದ್ದರೂ ಎಮಿಲಿಯನ್ನು ಕುರಿತು ಮಾತಾಡುವಾಗ ಅವರ ಹಿಂದಿನ ಪರಿಪೂರ್ಣ ಶಕ್ತಿ, ಧೈರ್ಯ, ಹಟ, ಪ್ರೇಮ ಎದ್ದು ಬರುತ್ತಿದ್ದುವು. ಆವರೆಗೆ ಅವರು ಎಮಿಲಿಯನ್ನು ದೇಶವಿದೇಶಗಳಲ್ಲಿ ಹುಡುಕಿದ ಕಥೆಯನ್ನು ಬಹು ಸಮಾಧಾನವಾಗಿ, ಪ್ರೇಮಮಯ ಕಾತುರತೆಯಿಂದ, ದುಃಖ ಮಿಶ್ರಿತವಾಗಿ ಹೇಳಿದರು.

"ಮಾಸ್ಟರ್ ಡೇವೀ ನಾನು ಎಮಿಲಿಯನ್ನು ಎಲ್ಲೆಲ್ಲಿ ಹುಡುಕಿದ್ದೆನೆಂಬುದನ್ನು ಕೇಳು – ಪರವೂರ ಬಂದರುಗಳು, ದೊಡ್ಡ ದೊಡ್ಡ ನಗರಗಳು, ಬಿಸಿಲು ಚೆನ್ನಾಗಿದ್ದು ದೇಹ ಮನಸ್ಸುಗಳಿಗೆ ಹುರುಪು ಕೊಡುವಂಥ ಸ್ಥಳಗಳೆಲ್ಲ ಎಮಿಲಿಗೆ ಪ್ರಿಯವಾದುವೆಂದು ನಾನು ಅವಳ ಒಡನಾಟದಿಂದ ತಿಳಿದಿದ್ದುದರಿಂದ, ಅಂಥ ಅನೇಕ ಸ್ಥಳಗಳಿಗೆ ಹೋಗಿ ಹುಡುಕಿದೆನು. ಫ್ರಾನ್ಸಿನಿಂದ ಸ್ವಿಟ್ಸರ್ಲೇಂಡಿನವರೆಗೂ ಹುಡುಕಿದೆ. ನನ್ನ ಚರಿತ್ರೆಯನ್ನು ಕೇಳಿದವರೆಲ್ಲ ನನ್ನಲ್ಲಿ ತುಂಬಾ ಸಹಾನುಭೂತಿಯನ್ನು ತೋರಿಸಿದರು. ಅನೇಕ ಕಡೆಗಳಲ್ಲಿ ನನಗೆ ಸಹಾಯವನ್ನೂ ಆಶ್ರಯವನ್ನೂ ಕೊಟ್ಟರು. ನನ್ನ ದುಃಖವನ್ನು ಅವರ ದುಃಖವೆಂದೇ ಆ ಜನರು ತಿಳಿಯುತ್ತಾ ಕೆಲವು ಕಡೆ ನನ್ನ ಜತೆಯಲ್ಲಿ ಗುಂಪಾಗಿ ಬಂದು, ಬಹುದೂರದವರೆಗೂ ಬಂದು ನನ್ನನ್ನು ಕಳುಹಿಸಿಕೊಟ್ಟದ್ದೂ ಉಂಟು. ಸ್ವಿಟ್ಸರ್ಲೇಂಡಿನಲ್ಲೊಂದು ಕಡೆ ಅವರು ಇದ್ದ ಕುರುಹು ಬಹು ಸ್ಪಷ್ಟವಾಗಿ ಸಿಕ್ಕಿತು. ಆ ಕೂಡಲೇ ಎಮಿಲಿಗೆ ಕೊಟ್ಟು ಕರತರಲೋಸ್ಕರ, ಅವಳಿಗೆ ಅನುಕೂಲವಾದ ಉಡಿಗೆ ತೊಡಿಗೆಗಳನ್ನು ತಯಾರಿಸಿಕೊಂಡು ನಾನು ಆ ಸ್ಥಳಕ್ಕೆ ಹೋಗುವಾಗ ಸ್ವಲ್ಪ ತಡವಾಗಿ ಹೋಯಿತು – ನಾನು ಅಲ್ಲಿಗೆ ತಲುಪುವ ಮೊದಲೇ ಅವರು ಅಲ್ಲಿಂದ ಹೋಗಿಬಿಟ್ಟಿದ್ದರು.

"ಒಂದು ಪತ್ರವನ್ನು ಸಹ ಎಮಿಲಿಯು ನನಗೆ ಬರೆದಿದ್ದಾಳೆ. ಅದರಲ್ಲಿ ತನ್ನ ತಪ್ಪನ್ನೊಪ್ಪಿಕೊಂಡು ನನ್ನ ಕ್ಷಮೆಯನ್ನು ಬೇಡಿರುತ್ತಾಳೆ. ಆ ಪತ್ರ ಇಲ್ಲಿದೆ – ನೋಡು, ಡೇವೀ" ಎಂದಂದು ಅದನ್ನು ಓದಲೋಸ್ಕರ ನನಗೆ ಕೊಟ್ಟರು. ಪತ್ರವು ಮಿಸೆಸ್ ಗಮ್ಮಿಜ್ಜರಿಗೆ ಬರೆದದ್ದಾಗಿತ್ತು. ಪತ್ರವು ಹೀಗಿತ್ತು:

"ಓ! ಈ ಪತ್ರದಲ್ಲಿ ನನ್ನ ಕೈಬರಹವನ್ನು ಕಂಡು ನೀವು ಏನಂದುಕೊಳ್ಳುವಿರೆಂದು ನಾನು ಊಹಿಸಲಾರೆ! ಆದರೆ, ನನಗಾಗಿ ನೀವು ದಯಮಾಡಿ ಎರಡು ಮಿನಿಟಾದರೂ ಕ್ಷಮಾಭಾವನೆಯನ್ನು ತಂದುಕೊಂಡು ಪತ್ರವನ್ನು ಪ್ರಿಯ ಮಾವನಿಗೆ ಓದಿ ಹೇಳಿ. ನೀವು ನನಗೆ ಒಂದು ಚಿಕ್ಕ ಪತ್ರವನ್ನಾದರೂ ಬರೆಯಬೇಕು. ಮಾವ ನನ್ನನ್ನು ಬೈದನೆ, ನನಗಾಗಿ ದುಃಖಿಸಿದನೆ, ನಾನು ಯಾವತ್ತೂ ಮನೆಗೆ ಬರುತ್ತಿದ್ದ ದಾರಿಯನ್ನು ಈಗಲೂ ಅವನು ತನ್ನ ಕಿಟಕಿಯಿಂದ ನೋಡುತ್ತಾ ನನಗಾಗಿ ಕಾಯುತ್ತಿರುವನೇ? ನೀವೆಲ್ಲರೂ ಮೊದಲಿನಂತೆಯೇ ಇರುವಿರೇ? ಹೇಮ್ ಹೇಗಿದ್ದಾನೆ? ನಾನು ಮಾಡಿರುವ ಅಪರಾಧ ಸಣ್ಣದಲ್ಲವೆಂದೂ ಯಾವ ಕಠಿಣ ಶಿಕ್ಷೆಯೂ ನನ್ನ ಅಪರಾಧಕ್ಕೆ ಅಲ್ಪತರದ್ದೇ ಆಗುವುದೆಂದೂ ನನಗೆ ಗೊತ್ತಿದೆ. ಆದರೆ, ನನ್ನ ದುಃಖವೇ ನನಗೆ ಸಾಕಷ್ಟು ಶಿಕ್ಷೆಯಷ್ಟೇ ಬಲವಾಗಿದೆ. ಇನ್ನು ಯಾವ ಶಿಕ್ಷೆಯೂ ಈ ದುಃಖದ ಶಿಕ್ಷೆಗಿಂತ ಕಠಿಣವಾಗಲಾರದು. ನನ್ನ ಎಡೆಬಿಡದ ದುಃಖದ ಒಂದು ನಿಮಿಷದಷ್ಟರ ಶಮನಕ್ಕಾಗಿಯೇ ಆದರೂ ನನಗೊಂದು ಪತ್ರ ಬರೆಯಿರಿ."

ಆ ಪತ್ರದಲ್ಲಿ ಅವಳ ಹಂಗಾಮಿ ವಿಳಾಸವೂ ಇತ್ತು. ನಾನದನ್ನು ಮಿ. ಪೆಗಟಿವೆ ವಾಪಾಸು ಕೊಟ್ಟೆನು. ಮಿ.ಪೆಗಟಿ ಪತ್ರವನ್ನು ಭದ್ರವಾಗಿ ಅಂಗಿಯ ಜೇಬಲ್ಲಿಟ್ಟು, ಐವತ್ತು ಪೌಂಡಿನದೊಂದು ಮತ್ತು ಹತ್ತು ಪೌಂಡಿನದೊಂದು – ಹೀಗೆ ಎರಡು ಚೆಕ್ಕುಗಳನ್ನು ಜೇಬಿನಿಂದ ತೆಗೆದು ತೋರಿಸಿದರು. ಆಗಲೇ –
"ಈ ಹಣವನ್ನು ಎಮಿಲಿಯು ನನಗಾಗಿ ಕಳುಹಿಸಿದ್ದು. ಆದರೆ, ಮಾಸ್ಟರ್ ಡೇವೀ ನಾನು ಎಂಥ ಅಪಮಾನವನ್ನು ಸಹಿಸಬಹುದಾದರೂ ಅವನ ಹಣವನ್ನು ಮುಟ್ಟುವಷ್ಟರ ಅಪಮಾನವನ್ನು ಸಹಿಸಲಾರೆನು. ಈ ಹಣವನ್ನು ಎಂದಾದರೂ ಎಷ್ಟೇ ಕಷ್ಟವಾದರೂ ನಾನು ಅವನಿಗೆ ವಾಪಾಸು ತಲುಪಿಸಿಯೇ ತಲುಪಿಸುವೆನು" ಎಂದು ಹೇಳುತ್ತಾ ಅವುಗಳನ್ನು ಪುನಃ ಕಾಗದದಲ್ಲಿ ಸುತ್ತಿ ತನ್ನ ಒಳ ಅಂಗಿ ಜೇಬಿನಲ್ಲಿ ಭದ್ರವಾಗಿರಿಸಿಕೊಂಡರು.

ಇಷ್ಟು ಮಾತಾದನಂತರ ಮಿ. ಪೆಗಟಿ ಅವರು ಗೊತ್ತುಮಾಡಿಕೊಂಡಿದ್ದ ಹೋಟೆಲಿಗೆ ಹೋದರು. ನಾನು ನಮ್ಮ ಮನೆ ಕಡೆಗೆ ನಡೆಯತೊಡಗಿದೆ. ಹಿಮಮುಚ್ಚಿದ್ದ ರಸ್ತೆಯಲ್ಲಿ ಯಾರ ಹೆಜ್ಜೆಯ ಕುರುಹೂ ಕಾಣದೆ ಎಲ್ಲವೂ ಬಿಳಿದಾಗಿ ತೋರುತ್ತಿತ್ತು. ಜನಸಂದಣಿಯಿರದ ರಾತ್ರಿಯಲ್ಲಿ, ಯಾವ ಶಬ್ದವನ್ನೂ ಕೇಳದೆ, ಯಾವ ನೋಟವನ್ನೂ ಕಾಣದೆ, ಏಕಾಂಗಿಯಾಗಿ ನಡೆದು ಬರುವಾಗ ಆವರೆಗೆ ನಡೆದುದೆಲ್ಲಾ ಕೇವಲ ಭ್ರಮೆ ಮಾತ್ರವಾಗಿದ್ದಂತೆ ನನಗೆ ತೋರುತ್ತಿತ್ತು.

ಅಧ್ಯಾಯ ನಲ್ವತ್ತೊಂದು
ಡೋರಾಳ ಸೋದರತ್ತೆಯರು

ಮಿಸ್ ಸ್ಪೆನ್ಲೋ ಸಹೋದರಿಯರ ಉತ್ತರವು ಬಂತು. ಉತ್ತರವು ಬಹು ಎಚ್ಚರಿಕೆಯಿಂದ ಬರೆದಂತಿತ್ತು. ಅವರ ಪತ್ರ ಹೀಗಿತ್ತು:
"ಮಿ. ಕಾಪರ್ಫೀಲ್ಡರ ಪತ್ರದ ಸಂದರ್ಭಕ್ಕೆ ತಕ್ಕದಾದ ಗಮನವು, ಉಭಯ ಪಕ್ಷಗಳ ಹಿತಸಾಧನೆಯೇ ಮುಖ್ಯ ಗುರಿಯಾಗಿಟ್ಟುಕೊಂಡು, ಕೊಡಲಾಗಿದೆ. ಇಂಥ ಗಹನವಾದ ವಿಷಯದಲ್ಲಿ ಪತ್ರ ವ್ಯವಹಾರವು, ಉಭಯ ಪಕ್ಷಗಳ ಹಿತದೃಷ್ಟಿಯಿಂದ ಅಷ್ಟೊಂದು ಹಿತಕರವಲ್ಲ. ಮಿ. ಕಾಪರ್ಫೀಲ್ಡರು, ಬೇಕಾದರೆ ಒಬ್ಬ ಸ್ನೇಹಿತರನ್ನು ಜತೆಗೆ ಕರೆದುಕೊಂಡು, ಒಂದು ನಿರ್ದಿಷ್ಟ ದಿನದಲ್ಲಿ, ಮಿಸ್ ಸ್ಪೆನ್ಲೋರವರ ಮನೆಗೆ ಹೋಗುವುದು ಉತ್ತಮ."

ಆ ಪತ್ರದಲ್ಲಿ 'ನೀವು', 'ನಾವು' ಎನ್ನಬೇಕಾದಲ್ಲೆಲ್ಲ ಸಂಬಂಧಪಟ್ಟವರ ಹೆಸರನ್ನೇ ಹೇಳುತ್ತಾ ಮೂರನೇ ಒಬ್ಬರ ವಿಷಯ ಮಾತಾಡುವಂತೆ ಬರೆದಿದ್ದರು. 'ಉಭಯಪಕ್ಷ' ಎಂಬ ಶಬ್ದವೂ ತುಂಬಾ ಉಪಯೋಗಿಸಲಾಗಿದ್ದು, ಅಭಿಪ್ರಾಯದ ಸ್ಪಷ್ಟತೆಯಿರಲಿಲ್ಲ. 'ಉಭಯಪಕ್ಷದಹಿತ'ವನ್ನೇ ಗ್ರಹಿಸಿರುವುದಾಗಿ ಹೇಳುತ್ತಾ ನನ್ನ ಕೇಳಿಕೆಗಳನ್ನು ನಿರಾಕರಿಸಿಬಿಡುವರೋ ಎಂಬುದು ನನಗೆ ಭಯಪ್ರದವಾದ ಕೌತುಕವಾಗಿತ್ತು. ಏನಿದ್ದರೂ ಡೋರಾ ಇರುವ ಮನೆಗೆ ಹೋಗುವುದೇ ಸಂತೋಷದ ಸಂಗತಿಯಾಗಿದ್ದುದರಿಂದ ನಾನು ಪತ್ರವನ್ನು ಅತ್ಯಾದರದಿಂದ ಸ್ವೀಕರಿಸಿ, ಅಲ್ಲಿಗೆ ಹೋಗುವ ದಿನ ಇಂಥಾದ್ದೇ ಎಂದು ಅವರಿಗೆ ಬರೆದು ತಿಳಿಸಿದೆನು. ನನ್ನ ಜತೆಯಲ್ಲಿ ವಕೀಲ ಟ್ರೇಡಲ್ಸನೂ ಬರುವುದಾಗಿಯೂ ತಿಳಿಸಿದೆನು. ಗೊತ್ತು ಮಾಡಿದ ದಿನ ನಾನೂ ಟ್ರೇಡಲ್ಸನೂ ಪುಟ್ನಿಗೆ ಹೊರಟೆವು. ನಮ್ಮ ಉಡುಗೆ ತೊಡಿಗೆಗಳು ಅನಾಡಂಬರದವುಗಳಾಗಿದ್ದರೂ ಕೇವಲ ಬಡವರು ಧರಿಸಬಹುದಾಗಿದ್ದಂತೆ ಇರದೆ, ಅಂದಿನ ಸಂದರ್ಭಕ್ಕೆ ತಕ್ಕದಾಗಿ ಭೂಷಣವಾಗಿ ಇದ್ದುವು. ಟ್ರೇಡಲ್ಸನ ಉಡುಪು ಬಹು ಚೆನ್ನಾಗಿದ್ದರೂ ಅವನ ತಲೆಗೂದಲಿನ ಮಟ್ಟಿಗೆ ನಾವು ಏನೂ ಮಾಡಲಾರದೆ ಆಗಿದ್ದೆವು. ಆ ಕೂದಲನ್ನು ಎಷ್ಟು ಪ್ರಯತ್ನಪಟ್ಟು ಬಾಚಿ ಒತ್ತಿ ಇಟ್ಟರೂ ಹೇಟು ತೆಗೆದ ಕೂಡಲೇ ಅದು ಮುಳ್ಳು ಹಂದಿಯ ಮುಳ್ಳು ಎದ್ದು ನಿಲ್ಲುವಂತೆ ನೆಟ್ಟಗೆ ಎದ್ದು ನಿಲ್ಲುತ್ತಿತ್ತು. ಈ ಒಂದು ವಿಷಯವೂ ಮತ್ತೂ ನನ್ನ ಮನಸ್ಸಿನ ಗಾಬರಿ ಮುಖದಲ್ಲಿ ತೋರಿಬಿಡಬಹುದೆಂಬ ಹೆದರಿಕೆಯೂ ನಮ್ಮಿಬ್ಬರನ್ನೂ ಬಾಧಿಸುತ್ತಿದ್ದುವು. ನಾವು ಪುಟ್ನಿಗೆ ತಲುಪಿದ ಕೂಡಲೇ ಆ ಸಹೋದರಿಯರ ಮನೆಗೆ ಹೋಗುವ ಮೊದಲು ಒಂದು ಹೋಟೆಲಿಗೆ ಹೋಗಿ ನಾನೊಬ್ಬ ಮಾತ್ರ, ಹಗುರತರದ ಅಮಲು ಪಾನೀಯವನ್ನು – ನನ್ನ ಧೈರ್ಯಕ್ಕಾಗಿ, ತೆಗೆದುಕೊಂಡೆನು.

ಆ ಸಹೋದರಿಯರ ಮನೆಗೆ ತಲುಪಿದಾಗ ಅಲ್ಲಿನ ಕೆಲಸದ ಹೆಂಗುಸು ನಮ್ಮನ್ನು ಕರೆದುಕೊಂಡು ಹೋಗಿ ಸುಸಜ್ಜಿತವಾಗಿದ್ದ ಒಂದು ಬೈಠಖಾನೆಯಲ್ಲಿ ಕುಳ್ಳಿರಿಸಿದಳು. ಆ ಕೋಣೆಯಲ್ಲಿ ಕ್ರಮವಾಗಿ ಇಡಲಾಗಿದ್ದ ಕುರ್ಚಿಗಳೂ ಮೇಜೂ ಇದ್ದುವು. ಅಲ್ಲೇ ಗೋಡೆಯಲ್ಲಿದ್ದ ಒಂದು ಗಡಿಯಾರ ಅದರ ಟಿಕ್ ಟಾಕ್ ಶಬ್ದದಿಂದ ಅಲ್ಲಿನ ನಿಶ್ಶಬ್ದತೆಯನ್ನು ಎತ್ತಿ ತೋರಿಸುತ್ತಿತ್ತು. ನಾನು ಕುಡಿದಿದ್ದ ಪಾನೀಯದ ಅಮಲು ಒಂದು ಕಡೆ, ಮುಂದೆ ನಡೆಯಬೇಕಾಗಿದ್ದ ನಮ್ಮೊಳಗಿನ ಮಾತುಕಥೆಗಳನ್ನು ಕುರಿತು ಯೋಚಿಸಿಯೇ ಆಗಿದ್ದ ನನ್ನ ಮನಸ್ಸಿನ ಅವ್ಯವಸ್ಥೆ ಇನ್ನೊಂದು ಕಡೆ. ಈ ರೀತಿಯಾಗಿ ನಾನು ಬಾಧಿಸಲ್ಪಟ್ಟು, ನಾನೇ ಇಂದಿನ ಪ್ರಸಂಗಗಳಲ್ಲಿ ಭಾಗವಹಿಸುತ್ತಿರುವೆನೋ ಅಥವಾ ಇತರರು ಯಾರೋ ಭಾಗವಹಿಸುತ್ತಿರುವುದನ್ನು ನಾನು ನೋಡುತ್ತಿರುವೆನೋ ಎಂಬ ಭ್ರಮೆಯೇ ನನಗುಂಟಾಯಿತು. ಗಡಿಯಾರದ ಟಿಕ್ ಟಾಕ್ ಶಬ್ದದ ಜತೆಗೆ ನನ್ನ ಹೃದಯ ಬಡಿತದ ಶಬ್ದವೂ ಕೇಳಿಸತೊಡಗಿತ್ತು. ಈ ಎರಡೂ ಶಬ್ದಗಳನ್ನು ತಾಳದ ಮೇಳದಂತೆ ಏಕಕಾಲದಲ್ಲಿ ಕೇಳಿಸಲು ಪ್ರಯತ್ನಪಟ್ಟು, ಸೋತು, ಕೊನೆಗೆ ಹೃದಯವು ಮತ್ತಷ್ಟು ವೇಗವಾಗಿ ಬಡಿಯುತ್ತಿದ್ದುದು ಮಾತ್ರ ನನಗೆ ಗೊತ್ತಾಯಿತು. ಇದೇ ಸಮಯದಲ್ಲಿ ಈ ವಿಧದ ಶಬ್ದಗಳನ್ನು ಕುರಿತಾದ ಏಕಾಗ್ರತೆಯನ್ನು ಹಗುರವಾಗಿ ಭೇದಿಸಿ ಬರುವಂತೆ ದೂರದಿಂದ ಜಿಪ್ಪ್ ಬೊಗಳಿದಂತೆಯೂ ಅದರ ಬಾಯನ್ನು ಯಾರೋ ಮುಚ್ಚಿದಂತೆಯೂ ಕೇಳಿಸಿತು. ಇಂಥ ಪರಿಸ್ಥಿತಿಯಲ್ಲಿ ನಾನಿದ್ದಾಗ ಮಿಸ್ ಸ್ಪೆನ್ಲೋ ಸಹೋದರಿಯರು ನಾವು ಕುಳಿತಿದ್ದ ಬೈಠಖಾನೆಗೆ ಬಂದರು.

ನಾನು ಹೇಗೋ ಧೈರ್ಯ ತಂದುಕೊಂಡು ಅವರನ್ನು ನೋಡಿದೆನು. ಅನಂತರ ಅವರು ಮಾತಾಡಿಸಿದರೆ ಮಾತಾಡಲು ಸಿದ್ಧನಾದೆನು. ಅವರಿಬ್ಬರೂ ಮಿ. ಸ್ಪೆನ್ಲೋರವರಿಗಿಂತ ಹಿರಿಯರೆಂಬುದು ಅವರನ್ನು ನೋಡಿದ ಕೂಡಲೇ ತಿಳಿದೆನು. ಆ ಇಬ್ಬರ ಪೈಕಿ ಪ್ರಾಯ ಸ್ವಲ್ಪ ಕಡಿಮೆ ಇರಬೇಕೆಂದು ತೋರುವವಳ ಕೈಯ್ಯಲ್ಲಿ ನಾನು ಬರೆದಿದ್ದ ಪತ್ರವಿತ್ತು. ಬಂದವರು ನಮ್ಮನ್ನು ಸಂತೋಷದಿಂದ ಸ್ವಾಗತಿಸಿ ಮಾತಾಡತೊಡಗಿದರು.

ಈ ಪ್ರಸಂಗದಲ್ಲಿ ಅವರಿಬ್ಬರ ಪೂರ್ವಚರಿತ್ರೆಯನ್ನು ಸ್ವಲ್ಪ ತಿಳಿಸುವುದು ಉತ್ತಮ. ಈ ಎಲ್ಲಾ ವಿಷಯವನ್ನೂ ನಾನು ಹಿಂದಿನಿಂದ ತಿಳಿದುಕೊಂಡೆನಾದರೂ ಇಲ್ಲಿ ಮಾತ್ರ ನಾನು ಅವನ್ನೆಲ್ಲ ಮೊದಲೇ ತಿಳಿಸುವುದು ಮುಂದಿನ ನಮ್ಮ ಮತ್ತೂ ಅವರ ಮಾತುಗಳನ್ನು ಅರ್ಥಮಾಡಲು ಸಹಾಯವಾಗಬಹುದು.

ಅವರಲ್ಲಿ ಅಕ್ಕನ ಹೆಸರು ಕ್ಲೇರಿಸ, ತಂಗಿಯ ಹೆಸರು ಲೆವಿನ. ಅಕ್ಕ ತಂಗಿಯರಿಗೆ ಆರೆಂಟು ವರ್ಷಗಳ ಅಂತರವಿರಬಹುದಾದಂತೆ ತೋರುತ್ತಿದ್ದರು. ಇಬ್ಬರು ಸಾಧಾರಣ ಒಂದೇ ವಿಧದ ಉಡುಪನ್ನು ಧರಿಸಿದ್ದರು. ತಂಗಿಯ ಉಡುಪು ಅಕ್ಕನದಕ್ಕಿಂತ ಸ್ವಲ್ಪ ಹೆಚ್ಚು

ಅಲಂಕಾರಯುತವಾಗಿತ್ತು, ಅಷ್ಟೆ. ಈ ದಿನದ ಕಾರ್ಯದಲ್ಲಿ ತಂಗಿಯ ಅಭಿಪ್ರಾಯವನ್ನು ಕೇಳಿ, ತನ್ನ ಹಿರಿತನದ ಹಕ್ಕಾಗಿ, ಅಕ್ಕನೇ ಆಖೈರು ತೀರ್ಪನ್ನು ಕೊಡುತ್ತಿದ್ದಳು. ಆದರೆ, ತಂಗಿಗೆ ಸೂಕ್ಷ್ಮತರದ್ದೂ ಹೃದಯಕ್ಕೆ ಸಂಬಂಧಿಸಿದ್ದೂ ಆಗಿರುವ ವಿಷಯಗಳಲ್ಲಿ ಅಕ್ಕನಿಗಿಂತ ಹೆಚ್ಚು ಅನುಭವವಿದ್ದುದರಿಂದ, ನನ್ನ ಹತ್ತಿರ ಹೆಚ್ಚು ಮಾತಾಡಿದ್ದೂ ಅಕ್ಕನನ್ನು ಉತ್ತಮ ದಾರಿಗೆ ತಂದದ್ದೂ ಮಿಸ್ ಲೆವಿನಳೇ.

ಮಿಸ್ ಲೆವಿನಳಿಗೆ ಹೃದಯಕ್ಕೆ ಸಂಬಂಧಿಸಿದ – ಅಂದರೆ, ಅನುರಾಗ, ಪ್ರೇಮ, ಸ್ತ್ರೀಪುರುಷರ ಭಾವನೆ ಮೊದಲಾದ ಹಾರ್ದಿಕ ಅನುಭವ ತನಗಿಂತ ಎಷ್ಟೋ ಹೆಚ್ಚು ಇತ್ತೆಂದು ಮಿಸ್ ಕ್ಲೇರಿಸಳು ಸದಾ ಒಪ್ಪುತ್ತಿದ್ದು, ಅಂಥ ಅವರ ಅನುಭವಕ್ಕೆ ತಕ್ಕದಾದ ಗೌರವದಿಂದ ತಂಗಿಯನ್ನು ಕ್ಲೇರಿಸಳು ಕಂಡುಕೊಳ್ಳುತ್ತಿದ್ದಳು. ಇದಕ್ಕೆಲ್ಲ ಆಧಾರವಾಗಿ ಮಿಸ್ ಲೆವಿನಳ ಯೌವ್ವನ ಕಾಲದ ಚರಿತ್ರೆಯೇ ಇದೆ. ಮಿಸ್ ಲೆವಿನಳನ್ನು ಮಿ. ಪಿಡ್ಜರ್ ಎಂಬ ಯುವಕ ಬಹುವಾಗಿ ಪ್ರೀತಿಸುತ್ತಿದ್ದನಂತೆ. ಅವನು ಮಿಸ್ ಲೆವಿನಳನ್ನು ಪ್ರೀತಿಸುತ್ತಿದ್ದುದು ಮಾತ್ರವಲ್ಲ, ಅವನ ಅಂತರಂಗದಲ್ಲೇ ಹೃದಯ ದೇವತೆಯಾಗಿ ಅವಳನ್ನು ಸದಾ ಆರಾಧಿಸುತ್ತಿದ್ದನಂತೆ. ಆದರೆ, ಅವನ ಈ ತೆರನಾದ ಅಂತರಂಗದ ಆರಾಧನೆಗಳೇ ಹೃದಯ ವೇದನೆ ಆಗಿ ಕಾಣಿಸಿಕೊಂಡು, ಅವನ ಅಂತರಂಗವನ್ನು ಬಿಚ್ಚಿ ತೋರಿಸುವ ಮೊದಲೇ ಅವನ ಯೌವ್ವನಾವಸ್ಥೆಯಲ್ಲೇ (ಅರವತ್ತನೇ ವರ್ಷದಲ್ಲಿ) ಅಕಾಲ ಮರಣಕ್ಕೆ ತುತ್ತಾದನು. ಹೀಗೆ ಪ್ರಿಯನನ್ನು ಕಳೆದುಕೊಂಡನಂತರ ಮಿಸ್ ಲೆವಿನಳು ಅವನ ತೈಲಚಿತ್ರವನ್ನು ಬರೆಸಿ ತನ್ನ ಮನೆಯಲ್ಲಿಟ್ಟುಕೊಂಡು, ಮದುವೆಯಾಗದೆ ಜೀವನವನ್ನು ಸವೆಯಿಸುತ್ತಿದ್ದಾಳೆಂದು ಮಿಸ್ ಕ್ಲೇರಿಸಳು ಅನುಕಂಪದಿಂದ ಹೇಳುತ್ತಿದ್ದುದನ್ನು ಕೇಳಿದ್ದೇನೆ. ಇಂಥ ಪ್ರೇಮದ ಪೂರ್ಣಾನುಭವವುಳ್ಳ, ಜ್ಞಾನವೃದ್ಧೆ ಲೆವಿನಳು ನಮ್ಮ ಇಂದಿನ ಕಾರ್ಯದಲ್ಲಿ ಮುಖ್ಯ ಭಾಗವನ್ನು ವಹಿಸಿದಳು.

ಮಿಸ್ ಲೆವಿನಳು ನನ್ನ ಪತ್ರವನ್ನು ಕೈಯ್ಯಲ್ಲಿ ಹಿಡಿದುಕೊಂಡು ಟ್ರೇಡಲ್ಸನನ್ನು ನೋಡಿ –
"ಮಿ. ಡೇವಿಡ್ ಕಾಪರ್ಫೀಲ್ಡ್ ತಾವು ತಾನೆ?" ಅಂದರು.
"ಅಲ್ಲ, ನಾನು" ಎಂದು ನಾನು ಸ್ವಲ್ಪ ಗಾಬರಿಯಿಂದಲೇ ಹೇಳಿದೆನು.
"ಮಿ. ಕಾಪರ್ಫೀಲ್ಡ್, ನನ್ನ ತಂಗಿ ಲೆವಿನಳು ಹೃದಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪಾರಂಗತಳು. ನಿಮಗೆ ಸಂಬಂಧಿಸಿದ ಕಾರ್ಯಗಳಲ್ಲಿ ಅವಳು ಪ್ರಧಾನವಾಗಿ ಮಾತಾಡುವುದಿದ್ದರೂ ನನ್ನ ಹಿರಿಯ ಸ್ಥಾನಕ್ಕೆ ತಕ್ಕದಾಗಿ ಎರಡು ಮಾತಾಡಬೇಕಾಗಿದೆ. ದಿವಂಗತ ಮಿ. ಸ್ಪೆನ್ಲೋನಿಗೂ ನಮಗೂ ವಿಶೇಷ ಪರಿಸ್ಪಂದನ ಇರಲಿಲ್ಲವೆಂದು ಮೊದಲು ನಿಮಗೆ ತಿಳಿಸಬೇಕಾಗಿದೆ. ಅವರ ಮರಣದ ಕಾರಣವಾಗಿ ಮಾತ್ರ ನಮಗೆ ಇಂದು ಈ ಜವಾಬ್ದಾರಿಯು ಬಂದೊದಗಿದೆ. ಅವರ ಪತ್ನಿಯ ಒಂದು ಅಚಾತುರ್ಯದಿಂದ ಆದ ಅಪಮಾನದ ಕಾರಣವಾಗಿ ನಾವು (ರಕ್ತಸಂಬಂಧವಿದ್ದರೂ) ನಮ್ಮ ಇಷ್ಟ ಸಂಬಂಧವನ್ನು ಬಿಟ್ಟಿದ್ದೆವು" ಎಂದು ಮಿಸ್ ಕ್ಲೇರಿಸಳು ಹೇಳಿದಳು.

ಅಷ್ಟರಲ್ಲೇ ತಂಗಿಯು, ಮಾತಿನಲ್ಲಿ ಅಡ್ಡಬಂದು –
"ಅಕ್ಕಾ, ಚರಿತ್ರೆಯ ಪೂರ್ವಭಾಗಗಳನ್ನು ಇಂದು ಪುನರಾವರ್ತನೆ ಮಾಡುವುದು ನ್ಯಾಯವಾಗಲಾರದು. ನಮ್ಮ ಪ್ರಿಯ ತಮ್ಮನ ಮರಣಮುದ್ರೆಯಿಂದ ಆ ಪುಟಗಳು ಪವಿತ್ರದ ಗೋಪ್ಯತೆಯಲ್ಲುಳಿಯಲಿ" ಹೀಗನ್ನುತ್ತಾ ಯಾವ ಯಾವ ವಿಷಯವನ್ನು ಎಷ್ಟೆಷ್ಟು ಮಾತಾಡಬೇಕೆಂದು ನಾನು ಬರೆದಿದ್ದ ಪತ್ರದ ಅಂಚಿನಲ್ಲಿ ಬರೆದುಕೊಂಡಿದ್ದ ಟಿಪ್ಪಣಿಗಳನ್ನು ನೋಡಿಕೊಂಡು ಮಾತನ್ನು ಪುನಃ ಪ್ರಾರಂಭಿಸಿದಳು.

"ಮಿ. ಕಾಪರ್ಫೀಲ್ಡ್, ನಮ್ಮ ತಮ್ಮನ ಮರಣಾನಂತರ ಡೋರಾಳ ಲೌಕಿಕ ಪರಿಸ್ಥಿತಿ ಪೂರ್ಣ ಬದಲಾಗಿದೆಯೆಂಬುದನ್ನು ಉಭಯ ಪಕ್ಷದವರೂ ಒಪ್ಪಬೇಕಷ್ಟೆ? ನೀವು ಯೋಗ್ಯರು, ವಿದ್ಯಾವಂತರು, ಪ್ರೇಮದ ಅಭಿರುಚಿಯಿರಬೇಕಾದ ವಯಸ್ಸಿನವರು, ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ....." ಎಂದು ಅವಳು ಹೇಳಿ ಮುಂದುವರಿಯುವ ಮೊದಲು, ಮಿಸ್ ಕ್ಲೇರಿಸಳು ಮಾತಾಡತೊಡಗಿದಳು.
"ಈಗ ನೋಡಿ, ಮಿ. ಕಾಪರ್ಫೀಲ್ಡ್. ಡೋರಾಳ ತಾಯಿಯಿದ್ದಿದ್ದರೆ ಈ ಜವಾಬ್ದಾರಿಯು ನಮ್ಮದಾಗಿರುತ್ತಿರಲಿಲ್ಲ. ಈ ಜವಾಬ್ದಾರಿ ನಮಗೆ ಬಂದದ್ದು ಸ್ಪೆನ್ಲೋನಿಂದಲೋ ಅಥವಾ ಅವನ ಪತ್ನಿಯಿಂದಲೋ? ಇದು ವಿವಾದಾಸ್ಪದವಾದ ಸಂಗತಿ. ಅಂದು ಡೋರಾಳ ನಾಮಕರಣದ ದಿನ, ಇತರರೆಲ್ಲರಿಗೆ ಊಟದ ಆಮಂತ್ರಣವಿತ್ತು ನಮಗೆ ಮಾತ್ರ ಚಹ ಸೇವನೆಗೆ ಆಮಂತ್ರಣವಿತ್ತ ಸಂದರ್ಭದಲ್ಲಿ, ಅವಳ ಊಟದ ಮೇಜು ನಮ್ಮಿಬ್ಬರನ್ನು ಸೇರಿಸಿಕೊಳ್ಳುವಷ್ಟು ವಿಶಾಲವಾಗಿರಲಿಲ್ಲವೆಂಬ ಅವಳ ಬುದ್ಧಿ ಸಂಕುಚಿತತೆಯನ್ನು ಸ್ಪಷ್ಟವಾಗಿ, ನೇರಾಗಿ, ತಿಳಿಸಿಬಿಟ್ಟಿದ್ದಿದ್ದರೆ....." ಎಂದು ಮಾತನ್ನು ಆಡಿ ಪೂರೈಸುವ ಮೊದಲೇ ಮಿಸ್ ಲೆವಿನಳು.....
"ಅಕ್ಕಾ, ನೀನು ಕಳೆದುದನ್ನು ಎತ್ತಿ ಮಾತಾಡಬಾರದು. ನಾವು ನಮ್ಮ ಇಂದಿನ ಕಾರ್ಯಕ್ಕೆ ಗಮನ ಕೊಡೋಣ. ಮಿ. ಕಾಪರ್ಫೀಲ್ಡರು ಡೋರಾಳನ್ನು ಈ ಹಿಂದಿನಿಂದಲೇ ಪ್ರೀತಿಸಿ, ಪರಿಚಯ ಬೆಳೆಸಿಕೊಂಡು, ಅವರೊಳಗಿನ ದಾಂಪತ್ಯ ಪ್ರತಿಜ್ಞೆಯನ್ನು ನಡೆಸಿಕೊಂಡಿರುತ್ತಾರೆ. ವಕೀಲ ಮಿ. ಟ್ರೇಡಲ್ಸರೂ ನಾವೂ ಸೇರಿ ಆ ಪ್ರತಿಜ್ಞೆಯು ಸಿಂಧುವಾಗತಕ್ಕದ್ದೇ ಅದನ್ನು ಕುರಿತು ಪುನರಾಲೋಚನೆ, ತಿದ್ದುಪಡಿ ಏನಾದರೂ ಆಗತಕ್ಕದ್ದಿದೆಯೇ (ಇಷ್ಟುಹೇಳಿ, ಪತ್ರದ ಅಂಚಿನ ಟಿಪ್ಪಣಿಯನ್ನು ನೋಡಿಕೊಂಡು) ಎಂದು ನೋಡಿಕೊಂಡು, ನಮ್ಮ ಕಡೆಯ ನಿರ್ಧಾರ, ವ್ಯವಸ್ಥೆ ಏನೆಂಬುದನ್ನು ನಿಶ್ಚೈಸೋಣ" ಅಂದಳು.

ಈಗಲೇ ನಾನು ಎರಡು ಮಾತುಗಳನ್ನು ಆಡಿಬಿಡುವುದು ಉಚಿತವೆಂದು ನನಗೆ ತೋರಿ –

"ಮಿಸ್ ಲೆವಿನರಂದದ್ದು ಸರಿ, ಸಂಪೂರ್ಣ ಸರಿ. ನನ್ನ ಅನುರಾಗವು ಸ್ಥಿರವಾದುದು. ಅಷ್ಟು ತಿಳಿದೇ ಡೋರಾಳು ತನ್ನ ಒಪ್ಪಿಗೆಯನ್ನು ಇತ್ತಿದ್ದಾಳೆ. ಬಾಕಿ ವಿಷಯಗಳನ್ನು – ಅಂದರೆ, ನಮ್ಮಿಬ್ಬರ ಮುಂದಿನ ಸಂಬಂಧದ ವಿಷಯವನ್ನು, ನೀವುಗಳು ನಿಧಾನವಾಗಿ ಆಲೋಚಿಸಲು ಅವಕಾಶ ತೆಗೆದುಕೊಳ್ಳುತ್ತಿರುವಾಗಲೇ ನಾನು ಅವಳನ್ನು ಆಗಿಂದಾಗ್ಗೆ ನೋಡಿ ಮಾತಾಡಿ ಹೋಗಲು ನನಗೆ ಅವಕಾಶ ದೊರಕಬಹುದೇ ಎಂಬುದನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ಹೇಳಿಕೊಂಡೆನು.

ಮಿಸ್ ಲೆವಿನಳು ಮೃದುವಾಗಿ – ದಿವಂಗತ ಮಿ. ಪಿಡ್ಜರರ ದಿವ್ಯ ಸ್ಮರಣೆಯನ್ನು ತಂದುಕೊಂಡೇ ಎಂಬಂತೆ –
"ಅನುರಾಗವು – ಸಂಸ್ಕಾರಹೊಂದಿದ ಅನುರಾಗವು, ಪ್ರೇಮದ ಪರಮೋನ್ನತಿಯ ದಾಸ್ಯ ಭಾವದ ಅನುರಾಗವು, ಅಷ್ಟೊಂದು ಸುಲಭವಾಗಿ ಲಕ್ಷ್ಯಕ್ಕೆ ಬರತಕ್ಕದ್ದಲ್ಲ. ಮನುಷ್ಯನು ತನ್ನ ಹೃದಯದ ಅಂತರಾಳವನ್ನು ಅರಿಯಲಾರನು – ಅರಿಯುವವರಿದ್ದಾರೆ, ಅರಿತವರಿದ್ದರು (ಈಗ ನನಗೆ ಮಿ.ಪಿಡ್ಜರರ ನೆನಪು ಬಂತು). ಆದರೆ ಎಲ್ಲರಿಂದಲೂ ಅದು ಸಾಧ್ಯವಿಲ್ಲ. ವಾಡಿಕೆಯಾಗಿ ತೋರ್ಪಡುವ ಅನುರಾಗವು ಕೇವಲ ಛಾಯೆ ಮಾತ್ರ. ನಿಜವಾದ ಅನುರಾಗವು ಮೃದುವಾದುದು, ತೀಕ್ಷ್ಣವೂ ಆದುದು. ಮುನಿಗಳಿಗೆ ಮಾತ್ರ ಅರ್ಥವಾಗತಕ್ಕಂಥಾದ್ದು. ಅದು ಶಬ್ದರಹಿತವು, ಅಂತರಂಗದಲ್ಲಿ ಶಾಶ್ವತವಾಗಿ ಸ್ಫುರಿಸುತ್ತಿದ್ದು ಅನುಕೂಲ ಪರಿಸ್ಥಿತಿಯಲ್ಲಿ ಮಾತ್ರ ಹೊರ ಹೊಮ್ಮಿ ಪ್ರಕಾಶಿಸುವ ಹೃದಯದ ದಿವ್ಯ ಪ್ರಭೆಯೇ ಅದು. ಶುದ್ಧ ಅನುರಾಗವು ಅನೇಕ ವೇಳೆ ಅಂತರಂಗದಲ್ಲೆ ಇದ್ದು, ಪ್ರಕಾಶಕ್ಕೆ ಬರಲು ತಕ್ಕದಾದ ಅವಕಾಶ ಸಿಗದೇ ಒಂದು ಜನ್ಮವನ್ನೇ ಕಳೆಯಿಸಿ, ಯಾರಿಗೂ ಗೋಚರಿಸದೆ ಮಾಯವಾಗುವುದೂ ಇದೆ" ಅಂದಳು ಮಿಸ್ ಲೆವಿನಳು.

ಶುದ್ಧ ಅನುರಾಗದ ಅನುಭವವನ್ನು ಮಿ. ಪಿಡ್ಜರ್ ಮತ್ತು ಮಿಸ್ ಲೆವಿನ – ಇವರಿಬ್ಬರು ಮಾತ್ರ ಕಂಡಿರಬಹುದೆಂದೂ ಮಿ. ಪಿಡ್ಜರರೂ ಸಹ ತಮ್ಮ ಅನುರಾಗವನ್ನು ಪ್ರಕಾಶಕ್ಕೆ ಬಿಡದೆ ತಮ್ಮ ಜನ್ಮವನ್ನು ದಾಟಿರಬಹುದೆಂದೂ ಆ ಮಾತುಗಳನ್ನು ಕೇಳುತ್ತ, ನನಗೆ ತೋರತೊಡಗಿತು. ಈ ವಿಧದ ವಾಕ್ಯ ಸರಣಿಯಲ್ಲಿ ನನ್ನ ಅನುರಾಗ ಹೇಗೆ ಗ್ರಹಿಸಲ್ಪಡಬಹುದು ಎಂಬುದನ್ನು ಊಹಿಸುತ್ತಾ ನಾನು ಹೆದರತೊಡಗಿದೆ. ಆದರೂ ನನ್ನ ಅನುರಾಗವನ್ನು ಕುರಿತಾಗಿ ನಾನೂ ಎರಡು ಮಾತುಗಳನ್ನಾಡಿದೆನು. ಮಿಸ್ ಲೆವಿನಳ ಅಭಿಪ್ರಾಯವನ್ನು ಸಂಪೂರ್ಣ ಅನುಮೋದಿಸಿದೆ. ಅನಂತರ ನನ್ನ ಅನುರಾಗವೂ ಅವಳು ತಿಳಿದು ಚಿತ್ರಿಸಿದಂಥಾದ್ದೇ ಎಂದು ಸ್ಪಷ್ಟಪಡಿಸಲು ಪ್ರಯತ್ನಿಸಿದೆ. ನಾನು ಏನೆಲ್ಲಾ ಮಾತಾಡುತ್ತಿದ್ದೇನೆಂದು ವಿಶೇಷ ಗ್ರಹಿಸಿಕೊಳ್ಳುವ ಸ್ಥಿತಿಯಲ್ಲೂ ನಾನಿರಲಿಲ್ಲ. ಅಂತೂ ಮಾತಾಡಿದುದರಿಂದ ದುಷ್ಪರಿಣಾಮ ಆಗಲಿಲ್ಲವೆಂಬುದನ್ನು ತಿಳಿಯತೊಡಗಿದೆ. ಏಕೆಂದರೆ, ನನ್ನ ಮಾತುಗಳನ್ನು ಪೂರ್ಣ ಕೇಳಿ ಅರ್ಥಮಾಡಿಕೊಳ್ಳುವಷ್ಟೂ ಮಿಸ್ ಲೆವಿನಳಿಗೆ ವ್ಯವಧಾನವಿರಲಿಲ್ಲ. ತನಗೆ ದೊರಕಿದ್ದ ಅಂದಿನ ಸಂದರ್ಭದಲ್ಲಿ ತನ್ನ ಅನುಭವಗಳನ್ನು ಮೆರೆಯಿಸಿ, ತನ್ನ ಅಧಿಕಾರವನ್ನು ಹೃದಯ ವೇದ್ಯವಾಗುವಂತೆ ಚಲಾಯಿಸಬೇಕೆಂಬ ಲವಲವಿಕೆ ಮಿಸ್ ಲೆವಿನಳಿಗಿದ್ದಂತೆ ತೋರಿತು. ನನಗೂ ಅವಳನ್ನುವ ವಿಷಯಕ್ಕೂ ಸಂಬಂಧವಿಲ್ಲದಿದ್ದಂತೆ, ನನಗಿಂತಲೂ ಮೇಲಾಗಿ ವಕೀಲ ಟ್ರೇಡಲ್ಸನು ಅದನ್ನು ಅರ್ಥಮಾಡಬಲ್ಲನೆಂಬಂತೆ, ಅವನನ್ನು ನೋಡುತ್ತಾ ಮಿಸ್ ಲೆವಿನಳು ಪುನಃ ಮಾತಾಡಲಾರಂಭಿಸಿದಳು –
"ನಾನಂದ ಮಾತು ನಿಮಗೆ ಅರ್ಥವಾಗಬಹುದಲ್ಲವೇ, ಮಿ. ಟ್ರೇಡಲ್ಸ್?" ಅಂದಳು.
"ಹೌದು, ನಿಮ್ಮ ಮಾತು ಸರಿ, ಅನುರಾಗವು ಅವಕಾಶವನ್ನು ಕಾಯುತ್ತಿರುವುದೆಂಬುದರಲ್ಲಿ ಏನೂ ಸಂಶಯವಿಲ್ಲ. ಡೆವೊನ್ಷಯರಿನ ಹತ್ತನೇ ನಂಬ್ರದ ಮನೆಯ ಸೋಫಿಯನ್ನು ನಾನು ಬಹುವಾಗಿ ಪ್ರೀತಿಸಿ, ಮದುವೆಯಾಗಲು ನಮ್ಮೊಳಗೆ ಒಪ್ಪಂದವಾಗಿದೆ. ಆದರೆ, ನಾವು ಅನುಕೂಲ ಪರಿಸ್ಥಿತಿಗಳನ್ನು ಕಾಯುತ್ತಾ ಇದ್ದೇವೆ. ಇನ್ನಷ್ಟು ಕಾಲ ಕಾದಿರಲೂ ನಾವು ಸಿದ್ಧರಾಗಿದ್ದೇವೆ. ಹೀಗೆ ಕಾಯುವುದೂ ಒಂದು ಆನಂದದ ಸಂಗತಿಯಲ್ಲವೇ?" ಅಂದನು ಟ್ರೇಡಲ್ಸನು.
"ಆದ್ದರಿಂದಲೇ ನಾವಿಬ್ಬರೂ – ಅಲ್ಲವೇ ಕ್ಲೇರಿಸಾ" ಎಂದು ಹೇಳಿ ಅಕ್ಕನನ್ನು ನೋಡಿ, ಹೌದೆನ್ನುವಂತೆ ಅವಳು ತಲೆದೂಗಿದ ಮೇಲೆ –
"ಇಂಥ ಅನುರಾಗವನ್ನು ನಮ್ಮ ಪ್ರತ್ಯಕ್ಷ ಪರೀಕ್ಷೆಗೆ ಒಳಪಡಿಸಿ, ನಮ್ಮ ಪರೀಕ್ಷೆಯ ಫಲಿತಾಂಶವನ್ನು ನಮ್ಮ ಅನುಭವದ ಒರೆಯಲ್ಲಿ ಹಚ್ಚಿನೋಡಿ, ಪುನಃ ಪುನಃ ಶೋಧನೆ ಮಾಡಿ, ಪರಿಶುದ್ಧ ಪ್ರೇಮವೇ ಅದೆಂಬುದು ನಮಗೆ ತಿಳಿದು ಬಂದನಂತರ, ಉಭಯಪಕ್ಷಗಳ ಮುಂದಿನ ಮಾರ್ಗವನ್ನು ನಿರ್ಧರಿಸೋಣ" ಅಂದಳು ಮಿಸ್ ಲೆವಿನ.

"ಆ ದಿನ ನನ್ನ ತಮ್ಮನ ಆ ಅನ್ಯಾಯವೊಂದು ನಡೆಯದಿರುತ್ತಿದ್ದರೆ ನಾವು ನಮ್ಮ ತಮ್ಮನ ಕುಟುಂಬದವರಲ್ಲಿ ಮಿಳಿತವಾಗಿ, ಡೋರಾಳನ್ನು ಕುರಿತಾಗಿ ನಮಗಿರುವ ಈಗಿನ ಅನುಭವಕ್ಕಿಂತ ಹೆಚ್ಚಿನ ಅನುಭವವನ್ನು ಪಡೆದಿದ್ದು, ಅವಳ ಹೃದಯದ ಸತ್ಯ ಸ್ಥಿತಿಯ ಪರಿಚಯವು ನಮಗೆ ಆಗಿರುತ್ತಿತ್ತು. ಹೃದಯಕ್ಕೆ ಸಂಬಂಧಿಸಿದ ವಿಷಯದಲ್ಲಿ ನಾವು ಎಷ್ಟು ಎಚ್ಚರದಿಂದಿದ್ದರೂ ಸಾಲದು" ಅಂದಳು ಮಿಸ್ ಕ್ಲೇರಿಸಾ.
"ಈ ಎಲ್ಲಾ ವಿಷಯವನ್ನೂ ಗ್ರಹಿಸಿ ನಾವು ನಿಮಗೆ ಕೆಲವು ಆನುಕೂಲ್ಯಗಳನ್ನು ಒದಗಿಸಿ ಕೊಡುವೆವು. ಆದರೆ ಈ ವಿಧದ ಸಹಾಯದಿಂದ ನಾವು ಯಾವ ವಿಧದಲ್ಲೂ ಪರಸ್ಪರ ಬದ್ಧರಾಗಿರುತ್ತೇವೆಂದು ನೀವು ಗ್ರಹಿಸಿಕೊಳ್ಳಕೂಡದು" ಎಂದು ಲೆವಿನಳು ಹೇಳಿ, ತನ್ನ ಕೈಯ್ಯಲ್ಲಿದ್ದ ಪತ್ರದ ಟಿಪ್ಪಣಿಗಳಲ್ಲಿನ ತನ್ನ ಭಾಗ ಮುಗಿಯಿತೆಂಬಂತೆ ಆ ಪತ್ರವನ್ನು ಅಕ್ಕನ ಕೈಗೆ ಕೊಟ್ಟಳು. ಮಿಸ್ ಕ್ಲೇರಿಸಳು ಪತ್ರದ ಟಿಪ್ಪಣಿಗಳನ್ನು ಒಮ್ಮೆ ನೋಡಿ ಮಾತಾಡಲಾರಂಭಿಸಿದಳು –
"ಮಿ. ಕಾಪರ್ಫೀಲ್ಡ್, ನೀವು ಪ್ರತಿ ಆದಿತ್ಯವಾರದ ದಿನ ನಮ್ಮಲ್ಲಿಗೆ ಮಧ್ಯಾಹ್ನದ ಭೋಜನಕ್ಕೆ – ಮೂರು ಘಂಟೆಗೆ, ಬರಬೇಕು. ಮತ್ತು ವಾರದ ಇನ್ನೊಂದು ದಿನ, ನಿಮಗೆ ಅನುಕೂಲವಿದ್ದ ದಿನ, ಸಂಜೆ ಐದು ಘಂಟೆಗೆ ಚಹ ಕುಡಿಯಲೂ ಬರಬೇಕು. ನಿಮಗೆ ನಾವು

ಒದಗಿಸುವ ಅನುಕೂಲಗಳು ಇವುಗಳೇ. ಇನ್ನು, ಕೆಲವು ಸಂದರ್ಭಗಳಲ್ಲಿ ಊಟಕ್ಕೂ ಚಹ ಸೇವನೆಗೂ ವಿಶೇಷ ಸಂದರ್ಭಗಳೆಂದು ನಿಮ್ಮನ್ನು ಆಮಂತ್ರಿಸಲೂಬಹುದು. ಈ ವಿಧದಿಂದ ನೀವು ಡೋರಾಳ ಪರಿಚಯವನ್ನು ವೃದ್ಧಿಗೊಳಿಸಿಕೊಳ್ಳಬಹುದು. ಮುಂದಿನ ಪರಿಸ್ಥಿತಿಗಳಿಗನುಸರಿಸಿ ನಾವು ಉಭಯಪಕ್ಷದವರು ವರ್ತಿಸೋಣ" ಅಂದಳು ಕ್ಲೇರಿಸ.

ನಾವು ಈ ಮಾತುಗಳನ್ನಾಡುತ್ತಿದ್ದಾಗಲೇ ಮಧ್ಯೆ ಮಧ್ಯೆ ಜಿಪ್ಪ್ ಬೊಗಳುತ್ತಿದ್ದಂತೆಯೂ ಅದರ ಬಾಯಿಯನ್ನು ಬಿಗಿ ಹಿಡಿದು ಮುಚ್ಚುತ್ತಿದ್ದಂತೆಯೂ ಒಳಗಿನಿಂದ ಶಬ್ದ ಕೇಳಿ ಬರುತ್ತಿತ್ತು. ಡೋರಾಳು ಅಡಗಿ ಕುಳಿತು ನಮ್ಮ ಮಾತುಗಳನ್ನು ಕೇಳುತ್ತಿರಬೇಕೆಂದು ಊಹಿಸಿದೆನು.

ಅನಂತರ ನನ್ನನ್ನು ಮಿಸ್ ಲೆವಿನಳು ಪಕ್ಕದ ಒಂದು ಕೋಣೆಗೆ ಕರೆದುಕೊಂಡು ಹೋಗಿ, ಅಲ್ಲಿ ನನ್ನನ್ನು ಬಿಟ್ಟು, ತಾನು ಹೊರಟು ಹೋದಳು. ಆ ಕೋಣೆಯಲ್ಲಿ ಡೋರಾ ಇದ್ದಳು ಮತ್ತು ಜಿಪ್ಪ್ ತನ್ನ ಬಾಯಿಗೆ ಬಟ್ಟೆ ಬಿಗಿಸಿಕೊಂಡು ಒಂದು ಮೂಲೆಯಲ್ಲಿ ಮಲಗಿತ್ತು.

ತನ್ನ ತಂದೆಯು ಮೃತಪಟ್ಟಿದ್ದುದರ ಸೂಚಕವಾದ ಕಪ್ಪು ಬಟ್ಟೆಯ ಉಡುಪುಗಳನ್ನು ಧರಿಸಿದ್ದ ಸುಂದರಿ ಡೋರಾ ಈ ಕರಿಬಟ್ಟೆಗಳನ್ನು ಧರಿಸಿ ಎದುರು ಬಂದಾಗ ಅಲೌಕಿಕ, ಅಪ್ರತಿಮ ಸುಂದರಿಯಾಗಿಯೇ ವಿರಾಜಿಸಿದಳು. ನನ್ನನ್ನು ಕಂಡೊಡನೆ ಆನಂದ ಬಾಷ್ಪಗಳನ್ನು ಸುರಿಸುತ್ತಾ ಆಲಂಗಿಸಿ, ಚುಂಬಿಸಿ, ಅತ್ತಳು. ನನಗೆ ಮಾತೇ ಹೊರಡದಂತಾಗಿತ್ತು.
"ಡೋರಾ, ನನ್ನ ಸರ್ವಸ್ವವೇ – ನನ್ನ ಸರ್ವಸ್ವವಲ್ಲವೇನೇ ನೀನು?" ಎಂದು ಆನಂದದಿಂದ ನಾನಂದೆ.
"ಹೌದು – ಆದರೆ, ನೀನು ಬಹು ಕ್ರೂರಿ. ನನ್ನನ್ನು ಹೀಗೊಂದು ಹೆದರಿಸಬಹುದೇ ನೀನು?" ಎಂದು ಕೇಳಿದಳು ಡೋರಾ.
"ನಾನು ನಿನ್ನನ್ನು ಹೆದರಿಸಿದ್ದು ಯಾವಾಗ್ಗೆ ಡೋರಾ? ನಿನ್ನ ಅತ್ತೆಯವರು ನಿನ್ನನ್ನು ಹೇಗೆ ಸಾಕುತ್ತಿದ್ದಾರೋ ಎಂದು ನಾನೇ ಹೆದರಿಕೊಂಡಿದ್ದೆ!"
"ಪ್ರಶ್ನೆಗಳೆಲ್ಲ ಈಗ ಬೇಡ. ಅವನನ್ನು ಓಡಿಸು, ಅವನನ್ನೇಕೆ ನೀನು ಕರೆದುಕೊಂಡು ಬಂದದ್ದು?" ಎಂದು ತುಟಿಗಳನ್ನು ಉದ್ದ ಮಾಡಿ ಕೇಳಿದಳು.
"ಯಾರನ್ನೇ ಓಡಿಸುವುದು, ಕಂದಾ?"
"ನಿನ್ನ ಜತೆಯಲ್ಲಿ ತಂದಿರುವ ಮುಳ್ಳು ಹಂದಿಯನ್ನು, ಅವನನ್ನು ಕಂಡರೆ ಹೆದರಿಕೆಯಾಗುತ್ತದೆ."
"ಯಾರನ್ನು? ನನ್ನ ಜತೆಯಲ್ಲಿ ಬಂದ ಟ್ರೇಡಲ್ಸನನ್ನೆ?"
"ಹೌದು, ಜತೆಯಲ್ಲಿ ಬಂದ ಹಂದಿಯನ್ನು."
"ಹಾಗನ್ನಬಾರದು, ಡೋರಾ. ಅವನೊಬ್ಬ ಬಹು ಯೋಗ್ಯ ಸ್ನೇಹಿತನು. ನಾಡಿದ್ದು ಬರುವಾಗ ಅವನನ್ನು ಬಿಟ್ಟು ಬರುತ್ತೇನೆ, ಬೇಕಾದರೆ ನನ್ನ ಅತ್ತೆಯನ್ನು ಕರೆದುಕೊಂಡು ಬರುತ್ತೇನೆ."
"ನನಗೆ ಇನ್ನು ಯಾರು ಬರುವುದೂ ಬೇಡ, ನೀನೊಬ್ಬ ಬಂದರೆ ಸಾಕು" ಎಂದು ಹೇಳುತ್ತಾ ಡೋರಾ ನನಗೆ ಮುತ್ತು ಕೊಡುತ್ತಾ ಮರುಳುಮಾಡಿ, ಮುಂದೆ ಮಾತಾಡದಂತೆ ಮಾಡಿಬಿಟ್ಟಳು.

ಸ್ವಲ್ಪ ಹೊತ್ತು ಹೀಗೆ ನಾನೂ ಡೋರಾಳೂ ಸಂತೋಷವಾಗಿ ಅನೇಕ ಸಣ್ಣ ಪುಟ್ಟ ವಿಷಯಗಳನ್ನು ಮಾತಾಡುತ್ತಾ ಕಾಲ ಕಳೆದದ್ದೇ ಗೊತ್ತಾಗಲಿಲ್ಲ. ಅಷ್ಟರಲ್ಲಿ ಮಿಸ್ ಸ್ಪೆನ್ಲೋ ಸಹೋದರಿಯರು (ಅವರು ನಮಗಾಗಿ ಗೊತ್ತು ಮಾಡಿ ಬಿಟ್ಟಿದ್ದ ಸಮಯ ದಾಟಿರಬಹುದಾದ್ದರಿಂದ, ಎಂದು ನಾನು ಊಹಿಸುವಂತೆ) ನಮ್ಮ ಕೋಣೆಯನ್ನು ಪ್ರವೇಶಿಸಿದರು. ಅಲ್ಲಿ ನಮಗಿಬ್ಬರಿಗೂ ಮುಂದಿನ ಉಪಯೋಗಕ್ಕಾಗಿ ಕೆಲವು ಬುದ್ಧಿವಾದಗಳನ್ನು ಹೇಳಿದರು. ನನ್ನ ಅತ್ತೆ ಅವರ ಮನೆಗೆ ಬರಬೇಕೆಂದು ಆಮಂತ್ರಣವಿತ್ತರು. ಅಷ್ಟೂ ಅಲ್ಲದೆ, ತಾವೂ ಸಹ ನಮ್ಮ ಮನೆಗೆ ಬರುವುದಾಗಿಯೂ ಸಂತೋಷದಿಂದ ಆಶ್ವಾಸನೆಯಿತ್ತರು.

ಅವರಿಬ್ಬರನ್ನೂ ತುಂಬಾ ವಂದಿಸಿ ಟ್ರೇಡಲ್ಸನೂ ನಾನೂ ನಮ್ಮ ನಮ್ಮ ಮನೆ ಕಡೆಗೆ ಹೊರಟೆವು.

ಆ ಸಹೋದರಿಯರು ನನಗೆ ಕೊಟ್ಟಿದ್ದ ಆನುಕೂಲ್ಯಗಳನ್ನು ನಾನು ತಪ್ಪದೆ ಪಡೆದುಕೊಳ್ಳುತ್ತಾ ಬಂದೆ. ನನ್ನ ಅತ್ತೆ ಅವರ ಮನೆಗೆ ಹೋಗಿ ಬರುವುದೂ ಆ ಸಹೋದರಿಯರು ನಮ್ಮ ಮನೆಗೆ ಬಂದು ಹೋಗುವುದೂ ನಡೆಯಿತು. ಈ ರೀತಿಯಿಂದ ನಮ್ಮ 'ಉಭಯಪಕ್ಷ'ದೊಳಗೆ ಸ್ನೇಹ ಸೌಹಾರ್ದ ಬೆಳೆಯತೊಡಗಿತು. ಅತ್ತೆಗೂ ಆ ಸಹೋದರಿಯರಿಗೂ ಸರಿಬಾರದೆಂದು ನಾನು ಸ್ವಲ್ಪ ಅಂಜುತ್ತಿದ್ದರೂ (ಅತ್ತೆ ನನಗಾಗಿ ಎಷ್ಟು ಕಷ್ಟ ಸಹಿಸಲು ತಯಾರಿದ್ದುದರಿಂದ) ಈ ಸೌಮ್ಯ ಸ್ವಭಾವದ, ಸಾತ್ವಿಕ, ಸಹೋದರಿಯರೊಡನೆ, ಅತ್ತೆ ಬಹು ಸ್ವಲ್ಪ ಸಮಯದಲ್ಲೇ ತುಂಬಾ ಸಲಿಗೆ, ಸ್ನೇಹಗಳನ್ನೇ ಬೆಳೆಸಿದಳು.

ನಾನು ಡೋರಾಳ ಮನೆಗೆ ಹೋಗಿ ಬರುತ್ತಾ ದಿನ ಕಳೆದ ಹಾಗೆಲ್ಲ ಅವಳಿಗೆ ಮನೆ ಕೆಲಸಗಳನ್ನು ಸ್ವಲ್ಪ ಸ್ವಲ್ಪ ಕಲಿಸಬೇಕೆಂದು ಇಚ್ಛಿಸತೊಡಗಿದೆನು. ಟ್ರೇಡಲ್ಸನ ಸೋಫಿಯನ್ನು ಡೋರಾಳೊಂದಿಗೆ ಹೋಲಿಸಿ ನೋಡುತ್ತಾ ಸೋಫಿಯ ಗುಣ, ನಡತೆ, ಕಾರ್ಯ

ಕೌಶಲಗಳನ್ನು ಕಂಡು ಅವಳಂತೆಯೇ ಡೋರಾಳೂ ಆಗಬೇಕೆಂದು ಬಯಸಿದೆನು. ಈ ಇಬ್ಬರ ಮಾನಸಿಕ ಬೆಳವಣಿಗೆಗಳು ಒಂದೊಂದು ವಿಧವಾಗಿದ್ದುವೆಂದು ತಿಳಿದೆನು. ಸೋಫಿಯೊಬ್ಬಳೇ ಅಷ್ಟೊಂದು ದೊಡ್ಡ ಅವಳ ಕುಟುಂಬದ ದಿನ ನಿತ್ಯದ ಎಲ್ಲಾ ಕೆಲಸವನ್ನು ಬಹು ಚೊಕ್ಕಟವಾಗಿ, ಚುರುಕಾಗಿ ಮಾಡಿ ಬರುತ್ತಿದ್ದಳು. ಅವಳಿಗೆ (ಡೋರಾಳಿಗೆ ಬರುತ್ತಿದ್ದಂತೆ) ಸಂಗೀತ, ಚಿತ್ರ ಲೇಖನ ಬರುತ್ತಿರಲಿಲ್ಲ. ಸೋಫಿಗೆ ಈ ವಿಧದ ಕುಶಲವಿದ್ಯೆಗಳು ಬರುತ್ತಿರಲಿಲ್ಲವಾದರೂ ಅವಳು ಸದಾ ಹಸನ್ಮುಖಿಯಾಗಿರುತ್ತಾ ಸಂತುಷ್ಟಿಯಿಂದ ಸಂಸಾರದ ಕಾಯಕಷ್ಟದ ಕೆಲಸಗಳನ್ನೆಲ್ಲ ಮಾಡಿ ಬರುತ್ತಿದ್ದಳು. ಅವಳು ಡೋರಾಳಷ್ಟು ಸುಂದರಿಯಲ್ಲ. ಆದರೆ ಅವಳು ಮಾಡಿದ ಕಾರ್ಯಗಳೆಲ್ಲವೂ ಸುಂದರವಾಗಿಯೇ ಇರುತ್ತಿದ್ದುವು. ಈ ಎಲ್ಲಾ ವಿಷಯಗಳನ್ನು ನಾನು ಟ್ರೇಡಲ್ಸನಿಂದ ಆಗಿಂದಾಗ್ಗೆ ವಿಚಾರಿಸಿ, ಇತರ ಮಾತುಗಳ ಮಧ್ಯೆ ಸಂಗ್ರಹಿಸಿಕೊಂಡಿದ್ದೆ.

ಇನ್ನು ಡೋರಾಳನ್ನು ಕುರಿತು ನನ್ನ ವಿಮರ್ಶೆ ಹೀಗಿತ್ತು: ಡೋರಾ ಬಹು ಸುಂದರಿ. ಮನಸ್ಸು ನಿರ್ಮಲವಾದುದುದು. ನಡೆನುಡಿಗಳಲ್ಲಿ ಹಸುಳೆಯಷ್ಟೇ ಸರಳತೆ. ಚಿತ್ರಕಲೆ ಅಭ್ಯಸಿಸಿದ್ದವಳು ಡೋರಾ. ಅಲಂಕರಿಸಿಕೊಂಡು ಗಿಟಾರ್ ವಾದ್ಯವನ್ನು ಬಾರಿಸುತ್ತಾ ಮೃದು ಮಧುರಗಾನ ಮಾಡಿದಾಗಲಂತೂ ಅವಳಷ್ಟು ಸುಂದರಿ, ದಿವ್ಯ ತೇಜಸ್ವಿ, ಮನೋಹರಿ ಮತ್ತೊಬ್ಬಳಿಲ್ಲ. ಡೋರಾಳ ಪೂರ್ಣತೆಗೆ ಬೇಕಾದ ಒಂದು ಕೊರತೆಯೆಂದರೆ ಗೃಹಕೃತ್ಯದ ಅಭ್ಯಾಸ ಮಾತ್ರ. ಇನ್ನು ಲೆಕ್ಕಾಚಾರದ ಅನುಭವವೂ ಅವಳಿಗೆ ಸ್ವಲ್ಪ ಬೇಕಾಗಿತ್ತು. ಇವೆರಡು ಲೋಪವಲ್ಲ. ಅವಳಲ್ಲಿ ಅಂತರ್ಗತವಾಗಿದ್ದು ಪ್ರಚೋದಿಸಲ್ಪಡದೆ ಉಳಿದ ಶಕ್ತಿಗಳು ಮಾತ್ರ. ಈ ಹೋಲಿಕೆಯನ್ನು ಮಾಡುತ್ತಾ ಉತ್ತಮ ಪತ್ನಿಯಾಗಲು ಡೋರಾ ಸೋಫಿಗಿಂತಲೂ ಮೇಲೆಂದು ನಾನು ನಿಶ್ಚೈಸಿಕೊಂಡು ಹೆಮ್ಮೆಪಡುತ್ತಿದ್ದೆನು.

ಡೋರಾಳ ಪರಿಚಯ ಬೆಳೆಯುತ್ತಾ ಹೋದ ಹಾಗೆಲ್ಲ ಅವಳಲ್ಲಿದ್ದ ಕೆಲವೇ ಅವಗುಣಗಳಿಗೆ ಇರುವ ಕಾರಣಗಳನ್ನೂ ಕಂಡು ಹಿಡಿದೆನು. ಡೋರಾಳು ಆಟವಾಡಲಿದ್ದ ಒಂದು ಚಂದದ ಗೊಂಬೆಯಂತೆಯೇ ಅವಳನ್ನು ಕಂಡವರೆಲ್ಲಾ ಅವಳೊಡನೆ ವರ್ತಿಸುತ್ತಿದ್ದರು. ಹೀಗೆ ಮಿ. ಸ್ಪೆನ್ಲೋರವರು, ಈಗ ಅವರ ತಂಗಿಯರೂ ಅವಳನ್ನು ಸಾಕಿದ್ದೂ ಬೆಳೆಸಿದ್ದೂ ಇದೇ ಭಾವನೆಯಿಂದ! ನಾನೂ ಸಹ ಮೊದಮೊದಲು ಡೋರಾಳನ್ನು ಅವರೆಲ್ಲರು ಕಂಡಿದ್ದಂತೆಯೇ – ಗೊಂಬೆಯನ್ನು ಕಂಡ ಹಾಗೆಯೇ, ಕಂಡು, ಪ್ರೀತಿಸಿ, ಪೂಜಿಸಿ ಬಂದಿರುವೆನು. ಇದನ್ನು ದಿನ ಹೋದಂತೆ ತಿಳಿದುಕೊಂಡೆನು. ಇಷ್ಟು ತಿಳಿವಳಿಕೆ ಬಂದನಂತರ, ನಮ್ಮ ಮುಂದಿನ ಸಂಸಾರ ಸಾಗೋಣದರ ದೃಷ್ಟಿಯಿಂದ ನಾನು ಡೋರಾಳಿಗೆ ಗೃಹಕೃತ್ಯವನ್ನು ಕುರಿತಾಗಿ ತರಬೇತು ಮಾಡಲು ಪ್ರಯತ್ನಿಸಿದೆ.

ನಾವು ಸ್ವಂತ ಮನೆ, ಸ್ವಂತ ಸಂಸಾರಗಳಿಂದ ಬದುಕುವಾಗ ಅಂಗಡಿ ವ್ಯಾಪಾರ ಮಾಡಬೇಕಾದ್ದರಿಂದ ಗೃಹಕೃತ್ಯದ ಪ್ರಾರಂಭದ ಬೋಧನೆಯಾಗಿ ಲೆಕ್ಕವನ್ನು ಹೇಳಿಕೊಡಲೂ ಅಂಗಡಿ ಲೆಕ್ಕಗಳನ್ನು ಇಡುವ ಕ್ರಮಗಳನ್ನು ಹೇಳಿಕೊಡಲೂ ಪ್ರಾರಂಭಿಸಿದೆನು. ನನ್ನ ಉದ್ದೇಶ, ಪರಿಶ್ರಮ, ಕರ್ತವ್ಯಗಳನ್ನೆಲ್ಲ ಡೋರಾಳು ಬಹು ಸುಲಭವಾಗಿ, ಹಗುರವಾಗಿ ಹಾರಿಸಿಬಿಟ್ಟಳು. ಅವಳ ತರ್ಕ ಈ ತೆರನಾಗಿತ್ತು –
"ಮಾರುವ ಕೆಲಸವನ್ನು ಅಂಗಡಿಯವನೇ ಮಾಡುತ್ತಿರುವಾಗ ಆ ಸಂಬಂಧದ ಲೆಕ್ಕವನ್ನೂ ಅವನು ಹೇಗೂ ಇಡಬೇಕಷ್ಟೆ. ಹೀಗಿರುವಾಗ ಅವನು ಮಾಡಬೇಕಾದ ಕೆಲಸವನ್ನು ನಾವು ಏಕೆ ಮಾಡಿ ಕಷ್ಟಪಡಬೇಕು?" ಈ ತರ್ಕದ ಕಾರಣವಾಗಿ ನಾನು ಫಕ್ಕನೆ ಡೋರಾಳನ್ನು ಲೆಕ್ಕದಲ್ಲಿ ತರಬೇತು ಮಾಡಲಾರದೆ ಹೋದೆನು. ಕೆಲವೊಮ್ಮೆ ಅವಳೊಡನೆ ಚರ್ಚಿಸಿ ಲೆಕ್ಕದ ಆವಶ್ಯಕತೆಯನ್ನು ಬೋಧಿಸತೊಡಗಿದಾಗ ಅವಳು ನನ್ನನ್ನು ಮುದ್ದಿಟ್ಟು ಮರುಳುಗೊಳಿಸಿ, ಮಾತೆತ್ತದಂತೆ ಮಾಡಿಬಿಡುತ್ತಿದ್ದಳು. ಲೆಕ್ಕವನ್ನು ಬದಿಗಿಟ್ಟೂ ಪಾಕ ಶಾಸ್ತ್ರವನ್ನು ತೆಗೆದುಕೊಂಡಾಗ –
"ಅಡಿಗೆಯವರಿರುವಾಗ ಅವರ ಭಾರವನ್ನು ನಾನು ಹೊರುವುದೇ?" ಎಂದು ಉತ್ತರ ಕೊಟ್ಟು, ನಗಾಡಿ ನನ್ನನ್ನು ಸೋಲಿಸಿಬಿಟ್ಟಳು.

ಈ ವಿಧದ ಒರಟು ಕ್ರಮಗಳಿಂದ ಅವಳನ್ನು ತರಬೇತಿ ಮಾಡುವುದು ಅಸಾಧ್ಯವೆಂದು ಕೊನೆಗೆ ತೋರಿ, ಅವಳಿಗೆ ಗೊತ್ತಿದ್ದ ಸಂಗೀತ, ಚಿತ್ರ, ಮೊದಲಾದವುಗಳ ಮೂಲಕ ತರಬೇತು ಮಾಡಬಹುದಲ್ಲವೆ, ಎಂದು ಸಮಾಧಾನ ತಂದುಕೊಂಡೆನು.

ಆದರೂ ನನ್ನನ್ನು ನನ್ನ ಮನಸ್ಸೇ ಆಗಿಂದಾಗ್ಗೆ ಚಾಳಿಸಿ, ನಾನೂ ಸಹ ಇತರರಂತೆಯೇ ಡೋರಾಳನ್ನು ಒಂದು ಆಟದ ಗೊಂಬೆಯಂತೆ ಬೆಳೆಸಿ ತರುತ್ತಿರುವೆನೆಂದು ತಿಳಿಸುತ್ತಿತ್ತು. ಡೋರಾಳನ್ನು ಕುರಿತು ನನ್ನ ಮನಸ್ಸಿನಲ್ಲಿ ಈ ತೆರನಾದ ಒಂದು ಚಿಕ್ಕ ಚಿಂತೆಯೂ ಉದ್ಭವಿಸಿತ್ತು.

ಅಧ್ಯಾಯ ನಲ್ವತ್ತೆರಡು

ಕುತಂತ್ರ

ಡೋರಾಳನ್ನು ನಾನು ಮದುವೆಯಾಗುವುದರಲ್ಲೂ ಸ್ಪೆನ್ಲೋ ಸಹೋದರಿಯವರು ನಮ್ಮ ಮದುವೆಗೆ ಸಮ್ಮತಿ ಕೊಡುವುದರಲ್ಲೂ ಉಭಯ ಪಕ್ಷದವರಿಗೂ ತುಂಬಾ ಜವಾಬ್ದಾರಿಕೆಯಿದೆಯೆಂಬುದನ್ನು ನಾನು ಸಂಪೂರ್ಣ ಅರಿತಿದ್ದೆನು. ಅಂದರೆ, ನಾನು ಹಣ ಸಂಪಾದಿಸಬೇಕೆಂಬುದನ್ನು ತಿಳಿದಿದ್ದೆ. ಇದಕ್ಕಾಗಿಯೇ ನಾನು ಶೀಘ್ರಲಿಪಿಯನ್ನು ಬಹು ಶ್ರಮಪಟ್ಟು ಅಭ್ಯಾಸಮಾಡುತ್ತಿದ್ದೆನು. ಬಹು ಕಷ್ಟವಾದ ಈ ಶೀಘ್ರ ಲಿಪಿಗಾಗಿ ನಾನು ಎಷ್ಟೊಂದು ಶ್ರಮಪಟ್ಟಿರುತ್ತೇನೆಂಬುದನ್ನು ಬರೆದರೆ ಅದೊಂದು ಹೆಗ್ಗಳಿಕೆಯಾಗಿ ತೋರಬಹುದು. ನಾನು ನನ್ನ ಇತರ ಎಲ್ಲ ವ್ಯಾಸಂಗಗಳಲ್ಲೂ ಹಿಡಿದಿರುವ ಕಾರ್ಯಗಳಲ್ಲೂ ಇದೇ ರೀತಿಯಾಗಿ ಪರಿಶ್ರಮಿಸುತ್ತಾ ಯಶಸ್ವಿಯಾಗಿಯೇ ಮುಂದುವರಿಯುತ್ತಿದ್ದೆನು. ನನ್ನ ಜನ್ಮದತ್ತವಾದ ಗುಣಗಳೂ ಶಕ್ತಿಗಳೂ ವಿಶೇಷವೇನಿರದಿದ್ದರೂ ಹಿಡಿದ ಕೆಲಸವನ್ನು ಎಡೆಬಿಡದೆಯೂ ಮನಃಪೂರ್ವಕವಾಗಿಯೂ ಪರಿಷ್ಕಾರವಾಗಿಯೂ ಮಾಡುವ ಹಟ ನನಗೆ ಸದಾ ಇತ್ತು. ನಾನು ನನ್ನ ಕಾರ್ಯಗಳಲ್ಲಿ ಎಷ್ಟು ಕೃತಕಾರ್ಯನೋ, ಸಾರ್ಥಕ್ಯ ಪಡೆದವನೋ ಆಗಿರುವುದೆಲ್ಲ ಈ ಶಕ್ತಿಯಿಂದ ಎಂದು ನನ್ನ ನಂಬಿಕೆ. ಅಭಿವೃದ್ಧಿ ಶಿಖರವನ್ನು ಏರಲಿರುವ ಏಣಿಗೆ, ಬುದ್ಧಿ ಶಕ್ತಿ ಮತ್ತು ಉತ್ತಮ ಸಂದರ್ಭ ಎಂಬೆರಡು ಸರಳ ತೋಳುಗಳಾದರೆ, ಅವಿಶ್ರಾಂತ ದುಡಿಮೆಯೇ ಆ ಏಣಿಯ ಮೆಟ್ಟಲುಗಳು ಎಂದು ನನ್ನ ಅಭಿಪ್ರಾಯ. ಯಾವ ಕೆಲಸ ಮಾಡುವುದಾದರೂ ಅರೆಮನಸ್ಸಿನಿಂದ ಮಾಡದೆ ನಮ್ಮ ಸಂಪೂರ್ಣ ಶಕ್ತಿ ಮನಸ್ಸುಗಳನ್ನು ಉಪಯೋಗಿಸಿ ಮಾಡಿದರೇನೇ ಮಾಡಿದ ಕೆಲಸ ಪರಿಪೂರ್ಣವಾಗುವುದು. ಈ ಅಭಿಪ್ರಾಯಾನುಸಾರವಾಗಿಯೇ ನಾನು ಡೋರಾಳನ್ನು ಪಡೆಯಲು ಬೇಕಾದ ಅರ್ಹತೆ ಸಂಪಾದನೆಗಾಗಿ ನನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ದುಡಿಯುತ್ತಿದ್ದೆನು. ಆದರೆ ನನ್ನಲ್ಲಿ ಇಂಥ ಗುಣಗಳನ್ನು ಪ್ರಚೋದಿಸಿ, ಸಂದರ್ಭಾನುಸಾರ ಪ್ರಶಂಸಿಸಿ, ಅಗತ್ಯಬಿದ್ದಲ್ಲಿ ತಿದ್ದಿ ಸರಿಪಡಿಸಿ, ಅಭಿವೃದ್ಧಿಗೆ ತಂದವಳು ಏಗ್ನೆಸ್ಸಳು ಎಂದು ನನ್ನ ಅಂತರಾತ್ಮ ಸದಾ ತಿಳಿಯುತ್ತಿತ್ತು.

ಡಾಕ್ಟರ್ ಸ್ಟ್ರಾಂಗರ ಮನೆಗೆ ಮಿ. ವಿಕ್ಫೀಲ್ಡರೂ ಏಗ್ನೆಸ್ಸಳೂ ಬಂದು ಎರಡು ವಾರಗಳ ಕಾಲ ಸುಖವಾಗಿ ಇದ್ದು ಹೋಗಬೇಕೆಂಬ ಏರ್ಪಾಡು ಏಗ್ನೆಸ್ಸಳೂ ನಾನೂ ಕೂಡಿ ಮಾಡಿದ್ದೆವು. ಮಿ. ವಿಕ್ಫೀಲ್ಡರ ಮಾನಸಿಕ ಸ್ಥಿತಿಗೂ ಅವರ ದೇಹಾರೋಗ್ಯಕ್ಕೂ ಈ ತೆರನಾದ ಸ್ಥಳ ಬದಲಾವಣೆ ಅಗತ್ಯವೆಂದು ನಮಗೆ ತೋರಿದ್ದರಿಂದಲೇ ಆ ಏರ್ಪಾಡನ್ನು ಮಾಡಿದ್ದು. ಈ ಪ್ರಕಾರ ಅವರಿಬ್ಬರೂ ಡಾ। ಸ್ಟ್ರಾಂಗರ ಮನೆಗೆ ಬಂದಿದ್ದರು. ಆದರೆ ಇದೇ ಸಂದರ್ಭದಲ್ಲಿ ತನಗೆ ಒಬ್ಬಂಟಿಯಾಗಿರಲು ತುಂಬಾ ಬೇಸರವಾಗುತ್ತದೆಂದು, ಉರೆಯನ ತಾಯಿಯೂ ಕೇಂಟರ್ಬರಿಯನ್ನು ಬಿಟ್ಟು, ಲಂಡನ್ನಿಗೆ ಬಂದು, ಡಾ। ಸ್ಟ್ರಾಂಗರ ಮನೆ ಸಮೀಪವೇ ಒಂದು ಬಾಡಿಗೆ ಮನೆ ಮಾಡಿಕೊಂಡು ಅಲ್ಲಿ ನಿಂತಳು. ತಾಯಿಯನ್ನು ನೋಡಲೋಸ್ಕರ ಉರೆಯನೂ ಆಗಿಂದಾಗ್ಗೆ ಲಂಡನ್ನಿಗೆ ಬಂದು ಹೋಗುತ್ತಿದ್ದನು.

ನಾನು ಡಾ। ಸ್ಟ್ರಾಂಗರ ಮನೆಯಲ್ಲಿ ಇಂಥ ಒಂದು ದಿನವಿದ್ದಾಗ ಉರೆಯ ಡಾ। ಸ್ಟ್ರಾಂಗರ ಮನೆಗೆ ನನ್ನೊಡನೆ ಮಾತಾಡಲೆಂದೇ ಬಂದನು. ಅವನ ಸಂಪರ್ಕವನ್ನು ದೂರ ಮಾಡಬೇಕೆಂದು ನಾನು ಎಷ್ಟೆಷ್ಟು ಪ್ರಯತ್ನಿಸಿದರೂ ಉರೆಯ ಅಷ್ಟಷ್ಟೇ ತಗ್ಗಿ ಬಗ್ಗಿ, ಹಟದಿಂದ ನನ್ನ ಹತ್ತಿರ ಮಾತಾಡತೊಡಗಿದನು. ಹಾಗಾಗಿ, ಸಭ್ಯತೆಗಾಗಿ, ನಿರ್ವಾಹವಿಲ್ಲದೆ, ಅವನೊಡನೆ ಸ್ವಲ್ಪ ಮಾತಾಡಬೇಕಾಯಿತು. ಅವನ ಮುಖ್ಯ ಉದ್ದೇಶ ಸಾಧನೆಗೆ ಸಂಬಂಧಿಸಿದ ಮಾತುಗಳನ್ನಷ್ಟೇ ಹೇಳಬಯಸುತ್ತೇನೆ. ಅವನು ನನ್ನನ್ನು ನೋಡಿ –
"ಮಿ. ಕಾಪರ್ಫೀಲ್ಡ್, ನಾವೂ ಇತ್ತ ಕಡೆ, ಬಂದಿದ್ದೇವೆ. ನಮ್ಮ ಮನೆ ಸಮೀಪದಲ್ಲಿದೆ" ಅಂದನು.
"ನಿನಗೆ ಕುಷಿ ಕಂಡಲ್ಲಿರಲು ನಿನಗೆ ಹಕ್ಕಿದೆಯಷ್ಟೆ. ನನಗೇನು ಸಂಬಂಧ, ಅದರಲ್ಲಿ " ಎಂದು ನಾನಂದೆನು.
"ನಾವು ಕುಷಿ ಕಂಡು ಬಂದದ್ದು ಮಾತ್ರವಲ್ಲ, ಉದ್ದೇಶಪೂರ್ವಕವಾಗಿಯೇ ಬಂದಿದ್ದೇವೆ."
"ಉದ್ದೇಶವೇನಿದ್ದರೂ ನನಗೇನು ಸಂಬಂಧ?"
"ನೀವು ನನ್ನ ಬಾಲ್ಯದ ಸ್ನೇಹಿತರು. ನಿಮ್ಮಲ್ಲಿ ಅಂಥ ಉದ್ದೇಶ ತಿಳಿಸುವ ಮನಸ್ಸಿದ್ದರೆ ತಪ್ಪಾಗಲಾರದಷ್ಟೆ! ನೋಡಿ, ನಾವು ಯಾರನ್ನು ಪ್ರೀತಿಸುತ್ತೇವೋ ಅವರನ್ನು ಕುರಿತಾಗಿ ಕಾವಲು ಇರಿಸುವುದು ಸರಿಯಲ್ಲವೇ?"

ಈ ಕಾವಲು ಏಗ್ನೆಸ್ಸಳನ್ನು ಕುರಿತಾಗಿ ಎಂದು ನನಗೆ ಗೊತ್ತಿತ್ತಾದರೂ ಅರಿಯದವನಂತೆಯೇ – ನನಗೆ ಬಂದಿದ್ದ ಸಿಟ್ಟನ್ನು ತಡೆಹಿಡಿದುಕೊಂಡು ಕೇಳಿದೆ –
"ಯಾರಿಗೋಸ್ಕರ ಕಾವಲು? ನನಗಾಗಿ ಅಲ್ಲವಷ್ಟೆ!"
"ಅಲ್ಲ, ಅಲ್ಲ, ನಿಮಗಾಗಿ ಖಂಡಿತವಾಗಿಯೂ ಅಲ್ಲ. ಒಬ್ಬ ಹೆಂಗುಸಿಗಾಗಿ"
"ಯಾವ ಹೆಂಗುಸಿಗಾಗಿ? ಹೆಸರು?" ಎಂದು ನನಗೆ ಆಶ್ಚರ್ಯ ತೋರಿಯೇ ಕೇಳಿದೆ.
"ಹೇಳುವುದೇ ಬೇಡವೋ ಎಂದು ಹೆದರುತ್ತಿದ್ದೇನೆ, ಮಿ. ಕಾಪರ್ಫೀಲ್ಡ್. ಆದರೆ ನಮ್ಮ ಬಾಲ್ಯದ ಸ್ನೇಹಕ್ಕಾಗಿ, ನಿಮ್ಮಲ್ಲಿ ಮಾತ್ರ ಹೇಳುತ್ತೇನೆ" ಎಂದು ಹೇಳಿ, ಅತ್ತಿತ್ತ ನೋಡಿ, ಸಮೀಪದಲ್ಲಿ ಯಾರೂ ಇಲ್ಲವೆಂದು ಗೊತ್ತಾದಮೇಲೆ, ಮೆಲ್ಲಗೆ –
"ಗಂಡಸಿಗೆ ಹೆದರಿ ನಾನು ಕಾವಲಿರುವುದಲ್ಲ, ಹೆಂಗುಸಿಗೆ ಹೆದರಿ, ಮಿಸೆಸ್ ಸ್ಟ್ರಾಂಗಳಿಗೆ ಹೆದರಿ, ಅವಳು ನನ್ನ ವಿರೋಧಿಯೆಂದು ಗ್ರಹಿಸಬೇಕಾಗಿದೆ" ಅಂದನು ಉರೆಯನು.

“ಡಾಕ್ಟರರ ಪತ್ನಿ ನಿನ್ನ ವಿರೋಧಿಯಾಗುವುದು ತಾನೆ ಹೇಗೆ? ಎಂದು ಹೇಗೂ ಮಾತು ಪ್ರಾರಂಭಿಸಿದ ಮೇಲೆ ನಾನು ಕೇಳಬೇಕಾಯಿತು.
“ಆ ಸಂಗತಿ ಹೇಳುತ್ತೇನೆ ಕೇಳಿ. ಡಾ। ಸ್ಟ್ರಾಂಗರ ಪತ್ನಿಯು ನನ್ನನ್ನು ಎಂದೂ ತಕ್ಕಷ್ಟು ಗೌರವದಿಂದ ಕಂಡವಳಲ್ಲ. ನನ್ನಂಥ ಬಡನೌಕರನು ಹೆಂಗಸರನ್ನು ಮೆಚ್ಚಿಸಲಾರ. ನಾನು ಬಡವನಾದರೂ ನನಗೆ ಕಣ್ಣಿದೆ, ಬುದ್ಧಿ ಇದೆ, ಮರ್ಯಾದೆ ಇದೆ. ಅಡಗಿ ನಡೆಯಬಹುದಾದ್ದನ್ನು ಪರೀಕ್ಷಿಸಿ ತಿಳಿಯುವ ಶಕ್ತಿಯಿದೆ. ಡಾಕ್ಟರರ ಪತ್ನಿಯು ಮಿ. ವಿಕ್ಫೀಲ್ಡರ ಮನೆಗೆ ಬಂದಿರುವುದೂ ಏಗ್ನೆಸ್ಸಳು ಡಾಕ್ಟರರ ಮನೆಗೆ ಹೀಗೆ ಇದ್ದು ಬರುವುದೂ ಸರಿಯಲ್ಲವೆಂದೇ ನನ್ನ ಅಭಿಪ್ರಾಯ. ಹಿಂದೆ ನಾನು ಮಿ. ವಿಕ್ಫೀಲ್ಡರ ಗುಮಾಸ್ತನಾಗಿದ್ದಾಗ ನಡೆದು ಹೋಗುತ್ತಿದ್ದ ಈ ವಿಧದ ಒಬ್ಬರು ಇನ್ನೊಬ್ಬರ ಮನೆಗೆ ಹೋಗಿ ಇದ್ದು ಬರುವ ಕ್ರಮವನ್ನು ಈಗ ನಾನು ಒಪ್ಪಲಾರೆನು. ನಾನು ಈಗ ಮಿ. ವಿಕ್ಫೀಲ್ಡರಂತೆಯೇ ವಕೀಲನಾಗಿದ್ದೇನೆ. ನನಗೂ ಮರ್ಯಾದೆಯಿದೆ, ಹೃದಯವಿದೆ. ನನಗೆ ಎಲ್ಲಾ ಗೊತ್ತಿದೆ, ಕಣ್ಣಿದೆ!” ಎಂದಷ್ಟೇ ಹೇಳಿ, ಅವನ ಮುಖವನ್ನು ಕೆಂಪು ಮಾಡಿಕೊಂಡು, ಅವನು ಏನನ್ನೋ ಕಂಡು ಕೋಪಿಸಿಕೊಂಡಿದ್ದ ಕಣ್ಣುಗಳನ್ನೇ ನನಗೆ ತೋರಿಸುತ್ತಿರುವವನಂತೆ ಆ ಕೆಂಪಾದ ಕಣ್ಣುಗಳಿಂದ ನನ್ನನ್ನೇ ನೋಡಿದನು.

“ಇದರಿಂದೆಲ್ಲ ಏನು ಹೇಳಿದ ಹಾಗಯ್ತು? ಮತ್ತು ನನ್ನ ಹತ್ತಿರ ಹೇಳುವುದೇಕೆ?” ಎಂದು ನಾನು ಕೇಳಿದೆನು.
“ನಿಮಗೆ ಸಂಬಂಧವಿಲ್ಲವೆಂದು ತೋರಬಹುದು ನಿಜ. ಆದರೆ ಕೇಳು, ಇನ್ನು ಮರೆಮಾಚದೆ ತಿಳಿಸುವೆನು. ಮಿಸೆಸ್ ಸ್ಟ್ರಾಂಗಳು ನಮಗೆಲ್ಲ ತೋರುವಂಥ ಶುದ್ಧ ಹೆಂಗುಸಲ್ಲ. ಅವಳು ಮಿ. ಜೇಕ್ ಮಾಲ್ಡನ್ನನ ಅತಿ ದೊಡ್ಡ ಏನನ್ನಲಿ? – ಸ್ನೇಹಿತಳೇ? ಹಿತಳೇ? ಯಾವುದೇ ಇರಲಿ, ಅವಳೊಬ್ಬ ಅವನ ಪ್ರೀತಿಯ ವಸ್ತು. ಹೀಗೆ ಕುಲೀನರೆಂಬವರ ಮನೆಯ ವಾತಾವರಣ ಕೆಟ್ಟಿರುವಾಗ ನನ್ನ ಏಗ್ನೆಸ್ಸಳು ಅಂಥ ಮನೆಯಲ್ಲಿ, ಮಿಸೆಸ್ ಸ್ಟ್ರಾಂಗಳ ಸಂಪರ್ಕದಲ್ಲಿ ಇರುವುದಾದರೆ ಸಂಬಂಧಪಟ್ಟ ನನ್ನ ಕಡೆಯ ಕಾವಲು ಅಗತ್ಯವಲ್ಲವೇನು? ಏಗ್ನೆಸ್ಸಳು ಅಲ್ಲಿರುವುದು ಒಳ್ಳೆಯದಲ್ಲ – ನಾನು ಆಕ್ಷೇಪಿಸುವೆನು, ಅಡ್ಡ ಬರುವೆನು, ಖಂಡಿತವಾಗಿಯೂ ತಡೆದು ನಿಲ್ಲಿಸುವೆನು” ಎಂದು ಬಹು ಉದ್ವೇಗದಿಂದ ಉರೆಯ ಹೇಳಿದನು. ನಾವು ಇಷ್ಟು ಮಾತಾಡುತ್ತಿದ್ದಾಗ ಜೇಕ್ ಮಾಲ್ಡನ್ನನು ಗೇಟನ್ನು ದಾಟಿ ನಮ್ಮ ಮನೆ ಕಡೆಗೆ ಬರುತ್ತಿದ್ದನು. ಉರೆಯ ಓಡಿ ಹೋಗಿ ಅಡಗಿಕೊಂಡನು. ನಾನು ನನ್ನಷ್ಟಕ್ಕೆ ಬೇರೆ ಕಡೆ ಹೋದೆನು.

ಈ ಸಂಗತಿ ನಡೆದ ಮೂರನೆ ದಿನ ನಾನು ಡೋರಾಳ ಮನೆಗೆ ಹೋದೆನು. ಹೋಗುವಾಗ ನನ್ನ ಜತೆಯಲ್ಲಿ ಏಗ್ನೆಸ್ಸಳನ್ನು ಕರೆದುಕೊಂಡು ಹೋದೆನು. ಡೋರಾಳ ಮನೆಯಲ್ಲಿ ನಮಗೆ ಚಹದ ಏರ್ಪಾಡು ಇತ್ತು. ಏಗ್ನೆಸಳೂ ಡೋರಾ ನಾನೂ ಜತೆಯಲ್ಲಿ ಕುಳಿತು ಚಹ ಸೇವಿಸುವಾಗ ಡೋರಾಳಿಗೂ ಏಗ್ನೆಸ್ಸಳಿಗೂ ಪರಿಚಯ ಬೆಳೆಯಿತು. ಇದಕ್ಕೆ ಹಿಂದೆ ನಾನು ಡೋರಾಳೊಡನೆ ಏಗ್ನೆಸ್ಸಳನ್ನು ಹೊಗಳಿ ಮಾತಾಡಿದಾಗಲೆಲ್ಲ ಏಗ್ನೆಸ್ಸಳನ್ನು ಕುರಿತು ಡೊರಾ ಹೆದರಿಕೊಂಡೇ ಇರುತ್ತಿದ್ದಳು. ಆದರೆ ಇಂದಿನ ಅವರಿಬ್ಬರ ಭೇಟಿಯಲ್ಲಿ ಏಗ್ನೆಸ್ಸಳು ಡೋರಾಳ ಸ್ನೇಹಿತಳೇ ಆಗಿಬಿಟ್ಟಳು. ಚಹ ಸೇವನೆಗೆ ಮೊದಲು ಸಾಂಪ್ರದಾಯಕವಾದ ಉಪಚಾರದ ಮಾತುಗಳನ್ನು ಮಾತ್ರ ಮಾತಾಡಿ, ಸ್ವಲ್ಪ ಹೆದರಿಕೊಂಡೇ ಇರುತ್ತಿದ್ದ ಡೋರಾ ಚಹ ಸೇವನೆಯಾದನಂತರ ಸಂಪೂರ್ಣ ಬದಲಾಗಿದ್ದಳು. ಏಗ್ನೆಸ್ಸಳ ಎದುರೇ ಡೋರಾ ನನ್ನನ್ನು ನೋಡಿ –
“ನೀನು ಹೇಳುತ್ತಿದ್ದ ಹಾಗಿಲ್ಲ ಏಗ್ನೆಸ್ಸಳು” ಅಂದಳು.
“ಹಾಗಾದರೆ ಟ್ರಾಟೂಡ್ ನನ್ನನ್ನು ಹಾಗೊಂದು ದೂರಿರಬೇಕಲ್ಲವೆ” ಎಂದು ನಗಾಡುತ್ತಾ ಏಗ್ನೆಸ್ಸಳು ಕೇಳಿದಳು.
ಅದಕ್ಕೆ ಡೊರಾಳು ಏಗ್ನೆಸ್ಸಳಿಗೆ ಉತ್ತರವಾಗಿ –
“ಇಲ್ಲ, ಇಲ್ಲ – ಅವನಿಗೆ ನಿನ್ನನ್ನು ಹೊಗಳಿದಷ್ಟು ಸಾಲದು. ನಿನ್ನ ಬುದ್ಧಿ ಎಷ್ಟೊಂದು ಎಂಬುದನ್ನು ಆಗಾಗ ನನ್ನಲ್ಲಿ ಹೊಗಳುತ್ತಾ ಕೊನೆಗೆ ನಾನು ನಿನ್ನಂಥವಳೆದುರು ಬಂದು ಮಾತಾಡುವುದು ಹೇಗೆಂದೇ ನಾನು ಹೆದರುತ್ತಿದ್ದೆ” ಅಂದಳು ಡೋರಾ.
“ಏಗ್ನೆಸ್ಸಳು ಯಾರನ್ನೂ ಸಮಾಧಾನಗೊಳಿಸಬಲ್ಲಳು. ಅವಳು ಇದ್ದಲ್ಲಿ ಶಾಂತಿ, ಸಮಾಧಾನ, ಧೈರ್ಯ ಉಂಟಾಗುವುದು. ಅವಳು ಇದ್ದಲ್ಲಿ ಜಯವಿದೆ. ಅವಳು ನನ್ನ ಶುಭ ದೇವತೆ, ರಕ್ಷಣಾ ದೇವತೆ. ನಿನಗೂ ಅವಳು ಹಾಗೆಯೇ ಆಗಲೆಂದೇ ನಾನು ಅವಳ ಪರಿಚಯವನ್ನು ಮಾಡಿಸುತ್ತಿದ್ದೇನೆ. ನೀನು ಅವಳೊಡನೆ ಇಷ್ಟು ಸಂತೋಷದಿಂದಿರುವುದನ್ನು ಕಂಡು ನನಗೆ ಪರಮಾನಂದವಾಗಿದೆ” ಎಂದು ನಾನು ಹೇಳಿದೆ. ಹೀಗೆಲ್ಲಾ ಮಾತಾಡಿಕೊಂಡು ನಾವು ಬಹು ಸಂತೋಷದಿಂದ ಅಂದಿನ ಭೇಟಿ ಪರಿಚಯಗಳ ಕಾಲವನ್ನು ಕಳೆದೆವು. ಆ ದಿನ ನಾವು ಡೋರಾಳ ಮನೆಯನ್ನು ಬಿಟ್ಟು ಹೊರಡುವಾಗ, ಡೋರಾಳು ಬಂದು ನನ್ನನ್ನು ಅಪ್ಪಿ ಹಿಡಿದುಕೊಂಡು –
“ಏಗ್ನೆಸ್ಸಳಂಥವಳು ನನ್ನ ಜತೆಯಲ್ಲಿದ್ದಿದ್ದರೆ ನಾನು ಇನ್ನೂ ಬುದ್ಧಿವಂತಳಾಗುತ್ತಿದ್ದೆನಲ್ಲವೇ?” ಎಂದು ಕೇಳಿದಳು.
“ಈಗ ನಿನಗೆ ಏನು ಬುದ್ಧಿವಂತಿಕೆಗೆ ಕೊರತೆ ಬಂದಿದೆ ಡೋರಾ? ದಿನ ಹೋದಂತೆ, ಅನುಭವದಿಂದ, ಇನ್ನೂ ಬುದ್ಧಿವಂತಳಾಗುವೆ” ಎಂದು ನಾನು ಸಮಾಧಾನ ಹೇಳಿದೆ.
“ಆದರೂ ಜೂಲಿಯಾ ಮಿಲ್ಸಳ ಬದಲು ಏಗ್ನೆಸ್ಸಳು ನನ್ನ ಜತೆಯಲ್ಲಿದ್ದಿದ್ದರೆ?” ಎಂದು ಹೇಳಿ, ಸ್ವಲ್ಪ ಆಲೋಚನೆ ಮಾಡುತ್ತಾ ನಾನು ಮಾತಾಡುವ ಮೊದಲೇ ಕೇಳಿದಳು –
“ಏಗ್ನೆಸ್ಸಳು ನಿನಗೇನಾಗಬೇಕು?” ಎಂದು ಕೇಳಿದಳು.
“ನಮಗೆ ರಕ್ತ ಸಂಬಂಧವಿಲ್ಲ. ಆದರೆ ಅಣ್ಣ ತಂಗಿಯರಂತೆ ಬಾಲ್ಯದಲ್ಲಿ ಜತೆಯಲ್ಲೇ ಬೆಳೆದವರು” ಎಂದೆ.
“ಹಾಗಾದರೆ ಅಂಥವಳ ಜತೆಯಲ್ಲಿದ್ದೂ ನನ್ನನ್ನೇಕೆ ಪ್ರೀತಿಸಿದೆಯೋ ಆಶ್ಚರ್ಯ!” ಎಂದು ಸ್ವಲ್ಪ ಅಸಮಾಧಾನವೋ ಆಶ್ಚರ್ಯವೋ ಆದವಳಂತೆ ಹೇಳಿಕೊಂಡಳು.

ಆಗ ನಾನು ಹೇಳಿದೆ –
"ನಿನ್ನನ್ನು ಕಂಡು ಪ್ರೀತಿಸದಿರುವುದು ಸಾಧ್ಯವೇ ಮುದ್ದೂ?"
"ನನ್ನನ್ನು ಕಾಣದೇ ಇದ್ದಿದ್ದರೆ ಏನು ಮಾಡುತ್ತಿದ್ದೆ?"
"ನಾವು ಜನಿಸದೇ ಇದ್ದಿದ್ದರೆ? – ಎಂಬುದೇ ಅದಕ್ಕೆ ಉತ್ತರ ಡೋರಾ" ಎಂದು ನಾನು ಉತ್ತರ ಕೊಡಬೇಕಾಯಿತು.

ಅವಳ ಮನಸ್ಸಿನಲ್ಲಿ ಏನೇನೋ ಆಲೋಚನೆಗಳು ಮೂಡಿರಬೇಕು. ಆ ಆಲೋಚನೆಗಳನ್ನು ಮಾತುಗಳಲ್ಲಿ ಹೇಳಲು ತಿಳಿಯದೆ, ಮಾತಿಗಿಂತ ಮುತ್ತೇ ಉತ್ತಮವೆಂದು, ಲೆಕ್ಕ ಮಾಡಿ 'ಒಂದು, ಎರಡು, ಮೂರು' ಎಂದನ್ನುತ್ತಾ ನನ್ನನ್ನು ಚುಂಬಿಸಿದಳು. ಇಷ್ಟೆಲ್ಲಾ ಆದಮೇಲೆ ನಾವು ಡಾಕ್ಟರ್ ಸ್ಟ್ರಾಂಗರ ಮನೆಗೆ ಹೊರಟೆವು.

ನಾವು ಡಾಕ್ಟರರ ಮನೆಗೆ ಸಮೀಪಿಸಿ ಬಂಡಿಯಿಳಿದು ಒಳರಸ್ತೆಯಲ್ಲಿ ನಡೆಯತೊಡಗಿದಾಗ ನಾನಂದೆ –
"ಏಗ್ನೆಸ್, ನೀನು ಡೋರಾಳ ಹತ್ತಿರ ಕುಳಿತು ಮಾತಾಡಿದ್ದರಿಂದ ಉಂಟಾಗಿರುವ ಪರಿಣಾಮವನ್ನು ನೋಡುವಾಗ ನೀನು ನನ್ನ ರಕ್ಷಣಾ ದೇವತೆ ಮಾತ್ರವಲ್ಲ, ಅವಳ ರಕ್ಷಣಾ ದೇವತೆಯೂ ಆಗಿರುವೆಯೆಂದು ತಿಳಿಯುವೆನು."
"ನಾನೊಬ್ಬ ನಿಶ್ಶಕ್ತ ದೇವತೆ ಮಾತ್ರ! ಆದರೆ ನಿಮ್ಮ ಶುಭವನ್ನೂ ಹಿತವನ್ನೂ ಸದಾ ಬಯಸುತ್ತಿರುವ ದೇವತೆಯೇನೋ ಹೌದು!" ಎಂದು ನಮ್ರವಾಗಿ, ಗಂಭೀರ ಸ್ವರದಿಂದ, ಹೇಳಿದಳು. ಅವಳ ಈ ಮಾತು, ಆಗಿನ ಆ ಸ್ವರ ನನ್ನ ಅಂತರಂಗವನ್ನೇ ಸ್ಪರ್ಷಿಸಿದುವು. ನಾನು ನನ್ನ ಅಂತರಂಗದಲ್ಲೇ ಏಗ್ನೆಸ್ಸಳಿಗೆ ಏನೋ ಒಂದು ವೇದನೆಯಿರಬೇಕೆಂದು ತಿಳಿಯತೊಡಗಿದೆನು. ಅಂಥ ದುಃಖ ಅವಳಿಗೆ ಏನಿರಬಹುದೆಂದು ತಿಳಿಯಲಿಚ್ಛಿಸಿ –
"ಏಗ್ನೆಸ್, ನೀನು ಇಂದು ಡೋರಾಳ ಜತೆಯಲ್ಲಿ ಕುಳಿತು ಮಾತಾಡುತ್ತಿದ್ದಾಗ ನಿನ್ನಲ್ಲಿ ತೋರಿ ಬರುತ್ತಿದ್ದಷ್ಟು ಉತ್ಸಾಹವನ್ನು ನಾನು ನಿನ್ನಲ್ಲಿ ಹಿಂದೆಂದೂ ಕಂಡಿರುವುದಿಲ್ಲ. ನಿನ್ನ ಉತ್ಸಾಹವನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ನೀನು ಈಗೀಚೆಗೆ ನಿಮ್ಮ ಮನೆಯಲ್ಲೂ ಸಹ ಮೊದಲಿಗಿಂತಲೂ ಹೆಚ್ಚು ಸುಖಿಯಾಗಿರುವಿಯೇನು?" ಎಂದು ಕೇಳಿದೆ.
"ನಾನು ನನ್ನ ಮಟ್ಟಿಗೆ ಸುಖವಾಗಿದ್ದೇನೆ, ಸಂತೋಷದಿಂದಲೂ ಇದ್ದೇನೆ, ಅದು ನನ್ನ ಸ್ವಭಾವ" ಎಂದು ಅವಳು ಉತ್ತರವಿತ್ತಳು.

ಅವಳ ಸ್ವಭಾವ ದೈವಿಕ ಸ್ವಭಾವವೆಂದೇ ನಾನವಳ ಮುಖ ನೋಡುವಾಗ ತಿಳಿದೆನು. ರಾತ್ರಿಯ ನಕ್ಷತ್ರಗಳ ಬೆಳಕಿನಲ್ಲೇ ಆಗ ನಾನವಳನ್ನು ನೋಡುತ್ತಿದ್ದೆನಾದರೂ ಆ ದೈವಿಕ ಪ್ರಭೆಯನ್ನು ಆಗ ಕಂಡೆನು.

ಅವಳ ಉತ್ತರ ಬಹು ಚುಟುಕಾಗಿದ್ದರೂ ಆ ಉತ್ತರದ ಹಿಂದೆ ಅಡಗಿದ್ದ ಭಾವನೆಗಳು ತುಂಬಾ ಇರಬೇಕೆಂದು ನಾನು ಊಹಿಸುತ್ತಿದ್ದೆನು. ಹೀಗೆ ಸ್ವಲ್ಪ ದೂರ ಮೌನವಾಗಿಯೇ ನಾವು ನಡೆಯುತ್ತ ಸಾಗುತ್ತಿದ್ದಾಗ ಅವಳಾಗಿಯೇ ಅಂದಳು –
"ಮನೆಯಲ್ಲಿ ಹೊಸ ಬದಲಾವಣೆಯೇನೂ ಆಗಿರುವುದಿಲ್ಲ"
ಅವಳ ಮಾತಿನ ಮರ್ಮವನ್ನು ನಾನು ಅರ್ಥಮಾಡಿದೆ, ಹಾಗಾಗಿ ಅವಳನ್ನು ಪ್ರಶ್ನಿಸಿದೆ –
"ಆ ರಾತ್ರಿ ಅವನು ಎತ್ತಿದ ಪ್ರಸ್ತಾಪ ಪುನಃ ಬಂತೇ? ನಿನಗೆ ಬೇಸರವಾಗುವುದಿದ್ದರೆ ಹೇಳಬೇಡ. ನಾನು ಕೇಳುತ್ತಿರಲಿಲ್ಲ – ಆದರೆ, ನೀನು ನಿನ್ನ ತಂದೆಯ ಹಿತಕ್ಕಾಗಿ ಎಂಥ ತ್ಯಾಗವನ್ನಾದರೂ ಮಾಡುವೆಯೆಂದೇ ನನ್ನ ಅಂಜಿಕೆ."
"ಟ್ರಾಟೂಡ್, ನೀನು ಹೆದರಬೇಡ. ಸತ್ಯವೂ ನ್ಯಾಯವೂ ಎಂದಾದರೂ ಗೆದ್ದೇ ಗೆಲ್ಲುವವು. ಎಂಥ ಪ್ರಸಂಗ ಬಂದಾಗ್ಯೂ ನೀನು ಅಂಜುತ್ತಿರುವ ಕಾರ್ಯವನ್ನು ನಾನು ಮಾಡುವುದಿಲ್ಲವೆಂದು ಭರವಸೆ ಕೊಡುವೆನು. ಆ ವಿಷಯಕ್ಕೆ ನಾನೆಂದೂ ಬಗ್ಗುವವಳಲ್ಲ. ನಿನ್ನ ಸಹಾಯ ಅಗತ್ಯಬಿದ್ದಾಗ ದಾಕ್ಷಿಣ್ಯ ಬಿಟ್ಟು ಸಹಾಯ ಕೇಳುವೆನು" ಅಂದಳು ಏಗ್ನೆಸ್. ಹೀಗೆ ಮಾತಾಡುತ್ತಾ ನಾವು ಡಾ। ಸ್ಟ್ರಾಂಗರ ಮನೆಗೆ ತಲುಪಿದೆವು. ಏಗ್ನೆಸ್ಸಳು ಮಿಸೆಸ್ ಸ್ಟ್ರಾಂಗರ ಕೋಣೆ ಕಡೆಗೆ ಹೋದಳು. ನಾನೊಬ್ಬನೇ ನನ್ನ ಮಲಗುವ ಕೋಣೆ ಕಡೆಗೆ ಹೊರಟೆನು. ಹೀಗೆ ಹೋಗುವಾಗ ನಾನು ಡಾ। ಸ್ಟ್ರಾಂಗರ ಆಫೀಸಿನ ಬಾಗಿಲನ್ನು ದಾಟಿಕೊಂಡು ಹೋಗಬೇಕಾಗಿತ್ತು. ಆಗ ಅವರ ಆಫೀಸಿನಿಂದ ಬೆಳಕು ಬರುತ್ತಿದ್ದುದನ್ನು ಕಂಡು, ಆ ದಿನ ನಾನು ನನ್ನ ಕೆಲಸದ ಬಗ್ಗೆ ಹೋಗದೆ ಗೈರುಹಾಜರಾಗಿದ್ದುದಕ್ಕಾಗಿ ಕ್ಷಮೆ ಕೇಳೋಣವೆಂದು ಅವರ ಆಫೀಸಿಗೆ ಹೋದೆನು.

ಅವರ ಆಫೀಸಿನಲ್ಲಿ ಡಾಕ್ಟರ್ ಸ್ಟ್ರಾಂಗರು ತನ್ನ ಮುಖಕ್ಕೆ ಎರಡು ಕೈಗಳನ್ನು ಮುಚ್ಚಿಕೊಂಡು ಆರಾಮ ಕುರ್ಚಿಯಲ್ಲಿ ಕುಳಿತಿದ್ದರು. ಮಿ. ವಿಕ್ಫೀಲ್ಡರು ಪಕ್ಕದ ಮತ್ತೊಂದು ಕುರ್ಚಿಯಲ್ಲಿ ಕುಳಿತು ಜೋಲು ಮುಖದಿಂದ ಡಾ। ಸ್ಟ್ರಾಂಗರನ್ನು ನೋಡುತ್ತಿದ್ದರು. ಉರೆಯ ಒಂದು ಖಾಲಿ ಕುರ್ಚಿಯ ಬೆನ್ನನ್ನು ಹಿಡಿದು ನಿಂತು ಡಾಕ್ಟರ್ ಸ್ಟ್ರಾಂಗರನ್ನೇ ನೋಡುತ್ತಿದ್ದನು. ಅವರೊಳಗೆ ಗುಪ್ತವಾದುದೋ ಗಹನವಾದುದೋ ಏನೋ ಕೆಲವು ಮಾತುಗಳು ನಡೆಯುತ್ತಿದ್ದು, ಆಗ ತಾನೇ ಮಾತನ್ನು ನಿಲ್ಲಿಸಿದ್ದಂತೆ ತೋರಿತು. ಇದನ್ನು ಕಂಡು ನಾನು ಅಲ್ಲಿ ನಿಲ್ಲುವುದು ಮರ್ಯಾದೆಯಲ್ಲವೆಂದು ಹೊರಟೆನು. ಆದರೆ ಡಾ। ಸ್ಟ್ರಾಂಗರು ನನ್ನನ್ನು ನಿಲ್ಲಲು ಒತ್ತಾಯಿಸಿದರು. ಅವರ ದಾಕ್ಷಿಣ್ಯಕ್ಕಾಗಿ ನಾನು ಅಲ್ಲಿ ನಿಂತೆನು. ಉರೆಯ ನಮ್ಮೆಲ್ಲರನ್ನೂ ಒಂದಾವೃತ್ತಿ ನೋಡಿ –

"ಈ ವಿಷಯವು ಎಲ್ಲರಿಗೂ ದುಃಖಕರವಾದುದು. ಆದರೆ ನಾವು ಇಷ್ಟು ಮಾತಾಡಿರುವಾಗ ಉಳಿದ ಅಂಶವನ್ನು ಮರೆಮಾಚಿಡುವುದು ಧರ್ಮವಲ್ಲ. ಅಡಗಿಸಿಡುವುದರಿಂದ ಯಾರಿಗೂ ಸುಖವಿಲ್ಲ. ಈ ಸಂಗತಿಯು ಮಿ. ಕಾಪರ್ಫೀಲ್ಡರಿಗೂ ಗೊತ್ತಿದೆ" ಎಂದು ಅಂದನು.

"ಯಾವ ವಿಷಯ?" ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಯಿತು.

"ಮೊನ್ನೆ ನಿಮ್ಮೊಡನೆ ಮಾತಾಡಿದ್ದು – ವಿವರಿಸುವುದು ಬೇಸರದ ಕೆಲಸವಾದರೂ ಹೇಳಬೇಕೆಂದು ಅಪೇಕ್ಷೆ ಪಟ್ಟರೆ ಹೇಳುವೆನು. ಮಿಸೆಸ್ ಸ್ಟ್ರಾಂಗರ ಮತ್ತು ಮಿ. ಜೇಕ್ ಮಾಲ್ಡನ್ನರವರನ್ನು ಕುರಿತು ಊರಿಗೂರೇ ಮಾತಾಡುತ್ತಿರುವ ವಿಷಯ ಎಂದು ವಿವರಿಸಿದ ಉರೆಯ.

"ಮೊನ್ನೆ ನೀನಾಗಿಯೇ ನನ್ನ ಹತ್ತಿರ ಏನೇನೋ ಹೇಳಿದೆ. ನಿನ್ನ ಬಾಯಿಯಿಂದ ಮೊನ್ನೆ ಕೇಳಿದ್ದೇ ಮೊದಲು ಕೇಳಿದ ವರ್ತಮಾನ, ನನಗೆ ಗೊತ್ತೂ ಅಷ್ಟೇ!" ಇದು ನನ್ನ ಉತ್ತರವಾಗಿತ್ತು.

"ನಿಜ, ನಿಮಗೆ ನಾನು ಸ್ಪಷ್ಟವಾಗಿ ತಿಳಿಸಿಲ್ಲ. ಆದರೆ ತಿಳಿವಳಿಕೆಯುಳ್ಳ ನೀವು ಅರ್ಥಮಾಡಿರಬೇಕೆಂದು ನಂಬಿದ್ದೇನೆ. ಈ ವಿಷಯವು ನಿಮಗೆ ಗೊತ್ತಿಲ್ಲದಿದ್ದರೂ ಚಿಂತೆಯಿಲ್ಲ. ಮಿ. ವಿಕ್ಫೀಲ್ಡರಿಗೆ ಈ ವಿಷಯ ಗೊತ್ತಿದೆಯಷ್ಟೇ – ಅಲ್ಲವೇ ಪಾರ್ಟ್ನರ್?" ಎಂದು ಉರೆಯನು ಬಹು ಸಲಿಗೆಯ ಮಾತುಗಳಿಂದ, ಅಡಗಿ ಗೋಚರಿಸುತ್ತಿದ್ದ ಅಧಿಕಾರವಾಣಿಯಿಂದ, ಮಿ. ವಿಕ್ಫೀಲ್ಡರನ್ನೇ ವಿಚಾರಿಸಿದನು.

"ಈ ಪ್ರಶ್ನೆಗೆ ಉತ್ತರಕೊಡುವು ಬಹು ಕಷ್ಟದ ಸಂಗತಿ. ಆದರೆ, ಉರೆಯ ಹೇಳುವ ಮಾತುಗಳು ಸ್ವಲ್ಪ ಮಟ್ಟಿಗೆ ಸತ್ಯವೇ ಹೌದು" ಎಂದು ಮಿ. ವಿಕ್ಫೀಲ್ಡರು ಹೇಳಿದರು.

"ಪಾರ್ಟ್ನರ್, ದಯಮಾಡಿ ಹೇಳಿ: ಜೇಕ್ ಮಾಲ್ಡನನ್ನನ್ನು ಇಂಡಿಯಕ್ಕೆ ಕಳುಹಿಸಲು ನಿಮಗೊಂದು ಗುಪ್ತ ಉದ್ದೇಶವಿರಲಿಲ್ಲವೇ? ಡಾಕ್ಟರರ ಮನೆಗೆ ನಿಮ್ಮ ಮಗಳು ಏಗ್ನೆಸ್ಸಳನ್ನು ಕಳುಹಿಸಲು ನೀವು ಹಿಂಜರಿಯುತ್ತಿರಲಿಲ್ಲವೇ? ತಿಳಿಸಿರಿ" ಅಂದನು ಉರೆಯ.

ಈ ಮಾತುಗಳನ್ನು ಕೇಳಿದಾಗ ಮಿ. ವಿಕ್ಫೀಲ್ಡರ ಸ್ಥಿತಿ ಬಹು ಕರುಣಾಜನಕವಾಗಿತ್ತು. ಪ್ರಾಯ ಹೋಗಿ, ಅನೇಕ ವಿಧದ ದುಃಖಗಳಿಗೊಳಗಾಗಿದ್ದ ಅವರು ಈಗ ತನ್ನ ಗುಮಾಸ್ತ ಉರೆಯನ ಪರಿಪೂರ್ಣ ಅಧಿಕಾರ ಬೆದರಿಕೆಯೊಳಗಿರುವಂತೆ ತೋರಿದರು. ಈ ವರೆಗೆ ಅವರನ್ನು ಇಂಥ ಸಲಿಗೆಯ ಮಾತುಗಳಿಂದ ಅಥವಾ ಅಧಿಕಾರವಾಣಿಯಿಂದ, ಮಾತಾಡಿಸಿದವರಿರಲಿಲ್ಲ. ಡಾ। ಸ್ಟ್ರಾಂಗರು ಅವರ ಬಾಲ್ಯದ ಸ್ನೇಹಿತರೇ ಆಗಿದ್ದರು. ಅಂಥ ಗೌರವಯುತ ಸ್ನೇಹಿತರಿಗೇ ಅಪಮಾನಕರವಾದ ಮಾತುಗಳನ್ನು ಇಂದು ಅವರು ಆಡಬೇಕಾದ ಪ್ರಸಂಗ ಉರೆಯನ ಬೆದರಿಕೆಯ ಕಾರಣವಾಗಿ ಅವರಿಗೆ ಬಂದೊದಗಿದೆ. ಅವರು ಈ ದುಃಖ, ಹಿಂಸೆಗಳನ್ನು ಸಹಿಸಲಾರದೆ, ಕಣ್ಣೀರು ಸುರಿಸದಿದ್ದರೂ, ಅಳುತ್ತಾ ಹೇಳಿದರು –

"ಡಾಕ್ಟರ್ ಸ್ಟ್ರಾಂಗರೇ ನಾವು ಬಾಲ್ಯದಿಂದಲೂ ಸ್ನೇಹಿತರು, ನಿಮ್ಮನ್ನು ಕುರಿತಾದ ನನ್ನ ಎಲ್ಲಾ ಕಾರ್ಯಗಳಲ್ಲೂ ಎಲ್ಲಾ ಊಹನೆಗಳಲ್ಲೂ ಮಾತಿನಲ್ಲೂ ನಿಮ್ಮ ಸುಖ, ನಿಮ್ಮ ಮಾನಮರ್ಯಾದೆ, ಕೀರ್ತಿಗಳ ರಕ್ಷಣೆಯೇ ನನ್ನ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿದ್ದೆನು. ಈ ಉದ್ದೇಶದ ಸಾಧನೆಗಾಗಿ ಇತರರಿಗೆ ತೋರುವಾಗ ನಿಮಗೆ ಅಪಮಾನಕರವೆಂದು ತೋರುವಂಥ ಕೆಲವು ಕಾರ್ಯಗಳನ್ನು ನಾನು ಮಾಡಿರಬಹುದು. ನಿಮ್ಮ ಪತ್ನಿಯ ಸಮೀಪದ ಬಂಧುವೂ ಬಾಲ್ಯದ ಸ್ನೇಹಿತನೂ ಆಗಿರುವ್ ಜೇಕ್ ಮಾಲ್ಡನ್ನನು ನಿಮ್ಮ ಪತ್ನಿಯ ಸಮೀಪ ಇರುವುದನ್ನು ನಾನು ಅಂತರಂಗದಲ್ಲೇ ವಿರೋಧಿಸುತ್ತಿದ್ದೆನು. ಅವನಿಗೆ ದೂರ ದೇಶದಲ್ಲಿ ವೃತ್ತಿಯನ್ನು ಕಲ್ಪಿಸಿಕೊಡುವುದರಲ್ಲೂ ನನ್ನ ಉದ್ದೇಶವು ಅವರಿಬ್ಬರು ದೂರದೂರ ಇರಬೇಕೆಂಬುದೇ ಆಗಿತ್ತು. ನನ್ನ ಅಭಿಪ್ರಾಯದಂತೆಯೇ ನಿಮ್ಮದೂ ಇರಬೇಕೆಂದೂ ನೀವು ನಿಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ನನಗೆ ತಿಳಿಸಲು ಅಳುಕುತ್ತಿದ್ದೀರೆಂದೂ ನಾನು ಗ್ರಹಿಸಿಕೊಂಡಿದ್ದೆನು. ಅದಕ್ಕಿಂತ ಹೆಚ್ಚು ನಾನು ಏನೂ ಹೇಳಲಾರೆ."

ಉರೆಯ ಇದೇ ವಿಷಯವನ್ನೆತ್ತಿಕೊಂಡು ತುಂಬಾ ಅಬದ್ಧವಾಗಿ ಮಾತಾಡಿದನು. ಮಿಸೆಸ್ ಸ್ಟ್ರಾಂಗಳು ಜೇಕ್ ಮಾಲ್ಡನ್ನನಲ್ಲಿ ಅನುರಕ್ತಳಾಗಿರುವಳೆಂಬುದೇ ಅವನ ಒಂದನೆ ಆರೋಪ. ಆದರೆ, ಈ ವಿಷಯದಲ್ಲಿ ಉರೆಯನಿಗೆ ಪ್ರವೇಶಕ್ಕೆ ಎಷ್ಟು ಎಡೆಯಿತ್ತೆಂಬುದು ಸಂಶಯದ ವಿಷಯ. ಮಿಸೆಸ್ ಸ್ಟ್ರಾಂಗಳ ಸಮೀಪದಲ್ಲಿ – ತಾನು ಪ್ರೀತಿಸುತ್ತಿದ್ದ, ಏಗ್ನೆಸ್ಸಳು ಒಬ್ಬಂಟಿಗಳಾಗಿ ಇರಬಾರದು ಎಂಬ ಒಂದು ಬಹು ಚಿಕ್ಕ ವಿಷಯವನ್ನು, ತಾನು ಮಿ. ವಿಕ್ಫೀಲ್ಡರ ಸರಿಸಮಾನ, ಸಹಭಾಗಿಯಾದ ವಕೀಲ, ಎಂಬ ದುರಹಂಕಾರದಿಂದ ದೊಡ್ಡದು ಮಾಡಿಕೊಂಡು, ಅವನಿಗೆ ನಮ್ಮೆಲ್ಲರ ಮೇಲಿದ್ದ ದ್ವೇಷದ ಸೇಡು ತೀರಿಸಿಕೊಳ್ಳಲೋಸ್ಕರ ಮಾತ್ರ ಅವನು ಹಾಗೆ ಮಾತಾಡಿದನೆಂದು ನಾನು ಊಹಿಸಿದೆನು. ಶ್ರೀಮಂತ–ಬಡವ, ಕುಲೀನ–ಹೀನ, ಎಂಬ ಸಾಮಾಜಿಕ ಪಕ್ಷದ್ವೇಷವೇ ಅವನ ಈ ತೆರನಾದ ಮಾತುಗಳಿಗೆ ಮೂಲವಾಗಿತ್ತು. ಪ್ರತಿಷ್ಠಿತಾ ಸಂಸಾರದ ಮಧ್ಯೆ ತಾನು – ಒಂದು ಕಾಲದಲ್ಲಿ ದೀನನೂ ದರಿದ್ರನೂ ಆಗಿದ್ದವನು, ಸ್ವಸಾಮರ್ಥ್ಯದಿಂದ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವುದಾಗಿ ಗ್ರಹಿಸುತ್ತಿದ್ದ ಅವನ ದುರಹಂಕಾರವೇ ಈ ಮಾತಿಗೆ ಕಾರಣವಾಗಿತ್ತು.

ಡಾಕ್ಟರ್ ಸ್ಟ್ರಾಂಗರು ಉರೆಯನ ಮಾತುಗಳಿಂದ ತುಂಬಾ ದುಃಖಿತರಾದರು, ಉದ್ವಿಗ್ನರೂ ಆದರು. ಅವರ ಮೈ ನಡುಗುತ್ತಿತ್ತು. ಅವರ ಕಣ್ಣುಗಳಿಂದ ಒಂದೊಂದು ತೊಟ್ಟು ಕಣ್ಣೀರು ಬರುತ್ತಿತ್ತು. ಒಂದು ಕುರ್ಚಿಯನ್ನು ಹಿಡಿದುಕೊಂಡು ಬಹುವಾದ ಬಳಲಿಕೆಯಲ್ಲೂ ಇದ್ದವರಂತೆ ಮಾತಾಡಿದರು.

ಡಾಕ್ಟರ್ ಸ್ಟ್ರಾಂಗರು ಹೇಳಿದರು –

"ನಾನೊಬ್ಬ ಹಗಲುಕನಸು ಕಾಣುವ ವೃದ್ಧ. ನನ್ನ ಜೀವಮಾನವನ್ನೆಲ್ಲ ಈ ವಿಧದ ಜೀವನಕ್ರಮದಿಂದ ವಿದ್ಯಾರ್ಜನೆಯಲ್ಲಿ ಕಳೆಯುತ್ತಾ ಬಂದಿರುತ್ತೇನೆ. ನನಗಿಂತ ಎಷ್ಟೆಷ್ಟೋ ಚಿಕ್ಕ ಪ್ರಾಯದವಳನ್ನು ನಾನು ಮದುವೆಯಾಗುವಾಗ ಗೃಹಸ್ಥರೇ ನನ್ನಾಣೆಯಿಟ್ಟು ಹೇಳುತ್ತೇನೆ, ಕೇಳಿ

– ಬಡವಿಯೂ ಎಳೆಪ್ರಾಯದವಳು ಸುಂದರಿಯೂ ಆಗಿರುವ ನನ್ನ ಪತ್ನಿಯು ಇತರ ಯಾರಾದರೊಬ್ಬರ ಕೈ ಹಿಡಿದು ಜೀವನದಲ್ಲಿ ಕಷ್ಟ ಅನುಭವಿಸುವ ಬದಲು, ದ್ರವ್ಯಾನುಕೂಲವೂ ಸ್ಥಾನಮಾನಗಳ ಅನುಕೂಲವೂ ಉಳ್ಳ ನನ್ನನ್ನು ಸೇರಿ ಸುಖವನ್ನೂ ನೆಮ್ಮದಿಯನ್ನೂ ಪಡೆಯಲಿ ಎಂಬುದೇ ನನ್ನ ಮುಖ್ಯ ಉದ್ದೇಶವಾಗಿತ್ತು. ಈ ಉದ್ದೇಶವೇ ನಾನು ಅವಳನ್ನು ಮದುವೆಯಾಗಲು ನನ್ನನ್ನು ಪ್ರೇರೇಪಿಸಿತು. ನನ್ನ ಅಂತರಂಗದಲ್ಲೇ ಆಗಿಂದಾಗ್ಗೆ ಕಂಡು ಬರುತ್ತಿದ್ದ ಮತ್ತೊಂದು ವಿಷಯವನ್ನು ಇದೇ ಮದುವೆಗೆ ಸಂಬಂಧಿಸಿರುವುದನ್ನು ತಿಳಿಸುವೆನು, ಕೇಳಿ. ನಾನು ಆಯುಸ್ಸು ತೀರಿಯೇ ಮೃತನಾದಾಗ್ಯೂ ಆ ಕಾಲದಲ್ಲೂ ನನ್ನ ಪತ್ನಿಗೆ ಪ್ರಾಯವೂ ಸೌಂದರ್ಯವೂ ಉಳಿದಿರುವುದು ನಿಜವಾಗಿರುವುದರಿಂದ, ಅವಳು ಆವರೆಗೆ ನನ್ನ ಜತೆಯಲ್ಲಿದ್ದು ಪಡೆಯುವ ಜೀವನ ಮಾರ್ಗದ ಅನುಭವಗಳಿಂದ ತನ್ನ ಮುಂದಿನ ಜೀವನದ ಸುಖಗಳು ಏನು, ಹೇಗೆ ಇರಬೇಕೆಂಬುದನ್ನು ಅವಳೇ ಸಾಧಿಸಿಕೊಳ್ಳಬಲ್ಲಳೆಂದೂ ನಂಬಿಕೊಂಡಿದ್ದೇನೆ. ಈ ಅಭಿಪ್ರಾಯಗಳೆಲ್ಲ ಏನೇ ಇದ್ದರೂ ನಾನಿಂದು ನನ್ನ ಕನಸುಗಳಿಂದ ಎಚ್ಚತ್ತಿರುತ್ತೇನೆ. ನನ್ನ ಪತ್ನಿಯನ್ನು ಯಾವ ಸಂದರ್ಭದಲ್ಲೂ ದೂರಲು ಕಿಂಚಿತ್ತಾದರೂ ಎಡೆಯಿಲ್ಲ. ಪ್ರಾಯ, ಬುದ್ಧಿ, ಅನುಭವವಿದ್ದ ನಾನು ಅಷ್ಟೊಂದು ಚಿಕ್ಕ ಪ್ರಾಯದವಳನ್ನು ಮದುವೆಯಾಗಿ, ಅವಳ ಸ್ವಾಭಾವಿಕವಾದ ಅಭಿರುಚಿಗಳನ್ನು ಕುಂಠಿತ ಮಾಡುತ್ತಿದ್ದುದು ನನ್ನ ತಪ್ಪಲ್ಲವೇ? ಅವಳ ಬಾಲ್ಯದ ಸ್ನೇಹಿತ ಜೇಕ್ ಮಾಲ್ಡನ್ನನ ಸಂಬಂಧ ಹೇಗಿರಬಹುದಾಗಿತ್ತೆಂದು ಊಹಿಸಿ ಚಿಂತೆಪಡುವುದೂ ಕೇವಲ ಸ್ವಾಭಾವಿಕ. ಆದ್ದರಿಂದ ಅವಳನ್ನು ಕುರಿತು ಯಾವ ಹೇಯ ಹೀನ ಭಾವನೆಗಳನ್ನಾಗಲೀ ಪ್ರಚಾರವನ್ನಾಗಲೀ ಯಾರೂ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ಅವಳಲ್ಲಿ ನಾನು ಕೋಪಿಸಿಕೊಳ್ಳುವುದರ ಬದಲು ನಾನವಳ ಕ್ಷಮೆಯನ್ನು ಯಾಚಿಸುವುದೇ ನ್ಯಾಯ. ನನ್ನ ಈಗಿನ ಆರೋಗ್ಯ ಪರಿಸ್ಥಿತಿ ಮೊದಲಿದ್ದಷ್ಟು ಉತ್ತಮವಾಗಿಲ್ಲ. ಅವಳ ಹೆಸರು ಹಾಳಾಗದಂತೆ ಅವಳನ್ನು ಕಾಪಾಡುವುದಕ್ಕಾಗಿಯೂ ಉಳಿದಿರುವ ನನ್ನ ಆಯುಸ್ಸನ್ನು ಶಾಂತವಾಗಿ ಕಳೆಯುವುದಕ್ಕಾಗಿಯೂ ನಾವು ಜನ ಸಂದಣಿಯಿಂದ ದೂರದಲ್ಲಿರುವ ಪ್ರದೇಶದಲ್ಲಿ ವಾಸಮಾಡುವ ಆಲೋಚನೆಯಲ್ಲಿದ್ದೇವೆ. ದೇವರು ಇಷ್ಟಪಟ್ಟಿದ್ದಾದರೆ ಅವಳ ನವಜೀವನ ಸುಖಕ್ಕೆ ಅನುಕೂಲವಾಗುವಂತೆಯೇ ನಾನು ದೈವಾಧೀನನಾಗಲೂಬಹುದು. ನಿಮ್ಮ ಯಾರ ಮೇಲೂ ನನಗೆ ಕೋಪವಿಲ್ಲ. ಮಿ. ವಿಕ್ಫೀಲ್ಡರು ನನ್ನ ದುಃಖದಲ್ಲಿ ಭಾಗಿಯಾದುದರಿಂದ ನಮ್ಮ ಸ್ನೇಹದ ಕಟ್ಟನ್ನು ಮತ್ತಷ್ಟು ಬಿಗಿದಿರುವರು. ಈ ದುಃಖ ಪ್ರಸಂಗದಲ್ಲೂ ಇದೊಂದು ಸಂತೋಷವೇ ಸರಿ."

ಡಾಕ್ಟರ್ ಸ್ಟ್ರಾಂಗರ ಈ ಅಂತಃಕರಣಪೂರ್ವಕವಾದ, ದುಃಖಪೂರಿತ ಮಾತುಗಳನ್ನು ಕೇಳಿ ನಾವು ಮಾತಾಡದಂತೆ ಮೂಕರೇ ಆಗಿಹೋಗಿದ್ದೆವು. ಉರೆಯ ನಿರೀಕ್ಷಿಸುತ್ತಿದ್ದಂಥ ಪರಿಣಾಮ ಇಂದಿನ ನಮ್ಮ ಮಾತುಗಳಿಂದ ಅಲ್ಲಿ ಆಗಲಿಲ್ಲವೆಂಬ ಅವನ ಅಸಮಾಧಾನ ಅವನ ಮುಖದಲ್ಲಿ ತೋರುತ್ತಿತ್ತು. ಈ ಮಾತುಗಳನಂತರ ಯಾರೂ ಏನೂ ಮಾತಾಡದೆ ಅವರವರು ಅವರವರ ಮನೆಕಡೆಗೆ ಹೊರಟೆವು. ನಾನೂ ಉರೆಯನೂ ಜತೆಯಲ್ಲೇ ಹೊರಟು ದಾರಿ ನಡೆಯುತಿದ್ದಾಗ ಉರೆಯ ನನ್ನ ಹತ್ತಿರ ಮಾತಾಡತೊಡಗಿದನು.

"ನಾನು ಗ್ರಹಿಸಿದಂತೆ ಸಂಗತಿಗಳು ಮುಂದುವರಿಯಲಿಲ್ಲ, ಮಿ. ಕಾಪರ್ಫೀಲ್ಡ್. ಡಾ। ಸ್ಟ್ರಾಂಗರು ಅವರ ಪತ್ನಿಯು ದೋಷಗಳನ್ನು ಕಾಣುವ ಮಟ್ಟಿಗೆ ಸಂಪೂರ್ಣ ಅಂಧರೇ ಆಗಿಬಿಟ್ಟಿದ್ದಾರೆ. ಹೇಗಿದ್ದರೂ ಅವರ ಹೆಂಡತಿಯ ಗುಟ್ಟು ಬಯಲಿಗೆ ಬಿತ್ತಷ್ಟೆ!" ಅಂದನು ಉರೆಯ.

ತನ್ನ ದುಷ್ಟ ಪ್ರವೃತ್ತಿಗಳಲ್ಲಿ ಅವನು ನನ್ನನ್ನು ಅನಾವಶ್ಯಕವಾಗಿ ಎಳೆದುಕೊಳ್ಳುತ್ತಿದ್ದನೆಂದು ನನಗೆ ಮೊದಲೇ ಗೊತ್ತಾಗಿತ್ತು. ಡಾಕ್ಟರ್ ಸ್ಟ್ರಾಂಗರನ್ನು ಕುರಿತು ಅಪಮಾನಾಸ್ಪದವಾಗಿ ಅವನು ಆಡಿದ್ದ ಮಾತುಗಳು ನನಗೆ ತುಂಬಾ ವೇದನೆಯನ್ನುಂಟುಮಾಡಿದ್ದುವು. ನನಗೆ ಕೋಪ ಮೆಲ್ಲಗೆ ಏರತೊಡಗಿತ್ತು. ಉರೆಯನ ಈ ಮಾತುಗಳನ್ನು ಕೇಳಿದಾಗಲಂತೂ ನನ್ನ ಕೋಪ ಬಹುವಾಗಿ ಏರಿತ್ತು. ನಾನು ಅವನನ್ನು ಕುರಿತಾಗಿ –

"ಮೂರ್ಖಾ, ನೀನಂತೂ ನಿನ್ನ ದುಷ್ಟ ಕಾರ್ಯಗಳನ್ನು ಕೈಕೊಳುತ್ತಿದ್ದೀಯಾ. ನನ್ನನ್ನೂ ಅವುಗಳಲ್ಲಿ ಸೇರಿಸಿಕೊಳ್ಳಲು ಹವಣಿಸುತ್ತಿದ್ದೀಯಾ ಅಲ್ಲವೇ?" ಎಂದನ್ನುತ್ತ ಅವನ ಉದ್ದವಾದ ಕೆನ್ನೆಗಳು ನನ್ನ ಕೈಯ್ಯನ್ನು ಆಕರ್ಷಿಸುತ್ತಿದ್ದುದನ್ನು ತಡೆಯಲಾರದೆ, ಅವನ ಕೆನ್ನೆಗೆ ಒಂದು ಬಲವಾದ ಪೆಟ್ಟನ್ನು ಕೊಟ್ಟುಬಿಟ್ಟೆನು. ನನ್ನ ನಾಲ್ಕೂ ಬೆರಳುಗಳ ಗುರುತು ಅವನ ಕೆನ್ನೆಯಲ್ಲಿ ಕಾಣಿಸಿತು. ಉರೆಯನು ಮಾತ್ರ ಏನೂ ಸಿಟ್ಟುಗೊಳ್ಳಲಿಲ್ಲ. ಅವನು ತನ್ನ ಕೈಯಿಂದ ಕೆನ್ನೆಯನ್ನು ಉಜ್ಜಿಕೊಳ್ಳುತ್ತಾ ಮಾತಾಡತೊಡಗಿದನು.

"ನಾನು ಏನೂ ಮಾಡದೆ ನೀನು ನನಗೆ ಹೊಡೆದುಬಿಟ್ಟೆ. ನೀನು ನನ್ನನ್ನು ಎಂದೂ ಪ್ರೀತಿಸಿದ್ದಿಲ್ಲ. ಅದರ ಬದಲು ಸದಾ ದ್ವೇಷಿಸುತ್ತಲೇ ಇದ್ದೆ. ಆದರೂ ನಿನ್ನ ತಪ್ಪಿಗಾಗಿ ನಾನು ನಿನ್ನನ್ನು ಕ್ಷಮಿಸುವೆನು. ಅಷ್ಟು ಮಾತ್ರವಲ್ಲ, ನಿನಗೆ ಎದುರು ನಿಲ್ಲದೆ ನಿನ್ನ ಅನುವ್ರತನಾಗಿ ನಡೆಯುವೆನು. ನಾನು ಹೀಗೇಕೆ ನಡೆಯುವೆನೆಂದು ನೀನು ಆಶ್ಚರ್ಯಪಡಬಹುದು. ಅದಕ್ಕೆ ಕಾರಣವಿದೆ, ನನ್ನ ಸ್ವಭಾವವೇ ಹಾಗೆ. ನಾನು ದೀನತೆಯಿಂದ ಮೇಲೆ ಬಂದವನು, ನಾನಾಗಿಯೇ ಉದ್ಧರಿಸಿಕೊಂಡವನು. ತಾಳ್ಮೆಯೇ ನನ್ನಂಥವರಿಗಿರುವ ಬದುಕಿನ ಮಾರ್ಗ. ಆದರೆ ಕಾಪರ್ಫೀಲ್ಡ್, ತಿಳಿದಿರು – ನಿನ್ನ ಇಂದಿನ ವರ್ತನೆಗೆ ತಕ್ಕ ಪ್ರತಿಕ್ರಿಯೆ ಇದ್ದೇ ಇದೆ" ಎಂದು ಉರೆಯ ಹೇಳಿದನು.

"ನಿನ್ನ ದುಷ್ಟ ಕಾರ್ಯಗಳ ಪ್ರತಿಕ್ರಿಯೆಯೇ ನಿನ್ನನ್ನು ನಾಶಮಾಡಲಿ" ಎಂದಷ್ಟು ಮಾತ್ರ ನಾನು ಹೇಳಿ, ನಾನು ನನ್ನ ಮಾರ್ಗದಲ್ಲಿ ಮುಂದುವರಿಸಿದೆ.

ಉರೆಯನನ್ನು ನಾನು ಹೊಡೆದ ವರ್ತನೆ, ನನ್ನ ದೃಷ್ಟಿಯಲ್ಲೇ ನನ್ನನ್ನು ಹಗುರಮಾಡಿತು. ಅಲ್ಲದೆ ನ್ಯಾಯಾನ್ಯಾಯಗಳ ಪ್ರತಿಕ್ರಿಯೆಯನ್ನು ಕುರಿತಾಗಿ ನಾನು ಚಿಂತಿಸದಿದ್ದರೂ ಉರೆಯನ ದುಷ್ಟಚಟಗಳನ್ನೆಲ್ಲ ಗ್ರಹಿಸುತ್ತಾ ಹೋದ ಹಾಗೆ ನನಗೆ ಸ್ವಲ್ಪ ಹೆದರಿಕೆಯೂ ಆಯಿತು. ಅವನು ಕಾರ್ಯಜಾಣನಾಗಿದ್ದುದರಿಂದ ಮುಂದೆ ಯಾವುದೋ ಒಂದು ಭಯಂಕರವಾದ ದುಷ್ಕೃತ್ಯವನ್ನೆಸಗಲೋಸ್ಕರವೇ ಇಂದು ಈ ವಿಧದ ಕಠೋರ–ಶಾಂತತೆಯನ್ನು ತಾಳಿದ್ದಾನೆಂದೂ ನಾನು ನಿಶ್ಚೈಸಿಕೊಂಡೆನು. ಹಿಂದೆ ಉರೆಯನ ಮೇಲೆ ಅನೇಕ ಸಾರಿ ಸಿಟ್ಟು ಬಂದಿದ್ದರೂ ಆಗೆಲ್ಲ ತಾಳ್ಮೆಯಿಂದಿದ್ದ ನಾನು ಇಂದೇಕೆ ಈ ರೀತಿ ವರ್ತಿಸಿದೆ – ಕೈ ಮುಂದೆ ಮಾಡಿದೆ, ಎಂದು ನನ್ನನ್ನೇ ನಾನು ವಿಚಾರಿಸತೊಡಗಿದೆನು. ವಿಚಾರಿಸಿದ್ದಕ್ಕೆ ಕಾರಣವೂ ತಿಳಿಯಿತು. ಹಿಂದೆ ನಾನು ದುಡುಕಿ ನಡೆದರೆ ಏಗ್ನೆಸ್ಸಳಿಗೆ ತೊಂದರೆಯಾಗಬಹುದೆಂದು ಹೆದರುತ್ತಿದ್ದುದರಿಂದ ತಾಳ್ಮೆ ತಾನಾಗಿಯೇ ಸಿದ್ಧವಾಗುತ್ತಿತ್ತು. ಇಂದಾದರೆ – ತನ್ನ ತಂದೆಗಾಗಿ ತಾನು ಎಂಥ ತ್ಯಾಗವನ್ನಾದರೂ ಮಾಡಲು ಸಿದ್ಧವಿದ್ದರೂ ಆ ಒಂದು ವಿಷಯದಲ್ಲಿ ಅಂಥ ತ್ಯಾಗ ಅಸಾಧ್ಯವೆಂದು ಏಗ್ನೆಸ್ಸಳು ನನಗೆ ಇತ್ತಿದ್ದ ಭರವಸೆಯೇ ನನಗೆ – ಈ ರೀತಿ ಉರೆಯನನ್ನು ಹೊಡೆಯಲು ಧೈರ್ಯಕೊಟ್ಟಿತ್ತೆಂದು ತಿಳಿದೆನು.

ಆ ರಾತ್ರಿ ಸುಖವಾದ ನಿದ್ರೆ ಬರಲಿಲ್ಲ. ಮಿಸೆಸ್ ಸ್ಟ್ರಾಂಗಳು ಡಾಕ್ಟರರ ಹತ್ತಿರ ಕ್ಷಮಾಯಾಚನೆ ಮಾಡುತ್ತಿದ್ದಂತೆಯೂ ಉರೆಯನ ದುಷ್ಟ ಕಾರ್ಯಗಳಲ್ಲಿ ನಾನು ಬೆರೆತುಹೋಗಿದ್ದಂತೆಯೂ ಸ್ವಪ್ನಗಳನ್ನು ಕಂಡೆನು.

ಈ ಎಲ್ಲಾ ವಿಷಯಗಳನ್ನೂ ನಾನು ಅತ್ತೆಗೆ ತಿಳಿಸಿದೆನು. ಅತ್ತೆಗೆ ಸಿಟ್ಟೂ ದುಃಖವೂ ಬಂತು. ಆದರೂ ಈ ವಿಷಯ ಬಹು ಗೋಪ್ಯವಾಗಿರತಕ್ಕದ್ದೆಂದು ನಿಶ್ಚಯ ಮಾಡಿಕೊಂಡೆವು. ಮಿ. ಡಿಕ್ಕರು ಎಂದಿನಂತೆಯೇ ತಮ್ಮ ಚಿಕ್ಕ ಮಿದುಳಿನಿಂದಾದಷ್ಟು ಸಹಾಯವನ್ನು ಡಾಕ್ಟರರ ಡಿಕ್ಷನರಿ ಕೆಲಸದಲ್ಲಿ ಒದಗಿಸುತ್ತಿದ್ದರು. ಡಾಕ್ಟರ್ ಈಗೀಗಲಂತೂ ಮಿ. ಡಿಕ್ಕರ ಹತ್ತಿರ ಮೊದಲಿಗಿಂತಲೂ ಹೆಚ್ಚಾಗಿಯೇ ಮಾತಾಡುತ್ತಿದ್ದರು. ಇದನ್ನು ಕಂಡು ಅತ್ತೆಗೆ ಆಗುತ್ತಿದ್ದ ಸಂತೋಷ ಅಷ್ಟಿಷ್ಟಲ್ಲ. ಮಿ. ಡಿಕ್ಕರ ಯೋಗ್ಯತೆ ಈ ಮೊದಲು ಅತ್ತೆಗೆ ಮಾತ್ರ ಗೊತ್ತಿದ್ದುದು ದಿನ ಹೋದಂತೆ ಡಾಕ್ಟರ್ ಸ್ಟ್ರಾಂಗರಂಥ ವಿದ್ಯಾಸಂಪನ್ನರಿಗೂ ಗೊತ್ತಾದುದೇ ಅವಳ ಸಂತೋಷಕ್ಕೆ ಕಾರಣ. ಮಿ. ಡಿಕ್ಕರು ಇಷ್ಟು ಮಾತ್ರವಲ್ಲ, ಈಗ ಜನರಿಗೆ ಗೊತ್ತಾಗಿರುವುದಕ್ಕಿಂತಲೂ ಹೆಚ್ಚು ಗೊತ್ತಾಗಬಲ್ಲ ಅದ್ಭುತ ಕಾರ್ಯವನ್ನೇ ಮಾಡಲಿರುವರೆಂದು ಹೇಳುತ್ತಾ ಅಂಥಾ ಕಾರ್ಯವನ್ನೂ ಮಿ. ಡಿಕ್ಕರಿಂದ ನಿರೀಕ್ಷಿಸುತ್ತಿದ್ದಳು.

ನಾನು ಡಾ। ಸ್ಟ್ರಾಂಗರ ಮನೆಯಲ್ಲಿ ಎಂದಿನಂತೆ ನನ್ನ ಕೆಲಸವನ್ನು ಮಾದುತ್ತಿದ್ದಾಗ ಟಪಾಲಿನವನು ಒಂದು ಪತ್ರವನ್ನು ತಂದು ಕೊಟ್ಟನು. ಅದು ಮಿ. ಮೈಕಾಬರರ ಪತ್ನಿಯದಾಗಿತ್ತು. ಪತ್ರವು ಹೀಗಿತ್ತು:

ಕೇಂಟರ್ಬರಿ, ಸೋಮವಾರ ಸಂಜೆ.

ಈ ಪತ್ರ ನನ್ನಿಂದ ಬರುವ ಸಂದರ್ಭವೂ ಪತ್ರದೊಳಗಣ ವಿಷಯವೂ ನಮ್ಮಿಬ್ಬರೊಳಗೆ ಮಾತ್ರ ಗುಟ್ಟಾಗಿರಬೇಕೇ ಹೊರತು ಇತರ ಯಾರಿಗೂ ತಿಳಿಯಬಾರದೆಂದು ನಾನು ಮೊದಲಾಗಿ ತಿಳಿಸುವಾಗಲಂತೂ ನಿಮಗೆ ಮತ್ತಷ್ಟು ಆಶ್ಚರ್ಯವಾಗಬಹುದು.

ಮಿ. ಮೈಕಾಬರರಿಗೂ ನನಗೂ ಇರುವ ಪ್ರೇಮ ಎಷ್ಟೆಂಬುದು ನಿಮಗೆ ಗೊತ್ತಿದೆಯಷ್ಟೆ (ನಾನೆಂದಿಗೂ ಅವರಿಂದ ಅಗಲಿ ಇರಲಾರೆ!) ಆದರೆ ಇತ್ತೀಚೆಗೆ ಸ್ವಲ್ಪ ಸಮಯದಿಂದ ಅವರು ನನ್ನಲ್ಲೇ ವಿಶ್ವಾಸವಿಲ್ಲದವರಂತೆ ವರ್ತಿಸುತ್ತಿದ್ದಾರೆಂದು ಬರೆಯುವುದೇ ಬಹು ದುಃಖದ ಸಂಗತಿ. ಅವರು ಮೌನವಾಗಿರುತ್ತಾರೆ. ಅವರ ಕಾರ್ಯಗಳೆಲ್ಲ ಬಹು ರಹಸ್ಯತರದ್ದಾಗಿರಬೇಕೆಂದು ನಾನು ಊಹಿಸಬೇಕಾಗಿದೆ. ಹಗಲೆಲ್ಲ ಅವರು ಆಫೀಸು ಕೆಲಸದಲ್ಲೇ ಅಲ್ಲೇ ಇರುತ್ತಾರೆ. ರಾತ್ರಿ ಮನೆಗೆ ಬರುತ್ತಾರಾದರೂ ರಾತ್ರಿ ಊಟ ಮಾಡಿ ಮೂಕರಂತೆಯೇ ಕುಳಿತಿರುತ್ತಾರೆ. ಈಗ ಅವರು ಪೂರ್ವದ ಮಿ. ಮೈಕಾಬರರ ಛಾಯೆ ಮಾತ್ರ ಆಗಿರುತ್ತಾರೆ. ಅವರ ಸಂತೃಪ್ತಿ, ಹರ್ಷಯುತ ಸ್ವಭಾವವು ಇಂದು ದುಃಖನಿರಾಶಾಪೂರಿತವಾಗಿ ಉಳಿದಿದೆ. ಅವರ ಮಕ್ಕಳ ಮೇಲಿನ ಪ್ರೇಮವೇ ಅವರಿಗೆ ಕಡಿಮೆಯಾಗಿದೆ. ಹಣದ ಸಂಕಟಗಳ ಅತ್ಯುಗ್ರ ಸ್ಥಿತಿಯಲ್ಲಿ ಅವರಿದ್ದಾಗ ಸಹ ಈಗ ಅವರಿದ್ದಂತೆ ಇರಲಿಲ್ಲ. ಕೇವಲ ಇಂದು ಪೆನ್ನಿ ಬೇಕೆಂದು ಕೇಳಿದರೂ ಅದನ್ನು ಕೊಡುವಾಗಲೂ ಅತ್ಯಂತ ಕ್ರೋಧಾವಿಷ್ಟರಾಗುತ್ತಾ ತನ್ನನ್ನು ತಾನೇ ನಾಶಪಡಿಸಿಕೊಂಡುಬಿಡುವರಾಗಿ ಹೇಳಿ ಹೆದರಿಸುತ್ತಾರೆ. ಈ ದುಃಖ ನಿವಾರಣೆಗೆ ತಕ್ಕಂಥ ಸಹಾಯವನ್ನು ನೀವು ದಯಮಾಡಿ ನಮಗೊದಗಿಸಿ, ಈ ವರೆಗೆ ನೀವು ನಮಗೆ ಮಾಡುತ್ತ ಬಂದಿರುವ ಉಪಕಾರಗಳ ಸಂಖ್ಯೆಗೆ ಮತ್ತೊಂದನ್ನು ಸೇರಿಸುವ ಪುಣ್ಯ ನಿಮಗಿರಲಿ.

ದುಃಖಿತೆಯೂ ಆರ್ತಳೂ ಆದ
ಎಮ್ಮ ಮೈಕಾಬರ್

ಸಂಸಾರದ ಅನುಭವ ತುಂಬಾ ಇದ್ದ ಮಿಸೆಸ್ ಮೈಕಾಬರಳಿಗೆ ಬುದ್ಧಿ ಹೇಳಲು ಅಥವಾ ಅವರಿಬ್ಬರ ಮಧ್ಯೆ ಪ್ರವೇಶಿಸಿ ವ್ಯವಸ್ಥೆಗಳನ್ನು ಸರಿಪಡಿಸಲು ನನಗೆ ಶಕ್ತಿ ಸಾಲದೆಂದು ಗೊತ್ತಿತ್ತು. ಹಾಗಾಗಿ, ಅವರು ಅವರ ಪತಿಯನ್ನು ಅನುಸರಿಸಿ, ಪ್ರೇಮಪುರಸ್ಸರವಾಗಿ ಮಾತಾಡಿ, ಬಂದಿರುವ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂದು ಮಾತ್ರ ಸಲಹೆಯಿತ್ತು ಅವರ ಪತ್ರಕ್ಕೆ ಉತ್ತರವನ್ನು ಕಳುಹಿಸಿದೆನು. ಅಂತೂ ನಾನು ಈ ಹೊಸ ವಿಷಯವನ್ನು ತಿಳಿದು ತುಂಬಾ ಯೋಚನಾಪರನಾದೆನು.

ಅಧ್ಯಾಯ ನಲ್ವತ್ತೊಮ್ಮರು
ಮತ್ತೊಂದು ಸಿಂಹಾವಲೋಕನ

ನನ್ನ ಜೀವಮಾನದ ಒಂದು ಚಿರಸ್ಮರಣೀಯವಾದ ಘಟ್ಟ ದಾಟುವ ಮೊದಲು ಅದನ್ನು ಸ್ವಲ್ಪ ನಿಂತು ನೋಡುವ ಮನಸ್ಸಿದೆ. ದಾಟಿಹೋದ ಹಿಂದಿನ ದಿನಗಳನ್ನೂ ಆ ದಿನಗಳ ಜತೆಯಲ್ಲಿ ನಾನೂ ಕೂಡಿಕೊಂಡು, ಮೂಕವಾಗಿ, ಸ್ವಪ್ನದ ದೃಶ್ಯಗಳಂತೆ ಕಳೆದುಹೋದ ಘಟನೆಗಳನ್ನೂ ಕಂಡು ದಾಟಿ ಹೋಗುವ ಮೆರವಣಿಗೆಯನ್ನು ನೋಡುವವನಂತೆ, ನಾನು ಒಂದು ಬದಿಯಲ್ಲಿ ನಿಂತು ನೋಡುವೆನು.

ವಾರ, ತಿಂಗಳು, ಋತು, ಇವೆಲ್ಲ ಚಮತ್ಕಾರವಾಗಿ ದಾಟಿ ಮುಗಿಯುತ್ತಿವೆ. ಕಳೆದುಹೋದ ಕಾಲವು ವಸಂತ ಋತುವಿನ ಒಂದು ಪ್ರಭಾತ ಅಥವಾ ಹಿಮಂತ ಋತುವಿನ ಒಂದು ಸಂಧ್ಯೆ ಎಂಬಂತೆ ಮಾತ್ರ ತೋರುವುವು. ಡೋರಾಳ ಜತೆಯಲ್ಲಿ ತಿರುಗಿ ವಿಹರಿಸಿದ ವಿಶಾಲ ಮೈದಾನ ಹಸುರು ಹಚ್ಚೆಯಿಂದ ಮೆರೆದು ಶೋಭಿಸುತ್ತಿದ್ದಂತೆಯೇ ಹಿಮದಿಂದ ತುಂಬಿ, ಶುಭ್ರ ಧವಳ ಪ್ರದೇಶವಾಗಿಯೂ ಶೋಭಿಸುತ್ತಿದೆ. ಮೈದಾನದ ಬಳಿಯ ಆ ನದಿ ಬೇಸಿಗೆಯ ಬಿಸಿಲಲ್ಲಿ ಥಳಥಳಿಸಿ ಹರಿದು ಚಳಿಗಾಲದ ಗಾಳಿಗೆ ಚಲಿಸದೆ ಹೆಪ್ಪುಗಟ್ಟಿ, ಹಿಮದ ಗಟ್ಟಿಯಾಗಿ ಮುಗಿದಿದೆ. ಇವೆಲ್ಲವೂ ಒಂದು ಉಸಿರು ಎಳೆದು ಬಿಡುವುದರ ಒಳಗೆ ಎದ್ದು ತೋರುತ್ತಾ ಬಿದ್ದೂ ಮುಗಿಯುವುವು. ಏನು ಚಲನೆ! ಎಂಥ ರಭಸ! ಯಾವ ಒಂದು ನದಿಯೂ ಸಮುದ್ರಕ್ಕೆ ಹರಿದು ಸೇರುವುದಕ್ಕಿಂತ ರಭಸದಿಂದ ನನ್ನ ಜೀವನದ ನದಿ ಹರಿದು ಸಾಗುತ್ತಿದೆ.

ಮಿಸ್ ಲೆವಿನಾ ಮತ್ತು ಮಿಸ್ ಕ್ಲೇರಿಸರ ಮನೆಯೂ ಅಲ್ಲಿನ ಗಡಿಯಾರವೂ ಘಟಿಕಾಯಂತ್ರವೂ ಮೊದಲಿದ್ದಂತೆಯೇ ಈಗಲೂ ಇವೆ. ಗಡಿಯಾರವಾಗಲೀ ಘಟಿಕಾಯಂತ್ರವಾಗಲೀ ಎಂದೂ ಸತ್ಯವನ್ನು ಹೇಳಲಾರವು. ಆದರೆ ನಾವು ಅವುಗಳನ್ನು ಎಂದೂ ನಂಬದೆ ಬಿಡಲಾರೆವು! ನಮ್ಮ ಜೀವನವೇ ಈ ವಿಧದ ಸತ್ಯಾಸತ್ಯಗಳ ಭ್ರಮೆಯಿಂದ ಕೂಡಿದೆ!

ನಾನು ಇಪ್ಪತ್ತೊಂದನೆಯ ವರ್ಷದಲ್ಲಿ ಕಾಲಿಟ್ಟಿದ್ದೇನೆ. ಈಗ ಒಬ್ಬ ಗಣನೀಯ ಪ್ರಜೆಯಾಗಿದ್ದೇನೆ. ಆ ಭಯಂಕರ ಶೀಘ್ರಲಿಪಿಯನ್ನು ಪಳಗಿಸಿ ಪ್ರಾಶಸ್ತ್ಯ ಪಡೆದು, ಪಾರ್ಲಿಂಮೆಂಟಿನ ವರದಿಗಾರನಾಗಿ ಹಣ ಸಂಪಾದಿಸುತ್ತಿದ್ದೇನೆ. ನನ್ನ ಸಮೇತವಾಗಿ ಹನ್ನೆರಡು ಜನರು ಪಾರ್ಲಿಮೆಂಟಿನ ಭಾಷಣಗಳನ್ನು ಪತ್ರಿಕೆಗಳಿಗೆ ಬರೆದು ಕಳುಹಿಸುತ್ತಿದ್ದೇವೆ. ಪಾರ್ಲಿಮೆಂಟಿನ ಕಾರ್ಯ ಕಲಾಪಗಳು ನನಗೆ ಪೂರ್ಣ ಅರ್ಥವಾಗಿರುವುದಿಲ್ಲ! ಬ್ರಿಟಾನಿಯಾ ರಾಜಮಾತೆಯು ರಾಜ್ಯ ಸೂತ್ರಗಳ ಕೆಂಪು ಕಟ್ಟುಗಳಿಂದ ಬಂಧಿತಳಾಗಿ, ಭೋಜನದ ಕೋಳಿಯಂತೆ ಪಾರ್ಲಿಮೆಂಟಿನ ಮೇಜಿನ ಮೇಲೆ ಮಲಗಿರುತ್ತಾಳೆ. ರಾಜಕಾರಣಿಗಳು ಬೇಕು ಬೇಕಾದಂತೆ ವಿಷಯಗಳನ್ನು ಉಪಯೋಗಿಸುತ್ತಿರುತ್ತಾರೆ. ರಾಜಕಾರಣಿಗಳಲ್ಲಿ ನನಗೆ ಶ್ರದ್ಧೆಯಿಲ್ಲ.

ಟ್ರೇಡಲ್ಸನೂ ಶೀಘ್ರಲಿಪಿಯನ್ನು ಮುಟ್ಟಿ ನೋಡಿ, ಮನನೋಯಿಸಿಕೊಂಡು ಸೋತಿರುವನು. ಹಣಸಂಪಾದನೆಯ ಮಾರ್ಗದಲ್ಲಿ ಅವನು ನನಗಿಂತ ಸ್ವಲ್ಪ ಹಿಂದೆ ಬಿದ್ದಿರುವನು.

ನಾನು ಕೆಲವು ಚಿಕ್ಕ ಕಥೆಗಳನ್ನು ಬರೆದು, ಗುಪ್ತನಾಮದಿಂದ ಪ್ರಕಟಿಸಿ, ಹಣವನ್ನೂ ಹೆಸರನ್ನೂ ಪಡೆದಿರುವೆನು. ನನ್ನ ಉತ್ಪತ್ತಿಯು ಬೆರಳೊಂದಕ್ಕೆ ನೂರು ಪೌಂಡು ಎಂದು ಎಣಿಸಿದರೆ, ತಿಂಗಳೊಂದರ ಮೂರೂವರೆ ಬೆರಳಿನಷ್ಟು ಹಣ ಸಂಪಾದಿಸುತ್ತಿದ್ದೇನೆ.

ನನ್ನದೇ ಆದ ಒಂದು ಚಿಕ್ಕ ಮನೆ, ಮತ್ತು ಅದಕ್ಕೆ ಸಂಬಂಧಿಸಿದ ಚಿಕ್ಕ ಹಿತ್ತಲೂ ಇವೆ. ಅಲ್ಲದೆ ನಾನು ಈಗ ಈ ಮನೆಯಲ್ಲೇ ವಾಸಿಸುತ್ತಿದ್ದೇನೆ. ಇನ್ನು ನಮ್ಮ ಅತ್ತೆಯನ್ನು ನೋಡೋಣ. ಅವಳು ಡೋವರಿನ ಹಿತ್ತಲು ಮನೆಗಳನ್ನು ಮಾರಿ ನನ್ನ ಮನೆಯ ಸಮೀಪದ ಒಂದು ಹಿತ್ತಲನ್ನೂ ಹಿತ್ತಲೊಳಗಿನ ಮನೆಯನ್ನೂ ಕ್ರಯಕ್ಕೆ ಪಡೆದಿದ್ದಾಳೆ. ಅವಳು ಬಾಯಿ ಬಿಟ್ಟು ಹೇಳದಿದ್ದರೂ ಈ ಕಾರ್ಯಕ್ಕೆ ಒಂದು ಅರ್ಥವಿರಬೇಕು ತಾನೆ! ನಾನು ಡೋರಾಳನ್ನು ಮದುವೆಯಾಗಿ ಸಂಸಾರ ನಡೆಸುವಾಗ ತಾನು ನಮ್ಮ ಹತ್ತಿರವೇ ಇದ್ದು ನಮಗೆ ಸಹಾಯ ಸಲಹೆಗಳನ್ನು ಒದಗಿಸಬೇಕೆಂದೇ ಆಗಿರಬೇಕು! ಆ ವಿಷಯವೂ ನಿಜ – ಡೋರಾಳ ಮದುವೆ ನಿಶ್ಚಯವಾಗಿದೆ.

ಮಿಸ್ ಕ್ಲೇರಿಸಾ ಮತ್ತು ಮಿಸ್ ಲೆವಿನರು ನಮ್ಮ ಮನೆಗೆ ಬೇಕಾದ ಸಾಹಿತ್ಯ ಸಾಮಗ್ರಿಗಳನ್ನು ಅಂಗಡಿಯಿಂದ ತಂದು ಒದಗಿಸುತ್ತಿದ್ದಾರೆ. ಅವರು ಡೋರಾಳ ಸಮೇತ ಅಂಗಡಿಗೆ ಹೋಗಿ ಬರುತ್ತಾರೆ. ಡೋರಾ ತನ್ನ ನಾಯಿ ಜಿಪ್ಪನಿಗಾಗಿ ಒಂದು ಚಿಕ್ಕ ಆಟದ ಮನೆಯನ್ನೂ ತಂದಿದ್ದಾಳೆ. ಆ ಆಟದ ಮನೆಯೊಳಗೆ ತುಂಬಾ ಚಿಕ್ಕ ಘಂಟಾಮಣಿಗಳು ತೂಗಾಡಿಕೊಂಡಿರುವುದರಿಂದ ಜಿಪ್ಪನು ಅದರ ಒಳಕ್ಕೆ ನುಗ್ಗುವಾಗ ಆ ಘಂಟೆಗಳು ಶಬ್ದ ಮಾಡುತ್ತವೆ. ಆಗ ಜಿಪ್ಪನು ಹೆದರಿ ಹೊರಗೆ ಹಾರುವುದೂ ಹಾಗೆ ಹಾರುವಾಗ ಘಂಟೆಗಳು ಮತ್ತಷ್ಟು ಝಣ ಝಣಿಸಿ ಅವನನ್ನು ಇನ್ನಷ್ಟು ಹೆದರಿಸುವುದೂ ನಮಗೆಲ್ಲ ಒಂದು ತಮಾಷೆಯೇ ಆಗಿದೆ.

ಡೋರಾಳ ಮದುವೆಯ ಉಡುಪನ್ನು ತಯಾರಿಸಲು ಇಬ್ಬರು ಹೆಂಗುಸರು ತಮ್ಮ ಮೈಗೆ ಸೂಜಿ ಕತ್ತರಿಗಳನ್ನು ಇರಿದಿಟ್ಟುಕೊಂಡು ಕೆಲಸ ಮಾಡುತ್ತಾ ವಾರಗಟ್ಟಲೆ ಕುಳಿತಿದ್ದಾರೆ. ಮದುವೆ ಒಂದೇ ಕಾರ್ಯಕ್ಕೆ ಇಷ್ಟು ಬಟ್ಟೆ ಬೇಕಾದರೆ ಇಡೀ ಜೀವಮಾನದ ಬಗ್ಗೆ ಎಷ್ಟು ಬಟ್ಟೆ ಬೇಕಾಗಬಹುದೆಂಬುದು ನನಗೆ ಒಂದು ಕೌತುಕವೇ ಆಗಿದೆ.

ಪೆಗಟಿ ಬಾರ್ಕಿಸಳು ಬಂದು ನಮ್ಮ ಮನೆಯನ್ನು ಶುಚಿಪಡಿಸುತ್ತಿದ್ದಾಳೆ. ಈ ಮನೆಯೇ ಅವಳದಾಗಿದ್ದು, ಇಲ್ಲೇ ಅವಳು ಬಾಳಿ ಬೆಳೆದು ಬಂದಿದ್ದಂತೆ ಅವಳು ಕೆಲಸ ಮಾಡುತ್ತಿದ್ದಾಳೆ.

ಮಿ. ಪೆಗಟಿ ಅಪೂರ್ವವಾಗಿ ಕಾಣಸಿಗುತ್ತಾರೆ. ಆದರೆ ನಾವು ಯಾವ ಮಾತನ್ನೂ ಆಡದೆ, ಬರೇ ಒಬ್ಬರನ್ನೊಬ್ಬರು ಗುರುತಿಸಿಕೊಂಡು ಮಾತ್ರ ದಾಟುತ್ತಿರುತ್ತೇವೆ.

ಅಲ್ಲಿ ಬರುತ್ತಿರುವವರು ಯಾರು? ಟ್ರೇಡಲ್ಸನು! ಅವನು ತನ್ನ ಕೈಯ್ಯಲ್ಲಿ ಅಷ್ಟೊಂದು ಗಂಭೀರವಾಗಿ ಹಿಡಿದುಕೊಂಡು ಬರುತ್ತಿರುವುದೇನಿರಬಹುದು? ಓಹೋ ತಿಳಿಯಿತು – ಅದು ನನ್ನ ಮದುವೆಯ ಲೈಸೆನ್ಸ್. ಲೈಸೆನ್ಸಿನಲ್ಲಿ 'ಡೇವಿಡ್ ಕಾಪರ್ಫೀಲ್ಡ್ ಮತ್ತು ಡೋರಾ ಸ್ಪೆನ್ಲೋ' ಎಂಬ ಹೆಸರುಗಳಿವೆ. ಸರ್ಕಾರದ ವ್ಯವಹಾರಗಳಲ್ಲಿ ಬಹು ಮುಖ್ಯ ಪಾತ್ರ ವಹಿಸುವ ಸ್ಟ್ಯಾಂಪು ಡಿಪಾರ್ಟ್ಮೆಂಟಿನ ಕೆಂಪು ಮೊಹರ ಒಂದು ಕಡೆಯೂ ಕೇಂಟರ್ಬರಿಯ ಬಿಷಪ್ಪರ ಆಶೀರ್ವಚನಗಳು ಇನ್ನೊಂದು ಕಡೆಯೂ ಆ ಲೈಸೆನ್ಸಿನಲ್ಲಿ ಸ್ಪಷ್ಟವಾದ ಅಕ್ಷರಗಳಲ್ಲಿ ಎದ್ದು ಕಾಣುತ್ತಿವೆ.

ಅಗೋ! ಮದುವೆಯ ದಿನ ಬಂತೇ ಬಂತು. ನಾವೆಲ್ಲರೂ ಇಗರ್ಜಿಗೆ ತಲುಪಿದೆವು. ಏಗ್ನೆಸ್ ಮತ್ತು ಸೋಫಿಯರು, ಕ್ಲೇರಿಸಾ ಮತ್ತು ಲೆವಿನಾ, ಜೇನೆಟ್ ಮತ್ತು ಅತ್ತೆ, ಎಲ್ಲರೂ ಬಂದಿದ್ದಾರೆ. ಟ್ರೇಡಲ್ಸ್ ಮತ್ತು ಮಿ. ಡಿಕ್ಕರೂ ಬಂದಿದ್ದಾರೆ. ಹೆಣ್ಣೊಪ್ಪಿಸುವವರು ಮಿ. ಡಿಕ್ಕರು – ಅವರ ಕಡೆಯ ಕನ್ನೆಯರು ಏಗ್ನೆಸ್ಸಳೂ ಮತ್ತು ಸೋಫಿ. ಪೆಗಟಿ ಬಂದು ಗೆಲರಿಯಲ್ಲಿ ನಿಂತು ಮದುವೆಯನ್ನು ನೋಡುತ್ತಿದ್ದಾಳೆ. ಮದುವೆಯ ಗಾಂಭೀರ್ಯಕ್ಕೆ ತಕ್ಕದಾಗಿ ಅತ್ತೆ ಶಿಸ್ತಿನಿಂದ, ಗಂಭೀರಭಾವ ತಾಳಿ, ನೆಟ್ಟಗೆ ನಿಂತಿದ್ದಾಳೆ. ಇಂದು ನವದಂಪತಿಯರ ಅನುರಾಗಜನ್ಯ ಹೃದಯಬಾಂಧವ್ಯವೇ ಇಲ್ಲಿ ದೈವ ಸನ್ನಿಧಿಯಲ್ಲಿ ದೃಢವಾಗಬೇಕಾದ್ದರಿಂದ, ಇಂಥ ವಿಷಯದಲ್ಲಿ ಪರಿಣತಳಾದ ಮಿಸ್ ಲೆವಿನಳು (ಮೂರ್ಛಿತರಾದವರನ್ನೆಬ್ಬಿಸಲು ಬೇಕಾದ ಔಷಧಿಯನ್ನು ತಯಾರಿಸಿಟ್ಟುಕೊಂಡೇ) ದುಃಖ ಮಿಶ್ರಿತವಾದ ಹರ್ಷತೆಯಿಂದ ನಿಂತಿದ್ದಾಳೆ.

ನಾವು ಇಗರ್ಜಿ ಒಳಗೆ ಮೊಣಕಾಲೂರಿಕೊಂಡು ಕುಳಿತೂ ಆಯಿತು. ಏಗ್ನೆಸ್ಸಳು ಡೋರಾಳ ಕೈಯ್ಯನ್ನು ಹಿಡಿದುಕೊಂಡು ಅವಳ ಜತೆಯಲ್ಲೇ ನಿಂತಿದ್ದಾಳೆ. ಗುರುಗಳು ಬಂದು ಮಂತ್ರೋಚ್ಚಾರಣೆ ಮಾಡಿದರು. ಡೋರಾ ಸ್ಪೆನ್ಲೋ ಎಂಬ ಶಬ್ದ ಕೇಳಿದ ಕೂಡಲೇ ತನ್ನ ತಂದೆಯನ್ನು ಸ್ಮರಿಸಿ ಡೋರಾ ಅತ್ತಳು. ಮಿಸ್ ಲೆವಿನಳೂ ಅತ್ತಳು. (ಮಿ. ಪಿಡ್ಜರರನ್ನು ಸ್ಮರಿಸಿ ಆಗಿರಬಹುದು.)

ಮದುವೆಯಾದನಂತರ ಮನೆಗೆ ಬರುವಾಗ್ಗೆ ದಾರಿಯಲ್ಲಿ ಜನರು ಆಡಿಕೊಳ್ಳುತ್ತಿದ್ದ ಮಾತೂ ಸಹ ಈಗ ಕೇಳಿ ಬರುತ್ತದಲ್ಲವೇ? "ಎಂಥ ಸ್ಫುರದ್ರೂಪೀ ಹೆಣ್ಣು, ಎಂಥ ಸುಂದರ ಪುರುಷ ಗಂಡು" ಎಂದು ಅವರು ಆಡಿದ ಮಾತುಗಳು ಕೇಳಿಸುತ್ತವೆ!

ಮದುವೆಯ ಊಟಕ್ಕೆ ಅನೇಕ ವಿಧದ ತಿಂಡಿ ತೀರ್ಥಗಳಿದ್ದುವೆಂದು ಮಾತ್ರ ಜ್ಞಾಪಕವಿದೆ. ಅವು ಯಾವುದನ್ನೂ ತಿಂದ ರುಚಿಯ ನೆನಪು ಈಗಿಲ್ಲ. ಊಟ ಮುಗಿದನಂತರ ನನ್ನದೊಂದು ಚಿಕ್ಕ ಭಾಷಣವೇ ಇತ್ತು!

ಆಮಂತ್ರಿತರಾಗಿ ಮದುವೆಗೆ ಬಂದಿದ್ದವರೆಲ್ಲ ಹೋದರು. ಡೋರಾಳೂ ನಾನೂ ಜಿಪ್ಪನ ಸಮೇತ ಬಾಡಿಗೆ ಸಾರೋಟಿನಲ್ಲಿ ಕುಳಿತು ವಿಹಾರಕ್ಕಾಗಿ ಹೋದೆವು.
"ಹುಚ್ಚು ಪೋರಾ – ನೀನು ಈಗಲಾದರೂ ಸಂತೋಷವಾಗಿದ್ದೀಯೇನು?" ಎಂದು ಡೋರಾಳು ದಾರಿಯಲ್ಲಿ ಕೇಳಿದಳು.

ಹೀಗೆ ಗತಕಾಲದ ಚಿತ್ರಗಳ ಮೆರವಣಿಗೆಯನ್ನು ಹಿಂಬಾಲಿಸಿ ಹೋಗಿ ನೋಡಿದ್ದಾಯಿತು. ಇನ್ನು ನನ್ನ ಕಥೆಯ ಪಥದಲ್ಲೇ ಮುಂದುವರಿಸುವೆನು.

ಅಧ್ಯಾಯ ನಲ್ವತ್ನಾಲ್ಕು

ನಮ್ಮ ಗೃಹಕೃತ್ಯ

ಡೋರಾಳನ್ನು ಪಡೆದು ನನ್ನವಳನ್ನಾಗಿ ಮಾಡಿಕೊಳ್ಳುವುದೇ ನನ್ನ ಜೀವನದ ಮುಖ್ಯ ಕೆಲಸವೆಂದು ಕೆಲಸ ಮಾಡಿ ಬಹು ಸಂತೋಷದಿಂದ, ಕೆಲವು ತಿಂಗಳನಂತರವಾದರೂ ಮದುವೆಯಾಯಿತು. ಮನೆಗೆ ಬಂದಿದ್ದ ನೆಂಟರಿಷ್ಟರೆಲ್ಲ ಅವರವರ ಮನೆಗೆ ಹೋದರು. ಡೋರಾಳನ್ನು ಬಯಸುವುದೂ ಅರಸುವುದೂ ಮುಗಿದು, ಪ್ರಯತ್ನಗಳ ಫಲ ಸಂಪೂರ್ಣ ದೊರಕಿ, ನಾನೂ ಡೋರಾ ಮಾತ್ರ ಜತೆಯಲ್ಲಿ ಕುಳಿತು ಮಾತಾಡುತ್ತಿದ್ದಾಗ – ನನ್ನ ಜೀವನದ ಬಹು ಮುಖ್ಯ ಕಸಬನ್ನೇ ಕಳೆದುಕೊಂಡವನಂತೆ – ಒಂದು ವಿಧದ ಶೂನ್ಯತೆಯೇ ನನ್ನ ಮನಸ್ಸಿನಲ್ಲಿ ಗೋಚರಿಸುತ್ತಿತ್ತು. ಕಳೆದು ಹೋಗಿದ್ದ ದಿನಗಳು ಕನಸಿನ ಚಿತ್ರಗಳಾಗಿ ಮಾತ್ರ ತೋರುತ್ತಿದ್ದುವು.

ಚಿಕ್ಕ ಪಕ್ಷಿಗಳೆರಡು ಮನುಷ್ಯರಂತೆ ಮನೆ ಮಾಡಿಕೊಂಡು ತಮ್ಮ ಗೃಹಕೃತ್ಯ ನಡೆಸಿದ್ದಿದ್ದರೆ ಅವುಗಳ ಅನುಭವದ ಕೊರತೆ ಎಷ್ಟಿರಬಹುದಿತ್ತೋ ಅಷ್ಟೇ ಕೊರತೆ ನಮ್ಮಿಬ್ಬರ ಇಂದಿನ ಗೃಹಕೃತ್ಯದಲ್ಲೂ ತೋರಿಬರುತ್ತಿತ್ತು. ಈ ಪ್ರಸಂಗವನ್ನು ಉದಾಹರಿಸಿಯೇ ಒಂದೆರಡು ಚಿಕ್ಕ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವೆನು.

ನಮ್ಮ ಮನೆ ಕೆಲಸಕ್ಕಾಗಿ ಮೇರಿ ಎನ್ನೆ ಎಂಬವಳೊಬ್ಬಳನ್ನು ನೇಮಿಸಿಕೊಂಡಿದ್ದೆವು. ಅವಳ ಅಣ್ಣ ಸಿಪಾಯಿಯೆಂದಂದುಕೊಂಡು ಮೇರಿ ಎನ್ನೆಯು ಡೋರಾಳನ್ನು ಹೆದರಿಸಿಕೊಂಡೇ ತನ್ನ ಕೆಲಸವನ್ನು ಮಾಡುತ್ತಿದ್ದಳು. ದಿನ ಕಳೆದಂತೆ ಕೆಲಸದವಳು ನಮ್ಮ ಅನುಕೂಲಗಳನ್ನು ಒದಗಿಸುವ ಬದಲು ಅನನುಕೂಲತೆಗಳನ್ನೇ ಹೆಚ್ಚಿಸತೊಡಗಿದಳು. ಅವಳಣ್ಣ ಸಿಪಾಯಿ ಹೌದಾಗಿದ್ದರೂ ಅವನು ಸೈನ್ಯದಿಂದ ತಪ್ಪಿಸಿಕೊಂಡು ಬಂದವನಾಗಿದ್ದನು. ಅಂಥವನನ್ನು ಮೇರಿ ಎನ್ನೆಯು ನಮಗೆ ಗೊತ್ತಾಗದಂತೆ ನಮ್ಮ ಮನೆಯಲ್ಲಿ ಅಡಗಿಸಿ ಆಶ್ರಯ ಕೊಟ್ಟಿದ್ದಳು. ಸೈನಿಕರು ಬಂದು ಅವನನ್ನು ಹುಡುಕಿ ಹಿಡಿದುಕೊಂಡು ಹೋದಾಗ ನಾವು ನೆರೆಕರೆಯವರ ಅಪಹಾಸ್ಯಕ್ಕೆ ಗುರಿಯಾದೆವು. ಮೇರಿ ಸರಕಾರಕ್ಕೆ ವಿರೋಧವಾಗಿ ವರ್ತಿಸಿಸುದರಿಂದ (ನಮ್ಮನ್ನು ತಪ್ಪಿತಸ್ಥರಾಗಿ ಗುರಿ ಮಾಡದಿದ್ದುದು ನಮ್ಮ ಪುಣ್ಯ!) ಅವಳನ್ನು ಕೆಲಸದಿಂದ ತೆಗೆಯಬೇಕಾಯಿತು. ಅವಳ ಆಖೈರು ಸಂಬಳವನ್ನು ನಾನು ಕೊಡುವಾಗ ಅವಳಲ್ಲಿ ಕಂಡು ಬಂದ ದೈನ್ಯ, ವಿನಯ, ದುಃಖಗಳಿಗಾಗಿ ನಾನೂ ಬೇಸರಪಟ್ಟೆನು. ಆದರೆ ಅವಳು ಹೋದನಂತರ ನಮ್ಮ ಮನೆಯನ್ನು ಪರೀಕ್ಷಿಸಿದಾಗ ಅವಳ ಸಂಬಳದ ಎಷ್ಟೆಷ್ಟೋ ಪಾಲು ಕ್ರಯಬಾಳುವ ವಸ್ತುಗಳನ್ನು ಅವಳು ಅಪಹರಿಸಿದ್ದಳೆಂದು ಗೊತ್ತಾಯಿತು. ಅವಳ ಅನಂತರ ಅನೇಕರನ್ನು ಕೆಲಸಕ್ಕೆ ಮಾಡಿಕೊಂಡು ನೋಡಿದೆನು – ಅವರೆಲ್ಲರೂ ನಮ್ಮ ಮನೆಯಿಂದ ಹಣ, ಬಟ್ಟೆ, ಮತ್ತಿತರ ವಸ್ತುಗಳನ್ನು ಕದಿಯುತ್ತಿದ್ದರು. ಇಷ್ಟು ಅಲ್ಲದೆ ನಮ್ಮ ಲೆಕ್ಕಕ್ಕೆ ನಾವು ಸಾಲ ತರುತ್ತಿದ್ದ ಅಂಗಡಿಯಿಂದ ನಮಗೆ ತಿಳಿಯದೆ ನಮ್ಮ ಲೆಕ್ಕಕ್ಕೆ ಸಾಲ ಪಡೆದೂ ನಮಗೆ ನಷ್ಟಪಡಿಸುತ್ತಿದ್ದರು. ಒಮ್ಮೆ ಅಂಗಡಿ ಲೆಕ್ಕವನ್ನು ನಾನು ತನಿಖೆ ಮಾಡಿ ನೋಡಿದಾಗ ಡೋರಾಳ ಬಗ್ಗೆ ಕೆಲವು ಬಾಟ್ಲಿ ಬ್ರೇಂದಿ, ವಿಸ್ಕಿ, ಮೊದಲಾದುವೂ ಅಂಗಡಿಯಿಂದ ನಮ್ಮ ಮನೆಗೆ ಬಂದದ್ದಾಗಿಯೂ ಕಂಡೆನು.

ನನಗೂ ಡೋರಾಳಿಗೂ ನಮ್ಮ ಮೊದಲನೇ ಜಗಳವು ಮೇರಿ ಎನ್ನೆ ಕಾಲದಲ್ಲಿ ನಡೆಯಿತು. ಒಂದು ದಿನ ಮಧ್ಯಾಹ್ನದ ಊಟವು ಅದು ಆಗಬೇಕಾಗಿದ್ದುದಕ್ಕಿಂತ ಒಂದು ಗಂಟೆ ತಡವಾಗಿ ಆಯಿತು. ಆ ದಿನ ನಾನು ಡೋರಾಳನ್ನು ಕರೆದಾಗ –
"ಗಡಿಯಾರವು ಸ್ವಲ್ಪ ಮುಂದೆ ಇರಬೇಕು" ಎಂದು ಹೇಳಿ ಮನೆ ಗೋಡೆಯ ಗಡಿಯಾರವನ್ನು ನೋಡುತ್ತಾ ಉತ್ತರವಿತ್ತಳು. ಆ ಗಡಿಯಾರವು ಮುಂದಿರುವುದರ ಬದಲು ಹಿಂದೆಯೇ ಇದೆಯೆಂದು ನನ್ನ ಗಡಿಯಾರವನ್ನು ಡೋರಾಳಿಗೆ ತೋರಿಸಿದೆ. ಆ ಕೂಡಲೇ ಅವಳು ಬಂದು ನನ್ನ ತೊಡೆಯ ಮೇಲೆ ಕುಳಿತು, ನನ್ನ ಮೂಗಿನ ತುದಿಯಿಂದ ನೆಟ್ಟಗೆ ಹಣೆಯಲ್ಲೇ ಪೆನ್ಸಿಲಿನಿಂದ ಗೆರೆಯೆಳೆಯುತ್ತಾ ನಾನು "ಹಾಗೆಲ್ಲ ತಂಟೆ ಮಾಡಬಾರದು" ಎಂದು ನಗಾಡುತ್ತಾ ಹೇಳಿದಳು.
"ಅಮ್ಮಾ ಡೋರಾ, ನೀನು ಮೇರಿ ಎನ್ನೆಯನ್ನು ಸ್ವಲ್ಪ ಎಚ್ಚರಿಸಬೇಕು" ಅಂದೆನು.
"ಅದು ಅಸಾಧ್ಯ. ನಾನು ಬುದ್ಧಿಯಿಲ್ಲದವಳೆಂದು ಹೇಳಿ, ಅವಳೇ ನನ್ನನ್ನು ಗದರಿಸಿಯಾಳು" ಅಂದಳು ಡೋರಾ.
ನನಗೆ ಸ್ವಲ್ಪ ಸಿಟ್ಟು ಬಂತು. ಮನೆಕೆಲಸದ ಕಡೆಗೆ ಅವಳು ಸ್ವಲ್ಪ ನಿಗಾ ಕೊಡಬೇಕೆಂದು ಹೇಳಿದೆನು. ನನ್ನ ಮಾತನ್ನು ಎಳ್ಳಷ್ಟು ಗಮನಿಸದೆ, ಸೀದಾ ಎದ್ದು ಬಂದು, ಪೆನ್ಸಿಲ್ ತೆಗೆದುಕೊಂಡು, ತನ್ನ ಬಾಯಿಗೆ ಮುಟ್ಟಿಸಿ ಮುಟ್ಟಿಸಿ, ನನ್ನ ಮುಖದ ಮೇಲೆಲ್ಲಾ ಬಣ್ಣದ ಗೆರೆಯನ್ನು ಎಳೆಯುತ್ತಾ
"ನಿನ್ನ ಮುಖಾ ನೋಡಿದರೆ ನಗೆ ಬರುತ್ತದೆ. ನನ್ನದು ತಪ್ಪೂಂತ ಏನಾದರೂ ಹೇಳಬೇಡ" ಎಂದು ಹಾಸ್ಯಮಾಡಿ ನನ್ನ ಬಾಯಿ ಮುಚ್ಚಿಸಿದಳು.
ಸ್ವಲ್ಪ ಹೊತ್ತು ಕಳೆದು ಪುನಃ ಹೇಳಿದೆನು –
"ನೋಡು ಡೋರಾ, ನೀನು ಮನೆ ಕೆಲಸದ ಕಡೆಗೆ ನಿಗಾ ಕೊಡದಿದ್ದರೆ, ನಾನೇ ಆ ಕೆಲಸವನ್ನೂ ಸಹ, ನನ್ನ ಇತರ ಕೆಲಸಗಳಿದ್ದ ಹಾಗೇ ಮಾಡಬೇಕಾಗುತ್ತದೆ. ಈ ಹೊತ್ತಿನ ಹಾಗೆ ಊಟ ತಡವಾದರೆ ನಾನು ಊಟ ಮಾಡದೇ ಹೋಗಬೇಕಾಗುತ್ತದೆ."

ಡೋರಾಳು ಸ್ವಲ್ಪ ನಡುಗತೊಡಗಿದಳು. ಅನಂತರ ಅಳುತ್ತಾ ಅಂದಳು –

"ನೀನು ನನ್ನನ್ನು ಬೈಯ್ಯುತ್ತೀಯಲ್ಲಾ?"
"ಬಯ್ಯೋದಲ್ಲವೇ ಡೋರಾ – ಚರ್ಚೆ ಮಾಡಿ ನಿನ್ನನ್ನು ಸರಿ ದಾರಿಗೆ ತರುವುದು."
"ಚರ್ಚೆ ಅಂದರೂ ಬಯ್ಯೋದಂದರೂ ಒಂದೇ" ಎಂದನ್ನುತ್ತಾ ಅಳುತ್ತಾ ಅಳುವಿನ ಮಧ್ಯವೇ –
"ನೀನು ನನ್ನನ್ನು ಹಾಗಾದರೆ ಮದುವೆಯಾದದ್ದೇಕೆ? ಮೊದಲೇ ಹೇಳಬಾರದಿತ್ತೇ ನನಗೆ ಬುದ್ಧಿ ಕಡಿಮೆ, ಬೇಡಾಂತ?"
ಈ ಸಂದರ್ಭದಲ್ಲಿ ನಾನು ಬಗ್ಗಲೇ ಬೇಕಾಯಿತು. ನಾನು ಅವಳನ್ನು ಸಮಾಧಾನಪಡಿಸುವುದಕ್ಕಾಗಿ –
"ಮುದ್ದೂ......." ಎಂದು ಮುಂದುವರಿಸುವ ಮೊದಲೇ ಅವಳು ಅನ್ನ ತೊಡಗಿದಳು.....
"ನಾನು ನಿನ್ನ 'ಮುದ್ದು' ಅಲ್ಲ. ಆಗಿದ್ರೆ ನೀನು ಚರ್ಚೆ ಹೀಗೊಂದು ಮಾಡುತ್ತಿರಲಿಲ್ಲ."
"ಸ್ವಲ್ಪ ಕೇಳು ಡೋರಾ, ನಿನ್ನೆ ಊಟವಿಲ್ಲದೆ ಹೋದೆ; ಮೊನ್ನೆ ಬೆಳಗ್ಗೆ ಸ್ನಾನದ ನೀರು ಬಿಸಿಯಾಗಿರಲಿಲ್ಲ. ಇಂದು ಊಟ ತಡವಾಗಿದೆ – ಇದರಲ್ಲೆಲ್ಲಾ ಮನೆಯಲ್ಲಿರುವ ನೀನು ಸ್ವಲ್ಪವಾದರೂ ಮನಸ್ಸು ಹಾಕಬೇಡವೇ?"
"ಕ್ರೂರಿ – ನಾನು ನಿನಗೆ ಬೇಡಾಂತ ಅಲ್ಲವೇ ಹೀಗೆಲ್ಲಾ ಮಾತಾಡುವುದು?" ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಅಳುವುದನ್ನು ಕಂಡು ನಾನು ಅಲ್ಲಿಂದೆದ್ದು ಹೋದೆನು.

ಅತ್ತೆಯ ಮನೆ ನಮ್ಮ ಮನೆಗೆ ಬಹು ಸಮೀಪವಾಗಿತ್ತು. ಒಂದು ಚಿಕ್ಕ ಕಾಲು ದಾರಿಯಿಂದ ನಾವು ಅತ್ತಿತ್ತ ಹೋಗಿಬರುತ್ತಿದ್ದೆವು. ಒಂದು ಕೈ ಬೆಳಕು ಹಿಡಿದುಕೊಂಡು ರಾತ್ರಿಯಲ್ಲಾದರೂ ಹೋಗಿಬರಲು ಅನುಕೂಲವಾದಷ್ಟು ಸಮೀಪದಲ್ಲಿತ್ತು ಅತ್ತೆಯ ಮನೆ. ನಾನು ಬೇಸರದಿಂದ ಡೋರಾಳನ್ನು ಬಿಟ್ಟು ಹೋದನಂತರ ಅತ್ತೆ ನಮ್ಮ ಮನೆಗೆ ಬಂದಿರಬೇಕು. ನಾನು ಆಫೀಸಿನಿಂದ ಕೆಲಸ ತೀರಿಸಿಕೊಂಡು ಬರುವಾಗ ಡೋರಾ ಅಳುವುದನ್ನು ನಿಲ್ಲಿಸಿದ್ದಳು – ಅತ್ತೆ ಸಮಾಧಾನಪಡಿಸಿರಬೇಕು.

ಆ ದಿನ ಅತ್ತೆಯನ್ನು ಗುಟ್ಟಾಗಿ ಕರೆದು, ಅವಳು ಡೋರಾಳಿಗೆ ನಾಲ್ಕು ಬುದ್ಧಿವಾದ ಹೇಳಿ ಮನೆ ಕೆಲಸದಲ್ಲಿ ತರಬೇತು ಮಾಡಬೇಕೆಂದು ಕೇಳಿಕೊಂಡೆನು. ಆದರೆ ಅತ್ತೆಯ ಅಭಿಪ್ರಾಯ ಪ್ರಕಾರ ಅವಳು ತರಬೇತು ಮಾಡುವುದಕ್ಕಿಂತಲೂ ನಾನೇ ತರಬೇತು ಮಾಡುವುದು ಒಳ್ಳೆಯದೆಂದೂ ನನ್ನಿಂದ ಅಸಾಧ್ಯವಾದಾಗ ಮಾತ್ರ, ಮಧ್ಯಸ್ಥಿಕೆಯ ರೀತಿಯಲ್ಲಿ ಅವಳು ಪ್ರವೇಶಿಸುವುದು ಉತ್ತಮವೆಂದೂ ತಿಳಿದೆನು. ಅವಳು ಹೇಳಿದಳು –
"ಟ್ರಾಟ್, ನೀನು ಅವಳಿಗೆ ಸಮಾಧಾನ ಹೇಳಿ, ಬುದ್ಧಿ ಹೇಳಿ, ಸರಿಪಡಿಸುವಾಗ, ಕೆಲವೊಮ್ಮೆ ಚಿಕ್ಕ ವಿವಾದಗಳೆದ್ದು ಬಂದರೂ ಅಂಥ ವಿವಾದಗಳು ನಿಮ್ಮಿಬ್ಬರ ಪ್ರೇಮದಿಂದ ಕ್ರಮೇಣವಾಗಿ ಶಾಂತವಾಗಿ ಇತ್ಯರ್ಥವಾಗಬಹುದು. ಇಲ್ಲಿ ನಿಮ್ಮಿಬ್ಬರೊಳಗೆ ಪ್ರೇಮದ ಬಾಂಧವ್ಯವಿದೆ, ಸಲಿಗೆಯಿದೆ. ನೀವು ಒಬ್ಬರನ್ನೊಬ್ಬರು ಹೆಚ್ಚು ಕಾಲ ಬಿಟ್ಟಿರಲಾರಿರಿ. ಅದರ ಬದಲು ನಾನು ಬುದ್ಧಿ ಹೇಳಿಯೋ ಅಥವಾ ಸಮಾಧಾನ ಮಾಡಲು ಪ್ರಯತ್ನಿಸಿಯೋ ಸೋತರೆ, ಸೋತು ಅವಳಿಗೆ ನನ್ನ ಮೇಲೆ ಸಿಟ್ಟಾದರೆ, ಅನಂತರ ಅವಳು ನಾನಿದ್ದಲ್ಲಿಗೇ ಬರಲಾರಳು. ಅವಳ ಸ್ವಭಾವ ಹಾಗೆ ತೋರುತ್ತದೆ. ಇದರಿಂದ ಕೊನೆಗೆ ನಮ್ಮ ಮೂವರೊಳಗೂ ಅಸಮಾಧಾನ ಮೂಡಬಹುದು. ನನ್ನ ಈ ಪ್ರಾಯದಲ್ಲಿ ಅಂಥ ಪರಿಸ್ಥಿತಿಯನ್ನು ತಂದುಕೊಳ್ಳಲು ನಾನು ತಯಾರಿಲ್ಲ. ನನ್ನ ಒಂದು ಕಾಲದ ದಾಂಪತ್ಯ ಜೀವನದ ಅನುಭವದ ಕಾರಣವಾಗಿ ಈವರೆಗೆ ನಾನು ಜನರಿಗೆಲ್ಲ ಒಂದು ವಿಧದ ನಿಷ್ಠುರಿಯಾಗಿ ಬೆಳೆದು ಬಂದಿದ್ದೇನೆ. ಹಿಂದಿನ ದಿನಗಳನ್ನು ಗ್ರಹಿಸಿ ನನ್ನ ಅಂದಿನ ವರ್ತನೆಗಳಿಗಾಗಿ ಕೆಲವೊಮ್ಮೆ ಪಶ್ಚಾತ್ತಾಪಪಡುತ್ತಲೂ ಇದ್ದೇನೆ. ಆದ್ದರಿಂದ ಇಂದು ಪುನಃ ನಾನು ಬಂಧುಗಳೊಳಗೆ ಕಠಿಣ, ನಿಷ್ಠುರ ಪ್ರಸಂಗ ಬರಬಹುದಾದಲ್ಲಿ ಕೈ ಹಾಕುವುದು ಅನುಚಿತ. ನಿನ್ನ ತಾಯಿಯು ಬಹು ಒಳ್ಳೆಯವಳಾಗಿದ್ದು, ಅನೇಕ ವಿಷಯಗಳಲ್ಲಿ ಡೋರಾಳಂತೆಯೇ ಹಸುಳೆಯಾಗಿಯೇ ಇದ್ದಳು. ಇಷ್ಟೆಲ್ಲ ತಿಳಿದಿದ್ದ ನಾನು ಆ ದಿನಗಳಲ್ಲಿ ನಾನು ನಡೆಯಬೇಕಾಗಿದ್ದಂತೆ ಅವಳೊಡನೆ ನಡೆದಿರುವುದಿಲ್ಲವೆಂದು ಈಗ ಬೇಸರಿಸುತ್ತೇನೆ. ನಿನ್ನ ಡೋರಾಳು ಸುಂದರಿ, ಸರಳೆ, ಇನ್ನೂ ಚಿಕ್ಕ ಹುಡುಗಿ. ಅವಳನ್ನು ಸಾವಧಾನದಿಂದ ದಾರಿಗೆ ತರುವಷ್ಟು ಬುದ್ಧಿ ಅನುಕೂಲಗಳು ನಿನ್ನಲ್ಲಿವೆ. ನಿನ್ನ ಪತ್ನಿಯನ್ನು ನೀನು ಸ್ವತಂತ್ರನಾಗಿ, ಇಚ್ಛಾಪೂರ್ವಕ ಆರಿಸಿಕೊಂಡಿರುವೆ. ನೀನು ಆರಿಸಿದುದರಲ್ಲಿ ತಪ್ಪೇನೂ ಆಗಿರುವುದಿಲ್ಲ. ಅವಳಲ್ಲಿರುವ ಗುಣಗಳಿಂದ ತೃಪ್ತನಾಗಿರುವುದು ನಿನ್ನ ಕರ್ತವ್ಯ. ಅವಳಲ್ಲಿ ಇಲ್ಲದ ಗುಣಗಳನ್ನು ಅಪೇಕ್ಷಿಸಿ, ಅವು ದೊರಕದೆ ನಿರುತ್ಸಾಹಿಯಾಗಿ, ನೀನು ಅವಳ ಮೇಲೆ ಕೋಪಿಸಿಕೊಳ್ಳಲು ನಿನಗೆ ಹಕ್ಕಿಲ್ಲ. ಇದ್ದ ಗುಣಗಳಿಂದಲೇ ನೀನು ತೃಪ್ತಿಪಟ್ಟುಕೊಂಡು ಬಾಳಬೇಕು – ಅಷ್ಟೆ.

ಅತ್ತೆ ಇದೇ ರೀತಿಯಲ್ಲಿ ಮಾತಾಡುತ್ತಾ ಬಹಳ ಹೊತ್ತು ಕುಳಿತಿದ್ದಳು. ಅನಂತರ ನಾನು ಅವಳನ್ನು ಅವಳ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದೆನು. ನಾನು ವಾಪಾಸು ಮನೆಗೆ ಬರುವಾಗ ಡೋರಾಳು ಮನೆಯ ಮುಂಬಾಗಿಲಿನಲ್ಲಿ ಬಂದು ನಿಂತು ನನ್ನನ್ನು ನಿರೀಕ್ಷಿಸುತ್ತಿದ್ದಳು. ನನ್ನನ್ನು ಕಂಡೊಡನೆ –
"ಡೇವೀ" ಅಂದಳು.
"ಏನು ಮುದ್ದೂ, ಆಗ ನಿನಗೆ ಸಿಟ್ಟಾಯಿತೇ" ಎಂದಂದೆ ನಾನು.
"ಸಿಟ್ಟು ಬಂದು ಹೋಯಿತು, ಆದರೆ......" ಎಂದಂದು ಅವಳು ಮಾತು ಮುಂದುವರಿಸುವ ಮೊದಲು ನಾನಂದೆ –
"ನಿನಗೆ ಸಿಟ್ಟು ಬಂದರೂ ನನಗೆ ಸಿಟ್ಟು ಬರುವುದಿಲ್ಲ – ನನಗೆ ಬರುವುದು ದುಃಖ ಮಾತ್ರ."

"ನೋಡು ಡೇವೀ, ನನಗೆ ಅನುಭವ ಕಡಿಮೆಯಾದ್ದಕ್ಕೆ ನಾನೇನು ಮಾಡುವುದು? ನಾನು ಏಗ್ನೆಸ್ಸಳ ಜತೆಯಲಿ ಬೆಳೆದಿದ್ದರೆ ಬುದ್ಧಿವಂತೆಯಾಗುತ್ತಿದ್ದೆ."

"ಅದು ಹೌದು ಡೋರಾ, ನನ್ನ ಮುದ್ದೂ. ಏಗ್ನೆಸ್ಸಳು ನನ್ನ ಬುದ್ಧಿಯನ್ನೇ ಸರಿಪಡಿಸಿದ್ದಾಳೆ. ನಿನಗಂತೂ ಅವಳಿಂದ ತುಂಬಾ ಪ್ರಯೋಜನವಾಗದೆ ಇರದು. ಆದರೆ ಹೆದರಬೇಡ – ಅವಸರವಿಲ್ಲ. ನೀನಿನ್ನೂ ಚಿಕ್ಕವಳೇ ಅಷ್ಟೆ? – ದಿನ ಹೋದಂತೆ ಕಲಿಯುವೆ" ಎಂದು ನಾನು ಸಮಾಧಾನ ಹೇಳಿದೆ.

"ನನ್ನ ಹೆಸರು 'ಡೋರಾ' ಎಂದು ಬೇಡ – 'ಬೇಬಿ' ಎಂದೇಕೆ ಇಡಬಾರದು? ಹಾಗೆ ಹೆಸರಿಟ್ಟರೆ ನೀನು ನನ್ನನ್ನು ಕರೆಯುವಾಗಲೆಲ್ಲ ನನಗೆ ಬುದ್ಧಿಯಿಲ್ಲಾಂತ ಗೊತ್ತಾಗಿ, ನನ್ನನ್ನು ಬೈದು ಸರಿಪಡಿಸುವ ಬದಲು ಪ್ರೀತಿಯಿಂದ ಆಲೋಚಿಸಿ ಸರಿಪಡಿಸುವೆ. ಆ ಹೆಸರಿಟ್ಟು ನೋಡು" ಅಂದಳು ಡೋರಾ.

ಅವಳ ಸರಳವಾದ ತರ್ಕ, ಮಿತಿಯಿಲ್ಲದ ಪ್ರೇಮ, ನನಗೆ ಸಹಾಯವಾಗಬೇಕೆಂಬ ಶ್ರದ್ಧೆ, ಇವನ್ನು ಕಂಡು ನಾನು ಬಹು ಸಂತೋಷಪಟ್ಟೆನು.

ನಮ್ಮ ಗೃಹಕೃತ್ಯದಲ್ಲಿ ಇನ್ನೂ ಇದೇ ತರದ ಅನೇಕ ಚಿಕ್ಕ ಚಿಕ್ಕ ಲೋಪ ದೋಷಗಳು ನಡೆದು ಬರುತ್ತಿದ್ದುವು. ಟ್ರೇಡಲ್ಸನನ್ನು ಕರೆದು ಒಂದು ದಿನ ಔತಣ ಏರ್ಪಡಿಸಿದಾಗ ಡೋರಾಳೇ ಸ್ವತಃ ಹೋಗಿ ತಂದು ಪಾಕಮಾಡಿದ್ದ ಆಯಿಸ್ಟರಿನಲ್ಲಿ (ಮೀನನ್ನು ಒಳಗೊಳ್ಳುವ ಮುತ್ತಿನ ಚಿಪ್ಪು) ಮೀನೇ ಇರಲಿಲ್ಲ. ಡೋರಾಳ ಹೆಡ್ಡತನವನ್ನು ಕಂಡು ಅಂಗಡಿಯವನು ಟೊಳ್ಳು ಆಯಿಸ್ಟರನ್ನು ಅವಳಿಗೆ ಮಾರಿರಬೇಕು! ಹೀಗೆಯೇ ಇನ್ನೊಂದು ಔತಣದಲ್ಲೂ ನಡೆಯಿತು. ಟ್ರೇಡಲ್ಸನಿಗೆ ಮತ್ತು ನನಗೆ ಚಿಕ್ಕ ಮೀನುಗಳ ಮೇಲೋಗರದ ಮೇಲೆ ಪ್ರೀತಿಯಿದೆ ಎಂಬುದನ್ನು ತಿಳಿದು ಡೋರಾಳು ಅವಳೇ ಅಂಗಡಿಗೆ ಹೋಗಿ ಮೀನು ತಂದು ಮೇಲೋಗರವನ್ನು ಮಾಡಿದಳು. ಆದರೆ, ಆ ಮೇಲೋಗರವನ್ನು ಊಟಕ್ಕೆ ಬಡಿಸಿದಾಗ, ಆ ಮೀನೆಲ್ಲ ಚಿಕ್ಕ ಮೀನುಗಳೇ ಪುಷ್ಟಿಯಾಗಿ ಬೆಳೆದು ದೊಡ್ಡದಾದವು ಎಂದು ಡೋರಾಳು ಗ್ರಹಿಸಿ ತಂದಿದ್ದ ದೊಡ್ಡ ಮೀನುಗಳಾಗಿದ್ದು, ಅಂದಿನ ಊಟ ವ್ಯರ್ಥವಾಯಿತು.

ನಮ್ಮ ಮನೆ ಚಿಕ್ಕದು. ಅದರಲ್ಲಿ ಎಲ್ಲಾ ಕಡೆಯಲ್ಲೂ ಪಾತ್ರೆ, ಬಟ್ಟೆ, ಪುಸ್ತಕ, ಆಟದ ಸಾಮಾನು ಮೊದಲಾದುವುಗಳು ಹರಗಣಗಳಾಗಿ ಬಿದ್ದಿರುತ್ತಿದ್ದುವು. ಈ ಕ್ರಮದ ಜತೆಗೆ ನಮ್ಮ ಊಟದ ಕೋಣೆಯಲ್ಲೇ ಜಿಪ್ಪನ ಮನೆಯೂ ಇರಲೇಬೇಕೆಂದು ಡೋರಾಳ ಏರ್ಪಾಡು. ನಮ್ಮ ಊಟದ ಮಧ್ಯೆ ಜಿಪ್ಪನು ಮೇಜನ್ನು ಹತ್ತಿ ಬಟ್ಟಲನ್ನು ತುಳಿದು ಬಾಲ ಅಲ್ಲಾಡಿಸುವುದೂ ಇತ್ತು. ಇನ್ನು, ಜಿಪ್ಪನನ್ನು ಹೆದರಿಸಿದರೆ ಡೋರಾಳನ್ನು ಹೆದರಿಸಿದ ಫಲವೇ ಆಗುತ್ತಿತ್ತು.

ನಮ್ಮ ಗೃಹಕೃತ್ಯಕ್ಕೆ ಸಂಬಂಧಿಸಿದ ಲೆಕ್ಕದ ಕಥೆ ಹೇಳಬೇಕೇ! ಇದರಲ್ಲಿ ಡೋರಾಳ ಶ್ರದ್ಧೆ ಏನೂ ಕಡಿಮೆಯಾಗಿರಲಿಲ್ಲ. ಅವಳೇ ಅಂಗಡಿಗೆ ಹೋಗಿ ಲೆಕ್ಕ ಬರೆಯಲೋಸ್ಕರ ಒಂದು ದೊಡ್ಡ ಪುಸ್ತಕವನ್ನು ತಂದಳು. ಪುಸ್ತಕವನ್ನು ಬಿಚ್ಚಿಟ್ಟು ನಾಲ್ಕೈದು ಲೇಖನಿಕೆಗಳನ್ನು ಶಾಯಿ ದೌತಿಯೊಳಗೆ ಅದ್ದಿ ಇಟ್ಟು, ಕುರ್ಚಿ ಮೇಜನ್ನೆಲ್ಲ ಸರಿಪಡಿಸಿಕೊಂಡು ಬರೆಯಲು ಪ್ರಾರಂಭಿಸಿದಳು. ಆ ದಿನದ ಅವಳ ಉತ್ಸಾಹವನ್ನು ನಾನು ಅಡಗಿ ನೋಡುತ್ತಾ ನಿಂತಿದ್ದೆ. ಅವಳು ನಾನು ಅಡಗಿ ನೋಡಿದ್ದನ್ನು ತಿಳಿದು ಅಂದಳು –

"ಗೊತ್ತಾಯಿತು, ಗೊತ್ತಾಯಿತು, ಅಡಗಿ ಪರೀಕ್ಷಿಸುತ್ತೀಯಾ. ನೀನು ಬುದ್ಧಿವಂತಾಂತ ಗೊತ್ತುಂಟು. ನಾನೂ ನಿನ್ನ ಹಾಗಾಗಬೇಕೆಂದು ಕಲಿಯುತ್ತಾ ಇದ್ದೇನೆ, ನೋಡು!" ಈ ಮಧ್ಯೆ ಜಿಪ್ಪನನ್ನು ಕರೆದು –

"ನನಗೆ ಬುದ್ಧಿಯಿಲ್ಲವಂತೆ, ಹೌದೇ ಜಿಪ್?" ಎಂದು ಪ್ರಶ್ನಿಸಿದಳು.

ಜಿಪ್ ಅದರ ರೂಢಿಯಂತೆ ಅವಳನ್ನು ನೆಕ್ಕಿ ಬಾಲ ಅಲ್ಲಾಡಿಸಿ, ಆವರೆಗೆ ಬರೆದಿಟ್ಟಿದ್ದ ಪುಟಗಳ ಮೇಲೆ ಅವನ ಹೆಜ್ಜೆಯ ಮುದ್ರೆಯನ್ನು ಒತ್ತಿದನು. ಲೆಕ್ಕವೆಲ್ಲ ಈ ಕ್ರಮದ್ದು – ಎಲ್ಲವೂ ಅಪೂರ್ಣ, ಚಿತ್ತು, ವಿಕಾರ!

ಪಾಕಶಾಸ್ತ್ರದ ಪುಸ್ತಕವನ್ನು ತಂದುಕೊಟ್ಟೆ. ಅಡಿಗೆಯನ್ನು ಅಭ್ಯಾಸ ಮಾಡಬೇಕೆಂದು ತಿಳಿಸಿದೆನು. ಅಡಿಗೆಯನ್ನೇನೋ ಮಾಡಿದಳು. ಆ ಪುಸ್ತಕದಲ್ಲಿ ಹೇಳಿದ ಪ್ರಕಾರ ಗಡಿಯಾರವಿಟ್ಟುಕೊಂಡು ಹುರಿದು, ಬೇಯಿಸಿ, ಒಗ್ಗರಣೆ ಹಾಕಿ, ಬೆಂಕಿ–ಕಾಲ–ಪ್ರಯತ್ನ ಈ ಮೂರನ್ನೂ ಶಾಸ್ತ್ರ ಪ್ರಕಾರವೇ ಮಾಡಿದಳು. ಆದರೆ ಯಾವುದರಲ್ಲೋ ತಪ್ಪಿಸಿಕೊಂಡು ಕೆಲವು ಹಸಿ, ಕೆಲವು ಸುಟ್ಟು, ಈ ರೀತಿ ಮಾಡಿದ ಪದಾರ್ಥ ಹಾಳಾಗಿತ್ತು. ಈ ರೀತಿ ಅವಳು ಮಾಡಿದಾಗಲೆಲ್ಲ ಸರ್ವಸಾಧಾರಣವಾಗಿ ಅಡಿಗೆಯು ಹಾಳೇ ಆಗಿರುತ್ತಿತ್ತು.

ಆದರೆ ಸಂಗೀತ, ನೃತ್ಯ, ಚಿತ್ರ ಬರೆಯುವುದು ಇವುಗಳಲ್ಲಿ ಸ್ವಲ್ಪ ಪರಿಶ್ರಮ ತೆಗೆದುಕೊಳ್ಳುತ್ತಿದ್ದಳು. ಆದರೂ ಚಿತ್ರ ಬರೆಯುವ ಗದ್ದಲದಲ್ಲಿ ನಮ್ಮ ಲೆಕ್ಕ ಪುಸ್ತಕದಲ್ಲೂ ಚಿತ್ರವನ್ನು ಬರೆದು ಬಿಡುತ್ತಿದ್ದಳು ಮತ್ತು ಈ ಚಿತ್ರಗಳ ಪೈಕಿ ಜಿಪ್ಪನದೂ ಅನೇಕವಿರುತ್ತಿದ್ದುವು.

ಡೋರಾಳ ನನ್ನ ಮೇಲಿನ ಪ್ರೀತಿ ವಾತ್ಸಲ್ಯದಲ್ಲಿ ಏನೂ ಕೊರತೆಯಿರಲಿಲ್ಲ. ಈ ಗುಣದಿಂದಲೇ ಅವಳ ಚಿಕ್ಕ ಪುಟ್ಟ ಲೋಪದೋಷಗಳನ್ನು ಮರೆಯಿಸಿಬಿಡುತ್ತಿದ್ದಳು. ನಾನು ಬಹು ರಾತ್ರಿಯವರೆಗೂ ಕೆಲಸ ಮಾಡುವ ಕ್ರಮವಿತ್ತು. ಅವಳು ನಾನು ಮಲಗುವವರೆಗೂ ಕಾದು ಕುಳಿತು ನೋಡುತ್ತಿರುತ್ತಿದ್ದಳು.

ನನ್ನ ಪ್ರಿಯ ಡೋರಾಳನ್ನು ನಾನು ಪ್ರೀತಿಯಿಂದ ಹೊರತಾಗಿ ಇತರ ಯಾವ ಭಾವನೆಗಳಿಂದಲೂ ಕಂಡಿರುವುದಿಲ್ಲ. ಅವಳಲ್ಲಿದ್ದ ಕೊರತೆಗಳಿಗಾಗಿ ನಾನು ಗುಪ್ತವಾಗಿ ದುಃಖಿಸುತ್ತಿದ್ದೆನಾದರೂ ಅವಳ ಮೇಲೆ ಎಂದೂ ಕೋಪಿಸಿಕೊಳ್ಳುತ್ತಿರಲಿಲ್ಲ. ನಮ್ಮ ಮನೆ, ನಮ್ಮ ಸ್ನೇಹಿತರು, ನೆಂಟರು ಎಂಬ ತಿಳಿವಳಿಕೆಯಿದ್ದು ನಮ್ಮೆಲ್ಲರನ್ನೂ ಅವಳು ತುಂಬಾ ಪ್ರೀತಿ, ವಿಶ್ವಾಸ, ಗೌರವಗಳಿಂದ ಕಾಣುತ್ತಿದ್ದಳು. ಅವಳ ಶಕ್ತಿ ಮೀರಿಯೇ ನಮ್ಮನ್ನು ಸಂತೋಷಪಡಿಸಲು ಕೆಲಸ ಮಾಡುತ್ತಿದ್ದಳು. ನನ್ನ ಅತ್ತೆಯಲ್ಲೂ ಅವಳಿಗೆ ತುಂಬಾ ಪ್ರೇಮವಿತ್ತು. ಅತ್ತೆಯೂ ಸಹ ನಾನು ಬೇರೆ ಡೋರಾಳು ಬೇರೆಯೆಂದು ಕಾಣದೆ ನಮ್ಮೀರ್ವರನ್ನು ಏಕಮಾನವಾದ ಪ್ರೀತಿಯಿಂದ ಕಾಣುವಳು. ಅತ್ತೆಗೆ ಡೋರಾಳ ಮೇಲಿದ್ದ ಪ್ರೀತಿ ಮತ್ತು ವಾತ್ಸಲ್ಯ ಶಬ್ದದಲ್ಲೇ ಎದ್ದು ಕಾಣುವಂತೆ ಅತ್ತೆ ಡೋರಾಳಿಗೆ ತನ್ನ ಕಡೆಯದೇ ಆದ ಒಂದು ಹೆಸರಿಟ್ಟು 'ನವಕುಸುಮ' ಎಂದು ಕರೆಯುತ್ತಿದ್ದಳು.

ಅಧ್ಯಾಯ ನಲ್ವತ್ತೈದು

ಮಿ. ಡಿಕ್ಕರನ್ನು ಕುರಿತಾದ ಅತ್ತೆಯ ಭವಿಷ್ಯವಾಣಿ ನಿಜವಾಯಿತು

ಡಾ। ಸ್ಟ್ರಾಂಗರ ಕಾರ್ಯದರ್ಶಿ ಕೆಲಸವನ್ನು ಬಿಟ್ಟು ಈಗಾಗಲೇ ಕೆಲವು ದಿನಗಳಾಗಿವೆ. ನನ್ನ ಕೆಲಸವನ್ನು ಬಿಟ್ಟರೂ ಅವರ ಮನೆಗೆ ಆಗಿಂದಾಗ್ಗೆ ಹೋಗಿಬರುವುದನ್ನು ಬಿಡಲಿಲ್ಲ. ನಮ್ಮ ಮನೆಗೂ ಅವರ ಮನೆಗೂ ವಿಶೇಷ ದೂರವಿಲ್ಲದಿದ್ದುದು ಹೀಗೆ ಹೋಗಿ ಬರಲು ಬಹಳ ಅನುಕೂಲವಾಗಿತ್ತು. ಕೆಲವೊಮ್ಮೆ ನಾವು ಅಲ್ಲಿಗೆ 'ಟೀಪಾರ್ಟಿ'ಗಳಿಗಾಗಿಯೂ ಹೋಗುತ್ತಿದ್ದೆವು. ತನ್ನ ಚಿಕ್ಕ ಪ್ರಾಯದ ಪತ್ನಿಯ ಸಂತೋಷಕ್ಕಾಗಿ ಸಮಾಜದಲ್ಲಿ ನಡೆದುಬರುವ 'ಪಾರ್ಟಿ'ಗಳನ್ನೂ ಹಾಸ್ಯ, ವಿನೋದ ಮೊದಲಾದುವುಗಳನ್ನೊಳಗೊಂಡ ಚಟುವಟಿಕೆಗಳನ್ನು ಅವರು ತಮ್ಮ ಮನೆಯಲ್ಲಿ ಆಗಿಂದಾಗ್ಗೆ ಜರುಗಿಸುತ್ತಿದ್ದರು. ಈ ಕೆಲಸಗಳನ್ನೆಲ್ಲ ಅವರು ಬಹು ನಿಷ್ಠೆಯಿಂದಲೇ ನಡೆಸುತ್ತಿದ್ದರು. ಡಾ। ಸ್ಟ್ರಾಂಗರ ಮನೋಭಾವಗಳನ್ನು ಅರಿತಿದ್ದ ಮಿಸೆಸ್ ಮಾರ್ತಲ್ ಹೇಮಳು ತನ್ನ ಮಗಳ ಗೃಹಕೃತ್ಯಗಳಲ್ಲಿ ಸಹಾಯ ಒದಗಿಸಲು ಎಂದಂದುಕೊಂಡು –
ತನಗೆ ಬಹು ಪ್ರಿಯವಾಗಿದ್ದ ವಿಲಾಸ ವಿನೋದಗಳನ್ನು ಅನುಭವಿಸುವುದಕ್ಕಾಗಿಯೇ ಡಾಕ್ಟರ್ ಸ್ಟ್ರಾಂಗರ ಮನೆಯಲ್ಲಿ – ಸಾಧಾರಣ ಶಾಶ್ವತವಾಗಿಯೇ ಎಂಬಷ್ಟರ ಮಟ್ಟಿನಲ್ಲಿ ನೆಲೆಸಿಬಿಟ್ಟಿದ್ದಳು. ಡಾಕ್ಟರರ ಪತ್ನಿಗೆ ಇಷ್ಟವಿಲ್ಲದಿದ್ದರೂ ಈ 'ಸಿಪಾಯಿ'ಯು (ಮಿಸೆಸ್ ಮಾರ್ತಲ್ ಹೇಮಳನ್ನು ನಾವು ಹಾಗೆಯೇ ಹಿಂದಿನಿಂದ ಹೇಳಿಕೊಳ್ಳುತ್ತಿದ್ದೇವಷ್ಟೆ) "ಎನ್ನೆ, ಇಂದು ಕವೆಂಟ್ ಗಾರ್ಡನ್ನಿನ ಅಪೇರ ನೋಡಲು ಹೋಗೋಣ. ನಾಡಿದ್ದು ಮಾರ್ಕೆಟ್ ವಠಾರದ ವಸ್ತುಪ್ರದರ್ಶನ ನೋಡಲು ಹೋಗೋಣ" ಎಂದು ಮೊದಲಾಗಿ ಹೇಳಿ ಮಗಳನ್ನು ಒತ್ತಾಯಪಡಿಸಿ ಕರೆದುಕೊಂಡು ಹೋಗುತ್ತಿದ್ದಳು.

ಮಿ. ಡಿಕ್ಕರು ಒಂದು ದಿನ ಹಠಾತ್ತಾಗಿ ನನ್ನ ಹತ್ತಿರ ಬಂದು ಕುಳಿತುಕೊಂಡು, ಏನೋ ಒಂದು ವಿಶೇಷ ಕಾರ್ಯಕ್ಕಾಗಿ ಬಂದಿದ್ದವರಂತೆ ಗಂಭೀರ ಮುಖಮುದ್ರೆಯಿಂದ ಸ್ವಲ್ಪ ಹೊತ್ತು ನನ್ನನ್ನೇ ನೋಡಿ, ಕೊನೆಗೆ,
"ಮಿ. ಕಾಪರ್ಫೀಲ್ಡ್, ನಿಮ್ಮಲ್ಲಿ ಕೆಲವು ಮಾತುಗಳನ್ನು ಕೇಳಬೇಕೆಂದಿದ್ದೇನೆ" ಅಂದರು.
"ಕೇಳಿ, ಮಾತಾಡೋಣ" ಅಂದೆ ನಾನು.
"ವಿಶೇಷವೇನೂ ಇಲ್ಲ – ನಿಮ್ಮ ಅತ್ತೆಯಷ್ಟು ಬುದ್ಧಿವಂತೆ ಹೆಂಗುಸು ಬೇರೊಬ್ಬಳಿಲ್ಲ" ಅಂದರು.
"ಅದಕ್ಕೆ ಸಂಶಯವೇನು?" ಅಂದೆ ನಾನು.
"ಡಾಕ್ಟರ್ ಸ್ಟ್ರಾಂಗರೂ ಬಹು ಬುದ್ಧಿವಂತರೂ ಘನಸ್ಥರೂ ಅಲ್ಲವೇ ಟ್ರಾಟೂಡ್?"
"ಅದಕ್ಕೂ ಸಂಶಯವಿಲ್ಲ; ಅವರೂ ಬುದ್ಧಿವಂತರು, ಗೌರವಾನ್ವಿತರು ಮತ್ತು ಮಹಾ ಜ್ಞಾನಿಗಳು."
"ಅವರಿಗಾಗಿ ನಾನು ಮಾಡುತ್ತಿರುವ ಪ್ರಯತ್ನ ಗೊತ್ತಿದೆಯೇ?" ಎಂದು ಪ್ರಶ್ನಿಸಿದರು.
"ಇಲ್ಲ, ಏನದು?"
"ಅವರೂ ಅವರ ಪತ್ನಿಯವರೂ " ಎಂದಿಷ್ಟೇ ಹೇಳಿ, ಆ ಮಾತು ಮುಂದುವರಿಸದೆ, ಇನ್ನೊಂದು ವಿಷಯಕ್ಕೆ ಪ್ರವೇಶಿಸಿದಂತೆ –
"ಟ್ರಾಟೂಡ್, ಅವರೂ .. ಅವರ ಪತ್ನಿಯವರೂ ಯೋಗ್ಯರಲ್ಲವೆ?" ಎಂದು ಕೇಳಿದರು.
"ಖಂಡಿತವಾಗಿಯೂ ಹೌದು" ಎಂದು ನಾನು ಉತ್ತರವಿತ್ತೆನು.
"ಅವರೂ ಅವರ ಪತ್ನಿಯವರೂ (ಇದೆಲ್ಲಾ ಗೋಪ್ಯವಾಗಿರಲಿ) ಸುಖವಾಗಿರಬೇಕೆಂದೂ ನಾನು ಮನವಿ ಬರೆದು ಗಾಳಿಪಟದ ಮುಖಾಂತರ ಕಳುಹಿಸುತ್ತಿರುತ್ತೇನೆ, ಉತ್ತರವಿನ್ನೂ ಬರಲಿಲ್ಲ. ನನ್ನ ಈ ಪ್ರಯತ್ನ ಏನೆಂದು ಗೊತ್ತಿದೆಯೇ ಟ್ರಾಟ್?" ಎಂದು ಮಿ. ಡಿಕ್ಕರು ಕೇಳಿದರು. ಇಷ್ಟು ಮಾತು ನಮ್ಮೊಳಗೆ ನಡೆದು ಮುಗಿಯುವಷ್ಟರಲ್ಲೇ ಅತ್ತೆಯೂ ಡೋರಾಳೂ ನಾವಿದ್ದಲ್ಲಿಗೆ ಬಂದರು. ಹೀಗಾಗಿ ನಮ್ಮ ಮಾತು ಅಲ್ಲಿಗೇ ನಿಂತಿತು.

ಈ ಮಾತುಗಳು ನಡೆದ ಕೆಲವು ದಿನಗಳನಂತರ ಒಂದು ದಿನ ನಾನೂ ಅತ್ತೆಯೂ ಡಾಕ್ಟರ್ ಸ್ಟ್ರಾಂಗರ ಮನೆಗೆ ಹೋದೆವು. ಮಿಸೆಸ್ ಸ್ಟ್ರಾಂಗಳು ನಮ್ಮನ್ನು ಎದುರುಗೊಂಡು ಒಳಗೆ ಕರೆದುಕೊಂಡು ಹೋಗಿ ಆಸನಗಳನ್ನಿತ್ತು ನಮ್ಮನ್ನು ಕುಳ್ಳಿರಿಸಿದಳು. ಅನಂತರ ಅವಳೂ ನಮ್ಮ ಜತೆಯಲ್ಲೇ ಕುರ್ಚಿಯಲ್ಲಿ ಕುಳಿತು ಮಾತಾಡತೊಡಗಿದಳು. ಹೀಗೆ ನಾವು ಸ್ವಲ್ಪ ಮಾತಾಡುತ್ತಿದ್ದಾಗ ಮಿಸೆಸ್ ಮಾರ್ತಲ್ ಹೇಮಳು ತನ್ನ ಬೀಸಣಿಗೆಯನ್ನೂ ವೃತ್ತಪತ್ರಿಕೆಯನ್ನೂ ಹಿಡಿದುಕೊಂಡು ನಮ್ಮ ಜತೆಯಲ್ಲೇ ಬಂದು ಕುಳಿತಳು. ಅವಳು ಆಗಲೇ ಮಗಳನ್ನು ಕರೆದು,
"ಎನ್ನೆ, ಡಾಕ್ಟರರ ಕೋಣೆಯಲ್ಲಿ ಇಬ್ಬರು ಗೃಹಸ್ಥರಿರುವರಷ್ಟೆ – ಅವರಿದ್ದುದನ್ನು ನನಗೇಕೆ ತಿಳಿಸಲಿಲ್ಲ?" ಎಂದು ಕೇಳಿದಳು.
"ಅಲ್ಲಿ ಯಾರಿದ್ದದ್ದೂ ನನಗೆ ಗೊತ್ತಿಲ್ಲ" ಅಂದಳು ಮಗಳು.
"ಅಲ್ಲಿದ್ದವರ ಮಾತು ಕೇಳಿ ನಾನು ಡಾಕ್ಟರರ ಕೋಣೆಗೆ ಹೋದೆ. ಅಲ್ಲಿದ್ದವರು ವಕೀಲರಂತೆ ತೋರಿದರು. ನಾನಲ್ಲಿಗೆ ತಲಪುವಾಗಲೇ ಅವರಿಬ್ಬರು ತಮ್ಮ ಕೆಲಸ ಪೂರೈಸಿ ಹೊರಟಿದ್ದಂತೆ ತೋರಿದರು. ಡಾಕ್ಟರ್ ಸ್ಟ್ರಾಂಗರು ತಮ್ಮ ಮೇಜಿನ ಮೇಲಿದ್ದ ಒಂದು ರಿಕಾರ್ಡು ಕಟ್ಟನ್ನು ಒಂದು ಕೈಯಿಂದ ಮುಟ್ಟಿ ತೋರಿಸಿಕೊಂಡು ಹೇಳುತ್ತಿದ್ದ ಮಾತುಗಳನ್ನು ಕೇಳಿ ನಾನಲ್ಲೇ ನಿಂತೆ ಮಾತ್ರವಲ್ಲ, ಈ ಮೊದಲೇ ಹೋಗಿರಲಿಲ್ಲವಲ್ಲಾ ಎಂದೂ ಗ್ರಹಿಸಿದೆ. ನೀನಾದರೂ ಹೋಗಬಹುದಿತ್ತು ಎನ್ನೆ" ಎಂದು ಸ್ವಲ್ಪ ಅಸಮಾಧಾನ ಸೂಚಿಸುತ್ತಾ ಮಿಸೆಸ್ ಮಾರ್ತಲ್ ಹೇಮಳು ಅಂದಳು. ಇಷ್ಟರಲ್ಲಿ ಮಿಸೆಸ್ ಸ್ಟ್ರಾಂಗಳು ನಮ್ಮ ಕೋಣೆಯಿಂದ ಹೋದಳು.

ಅನಂತರ ಸ್ವಲ್ಪ ಸುಮ್ಮನಿದ್ದು, ನಮ್ಮೆಲ್ಲರ ಸಮಕ್ಷಮದಲ್ಲಿ ಹೇಳಬಾರದೋ ಎಂದು ಗ್ರಹಿಸಿಕೊಂಡು, ಹೇಳಿದರೆ ತಪ್ಪಿಲ್ಲವೆಂಬಂತೆ, ಮಿಸೆಸ್ ಮಾರ್ತಲ್ ಹೇಮಳು ಪುನಃ ಹೇಳತೊಡಗಿದಳು –
"ನಾನು ಆ ಕಡೆ ಹೋಗಬೇಕಾಯ್ತು, ಏಕೆಂದರೆ ಈ ಮನೆಯಲ್ಲಿ ದೀಪ ಹೊತ್ತಿಸಿಡುವ ಪದ್ಧತಿ ಬಹು ಕಡಿಮೆ. ನಾನು ಕುಳಿತು ಪತ್ರಿಕೆಯನ್ನೋದಲು ಅನುಕೂಲವಾದ ಸ್ಥಳ ಸಿಕ್ಕದೇ ಕೊನೆಗೆ ಡಾಕ್ಟರರ ಕೋಣೆಗೆ ಹೋದೆನು. ಅಲ್ಲಿ ಕರುಣಾಳುಗಳಾದ – ಮಗುವಿನಂತಿರುವ, ಡಾಕ್ಟರ್ ಸ್ಟ್ರಾಂಗರು ಹೇಳುತ್ತಿದ್ದ ಮಾತು ಹೀಗಿತ್ತು: 'ಈ ರಿಕಾರ್ಡಿನ ಒಕ್ಕಣೆಗಳಿಂದ ನನ್ನ ಪತ್ನಿಯನ್ನು ನಾನು ಎಷ್ಟೊಂದು ಪ್ರೀತಿಸಿ ಗೌರವಿಸುತ್ತಿದ್ದೇನೆಂಬುದೂ ಅವಳ ಸುಖಕ್ಕಾಗಿ ಎಲ್ಲಾ ಆಸ್ತಿಗಳನ್ನೂ ಯಾವ ಶರ್ತವನ್ನೂ ಹಾಕದೆ ಅವಳಿಗೆ ವಹಿಸಲಾಗಿದೆಯೆಂಬುದೂ ಸ್ಪಷ್ಟವಾಗುತ್ತದಷ್ಟೆ' ಎಂದು." ಬಹು ಹಿಗ್ಗಿನಿಂದ ಹೇಳುತ್ತಾ ಬೀಸಣಿಗೆಯನ್ನು ಬೀಸಿಕೊಂಡಳು.

ಈ ಮಾತು ಕೇಳುತ್ತಿದ್ದ ಹಾಗೆ ಅತ್ತೆಗೆ ಸಿಟ್ಟು ಬರತೊಡಗಿತ್ತು. ಆದರೆ ಮಿಸೆಸ್ ಮಾರ್ತಲ್ ಹೇಮಳು ಯಾವುದನ್ನು ಊಹಿಸದೆ, ಗ್ರಹಿಸದೆ ತನ್ನ ಸಿಯಾಯಿಗಿರಿಯನ್ನೆಲ್ಲ ಹೇಳಿಕೊಂಡಳು. ಅವಳ ಮಾತುಗಳ ಮುಖ್ಯ ಸಾರಾಂಶ: ಡಾಕ್ಟರ್ ಸ್ಟ್ರಾಂಗರು ವೃದ್ಧರೂ ಹಣವಂತರೂ ಆಗಿರುವಾಗ, ಚಿಕ್ಕ ಪ್ರಾಯದವಳೂ ಸುಂದರಿಯೂ ಆಗಿದ್ದ ಎನ್ನೆಯನ್ನು ಕೊಟ್ಟು ಮದುವೆ ನಡೆಸಿದ್ದ ಸಂಬಂಧವಾಗಿ ಉಭಯ ಪಕ್ಷದವರೂ ತಂತಮ್ಮ ಲಾಭ ಮತ್ತೂ ಅನುಕೂಲಗಳನ್ನು ಪಡೆದುಕೊಳ್ಳುವುದು ನ್ಯಾಯವೂ ಸಮರ್ಥನೆಯೂ ಆಗಿತ್ತು. ಅವಳ ಮಾತು ಮುಗಿದನಂತರ, ಆ ಮನೆಯಲ್ಲಿ ತಾನು ಹಿರಿಯಳೂ ಸರ್ವಾಧಿಕಾರಿಯೂ ಎಂಬಂತೆ ವರ್ತಿಸುತ್ತಾ ನಮ್ಮನ್ನೆಲ್ಲ ಒತ್ತಾಯದಿಂದ ಡಾಕ್ಟರರ ಆಫೀಸಿಗೆ ಕರೆದುಕೊಂಡು ಹೊರಟಳು. ಅತ್ತೆ ಮಿಸೆಸ್ ಮಾರ್ತಲ್ ಹೇಮಳನ್ನು ಕುರಿತು ಕೋಪ ಏರುತ್ತಿದ್ದರೂ ಡಾಕ್ಟರರ ಮೇಲಿನ ಗೌರವಕ್ಕಾಗಿ ಕೋಪವನ್ನು ತಡೆಹಿಡಿದು, ನಮ್ಮ ಜತೆಯಲ್ಲಿ ಬಂದಳು.

ಡಾಕ್ಟರರಿದ್ದ ಕೋಣೆಯಲ್ಲಿ ಮಾತ್ರ ದೀಪ ಉರಿಯುತ್ತಿದ್ದು, ನಾವು ದಾಟಿ ಹೋಗುತ್ತಿದ್ದ ಕೋಣೆಗಳಲ್ಲಿ ದೀಪವಿರಲಿಲ್ಲ. ಡಾಕ್ಟರರ ಆಫೀಸಿನ ಬಾಗಿಲು ತೆರೆದಿದ್ದು, ಆ ಕೋಣೆಯ ಒಳಗಿನವರನ್ನು ನಾವು ನೋಡಬಹುದಾಗಿತ್ತು. ಆದರೆ ನಾವು ಕತ್ತಲೆಯಲ್ಲೇ ಹೋಗುತ್ತಿದ್ದುದರಿಂದ ಅಲ್ಲಿನವರಿಗೆ ನಾವು ಕಾಣಿಸಿಕೊಳ್ಳುತ್ತಿರಲಿಲ್ಲ. ಮಿಸೆಸ್ ಮಾರ್ತಲ್ ಹೇಮಳ ಅವಸರದ ಮುಂದಾಳುತನದಲ್ಲಿ ನಾವು ಡಾಕ್ಟರರ ಕೋಣೆಗೆ ಸೀದಾ ನುಗ್ಗಿಬಿಡುವುದರಲ್ಲಿದ್ದೆವು. ಆದರೆ ಅಷ್ಟರಲ್ಲೇ ಇನ್ನೊಂದು ಬಾಗಿಲಿನಿಂದ ಮಿ. ಡಿಕ್ಕರು ಮಿಸೆಸ್ ಸ್ಟ್ರಾಂಗರನ್ನು ಕರೆದುಕೊಂಡು ಆ ಕೋಣೆಗೆ ನುಗ್ಗಿದುದರಿಂದ ನಾವು ಸ್ವಲ್ಪ ಹಿಂದೆಯೇ – ಕತ್ತಲಲ್ಲಿ, ನಿಂತೆವು. ಮಿ. ಡಿಕ್ಕರು ಡಾಕ್ಟರರ ಪತ್ನಿಯನ್ನು ತಾವು ಕರೆದುಕೊಂಡು ಹೋಗಿ ಒಪ್ಪಿಸುವ ಕ್ರಮದಲ್ಲಿ ಅಲ್ಲಿಗೆ ಬಂದದ್ದನ್ನು ಕಂಡು ನಾವು ಸ್ವಲ್ಪ ಅಳುಕಿನಿಂದಲೆ ನಿಂತೆವು. ಮಿ. ಡಿಕ್ಕರು ಡಾಕ್ಟರರ ಪತ್ನಿಯನ್ನು ಪತಿಗೆ ಒಪ್ಪಿಸಿದರು. ಪತ್ನಿಯು ಪತಿಯ ಪಾದಗಳಿಗೆ ಎರಗಿ ಏನನ್ನೋ ಹೇಳಿಕೊಳ್ಳುತ್ತಿದ್ದಳು. ಪತಿಯು ಪತ್ನಿಯ ಎರಡು ಕೈಗಳನ್ನು ಮೇಲೆತ್ತಿ, ಅವಳನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದರು. ಮಿಸೆಸ್ ಸ್ಟ್ರಾಂಗಳು ಪತಿಯ ಮುಖವನ್ನು ನೋಡಿ ಮಾತಾಡುವಷ್ಟರಲ್ಲೇ ಅಲ್ಲಿನ ಬೆಳಕಿನ ಕೆಲವು ಸಂದರ್ಭಗಳ ಕಾರಣವಾಗಿ, ನಮ್ಮನ್ನು ಕಂಡು ಗುರುತಿಸಿದಳು. ಅಲ್ಲಿನ ಪರಿಸ್ಥಿತಿಗಳನ್ನು ಕಂಡು ನಾವು ಒಳಗೆ ಪ್ರವೇಶಿಸುವ ಬದಲು ದೂರಸರಿಯಬೇಕೆಂದಿರುವಾಗಲೇ ಮಿಸೆಸ್ ಸ್ಟ್ರಾಂಗಳು ನಮ್ಮೆಲ್ಲರನ್ನುದ್ದೇಶಿಸಿ –
"ದಯಮಾಡಿ ನೀವೆಲ್ಲರೂ ಒಳಗೆ ಬನ್ನಿ – ಯಾರೂ ದೂರ ಸರಿಯಬೇಡಿ" ಎಂದು ಕೇಳಿಕೊಂಡಳು. ನಾವೆಲ್ಲರೂ ಅವಳ ಅಪೇಕ್ಷೆಯ ಮೇರೆಗೆ ಆ ಕೋಣೆಯನ್ನು ಪ್ರವೇಶಿಸಿದೆವು.

ಅತ್ತೆಯನ್ನೂ ನನ್ನನ್ನೂ ಕಂಡು ಮಿ. ಡಿಕ್ಕರಿಗಾದ ಸಂತೋಷ ಅಷ್ಟಿಷ್ಟಲ್ಲ. ಅವರ ಮಹತ್ಕಾರ್ಯವನ್ನು ಅರ್ಥ ಮಾಡಿ ಸಂತೋಷಿಸಬಲ್ಲ ನಾವಿಬ್ಬರೂ ಏಕಕಾಲದಲ್ಲಿ – ಆ ಸನ್ನಿವೇಶದಲ್ಲಿ, ಬಂದದ್ದೇ ಅವರ ಸಂತೋಷಕ್ಕೆ ಕಾರಣ. ಅತ್ತೆಗೂ ಮಿ. ಡಿಕ್ಕರನ್ನು ಅಲ್ಲಿ – ಅಂಥ ಮಹತ್ವದ ಸನ್ನಿವೇಶ, ಪ್ರಸಂಗಗಳಲ್ಲಿ, ಕಂಡು ಆದ ಸಂತೋಷವೂ ಬಹುವಾದದ್ದೇ ಆಗಿತ್ತು. ಅತ್ತೆ ತನಗೆ ತಾನೇ ಅಂದುಕೊಂಡಳು – "ಆ ಮನುಷ್ಯನನ್ನು ಹುಚ್ಚಾಂತ ಅನ್ನುವವರೆಲ್ಲ ಹುಚ್ಚರು" ಎಂದು.

ಅತ್ತ ಡಾಕ್ಟರರು ತನ್ನ ಪತ್ನಿಯನ್ನು ಪ್ರೀತಿಯಿಂದ ನೋಡುತ್ತಾ –
"ಎನ್ನೆ, ನನ್ನ ಪಾದದ ಮೇಲೆ ಬೀಳಬೇಡ, ಏಳು" ಎಂದು ಹೇಳಿದರು.
"ಎನ್ನೆ, ಏಳು – ತಾಯಿಗೂ ಇಲ್ಲಿರುವವರೆಲ್ಲರಿಗೂ ನಿನ್ನ ವರ್ತನೆಯು ಅಪಮಾನಕರ" ಎಂದಂದಳು ಮಿಸೆಸ್ ಮಾರ್ತಲ್ ಹೇಮಳು.
"ಅಮ್ಮಾ, ನಾವು – ಪತಿ–ಪತ್ನಿಯರ ಮಧ್ಯೆ ನಿನ್ನ ಪ್ರವೇಶವು ಅನಗತ್ಯ. ಸಂದರ್ಭಗಳು ಹಾಗಿವೆ" ಎಂದಂದಳು ಮಗಳು, ಮಿಸೆಸ್ ಸ್ಟ್ರಾಂಗ್.

ಮಿಸೆಸ್ ಮಾರ್ತಲ್ ಹೇಮಳು ಈ ಮಾತಿನಿಂದ ಬಹು ಗಾಬರಿಗೊಂಡಳು ಮತ್ತು ನಮ್ಮನ್ನೆಲ್ಲ ನೋಡುತ್ತಾ –
"ಓ ದೇವರೆ! ನನ್ನ ಪ್ರವೇಶ ಅನಗತ್ಯವೆ! ಏನು, ನಾನು ಅನಗತ್ಯ! ಸಹಿಸಲಾರೆ – ಯಾರಲ್ಲಿ? ಒಂದು ಗ್ಲಾಸು ತಣ್ಣೀರು!" ಎಂದು ಹೇಳುತ್ತಾ ಇಂಥ ದುಃಖ ಮತ್ತು ಅಪಮಾನಕರ ಸಂದರ್ಭಗಳಲ್ಲಿ ಮೂರ್ಛೆ ಹೋಗುವುದು ಮರ್ಯಾದೆಯೆಂದು ನಿಶ್ಚೈಸಿ, ಅಂಥ

ಪ್ರಸಂಗಕ್ಕೆ ಬೇಕಾದ ನೀರನ್ನು ಮಿಸೆಸ್ ಮಾರ್ತಲ್ ಹೇಮಳು ಕೇಳಿದಳು. ಯಾರೂ ನೀರನ್ನು ತರದೆಯೂ ಅವಳು ಮೂರ್ಛಿತಳಾಗದೆಯೂ ಉಳಿದದ್ದರಿಂದ, ಕೊನೆಗೆ ಅವಳು ಅವಳ ಬೀಸಣಿಗೆಯನ್ನು ಬೀಸಿಕೊಂಡು ತಣ್ಣಗಾದಳು.

"ಎನ್ನೆ, ಏನೋ ಕೆಲವು ಸಂದರ್ಭಗಳಿಂದ ನಮ್ಮಿಬ್ಬರೊಳಗಿನ ನಡವಳಿಕೆಗಳು ಸರಿಯಾಗಿಲ್ಲವೆಂದಾಗಲೀ ಅಥವಾ ಸ್ವಲ್ಪ ಬದಲಾಗಿವೆಯೆಂದಾಗಲೀ ತೋರಿದ್ದಿದ್ದರೆ, ಕಳೆದುಹೋದುದಕ್ಕೆ ನೀನು ಚಿಂತಿಸಬೇಡ. ನಿನ್ನ ಮೇಲಿನ ನನ್ನ ಪ್ರೇಮವೂ ವಿಶ್ವಾಸವೂ ಗೌರವವೂ ಅಚಲವಾಗಿಯೂ ಪೂರ್ಣವಾಗಿಯೂ ನಿಂತಿವೆ. ನನ್ನಲ್ಲಿ ತೋರಿರಬಹುದಾದ ಬದಲಾವಣೆಗಳೆಲ್ಲ ಅರಿಯದೆ ಆಗಿ ಹೋದವು ಮಾತ್ರ. ಆ ಅಪರಾಧಗಳ ಬಗ್ಗಾಗಿ ನನ್ನನ್ನು ಕ್ಷಮಿಸು. ನೀನು ಪರಿಪೂರ್ಣ ಶುದ್ಧಳಾಗಿಯೇ ಇರುವೆ, ಏಳು" ಎಂದು ಡಾಕ್ಟರರು ಪತ್ನಿಯನ್ನು ಸಂತೈಸುತ್ತಾ ನುಡಿದರು.

"ನನ್ನ ಪತಿಯೊಡನೆ ಕೆಲವು ವಿಷಯಗಳನ್ನು ಹೇಳಿಕೊಳ್ಳಬೇಕೆಂಬ ಲವಲವಿಕೆ ನನಗೆ ಬಹು ಸಮಯದಿಂದಲೇ ಇತ್ತು. ಅಷ್ಟು ಅಲ್ಲದೆ, ಕೆಲವು ವಿವರಗಳನ್ನು ಅವರಲ್ಲಿ ವಿಜ್ಞಾಪಿಸಿಕೊಂಡು ಅವರ ಕ್ಷಮೆಯನ್ನು ಬೇಡ ಬೇಕಾದ ಪ್ರಸಂಗಗಳು ಇತ್ತೀಚೆಗೆ ಇಲ್ಲಿ ನಡೆದಿವೆ. ಈ ಹೊತ್ತಿನಂಥ ಒಂದು ಸಂದರ್ಭವನ್ನು ಕಾಯುತ್ತಾ ಈವರೆಗೆ ಕುಳಿತಿದ್ದೆ. ಈ ಹೊತ್ತು ಅಂಥ ಯೋಗ್ಯ ಸಂದರ್ಭವು ನನಗೆ ದೊರಕಿದೆ. ನಾವು ಪತಿ–ಪತ್ನಿಯರ ಮಾನಾಪಮಾನಕ್ಕೆ ಸಂಬಂಧಪಡುವ ನಮ್ಮ ಎಲ್ಲಾ ಹಿತಚಿಂತಕರೂ ಇಂದಿಲ್ಲಿ ಸೇರಿರುವರು. ನಿಮ್ಮಲ್ಲೆ ಯಾರಾದರೂ ನಮ್ಮನ್ನು ಕುರಿತಾಗಿ ಏನಾದರೂ ಆಲೋಚಿಸುತ್ತಿದ್ದರೆ – ಹಿಂದೆ ಆಲೋಚಿಸಿದ್ದಿದ್ದರೆ, ಎಲ್ಲವನ್ನೂ ದಾಕ್ಷಿಣ್ಯವಿಲ್ಲದೆ ಹೇಳಬೇಕು. ಹೇಳತಕ್ಕ ವಿಷಯಗಳು ನಿಮ್ಮಲ್ಲಿವೆಯೆಂಬುದನ್ನು ನಾ ಬಲ್ಲೆ. ಸತ್ ಪ್ರಚಾರವೋ ಅಪಪ್ರಚಾರವೋ – ಬಹಿರಂಗಪಡಿಸಬೇಕಾದುದೋ ಗೋಪ್ಯವಾಗಿಡಬೇಕಾದುದೋ ಎಂದು ಸಹ ವಿಚಾರಿಸದೆ, ದಯಮಾಡಿ, ತಿಳಿಸಿರಿ. ಮರ್ಯಾದೆ, ದಾಕ್ಷಿಣ್ಯ ಎಂದು ಗ್ರಹಿಸಿ ವಿಷಯಗಳನ್ನು ಬಚ್ಚಿಟ್ಟರೆ, ನಿಮಗೆ ತಿಳಿಯದೇ ನಮಗೆ ಅಪಮಾನವಾಗಬಹುದು. ನಿಮ್ಮ ಅಭಿಪ್ರಾಯ, ಅನುಭವಗಳನ್ನು ಬಹಿರಂಗಪಡಿಸಿದರೆ ನಮಗಿಬ್ಬರಿಗೂ ಉಪಕಾರವೇ ಆಗುವುದೆಂದು ವಿನಂತಿಸಿಕೊಳ್ಳುತ್ತೇನೆ" ಎಂದು ಮಿಸೆಸ್ ಸ್ಟ್ರಾಂಗಳು ಬಹು ವಿನಯದಿಂದ ನಮ್ಮೊಡನೆ ಹೇಳಿಕೊಂಡಳು.

ಸುಂದರಿಯೂ ಯೌವ್ವನೆಯೂ ಆಗಿದ್ದ ಮಿಸೆಸ್ ಸ್ಟ್ರಾಂಗಳು ಈಗ್ಗೆ ಅನೇಕ ದಿನಗಳಿಂದ ಕಳೆಗುಂದಿ, ಬಾಡಿ, ಮ್ಲಾನಳಾಗಿ ತೋರುತ್ತಿದ್ದಳು. ಈ ರಾತ್ರಿ ಅವಳು ನಮ್ಮಲ್ಲಿ ಈ ರೀತಿ ವಿನಂತಿಸಿಕೊಳ್ಳುವಾಗ ದುಃಖ, ಉದ್ವೇಗ, ಧರ್ಮಭಯ, ಇವುಗಳಿಂದೆಲ್ಲ ಕೂಡಿ, ತುಂಬಾ ತೇಜೋವಂತಳಾಗಿಯೇ ತೋರುತ್ತಿದ್ದಳು. ಅವಳಂದಿದ್ದ ಮಾತುಗಳು ನನಗೆ ಸಂಬಂಧಿಸಿದುವು ಎಂಬುದು ನನಗೆ ಗೊತ್ತಿತ್ತು. ಹಾಗಾಗಿ, ನಾನು ಸ್ವಲ್ಪ ಆಲೋಚಿಸಿ, ಹಿಂದೆ ಉರೆಯ ಮಿ. ವಿಕ್ಫೀಲ್ಡರ ಸಮಕ್ಷಮದಲ್ಲಿ ನಾನಿದ್ದಾಗ ಹೇಳಿದ ಮಾತುಗಳನ್ನೂ ನಡೆದ ಸಂಗತಿಗಳನ್ನೂ ಹೇಳಿದೆ.

ನನ್ನ ಮಾತುಗಳನ್ನಾಡುತ್ತಿದ್ದಾಗ, ಮಿಸೆಸ್ ಮಾರ್ತಲ್ ಹೇಮಳ ಮುಖವನ್ನು ಯಾರಾದರೂ ನೋಡಿದ್ದಿದ್ದರೆ 'ವಿಸ್ಮಯ' ಶಬ್ದದ ಒಂದು ಪ್ರತಿಮೆಯೇ ಅವಳೆಂಬಂತೆ ತೋರುತ್ತಿದ್ದಳು.

ನನ್ನ ಯಾವ ಮಾತುಗಳಿಂದಲೂ ಗಾಬರಿಗೊಳ್ಳದೆ, ಬಹು ಸಮಾಧಾನದಿಂದ ಮಿಸೆಸ್ ಸ್ಟ್ರಾಂಗಳು ಪುನಃ ಮಾತಾಡಿದಳು –
"ಪ್ರಿಯ ಪತಿಯೇ, ನಿಮ್ಮ ಮನಸ್ಸಿನಲ್ಲಿ ನನ್ನನ್ನು ಕುರಿತು ಯಾವ ವಿಧದ ಸಂಶಯವೂ ಇರಲಿಲ್ಲವೆಂದು ನನಗೆ ಗೊತ್ತಿತ್ತು. ನೀವು ದಯಾಳುಗಳೂ ಕರುಣಾವಂತರೂ ಉದಾರಿಗಳೂ ಆಗಿ ಸದಾ ವರ್ತಿಸಿರುವಿರಿ. ಆದರೆ ನಮ್ಮ ಬಡ ತವರು ಮನೆಯವರು ನಿಮ್ಮ ಆ ಸದ್ಗುಣಗಳನ್ನೆಲ್ಲ ದುರುಪಯೋಗಪಡಿಸುತ್ತಾ ನನ್ನ ಅನುರಾಗವನ್ನು ನಿಮಗೆ ಹಣಕ್ಕೆ ಮಾರಿರುವವರಂತೆ ನಿಮ್ಮ ಹಣ, ಸಹಾಯ, ಹೆಸರು, ಪ್ರತಿಷ್ಠೆ ಎಲ್ಲವನ್ನೂ ತಮ್ಮ ಸ್ವಂತ ಸುಖಕ್ಕೆ – ಅಷ್ಟು ಮಾತ್ರವಲ್ಲ, ತಮ್ಮ ದುಷ್ಟ ವಿಲಾಸಗಳಿಗಾಗಿ ಉಪಯೋಗಿಸುತ್ತಿದ್ದುದನ್ನೂ ಈ ಸಂದರ್ಭದಲ್ಲಿನ ಅವರ ಮನೋಧರ್ಮವನ್ನೂ ನೋಡಿ, ಗ್ರಹಿಸಿ, ಸಹಿಸಲಾರದೆ ಈವರೆಗೆ ಕಷ್ಟಪಟ್ಟೆ, ದುಃಖಪಟ್ಟೆ."

ಪತ್ನಿಯ ಈ ಮಾತುಗಳನ್ನು ಕೇಳುತ್ತಾ ಡಾಕ್ಟರರು ಬಹುವಾಗಿ ಮರುಗಿದರು. ಅವರು ಮರುಗುವ ಧ್ವನಿಯಿಂದಲೇ ಪತ್ನಿಯನ್ನು ನೋಡಿ –
"ನಾನು ಉಪಕಾರ ಮಾಡಿದ್ದೆಂದು ನೀನು ಗ್ರಹಿಸುವ ನನ್ನ ಎಲ್ಲಾ ಕಾರ್ಯಗಳನ್ನೂ ನಾನು ಸಂತೋಷದಿಂದಲೇ ಮಾಡಿರುತ್ತೇನೆ. ಆ ಕಾರ್ಯಗಳನ್ನು ಮಾಡುವುದಕ್ಕೆ ನನಗೆ ಯಾವ ಕಷ್ಟವೂ ಆಗಿರುವುದಿಲ್ಲ. ನನಗೆ ನಿನ್ನ ಮೇಲೆ ಸಂಶಯವಿಲ್ಲವೆಂದು ನೀನು ನಂಬಿರುವುದೇ ನನ್ನ ಭಾಗ್ಯ. ಪ್ರಿಯೇ, ದುಃಖಿಸಬೇಡ, ಏಳು" ಅಂದರು ಡಾ। ಸ್ಟ್ರಾಂಗರು.

"ನಿನ್ನ ತಾಯಿಯ ಎದುರೇ ನೀನು ಈ ರೀತಿ ಹೇಳುವುದು ಸರಿಯೇ ಎನ್ನೆ?" ಎಂದು ಈ ಮಧ್ಯ ತಲೆಹಾಕಿ, ಮಿಸೆಸ್ ಮಾರ್ತಲ್ ಹೇಮಳು ಕೇಳಿದಳು.
"ನಿನ್ನ ಬಾಯಿ ಮುಚ್ಚಿಕೋ, ಮೂರ್ಖೀ. ಅವಳು ಮಾತಾಡಲಿ" ಎಂದು ನನ್ನ ಅತ್ತೆ ಸಿಟ್ಟಿನಿಂದ, ಮಧ್ಯೆ ಪ್ರವೇಶಿಸಿ ಗೌಜು ಮಾಡಿದಳು.

ಈ ಯಾವ ಮಾತುಗಳಿಗೂ ಗಮನವೀಯದೆ ಮಿಸೆಸ್ ಸ್ಟ್ರಾಂಗಳು ಪತಿಯೊಡನೆ ಪುನಃ –
"ನೀವು ಹಾಗೆ ಸಂಶಯಪಡುವವರಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ನೀವು ನನ್ನ ಬಾಲ್ಯದ ಗುರುಗಳು, ತಾರುಣ್ಯದ ಪತಿ, ವಯಸ್ಸಿನ ತಂದೆ, ನ್ಯಾಯಧರ್ಮಗಳ ವಿರುದ್ಧವಾಗಿ ನಡೆಯುತ್ತಿರುವ ನಮ್ಮ ತವರು ಮನೆಯವರನ್ನು ಕುರಿತು ನಾನು ನಿಮ್ಮೊಡನೆ ಮರೆಮಾಚದೆ ಮಾತಾಡಿ, ನಿಮ್ಮ ಕ್ಷಮೆಯನ್ನು ಬೇಡಲೇ ಅಥವಾ ನನ್ನ ತವರು ಮನೆಯವರ ವಿರೋಧವಾಗಿ ನಿಮ್ಮ ಕರುಣಾಮಯ ಹಸ್ತವನ್ನು ನಾನೇ ಹಿಡಿದು ತಡೆಯಲೇ ." ಎಂದು ಹೇಳುತ್ತಾ ಮಿಸೆಸ್ ಸ್ಟ್ರಾಂಗಳು ಮಾತು ಮುಂದುವರಿಸುವ ಮಧ್ಯೆ ಮಿಸೆಸ್ ಮಾರ್ತಲ್ ಹೇಮಳು ಅಡ್ಡ ಮಾತಾಡಿದಳು. ಅವಳು –
"ಉದಾರಬುದ್ಧಿಯವರ ಔದಾರ್ಯಗಳನ್ನು ತಡೆಹಿಡಿಯುವ ." ಎಂದು ಮಾತುಗಳನ್ನಾಡುತ್ತಿದ್ದಾಗಲೇ, ಅತ್ತೆಯು ಬಹು ಕೋಪದಿಂದ –
"ಹಿಂದೆ ಬೊಗಳಿದ್ದನ್ನೆಲ್ಲಾ ಪುನಃ ಬಿಚ್ಚಬೇಡ ಹುಚ್ಚಿ" ಎಂದಂದುಬಿಟ್ಟಳು. ಆದರೆ, ಮಿಸೆಸ್ ಮಾರ್ತಲ್ ಹೇಮಳು ಯಾವುದನ್ನೂ ಗಣಿಸದೆ ಮುಂದುವರಿಸಿದಳು –
" .ಕ್ರಮ ನ್ಯಾಯವಲ್ಲ. ಅದರಿಂದ ಡಾಕ್ಟರರಿಗೇ ದುಃಖವಾದೀತೆಂಬುದನ್ನು ನೀನು ಗ್ರಹಿಸಿಲ್ಲ. ತಮ್ಮ ಸಂತೋಷದಿಂದ, ಸಂತೋಷಕ್ಕಾಗಿ ಅವರು ಮಾಡಿರುವ ಉಪಕಾರವನ್ನೂ ನನ್ನ ಒತ್ತಾಯದಿಂದ, ಹಿಂಸೆಯಿಂದ ಅವರು ಮಾಡಿರುವುದಾಗಿ, ನನ್ನ ಮಗಳಾಗಿ, ನೀನು ಹೇಳುತ್ತೀಯಲ್ಲಾ ದೇವರೆ!" ಅಂದಳು ಸಿಪಾಯಿ.
"ದೇವರೇ ಅವಳ ನಾಲಿಗೆಯನ್ನು ಕತ್ತರಿಸಬೇಕು" ಎಂದು ತನಗೆ ತಾನೆ ಅಂದುಕೊಂಡಳು, ಈ ಮಾತನ್ನು ಕೇಳಿ ಅತ್ತೆ.

ಅದಕ್ಕೆ ಮಿಸೆಸ್ ಸ್ಟ್ರಾಂಗಳು ಅಂದಳು –
"ಅಮ್ಮಾ, ಸ್ವಲ್ಪ ಗ್ರಹಿಸಿ ನೋಡು – ಡಾಕ್ಟರರ ಖರ್ಚಿನಲ್ಲಿ ಏನೇನೆಲ್ಲಾ ಸುಖ ಅನುಭವಿಸಿದ್ದೀರೆಂದು. ನೀನು ನನ್ನನ್ನು ಒಂದು ಗಾಳದಂತೆ ಉಪಯೋಗಿಸಿ, ನನ್ನನ್ನು ಡಾಕ್ಟರರಿಗೆ ಮಾರಿ ಲಾಭ ಪಡೆದು, ಅವರ ಕೃತಜ್ಞತೆಯನ್ನು ಇಂದು ಬಯಸುತ್ತಿರುವುದು ಯಾವ ಬುದ್ಧಿ?"

ಈ ಮಾತನ್ನು ಸಹಿಸಲಾರದೆ ಮಿಸೆಸ್ ಮಾರ್ತಲ್ ಹೇಮಳು ಅಂದಳು –
"ಇವಳಿಗೆ ಬುದ್ಧಿ ಕಲಿಸಲು ನಾನೊಬ್ಬ ತುರ್ಕಿಯವಳಾಗಿರಬೇಕಿತ್ತು!"

ಈ ಮಾತಿಗೆ ಯಾರು ಉತ್ತರ ಕೊಡದಿದ್ದರೂ ಅತ್ತೆ ಸ್ವಲ್ಪ ಗಟ್ಟಿಯಾಗಿಯೇ ಅಂದಳು –
"ಹೌದು, ಹೌದು – ನಿನ್ನಲ್ಲಿ ತುರ್ಕಿಯ ಸ್ವಭಾವವೇನೋ ಇದೆ, ನೀನಿಲ್ಲಿ ಇರಬಾರದಿತ್ತು. ನೀನು ತುರ್ಕಿಸ್ಥಾನದಲ್ಲಿ ಇದ್ದಿದ್ದರೆ ಎಲ್ಲರಿಗೂ ಸುಖವಿತ್ತು."

ಮಿಸೆಸ್ ಸ್ಟ್ರಾಂಗಳು ಅವಳ ಕಡೆ ಮಾತನ್ನು ಮುಂದರಿಸುತ್ತಾ ತಾಯಿಯನ್ನೇ ಕುರಿತು, ದುಃಖದಿಂದ ಹೇಳಿದಳು –
"ನಾನು ನಿಮ್ಮೆಲ್ಲರಿಗಾಗಿಯೂ ನನ್ನ ಪ್ರಿಯ ಪತಿಗಾಗಿಯೂ ಸಹಿಸಿದ ಕಷ್ಟ, ಬಿಗಿಹಿಡಿದ ಮನಸ್ಸು ಎಷ್ಟೆಂದು ಹೇಳಲಿ! ಮೊದಮೊದಲು ನಿಮ್ಮ ಆಸೆಗೆ ಮಿತಿಯುಂಟೆಂದು ಗ್ರಹಿಸಿ ಸುಮ್ಮನಿದ್ದೆ. ಆ ಮಿತಿಯು ಮೀರುತ್ತಾ ನಿನ್ನ ತಮ್ಮನನ್ನು ಇಂಡಿಯಾ ದೇಶಕ್ಕೆ ಕಳುಹಿಸುವ ದೊಡ್ಡ ಖರ್ಚನ್ನೂ ಮಾಡಿ ಕೊಟ್ಟು ನೋಡಿದ್ದಾಯಿತು. ಅಷ್ಟು ಮಾಡಿಯೂ ನಿಮ್ಮ ಎರಡು ಮುಖದ ವರ್ತನೆಯನ್ನು ನೀವು ಬಿಡಲಿಲ್ಲ. ಡಾಕ್ಟರರ ಬಂಧುಗಳು, ಹಿತಚಿಂತಕರು ಎಂದು ಒಂದು ಮುಖದಿಂದ ತೋರಿಸುತ್ತಾ ಇನ್ನೊಂದರಿಂದ ಸ್ವಾರ್ಥವನ್ನು ಮಾತ್ರ ಸಾಧಿಸಿ ಸುಖಪಡತೊಡಗಿದಿರಿ. ಮಿ. ವಿಕ್ಫೀಲ್ಡರೂ ಇತರ ಕೆಲವರು ನನ್ನನ್ನು ಕುರಿತು ದುರ್ನಡತೆಯವಳೆಂದು ಸಂಶಯಪಡಲು ಕಾರಣರೂ ನಿನ್ನ ಸಮೇತ, ನನ್ನ ತವರುಮನೆಯವರೇ ಆಗಿದ್ದಾರೆ. ಜೇಕ್ ಮಾಲ್ಡನ್ನನೂ ನಾನೂ ಬಾಲ್ಯದ ಸ್ನೇಹಿತರಾಗಿದ್ದುದರಿಂದ ಮಾತ್ರ ಡಾಕ್ಟರರ ಮನೆಯಲ್ಲಿ ಅವನು ನನ್ನೊಡನೆ ಅಷ್ಟು ಸಲಿಗೆಯಿಂದಿರಲು ಕಾರಣವಾಯಿತು. ಬಾಲ್ಯದಲ್ಲಿ ನನ್ನ ಮತ್ತು ಜೇಕ್ ಮಾಲ್ಡನ್ನನೊಡನೆ ಬಹಳ ಪ್ರೀತಿಯಿತ್ತು. ನಾವು ಪರಸ್ಪರ ಪತಿ–ಪತ್ನಿಯರಾದರೂ ಆಗಬಹುದೆಂಬ ಭಾವನೆ ಆಗ್ಗೆ ಇದ್ದದ್ದು ನಿಜ. ಆದರೆ, ನಾನು ಡಾಕ್ಟರರನ್ನು ಮದುವೆಯಾಗಿ, ಅವರ ಜತೆಯಲ್ಲಿ ಧರ್ಮಮಾರ್ಗದ ಉತ್ತಮ ಜೀವನ ನಡೆಸಿ ಬಂದು ನನ್ನ ಬುದ್ಧಿ ಬೆಳೆದಾಗ ಬಾಲ್ಯದಲ್ಲಿ ನಾನು ತಿಳಿದಿದ್ದ ಅನುರಾಗ ಶಿಸ್ತಿಲ್ಲದ ಮನಸ್ಸಿನ ಅಂಧ ಉದ್ವೇಗ ಮಾತ್ರವೆಂದು ತಿಳಿಯಿತು. ನಾನು ಜೇಕ್ ಮಾಲ್ಡನ್ನನನ್ನು ಮದುವೆಯಾಗಿದ್ದಿದ್ದರೆ ನಮ್ಮ ಸಂಸಾರ ಖಂಡಿತವಾಗಿಯೂ ಸುಖವಾಗಿ ಸಾಗುತ್ತಿರಲಿಲ್ಲವೆಂದು ತಾರತಮ್ಯದ ಗಣನೆಯಿಂದ ಗೊತ್ತಾಗಿದೆ. ದಂಪತಿಗಳೊಳಗೆ ಮನೋಬುದ್ಧಿಗಳ ಸಾಮ್ಯವಿಲ್ಲದೆ ನಡೆಯುವ ವಿವಾಹ ವಿಷಮ ವಿವಾಹವೇ ಸರಿ ಎಂಬುದು ನನಗೆ ಖಚಿತವಾಗಿದೆ. ಈ ಅನುಭವಗಳ ಕಾರಣವಾಗಿ ಪತಿಯ ಮೇಲಿನ ನನ್ನ ಪ್ರೇಮ ಶಿಲಾ ನಿರ್ಮಿತ ಭವನದಂತೆ ಭದ್ರವಾಗಿದೆ. ಹೀಗಿದ್ದರೂ ಲೋಕಾಪವಾದವೂ ಪತಿಯ ವರ್ತನೆಗಳಲ್ಲಿನ ಬದಲಾವಣೆಯೂ ನನ್ನನ್ನು ಹಿಂಸಿಸುತ್ತಿದ್ದುವು. ಈ ಹಿಂಸೆಯನ್ನು ನಿವಾರಿಸಿಕೊಳ್ಳಲು ತಕ್ಕದಾದ ಅವಕಾಶವನ್ನು ನಾನು ಹುಡುಕುತ್ತಿದ್ದೆನು. ಹಿಂದೊಂದು ದಿನ ನಾನು ಇಂದಿನಂತೆಯೇ ಪತಿಯೊಡನೆ ನನ್ನ ಕಷ್ಟಗಳನ್ನು ಹೇಳಿಕೊಂಡಿದ್ದೆನು. ಆದರೆ ಅನಂತರ ಹೇಳಿಕೊಳ್ಳಲು ಅವಕಾಶ ದೊರಕಲಿಲ್ಲ. ಪ್ರಾಯ, ವಿದ್ಯೆ, ಅನುಭವ ಎಲ್ಲದರಲ್ಲೂ ಎಳೆಯವಳಾದ ನಾನು ಪತಿಯಲ್ಲಿ ಯಾವ ಒಕ್ಕಣೆಗಳಿಂದ ನನ್ನ ಕಷ್ಟಗಳನ್ನು ಹೇಳಿಕೊಳ್ಳುವುದು, ಅವರ ಮನಸ್ಸಿನ ಯಾವ ಸ್ಥಿತಿಯಲ್ಲಿ ನನ್ನ ವಿಜ್ಞಾಪನೆಗಳನ್ನು ಒಪ್ಪಿಸುವುದು ಎಂದು ಮೊದಲಾಗಿ ಹೆದರುತ್ತಾ ದಿನಗಳನ್ನು ಕಳೆದೆನು. ಆದರೂ ನಾನು ಪತಿಯನ್ನು ಸಂಪೂರ್ಣ ನಂಬಿ ಬರುತ್ತಿರುವಾಗ, ನನ್ನ ನಂಬಿಕೆಯನ್ನು ಬಹುವಾಗಿ ಪುಷ್ಟೀಕರಿಸಿರುವ ಉಯಿಲಿನ ವರ್ತಮಾನವನ್ನು ಕೇಳಿ ನನ್ನ ಮೊದಲಿನ ನಂಬಿಕೆ ಮತ್ತಷ್ಟು ದೃಢವಾಯಿತು. ಅಲ್ಲದೆ, ಅವರ ಮೇಲಿನ ನನ್ನ

ಕೃತಜ್ಞತಾಭಾವಕ್ಕೂ ಗೌರವ ಮತ್ತು ಪ್ರೀತಿಗೂ ಮೇರೆಯಿಲ್ಲದೇ ಆಗಿದೆ. ಈಗ ಈ ವಿಧದ ಎಲ್ಲಾ ಭಾವನೆಗಳು ಜತೆ ಸೇರಿ ನನ್ನನ್ನು ದುಃಖಮಿಶ್ರಿತ ಆನಂದದಿಂದ ಬಾಧಿಸುತ್ತಿವೆ. ಆದ್ದರಿಂದ ಬಂಧು ಮಿತ್ರರಾದ ನಿಮ್ಮೆಲ್ಲರ ಸಮಕ್ಷಮದಲ್ಲಿ, ನಮ್ಮೆಲ್ಲರ ಮರ್ಯಾದೆಗಾಗಿ, ಜೀವನದ ಶಾಂತಿಗಾಗಿ, ನನ್ನ ಹೃದಯದ ಭಾರವನ್ನು ಹಗುರಪಡಿಸಿಕೊಳ್ಳುವುದಕ್ಕಾಗಿ, ಈ ಎಲ್ಲಾ ವಿಷಯಗಳನ್ನೂ ಹೇಳಿಕೊಂಡಿರುತ್ತೇನೆ" ಎಂದು ಈ ಮಾತು ಮುಗಿಯುತ್ತಾ ಮಿಸೆಸ್ ಸ್ಟ್ರಾಂಗಳು ಡಾಕ್ಟರರಿಗೆ ನಮಸ್ಕರಿಸಿ, ಅವರನ್ನು ತಬ್ಬಿಕೊಂಡಳು. ಡಾಕ್ಟರರು ಆನಂದಬಾಷ್ಪ ಸುರಿಸುತ್ತಾ ಹೆಂಡತಿಯನ್ನು ಸಮಾಧಾನಪಡಿಸಿದರು.

ಇಂಥ ಒಂದು ಮಹಾ ಸಂದರ್ಭವನ್ನು ಏರ್ಪಡಿಸಿ, ಇಂಥ ಶಾಂತಿ ನೆಮ್ಮದಿಗಳನ್ನು ಆ ಸಂಸಾರದಲ್ಲಿ ನೆಲೆಗೊಳಿಸಿದ್ದುದು ಮಿ. ಡಿಕ್ಕರೆಂದು ಅತ್ತೆಗೆ ಗೊತ್ತಾಯಿತು. ಎಲ್ಲರ ಎದುರಿನಲ್ಲೇ ಅತ್ತೆ ಮಿ. ಡಿಕ್ಕರಿಗೆ ಮುತ್ತು ಕೊಟ್ಟು, ಆಲಂಗಿಸಿ, ಡಾಕ್ಟರರ ಸಂಸಾರಕ್ಕೆ ಒದಗಿದ್ದ ಶಾಂತಿಯಿಂದಲೂ ಇದಕ್ಕೆ ಮಿ. ಡಿಕ್ಕರ ಕಾರ್ಯಸಾಧನೆಯೇ ಕಾರಣವಾದ್ದರಿಂದಲೂ ತನಗಾಗಿದ್ದ ಅಪಾರ ಆನಂದವನ್ನು ವ್ಯಕ್ತಪಡಿಸಿದಳು.

ನಾನೂ ಅತ್ತೆಯೂ ನಮ್ಮ ಮನೆಗೆ ಹಿಂತಿರುಗಿ ಬರುವಾಗ ದಾರಿಯಲ್ಲಿ ಅತ್ತೆ ಅಂದುಕೊಂಡಳು –
"ಆ ಮುದಿ ಕತ್ತೆ – ಸಿಪಾಯಿ, ಒಬ್ಬಳಿಲ್ಲದಿದ್ದಿದ್ದರೆ ಡಾಕ್ಟರರ ಸಂಸಾರವು ಸುಖವಾಗಿ ಸಾಗಿಕೊಂಡಿರುತ್ತಿತ್ತು. ಈ ರೀತಿಯ ಹಿಂಸಾಫಲವುಳ್ಳ ಪ್ರೇಮದಿಂದ ಅನೇಕ ತಾಯಿಯಂದಿರು ತಮ್ಮ ಮಕ್ಕಳನ್ನು ಆ ಮಕ್ಕಳ ಮದುವೆಯಾದನಂತರವೂ ಸಾಕುವೆವೆಂದು ಗ್ರಹಿಸಿ ವರ್ತಿಸುತ್ತಾರೆ. ತಮ್ಮನ್ನು ಹೆರಬೇಕು, ಹೆತ್ತು ಸಾಕಬೇಕು, ಎಂದು ಯಾವ ಶಿಶುವೂ ಹೇಳಿದ್ದಿಲ್ಲ. ತಾವು ಮಕ್ಕಳನ್ನು ಹೆತ್ತದ್ದೇ ಒಂದು ಮಹದುಪಕಾರವೆಂದು ಮಕ್ಕಳು ಸದಾ ತಿಳಿದಿರಬೇಕೆಂದು ಪ್ರೇಮದ ಹೆಸರಲ್ಲಿ ಹಿಂಸೆ ಕೊಡುವಂಥ ಇಂಥ ತಾಯಂದಿರು ಊರಿನಲ್ಲಿ ಕಡಿಮೆಯಾದಷ್ಟು ಊರಿಗೇ ಉಪಕಾರ" ಎಂದು.

ಅತ್ತೆಯ ಮಾತಿಗೆ ನಾನೇನೂ ಉತ್ತರ ಕೊಡಲಿಲ್ಲ. ನನ್ನ ಮನಸ್ಸಿನಲ್ಲೇ 'ಶಿಸ್ತಿಲ್ಲದ ಮನಸ್ಸಿನ ಅಂಥ ಉದ್ವೇಗ', 'ಮನೋಬುದ್ಧಿಗಳ ಸಾಮ್ಯವಿಲ್ಲದೆ ಆಗುವ ವಿವಾಹವು ವಿಷಮ ವಿವಾಹ,' 'ನನ್ನ ಪ್ರೇಮವು ಶಿಲಾನಿರ್ಮಿತ ಭವನದಂತೆ ಭದ್ರವಾಗಿದೆ' ಎಂಬ ಮಿಸೆಸ್ ಸ್ಟ್ರಾಂಗಳ ಮಾತುಗಳೂ – ಅವುಗಳ ಮಥಿತಾರ್ಥವೂ ಎಡೆಬಿಡದೆ, ಅಲೆಯಂತೆ ಎದ್ದು ಮಾಯವಾಗುತ್ತಿದ್ದುವು.

ಈ ವಿಧದಲ್ಲಿ ನಾವು ಆಲೋಚಿಸುತ್ತಾ ಸ್ವಗತವಾಗಿ ಹೇಳಿಕೊಳ್ಳುತ್ತಾ ಹಿಮ ಮುಚ್ಚಿದ್ದ ರಸ್ತೆಯಲ್ಲೇ ನಡೆದು ರಸ್ತೆಯಲ್ಲಿದ್ದ ಅರೆತೇವದ ತರಗೆಲೆಗಳನ್ನು ಬೂಟ್ಸಿನ ಅಡಿಗೆ ಅಂಟಿಸಿಕೊಂಡು, ಮನೆಗೆ ತಲಪಿದೆವು. ಇದೇ ಸಮಯದಲ್ಲಿ ಭೂಮಿಯನ್ನೂ ನಮ್ಮನ್ನೂ ತಂಪುಗೊಳಿಸಲು ಬಂದಂತೆ ರಾತ್ರಿಯ ತಂಗಾಳಿಯು ಮೃದುವಾಗಿ ಬೀಸುತ್ತಿತ್ತು.

ಅಧ್ಯಾಯ ನಲ್ವತ್ತಾರು

ಸುದ್ದಿ

ನನ್ನ ಮದುವೆಯಾಗಿ ಸಾಧಾರಣ ಒಂದು ವರ್ಷ ಕಳೆದಿರಬೇಕು. ಆಗ ಒಂದು ದಿನ ಸಂಜೆಯಲ್ಲಿ ನನ್ನ ಕೆಲಸ ಪೂರೈಸಿ ತಿರುಗಾಡುತ್ತಾ ಬರುವಾಗ ಸ್ಟೀಯರ್ಫೋರ್ತನ ಮನೆಯ ಸಮೀಪದ ರಸ್ತೆಯಲ್ಲೇ ಬಂದೆನು. ಹೆಚ್ಚಾಗಿ ನಾನು ಬೇರೆ ರಸ್ತೆಯಲ್ಲೇ ಹೋಗುತ್ತಿದ್ದರೂ ಆ ದಿನ ಮಾತ್ರ ಅಲ್ಲೆ ಬಂದೆನು. ಸ್ಟೀಯರ್ಫೋರ್ತನ ಮನೆಯಲ್ಲಾಗಲೀ ಮನೆ ಕಂಪೌಂಡಿನಲ್ಲಾಗಲೀ ಎಲ್ಲೂ ಜನರಿರಲಿಲ್ಲ. ಆ ವಠಾರವೇ ಹಾಳುಬಿದ್ದಂತೆ ತೋರುತ್ತಿತ್ತು. ಆ ಮನೆಯ ಕಿಟಕಿ ಬಾಗಿಲುಗಳೆಲ್ಲ ಮುಚ್ಚಿದ್ದುವು. ಆ ಮನೆಯ ಪರಿಚಯವಿಲ್ಲದಿದ್ದವರು ಅದನ್ನು ಹೊರಗಿನಿಂದ ನೋಡಿದ್ದರೆ ಮನೆಯ ಯಜಮಾನ ಮಕ್ಕಳು ಮರಿ ಸಂತಾನಗಳಿಲ್ಲದೆ ಒಬ್ಬನೇ ಇರುತ್ತಿದ್ದು, ಆತನೂ ಸಹ ಯಾರಿಗೂ ತಿಳಿಯದೆ ಸತ್ತು ಆ ಮನೆಯೊಳಗೆ ಅವನ ಹೆಣ ಬಿದ್ದು ಕೆಲವು ಕಾಲವಾಗಿದ್ದಂತೆ ತೋರಿ ಬರುತ್ತಿತ್ತು.

ನಾನು ಆ ಮನೆಯನ್ನು ನೋಡುತ್ತ ದಾಟಿ ಸ್ವಲ್ಪ ದೂರ ಹೋಗುವುದರೊಳಗೆ ಹಿಂದಿನಿಂದ ಯಾರೋ ನನ್ನನ್ನು ಕರೆಯುತ್ತಿದ್ದಂತೆ ಕೇಳಿ ನಾನು ಹಿಂತಿರುಗಿ ನೋಡುವಾಗ ಸ್ಟೀಯರ್ಫೋರ್ತನ ಮನೆ ಕೆಲಸದ ಹೆಂಗುಸು ಓಡಿ ಬರುವುದನ್ನು ಕಂಡೆನು. ನಾನು ನಿಂತು ಅವಳನ್ನು ವಿಚಾರಿಸಿದಾಗ ನನ್ನನ್ನು ಕಂಡರೆ ಒಂದಾವೃತ್ತಿ ಆ ಮನೆಗೆ ಬಂದು ಹೋಗಲು ತಿಳಿಸಬೇಕಾಗಿ ತನ್ನ ಯಜಮಾನಿ ಅವಳಿಗೆ ಅಪ್ಪಣೆಯಿತ್ತಿದ್ದಳೆಂದೂ ಹಾಗಾಗಿ ನನ್ನನ್ನು ಹೆಚ್ಚಾಗಿ ಕಾದೇ ಕುಳಿತಿರುತ್ತಿದ್ದಳೆಂದೂ ತಿಳಿಸಿದಳು. ಅವಳ ಮಾತನ್ನು ಅಂಗೀಕರಿಸಿ ನಾನು ಅವಳ ಹಿಂದೆಯೇ ಹೋದೆನು.

ಸ್ಟೀಯರ್ಫೋರ್ತನ ಮನೆ ಉನ್ನತವಾದ ಗುಡ್ಡೆಯ ಮೇಲಿದ್ದು, ಮನೆಯಿಂದಲೇ ಲಂಡನ್ ನಗರವನ್ನು ನೋಡಬಹುದಾದಂಥ ಸ್ಥಳದಲ್ಲಿತ್ತು. ಮನೆಯ ಸುತ್ತಲಿನ ಹೂದೋಟದ ಒಂದು ಮೂಲೆಯಲ್ಲಿ ಸುಂದರವಾದ ಒಂದು ಎತ್ತರದ ಮಂಟಪದ ಬೋಳುಪ್ಪರಿಗೆಯ ಮೇಲೆ ಮಿಸ್ ಡಾರ್ಟಲ್ಲಳು ಕುಳಿತು ಲಂಡನ್ ನಗರವನ್ನು ನೋಡುತ್ತಿದ್ದಳು. ಅದು ಎತ್ತರದ್ದೂ ಬೋಳೂ ಆಗಿದ್ದ ಮಂಟಪವಾಗಿದ್ದುದರಿಂದ ನಾನು ಮಿಸ್ ಡಾರ್ಟಲ್ಲಳನ್ನು ದೂರದಿಂದಲೇ ಕಾಣುತ್ತಿದ್ದೆನು. ಸೂರ್ಯ ಆಗ ತಾನೇ ಅಸ್ತಮಿಸಿದ್ದುದರಿಂದ ಪಶ್ಚಿಮ ದಿಗಂತ ಮತ್ತೂ ಸಾಧಾರಣ ನಡು ಆಕಾಶ ಸಹ ರಕ್ತ ವರ್ಣದ ಪ್ರಭೆಯಿಂದ ಆವೃತವಾಗಿತ್ತು. ಅಸ್ತಮಿಸಿದ್ದ ಸೂರ್ಯನಿಗೂ ನನಗೂ ನಡುವೆ ಮಿಸ್ ಡಾರ್ಟಲ್ಲಳು ಇದ್ದುದರಿಂದ ಆ ಮಂಟಪವೂ ಮಿಸ್ ಡಾರ್ಟಲ್ಲಳೂ ಆ ರಕ್ತ ಕೆಂಪಿನಲ್ಲಿ ಮುಳುಗಿದ್ದಂತೆ ತೋರುತ್ತಿದ್ದರು. ನನ್ನ ಕಾಲ ಸಪ್ಪಳವನ್ನು ಕೇಳಿ ಮಿಸ್ ಡಾರ್ಟಲ್ಲಳು ಹಿಂತಿರುಗಿ ನೋಡಿ ನನ್ನನ್ನು ಸ್ವಾಗತಿಸಲು ಎದ್ದು ನಿಂತಳು. ರೌದ್ರ ಕೆಂಪಿನ ಪ್ರಭೆಯಿಂದ ಆವೃತಳಾಗಿದ್ದ ಮಿಸ್ ಡಾರ್ಟಲ್ಲಳು ಆಗ ಮನುಷ್ಯಳಂತೆ ತೋರಲಿಲ್ಲ – ಒಂದು ಭಯಂಕರ ಮೂರ್ತಿಯಂತೆ ತೋರಿದಳು. ಆಶಾಭಂಗ, ದ್ವೇಷ, ಹಠಗಳನ್ನು ಮಿಶ್ರ ಮಾಡಿ ಎರಕ ಹೊಯ್ದಿದ್ದ ಮಾರಣದೇವತೆಯ ಒಂದು ಮೂರ್ತಿಯಂತೆ ಇದ್ದಳು. ಲಂಡನ್ ನಗರದಲ್ಲಿನ ಸುಖ ಸಂತೋಷಗಳನ್ನೆಲ್ಲ ಗ್ರಹಿಸಿ ಅಸೂಯೆಪಟ್ಟು, ದ್ವೇಷ, ರೋಷದಿಂದ ಕುದಿಯುತ್ತಿದ್ದ ಭೀಕರ ಭಾವನೆಗಳು ಅವಳ ಮುಖದಲ್ಲಿ ತೋರುತ್ತಿದ್ದುವು.

ಸಾಂಪ್ರದಾಯಿಕವಾದ ಕುಶಲ ಪ್ರಶ್ನೆಗಳು ನಮ್ಮೊಡನೆ ನಡೆದನಂತರ ಅವಳ ಕಾರ್ಯ ನಿಮಿತ್ತವಾದ ಮಾತುಗಳನ್ನಾಡಲಾರಂಭಿಸಿದಳು. ಆದರೂ ಆ ಮಾತಿನ ಮಟ್ಟಿನಲ್ಲಿ ತಾತ್ಸಾರ, ಗರ್ವಗಳು ತುಂಬಿದ್ದುವು. ಹಠಾತ್ತಾಗಿ ಅವಳ ಮುಖ್ಯ ಉದ್ದೇಶವನ್ನೇ ಉದ್ದೇಶಿಸಿ –

"ಆ ಹುಡುಗಿ ಸಿಕ್ಕಿದಳೂ?" ಎಂದು ಕೇಳಿದಳು.

ಅವಳು ವಿಚಾರಿಸಿದ್ದು ಎಮಿಲಿಯನ್ನೆಂದು ನನಗೆ ಗೊತ್ತಿತ್ತು. ಹಾಗಾಗಿ ಸೂಕ್ಷ್ಮವಾಗಿಯೇ ನಾನಂದೆ –

"ಇಲ್ಲ" ಎಂದು.

"ಓಡಿ ಹೋದ ಕ್ರಮದಲ್ಲಿ ಮರಳಿ ಬರಬೇಕಾಗಿತ್ತಷ್ಟೆ!"

"ಇಲ್ಲ, ಬರಲಿಲ್ಲ" ನನ್ನ ಉತ್ತರ.

"ಅಂದರೆ ಮನೆ ಮಠ, ಸಾಕಿದವರು ಎಂದು ಗ್ರಹಿಸದೆ ಓಡಿದ ಹುಡುಗಿ ಅವನ ಜತೆಯಿಂದಲೂ ಓಡಿ ಬರಬೇಕಿದ್ದಿತಷ್ಟೆ."

"ಅವಳು ಓಡಿ ಹೋದುದಲ್ಲ. ಅವಳನ್ನು ಓಡಿಸಿಕೊಂಡು ಹೋದುದು" ಎಂದು ನಾನಂದೆ.

"ಹಾಗಾದರೆ ಅವಳು ಸತ್ತಿರಬಹುದು" ಎಂದು ಮಿಸ್ ಡಾರ್ಟಲ್ಲಳು ಸಿಟ್ಟಿನಿಂದಲೇ ಹೇಳಿದಳು. ನನಗೆ ಸುಮ್ಮನಿರಲು ಮನಸ್ಸು ಬರದೆ ನಾನಂದೆ –

"ಸಾಯುವುದಿದ್ದರೆ ಅದೊಂದು ಅನುಗ್ರಹವೇ ಸರಿ ಅವಳಿಗೆ. ಅವಳು ಮರಣವನ್ನೇ ನಿರೀಕ್ಷಿಸುತ್ತಿರಬಹುದು."

ಅವಳು ಸ್ವಲ್ಪ ಸಿಟ್ಟುಗೊಂಡಿದ್ದರೂ –

"ಇರಲಿ, ನಿನಗೊಂದು ಸುದ್ದಿ ಕೊಡಿಸುತ್ತೇನೆ. ಆದರೆ ಸುದ್ದಿ ತಂದವರೊಡನೆ ಕಾದಾಡಬೇಡ" ಎಂದಂದುಕೊಂಡು ನನ್ನನ್ನು ಸ್ವಲ್ಪ ದೂರ ಆ ಕಂಪೌಂಡಿನಲ್ಲೇ ಕರೆದು ಹೋಗಿ, ಅಲ್ಲಿದ್ದ ಲಿಟ್ಮರನನ್ನು ಕರೆದು, ಅವನಿಗೆ ಗೊತ್ತಿದ್ದಷ್ಟು ಸಂಗತಿಯನ್ನು ಹೇಳುವಂತೆ ಅಪ್ಪಣೆಯಿತ್ತಳು.

ಅವನು ತನ್ನ ಪೂರ್ವದ ಗಾಂಭೀರ್ಯದಿಂದ –

"ತಾಯಿ, ಮಿ. ಜೇಮ್ಸ್ ಸ್ಟೀಯರ್ಫೋರ್ತರು...." ಎಂದು ಪ್ರಾರಂಭಿಸುವಾಗಲೇ ಮಿಸ್ ಡಾರ್ಟಲ್ಲಳು......

"ಆ ವರ್ತಮಾನ ನನಗೆ ಅಗತ್ಯವಿಲ್ಲ."

"ಸರ್, ಮಿ. ಜೇಮ್ಸ್ ಸ್ಟೀಯರ್‌ಫೋರ್ತ್‌ರೂ ನಾನೂ ಅವಳ ಸಮೇತ ಅನೇಕ ದೇಶಗಳಲ್ಲಿ ತಿರುಗಾಡಿದೆವು. ಫ್ರಾನ್ಸ್, ಸ್ವಿಟ್ಸರ್ ಲೇಂಡ್, ಜರ್ಮನಿ, ಇಟಲಿ ಮೊದಲಾದ ದೇಶಗಳಲ್ಲಿ ತಿರುಗಾಡಿದೆವು. ನಾವು ಹೋದಲ್ಲೆಲ್ಲ ಅವಳ ಜನ್ಮಸಿದ್ಧವಾದ ಸೌಂದರ್ಯದ ಪ್ರಭಾವದಿಂದಲೂ ನಮ್ಮ ಯಜಮಾನರ ಸಂಸರ್ಗದಿಂದ ಉಂಟಾಗಿದ್ದ ಸಂಸ್ಕೃತಿಯಿಂದಲೂ ಅವಳು ಬಹು ಜನರನ್ನು ಆಕರ್ಷಿಸುತ್ತಿದ್ದಳು. ಅವಳು ಬಹು ಸುಂದರಿಯೆಂದೂ ಅಂಥ ಸುಂದರಿಯು ಬಹು ದುರ್ಲಭವೆಂದೂ ಅವಳನ್ನು ಪಡೆದವನೇ ಭಾಗ್ಯವಂತನೂ ಪ್ರತಿಭಾವಂತನೂ ಎಂದೂ ಜನರು ಮಾತಾಡಿಕೊಳ್ಳುತ್ತಿದ್ದರು. ಈ ರೀತಿ ಅವಳು ಜನರ ಪ್ರಶಂಸೆಗೂ ಗುಪ್ತಕಾಂಕ್ಷೆಗೂ ಭಾಗಿಯಾದಳು" ಎಂದು ಲಿಟ್ಮರನು ಗಂಭೀರವಾಗಿ. ಮಿಸ್ ಡಾರ್ಟ್‌ಲ್ಲಳ ಆಸನವನ್ನು ಮಾತ್ರ ನೋಡುತ್ತಾ ಅದನ್ನು ಮಾತ್ರ ಉದ್ದೇಶಿಸಿ ಹೇಳುವವನಂತೆ ಹೇಳಿದನು. ಎಮಿಲಿಯ ಪ್ರಶಂಸೆಗಳನ್ನು ಕೇಳುತ್ತಿದ್ದ ಹಾಗೆ ಅವಳ ಮುಖದಲ್ಲಿ ಕ್ರೋಧ ಎದ್ದು ನಲಿಯುತ್ತಿತ್ತು. ಲಿಟ್ಮರನು ಮುಂದುವರಿಸುತ್ತಾ –

"ದಿನಗಳು ದಾಟಿದಂತೆ ಮಿ. ಜೇಮ್ಸರಿಗೆ ಬೇಸರ ಪ್ರಾರಂಭವಾಯಿತು. ಅವಳಿಗೂ ಹಾಗೆಯೇ ಆಗತೊಡಗಿರಬೇಕು. ಮಿ. ಜೇಮ್ಸರು ಎಂಥ ಹುಡುಗಿಯನ್ನೇ ಕುರಿತಾಗಿಯಾದರೂ ಹೆಚ್ಚು ದಿನ ಅನುರಕ್ತರಾಗಿರುವುದು ಕಡಿಮೆಯೇ ಆಗಿದ್ದರೂ ಇವಳ ಮಟ್ಟಿಗೆ ಹೆಚ್ಚಿನ ಸಹನೆ ತೆಗೆದುಕೊಳ್ಳುತ್ತಿದ್ದರು. ಅವಳು ಕೋಪಿಸಿಕೊಂಡಾಗ ಅದನ್ನು ಅವರು ಸಹಿಸಿ, ಅವಳನ್ನು ಶಾಂತಗೊಳಿಸಿ, ಅವಳ ಜತೆಯನ್ನು ಬಿಡದೆ ಇರುತ್ತಿದ್ದರಾದರೂ ಅವಳು ದುಃಖಿಸಿ ಬೇಸತ್ತಿದ್ದಾಗ ಅವರು ಅವಳನ್ನು ಬಿಟ್ಟು ಕೆಲವು ದಿನ ಬೇರೆ ಕಡೆಗಳಲ್ಲಿ ಸುಖವಾಗಿ ಮೆರೆದಿರುತ್ತಿದ್ದರು. ನಮ್ಮ ಯಜಮಾನರು ಈ ರೀತಿ ತಾಳ್ಮೆಯಿಂದ ವರ್ತಿಸಿ, ಅವಳನ್ನು ಸಾಕುತ್ತಾ ಬರುವಾಗಲೇ ಅವಳ ಹುಟ್ಟುಗುಣ ಬಿಡದೆ, ನಾವು ಸಮುದ್ರ ಕರಾವಳಿಗಳಿಗೆ ಹೋಗಬೇಕೆಂದು ಒತ್ತಾಯಿಸಿ, ನಾವು ಕೆಲವೊಮ್ಮೆ ಸಮುದ್ರ ಕರಾವಳಿಗೆ ಹೋಗಿ ಕೆಲವು ದಿನ ಅಲ್ಲಿರುವಂತೆಯೂ ಮಾಡುತ್ತಿದ್ದಳು. ಆದರೆ ಯಜಮಾನರ ಈ ಔದಾರ್ಯವನ್ನು ದುರುಪಯೋಗ ಪಡಿಸಿಕೊಂಡು ಅವಳು ಆ ಕರಾವಳೀ ಪ್ರದೇಶದ ದರಿದ್ರ ಜನರ ಸಂಪರ್ಕ ಬೆಳೆಸುತ್ತಲೂ ಅವರಂತೆಯೇ ತಾನಿರುತ್ತಲೂ ಕೊನೆ ಕೊನೆಗೆ ಯಜಮಾನರ ಜೀವನವನ್ನೇ ಅಪಹಾಸ್ಯಕರವಾಗಿಯೂ ದುಃಖದ ಒಂದು ಕಥೆಯಂತೆಯೂ ಮಾಡಿಬಿಟ್ಟಳು" ಎಂದು ಹೇಳಿದನು.

ಈ ಮಾತುಗಳು ನಡೆಯುತ್ತಿದ್ದ ಹಾಗೆಯೇ ದೀನ ದರಿದ್ರರು ಕುಲೀನ ಸಂಸ್ಕೃತರಿಗೆ ಕೊಡುತ್ತಿರುವ ಬಾಧೆಗಳನ್ನು ಗ್ರಹಿಸಿ ಗ್ರಹಿಸಿ ಮಿಸ್ ಡಾರ್ಟ್‌ಲ್ಲಳು ತನ್ನ ಮುಖದ ಭಾವನೆಗಳಿಂದ ಕೋಪಾಗ್ನಿಯನ್ನು ಹೊರಹಾಕುತ್ತಿದ್ದಳು. ಲಿಟ್ಮರನು ಮತ್ತೂ ಹೇಳತೊಡಗಿದನು –

"ಅವಳ ಈ ವಿಧದ ದುರ್ವತನೆಯನ್ನು ಯಜಮಾನರು ಕೊನೆಗೆ ಸಹಿಸಲಾರದೆ ಅವಳನ್ನು ನೇಪಲ್ಸಿನ ಒಂದು ಹೋಟೆಲಿನಲ್ಲಿ ನನ್ನ ವಶಕ್ಕೆ ಒಪ್ಪಿಸಿ – ತಾನು ಒಂದೆರಡು ದಿನಗಳಲ್ಲೇ ಬರುವುದಾಗಿ ಅವಳಿಗೆ ಹೇಳಿ ನಂಬಿಸಿ, ಅಲ್ಲಿಂದ ಹೊರಟು ಹೋದರು. ಯಜಮಾನರು ಅವಳನ್ನು ನನಗೆ ಒಪ್ಪಿಸುವಾಗಲೇ ಅವಳಿಗೆ ಇಷ್ಟವಿದ್ದರೆ ಬೇರೆಯವರನ್ನು ಕೂಡಿಕೊಂಡು ಹೋಗುವುದಕ್ಕೆ ತನ್ನ ಆಕ್ಷೇಪ ಇಲ್ಲವೆಂದು ಅವಳಿಗೆ ತಿಳಿಸಬೇಕೆಂದೂ ನನಗೆ ಅಪ್ಪಣೆಯಿತ್ತರು. ಯಜಮಾನರು ಹೋದನಂತರ, ಅವರು ಹಿಂತಿರುಗಿ ಬರುವುದಿಲ್ಲವೆಂಬಷ್ಟನ್ನು ಮಾತ್ರ ಅವಳಿಗೆ ತಿಳಿಸಿದೆ. ಅವಳು ಅದನ್ನು ಕೇಳಿ ಮೊದಲು ಕೋಪಗೊಂಡಳು. ಅನಂತರ ದುಃಖಿಸಿ, ಅತ್ತಳು. ಕೊನೆಗೆ ಅತ್ತೂ ಅತ್ತೂ ಅವಳಿಗೆ ಹುಚ್ಚೇ ಹಿಡಿಯಿತು. ಹುಚ್ಚಿನಿಂದ ಪ್ರಾಣ ಕಳೆದುಕೊಳ್ಳುವುದರಲ್ಲೇ ಇದ್ದಳು. ಆಗ್ಗೆ ನಾನು ಅವಳನ್ನು ಮೂರು ದಿನ ಒಂದು ಕೋಣೆಯಲ್ಲಿ ಕೂಡಿಟ್ಟಿದ್ದೆ."

ಈ ಮಾತುಗಳನ್ನು ಕೇಳುತ್ತಾ ಮಿಸ್ ಡಾರ್ಟ್‌ಲ್ಲಳು ಸ್ವಲ್ಪ ಸಮಾಧಾನಕ್ಕೆ ಬಂದಿದ್ದವಳಂತೆ ತೋರಿದಳು. ಲಿಟ್ಮರನು ಮತ್ತೂ ಹೇಳತೊಡಗಿದನು –

"ಅವಳ ಹುಚ್ಚು ಇಳಿದ ಮೇಲೆ ಯಜಮಾನರು ಹೇಳಿದ್ದ ಮಾತುಗಳನ್ನು ಪೂರ್ಣವಾಗಿ ತಿಳಿಸಿದೆ. ಈ ಸಮಯದಲ್ಲೇ ಅವಳ ಪೂರ್ವ ಚರಿತ್ರೆ ಏನೇ ಇದ್ದರೂ ಅವಳ ಕೈ ಹಿಡಿಯಲು ತಯಾರಾಗಿ ಮುಂದೆ ಬಂದಿದ್ದ ಶ್ರೀಮಂತ ಜನರೇ ತುಂಬಾ ಇದ್ದರು. ಆ ಮಾರ್ಗವನ್ನು ನಮ್ಮ ಯಜಮಾನರು ಸೂಚಿಸಿದ್ದುದರಲ್ಲಿ ಅವರ ಔದಾರ್ಯ ಕಂಡು ಬರುತ್ತಿದೆ. ಆ ಮಾರ್ಗವು ಅವಳಿಗೂ ಯೋಗ್ಯವಿತ್ತು. ಆದರೆ, ಅವಳು ತನ್ನ ಹೀನ ಕುಟುಂಬದ ಒರಟುತನಕ್ಕೆ ಸರಿಯಾಗಿ ಆರ್ಭಟೆ ಕೊಟ್ಟು, ನನ್ನನ್ನು ಬೈದು, ಸಾಧ್ಯವಿದ್ದಿದ್ದರೆ ನನ್ನ ರಕ್ತವನ್ನೇ ಹೀರಿಬಿಡುವಂತೆ ಗದ್ದಲವೆಬ್ಬಿಸಿದಳು." ಇದನ್ನೆಲ್ಲ ಲಿಟ್ಮರನು ಬಹು ನಿರುದ್ವಿಗ್ನತೆಯಿಂದ, ತನಗೆ ಇದರಲ್ಲಿ ಯಾವ ಸಂಬಂಧವೂ ಇಲ್ಲದವನಂತೆ, ನಿಧಾನವಾಗಿ ಹೇಳಿದನು. ಈ ಮಾತುಗಳನ್ನು ಕೇಳಿ –

"ಅವಳ ಉತ್ತಮ ಗುಣಗಳೆಷ್ಟಿವೆಯೆಂದು ಇದರಲ್ಲೇ ಕಾಣುತ್ತದಷ್ಟೆ." ಎಂದು ನಾನು – ಬಹ್ವಂಶ ಸ್ವಗತವಾಗಿಯೇ, ಅಂದೆನು. ಲಿಟ್ಮರನು ಈ ಸ್ವಗತ ಮಾತುಗಳಿಗೆ ಉತ್ತರ ಕೊಡದಿದ್ದರೂ ತನ್ನ ಗಂಭೀರತೆಯ ದೃಷ್ಟಿಯಿಂದಲೇ –

"ಹಾಗೋ! ನಿಮ್ಮಂಥವರಿಗೇನು ಗೊತ್ತು – ಮೀಸೆ ಬರದಿದ್ದ ಹುಡುಗರಿಗೆ!" ಎಂದನ್ನುವಂತೆ ಕಾಣಿಸಿಕೊಂಡನು.

ಲಿಟ್ಮರನ ವರದಿ ಮತ್ತೂ ಇತ್ತು. ಅವನು ಅಂದನು –

"ಇಂಥ ಸಂದರ್ಭದಲ್ಲಿ ಅವಳನ್ನೇನು ಮಾಡುವುದೆಂದು ತಿಳಿಯದೆ, ಪುನಃ ಕೋಣೆಯಲ್ಲಿ ಬಂಧಿಸಿಟ್ಟೆ. ಆದರೆ, ಹಾಗೆ ಬಂಧಿಸಿದ ದಿನ ರಾತ್ರಿಯೇ ಅವಳು ತನ್ನ ಕೋಣೆಯ ಕಿಟಕಿಯಿಂದ ಕಿಟಕಿಯ ಬದಿಯ ದ್ರಾಕ್ಷೆ ಚಪ್ಪರಕ್ಕಾಗಿ, ನನ್ನನ್ನು ತಪ್ಪಿಸಿ ಓಡಿ ಹೋದಳು."

"ಹೀಗಲ್ಲದೆ ಮತ್ತೇನು ತಾನೆ ಮಾಡುವಳು, ವಿಶ್ವಾಸಘಾತಕಿ!" ಎಂದಂದಳು ಮಿಸ್ ಡಾರ್ಟ್‌ಲ್ಲಳು. ಲಿಟ್ಮರನು ಮುಂದುವರಿಸಿದನು –

"ಅನಂತರ ನಾನು ಈ ಎಲ್ಲಾ ಸಂಗತಿಗಳನ್ನೂ ಮಿ. ಜೇಮ್ಸರಿಗೆ ತಿಳಿಸಿದೆನು. ಅವರು ನನ್ನ ಶ್ರಮಗಳಿಗಾಗಿ ನನ್ನನ್ನು ಪ್ರಶಂಸಿಸುವ ಬದಲು ಬೈದರು – ಅಪಮಾನಪಡಿಸಿದರು. ಅದಕ್ಕಾಗಿ ನಾನು ಅವರನ್ನು ಬಿಟ್ಟು ಹೊರಟಿದ್ದೇನೆ. ನಾನು ಉಂಡು ತಿಂದು ಇದ್ದ ಮನೆ, ಎಂದು ಇಲ್ಲಿಗೆ ಸದ್ಯ ಬಂದಿದ್ದೇನೆ. ಅಗತ್ಯವಿದ್ದವರಲ್ಲಿ ಕೆಲಸಕ್ಕೆ ಸೇರಲು ತಯಾರಿದ್ದೇನೆ" ಎಂದು ಹೇಳಿ ಮೌನವಾಗಿ ನಿಂತನು.

ಲಿಟ್ಮರನ ಹತ್ತಿರ ಮಾತಾಡಬಾರದೆಂದೇ ನಾನು ಮೊದಲು ಗ್ರಹಿಸಿದ್ದರೂ ಈಗ ಎರಡು ಪ್ರಶ್ನೆ ಕೇಳಿಬಿಡೋಣವೆಂದು ತೋರಿತು. ಹಾಗಾಗಿ ನಾನು ಕೇಳಿದೆ –
"ನಮ್ಮ ಕಡೆಯ ಕೆಲವು ಪತ್ರಗಳು ಬರಲಿಲ್ಲವೇ?"
ಲಿಟ್ಮರನು ಗಂಭೀರವಾಗಿ ನುಡಿದನು –
"ಯಜಮಾನ–ಸೇವಕರ ಸಂಬಂಧದಲ್ಲಿ ಪತ್ರ ವ್ಯವಹಾರಗಳನ್ನು ಕುರಿತು ಹೇಳುವುದೂ ಕೇಳುವುದೂ ಅನುಚಿತವು. ಅವರ ಸರ್ವಸಾಮಾನ್ಯವಾದ ಧೋರಣೆಯನ್ನು ಮಾತ್ರ ಹೇಳಬಹುದು. ಅವಳ ಊರಿನ ಕಡೆಯ ಪತ್ರಗಳು ಅವಳ ಮನಸ್ಸಿನ ಶಾಂತಿಗೆ ಭಂಗ ತರುವುವೆಂಬ ಅಭಿಪ್ರಾಯ ಅವರದು."
"ಇನ್ನೇನೂ ವಿಚಾರಿಸತಕ್ಕದ್ದಿಲ್ಲವಷ್ಟೆ?" ಎಂದು ಮಿಸ್ ಡಾರ್ಟಲ್ಲಳು ನನ್ನನ್ನು ಕೇಳಿದಳು.
"ವಿಶೇಷವೇನೂ ಇಲ್ಲ. ಆದರೆ, ಈತ ಮಹಾ ಪೋಲಿ, ಈ ಅನ್ಯಾಯ ಕಾರ್ಯಗಳಲ್ಲೆಲ್ಲ ಸಹಕರಿಸಿದ ಅನ್ಯಾಯ ಸಹಭಾಗಿ. ಈ ಅನ್ಯಾಯಗಳನ್ನೆಲ್ಲ ನಾನು ಮಿ. ಪೆಗಟಿಗೆ ತಿಳಿಸಬೇಕಾಗಿದೆ. ಇವನು ಎಮಿಲಿಯ ಬಂಧುಗಳ ಸಮೀಪ ಹೋಗದಿರುವುದು ಒಳ್ಳೆಯದೆಂದು ಮಾತ್ರ ತಿಳಿಸಬೇಕಾಗಿದೆ" ಎಂದು ನಾನು ತಿಳಿಸಿದೆನು.

ಲಿಟ್ಮರನು ಹಠಾತ್ತಾಗಿ ಚುರುಕಾದನು. ಅವನ ಗಾಂಭೀರ್ಯ ನಮ್ರತೆಗಳಿಗೆ ಭಂಗ ಬರದ ಕ್ರಮದಿಂದ ಉತ್ತರವಿತ್ತನು –
"ತಮ್ಮ ಹಿತಚಿಂತನೆಯ ಬಗ್ಗೆ ನನ್ನ ವಂದನೆಗಳು, ಸರ್. ಆದರೆ ತಮಗೇ ಗೊತ್ತಿರಬಹುದು, ಸರ್. ಈ ದೇಶದಲ್ಲಿ ಗುಲಾಮರೂ ಗುಲಾಮರ ಮೇಸ್ತ್ರಿಗಳೂ ಇಲ್ಲವೆಂಬುದು! ಮತ್ತು ಸರ್, ಸರಕಾರವೇ ಕೈಕೊಳ್ಳಬೇಕಾದ ಕಾರ್ಯವನ್ನು ಜನ ಕೈಕೊಂಡದ್ದಾದರೆ ಅಂಥವರು ತಮ್ಮ ಮೈ ಕೈ ಮುರಿಸಿಕೊಳ್ಳಬೇಕಾದೀತು – ಅಲ್ಲವೇ ಸರ್?"
ಇಷ್ಟು ಮಾತಾಡಿ ಲಿಟ್ಮರನು ಮೆಲ್ಲಗೆ ಮಾಯವಾದನು.

ಲಿಟ್ಮರನು ಹೋದನಂತರ ಮಿಸೆಸ್ ಸ್ಟೀಯರ್ಫೋರ್ತಳ ಭೇಟಿಯಾಯಿತು. ಅವಳ ಮುಖ ಬಹಳ ಸೊರಗಿ ಹೋಗಿತ್ತು. ಅವಳ ತಲೆ ಕೂದಲು ಮೊದಲಿಗಿಂತ ಹೆಚ್ಚು ನರೆದಿತ್ತು. ಆದರೂ ಶ್ರೀಮಂತಿಕೆ, ಕುಲೀನತೆಯ ಪ್ರಭೆ ಮೊದಲಿನಂತೆಯೇ ಕಂಡು ಬರುತ್ತಿತ್ತು. ಅವಳೂ ಸಹ ಮಾತುಗಳನ್ನೆಲ್ಲ ಬಹು ಕಡಿಮೆ ಮಾಡಿಕೊಂಡಿದ್ದಳು. ನನ್ನನ್ನು ಕೇಳಿದಳು –
"ಆ ಹೆಣ್ಣು ಈಗ ಎಲ್ಲಿದೆ?"
"ಎಲ್ಲಿದ್ದಾಳೆಂದು ಗೊತ್ತಿಲ್ಲ. ಲಿಟ್ಮರನು ಹೇಳಿದ್ದಕ್ಕಿಂತ ಹೆಚ್ಚಿನದೇನೂ ನನಗೆ ಗೊತ್ತಿಲ್ಲ."
"ಅವಳು ಸತ್ತಿರಬಹುದೆಂದು ಊಹಿಸಲೂಬಹುದು. ಆದರೆ ಅಂಥವರು ಸಾಯುವುದೇ ಅಪರೂಪ. ಅವಳ ಕಪ್ಪು ಕಣ್ಣು, ಚಂದದ ಮುಖ ಇವೆಲ್ಲ ಇನ್ನೊಬ್ಬರನ್ನು ಹಾಳುಮಾಡುವುದಕ್ಕಾಗಿಯೇ ಇರುವಂಥವು. ನನ್ನ ಮಗನನ್ನು ತನ್ನ ಬಲೆಯಲ್ಲಿ ಹಾಕಿಕೊಂಡು ತಾಯಿ ಮಕ್ಕಳನ್ನು ಬೇರೆ ಮಾಡಿದ ವಿಷ ಜಂತುವೇ ಅದು. ಇನ್ನಾದರೂ ಅವಳು ನನ್ನ ಮಗನ ದೃಷ್ಟಿಗೆ ಬೀಳದಿದ್ದರೆ ಸಾಕಿತ್ತು."

ಆಗ ನಾನು ಸ್ವಲ್ಪ ವಿವರವಾಗಿ ಉತ್ತರವೀಯಬೇಕಾಯಿತು.
"ಅಮ್ಮಾ ನೀವು ತಾಯಿ–ಮಕ್ಕಳ ಅಗಲುವಿಕೆಯ ದುಃಖವನ್ನು ನಾನು ಅರಿತಿರುವೆನು. ನಾನೂ ಅದರಲ್ಲಿ ದುಃಖಿಸುವೆನು. ಇತರ ವಿಷಯಗಳ ಮಟ್ಟಿಗೆ ನನಗೂ ನಿಮಗೂ ತುಂಬಾ ಅಭಿಪ್ರಾಯ ಬೇಧವಿದೆ. ನನ್ನಿಂದ ನಿಮಗೇನಾದರೂ ಕೆಲಸವಾಗಬೇಕಿದ್ದರೆ ತಿಳಿಸಿ" ಎಂದಂದೆನು.
"ನಿನ್ನಿಂದಾಗಬೇಕಾದುದು ವಿಶೇಷ ಏನೂ ಇಲ್ಲ. ಆದರೆ, ಆ ಹುಡುಗಿಯ ತಂದೆಯೋ ಮಾವನೋ ಯಾರೋ ಒಬ್ಬ ಒರಟ ಇಲ್ಲಿಗೆ ಬಂದಿದ್ದನಲ್ಲಾ – ನೀನು ಕರೆದುಕೊಂಡು ಬಂದಿದ್ದೆಯಲ್ಲಾ, ಅವನನ್ನು ಕಂಡರೆ, ಅವನು ಪುನಃ ನನ್ನ ಮಗನನ್ನು ಹಾಳುಮಾಡದಂತೆ ನೀನು ದಯಮಾಡಿ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳಬೇಕಾಗಿದೆ" ಎಂದು ಮಿಸೆಸ್ ಸ್ಟೀಯರ್ಫೋರ್ತಳು ಅಂದಳು.

ಈ ಮಾತುಗಳಿಗೆ ವಿಶೇಷ ಉತ್ತರ ಕೊಡದೆ,
"ಆ ಹೆದರಿಕೆ ನಿಮಗೆ ಬೇಡಮ್ಮಾ. ನಿಮ್ಮ ಮಗನ ಬಾಂಧವ್ಯದ ಸಂಬಂಧ ಹಾಗಿರಲಿ, ನಿಮ್ಮ ಕೈಯ್ಯಿಂದ ಒಂದು ಗ್ಲಾಸು ನೀರನ್ನು ಸಹ ಆ ಸಂಸಾರದವರು ಮುಟ್ಟರು" ಎಂದಷ್ಟೆ ಹೇಳಿದೆನು. ಇದರಿಂದ ಮಿಸೆಸ್ ಸ್ಟೀಯರ್ಫೋರ್ತಳು ಸಿಟ್ಟುಗೊಳ್ಳಲಿಲ್ಲ. ಅವಳ ಜೀವನದ ಕ್ರಮಗಳಿಗನುಸಾರವಾಗಿ, ನನ್ನ ಮದುವೆ, ನನ್ನ ಕಾದಂಬರಿಗಳನ್ನೂ ಮತ್ತಿತರ ಸರ್ವಸಾಮಾನ್ಯ ವಿಷಯವನ್ನು ಕುರಿತು ಕೆಲವು ಮಾತುಗಳನ್ನಾಡಿ ನನ್ನನ್ನು ಕಳುಹಿಸಿಕೊಟ್ಟಳು.

ನಾನು ಒಂದೆರಡು ದಿನಗಳಲ್ಲೇ ಮಿ. ಪೆಗಟಿಯನ್ನು ಹುಡುಕಿ ಹಿಡಿದೆನು. ಮಿ. ಪೆಗಟಿ ಎಮಿಲಿಯನ್ನು ಹುಡುಕಿ ಬಚ್ಚಿ ಬೇಸತ್ತಾಗ ಕುಳಿತು ವಿಶ್ರಮಿಸಿಕೊಳ್ಳಲೋಸ್ಕರ ಒಂದು ಕೋಣೆಯನ್ನು ಲಂಡನ್ನಿನಲ್ಲೇ ಬಾಡಿಗೆಗೆ ಮಾಡಿಕೊಂಡಿದ್ದರು. ಅಲ್ಲಿ ಅವರೊಡಣೆ, ಅವರಿಗೆ ಸಿಟ್ಟು ಬರದ ರೀತಿಯಲ್ಲಿ ನಾನು ತಿಳಿದ ವರ್ತಮಾನಗಳನ್ನೆಲ್ಲ ತಿಳಿಸಿದೆನು. ಅವರು ಸ್ವಲ್ಪ ಸಂತೋಷಪಡುತ್ತಾ –

"ಹಾಗಾದರೆ ಎಮಿಲಿಯು ಜೀವಂತಳಾಗಿದ್ದಾಳೆಂಬುದು ನಿಜ. ಹೆದರಿಯೂ ನಾಚಿಕೆಪಡುತ್ತಲೂ ದಾರಿ ಸಿಗದೆಯೂ ಅವಳು ಕಷ್ಟ ಪಡುತ್ತಿರಬೇಕು, ಅಲ್ಲವೇ ಮಾಸ್ಟರ್ ಡೇವಿ?" ಎಂದು ಕೇಳಿದರು.
"ಹೌದು, ಅವಳು ಲಂಡನ್ನಿಗೆ ಬಂದು, ಎಲ್ಲೋ ನಿಂತು, ಮುಂದೆ ದಾರಿ ತೋಚದೆ ಕಷ್ಟಪಡುತ್ತಿರಬಹುದು" ಎಂದು ನಾನುತ್ತರವಿತ್ತೆ.
"ಹಾಗಾದರೆ ನಾವು ಅವಳನ್ನು ಹುಡುಕುವುದು ಹೇಗೆ?" ಎಂದು ಅವರು ಪ್ರಶ್ನಿಸಿದರು.
ಮಾರ್ಥಾಳು ಯಾರ್ಮತ್ತನ್ನು ಬಿಟ್ಟು ಲಂಡನ್ನಿನಲ್ಲಿದ್ದಾಳೆಂಬುದು ನಮಗಿಬ್ಬರಿಗೂ ಗೊತ್ತಿತ್ತು. ಅವಳಿರುವ ಸ್ಥಳವನ್ನೂ ನಾವು ಸ್ವಲ್ಪ ಮಟ್ಟಿಗೆ ಅಂದಾಜು ಮಾಡಿದ್ದೆವು. ಹಾಗಾಗಿ ನಾನಂದೆ –
"ನಾವು ಹುಡುಕಬೇಕು – ಅದೂ ಶೀಘ್ರದಲ್ಲೇ ಆಗಬೇಕು. ಎಮಿಲಿಯ ಪ್ರೀತಿಗೆ ಪಾತ್ರಳಾದ ಮಾರ್ಥಾಳನ್ನು ನಾವು ಮೊದಲು ಹುಡುಕಿ ಹಿಡಿಯೋಣ. ಅವಳ ಮುಖಾಂತರ ನಾವು ಮುಂದಿನ ಕೆಲಸಗಳನ್ನು ಮಾಡಬಹುದು."

ನಮ್ಮೊಳಗೆ ಇಷ್ಟು ಮಾತು ನಡೆಯುವಾಗ ರಾತ್ರಿಯಾಗಿತ್ತು. ನಾವು ಆಗ ರಾತ್ರಿಯೆಂದು ಸುಮ್ಮನಿರದೆ ಮಾರ್ಥಾಳನ್ನು ಹುಡುಕುತ್ತಾ ಹೊರಟೆವು. ಹಾಗೆ ರಾತ್ರಿ ಜನರು ಕಡಿಮೆಯಿದ್ದ, ದೀನ ದರಿದ್ರರು ಹೆಚ್ಚಾಗಿ ವಾಸಿಸುತ್ತಿದ್ದ ಕೆಲವು ಸ್ಥಳಗಳಲ್ಲಿ ಅವಳನ್ನು ಹುಡುಕುತ್ತಾ ಅಲ್ಲಲ್ಲಿ ನಿಂತು ದಾರಿಗರನ್ನು ದೃಷ್ಟಿಸಿ ನೋಡುತ್ತಾ ಬಂದಾಗ, ದೂರದಲ್ಲಿ ಒಂದು ಕಡೆ ನಾವು ಮಾರ್ಥಾಳನ್ನು ಕಂಡೆವು. ಅವಳೊಡನೆ ಜನರಿರುವಲ್ಲಿ ಮಾತಾಡಬಾರದೆಂದೇ ಅವಳನ್ನು ಹಿಂಬಾಲಿಸುತ್ತಾ ನಾವು ನಡೆದೆವು. ಅವಳು ರಾಜ ರಸ್ತೆಗಳನ್ನು ಬಿಟ್ಟು ಅಡ್ಡ ರಸ್ತೆಗಳಿಗಾಗಿ ನದಿಯ ಕಡೆಗೆ ಹೋಗತೊಡಗಿದಳು. ನಾವು ಅವಳನ್ನು ಹಿಂಬಾಲಿಸಿ ನಡೆದೆವು. ಇಲ್ಲಿ ಜನಸಂದಣಿಯೂ ವಾಹನ ಚಲಾವಣೆಯೂ ಬಹು ಕಡಿಮೆಯಾಗಿತ್ತು. ರಸ್ತೆಯ ಅಗಲ ಕಡಿಮೆಯಾಗಿದ್ದುದರಿಂದಲೂ ರಸ್ತೆಯ ಇಬ್ಬದಿಗಳಲ್ಲೂ ಎತ್ತರದ ಕಟ್ಟಡಗಳಿದ್ದುದರಿಂದಲೂ ಇಲ್ಲಿ ಇತರ ಕಡೆಗಳಿಗಿಂತ ಹೆಚ್ಚು ಕತ್ತಲೆಯಾಗಿತ್ತು. ಇಂಥ ಸ್ಥಳದಲ್ಲೇ ನಾವು ಮಾರ್ಥಾಳನ್ನು ಮಾತಾಡಿಸಲು ಅನುಕೂಲವಾದ ಒಂದು ಸ್ಥಳವನ್ನು ಕಂಡುಕೊಂಡೆವು.

ಅಧ್ಯಾಯ ನಲ್ವತ್ತೇಳು

ಮಾರ್ಥಾ

ಆದರೆ, ಅವಳ ನಡಿಗೆಯನ್ನೂ ಅವಳು ಹೋಗುತ್ತಿದ್ದ ಸ್ಥಳವನ್ನೂ ಗ್ರಹಿಸಿ ಆಗಲೇ ಅವಳನ್ನು ಮಾತಾಡಿಸದಿದ್ದು, ಅವಳು ಎಲ್ಲಿಯವರೆಗೆ ಹೋಗಬಹುದೆಂದು ತಿಳಿಯಲೋಸ್ಕರವೇ ನಾವು ಅವಳನ್ನು ಮತ್ತೂ ಹಿಂಬಾಲಿಸ ತೊಡಗಿದೆವು. ಮಾರ್ಥಾಳು ಕೆಲವು ಸರ್ತಿ ಬೆಳಕಿನಲ್ಲೂ ಕೆಲವು ಸರ್ತಿ ಕತ್ತಲಲ್ಲೂ ದಾಟಿ, ಮುಂದುವರಿಸುತ್ತಾ ನದಿಗೆ ಸಮೀಪವಾಗತೊಡಗಿದಳು. ಇಷ್ಟರಲ್ಲೇ ಅವಳಿಗೆ ನಮ್ಮ ಕಾಲಸಪ್ಪಳ ಕೇಳಿರಬೇಕು. ಅವಳು ಹಠಾತ್ತಾಗಿ ಚುರುಕಾಗಿ ನಡೆಯುತ್ತಾ ನದಿಯ ಅಂಚಿನವರೆಗೂ ತಲುಪಿ, ಅಲ್ಲಿನ ಒಂದು ಬಂಡೆಯನ್ನೇರಿ ನಿಂತಳು. ಈ ಸಂದರ್ಭಗಳನ್ನು ನೋಡುವಾಗ ಅವಳು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ ತೊಡಗಿದ್ದಂತೆಯೂ ತನ್ನೆದುರಿದ್ದ ನದಿಗೆ ಧುಮುಕುವವಳಾಗಿಯೂ ತೋರಿತು. ಅಷ್ಟರಲ್ಲೇ ನಾನು ಒಂದು ಕಡೆಯಿಂದಲೂ ಮತ್ತೊಂದು ಕಡೆಯಿಂದ ಮಿ. ಪೆಗಟಿಯೂ ಅವಳ ಪಕ್ಕಕ್ಕೆ ಹಾರಿ ಹೋಗಿ ಅವಳ ಒಂದೊಂದು ಕೈಯನ್ನು ಬಲವಾಗಿ ಹಿಡಿದುಕೊಂಡೆವು. ನಾನು "ಮಾರ್ಥಾ" ಎಂದು ಕರೆದದ್ದಕ್ಕೆ ಉತ್ತರ ಕೊಡದೆ ಶೂನ್ಯ ದೃಷ್ಟಿಯಿಂದ ಸುತ್ತಲೂ ನೋಡಿದಳು. ಅವಳಿಗೆ ತಾನೆಲ್ಲಿದ್ದೇನೆಂಬ ಪ್ರಜ್ಞೆಯೇ ಇಲ್ಲದಿತ್ತು. ಪುನಃ "ಮಾರ್ಥಾ" ಎಂದು ಕರೆದೆನು.

"ನನ್ನನ್ನೇಕೆ ತಡೆದು ನಿಲ್ಲಿಸಿದಿರಿ – ನಾನು ಬದುಕಿ ಪ್ರಯೋಜನವಿಲ್ಲ" ಎಂದನ್ನುತ್ತಾ ನಮ್ಮ ಗುರುತನ್ನು ಸ್ಪಷ್ಟಪಡಿಸಿಕೊಂಡಳು.
"ನೀನು ಹಾಗೆ ಗ್ರಹಿಸಬಾರದು, ಮಾರ್ಥಾ. ನಿನಗೆ ದುಃಖಗಳಿರಬಹುದು, ಆದರೆ ಆತ್ಮಹತ್ಯೆಯು ಅನ್ಯಾಯವಲ್ಲವೇ? ಮನುಷ್ಯರೆಲ್ಲರಿಂದಲೂ ಪ್ರಯೋಜನವಿದೆ. ನಿನ್ನಿಂದ ಸ್ವಲ್ಪ ಉಪಕಾರವನ್ನು ಬಯಸಿಯೇ ನಿನ್ನನ್ನು ಹುಡುಕುತ್ತಾ ನಾವು ಬಂದಿರುತ್ತೇವೆ. ನೀನು ಬದುಕಿರುವುದರಿಂದ ಜನರಿಗೆ ಪ್ರಯೋಜನವಿದೆ" ಎಂದು ನಾನು ಅವಳಿಗೆ ಸಮಾಧಾನ ಹೇಳಿದೆನು.
"ನನ್ನಿಂದ ಯಾರಿಗೂ ಪ್ರಯೋಜನವಿಲ್ಲ. ನಾನು ಯಾರಿಗೂ ಬೇಡವಾದವಳು. ಸಮಾಜಕ್ಕೇ ಹೇಯವಾದವಳು" ಎಂದು ಅವಳು ದುಃಖದಿಂದ ಹೇಳಿಕೊಂಡಳು.
"ಹಾಗೆ ಗ್ರಹಿಸಬಾರದು. ನಮ್ಮ ಎಮಿಲಿಯು ನಿನ್ನನ್ನು ಪ್ರೀತಿಸುತ್ತಿದ್ದಳಷ್ಟೆ. ಅವಳನ್ನು ಕುರಿತಾದ ಸ್ವಲ್ಪ ಕೆಲಸ ನಿನ್ನಿಂದಾಗಬೇಕಾಗಿದೆ, ಮಾರ್ಥಾ" ಎಂದು ಹೇಳುತ್ತಾ ನಾವು ಅವಳನ್ನು ಹುಡುಕಿದ ಕಾರಣವನ್ನು ಹೇಳಲು ಪ್ರಾರಂಭಿಸಿದೆನು.
"ಎಮಿಲಿಯು ನನ್ನನ್ನು ಪ್ರೀತಿಸುತ್ತಿದ್ದಳು ನಿಜ. ಆದರೆ, ಅವಳನ್ನು ಅಪಹರಿಸಿದುದರಲ್ಲಿ ನನಗೇನೂ ಕೈ ಇಲ್ಲವೆಂದು ಪ್ರಮಾಣ ಮಾಡಿ ಹೇಳುತ್ತೇನೆ. ಈಗ ನನ್ನಿಂದಾಗಬೇಕಾದುದೇನು?"

ಲಿಟ್ಮರನಿಂದ ನಾನು ತಿಳಿದಿದ್ದ ಸಂಗತಿಗಳನ್ನು ಅವಳಿಗೆ ಸೂಕ್ಷ್ಮವಾಗಿ ತಿಳಿಸಿ, ಅನಂತರ ಮುಂದುವರಿಯುತ್ತಾ ಅಂದೆ –
"ಮಾರ್ಥಾ, ಎಮಿಲಿಯು ತನ್ನ ಮಾವನ ಮನೆಯಿಂದ ಹೇಳದೇ ಹೋದ್ದರಿಂದ ತಾನಾಗಿಯೇ ಮರಳಿ ಬರಲು ಅಂಜಬಹುದು. ಆದ್ದರಿಂದ ಈಗ ಅವಳು ಲಂಡನ್ನಿನಲ್ಲೇ ಇರಬೇಕೆಂದು ಊಹಿಸುತ್ತೇವೆ. ಎಮಿಲಿಯನ್ನು ನೀನು ದಯಮಾಡಿ ಹುಡುಕಿಕೊಡಬೇಕು. ಇಷ್ಟನ್ನೇ ನಿನ್ನಿಂದ ನಾವು ಬಯಸುವುದು."
"ಆಗಬಹುದು. ಎಮಿಲಿಯು ನನ್ನ ಸ್ನೇಹಿತೆಯಾದ್ದರಿಂದ ನನ್ನನ್ನು ಕಂಡು ಹೆದರಳು. ಅವಳನ್ನು ಹುಡುಕಿ ಹಿಡಿದು ನಿಮಗೆ ತಿಳಿಸುತ್ತೇನೆ" ಅಂದಳು.

ಈ ಹುಡುಕುವ ಖರ್ಚಿನ ಬಗ್ಗೆ ನಾನು ಸ್ವಲ್ಪ ಹಣ ಕೊಡಲು ಹೋದಾಗ ಹಣ ಬೇಡವೆಂದಳು. ಎಮಿಲಿಯ ಮೇಲಿನ ಅವಳ ಪ್ರೇಮವೇ ಅವಳ ಕಾರ್ಯಗಳ ಪ್ರತಿಫಲವೆಂದುಕೊಂಡು ನಮ್ಮನ್ನು ಬಿಟ್ಟು ತನ್ನ ದಾರಿಯಲ್ಲಿ ಹೊರಟು ಹೋದಳು.

ನಾನು ನಮ್ಮ ಮನೆಗೆ ತಲುಪುವಾಗ ಸಾಧಾರಣ ಮಧ್ಯ ರಾತ್ರಿಯಾಗಿತ್ತು. ಅತ್ತೆ ಮನೆ ಕಡೆಯಿಂದ ತುಂಬಾ ಬೆಳಕನ್ನು ಕಂಡು ನಾನು ಅತ್ತ ಕಡೆ ಹೋದೆನು. ಅತ್ತೆಯ ಮನೆ ಬಾಗಿಲು ತೆರೆದಿತ್ತು. ಒಳಗಿನ ಬೆಳಕು ರಸ್ತೆಗೆ ಬೀಳುತ್ತಿತ್ತು. ನಾನು ಅವಳ ಮನೆಗೆ ಸಮೀಪವಾಗುವಾಗ ರಸ್ತೆಯ ಕರೆಯಲ್ಲೊಬ್ಬನು ನಿಂತುಕೊಂಡು ಒಂದು ಬಾಟ್ಲಿಯಿಂದ ಏನೋ ಕುಡಿಯುತ್ತಿದ್ದನು. ಅವನು ಯಾರಿರಬಹುದೆಂದು ನಾನು ಅಡಗಿ ನಿಂತು ನೋಡುತ್ತಿದ್ದಾಗಲೇ ಅತ್ತೆಯು ಮನೆಯೊಳಗಿನಿಂದ ಬಂದಳು. ನಾನು ಮತ್ತಷ್ಟು ಅಡಗಿ ನಿಂತೆನು. ಅತ್ತೆಯು ಬಹು ಗಾಬರಿಗೊಂಡಂತೆ ಇದ್ದುದರಿಂದ ನಾನು ಅವಳ ಮನಸ್ಸು ನೋಯಿಸಬಾರದೆಂದು ಅಡಗಿ, ಅಗತ್ಯ ಬಿದ್ದರೆ, ಅವಳ ಸಹಾಯವೆಸಗಲು ಸಿದ್ಧನಾದೆ. ಬಂದಿದ್ದ ಮನುಷ್ಯನನ್ನು ಬೇಗ ಅಲ್ಲಿಂದ ಕಳುಹಿಸಬೇಕೆಂದು ತೋರುವಂತೆ ಅತ್ತೆಯು ಸ್ವಲ್ಪ ಹಣವನ್ನು ಲೆಕ್ಕ ಮಾಡಿ ಅವನಿಗೆ ಕೊಟ್ಟಳು. ಹಣ ಬಹಳ ಕಡಿಮೆಯಾಯ್ತೆಂದು ಅವನು ಆಕ್ಷೇಪಿಸಿದನು. ಅತ್ತೆಯ ಅಂದಿನ ಸ್ಥಿತಿಯಲ್ಲಿ ಅದಕ್ಕಿಂತ ಹೆಚ್ಚು ಕೊಡಲಾರಳೆಂದು ಅತ್ತೆ ತಿಳಿಸಿದಳು. ಆ ವ್ಯಕ್ತಿಯು ಕೋಪದಿಂದ –
"ಹಾಗಾದರೆ ನಿನ್ನ ಹಣವೇ ಬೇಡ. ನೀನೇ ತೆಗೆದುಕೋ, ಅದನ್ನು" ಎಂದಂದನು.

"ನನ್ನ ಹಣದ ಹೆಚ್ಚಿನ ಅಂಶವೆಲ್ಲ ಕಳೆದು ಹೋಗಿದೆ. ಅದಕ್ಕೂ ಮೊದಲು ನೀನೂ ನನಗೆ ಹೇರಳವಾದ ನಷ್ಟವನ್ನು ಒದಗಿಸಿರುತ್ತೀ. ನನ್ನನ್ನು ನೀನು ಹಿಂಸಿಸಿದೆ, ಅಪಮಾನಮಾಡಿದೆ. ಇನ್ನೂ ಸಹ ನೀನು ನನ್ನೆದುರು ಹೀಗೆ ನಿಂತು ಹಿಂಸೆ ಕೊಡಬೇಕಾದರೆ ನಿನ್ನ ಮನಸ್ಸು ಎಷ್ಟು ಕಠಿಣವಿರಬೇಕಪ್ಪಾ!" ಎಂದಂದಳು ಅತ್ತೆ.

"ಅಂತರಂಗ ಬಹಿರಂಗಗಳಲ್ಲೂ ನಾನು ಹೀನನಾಗಿದ್ದೇನೆಂದು ತಿಳಿದಲ್ಲವೇ ನೀನು ಇಷ್ಟೊಂದು ಹೀನೈಸಿ ಮಾತಾಡುವುದು? ಹಗಲು ಪೂರಾ ಅಡಗಿ ಕುಳಿತು, ರಾತ್ರಿ ಗೂಬೆಯಂತೆ ಜೀವಿಸುವ ನನ್ನ ಸ್ಥಿತಿಯನ್ನರಿತಲ್ಲವೇ ನೀನು ಹೀಗನ್ನುವುದು?" ಎಂದು ಅವನು ಪ್ರಶ್ನಿಸಿದನು.

"ನನ್ನ ಆಸ್ತಿ ಪಾಸ್ತಿಗಳ ಹೆಚ್ಚಂಶವನ್ನು ಹಾಳುಮಾಡಿ, ನಾನು ಪ್ರಪಂಚದಲ್ಲಿ ಯಾರನ್ನೂ ನಂಬದಂತೆ ನನ್ನ ಮನಸ್ಸನ್ನು ಕಲ್ಲಾಗಿಸಿ, ನೀನು ವಿಶ್ವಾಸಘಾತುಕನಾಗಿ, ಕೃತಘ್ನನಾಗಿ ಪುನಃ ಪುನಃ ಈ ರೀತಿ ಹಿಂಸೆ ಕೊಡುವ ಬದಲು, ಏಕಾಂತದಲ್ಲಿ ಪಶ್ಚಾತ್ತಾಪಪಡುತ್ತಾ ನಿನ್ನನ್ನು ನೀನೇ ಉದ್ಧರಿಸಿಕೊಳ್ಳುವ ಪ್ರಯತ್ನವನ್ನೇಕೆ ಮಾಡಬಾರದು? ಗುಣವಾಗುತ್ತ ಬರುತ್ತಿರುವ ನನ್ನ ಗಾಯಗಳನ್ನು ಕೆದರಿಸಬೇಡ" ಎಂದು ಅತ್ತೆ ದುಃಖ, ಕನಿಕರಗಳಿಂದ ಹೇಳಿಕೊಂಡಳು.

ಆತನು ಕೋಪಿಸಿಕೊಂಡು ಅಲ್ಲಿಂದ ಹೊರಟು ಹೋದನು. ನನಗವನು ದಾರಿಯಲ್ಲಿ ಎದುರು ಸಿಕ್ಕಿ ನಾವು ಒಬ್ಬರನ್ನೊಬ್ಬರು ನೋಡಿಕೊಂಡೆವು.

ಅನಂತರ ನಾನು ಉಪಾಯವಿಲ್ಲದೆ ಅತ್ತೆಯ ಎದುರಿಗೇ ಹೋದೆನು. ನನ್ನನ್ನು ಕಂಡಕೂಡಲೇ ಅತ್ತೆ ಅಂದಳು –

"ಟ್ರಾಟ್, ಅವನು ನನ್ನ ಗಂಡ."

"ನಿನ್ನ ಗಂಡ ಜೀವಂತನಾಗಿಲ್ಲವೆಂದು ಗ್ರಹಿಸಿದ್ದೆನು!"

"ನನ್ನ ಮಟ್ಟಿಗೆ ಅವನು ಸತ್ತಿರುವಂತೆಯೇ – ನಿಜ."

ಯಾವ ಮಾತನ್ನೂ ಆಡದೆ ನಾನು ಮೌನಿಯಾಗಿದ್ದೆ.

"ಟ್ರಾಟ್, ಕೇಳು – ನಿನ್ನೊಡನೆ ಹೇಳದಿರುವ ವಿಷಯವಿಲ್ಲ...." ಎಂದು ಹೇಳಿ ಅತ್ತೆ ಸ್ವಲ್ಪ ಸುಧಾರಿಸಿಕೊಂಡು, ಯಾವುದೋ ಒಂದು ವಿಷಯದಲ್ಲಿ ತನ್ನ ಆಖೈರು ನಿರ್ಧಾರವನ್ನು ಹೇಳುತ್ತಿರುವವಳಂತೆ ಹೇಳಿದಳು –

"ಅವನು ಸುಂದರನಾಗಿದ್ದ. ನಾನವನನ್ನು ಬಹುವಾಗಿ ಪ್ರೀತಿಸಿಯೇ ಮದುವೆಯಾದೆ. ನನ್ನ ಪ್ರೇಮದ ಪೂರ್ಣ ಸೇವೆಯೆಂದು ನನ್ನ ಸರ್ವಸ್ವವನ್ನು ಅವನಿಗೆ ಅರ್ಪಿಸಿದೆ. ಆದರೆ ಅವನು ಸ್ವೇಚ್ಛಾವರ್ತನೆಯಿಂದ ಜುಗಾರಿ, ಕುಡಿತ, ವ್ಯಭಿಚಾರಗಳಲ್ಲಿ ಬಿದ್ದು ಆಸ್ತಿ, ಮತ್ತು ಹಣವನ್ನೆಲ್ಲಾ ಕಳೆದುಕೊಂಡ. ನನ್ನನ್ನಲ್ಲದೆ ಇನ್ನೊಬ್ಬಳನ್ನೂ ಅವನು ವಂಚಿಸಿ ಮದುವೆಯಾಗಿದ್ದಾನೆಂದೂ ತಿಳಿದೆ. ಸರಕಾರ ಅವನ ಅನೇಕ ಅಪರಾಧಗಳಿಗಾಗಿ ಅವನನ್ನು ಹುಡುಕುತ್ತಾ ಇದೆ. ಆದ್ದರಿಂದ ಅವನು ಹಗಲೆಲ್ಲಾ ಅಡಗಿಯೇ ಜೀವಿಸುತ್ತಿದ್ದಾನೆ. ಅವನ ರಕ್ಷಣೆಗೆಂದು ನಾನು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಅವನೇ ಅದನ್ನು ನೋಡಿಕೊಳ್ಳುತ್ತಾನೆ. ಆದರೆ ಅವನು ನನ್ನ ಅಪಾರವಾದ ಪ್ರೇಮದ ಒಂದು ಕುರುಹು ಆಗಿ ಉಳಿದಿರುವವನಾದ್ದರಿಂದ ಅವನಿಗೆ ಶಿಕ್ಷೆ ಅಥವಾ ಅಪಮಾನವಾಗುವ ಪ್ರಸಂಗಗಳಿಂದ ತಪ್ಪಿಸಲು ನಾನು ಸದಾ ತಯಾರಿದ್ದೇನೆ. ನನ್ನ ತಾರುಣ್ಯದಲ್ಲಿ ನಾನು ಕಟ್ಟಿದ ಪ್ರೇಮಮಂದಿರವು ನನ್ನ ಮನೋರಾಜ್ಯದಲ್ಲಾದರೂ ಪರಿಶುದ್ಧವಾಗಿ ಉಳಿಯಲೆಂದು, ನಾನು ಅವನಿಗೆ ಬಾಹ್ಯದಲ್ಲಿ ಬಹು ಕಠೋರಳಾಗಿ ತೋರಿಸಿಕೊಳ್ಳುತ್ತಾ ಅಂತರಂಗದಲ್ಲಿ ಬಹು ಮೃದುವಾಗಿದ್ದೇನೆ. ನನ್ನ ಜೀವಮಾನದಲ್ಲೇ ಇದಕ್ಕಿಂತ ಹೆಚ್ಚಾದ – ಬೇರಾದ, ಯಾವ ಗುಟ್ಟು ನನ್ನಲ್ಲಿಲ್ಲ. ಇನ್ನು ನಾವು ಈ ವಿಷಯವನ್ನು ಎಂದೂ ಮಾತಾಡಕೂಡದು."

ಅಧ್ಯಾಯ ನಲ್ವತ್ತೆಂಟು

ನನ್ನ ಮನೆ

ನನ್ನ ಮುಖ್ಯ ವೃತ್ತಿ ಪುಸ್ತಕಗಳನ್ನು ಬರೆಯುವುದಾಗಿತ್ತು. ಈ ವೃತ್ತಿಯನ್ನು ಬಹು ಶ್ರದ್ಧೆಯಿಂದ ಮಾಡುತ್ತಾ ಬಂದೆ. ನನ್ನ ಸಾಹಿತ್ಯ ಬಹು ಜನಾದರಣೀಯವಾಗುತ್ತ ಬರುತ್ತಿದೆಯೆಂದು ತಿಳಿದೆನು. ನಾನಾ ಜನರು ತಂತಮ್ಮ ಮೆಚ್ಚುಗೆಯನ್ನು ನನಗೆ ತಿಳಿಸುತ್ತಿದ್ದರು. ಆದರೆ, ನನ್ನ ಮನಸ್ಸಿಗೆ ಒಪ್ಪಿದಂಥ ಪ್ರಶಂಸೆಗಳಿಂದ ಮಾತ್ರ ಸಂತೋಷಪಡುತ್ತಾ ಬಾಕಿಯವುಗಳನ್ನು ಕುರಿತು ಯೋಚಿಸದೆ, ಯಾವ ವಿಧದಲ್ಲೂ ಹೆಮ್ಮೆಪಡದೆ, ಕಾರ್ಯವನ್ನು ಸಾಗಿಸುತ್ತಿದ್ದೆನು. ಆದರೆ, ನನ್ನ ಈ ವೃತ್ತಿಗೆ ನನ್ನ ಸಂಪೂರ್ಣ ಸಮಯ ಶಕ್ತಿ, ಶ್ರದ್ಧೆಗಳು ಅಗತ್ಯವೆಂದು ತೋರಿದ್ದರಿಂದ ಪಾರ್ಲಿಮೆಂಟಿನ ವರದಿಗಾರನಾಗಿ ಇನ್ನು ಮುಂದೆ ಕೆಲಸ ಮಾಡುವುದು ಅನುಚಿತವೆಂದು ಗ್ರಹಿಸತೊಡಗಿದೆ. ಕೊನೆಗೊಂದು ದಿನ ಇದನ್ನು ಕುರಿತು ಆಖೈರು ನಿರ್ಧಾರವನ್ನೇ ಮಾಡಿ ವರದಿಗಾರ ವೃತ್ತಿಯನ್ನು ಪೂರ್ತಿಯಾಗಿ ಬಿಟ್ಟುಬಿಟ್ಟೆ.

ನಮ್ಮ ಮನೆಯೊಳಗಣ ವ್ಯವಸ್ಥೆಗಳು ಏನೊಂದೂ ಬದಲಾವಣೆ ಹೊಂದಲಿಲ್ಲ. ಎಲ್ಲವೂ ಮೊದಲಿನಂತೆಯೇ ಇದ್ದುವು. ಡೋರಾ ಮೊದಲಿನಷ್ಟೇ ಪ್ರಿಯಳೂ ಚದುರೆಯೂ ಆಗಿದ್ದಳಲ್ಲದೆ, ಮೊದಲಿನಷ್ಟೇ ಹೆಡ್ಡಳೂ ಹಸುಳೆಯೂ ಆಗಿದ್ದಳು. ಅವಳ ಪ್ರಾಯ ಮುಂದುವರಿದಿದ್ದರೂ ಅವಳ ಬುದ್ಧಿ ಮುಂದುವರಿದಿರಲಿಲ್ಲ. ಎಷ್ಟೇ ಯೋಗ್ಯ ಅಡುಗೆಯವನನ್ನೂ ಎಷ್ಟೇ ಯೋಗ್ಯ ಮನೆ ಕೆಲಸದವನನ್ನೂ ಗೊತ್ತು ಮಾಡಿಕೊಟ್ಟರೂ ನಮ್ಮ ಮನೆಯಲ್ಲಿ ಸಮಯಕ್ಕೆ ಸರಿಯಾಗಿ ಊಟ ಸಿಕ್ಕುತ್ತಿರಲಿಲ್ಲ, ಬೇಕಾದ ತಿಂಡಿ ತೀರ್ಥಗಳು ದೊರಕುತ್ತಿರಲಿಲ್ಲ. ಮನೆಯೊಳಗೆ ಎಲ್ಲೆಲ್ಲೂ ಬಟ್ಟೆ, ಪಾತ್ರೆ, ಪುಸ್ತಕ, ಆಟದ ಸಾಮಾನು ಮೊದಲಾದುವು ಹರಗಣಗಳಾಗಿ ಹರಡಿ ಬಿದ್ದಿರುತ್ತಿದ್ದುವು. ಈ ವಿಧದ ಗೃಹ ಕೃತ್ಯವೇ ನನ್ನ ಅನುನಿತ್ಯದ ಅನುಭವವಾಗಿ ಹೋಯಿತು. ಇದಕ್ಕೆಲ್ಲ ಕಾರಣರು ಯಾರು ಎಂದು ಹುಡುಕಿ ಗುರುತಿಸಲೂ ಸಿಕ್ಕುತ್ತಿರಲಿಲ್ಲ. ಮತ್ತೂ ಹಾಗೆ ಹುಡುಕಿ ಗುರುತಿಸಲೂ ಸ್ವಲ್ಪ ಅಂಜುತ್ತಿದ್ದೆನು. ಅಗಸರು ಬಟ್ಟೆಗಳನ್ನು ಕ್ಲುಪ್ತಕಾಲದಲ್ಲಿ ತಂದು ಕೊಡರು; ಬಟ್ಟೆಗಳ ಲೆಕ್ಕ ಬರೆಯುವ ನಮ್ಮ ತಪ್ಪಿನಿಂದ ನಮಗೆ ಬಟ್ಟೆ ನಷ್ಟ. ಜೀನಸಿನ ಅಂಗಡಿ ಲೆಕ್ಕ ತಪ್ಪಿನಿಂದ ಹಣ ನಷ್ಟ! ಇನ್ನು ಮನೆಗೆ ಬೇಕಾಗುವ ಮಾಲು ಯಾವುವು, ಎಷ್ಟು ಎಂದು ತಿಳಿಯದೆ ತರಿಸುವ ಚಟದಿಂದ ಮಾಲು ನಷ್ಟ. ಈ ರೀತಿ ಎಲ್ಲದರಲ್ಲೂ ನಷ್ಟಪಟ್ಟುಕೊಳ್ಳುತ್ತಿದ್ದೆವು. ಮನೆಯಿಂದ ಮಾಲುಗಳು ಕದ್ದು ಹೋಗುವುದು ನಮ್ಮಲ್ಲೊಂದು ಸಂಪ್ರದಾಯವೇ ಆಗಿಹೋಗಿತ್ತು. ಅನಾಥ ಬಾಲಕನೊಬ್ಬನನ್ನು ಕಂಡು, ನನ್ನ ಬಾಲ್ಯದ ಜೀವನವನ್ನು ನೆನೆಸಿ, ನನ್ನನ್ನೇ ಅವನಲ್ಲಿ ಆವಾಹಿಸಿರುವಂತೆ ತಿಳಿದು ಕರುಣೆಗ್ರಹಿಸಿ, ಅವನನ್ನು ಮನೆ ಕೆಲಸಕ್ಕೆ ನೇಮಿಸಿಕೊಂಡೆನು. ಅವನ ಸಹಸ್ರ ನ್ಯೂನಾತಿರಿಕ್ತಗಳನ್ನು ಸಹಿಸಿ ಅವನನ್ನು ಸಾಕಿ ಸಲಹಿದೆನು. ಕೊನೆಗೊಂದು ದಿನ ಅವನು ಡೋರಾಳ ಚಿನ್ನದ ಗಡಿಯಾರವನ್ನು ಕದ್ದು ಮಾರಿ, ಬ್ರಾಂದಿ ಕುಡಿದು, ಜಟ್ಕಾ ಸವಾರಿ ಮಾಡಿ, ಮೆರೆದು ಮುಗಿಸಿದನು. ಕೊನೆಗೆ ನಿರ್ವಾಹವಿಲ್ಲದೆ, ಅವನ ಬೇಜವಾಬ್ದಾರಿಯಿಂದಲೇ ಅವನು ಪೋಲಿಸರ ವಶನಾದನು. ನಮ್ಮ ಈ ವಿಧದ ಕಷ್ಟಗಳ ಎದುರೇ ಈ ಬಾಲಕನನ್ನು ಕುರಿತು ನೆರೆಕರೆಯವರು ನಮ್ಮ ಮೇಲೆ ಅಪವಾದವನ್ನು ಆಡಿಕೊಳ್ಳುತ್ತಿದ್ದರು. ಬಾಲಕನ ತಪ್ಪಿಗಾಗಿ ಅವನನ್ನು ಹೊರ ಹಾಕಲು ನಾವು ನ್ಯಾಯವಾಗಿ ಪ್ರಯತ್ನಿಸಿದಾಗಲೆಲ್ಲಾ ಅವನು ತಡೆಯಲಾರದ ರೀತಿಯಲ್ಲಿ ಗೋಳಿಟ್ಟು, ಅತ್ತು ಬೇಡಿಕೊಳ್ಳುತ್ತಿದ್ದುದನ್ನೂ ಪೋಲಿಸರ ವಶವಾದುದನ್ನೂ ಕಂಡು, ಅನಾಥ ಬಾಲಕರ ಪಾಲನೆಯಲ್ಲಿ ನಮಗೆ ಕನಿಕರ ಸಾಲದೆಂದೂ ನಾವು ಮಹಾ ಕ್ರೂರಿಗಳೆಂದೂ ಅದೇ ನೆರೆಕರೆಯವರು ಮಾತಾಡಿಕೊಳ್ಳುತ್ತಿದ್ದರು. ಪೋಲಿಸಿನವರೂ ಸಹ ನಮ್ಮ ಮನೆಯು ದುಷ್ಟ ಚಟಗಳ ಮೂಲಸ್ಥಾನವೆಂದೂ ನಮ್ಮ ಮನೆಗೆ ಕೆಲಸಕ್ಕೆ ಬಂದವರಿಗೆಲ್ಲ ಈ ಚಟಗಳು ಅಂಟು ರೋಗವಾಗಿ ಪರಿಣಮಿಸುತ್ತಿವೆಯೆಂದೂ ಮಾತಾಡಿಕೊಳ್ಳುತ್ತಿದರು. ಈ ರೀತಿ, ನನಗೆ ಹೊರಗಿನಿಂದ ಒಂದು ವಿಧದ ಕೀರ್ತಿ ಬರುತ್ತಿದ್ದಾಗಲೇ ಒಳಗಿನಿಂದ ಒಂದು ವಿಧದ ಅಪಕೀರ್ತಿಯೂ ಬರುತ್ತಿತ್ತು. ಇದಕ್ಕಾಗಿ ನಾನು ವ್ಯಥೆಪಡುತ್ತಿದ್ದೆನು.

ಡೋರಾಳಿಗೆ ನಾನು ಬುದ್ಧಿ ಹೇಳಿದರೆ ಅವಳಿಗೆ ಅದು ಅರ್ಥವೇ ಆಗುತ್ತಿರಲಿಲ್ಲ. ನಾನು ಬುದ್ಧಿ ಮಾತುಗಳನ್ನು ಎತ್ತಿ ಪೂರೈಸುವ ಮೊದಲೇ ಅವಳು ಅಂಜಿ ಅಳುತ್ತಾ "ಇಷ್ಟೊಂದು ಶಿಸ್ತು, ಬುದ್ಧಿವಂತಿಕೆಗಳನ್ನು ನೀರೀಕ್ಷಿಸುವೆಯೆಂದು ನನ್ನನ್ನು ಮದುವೆಯಾಗುವ ಮೊದಲೇ ಏಕೆ ಹೇಳಲಿಲ್ಲ?" ಎಂದು ಕೇಳುವಳು. ಈ ಪ್ರಶ್ನೆಯೂ ಅವಳ ಬಾಯಿಂದ ಆಗಿಂದಾಗ್ಗೆ ಬರುತ್ತಲೇ ಇರುತ್ತಿತ್ತು. ಡೋರಾಳೂ ಜಿಪ್ಪನೂ ಅವರಷ್ಟಕ್ಕೆ, ಅವರದೇ ಆಗಿದ್ದ ಕ್ರಮದಿಂದ, ಬದುಕಿಕೊಂಡು ಇರಬಹುದಾದಾಗ ನನ್ನ ಪ್ರವೇಶ ನ್ಯಾಯವಾಗುವುದೇ ನಾನು ಯಾವುದೇ ವಿಧದ ನಿರ್ಬಂಧವನ್ನು ಅವರ ಮೇಲೆ ಹೊರಿಸಬಹುದೇ ಎಂಬ ಸಂಶಯಗ್ರಸ್ತ ಪ್ರಶ್ನೆಯೂ ನನ್ನಲ್ಲಿ ಆಗಾಗ ಮೂಡುತ್ತಿತ್ತು. ಇನ್ನು ಅವಳ ತರ್ಕಗಳಲ್ಲಿ, ಮಾತುಗಳಲ್ಲಿ – ಪರಿಪೂರ್ಣ ಸರಳತೆ, ಪ್ರೇಮ, ನಿರ್ವಂಚನೆಗಳಿದ್ದುದರಿಂದ ನಾನು ಸಿಟ್ಟುಗೊಳ್ಳಲೂ ಎಡೆಯಿರಲಿಲ್ಲ. ಅವಳ ಮಾತುಗಳನ್ನೆಲ್ಲ ಮರ್ಮಭೇದಕವಾಗಿ ಅಳುತ್ತಾ ಹೇಳುವಳು. ಅವಳನ್ನು ಸರಿಪಡಿಸುವ ಪ್ರಯತ್ನದಲ್ಲಿ ಒಂದು ಉಪಾಯವನ್ನು ಮಾಡಿ ನೋಡಿದೆನು. ಟ್ರೇಡಲ್ಸನನ್ನು ಪ್ರತಿ ಆದಿತ್ಯವಾರವೂ ನಮ್ಮ ಮನೆಯ ಊಟಕ್ಕೆ ಆಮಂತ್ರಿಸಿ, ಡೋರಾಳ ಸಮಕ್ಷಮದಲ್ಲಿ, ಸಂದರ್ಭಗಳನ್ನು ಕಲ್ಪಿಸಿಕೊಂಡು, ಗೃಹಕೃತ್ಯದ ವಿಷಯದಲ್ಲಿ ಟ್ರೇಡಲ್ಸನಿಗೆ ಬುದ್ಧಿ ಹೇಳಿ ನೋಡಿದೆನು. ಈ ರೀತಿಯ ನೂತನ ಮತ್ತೂ ಸೂಕ್ಷ್ಮ ಬಲೆಯಲ್ಲಿ ಡೋರಾಳನ್ನು ಹಿಡಿದು ಮೃದುವಾಗಿ ಸರಿಪಡಿಸುವುದನ್ನು ಅವಳ ಕೋಮಲ ಮನಸ್ಸು ಅರಿತು, ಕೊನೆಗೆ ಟ್ರೇಡಲ್ಸನ ಆಗಮನವೇ ತನ್ನ ಹಿಂಸೆಯ ಸಾಧನವೆಂದು ಅವಳು ಗ್ರಹಿಸತೊಡಗಿದಳು. ಹೀಗಾಗಿ ನಾನು ಇನ್ನೊಂದು ಮುಖ್ಯ ನಿರ್ಧಾರಕ್ಕೆ ಬಂದೆನು. ನಾನು ಅವಳ ಮನಸ್ಸನ್ನು ಪರಿವರ್ತನೆ ಮಾಡುವ ಹವ್ಯಾಸಕ್ಕೇ ಹೋಗದೇ ನಾನೇ ಅವಳಿಗೆ ಅನುಕೂಲವಾದ ಬದಲಾವಣೆ ಹೊಂದಿಕೊಳ್ಳಬೇಕೆಂದು ನಿಶ್ಚೈಸಿಕೊಂಡೆನು.

ಡೋರಾಳ ಮೇಲಿನ ನನ್ನ ಪ್ರೇಮ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಅವಳ ಸಕಲ ಲೋಪದೋಷಗಳೂ ನನ್ನ ಪ್ರೀತಿಯನ್ನು ಕಡಿಮೆ ಮಾಡಲಾರದಿದ್ದುವು. ಆದರೆ, ನನ್ನ ಅಂತರಂಗದಲ್ಲಿ ಡೋರಾಳಲ್ಲಿ ಕೊರತೆಯಿದೆ, ಚಿಕ್ಕದೊಂದು ಲೋಪದ ಶೂನ್ಯತೆಯಿದೆ ಎಂದು ತಿಳಿಯುತ್ತಲೇ ಇದ್ದೆನು. ಈ ಶೂನ್ಯತೆಯೇ ನನ್ನನ್ನು ಬಾಧಿಸುತ್ತಿತ್ತು. ಡೋರಾ ಸುಂದರಿ, ನನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದಾಳೆ. ತನ್ನ ಜೀವನದ ಆಧಾರವೇ ನಾನೆಂಬಂತೆ, ನನ್ನ ನೆರಳಿನಂತೆ ನನ್ನನ್ನು ಹಿಂಬಾಲಿಸುತ್ತಿದ್ದಳು. ಈ ಗುಣಗಳೆಲ್ಲ ನನಗೆ ತೃಪ್ತಿಯನ್ನೀಯುತ್ತಿದ್ದುವು. ಆದರೆ, ಸಂಸಾರ ಸುಖದಲ್ಲಿ, ಗೃಹಕೃತ್ಯದಲ್ಲಿ, ವಿವರಿಸಲು ಬಹು ಕಷ್ಟವಾದ, ತರ್ಕದಿಂದ ಸ್ಪಷ್ಟಪಡಿಸಲಾಗದ, ಒಂದು ಲೋಪ ಕರಾಳ ಛಾಯೆಯಂತೆ ಮನೆಯೊಳಗೂ ಮನಸ್ಸಿನಲ್ಲೂ ನನ್ನನ್ನು ಸದಾ ಹಿಂಬಾಲಿಸುತ್ತಿತ್ತು. ಈ ಲೋಪವೇ ಈ ಛಾಯೆಯೇ ವಾಗ್ರೂಪದಲ್ಲಿ 'ಶಿಸ್ತಿಲ್ಲದ ಮನಸ್ಸಿನ ಅಂಧ ಉದ್ವೇಗ', 'ಮನೋಬುದ್ಧಿಗಳ ಸಾಮ್ಯವಿಲ್ಲದೆ ಆದ ವಿವಾಹವು ವಿಷಮ ವಿವಾಹವು' ಎಂದು ಕಿವಿಯಲ್ಲಿ ಧ್ವನಿಗೈದು ಹಿಂಸಿಸುತ್ತಿತ್ತು. ಕೆಲವೊಮ್ಮೆ ಕನಸಿನಲ್ಲೂ ಈ ವಾಕ್ಯಗಳು ಕೆತ್ತಿಟ್ಟ ಅಕ್ಷರಗಳಿಂದ ಸ್ಪಷ್ಟವಾಗಿ ತೋರಿಬರುತ್ತಿದ್ದುವು. ದುಃಖರಸ ಸಂಗೀತವನ್ನು ಸ್ಮರಣೆಯಲ್ಲಿ ಕೇಳಿ ಅನುಭವಿಸುವಂತೆ ಈ ವಾಕ್ಯಗಳ ಮತ್ತು ನಮ್ಮ ಸಂಸಾರದ ದಿನದಿನದ ಅನುಭವಗಳ ಸಾರ ನನ್ನ ಸ್ಮರಣೆಯಲ್ಲಿ ಸದಾ ತೋರಿಬರುತ್ತಿತ್ತು. ಡೋರಾಳನ್ನು ಮದುವೆಯಾಗುವುದಕ್ಕೆ ಮುಂಚಿನ ದಿನಗಳ ನೆನಪು ನನ್ನ ತುಲನಾತ್ಮಕ ಗ್ರಹಿಕೆಗಾಗಿ ತಾನಾಗಿಯೇ ಎದುರು ಬಂದು ನಿಲ್ಲುತ್ತಿತ್ತು. ಏಗ್ನೆಸ್ಸಳ ಸಾನ್ನಿಧ್ಯದಲ್ಲಿ ನಾನು ಬೆಳೆದು ಬಂದ ಕಾಲದ ಬೆಳಕು, ಆಗಿನ ಕಾಲದ ನನ್ನ ಆನಂದ, ಇವೆಲ್ಲ ಕೇವಲ ಮಾನಸಿಕವೇ ಆದರೂ ಇಂದಿನ ದಿನಗಳ ಬೆಳಕು, ಮತ್ತು ಆನಂದಗಳಿಗಿಂತ ಹೆಚ್ಚು ಪ್ರಭೆಯುಳ್ಳದಾಗಿ ತೋರುತ್ತಿದ್ದುವು. ಈ ತೆರನಾದ ಆಲೋಚನೆಗಳು ಏಳುತ್ತಿದ್ದ ಹಾಗೆಯೇ ಹಠಾತ್ತಾಗಿ ನನ್ನ ಆತ್ಮವಿಮರ್ಶೆಯನ್ನೂ ಮಾಡುತ್ತಿದ್ದೆನು. ಏನು, ಡೋರಾಳ ಮೇಲಿನ ನನ್ನ ಪ್ರೇಮವು ಶಿಥಿಲವಾಗುತ್ತಿದೆಯೇ? ಅವಳನ್ನು ಕುರಿತು ವಂಚನೆಯ ಭಾವನೆಗಳು ಮೂಡುತ್ತಿವೆಯೇ? ಅವಳಲ್ಲಿ ಅಂದು ಇದ್ದ ಗುಣಗಳು ಯೋಗ್ಯತೆಗಳೂ ಇಂದೇನಾದರೂ ಕಡಿಮೆಯಾಗಿವೆಯೇ? ಹೀಗೆಲ್ಲಾ ವಿಮರ್ಶಾತ್ಮಕವಾಗಿ ಪ್ರಶ್ನಿಸಿಕೊಂಡು ಇಂಥ ಭಾವನೆಗಳಿಗಾಗಿಯೇ ಪಶ್ಚಾತ್ತಾಪಪಡುತ್ತಿದ್ದೆ. ನನ್ನ ಮನಸ್ಸಿನಲ್ಲೇ ಈ ಪ್ರಶ್ನೆಗಳಿಗೆಲ್ಲ ಬಲವಾದ, ಸ್ಪಷ್ಟವಾದ, ಬಹು ಅಂತರಂಗದ ಉತ್ತರವೂ ಹೊರಡುತ್ತಿತ್ತು. 'ಇಲ್ಲ, ಡೋರಾಳು ಪ್ರಿಯತಮೆಯಾಗಿಯೇ ಇರುವಳು – ಹಗುರವಾಗಿಲ್ಲ. ಅವಳ ಕೋಮಲ, ಸುಂದರ, ಸರಳತೆಯಿಂದ ನನ್ನ ಅಂತರಂಗ ಬಹಿರಂಗಗಳಲ್ಲೂ ಅವಳು ಹೃದಯೇಶ್ವರಿಯಾಗಿಯೇ ಇರುವಳು' ಎಂದು ಉತ್ತರ ಬರುತ್ತಿತ್ತು.

ಆದರೂ ನನ್ನ ಎಲ್ಲ ಅನುಭವಗಳ ಮಥಿತಾಭಿಪ್ರಾಯ ದಾಂಪತ್ಯ ಜೀವನವು ಪರಿಪೂರ್ಣವಾಗಿರುವುದು ಬಹು ಅಪೂರ್ವವೆಂದೂ ಈ ತೆರನಾದ ಕಷ್ಟಗಳು ಸರ್ವಸಾಮಾನ್ಯವಾದ ಎಲ್ಲರ ಅನುಭವವೆಂದೂ ಇದೆ. ಈ ಅಭಿಪ್ರಾಯಾನುಸಾರವಾಗಿ ಮದುವೆಯ ಮೊದಲಿನ ನನ್ನ ಕಾಲ್ಪನಿಕ ಚಿತ್ರಗಳು ಎಷ್ಟೇ ಶೋಭಾಯಮಾನವಾಗಿದ್ದರೂ ಅವು ಕಾಲ್ಪನಿಕವಾಗಿ ಮಾತ್ರ ಉಳಿಯಬೇಕಾದವೆಂದು ಕೊನೆಯದಾಗಿ ನಿರ್ಧರಿಸಿಕೊಂಡೆನು.

ಒಂದು ದಿನ ಒಂದು ಜೊತೆ ಲೋಲಾಕನ್ನು ತಂದು ಡೋರಾಳಿಗೆ ಕೊಟ್ಟೆ. ಅದರ ಜತೆಯಲ್ಲೇ ಜಿಪ್ಪನಿಗೂ ಒಂದು ಹೊಸ ಕುತ್ತಿಗೆ ಪಟ್ಟಿಯನ್ನು ತಂದು ಕೊಟ್ಟೆ. ಹಾಗೆ ಲೋಲಾಕನ್ನು ಕೊಟ್ಟು, ಅವಳ ಜತೆಯಲ್ಲಿ ಕುಳಿತು –

"ಡೊರಾ ನನ್ನನ್ನು ಕ್ಷಮಿಸಬೇಕು. ನಾನು ಹಿಂದಿನ ಕ್ರಮಗಳನ್ನೆಲ್ಲ ಬಿಟ್ಟು, ಸ್ವಲ್ಪ ಬುದ್ಧಿವಂತನಾಗಲು ಕೆಲ ಸಮಯದಿಂದ ಪ್ರಯತ್ನಿಸಿದೆ" ಎಂದಂದೆನು.

"ನನ್ನನ್ನೂ ಬುದ್ಧಿವಂತಳಾಗಿ ಮಾಡಲು ಪ್ರಯತ್ನಿಸಿದೆಯಲ್ಲವೆ?" ಎಂದು ಡೋರಾಳು ಪ್ರಶ್ನಿಸಿದಳು.

"ಸ್ವಲ್ಪ ಮಟ್ಟಿಗೆ ಹೌದು" ಅಂದೆ.

"ಅದು ಮಾತ್ರ ಅಸಾಧ್ಯ – ಆ ಸಂಗತಿ ಆ ಹೊತ್ತೇ ಹೇಳಿದ್ದೇನೆ. ನನ್ನ ಹೆಸರನ್ನೇ ಬದಲಾಯಿಸಬೇಕೇ ಹೊರತು ಬೇರೆ ಏನೂ ಮಾಡುವುದು ಬೇಡಾಂತ ಹೇಳಿಲ್ಲವೇ?" ಎಂದು ನನ್ನನ್ನು ಮುಖದಿಂದಲೂ ಪ್ರಶ್ನಿಸುವಂತೆ, ಮುದ್ದಾಗಿ ನೋಡಿದಳು.

"ಇಲ್ಲ ಇನ್ನು ಮುಂದೆ ಆ ಪ್ರಯತ್ನ ಮಾಡೋದಿಲ್ಲ" ಎಂದು ನಾನು ಭರವಸೆ ಕೊಟ್ಟೆನು.

"ಹಾಗೆ ಪ್ರಯತ್ನಿಸಿದ್ದರಿಂದ ನಿನಗೂ ಸುಖವಿಲ್ಲ, ನನಗೂ ಇಲ್ಲ. ಹಾಗಾದರೆ ಮಾಡೋದಿಲ್ಲ, ಖಂಡಿತವಷ್ಟೆ?"

"ಖಂಡಿತವಾಗಿಯೂ ಪ್ರಯತ್ನಿಸುವುದಿಲ್ಲ. ನಿನ್ನ ಹುಟ್ಟುಗುಣಗಳನ್ನು ಮೆಚ್ಚಿ ಮದುವೆಯಾಗಿ ಈಗ ಕಟ್ಟು ಗುಣಗಳನ್ನು ಅಪೇಕ್ಷಿಸುವುದು ನನ್ನ ತಪ್ಪು. ನೀನು ಸ್ವಾಭಾವಿಕವಾಗಿರುವಂತೆಯೇ ನನಗೆ ಬಹು ಪ್ರಿಯಳು. ನಾವು ಈಗ ಇರುವಂತೆಯೇ ಸಂತೋಷವಾಗಿರೋಣ" ಎಂದಂದೆ.

ಡೋರಾಳು ಎದ್ದು ನಿಂತು ತನ್ನ ನೂತನ ಲೋಲಾಕುಗಳನ್ನು ಧರಿಸಿ, ಅವನ್ನಲ್ಲಾಡಿಸಿಕೊಂಡು, ಜಿಪ್ಪನ ಕುತ್ತಿಗೆಗೆ ಹೊಸಪಟ್ಟಿಯನ್ನು ತೊಡಿಸಿ, ಸಂತೋಷದಿಂದ ನಲಿದಳು.

'ಶಿಸ್ತಿಲ್ಲದ ಮನಸ್ಸಿನ ಅಂಧ ಉದ್ವೇಗ'ದ ಜ್ಞಾಪಕದಿಂದ ನಾನೇ ಶಿಸ್ತನ್ನು ಅಭ್ಯಸಿಸಿ ಡೋರಾಳಿಗೆ ಅನುವ್ರತನಾಗಿ ನಡೆಯತೊಡಗಿದೆನು. ನನ್ನ ನಡತೆಯಿಂದಲೇ ಅವಳಿಗೆ ದಾರಿ ತೋರಿಸಿ ಕ್ರಮೇಣವಾಗಿ ಅವಳನ್ನು ಸರಿಪಡಿಸಬಹುದೆಂದು ಗ್ರಹಿಸಿಕೊಂಡೆನು. ಅದರಲ್ಲೂ ಅವಳು ಒಂದು ಮಗುವನ್ನು ಹೆತ್ತನಂತರವಾದರೂ ಬುದ್ಧಿ ಬರಬಹುದೆಂದು ಊಹಿಸಿದೆನು. ಆದರೆ ಇದೇ ಸಮಯದಲ್ಲಿ ಅವಳಿಗೆ ಸ್ವಲ್ಪ

ಅಸೌಖ್ಯವುಂಟಾಯಿತು. ಈ ಅಸೌಖ್ಯ ಆಗಿಂದಾಗ್ಗೆ ತೋರಿ ಬರತೊಡಗಿತು. ದಿನಗಳು ದಾಟಿದಂತೆ ಅಸೌಖ್ಯ ರೋಗವಾಗಿಯೇ ಕಾಣ ತೊಡಗಿ ದೈವೇಚ್ಛೆಯಲ್ಲಿ ಮುಂದೇನಿದೆಯೋ ಎಂಬ ಭಯ ತೋರತೊಡಗಿತು. ದಿನ ಹೋದಂತೆ ಡೋರಾಳು ತ್ರಾಣ ಕುಂದುತ್ತಾ ಬಂದಳು. ಅವಳ ಅಸೌಖ್ಯದ – ರೋಗದ ಕಾರಣವಾಗಿ ಅವಳು ಮೊದಲಿನಷ್ಟು ಚುರುಕಾಗಿಯೂ ಇರುತ್ತಿರಲಿಲ್ಲ. ಹರ್ಷಚಿತ್ತಳಾಗಿಯೂ ಇರುತ್ತಿರಲಿಲ್ಲ. ತನ್ನ ಅನಾರೋಗ್ಯದ ಸಂಬಂಧದ ಕಷ್ಟಗಳ ಅರಿವು ಅವಳಿಗೆ ಕ್ರಮೇಣವಾಗಿ ಸ್ಪಷ್ಟವಾಗತೊಡಗಿತು. ತನ್ನ ಅಂತರಂಗದ ಹೆದರಿಕೆಯನ್ನು ಸ್ಪಷ್ಟವಾದ ಮಾತುಗಳಿಂದ ಹೇಳಿಕೊಳ್ಳಲು ಅವಳು ಅಂಜುತ್ತಿದ್ದಳು. ಒಂದು ದಿನ ಅತ್ತೆಯೊಡನೆ ಮಾತಾಡುತ್ತಾ –

"ಅತ್ತೆ, ಜಿಪ್ಪ್ ಈಗೀಗ ಸೋಮಾರಿಯಾಗಿ ಬಿದ್ದಿರುತ್ತಾನೆ ನೋಡಿ. ನಾನು ಹುಶಾರಾದ ಮೇಲೆ ಅವನಿಗೆ ಓಡೋದಕ್ಕೆ ಅಭ್ಯಾಸ ಮಾಡಿಸುತ್ತೇನೆ" ಅಂದಳು.

"ಅದು ಜಿಪ್ಪನ ಸೋಮಾರಿತನವಲ್ಲ ಮಗಳೇ, ಅವನಿಗೆ ಪ್ರಾಯವಾಗುತ್ತಾ ಬಂದಿದೆ."

"ಏನು ಜಿಪ್ಪ್ ಮುದುಕನಾದನೇ?"

"ಹೌದು – ಆಶ್ಚರ್ಯವೇನು ಅದರಲ್ಲಿ? ಎಲ್ಲರೂ ಅನುಭವಿಸಬೇಕಾದ ಅವಸ್ಥೆ, ಕಂದಾ. ನಾನೇ ಮೊದಲಿನಂತಿಲ್ಲ" ಅಂದಳು ಅತ್ತೆ. ಈ ವರೆಗೆ ತನ್ನ ಹಾಸಿಗೆಯಲ್ಲಿ ಕುಳಿತುಕೊಂಡು ಮಾತಾಡುತ್ತಿದ್ದ ಡೋರಾಳು ಅತ್ತೆಯ ಈ ಮಾತಿಗೆ –

"ಜಿಪ್ಪನೂ ಮುದುಕನಾಗುತ್ತಾನಲ್ಲವೇ" ಎಂದು ಮಾತ್ರ ಹೇಳಿ, ದುಃಖದಿಂದ ಹಾಸಿಗೆಯಲ್ಲಿ ಮಲಗಿಬಿಟ್ಟಳು.

"ಬೇಸರಿಸಬೇಡ ಮಗಳೇ. ಜಿಪ್ಪ್ ಹೋದರೆ ನಾನು ಬೇರೊಂದು ಪುಟ್ಟ ನಾಯಿ ತಂದುಕೊಡುತ್ತೇನೆ" ಎಂದು ಹೇಳಿ ಅತ್ತೆ ಡೋರಾಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದಳು.

"ಜಿಪ್ಪ್ ಅಲ್ಲದೆ ಬೇರೊಂದು ನಾಯಿ ನನಗೆ ಬೇಡ, ಅತ್ತೆ. ಬೇರೆ ಯಾವ ನಾಯಿ ಬಂದರೆ ತಾನೆ ಏನು ಪ್ರಯೋಜನ? ನನ್ನ ಡೇವಿಡ್ಡನ ಮದುವೆಗೆ ಮೊದಲು ಅವನನ್ನು ಕಂಡು ಬೊಗಳಿದ ಜಿಪ್ಪ್ – ನಮ್ಮ ಜತೆಯಲ್ಲಿದ್ದು ನಮ್ಮ ಕಥೆಯನ್ನೆಲ್ಲ ಬಲ್ಲ ಜಿಪ್ಪ್ – ಅಂಥವನು ಹೋಗಿ ಮತ್ತೆ ಯಾರು ಬಂದರೆ ಏನು ಪ್ರಯೋಜನ ಅತ್ತೆ? ಜಿಪ್ಪ್ ಹೋದರೆ ಅವನ ಜತೆಯಲ್ಲೇ ನಮ್ಮ ಹಳೆ ಸಂತೋಷವೆಲ್ಲಾ ಹೋಗಿಬಿಡುತ್ತೆ" ಎಂದು ಹೇಳುತ್ತಾ ಜಿಪ್ಪ್ ಸಾಯುವ ದೃಶ್ಯವನ್ನೇ ತಾನು ನೋಡುತ್ತಿದ್ದಂತೆ ಡೋರಾಳು ತೋರಿದಳು.

ದಿನ ಕಳೆದಂತೆ ಅವಳ ಅಶಕ್ತಿ ಹೆಚ್ಚಿತು. ಕಡೆಗೆ ಮಹಡಿಯ ಮೇಲಕ್ಕೂ ಕೆಳಕ್ಕೂ ನಾನೇ ಅವಳನ್ನು ಎತ್ತಿಕೊಂಡು ಹೋಗಬೇಕಾಗಿ ಬಂತು. ಟ್ರೇಡಲ್ಸನು ಸಾಧಾರಣ ಪ್ರತಿ ಆದಿತ್ಯವಾರವೂ ನಮ್ಮ ಮನೆಗೆ ಬರುತ್ತಿದ್ದನು. ಅತ್ತೆಯೂ ಹೆಚ್ಚಾಗಿ ನಮ್ಮ ಮನೆಯಲ್ಲೇ ಇರುತ್ತಿದ್ದಳು. ಡೋರಾಳು ನಾಲ್ಕಾರು ವಾರಗಳಲ್ಲಿ ಹುಶಾರಾಗಬಹುದೆಂದು ಅವಳನ್ನು ನೋಡಿದ ಕೆಲವರು ಅನ್ನುತ್ತಿದ್ದರು. ಮಿ. ಡಿಕ್ಕರು ದೀಪವನ್ನು ಹಿಡಿದುಕೊಂಡು ಮಹಡಿಯ ಮೇಲೆ ಕೋಣೆ ಬಾಗಿಲಲ್ಲಿ ನಿಂತು ನಮಗೆ ದಾರಿ ತೋರಿಸುವುದೂ ನಾನು ಡೋರಾಳನ್ನು ಎತ್ತಿಕೊಂಡು ಮಹಡಿ ಹತ್ತುವುದೂ ಈ ಮಧ್ಯೆ ಜಿಪ್ಪ್ ನಮ್ಮ ಕಾಲ ಸೆರೆಯಲ್ಲೇ ಮಹಡಿಗೆ ಮುಂದಾಗಿ ಹೋಗಿ ಬಾಲ ಅಲ್ಲಾಡಿಸುತ್ತಾ ನಮ್ಮನ್ನು ಸ್ವಾಗತಿಸುತ್ತಾ ನಿಲ್ಲುವುದೂ ನಮ್ಮ ದಿನಂಪ್ರತಿಯ, ರಾತ್ರಿಯ ಅಭ್ಯಾಸವಾಗಿ ಹೋಗಿತ್ತು. ಡೋರಾಳ ರೋಗವು ಏನೆಂದು ನಾನಾ ವಿಧವಾಗಿ ಊಹಿಸಿ, ವಿಚಾರಿಸಿ ನೋಡಿದ್ದಾಯಿತು. ಕೊನೆಗೆ ತಿಳಿದವರಿಂದ ರೋಗ ಇಂಥಾದ್ದೇ ಎಂದೂ ತಿಳಿದೂ ಆಯಿತು. ರೋಗವನ್ನು ತಿಳಿದನಂತರ ಮುಂದಿನ ಪರಿಣಾಮವನ್ನು ಊಹಿಸಿ ದುಃಖಿಸಲೂ ಪ್ರಾರಂಭಿಸಿದೆವು. ದಿನ ಹೋದಂತೆ ಕೊನೆಯ ಚಿತ್ರವೇ ನಮ್ಮ ಊಹನಾಪಟದಲ್ಲಿ ಎದ್ದು ತೋರುತ್ತಿತ್ತು.

ಒಂದು ದಿನ ರಾತ್ರಿ ಅತ್ತೆ ಡೋರಾಳನ್ನು ಬಿಟ್ಟು ತನ್ನ ಮನೆಗೆ ಹೊರಡುವಾಗ 'ಸುಖವಾಗಿ ನಿದ್ರಿಸು ನವಕುಸುಮ' ಎಂದು ಹೇಳಿದ್ದನ್ನು ಕೇಳಿ ಡೋರಾ ಅತ್ತಳು. ಅವಳ ಅಳುವಿನಿಂದಲೇ ಮುಂದಿನ ಘಟನೆಗಳ ಚಿತ್ರವೇ ನನ್ನೆದುರು ತೋರತೊಡಗಿತು! ರೋಗದ ಹೆಸರೇ ನನ್ನನ್ನು ಹೆದರಿಸುತ್ತಿತ್ತು. 'ನವಕುಸುಮ'ವು ಅರಳಿ ಫಲಕೊಡುವ ಮೊದಲೇ ಮರದಲ್ಲೇ ಬಾಡಿ ಮುದುಡುವ ದೃಶ್ಯವನ್ನು ನೆನೆಸಿಕೊಂಡು ನಾನೂ ಅತ್ತೆನು.

ಅಧ್ಯಾಯ ನಲ್ವತ್ತೊಂಬತ್ತು

ನಾನೊಂದು ಗಂಭೀರ ರಹಸ್ಯದಲ್ಲಿ ಸಿಕ್ಕಿಕೊಂಡೆನು

ಒಂದು ದಿನ ಬೆಳಗ್ಗೆ ಕೇಂಟರ್ಬರಿಯಿಂದ ನನಗೊಂದು ಪತ್ರ ಬಂತು. ಪತ್ರ ಹೀಗಿತ್ತು –
ಪ್ರಿಯ ಮಹನೀಯರೇ
ನಮ್ಮ ನಿಮ್ಮೊಳಗಣ ಸ್ನೇಹ ಸಂಬಂಧಗಳ ವಿವಿಧ ಸಂದರ್ಭಗಳನ್ನು ನನ್ನ ನೆನಪಿನ ಕನ್ನಡಿಯಲ್ಲಿ ನೋಡಿದಾಗ ತೋರಿಬರುವ ಅನೇಕಾನೇಕ ನೆನವರಿಕೆಗಳು, ಈವರೆಗೆ ಮಾತ್ರವಲ್ಲದೆ, ಇನ್ನು ಮುಂದೂ ಸಹ, ನನ್ನ ಅಲ್ಪ ವಾಕ್ಚಾತುರ್ಯದಲ್ಲಿ ವಿವರಿಸಲಸಾಧ್ಯವಾದ ಅನೇಕಾನೇಕ ಆನಂದಯುತ ಭಾವನೆಗಳಿಗೆ ಪ್ರಚೋದಕವಾಗಿರುವುವು. ಹೀಗಿದ್ದರೂ ಇತ್ತೀಚೆಗೆ ಕೆಲಕಾಲದಿಂದ ನಾನು ಸ್ವಾತಂತ್ರ್ಯರಹಿತನಾಗಿ – ಪಾರತಂತ್ರನೇ ಆಗಿ – ಇರುವುದರಿಂದ ನನಗೆ ದೊರಕುವ ಕಿಂಚಿತ್ ಸಮಯಾವಕಾಶದಲ್ಲಾದರೂ ಅಂತಹ ನೆನವರಿಕೆಗಳನ್ನು ಗ್ರಹಿಸಿ ಆನಂದಿಸುವ ಯೋಗವನ್ನೇ ಕಳೆದುಕೊಂಡಿದ್ದೇನೆ. ಸ್ನೇಹದ ಬಳಸು ಕಡಿಮೆಯಾದ ಹಾಗೆಲ್ಲ ಅಳುಕು ಹೆಚ್ಚಾಗುವುದರಿಂದಲೂ ನೀವು ಸಾಹಿತ್ಯ ರಂಗದಲ್ಲಿ ಕೀರ್ತಿಯ ಔನ್ನತ್ಯವನ್ನು ಪಡೆದಿರುವುದರಿಂದ ನನ್ನಲ್ಲುಂಟಾಗುವ ಸ್ವಾಭಾವಿಕ ಅಂಜಿಕೆಯಿಂದಲು ನನಗೆ ಪರಮ ಪ್ರಿಯವಾದ ಮಿ. ಡೇವಿಡ್ ಕಾಪರ್ಫೀಲ್ಡ್ ಎಂಬ ನಿಮ್ಮ ಅಭಿದಾನದಿಂದ ನಿಮ್ಮನ್ನು ಸೀದಾ ಸಂಬೋಧಿಸಲು ನನ್ನ ಮನಸ್ಸು ಹೆದರುತ್ತಿದೆ. ನನ್ನ ಯೌವನ ಕಾಲದಲ್ಲಿ ಸಹೋದ್ಯೋಗಿಯಾಗಿದ್ದ, ಯಾರ ಹೆಸರನ್ನು ಇಲ್ಲಿ ಪ್ರಸ್ತಾಪಿಸಿದ ಭಾಗ್ಯವು ನನ್ನದಿದೆಯೋ ಆ ಹೆಸರನ್ನು, ನಮ್ಮ ಕುಟುಂಬದ ಘನಚರಿತ್ರೆಯ ಒಂದು ಪ್ರಾಮುಖ್ಯ ಅಂಶವಾಗಿ ಕಾದಿರಿಸುವ ಜವಾಬ್ದಾರಿಯನ್ನು ನನ್ನ ಧರ್ಮಪತ್ನಿಯು ನಿರ್ವಹಿಸುವಳೆಂದರೆ ಇಲ್ಲಿ ಅಪ್ರಸಂಗವಾಗಲಾರದು.

ಮೊದಲೇ ಕೂಡಿಕೊಂಡು ಬಂದಿದ್ದ ನನ್ನ ದುಃಖಗಳ ಜತೆಗೆ ಹೊಸ ಹೊಸ ದುರ್ಘಟನೆಗಳು ಒದಗಿಸಿದ ದುಃಖಗಳೂ ಸೇರಿ ಇಂದು ಆಗಿರುವ ದುಃಖ ಸಾಗರದಲ್ಲಿ ನಾನು ಮುಳುಗಿ, ಬದುಕಿಗಾಗಿ ಈಜಲು ಪ್ರಯತ್ನಿಸುವ ನನ್ನ ಕೈಗಳಿಂದ ತಮ್ಮ ಪ್ರಶಸ್ತಿಗಳನ್ನು ಬರೆದು ಕೊಂಡಾಡುವುದು ಕೇವಲ ಹಾಸ್ಯಾಸ್ಪದ. ಇಂಥ ಶ್ಲಾಘನೀಯ ಕಾರ್ಯವನ್ನು ನನ್ನ ಕರಗಳಿಗಿಂತ ಹೆಚ್ಚು ಶಕ್ತಿ ಮತ್ತೂ ಪರಿಶುದ್ಧತೆಯುಳ್ಳ ಕರಗಳಿಗೆ ಒಪ್ಪಿಸುವೆನು.

ತಮ್ಮ ಅನೇಕಾನೇಕ ವಿಶೇಷಪಟ್ಟ ಕಾರ್ಯಗಳ ನಡುವೆ ಈ ಪತ್ರವನ್ನು ಪೂರ್ತಿ ಓದಲು ತಮಗೆ ಸಮಯವಿರದಿದ್ದರೆ, ಈ ಪತ್ರದ ಮುಖ್ಯೋದ್ದೇಶವನ್ನಾದರೂ ಚುಟುಕಿನಿಂದ ತಮಗೆ ತಿಳಿಸುವೆನು. ಹಣದ ಬಗ್ಗೆ ಈ ಪತ್ರವನ್ನು ಬರೆಯುತ್ತಿರುವುದಲ್ಲವೆಂಬುದನ್ನು ನಾನು ಪ್ರಪ್ರಥಮವಾಗಿ ತಮಗೆ ತಿಳಿಸಬೇಕಾಗಿದೆ. ಹಾಗಾದರೆ, ನನ್ನ ಉದ್ದೇಶ ಇನ್ನೇನಿರಬಹುದೆಂದು ತಾವು ಪ್ರಶ್ನಿಸುವುದು ಸ್ವಾಭಾವಿಕವು.

ದುಷ್ಟರನ್ನು ಧ್ವಂಸ ಮಾಡಿ, ಕ್ರೂರಿಗಳನ್ನು ಉರಿಸಿ ನಾಶಪಡಿಸಬಲ್ಲ ಸಾಮರ್ಥ್ಯ ನನಗಿದೆಯಾದರೂ ಆ ಸಾಮರ್ಥ್ಯವನ್ನು ಕುರಿತು ಪ್ರಸ್ತುತದಲ್ಲಿ ಪ್ರಸ್ತಾಪಿಸದೆ – ಸದ್ಯಕ್ಕೆ ನನ್ನ ಆ ಶಕ್ತಿ ಸಾಮರ್ಥ್ಯಗಳನ್ನು ತಡೆ ಹಿಡಿದು – ನನಗೆ ಒದಗಿಸಿರುವ ಕಷ್ಟಗಳನ್ನು ತಮಗೆ ತಿಳಿಸಲಿಚ್ಛಿಸುವೆನು. ನನ್ನ ಸುಂದರ ನಿರೀಕ್ಷಣೆಗಳು ನಾಶವಾಗಿವೆ. ಶಾಂತಿಯು ಕ್ರಾಂತಿಯಾಗಿ ಪರಿಣಮಿಸಿದೆ. ನನ್ನ ಹೃದಯವೇ ಸ್ಥಳ ತಪ್ಪಿ ನಿಂತು ಬಡಿದಾಡ ತೊಡಗಿದೆ. ಇವೆಲ್ಲ ಕಷ್ಟಗಳ ಪರಿಣಾಮವಾಗಿ ನಾನು ಸಮಾಜದ ಒಬ್ಬ ಗಣ್ಯ ವ್ಯಕ್ತಿಯಾಗಿ, ಧೈರ್ಯದಿಂದ ನೆಟ್ಟಗೆ ನಡೆದು, ನಾಲ್ಕು ಜನರೆದುರು ಬರಲಾರೆ. ನನ್ನ ಸರ್ವನಾಶ ನಡೆದಿದೆ. ನನ್ನ ಹುರುಪಿನ ಹೂ ಬಾಡಿ ಮುದುಡಿದೆ. ಆಶಾಪಾತ್ರದಲ್ಲಿ ವಿಷ ತುಂಬಿದೆ. ಸತ್ಯಸಿಂಹನು ಕುತಂತ್ರಿಗಳ ಜಾಲದಲ್ಲಿ ಸಿಕ್ಕಿಬಿದ್ದು ಕುರಿಯಾಗಿ ಮೃತಿಗೈವನು. ಏನೇ ಬರುವುದಿದ್ದರೂ ಅದಷ್ಟು ಬೇಗನೆ ಬರಲಿ! ನನ್ನ ಅಪ್ರಸಂಗಗಳಿಂದ ತಮ್ಮ ಸಮಯವನ್ನು ಹಾಳು ಮಾಡಲಾರೆ. ಆದರೂ ಸ್ವಲ್ಪ, ದಯಮಾಡಿ ಕೇಳಿ.

ನನ್ನ ಮಾನಸಿಕ ಪರಿಸ್ಥಿತಿ ಬಹುವಾಗಿ ಕೆಡತೊಡಗಿದೆ. ಸ್ತ್ರೀಯಾಗಿ ಮನವೊಲಿಸಿ ಪತ್ನಿಯಾಗಿ ಪ್ರೀತಿಸಿ, ಮಾತೆಯಾಗಿ ಸಂಸಾರವನ್ನು ಸಾಕಿ ಸಲಹಬಲ್ಲ – ತ್ರಿಶಕ್ತಿಯಂತೆ, ನನ್ನ ಪತ್ನಿಯ ಇಂಗಿತಕ್ಕೂ ಎಟುಕದ, ಶಕ್ತಿಗೆ ಮೀರಿದ ನನ್ನ ಭಾರವನ್ನು ತಮ್ಮೊಡನೆ ಹೇಳಿಕೊಂಡು ಹಗುರ ಮಾಡಿಕೊಳ್ಳಲು ಬಯಸುತ್ತೇನೆ. ಅದಕ್ಕಾಗಿ ತಮ್ಮ ಭೇಟಿಯನ್ನು ಯಾಚಿಸುತ್ತೇನೆ. ಹಿಂದೆ ನಾನು ನಾನಾ ವಿಧದ ಸುಖ ಸಂತೋಷಗಳನ್ನು ಅನುಭವಿಸಿದ ಲಂಡನ್ ನಗರದ ಮಹಾ ಸ್ಥಳಗಳಲ್ಲೊಂದಾದ ಕಿಂಗ್ಸ್ ಬೆಂಚ್ ಬಂಧೀಖಾನೆಯ ವಠಾರದಲ್ಲಿ (ದೇವರ ದಯವೊಂದಿದ್ದರೆ) ನಲವತ್ತೆಂಟು ಘಂಟೆ ವಿಶ್ರಮಿಸಲು ನಿಶ್ಚೈಸಿರುತ್ತೇನೆ. ಆ ಜೈಲಿನ ಪೂಜ್ಯ ನೆನವರಿಕೆಗಳನ್ನು ತಮ್ಮಲ್ಲಿ ವಿವರಿಸಿಕೊಳ್ಳುವುದು ಅಗತ್ಯವಿಲ್ಲವಷ್ಟೆ! ಆ ಕಟ್ಟಡದ ದಕ್ಷಿಣದ ಪಾಗಾರ ಗೋಡೆಯ ಹೊರಬದಿ ತಾವು ದಯಮಾಡಿ ನಾಡಿದ್ದು ಸಂಜೆ ಏಳು ಘಂಟೆಗೆ, ತಪ್ಪದೆ, ಸಿಕ್ಕಬೇಕೆಂದು ತಮ್ಮನ್ನು ಕೇಳಿಕೊಳ್ಳುವುದೇ ಈ ಪತ್ರದ ಉದ್ದೇಶವು. ಅನುಕೂಲವಿದ್ದರೆ ಮಿ. ಥಾಮಸ್ ಟ್ರೇಡಲ್ಸ್ ವಕೀಲ ಸಾಹೇಬರನ್ನೂ ಅವರು ಬರುವ ಅನುಗ್ರಹ ಮಾಡಬಹುದಾದರೆ, ತಮ್ಮ ಜತೆಯಲ್ಲಿ ಕರೆದುಕೊಂಡು ಬನ್ನಿ. ಹೀಗೆ ಗೊತ್ತುಮಾಡಿದ ದಿನದಲ್ಲಿ, ಆ ಸ್ಥಳದಲ್ಲಿ, ನಿಮಗೆ ಸಿಕ್ಕುವ,
ಒಂದು ಕಾಲದಲ್ಲಿ ನ್ಯಾಯ–ಧರ್ಮ–ಉನ್ನತಿ–ಉತ್ಸಾಹಗಳ ಭವ್ಯ ಗೋಪುರವಾಗಿ ಮೆರೆದಿದ್ದ,
ಗೋಪುರದ,
ಕುಸಿದ,

ಅವಶೇಷ,
ವಿಲ್ಕಿನ್ಸ್ ಮೈಕಾಬರ್
ಪುನಃ ಸೇರಿಸಿದ್ದು – ಈ ಎಲ್ಲಾ ವಿಷಯವು ನನ್ನ ಪತ್ನಿಯ ತಿಳಿವಳಿಕೆಗೆ ಬಂದಿರುವುದಿಲ್ಲವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು.
ವಿ.ಮೈ.

ಈ ಪತ್ರವನ್ನು ಓದಿದಷ್ಟು ಆಶ್ಚರ್ಯವಾಯಿತು. ಅದನ್ನು ಓದಿ ಮುಗಿಯುವಷ್ಟರಲ್ಲೇ ಟ್ರೇಡಲ್ಸನು ಬಂದನು. ನನ್ನ ಕೈಯ್ಯಲ್ಲಿದ್ದ ಪತ್ರವನ್ನು ಕಂಡು, ತನ್ನ ಕೈಯ್ಯಲ್ಲೂ ಇದ್ದ ಒಂದು ಪತ್ರವನ್ನು ನನಗೆ ಕೊಟ್ಟನು. ನನಗೆ ಬಂದಿದ್ದ ಪತವನ್ನು ಓದಲೆಂದು ಅವನಿಗೆ ಕೊಟ್ಟು, ಅವನ ಪತ್ರವನ್ನು ನಾನು ಓದ ತೊಡಗಿದೆನು. ಪತ್ರವು ಟ್ರೇಡಲ್ಸನಿಗೆ ಮಿಸೆಸ್ ಎಮ್ಮಾ ಮೈಕಾಬರರು ಬರೆದುದಾಗಿತ್ತು. ಅದು ಹೀಗಿತ್ತು:

"ನನ್ನ ಅತಿ ದುಃಖದ ಸಂಗತಿಯನ್ನು ನನ್ನ ಆಪತ್ಕಾಲದಲ್ಲಿ ರಕ್ಷಕನಾಗಿ ಬಂದಿದ್ದ ಮಿ. ಥಾಮಸ್ ಟ್ರೇಡಲ್ಸರಿಗಲ್ಲದೆ ಮತ್ತೆ ಯಾರಿಗೆ ಬರೆದು ತಿಳಿಸಲಿ? ಅವರು ಬುದ್ಧಿವಂತರೂ ಕರುಣಾಳುಗಳೂ ಆಗಿರುವುದರಿಂದ ಅವರ ಸಹಾಯವನ್ನು ಯಾಚಿಸಿ ಇದನ್ನು ಬರೆಯುತ್ತಿದ್ದೇನೆ. ನಮ್ಮ ಸಂಸಾರದಲ್ಲಿ ಬೆರೆತು, ಮೈಮರೆತು ತಾವೇ ಸಂಸಾರವೆಲ್ಲ ಎಂಬಂತಿರುತ್ತಿದ್ದ ಮಿ. ಮೈಕಾಬರರು ಇಂದು ನಮ್ಮೆಲ್ಲರಿಂದ ಪ್ರತ್ಯೇಕವಾಗಿದ್ದಾರೆ. ನಮ್ಮನ್ನು ಪ್ರೀತಿಸದೇ ತನ್ನಲ್ಲಿ ತಾನೇ ಜಿಗುಪ್ಸೆಗೊಳ್ಳುತ್ತಾ ಮಕ್ಕಳು, ಹೆಂಗುಸರೆನ್ನದೇನೇ ಚೂರಿ ತೋರಿಸಿ ಹೆದರಿಸುತ್ತಾರೆ. ಇವರು ನಾಡಿದ್ದು ಲಂಡನ್ನಿಗೆ ಹೋಗುವುದಾಗಿ ಇವರ ಟ್ರಂಕಿಗೆ ಅಂಟಿಸಿರುವ ಚೀಟಿಯಿಂದ ತಿಳಿದಿದ್ದೇನೆ. ದಯಮಾಡಿ, ಅವರ ದುಃಖದ ಮತ್ತೂ ಈಗಿನ ರೀತಿಯ ಬದಲಾವಣೆಯ ಕಾರಣವನ್ನು ಕಂಡು ಹಿಡಿದು, ಅವರನ್ನೂ ನಮ್ಮ ಸಂಸಾರವನ್ನೂ ರಕ್ಷಿಸಬೇಕು."

ಈ ಪತ್ರವನ್ನೋದಿ ನಾವು ತುಂಬಾ ಆಲೋಚನೆಗೀಡಾದೆವು. ಈ ಪತ್ರಗಳನ್ನು ನೋಡುವಾಗ ಅವರ ಸಂಸಾರದಲ್ಲಿ ಹೊಸತೊಂದು ಗುಪ್ತ ದುಃಖಪ್ರದೇಶವಾಗಿರಬೇಕೆಂದು ನಮಗೆ ಸ್ಪಷ್ಟವಾಗಿ ತೋರಿತು. ಆದ್ದರಿಂದ ನಾವು ಮಿ. ಮೈಕಾಬರರನ್ನು ಭೇಟಿಮಾಡಿ, ಮಾತಾಡಿ, ನಮ್ಮ ಮನೆಗೆ ಕರೆ ತರುವುದೇ ಒಳ್ಳೆಯದೆಂದು ನಿಶ್ಚೈಸಿದೆವು.

ನಾವು ನಿಶ್ಚೈಸಿಕೊಂಡಿದ್ದ ಪ್ರಕಾರ, ನಿಶ್ಚೈಸಿದ್ದ ದಿನ, ಮತ್ತೂ ಸ್ಥಳದಲ್ಲಿ ಮಿ. ಮೈಕಾಬರರನ್ನು ಭೇಟಿ ಮಾಡಿದೆವು. ನಮ್ಮನ್ನು ಕಂಡು ಅವರು ಸಂತೋಷಪಟ್ಟರು. ಆದರೂ ಅವರಲ್ಲಿ ಪೂರ್ವದ ಸ್ನೇಹ ಸಲಿಗೆಗಳ ಆಡಂಬರವಿರಲಿಲ್ಲ – ಬಹು ಬಗ್ಗಿದವರಂತೆ, ಹೆದರಿಕೊಂಡವರಂತೆ, ಬಹು ಮೌನವಾಗಿರಲು ಪ್ರಯತ್ನಿಸುತ್ತಿದ್ದರು. ಅವರು ಆ ರೀತಿ ಇರಬಾರದೆಂದು ನಾವು ಕೇಳಿಕೊಂಡು, ನಾವೇ ಸಲಿಗೆಯಿಂದ ಮಾತಾಡುತ್ತಾ ಅವರನ್ನು ನಮ್ಮ ಮಟ್ಟದ ಪೂರ್ವದ – ಸ್ನೇಹ, ಸಲಿಗೆಗೆ ತಂದೆವು. ಆ ವರೆಗೆ ನಮಗೆ ಹಸ್ತಲಾಘವವನ್ನೀಯಲು ಹಿಂಜರಿಯುತ್ತಿದ್ದ ಮಿ. ಮೈಕಾಬರರು ನಮಗೆ ಹಸ್ತಲಾಘವವನ್ನಿತ್ತರು. ಅನಂತರ ನಮ್ಮನ್ನು ಕುರಿತು –
"ನಿಮ್ಮ ಆದರವು ನನಗೆ ಕಣ್ಣೀರು ಬರುವಂತೆ ಮಾಡುತ್ತಿದೆ. ಈಗ ಕುಸಿದು ಬಿದ್ದಿರುವುದಾದರೂ ಹಿಂದೊಂದು ಕಾಲದಲ್ಲಿ ಭವ್ಯವಾಗಿ ಶೋಭಿಸುತ್ತಿದ್ದ ದೇವಮಂದಿರದಂತೆ. ಇಂದು ನಾನಿರುವ ಪರಿಸ್ಥಿತಿ ಎಂಥಾದ್ದೇ ಆಗಿದ್ದರೂ ಹಿಂದೊಮ್ಮೆ ತಮ್ಮೆಲ್ಲರಂತೆ ಯೋಗ್ಯನೂ ಧರ್ಮಪರಾಯಣನೂ ನಾನು ಆಗಿದ್ದೆ. ನಿಮ್ಮ ಇಂದಿನ ನನ್ನ ಮೇಲಿನ ಗೌರವ, ಆದರವೆಲ್ಲ ನನ್ನ ಹಿಂದಿನ ಯೋಗ್ಯತೆಗಳ ಕಾರಣವಾಗಿ ಎಂಬುದನ್ನು ನಾನು ಬಲ್ಲೆನು" ಎಂದು ಹೇಳಿದರು. ಹೀಗೆ ಮಾತಾಡುತ್ತಾ ನಾವು ಅಲ್ಲೇ ಸ್ವಲ್ಪ ತಿರುಗಾಡಿದೆವು. ಅನಂತರ ಸಾಂಪ್ರದಾಯಿಕವಾದ ಕುಶಲ ಪ್ರಶ್ನೆಗಳನ್ನು ವಿಶೇಷವಾಗಿ ಕೇಳದೆ ನಾವು ಮೂವರೂ ನಮ್ಮ ಮನೆಗೆ ಬಂದೆವು. ನಮ್ಮ ಮನೆಯಲ್ಲಿ ಹೆಚ್ಚಿನ ವಿಷಯಗಳನ್ನು ಮಾತಾಡಬಹುದೆಂದು ಮಿ.ಮೈಕಾಬರರೇ ಹೇಳಿದ್ದರು.

ಬರುತ್ತಾ ದಾರಿಯಲ್ಲೊಮ್ಮೆ ಉರೆಯ ಹೇಗಿದ್ದಾನೆಂದು ಮಿ. ಮೈಕಾಬರರನ್ನು ವಿಚಾರಿಸಿದೆ. ಉರೆಯನ ಹೆಸರು ಕೇಳಿದ ಕೂಡಲೇ ಅವರು ಉದ್ವಿಗ್ನರಾದರು. ಆದರೂ ಉತ್ತರ ಕೊಟ್ಟರು –
"ನಿಮ್ಮ ಸ್ನೇಹಿತ ಉರೆಯ ಹೇಗಿದ್ದಾನೆಂದು ಕೇಳಿದರೆ – ಆ ಸ್ನೇಹಿತನನ್ನು ಕುರಿತು ವಿಷಾದಪಡತಕ್ಕದ್ದಿದೆ, ಎಂದನ್ನುವೆನು. ಇನ್ನು, ನನ್ನ ಯಜಮಾನ ಉರೆಯನು ಹೇಗಿದ್ದಾನೆಂದು ವಿಚಾರಿಸಿದ್ದಾದರೆ, ಅವನು ದೇಹದಲ್ಲಿ ಹ್ರಷ್ಟಪುಷ್ಟನಾಗಿದ್ದು, ಮುಖದಲ್ಲಿ ನರಿಯಂತೆ ತೋರುತ್ತಾ ಮನಸ್ಸು ಕೃತಿಗಳಲ್ಲಿ ರಾಕ್ಷಸನಾಗಿರುವನೆಂದು ಮಾತ್ರ ಹೇಳಿ, ಅವನ ವಿಷಯದಿಂದ ಬೇರೆ ವಿಷಯಕ್ಕೆ ದಾಟೋಣವೆಂದನ್ನುವೆನು" ಅಂದರು.

ನಮ್ಮ ಮನೆಯಲ್ಲಿ ಮಾತಾಡಿದರೆ ಡೋರಾಳಿಗೆ ತೊಂದರೆಯಾಗಬಹುದೆಂದು ತಿಳಿದು ನಾವು ಅತ್ತೆ ಮನೆಗೆ ಹೋದೆವು. ಅಲ್ಲಿ ಅತ್ತೆಯ ಪರಿಚಯ ಮಾಡಿಕೊಟ್ಟೆ. ಅನಂತರ ಮಿ. ಡಿಕ್ಕರ ಪರಿಚಯ ಮಾಡಿಕೊಟ್ಟೆ. ಅತ್ತೆ ಬಹು ಗಂಭೀರವಾಗಿ ಅವರನ್ನು ಸ್ವಾಗತಿಸಿದಳು. ಮಿ. ಡಿಕ್ಕರು ಮಿ.ಮೈಕಾಬರರನ್ನು ನೋಡಿದ್ದು ಅಂದೇ ಮೊದಲು, ದೀನ ದುಃಖಿತರನ್ನು ಕಂಡರೆ ಮರುಕಗೊಳ್ಳುತ್ತಿದ್ದ ಮಿ. ಡಿಕ್ಕರು ಅವರನ್ನು ಕಂಡೊಡನೆಯೇ ಅವರು ದುಃಖಿತರೆಂದು ನಿಶ್ಚಯ ಮಾಡಿಕೊಂಡರು. ಅಪರಿಚಿತ ಗೃಹಸ್ಥರೊಬ್ಬರು ತನ್ನ ಕುರಿತು ಹೀಗೆ ತೋರಿಸುತ್ತಿದ್ದ ಆದರ, ಅನುಕಂಪವನ್ನು ತಿಳಿದು ಮಿ. ಮೈಕಾಬರರು ಬಹಳ ಸಂತೋಷಪಟ್ಟರು. ಮಿ. ಡಿಕ್ಕರು ಅವರನ್ನು ಎಡೆಬಿಡದೆ ನೋಡುತ್ತಾ

ಅವರೇನಾದರೂ ವಿಶೇಷ ಶೈಲಿನಿಂದಲೋ ದುಃಖದಿಂದಲೋ ಮಾತಾಡಿದಾಗ ಆ ಕೂಡಲೇ ಅವರ ಕೈಯ್ಯನ್ನು ಹಿಡಿದು ಕುಲುಕಿ ತನ್ನ ಮೆಚ್ಚುಗೆಯನ್ನು ತೋರಿಸುತ್ತಿದ್ದರು.

ಮಿ. ಮೈಕಾಬರರಂತೂ ಇಂಥ ಒಬ್ಬ ಸನ್ಮಿತ್ರರು ತನಗೆ ದೊರಕಿದ್ದನ್ನು ಹೇಗೆ ಹೇಳಿಕೊಂಡು ಸಂತೋಷಿಸುವುದೆಂದೇ –
"ಈ ಗೃಹಸ್ಥರಂಥ ಸನ್ಮಿತ್ರರನ್ನು ನಾನೆಂದೂ ನೋಡಿರುವುದಿಲ್ಲ. ಅವರ ಪ್ರೀತಿ ಆದರಗಳಿಗಾಗಿ ನಾನು ಅವರಿಗೆ ತುಂಬಾ ಆಭಾರಿಯಾಗಿರುವೆನು" ಎಂದು ಹೇಳಿಕೊಂಡರು.
"ಮಿ. ಡಿಕ್ಕರು ಸಾಧಾರಣದೊಬ್ಬ ಗೃಹಸ್ಥರಲ್ಲ – ಅವರು ಪರಮ ಯೋಗ್ಯರು" ಅಂದಳು ಅತ್ತೆ.
"ಆ ವಿಷಯವನ್ನು ನಾನು ಪ್ರಾರಂಭದಿಂದಲೇ ಕಂಡುಕೊಂಡಿದ್ದೇನೆ – ಅವರ ಸದ್ಗುಣ, ಸದ್ವರ್ತನೆಗಳಿಗೆ ತಕ್ಕದಾಗಿ ನಾನು ನಡೆದುಕೊಳ್ಳಬಲ್ಲೆನೇ ಎಂಬುದು ನನಗೆ ತೋರುವ ಕಷ್ಟ" ಎಂದು ಮಿ. ಮೈಕಾಬರರೆಂದರು.

ಈ ಮಾತನ್ನು ಕೇಳಿ ಮಿ. ಡಿಕ್ಕರು ಮಿ. ಮೈಕಾಬರರ ಕೈ ಹಿಡಿದು ಕುಲುಕುತ್ತಾ ಆ ವಿಧಾನದಿಂದ ಅವರನ್ನು ಉತ್ತಮ ಮಾನಸಿಕ ಸ್ಥಿತಿಗೆ ತರಬಹುದೆಂದು ನಿಶ್ಚೈಸಿಕೊಂಡು,
"ಈಗ ಹೇಗಿದ್ದೀರಿ, ಸರ್?" ಎಂದು ಕೇಳಿದರು.
"ಯಾವುದು ಬಂದರೂ ಎದುರಿಸುವಷ್ಟು, ಏನು ಬಂದರೂ ಸಹಿಸುವಷ್ಟು, ಧೈರ್ಯದ ಸ್ಥಿತಿಗೆ ಈಗ ತಲುಪಿರುವೆನು" ಎಂದು ಅವರು ಸಂತೋಷಿಸುತ್ತಾ ಉತ್ತರವಿತ್ತರು.
"ನೀವು ಹರ್ಷಚಿತ್ತರಾಗಬೇಕು – ಅದಕ್ಕಾಗಿ ಪ್ರಯತ್ನಿಸಿರಿ. ಈ ಸ್ಥಳವೇ ನಿಮ್ಮದು, ಇಲ್ಲಿನ ಜನರೆಲ್ಲ ನಿಮ್ಮವರು ಎಂದು ಮಾಡಿಕೊಂಡು ಶಾಂತರಾಗಿರಿ, ಸರ್" ಎಂದನ್ನುತ್ತಾ ಪುನಃ ಮಿ.ಮೈಕಾಬರರ ಹಸ್ತವನ್ನು ಮಿ.ಡಿಕ್ಕರು ಕುಲುಕಿದರು.

ಇದನ್ನೆಲ್ಲ ಕಂಡು, ಅನುಭವಿಸಿ, ಮಿ. ಮೈಕಾಬರರಿಗಾದ ಆನಂದ ಅಷ್ಟಿಷ್ಟಲ್ಲ. ಅವರು ಒಂದೆಡೆ ಮಹತ್ತಾದ ಆನಂದ, ಇನ್ನೊಂದೆಡೆ ಹಿಂಬಾಲಿಸಿ ಬರುತ್ತಿದ್ದ ದುಃಖ, ಇವುಗಳನ್ನೆಲ್ಲ ತಿಳಿಯುತ್ತಾ ಅವರ ಸ್ವಾಭಾವಿಕವಾದ ಆವೇಶದಿಂದಲೇ ಅಂದರು –
"ಚಿತ್ರ ವಿಚಿತ್ರಗಳನ್ನೊಳಗೊಂಡ ಮನುಷ್ಯ ಜೀವನವೆಂಬುದು ಕೆಲವೊಮ್ಮೆ ಮರುಭೂಮಿಯಾಗಿಯೇ ಕಂಡು ಬರಬಹುದಾದರೂ ಆ ಮರುಭೂಮಿಯಲ್ಲೇ ಸುಂದರ, ಶಾಂತ, ತಂಪನ್ನೀಯುವ ಸ್ಥಳಗಿರುವುದೂ ಇದೆಯಷ್ಟೆ. ಅಂಥ ಸಂದರ್ಭ ಸನ್ನಿವೇಶವನ್ನಿಂದು ನೋಡುತ್ತಿದ್ದೇನೆ. ಅರ್ಥಾತ್ ನನ್ನ ಮಾನಸಿಕ ಮರುಭೂಮಿಯಲ್ಲಿ ಮಿ. ಡಿಕ್ಕರಂಥ ಸಂತೋಷಪ್ರದ ಪ್ರದೇಶವನ್ನು ನಾನೆಂದೂ ನೋಡಿರುವುದಿಲ್ಲ." ಹೀಗನ್ನುವಾಗ ಅವರು ಆನಂದಬಾಷ್ಪವನ್ನೇ ಸುರಿಸುತ್ತಿದ್ದರು.

ಮಿ. ಮೈಕಾಬರರು ಪಂಚ್ ಪಾನೀಯವನ್ನು ತಯಾರಿಸುವುದರಲ್ಲಿ ಬಹು ನಿಪುಣರಾಗಿದ್ದುದರಿಂದಲೂ ಆ ಕೆಲಸವನ್ನು ಅವರಿಗೆ ವಹಿಸಿದರೆ ಅವರ ಮನಸ್ಸು ಶಾಂತಗೊಳ್ಳುವುದೆಂದೂ ನಮಗೆ ಗೊತ್ತಿದ್ದುದರಿಂದಲೂ ಪಂಚಿಗೆ ಬೇಕಾದ ಸಾಹಿತ್ಯಗಳನ್ನೆಲ್ಲ ಅವರೆದುರು ತಂದಿಟ್ಟು, ಪಂಚನ್ನು ತಯಾರಿಸಬೇಕೆಂದು ನಾವು ಅವರನ್ನು ಕೇಳಿಕೊಂಡೆವು.

ಇಷ್ಟರಲ್ಲೇ ಅತ್ತೆಯೂ ಸಹ ಅವರನ್ನು ಸಮಾಧಾನಗೊಳಿಸಲು–
"ನೀವು ನಮ್ಮ ಅಳಿಯನ ಬಹು ಹಳೇ ಸ್ನೇಹಿತರೆಂದು ಕೇಳಿದ್ದೇನೆ. ನನಗೆ ನಿಮ್ಮ ಪರಿಚಯವು ಈ ಮೊದಲು ಆಗದಿದ್ದುದಕ್ಕೆ ವಿಷಾದಪಡುತ್ತೇನೆ" ಅಂದಳು.

"ಸರಿ, ತಾಯೀ – ನಾನೂ ತಮ್ಮ ವಿಷಯ ಕೇಳಿದ್ದೇನೆ. ತಮ್ಮಂಥವರ ಪರಿಚಯವನ್ನು ಬಹುಶ್ರದ್ಧೆಯಿಂದ ಬಯಸಿದ್ದೇನೆ. ಆದರೆ, ಇಂದು ತಮ್ಮ ಪರಿಚಯವಾಗುವ ಸಂದರ್ಭದಲ್ಲಿ ಮಾತ್ರ ನಾನು ಆ ಮೊದಲಿನವನಾಗಿಲ್ಲ. ನಾನು ಈಗ ತೋರುವಷ್ಟರ ನತದೃಷ್ಟ, ಪಾಪಿ ಹಿಂದೆಂದೂ ಆಗಿರಲಿಲ್ಲ" ಎಂದು ಬಹು ಮರ್ಯಾದೆಯಿಂದ ಉತ್ತರಕೊಟ್ಟರು ಮಿ. ಮೈಕಾಬರರು.
"ನಿಮ್ಮ ಸಂಸಾರ ಸುಖವಾಗಿದೆಯೇ" ಎಂದು ಅತ್ತೆಯು ವಿಚಾರಿಸಿದಳು.
"ಇದ್ದಾರಮ್ಮಾ – ಸುಖವೇ! ದೇಶಭ್ರಷ್ಟ, ಜಾತಿಭ್ರಷ್ಟರಂತಿದ್ದಾರೆ" ಹೀಗನ್ನುತ್ತಾ ಮುಂದಿನ ವಿಷಯವೆಲ್ಲ ನಮಗೆ ಹೇಗೂ ಗೊತ್ತಿರಬೇಕೆಂದು ತಿಳಿದು ನಮ್ಮನ್ನು ನೋಡುತ್ತಾ ಮಾತನ್ನು ಮುಂದರಿಸಿ –
"ನಮ್ಮ ಜೀವನದ ಆಧಾರ ಬಹು ಅಸ್ಥಿರಸ್ಥಿತಿಯಲ್ಲಿದೆ. ನನ್ನನ್ನು ನೌಕರಿಯಲ್ಲಿಟ್ಟುಕೊಂಡಿರುವ ಯಜಮಾನನು * * *" ಎಂದು ಮಾತ್ರ ಹೇಳಿ, ಪಂಚಿನ ಕೆಲಸವನ್ನು ಪ್ರಾರಂಭಿಸಿದರು. ಆದರೆ, ತಾವು ಹಿಡಿದಿರುವ ಕೆಲಸವನ್ನು ಮರೆತು ತಮ್ಮ ಆಲೋಚನೆಗಳಲ್ಲಿ ಉದ್ವಿಗ್ನರಾಗುತ್ತಾ ಅವರು ಪಂಚನ್ನು ತಯಾರಿಸುವ ವಿಧಾನದಲ್ಲಿ ತಪ್ಪಿ ಬೀಳತೊಡಗಿದರು. ಅವರ ಕೈಯು ನಡುಗತೊಡಗಿತು. ಪಂಚಿಗೆ ಬೇಕಾದ ಸಾಮಾನುಗಳನ್ನು ಮಿಶ್ರ ಮಾಡುವುದರಲ್ಲಿ ಹದ ತಪ್ಪಿದರು. ಹೀಗೆ ತಪ್ಪುತ್ತಿರುವುದನ್ನು ಅವರೇ ತಿಳಿದರು. ಅವರ ದುಃಖವೂ ಕೋಪವೂ ಏರುತಿದ್ದುವೆಂದು ನಮಗೆ ತಿಳಿಯಿತು. "ಮನಸ್ಸು ನೆಮ್ಮದಿಯಿಲ್ಲದವನಿಗಲ್ಲ ಈ ಕೆಲಸ" ಎಂದಂದುಕೊಂಡು ಹತಾತ್ತಾಗಿ ಎದ್ದು ನಿಂತರು.

"ನೀವು ಸ್ನೇಹಿತರ ಮಧ್ಯದಲ್ಲಿದ್ದೀರಲ್ಲವೇ ಮಿ. ಮೈಕಾಬರ್? ದುಃಖಪಡಬೇಡಿ, ಸಮಾಧಾನ ತೆಗೆದುಕೊಳ್ಳಿ" ಎಂದು ನಾನಂದೆ. ಆದರೆ ಅವರಿಗೆ ದುಃಖದಿಂದಲೂ ಸಿಟ್ಟಿನಿಂದಲೂ ಪ್ರಜ್ಞೆಯೇ ಇರಲಿಲ್ಲ. ಆದರೂ ತಮ್ಮ ಸ್ವರವನ್ನೇ ತಾವು ಕೇಳಿ ತನ್ನ ಇರುವಿಕೆಗಲ್ಲಿ ನೆನಪಿನಲ್ಲಿ ಸ್ಥಿರಪಡಿಸಲೋ ಎಂಬಂತೆ, ದೊಡ್ಡ ಸ್ವರದಿಂದ ಮಾತಾಡತೊಡಗಿದರು.

"ಸರಿ, ನಾನು ಸ್ನೇಹಿತರ ಮಧ್ಯದಲ್ಲಿರುವುದರಿಂದಲೇ ನನ್ನ ಮನಸ್ಸು ಮೃದುವಾಗಿ ಉಳಿದಿದೆ. ಕಠೋರತೆಗೆ ಏರುವುದರ ಬದಲು ವ್ಯಾಕುಲಕ್ಕೆ ಪರಿವರ್ತನೆ ಹೊಂದಿದೆ. ನನಗಾದದ್ದೇನು? ಭ್ರಮೆಯೇ? ಅಲ್ಲ! – ಹಾಗಾದರೆ, ಮತ್ತೇನು? ನನ್ನನ್ನೇ ನಾನು ತಿಳಿದು ಹೀಗಾಗಿದ್ದೇನೆ. ನಾನು ಪಾಪಿ! ಅನ್ಯಾಯ ಕಾರ್ಯಗಳ ಮಹಾ ಪಾಪದಲ್ಲಿ ಭಾಗಿಯಾಗಿದ್ದೇನೆ! ಮೋಸ, ಕಳ್ಳತನ, ವಂಚನೆ, ಒಳಸಂಚು – ಇವೆಲ್ಲವುಗಳ ಕರಾಳ ಮೂರ್ತಿ ಹೀಪನ ಜತೆಯಲ್ಲಿದ್ದೇನೆ. ಇದ್ದೇನೆಂಬ ಸತತವಾದ ನೆನಪಿನಿಂದ ಹೀಗಾಗಿದ್ದೇನೆ!" ಹೀಗೆಲ್ಲಾ ಹೇಳುತ್ತಾ ಬರುತ್ತಿದ್ದ ಕಣ್ಣೀರನ್ನು ಒರೆಸಿಕೊಂಡು –

"ಕಷ್ಟಪಟ್ಟು ಸಾಕಾಯಿತು – ಇನ್ನು ಮುಂದೂ ಹೀಗೆ ಕಷ್ಟಪಟ್ಟು ಬಾಳಲಾರೆ. ಈಗಲೇ ಮಹಾಪಾಪಿ ನಾನು! ಅಧಮಾಧಮನ ಚಾಕರಿಯಲ್ಲಿ ಸಮಾಜ ದ್ರೋಹಿಯಾಗಿದ್ದೇನೆ. ನನ್ನ ಪಾಪಕರ್ಮಗಳ ಅಭ್ಯಾಸದಿಂದ ಧರ್ಮಬದ್ಧ ಜೀವನ ಏನೆಂಬುದನ್ನೇ ಮರೆಯತೊಡಗಿದ್ದೇನೆ. ನನಗೆ ಬೇಡ ಆತನ ನೌಕರಿ, ನನಗೆ ಸಲ್ಲದು ಆತನ ಸಹವಾಸ. ಜೀವನಕ್ಕಾಗಿ ಆ ರಾಕ್ಷಸನ ಜತೆ ಸೇರಿ, ಹೆಂಡತಿ ಮಕ್ಕಳನ್ನೇ ಮರೆತು ಮೃಗವಾಗಿ ಬದುಕುವ ಬದಲು ಊರು ಬಿಟ್ಟು ಊರೂರು ತಿರುಗಿ, ಸಂತೋಷದಿಂದ ಸಬಳವನ್ನು ನುಂಗಿ ಹಣ ಸಂಪಾದಿಸುವ ಡೊಂಬನಾಗುವೆನು! ನಾನಿನ್ನು ಯಾರ ಜತೆಯನ್ನೂ ಸೇರೆನು. ಹಾಗೆ ಸೇರಬೇಕಾದರೂ ನಾನು ಉದ್ದೇಶಿಸಿರುವ ಕಾರ್ಯ ಮುಗಿಯಬೇಕು. ಆ ಮೂರ್ಖ, ಕ್ರೂರಿ, ಪಾಪಿ, ದ್ರೋಹಿ, ಹೀಪನ ತಲೆಯನ್ನು ಪುಡಿಮಾಡಿದ ನಂತರ ಮಾತ್ರ ಇತರ ಕೆಲಸ. ಹೀಪನನ್ನು ಜ್ವಾಲಾಮುಖಿಯಲ್ಲಿ ಸುಟ್ಟು, ಹೀಪನ ಕತ್ತನ್ನು ಹಿಸುಕಿ ಬಿಸಿ ರಕ್ತ ಸುರಿಸಿ, ಅನಂತರ ಮಾತ್ರ ಈ ಪಂಚನ್ನು ಮುಟ್ಟುವೆನು." ಈ ರೀತಿಯಾಗಿ ಮೈಯೆಲ್ಲಾ ನಡುಗುತ್ತಾ ಅಳುತ್ತಾ ಆರ್ಭಟಿಸುತ್ತ ರೇಗಿ ದಣಿದು ಕುರ್ಚಿಯಲ್ಲಿ ಕುಳಿತರು.

ಅವರನ್ನು ಸಮಾಧಾನಪಡಿಸಲು ನಾನು ಸ್ವಲ್ಪ ಪ್ರಯತ್ನಿಸಿದೆನು. ಅದಕ್ಕೆ ಅವರು ಎಡೆ ಕೊಡಲಿಲ್ಲ. ನೀರಲ್ಲಿ ಪ್ರಾಣದಾಸೆಗೆ ಕೈ ಬಡಿಯುವವರಂತೆ ತಮ್ಮ ಎರಡೂ ಕೈಗಳನ್ನು ಬೀಸುತ್ತಾ ಅವರ ಸಮೀಪ ಹೋದ ನನ್ನನ್ನು ದೂರ ನೂಕಿ –

"ಯಾವುದೂ ಬೇಡ – ನನ್ನನ್ನು ಮಾತಾಡಿಸಬೇಡಿ. ಆ ಪುಣ್ಯವಂತೆ ಮಿಸ್ ವಿಕ್ಫೀಲ್ಡಳನ್ನು ಉದ್ಧರಿಸಿ, ಅವಳ ಕೈ ಹಿಡಿಯಲೋಸ್ಕರ ನಡೆಸುವ ಹೀಪನ ಕುತಂತ್ರ, ಕೃತ್ರಿಮಗಳನ್ನೆಲ್ಲ ಬಹಿರಂಗಪಡಿಸಿ, ಶತ್ರುಗಳನ್ನು ನಾಶಪಡಿಸುವವರೆಗೂ ನನಗೆ ಏನೂ ಬೇಡ. ಬರುವ ವಾರ ಇದೇ ದಿನ ಕೇಂಟರ್ಬರಿಯ ಹೋಟೆಲಿಗೆ ನೀವೆಲ್ಲರೂ ಬರಬೇಕು. ಆ ವರೆಗೆ ಎಲ್ಲರೂ ಮೌನ! ಅಲ್ಲಿ ನಾನು ಹೀಪನ ಚಿತ್ರವನ್ನು ಬಿಡಿಸಿ, ಕುತಂತ್ರವನ್ನು ಬಯಲಿಗೆ ಎಳೆದು, ನ್ಯಾಯವನ್ನು ಕಾಪಾಡಿ ಕೊಡುವೆನು. ದಯಮಾಡಿ ನೀವೆಲ್ಲರೂ ಬರಬೇಕು. ಹೀಪನ ನಾಶಕ್ಕೆ ಮೊದಲು ನಾನು ಯಾರಿಂದಲೂ ಯಾವ ಆತಿಥ್ಯವನ್ನೂ ಸ್ವೀಕರಿಸೆನು" ಎಂದು ಹೇಳಿ, ನಿಂತು, ಬೆನ್ನು ನೆಟ್ಟಗೆ ಮಾಡಿ, ಮಿ. ಮೈಕಾಬರರು ನಮ್ಮ ಮಧ್ಯದಿಂದ ಹೋಗಿಯೇಬಿಟ್ಟರು.

ಅವರು ಹೋಗಿ ಸ್ವಲ್ಪ ಹೊತ್ತಾಗುವಾಗ ಅವರದೇ ಒಂದು ಪತ್ರ ಬಂತು. ಆ ಪತ್ರವನ್ನು ಅವರು ದಾರಿಯಲ್ಲೇ ಬರೆದಿರಬೇಕು. ಪತ್ರವು ಹೀಗಿತ್ತು:

ಪ್ರಿಯರೇ

ಈ ಪತ್ರವು ಅತ್ಯಂತ ಗಹನವಾದುದು, ಆದುದರಿಂದ ರಹಸ್ಯವಾಗಿರತಕ್ಕದ್ದು.

ನಿಮ್ಮ ಅತ್ತೆಯ ಮನೆಯಲ್ಲಿ ಉದ್ವೇಗದಿಂದ ಮಾತಾಡಿ ಸ್ವಲ್ಪ ಹೊಲಸು ಮಾಡಿಬಿಟ್ಟದ್ದಕ್ಕೆ ನನ್ನನ್ನು ಕ್ಷಮಿಸಬೇಕು. ಹೃದಯದಿಂದುಕ್ಕಿದ ಜ್ವಾಲಾಮುಖಿಯನ್ನು ಹತೋಟಿಗೆ ತರುವುದು ಕಷ್ಟತರವಾದದ್ದು. ತಡೆ ಹಿಡಿದು ಆದ ಆಸ್ಫೋಟವೇ ಅದು. ಇದೆಲ್ಲ ಕಷ್ಟಗಳನ್ನು ಅನುಭವಿಸಿದವರಿಗೆ ಮಾತ್ರ ಗೊತ್ತು.

ನೀವು ಮರೆಯದೆ ಕೇಂಟರ್ಬರಿಗೆ ಬನ್ನಿ. ನನ್ನ ಜೀವಮಾನದ ಮುಖ್ಯ ಕೆಲಸ ಅಲ್ಲಿ ಆಗತಕ್ಕದ್ದಿದೆ. ಮುಖ್ಯವಾಗಿ, ಈಗ ನಮ್ಮೊಳಗೆ ನಿಶ್ಚೈಸಿಕೊಂಡಿರುವ ಕಾರ್ಯವನ್ನು ಅಲ್ಲಿ ಮಾಡುವೆನು. ಅನಂತರ ನನ್ನ ಜೀವನದಲ್ಲಿ ಉಳಿಯುವ ಕಾರ್ಯ ಒಂದು ಮಾತ್ರ. ಅಂದರೆ, ಈವರೆಗಿನ ನನ್ನ ಪಾಪ ಕರ್ಮಗಳಿಗೆ ತಕ್ಕಂಥ ಪ್ರಾಯಶ್ಚಿತ್ತವನ್ನು ಕೈಕೊಳ್ಳುವುದು. ಇಷ್ಟು ಮಾಡಿ, ಸಮಾಜದಲ್ಲಿ ತಲೆಯೆತ್ತಿ ನಡೆಯುವಂತಾದರೆ ಸಾಕು. ಅದಕ್ಕಿಂತ ಹೆಚ್ಚಿನ ಇಹಲೋಕದ ಆಸೆ ನನಗಿಲ್ಲ. ಅಥವಾ ಅಂಥ ಆಸೆ ಏನಾದರೂ ಇದ್ದರೆ –

"ಅಧಿಕಾರ, ಕೀರ್ತಿಯನು ಬಯಸಿ ಜೀವಿಸದ –
ಕೃಷಿವಂತ, ಶ್ರಮವಂತ, ಮಂದಿ ಮಡದಿಯರು
ಆರೇಳು ಗೇಣೊಳಗೆ ಚಿರಶಾಂತಿ ಪಡೆದಿಹರು"

ಎಂಬ ಕವಿ ವಚನಗಳಂತೆ, ಶಾಂತಿಯನ್ನೀಯಬಲ್ಲ ಸಮಾಧಿಯಲ್ಲಿ ನನ್ನನ್ನು ಮಲಗಿಸಿ, ಅನಾಡಂಬರದ, ಮುಂದಿನ ಹೆಸರನ್ನು ಮಾತ್ರ ಅಲ್ಲಿ ಬರೆಸಿಡಬೇಕೆಂಬುದು ಮಾತ್ರ –

ವಿಲ್ಕಿನ್ಸ್ ಮೈಕಾಬರ್

ಅಧ್ಯಾಯ ಐವತ್ತು

ಮಿ. ಪೆಗಟಿಯ ಕನಸು ಫಲಪ್ರದವಾಯಿತು

ನಾವು ಮಾರ್ಥಾಳನ್ನು ನದಿಯ ದಂಡೆಯಲ್ಲಿ ಕಂಡು ಮಾತಾಡಿ ಕೆಲವು ತಿಂಗಳುಗಳೇ ಕಳೆದಿದ್ದುವು. ಮಾರ್ಥಾಳಿಂದ ಯಾವ ವರ್ತಮಾನವೂ ಬರಲಿಲ್ಲ. ಎಮಿಲಿ ಮೃತಪಟ್ಟಿರಬೇಕೆಂದೇ ನಾನು ಊಹಿಸುತ್ತಿದ್ದೆನು. ನನ್ನ ಊಹೆ ನಿಜವೇ ಆಗಿ ಪರಿಣಮಿಸಿದ್ದು, ಮಿ. ಪೆಗಟಿಗೆ ಅದು ತಿಳಿದರೆ ಅವರ ಸ್ಥಿತಿ ಏನಾಗಬಹುದೆಂದು ಊಹಿಸಿಯೇ ನಾನು ಹೆದರುತ್ತಿದ್ದೆನು.

ಮಿ. ಪೆಗಟಿಯ ಮಟ್ಟಿಗೆ, ಅವರ ಊಹನೆಯೇ ಬೇರೆ ತೆರನಾಗಿತ್ತು. ಎಮಿಲಿ ಅವರಿಗೆ ಸಿಕ್ಕಿಯೇ ಸಿಕ್ಕುವಳೆಂದು ಅವರು ದೃಢವಾಗಿ ನಂಬಿಕೊಂಡಿದ್ದರು. ಅವರಿಗೆ ದೇವರಲ್ಲಿದ್ದ ಭಕ್ತಿಯಿಂದಲೂ ಮತ್ತು ತನ್ನ ಗುರಿ ನ್ಯಾಯವಾದುದೆಂಬ ಅವರ ಆತ್ಮವಿಶ್ವಾಸದಿಂದಲೂ ಈ ನಂಬಿಕೆ ಅವರಲ್ಲಿ ಅಚಲವಾಗಿತ್ತು. ಅವರ ಎಲ್ಲಾ ಕೆಲಸಗಳನ್ನೂ ಈ ನಂಬಿಕೆಗೆ ತಕ್ಕಂತೆ ಮಾಡುತ್ತಿದ್ದರು. ಅತ್ಯಂತ ಸಣ್ಣ, ಅಥವಾ ಸಂಶಯಾಸ್ಪದವಾದ, ವರ್ತಮಾನ ಸಿಕ್ಕಿದರೂ ಸಹ ಅವರು ಅದನ್ನು ಸ್ವತಃ ನಡೆದುಹೋಗಿ ಪರೀಕ್ಷಿಸುತ್ತಿದ್ದರು. ಇಪ್ಪತ್ತು ಮೂವತ್ತು ಮೈಲುಗಳನ್ನು ಎಮಿಲಿಗಾಗಿ ನಡೆಯುವುದೆಂದರೆ ಅವರಿಗೆ ಅದು ಬಹು ಸುಲಭದ್ದೇ ಆಗಿತ್ತು. ಮಿಸ್ ಡಾರ್ಟಲ್ಲಳಿಂದ ತಿಳಿದ ವರ್ತಮಾನವನ್ನು ಪರೀಕ್ಷಿಸುವುದಕ್ಕಾಗಿ ಅವರು ನೇಪಲ್ಸಿನವರೆಗೂ ಹೋಗಿ ಬಂದಿದ್ದರು. ಮನಸ್ಸಿನ ಕಲ್ಪನೆಗಳಿಂದ ಅಥವ ಅಂಥ ನಂಬಿಕೆಗಳಿಂದ ಅವರು ಎಂದೂ ತೃಪ್ತಿ ಪಡುತ್ತಿರಲಿಲ್ಲ.

ಒಂದು ದಿನ ಸಾಯಂಕಾಲ, ಹನಿ ಹನಿ ಮಳೆ ಬಂದು ಮರದೆಲೆಗಳು ಜೊಂಪೆ ಜೊಂಪೆಯಾಗಿ ನೇಲುತ್ತಾ ನೆಲದ ಮೇಲಿನ ತರಗೆಲೆಗಳು ಒದ್ದೆಯಾಗಿ ಹೊಸತೊಂದು ವಾಸನೆಯನ್ನು ಹರಡುತ್ತಿದ್ದ ಕಾಲದಲ್ಲಿ ಮಾರ್ಥಾಳು ಬಂದು ನನ್ನನ್ನು ಕರೆದಳು. ಅವಳು ಆ ಮೊದಲು ಮಿ. ಪೆಗಟಿಯ ಕೋಣೆಗೆ ಹೋಗಿದ್ದಳಾಗಿಯೂ ಅವರು ಅಲ್ಲಿ ಇಲ್ಲದಿದ್ದುದರಿಂದ ನನ್ನಲ್ಲಿಗೆ ಬಂದದ್ದಾಗಿಯೂ ತಿಳಿಸಿದಳು. ಆದರೆ ಮಿ. ಪೆಗಟಿಯು ಕೋಣೆಗೆ ಬಂದ ಕೂಡಲೇ ಅವರಿಗೆ ಕಾಣ ಸಿಕ್ಕುವಂತೆ ಏರ್ಪಡಿಸಿ, ಅವರು ಬರಬೇಕಾಗಿರುವ ಸ್ಥಳ, ಮತ್ತು ಅಲ್ಲಿಗೆ ಹೋಗಲಿರುವ ದಾರಿಗಳನ್ನು ವಿವರಿಸಿ, ಅವರಿಗೊಂದು ಪತ್ರ ಬರೆದು ಇಟ್ಟಿದ್ದಳೆಂದೂ ಅವಳು ತಿಳಿಸಿದಳು. ನನ್ನನ್ನು ಕರೆದುಕೊಂಡು ಹೋಗಿ ಎಮಿಲಿಯನ್ನು ತೋರಿಸಿಕೊಡುವುದಾಗಿ ತಿಳಿಸಿದ್ದರಿಂದ ನಾನು ಆ ಕೂಡಲೇ ಅವಳ ಜತೆಯಲ್ಲಿ ಹೊರಟೆನು. ಗೋಲ್ಡನ್ ಕ್ರಾಸ್ ಸ್ಕ್ವೈರಿನವರೆಗೆ ನಾವು ಜಟ್ಕದಲ್ಲಿ ಹೋಗಿ, ಮುಂದೆ ಜಾಗ್ರತೆಯಿಂದ, ಒಬ್ಬರನ್ನೊಬ್ಬರು ಸ್ವಲ್ಪ ದೂರ ದೂರವಿರುವಂತೆ, ಹಿಂಬಾಲಿಸುತ್ತಾ ಹೋಗಬೇಕೆಂದೂ ನಿಶ್ಚೈಸಿಕೊಂಡೆವು. ನಾವು ಹೋಗಿ ತಲುಪಬೇಕಾಗಿದ್ದ ಸ್ಥಳವೂ ಎಮಿಲಿಯ ಮಾನಸಿಕ ಪರಿಸ್ಥಿತಿಯೂ ಈ ಗೋಪ್ಯತೆ, ಜಾಗ್ರತೆಗಳ ಅಗತ್ಯತೆಯನ್ನು ಸೂಚಿಸುತ್ತಿದ್ದುವು.

ಗೋಲ್ಡನ್ ಕ್ರಾಸ್ ಸ್ಕ್ವೈರಿನಲ್ಲಿ ಅನೇಕ ರಸ್ತೆಗಳು ನಗರದ ನಾನಾ ಭಾಗದಿಂದ ಬಂದು ಸೇರುವುವು. ಆ ಸ್ಕ್ವೈರಿನ ದಕ್ಷಿಣದಲ್ಲಿನ ಒಂದು ರಸ್ತೆಯಲ್ಲೇ ಮಾರ್ಥಾಳು ಮುಂದೆ ಹೋಗುತ್ತಿದ್ದ ಪ್ರಕಾರ, ನಾನು ನಡೆದು ಹೋದೆನು. ಹಾಗೆ ಸ್ವಲ್ಪ ದೂರ ಹೋಗುವಾಗ ತುಂಬಾ ಹಳತಾದ ಮನೆಗಳ ಸಮುದಾಯಗಳೇ ನಮಗೆ ಕಾಣಸಿಕ್ಕಿದುವು. ಅಲ್ಲಿನ ಮನೆಗಳೆಲ್ಲಾ ಹಿಂದಿನ ಕಾಲದಲ್ಲಿ ಶ್ರೀಮಂತರ ವಸತಿಗೃಹಗಳಾಗಿದ್ದುವು. ಈಗ ಅವುಗಳಲ್ಲಿ ಬಹು ಹೆಚ್ಚಿನವುಗಳೆಲ್ಲ ಬಾಡಿಗೆಗೆ ಕೊಡಲಾಗಿದ್ದುವು. ಆ ಮನೆಗಳಲ್ಲಿ ಈಗ, ಒಂದೇ ಮನೆಯಲ್ಲಿ ನಾಲ್ಕಾರು ಬಿಡಾರಗಳೂ ಇರುತ್ತಿದ್ದುವು. ಮನೆಯ ಒಳಗಡೆ ಈ ವಿಧದ ವಾಸದ ಅನುಕೂಲಕ್ಕಾಗಿ ಮರದ ಹಲಗೆಗಳಿಂದ ಕೋಣೆಗಳನ್ನು ವಿಂಗಡಿಸಿ ಬಾಡಿಗೆಗೆ ಕೊಡುತ್ತಿದ್ದರು. ಈಗ ಬಡವರೇ ಈ ಮನೆಗಳಲ್ಲಿ ವಾಸಿಸುತ್ತಿದ್ದುದರಿಂದ, ಹಿಂದಿನ ಕನ್ನಡಿ ಕಿಟಕಿಗಳಲ್ಲಿನ ಒಡೆದು ಹೋಗಿದ್ದ ಕನ್ನಡಿಗಳನ್ನು ಅಲ್ಲಲ್ಲಿಗೇ ಬಿಟ್ಟಿದ್ದು, ನೋಡುವವರಿಗೆ ಮನೆಗಳು ಬಹು ವಿಕಾರವಾಗಿಯೂ ಅಪಾಯಕರವಾಗಿಯೂ ಕಾಣುತ್ತಿದ್ದುವು. ಈ ವಿಕಾರದ ಜತೆಯಲ್ಲಿ ದೂಳೂ ದೂಸರವೂ ತುಂಬಿಕೊಂಡು, ಕೆಲವು ಭಾಗಗಳಲ್ಲಿ ಜನರೂ ಇಲ್ಲದೆ, ಇರಬಹುದಾದರೂ ರಾತ್ರಿ ಮಾತ್ರ ಬಂದಿದ್ದು ಬೆಳಗಾದ ಕೂಡಲೆ ತಂತಮ್ಮ ಕಸಬುಗಳಿಗೆ ಹೋಗುತ್ತಾ – ಈ ವಠಾರವೆಲ್ಲ ಬಡತನದ್ದೂ ಹಾಳು ಬಿದ್ದದ್ದೂ ಆಗಿ ತೋರುತ್ತಿತ್ತು.

ಇಂಥ ಮನೆಗಳ ಸಾಲಿನಲ್ಲಿದ್ದ ಒಂದು ಮನೆಗೆ ನಾವು ಹೋಗಬೇಕಿತ್ತು. ನಾವು ಈ ಮನೆಮುಖವಾಗಿ ಮುಂದೆ ಹೋಗುತ್ತಿದ್ದಾಗ ನಮಗಿಂತ ಸ್ವಲ್ಪ ಮುಂದೆ ಒಂದು ಅಡ್ಡದಾರಿಯಿಂದ ಒಬ್ಬಳು ಹೆಂಗುಸು ಬಂದು, ನಮ್ಮ ದಾರಿಯಲ್ಲೇ ಅವಸರದಿಂದ ಮುಂದೆ ನಡೆದು, ನಾವು ಹೋಗಬೇಕಾಗಿದ್ದ ಮನೆಗೇ ನುಗ್ಗಿದಳು. ಆ ರಸ್ತೆಯಲ್ಲಿ ಹೋಗುತ್ತ ಬರುತ್ತಿದ್ದವರನ್ನೆಲ್ಲ ಬಹು ಜಾಗ್ರತೆಯಿಂದ ನೋಡುತ್ತಿದ್ದ ಮಾರ್ಥಾಳು ನಾವು ಬಹು ಎಚ್ಚರಿಕೆಯಿಂದ ಮುಂದೆ ಹೋಗಬೇಕೆಂದು ನನಗೆ ಸೂಚನೆಯಿತ್ತಳು. ನಾವು ಆ ರೀತಿಯಾಗಿಯೇ ಮುಂದೆ ಹೋದೆವು. ನಾವು ನೋಡುತ್ತಿದ್ದ ಹಾಗೆಯೇ ಆ ಅಪರಿಚಿತ ಸ್ತ್ರೀ ನಾವು ನುಗ್ಗಬೇಕಾಗಿದ್ದ ಕೋಣೆಗೆ ನುಗ್ಗಿದಳು! ಇದನ್ನು ಕಂಡು ನಮಗೆ ಆಶ್ಚರ್ಯವೂ ಭಯವೂ ಕುತೂಹಲವೂ ಉಂಟಾಯಿತು. ಹಾಗಾಗಿ ನಾವು ಬಹು ಜಾಗ್ರತೆಯಿಂದ ಆ ಕೋಣೆಯ ಹಿಂಬದಿಯ ಒಂದು ಖಾಲಿ ಕೋಣೆಗೆ ನುಗ್ಗಿದೆವು. ಮಾರ್ಥಾಳಿಗೆ ಈ ಕೋಣೆಗಳ ಪರಿಚಯ ಚೆನ್ನಾಗಿ ಇದ್ದುದರಿಂದ, ಎಲ್ಲಿಗೆ ಬೇಕೋ, ಹೇಗೆ ಬೇಕೋ ಅಲ್ಲಿಗೆ, ಹಾಗೆ, ನನ್ನನ್ನು ಕರೆದುಕೊಂಡು ಹೋದಳು. ನಾವು ಆ ಮನೆಯಲ್ಲಿ ಕೋಣೆಯಿಂದ ಕೋಣೆಗೆ, ಮನೆಯ ಪರಿಚಯವಿದ್ದವರಂತೆ ಧೈರ್ಯವಾಗಿ ಹೋಗುವಾಗ, ನಮ್ಮನ್ನು ಕಂಡವರು ಯಾರೂ, ನಮ್ಮನ್ನು ಮಾತಾಡಿಸಲಿಲ್ಲ. ಬೇರೆ ಬೇರೆ ಸಂಸಾರಗಳು ಇಲ್ಲಿ

ವಾಸಮಾಡಿಕೊಂಡು ಅವರವರ ನಾನಾ ವಿಧದ ಕಸಬುಗಳಲ್ಲೋ ದುಃಖಗಳಲ್ಲೋ ಭಯಗಳಲ್ಲೋ ಮಗ್ನರಾಗಿರುತ್ತಿದ್ದುದರಿಂದ ಒಬ್ಬರನ್ನೊಬ್ಬರು ನೋಡುವ ಪದ್ಧತಿಯಾಗಲೀ ಸಾಧಾರಣದ ಗೌಜು ಗಲಭೆಗಳಿಗೆ ನಿಗಾ ಕೊಡುವ ಕ್ರಮವಾಗಲೀ ಇಲ್ಲಿರಲಿಲ್ಲ. ನಾವು ಸಂದರ್ಭವಶದಿಂದ ನುಗ್ಗಿ ನಿಂತಿದ್ದ ಕೋಣೆಗೂ ನಾವು ನಿಜವಾಗಿಯೂ ನುಗ್ಗ ಬೇಕಾಗಿದ್ದ ಕೋಣೆಗೂ ಮಧ್ಯೆ ಮರದ ಹಲಗೆಗಳಿಂದ ವಿಂಗಡಿಸಿದ್ದ ಹಳೆ ಗೋಡೆಯಿತ್ತು. ಆ ಗೋಡೆಯಲ್ಲಿ ತುಂಬಾ ಸೆರೆಯಿದ್ದುದರಿಂದ ಆಚೆ ಕೋಣೆಯೊಳಗೆ ನೋಡಲೂ ಅಲ್ಲಿನ ಮಾತುಗಳನ್ನು ಕೇಳಲೂ ಸಾಕಷ್ಟು ಅನುಕೂಲವಿತ್ತು.

ಈಗಾಗಲೇ ದೀಪ ಹಚ್ಚುವ ಸಮಯವಾಗಿದ್ದುದರಿಂದ ಆ ಕೋಣೆಯಲ್ಲಿ ಒಂದು ದೀಪ ಉರಿಯುತ್ತಿತ್ತು. ಆದರೆ, ಕಟ್ಟಡಗಳಲ್ಲಿ ಹಗಲೆ ದೀಪ ಬೇಕೆನ್ನುವಷ್ಟು ಕತ್ತಲೆಯಿರುವುದೇ ಕ್ರಮವೆಂದು ನೋಡುವಾಗಲೇ ಗೊತ್ತಾಗುತ್ತಿತ್ತು. ನಮ್ಮ ಆಚೆ ಕೋಣೆಯ ನೆಲದ ಮೇಲೆ ಒಬ್ಬಳು ಹೆಂಗುಸು ಕುಳಿತಿದ್ದಳು. ಅವಳ ಬಲ ಭಾಗದಲ್ಲಿ, ಸ್ವಲ್ಪ ದೂರದಲ್ಲಿ, ಸಾಧಾರಣ ನಮಗೆ ಮುಖ ಹಾಕಿಯೇ ನಮಗಿಂತ ಮುಂದೆ ಬಂದಿದ್ದ ಹೆಂಗುಸು ನಿಂತಿದ್ದಳು. ದೀಪ ನಮಗೆ ಸಮೀಪವಾಗಿ ಇದ್ದುದರಿಂದ, ದೀಪದ ಬೆಳಕಿನಲ್ಲಿ ನಿಂತಿದ್ದ ವ್ಯಕ್ತಿ ಮಿಸ್ ಡಾರ್ಟಲ್ಲಳೆಂದು ನಾನು ಸುಲಭದಲ್ಲಿ ಗುರುತಿಸಿದೆನು. ಮಿಸ್ ಡಾರ್ಟಲ್ಲಳು ಮಾತಾಡುತ್ತಿದ್ದಳು. ನಾನು ನನ್ನ ಉಸಿರನ್ನೇ ಬಿಗಿ ಹಿಡಿದು, ಹಲಗೆಯ ಸೆರೆಯಿಂದ ನೋಡುತ್ತಲೂ ಮಾತನ್ನು ಕೇಳುತ್ತಲೂ ನಿಂತೆನು. ಮಿಸ್ ಡಾರ್ಟಲ್ಲಳು ಅಹಂಕಾರ, ದ್ವೇಷ, ಅಸೂಯೆ, ಕ್ರೋಧಗಳಿಂದ ಕೈ ಮೈ ಅಲ್ಲಾಡಿಸುತ್ತಾ ಒಂದು ವಿಧದ ಕುಲಮದದ ಅಧಿಕಾರವಾಣಿಯಿಂದ ಮಾತಾಡುತ್ತಿದ್ದಳು. ನೆಲದಲ್ಲಿ ಕುಳಿತಿದ್ದವಳನ್ನುದ್ದೇಶಿಸಿ ಮಿಸ್ ಡಾರ್ಟಲ್ಲಳು ಅಂದಳು –
"ನಿನ್ನನ್ನು ನೋಡಲು ಬಂದೆ."
"ಮನೆಯ ಯಜಮಾನಿ ನಾನಲ್ಲ, ಅಮ್ಮಾ. ಯಜಮಾನಿಯನ್ನು ಹುಡುಕಿ ಬಂದದ್ದಲ್ಲವೇ ನೀವು?" ಅಂದಳು ಕುಳಿತಿದ್ದವಳು. ಅವಳು ಆಡಿದ ಮಾತು ಬಹು ಮೃದುವಾದ ವಾಣಿಯಾಗಿತ್ತು. ಅದನ್ನು ಕೇಳಿದೊಡನೆಯೇ ನನ್ನ ಜ್ಞಾಪಕವು ಚುರುಕುಗೊಂಡಿತು. ಆ ಸ್ವರವಿದ್ದ ವ್ಯಕ್ತಿಯನ್ನು ಪೂರ್ಣ ನಿಶ್ಚೈಸುವ ಮೊದಲು, ಮಿಸ್ ಡಾರ್ಟಲ್ಲಳ ಮಾತುಗಳನ್ನು ಗಮನವಿಟ್ಟು ಕೇಳತೊಡಗಿದೆನು.

"ನಿನ್ನ ಯಜಮಾನಿಯು ನನಗೆ ಅಗತ್ಯವಿಲ್ಲ, ಅವಳ ಗುರುತೂ ನನಗಿಲ್ಲ. ಜೇಮ್ಸ್ ಸ್ಟೀಯರ್ಫೋರ್ತನನ್ನು ವಂಚಿಸಿ, ಆಕರ್ಷಿಸಿ, ಹಾಳು ಮಾಡಿದ ಅವಲಕ್ಷಣದ ಸ್ವರೂಪ ಹೇಗಿದೆಯೆಂದು ನೋಡಲು ಬಂದವಳು ನಾನು. ನೀನೇ ತಾನೆ ಆ ಮಾರಿ?" ಅಂದಳು ಮಿಸ್ ಡಾರ್ಟಲ್ಲಳು.

ಈ ಮಾತುಗಳನ್ನು ಕೇಳಿದ ಒಡನೆಯೇ ಕುಳಿತಿದ್ದ ವ್ಯಕ್ತಿಯು ಎದ್ದು ಕೋಣೆಯಿಂದ ಓಡಲು ಪ್ರಯತ್ನಿಸಿದಳು. ಅವಳು ಅಷ್ಟೊಂದು ಗಾಬರಿಗೊಂಡಿದ್ದಳು. ಆದರೆ ಮಿಸ್ ಡಾರ್ಟಲ್ಲಳು ಬಾಗಿಲಿಗೆ ಅಡ್ಡವಾಗಿ ನಿಂತು –
"ರಂಡೇ, ನೀನು ಓಡಿ ತಪ್ಪಿಸುವುದನ್ನು ನೋಡುತ್ತೇನೆ! ನಿನ್ನ ಕಥೆಯನ್ನು ಊರಿಗೇ ತಿಳಿಸಿ, ನಿನಗೆ ಬುದ್ಧಿ ಕಲಿಸಬಲ್ಲೆ ನಾನು, ತಿಳಿಯಿತೇ? ಸುಮ್ಮನೆ ಕುಳಿತರೆ ಸರಿ. ನಿನ್ನಂಥವಳ ಸ್ವರೂಪಕ್ಕೆ ಮರುಳಾದ ಸ್ಟೀಯರ್ಫೋರ್ತನು ಹುಚ್ಚನೇ ಇರಬೇಕು. ನಿನ್ನ ಈ ಚಮತ್ಕಾರಗಳೆಲ್ಲ ನಮ್ಮೊಡನೆ ಇನ್ನು ನಡೆಯದು" ಎಂದು ಗದರಿಸಿದಳು.

ಅಲ್ಲಿದ್ದವಳು ಎಮಿಲಿಯೆಂದು ಈ ಮೊದಲೇ ನನಗೆ ಗೊತ್ತಾಯಿತು. ಎಮಿಲಿ ಬಹು ದೈನ್ಯ ಸ್ವರದಿಂದ –
"ಅಮ್ಮಾ ನೀನು ಯಾರೇ ಇರಬಹುದು. ನನಗೆ ಮಾತ್ರ ನಿನ್ನ ಪರಿಚಯವಿಲ್ಲ. ಆದರೆ ನಿನಗೆ ನನ್ನ ಚರಿತ್ರೆ ತಿಳಿದಿರುವಂತೆ ತೋರುತ್ತದೆ. ಏನಿದ್ದರೂ ನಾನು ಯಾರಿಗೂ ಅಪರಾಧ ಮಾಡಿರುವುದಿಲ್ಲ. ದೇವರೇ ಎಲ್ಲವನ್ನೂ ನೋಡಿಯೂ ಕರುಣಾಳುವಾಗಿರುವಾಗ, ಗುರುತೇ ಇಲ್ಲದ ನನ್ನನ್ನು ನೋಯಿಸಿದರೆ ನಿನಗಾದರೂ ದೊರಕುವ ಫಲವೇನು, ನೀನೇಕೆ ದೇವರ ಕೋಪಕ್ಕೆ ಗುರಿಯಾಗುವೆ?" ಅಂದಳು.

"ದೇವರು – ಯಾವ ದೇವರು? ನಿಮಗೂ ನಮಗೂ ಭೇದವಿಲ್ಲವೇ? ದೇವರೂ ದಿಂಡ್ರೂ ಎಂದೆಲ್ಲ ಮಾತಾಡಲು ನಿಮ್ಮಂಥವರಿಗೂ ನಮಗೂ ಸರಿಸಮಾನತೆಯೆಲ್ಲಿದೆ? ಇಂಥ ಮಾತು ನಿಮ್ಮಂಥವರ ಬಾಯಿಯಿಂದ ಬರುವ ಮೊದಲು ನಿಮಗೆ ಚಡಿ ಕೊಡಿಸಬೇಕು! ಚಡಿ ಕೊಡಿಸಿ ಪಾಶಿಗೆ ಹಾಕಬೇಕು. ಪಾಪ, ಪುಣ್ಯ, ದೇವರು – ಇದೆಲ್ಲಾ ಹಣಕ್ಕಾಗಿ ಹೆಣ್ಣು ಮಾರುವ, ಮೀನು ಮಾರುವ, ಬೆಸ್ತರಿಗೇಕೆ?" ಎಂದು ಮಿಸ್ ಡಾರ್ಟಲ್ಲಳು ಆರ್ಭಟಿಸಿದಳು.

"ನಾನು ತಪ್ಪು ಮಾಡಿರುತ್ತೇನೆಂದು ಒಪ್ಪುತ್ತೇನೆ. ಬಾಲ್ಯದಲ್ಲಿ ನನ್ನನ್ನು ಸಾಕಿದವರು ನನ್ನ ತಪ್ಪುಗಳನ್ನು ಮನ್ನಿಸಿ, ನನ್ನನ್ನು ಮುದ್ದು ಮಾಡಿದ್ದರಿಂದಲೋ ಏನೋ ತಪ್ಪು, ಒಪ್ಪು, ಶಿಕ್ಷೆಯೆಂಬುದನ್ನೆಲ್ಲ ಬದಿಗಿಟ್ಟು ಒಮ್ಮೆ ತಪ್ಪು ಮಾಡಿರುತ್ತೇನೆ, ಹೌದು. ಸ್ಟೀಯರ್ಫೋರ್ತನನ್ನು ಹೃತ್ಪೂರ್ವಕವಾಗಿ ನಂಬಿ, ಪ್ರೀತಿಸಿ, ಅವನಿಗಾಗಿ ನನ್ನ ಜನ್ಮವನ್ನೇ ಒಪ್ಪಿಸಿದೆ. ಆದರೆ ನನಗೆ ದೊರಕಿದ ಪ್ರತಿಫಲ – ಅವಮಾನ, ತಿರಸ್ಕಾರ. ಈಗ ನನ್ನ ಮನೆಯವರ ಮುಖ ನೋಡಲು ನನಗೆ ಸಾಧ್ಯವಿಲ್ಲ, ಧೈರ್ಯವಿಲ್ಲ! ಇಂಥ ಪಾಪಿಯನ್ನು ನೀನೆಷ್ಟು ಬೈದರೂ ನನಗೆ ದುಃಖವಿಲ್ಲ. ಆದರೆ ಮಾನ ಮರ್ಯಾದೆಯುಳ್ಳ, ತಮ್ಮ ಕಾಯಕಷ್ಟಗಳಿಂದ ನ್ಯಾಯ ಧರ್ಮ ಪ್ರಕಾರ ಜೀವನ ನಡೆಸಿ ಬರುವ ನಮ್ಮ ಮನೆಯವರನ್ನು ನೀನು ಬೈಯ್ಯಬಾರದಮ್ಮಾ" ಅಂದಳು ಎಮಿಲಿ, ಬಹು ಕರುಣಾಜನಕವಾಗಿ.

ಸ್ಟೀಯರ್‌ಫೋರ್ತನನ್ನು ನಂಬಿ, ಪ್ರೀತಿಸಿ, ತನ್ನ ಜನ್ಮವನ್ನು ಒಪ್ಪಿಸಿದ್ದುದಾಗಿ ಎಮಿಲಿ ಹೇಳುವಾಗ ಮಿಸ್ ಡಾರ್ಟಲ್ಲಳ ಮುಖ ಬಹು ಕ್ರೂರವಾಗಿಯೂ ನಿಷ್ಠುರವಾಗಿಯೂ ಕಾಣುತ್ತಿತ್ತು. ಅವಳು ತಡೆಯಲಾರದ ಕೋಪದಿಂದ ಎಮಿಲಿಗೆ ಎದ್ದು ಒಂದು ಪೆಟ್ಟನ್ನೇ ಕೊಟ್ಟಳು. ಆದರೆ, ಸಿಟ್ಟಿನ ಭರದಲ್ಲಿ ಕೊಟ್ಟ ಪೆಟ್ಟು ಗುರಿತಪ್ಪಿ ನೆಲಕ್ಕೆ ಬಿದ್ದದ್ದರಿಂದ ಮಿಸ್ ಡಾರ್ಟಲ್ಲಳಿಗೆ ಮತ್ತಷ್ಟು ಕೋಪ ಬಂದು, ಅವಳು ಕಿಡಿಕಿಡಿಯಾದಳು. ಅಂಥಾ ಕೋಪದಿಂದಲೇ ಮತ್ತು ಜರೆಯತೊಡಗಿದಳು –
"ಏನು? ಪ್ರೀತಿ? ನಿಮ್ಮಂಥ ಸೂಳೆಯರು ಉತ್ತಮ ಕುಲದ ಸ್ಟೀಯರ್‌ಫೋರ್ತನನ್ನು ಪ್ರೀತಿಸುವುದೆಂದರೇನು! ಏನನ್ಯಾಯ! ಹಣಕ್ಕಾಗಿ ಪ್ರೀತಿಸಿದಂತೆ ನಟಿಸಿ, ದೇಹವನ್ನು ಮಾರಿದ ಹೆಣ! ಈಗ ಅದೇ ಹೆಣ ಪ್ರೀತಿ, ಮಾನ, ಮರ್ಯಾದೆಯೆಂದೆನ್ನುತ್ತದಲ್ಲಾ – ಏನಾಶ್ಚರ್ಯ! ನಿಮ್ಮಂಥವರನ್ನು ಮಣ್ಣಡಿಯಲ್ಲಿ ಹೂಳಲೂ ಸಹ ಕೂಡದು. ನಿಮ್ಮನ್ನು ಹೊಡೆದು ನರಿ ನಾಯಿಗಳಿಗೆ ತುತ್ತಾಗಿ ಎಸೆಯಬೇಕು. ತಾವಾಗಿಯೇ ಬೆಳೆದು ಬದುಕುವ ಮೀನುಗಳನ್ನು ಸುಲಭವಾಗಿ ಹಿಡಿದು ದುಡ್ಡಿಗಾಗಿ ಮಾರಿದಂತೆ, ದುಡ್ಡಿಗಾಗಿ ತಮ್ಮನ್ನು ಮಾರಿಕೊಳ್ಳುವ ಕ್ರೂರ ಮಾರಿಗಳಿಗೆ ಎಷ್ಟು ಮಾತು? ಬಾಯಿ ಮುಚ್ಚು. ನಾನಿಲ್ಲಿಗೆ ಬಂದದ್ದು ನಿನ್ನ ಸೂಳೆ ನಟನೆ ನೋಡುವುದಕ್ಕಲ್ಲ, ಠಕ್ಕಿನ ಭಾಷಣ ಕೇಳುವುದಕ್ಕಲ್ಲ. ನಾನು ನಿನ್ನ ಆಜನ್ಮ ವೈರಿ. ಇನ್ನು ಮುಂದೆ ನಮ್ಮ ಮನೆ ವಠಾರಕ್ಕೆಂದಾದರೂ ಬಂದದ್ದಾದರೆ ನಿನಗೆ ಮಾಡಿಸುವ ಶಿಕ್ಷೆಯೇ ಬೇರೆ. ಇನ್ನು ಪುನಃ ಅವನನ್ನು ಬಗಲೊಳಗೆ ಹಾಕಿಕೊಳ್ಳುವ ಪ್ರಯತ್ನವನ್ನೇನಾದರೂ ಮಾಡಿದರೆ ಜೋಕೆ – ಎಂದೆಚ್ಚರಿಸಲು ಬಂದಿರುತ್ತೇನೆ. ಬೇಕಾದರೆ ನಮ್ಮ ಊರಿನಿಂದ ದೂರವಾಗಿ, ಜನರಿಲ್ಲದಿದ್ದಲ್ಲಿ, ಬಿದ್ದು ನಿನ್ನಂಥವರು ಸತ್ತರೂ ಸಂತೋಷ!" ಎಂದು ಮಿಸ್ ಡಾರ್ಟಲ್ಲಳು ಹೇಳುತ್ತಿದ್ದಾಗಲೇ ಹೊರಗಿನಿಂದ ಯಾರೋ ಬರುವ ಶಬ್ದ ಕೇಳಿಸಿತು. ಆ ಶಬ್ದ ಅವಳಿಗೂ ಕೇಳಿಸಿರಬೇಕು. ಆ ಶಬ್ದವು ಮಿ. ಪೆಗಟಿಯವರದಾಗಿರಬೇಕೆಂದು ನಾನು ಊಹಿಸಿದೆನು. ಅಷ್ಟರಲ್ಲೇ ಮಿಸ್ ಡಾರ್ಟಲ್ಲಳು ಎಮಿಲಿಯ ಮುಖಕ್ಕೆ ಉಗಿದು, ಬೈದುಕೊಂಡು, ಆ ಕೋಣೆಯಿಂದ ಹೊರಟು ಹೋದಳು. ಆಗಲೇ ಮಿ. ಪೆಗಟಿಯು ಆ ಕೋಣೆಯನ್ನು ಪ್ರವೇಶಿಸಿದರು.

"ಮಾವಾ" ಎಂಬ ಬಹು ಪ್ರೀತಿಯ ಸ್ವರವೊಂದು ಕೇಳಿಸಿತು. ನಾವಿಬ್ಬರೂ ನಮ್ಮ ಕೋಣೆಯನ್ನು ಬಿಟ್ಟು ಎಮಿಲಿಯಿದ್ದ ಕೋಣೆಗೆ ಹೋದೆವು. ಮಿ. ಪೆಗಟಿ ಎಮಿಲಿಯನ್ನು ತಬ್ಬಿ ಹಿಡಿದುಕೊಂಡು ಮುತ್ತು ಕೊಡುತ್ತಿದ್ದರು, ಅವರಿಬ್ಬರೂ ಅಳುತ್ತಿದ್ದರು.

ನಮ್ಮನ್ನು ಕಂಡು ಮಿ. ಪೆಗಟಿ –
"ಮಾಸ್ಟರ್ ಡೇವೀ, ದೇವರು ಕರುಣಾಮಯನು. ಅವನಿಗೆ ಸರಿ ಕಂಡ ರೀತಿಯಲ್ಲಿ ನನಗೆ ನನ್ನ ಗುರಿಯನ್ನು ತೋರಿಸಿರುವನು" ಎಂದು ಹೇಳಿ ಎಮಿಲಿಯನ್ನು ಎತ್ತಿಕೊಂಡು ಹೊರಟರು. ಅವರನ್ನು ಹಿಂಬಾಲಿಸುತ್ತಾ ನಾವೂ ಹೊರಟೆವು.

ಅಧ್ಯಾಯ ಐವತ್ತೊಂದು

ದೀರ್ಘತರ ಯಾತ್ರಾರಂಭ

ಈ ಮೊದಲು ಹೇಳಿದ ಸಂಗತಿಗಳು ನಡೆದ ಮರುದಿನ ಬೆಳಗ್ಗೆ ಮಿ. ಪೆಗಟಿ ನಮ್ಮ ಮನೆಗೆ ಬಂದರು. ಈ ದಿನಗಳಲ್ಲಿ ಅತ್ತೆ ಡೋರಾಳ ಶುಶ್ರೂಷೆಗಾಗಿ, ಹೆಚ್ಚಾಗಿ, ನನ್ನ ಮನೆಯಲ್ಲೇ ಇರುತ್ತಿದ್ದಳು. ಮಿ. ಪೆಗಟಿ ಬಂದಾಗ ಅತ್ತೆ ವಿಶ್ರಾಂತಿಗಾಗಿ ನಮ್ಮ ಹೂವಿನ ತೋಟದಲ್ಲಿ ತಿರುಗಾಡುತ್ತಿದ್ದಳು. ಎಮಿಲಿ ಸಿಕ್ಕಿದ ವರ್ತಮಾನವನ್ನೆಲ್ಲ ನಾನು ಹಿಂದಿನ ರಾತ್ರಿಯೇ ಅತ್ತೆಗೆ ತಿಳಿಸಿದ್ದುದರಿಂದ, ಅತ್ತೆಗೂ ನನಗೂ ಎಮಿಲಿಯ ಮುಖದಿಂದಲೇ ಮಿ. ಪೆಗಟಿಯು ತಿಳಿದಿರಬಹುದಾದ ವಿಷಯಗಳನ್ನು ತಿಳಿಯಲು ತುಂಬಾ ಕುತೂಹಲವಿತ್ತು. ಮಿ. ಪೆಗಟಿಗೂ ನಮ್ಮೊಡನೆ ಮಾತಾಡಿ ಅವರ ಮುಂದಿನ ಕೆಲವು ಕಾರ್ಯಗಳನ್ನು ಗೊತ್ತು ಮಾಡಿಕೊಳ್ಳಬೇಕಾಗಿದ್ದುದರಿಂದ, ಅವರು ನಮ್ಮೊಡನೆ ಮಾತಾಡಲು ತಯಾರಾಗಿದ್ದರು.

ಹಾಗಾಗಿ ಎಮಿಲಿಯ ವರ್ತಮಾನಗಳನ್ನು ತಿಳಿಯ ಬಯಸಿದೆವು. ಮಿ. ಪೆಗಟಿಯು ಹೇಳತೊಡಗಿದರು. ಲಿಟ್ಮರನು ತಿಳಿಸಿದ್ದ ವರ್ತಮಾನ ಬಹು ಅಂಶವೆಲ್ಲ ಸರಿಯೆಂದು ಅವರು ಒಪ್ಪಿದರು. ಲಿಟ್ಮರನಿಗೆ ಗೊತ್ತಿಲ್ಲದ ವಿಷಯವನ್ನು ಮಾತ್ರ ಅವರು ತಿಳಿಸಿದರು.

ಎಮಿಲಿ ಲಿಟ್ಮರನ ಬಂಧನದಿಂದ ಕಿಟಕಿಗಾಗಿ ಓಡಿಹೋದವಳು ಎಲ್ಲೆಲ್ಲೋ ಸುತ್ತಿ, ಕೊನೆಗೆ ಬೆಸ್ತರ ಬೀದಿ ಒಂದಕ್ಕೆ ತಲುಪಿದಳಂತೆ. ಅವಳು ಓಡುವಾಗಲೆಲ್ಲ ಸಮುದ್ರದ ದಿಕ್ಕೇ ಹಿಡಿದು, ಬೆಸ್ತರ ಬಿಡಾರಗಳನ್ನು ಹುಡುಕುತ್ತಾ ಓಡಿದ್ದರಿಂದ, ಹೀಗೆ ಬೆಸ್ತರ ಬಿಡಾರಗಳಿದ್ದಲ್ಲಿಗೆ ಅವಳು ತಲುಪಿದಳು. ಆದರೆ ಅಲ್ಲಿಗೆ ತಲುಪುವಾಗ ಅವಳು ಸೋತು, ಅವರ ಗುಡಿಸಿಲ ಬಳಿ ಮೂರ್ಛಿತಳಾಗಿಯೇ ಬಿದ್ದಳಂತೆ. ಅನಂತರ ಅವಳಿಗೆ ಪ್ರಜ್ಞೆ ಬರುವಾಗ ಅವಳು ಬೆಸ್ತರ ಶುಶ್ರೂಷೆಯಲ್ಲಿದ್ದಳಂತೆ. ಆಗಲೇ ಅವಳಿಗೆ ಬಹುವಾದ ಜ್ವರ ಬಂದು ಹುಚ್ಚೇ ಹಿಡಿದಿತ್ತಂತೆ. ಹೀಗೆ ಹುಚ್ಚಿನಲ್ಲಿ ಎಷ್ಟು ದಿನಗಳು ಕಳೆದವೆಂದು ಅವಳಿಂದ ಗೊತ್ತುಮಾಡಲು ಆಗಲಿಲ್ಲ. ಹುಚ್ಚು ಬಿಟ್ಟು, ಹುಷಾರಾಗುವಾಗ ಅವಳು ಇಂಗ್ಲೆಂಡು ಬಿಟ್ಟನಂತರ ಕಲಿತಿದ್ದ ಭಾಷೆಗಳೆಲ್ಲ ಮರೆತು ಹೋಗಿತ್ತು. ಬೆಸ್ತರ ಮನೆಗಳಲ್ಲಿ ಕೆಲ ಕಾಲವಿದ್ದು, ಅಲ್ಲಿಂದ ಹೇಗೋ ಒಬ್ಬ ಕುಲೀನ ಗೃಹಸ್ಥರ ಮನೆಗೆ ಹೋಗಿ ಸೇರಿದಳು. ಎಮಿಲಿಯ ಗುಣ, ನಡತೆ, ರೂಪ, ಪ್ರಾಯಗಳನ್ನೆಲ್ಲ ಕಂಡು ಆ ಮನೆಯವರು ಅವಳನ್ನು ತಮ್ಮ ಮಕ್ಕಳಂತೆ ಸಾಕಿದರು. ಈ ಸಮಯದಲ್ಲಿ ಪುನಃ ಅವಳಿಗೆ ಆರೋಗ್ಯ ಕೆಟ್ಟು ಹುಚ್ಚು ಹಿಡಿಯಿತು. ಈ ಹುಚ್ಚಿನಲ್ಲಿ ಎಷ್ಟು ದಿನ ಕಳೆದಳೆಂಬ ಜ್ಞಾನವೂ ಅವಳಿಗಿರಲಿಲ್ಲ. ಆದರೆ ಅದರಿಂದಲೂ ಅವಳು ಪಾರಾಗಿ, ಸುಖಹೊಂದಿದಳು.

ಈ ಸರ್ತಿ ಅವಳು ಹುಚ್ಚಿನಿಂದೆದ್ದದ್ದು – ಮಿ. ಪೆಗಟಿಯು ಹೇಳಿದಂತೆಯೇ ಹೇಳುವುದಾದರೆ, ಒಂದು ಆಶ್ಚರ್ಯದ ಕ್ರಮದಿಂದಾಗಿತ್ತು. ನೀಲ ವರ್ಣದ ಸಮುದ್ರವು ಪ್ರಶಾಂತವಾಗಿದ್ದು, ಸೂರ್ಯನ ಸಂಧ್ಯಾಕಿರಣಗಳು ತಂಪಾಗುತ್ತಾ ಬಂದು, ಸಮುದ್ರದ ಮೇಲಿನ ತಂಪಿನ ಗಾಳಿ ಎಮಿಲಿಯ ಮುಖದ ಮೇಲೆ ಬಿದ್ದಾಗ ಅವಳಿಗೆ ಹಠಾತ್ತಾಗಿ ಪ್ರಜ್ಞೆ ಬಂದಿತು. ಆಗ ಅವಳು ತನ್ನ ಯಾರ್ಮತ್ತಿನ ಮನೆಯಲ್ಲೇ ತಾನು ಇದ್ದದ್ದಾಗಿ ನಂಬುತ್ತಾ ತನ್ನ ಊರನ್ನು ಗುರುತಿಸಲೂ ತನ್ನ ಕಡೆಯವರನ್ನು ಹುಡುಕಲೂ ಮಲಗಿದ್ದ ಸ್ಥಳದಿಂದ ಹೊರಗೆ ನೋಡಿದಾಗ ದ್ರಾಕ್ಷಿ ಬಳ್ಳಿಗಳೂ ಹಸುರಾದ ಗುಡ್ಡೆಗಳೂ ತೋಪುಗಳು ಅಪರಿಚಿತ ಜನರೂ ಮಾತ್ರ ಕಾಣ ಸಿಕ್ಕಿ ಅವಳು ಅಳತೊಡಗಿದಳು. ಈ ಸರ್ತಿ ರೋಗದಿಂದ ಮೇಲೆದ್ದಾಗ ಹಿಂದೆ ಮರೆತುಹೋಗಿದ್ದ ಭಾಷೆಗಳೆಲ್ಲವೂ ಜ್ಞಾಪಕಕ್ಕೆ ಬಂದವು. ಎಮಿಲಿಯು ಖಾಯಿಲೆಯಿಂದೆದ್ದನಂತರ ತನ್ನ ಊರನ್ನೂ ತನ್ನ ಕಡೆಯ ಜನರನ್ನೂ ಬಯಸಿ, ಹಂಬಲಿಸುವುದನ್ನು ಕಂಡು ಆವರೆಗಿನ ರಕ್ಷಕನು ಕನಿಕರಪಟ್ಟು, ಅವಳನ್ನು ಪೇರಿಸ್ಸಿನವರೆಗೆ ತನ್ನ ಏರ್ಪಾಡುಗಳಿಂದ ಕಳುಹಿಸಿ ಅಲ್ಲಿ ಒಬ್ಬ ಶ್ರೀಮಂತ ಮತ್ತು ಕುಲೀನ ಗೃಹಿಣಿಯ ಸಹಾಯಕಳಾಗಿರುವಂತೆ ಕೆಲಸ ಮಾಡಿಕೊಟ್ಟನು. ಆ ಗೃಹಿಣಿ ತಾತ್ಕಾಲಿಕವಾಗಿ ಪೇರಿಸ್ಸಿನ ಹೋಟೆಲಿನಲ್ಲಿ ಬಿಡಾರ ಬಿಟ್ಟಿದ್ದುದರಿಂದ, ಎಮಿಲಿಯು ಅದೇ ಹೋಟೆಲಿನಲ್ಲಿ ತನ್ನ ಯಜಮಾನಿಯ ಜತೆಯಲ್ಲಿರುವಾಗಲೇ ಲಿಟ್ಮರನನ್ನು ಅದೇ ಹೋಟೆಲಿನಲ್ಲಿ ಕಂಡಳು.

ಲಿಟ್ಮರನನ್ನು ಕಂಡು ಎಮಿಲಿ ಹೆದರಿದಳು. ಅವಳ ಕೈಯ್ಯಲ್ಲಿದ್ದ ಸ್ವಲ್ಪ ಹಣದಿಂದ ಅವಳು, ಯಜಮಾನಿಗೆ ಹೇಳದೆ, ಗುಟ್ಟಾಗಿ ಡೋವರಿಗೆ ಬಂದು, ಡೋವರಿನಿಂದ ಲಂಡನ್ನಿಗೆ ಅನಂತರ ಬಂದಳು. ಎಮಿಲಿಗೆ ಬಾಲ್ಯದಲ್ಲಿ ಹೊಲಿಗೆ ಕೆಲಸ ಕಲಿಸಿದ್ದುದರಿಂದ ಲಂಡನ್ನಿನಲ್ಲಿ ಇವಳು ಒಬ್ಬ ಹೆಂಗುಸು ದರ್ಜಿಯ ಕೈಕೆಳಗೆ ಸಂಬಳಕ್ಕೆ ಹೊಲಿಗೆ ಕೆಲಸ ಮಾಡುತ್ತಾ ದಿನ ಕಳೆಯುತ್ತಿದ್ದಳು. ಇಲ್ಲಿ ಅವಳು ಸ್ವಲ್ಪ ಸುಖವಾಗಿದ್ದಳು. ಆದರೂ ಸತತವೂ ಅವಳಿಗೆ ತನ್ನ ಕಡೆಯವರ ನೆನಪೊಂದು ದುಃಖಕರವಾಗಿ ಬಾಧಿಸುತ್ತಲೇ ಇದ್ದು ಮನಸ್ಸಿನ ನೆಮ್ಮದಿಯನ್ನು ನಾಶಪಡಿಸುತ್ತಿತ್ತು. ಎಮಿಲಿಯು ಹೀಗೆ ದರ್ಜಿಯ ಅಂಗಡಿಯಲ್ಲಿ ಕೆಲಸಕ್ಕೆ ಇದ್ದಾಗಲೇ ಮಾರ್ಥಾಳು ಅವಳನ್ನು ಕಂಡು ಹಿಡಿದು ನಮಗೆ ತಿಳಿಸಿದ್ದಾಗಿದ್ದಿತು.

ಈ ವರದಿಯನ್ನು ಮಿ. ಪೆಗಟಿಯ ಮುಖದಿಂದಲೇ ಕೇಳಿದ್ದಿದ್ದರೆ ಆಗುವಷ್ಟರ ಸ್ಪಷ್ಟತೆ, ಸಂದರ್ಭಗಳಿಗೆ ತಕ್ಕಂಥ ಭಾವನೆ, ನನ್ನ ಈ ನಿರೂಪಣೆಯಲ್ಲಿ ಆಗಲಾರದು. ಎಮಿಲಿಯ ದುಃಖಗಳನ್ನು ಹೇಳುತ್ತಿದ್ದಾಗ ಅವರಿಗೆ ಕಣ್ಣೀರೇ ಬರುತ್ತಿತ್ತು. ಆ ಶ್ರೀಮಂತ ಗೃಹಸ್ಥರ ಮನೆಯಲ್ಲಿನ ಅವಳ ಜೀವನವನ್ನು ವರ್ಣಿಸುವಾಗ ಎಮಿಲಿಯ ಸಂತೋಷವನ್ನು ಊಹಿಸಿ, ಆ ಗೃಹಸ್ಥರ ಕರುಣಾಮಯ ಪೋಷಣೆಗಾಗಿ ಅವರು ಆನಂದಬಾಷ್ಪವನ್ನು ಸುರಿಸುತ್ತಿದ್ದರು. ಜನರ ಪ್ರೀತಿ, ಆದರಗಳನ್ನು ಆಕರ್ಷಿಸುತ್ತಿದ್ದ ಎಮಿಲಿಯ ಈ ಭಾಗದ

ಜೀವನವೃತ್ತಾಂತವನ್ನು ಹೇಳುವಾಗ ಅವರ ಮುಖ, ಕೈಕರಣ, ಸ್ವರ ಎಲ್ಲವೂ ಭಾಷೆಗೆ ರೂಪಕೊಟ್ಟು, ಭಾವನೆಗಳನ್ನು ಸ್ಪಷ್ಟಗೊಳಿಸುತ್ತಿದ್ದುವು. ಮಿ. ಪೆಗಟಿ ಮಾತು ನಿಲ್ಲಿಸಿದಾಗ ಅತ್ತೆ ಕೇಳಿದಳು –
"ಹಾಗಾದರೆ,ಮಿ. ಪೆಗಟಿ, ನಿಮ್ಮ ಮುಂದಿನ ಮಾರ್ಗವೋ ವ್ಯವಸ್ಥೆಗಳೋ ಇಂಥವು ಎಂದು ನಿಶ್ಚೈಸಲಾಗಿದೆಯೇನು?"
"ಆಗಿದೆ, ನಾವು ಊರು ಬಿಟ್ಟು ಹೋಗುತ್ತೇವೆ. ಎಮಿಲಿಯನ್ನು ಜನರು ಅಪಹಾಸ್ಯ ಮಾಡದಿರುವ ಪ್ರದೇಶಗಳಿಗೆ ಹೋಗುತ್ತೇವೆ. ಈ ಊರಿನಿಂದ ದೂರವಿರುವ, ಯೋಗ್ಯ ಸ್ಥಳಗಳು ಬೇಕಾದಷ್ಟಿವೆಯೆಂದು ಎಮಿಲಿಯೂ ನಾವು ಮಾತಾಡಿಕೊಂಡು ಆಸ್ಟ್ರೇಲಿಯಕ್ಕೆ ಹೋಗುವುದೆಂದು ನಿಶ್ಚಯವಾಗಿದೆ" ಎಂದಂದರು ಮಿ. ಪೆಗಟಿ.
"ಇಂಥ ಸಮಯದಲ್ಲೇ ಎಂದು ನಿಶ್ಚೈಸಿರುವಿರೇನು?"
"ಸಾಧಾರಣ ಆರು ವಾರ ಅಥವಾ ಎರಡು ತಿಂಗಳ ಒಳಗೆ ಇಲ್ಲಿಂದ ಆಸ್ಟ್ರೇಲಿಯಕ್ಕೆ ಒಂದು ಹಡಗು ಹೋಗುವುದಿದೆಯೆಂದು ಬಂದರಿನಲ್ಲಿ ವಿಚಾರಿಸಿ ತಿಳಿದಿದ್ದೇನೆ. ಅದರಲ್ಲಿ ಹೋಗಬೇಕೆಂದಿದ್ದೇನೆ."
"ಯಾರೆಲ್ಲಾ ಎಂಬುದು?"
"ಈಗಿನ ಆಲೋಚನೆ ಪ್ರಕಾರ ಎಮಿಲಿಯೂ ನಾನು ಮಾತ್ರ. ಮಿಸೆಸ್ ಗಮ್ಮಿಜ್ಜಳು ಒಬ್ಬಳು ಮಾತ್ರ ಒಂದು ಪ್ರತ್ಯೇಕ ಮನೆಯಲ್ಲಿ ಯಾರ್ಮತ್ತಿನಲ್ಲಿ ಇರುವುದಾಗಿಯೂ ಅವಳ ಖರ್ಚಿಗೆ ತಕ್ಕಷ್ಟು ಬೇಂಕಿನಲ್ಲಿ ಠೇವಣಾತಿ ಕಟ್ಟಿಡುವುದೆಂದೂ ನಿಶ್ಚೈಸಿದ್ದೇನೆ. ಮತ್ತೆ ಹೇಮನೂ ನನ್ನ ತಂಗಿ ಪೆಗಟಿಯೂ ಜತೆಯಲ್ಲೇ ಇರುತ್ತಾರೆ" ಎಂದು ಮಿ. ಪೆಗಟಿ ತಿಳಿಸಿ, ಒಂದು ಗುಟ್ಟಿನ ಸಂಗತಿಯನ್ನು ತಿಳಿಸಿದರು.

ಎಮಿಲಿಯು ಸ್ವಲ್ಪ ಶಾಂತವಾದನಂತರ ಅವಳು ಸ್ಟೀಯರ್ಫೋರ್ತನಿಂದ ಪಡೆದಿದ್ದ ಹಣ ಎಷ್ಟೆಂದು ವಿಚಾರಿಸಿ ತಿಳಿದು, ಆ ಹಣವೆನೆಲ್ಲ ಸ್ಟೀಯರ್ಫೋರ್ತನ ತಾಯಿಗೆ ಕಳುಹಿಸಬೇಕೆಂದು ನಿರ್ಧರಿಸಿದ್ದರು. ಇಷ್ಟು ಮಾಡದೆ ಅವರಿಗೆ ಎಷ್ಟಕ್ಕು ಸಮಾಧಾನ ಸಿಕ್ಕದು ಎಂದು ನಮ್ಮ ಹತ್ತಿರ ಹೇಳಿದರು. ಅವರ ಈ ಎಲ್ಲಾ ವ್ಯವಸ್ಥೆಗಳೂ ನ್ಯಾಯವಾದವುಗಳು ಎಂದು ನಾವು ಒಪ್ಪಿದೆವು.

ಮಿ. ಪೆಗಟಿಯು ಮರುದಿನವೇ ಯಾರ್ಮತ್ತಿಗೆ ಹೋಗಿ ಅಲ್ಲಿನ ಕೆಲಸಗಳನ್ನೆಲ್ಲಾ ಮಾಡಿ ಪೂರೈಸಿ, ಯಾರ್ಮತ್ತನ್ನೂ ಅಲ್ಲಿನ ಜನರನ್ನೂ ತಾನು ಆಖೈರಾಗಿ ನೋಡಿ ಬರುವುದೆಂದು ನಿಶ್ಚೈಸಿದರು. ಅವರ ಜತೆಯಲ್ಲಿ ನಾನೂ ಹೋದರೆ ಅವರಿಗೆ ತುಂಬಾ ಉಪಕಾರವಾಗುತ್ತದೆಂದು ನಾನೂ ಹೋಗುವಂತೆ ಕೇಳಿಕೊಂಡರು. ಮನೆಯಲ್ಲಿ ಡೋರಾಳು ಸ್ವಲ್ಪ ಸುಖಹೊಂದುತ್ತಿದ್ದುದರಿಂದ ನಾನು ಹೋಗಲೊಪ್ಪಿದೆನು.

ಮರುದಿನ ಬೆಳಿಗ್ಗೆ ನಾವು ಯಾರ್ಮತ್ತಿಗೆ ಹೋದೆವು. ಮಿ. ಪೆಗಟಿ ಅವರ ತಂಗಿ, ಹೇಮ್ ಮೊದಲಾದವರೊಡನೆ ತಮ್ಮ ಸಂಸಾರದ ಅಂತರಂಗದ ವಿಷಯಗಳನ್ನು ಮಾತಾಡುವುದಿದ್ದರೆ, ಆ ಕಾಲದಲ್ಲಿ ನಾನು ಅಲ್ಲಿರುವುದು ಸರಿಯಲ್ಲವೆಂದು, ನಾನು ಮಿ. ಓಮರರ ಅಂಗಡಿಗೆ ಹೋಗಿ, ಮಿ. ಪೆಗಟಿಯನ್ನೊಬ್ಬರನ್ನೇ ಅವರ ಮನೆಗೆ ಕಳುಹಿಸಿಕೊಟ್ಟೆನು.

ಮಿ. ಓಮರರು ಅವರ ಆರಾಮ ಕುರ್ಚಿಯಲ್ಲಿ ಕುಳಿತು ಸಿಗಾರ್ ಸೇದುತ್ತಿದ್ದರು. ನಾನು ಅವರಿಗೆ ನಮಸ್ಕರಿಸುತ್ತಾ ಒಳಗೆ ನುಗ್ಗಿದೆನು. ಅವರು ಮುಗುಳ್ನಗೆ ಆಡಿಕೊಂಡು –
"ತಮ್ಮಂಥಾ ಮಹಾನುಭಾವರನ್ನೂ ಸಹ ಕುಳಿತಲ್ಲಿಂದಲೇ ಸ್ವಾಗತಿಸುವ ಘನಸ್ಥಿಕೆ ನನಗೆ ಬಂದಿದೆ" ಎಂದನ್ನುತ್ತಾ ಉಸಿರೇ ಕಟ್ಟಿಹೋಗುವಷ್ಟು ನಗಾಡಿದರು. ಅವರು ನಗಾಡಿದುದರಲ್ಲಿ ಅವರ ಸ್ಥೂಲದೇಹದ ಮಾಂಸಖಂಡಗಳೆಲ್ಲ ತಾವೂ ಅವರ ಅಭಿಪ್ರಾಯವನ್ನು ಅನುಮೋದಿಸಿದಂತೆ ಅಲುಗಾಡಿದವು.

ನಾನು ಅವರಿಗೆ ಸಮಾಧಾನ ಹೇಳಿದೆ –
"ರೋಗಿಗಳೂ ಹಿರಿಯರೂ ಸಂದರ್ಭಕ್ಕೆ ತಕ್ಕಂತೆ ನಡೆಯಲು ಹಕ್ಕುಳ್ಳವರೇ ಅಷ್ಟೆ? ನೀವೆಲ್ಲಾ ಕ್ಷೇಮವಷ್ಟೆ?"
"ಓಹೋ ಕ್ಷೇಮವಪ್ಪಾ, ಕ್ಷೇಮ. ಈ ಖಾಸಶ್ವಾಸ ಒಂದು ಹೊರತು" ಎಂದು ಹೇಳಿ, ಸ್ವಲ್ಪ ಉಬ್ಬಸಬಿಟ್ಟು, ವಿಶ್ರಮಿಸಿಕೊಂಡು –
"ಈಗೀಗ ಕೆಲಸ ಸಾಗುವುದಿಲ್ಲ. ಹಾಗಾಗಿ ಕೆಲಸ ಮಾಡುವುದನ್ನೇ ಬಿಟ್ಟಿದ್ದೇನೆ. ಆದರೆ, ತುಂಬಾ ಓದುತ್ತೇನೆ" ಎಂದು ಹೇಳಿ ನಾನೇ ಸಂಚಿಕೆ, ಸಂಚಿಕೆಯಾಗಿ ಬರೆದು ಪ್ರಕಟಿಸಿದ್ದ ಒಂದು ಕಾದಂಬರಿಯ ಮೂರು ಸಂಚಿಕೆಗಳನ್ನು ಮುಟ್ಟಿ ತೋರಿಸಿದರು, ಅನಂತರ ಅಂದರು –
"ನೋಡಿ ಮಿ. ಕಾಪರ್ಫೀಲ್ಡ್, ಆ ಪುಸ್ತಕಗಳನ್ನು ಓದಿ, ಅದನ್ನು ಎದುರಿಟ್ಟು ಕುಳಿತು, ಅವುಗಳನ್ನೆಲ್ಲ ಬರೆದವರು ನಮ್ಮ ಹಳೇ ಸ್ನೇಹಿತರೆಂದು ಗ್ರಹಿಸುವುದಿದೆಯಲ್ಲಾ ಅದು ಬಹಳ ಸಂತೋಷದ ಸಂಗತಿ" ಅಂದರು. ಆಗ ಅವರ ಕಣ್ಣುಗಳನ್ನು ನೋಡಿದ್ದರೆ ಅವರ ಉತ್ಸಾಹ, ಸಂತೋಷ ಎಷ್ಟಿತ್ತೆಂದು ಗೊತ್ತಾಗುತ್ತಿತ್ತು.

"ನಿಮ್ಮಂಥವರು ಅಪೂರ್ವ, ಮಿ. ಓಮರ್. ಮನುಷ್ಯರಿಗೆ ಇರಬೇಕಾದುದೇನೋ ಈ ಸ್ವಭಾವವೇ ಆದರೂ ನಿಮ್ಮಂಥವರನ್ನು ಕಾಣುವುದು ಅಪೂರ್ವ. ನಮಗೆ ಹೆಚ್ಚಾಗಿ ಸಿಕ್ಕುವುದು ಅವರವರ ದುಃಖಗಳನ್ನು ಎಡೆಬಿಡದೆ ತೋಡಿಕೊಳ್ಳುವವರೇ ಆಗಿದ್ದಾರೆ!" ಎಂದು ನಾನಂದೆ.

ಮಿ. ಓಮರರಿಗೆ ನನ್ನ ಅಭಿಪ್ರಾಯ ಸರಿಯೆಂದು ತೋರಲಿಲ್ಲ. ಅವರು ತಲೆ ಅಡ್ಡ ಅಲ್ಲಾಡಿಸುತ್ತಾ ಅಂದರು –
"ಅದೆಲ್ಲಾ ನನ್ನ ಹತ್ತಿರ ಹೇಳಬೇಡಿ ಸರ್. ಈ ದಪ್ಪದ ದೇಹ, ಈ ಉಸಿರು, ಇವೆರಡಲ್ಲದಿದ್ದರೆ ನಾನು ಮಾಡುವುದೇ ಬೇರೆಯಿತ್ತು! ಆದರೆ ನಾನು ಅವುಗಳಿಗೂ ಹೆದರುವವನಲ್ಲ, ನೋಡಿ. ಅವೂ ಸಹ ನನ್ನ ಸಂತೋಷಕ್ಕಾಗಿಯೇ ಬಂದಿವೆ. ಇಲ್ಲದಿದ್ದರೆ, ನೋಡೀ ನಾನು ಈ ಕುರ್ಚಿ ಬಂಡಿಯಲ್ಲಿ ಕುಳಿತು ಮರಿಯಾನೆ ಮೊಮ್ಮಗನಿಂದ ನೂಕಿಸಿಕೊಂಡು ಸಂತೋಷಪಡುವುದಕ್ಕಿರ್ತ್ತೇನು? ಇಲ್ಲಿ ಕೇಳೀ – ಈ ಕುರ್ಚಿಗೆ ಚಕ್ರಗಳಿವೆ. ನೂಕಿದ್ರೆ ಸರ್ರನೆ ಹೋಗುತ್ತೆ. ಇದೆಲ್ಲಾ ಒಂದು ಸುಖಾ ತಾನೆ? ಈ ನೇವಸವಿಲ್ಲದಿದ್ದರೆ ಸಿಗಾರ್ ಬರುತ್ತಿತ್ತೇನು? ಅದನ್ನು ಮೂಸಿ ಸಹ ನೋಡುತ್ತಿರಲಿಲ್ಲ" ಹೀಗೆಲ್ಲಾ ಹೇಳಿ, ದಮ್ಮು ಕಟ್ಟಿ ನೆಗಾಡಿ, ಅಳ್ಳೆ ಕೋಸಿಕೊಂಡು, ಸ್ವಲ್ಪ ಕಷ್ಟಪಟ್ಟರು. ಅದರೆ, ಎರಡು ನಿಮಿಷದಲ್ಲೇ ಪೂರ್ವದ ಉತ್ಸಾಹೀ ಹರ್ಷಚಿತ್ತ ಓಮರರ್ ಆಗಿಬಿಟ್ಟರು.

ಓಮರರಿಗೆ ನಾನು ಎಮಿಲಿಯನ್ನು ಕುರಿತಾಗಿ ತಿಳಿದಿದ್ದ ವರ್ತಮಾನವನ್ನೆಲ್ಲ ಹೇಳಿದೆ. ಈ ವರ್ತಮಾನ ಕೇಳಿ ಅವರಿಗೆ ಬಹಳ ಸಂತೋಷವಾಯಿತು. ಎಮಿಲಿಯ ಬಾಲ್ಯದ ಚಂದದ ಕಥೆಗಳನ್ನು ಹೇಳಿ ನಗಾಡಿದರು. ಅವಳ ಮುಂದಿನ ಸುಖವನ್ನು ಬಯಸಿ ಮಾತಾಡಿದರು. ಅವರ ಎಲ್ಲಾ ಮಾತುಗಳಲ್ಲೂ ಶಾಂತಿ, ತೃಪ್ತಿ, ಹರ್ಷ ಇವೇ ಕಂಡು ಬರುತ್ತಿದ್ದುವು. ಅವರ ಯಾವ ಮಾತಿನಲ್ಲೂ ದಯಾ, ದಾಕ್ಷಿಣ್ಯ, ಕರುಣೆ ಹೊರತಾಗಿ ಮತ್ತೇನೂ ಇರುತ್ತಿರಲಿಲ್ಲ. ಯಾರ ಮೇಲೂ ಕಟುವಾಗಿ ಯಾವ ತಪ್ಪನ್ನು ಅವರು ಆರೋಪಿಸಲಿಲ್ಲ. ನನ್ನ ಮಾತುಗಳನ್ನು ಕೇಳಿ ಸಂತೋಷದಿಂದ –
"ನೀವೆಲ್ಲಾ ಸೇರಿ ಮಿ. ಪೆಗಟಿಯವರಿಗೆ, ಅವರ ಸಂಸಾರಕ್ಕೆ, ಮತ್ತು ಅವರನ್ನು ಬಲ್ಲ ನಮ್ಮೆಲ್ಲರಿಗೆ ಎಮಿಲಿಯನ್ನು ಹುಡುಕಿಕೊಟ್ಟು ಬಹಳ ಉಪಕಾರ ಮಾಡಿದಿರಿ. ನಿಮ್ಮೆಲ್ಲರ ಜತೆ ಸೇರಿ ನಾನೂ ಏನಾದರೂ ಸಹಾಯ ಮಾಡೋಣವೆಂದರೆ ನಾನು ಈ ಕುರ್ಚಿ ಹಿಡಿದಿದ್ದೇನೆ. ನಿಮ್ಮ ಆಲೋಚನೆ, ಕಾರ್ಯ ಎಲ್ಲವು ಬಹು ಯೋಗ್ಯವಾದವುಗಳೇ ಸರಿ. ಈ ಕಾರ್ಯಗಳ ಜತೆಯಲ್ಲೇ ನಮಗೆ ಇಷ್ಟೊಂದು ಸಹಾಯಮಾಡಿದ ಮಾರ್ಥಾಳನ್ನು ಕುರಿತೂ ಸ್ವಲ್ಪ ಯೋಚಿಸಬೇಡವೇ? ನಮ್ಮ ಹೆಂಗುಸರ ಕಥೆ ಕೇಳ್ತೀರಾ! ಅವರೆಲ್ಲ ಎದುರಿನಿಂದ ಮಾರ್ಥಾ ಪೋಲೀ ಎಂದು ಹೇಳಿಕೊಂಡು, ಹಿಂಬಾಗಿಲಿನಿಂದ ಅವಳಿಗೆ ಮಾಡುವ ಉಪಕಾರ ತುಂಬಾ ಇದೆ! ಏನು ಮಾಡೋದಕ್ಕೆ ಆಗುತ್ತೆ! ನಮ್ಮ ಮಧ್ಯೆ ಆಡಿ, ಬೆಳೆದ ಹುಡುಗೀನ ಬಿಡೋದಕ್ಕೆ ಆಗುತ್ತದೆಯೇ? ಮಾರ್ಥಾಳಿಗೊಂದು ಹಣದ – ಫಂಡಿನ, ವ್ಯವಸ್ಥೆ ಮಾಡ್ಸೀ ಸರ್, ಇನ್ನಾದರೂ ಅವಳು ಮರ್ಯಾದೆಯಿಂದ ಬದುಕಲಿ. ನೀವೇನಾದರೂ ಅಂಥ ಏರ್ಪಾಡು ಮಾಡಿದರೆ, ನನ್ನನ್ನು ಬಿಟ್ಟು ಬಿಡಬೇಡಿ, ನನ್ನನ್ನೂ ಸೇರಿಸಿಕೊಳ್ಳಬೇಕು. ಒಂದಂಶ ಹಣ ನನ್ನ ಪಾಲಿನದು ನಾನು ಕೊಡಬೇಕೂಂತ ಇದ್ದೇನೆ, ಸರ್" ಎಂದರು.

ಮಿ. ಓಮರರ ಪಾಪ. ಪುಣ್ಯ, ಅನುಕಂಪ, ಕರುಣೆಗಳನ್ನು ಯೋಚಿಸಿದಷ್ಟು ಸಂತೋಷವಾಗುತ್ತದೆ. ಮಾರ್ಥಾಳ ಬಗ್ಗೆ ಅವರು ಸೂಚಿಸಿದಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಮೊದಲೇ ನಿಶ್ಚೈಸಿದುದನ್ನೂ ಅವರಿಗೆ ತಿಳಿಸಿದೆ, ಅಗತ್ಯ ಬಿದ್ದಾಗ ಅವರ ಅಂಶದ ಹಣ ತೆಗೆದುಕೊಂಡು ಹೋಗಲು ನಾನು ಬರುವೆನಾಗಿ ಹೇಳಿ, ಅಲ್ಲಿಂದ ಹೇಮನ ಮನೆಗೆ ಹೋದೆನು.

ಹೇಮನೂ ಪೆಗಟಿಯೂ ಹೇಮನ ಹೊಸ ಮನೆಯಲ್ಲಿ ವಾಸ ಮಾಡುತ್ತಿದ್ದರು. ಮಿ. ಬಾರ್ಕಿಸನಿಂದ ಬಂದಿದ್ದ ಮನೆ, ಗಾಡಿ, ಕುದುರೆಯನ್ನೆಲ್ಲ ಇನ್ನೊಬ್ಬ ಗಾಡಿಯವನಿಗೆ ಪೆಗಟಿ ಬಾಡಿಗೆಗೆ ಕೊಟ್ಟಿದ್ದಳು. ನಾನು ಅವರಿಬ್ಬರಿಗೂ ಎಮಿಲಿಯ ಕಡೆಯ ವರ್ತಮಾನವನ್ನೆಲ್ಲ ತಿಳಿಸಿದೆನು. ಹೇಮನು ನನ್ನ ಮಾತುಗಳನ್ನು ಕೇಳುತ್ತಾ ಸಾಧಾರಣ ಅಳುವ ಸ್ಥಿತಿಗೆ ಬಂದನು. ಅವನು ಅಳುಮುಖದಿಂದಲೇ –
"ನೀವು ಅವಳನ್ನು ನೋಡಿದ್ದೀರಾ?" ಎಂದು ನನ್ನ ಮಾತಿನ ಮಧ್ಯವೇ ಕೇಳಿದನು.
"ಆ ಅರೆಬೆಳಕಿನಲ್ಲಿ ಸ್ವಲ್ಪ ಮಾತ್ರ ನೋಡಿದ್ದೇನೆ. 'ಮಾವಾ' ಎಂದನ್ನುತ್ತಾ ಸ್ಮೃತಿ ತಪ್ಪಿ ಮಿ. ಪೆಗಟಿ ಕೈಗೆ ಬೀಳುವಾಗ ಮಾತ್ರ" ಎಂದು ನಾನಂದೆನು.
"ನಾವೆಲ್ಲಾ ಹೋಗಿ ನೋಡಿದರೆ ಅವಳ ದುಃಖ ಮತ್ತಷ್ಟು ಹೆಚ್ಚಬಹುದೂಂತ ಕಾಣುತ್ತದಲ್ಲವೆ, ಮಾಸ್ಟರ್ ಡೇವಿ?" ಎಂದು ಕೇಳಿದ ಹೇಮ್.
"ಹೌದು – ನಮ್ಮೆಲ್ಲರ ಅಭಿಪ್ರಾಯ, ಭಾವನೆಗಳಿಗೆ ಅವಳು ಬೆಲೆ ಕೊಡುವಷ್ಟು ಇನ್ಯಾರ ಅಭಿಪ್ರಾಯ, ಭಾವನೆಗಳಿಗೂ ಅವಳು ಕೊಡುವುದಿಲ್ಲ. ಆದ್ದರಿಂದ ನಮ್ಮನ್ನು ಕಂಡರೆ ಅವಳಿಗೆ ಸಹಿಸಲಾರದ ದುಃಖವೇ ಆಗಬಹುದೆಂದು ಹೆದರಿಯೇ ನಾನೂ ಸಹ ಅವಳನ್ನು ಸರಿಯಾಗಿ ನೋಡಿರುವುದಿಲ್ಲ" ಅಂದೆನು ನಾನು.
"ಹಾಗಾದರೆ ಮಾಸ್ಟರ್ ಡೇವಿ, ಅವಳು ಆಸ್ಟ್ರೇಲಿಯಕ್ಕೆ ಹೋಗುವ ಮೊದಲು ನನ್ನ ನಾಲ್ಕು ಮಾತುಗಳನ್ನು ಅವಳಿಗೆ ದಯಮಾಡಿ ತಿಳಿಸಬೇಕು. ನಾನೇ ಆ ಮಾತುಗಳನ್ನು ಹೇಳುವುದಕ್ಕಿಂತಲೂ ನೀವು ಹೇಳಿದರೆ ಹೆಚ್ಚು ಸರಿಯಾಗಬಹುದು. ನೀವು ವಿದ್ಯಾವಂತರು, ಮಾತಾಡಬಲ್ಲವರು, ಅನುಭವಸ್ಥರೂ ಆಗಿರುವಿರಿ." ಇಷ್ಟು ಹೇಳಿ ಹೇಮನು ಸ್ವಲ್ಪ ಆಲೋಚಿಸಿದನು, ಅನಂತರ ಹೇಳಿದನು –
"ಎಮಿಲಿ ಮೇಲೆ ನನಗೆ ಕೋಪವಿಲ್ಲ – ಪ್ರೀತಿಯಿದೆ, ಕರುಣೆಯಿದೆ. ಅವಳು ಸಿಕ್ಕಿಬಿದ್ದು ಹಾಗೆ ಮಾಡಿದಳು ಹೊರತಾಗಿ ನನ್ನನ್ನು ವಂಚಿಸಬೇಕೆಂದು ಮಾದಿದ್ದಲ್ಲವೆಂದು ನನಗೆ ಗೊತ್ತಿದೆ. ಅವಳನ್ನು ಬಾಲ್ಯದಿಂದ ಸಾಕಿದವರಿಗೂ ಅವಳ ಕಾರ್ಯದಲ್ಲಿ ಜವಾಬ್ದಾರಿಯಿದೆ, ಅವಳ ತಪ್ಪಿನಲ್ಲಿ ಭಾಗವಿದೆ. ನಾನೂ ಸಹ ಈ ರೀತಿಯಲ್ಲಿ ಅವಳ ಜತೆಯಲ್ಲೇ ತಪ್ಪಿತಸ್ಥನು. ನಾನೇ ಅವಳನ್ನು ಮದುವೆಯಾಗುವುದೆಂದು

ಅಷ್ಟೊಂದು ಮುಂದಾಗಿ ಹೇಳಿಕೊಂಡು ಬಂದದ್ದರಿಂದ ಮಾತ್ರ ಅವಳು ತನ್ನ ಮನಸ್ಸಿನ ಚಾಂಚಲ್ಯ, ಕಷ್ಟ, ಪರಪುರುಷನ ಆಕರ್ಷಣಗಳನ್ನು ಹೇಳದೇ ಉಳಿದಳೇ ಹೊರತು, ಇಲ್ಲದಿದ್ದರೆ ಅವಳ ಕಷ್ಟಗಳನ್ನು ನನ್ನಲ್ಲಿ ಹೇಳಿಕೊಳ್ಳುತ್ತಿದ್ದಳು. ನಾನು ಅವಳನ್ನು ಮೊದಲಿನಂತೆಯೇ ತಿಳಿದುಕೊಂಡಿದ್ದೇನೆ. ಅವಳದು ಯಾವ ತಪ್ಪೂ ಇಲ್ಲ. ಅವಳು ಯಾರ ಕ್ಷಮಾಪಣೆ ಕೇಳುವ ಅಗತ್ಯವೂ ಇಲ್ಲ. ನಾನು ಅವಳನ್ನು ಸದಾ ಪ್ರೀತಿಸಿಯೇ ಇದ್ದೇನೆ, ಇನ್ನೂ ಹಾಗೆಯೇ ಇರುತ್ತಾ ನಾನು ಯಾರನ್ನೂ ಇನ್ನು ಮದುವೆಯಾಗುವುದಿಲ್ಲ. ಇದನ್ನೆಲ್ಲಾ ದಯಮಾಡಿ ತಿಳಿಸಬೇಕು."

ಹೇಮನ ಮಾತುಗಳನ್ನು ಕೇಳಿ ನನಗೆ ದುಃಖವಾಯಿತು. ಅವನ ಮೃದುಹೃದಯದ ಪರಿಚಯ ನನಗೆ ಮತ್ತಷ್ಟು ಆಯಿತು. ಅವನ ಮಾತುಗಳನ್ನೆಲ್ಲ ಸರಿಯಾಗಿ ಎಮಿಲಿಗೆ ತಿಳಿಸುವೆನಾಗಿ ಒಪ್ಪಿಕೊಂಡೆನು.

ಹೇಮನ ಮನೆಯಿಂದ ಹೇಮನೂ ನಾನೂ ಮಿ. ಪೆಗಟಿಯ ಮನೆಗೆ ಹೋದೆವು. ಆ ಮನೆಯಲ್ಲಿ ಮಾರಬಹುದಾಗಿದ್ದ ಸಾಮಾನುಗಳನ್ನೆಲ್ಲಾ ಮಾರಿದ್ದರು. ಸಾಗಿಸಿಕೊಂಡು ಹೋಗಬಹುದಾಗಿದ್ದವುಗಳನ್ನೆಲ್ಲ ಗಂಟು ಕಟ್ಟಿ ಮನೆಯ ಎದುರು ಭಾಗದಲ್ಲಿ ಒಂದೇ ಕಡೆ ಇಟ್ಟಿದ್ದರು. ನಾನೂ ಎಮಿಲಿಯೂ ಜತೆಯಲ್ಲೇ ಕುಳಿತಿರುತ್ತಿದ್ದ ಆ ಪೆಟ್ಟಿಗೆಯನ್ನು ಅವರ ಜತೆಯಲ್ಲಿ ತೆಗೆದುಕೊಂಡು ಹೋಗುವುದಾಗಿ ಮಿ. ಪೆಗಟಿ ತಿಳಿಸಿದರು.

ಮಿಸೆಸ್ ಗಮ್ಮಿಜ್ಜಳು ಯಾರ್ಮತ್ತಿನಲ್ಲೇ ಉಳಿಯಬೇಕೆಂದು ಮಿ. ಪೆಗಟಿ ಎಷ್ಟು ಹೇಳಿದರೂ ಗಮ್ಮಿಜ್ಜಳು ಕೇಳಲಿಲ್ಲ. ಅವಳು ಹಟ ಹಿಡಿದು ಪ್ರಾರ್ಥಿಸಿಕೊಂಡು, ಮೃದು ಹೃದಯದ ಮಿ. ಪೆಗಟಿಯ ಮನ ಒಲಿಸಿಕೊಂಡು, ಕೊನೆಗೆ ಮಿಸೆಸ್ ಗಮ್ಮಿಜ್ಜಳೂ ಆಸ್ಟ್ರೇಲಿಯಾಕ್ಕೆ ಮಿ. ಪೆಗಟಿಯ ಜತೆಯಲ್ಲಿ ಹೋಗುವುದೆಂದು ನಿಶ್ಚಯವಾಯಿತು.

ಮರುದಿನ ಬೆಳಗ್ಗೆ ಮಿ. ಪೆಗಟಿ ಮತ್ತು ನಾನು ಲಂಡನ್ನಿಗೆ ಹೋಗುವ ಬಂಡಿಯಲ್ಲಿ ಕುಳಿತು ಹೊರಟೆವು. ನಮ್ಮ ಬಂಡಿಯ ಹಿಂಭಾಗದಲ್ಲಿ ತನ್ನ ಸಾಮಾನುಗಳನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡು ಮಿಸೆಸ್ ಗಮ್ಮಿಜ್ಜಳು ಸಂತೋಷದಿಂದ ಕುಳಿತಿದ್ದಳು.

ಅಧ್ಯಾಯ ಐವತ್ತೆರಡು

ಆಸ್ಫೋಟನದಲ್ಲಿ ನಾನು ಸಹಾಯಕನಾಗುತ್ತೇನೆ

ಮಿ. ಮೈಕಾಬರರು ಗೊತ್ತುಮಾಡಿದ್ದ ದಿನ ಬಂತೇ ಬಂತು. ಮಿ. ಡಿಕ್ಕರು ಮತ್ತು ನಾನೂ ಮಾತ್ರ ಕೇಂಟರ್ಬರಿಗೆ ಹೋಗುವುದೆಂದು ಮೊದಲು ನಿಶ್ಚಯ ಮಾಡಿದ್ದರೂ ಡೋರಾಳ ಒತ್ತಾಯಕ್ಕಾಗಿ ಅತ್ತೆಯೂ ನಮ್ಮ ಜತೆಯಲ್ಲಿ ಕೇಂಟರ್ಬರಿಗೆ ಬಂದಳು. ಡೋರಾಳಿಂದ ಇನ್ನೇನೂ ನಮಗೆ ಸಹಾಯ ಮಾಡಲು ಅನುಕೂಲವಿಲ್ಲದೆ ಆಗಿದ್ದುದರಿಂದ ಅತ್ತೆಯನ್ನು ಅವಳ ಒತ್ತಾಯದಿಂದಲಾದರೂ ಕಳುಹಿಸಿದರೆ ನಮಗೆ ಉಪಕಾರವಾಗಬಹುದೆಂದು ಅವಳು ಹಾಗೊಂದು ಒತ್ತಾಯ ಮಾಡಿದಳು. ಎಂದಿಗಿಂತಲೂ ತಾನು ಎಷ್ಟೆಷ್ಟೋ ಹುಷಾರಾಗಿರುವುದಾಗಿ ಹೇಳಿ, ನಾವು ಸ್ವಲ್ಪ ಹಿಂಜರಿಯುವುದನ್ನು ನೋಡಿ ಅವಳು ಅಳಲು ಪ್ರಾರಂಭಿಸಿದಳು. ಹಾಗಾಗಿ ನಾವು ಮೂವರು ನಮ್ಮ ಮನೆಯಿಂದಲೂ ಟ್ರೇಡಲ್ಸನು ಅವನ ಮನೆಯಿಂದಲೂ ಹೊರಟು ಕ್ಲುಪ್ತ ಸಮಯದಲ್ಲಿ ಕೇಂಟರ್ಬರಿ ಹೋಟೆಲಿಗೆ ತಲಪಿದೆವು.

ಮಿ. ಮೈಕಾಬರರು ನಮ್ಮನ್ನು ಬಹು ಗೌರವದಿಂದ ಸ್ವಾಗತಿಸಿ, ಮಿ. ಡಿಕ್ಕರನ್ನು ಪ್ರತ್ಯೇಕವಾಗಿ "ಹೇಗಿದ್ದೀರಿ ಮಿ. ಡಿಕ್ಸನ್" ಎಂದು ಕೇಳಿದರು. ಮಿ. ಡಿಕ್ಕರಿಗೆ ಬಹಳ ಸಂತೋಷವಾಯಿತು. ಮಿ. ಮೈಕಾಬರರ ಕೈ ಕುಲುಕುತ್ತಾ –
"ನಿಮಗೆ ಊಟವಾಗಿದೆಯೇ ಮಿ. ಮೈಕಾಬರ್" ಎಂದು ಗಂಭೀರವಾಗಿ ವಿಚಾರಿಸಿದರು. ಹಿಂದಿನ ಒಂದು ದಿನ ಮಿ.ಮೈಕಾಬರ್ ಉರೆಯನ ವಿಷಯದಲ್ಲಿ ತಾನು 'ಆ ಒಂದು ಕೆಲಸವಾಗದೆ' ಏನನ್ನು ಮುಟ್ಟೆನು ಎಂದು ಹೇಳಿ ನಮ್ಮಮನೆಯಿಂದ ಊಟಮಾಡದೇ ಹೋಗಿದ್ದ ಕಾರಣ ಅವರು ಹಾಗೆ ಕೇಳಿರಬಹುದು. ಆದರೆ ಅತ್ತೆ ಸ್ವಲ್ಪ ಓರೆಯಲ್ಲಿ ಮಿ. ಡಿಕ್ಕರನ್ನು ಗದರಿಸಿದ್ದರಿಂದ ಅವರು ಮೌನವಾದರು.

ಮಿ.ಮೈಕಾಬರರಂತೂ ಉತ್ತರವನ್ನು ಕೊಟ್ಟರು –
"ಪ್ರಪಂಚವನ್ನೇ ನನಗೆ ಬಹುಮಾನವಾಗಿ ಕೊಟ್ಟು 'ಊಟ ಮಾಡಯ್ಯ' ಅಂದರೂ ನಾನು ಊಟಮಾಡಲಾರೆ. ಹಸಿವೆಗೂ ನನಗೂ ಪರಿಚಯ ಮರೆತು ಅನೇಕ ದಿನಗಳಾದುವು" ಎಂದಂದರು.

ಅನಂತರ ಟ್ರೇಡಲ್ಸನೂ ಅವರೂ ಹೋಟೆಲಿನ ಒಂದು ಕೋಣೆಯೊಳಗೆ ಹೋಗಿ ಮುಂದಿನ ಕಾರ್ಯಗಳನ್ನು ಕುರಿತು ಗುಟ್ಟಾಗಿ ಮಾತಾಡಿಕೊಂಡರು. ಅನಂತರ ಮಿ. ಮೈಕಾಬರರು ಅವರ ಆಫೀಸಿಗೆ ಹೋದರು. ಅವರು ಹೋಗಿ ಐದು ಮಿನಿಟುಗಳನಂತರ ನಾವು ಅವರ ಆಫೀಸಿಗೆ ಹೋಗಬೇಕೆಂದು ನಮ್ಮೊಳಗೆ ಏರ್ಪಾಡಿಸಿಕೊಂಡಿದ್ದೆವು. ನಾವು ನಾಲ್ವರೂ ಕ್ಲುಪ್ತ ಸಮಯಕ್ಕೆ ಮಿ. ವಿಕ್ಫೀಲ್ಡರ ಮನೆಗೆ ತಲುಪಿದೆವು.

ಮಿ. ವಿಕ್ಫೀಲ್ಡರ ಮನೆಯಲ್ಲೇ ಅವರ ವಕೀಲಿ ಆಫೀಸೂ ಇದ್ದುದರಿಂದ, ಎದುರಿನ ಕೋಣೆಯಲ್ಲಿ ಮಿ. ಮೈಕಾಬರರು ಕುಳಿತುಕೊಂಡು ಏನನ್ನೋ ಬರೆಯುತ್ತಿದ್ದರು. ಅವರು ನಮ್ಮನ್ನು ನೋಡಿಯೂ ಕಾಣದವರಂತೆ ನಟಿಸಿ ಕುಳಿತಿದ್ದರೆಂದು ನನಗೆ ಗೊತ್ತಿತ್ತು. ಅವರ ಆಫೀಸ್ ಕೆಲಸ ಕಾಲದಲ್ಲಿ ರೂಲ್ ದೊಣ್ಣೆಯೊಂದು, ಅವರ ಎದೆಯಲ್ಲಿ ಇರಿದಿದ್ದ ಕಠಾರಿಯ ಹಿಡಿಯಂತೆ ಸ್ವಲ್ಪಾಂಶ ಕಾಣುವ ಯಾವತ್ತಿನ ಕ್ರಮದಂತೆ, ಇಂದೂ ಆ ರೂಲ್ ದೊಣ್ಣೆಯು ಕಾಣುತ್ತಿತ್ತು. ನಾವು ಪ್ರಥಮವಾಗಿ ಅವರ ಆಫೀಸಿಗಾಗಿ ದಾಟಬೇಕಾಗಿದ್ದುದರಿಂದ, ಅವರ ಸಮೀಪವಾದಾಗ ಅವರನ್ನು ಕಂಡು, ನಾನು –
"ನಮಸ್ಕಾರ, ಮಿ. ಮೈಕಾಬರ್, ಸೌಖ್ಯವೇ? ಎಂದು ಕೇಳಿದೆ.
"ಕ್ಷೇಮ, ಥೇಂಕ್ಸ್. ನೀವೂ ಕ್ಷೇಮ ತಾನೆ?" ಅಂದರು ಅವರು.
"ಮಿಸ್ ವಿಕ್ಫೀಲ್ಡರು ಮನೆಯಲ್ಲಿದ್ದಾರೇನು?"
"ಇರಬೇಕು – ಅವರ ತಂದೆಯವರು ವಾತರೋಗದಿಂದ ಮಲಗಿದ್ದಾರೆ. ಅವರ ಸಮೀಪ ಮಗಳು ಇರಬೇಕು" ಎಂದಂದು, ನಮ್ಮನ್ನು ಕರೆದು, ಮಿ. ವಿಕ್ಫೀಲ್ಡರ ಮನೆ ಬೈಠಖಾನೆಗೆ ಕರೆದುಕೊಂಡು ಹೋಗಿ ಅಲ್ಲಿ ನಮ್ಮನ್ನು ಆಸನಗಳಲ್ಲಿ ಕೂರಿಸಿದರು. ಅನಂತರ ಒಳಗಿನವರಿಗೆ ಕೇಳುವಷ್ಟು ದೊಡ್ಡ ಮತ್ತು ಗಂಭೀರ ಸ್ವರದಿಂದ –
"ಮಿಸ್ ಟ್ರಾಟೂಡ್, ಮಿ. ಡೇವಿಡ್ ಕಾಪರ್ಫೀಲ್ಡ್, ಮಿ.ಥಾಮಸ್ ಟ್ರೇಡಲ್ಸ್ ಮತ್ತು ಮಿ. ಡಿಕ್ಸನ್ನರವರು ಭೇಟಿಗಾಗಿ ದಯಮಾಡಿಸಿದ್ದಾರೆ" ಎಂದು ಹೇಳಿದರು.

ಒಳಗಿನಿಂದ ಏಗ್ನೆಸ್ಸಳು ಬಂದು ನಮ್ಮನ್ನು ನೋಡಿ, ಸಂತೋಷದಿಂದ ಸ್ವಾಗತಿಸಿ ಮಾತಾಡುತ್ತಾ ಕುಳಿತಳು. ಅಷ್ಟು ಹೊತ್ತಿಗೆ ಉರೆಯನೂ ಅಲ್ಲಿಗೆ ಬಂದನು. ಅವನಿಗೂ ನಮಗೂ ಸಾಂಪ್ರದಾಯಿಕ ಕುಶಲ ಪ್ರಶ್ನೆಗಳು ನಡೆದುವು. ಏಗ್ನೆಸ್ಸಳು ನಮ್ಮ ಜತೆಯಲ್ಲಿದ್ದದ್ದನ್ನು ನೋಡಿಯೋ ಏನೋ ಉರೆಯ ಮಿ. ಮೈಕಾಬರರನ್ನು ನೋಡಿ ಏಕವಚನದಿಂದ –
"ಮೈಕಾಬರ್, ನೀನು ಹೋಗಿ ನನ್ನ ತಾಯಿಯನ್ನು ಕರೆದುಕೊಂಡು ಬಾ. ಇಷ್ಟು ಜನ ಸ್ನೇಹಿತರು ಬಂದಿರುವಾಗ ಅವಳೂ ಸಂತೋಷಪಡಲಿ" ಎಂದು ಆಜ್ಞಾಪಿಸಿದನು.

ಮಿ. ಮೈಕಾಬರರು ಯಾವ ಉತ್ತರವನ್ನೂ ಕೊಡದೆ, ಅಲುಗದೆ, ಬಾಗಿಲ ಬದಿಯಲ್ಲಿ ನಿಂತಿದ್ದರು. ಏಗ್ನೆಸ್ಸಳೂ ಅತ್ತೆಯೂ ಒಂದು ಕಡೆಯೂ ನಾನೂ ಟ್ರೇಡಲ್ಸನೂ ಇನ್ನೊಂದು ಕಡೆಯೂ ಕುಳಿತಿದ್ದೆವು. ಅಲ್ಲಿನ ಕೆಲ ಸಂದರ್ಭಗಳಿಂದ ಉರೆಯನಿಗೂ ಟ್ರೇಡಲ್ಸನಿಗೂ ಪರಿಚಯ ಮಾಡಿಕೊಡಲಾಯಿತು. ಉರೆಯ ಟ್ರೇಡಲ್ಸನೊಡನೆ ಬಹು ದೀನತನದಿಂದ ತನ್ನ ಜೀವನ ಚರಿತ್ರೆಯ ಅಭಿವೃದ್ಧಿ ಭಾಗವನ್ನು ಹೇಳಿಕೊಳ್ಳುತ್ತಿದ್ದನು. ಇಷ್ಟರಲ್ಲೇ ಮೈಕಾಬರರು ಅವರ ಯಾವುದೋ ಕೆಲಸದ ನಿಮಿತ್ತ ಹೊರಗೆ ಹೋದರು. ಹೋದವರು ತಿರುಗಿ ಬರುವಾಗ ಒಬ್ಬರೇ ಬಂದದ್ದನ್ನು ಕಂಡು –

"ಏನು ಮೈಕಾಬರ್, ಕೇಳಿಸಲಿಲ್ಲವೇನು? ಹೋಗಿ ತಾಯಿಯನ್ನು ಕರೆದುಕೊಂಡು ಬಾ" ಎಂದು ಗದರಿಸಿದನು, ಉರೆಯ.

"ಕೇಳಿಸಿದೆ" ಎಂದಷ್ಟು ಮಾತ್ರ ಮಿ. ಮೈಕಾಬರರು ಉತ್ತರವಿತ್ತರು.

"ಹಾಗಾದರೆ ಗೋಡೆ ಹಾಗೆ ನಿಂತದ್ದು ಏಕೆ?" ಅಂದನು ಉರೆಯ.

"ಏಕೆ, ಅಂದರೆ – ನನ್ನ ಕುಶಿ. ನಿನ್ನಂಥ ನರಾಧಮನ ಜತೆ ಸೇರಿ ಗೋಡೆ ಹಾಗೆ ಆಗಿರುವುದು ಹೌದು. ಆದರೆ, ಈಗ ಮನುಷ್ಯ ಆಗಿದ್ದೇನೆ" ಅಂದರು ಮಿ. ಮೈಕಾಬರ್.

"ಸದ್ಯ ಹೇಳಿದಂತೆ ಕೇಳು. ನಿನ್ನ ನಾಲಿಗೆ, ಮತ್ತೆ ಅದಕ್ಕೆ ತಕ್ಕಂಥ ಬುದ್ಧಿ, ಈ ಎರಡು ನಿನ್ನ ವೈರಿ! ನಿನಗೆ ನಾನು ಸಲಿಗೆ ಕೊಟ್ಟದ್ದು ಹೆಚ್ಚಾಯಿತು. ಬುದ್ಧಿ ಕಲಿಸುತ್ತೇನೆ ಮತ್ತೆ. ಈಗ ನಾನು ಹೇಳಿದಂತೆ ಮಾಡು" ಹೀಗೆ ಪುನಃ ಗದರಿಸಿದ ಉರೆಯ.

ಉರೆಯನ ಮಾತಿಗೆ ಸೀದಾ ಉತ್ತರ ಕೊಡುವುದರ ಬದಲು, ಸಿಟ್ಟಿನ ಉದ್ವೇಗದಿಂದ ಸಾಧಾರಣ ಆರ್ಭಟಿಸಿದಂತೆಯೇ ಮಿ. ಮೈಕಾಬರರು ಅಂದರು –

"ಇಡೀ ಲೋಕದಲ್ಲಿರುವ ನರಾಧಮರಿಗಿಂತೆಲ್ಲ ಅತ್ಯಂತ ಹೀನ ನರಾಧಮನನ್ನು ನೋಡಬೇಕಾದರೆ, ನೋಡಬೇಕು ಈ ಹೀಪನನ್ನು. ಯಾವ ನರಾಧಮನು ನನ್ನನ್ನು ಹಾಳು ಮಾಡಿ, ಅವನ ಸಹವಾಸದಿಂದ ಈಗ ನನಗೆ ಬುದ್ಧಿ ಬಂದಿದೆಯೋ ಆ ನರಾಧಮನೇ ಈ ಹೀಪ್" ಎಂದು. ಇವರು 'ಹೀಪ್' ಎಂಬ ಶಬ್ದವನ್ನು ಉಚ್ಚರಿಸುವಾಗಲೆಲ್ಲ 'ಹೀ' ಎಂಬ ಅಕ್ಷರವನ್ನು ಬಹು ಗಟ್ಟಿಯಾಗಿ ಉಚ್ಚರಿಸುತ್ತಾ ಆ 'ಹೀ'ಯ ಭಾರದಿಂದಲೇ ಉರೆಯನ ತಲೆಯನ್ನು ಪುಡಿಗೈವ ಪ್ರಯತ್ನದಲ್ಲಿದ್ದಂತೆ ತೋರುತ್ತಿದ್ದರು.

ಉರೆಯನಿಗೆ ಸಿಟ್ಟು ಏರಿತು. ನನ್ನನ್ನು ನೋಡಿ ಕಿಡಿಕಿಡಿಯಾಗಿ –

"ಕಾಪರ್ಫೀಲ್ಡ್, ಎಚ್ಚರಿಕೆ! ನಮ್ಮ ಮನೆಗೆ ಬಂದು, ನಮ್ಮ ನೌಕರರಿಗೆ ಲಂಚ ಕೊಟ್ಟು ನಿಮ್ಮ ಕಡೆ ಮಾಡಿಕೊಂಡು, ನಮ್ಮ ಆಫೀಸಿನಲ್ಲಿ ಈ ತರದ ಮಸಲತ್ತು ಮಾಡುವುದರಲ್ಲಿ ಏನಿದೆ ಗೊತ್ತಿದೆಯೇ?" ಅಂದನು.

ಈ ಸಮಯದಲ್ಲೇ ಸ್ವಲ್ಪ ಮೊದಲೇ ಹೊರಗೆ ಹೋಗಿದ್ದ ಟ್ರೇಡಲ್ಸನು ಉರೆಯನ ತಾಯಿಯನ್ನು ಬೈಠಖಾನೆಯ ಒಳಗೆ ಕರೆದುಕೊಂಡು ಬಂದನು.

"ಇಗೋ ಉರೆಯಾ. ನಿನ್ನ ತಾಯಿಯ ಪರಿಚಯವನ್ನು ಮಾಡಿಕೊಂಡು ನಾನು ಅವರನ್ನು ಕರೆದುಕೊಂಡು ಬಂದಿದ್ದೇನೆ" ಅಂದನು ಟ್ರೇಡಲ್ಸ್.

ಟ್ರೇಡಲ್ಸನು ಉರೆಯನ ತಾಯಿಯನ್ನು ಮನೆ ಒಳಗೇ ಕಂಡು, ಏನೋ ಕೆಲವು ವಿಷಯ ಮಾತಾಡಿ, ಇಲ್ಲಿಗೆ ಕರೆದುಕೊಂಡು ಬಂದದ್ದಿರಬೇಕು – ಏಕೆಂದರೆ, ಅವಳು ಒಳಗೆ ಬಂದ ಹಾಗೆಯೇ ತನ್ನ ಮಗನನ್ನು ಬಹು ಪ್ರೀತಿಯಿಂದಲೂ ನಮ್ಮನ್ನೆಲ್ಲ ಬಹು ವಿನಯದಿಂದ ನೋಡುತ್ತಾ –

"ಅಪ್ಪಾ ಉರೀ ರಾಜಿ ಮಾಡಿಕೋ. ತಗ್ಗಿ ನಡಿ, ಬಗ್ಗಿ ನಡಿ. ಅವಸರ ಮಾಡಬೇಡ ಮಗನೇ" ಎಂದು ಅಂದಳು.

"ಏನು ಮಾಡುತ್ತಿದ್ದೀಯಾ ಅಮ್ಮಾ! ಬಾಯಿ ಮುಚ್ಚಿ ಕುಳಿತುಕೋ. ನೀನೇ ಹೀಗೆಲ್ಲ ಮಾತಾಡಿದರೆ ನಮ್ಮ ಶತ್ರುಗಳಿಗೆ ಆಗುವ ಸಂತೋಷ ಎಷ್ಟು ಗೊತ್ತಿದೆಯೇ? ನಿನ್ನ ಇಂಥ ಒಂದೊಂದು ಮಾತಿಗೆ ಕಾಪರ್ಫೀಲ್ಡ್ ನೂರು ನೂರು ಪೌಂಡು ಕೊಟ್ಟಾನು! ನಿನಗೆ ಬೇಡಾ ಈ ಕೆಲಸ" ಎಂದು ತನ್ನ ತಾಯಿಯನ್ನು ಗದರಿಸಿ ಟ್ರೇಡಲ್ಸನನ್ನು ಸಿಟ್ಟಿನಿಂದ ನೋಡುತ್ತಾ –

"ನಮ್ಮ ಮನೆಯಲ್ಲಿ ನಿಮಗೆ ಕೆಲಸವೇನು? ನಿಮಗಿಲ್ಲಿ ಪ್ರವೇಶಕ್ಕೆ ಅಧಿಕಾರ ಕೊಟ್ಟವರ್ಯಾರು?" ಎಂದು ಕೇಳಿದನು.

ಟ್ರೇಡಲ್ಸನು ಸ್ವಲ್ಪವೂ ಸಿಟ್ಟುಗೊಳ್ಳಲಿಲ್ಲ. ಆ ದಿನದ ಟ್ರೇಡಲ್ಸನ ಎಲ್ಲಾ ಕಾರ್ಯಗಳಲ್ಲೂ ನಿರುದ್ವಿಗ್ನತೆ, ಕೆಲಸಗಳಲ್ಲಿ ಹಟ, ಪರಿಷ್ಕಾರತೆ, ಕಂಡು ಬರುತ್ತಿದ್ದುವು. ಅವನಲ್ಲಿದ್ದ ಈ ಗುಣಗಳ ಉಪಯೋಗ ಅಂದು ನಮಗೆಲ್ಲರಿಗೂ ತುಂಬಾ ಉಪಕಾರ ಮಾಡಿದೆ. ಯಾವ ಚಮತ್ಕಾರ, ಗುಟ್ಟುಗಳ ಪ್ರಯೋಗದಿಂದಲೂ ಉರೆಯನನ್ನು ಹಿಡಿದಿರುವಂತೆ ತೋರಿಸಿಕೊಳ್ಳದೆ, ಸ್ವಲ್ಪವೂ ಗಾಬರಿಗೊಳ್ಳದೆ, ಅವನು ಅಂದನು –

"ನಾನು ಮಿ. ವಿಕ್ಫೀಲ್ಡರ ಮಿತ್ರನು ಮತ್ತು ಕಾನೂನು ಪ್ರಕಾರ ಅಧಿಕಾರ ಹೊಂದಿರುವ ಏಜಂಟನು. ಮಿ. ವಿಕ್ಫೀಲ್ಡರಿಗೆ ಸಂಬಂಧಪಡುವ ಎಲ್ಲಾ ವ್ಯವಹಾರಗಳಲ್ಲಿ ಅವರ ಬದಲಿಗೆ ವರ್ತಿಸುವ ಸಂಪೂರ್ಣ ಅಧಿಕಾರವನ್ನು ರಿಜಿಸ್ಟರ್ಡ್ ರಿಕಾರ್ಡು ಮೂಲಕ ನಾನು ಪಡೆದಿರುತ್ತೇನೆ.

ಈ ಅಧಿಕಾರ ಪತ್ರ ಇಲ್ಲೇ ನನ್ನ ಜೇಬಿನಲ್ಲಿ ಇದೆ. ಆದ್ದರಿಂದ ನೀನು ನನ್ನ ಸಮಕ್ಷಮದಲ್ಲಿ ಮಿ. ಮೈಕಾಬರರ ಪ್ರಶ್ನೆಗಳಿಗೆ ಉತ್ತರ ಕೊಟ್ಟು ನನ್ನನ್ನು ಸಮಾಧಾನಪಡಿಸಲು ಬದ್ಧನಾಗಿರುತ್ತೀ."

ಟ್ರೇಡಲ್ಸನು ಹೀಗೆಂದು, ಮಿ. ಮೈಕಾಬರರನ್ನು ನೋಡಿ –
"ಮಿ. ಮೈಕಾಬರರೇ ನಿಮ್ಮ ಕಡೆ ಮುಂದರಿಸೋಣಾಗಲಿ" ಅಂದನು.
ಈ ಮಧ್ಯೆ ಉರೆಯ ಹೇಳಿದನು –
"ಆ ಮುದಿ ಕತ್ತೆ, ತನ್ನ ಮುದಿತನದ ಜತೆಗೆ ಅಮಲನ್ನು ಸೇವಿಸಿ, ನೀವು ಬರೆದುಕೊಟ್ಟದ್ದೆಲ್ಲಕ್ಕೂ ದಸ್ಕತ್ತು ಮಾಡಿರಬೇಕು. ಆ ಅಧಿಕಾರ ಪತ್ರ ಸಿಂಧುವಾಗತಕ್ಕದ್ದಲ್ಲ. ಅದನ್ನು ಒಳಸಂಚು, ಮೋಸ, ಬಲಾತ್ಕಾರಗಳಿಂದ ಪಡೆದಿರುತ್ತೀರಿ!"
"ಹೌದು, ಈ ಕ್ರಮಗಳೆಲ್ಲ ನಡೆದಿದೆ – ಆದರೆ, ಅದು ನಡೆದದ್ದು ನಿನ್ನ ಕಡೆಯ ಅನುಭವದಲ್ಲಿ ತಾನೆ? ನೀನು ಮಿ. ವಿಕ್ಫೀಲ್ಡರವರೊಡನೆ ನಡೆಸಿರುವ ಈ ವರೆಗಿನ ವಹಿವಾಟಗಳೆಲ್ಲಾ ಒಳಸಂಚು, ಮೋಸ, ಬಲಾತ್ಕಾರಗಳಿಂದ ನಡೆದಿವೆ. ನೀನು ಮಿ. ವಿಕ್ಫೀಲ್ಡರಿಂದ ತುಂಬಾ ಹಣವನ್ನು ಅಕ್ರಮದಿಂದ ಎಳೆದು ತೆಗೆದಿರುತ್ತೀ ಎಂಬುದೇ ನಮ್ಮ ಆರೋಪ, ನಿನ್ನ ಮೇಲೆ. ನೀನು ಆ ವಿಷಯದಲ್ಲಿ ನಮ್ಮನ್ನು ಸಮಾಧಾನಪಡಿಸಬೇಕು....." ಎಂದು ಟ್ರೇಡಲ್ಸನು ಹೇಳಿ ಪೂರೈಸುವುದರೊಳಗೆ ಉರೆಯನ ತಾಯಿ ಮಗನನ್ನು ನೋಡಿ –
"ಉರೀ ಮಗನೇ....." ಎಂದಂದಳು. ಅಷ್ಟಕ್ಕೆ ಉರೆಯಾ –
"ಬಾಯಿಮುಚ್ಚು, ನಾಲಿಗೆ ಕತ್ತರಿಸುತ್ತೇನೆ" ಎಂದು ಗದರಿಸಿದ.
ಈ ಸಮಯದಲ್ಲಿ ಮಿ. ಮೈಕಾಬರರು ನಮಗೆಲ್ಲ ಕೇಳಿಸುವಂತೆ – ಆದರೆ, ಆ ಶಬ್ದವನ್ನು ಪೂರ್ಣ ಪ್ರಯೋಗಿಸುವುದು ಸಭ್ಯತೆಯಲ್ಲವೆಂದು ಅಂಜುತ್ತಾ – 'ಸ್ಕೌಂಡ್' (ಸ್ಕೌಂಡ್ರಲ್ = ವಂಚಕ) ಎಂದು ಮಾತ್ರ ಹೇಳುತ್ತಿದ್ದರು. ತಾಯಿ–ಮಗನ ಚರ್ಚೆ ಪೂರಯಿಸಿದ ಮರುಕ್ಷಣದಲ್ಲಿ, ಮಿ. ಮೈಕಾಬರರು ತಮ್ಮ ರೂಲ್ ದೊಣ್ಣೆಯನ್ನು ಬಲಗೈಯ್ಯಲ್ಲಿ ಮೇಲೆತ್ತಿ ಹಿಡಿದುಕೊಂಡು, ನೋಡುವವರಿಗೆ ಇತರರನ್ನು ಹೆದರಿಸುವಂತೆ ತೋರುತ್ತಾ – ನಿಜವಾಗಿಯೂ ತಮ್ಮ ಆತ್ಮರಕ್ಷಣೆಗಾಗಿ ಮಾತ್ರ ಹಿಡಿದಿದ್ದು, ಎಡಗೈಯಲ್ಲಿ ತುಂಬಾ ಬರಹದ ಒಂದು ಪತ್ರದ ಕಟ್ಟನ್ನು ಹಿಡಿದುಕೊಂಡು, ಅದರಿಂದ, ಟ್ರೇಡಲ್ಸನ ಅಪ್ಪಣೆ ಪ್ರಕಾರ ಓದತೊಡಗಿದರು.
"ಶ್ರೀಮತಿ ಟ್ರಾಟೂಡರೆ ಮತ್ತು ಇತರ ಮಹನೀಯರುಗಳೇ
"ಪ್ರಪಂಚದಲ್ಲಿ ಈವರೆಗೆ ಜನಿಸಿರಬಹುದಾದ ಪಾಪಿಗಳಲ್ಲಿ ಅಗ್ರಗಣ್ಯನಾದ ಮಹಾಪಾಪಿಯನ್ನು ನಾನು ತಮ್ಮೆಲ್ಲರ ಸಮ್ಮುಖದಲ್ಲಿ ಆಪಾದಿಸಲಿರುವೆನು. ಈ ಆಪಾದನೆಯ ಉದ್ದೇಶದಲ್ಲಿ ಯಾವ ಸ್ವಾರ್ಥವೂ ಇಲ್ಲವೆಂಬುದನ್ನು ಮೊದಲಾಗಿ ವಿಜ್ಞಾಪಿಸಿಕೊಳ್ಳುವೆನು. ಕಡುವಾದ ಬಡತನವು ನನ್ನನ್ನು ನನ್ನ ತೊಟ್ಟಿಲಿನಿಂದಲೇ ಹಿಂಬಾಲಿಸಿ, ಮನುಷ್ಯತ್ವವನ್ನೇ ಮುರಿದು, ಜೀವವೇ ಭಾರವಾಗಿ ತೋರುವಂತೆಯೂ ಮಾಡಿದ್ದಿದೆ. ಅಪಮಾನಾಸ್ಪದವಾದ ಪ್ರಸಂಗಗಳಲ್ಲಿ ಸಿಕ್ಕಿಬಿದ್ದು, ಬಳಲಿ, ಹುಚ್ಚೇ ಹಿಡಿಯಬೇಕಾಗಿದ್ದಷ್ಟೂ ಕಷ್ಟ ಪರಂಪರೆಗಳನ್ನು ಅನುಭವಿಸಿದ್ದೆನು. ಅನುಭವಗಳಿಂದ ಪಳಗಿದ್ದೇನೆ. ನನ್ನ ಜೀವನದ ಪರಿಸ್ಥಿತಿ ಹೀಗಿದ್ದರು ಯಾವ ಸ್ವಾರ್ಥವೂ ಇಲ್ಲದೆ ಈ ಕಾರ್ಯ ಕೈಗೊಳ್ಳುತ್ತಿದ್ದೇನೆ.

"ನನ್ನ ಇಂಥ ಬಡತನದ ಅತ್ಯಂತ ಹೀನ ಪರಿಸ್ಥಿತಿಯಲ್ಲಿದ್ದಾಗಲೇ ವಿಕ್ಫೀಲ್ಡ್ ಮತ್ತು ಹೀಪ್ ಸಂಸ್ಥೆ ಎಂದನ್ನಲೇ, ಸಂಘ ಎಂದನ್ನಲೇ ಬ್ಯೂರೋ ಎಂದನ್ನಲೇ ಅಂತೂ ಈ ಆಫೀಸಿಗೆ ಕೆಲಸಕ್ಕಾಗಿ ಸೇರಿದೆನು. ಘನವಂತ ಮಿ. ವಿಕ್ಫೀಲ್ಡರ ಹೆಸರು ಈ ಸಂಘಕ್ಕೆ ಇರುವುದಾದರು ಇದರ ಮುಖ್ಯ ಚಾಲಕನು ಈ, ಆ ಮಹಾವಂಚಕ, ಫೋರ್ಜರೀಕೋರ ಹೀಪ್ ಮಾತ್ರವೆಂಬುದನ್ನು ತಾವೆಲ್ಲಾ ಜ್ಞಾಪಕದಲ್ಲಿಡಬೇಕು."

ಮಿ. ಮೈಕಾಬರರು ಹೀಗೆ ಓದುತ್ತಿದ್ದಾಗ ಉರೆಯ ಅವರ ಹತ್ತಿರ ಬಂದು ಅವರು ಓದುತ್ತಿದ್ದ ಕಾಗದವನ್ನು ಎಳೆದುಬಿಡಲು ಪ್ರಯತ್ನಿಸಿದನು. ಆದರೆ, ಮಿ. ಮೈಕಾಬರರು ಕಾಗದವನ್ನು ಅವನಿಗೆ ಸಿಕ್ಕದಂತೆ ಹಿಂದೆಳೆದು, ಮುಂದೆ ಬಂದಿದ್ದ ಉರೆಯನ ಹಸ್ತಕ್ಕೆ ತನ್ನ ಕೈಯ್ಯಲ್ಲಿದ್ದ ರೂಲ್ ದೊಣ್ಣೆಯಿಂದ ಬಲವಾಗಿ ಒಂದು ಪೆಟ್ಟನ್ನು ಕೊಟ್ಟರು. ಉರೆಯ ಕೈಯ್ಯನ್ನು ಉಜ್ಜಿಕೊಳ್ಳುತ್ತಾ ದೂರ ಸರಿದು ನಿಂತನು. ಮಿ. ಮೈಕಾಬರರು ಉರೆಯನನ್ನು ಪ್ರತ್ಯೇಕ ಗದರಿಸಿ, ಪುನಃ ಆ ಪತ್ರವನ್ನು ಓದಲಾರಂಭಿಸಿದರು –
"ನನ್ನ ಸಂಬಳವೆಷ್ಟೆಂಬುದನ್ನು ನಾವು ಮೊದಲಾಗಿ ನಿಶ್ಚೈಸಿಕೊಳ್ಳಲಿಲ್ಲ. ಕಡಿಮೆ ಪಕ್ಷದಲ್ಲಿ ವಾರಕ್ಕೆ ಎರಡುವರೆ ಶಿಲಿಂಗ್ ಸಲ್ಲತಕ್ಕದ್ದೆಂಬುದನ್ನು ಮಾತ್ರ ನಿಶ್ಚೈಸಿಕೊಂದು, ಅನಂತರ ನಾನು ಮಾಡಬೇಕಾದ ಕಾರ್ಯಗಳ ವೈಶಿಷ್ಟ್ಯ, ಗಡುತರ, ಬಾಹುಳ್ಯ ಇತ್ಯಾದಿಗಳನ್ನು ಅನುಸರಿಸಿ, ಸಂಬಳವನ್ನು ಏರಿಸಬೇಕು, ಏರಿಸಬಹುದು ಎಂದು ನಿಶ್ಚೈಸಿಕೊಂಡಿದ್ದೆವು. ಆದರೆ ಸಂಬಳ ಹೆಚ್ಚುವರಿಯಲು ಬೇಕಾದ ಈ ವಿಧದ ಮೂರು ಯೋಗ್ಯತೆಗಳ ಸಮಗ್ರ ಯೋಗ್ಯತೆ ಏನಾಗಿತ್ತೆಂದು ಹೇಳಬೇಕೇ? ನನ್ನ ದಾರಿದ್ರ್ಯ ಹೆಚ್ಚಿ, ನನ್ನ ಹಣದ ಅಭಿಲಾಷೆ ಹೆಚ್ಚಿ, ನನ್ನ ಮನುಷ್ಯತ್ವವನ್ನು ಕಳೆದುಕೊಂಡು – ಅರ್ಥಾತ್, ಈ ಮಹಾವಂಚಕ, ಕ್ರೂರಿ, ಕೃತಘ್ನ ಹೀಪನ ಪಾಪ ಕೃತ್ಯಗಳಲ್ಲಿ ನಾನು ಸಹಕರಿಸಿ, ಅವನ ಪಾಪದ ಮಟ್ಟಕ್ಕೆ ನಾನು ಎಷ್ಟೆಷ್ಟು ನನ್ನ ನೌಕರಿ, ಕೆಲಸಗಳಿಂದ ಏರುವೆನೋ ಅಷ್ಟೆಲ್ಲ ನನ್ನ ಯೋಗ್ಯತೆಯು (ಹೆಚ್ಚು ಸಂಬಳ ಪಡೆಯಲು) ಏರುತ್ತದೆಂಬುದೇ ಆಗಿತ್ತು. ಈ ತೆರನಾಗಿ ಈ ನರಾಧಮನು ನನ್ನ ಮತ್ತು ನನ್ನ ಕುಟುಂಬದ ಸುತ್ತಲೂ ಒಂದು ವಿಧದ ಬಲೆಯನ್ನೇ ಒಡ್ಡಿದನು. ಆದರೂ ಉರೆಯನ ಕೈಯ್ಯಿಂದ ಕೆಲವು ಸಾಲಗಳನ್ನೂ ಪಡೆಯಬೇಕಾಗಿ ಬರುತ್ತಿತ್ತು. ಅಂಥಾ ಸಾಲಗಳ ಬಗ್ಗೆ ಪ್ರೋನೋಟು ಬರಕೊಟ್ಟು ನಾನು ಆ ರೀತಿಯಲ್ಲೂ ಉರೆಯನ ಬಲೆಯೊಳಗೆ ಬಂಧಿತನಾದೆನು."

ಮಿ. ಮೈಕಾಬರರು ಉರೆಯನ ಕೈಕೆಳಗೆ ತುಂಬಾ ಕಷ್ಟಪಟ್ಟಿರಬೇಕೆಂಬುದೂ ಅವರ ಸಂಬಳಕ್ಕೆ ಮೀರಿದಷ್ಟು ಜವಾಬ್ದಾರಿಯುತ ಕೆಲಸಗಳನ್ನು ಮಾಡಿ ಹಿಂಸೆಗೆ ಒಳಗಾಗಿರಬೇಕೆಂಬುದೂ ನಿರ್ವಿವಾದ. ಆದರೆ, ಅಂದಿನ ಕಷ್ಟ ಮತ್ತು ಹಿಂಸೆಗಳನ್ನೆಲ್ಲ ಮರೆಸಿಬಿಡುವಷ್ಟರ ಪ್ರತಿಫಲವೇ ಅವರ ಇಂದಿನ ಆಪಾದನೆಯಲ್ಲು, ಆಪಾದನೆಯನ್ನು ಓದಿ ಹೇಳುವುದರಲ್ಲೂ ಇದೆಯೆಂಬಷ್ಟು ಸಂತೋಷ, ತೃಪ್ತಿಗಳಿಂದ ಮಿ. ಮೈಕಾಬರರು ಆ ಪತ್ರವನ್ನು ಓದಿದರು. ಸಾಧಾರಣ ಒಂದು ಪಾರ್ಲಿಮೆಂಟು ಭಾಷಣವಾದರೂ ಇಷ್ಟೊಂದು ಗಂಭೀರತೆಯಿಂದ ಆಗಲಿಲ್ಲವೆಂಬಂತೆ ಅವರು ಓದಿದರು. ಮತ್ತು ಮುಂದುವರಿಸಿ ಓದಿದರು –

"ನನ್ನ ಆರ್ಥಿಕ ಅಧೋಗತಿಯು ಹೆಚ್ಚಿದಾಗಲೇ ಉರೆಯ ತನ್ನ ವಂಚಕತನದ ರಿಕಾರ್ಡುಗಳನ್ನು ಸ್ವಲ್ಪ ಸ್ವಲ್ಪವಾಗಿ ನನ್ನಿಂದ ಮಾಡಿಸಿಕೊಳ್ಳುತ್ತಿದ್ದನು. ಮೊದಮೊದಲು ಅವನು ನನಗೆ ಕೊಡುವ ಅನುಭವಗಳು ಅರ್ಥವಾಗುತ್ತಿರಲಿಲ್ಲ. ನನ್ನ ಜವಾಬ್ದಾರಿಯ ಅರಿವೂ ನನಗೆ ಆಗಿರಲಿಲ್ಲ. ಆದರೆ, ಕ್ರಮೇಣವಾಗಿ – ಬಹ್ವಂಶ ಕಾರ್ಯ ನನ್ನ ಸಹಕಾರದಿಂದ ನಡೆದುಹೋದ ಮೇಲೆ ನನಗೆ ಅರ್ಥವಾಯಿತು. ಉರೆಯನ ಪಾಪ ಕೃತ್ಯಗಳ ರಾಶಿಯಿಂದ ಕೆಲವನ್ನು ಮಾತ್ರ ಹೆಕ್ಕಿ ತೆಗೆದು ತಮ್ಮೆದುರು ಇಡಲು ಇಚ್ಛಿಸುತ್ತೇನೆ. ದಯಮಾಡಿ ಕೇಳಬೇಕು."

ಇಷ್ಟು ಓದುವಾಗಲೇ ಉರೆಯನ ತಾಯಿಯು ಬಹು ವಿನಯದಿಂದ –
"ಮಹನೀಯರೇ ಬೇಸರಿಸಬೇಡಿರಿ. ಉರೆಯನು ಉಗ್ರ ಸ್ವಭಾವದವನಲ್ಲ. ಅವನು ದೀನನು, ತಮ್ಮ ಕ್ಷಮಾಯಾಚನೆ ಮಾಡುವವನು" ಎಂದು ಹೇಳಿ, ಮಗನನ್ನು ನೋಡಿ –
"ಉರೀ ಬಗ್ಗಿ ನಡೆದುದರಲ್ಲಿ ಅಪಕೀರ್ತಿಯಿಲ್ಲ ಮಗನೆ – ಕ್ಷಮೆಯನ್ನು ಬೇಡು" ಎಂದು, ಬಹುಮಟ್ಟಿಗೆ ರೋದಿಸಿದಂತೆಯೇ ಹೇಳಿದಳು.
"ಸುಮ್ಮನೆ ಇರಮ್ಮಾ – ತಪ್ಪು ಮಾಡಿದ್ದರೆ ತಾನೆ ಕ್ಷಮೆ ಬೇಡುವುದು?" ಎಂದು ಉರೆಯ ತಾಯಿಗೆ ಗದರಿಸಿದಂತೆ ಉತ್ತರವಿತ್ತನು.

ಮಿ.ಮೈಕಾಬರರು ಓದಿದರು –
"ನಾನು ವಿಷಯಗಳನ್ನು ಇಲ್ಲಿ ಸೂಕ್ಷ್ಮವಾಗಿ ಮಾತ್ರ ಹೇಳುವೆನು. ಮುಂದೆ ಕೋರ್ಟುಗಳಲ್ಲಿ ಇನ್ನೂ ಸೂಕ್ಷ್ಮದ ವಿವರಗಳನ್ನು ವಿಚಾರಿಸಿ ಹೊರಹಾಕಲಿದೆ. ಪ್ರಕೃತ, ಸಾರಾಂಶ ರೂಪದಲ್ಲಿ ಅವನ ತಪ್ಪುಗಳು ಹೀಗಿವೆ –
"ಒಂದನೆಯದು –
"ಮಿ. ವಿಕ್ಫೀಲ್ಡರು ದೇಹ ಮತ್ತು ಮನಸ್ಸಿನಲ್ಲಿ ಅಶಕ್ತರಾಗಿದ್ದಾಗ, ಅಥವಾ ಮನಸ್ಸು ಪಲ್ಲಟವಾಗಿದ್ದಾಗ ಅಥವಾ ಅಂಥ ಸಮಯಗಳಿಗಾಗಿ ಕಾದು ಕುಳಿತು, ಅವು ದೊರಕಿದಾಗ ಮಾತ್ರ, ಉರೆಯನು ಈ ಸಂಘದ ಬಹು ಜವಾಬ್ದಾರೀ ಕಾರ್ಯಗಳ ರಿಕಾರ್ಡುಗಳನ್ನು ತಯಾರಿಸಿರುತ್ತಾನೆ. ಅವರ ದಸ್ಕತ್ತುಗಳನ್ನು ರಿಕಾರ್ಡುಗಳನ್ನು ಹಾಕಿಸಿದ್ದೂ ಅಂಥ ಸಮಯದಲ್ಲಿ ಮಾತ್ರ. ಮಿ. ವಿಕ್ಫೀಲ್ಡರು ಮಾತ್ರ ಆಡಳಿತದಾರರಾಗಿ ಇರತಕ್ಕದ್ದೆಂದು ಇಡಲಾಗಿದ್ದ ಒಂದು ಸಂಚಯದ ನಿಧಿಯನ್ನು ಅವರೇ ಪಡೆದು ಖರ್ಚು ಮಾಡಿರುವಂತೆ ರಿಕಾರ್ಡು ತಯಾರಿಸಿ, ಅಂಥ ಹಣವನ್ನು ಬೇಂಕಿನಿಂದ ತಾನು ಪಡೆದುಕೊಂಡಿದ್ದಾನೆ. ಈ ಸಂಬಂಧದ ಹಣವು ಹನ್ನೆರಡು ಸಾವಿರದ ಆರನೂರ ಹದಿನಾಲ್ಕು ಪೌಂಡು, ಎರಡು ಶಿಲಿಂಗು, ಒಂಭತ್ತು ಪೆನ್ಸ್.
"ಉರೆಯನು ಕಳ್ಳ ಡೈರಿ ಬರೆದಿಡುತ್ತಿದ್ದನು. ತನ್ನ ಈ ಒಳಸಂಚಿನ ಡೈರಿಯು ಕೊನೆಗೆ ಏನಾಯಿತು? ಸುಟ್ಟು ಬೂದಿಯಾಯಿತೇ ಎಂದು ವಿಚಾರಿಸತಕ್ಕದ್ದಿದೆ.

"ಇನ್ನು ಎರಡನೆಯದು –
"ಆಪಾದನೆ ಒಂದರಲ್ಲಿನ ಹಣವನ್ನು ಪೂರಾ ಉರೆಯನು ತನ್ನ ಸ್ವಂತ ಲೆಕ್ಕದಲ್ಲಿ ಬೇಂಕಿನಲ್ಲಿಟ್ಟಿದ್ದಾನೆ. ಮಿ. ವಿಕ್ಫೀಲ್ಡರಿಂದ ತೆಗೆದ ಹಣವನ್ನೇ ಅವರಿಗೆ ಸಾಲ ಕೊಟ್ಟಂತೆಯೂ ಮಾಡಿ, ಅಂಥ ಸಾಲದ ರಿಕಾರ್ಡುಗಳಿಗೆ ನನ್ನ ಸಾಕ್ಷಿಯನ್ನು ಹಾಕಿಸಿರುತ್ತಾನೆ."

ಇಷ್ಟು ಹೇಳುವಾಗ ಉರೆಯನು ತನ್ನ ಜೇಬಿನಿಂದ ಬೀಗದ ಕೈಗಳನ್ನು ತೆಗೆದುಕೊಂಡು ಪಕ್ಕದ ಒಂದು ಕಪಾಟಿನ ಬಾಗಿಲು ತೆರೆಯಲು ಹೊರಟನು. ಅಷ್ಟರಲ್ಲೇ ಮಿ.ಮೈಕಾಬರರು ಅಂದರು –
"ಗಾಬರಿಯಿಲ್ಲ – ಎಲ್ಲಾ ಸರಿಯಾಗಿದೆ. ಬೆಳಿಗ್ಗೆ ಆಫೀಸು ಕೆಲಸಕ್ಕೆ ರಿಕಾರ್ಡುಗಳನ್ನು ಹೊರಗಿಡಲು ನನ್ನನ್ನು ಬಿಟ್ಟಾಗ ಆ ಫೋರ್ಜರಿ ರಿಕಾರ್ಡನ್ನು ನಾನು ತೆಗೆದುಕೊಂಡು ಬಂದೋಬಸ್ತಾಗಿ ಇಟ್ಟಿದ್ದೇನೆ." ಅನಂತರ ನಮ್ಮನ್ನೆಲ್ಲ ನೋಡಿ ಅವರು ಹೇಳತೊಡಗಿದರು –
"ಈಗಲೇ ಡೈರಿಯ ವಿಷಯವನ್ನೂ ಹೇಳಿಬಿಡುತ್ತೇನೆ – ಅದರಲ್ಲಿ ಸ್ವಲ್ಪ ಸ್ವಾರಸ್ಯವಿದೆ. ಆ ಡೈರಿಯನ್ನು ನಮ್ಮ ಕುಟುಂಬದ ಸುಖ ಸಂತೋಷಗಳನ್ನು ನಾಶಪಡಿಸಿದ ಈ ಉರೆಯನ ನಾಶಕ್ಕಾಗಿ ಮಿಸೆಸ್ ಮೈಕಾಬರಳು (ಅವಳ ಕುಟುಂಬದಿಂದ ಬಂದ ಉತ್ತಮ ಗುಣಗಳಲ್ಲಿ ಒಂದಾದ ರಿಕಾರ್ಡುಗಳನ್ನು ಕುರಿತಾದ ಎಚ್ಚರಿಕೆಯ ದೃಷ್ಟಿಯಿಂದ) ಕಾಪಾಡಿ ಇಟ್ಟಿರುವಳು. ನಾವು ಉರೆಯನ ಮನೆಯಲ್ಲಿ ಬಿಡಾರ ಬಿಟ್ಟನಂತರ ಬೂದಿ ರಾಶಿಯಲ್ಲಿ ಅದನ್ನು ಕಂಡು ಅದರಲ್ಲಿ ನೂರಾರು ಒಂದೇ ನಮೂನೆಯ ದಸ್ಕತ್ತುಗಳನ್ನು ಕಂಡು ಅವಳು ಆಶ್ಚರ್ಯದಿಂದ ತೆಗೆದಿಟ್ಟಿರುವಳು. ಅನಂತರ ಕೆಲವು ದಿನದ ಮೇಲೆ ನೋಡುವಾಗ ಆ ದಸ್ಕತ್ತುಗಳೆಲ್ಲಾ ಇತರರ ದಸ್ಕತ್ತುಗಳನ್ನು ಅನುಕರಣ ಮಾಡಿದ ಪ್ರಯತ್ನಗಳೆಂದು ತಿಳಿದೆವು" ಎಂದಿಷ್ಟು ಹೇಳಿ ಮಿ. ಮೈಕಾಬರರು ತಮ್ಮ ಎದೆ ಮುಂದೆ ಮಾಡಿ ಮಹಾ ವೀರಾವೇಶದ ಜರ್ಬಿನಲ್ಲಿ ನಿಂತರು. ಆಗ ಟ್ರೇಡಲ್ಸನು ಅಂದನು –

"ಹೌದು, ಆ ಡೈರಿಯ ವರ್ತಮಾನ ತಿಳಿದು ನಾನು ಅದನ್ನು ಮಿಸೆಸ್ ಮೈಕಾಬರಳಿಂದ ಕೇಳಿ ತೆಗೆದುಕೊಂಡಿದ್ದೇನೆ."

"ಇನ್ನು ಮೂರನೆಯ ಆರೋಪ:" ಅಂದರು ಮಿ. ಮೈಕಾಬರರು –
"ಮೂರನೆಯದು ಮೊದಲಿನವುಗಳಿಗಿಂತೆಲ್ಲ ದೊಡ್ಡ ಅಪರಾಧ. ಪರ್ವತ ಶ್ರೇಣಿಗೊಂದು ಶಿಖರ, ಜ್ವಾಲಾಮುಖಿಗೆ ಒಂದು ಬಾಯಿ ಇರುವಂತೆ ಹೀಪನ ಪಾಪಕೃತ್ಯಗಳ ಶಿಖರಪ್ರಾಯವಾಗಿ ಮೂರನೆಯ ವಿಷಯವಿದೆ. ಯಾವ ಮಹಾತ್ಮನ ಸಹಾಯದಿಂದ ತನ್ನ ಜೀವನ ನಡೆಸಿ, ಯಾವ ಹೆಸರಿನ ಆಶ್ರಯ ದೊರಕಿದ್ದರಿಂದ ತಾನೊಬ್ಬ ವ್ಯಕ್ತಿಯಾಗಿ ಪರಿಗಣಿಸಲ್ಪಟ್ಟಿದ್ದನೋ ಆ ವಯೋವೃದ್ಧ, ಜ್ಞಾನವೃದ್ಧ ಮಿ. ವಿಕ್ಫೀಲ್ಡರ ಆರ್ಥಿಕ ಅಧಃಪತನವನ್ನು ತನ್ನ ಕೈಯಿಂದಲೇ ತಂದಿಟ್ಟು, ಅವರ ಅಂತರಂಗಕ್ಕೆ ಪ್ರವೇಶಿಸಿ, ಅವರ ಮನಸ್ಸನ್ನೇ ತನ್ನ ಮುಷ್ಟಿಯೊಳಗಿಟ್ಟುಕೊಂಡು, ಮಿ. ವಿಕ್ಫೀಲ್ಡಳನ್ನು ತನ್ನ ಸಹಧರ್ಮಿಣಿಯನ್ನಾಗಿ ಮಾಡಿಕೊಳ್ಳುವ ಮಹಾ ಕುತಂತ್ರವನ್ನು ಈ ಹೀಪ್ ನಡೆಸುತ್ತಿದ್ದಾನೆ. ದಾಂಪತ್ಯ, ಅನುರಾಗ ಮೊದಲಾದ ವಿಷಯಗಳು ಇಲ್ಲಿ ಒಂದು ದೃಷ್ಟಿಯಿಂದ ಅಪ್ರಾಸಂಗಿಕವೆಂದು ತೋರಿದರೂ ಮತ್ತೊಂದು ದೃಷ್ಟಿಯಿಂದ ಅದು ಉಚಿತವೂ ಹೌದೆಂದು ನಾನು ಅಭಿಪ್ರಾಯಪಡುತ್ತೇನೆ. ಮುಂದೆ ಹೀಪ್ ಮದುವೆಯಾಗಿ ಮನೆಮಾಡುವ ದೃಷ್ಟಿಯಿಂದಲೇ ಈ ಹಣದ ವಹಿವಾಟುಗಳೆಲ್ಲ ನಡೆದಿವೆ." ಇಷ್ಟು ಹೇಳಿ ಮುಂದಿನ ವಿವರಣೆಗಳಿಗೋಸ್ಕರ ಸ್ವಲ್ಪ ಆಲೋಚಿಸಿ, ಕೊನೆಗೆ ಹೇಳತೊಡಗಿದರು.

"ಮಿ. ವಿಕ್ಫೀಲ್ಡ್ , ಮಿಸ್ ಏಗ್ನೆಸ್ ವಿಕ್ಫೀಲ್ಡ್ ಮತ್ತು ಇವರ ಸ್ಥಿರ ಚರ ಆಸ್ತಿಗಳಿಗೂ ಒಡ್ಡಿದ ಬಲೆಯಲ್ಲಿ ಮಿಸ್ ಏಗ್ನೆಸ್ ವಿಕ್ಫೀಲ್ಡಳು ಸಿಕ್ಕದೆ ಹೋದರೆ, ಬಾಕಿ ಉಳಿದವುಗಳನ್ನೆಲ್ಲ ತನ್ನದಾಗಿ ಮಾಡಿಕೊಳ್ಳುವ ತಂತ್ರವನ್ನು ಹೂಡಿರುತ್ತಾನೆ. ಅಂದರೆ, ಈ ಮನೆ, ಮನೆಯಲ್ಲಿರುವ ಮರಮುಟ್ಟು, ಪಾತ್ರ ಪದಾರ್ಥ, ಮಿ. ಮತ್ತು ಮಿಸ್ ವಿಕ್ಫೀಲ್ಡರ ಹೆಸರಿನಲ್ಲಿದ್ದ ಕಂಪೆನಿ, ಬೇಂಕು ಮೊದಲಾದ ಸಂಸ್ಥೆಗಳ ಪಾಲುಗಳನ್ನು ಹಣಗಳನ್ನು ಕ್ರಮವಾಗಿ ಕ್ರಯಸಾಧನವಾದಂತೆ ಮಿ. ವಿಕ್ಫೀಲ್ಡರ ದಸ್ಕತ್ತಿಗೆಲ್ಲ ಮಿ. ಮೈಕಾಬರರ ಸಾಕ್ಷಿ ಹಾಕಿ ರಿಕಾರ್ಡುಗಳನ್ನು ತಯಾರಿಸಿಟ್ಟಿದ್ದಾನೆ.

"ಇಂಥ ಮಹಾಪಾಪಿ ಹೀಪನಿಗೂ ಒಂದು ಧರ್ಮಬುದ್ಧಿ ಬಂದಿದೆ ನೋಡಿ – ಯಾವ ಮಹಾತ್ಮನ ಹಣದಿಂದ ತಾನು ಉಂಡು, ತಿಂದು, ಮೆರೆದು ಮನುಷ್ಯನಾಗಿ ನಿಂತಿರುವನೋ ಅಂಥವನ ಜೀವಮಾನಪರ್ಯಂತ ಅವರಿಗೆ ವರ್ಷಕ್ಕೆ ಪ್ರತಿ ಮೂರು ತಿಂಗಳಿಗೊಮ್ಮೆ ಜೀವನಾಂಶ ಹಣ ಕೊಡುವ ಉದಾರ ವ್ಯವಸ್ಥೆಯನ್ನೂ ಇವನು ಮಾಡಿರುತ್ತಾನೆ.

"ಇನ್ನು ಈ ಆಪಾದನೆಯ ಉಪಸಂಹಾರದ ಅಂಶ ಮಾತ್ರ ಬಾಕಿಯಿದೆ ಮತ್ತು ಆಪಾದನೆಯನ್ನು ರುಜುಮಾಡುವ ಕರ್ತವ್ಯವೂ ಬಾಕಿಯಿದೆ. ಈ ಎರಡು ಕೆಲಸಗಳನ್ನು ಪೂರೈಸಿದನಂತರ ಈವರೆಗೆ ಭೂಭಾರವಾಗಿ ಬದುಕಿರುವ ಈ ಬಡ ಕುಟುಂಬವು ಭೂಮಿಯಿಂದಲೇ ಮಾಯವಾಗಲಿದೆ. ತಮ್ಮೆದುರಿಗಿಟ್ಟಿರುವ ವಿಷಯಗಳನ್ನು ಸಂಗ್ರಹಿಸಲು ನನಗೆ ಬೇಕಾದ ಸಮಯ, ಆಗ ನಾನು ಅನುಭವಿಸಿದ ಕಷ್ಟ, ಇವನ್ನೆಲ್ಲ ನಾನು ತಮ್ಮೆದುರು ವಿವರಿಸಿ ತಮಗೆ ಜಿಗುಪ್ಸೆಯನ್ನುಂಟು ಮಾಡುವುದಿಲ್ಲ. ಈ ನನ್ನ ನಿಃಸ್ವಾರ್ಥ ಪ್ರಯತ್ನಗಳಿಗೆ ತಕ್ಕಂತೆ ಮಾತ್ರ ತಾವೆಲ್ಲರೂ ನನ್ನನ್ನು ತಮ್ಮ ಅಮೋಘ ನೆನಪಿನಲ್ಲಿ ಇಟ್ಟುಕೊಂಡರೆ ನನ್ನ ಈ ಎಲ್ಲ ಪರಿಶ್ರಮಗಳೂ ಸಾರ್ಥಕವೆಂದು ನಾನು ನಂಬುತ್ತೇನೆ. ನಾನು ದೇಶಪ್ರೇಮ, ಸಮಾಜಪ್ರೇಮ, ಕಲಾಪ್ರೇಮಕ್ಕಾಗಿ ಈ ಕೆಲಸ ಮಾಡಿರುತ್ತೇನೆಂಬುದನ್ನು ಮಹಾಜನರು ತಿಳಿದ ಪಕ್ಷಕ್ಕೆ ನನಗೆ ಸಂಪೂರ್ಣ ತೃಪ್ತಿ ಸಮಾಧಾನವಾಗಲಿದೆ.
ತಮ್ಮವನಾದ,
ವಿಲ್ಕಿನ್ಸ್ ಮೈಕಾಬರ್"

ಈ ಮಾತುಗಳನ್ನೆಲ್ಲ ಕೇಳುತ್ತ ಕುಳಿತಿದ್ದ ನಮ್ಮ ಅತ್ತೆ ಮಿ. ಮೈಕಾಬರರು ಓದುವುದನ್ನು ಮುಗಿಸಿದ ಕೂಡಲೇ ಎದ್ದು ಹೋಗಿ ಉರೆಯನ ಶರ್ಟಿನ ಕಾಲರ್ ಹಿಡಿದು ಎಳೆದು –
"ರಾಕ್ಷಸಾ ಪಾಪೀ ನನ್ನ ಆಸ್ತಿಯನ್ನು ಮಾರಿ ಹಣ ಗಳಿಸಿದವನು ನೀನಲ್ಲವೇ! ಮಿ. ವಿಕ್ಫೀಲ್ಡರ ಅಜಾಗ್ರತೆಯಿಂದ ಹಾಗಾಯಿತೆಂದು ನಂಬಿ, ಅವರ ಹೆಸರು ಹಾಳಾಗಬಾರದೆಂದು ನಾನು ಈವರೆಗೆ ಆ ನಷ್ಟವನ್ನೆಲ್ಲಾ ನಾನೇ ವಹಿವಾಟ ನಡೆಸಿ ತಂದುಕೊಂಡದ್ದೆಂದು ಹೇಳಿಕೊಂಡು ಬಂದಿರುವೆನು. ಈಗ ನಿಜ ತಿಳಿಯಿತು, ದ್ರೋಹೀ" ಎಂದು ಬೈದಳು.

ಇಷ್ಟಾದನಂತರ ನಾವು ಮಿ. ಮೈಕಾಬರರ ಮನೆಗೆ ಹೋದೆವು. ಅಲ್ಲಿ ನಾವು ಅನೇಕ ವಿಷಯಗಳನ್ನು ಮಾತಾಡುತ್ತಾ ಕುಳಿತಿದ್ದೆವು. ಟ್ರೇಡಲ್ಸನು ನಮ್ಮ ಜತೆ ಸೇರಲು ಸ್ವಲ್ಪ ಸಮಯ ಬೇಕಾಗಿದ್ದುದರಿಂದ ನಾವು ಏನೇನೋ ಹರಟೆ ಹೊಡೆಯುತ್ತಾ ಕುಳಿತೆವು. ಅತ್ತೆಗೆ ಮಿ. ಮೈಕಾಬರರನ್ನು ಕುರಿತು ಬಹುವಾದ ಸಂತೋಷವಾಗಿ, ಅವರ ಮುಂದಿನ ಜೀವನ ವೃತ್ತಿಯನ್ನು ಕುರಿತೂ ಸಹ ಆಲೋಚಿಸಿದಳು. ಆಗಲೇ ಅವಳಿಗೊಂದು ಆಲೋಚನೆ ಸ್ಫುರಿಸಿ, ಸ್ವಾವಲಂಬಿಗಳಾಗಿ ಬದುಕಬೇಕಾದ ಸ್ವಾಭಿಮಾನವುಳ್ಳ ಜನರು ಅನೇಕ ವೇಳೆ ಸ್ವದೇಶವನ್ನೇ ಬಿಟ್ಟು ಹೋಗುವ ಕ್ರಮವಿದೆಯೆಂದು ಅಂದಳು. ಈ ಅಭಿಪ್ರಾಯವನ್ನು ನಾವು ಚರ್ಚಿಸುತ್ತಾ ಆಸ್ಟ್ರೇಲಿಯವು ಹೊಸಬರಿಗೆ ಸಾಕಷ್ಟು ಅನುಕೂಲ್ಯಗಳನ್ನು ಒದಗಿಸಬಲ್ಲ ಭೂ ಸಂಪತ್ ಸಮೃದ್ಧಿಯ ಸ್ಥಳವೆಂದೂ ಹೇಳಿದೆವು. ಮಿ. ಮೈಕಾಬರರಿಗೆ ಈ ಆಲೋಚನೆ ಬಹು

ಉತ್ತಮವೆಂದು ತೋರಿ, ತಾವು ತಮ್ಮ ಭವಿಷ್ಯದ ಅಭಿವೃದ್ಧಿಗಾಗಿ ಆಸ್ಟ್ರೇಲಿಯಕ್ಕೆ ಸಂಸಾರ ಸಮೇತರಾಗಿ ಹೋಗುವುದೆಂದು ನಿರ್ಧರಿಸಿದರು. ಅಷ್ಟೂ ಅಲ್ಲದೆ ಆಸ್ಟ್ರೇಲಿಯದಲ್ಲಿನ ಸುಂದರ ದೃಶ್ಯಗಳನ್ನೂ ಸಂಪದಭಿವೃದ್ಧಿಯಿಂದ ತಾವು ಮೆರೆಯುವ ಸಂದರ್ಭಗಳನ್ನೂ ಮಾತುಗಳಿಂದ ಚಿತ್ರಿಸಿ ಆನಂದಿಸತೊಡಗಿದರು.

ಉರೆಯನನ್ನು ಪೋಲೀಸರ ವಶಕ್ಕೆ ಒಪ್ಪಿಸಿ, ರಿಕಾರ್ಡುಗಳನ್ನು ಭದ್ರಪಡಿಸಿಟ್ಟು ಟ್ರೇಡಲ್ಸನೂ ಸ್ವಲ್ಪ ಹೊತ್ತಿನಲ್ಲಿ ನಮ್ಮ ಜತೆಗೆ ಬಂದು ಸೇರಿದನು. ಆ ದಿನವೇ ನಾವು ನಾಲ್ವರೂ ಕೇಂಟರ್ಬರಿಯಿಂದ ಲಂಡನ್ನಿಗೆ ಬಂದೆವು.

ಮಿ. ಮೈಕಾಬರರು ನಮ್ಮನ್ನು ಕಳುಹಿಸಿಕೊಡುವುದಕ್ಕಾಗಿ ನಮ್ಮ ಜತೆಯಲ್ಲೇ ಕೇಂಟರ್ಬರಿಯಲ್ಲಿ ಸ್ವಲ್ಪ ದೂರ ಬಂದರು. ಅಂದಿನ ನಮ್ಮ ಕೆಲಸ ಅಷ್ಟೊಂದು ಪರಿಷ್ಕಾರವಾಗಿ ಜರುಗಿದ, ಮತ್ತು ಮುಂದೆ ಅವರ ಕುಟುಂಬ ಆಸ್ಟ್ರೇಲಿಯದಲ್ಲಿ ಅಭಿವೃದ್ಧಿ ಹೊಂದುವ, ಸಂತೋಷಕ್ಕಾಗಿ ಅವರ ಪತ್ನಿಯೂ ಸಹ, ಆಸ್ಟ್ರೇಲಿಯದ ಕೃಷಿಕನ ಪತ್ನಿ ಗಂಡನೊಡನೆ ಮಾತಾಡುವ ಕ್ರಮಗಳಿಂದ ಮಾತಾಡುತ್ತಾ ಬಂದರು. ಅವರಿಬ್ಬರ ಅಂದಿನ ಉತ್ಸಾಹ, ಸಂತೃಪ್ತಿಗಳನ್ನು ನಾನೆಂದಿಗೂ ಮರೆಯೆನು.

ಕಂಗರೂ ಪ್ರಾಣಿ ಆಸ್ಟ್ರೇಲಿಯದ ಮರುಭೂಮಿಯಲ್ಲಿ ಜೀವಿಸುವ ಕ್ರಮವನ್ನು ಮಿಸೆಸ್ ಮೈಕಾಬರಳು ನಮ್ಮೆಲ್ಲರ ಅನುಭವಕ್ಕಾಗಿ ವಿವರಿಸುತ್ತಾ ಬರುತ್ತಿದ್ದಾಗಲೇ ಇಂಗ್ಲೆಂಡಿನ ಎತ್ತುಗಳನ್ನು ಆಸ್ಟ್ರೇಲಿಯದ ಕೃಷಿಕನು ಪರಿಶೋಧನಾ ದೃಷ್ಟಿಯಿಂದ ನೋಡಬಹುದಾದಂತೆ ಮಿ. ಮೈಕಾಬರರು ಸಂತೆಯಲ್ಲಿ ಕೂಡಿದ್ದ ಎತ್ತುಗಳನ್ನು ನೋಡುತ್ತ ನಮ್ಮ ಜತೆಯಲ್ಲಿ ಬರುತ್ತಿದ್ದುದನ್ನು ನಾನೆಂದಿಗೂ ಮರೆಯೆನು.

ಅಧ್ಯಾಯ ಐವತ್ತೊಂದು
ಮತ್ತೊಂದು ಸಿಂಹಾವಲೋಕನ

ಗತಕಾಲದ ಘಟನೆಗಳನ್ನು ಇನ್ನೊಮ್ಮೆ ನೋಡಲು ಬಯಸುತ್ತೇನೆ. ನನ್ನ ಜೀವನ ಯಾತ್ರೆಯಲ್ಲಿ ನಡೆದು ಮುಂದರಿಯುವ ಜನಸಂದಣಿಯ ಪ್ರವಾಹದ ನಡುವೆ ಸ್ಥಿರವಾಗಿ ನಿಂತಂತೆ ತೋರುತ್ತಿರುವ ನನ್ನ ಪತ್ನಿಯ ಮುದ್ದು ಮುಖದ ಸುಂದರ ಚಿತ್ರವೊಂದು ನನ್ನ ದೃಷ್ಟಿಯನ್ನು ಸೆಳೆಯುತ್ತಿದೆ. 'ಒಮ್ಮೆ ನಿಂತು ನನ್ನನ್ನು ಪ್ರೀತಿಯಿಂದ ನೋಡಿ ಮುಂದರಿಸು – ನವಕುಸುಮವು ಬಾಡಿ ಬೀಳಲಿರುವುದನ್ನು ಒಮ್ಮೆ ನೋಡು' ಎಂದು ಅದು ಸಲಿಗೆಯಿಂದ, ನಿಷ್ಕಳಂಕ ಪ್ರೇಮದಿಂದ ನನ್ನನ್ನು ಕರೆದು ಹೇಳುತ್ತಿದೆ!

'ಗುಣವಾಗಲು ಸ್ವಲ್ಪ ದಿನ ಬೇಕು' ಎಂಬ ಸಮಾಧಾನದ ಮಾತುಗಳನ್ನು ನಾನು ಪುನಃ ಹೇಳುವ ಹಾಗಿಲ್ಲ – ಇನ್ನೆಂದೂ ಜಿಪ್ಪನೂ ಅವಳೂ ನನ್ನೆದುರು ಜತೆಯಾಗಿ ನಲಿದು ಆಡುವುದನ್ನು ನಾನು ಕಾಣೆನು!

ಜಿಪ್ಪನು ಮುದುಕನಾದನು; ಅವನ ದೃಷ್ಟಿ ಮಂದವಾಗಿದೆ. ಅವನು ಡೋರಾಳ ಹಾಸಿಗೆಯ ಒಂದು ಮೂಲೆಯಲ್ಲಿ ಸದಾ ಕುಳಿತು ಅವಳನ್ನು ಕಾಯುತ್ತಿರುವನು.

ಒಂದು ದಿನ ಡೋರಾಳು ನನ್ನನ್ನು ಕರೆದು –
"ನನ್ನ ತಲೆಗೂದಲಿನ ಗುಂಗುರುಗಳು ಹೇಗಿವೆ?" ಎಂದಳು.
"ಬಹು ಸುಂದರವಾಗಿವೆ – ಅದಕ್ಕಾಗಿ ಅಲ್ಲವೇ ಅಂದು ನಾನು ನಾಲ್ಕು ಗುಂಗುರುಗಳನ್ನು ಕೊಡೆಂದು ಕೇಳಿದ್ದು?" ಎಂದಂದೆನು.
ಇನ್ನೂ ಕೆಲವು ದಿನಗಳು ಕಳೆದನಂತರ ಒಂದು ದಿನ ಅಂದಳು –
"ನಾನು ಬುದ್ಧಿಯಿಲ್ಲದವಳಲ್ಲವೆ ಡೇವಿ?"
"ಇಲ್ಲ ಮುದ್ದೂ – ನೀನಿನ್ನೂ ಚಿಕ್ಕವಳು. ನಿನಗೆ ಬುದ್ಧಿ ಬರುತ್ತದೆ" ಅಂದೆನು.
"ಎಂದಾದರೂ ಬಂದೀತೆಂದು ಖಂಡಿತವಾಗಿಯೂ ನಂಬಿದ್ದೀಯೇನು?"
"ಖಂಡಿತವಾಗಿಯೂ ಬರುತ್ತದೆ – ಬಂದೇ ಬರುತ್ತದೆ."
"ನೀನು ಹೇಗೆ ಗ್ರಹಿಸಿದರೂ ನನಗೇ ಗೊತ್ತಿದೆ, ನನಗೆ ಬುದ್ಧಿ ಇಲ್ಲಾಂತ. ಸ್ವಲ್ಪ ಹೊತ್ತು ಕೈಯ್ಯನ್ನು ತಿಕ್ಕು" ಎಂದು ನನ್ನ ಕಡೆಗೆ ಕೈಯೊಡ್ಡಿ, ಸ್ವಲ್ಪ ಹೊತ್ತು ಆಲೋಚನಾಮಗ್ನಳಾಗಿದ್ದಳು. ಅನಂತರ ಅಂದಳು –
"ಏಗ್ನೆಸ್ಸಳೊಡನೆ ಮಾತಾಡಬೇಕೆಂದು ಆಸೆಯಿದೆ – ಅವಳನ್ನು ಬರಮಾಡುವಿಯೇನು?"

ಏಗ್ನೆಸ್ಸಳನ್ನು ಬರಮಾಡಿದೆ. ಏಗ್ನೆಸ್ಸಳೂ ಡೋರಾಳೂ ಗುಟ್ಟಿನಲ್ಲಿ ಮಾತಾಡಿಕೊಳ್ಳಲಿ ಎಂದು ನಾನು ಮಹಡಿಯಿಂದ ಕೆಳಗಿಳಿದೆನು. ಆಗ ಜಿಪ್ಪ್ ಅಂಗಳಕ್ಕೆ ಹೋಗಿದ್ದನು. ನನ್ನನ್ನು ಮಹಡಿಯ ಕೆಳಗೆ ಕಂಡ ಜಿಪ್ಪನು ತಾನು ಮಹಡಿಯ ಮೇಲೆ ಹತ್ತಬೇಕೆಂದು ಆರ್ತತನದಿಂದ ಕೂಗಿಕೊಂಡನು, ಮಹಡಿ ಹತ್ತಲು ಯತ್ನಿಸಿತು.
"ಈ ಹೊತ್ತು ಸಾಧ್ಯವಿಲ್ಲ ಜಿಪ್ಪ್" ಎಂದು ಹೇಳುತ್ತಾ ಅದರ ಬೆನ್ನನ್ನು ಸವರಿದೆ.
ಜಿಪ್ಪ್ ನನ್ನ ಮುಖ ನೋಡಿ ಕೂಗಿತು; ನನ್ನ ಕಾಲಬುಡದಲ್ಲಿ ಮುದುಡಿ ಮಲಗಿ ಆಗಲೇ ಸತ್ತಿತು.
ಈ ವಿಷಯವನ್ನು ಡೋರಾಳಿಗೆ ತಿಳಿಸುವುದೇ ಬೇಡವೇ ಎಂದು ಗ್ರಹಿಸುತ್ತಾ ಮಹಡಿಯನ್ನು ಹತ್ತತೊಡಗಿದೆ. ಆಗಲೇ ಏಗ್ನೆಸ್ಸಳು ನನ್ನನ್ನು ಕರೆಯುವುದಕ್ಕೆಂದು ಎದುರು ಬಂದಳು.
ಏಗ್ನೆಸ್ಸಳ ಮುಖದಲ್ಲಿ ಎಲ್ಲವೂ ಲಿಖಿತವಾಗಿತ್ತು. "ಆಗಿಹೋಯ್ತೆ, ಏಗ್ನೆಸ್?" ಎಂದು ನಾನು ಪ್ರಶ್ನಿಸಿದ್ದು ಮಾತ್ರ ಜ್ಞಾಪಕವಿದೆ. ಅನಂತರ ಸರ್ವತ್ರ ಅಂಧಕಾರ – ಏನೂ ಜ್ಞಾಪಕವಿಲ್ಲ.

ಅಧ್ಯಾಯ ಐವತ್ನಾಲ್ಕು

ಮಿ. ಮೈಕಾಬರರ ವಹಿವಾಟುಗಳು

ದುಃಖದ ಹೊರೆಯಿಂದ ನನ್ನ ಮನಸ್ಸು ಹೇಗಿತ್ತೆಂದು ತಿಳಿಸುವ ಪ್ರಸಂಗ ಇದಲ್ಲ. ನನ್ನ ಭವಿಷ್ಯ ಮುಂದುವರಿಯದಂತೆ ಭದ್ರವಾದ ಒಂದು ಗೋಡೆಯೇ ಅಡ್ಡವಿದ್ದಂತೆ ನನಗೆ ತೋರುತ್ತಿತ್ತು. ನನ್ನ ಸರ್ವಶಕ್ತಿಗಳೂ ಮುಗಿದು ನಾನು ಪೂರ್ಣ ನಿಶ್ಶಕ್ತನ್ನಾಗಿ ಬಿದ್ದು, ಇನ್ನು ಸುಖ ದೊರಕಬೇಕಾದರೆ ಮರಣ ಒಂದಲ್ಲದೆ ಬೇರೆ ಮಾರ್ಗವೇ ಇಲ್ಲವೆಂಬಂತೆ ನನಗೆ ತೋರುತ್ತಿತ್ತು.

ಇದೇ ಸಮಯದಲ್ಲಿ ನಾವು, ಒಂದಲ್ಲದಿದರೆ ಒಂದು ವಿಧದಲ್ಲಿ ಪರದೇಶಕ್ಕೆ ಹೋಗಲಿದ್ದ ಮಿ. ಮೈಕಾಬರರ ವಹಿವಾಟುಗಳಲ್ಲಿ ಕೈ ಹಾಕಿ ಕೆಲಸ ಮಾಡುತ್ತಲಿದ್ದೆವು. ಈ ಕೆಲಸದಲ್ಲಿ ಮನಸ್ಸು ಹಾಕುತ್ತಿದ್ದುದರಿಂದ ಡೋರಾಳ ಮರಣದಿಂದುಂಟಾಗಿದ್ದ ದುಃಖ ಸ್ವಲ್ಪ ಹಗುರವಾಗಿಯೂ ತೋರುತ್ತಿತ್ತು. ಆದರೆ, ಮನಸ್ಸು ತಾತ್ಕಾಲಿಕವಾಗಿ ಬೇರೆ ವಿಷಯಗಳಲ್ಲಿ ಪ್ರವಹಿಸಿ ಪುನರಪಿ ಡೋರಾಳ ನೆನಪನ್ನೇ ಅಪ್ಪಿಕೊಳ್ಳುವಾಗ ದುಃಖದ ತೀಕ್ಷ್ಣತೆ ಮೊದಲಿಗಿಂತಲೂ ಎಷ್ಟೆಷ್ಟೋ ಹೆಚ್ಚಾಗಿರುತ್ತಿತ್ತು. ನನ್ನ ದುಃಖ ಶಮನಕ್ಕೆ ದೇಶಾಟನೆಯು ಉತ್ತಮ ಸಾಧನವೆಂದು ಅತ್ತೆ ಮತ್ತು ನನ್ನ ಮಿತ್ರರು ಸಲಹೆಯನ್ನು ಕೊಡುತ್ತಿದ್ದರು. ಹೇಗಿದ್ದರೂ ಮಿ. ಮೈಕಾಬರರ ಸಾಲಗಳನ್ನು ಪರಿಹರಿಸಿ, ಅವರ ಪರದೇಶ ಯಾತ್ರೆಗೆ ತಕ್ಕ ವ್ಯವಸ್ಥೆಗಳನ್ನು ಮಾಡಿ ಪೂರೈಸದೆ ನಾನು ಯಾವ ಆಲೋಚನೆಗಳನ್ನೂ ಮಾಡುವುದಿಲ್ಲವೆಂದು ನಿರ್ಧರಿಸಿಕೊಂಡೆನು.

ಮಿ. ಮೈಕಾಬರರನ್ನು ಕುರಿತು ಕೆಲಸಗಳಲ್ಲಿ ಟ್ರೇಡಲ್ಸನು ಎಷ್ಟೊಂದು ಕೆಲಸ ಮಾಡುತ್ತಿದ್ದನೆಂದು ನನ್ನಿಂದ ಹೇಳಿ ಪೂರೈಸದು. ಅವನ ಕುರಿತಾದ ನಮ್ಮ ಕೃತಜ್ಞತೆಯನ್ನು ವಂದನೆಗಳಿಂದ ವಿವರಿಸಿ ಮುಗಿಸಲಾರೆವು. ಅವನು ಮಿ. ವಿಕ್ಫೀಲ್ಡರ ರಿಕಾರ್ಡುಗಳನ್ನು ಹಗಲಿರುಳು ಓದಿ ನೋಡಿ, ಪರೀಕ್ಷಿಸಿ, ಬರೆದು ನೋಡಿ, ಅಂಕೆ ಸಂಖ್ಯೆಗಳನ್ನು ಕೂಡಿಸಿ ಕಳೆದು ನೋಡಿ, ಪರೀಕ್ಷಿಸುತ್ತಿದ್ದನು. ಮುಖ್ಯವಾಗಿ ಯಾವ ವಹಿವಾಟುಗಳಲ್ಲಿಯೂ ಮಿ. ವಿಕ್ಫೀಲ್ಡರಿಗೆ ಅಪಮಾನವಾಗಕೂಡದೆಂಬ ಗುರಿಯನ್ನೂ ಸಾಧ್ಯವಾದರೆ – ಸಾಧ್ಯವಾದಷ್ಟು, ಅವರ ಆಸ್ತಿ ಅವರದಾಗಿಯೇ ಉಳಿಯುವಂಥ ಗುರಿಯನ್ನೂ ಇಟ್ಟುಕೊಂಡು ಇಂಥ ಪ್ರಯತ್ನಗಳನ್ನು ಅವನು ಮಾಡುತ್ತಿದ್ದನು.

ಇದೇ ಸಂದರ್ಭದಲ್ಲಿ ನಾವು ಮಿ. ಮೈಕಾಬರರ ಉಪಕಾರಗಳು ಎಷ್ಟಿತ್ತೆಂಬುದನ್ನು ಸ್ಮರಿಸುವುದು ನ್ಯಾಯವಿದೆ. ಮಿ. ಮೈಕಾಬರರಂಥ ಶ್ರಮಸಹಿಷ್ಣುಗಳೂ ಪರಿಶ್ರಮಿಗಳೂ ಯಾವ ವೃತ್ತಿಯಲ್ಲಿದ್ದರೂ ಅವರು ಅಭಿವೃದ್ಧಿಯನ್ನು ಹೊಂದದೆ ಇರಲಾರರು. ಅವರ ಧರ್ಮ ಬುದ್ಧಿ, ಕರ್ತವ್ಯ ನಿಷ್ಠೆ, ತರ್ಕ ಸರಣಿ, ರಿಕಾರ್ಡುಗಳ ಪರಿಶೋಧನಾಕ್ರಮ, ಶೋಧಿಸಿದ ರಿಕಾರ್ಡುಗಳನ್ನು ಕುರಿತು ಮಾಡುವ ಟಿಪ್ಪಣಿ – ಈ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದುದನ್ನೂ ನೋಡಿದರೆ ಅವರ ಯೋಗ್ಯತೆ ಎಷ್ಟಿತ್ತು, ಅವರು ಮಿ. ವಿಕ್ಫೀಲ್ಡರ ಆರ್ಥಿಕ ಉದ್ಧಾರದಲ್ಲಿ ಮಾಡಿರುವ ಉಪಕಾರ ಎಷ್ಟು, ಎಂಬುದು ನಮಗೆ ತೋರುತ್ತಿದ್ದುವು. ತಾವು ಕಡುಬಡತನದಲ್ಲೇ ನರಳುತ್ತಿದ್ದರೂ – ಸರ್ವ ಸಾಧಾರಣದ ವ್ಯಕ್ತಿಗಳು ಹತ್ತಾರು ಪೌಂಡು ಲಂಚಕ್ಕೆ ಸೋಲಬಹುದಾಗಿದ್ದ ಸಂದರ್ಭದಲ್ಲೇ ಉರೆಯನು ನೂರಾರು, ಅಲ್ಲ, ಸಾವಿರಗಟ್ಟಲೆ ಪೌಂಡು ಲಂಚ ಕೊಡಲು ತಯಾರಾಗಿದ್ದಾಗಲೇ ಅವರು ಯಾವ ವಿಧದ ಅನ್ಯಾಯದ ಹಣವನ್ನೂ ಮುಟ್ಟದೆ, ಕರ್ತವ್ಯ ಮತ್ತು ಧರ್ಮರಕ್ಷಣೆಗಾಗಿ, ಉರೆಯನನ್ನು ಎದುರಿಸಿ, ಹಠಗಟ್ಟಿ ಅವನ ತಂತ್ರಗಳನ್ನು ಮುರಿದು ಬೈಲಿಗೆಳೆದು, ಮಿ. ವಿಕ್ಫೀಲ್ಡರ ಸಂಸಾರವನ್ನೂ ಅವರ ಮೂಲಕ ನಷ್ಟಗಳನ್ನು ಹೊಂದಿದ ಇತರರನ್ನೂ ಕಾಪಾಡಿದ ಕಾರ್ಯ ಮಹತ್ತರವಾದುದೆಂಬುದರಲ್ಲಿ ಸಂಶಯವಿಲ್ಲ. ಈ ಕಾರಣಗಳಿಂದಲೇ ಅವರ ಕುಟುಂಬದ ಮುಂದಿನ ಹಿತಗಳನ್ನು ಒದಗಿಸಲು ನಾವೆಲ್ಲರೂ ತವಕಪಡುತ್ತಿದ್ದೆವು.

ನಮ್ಮ ಅತ್ತೆಯ ಜೀವನದಲ್ಲು ಇದೇ ಸಮಯದಲ್ಲಿ ಒಂದು ಅಪೂರ್ವ ಘಟನೆ ಸಂಭವಿಸಿತು. ಅತ್ತೆಯ ಮೇಲೆ ಅವಳ ವೈರಿಯೊಬ್ಬನನ್ನು ಎಚ್ಚರಿಸಿ, ಸಹಾಯ ಕೊಟ್ಟು ಅಟ್ಟುವುದಾಗಿ, ಉರೆಯ ನಮ್ಮೆದುರು ಹೆದರಿಸಿದ್ದನು. ಆದರೆ ಆ ವೈರಿಯು ಯಾರೆಂದು (ಉರೆಯನಿಗೆ ಗೊತ್ತಿರದಿದ್ದರೂ) ಅತ್ತೆಗೆ ಗೊತ್ತಿತ್ತು. ಉರೆಯ (ಆ ವೈರಿಯನ್ನು ಕುರಿತು ತನಗೆ ಮಾತ್ರ ಗೊತ್ತಿದ್ದಿತೆಂದು ಗ್ರಹಿಸಿ) ಬೆದರಿಸಿದಾಗಲೇ ಅವನು ಮೃತಪಟ್ಟಿದ್ದನೆಂದು ಅತ್ತೆಗೆ ಗೊತ್ತಿದ್ದಿತು. ಆ ವೈರಿ ಇನ್ನು ಯಾರೂ ಅಲ್ಲ – ಅತ್ತೆಯ ಗಂಡ ಮಾತ್ರ. ಅವನು ಆಸ್ಪತ್ರೆಯಲ್ಲಿ ಮೃತ್ಯುಶಯ್ಯೆಯಲ್ಲಿದ್ದಾಗ ಅತ್ತೆಯನ್ನು ಬರಮಾಡಿಕೊಂಡಿದ್ದನು. ಅತ್ತೆ ಅವನ ಕೊನೆಯ ಘಳಿಗೆಯವರೆಗೂ ಅವನ ಜತೆಯಲ್ಲೇ ಇದ್ದು, ಅವನು ಮೃತಪಟ್ಟನಂತರ ಉತ್ತರ ಕ್ರಿಯೆಗಳನ್ನೆಲ್ಲಾ ಮಾಡಿ ಮುಗಿಸಿ ಬಂದಿದ್ದಳು. ಈ ಕೆಲಸಗಳನ್ನೆಲ್ಲಾ ಅತ್ತೆ ಗುಟ್ಟಾಗಿಯೇ ನಡೆಸಿದ್ದಳು. ಈ ಕೆಲಸಗಳೆಲ್ಲ ಮುಗಿದನಂತರ ಒಂದು ದಿನ ಅತ್ತೆ ನನ್ನನ್ನು ಕರೆದುಕೊಂಡು ಹೋಗಿ ಗೋರಿಯನ್ನು ತೋರಿಸಿದ್ದಳು. ಅವಳು ಅವನನ್ನು ಪ್ರೀತಿಸಿದ್ದ ಒಂದೇ ಒಂದು ಕಾರಣದಿಂದ ಮತ್ತು ಧರ್ಮದೃಷ್ಟಿಯಿಂದ ಅತ್ತೆ ತನ್ನ ಗಂಡನ ಸಹಸ್ರ ಅಪರಾಧಗಳನ್ನು ಸಹಿಸಿ, ಮನ್ನಿಸಿ, ಹಣಕೊಟ್ಟು ಅವನನ್ನು ರಕ್ಷಿಸಿ, ಅವನ ಅಂತಿಮ ಕ್ರಿಯೆಗಳನ್ನು ಮಾಡಿಸಿದ್ದಳು.

ಅತ್ತೆ ಮಿ. ಮೈಕಾಬರ ದಂಪತಿಗಳನ್ನು ಬಹಳ ಮೆಚ್ಚಿದ್ದಳು. ಅದರಲ್ಲೂ ನಮ್ಮ ಹಣದ ವಹಿವಾಟದಲ್ಲಿ ಯಶಸ್ವಿಯಾಗಿ ಬರಲು ಮಿ. ಮೈಕಾಬರರ ಸಹಾಯ ಅಳತೆಗೆ ಸಿಕ್ಕದ – ಅಳತೆಗೆ ಮೀರಿದ, ಉಪಕಾರವೆಂದು ಅತ್ತೆ ನೆನೆಸುತ್ತಿದ್ದಳು. ಇದಕ್ಕಾಗಿಯೇ ಮಿ. ಮೈಕಾಬರರು ಆಸ್ಟ್ರೇಲಿಯಕ್ಕೆ ಹೋಗುವ, ಅಲ್ಲಿ ನೆಲಸುವ, ಇತ್ಯಾದಿ ಎಲ್ಲಾ ಖರ್ಚುಗಳನ್ನು ತಾನೇ ಕೊಡಬೇಕೆಂದು ನಿರ್ಧರಿಸಿಕೊಂಡಿದ್ದಳು.

ಮಿ. ಮೈಕಾಬರರ ಸಾಲಗಳ ಸಂಖ್ಯೆಯಾಗಲೀ ಮೊತ್ತವಾಗಲೀ ಎಷ್ಟಿತ್ತೆಂದು ಅವರಿಗೇ ಗೊತ್ತಿರಲಿಲ್ಲ. ಹಣದ ಅಡಚಣೆಗಾಗಿ ಮನಸ್ಸು ಕುಗ್ಗಿ ಉರೆಯನಿಗೆ ಪ್ರೋನೋಟು ಬರೆದು ಕೊಡುತ್ತಿದ್ದಾಗ ತನಗೆ ಬಂದ ಹಣಕ್ಕೂ ಬರದಿದ್ದ ಹಣಕ್ಕೂ ನೋಟು ಬರಕೊಟ್ಟಿರಬೇಕೆಂಬ ಸಂಶಯ ಅವರಿಗೆ ಕ್ರಮೇಣವಾಗಿ ಉಂಟಾಯಿತು. ಟ್ರೇಡಲ್ಸನ ಪರಿಶೋಧನೆಯಲ್ಲೂ ಪರಿಸ್ಥಿತಿಗಳು ಹಾಗೆಯೇ ಕಂಡು ಬಂದವು. ಹೀಗಾಗಿ ಅವರ ಸಾಲದ ಮರುಪಾವತಿಗಾಗಿ ಒಂದು ಪ್ರೋನೋಟು ಎದುರು ಬಂದಾಗ ಅದನ್ನು ತೆತ್ತು ಪರಿಹರಿಸಿ, ಮುಂದೆ ಬರಬಹುದಾದುವುಗಳನ್ನು ಎದುರು ನೋಡುತ್ತಲೇ ಇರಬೇಕಾಗಿತ್ತು.

ಇತ್ತ, ಮಿ. ಮೈಕಾಬರರಿಗೆ ತಾವು ಆಸ್ಟ್ರೇಲಿಯಕ್ಕೆ ಹೋಗಿ, ಅಲ್ಲಿ ನೆಲಸಿ, ಶ್ರೀಮಂತರಾಗುವ ವಿಷಯ ಒಂದು ಎಡೆಬಿಡದ ಹಂಬಲವಾಗಿ ಹೋಗಿತ್ತು. ಅವರು ಅವರ ನಡೆ, ನುಡಿ, ವ್ಯವಹಾರಗಳಲ್ಲಿ ಸಂಪೂರ್ಣ ಆಸ್ಟ್ರೇಲಿಯದವರಂತೆಯೇ ವರ್ತಿಸತೊಡಗಿದ್ದರು. ಆಸ್ಟ್ರೇಲಿಯದ ವಿಶಾಲ ಹುಲ್ಲುಗಾವಲುಗಳಲ್ಲಿ ದನಕರು, ಹಂದಿ ಮೊದಲಾದುವುಗಳನ್ನು ಸಾಕಿ ಹಣಮಾಡುವ ಕೆಲಸವನ್ನು ಅಲ್ಲಿಗೆ ಹೋದನಂತರ ಅಭ್ಯಾಸ ಮಾಡುವ ಬದಲು ಇಂಗ್ಲೆಂಡಿನಲ್ಲಿದ್ದಾಗಲೇ ಅಭ್ಯಾಸ ಮಾಡುವುದಕ್ಕಾಗಿ ಈಗಾಗಲೇ ಕೆಲವು ಹಂದಿಗಳನ್ನು ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ಸಾಕುವುದನ್ನೂ ತಮ್ಮಲ್ಲೇ ಇದ್ದ ದನಗಳನ್ನು ತಾವೇ ಸ್ವತಃ ಆಸ್ಟ್ರೇಲಿಯದ ಕೃಷಿಕನಂತೆ ಹಾಲು ಕರೆಯುವುದನ್ನೂ ಅಭ್ಯಾಸ ಮಾಡುತ್ತಿದರು.

ಟ್ರೇಡಲ್ಸನು ರಿಕಾರ್ಡು ಪರಿಶೋಧನೆಯ ಫಲಿತಾಂಶವಾಗಿ ಮಿ. ವಿಕ್ಫೀಲ್ಡರ ಮನೆಯೂ ಹಿತ್ತಲೂ ಕಂಪನಿಗಳಲ್ಲಿದ್ದ ಅವರ ಪಾಲುಗಳೂ ಯಾವ ಸಾಲವು ಇಲ್ಲದೆ ಅವರದಾಗಿ ಉಳಿಯುವುದಾಗಿ ತಿಳಿದೆವು. ಉರೆಯ ತನ್ನ ರಿಕಾರ್ಡುಗಳನ್ನು ತಯಾರಿಸುವಾಗ ಮಿ. ವಿಕ್ಫೀಲ್ಡರ ಆಸ್ತಿಗಳನ್ನು ನಾಶಪಡಿಸುವ ಉದ್ದೇಶವಿರದೆ, ಆ ಆಸ್ತಿಗಳೆಲ್ಲ ತನ್ನದಾಗಬೇಕೆಂಬ ಉದ್ದೇಶ ಮಾತ್ರ ಇಟ್ಟುಕೊಂಡಿದ್ದುದರಿಂದಲೂ ಉರೆಯನು ಸ್ವತಃ ಮಿತವ್ಯಯಿಯಾಗಿದ್ದುದರಿಂದಲೂ ಮತ್ತು ಈ ಕುತಂತ್ರಗಳನ್ನು ಕಂಡು ಹಿಡಿದು ಬಂದೋಬಸ್ತಿನ ಕಾರ್ಯಗಳನ್ನು ಜರುಗಿಸಿದ ಚಮತ್ಕಾರ ಮತ್ತು ಕ್ಷಿಪ್ರತೆಯ ಕಾರಣದಿಂದಲೂ ನಾವು ಹೆದರುತ್ತಿದ್ದಷ್ಟು ನಷ್ಟವಾಗದೆ ಮಿ. ವಿಕ್ಫೀಲ್ಡರಿಗೆ ಅಷ್ಟಾದರೂ ಆಸ್ತಿ ಉಳಿಯಿತು.

ಅತ್ತೆಯ ವಹಿವಾಟುಗಳಲ್ಲಿ ಟ್ರೇಡಲ್ಸನಿಗೆ ಪರಿಹರಿಸಲಾಗದ ಒಂದು ಸಮಸ್ಯೆ ತೋರುತ್ತಿತ್ತು. ಅತ್ತೆಯ ಆಸ್ತಿಯನ್ನು ಮಾರಿ ಸಿಕ್ಕಿದ್ದ ಐದು ಸಾವಿರ ಪೌಂಡುಗಳಲ್ಲಿ ಉರೆಯ ಮೂರು ಸಾವಿರ ಪೌಂಡುಗಳನ್ನು ಅಪಹರಿಸಿದ್ದಾನೆಂಬುದು ಗೊತ್ತು ಹಚ್ಚಲ್ಪಟ್ಟು, ಅಷ್ಟು ಹಣ ತನಿಖೆಯಿಂದ ನಮಗೆ ಸಿಕ್ಕರೂ ಉಳಿದಿದ್ದ ಎರಡು ಸಾವಿರ ಪೌಂಡು ಎಲ್ಲಿ ಹೋದುವೆಂಬುದನ್ನು ಕಂಡು ಹಿಡಿಯಲು ಟ್ರೇಡಲ್ಸನಿಂದ ಸಾಧ್ಯವಾಗಲಿಲ್ಲ. ಟ್ರೇಡಲ್ಸನು ಈ ಕಷ್ಟದಲ್ಲಿ ಸಿಕ್ಕಿಬಿದ್ದಿದ್ದಾನೆಂದು ಅತ್ತೆಗೆ ಗೊತ್ತಾದ ಕೂಡಲೇ ಅತ್ತೆ ತನ್ನ ಗುಟ್ಟನ್ನು ಹೊರಬಿಟ್ಟಳು. ಆ ಎರಡು ಸಾವಿರ ಪೌಂಡುಗಳನ್ನು ಅತ್ತೆಯು ಆಪದ್ಧನವಾಗಿ ತನ್ನ ಕೈಯಲ್ಲೇ ಇಟ್ಟುಕೊಂಡಿದ್ದಳೆಂದು ತಿಳಿಯಿತು. ಕೊನೆಗೆ ಟ್ರೇಡಲ್ಸನಿಗೆ ಉಳಿದಿದ್ದ ಕಾರ್ಯ ಎರಡೇ ಆಗಿದ್ದುವು. ಒಂದನೆಯದಾಗಿ, ಮಿ. ಮೈಕಾಬರರ ಸಾಲಗಳನ್ನು ಪರಿಹರಿಸುವುದು. ಎರಡನೆಯದಾಗಿ, ಉರೆಯನನ್ನು ಕುರಿತಾದ ಮುಂದಿನ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

ಮಿ. ಮೈಕಾಬರರ ಸಾಲಗಳ ತಗಾದೆ ಶಾಸನಬದ್ಧವಾಗಿ ಎದುರು ಬಂದಾಗ ಟ್ರೇಡಲ್ಸನು ಅತ್ತೆಯ ಕೈಯ್ಯಿಂದ ಹಣ ತೆಗೆದುಕೊಂಡು, ತಗಾದೆಯನ್ನು ಪರೀಕ್ಷಿಸಿ, ನ್ಯಾಯವಿದ್ದದ್ದನ್ನು ಕೊಟ್ಟು ಬರತೊಡಗಿದನು. ಈ ಖರ್ಚುಗಳನ್ನು ಅತ್ತೆಯು ಸಹಿಸಿದಳು. ಅಲ್ಲದೆ, ಮಿ. ಮೈಕಾಬರರ ಆಸ್ಟ್ರೇಲಿಯದವರೆಗಿನ ಪ್ರಯಾಣದ ಖರ್ಚನ್ನೂ ಅಲ್ಲದೆ, ಅಲ್ಲಿ ಹೋದ ಮೇಲಿನ ಉದ್ಯಮಗಳ ಬಗ್ಗಾಗಿ ಮಿ. ಮೈಕಾಬರರಿಗೆ ಒಂದು ನೂರು ಪೌಂಡುಗಳನ್ನೂ ಕೊಟ್ಟಳು. ಮತ್ತು ಮಿ. ಮೈಕಾಬರರ ಸ್ವಭಾವ ಮತ್ತು ನಡತೆಗಳಿಗೆ ಅಂಜಿ ಗೋಪ್ಯವಾಗಿ ಮಿ. ಮೈಕಾಬರರಿಗೆ ಆಪತ್ಕಾಲದಲ್ಲಿ ಮಾತ್ರ ಮಿ. ಪೆಗಟಿಯವರು ಕೊಟ್ಟು ಬರುವಂತೆ, ಮಿ. ಪೆಗಟಿಯ ಕೈಯ್ಯಲ್ಲೂ ಒಂದು ನೂರು ಪೌಂಡು ಹಣ ಕೊಟ್ಟಳು.

ಉರೆಯನನ್ನು ಕುರಿತಾದ ಕಾರ್ಯಕ್ರಮಗಳು ಸರಕಾರದ ಇಲಾಖೆಗಳಲ್ಲಿ ಕ್ರಮ ಪ್ರಕಾರವಾಗಿ, ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿ ನಡೆಯತೊಡಗಿದುವು. ಅವುಗಳಲ್ಲಿ ಅಗತ್ಯವಿದ್ದ ಕೆಲಸಗಳನ್ನು ಟ್ರೇಡಲ್ಸನು ಮಾಡಿಕೊಡುತ್ತಿದ್ದನು.

ಈ ಮೊದಲು ಪ್ರಸ್ತಾಪಿಸಿದ ಹಣದ ಬಟವಾಡೆಗಳನ್ನೆಲ್ಲ ಮಾಡಿದ ಮರುದಿನ ಬೆಳಗ್ಗೆ ಕೇಂಟರ್ಬರಿಯಿಂದ ನಮಗೊಂದು ಪತ್ರ ಬಂತು. ಪತ್ರ ಹೀಗಿತ್ತು:

ಕೇಂಟರ್ಬರಿ, ಶುಕ್ರವಾರ

ಪ್ರಿಯ ಮಹಿಳಾಮಣಿ ಟ್ರಾಟೂಡರೇ ಮತ್ತು ಮಿ. ಕಾಪರ್ಫೀಲ್ಡರೇ

ನಮ್ಮ ಜೀವನಪಥದಲ್ಲಿ ಶುಭೋದಯವಾಗಿ ಪರಿಣಮಿಸಲಿದ್ದ ದೂರ ಪ್ರಾಚ್ಯದ ನಾಡಿನ ದೃಶ್ಯವು ದಿಗಂತದಲ್ಲಿ ಆಕರ್ಷಣೀಯವಾಗಿ ಗೋಚರಿಸತೊಡಗಿದಾಗಲೇ ಕಾರ್ಮೋಡದ ಕತ್ತಲು ದೃಶ್ಯವನ್ನು ಪರಿಪೂರ್ಣ ಮುಚ್ಚಿದೆ. ಈ ಪಾಪಿಯು ಆ ದೃಶ್ಯವನ್ನು ಇನ್ನೆಂದಿಗೂ ನೋಡಲಾರನು.

ನಮ್ಮ ಸರಕಾರದ ನ್ಯಾಯಸ್ಥಾನದ ಹೀಪ್ ಮತ್ತು ಮೈಕಾಬರ್ ವ್ಯವಹರಣೆಯಲ್ಲಿನ ಡಿಕ್ರಿ ಪ್ರಕಾರದ ದಸ್ತಗಿರಿಯ ದೆಸೆಯಿಂದ ನಾನು ಪ್ರಕೃತ ಸರಕಾರದ ಬಂದೋಬಸ್ತಿನಲ್ಲಿದ್ದೇನೆ. ಈ ಸಂದರ್ಭಕ್ಕೆ ಹೋಲಿಸುವಂಥ ಮಹಾಕವಿಯೊಬ್ಬನ ಅಮರ ವಾಕ್ಯಗಳು
ಈಗ ನೆನಪಿಗೆ ಬರುತ್ತವೆ:
ಕಾದಿದ ಯುದ್ಧದಿ ಜಯಪ್ರದನಾಗಿ
ಬಾಳುವೆನೆಂದು ಹರುಷದಿ ಹೋಗಿ,
ಆದನು ವೈರಿಯ ಘನತರ ಖೈದೀ!

ಮಾನಸಿಕ ಹಿಂಸೆಗೂ ಒಂದು ಎಲ್ಲೆಯಿದೆ. ನಾನೀಗ ಈ ಎಲ್ಲೆಯನ್ನು ದಾಟಿರುವೆನು. ಆತ್ಮಹತ್ಯೆ ಮಾತ್ರ ಈ ದುಃಖದ ವಿಮೋಚನಾ ಸಾಧನವೆಂದು ಕ್ರೂರ ವಿಧಿಯು ನನಗೆ ತಿಳಿಸುತ್ತಿದೆ. ಈ ಜೈಲಿನಲ್ಲಿ ಜೀವವನ್ನು ಸವೆಯಿಸಿ ಸತ್ತ ಸಾಲಗಾರರಲ್ಲಿ ಸಹಾನುಭೂತಿಯುಳ್ಳ ಚರಿತ್ರಕಾರನೊಬ್ಬನು ಈ ವಠಾರದಲ್ಲಿ ತಿರುಗಾಡುತ್ತಾ ಬಂದದ್ದಾದರೆ ಇಲ್ಲಿನ ಗೋಡೆಯಲ್ಲಿ ಮುರುಕು ಮೂಳೆಯಿಂದ ಕೆತ್ತಿದ ಈ ಮುಂದಿನ ಎರಡಕ್ಷರಗಳು ಮಾತ್ರ ನಾನೊಬ್ಬ ಮನುಷ್ಯ ಬದುಕಿದ್ದೆನೆಂಬುದಕ್ಕೆ ಕುರುಹಾಗಿ ಉಳಿದು ಕಾಣಬಹುದು
ಸವೆದು ಮಸಕಾಗುವ –
ವಿ.ಮೈ.

ಅನಂತರ ಬರೆದದ್ದು –
ಮೇಲಿನ ಅಂಶವನ್ನು ಬರೆದು ಟಪಾಲಿಗೆ ಪತ್ರವನ್ನು ಹಾಕುವ ಮೊದಲು ನಾನು ತಿಳಿದ ಸಂತೋಷದ ಸಂಗತಿಯೇನೆಂದರೆ – ನಮ್ಮ ಪರಮ ಮಿತ್ರ ಮಿ. ಥಾಮಸ್ ಟ್ರೇಡಲ್ಸರವರು ನನ್ನಿಂದ ಸಲ್ಲಬೇಕಾಗಿದ್ದ ಅಸಲು, ಬಡ್ಡಿ, ಕೋರ್ಟು ಖರ್ಚು ಎಲ್ಲವನ್ನೂ ಮಿಸ್ ಟ್ರಾಟೂಡರವರ ಹೆಸರಿನಲ್ಲಿ ಪಾವತಿ ಮಾಡಿ ನನ್ನನ್ನು ಸಾಲದಿಂದ ವಿಮುಕ್ತಗೊಳಿಸಿರುತ್ತಾರೆ. ಈ ಪತ್ರವು ನಿಮಗೆ ತಲಪುವ ಘಳಿಗೆಯಲ್ಲಿ ನಮ್ಮ ಕುಟುಂಬವೂ ನಾನೂ ಸಂತೋಷ ಶಿಖರದಲ್ಲೇ ಇರುವೆವು.

ಅಧ್ಯಾಯ ಐವತ್ತೈದು

ಚಂಡಮಾರುತ

ನನ್ನ ಜೀವನದಲ್ಲೆಲ್ಲ ಅತಿ ಪ್ರಾಮುಖ್ಯವಾದ, ಎಂದೂ ಮರೆಯಲಾರದ, ಬಹು ಭಯಂಕರವಾದ, ಒಂದು ಘಟನೆಯನ್ನು ಸದ್ಯ ತಿಳಿಸಲಿದ್ದೇನೆ. ಈವರೆಗೆ ನಾನು ಬರೆಯುತ್ತಾ ಬಂದಿರುವ ನನ್ನ ಜೀವನ ವೃತ್ತಾಂತದ ಎಲ್ಲಾ ಭಾಗಕ್ಕೂ ಒಂದಲ್ಲದಿದ್ದರೆ ಇನ್ನೊಂದು ವಿಧದಲ್ಲಿ, ಸಂಬಂಧವಿರುವ ಈ ಘಟನೆ ನನ್ನ ಚರಿತ್ರೆಗೆಲ್ಲಕ್ಕೂ ಅದರ ಪ್ರಭಾವವನ್ನು ಬೀರಿದೆ. ವಿಶಾಲವಾದ ಬಯಲು ಪ್ರದೇಶದಲ್ಲೊಂದು ಎತ್ತರದ ಗೋಪುರವಿದ್ದರೆ ಅದರ ನೆರಳು ಅತ್ಯಂತ ದೂರದ ಗಡಿಯವರೆಗೂ ಬಿದ್ದೇ ಬೀಳುವಂತೆ, ನನ್ನ ಬಾಲ್ಯದ ವೃತ್ತಾಂತವನ್ನು ಬರೆಯುವಾಗಲೂ ಅನಂತರದ ಘಟನೆಗಳನ್ನು ಬರೆಯುವಾಗಲೂ ಮುಂದೆ ಈ ಭಯಾನಕ ಪ್ರಸಂಗವನ್ನು ಬರೆಯುವುದಿದೆಯಲ್ಲಾ ಎಂಬ ಅನುಭವ, ಆ ನೆರಳಿನಂತೆಯೇ ನಾನು ಉದ್ದೇಶಪಡದೇ ಈ ಎಲ್ಲಾ ಬರವಣಿಗೆಯಲ್ಲೂ ತನ್ನ ಪ್ರಭಾವವನ್ನು ಸ್ವಲ್ಪವಾದರೂ ಬೀರಿರಲೇಬೇಕು.

ಈ ಘಟನೆ ನಡೆದು ಅನೇಕ ವರ್ಷಗಳು ಕಳೆದನಂತರವೂ ಇದನ್ನು ಕನಸಿನಲ್ಲಿ ಕಂಡು ಬೆಚ್ಚಿ ಎದ್ದದ್ದಿದೆ. ಶಾಂತಮಯವಾದ ಕೋಣೆಯಲ್ಲಿ ಒಂಟಿಗನಾಗಿ ಕುಳಿತಾಗಲೂ ಕೆಲವೊಮ್ಮೆ ಇದನ್ನೇ ಕಂಡು ಗಾಬರಿಗೊಂಡಿದ್ದೇನೆ. ಕೆಲವು ಸಂದರ್ಭ, ಸನ್ನಿವೇಶಗಳಲ್ಲಿ ವಿಶೇಷ ಕಾರಣವಿಲ್ಲದೆ, ಮನಸ್ಸಿನಲ್ಲಿ ಅಸ್ಪಷ್ಟವಾಗಿ ಮೂಡಿ, ಅನಂತರ ಸ್ಪಷ್ಟವಾಗಿ ತೋರುತ್ತಾ ಮನಸ್ಸನ್ನೇ ವಿಕಲ್ಪಗೊಳಿಸುವ ನೆನಪೆಂದರೆ ಈ ಪ್ರಕೃತಿ ಪ್ರಕೋಪ. ಬಿರುಗಾಳಿ ಬೀಸುತ್ತಿರುವುದನ್ನು ಎಂದು ನೋಡಿದರೂ ಕಾರ್ಮುಗಿಲು ಮುಚ್ಚಿರುವ ಸಮುದ್ರ ದಂಡೆಯನ್ನು ಎಂದು ನೋಡಿದರೂ ಆಗ ಎಲ್ಲಾ ಈ ನೆನಪು ಪ್ರತ್ಯಕ್ಷ ಘಟನೆಯೇ ಆಗಿ ತೋರಿ, ನನ್ನ ಬುದ್ಧಿಯನ್ನೇ ಭ್ರಮಾನ್ವಿತವಾಗಿ ಮಾಡಿಬಿಡುತ್ತದೆ. ಘಟನೆ ಎಂದೋ ಕಳೆದುಹೋಗಿ, ನಾನಿಂದು ಇದನ್ನು ಬರೆಯುತ್ತಿರುವೆನಾದರೂ ಹಿಂದೆ ಹೀಗೆ ಅದು ನಡೆದಿತ್ತೆಂದು ನೆನಪಿನಿಂದ ಎತ್ತಿ ತೆಗೆಯುವ ಅಗತ್ಯ ನನಗೆ ತೋರುವುದಿಲ್ಲ. ನಾನು ಈ ಘಟನೆಯನ್ನು ಈಗಲೇ ಪ್ರತ್ಯಕ್ಷ ಕಾಣಬಲ್ಲೆ. ನಾನದನ್ನು ಕಂಡು ಈಗಲೂ ಹೆದರುತ್ತೇನೆ!

ಪ್ರವಾಸಿಗಳು ದೇಶ ಬಿಡುವ ಸಮಯ ಸಮೀಪಿಸಿತು. ಎಮಿಲಿಗೆ ನಾನು ತಿಳಿಸಬೇಕೆಂದು ಹೇಮನು ನನ್ನೊಡನೆ ಹೇಳಿದ್ದ ಮಾತುಗಳನ್ನು ಮುಖತಃ ತಿಳಿಸಲು ನನಗೆ ಅನುಕೂಲವಾಗಲಿಲ್ಲ. ಆದರೆ ಹೇಮನ ಮಾತುಗಳನ್ನೇ ಒಂದು ಪತ್ರವಾಗಿ ನಾನೇ ಬರೆದು ಮಿ. ಪೆಗಟಿ ಮುಖಾಂತರ ಎಮಿಲಿಗೆ ಕಳುಹಿಸಿಕೊಟ್ಟೆನು. ನನ್ನ ಪತ್ರಕ್ಕೆ ಎಮಿಲಿಯಿಂದ ಮರುಟಪಾಲಿನಲ್ಲೇ ಉತ್ತರವೂ ಬಂತು. ಎಮಿಲಿಯ ಉತ್ತರ ಹೀಗಿತ್ತು:

"ನಿನ್ನ ಆಶೀರ್ವಾದಪೂರ್ವಕವಾಗಿ ಕಳುಹಿಸಿದ ಪತ್ರವು ತಲುಪಿತು. ನಾನು ನನ್ನ ವಿನಮ್ರ ವಂದನೆಗಳನ್ನು ಮಾತ್ರ ನಿನಗೆ ಅರ್ಪಿಸಬಲ್ಲೆನೇ ಹೊರತು, ನಿನ್ನ ಮತ್ತು ಅವನ ಕರುಣೆಗೆ ತಕ್ಕಂತೆ, ಪ್ರತಿಯಾಗಿ, ಬೇರೆ ಏನನ್ನೂ ಕಳುಹಿಸಲಾರೆ.

"ನಿನ್ನ ಪತ್ರದ ಮಾತುಗಳು ಎಷ್ಟೊಂದು ಪ್ರಿಯವಾದುವು ಎಂದು ಹೇಳಿ ತೀರದು. ಆ ಪತ್ರವನ್ನು ನನ್ನ ಹೃದಯದ ಸಮೀಪವಾಗಿ ಸದಾ ಕಾದಿಟ್ಟುಕೊಂಡಿರುವೆನು. ಪತ್ರದ ಕೆಲವು ವಿಷಯಗಳು ಮುಳ್ಳಿನಂತೆ ನನಗೆ ಚುಚ್ಚುವುವು. ಅಂಥ ಅಂತರಂಗದ ಚುಚ್ಚುವಿಕೆಯಿಂದ ನನ್ನಲ್ಲುಂಟಾಗುವ ಆನಂದವೆಷ್ಟೆಂಬುದನ್ನು ನಾನು ಮಾತ್ರ ತಿಳಿಯಬಲ್ಲೆನು. ನಿಮ್ಮಿಬ್ಬರ ಕರುಣಾಮಯ ಹೃದಯದ ಅನುಭವವನ್ನರಿತಿರುವ ನಾನು ಕರುಣಾ ಮತ್ತು ದಯಾಮಯನಾದ ದೇವರು ಹೇಗಿರಬಹುದೆಂದು ಊಹಿಸಿಯೇ ಆನಂದಿಸುತ್ತೇನೆ. ನಾನು ಈವರೆಗೆ ದೇವರನ್ನು ಪ್ರಾರ್ಥಿಸಿದುದರ ಫಲವಾಗಿ ಆ ಪತ್ರವು ನನಗೆ ಲಭಿಸಿತೆಂದು ನಂಬಿದ್ದೇನೆ.

"ದೇವರು ನಮ್ಮ ಮೇಲೆ ದಯವಿಡಲಿ, ನಮಗೆ ಮನಃಶಾಂತಿಯನ್ನು ಕೊಡಲಿ ಎಂದು ಸದಾ ಪ್ರಾರ್ಥಿಸುತ್ತಿದ್ದೇನೆ.
"ಪರಲೋಕದಲ್ಲಿ ದೇವರು ನನ್ನನ್ನು ಕ್ಷಮಿಸಿದರೆ ಪುನಃ ಬಾಳಿಕೆಯಾಗಿ ಜನಿಸಿ ನಿಮ್ಮ ಪಾದಗಳನ್ನೇ ನಾನು ಸೇರುವೆನು. ಅನಂತ ವಂದನೆಗಳು, ಅನಂತ ಪ್ರಣಾಮಗಳು!"

ಈ ಪತ್ರವನ್ನು ತೆಗೆದುಕೊಂಡು ಹೋಗಿ ಹೇಮನಿಗೆ ನಾನೇ ಕೊಟ್ಟು ಅವನೊಡನೆ ಮಾತಾಡಿ ಬರುವುದು ಒಳ್ಳೆಯದೆಂದು ನಾನು ಯಾರ್ಮತ್ತಿಗೆ ಹೊರಟೆನು. ನಮ್ಮ ಬಂಡಿ ಇಪ್ಸ್ವಿಚ್ಚಿಗೆ ತಲಪುವಾಗಲೇ ಸಂಜೆಯಾಗಿತ್ತು. ಆಕಾಶದಲ್ಲಿ ನಾನಾ ಬಣ್ಣದ ಮೋಡಗಳು ಜತೆ ಸೇರತೊಡಗಿದ್ದುವು. ಗಾಳಿಯೇನೋ ಸ್ತಬ್ಧವಾಗಿತ್ತು. ಬಂಡಿ ಮುಂದುವರಿದ ಹಾಗೆ ಬಣ್ಣದ ಮೋಡಗಳೆಲ್ಲಾ ಸಾಧಾರಣ ಕಪ್ಪು ಹೆಚ್ಚಾದ ಬೂದು ಬಣ್ಣಕ್ಕೆ ತಿರುಗತೊಡಗಿದುವು. ಬಲವಾದ ಬಿರುಗಾಳಿಯ ಪೂರ್ವ ಸಿದ್ಧತೆಗಾಗಿ ಪ್ರಕೃತ ಗಾಳಿ ಸ್ತಬ್ಧವಾಗಿರುವುದೆಂದು ಬಂಡಿಯವನು ಹೇಳಿದನು. ಬಂಡಿಯಲ್ಲೇ ರಾತ್ರಿ ಪ್ರಯಾಣ ಮಾಡುವುದು ಸ್ವಲ್ಪ ಹೆದರಿಕೆಯ ಸಂಗತಿಯೆಂದು ನಾನು ಬಂಡಿಯವನೊಂದಿಗೆ ಹೇಳಿದೆನು. ಸ್ವಲ್ಪ ಮಾತಾಡುತ್ತಾ ಮುಂದರಿದರೆ ಅಷ್ಟಾದರೂ ಸಂತೋಷವೆಂದು ನಾನು ಬಂಡಿಯವನೊಡನೆ ಮತ್ತೂ ಮಾತಾಡತೊಡಗಿದೆ –
"ಆಕಾಶದಲ್ಲಿ ಸ್ವಲ್ಪ ವಿಶೇಷವಿರುವಂತೆ ತೋರುತ್ತದಲ್ಲವೇ?"

"ಹೌದು ಸರ್, ಈ ರೀತಿ ಆಕಾಶ ಆದದ್ದು ನಾನೆಂದೂ ನೋಡಿರುವುದಿಲ್ಲ. ಸಮುದ್ರದಲ್ಲಿ ಉತ್ಪಾತ ಏಳುವಂತೆ ಕಾಣುತ್ತೆ, ಸರ್." ಎಂದನು ಬಂಡಿಯವನು. ಅದಕ್ಕಿಂತ ಹೆಚ್ಚು ಮಾತಾಡಲು ಬಂಡಿಯವನಿಗೆ ಉತ್ಸಾಹವಿರಲಿಲ್ಲ.

ನಮ್ಮ ಬಂಡಿ ಸ್ವಲ್ಪ ದೂರ ಹೋಗುತ್ತಾ ಇದ್ದ ಹಾಗೆಯೇ ಗಾಳಿ ಬೀಸಲಾರಂಭಿಸಿತು. ಬೂದು ಬಣ್ಣದ ಮೋಡಗಳೆಲ್ಲ ಕಪ್ಪಾಗತೊಡಗಿದುವು. ಸೂರ್ಯ ಅಸ್ತಂಗತನಾಗತೊಡಗಿದ್ದನು. ಅಸ್ತಮಿಸುವ ಸೂರ್ಯನ ಬೆಳಕು ಕರಿಮೋಡಗಳ ಅಂಚಿನಿಂದ ಹೊರಹೊಮ್ಮುವಾಗ, ಕ್ರೂರ ಮೋಡಗಳು ತತ್ಕಾಲ ಅರೆನಗೆ ನಕ್ಕರೂ ಸೂರ್ಯಾಸ್ತಮಾನವನ್ನೇ ತಮ್ಮ ಪರಾಕ್ರಮವನ್ನು ತೋರಿಸಲು ಕಾಯುತ್ತಿರುವಂತೆ ತೋರುತ್ತಿದ್ದುವು. ಇತ್ತ, ಪ್ರಪಂಚದಲ್ಲಿ ಯಾರಿಗೆ ಏನಾದರೂ ತನ್ನ ಕಾರ್ಯ ಸಾಧಿಸುವ ದಿನಮಣಿಯು ಅಸ್ತಂಗತನೇ ಆದನು. ಅಷ್ಟಾದದ್ದೇ ತಡ – ಗಾಳಿ ರಭಸದಿಂದ ಬೀಸಲಾರಂಭಿಸಿತು. ಮುಗಿಲುಗಳ ಸಾಂದ್ರತೆ ಹೆಚ್ಚಿತು. ಭೂಭಾಗದ ಮೋಡಗಳೆಲ್ಲ ಸಮುದ್ರದ ಮೇಲೆ ಕ್ರೋಢೀಕರಿಸಿದುವು. ಗಾಳಿ ಹೊಸ ಹೊಸ ಮೋಡದ ರಾಶಿಗಳನ್ನು ಎಳೆದೊಯ್ದು ಒಂದೇ ಕಡೆ ಶೇಖರಿಸತೊಡಗಿತು. ಕೊನೆಗೆ ಭೂಮಿ ಆಕಾಶಗಳ ಗಡಿ ಕಾಣದಂತೆ ಸರ್ವತ್ರ ಮೋಡಗಳೇ ತುಂಬಿದುವು. ನಮ್ಮ ಬಂಡಿಗೆ ಸಮುದ್ರಕ್ಕೂ ಮಧ್ಯೆ ಮೋಡಗಳದೇ ಒಂದು ಪ್ರದೇಶವಿದ್ದಂತೆಯೂ ತೋರುತ್ತಿತ್ತು. ಈ ಪ್ರದೇಶದಲ್ಲಿ ಹಿಡಿಸದ ಮೋಡಗಳು ಆಕಾಶದವರೆಗೆ ಎದ್ದು, ಕ್ರಮೇಣವಾಗಿ ಸಮುದ್ರದ ಮೇಲೆ ತಮ್ಮ ಅಪರಿಮಿತ ಭಾರವನ್ನೇ ಹೊರಿಸಿ, ಸಮುದ್ರವೂ ತುಳುಕಿ ಉಕ್ಕತೊಡಗಿತು. ಕೊನೆಕೊನೆಗೆ ಸಮುದ್ರದ ಕಡೆ ಯಾವುದೂ ಸ್ಥಿರವಾಗಿರದೆ, ಅಲ್ಲೋಲಕಲ್ಲೋಲವಾಗಿ, ಗಡಿಯಿಲ್ಲದೆ, ಮೇರೆಯಿಲ್ಲದೆ, ನಾವು ನೋಡುತ್ತಿದ್ದವರ ಮನಸ್ಸಿನ ಭ್ರಮೆಯೋ ಅದು, ಹಾಗೂ ಆಗುವುದಿರಬಹುದೇ ಎಂದು ಭಯಪಡುವ ರೀತಿಯಲ್ಲಿ ಸರ್ವತ್ರ ಚಲನೆ, ಅಸ್ಥಿರ, ಭಯ, ಭ್ರಮೆಯೇ ಪಸರಿಸಿದುವು.

ಇದೇ ಸಮಯದಲ್ಲಿ ಮಳೆಯೂ ಸುರಿಯಲಾರಂಭಿಸಿತು. ಮಳೆ ಹನಿಗಳು ತಂತಿಯ ಚಾಟಿಯಿಂದ ನಮ್ಮನ್ನು ಹೊಡೆದಂತೆ ನಮ್ಮ ಮೇಲೆ ಸುರಿಯಲಾರಂಭಿಸಿದುವು. ಸಮುದ್ರದ ಎಡೆಬಿಡದ ಘೋಷ, ಗಾಳಿಯ ಅಬ್ಬರ, ನೀರಿನ ಪೆಟ್ಟು, ಇವನ್ನೆಲ್ಲಾ ಕೇಳಿ, ಅನುಭವಿಸುತ್ತಾ ರಾತ್ರಿಯಲ್ಲೇ ನಾವು ಯಾರ್ಮತ್ತಿಗೆ ತಲುಪಿದೆವು.

ಆ ರಾತ್ರಿ ನಾನು ಒಂದು ಹೋಟೆಲಿನಲ್ಲಿ ಮಲಗಿ ನಿದ್ರಿಸಿದೆನು. ಮರು ದಿನ ಬೆಳಗ್ಗೆ ಎದ್ದು ನೋಡುವಾಗಲೂ ಸಮುದ್ರ ಆಕಾಶಗಳು ಹಿಂದಿನ ದಿನವಿದ್ದಂತೆಯೇ ಇದ್ದುವು. ಹಿಂದಿನ ದಿನದ ರೌದ್ರ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಜನರು ತಂತಮ್ಮ ಮನೆಗಳಿಂದ ಹೊರಟು ರಸ್ತೆಯಲ್ಲಿ ಗುಂಪು ಗುಂಪಾಗಿ ಸೇರುತ್ತ ವರದಿಗಳನ್ನು ಹೇಳುತ್ತಲೂ ಕೇಳುತ್ತಲೂ ಇದ್ದರು. ಒಂದು ಇಗರ್ಜಿಯ ಗೋಪುರವು ಮುರಿದು, ಒಂದಂಶ ಕೆಳಗೆ ಬಿದ್ದೇ ಹೋಗಿತ್ತಂತೆ. ಕೆಲವು ಕಡೆಗಳಲ್ಲಿ ರಸ್ತೆಯ ಸಾಲು ಮರಗಳು ಬೇರು ಸಹಿತ ಮಗುಚಿ ರಸ್ತೆಗೆ ಅಡ್ಡವಾಗಿ ಬಿದ್ದಿದ್ದುವಂತೆ. ಇನ್ನು ಯಾವ ಹೊತ್ತಿಗೆ, ಯಾವ ಕಟ್ಟಡ ಕುಸಿದು ಬೀಳಬಹುದೆಂದು ಹೇಳಲು ಧೈರ್ಯವಿಲ್ಲದೆ, ತಮಗೆ ಭದ್ರವೆಂದು ತೋರುವ ಕಟ್ಟಡಗಳ ಮರೆಯಲ್ಲಿ ನಿಲ್ಲುವುದು ಉತ್ತಮವೆಂದು ಜನರು ಮಾತಾಡಿಕೊಳ್ಳುತ್ತಿದ್ದರು. ಮುದುಕಿಯರು ಚಿಕ್ಕ ಬಾಲಕರೂ ತ್ರಾಣವಿರುವವರನ್ನು ಆಶ್ರಯಿಸಿ ಬಹು ಗಾಬರಿಯಿಂದ ವರ್ತಮಾನಗಳನ್ನು ಕೇಳುತ್ತಿದ್ದರು. ಕಿರಿಯರಂತೂ ಹಿರಿಯರು ಹೇಳಿಕೊಳ್ಳುತ್ತಿದ್ದ ಮಾತುಗಳನ್ನು ಕೇಳುತ್ತಾ ಹಿರಿಯ ಮುಖದಲ್ಲಿ ತೋರಿಬರುತ್ತಿದ್ದ ಹೆದರಿಕೆ, ಆಶ್ಚರ್ಯ, ದುಃಖ ಮೊದಲಾದ ಚಿಹ್ನೆಗಳನ್ನು ತಾವು ತಮ್ಮ ಮುಖದಲ್ಲೂ ತೋರ್ಪಡಿಸಿಕೊಂಡು ನಿಂತಿದ್ದರು. ಈ ದಿನವೆಲ್ಲಾ ಹೇಮನನ್ನು ಕಾಣಲು ನನಗೆ ಅನುಕೂಲವಾಗಲಿಲ್ಲ. ಹೇಮನು ಒಂದು ಹಡಗದ ರಿಪೇರಿ ಕೆಲಸಕ್ಕಾಗಿ ನೆರೆಯ ಒಂದು ಬಂದರಕ್ಕೆ ಹೋಗಿದ್ದನಾಗಿ ತಿಳಿದೆನು. ಈ ದಿನವೆಲ್ಲಾ ಹಿಂದಿನ ದಿನದಂತೆಯೇ ಕಳೆಯಿತು. ನಾನು ಈ ದಿನವೂ ಹೋಟೆಲಿಗೆ ಹೋಗಿ ಮಲಗಿ ನಿದ್ರಿಸಿದೆನು.

ಈ ದಿನ ರಾತ್ರಿ ಕಳೆಯುತ್ತಾ ಹೋದ ಹಾಗೆ, ಗಾಳಿಯ ಆರ್ಭಟ ಜೋರಾಯಿತು. ಕೊನೆಗೆ ಆರ್ಭಟೆಯೂ ರಭಸವೂ ಹೆಚ್ಚುತ್ತಾ ಯಾರ್ಮತ್ತನ್ನೇ ಕಿತ್ತೊಗೆಯುವಂತೆ ಬೀಸತೊಡಗಿತು. ಗಾಳಿಯ ಜತೆಗೆ ಮಳೆ ಮಿಂಚು ಸಿಡಿಲುಗಳು ಸೇರಿದುವು. ಆದರೆ, ನಾನು ಹೆಚ್ಚು ಬಳಲಿದ್ದುದರಿಂದ, ಇಂಥ ಶಬ್ದ, ಅಲುಗಾಟಗಳ ಮಧ್ಯವೇ ನನಗೆ ನಿದ್ರೆ ಬಂತು. ಸಮುದ್ರದ ಘೋಷ, ಗಾಳಿಯ ಆರ್ಭಟ, ಸಿಡಿಲಿನ ಶಬ್ದಗಳನ್ನು ಕೇಳುತ್ತಾ ಇದ್ದ ಹಾಗೆ ಬಂದ ನಿದ್ರೆಯಲ್ಲಿ – ಅವೆಲ್ಲವೂ ಎಡೆಬಿಡದೆ ನಡೆಯುತ್ತಲೇ ಇದ್ದಿರಬೇಕಾದುದರಿಂದ, ಈ ಶಬ್ದಗಳಿಗೆ ಸಂಬಂಧಪಟ್ಟು ಆಗಿರುವ ಕನಸುಗಳನ್ನು ಕಂಡೆನು. ನಾನೂ ನನ್ನ ಸ್ನೇಹಿತರೂ ಸೇರಿ ಬಿರುಗಾಳಿ ಜಡಿಮಳೆಗಳ ಎದುರೇ ಶತ್ರುಗಳ ಕೋಟೆಗೆ ಫಿರಂಗಿ ಹೊಡೆಯುತ್ತಿದ್ದಂತೆ ಸ್ವಪ್ನವನ್ನು ಕಂಡೆನು. ಈ ಯುದ್ಧದ ಮಧ್ಯೆ ಆವೇಶದಿಂದ ನಾನು ಪ್ರವೇಶಿಸಿರುವಾಗಲೇ ಯಾರೋ ನನ್ನನ್ನು ಕರೆದಂತೆ ಕೇಳಿಸಿತು. ಕರೆದವರು ನಮ್ಮ ಜತೆಯ ಯುದ್ಧ ಭಾಗಿಗಳೋ ಇತರರೋ ಎಂದು ಸ್ಪಷ್ಟಪಡಿಸಿಕೊಳ್ಳುವುದರಲ್ಲಿ ನನಗೆ ಎಚ್ಚರಿಕೆಯಾಯಿತು. ಆಗ ಬೆಳಗ್ಗೆ ಒಂಬತ್ತು ಘಂಟೆಯಾಗಿತ್ತು. ನನ್ನ ಕೋಣೆಯ ಬಾಗಿಲನ್ನು ಯಾರೋ ತಟ್ಟುತ್ತಿದ್ದರು.
"ಏನು ವಿಶೇಷ?" ಎಂದು ವಿಚಾರಿಸಿದೆನು.
"ಯಾರ್ಮತ್ತಿನ ಸಮೀಪದಲ್ಲಿ ಒಂದು ಹಡಗು ಪುಡಿಯಾಗುವ ಸಂಭವವಿದೆ" ಅಂದರು ಹೊರಗಿನವರು.
ನಾನು ಗಾಬರಿಯಿಂದ ಅಂಗಿ ತೊಟ್ಟುಕೊಂಡು ಹೊರಗೆ ಬಂದು ಕೇಳಿದೆ –
"ಯಾವ ಹಡಗಪ್ಪಾ, ಯಾರದು?"
"ಸ್ಪೆಯಿನ್ ಅಥವಾ ಪೋರ್ಚುಗಲ್ಲಿನ ಒಂದು ಸ್ಕೂನರಿನಂತೆ ತೋರುತ್ತದೆ. ವೈನ್, ಹಣ್ಣು–ಹಂಪಲು ತುಂಬಿಕೊಂಡು ಬಂದ ಹಡಗಾಗಿರಬೇಕು. ಈಗಲೇ ಮುಳುಗುವಂತಿದೆ, ನೋಡಬೇಕಾದರೆ ಬೇಗ ಬನ್ನಿ" ಎಂದಂದನು ಹೊರಗಿನವನು.

ಈ ವರ್ತಮಾನವಿತ್ತ ವ್ಯಕ್ತಿಗೆ ಗಾಬರಿಯಿಂದ ಹುಚ್ಚೇ ಹಿಡಿದಿತ್ತು. ಇದೇ ವರ್ತಮಾನವನ್ನು ಅನೇಕ ಜನರಿಗೆ ದಾರಿಯುದ್ದಕ್ಕೂ ಕರೆದು ಹೇಳುತ್ತಾ ಅವನು ಸಮುದ್ರದ ಕಡೆಗೆ ಓಡಿದನು.

ನನ್ನ ಎದುರಿದ್ದ ಜನರೆಲ್ಲರೂ ಒಂದೇ ದಿಕ್ಕಿಗೆ – ಸಾಧಾರಣ, ಓಡಿಕೊಂಡೇ ಹೋಗುತ್ತಿದ್ದರು. ನಾನೂ ಅವರ ಜತೆಯಲ್ಲೇ ಹೋದೆ. ಎಲ್ಲರೂ ಒಂದೇ ಕಡೆ ಗುಂಪಾಗಿ ಸೇರಿಕೊಂಡು ಸಮುದ್ರದ ಕಡೆಗೆ ನೋಡುತ್ತಿದ್ದರು. ಸಮುದ್ರವು ಪ್ರಕ್ಷುಬ್ದವಾಗಿತ್ತು. ರಾತ್ರಿಯೆಲ್ಲಾ ಬೀಸಿಕೊಂಡೇ ಇರುತ್ತಿದ್ದ ಗಾಳಿ ಈಗ ಸ್ವಲ್ಪ ವಿರಾಮ ತೆಗೆದುಕೊಂಡಿದ್ದಂತೆ ಸ್ತಬ್ದವಾಗಿತ್ತು. ಬಿರುಗಾಳಿಯ ಹೊಡೆತಕ್ಕೆ ಪ್ರಕ್ಷುಬ್ದವಾಗಿದ್ದ ಸಮುದ್ರ ರೌದ್ರ ತಾಳಿ, ತಾನೇ ತಾನಾಗಿ, ಸಮುದ್ರದ ದಂಡೆ, ಯಾರ್ಮತ್, ಮತ್ತು ಸಮೀಪದ ಸ್ಥಳಗಳನ್ನೆಲ್ಲ ಕಂಪಿಸಬೇಕೆನ್ನುವಂತೆ ತಾಂಡವವಾಡುತ್ತಿತ್ತು. ಹಿಂದಿನ ಎರಡು ದಿನಗಳ ಕ್ರೋಧವನ್ನೆಲ್ಲ ಕ್ರೋಢೀಕರಿಸಿ ಇಂದು ಸಮುದ್ರದ ಬದಿಗೆ ಹೊಡೆಯುವುದಕ್ಕಾಗಿ ಎನ್ನುವಂತೆ, ಸಮುದ್ರ ಅಳತೆ ಮೀರಿ ಉಬ್ಬಿ, ಅಲೆಗಳಿಂದ ಕಂಪಿಸುತ್ತಾ ನೊರೆ ಕಾರುತ್ತಾ ಆವೇಶಗೊಂಡು ಆವೇಶಕ್ಕೇರುತ್ತಾ ಏರಿದ ಮರುಕ್ಷಣವೇ ಕೆಳಗಿಳಿಯುತ್ತಾ ಹಿಂದೆ ಏರುತ್ತಿದ್ದ ಅಲೆಯನ್ನು ಮತ್ತಷ್ಟು ಎತ್ತಿ, ಭಯಂಕರವಾಗಿ ತೋರಿ, ಭಯಂಕರ ಕ್ರಿಯಾ ಮಾರ್ಗವನ್ನೇ ಹಿಡಿದಿತ್ತು. ಅಲೆಗಳು ಭೋರ್ಗರೆಯುವ ಶಬ್ದ, ಗಾಳಿಯು ಅಲೆಗಳು ನಡುವೆ ಸಿಕ್ಕಿ ರೋದಿಸುವ ಶಬ್ದ, ನನ್ನ ಸುತ್ತಲಿನ ಜನಸಂದಣಿಯ ಮಾತು ಕಥೆಗಳ ಶಬ್ದಗಳಿಂದಲೂ ಕಣ್ಣೆದುರಿನ ಭಯಂಕರ ದೃಶ್ಯದಿಂದಲೂ ನಾನು ಗಾಬರಿಗೊಂಡು, ಜನಸ್ತೋಮದ ತಿಕ್ಕಾಟ ಒತ್ತಾಟದಲ್ಲಿ ನನ್ನ ನಿಲುವೇ ಸ್ಥಿರವಾಗಿರದೆ – ಆದರೂ ಪ್ರಯತ್ನದಿಂದ ಸ್ಥಿರಪಡಿಸಿಕೊಳ್ಳುತ್ತಲೂ ನನ್ನ ಪಕ್ಕದಲ್ಲಿದ್ದ ಒಬ್ಬ ನಾವಿಕನೊಡನೆ ಅಪಾಯಕ್ಕೀಡಾಗಿದ್ದ ಸ್ಕೂನರ್ ಎಲ್ಲಿದೆಯೆಂದು ಕೇಳಿದೆನು. ಬಾಣದ ಚಿತ್ರವನ್ನು ಮುಂಗೈಯಲ್ಲಿ ಮಚ್ಚೆ ಹಾಕಿಸಿಕೊಂಡಿದ್ದ ತನ್ನ ಕೈಯನ್ನು ನೀಡಿ ಆ ನಾವಿಕ ನಮ್ಮ ಎಡ ದಿಕ್ಕಿನಲ್ಲಿ ಅಲೆಗಳ ಮಧ್ಯೆ ಸಿಕ್ಕಿಕೊಂಡಿದ್ದ ಸ್ಕೂನರನ್ನು ತೋರಿಸಿದನು. ಆ ಹಡಗು ನಮಗೆ ಬಹು ಸಮೀಪವಾಗಿದ್ದು, ಬಹು ಸ್ಪಷ್ಟವಾಗಿಯೇ ಕಾಣುತ್ತಿತ್ತು. ಹೀಗೊಂದು ಸಮೀಪದಲ್ಲೂ ಸ್ಪಷ್ಟವಾಗಿಯೂ ಅದು ಇದ್ದದ್ದು ಮತ್ತು ನಮಗೆ ಕಂಡದ್ದು ನನಗೆ ಆಶ್ಚರ್ಯದ ಸಂಗತಿಯಾಗಿತ್ತು. ಹಡಗು ಅಷ್ಟು ಸಮೀಪದಲ್ಲಿದ್ದೂ ಅಲೆಗಳ ಅಪಾಯದಿಂದ ಅದನ್ನು ತಪ್ಪಿಸಲು ನಮ್ಮಿಂದ ಸಾಧ್ಯವಿಲ್ಲವೆಂದು ಅಲ್ಲಿನ ಜನರು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಕ್ರೋಧಾವೇಶದಲ್ಲಿ ನಲಿಯುತ್ತಿದ್ದ ಸಮುದ್ರಕ್ಕೆ ತನ್ನ ಶಕ್ತಿಯನ್ನು ಸ್ಥಳ–ಸಂದರ್ಭ, ದೂರ–ಸಾಮೀಪ್ಯ, ಮೊದಲಾದುವುಗಳಿಂದ ಈಗ ಸರಿಪಡಿಸಿಕೊಳ್ಳುವ ಅಗತ್ಯವಿರದೆ, ಕೇವಲ ತನ್ನ ಸ್ವಾಭಾವಿಕವಾದ ಏರಿಳಿತಗಳ ರಭಸದ ಶಕ್ತಿಯು ಮಾತ್ರ ಈ ಚಿಕ್ಕ ಹಡಗಿಗೆ ಸಾಕೆಂದು ಸಮುದ್ರವೇ ತಿಳಿದಿದ್ದಂತೆ, ಬಹು ಕ್ರೂರ ಕಠೋರವಾಗಿ ತೋರುತ್ತಿತ್ತು. ಈ ಸ್ಥಿತಿಯನ್ನು ಕಂಡೇ ಕೆಲವರು ವೃದ್ಧರು ಹಡಗು ಒಂದರೆಕ್ಷಣದಲ್ಲೇ ಪುಡಿಪುಡಿಯಾಗುವುದೆಂದೂ ಮಾತಾಡಿಕೊಳ್ಳುತ್ತಿದ್ದರು. ಪರಿಸ್ಥಿತಿ ಬಹು ಹದಗೆಟ್ಟಿತ್ತೆಂದೂ ಹಡಗಿನ ರಕ್ಷಣೋಪಾಯವೇ ಇಲ್ಲವೆಂದೂ ಜನರಂದುಕೊಳ್ಳುತ್ತಿದ್ದರು.

ನಾನು ನೋಡುತ್ತಿದ್ದ ಹಾಗೆಯೇ ನಮಗೆ ಸಂಪೂರ್ಣ ತೋರುವಂತೆ ಹಡಗು ಅಲೆಗಳ ತುದಿಯಲ್ಲಿ ಮೇಲೆದ್ದು ನಿಂತಿತು. ಹೀಗೆದ್ದು, ಒಂದರಕ್ಷಣ ಅಲೆಗಳ ನೊರೆಯಲ್ಲಿ ಅಲುಗಾಡಿ, ಮರುಕ್ಷಣದಲ್ಲಿ ಕೆಳಗಿಳಿಯಿತು. ಈ ರೀತಿಯ ಅಲುಗಾಟದಲ್ಲಿ ಅದರಲ್ಲಿದ್ದ ಎರಡು ಸ್ತಂಭಗಳ ಪೈಕಿ ಒಂದು ಮುರಿದು ಧಕ್ಕೆಯ ಮೇಲೆ ಬಿದ್ದಿತು. ಆ ಬಿದ್ದ ಸ್ತಂಭದ ಜತೆಯಲ್ಲೇ ತುಂಬಾ ಹಾಯಿ, ಹಗ್ಗ ಮತ್ತಿತರ ಅನೇಕ ವಸ್ತುಗಳೂ ಕೆಳಬಿದ್ದುವು. ಹಡಗಿನಲ್ಲಿದ್ದವರು ಆ ಕೂಡಲೇ ಕತ್ತಿ ಕೊಡಲಿಗಳಿಂದ ಈ ಭಾಗವನ್ನೆಲ್ಲ ಕಡಿದು ಸಮುದ್ರಕ್ಕೆ ಎಸೆದರು. ಆ ಜನರು ಜೀವದಾಸೆ ಬಿಟ್ಟು, ಮಹಾ ಪರಾಕ್ರಮದಿಂದ, ಅತ್ಯಂತ ಕಷ್ಟದ ಕೆಲಸಗಳನ್ನೂ ಮಾಡುತ್ತಿದ್ದುದು ನಮಗೆಲ್ಲ ಸ್ಪಷ್ಟವಾಗಿ ಕಾಣುತ್ತಿತು. ಈ ಜನರ ಮಧ್ಯದಲ್ಲಿ ಗುಂಗುರು ತಲೆಕೂದಲಿನ ಸುಂದರ ಯುವಕನೊಬ್ಬನು ಅಂಥಾ ಭಯಾನಕ ಸನ್ನಿವೇಶದಲ್ಲೂ ಗಾಂಭೀರ್ಯದಿಂದ ಅಲ್ಲಿನ ಕೆಲಸಗಳನ್ನು ಮಾಡುತ್ತಿದ್ದುದನ್ನು ಕಂಡೆನು. ನಾನು ಹೀಗೆ ಸಮುದ್ರದ ಕಡೆ ನೋಡುತ್ತಿದ್ದ ಹಾಗೆಯೇ ಸಮುದ್ರದ ಮಹಾ ರವವನ್ನೇ ಮೀರಿಸುವಷ್ಟರ ಜೋರಾಗಿ ದಡದಲ್ಲಿ ಸೇರಿದ್ದ ಜನಸ್ತೋಮದ ರೋದನ ಶಬ್ದವೂ ಕೇಳಿಸಿತು. ಇದೇನೆಂದು ಜನರ ಕಡೆ ನೋಡಿ, ಅಂತರಂಗದಲ್ಲೇ ರೋದನದ ಕಾರಣವನ್ನು ತಿಳಿಯುತ್ತಾ ಸಮುದ್ರದ ಕಡೆ ನೋಡುವಾಗ ಪರ್ವತಾಕಾರದ ಅಲೆಯೊಂದು ಹಡಗಿನ ಮೇಲ್ಭಾಗವನ್ನು ಭೇದಿಸಿ, ಸಿಡಿಮದ್ದಿನಿಂದ ಆಗಬಹುದಾಗಿದ್ದ ಸ್ಫೋಟದಂತೆಯೇ ಮರದ ತೊಲೆ, ಹಲಗೆ ಮೊದಲಾದುವುಗಳನ್ನು ಹಾರಿಸಿ, ಹಡಗಿನಲ್ಲಿದ್ದವರ ಪೈಕಿ ಹೆಚ್ಚಿನವರನ್ನು ನೀರಿಗೆಳೆದು ಹಾಕಿತು. ಈ ಅನಾಹುತದಿಂದ ಹಡಗಿನ ಸ್ವಲ್ಪ ಅಂಶವೇ ಮಾಯವಾಯಿತು.

ಹಡಗಿನ ಎರಡನೇ ಸ್ತಂಭವೊಂದು ಉಳಿದ ಹಾಯಿ ಹಗ್ಗಗಳ ಸಮೇತ ನೆಟ್ಟಗೆ ನಿಂತು ಕೊಂಡಿತ್ತು. ನಾವು ಒಮ್ಮೆಯಾದರೂ ಅದನ್ನು ನೋಡಬೇಕೆಂದು ಉದ್ದೇಶಿಸಿ ಮೇಲೆದ್ದಂತೆ, ಹಡಗಿನ ಉಳಿದ ಅಂಶವು ಅಲೆಗಳ ಮೇಲೆ, ನಾವು ನೋಡುತ್ತಿದ್ದ ಹಾಗೆಯೇ ಎದ್ದು ನಿಂತು ಮರುಕ್ಷಣದಲ್ಲಿ ಕೆಳಗಿಳಿಯಿತು. ಪುನಃ ಏರಲೂ ತೊಡಗಿತು. ಇಂಥ ಪ್ರಸಂಗಗಳಲ್ಲೇ ಹಡಗು ಇಬ್ಭಾಗವಾಗುವುದೆಂದು ಮೊದಲಿನ ಪರಿಚಿತ ನಾವಿಕನು ಹೇಳಿದನು.

ಮಾನುಷಕೃತ ವಸ್ತುಗಳು ಪ್ರಕೃತಿ ಪ್ರಕೋಪದೆದುರು ಎಷ್ಟೊಂದು ಅಶಕ್ತವೆಂದು ಅಲ್ಲಿನ ದೃಶ್ಯದಿಂದ ತಿಳಿಯಬಹುದಾಗಿತ್ತು. ಈ ರೀತಿಯ ದುಃಖದಿಂದ ನಾವು ಹಡಗನ್ನು ನೋಡುತ್ತಿದ್ದ ಹಾಗೆಯೇ ಏರಿದ್ದ ಹಡಗು ಹಠಾತ್ತಾಗಿ ಕುಸಿಯಿತು. ಕುಸಿದ ರಭಸಕ್ಕೆ ಹಡಗಿನಲ್ಲಿದ್ದವರಲ್ಲಿ ನಾಲ್ಕು ಜನರ ಹೊರತಾಗಿ ಉಳಿದವರೆಲ್ಲ ನೀರು ಪಾಲಾದರು. ಗುಂಗುರು ತಲೆಕೂದಲಿನ ಯುವಕನು ಈಗ ಮತ್ತಷ್ಟು ಸ್ಪಷ್ಟವಾಗಿ

ತೋರುತ್ತಿದ್ದನು. ಅವನ ತಲೆಯಲ್ಲಿ ತುಂಬಾ ಕ್ರಯ ಬಾಳುವ ಉತ್ತಮ ತರದ್ದೆಂದು ತೋರುವ ಕೆಂಪು ಕುಲಾವಿಯೊಂದು ತೋರಿಬರುತ್ತಿತ್ತು.

ಉಳಿದಿದ್ದ ಆ ಸ್ತಂಭದಲ್ಲಿ ತೂಗಾಡುತ್ತಿದ್ದ ದೊಡ್ಡ ಘಂಟೆಯು ಹಡಗಿನ ಎಲ್ಲಾ ಚಲನೆಗಳಲ್ಲೂ ಘಂಟಾನಾದವನ್ನು ಸಾರುತ್ತಲೇ ಇತ್ತು. ಮೃತಿ ಹೊಂದಿದ ಪ್ರತಿ ನಾವಿಕನ ಪರಲೋಕ ಮಾರ್ಗದರ್ಶನಕ್ಕಾಗಿ, (ಮರಣ ದುಃಖಶಮನಾರ್ಥವಾಗಿ ಬಾರಿಸಲ್ಪಡುವ) ಇಗರ್ಜಿ ಘಂಟೆಯಂತೆ ಈ ಘಂಟೆ ತನ್ನ ರವವನ್ನು ಎಡೆಬಿಡದೆ ಸಾರುತ್ತಿತ್ತು. ಹಡಗಿನಲ್ಲಿದ್ದವರು ಒಬ್ಬೊಬ್ಬರೆ ಆಗಿ ಕಣ್ಮರೆಯಾಗುತ್ತಿದ್ದ ಭಯಂಕರ ದೃಶ್ಯವನ್ನು ನೋಡುತ್ತಿದ್ದ ಜನರು ಅಳುತ್ತಾ ಅತ್ತಿತ್ತ ಚದರುತ್ತಾ ತಮ್ಮ ಕಣ್ಣೆದುರೇ ತಮ್ಮಂತೆಯೇ ಜೀವದಿಂದಿರುವವರನ್ನು ಹಾಗೊಂದು ನೀರು ಪಾಲಾಗಲು ಬಿಡಬೇಕೇ ಎಂದು ಒಬ್ಬರನ್ನೊಬ್ಬರು ಪ್ರಶ್ನಿಸುವವರಂತೆ ಪರಸ್ಪರ ನೋಡತೊಡಗಿದರು. ಹೆಂಗುಸರು, ಗಂಡುಸರು, ಮುದುಕರು, ಮಕ್ಕಳೆನ್ನದೆ ಎಲ್ಲರೂ ರೋದಿಸತೊಡಗಿದರು. ಸಮುದ್ರವು ನಿರ್ದಯವಾಗಿ, ನಿರ್ದಾಕ್ಷಿಣ್ಯದಿಂದ ಕ್ರೂರವಾಗಿ ಉಬ್ಬತೊಡಗಿತು. ಹಡಗಿನಲ್ಲಿದ್ದವರ ರಕ್ಷಣೆಗೆ ಎಲ್ಲರಿಗೂ ಗೊತ್ತಿದ್ದ ಮಾರ್ಗ ಒಂದೇ – ಅಂದರೆ, ದಡದಿಂದ ಹಡಗಿನವರೆಗೆ ಬಲವಾದ ಒಂದು ಹಗ್ಗವನ್ನು ತಲುಪಿಸುವುದು – ಎಂದು ಜನರು ಮಾತಾಡುತ್ತಾ ಈ ಕಾರ್ಯವನ್ನು ಮಾಡುವವರು ಯಾರೆಂದು ಪ್ರಶ್ನಿಸತೊಡಗಿದರು.

ಜನರ ಈ ಪ್ರಶ್ನೆ, ಈ ಗೋಳು ನಡೆಯುತ್ತಿದ ಹಾಗೆಯೇ ಜನರು ಸ್ವಲ್ಪ ಚದರಿ ನಿಂತು, ಅಳುವುದನ್ನು ನಿಲ್ಲಿಸಿ, ಯಾರೋ ಒಬ್ಬ ವೀರ ನಾವಿಕನಿಗೆ ದಾರಿಬಿಟ್ಟರು. ಆ ಜನ ಮಧ್ಯದಲ್ಲಿ ವೀರ ಯೋಧನಂತೆ, ದೃಢಕಾಯನಾದ ಹೇಮನು ನಿಶ್ಚಿತ ಉದ್ದೇಶ, ಗುರಿ, ದೃಷ್ಟಿಗಳನ್ನು ಮುಖದಲ್ಲಿ ತೋರಿಸುತ್ತಾ ಎದುರು ಬಂದು ನಿಂತನು. ಮತ್ತು ಹಡಗಿಗೂ ದಂಡೆಗೂ ಸಂಬಂಧ ಕಟ್ಟಲು ಬೇಕಾಗಿದ್ದ ಹಗ್ಗವನ್ನು ತರಲು ಆಜ್ಞೆಯಿತ್ತನು. ನನ್ನ ಸಮೇತವಾಗಿ ಬಹು ಜನರು ಅಂಥ ಸಾಹಸವನ್ನು ಅವನು ಕೈಕೊಳ್ಳಬಾರದೆಂದು ಅವನನ್ನು ಕೇಳಿಕೊಂಡೆವು. ಆದರೆ ಅವನ ಮುಖದಲ್ಲಿ ತೋರುತ್ತಿದ್ದ ದೃಢ ಸಂಕಲ್ಪದ ಎದುರು ನಮ್ಮ ಕೇಳಿಕೆಗಳು ನಿಷ್ಫಲವಾದುವು. ಹಗ್ಗವನ್ನು ತಂದುಕೊಟ್ಟರು. ಹಗ್ಗದ ಒಂದು ತುದಿಯನ್ನು ತನ್ನ ಸೊಂಟಕ್ಕೆ ಸುತ್ತಿಕೊಂಡನು. ಅನಂತರ ಹಗ್ಗದ ಸ್ವಲ್ಪ ಅಂಶವನ್ನು ಸಡಿಲವಾಗಿ ಹಿಡಿದುಕೊಂಡು – ಜನರು ಅಳುತ್ತಲೂ ಹೊಗಳುತ್ತಲೂ ಇದ್ದಂತೆಯೇ ಹೇಮನು ಅಲೆಗಳ ಇಳಿತವನ್ನು ಕಾದು, ಅವು ಇಳಿಯಲು ಪ್ರಾರಂಭವಾದೊಡನೆ ಸಮುದ್ರಕ್ಕೆ ಹಾರಿದನು. ಹೀಗೆ ಅವನು ಹಾರಿ ಸ್ವಲ್ಪ ದೂರ ಹೋಗುವಷ್ಟರಲ್ಲಿ ಏನೋ ಅಚಾತುರ್ಯವಾಗಿರಬೇಕು, ನಮಗೆ ಅದೆಲ್ಲ ಅರ್ಥವಾಗಲಿಲ್ಲ. ಅವನನ್ನು ಹಿಂದಕ್ಕೆ, ದಡಕ್ಕೆ ಎಳೆದರು. ಅವನ ಮುಖದಲ್ಲಿ ರಕ್ತ ಸುರಿಯುತ್ತಿತ್ತು. ರಕ್ತ ಸ್ರಾವವನ್ನು ಗಣನೆಗೆ ತರದೆ, ದಡದಲ್ಲಿದ್ದವರಿಗೆ ಕೆಲವು ಸೂಚನೆಗಳನ್ನು ಕೊಟ್ಟು, ಹೇಮನು ಪುನಃ ಸಮುದ್ರಕ್ಕೆ ಹಾರಿ ಈಜಿಕೊಂಡು ಮುಂದೆ ಸಾಗಿದನು.

ಹೇಮನು ಸಮುದ್ರಕ್ಕೆ ಹಾರಿದ ನಂತರ ನಾವು ಹಡಗಿನ ಕಡೆ ನೋಡುವಾಗ ಆ ಗುಂಗುರು ಕೂದಲಿನವನೊಬ್ಬನ ಹೊರತು ಇತರರೆಲ್ಲರೂ ಸಮುದ್ರಗತವಾಗಿದ್ದರು. ಇತ್ತ ಹೇಮನು ಏರುವ ಅಲೆಗಳ ಶಿಖರದಲ್ಲಿ ಹಗುರವಾಗಿ ಏರುತ್ತಾ ಅವು ಇಳಿಯುವಾಗ ಪಾತಾಳಕ್ಕೇ ಇಳಿಯುತ್ತಿರುವಂತೆ ಹಠಾತ್ತಾಗಿ ಇಳಿಯುತ್ತಾ ಮುಂದೆ ಮುಂದೆ ಸಾಗಿ, ಕೊನೆಗೆ ಆ ಗುಂಗುರು ಕೂದಲಿನವನ ಬಹು ಸಮೀಪಕ್ಕೆ ತಲುಪಿದ್ದನ್ನು ಕಂಡೆವು. ಕೊನೆಯ ಒಂದು ಅಲೆಯ ಮೇಲೇರಿದ್ದ ಹೇಮನು ಇಳಿಯುವಾಗ ಗುಂಗುರು ಕೂದಲಿನವನನ್ನು ಮುಟ್ಟಿರಬೇಕೆಂಬಂತೆಯೇ ತೋರಿದನು. ನಾವೆಲ್ಲಾ ಉಸಿರನ್ನೇ ಕಟ್ಟಿ, ಏಕಾಗ್ರತೆಯಿಂದ ಅತ್ತ ಕಡೆಯೇ ನೋಡುತ್ತಿದ್ದೆವು. ಅಷ್ಟರಲ್ಲೇ ದಡದ ಜನರೆಲ್ಲಾ ಏಕಕಂಠದಿಂದ ರೋದಿಸಿದರು. ಹಡಗಿನ ಹಿಂಬದಿಯಿಂದ ಉಬ್ಬಿ ಬರುತ್ತಿದ್ದ ಬೃಹದಾಕಾರದ ಒಂದು ಅಲೆಯು ಆಗಲೇ ಆ ಹಡಗನ್ನೂ ಹೇಮನನ್ನೂ ಎಲ್ಲವನ್ನೂ ಆವರಿಸಿ ಧ್ವಂಸ ಮಾಡಿತು. ಆ ಸ್ಥಳದಲ್ಲಿ ಯಾರು ಎಂದೂ ಇಲ್ಲದಂತೆ ತೋರಿಸಿ, ನೊರೆ ಕಾರುತ್ತಿದ್ದ ಅಲೆಗಳು ಮೃತ್ಯು ತಾಂಡವಗೈದವು.

ದಂಡೆಯ ಜನರು ಹಗ್ಗವನ್ನೆಳೆಯುತ್ತಾ ಹೇಮನನ್ನು ದಡಕ್ಕೆ ತಂದರು. ದೃಢಕಾಯ, ವೀರ ಹೇಮನು ಮಡಿದಿದ್ದನು. ಜೀವ ಸಂಗ್ರಹಕ್ಕಾಗಿ ನಮಗೆ ಗೊತ್ತಿದ್ದ ಚಿಕಿತ್ಸೆಗಳನ್ನೆಲ್ಲ ಮಾಡಿ ನೋಡಿದೆವು – ಹೇಮನು ಏಳಲಿಲ್ಲ! ಅವನ ಕರುಣಾಪೂರ್ಣ ಹೃದಯ ಕ್ರೂರ ಅಲೆಗಳಿಂದ ಶಾಶ್ವತವಾಗಿ ನಿಲ್ಲಿಸಲ್ಪಟ್ಟಿತ್ತು. ಈ ದುಃಖವನ್ನು ಸಹಿಸದೆ ನಾನು ಜನರಿಂದ ದೂರ ಸರಿದು ಒಂದೆಡೆ ಕುಳಿತು ದುಃಖಿಸತೊಡಗಿದೆನು.

ಹೀಗೆ ನಾನು ಕುಳಿತಿದ್ದಲ್ಲಿಗೆ, ಸ್ವಲ್ಪ ಹೊತ್ತಿನಲ್ಲೇ ನನ್ನ ಪರಿಚಿತ ನಾವಿಕನೊಬ್ಬನು ಬಂದು ನಾನು ಸ್ವಲ್ಪ ದೂರ ಅವನ ಜತೆಯಲ್ಲಿ ಸಮುದ್ರದ ದಂಡೆಯಲ್ಲೇ ಹೋಗಬೇಕೆಂದು ಬಹು ಮೃದುವಾಗಿ, ದುಃಖದಿಂದ ಹೇಳಿಕೊಂಡನು. ಅವನು ಹೆಚ್ಚೇನೂ ಮಾತಾಡದಿದ್ದರೂ ಅವನ ಮುಖ ಮಾತಾಡಿತು. ನಾನು ವಿಚಾರಿಸಿದೆನು –

"ಯಾರದಾದರೂ ಶವ ಬಂದಿದೆಯೇ?"

"ಹೌದು, ಒಂದು ಬಂದಿದೆ."

"ಆ ಶವದ ಗುರುತು ನನಗೆ ಇದೆಯೆಂದು ಗ್ರಹಿಸಿರುವಿಯೇನು?" ಅವನು ಉತ್ತರವೀಯಲಿಲ್ಲ.

ನನ್ನ ಹಳೆ ನೆನವರಿಕೆಗಳೆಲ್ಲ ಎದ್ದು ಬಂದು ನನ್ನನ್ನು ಹೆದರಿಸಿದುವು. ಅವನು ನನ್ನನ್ನು ಸಮುದ್ರದ ದಂಡೆಯಲ್ಲೇ ಸ್ವಲ್ಪ ದೂರ ಕರೆದುಕೊಂಡು ಹೋದನು.

ಕೊನೆಗೆ, ನಾವು – ಎಮಿಲಿಯೂ ನಾನೂ ಚಿಕ್ಕವರಾಗಿದ್ದಾಗ ನಲಿದಾಡಿದ್ದ ಸ್ಥಳಕ್ಕೆ ತಲಪಿದೆವು. ಹಿಂದೆ ಮನೆಯಾಗಿ ಮೆರೆದಿದ್ದ ಆ ದೋಣಿಯ ಕೆಲವು ತುಂಡುಗಳು ಬಿರುಗಾಳಿ ಹೊಡೆತಕ್ಕೆ ಹರಡಿಬಿದ್ದಿದ್ದುವು. ತಾನು ಗಾಸಿಗೊಳಿಸಿದ್ದ ಸಂಸಾರದ ಬೀಡಾಗಿದ್ದ ದೋಣಿಯ ಅವಶೇಷಗಳೆಡೆಯಲ್ಲಿ – ತೋಳಿನ ಮೇಲೆ ತಲೆಯನ್ನಿಟ್ಟು, ಬೋರ್ಡಿಂಗಿನಲ್ಲಿ ಮಲಗುತ್ತಿದ್ದ ಹಾಗೆಯೇ – ಆತ ಮಲಗಿದ್ದನು!

ಅಧ್ಯಾಯ ಐವತ್ತಾರು

ಸದ್ಯ ಸಂಭವಿಸಿರುವ ದುಃಖ ಮತ್ತು ಬೆಳೆದು ಬಂದಿರುವ ದುಃಖ

ಅಯ್ಯೋ ಸ್ಟೀಯರ್‌ಫೋರ್ತ್, ಕಳೆದ ಸರ್ತಿ ನೀನು ನನ್ನನ್ನು ಬಿಟ್ಟು ಹೋಗುವಾಗ ಅದು ಕಡೇ ಸಾರಿಯ ಅಗಲುವಿಕೆಯೆಂದು ನಾನು ಗ್ರಹಿಸಿರಲಿಲ್ಲ! ನಿನ್ನ ಉತ್ತಮ ಗುಣಗಳನ್ನು ಮಾತ್ರ ನಾನು ಸದಾ ಗ್ರಹಿಸಿ ಸಂತೋಷಿಸುತ್ತಿದ್ದಾಗಲೇ "ನನ್ನ ಉತ್ತಮ ಗುಣಗಳ ಗಣನೆಯಿಂದ ಮಾತ್ರ ನನ್ನನ್ನು ನೆನೆಸು" ಎಂದು ನೀನು ನನಗೆ ಹೇಳಿದೆಯಲ್ಲಾ! ಅದು ಅಗತ್ಯವಿತ್ತೇ? ಇಂದು ಅವನ ಕಳೇಬರವನ್ನು ನೋಡುತ್ತಿರುವಾಗ ಅವನ ಸಹಸ್ರಾರು ಉತ್ತಮ ಗುಣಗಳು ಎದುರು ಬಂದು ನಿಲ್ಲದಿರುವುವೇ? ಈ ಗುಣಗಳನ್ನು ಹೊರತಾಗಿ ಇತರವುಗಳನ್ನು ನೆನಪಿಗೆ ತರಲು ಸಾಧ್ಯ ತಾನೆ ಆಗಬಹುದೇ?

ಸ್ಟೀಯರ್‌ಫೋರ್ತನ ಶವವನ್ನು ಮಿ. ಓಮರರಿಂದ ತರಿಸಿಕೊಂಡ 'ಕಾಫಿ'ನ್ನಿನಲ್ಲಿಟ್ಟು ಬಂಡಿಯ ಮೂಲಕ ಕಾಫಿನ್ನನ್ನು ಸ್ಟೀಯರ್‌ಫೋರ್ತನ ಮನೆಗೆ ಸಾಗಿಸಿದೆವು. ಯಾರ್ಮತ್ತಿನಲ್ಲಿ ಸ್ಟೀಯರ್‌ಫೋರ್ತನು ತುಂಬಾ ಪರಿಚಿತನೂ ಹೆಸರುವಾಸಿಯೂ ಆಗಿದ್ದುದರಿಂದ ಅನೇಕ ನಾವಿಕರು ಬಂಡಿಯ ಹಿಂದೆಯೇ ಬಹುದೂರ ಬಂದಿದ್ದರು.

ಯಾರ್ಮತ್ತಿನಿಂದ ರಾತ್ರಿಯಲ್ಲಿ ಹೊರಟ ಬಂಡಿ ಬೆಳಗಾಗುವಾಗ ಲಂಡನ್ನಿನ ಹೈ ಗೇಟಿಗೆ ತಲುಪಿತು. ಹಿಂದಿನ ದಿನದ ಮೋಡಗಳೆಲ್ಲಾ ಮಾಯವಾಗಿ ಸೂರ್ಯ ಪ್ರಕಾಶಮಾನನಾಗಿಯೇ ಉದಯಿಸಿದ್ದನು. ಸ್ಟೀಯರ್‌ಫೋರ್ತನ ಮನೆಗೆ ಶವವನ್ನು ತಲುಪಿಸಿ, ಅವನ ತಾಯೊಡನೆ ಮಾತಾಡಿ ಬರಲು ಯಾರ್ಮತ್ತಿನಲ್ಲಿ ಇನ್ನು ಯಾರೂ ನನಗಿಂತ ಹೆಚ್ಚು ಆ ಮನೆಯ ಪರಿಚಿತರಿಲ್ಲವಿದ್ದುದರಿಂದಲೂ ನನಗೂ ಸ್ಟೀಯರ್‌ಫೋರ್ತನಿಗೂ ಮೊದಲೇ ಇದ್ದ ಸ್ನೇಹದ ಕಾರಣವಾಗಿಯೂ ನಾನು ಈ ಕೆಲಸವನ್ನು ಮಾಡಿದೆನು.

ನಮ್ಮ ಬಂಡಿಯನ್ನು ಗೇಟಿನ ಹೊರಗಡೆ ಬಿಟ್ಟು, ನಾನು ಮಾತ್ರ ಒಳಗೆ ಹೋಗಿ ಮನೆಯ ಕರೆಘಂಟೆಯನ್ನು ಮೃದುವಾಗಿ ಬಾರಿಸಿದೆನು. ಕೆಲಸದ ಹೆಂಗುಸು ಬಂದು ಬಾಗಿಲು ತೆರೆದಳು. ನನ್ನನ್ನು ನೋಡಿ ಅವಳಿಗೆ ಬಹು ಆಶ್ಚರ್ಯವೂ ಗಾಬರಿಯೂ ಆದಂತೆ ತೋರಿ –
"ನಿಮಗೇನು, ಅಸೌಖ್ಯವೇ ಸರ್?" ಎಂದು ಕೇಳಿದಳು.
"ಒಂದು ಗಹನವಾದ ಕಾರ್ಯದಲ್ಲಿ ಬಂದಿರುವೆನು – ಮಿಸೆಸ್ ಸ್ಟೀಯರ್‌ಫೋರ್ತಳಿಗೆ ನಾನು ಬಂದಿರುವುದಾಗಿ ತಿಳಿಸು" ಅಂದೆನು.

ಕೆಲಸದವಳು ಒಳಗೆ ಹೋಗಿ ತಿಳಿಸಿ ಬರುವವರೆಗೆ ನಾನು ಬೈಠಖಾನೆಯಲ್ಲೇ ಕುಳಿತಿದ್ದೆನು. ಬೈಠಖಾನೆಯಲ್ಲಿ ಮೊದಲಿನ ವೈಭವದ ಕುರ್ಚಿ, ಮೇಜು ಅಲಂಕಾರಗಳು ಯಾವುವೂ ಇರಲಿಲ್ಲ. ಮನೆಯೆಲ್ಲಾ ಶ್ಮಶಾನ ಸದೃಶವಾದ ನಿಶ್ಶಬ್ದತೆಯಿಂದ ತುಂಬಿತ್ತು. ಕೆಲಸದವಳು ಕೋಣೆಯಿಂದ ಕೋಣೆಗಾಗಿ ದಾಟಿ ಬೈಠಖಾನೆಗೆ ಪುನಃ ಬರುವಾಗ ಆಗುತ್ತಿದ್ದ ಕಾಲ ಸಪ್ಪಳವು ಮಧ್ಯ ರಾತ್ರಿಯ ನಿಶ್ಶಬ್ದ ಗಂಭೀರತೆಯಿಂದಲೇ ಹೊರಟು ಬರುತ್ತಿದ್ದಂತೆ ಕೇಳಿಸುತ್ತಿತ್ತು. ಆ ಶಬ್ದವನ್ನು ಆಲಿಸಬಾರದೆಂದು ಪ್ರಯತ್ನಿಸಿದರೂ ಶಬ್ದವು ಅದೇ ಗಂಭೀರತೆಯಿಂದ ಕೇಳಿಸುತ್ತಾ ಇದ್ದಾಗ, ಕೆಲಸದವಳು ಎದುರು ಬಂದು, ನಾನು ಮಿಸೆಸ್ ಸ್ಟೀಯರ್‌ಫೋರ್ತಳಿದ್ದಲ್ಲಿಗೆ ಹೋಗಬೇಕೆಂದು ಹೇಳಿ ನನ್ನನ್ನು ಕರೆದುಕೊಂಡು ಹೋದಳು. ನಾನು ಕೆಲಸದವಳನ್ನು ಹಿಂಬಾಲಿಸಿ ಮಹಡಿಗೆ ತಲುಪುವಾಗ ಆ ಮನೆಯ ಬಹು ಭಾಗವೆಲ್ಲ ಉಪಯೋಗಿಸದೇ ಉಳಿದಿದ್ದಂತೆ ತೋರುತ್ತಿತ್ತು.

ಮಿಸೆಸ್ ಸ್ಟೀಯರ್‌ಫೋರ್ತಳು ತನ್ನ ಮಗನು ಉಪಯೋಗಿಸುತ್ತಿದ್ದ ಕೋಣೆಯಲ್ಲಿ ಮಲಗಿದ್ದಳು. ಅಲ್ಲಿ ಸ್ಟೀಯರ್‌ಫೋರ್ತನ ಒಂದು ತೈಲ ಚಿತ್ರವೂ ಅವನ ವಿದ್ಯಾ ಪ್ರವೀಣತೆಗಾಗಿ ಪಡೆದಿದ್ದ ಪಾರಿತೋಷಕಗಳೂ ಅಲಂಕಾರಕ್ಕಾಗಿ ಇಡಲಾಗಿದ್ದುವು. ನಾನು ಆ ಕೋಣೆಗೆ ನುಗ್ಗುವಾಗ ಮಿಸ್ ಡಾರ್ಟಲ್ಲಳು ಮಿಸೆಸ್ ಸ್ಟೀಯರ್‌ಫೋರ್ತಳ ಸಮೀಪದಲ್ಲಿ ಒಂದು ಕುರ್ಚಿಯಲ್ಲಿ ಕುಳಿತಿದ್ದಳು. ನಾನು ಒಳನುಗ್ಗಿದ ಕೂಡಲೇ ಅವಳು ನನಗೆ ಒಂದು ಕುರ್ಚಿಯನ್ನು ತೋರಿಸಿ, ತಾನು ಹೋಗಿ ಮಿಸೆಸ್ ಸ್ಟೀಯರ್‌ಫೋರ್ತಳ ಹಿಂಬದಿ ನಿಂತು ನನ್ನನ್ನು ನೋಡತೊಡಗಿದಳು. ಮಿಸೆಸ್ ಸ್ಟೀಯರ್‌ಫೋರ್ತಳು ನನ್ನನ್ನು ನೋಡಿ –
"ಶೋಕವಸನವನ್ನು ಧರಿಸಿದ್ದು ಕಾಣುತ್ತದೆ – ಏನಾಗಿದೆ, ಕಾಪರ್‌ಫೀಲ್ಡ್" ಎಂದು ಕೇಳಿದಳು.
"ನನ್ನ ಪತ್ನಿಯು ಮೃತಪಟ್ಟಿರುವಳು" ಎಂದು ನಾನು ಮೆಲ್ಲಗೆ ಅಂದೆನು.
"ಇಷ್ಟು ಚಿಕ್ಕ ಪ್ರಾಯದಲ್ಲೇ ನಿನಗೆ ಆ ದುಃಖ ಬರಬಾರದಿತ್ತು. ಆದರೆ ಕಾಲನನ್ನು ಎದುರಿಸಲು ಸಾಧ್ಯವಿದೆಯೇ! ಸಮಯವೇ ಮನಸ್ಸಿಗೆ ಶಾಂತಿಯನ್ನೀಯಬೇಕು, ಅಷ್ಟೆ" ಎಂದು ಕನಿಕರದಿಂದ ಅವಳು ನುಡಿದಳು.
"ನಿಮ್ಮ ಅಭಿಪ್ರಾಯವು ನ್ಯಾಯವಾದುದು. ಆ ಮಾತು ಎಲ್ಲರಿಗೂ ಅನ್ವಯಿಸುವಂಥಾದ್ದು. ಎಂಥ ದುಃಖವನ್ನಾದರೂ ಮನುಷ್ಯನು ಸಹಿಸಲೇಬೇಕಷ್ಟೆ. ಮತ್ತೆ ಸಮಯವೇ ತಾನೆ ಶಾಂತಿ ತರುವಂಥಾದ್ದು" ಎಂದು ನಾನು ಹೇಳಿದೆ. ಹೇಳುತ್ತಿದ್ದ ಹಾಗೆ ನನ್ನ ಕಣ್ಣುಗಳಲ್ಲಿ ನೀರು ಬಂತು. ನನ್ನನ್ನು ನೋಡಿ ಮಿಸೆಸ್ ಸ್ಟೀಯರ್‌ಫೋರ್ತಳು ಗಾಬರಿಗೊಂಡಳು. ನಾನು ನನ್ನ ಕಂಠವನ್ನು ಸರಿಪಡಿಸಿಕೊಂಡು ಸ್ಟೀಯರ್‌ಫೋರ್ತನ ಹೆಸರನ್ನು ಉಚ್ಚರಿಸಲು ಪ್ರಯತ್ನಪಟ್ಟೆನು. ಕಂಠವು ನನ್ನ ಅಧೀನದಲ್ಲಿರಲಿಲ್ಲ. ನನ್ನನ್ನೇ ನೋಡುತ್ತಿದ ಮಿಸೆಸ್ ಸ್ಟೀಯರ್‌ಫೋರ್ತಳು ನಾನು ಉಚ್ಚರಿಸಲು ಪ್ರಯತ್ನಿಸುತ್ತಿದ್ದ ಹೆಸರನ್ನು ತಾನು ಬಾಯಲ್ಲಿ ಮೆಲ್ಲಗೆ ಉರುಹಾಕುತ್ತಾ –

"ನನ್ನ ಮಗನೇನು? ಅಸೌಖ್ಯವಾಗಿದ್ದಾನೆಯೇ?" ಎಂದು ಕೇಳಿದಳು.
"ಬಹುವಾಗಿ ಅಸೌಖ್ಯವಾಗಿದ್ದಾನೆ."
"ನೀನು ನೋಡಿ ಬಂದಿರುವಿಯೇನು?"
"ಹೌದು."
"ನಿಮ್ಮೊಳಗೆ ರಾಜಿಯಾಗಿದೆಯೇ?"

ರಾಜಿಯಾಗಿದೆ – ಅಥವಾ ಇಲ್ಲ, ಹೇಗೆ ಅಂದರೂ ನಾನು ಸತ್ಯವನ್ನೂ ಅಸತ್ಯವನ್ನು ಹೇಳಿದಂತಾಗುವುದಲ್ಲವೇ ಎಂದು ಗ್ರಹಿಸುತ್ತಿರುವಾಗಲೇ ಮಿಸೆಸ್ ಸ್ಟೀಯರ್ಫೋರ್ತಳು ಮಿಸ್ ಡಾರ್ಟಲ್ಲಳನ್ನು ನೋಡಿದಳು.

ನಾನು ಮಿಸ್ ಡಾರ್ಟಲ್ಲಳನ್ನು ನೋಡುತ್ತಾ ಸಾಧಾರಣ ತುಟಿಗಳಲ್ಲೇ ತೋರಿ ಮುಗಿಯುವಂತೆ "ಮೃತನಾಗಿದ್ದಾನೆ" ಅಂದೆನು. ಮಿಸೆಸ್ ಸ್ಟೀಯರ್ಫೋರ್ತಳು ಪೂರ್ಣ ಅರ್ಥ ಮಾಡಿಕೊಳ್ಳುವ ಮೊದಲು ಮಿಸ್ ಡಾರ್ಟಲ್ಲಳು ತನ್ನ ಮುಖಕ್ಕೆ ಕೈ ಮುಚ್ಚಿಕೊಂಡು ಅಳತೊಡಗಿದಳು. ಮಿಸೆಸ್ ಸ್ಟೀಯರ್ಫೋರ್ತಳು ಇದನ್ನೆಲ್ಲಾ ಕಂಡು – ನನ್ನ ಅತ್ಯಂತ ಪ್ರೀತಿಯ ಸ್ಟೀಯರ್ಫೋರ್ತನ ಮುಖದಂತೆಯೇ ಇದ್ದ ಅವಳ ಮುಖದಲ್ಲಿನ, ವಿಶಿಷ್ಟವಾದ ಭಾವನೆಗಳನ್ನೆಲ್ಲ ಮರೆಸಿಕೊಂಡು – ಸ್ತಂಭೀಭೂತಳಾಗಿ, ಒಂದು ಶಿಲಾ ಪ್ರತಿಮೆಯಂತೆ ನನ್ನನ್ನೇ ನೋಡತೊಡಗಿದಳು. ನಾನು ಮೆಲ್ಲಗೆ ಮಾತಾಡತೊಡಗಿದೆನು.

"ನಾವು ಇಲ್ಲೆ ಹಿಂದೆ ಮಾತಾಡಿದ ಪ್ರಕಾರ ಅವನು ಸಮುದ್ರ ಪ್ರಯಾಣದಲ್ಲಿದ್ದನು. ಅವನ ಹಡಗು ಬಿರುಗಾಳಿಯಲ್ಲಿ ಸಿಕ್ಕಿ....." ಎಂದು ಹೇಳಿ, ನಾನು ಮಾತು ಮುಂದುವರಿಸುವಷ್ಟರಲ್ಲೇ –
"ಅಮ್ಮಾ ಡಾರ್ಟಲ್ಲ್, ಹತ್ತಿರ ಬಂದು ಕುಳಿತುಕೋ" ಎಂದು ಮಿಸೆಸ್ ಸ್ಟೀಯರ್ಫೋರ್ತಳು ಮಿಸ್ ಡಾರ್ಟಲ್ಲಳನ್ನು ಕರೆದಳು.

ಪುತ್ರವಿಯೋಗ ಶೋಕದಲ್ಲಿದ್ದ ಮಿಸೆಸ್ ಸ್ಟೀಯರ್ಫೋರ್ತಳನ್ನು ಹತ್ತಿರ ಬಂದು ಸಂತೈಸುವ ಬದಲು ಮಿಸ್ ಡಾರ್ಟಲ್ಲಳು, ಅಲುಗದೆ ನಿಂತುಕೊಂಡು, ನಿರ್ದಾಕ್ಷಿಣ್ಯವಾಗಿ ಜರೆಯತೊಡಗಿದಳು.
"ದುರಹಂಕಾರದಿಂದ ಮಗನನ್ನು ಸ್ವೇಚ್ಛಾವರ್ತನೆಗೆ ಬಿಟ್ಟು, ಈಗ ಸಾರ್ಥಕವಾಯಿತಷ್ಟೆ ಮಗನ ಮರಣದಿಂದ?" ಎಂದಂದಳು ಮಿಸ್ ಡಾರ್ಟಲ್ಲಳು.

ಮಿಸೆಸ್ ಸ್ಟೀಯರ್ಫೋರ್ತಳು ಸ್ವಲ್ಪ ಏಳಲು ಪ್ರಯತ್ನಿಸಿ, ಸ್ವಲ್ಪ ಎದ್ದು, ಅಲ್ಲಿಂದಲೇ ಹಾಸಿಗೆಗೆ ಬಿದ್ದು, ಮೊದಲಿನಂತೆಯೇ ಮಲಗಿದಳು. ಮಿಸ್ ಡಾರ್ಟಲ್ಲಳು ಮುಂದರಿಸಿ ಜರೆಯತೊಡಗಿದಳು.
"ಈಗ ನೋಡು ನಿನ್ನ ಹಟಮಾರಿತನ, ಕುಲಮದ, ಹೆಮ್ಮೆಗಳ ಕಾರಣವಾಗಿ ನಿನ್ನ ಮಗನೂ ಆ ಎಲ್ಲಾ ಗುಣಗಳನ್ನೂ ನಿನ್ನಿಂದಲೇ ಪಡೆದು, ಪ್ರಯೋಗಿಸಿ, ನನ್ನ ಮುಖದಲ್ಲಿನ ಶಾಶ್ವತವಾದ ಗಾಯವನ್ನು ಮಾಡಿದನು. ಆ ಗಾಯವನ್ನು ಇಲ್ಲಿ ನೋಡು – ಈಗಲೂ ಇದೆಯಷ್ಟೆ! ನಿನ್ನ ದುರ್ಗುಣಗಳಿಗೆ ತಕ್ಕಂತೆ ನಿನಗೆ ಮಗ ದೊರಕಿ, ನಿನ್ನ ಪ್ರೋತ್ಸಾಹ ಪೋಷಣೆಗಳಿಗೆ ತಕ್ಕಂತೆ ಬದುಕಿ, ಇಂದು ಆ ಗುಣಗಳ ಕಾರಣವಾಗಿಯೇ ಸತ್ತಿರುವನು" ಎಂದಂದಳು. ಅವಳ ಮುಖದ ಗಾಯವು ಈ ಸಮಯದಲ್ಲಿ ಎದ್ದು ಕಾಣುತ್ತಿತ್ತು.

ಮಿಸ್ ಡಾರ್ಟಲ್ಲಳ ವರ್ತನೆಯು ಬಹು ಅಸಹ್ಯವಾಗಿದ್ದರೂ ಅವಳ ಈ ವಿಧದ ವರ್ತನೆಯೆಲ್ಲ ದುಃಖಾತಿಶಯದಿಂದಲೇ ಆಗಿತ್ತು. ಹಾಗಾಗಿ ನಾನು ಸ್ವಲ್ಪ ಮೃದುವಾಗಿ ಅನ್ನತೊಡಗಿದೆ –
"ಅಮ್ಮಾ ಮಿಸ್ ಡಾರ್ಟಲ್, ಮಡಿದಿರುವ ಮಗನನ್ನು ಕುರಿತು ಮಾತೆಯ ಎದುರೇ ಈ ರೀತಿ ನೀನು ಮಾತಾಡಬಾರದಮ್ಮಾ" ಎಂದೆ.
ಮಿಸ್ ಡಾರ್ಟಲ್ಲಳಿಗೆ ಬಹಳ ಕೋಪ ಬಂತು. ನನ್ನ ಕಡೆಗೆ ಹಠಾತ್ತಾಗಿ ತಿರುಗಿ ನಿಂತು –
"ಮುಚ್ಚು, ನಿನ್ನ ಬಾಯಿ. ನೀನು ಈ ಮನೆಗೆ ಕಾಲಿಟ್ಟ ದಿನದಿಂದ ಇಲ್ಲಿ ಸುಖವಿಲ್ಲ. ಅಂದಿನಿಂದ ಅವನ ಸ್ವೇಚ್ಛಾಚಾರ ಹೆಚ್ಚಿತು. ತಾಯಿ–ಮಗನಿಗೆ ಇದ್ದ ಒಂದೇ ವಿಧದ ರೂಪ, ಗುಣ, ಶಿಕ್ಷಣಗಳ ಕಾರಣವಾಗಿ ಅವರೊಳಗೆ ಆಗಾಗ ಸ್ವಲ್ಪ ಘರ್ಷಣೆಗಳಾಗುತ್ತಿದ್ದುವಾದರೂ ಅವುಗಳಿಗಿಂತ ಹೆಚ್ಚಿನವೇನೂ ಈ ಮನೆಯಲ್ಲಿ ದುಃಖ ಪ್ರಸಂಗ ಬಂದದ್ದಿಲ್ಲ" ಎಂದು ಹೇಳುತ್ತಾ ಮಿಸ್ ಡಾರ್ಟಲ್ಲಳು, ಆ ಮನೆಯೊಳಗಿನ ಇಂದಿನ ದುಃಖಕ್ಕೆ ನಾನೇ ಕಾರಣವೆಂಬಂತೆ, ನನ್ನನ್ನೇ ದುರುದುರನೆ ನೋಡಿದಳು.

"ಮಿಸ್ ಡಾರ್ಟಲ್ಲಳೇ ಈ ದುಃಖಕ್ಕೆ ಯಾರು ಹೊಣೆ, ಎಷ್ಟು, ಎಂಬಿತ್ಯಾದಿಯನ್ನು ಈಗ ಮಾತಾಡುವುದು ಒಳ್ಳೆಯದಲ್ಲ – ಅದರಲ್ಲೂ ಮೃತಪಟ್ಟವನ ವೃದ್ಧ ಮಾತೆಯೊಡನೆ. ಈಗಲೇ ಮಾತಾಡಬಾರದಮ್ಮಾ" ಎಂದು ನಾನಂದೆನು.

ನನ್ನ ಮಾತುಗಳಿಂದ ಅವಳು ಎಳ್ಳಷ್ಟೂ ಶಾಂತಳಾಗಲಿಲ್ಲ. ಅವಳು ಪುನಃ ಅನ್ನತೊಡಗಿದಳು –

"ವೃದ್ಧ ಮಾತೆಯೊಡನೆ' ಎಂದು ನೀನು ಹೇಳುತ್ತೀಯಷ್ಟೇ. ಆದರೆ, ಅವಳ ಮಗನಿಗೂ ನನಗೂ ಇದ್ದ ಪ್ರೇಮದ ಸಂಬಂಧ ಎಷ್ಟು, ಹೇಗೆ, ಇತ್ತೆಂಬುದನ್ನು ನೀನೇನಾದರೂ ತಿಳಿದಿದ್ದೀಯೇನು? ತಾಯಿ – ಮಗರಿಬ್ಬರೊಳಗೆ ಕೆಲವೊಮ್ಮೆ ಬಹಳವಾದ ಜಗಳವೇ ನಡೆಯುತ್ತಿತ್ತು. ಅಂಥಾ ಸಮಯದಲ್ಲಿ ಅವನು ಪ್ರೀತಿಯಿಂದ ತನ್ನ ದುಃಖದ ಹೊರೆಯನ್ನೆಲ್ಲ ನನ್ನೆದುರು ಬಿಚ್ಚಿ ಹಗುರು ಮಾಡಿಕೊಂಡು, ನನ್ನನ್ನು ಪ್ರೀತಿಸಿ ಸಂತೋಷಿಸುತ್ತಿದ್ದನು. ನಾನು ಅನೇಕ ವೇಳೆ ಅವನಿಗೆ ಮಾತೆಗಿಂತಲೂ ಪ್ರಿಯಳಾಗಿದ್ದೆನು. ಈ ಮಾತೆಯು ತನ್ನ ಮಗನ ಜೀವನದ ಮಾರ್ಗವನ್ನು ತಾನೇ ರಚಿಸಿಕೊಡಬೇಕೆಂದೂ ತನ್ನ ಮಗನು ಅತಿ–ಮಾನುಷ, ಅಥವಾ ಅನುಪಮ ಶಕ್ತಿಯುಳ್ಳವನೆಂದು ನಂಬಿ, ಅಂಥಾ ವರ್ತನೆಗೆ ಪ್ರೋತ್ಸಾಹವಿತ್ತು, ತನ್ನ ಮಗನನ್ನು ತಾನೇ ಹಾಳು ಮಾಡಿರುವಳು. ಅವಳಿಗೆ ಇಂದಿನ ದುಃಖವು ತನ್ನ ಕ್ರಿಯೆಯ ಪ್ರತಿಕ್ರಿಯೆಯಾಗಿಯೇ ದೊರಕಿದೆ. ಆದ್ದರಿಂದ ಅವಳನ್ನು ಕುರಿತು ನನಗೆ ಸಹಾನುಭೂತಿಯಿಲ್ಲ. ಈ ಸಮಯದಲ್ಲಿ ನನ್ನ ಪರಿಸ್ಥಿತಿಯನ್ನು ಯಾರಾದರೂ ಆಲೋಚಿಸುವವರು ಇದ್ದಾರೆಯೇ? ಅವನು ವರ್ಷಕ್ಕೆ ಒಮ್ಮೆಯಾದರೂ ನನ್ನ ಹತ್ತಿರ ಬಂದು ಮಾತಾಡುವುದಿದ್ದರೆ ನಾನು ನನ್ನ ಸರ್ವಸ್ವವನ್ನೂ ಪ್ರಾಣವನ್ನೂ ಕೊಡಲು ತಯಾರಿದ್ದ ನನ್ನ ಪ್ರೇಮದ ಭಂಗ ಇಂದು ಆಗಿದೆ. ಈಗ ವೃದ್ಧೆಯಾಗಿ ದೇಹಬಿಡಲಿರುವ ಈ ಮಾತೆಯು ಈವರೆಗಾದರೂ ಮಗನನ್ನು ಪಡೆದು ಸುಖಿಸಿರುವಳು. ನನ್ನ ಮಟ್ಟಿಗಾದರೆ ನಾನು ಪ್ರೀತಿಸಿದವನನ್ನು ಕಳೆದುಕೊಂಡು ನಾನು ಜೀವಂತಳಾಗಿರುವವರೆಗೆ ಇನ್ನೂ ಅನೇಕ ವರ್ಷಗಳವರೆಗೆ ಈ ದುಃಖವನ್ನು ಅನುಭವಿಸಬೇಕಷ್ಟೆ. ನಿಜವಾಗಿ ಗ್ರಹಿಸಿದರೆ ಪುತ್ರಶೋಕಕ್ಕಿಂತಲೂ ನನ್ನ ಶೋಕ ಹೆಚ್ಚು – ಗೊತ್ತಿದೆಯೇ? ನನ್ನ ಕಷ್ಟ ನಿಮ್ಮಂಥವರಿಗೆ ಅರ್ಥವಾಗಲಾರದು. ನಿನ್ನ ಪಾದಸ್ಪರ್ಷ ಈ ಮನೆಗೆ ಆಗಬಾರದಿತ್ತು – ಇಲ್ಲಿಂದ ಈ ಕೂಡಲೆ ನಡೆ!" ಎಂದು ಮಿಸ್ ಡಾರ್ಟಲ್ಲಳು ರೋಷಾವೇಶದಿಂದ ಹೇಳಿದಳು.

ಇಷ್ಟರಲ್ಲಿ ಮಿಸೆಸ್ ಸ್ಟೀಯರ್ಫೋರ್ತಳು ಸ್ಮೃತಿ ತಪ್ಪಿ, ಅವಳು ಉಸಿರಾಡುತ್ತಿದ್ದ ಒಂದು ಕುರುಹು ಹೊರತಾಗಿ, ಇನ್ನೆಲ್ಲ ವಿಧದಲ್ಲಿ ಮೃತಳಾಗಿದ್ದಳು. ಮಿಸ್ ಡಾರ್ಟಲ್ಲಳು ಅದನ್ನು ಕಂಡು ಅವಳನ್ನೆತ್ತಿ ತನ್ನ ಮೇಲೆ ಒರಗಿಸಿಕೊಂಡು ಮಂಚದ ಮೇಲೆಯೇ ಕುಳಿತಳು; ಮತ್ತು ಅಳತೊಡಗಿದಳು.

ಆಳುಗಳ ಮುಖಾಂತರ ನಾನು ಡಾಕ್ಟರನ್ನು ಬರಮಾಡಿಸಿದೆನು. ಡಾಕ್ಟರು ಬರುವಷ್ಟರೊಳಗೆ ಶವವನ್ನು ಮನೆಗೆ ಸಾಗಿಸಿಟ್ಟೆವು. ಡಾಕ್ಟರರು ಬಂದು ಏನೇನು ಪ್ರಯತ್ನ ಮಾಡಿದರೂ ಮಿಸೆಸ್ ಸ್ಟೀಯರ್ಫೋರ್ತಳಿಗೆ ಸ್ಮೃತಿ ಬರಲಿಲ್ಲ. ಆದರೆ, ಈಗ ಉಸಿರಾಡುವುದರ ಜತೆಗೆ ನರಳುತ್ತಿದ್ದಳು – ಇಷ್ಟಾದರೂ ಬದಲಾವಣೆ ಬಂದಿತ್ತು.

ನಾನು ಅಲ್ಲಿಂದ ಹೊರಟೆನು. ಮನೆಯಿಂದ ಹೊರಬರುವ ಮೊದಲು ಎಲ್ಲ ಕಿಟಕಿಗಳನ್ನೂ ಮುಚ್ಚುತ್ತಾ ಬಂದೆನು. ಅನಂತರ, ಕೊನೆಯದಾಗಿ ಸ್ಟೀಯರ್ಫೋರ್ತನ ಶವವಿದ್ದ ಕೋಣೆಯ ಕಿಟಕಿಗಳನ್ನೆಲ್ಲ ಮುಚ್ಚಿದೆನು. ನನ್ನ ಮನಸ್ಸಿನಲ್ಲಿ ಮೂಡಿದ್ದ ಅಂಧಕಾರವು ಮುಂದಕ್ಕೂ ಹೊರಹೊಮ್ಮಿ ಆ ಮನೆಯನ್ನೆಲ್ಲ ಅಂಧಕಾರಮಯವಾಗಿ ಮಾಡಿತ್ತು. ಕೊರಡಾಗಿ ಹೋಗಿದ್ದ ಅವನ ಕೈಯ್ಯನ್ನು ನನ್ನೆದೆಗೆ ಸ್ವಲ್ಪ ಹೊತ್ತು ಒತ್ತಿಟ್ಟುಕೊಂಡು ಕುಳಿತೆನು. ಆಗ ನನ್ನ ಪಾಲಿಗೆ ಬಾಹ್ಯ ಪ್ರಪಂಚವೆಲ್ಲ ನಾಶವಾಗಿತ್ತು. ನಾನೂ ನನ್ನ ದುಃಖ ಮಾತ್ರ ನನ್ನ ಜ್ಞಾನದಲ್ಲಿ ಉಳಿದಿದ್ದುವು. ಇಂಥ ಅಂಧಕಾರ, ಸರ್ವತ್ರದ ಶೂನ್ಯತೆಯ ನಡುವೆ ಆ ಮಾತೆಯ ನರಳುವಿಕೆಗೆ ಮತ್ತಷ್ಟು ಭೀಷಣವಾಗಿ ತೋರುತ್ತಿತ್ತು.

ಅಧ್ಯಾಯ ಐವತ್ತೇಳು

ಪ್ರವಾಸಿಗಳು

ಈ ವಿಧದ ಅನೇಕ ದುಃಖಗಳ ಭಾರದಿಂದ ನಾನು ಕುಸಿದು ಬೀಳುವ ಸಂಭವ ತುಂಬಾ ಇದ್ದಿದ್ದರೂ ನನ್ನಿಂದಾಗಬೇಕಾಗಿದ್ದ ಕಾರ್ಯಗಳನ್ನು ನಿರ್ವಹಿಸಬೇಕೆಂಬ ಕರ್ತವ್ಯ ನಿಷ್ಠೆಯೇ ನನಗೆ ಶಕ್ತಿ ಕೊಟ್ಟು ನನ್ನಿಂದ ಕಾರ್ಯಗಳನ್ನು ಮಾಡಿಸುತ್ತಿತ್ತು. ಯಾರ್ಮತ್ತಿನ ಘಟನೆ ಬಹು ಘೋರತರದ್ದಾಗಿದ್ದುದರಿಂದ ಅದರ ವರ್ತಮಾನ ಜನರ ಮುಖಾಂತರವೂ ಪತ್ರಿಕೆಗಳ ಮುಖಾಂತರವೂ ಹರಡುವ ಸಂಭವವು ಬಹುವಾಗಿತ್ತು. ಈ ಯಾವ ವರ್ತಮಾನವೂ ಮಿ. ಪೆಗಟಿ ಮತ್ತು ಎಮಿಲಿಯವರಿಬ್ಬರಿಗೆ ತಿಳಿಯಬಾರದೆಂದೂ ಪ್ರವಾಸಿಗಳೆಲ್ಲರೂ ತಮ್ಮ ಪ್ರಾರಂಭದ ಉತ್ಸಾಹದಿಂದ ಮತ್ತು ನಿರ್ದಿಷ್ಟ ಗುರಿಯಿಂದ ಪ್ರಯಾಣಗೈಯ್ಯಬೇಕೆಂದೂ ನಾವು ಇಷ್ಟ ಪಡುತ್ತಿದ್ದೆವು. ಇದಕ್ಕಾಗಿಯೇ ನಾನು ಮಿ. ಮೈಕಾಬರರಿಗೆ ಮಾತ್ರ ಈ ವರ್ತಮಾನವನ್ನು ತಿಳಿಸಿ, ಅವರು ಮಿ. ಪೆಗಟಿ ಮತ್ತು ಎಮಿಲಿಯರಿಗೆ ಯಾವುದೇ ವಿಧದಲ್ಲಿ ಈ ವರ್ತಮಾನ ತಲಪದಂತೆ ನೋಡಿಕೊಳ್ಳಬೇಕೆಂದು ಹೇಳಿದೆನು. ಮಿ. ಮೈಕಾಬರರು ಈ ಜವಾಬ್ದಾರಿಯನ್ನು ಬಹು ಸಂತೋಷದಿಂದ ವಹಿಸಿಕೊಂಡು ಬಹು ದಕ್ಷತೆಯಿಂದ ನಿರ್ವಹಿಸಿದರು. ಮಿ. ಪೆಗಟಿ ಸ್ವಭಾವತಃ ಜನ ಸಂಪರ್ಕವನ್ನು ಬಯಸದವರಾಗಿದ್ದುದರಿಂದ ನಮ್ಮ ಈ ಕೆಲಸ ಹಗುರವಾಯಿತು. ಅಲ್ಲದೆ ಯಾರ್ಮತ್ತಿನ ಘಟನೆಗಳು ನಡೆದ ಒಂದೆರಡು ದಿನಗಳಲ್ಲೇ ಪ್ರವಾಸಿಗಳನ್ನು ಸಾಗಿಸುವ ಈ ಹಡಗು ಇಂಗ್ಲೆಂಡಿನಿಂದ ಹೊರಡುವುದಿದ್ದುದರಿಂದ ನಮ್ಮ ಕೆಲಸ ಮತ್ತಷ್ಟು ಸುಲಭವೂ ಆಯಿತು.

ಪ್ರವಾಸಿಗಳು ಹಡಗನ್ನೇರಬೇಕಾಗಿದ್ದ ದಿನದ ಹಿಂದಿನ ದಿನದ ಸಂಜೆಗೆ ಅತ್ತೆ, ಏಗ್ನೆಸ್, ಟ್ರೇಡಲ್ಸ್ ಮತ್ತು ನಾನು ನಮ್ಮ ಪ್ರವಾಸಿಗಳು ಇಳಿದುಕೊಂಡಿದ್ದ ಬಿಡಾರಕ್ಕೆ ಹೋದೆವು. ಸಮುದ್ರ ಏರಿದಾಗ ದೋಣಿ ಹತ್ತಲೂ ಅನಂತರ ದೋಣಿಯಿಂದ ಹಡಗನ್ನೇರಲೂ ಅನುಕೂಲವೆಂದು ಬಿಡಾರವನ್ನು ನಿಶ್ಚೈಸುವಾಗಲೇ ಬಂದರದ ಕಡೆಯ ಒಂದು ಮನೆಯನ್ನು ಚುನಾಯಿಸಿಕೊಂಡಿದ್ದರು. ಇವರಂತೆಯೇ ಇತರ ಅನೇಕ ಜನರು ಹಡಗು ಪ್ರಯಾಣಕ್ಕಾಗಿ ಅಂಥ ಬಿಡಾರವನ್ನು ಬಿಟ್ಟಿದ್ದರು.

ಮಿ. ಮೈಕಾಬರ್ ದಂಪತಿಗಳೂ ಅವರ ಮಕ್ಕಳೂ ಆಸ್ಟ್ರೇಲಿಯದಲ್ಲೇ ಬಹು ವರ್ಷಗಳ ಕಾಲ ಇದ್ದ ಕೃಷಿಕರಂತೆ ಉಡುಪನ್ನುಟ್ಟುಕೊಂಡಿದ್ದರು – ಒರಟು ಬಟ್ಟೆಯ ಅಂಗಿ–ಲಂಗಗಳನ್ನೂ ಹುಲ್ಲಿನ ಹೇಟನ್ನೂ ಅವರು ಧರಿಸಿದ್ದರು. ಎಲ್ಲರ ಶರ್ಟು ಕೈಗಳೂ ಮೇಲಕ್ಕೆ ಮಡಿಸಲ್ಪಟ್ಟಿದ್ದು, ಅಗತ್ಯ ಬಿದ್ದ ಕೂಡಲೇ ಕೃಷಿ ಕೆಲಸ ಕೈಕೊಳ್ಳಲೋ ಅಥವಾ ಕಾಡುಮೃಗ ಅಥವಾ ಕಾಡುಜನ ಮೊದಲಾದವರಿಂದ ಅತ್ಮರಕ್ಷಣೆ ಮಾಡಿಕೊಳ್ಳಲೋ ಅವರ ಕೈಗಳು ಬಿಡುವಾಗಿದ್ದುವು. ಎಲ್ಲರ ಕೈಯಲ್ಲೂ ನೀಳವಾದ ಒಂದೊಂದು ಕತ್ತಿಯಿತ್ತು.

ನಮ್ಮನ್ನು ಕಂಡು ಅವರೆಲ್ಲರಿಗೂ ಬಹಳ ಸಂತೋಷವಾಯಿತು. ನಮ್ಮನ್ನು ಬಹು ಆದರದಿಂದ ಸ್ವಾಗತಿಸಿದರು. ಅನುಕೂಲವಿದ್ದ ಆಸನಗಳನ್ನೆಲ್ಲ ನಮಗೆ ಒದಗಿಸಿದರು. ಮಿ. ಮೈಕಾಬರರು ಬಹು ಸಂತೋಷದಿಂದ "ಈ ಬೀಳ್ಕೊಡುವ ಸಮಾರಂಭದಲ್ಲಿ, ನಾವು ಇಂಗ್ಲೆಂಡಿನ ಪ್ರಖ್ಯಾತಿಪಟ್ಟ ಪಂಚ್ ಪಾನೀಯವನ್ನು ಸೇವಿಸಲೇಬೇಕು" ಎಂದನ್ನುತ್ತ, ಪಂಚನ್ನು ತಯಾರಿಸಲು ಉದ್ಯುಕ್ತರಾದರು. ಆಗ ಅತ್ತೆಯೂ ಏಗ್ನೆಸ್ಸಳೂ – ತಾವು ಹಿಂದೆಂದೂ ಪಂಚನ್ನು ಸೇವಿಸದಿದ್ದರೂ ಇಂದು ಇಂಥ ಸಂತೋಷದ ಸಂದರ್ಭದಲ್ಲಿ ಪಂಚನ್ನು ತಾವೂ ಸೇವಿಸುವರಾಗಿ ತಿಳಿಸಿ ಮಿ. ಮೈಕಾಬರರ ಉತ್ಸಾಹ, ಸಂತೋಷಗಳನ್ನು ಮತ್ತಷ್ಟು ಹೆಚ್ಚಿಸಿದರು.

ಅಲ್ಲಿ ನಮಗೆಲ್ಲರಿಗೂ ಬೇಕಾದಷ್ಟು ಗಾಜಿನ ಲೋಟಗಳೇ ಇದ್ದುವಾದರೂ ಮಿ. ಮೈಕಾಬರರ ಕುಟುಂಬವೆಲ್ಲ ಒಂದೊಂದು ಟಿನ್ ಡಬ್ಬಿಗಳನ್ನು ಪಂಚ್ ಕುಡಿಯಲೋಸ್ಕರ ಹಿಡಿದುಕೊಂಡು ಕುಳಿತಿದ್ದರು. ಮಿ. ಮೈಕಾಬರರು ತುಂಬಾ ಮಾತಾಡುತ್ತಾ ಅವರದೇ ವೈಶಿಷ್ಟ್ಯವಾಗಿದ್ದ ಕ್ರಮದಿಂದ, ಪಂಚನ್ನು ತಯಾರಿಸಿ ನಮಗೆಲ್ಲರಿಗೂ ಬಡಿಸಿ, ತಮ್ಮ ಟಿನ್ ಡಬ್ಬಿಯಲ್ಲಿ ಪಂಚನ್ನು ಹಾಕಿಕೊಂಡು ಅವರ ಎಂದಿನ ಕ್ರಮದ ಭಾಷಣವನ್ನು ಪ್ರಾರಂಭಿಸಿದರು –

"ಮಹನೀಯರೇ, ಇಂದು ನಾವು ನಮ್ಮ ಸ್ವಾತಂತ್ರ್ಯದ ಮಾತೃ ಭೂಮಿಯ ಸುಖ ಸಂತೋಷಗಳನ್ನು ತ್ಯಜಿಸಿ, ನವೀನ ಆಸ್ಟ್ರೇಲಿಯದ ಕಷ್ಟ ನಿಷ್ಠುರಗಳನ್ನು ಸಹಿಸಿ ನಮ್ಮ ಅಭ್ಯುದಯದ ಪ್ರಥಮ ಸೋಪಾನವನ್ನು ನಿರ್ಮಿಸಿರುವೆವು. ಟಿನ್ ಲೋಟಗಳಲ್ಲಿ ಪಂಚನ್ನು ಸೇವಿಸುವ ನಮ್ಮ ಪ್ರಥಮ ತ್ಯಾಗವನ್ನು ತಾವುಗಳು ಅವಲೋಕಿಸುತ್ತಿರಬಹುದು. ಮುಂದೆ ನಾವು ನಮ್ಮ ಈ ಕೈಗಳಿಂದ ವಿಶಾಲ ಕೃಷಿವಲಯಗಳನ್ನೇ ನಿರ್ಮಿಸಿ, ಕೃಷ್ಯುತ್ಪತ್ತಿಗಳನ್ನು ಬೆಳೆಸಿ, ಐಶ್ವರ್ಯವಂತರಾಗಿ ನಮ್ಮ ಅಭ್ಯುದಯವನ್ನು (ಜತೆಗೆ ಆಸ್ಟ್ರೇಲಿಯದ ಆರ್ಥಿಕ ಉತ್ಪತ್ತಿಯನ್ನು) ಸಾಧಿಸುವಾಗ ಸುಖ ಸಂತೋಷ ವಿಲಾಸಗಳು ತಾವಾಗಿಯೇ ನಮಗೆ ಲಭಿಸುವುವು. ಅಷ್ಟರವರೆಗೆ ಮೈಕಾಬರರ ಕುಟುಂಬವು ಈ ವಿಧದ ಕಷ್ಟಗಳನ್ನು ಸಂತೋಷದಿಂದ ಅನುಭವಿಸುವುದು" ಅಂದರು.

ಪತಿಯ ಭಾಷಣವನ್ನು ಕೇಳಿ ಮೆಚ್ಚಿದ ಪತ್ನಿ ಮಿಸೆಸ್ ಮೈಕಾಬರರು, ತಾನು ಪತಿಗಿಂತ ಕಡಿಮೆಯಾಗಬಾರದೆಂದು ತನ್ನ ಕಡೆಯ ಭಾಷಣವನ್ನು ಮಾಡಿದರು.

"ಮಿ. ಮೈಕಾಬರರ ಮಾತುಗಳು ಅಕ್ಷರಶಃ ನಿಜ. ಕಾಡು ಜನರು ಬರಲಿ, ಅಡವಿ, ಗಿರಿ ಪರ್ವತಗಳೇ ನಮ್ಮ ಪಥದಲ್ಲಿ ಎದುರು ಬರಲಿ – ನಾವು ನಮ್ಮ ಧ್ಯೇಯದ ಸಾಧನೆಯಲ್ಲಿ ಎಲ್ಲವನ್ನೂ ಎದುರಿಸಿ, ಜೈಸಿ, ಹೊಸ ಸಮಾಜ, ಹೊಸ ರಾಜ್ಯವನ್ನೇ ರಚಿಸುವೆವು. ಇಂಥ ಸಾಹಸೀ ಕುಟುಂಬವು ಇಂಗ್ಲೆಂಡನ್ನು ಬಿಟ್ಟು ಹೊರಡುವಾಗ ಇಂಗ್ಲೆಂಡಿನ ಮಹಾ ಜನರು ಮಿ. ಮೈಕಾಬರರಂಥ ವ್ಯಕ್ತಿಗಳ ಶಕ್ತಿಗಳನ್ನು ದೇಶ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳಬಲ್ಲ ಸಂದರ್ಭವನ್ನೇ ಕಳೆದುಕೊಳ್ಳುವರೆಂದು ಸ್ವಲ್ಪ ದುಃಖಿಸುತ್ತಿರಬಹುದು. ನಮ್ಮ ಕುಟುಂಬದವರು (ತವರು ಮನೆಯವರು) ಅವರಾಗಿಯೇ ನಮ್ಮನ್ನು ಈವರೆಗೆ ದೂರವಿಟ್ಟು ಕುಳಿತಿದ್ದ ದೂಷ್ಯವರ್ತನೆಗಾಗಿ ಪಶ್ಚಾತ್ತಾಪಪಡುತ್ತಾ ಬಂದು ನಮ್ಮ ಪ್ರವಾಸವನ್ನು ನಿಲ್ಲಿಸುವಂತೆ ಪ್ರಾರ್ಥಿಸಿಕೊಳ್ಳಲೂ ಬಹುದು. ಅವರಿಗೆ ಇಷ್ಟರಲ್ಲೇ ಜ್ಞಾನೋದಯವಾಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ಆದರೆ ನಾವು ನಮ್ಮ ದೃಢ ಸಂಕಲ್ಪವನ್ನು ಎಂದೂ ಮುರಿಯಲೊಲ್ಲೆವು" ಎಂದು ಅವರು ಮಾತಾಡಿದರು.

ಆಗ ಅತ್ತೆ ಮತ್ತು ಏಗ್ನೆಸ್ಸರು –
"ನಿಮಗೆಲ್ಲರಿಗೂ ಶುಭವಾಗಲಿ, ನಿಮ್ಮ ಇಷ್ಟಾರ್ಥ ಪೂರ್ತಿಯಾಗಲಿ, ನಿಮ್ಮ ಅಭ್ಯುದಯವಾಗಲಿ" ಎಂದಂದು ಪಂಚನ್ನು ಸೇವಿಸಿದರು.

ಇಷ್ಟರಲ್ಲೇ ಹೊರಗೆ ಯಾರೋ ಬಂದು ಮಿ. ಮೈಕಾಬರರನ್ನು ಕರೆಯುತ್ತಿರುವುದಾಗಿ ತಿಳಿಯಿತು.
"ಅದು ನಮ್ಮ ಕುಟುಂಬದವರಾಗಿರಬೇಕು – ತಮ್ಮ ಅಲಕ್ಷ್ಯ ವರ್ತನೆಗಾಗಿ ಪಶ್ಚಾತ್ತಾಪಪಟ್ಟು ಕ್ಷಮಾಯಾಚನೆಗಾಗಿ ಬಂದು ಕಾಯುತ್ತಿರಬೇಕು. ಸ್ವಲ್ಪ ಸಮಾಧಾನ ತಂದುಕೊಂಡು ಮಾತಾಡಿ ಬನ್ನಿ" ಎಂದು ಮಿಸೆಸ್ ಮೈಕಾಬರಳು ಪತಿಗೆ ಹೇಳಿದಳು.

ಪತ್ನಿಯ ಮಾತನ್ನು ಮಿ. ಮೈಕಾಬರರು ವಿಶೇಷ ಮೆಚ್ಚಲಿಲ್ಲ. ಅವರು ಹೇಳಿದರು –
"ನನ್ನ ಈ ಪ್ರಾಯದವರೆಗೂ ಬರದಿದ್ದ ನೆಂಟರು ಈಗ ಬಂದರೆ ನನ್ನ ಪುರಸೊತ್ತನ್ನು ಕಾದು ನಿಂತಿರಬೇಕು. ಈವರೆಗೂ ಯಾವ ಉಪಕಾರಕ್ಕೂ ಬೀಳದಿದ್ದ ನೆಂಟರನ್ನು ನಾನೂ ಅಲಕ್ಷ್ಯ ಮಾಡಬಲ್ಲೆ."

ಗಂಡನ ಮರ್ಜಿ ಹೆಂಡತಿಗೆ ಪೂರ್ಣ ಸರಿಯೆಂದು ತೋರಲಿಲ್ಲ. ಅವಳು ಪುನಃ ಅಂದಳು –
"ಹಾಗನ್ನಬಾರದು. ಸಂಪತ್ತು ಸಮೃದ್ಧಿಗಳಿಂದ ನಾವು ಮೆರೆಯುವಾಗಲೂ ನಮ್ಮ ಅಭ್ಯುದಯದ ಪರಿಣಾಮವಾಗಿ ಆಸ್ಟ್ರೇಲಿಯದಿಂದ ಹಣ ಹರಿದು ಇಂಗ್ಲೆಂಡಿಗೆ ಬರುವಾಗಲೂ ನಾವು ನಮ್ಮ ಮಾತೃಭೂಮಿಯಾದ ಇಂಗ್ಲೆಂಡನ್ನೂ ನಮ್ಮ ಮೂಲ ಪುರುಷರನ್ನೂ ಬಂಧುಗಳನ್ನೂ ಮರೆಯಬಾರದು. ತಿಳಿವಳಿಕೆಯಿಲ್ಲದ ಜನರ ಕಷ್ಟಗಳನ್ನು ನಾವು ಗಣನೆಗೆ ತರಬಾರದು."

ಮಿ. ಮೈಕಾಬರರು ಸಮಾಧಾನಗೊಂಡರು.
"ಇಂಥ ಮಹಾ ಮುಹೂರ್ತದಲ್ಲಿ ಪತಿ–ಪತ್ನಿಯರ ಐಕ್ಯ ಮನೋಭಾವವು ಅತ್ಯಗತ್ಯ" ಎಂದಂದುಕೊಂಡು ಮಿ. ಮೈಕಾಬರರು ನೆಂಟರನ್ನು ಕರೆತರಲು ಹೊರಗೆ ಹೋದರು. ಇದೇ ಸಮಯದಲ್ಲಿ ಮಿಸೆಸ್ ಮೈಕಾಬರರು ಅವರ ತವರುಮನೆಯವರ ಗುಣ ವರ್ಣನೆಯನ್ನು ಮಾಡತೊಡಗಿದರು.

ಆದರೆ ಹೊರಗೆ ಹೋದ ಮಿ. ಮೈಕಾಬರರು ಒಳಗೆ ಬರದೆ ಒಂದು ಕೈಚೀಟು ಮಾತ್ರ ಬಂತು. ಮಿ. ಮೈಕಾಬರರೇ ಆ ಚೀಟನ್ನು ಬರೆದಿದ್ದರು. 'ಹೀಪ್ ಮತ್ತು ಮೈಕಾಬರ್' ಕೇಸಿನ ಡಿಕ್ರಿ ಹಣ ಸಂದಾಯವಾಗದಿದ್ದುದರಿಂದ ಅವರು ದಸ್ತಗಿರಿಯಾಗಿದ್ದರೆಂದು ತಿಳಿಸಿದ್ದರು. ಅವರು ಇನ್ನು ಜೈಲಿನಲ್ಲಿ ಉಳಿಯಬೇಕಾಗುವ ಸ್ವಲ್ಪ ಸಮಯದ ಉಪಯೋಗಕ್ಕಾಗಿ ಅವರ ಒಂದು ಟಿನ್ನು ಡಬ್ಬಿಯನ್ನೂ ತನ್ನ ಆತ್ಮಹತ್ಯೆ ಬಗ್ಗೆ ಒಂದು ಚೂರಿಯನ್ನೂ ಕಳುಹಿಸಬೇಕೆಂದು ಆ ಚೀಟಿಯಲ್ಲಿ ಬರೆದಿದ್ದರು. ಅಲ್ಲದೆ ಅವರು ಜೈಲಿಗೆ ಹೋದ ನಂತರ ಅವರ ಸಂಸಾರವನ್ನು ನಮ್ಮ ಕಡೆಯ ಅನಾಥಾಲಯದ ವೃತ್ತಿ ಶಿಕ್ಷಣದ ವಿಭಾಗಕ್ಕೆ ಸೇರಿಸಬೇಕೆಂದೂ ಬೇಡಿಕೊಂಡಿದ್ದರು.

ಚೂರಿ ಡಬ್ಬಿಗಳನ್ನು ಕಳುಹಿಸುವ ಬದಲು ನಾನೇ ಹೊರಗೆ ಹೋಗಿ ಅಮೀನರಿಗೆ ಡಿಕ್ರಿ ಪ್ರಕಾರದ ಹಣ ಕೊಟ್ಟು ಮಿ. ಮೈಕಾಬರರನ್ನು ಒಳಗೆ ಕರೆದುಕೊಂಡು ಬಂದೆನು. ಈ ಸಾಲದ ಕಾರಣವಾಗಿ ಮಿ. ಮೈಕಾಬರರಿಗೆ ಟ್ರೇಡಲ್ಸನಿಂದ ಅವರು ಪಡೆದಿದ್ದ ಸಾಲಗಳ ನೆನಪು ಬಂದು, ಅವರ ಜೇಬಿನಲ್ಲಿ ತಯಾರಿಸಿಟ್ಟುಕೊಂಡಿದ್ದ ಪ್ರೋನೋಟನ್ನು ತೆಗೆದು ಟ್ರೇಡಲ್ಸನಿಗೆ ಕೊಟ್ಟರು. ಸರಕಾರದ ಪ್ರೋನೋಟಿನಂತೆಯೇ ತಾನು ಪ್ರೋನೋಟು ಬರಕೊಟ್ಟ ಕೂಡಲೇ ಹಣವೇ ಸಂದಿದೆಯೆಂದು ನಿರ್ವಂಚನೆಯಿಂದ ನಂಬುವ ಮಿ. ಮೈಕಾಬರರು ಆ ನೋಟಿನಲ್ಲಿ ಅವರು ಟ್ರೇಡಲ್ಸನಿಂದ ಹಣ ಸಾಲ ತಂದಿದ್ದ ತಾರೀಕು, ಮೊಬಲಗು, ಅದರ ಬಡ್ಡಿಗಳನ್ನು ಶಾಲಾ ಮಕ್ಕಳು ಅವರ ಲೆಕ್ಕ ಪುಸ್ತಕದಲ್ಲಿ ಅಂಕೆ ಬರೆಯುವಂತೆ ಸಾಲಾಗಿ, ಕ್ರಮವಾಗಿ ಬರೆದಿದ್ದರು. ಈ ಪ್ರೋನೋಟನ್ನು ಟ್ರೇಡಲ್ಸನಿಗೆ ಕೊಟ್ಟ ಮೇಲಿನ ಅವರ ಮರ್ಜಿಯಂತೂ ಬಹು ಉತ್ಸಾಹಕರವಾಗಿತ್ತು. ನಾವು ಆ ದಿನ ರಾತ್ರಿಗೆ ನಮ್ಮ ಮನೆಗೆ ವಾಪಾಸು ಬಂದೆವು.

ಅನಂತರ ನಾವು ಒಮ್ಮೆ ಗ್ರೇವ್ಸ್‌ಎಂಡ್ ಎಂಬ ಬಂದರಕ್ಕೆ ಹೋಗಿ ಮಿ. ಪೆಗಟಿ, ಎಮಿಲಿ ಮೊದಲಾದವರನ್ನು ನೋಡಿ ಬರಬೇಕೆಂದು ನಿಶ್ಚೈಸಿದೆವು. ಗ್ರೇವ್ಸ್‌ಎಂಡಿನಲ್ಲಿ ಹಡಗು ಸ್ವಲ್ಪ ಹೊತ್ತು ನಿಂತಿರುವುದರಿಂದ ಪ್ರಯಾಣಿಕರನ್ನು ಬೀಳ್ಕೊಡುವವರು ಹಾಗೆ ಹೋಗುವ ಕ್ರಮವಿತ್ತು. ಹೀಗೆ ಲಂಡನ್ನಿನಿಂದ ಹೊರಟ ಹಡಗು ಇಂಗ್ಲೆಂಡನ್ನು ಪೂರ್ಣ ಬಿಟ್ಟು ಹೊರಡಲು ಎರಡು ಮೂರು ದಿನಗಳು ತಗಲುವ ಪದ್ಧತಿ ಇರುವುದರಿಂದ, ನಮಗೆ ಇದು ಬಹಳ ಅನುಕೂಲವಾಯಿತು.

ಮಿ. ಮೈಕಾಬರರನ್ನು ಭೇಟಿಯಾದ ಮೂರನೆ ದಿನ ನಾವು ಗ್ರೇವ್ಸ್‌ಎಂಡಿಗೆ ಹೋಗಿ ಆ ಹಡಗನ್ನು ಏರಿ ನಮ್ಮ ಕಡೆಯವರನ್ನೆಲ್ಲ ನೋಡಿ ಮಾತಾಡಿ ಬಂದೆವು. ಆದರೆ ಇಲ್ಲಿಗೆ ಬಾರ್ಕಿಸ್ ಪೆಗಟಿ ಮತ್ತು ನಾನು – ಇಬ್ಬರು ಮಾತ್ರ, ಹೋದೆವು. ಅಲ್ಲಿ ಮಿ. ಪೆಗಟಿಯನ್ನು ಕಂಡು ಮಾತಾಡಿದೆವು. ಅವರ ಜತೆಯಲ್ಲಿ ಎಮಿಲಿ, ಮಿಸೆಸ್ ಗಮ್ಮಿಜ್, ಮತ್ತು ಒಬ್ಬ ಹೆಂಗುಸು ಇದ್ದರು. ಈ ಮೂರನೇ ಹೆಂಗುಸು ಸ್ವಲ್ಪ ದೂರದಲ್ಲಿ ಕುಳಿತಿದ್ದುದರಿಂದ ನಾನು ವಿಚಾರಿಸಿ ತಿಳಿದಾಗ ಅವಳು ಮಾರ್ಥಾಳೆಂದು ತಿಳಿಯಿತು. ಮಾರ್ಥಾಳನ್ನು ಆಸ್ಟ್ರೇಲಿಯಕ್ಕೆ ತನ್ನ ಜತೆಯಲ್ಲಿ ಕರೆದುಕೊಂಡು ಹೋಗುವ ಖರ್ಚನ್ನೆಲ್ಲ ಮಿ. ಪೆಗಟಿಯೇ ಮಾಡಿದ್ದರಲ್ಲದೆ, ಅವಳಿಗೆ ಆಸ್ಟ್ರೇಲಿಯದಲ್ಲಿ ಒಂದು ವೃತ್ತಿಯನ್ನೂ ಒದಗಿಸಿಕೊಡುವರಾಗಿ ಹೇಳಿದರು. ಈ ವರ್ತಮಾನ ತಿಳಿದು ನನಗೆ ಮಿ. ಪೆಗಟಿಯ ಮೇಲೆ ಬಹು ಪೂಜ್ಯ ಭಾವವೇ ಉಂಟಾಯಿತು.

ಹೇಮನು ಹೇಳಿದ್ದ ಮಾತುಗಳನ್ನು ಮಿ. ಪೆಗಟಿಗೆ ನಾನು ತಿಳಿಸಿದಾಗ ಹೇಮನಿಗೆ ನಾನು ತಿಳಿಸಬೇಕೆಂದು ಮರುತ್ತರವನ್ನು ಅವರು ನನ್ನೊಡನೆ ಹೇಳಿದರು. ಹೇಮನ ಜೀವಂತ ಕಿವಿಗೇ ಆ ಮಾತುಗಳನ್ನು ನಾನು ಹೇಳುವೆನೆಂದು ನಂಬಿಕೊಂಡು ಹೇಳುತ್ತಿದ್ದ ಮಾತುಗಳನ್ನು ಕೇಳುತ್ತಿದ್ದಾಗ ನನಗೆ ಆದ ದುಃಖ ಅಷ್ಟಿಷ್ಟಲ್ಲ. ಈ ಅನಿವಾರ್ಯವಾದ ಘಟನೆಯನ್ನು ಕುರಿತು ನಾನು ಯೋಚಿಸುತ್ತಿದ್ದಾಗಲೇ ನಾವು ಹಡಗನ್ನು ಬಿಟ್ಟು ಇಳಿಯಬೇಕಾದ ಸಂಕೇತದ ಘಂಟೆ ಕೇಳಿಸಿತು.

ಘಂಟೆಯ ಶಬ್ದ ಕೇಳಿದ ಕೂದಲೇ ನಾವು ಹಡಗಿನಿಂದಿಳಿದು ನಮ್ಮ ದೋಣಿಯನ್ನು ಸೇರಿದೆವು. ನಮ್ಮ ದೋಣಿಯನ್ನು ಹಡಗಿನಿಂದ ಸ್ವಲ್ಪ ದೂರ ತೆಗೆದುಕೊಂಡು ಹೋಗಿ ನಿಲ್ಲಿಸಿಕೊಂಡು ಸದ್ಯವೇ ಚಲಿಸಲಿದ್ದ ಹಡಗವನ್ನು ನೋಡುತ್ತಾ ನಿಂತೆವು.

ನಮಗಿಂತ ಎತ್ತರದಲ್ಲಿ ನಿಂತಿದ್ದ ಮಿ. ಪೆಗಟಿ ಮತ್ತು ಎಮಿಲಿಯನ್ನು ನಾನು ನೋಡ ತೊಡಗಿದೆನು. ಎಮಿಲಿಯು ಮಿ. ಪೆಗಟಿಯವರ ಮೇಲೆ ಒರಗಿ ನಿಂತಿದ್ದಳು. ಮಿ. ಪೆಗಟಿ ಅವಳನ್ನು ಒಂದು ಕೈಯಿಂದ ಆಧರಿಸಿ ಹಿಡಿದಿದ್ದರು. ಅವರು ದೋಣಿಯಲ್ಲಿದ್ದ ನಮ್ಮನ್ನು ಕೈ ನೀಡಿ ಎಮಿಲಿಗೆ ತೋರಿಸಿದರು. ಎಮಿಲಿಯು ಅವಳ ಕೊನೆಯ ನಮಸ್ಕಾರವನ್ನು ನನಗಿತ್ತಳು.

ಸಂಜೆಯ ಸೂರ್ಯನ ಸುವರ್ಣ ಪ್ರಭೆ ಹಡಗಿನ ಧಕ್ಕೆಯನ್ನೂ ಧಕ್ಕೆಯ ಮೇಲಿದ್ದವರನ್ನೂ ಆವರಿಸಿ ಬಹು ಗಂಭೀರದ ದೈವಿಕ ಭಾವನೆಯನ್ನು ನಮ್ಮಲ್ಲಿ ಪ್ರಚೋದಿಸುತ್ತಿತ್ತು. ಸುಂದರೀಮಣಿ ಎಮಿಲಿ ಬಾಡಿದ ಪುಷ್ಪದಂತೆ, ತನ್ನ ದುಃಖದಿಂದ ಬಾಡಿ ಪ್ರೀತಿಯ ಮಾವನ ಮೇಲೆ ತನ್ನ ಸಮಸ್ತವನ್ನು ಅರ್ಪಿಸಿ ನಿಂತಿದ್ದಳು. ದೃಢವಾದ ಪಿತೃವಾತ್ಸಲ್ಯದಿಂದ ಪೂರಿತರಾಗಿದ್ದ ಮಿ. ಪೆಗಟಿ ತಮ್ಮ ಹೃದಯವೇ ಎಮಿಲಿಯೆಂಬಂತೆ ಅವಳಿಗೆ ಆಶ್ರಯವೂ ಶಕ್ತಿಯೂ ಆಗಿ ನಿಂತಿದ್ದರು. ಈ ವಿಧದ ಗಾಂಭೀರ್ಯದ ಭಾವನಾಮಯ ಸನ್ನಿವೇಶದಲ್ಲಿ ಅವರು ನಿಂತಿದ್ದಂತೆ ಹಡಗು ಚಲಿಸಿತು – ನಮ್ಮಿಂದ ದೂರ ಸರಿಯಿತು.

ನನ್ನ ಜೀವನ ಯಾತ್ರೆಯಲ್ಲಿ ಇಷ್ಟೊಂದು ದೂರ ಬಂದಿದ್ದ ನನ್ನ ಪ್ರಿಯ ಎಮಿಲಿಯನ್ನೂ ಪೂಜ್ಯ ಮಿ. ಪೆಗಟಿಯವರನ್ನು ಅಗಲುವಾಗ ನನಗೆ ಆದ ದುಃಖ ಬಹಳವಾಗಿತ್ತು. ನಮ್ಮ ದೋಣಿಯು ದಡವನ್ನು ಮುಟ್ಟುವಾಗ ರಾತ್ರಿಯ ಕತ್ತಲು ಕೆಂಟ್ಸ್ ಗುಡ್ಡೆಗಳನ್ನು ಆವರಿಸಿತ್ತು. ಅದೇ ಸಮಯದಲ್ಲಿ ದುಃಖದ ಅಂಧಕಾರ ನನ್ನ ಹೃದಯವನ್ನು ಆವರಿಸಿತ್ತು.

ಅಧ್ಯಾಯ ಐವತ್ತೆಂಟು

ನನ್ನ ದೇಶಾಟನ

ಪ್ರವಾಸಿಗಳನ್ನು ಕಳುಹಿಸಿ ಕೊಟ್ಟನಂತರ ನನ್ನ ಮನಸ್ಸಿಗೆ ಬೆಳಕೆಂಬುದೇ ಇರಲಿಲ್ಲ – ಪ್ರಕೃತಿದತ್ತವಾದ ಕತ್ತಲಲ್ಲಿ ನಾವು ಹಿಂತಿರುಗಿದ್ದು ಮಾತ್ರವಲ್ಲ, ನನ್ನ ಮನಸ್ಸಿನಲ್ಲೇ ಗಾಢಾಂಧಕಾರ ತುಂಬಿತ್ತು. ಕೈಗೆ ಎಟಕದ ಅನೇಕ ಆಸೆಗಳೂ ಮುಗಿದು ಹೋಗಿದ್ದ ನೂರಾರು ಸವಿನೆನಪುಗಳೂ ಮನಸ್ಸಿದ್ದೂ ಕಾರ್ಯವಾಗದಿದ್ದ ಕಾರ್ಯಲೋಪಗಳೂ ನಷ್ಟಗಳೂ ದುಃಖಗಳೂ ಪಶ್ಚಾತ್ತಾಪಗಳೂ ನನ್ನನ್ನು ಬಹುವಾಗಿ ಬಾಧಿಸತೊಡಗಿದುವು.

ಪ್ರವಾಸಿಗಳನ್ನು ಕಳುಹಿಸಿಕೊಟ್ಟೆ. ನಾನು ಇಂಗ್ಲೆಂಡನ್ನು ಬಿಟ್ಟು ದೇಶಾಟನೆ ಮಾಡತೊಡಗಿದೆ. ಜೀವನದಲ್ಲಿ ಹೊಸ ಮಾರ್ಗವನ್ನು ಅವಲಂಬಿಸಿದೆ. ಇದರಿಂದ, ಇಲ್ಲಿಗೆ ನನ್ನ ದುಃಖಗಳೆಲ್ಲಾ ಮುಗಿಯಿತು, ಮನಸ್ಸು ನೆಮ್ಮದಿಯಾಯಿತು ಎಂದು ಗ್ರಹಿಸಿದೆ. ಆದರೆ, ನಾನು ಹೀಗೆ ಗ್ರಹಿಸಿ ಸಮಾಧಾನ ತೆಗೆದುಕೊಳ್ಳುತ್ತಿದ್ದಾಗಲೇ ಕಟ್ಟವನ್ನು ಮುರಿದು ಪ್ರವಾಹವು ಒಮ್ಮೆಗೇ ಮೇಲೆ ಏರಿಬರುವಂತೆ, ಆವರೆಗೆ ಅಡಗಿದ್ದ ದುಃಖಗಳೂ ವಿಸ್ಮಯಗಳೂ ಆಶಾಭಂಗದಿಂದುಂಟಾಗಿದ್ದ ಸಮಸ್ಯೆಗಳೂ ದಿನದಿಂದ ದಿನಕ್ಕೆ ಬೆಳೆದು ತೋರಲಾರಂಭಿಸಿದುವು. ನಾನು ಏಕಾಂಗಿಯಾಗಿ ತಿರುಗುತ್ತಿರುವೆನೆಂದು ತಿಳಿಯುವಾಗಲೇ ಈ ವಿಧದ ಪ್ರಕ್ಷುಬ್ಧ ಮನಸ್ಸೇ ನನ್ನ ಜತೆಗಾರನಾಗಿ ಎಡೆಬಿಡದೆ ಹಿಂಬಾಲಿಸಿ ಬರತೊಡಗಿತು. ಈ ಪ್ರಕ್ಷುಬ್ಧತೆಯಲ್ಲಿ ವಿಮರ್ಶಾ ದೃಷ್ಟಿಯಿಂದ ನೋಡುವಾಗ ದುಃಖ ಮಾತ್ರವಿದ್ದುದಲ್ಲ, ಅದರಲ್ಲಿ ಪ್ರೇಮ, ಪರೋಪಕಾರ, ಕರುಣೆ, ಹುರುಪು, ನಿರುತ್ಸಾಹ ಇವುಗಳೆಲ್ಲದರ ಭಾವನೆಗಳು ಎದ್ದು ತೋರಬಲ್ಲಂಥ ಜನ, ಸ್ಥಳ , ಸನ್ನಿವೇಶಗಳೂ ಬಂದೊದಗುತ್ತಿದ್ದುವು. ಆದರೂ ದುಃಖವೇ ಪರಮಾಧಿಕ್ಯವಾಗಿತ್ತು. ಪತ್ನಿ, ಬಂಧು, ಸ್ನೇಹಿತ, ದೇಶವನ್ನೆಲ್ಲ ತೊರೆದು ಬಂದಿದ್ದವರ ಜತೆಗೆ, ಅವುಗಳಿಂದ ಉತ್ತಮ ಫಲ ನಿರೀಕ್ಷಿದಾಗಲೇ ದುಃಖಫಲ ಮಾತ್ರ ದೊರೆತ ಸಂದರ್ಭವೂ ಸೇರಿ, ನನ್ನ ಜೀವನದಲ್ಲಿ ಜಿಗುಪ್ಸೆಯುಂಟಾಗಿ ಧೈರ್ಯ, ಆಸಕ್ತಿಗಳು ಕುಸಿದು ಬಿದ್ದುವು.

ಫ್ರಾನ್ಸಿನ ಚರಿತ್ರಾರ್ಹ ಸ್ಥಳಗಳಲ್ಲಿ ತಿರುಗಾಡುವಾಗಲೂ ಯೂರೋಪಿನ ಇನ್ನಿತರ ಮಹಾ ಸ್ಥಳಗಳಲ್ಲಿ ತಿರುಗಾಡುವಾಗಲೂ ನನ್ನಲ್ಲಿ ಲೋಪವಾಗಿದ್ದ – ನನ್ನ ಜೀವನದಲ್ಲಿ ಸಂತೋಷಕ್ಕೆ ಅಗತ್ಯವಾಗಿದ್ದ ಆ ಒಂದು ಶಕ್ತಿಯ ಕಾರಣವಾಗಿ, ಆ ಎಲ್ಲಾ ಸ್ಥಳಗಳಲ್ಲೂ ದಿನಗಳಲ್ಲೂ ಯಾವ ವಿಧದ ಆಕರ್ಷಣೆ, ರುಚಿ, ಸಂತೋಷ ತೋರಲಿಲ್ಲ. ಕೆಲವೊಮ್ಮೆ ನನ್ನ ಪ್ರವಾಸವೇ ಅನಗತ್ಯವಾಗಿತ್ತೆಂದೂ ತಿಳಿಯುತ್ತಿದ್ದೆನು. ಕೆಲವೊಮ್ಮೆ ನಾನು ಸದ್ಯವೇ ಸಾಯಲಿರುವೆನೆಂಬ ಭಾವನೆಯೂ ಮೂಡಿಬರುತ್ತಿತ್ತು. ಇಂಥ ಭಾವನೆಯೇ ಬೆಳೆದು, ನಾನು ಸಾಯುವುದಿದ್ದರೆ ಇಂಗ್ಲೆಂಡಿನಲ್ಲೇ ಸಾಯಬೇಕೆಂದು ಹಿಂದಿರುಗಿ ಕೆಲವು ಮೈಲು ಪ್ರಯಾಣ ಬೆಳೆಸಿದ್ದೂ ಉಂಟು.

ಇಟಲಿ, ಸ್ವಿಝರ್ಲೆಂಡುಗಳಲ್ಲಿ ತಿರುಗಿದೆನು. ಆಲ್ಪ್ಸ್ ಪರ್ವತವನ್ನೇರಿ ನೋಡಿದೆನು. ಶ್ಮಶಾನಸದೃಶ ನಿರ್ಜನ ಪ್ರದೇಶಗಳನ್ನು ದಾಟಿ ಹೋದೆನು. ಆದರೆ ಈ ಯಾವ ಸ್ಥಳಗಳಲ್ಲೂ ಪ್ರಕೃತಿ ವೈಭವವೇನೂ ನನ್ನ ಮನಸ್ಸಿಗೆ ತೋಚದೆ – ನನ್ನ ಅಂತರಂಗವನ್ನು ಸ್ಫುರಿಸದೆ, ನನ್ನ ದೇಶಾಟನೆಯೇ ಉದ್ದೇಶರಹಿತವಾಗಿ ತೋರಿತು.

ಕೊನೆಗೆ, ನೋಡೋಣವೆಂದು ಪರ್ವತ ಪ್ರದೇಶದ ಒಂದು ಚಿಕ್ಕ ಹಳ್ಳಿಗೆ ಹೋಗಿ ನೆಲೆಸಿದೆನು. ಉನ್ನತವಾದ ಗಿರಿಶಿಖರಗಳನ್ನೆಲ್ಲ ತಂದು ಕೈಯ್ಯಲ್ಲಿ ಎರಚಿ ನಿರ್ಮಿಸಿದಂತಿತ್ತು ಈ ಪ್ರದೇಶ. ಇಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ಜಲಪಾತಗಳೂ ಹಸಿರು ಕಣಿವೆಗಳೂ ಶುಭ್ರ ಹಿಮಗಿರಿಗಳೂ ಬೇಕಾದಷ್ಟು ನೋಡ ಸಿಕ್ಕುತ್ತಿದ್ದುವು. ಇಲ್ಲಿನ ಮನೆಗಳೆಲ್ಲ ಹಸುರು ಪರ್ವತಗಳ ಮುಂಗಡೆಯಲ್ಲಿ ಪ್ರತ್ಯಪ್ರತ್ಯೇಕ – ದೂರದೂರವಾಗಿದ್ದು, ಮರಗಳ ತೋಪು, ಹೂದೋಟಗಳಿಂದ ಆವೃತವಾಗಿ, ಚಿತ್ರದ ಮನೆಗಳಂತೆ ಬಹು ರಮಣೀಯವಾಗಿ ತೋರುತ್ತಿದ್ದುವು. ನಾನು ವಾಸವಾಗಿದ್ದ ಮನೆಯಲ್ಲಿ ಕುಳಿತು ನೂರಾರು ಅಡಿಗಳ ಪ್ರದೇಶವನ್ನು ನೋಡುವಾಗ ಭೂಪಟವನ್ನು ನೋಡಿದಂತೆ ತೋರುತ್ತಿತ್ತೇ ಹೊರತು ವಾಸ್ತವಿಕ ಸ್ಥಳ, ಮನೆ ಮಠಗಳನ್ನು ನೋಡಿದಂತೆ ತೋರುತ್ತಿರಲಿಲ್ಲ. ಚಿತ್ರದ ನದಿಗೆ ಚಿತ್ರದ ಸೇತುವೆಯೂ ಚಿತ್ರದ ಮೈದಾನಗಳಲ್ಲಿ ಚಿತ್ರದ ಸಾಲುಮರಗಳ ಅಂಚೂ ಇದ್ದಂತೆ ಆ ತಗ್ಗಿನ ಪ್ರದೇಶವೆಲ್ಲ ಬಹು ರಮ್ಯವಾಗಿ ತೋರುತ್ತಿತ್ತು. ಸಂಜೆಗಳಲ್ಲಿ ಕುರುಬರ ಕಂಠದಿಂದ ಹೊರಡುತ್ತಿದ್ದ ಘಂಟೆಮಣಿಗಳ ತಿಂತಿಣಿರವವೂ ನನ್ನ ಮನಸ್ಸಿನ ಮೇಲೆ ಮೃದು ಅಲೆಗಳಾಗಿ ಬಂದು ಮುಟ್ಟಿ, ಕ್ರಮೇಣವಾಗಿ ನನ್ನ ಮನಸ್ಸನ್ನು ಶಾಂತಿಯಲ್ಲಿ ತೇಲಿಸಿಬಿಟ್ಟವು. ದಿನ ಹೋದ ಹಾಗೆ ನನಗೆ ಆ ಸ್ಥಳದಲ್ಲಿ ಶಾಂತಿಯೂ ತೃಪ್ತಿಯೂ ಸಂತೋಷವೂ ಉಂಟಾಯಿತು. ಅಲ್ಲಿನ ಜೀವನದಲ್ಲಿ ಹೃದಯವೇದನೆ ಕಡಿಮೆಯಾಗತೊಡಗಿತು. ಪ್ರಕೃತಿ ತನ್ನ ಮೃದು ಹೆಜ್ಜೆಯಿಂದ, ಸಮಯದ ನುಣುಪಿನ ಮಾರ್ಗದಿಂದ, ನನ್ನ ಮನವನ್ನು ನುಗ್ಗಿ, ಮೃತ ಡೋರಾಳನ್ನು ಕುರಿತು ಕಂಬನಿ ಕರೆಸಿ, ಮನಸ್ಸಿಗೆ ಶಾಂತಿಯನ್ನಿತ್ತಿತು – ಜೀವನದಲ್ಲಿ ಸೊಬಗಿದೆಯೆಂದು ಮಾನಸಿಕ ದಿಗಂತದಲ್ಲಿ ತೋರಿಸಿ ಕೊಟ್ಟಿತು. ಹೀಗೆ, ಈ ಸ್ಥಳದಲ್ಲಿ ನಾನಿರುವಾಗ ಏಗ್ನೆಸ್ಸಳಿಂದ ನನಗೆ ಒಂದು ಪತ್ರವು ಬಂದಿತು.

ಏಗ್ನೆಸ್ಸಳ ಪತ್ರವು ಅವಳಿರುವಂತೆಯೇ ಸೌಮ್ಯವಾಗಿತ್ತು. ಸಾತ್ವಿಕ ಸಂತೋಷವನ್ನೀಯುತ್ತಿತ್ತು. ಆತ್ಮಶಕ್ತಿ, ಉತ್ಸಾಹಗಳನ್ನು ಮೃದುವಾಗಿ ಪ್ರಚೋದಿಸುತ್ತಿತ್ತು. ನನ್ನ ಮೇಲೂ ನನ್ನ ಶಕ್ತಿಗಳ ಮೇಲೂ ಅವಳಿಗೆ ಇದ್ದ ನಂಬಿಕೆಯನ್ನು ಪತ್ರದಲ್ಲಿ ತಿಳಿಸಿದ್ದಳು. ಅವಳ ಪತ್ರವನ್ನೋದಿ

ಜೀವನದಲ್ಲಿ ಉತ್ಸಾಹ ತೋರಿತು. ನಿರೀಕ್ಷಣೆಗಳು ಸುಖ ಸಂತೋಷಪ್ರದವಾಗಿ ತೋರಿದುವು. ನಮಗೆ ಜೀವನದಲ್ಲಿ ಎದುರು ಸಿಗುವ ಎಲ್ಲಾ ಅನುಭವಗಳೂ ದೈವಿಕವಾಗಿಯೇ ದೊರಕುವುವು ಎಂದೂ ಆ ಕಾರಣದಿಂದ ಅಂಥಾ ಅನುಭವಗಳಲ್ಲೇ ದೈವಶಕ್ತಿ ಇದ್ದೇ ಇದೆಯೆಂದೂ ಅವು ನಮಗೆ ದೊರಕಿದ್ದುದರಿಂದಲೇ ಆ ಶಕ್ತಿಗಳು ನಮ್ಮದಾಗಿದ್ದು ಅದನ್ನು ಉಪಯೋಗಿಸಿ ನಾವು ಜೀವನದಲ್ಲಿ ಉತ್ಕರ್ಷ, ಕೀರ್ತಿ, ಸಂಪತ್ತನ್ನು ಪಡೆಯಬೇಕೆಂದೂ ಏಗ್ನೆಸ್ಸಳು ತರ್ಕಿಸುತ್ತಿದ್ದಳು. ಇದಕ್ಕೆಲ್ಲ ಅವಳು ನನ್ನ ಅನುಭವಗಳನ್ನೂ ನನ್ನ ಕಾದಂಬರಿಗಳಿಗೆ ಆವರೆಗೆ ದೊರಕಿದ್ದ ಪ್ರಶಸ್ತಿಯನ್ನು ಎತ್ತಿ ತೋರಿಸಿ ಉದಾಹರಿಸುತ್ತಿದ್ದಳು. ಈ ಎಲ್ಲ ತರ್ಕಗಳಿಂದ, ನನ್ನ ಅಂದಿನ ಕಾದಂಬರೀಕಾರನೆಂಬ ಪ್ರಶಸ್ತಿ ಮುಂದಿನ ಪ್ರಶಸ್ತಿಗೆ ಸೋಪಾನವಾಗಿಯೂ ಇಂದಿನ ದೇಶಾಟನ ಮುಂದಿನ ನನ್ನ ಖ್ಯಾತಿಗೆ ಆಧಾರವೆಂದೂ ಅವಳು ನನ್ನನ್ನು ಹುರಿದುಂಬಿಸಿ ಸಂತೋಷಗೊಳಿಸಿದಳು.

ಏಗ್ನೆಸ್ಸಳ ಪತ್ರವನ್ನು ಬಹು ಪ್ರೀತ್ಯಾದರಗಳಿಂದ ಭದ್ರವಾಗಿ ಇಟ್ಟುಕೊಂಡೆನು. ಅವಳ ಸಲಹೆಗಳನ್ನು ನಂಬಿಕೆಯಿಂದ ಅಂಗೀಕರಿಸಿದೆನು. ಅವಳ ಪತ್ರವೇ ಅವಳ ಸಾನ್ನಿಧ್ಯವೆಂದು ತಿಳಿಯುತ್ತಾ ನನ್ನ ವ್ಯಾಸಂಗ, ಪರಿಶ್ರಮಗಳನ್ನು ಹುರುಪಿನಿಂದ ಮಾಡತೊಡಗಿದೆನು. ಒಂದು ಕಾದಂಬರಿಯನ್ನು ಬರೆದು ಟ್ರೇಡಲ್ಸನ ಮುಖಾಂತರ ಅಚ್ಚು ಹಾಕಿಸಿ, ಪ್ರಕಟಿಸಿ, ಸ್ವಲ್ಪ ಹಣವನ್ನೂ ಪ್ರಶಸ್ತಿ, ಪ್ರಚಾರಗಳನ್ನೂ ಸಂಪಾದಿಸಿದೆನು. ಟ್ರೇಡಲ್ಸನೂ ಈ ಕಾಲದಲ್ಲೇ ತನ್ನ ವೃತ್ತಿಯಲ್ಲೂ ಅಭಿವೃದ್ಧಿ ಹೊಂದುತ್ತಿದ್ದನೆಂದೂ ತಿಳಿದು ಬಹಳ ಸಂತೋಷವಾಯಿತು.

ಈ ರೀತಿ ನಾನು ಮೂರು ವರ್ಷಗಳ ಕಾಲ ಪರಸ್ಥಳದಲ್ಲಿದ್ದೆನು. ಆದರೆ ನಾನು ಒಬ್ಬಂಟಿಗನಾಗಿದ್ದುದೂ ನನ್ನ ಜೀವನದ ಸಹಧರ್ಮಿಣಿಯಾಗಿ ಯಾರೂ ಇಲ್ಲದಿದ್ದುದೂ ನನಗೆ ಸ್ವಲ್ಪ ದುಃಖದ ಸಂಗತಿಯಾಗಿ ವೇದನೆ ಕೊಡುತ್ತಿತ್ತು. ಈ ಸಂಗತಿಯನ್ನು ಯೋಚಿಸಿದಾಗೆಲ್ಲ ಡೋರಾಳೂ ಏಗ್ನೆಸ್ಸಳೂ ನನ್ನ ಮನಸ್ಸಿನಲ್ಲಿ ಎದ್ದು ತೋರುತ್ತಿದ್ದರು. ಏಗ್ನೆಸಳೊಬ್ಬಳನ್ನೇ ನಾನು ಕಾಣುತ್ತಿದ್ದು – ಡೋರಾಳ ಪರಿಚಯವೇ ನನಗೆ ಆಗದಿರುತ್ತಿದ್ದರೆ, ನಾನು ಏಗ್ನೆಸ್ಸಳನ್ನು ಯಾವ ವಿಧದಲ್ಲಿ ಪ್ರೀತಿಸುತ್ತಿದ್ದೆ, ಪ್ರೀತಿಸಬಹುದಿತ್ತೂ ಎಂಬ ತರ್ಕಗಳೂ ಮನಸ್ಸಿನಲ್ಲಿ ಮೂಡುತ್ತಿದ್ದುವು. ಇಂಥ ಅಭಿಪ್ರಾಯಗಳು ಮೂಡಿ, ಉತ್ತರ ಸಿಕ್ಕದೆ, ಪುನಃ ಪುನಃ ಪ್ರಶ್ನಿಸುತ್ತಾ ಏಗ್ನೆಸ್ಸಳನ್ನು ನಾನು ಈಗ ಕೇವಲ ಸಹೋದರೀ ಭಾವದಿಂದ ನೋಡುತ್ತಿರುವುದನ್ನು ಬಿಟ್ಟು, ಡೋರಾಳನ್ನು ಕಂಡ ಭಾವದಿಂದ ನೋಡಿದರೆ ನ್ಯಾಯವಾಗಬಹುದೇ, ಇದರಿಂದ ಏಗ್ನೆಸ್ಸಳ ಮೇಲೆ ಪರಿಣಾಮವೇನಾಗಬಹುದು, ಅವಳು ನನ್ನ ಇಂತಹ ಅಭಿಪ್ರಾಯಗಳನ್ನು ತಿಳಿದರೆ ಈಗ ನಮ್ಮೊಳಗಿರುವ ಸ್ನೇಹ ಪರಿಚಯಗಳೇ ನಿಂತುಹೋಗಬಹುದೇ, ಆಗ ನನ್ನ ಭವಿಷ್ಯವೇನಾಗಬಹುದು, ಎಂದೂ ಆಲೋಚಿಸಿಯೇ ಹೆದರುತ್ತಿದ್ದೆ.

ಮೂರು ವರ್ಷಗಳನಂತರ ನಮ್ಮೂರಿಗೆ ಮರಳಿ ಬರುವಾಗ ನನ್ನ ಮನಸ್ಸು ಈ ತೆರನಾಗಿತ್ತು. ನಾನು ಹಠಾತ್ತಾಗಿ – ಯಾರಿಗೂ ಮೊದಲಾಗಿ ತಿಳಿಸದೆ – ಊರಿಗೆ ಬಂದೆನು. ಲಂಡನ್ನಿನಲ್ಲಿ ಬಂಡಿಯಿಂದಿಳಿದು, ಬೀದಿಯಲ್ಲಿ ಏಕಾಂಗಿಯಾಗಿ ನಡೆದು ಮುಂದುವರಿಯುವಾಗ ನಮ್ಮ ದೇಶ, ನಗರ, ಮನೆ, ಎಲ್ಲವು ಬಹು ಪ್ರಿಯವಾಗಿ ತೋರಿದುವು. ಏಗ್ನೆಸ್ಸಳಂತೂ ಪರಮಪ್ರಿಯಳಾಗಿಯೇ ದೃಷ್ಟಿ ಪಥದಲ್ಲಿ ಶೋಭಿಸುತ್ತಿದ್ದಳು. ಆದರೆ ಸಹೋದರೀ, ಸಹಧರ್ಮಿಣಿ ಎಂಬೆರಡು ಅವಳನ್ನು ಕುರಿತಾಗಿದ್ದ ಭೇದ ಭಾವಗಳು ನನ್ನನ್ನು ಹಿಂಸಿಸುತ್ತಿದ್ದುವು.

ಅಧ್ಯಾಯ ಐವತ್ತೊಂಬತ್ತು

ದೇಶಾಟನದಿಂದ ಹಿಂತಿರುಗಿದುದು

ಶರತ್ಕಾಲದ ಒಂದು ಸಂಜೆ ನಾನು ಲಂಡನ್ನಿಗೆ ತಲುಪಿದೆನು. ಆಗ ಕತ್ತಲಾಗುತ್ತಾ ಬಂದಿತ್ತು. ಮತ್ತು ಬಲವಾದ ಮಳೆಯೂ ಸುರಿಯುತ್ತಿತ್ತು. ನಾನು ಪರ ಊರುಗಳಲ್ಲಿ ಒಂದು ವರ್ಷ ಕಾಲದಲ್ಲಿ ಒಟ್ಟಾಗಿ ಕಾಣದಿದ್ದಷ್ಟು ಹಿಮ ಮತ್ತು ಕೆಸರನ್ನು ಇಲ್ಲಿ ಒಂದೆರಡು ಮಿನಿಟುಗಳಲ್ಲೇ ಕಂಡೆನು. ಸುಂಕದ ಕಟ್ಟೆಯಿಂದ ಮಾನ್ಯುಮೆಂಟ್ ರಸ್ತೆಯವರೆಗೆ ನಾನು ನಡೆದೇ ಹೋಗಬೇಕಾಯಿತು. ಚರಂಡಿಗಳಲ್ಲು ಉಕ್ಕಿ ಹರಿಯುತ್ತಿದ್ದ ಕೆಸರು ನೀರನ್ನು ನೋಡುತ್ತಾ ನಡೆದು ಹೋಗುವಾಗ ಬದಿಯಲ್ಲೇ ನಿಂತಿದ್ದ ಪೂರ್ವದ ಕೆಲವು ಮನೆಗಳನ್ನು ಕಂಡೆನು. ಕಂಡದ್ದು ಹಳತು ಮತ್ತು ಕೊಳಕು ಮನೆಗಳಾಗಿದ್ದರೂ ಅವನ್ನು ಕಂಡಾಗ ಹಳೆ ಸ್ನೇಹಿತರನ್ನು ಕಂಡಷ್ಟೆ ಸಂತೋಷವಾಯಿತು.

ಇಷ್ಟರಲ್ಲಿ ಬಾಡಿಗೆ ಬಂಡಿಯೊಂದು ಬರುತ್ತಿದ್ದುದನ್ನು ಕಂಡು ಅದನ್ನು ಹತ್ತಿ ಮುಂದುವರಿದೆನು. ನಾನು ಪರವೂರಿಗೆ ಹೋಗಿದ್ದ ಸಮಯವೇ ಬದಲಾವಣಾ ಕಾರ್ಯಗಳನ್ನು ಕೈಗೊಳ್ಳಲು ಸುಮುಹೂರ್ತವೆಂದು ಜನರು ಗ್ರಹಿಸಿ ಕಾರ್ಯ ಕೈಗೊಂಡಿದ್ದಂತೆ ದಾರಿಯ ಉದ್ದಕ್ಕೂ ನಗರದ ಕಟ್ಟಡಗಳಲ್ಲೂ ರಸ್ತೆಗಳಲ್ಲೂ ತುಂಬಾ ಬದಲಾವಣೆ ನಡೆದಿತ್ತು. ನಾನು ಪರದೇಶಗಳಲ್ಲಿದ್ದಾಗ ಅತ್ತೆ ಲಂಡನ್ನನ್ನು ಬಿಟ್ಟು, ತನ್ನ ಪೂರ್ವದ ಡೋವರಿನ ಮನೆ ಪಡೆದು ಅದರಲ್ಲೇ ಹೋಗಿ ನೆಲೆಸಿದ್ದಳು. ಈ ರಾತ್ರಿಯೇ ಮಲಗುವ ಸಮಯಕ್ಕೆ ಮೊದಲು ಟ್ರೇಡಲ್ಸನನ್ನು, ಸಾಧ್ಯವಾದರೆ ಇತರ ಸ್ನೇಹಿತರನ್ನೂ ಕಾಣಬೇಕೆಂದು ಮನಸ್ಸು ಹಂಬಲಿಸುತ್ತಿತ್ತು. ಇದಕ್ಕಾಗಿ ಒಳ್ಳೆಯ ಹೋಟೆಲ್ ಒಂದನ್ನು ಗೊತ್ತು ಮಾಡಿಕೊಂಡು, ಅದರಲ್ಲೇ ಒಂದು ಕೋಣೆಯನ್ನೂ ಗೊತ್ತು ಮಾಡಿಕೊಂಡೆನು.

ಅನಂತರ ಟ್ರೇಡಲ್ಸನನ್ನು ಕುರಿತು ಹೋಟೆಲಿನವರಿಗೆ ಏನಾದರೂ ಪರಿಚಯವಿದೆಯೇ ಅವನನ್ನು ನೋಡಲು ಹೋಗತಕ್ಕ ಕೆಲಸವಿದೆ, ಎಂದು ಮೊದಲಾಗಿ ತಿಳಿಸಿ ವಿಚಾರಿಸಿ ನೋಡಿದೆನು. ಆದರೆ ಹೋಟೆಲಿನವರು ಅವನಂಥ ಬಡಜನರ ವಿಚಾರವಾಗಿ ಆ ಹೋಟೆಲಿನಲ್ಲಿ ವಿಚಾರಿಸಿದ್ದೇ ನನ್ನ ಹೆಡ್ಡುತನವೆಂಬಂತೆ ಮಾತಾಡಿ, ಕಾರ್ಯಗಳಲ್ಲು ವರ್ತಿಸಿದರು. ಈ ಸಂಬಂಧದ ನಮ್ಮ ಮಾತುಗಳಲ್ಲಿ ಹೋಟೆಲಿನವರ ಸಂಪತ್ತು, ಸಮಾಜದ ಗಣ್ಯ ವ್ಯಕ್ತಿಗಳ ಪರಿಚಯ, ಮತ್ತೂ ಅವರ ವ್ಯವಹಾರಗಳಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ತಾರತಮ್ಯದಿಂದ ಭೇದವನ್ನು ಮಾಡುತ್ತಿರುವ ಒಂದು ಮರ್ಮ, ಇವೆಲ್ಲ ನನಗೆ ತಿಳಿಯಿತು. ನಿರ್ವಂಚಕನಾಗಿ, ಸರಳವಾಗಿ, ಭಯದಿಂದ ಎಲ್ಲರೊಡನೆಯೂ ನಡೆದು ಬರುತ್ತಿರುವ ಟ್ರೇಡಲ್ಸನ ವಕೀಲ ವೃತ್ತಿಯಲ್ಲಿ ಅವನು ಎಷ್ಟು ಅಭಿವೃದ್ಧಿ ಪಡೆದಿರಬಹುದು, ಎಂಬಿತ್ಯಾದಿ ಸಂಶಯಗಳು ಈ ಹೋಟೆಲಿನ ಶ್ರೀಮಂತಿಕೆ, ಮತ್ತು ವ್ಯವಹಾಹರಧರ್ಮಗಳನ್ನು ನೋಡಿ ನನಗೆ ಉಂಟಾಯಿತು. ಅಂತೂ ಹೇಗೋ ಮಾಡಿಕೊಂಡು..... ಟ್ರೇಡಲ್ಸನ ಪತ್ರ ವ್ಯವಹಾರಗಳ ಕೆಲವು ಮಟ್ಟಿನ ಆಧಾರದಿಂದ ಸಹ – ನಾನು ಟ್ರೇಡಲ್ಸನ ವಿಳಾಸವನ್ನು ಗೊತ್ತು ಹಚ್ಚಿ ಅವನ ಮನೆಗೆ ಆ ರಾತ್ರಿಯೇ ಹೋದೆನು.

ಟ್ರೇಡಲ್ಸನ ಮನೆಯೂ ಆಫೀಸೂ ಒಂದೇ ಕಟ್ಟಡಲ್ಲಿದ್ದವು. ನಾನು ಅವನ ಆಫೀಸಿಗೆ ನುಗ್ಗುವ ಮೊದಲು ಒಳಗಿನಿಂದ ತುಂಬಾ ನಗಾಟ, ಗೌಜುಗಳು ಕೇಳಿ ಬರುತ್ತಿದ್ದವು. ನಾನು ಟ್ರೇಡಲ್ಸನ ಆಫೀಸಿಗೆ ನುಗ್ಗಿ ನೋಡುವಾಗ ಟ್ರೇಡಲ್ಸನು ಒಬ್ಬನೇ ಸ್ವಲ್ಪ ಶ್ರಮಪಟ್ಟಿದ್ದವನಂತೆ ತೋರುತ್ತಾ ಕುಳಿತಿದ್ದನು. ಅವನ ಆಫೀಸಿನ ಒಳಗೂ ಕುರ್ಚಿ, ಬೆಂಚು, ಕಾಗದಗಳ ಅವ್ಯವಸ್ಥೆ ತೋರಿಬರುತ್ತಿದ್ದವು. ನನ್ನನ್ನು ಕಂಡ ಕೂಡಲೇ ಟ್ರೇಡಲ್ಸನು ಬಹು ಸಂತೋಷದಿಂದ ನನ್ನನ್ನು ಆಲಂಗಿಸಿ ಹಸ್ತ ಲಾಘವವನ್ನಿತ್ತನು. ಅನಂತರ ಬಹು ಸಂತೋಷದಿಂದ –

"ನೀನು ಸಮಯ ನೋಡಿ ಇಲ್ಲಿಗೆ ಬಂದ ಹಾಗಾಗಿದೆ, ಕಾಪರ್ಫೀಲ್ಡ್! ನನ್ನ ಪತ್ನಿ ಸೋಫಿಯ ಅಕ್ಕತಂಗಿಯರು ಲಂಡನ್ ನೋಡುವುದಕ್ಕೆಂದು ಇಲ್ಲಿಗೆ ಬಂದಿರುವರು. ಅವರೆಲ್ಲ ನಮ್ಮ ಮನೆಯಲ್ಲಿರುವಾಗ ನೀನೂ ಬಂದದ್ದು ಬಹಳ ಸಂತೋಷ" ಅಂದನು ಟ್ರೇಡಲ್ಸ್.

"ನಿನ್ನ ಮದುವೆಯ ವಿಷಯ ನನಗೆ ಗೊತ್ತೇ ಇಲ್ಲವಷ್ಟೇ" ಎಂದು ನಾನು ಅನ್ನಬೇಕಾಯಿತು.

"ನಿನಗೆ ಪತ್ರವನ್ನು ಬರೆದಿದ್ದೆ – ಅದು ತಲುಪಲಿಲ್ಲವೆಂದು ತೋರುತ್ತದೆ. ನನಗೆ ಮದುವೆಯಾಗಿ ಒಂದು ವಾರವಾಯಿತು. ನಮ್ಮ ಅತ್ತೆ ಮೊದಲಿನಂತೆಯೇ ರೋಗಿಷ್ಠಳು. ಅವರ ಹಳ್ಳಿ ಮನೆಯಲ್ಲೇ ಇದ್ದ ಮಕ್ಕಳಿಗೆ ಸ್ವಲ್ಪ ಊರು ನೋಡಬೇಕೆಂದು ತೋರುವುದರಲ್ಲಿ ಆಶ್ಚರ್ಯವಿಲ್ಲ. ನೀನು ಬರುವಾಗ ನಾನು ಅವರ ಜತೆಯಲ್ಲಿ ಹುಗ್ಗಾಟವಾಡುತ್ತಿದೆ" ಎಂದು ಟ್ರೇಡಲ್ಸನು ಅಂದನು.

ಹೀಗೆ ನಾವಿಬ್ಬರೂ ತುಂಬಾ ಮಾತಾಡುತ್ತಾ ಸ್ವಲ್ಪ ಹೊತ್ತು ಕುಳಿತಿದ್ದೆವು. ಮುಖ್ಯವಾಗಿ ಟ್ರೇಡಲ್ಸನನ್ನು ನೋಡಿ ಬರಬೇಕೆಂಬ ಉದ್ದೇಶ ಮಾತ್ರ ನನ್ನದಾಗಿದ್ದುದರಿಂದ ನಾನು ರಾತ್ರಿಯೇ ಅಲ್ಲಿಂದ ಹೊರಟೆನು. ಆದರೆ ಟ್ರೇಡಲ್ಸನ ಒತ್ತಾಯಕ್ಕಾಗಿ ನಾವು ಸ್ವಲ್ಪ ಚಹ ಸೇವಿಸಿದೆವು.

ನಾನು ನಮ್ಮ ಹೋಟೆಲಿನಲ್ಲಿ ರಾತ್ರಿಯ ಊಟ ಮುಗಿಸಿ ಎದುರು ಕಡೆ ಜಗುಲಿಯಲ್ಲಿ ತಿರುಗಾಡುವಾಗ್ಗೆ, ಅದೇ ಜಗುಲಿಯ ಒಂದು ಮೂಲೆಯಲ್ಲಿ ಡಾಕ್ಟರ್ ಚಿಲ್ಲಿಪ್ಪರನ್ನು ಕಂಡೆನು. ಅವರು ಯಾರಿಗೂ ಉಪದ್ರವವಾಗಬಾರದೆಂದು ಆದಷ್ಟು ಸ್ವಲ್ಪ ಸ್ಥಳ ಮಾತ್ರ ಉಪಯೋಗಿಸಿ ಕುಳಿತುಕೊಂಡು ಒಂದು ಪತ್ರಿಕೆಯನ್ನು ಓದುತ್ತಿದ್ದರು. ನನ್ನ ಪರಿಚಯವನ್ನು ನಾನೇ ಅವರಿಗೆ ಮಾಡಿಕೊಡುವ ಮೊದಲು

ಅವರಿಗೆ ನನ್ನ ಗುರುತು ಸಿಕ್ಕಲಿಲ್ಲ. ಅದೊಂದು ಆಶ್ಚರ್ಯವೂ ಅಲ್ಲ, ಏಕೆಂದರೆ ನನ್ನ ತಾಯಿಯು ಬದುಕಿದ್ದಾಗ ಮಾತ್ರ ನನ್ನನ್ನು ಕಂಡಿದ್ದ ಚಿಲ್ಲಿಪ್ಪರು ನನ್ನನ್ನು ಅನಂತರ ಹೆಚ್ಚಾಗಿ ಕಂಡಿರಲಿಲ್ಲ.

ಅವರೊಡನೆ ಸ್ವಲ್ಪ ಹೊತ್ತು ಮಾತಾಡುತ್ತ ಕುಳಿತಿದ್ದೆ. ಅವರ ಹೆಂಡತಿಯ ತಂದೆ ಬರೆದಿಟ್ಟಿದ್ದ ಒಂದು ಉಯಿಲಿನ ಮೂಲಕ ಡಾ। ಚಿಲ್ಲಿಪ್ಪರ ಪತ್ನಿಗೆ ಸ್ವಲ್ಪ ಆಸ್ತಿ ಸಿಕ್ಕಿತ್ತು. ಡಾ। ಚಿಲ್ಲಿಪ್ಪರು ಅದೇ ಊರಲ್ಲಿ ಒಂದು ಚಿಕ್ಕ ಆಸ್ಪತ್ರೆಯನ್ನು ತೆರೆದು ತಮ್ಮ ವೃತ್ತಿಯನ್ನು ಸಾಗಿಸುತ್ತಿದ್ದರು. ಅವರಿಗೆ ಪ್ರಾಯವಾಗುತ್ತಾ ಬಂದಿದ್ದುದು ಅವರನ್ನು ನೋಡುವಾಗ, ಅವರ ಮಾತುಕತೆಗಳಲ್ಲಿ ಸಹ ಗೊತ್ತಾಗುತ್ತಿತ್ತು. ಆದರೂ ಅವರು ಅವರ ಸಂಸಾರ ಸಮೇತರಾಗಿ ಈ ಹೊಸ ಸ್ಥಳದಲ್ಲಿ ಸುಖವಾಗಿ ತಮ್ಮ ವೃತ್ತಿಯನ್ನು ನಡೆಸುತ್ತಿದ್ದರು. ಅವರ ಮಾತುಗಳಲ್ಲೂ ಅವರಾಗಿಯೇ ತಿಳಿಸಿದ ಅವರ ವ್ಯವಹಾರಗಳಲ್ಲೂ ಮೊದಲಿನ ವಿನೀತತೆಯು ಈಗಲೂ ಮೊದಲಿನಂತೆಯೇ ಇತ್ತು. ಮಾತುಗಳ ಕೆಲವು ಸಂದರ್ಭಗಳಲ್ಲಿ ತನ್ನ ಹೆಂಡತಿ ತುಂಬಾ ಬುದ್ಧಿವಂತಳೆಂದು ತಿಳಿಸುತ್ತಾ ನನ್ನ ಅತ್ತೆಯನ್ನೂ ಜ್ಞಾಪಿಸಿಕೊಂಡು, ಅತ್ತೆಯು ಕುಶಾಗ್ರ ಬುದ್ಧಿಯವಳೆಂದೂ ಹೇಳಿದರು.

ಡಾ। ಚಿಲ್ಲಿಪ್ಪರು ಮಿ. ಮರ್ಡ್ಸ್ಟನ್ನರ ಜೀವನ ಚರಿತ್ರೆಯ ಸ್ವಲ್ಪಾಂಶವನ್ನೂ ತಿಳಿಸಿದರು. ಈ ಮರ್ಡ್ಸ್ಟನ್ ಅಣ್ಣತಂಗಿಯರ ಚರಿತ್ರೆಯನ್ನು ಹೇಳುತ್ತಿದ್ದಾಗ ಸ್ವಲ್ಪ ಹಾಸ್ಯ ವಿನೋದದಿಂದಲೇ ಹೇಳುತ್ತಿದರು. ಡಾ। ಚಿಲ್ಲಿಪ್ಪರು ಮಿ. ಮರ್ಡ್ಸ್ಟನ್ನರ ಎರಡನೇ ಹೆಂಡತಿಗೆ ಔಷಧಿ ಕೊಟ್ಟು ಸ್ವಲ್ಪ ಚಿಕಿತ್ಸೆ ನಡೆಸಿದ್ದರಂತೆ. ಮಿ. ಮರ್ಡ್ಸ್ಟನ್ನರು ಈ ಎರಡನೇ ಹೆಂಡತಿಗೂ ಅವರ ಶಿಸ್ತು, ವ್ಯವಸ್ಥೆ, ಮನೋನಿಗ್ರಹ, ಧೈರ್ಯ ಮೊದಲಾದ ತತ್ತ್ವಾನುಷ್ಠಾನಗಳನ್ನು ಜಾರಿಗೊಳಿಸಿ, ಆ ಪತ್ನಿಯನ್ನು ಸಾಕಷ್ಟು ಹದಬರಿಸಿ ಮುರಿದಿದ್ದರಂತೆ. ಇದರ ಪರಿಣಾಮವಾಗಿ ಈ ಪತ್ನಿ ಮನೋರೋಗ, ಮಾನಸಿಕ ನಿಶ್ಶಕ್ತಿಗಳಿಂದ ನರಳುತ್ತಿದ್ದಳಂತೆ. ಡಾ। ಚಿಲ್ಲಿಪ್ಪರ ಮಾತುಗಳಲ್ಲೇ ಇದನ್ನು ಹೇಳುವುದಾದರೆ –
"ಈ ಮರ್ಡ್ಸ್ಟನ್ ಪಂಥದವರು ಅಂತರ್ಮುಖವಾಗಿ ತಮ್ಮ ವಿಷಮಯ ಹೃದಯವನ್ನೇ ಪರಿಶೋಧಿಸಿ, ಅಂಥ ಹೃದಯದ ಅನುಭವಗಳನ್ನು ಮಾನಸಿಕ ಆಹಾರವಾಗಿ ಜಗಿದು, ತಿಂದು ಜೀರ್ಣಿಸಿ ತಾವು ಮುಟ್ಟುವುದನ್ನೆಲ್ಲಾ ವಿಷಮಯವಾಗಿಯೂ ವಿನಾಶಕಾರಕವಾಗಿಯೂ ಪರಿವರ್ತಿಸುವರು. ಈ ಪ್ರಯೋಗದಿಂದಲೇ ತನ್ನ ಪತ್ನಿಯನ್ನೂ ಪರಿವರ್ತಿಸುವರು."

ಡಾಕ್ಟರ್ ಚಿಲ್ಲಿಪ್ಪರೊಡನೆ ಈ ವಿಧವಾಗಿ ಮಾತಾಡುತ್ತಾ ಸ್ವಲ್ಪ ಹೊತ್ತು ಕುಳಿತಿದ್ದು, ಅವರ ಗೌರವಕ್ಕಾಗಿ ನಾನು ತರಿಸಿದ ವೈನನ್ನು ಇಬ್ಬರೂ ಸೇವಿಸಿ, ನಾವು ನಮ್ಮ ನಮ್ಮ ಕೋಣೆಯಲ್ಲಿ ಮಲಗಿದೆವು.

ಮರುದಿನ ಬೆಳಗ್ಗೆ ನಾನು ಡೋವರಿಗೆ ಹೋದೆನು. ಅತ್ತೆ, ಪೆಗಟಿ ಮತ್ತು ಮಿ. ಡಿಕ್ಕರು ನನ್ನನ್ನು ಆನಂದಾಶ್ರುಗಳಿಂದ ಸ್ವಾಗತಿಸಿದರು. ಅತ್ತೆಯ ಹಣದ ಅನುಕೂಲವು ತುಂಬಾ ಸುಧಾರಿಸಿದ್ದುದರಿಂದ ಅವಳ ಡೋವರಿನ ಮನೆ ಈಗ ಬಹು ಚೆನ್ನಾಗಿ ಅಲಂಕರಿಸಲ್ಪಟ್ಟಿತ್ತು. ಒಳ್ಳೊಳ್ಳೆ ಮೇಜು, ಕುರ್ಚಿ, ಕಪಾಟು ಮೊದಲಾದ ಸಾಹಿತ್ಯಗಳು ಮನೆಯಲ್ಲಿ ತುಂಬಾ ಇದ್ದುವು.

ಅವರೆಲ್ಲರಿಗೂ ನನ್ನ ಅನೇಕ ಅನುಭವಗಳನ್ನೂ ಕಥೆಗಳನ್ನೂ ಹೇಳುತ್ತಾ ಕಾಲಕಳೆದೆವು. ಈ ಸಂದರ್ಭದಲ್ಲಿ ಡಾ. ಚಿಲ್ಲಿಪ್ಪರ ವಿನೀತತೆ, ಅವರಿಗೆ ಅತ್ತೆಯ ಮೇಲಿದ್ದ ಅಭಿಪ್ರಾಯಗಳನ್ನು ಹೇಳುವಾಗ ಎಲ್ಲರಿಗೂ ಸಂತೋಷವಾಯಿತು; ಅತ್ತೆ ನಗಾಡಿದಳು. ಆದರೆ, ನಾನು ಮರ್ಡ್ಸ್ಟನ್ ದ್ವಯರನ್ನು ಕುರಿತಾಗಿ ಮಾತಾಡಿದಾಗ ಎಲ್ಲರಿಗೂ ಕೋಪ ಬರುತ್ತಿತ್ತು. ಅತ್ತೆಯಂತೂ ಬಹು ಉದ್ವೇಗದಿಂದಲೇ ಮಾತಾಡುತ್ತಿದ್ದಳು. ಅತ್ತೆ ಮಿ. ಮರ್ಡ್ಸ್ಟನ್ನರ ತಂಗಿಯ ಹೆಸರನ್ನು ಎಂದೂ ಅವಳ ಕ್ರಿಶ್ಚಿಯನ್ ಹೆಸರಿನಿಂದ – ವಾಸ್ತವಿಕವಾದ ಹೆಸರಿನಿಂದ – ಹೇಳಲೊಲ್ಲಳು. ಮಿಸ್ ಜೇನ್ ಮರ್ಡ್ಸ್ಟನ್ನಳ ಹೆಸರನ್ನು ಹೇಳಬೇಕಾದಲ್ಲೆಲ್ಲ ಅವಳು 'ಆ ಮಾರಣಕಾರೀ ಹೆಂಗುಸು' ಎಂದು ಮಾತ್ರ ಹೇಳುತ್ತಿದ್ದಳೇ ಹೊರತು, ಬೇರೆ ವಿಧದಿಂದ ಹೇಳಲು ಎಂದೂ ಸಿದ್ಧಳಾಗಿರಲಿಲ್ಲ.

ಅಧ್ಯಾಯ ಅರವತ್ತು

ಏಗ್ನೆಸ್

ಆ ರಾತ್ರಿ ಊಟವಾದನಂತರ ಅತ್ತೆಯೂ ನಾನೂ ಸಾಧಾರಣ ನಡುರಾತ್ರಿಯವರೆಗೂ ಕುಳಿತು ಮಾತಾಡಿದೆವು. ನಾವು ಮಾತಾಡದಿದ್ದ ವಿಷಯವಿಲ್ಲವೆಂಬಷ್ಟರವರೆಗೂ ಮಾತಾಡಿದೆವು. ಆಸ್ಟ್ರೇಲಿಯಕ್ಕೆ ಹೋದವರನ್ನು ಕುರಿತು ಪ್ರಸ್ತಾಪ ಬಂತು. ಅವರಿಂದ ಬರುವ ಪತ್ರಗಳಲ್ಲೆಲ್ಲ ಅವರ ಅಭಿವೃದ್ಧಿಯನ್ನು ಕುರಿತಾಗಿ ವರ್ತಮಾನವಿರುತ್ತಿತ್ತು. ಆರೋಗ್ಯ, ಕೃಷಿ ಉದ್ಯಮ, ಎಲ್ಲದರಲ್ಲೂ ಅಲ್ಲಿನವರು ಸುಖವಾಗಿ, ಸಂತೋಷವಾಗಿ, ಅಭಿವೃದ್ಧಿ ಪಥದಲ್ಲೇ ಮುಂದುವರಿಯುತ್ತಿದ್ದರು. ಅತ್ತೆಯ ಅನೇಕ ಅನುಭವಗಳ ಕಾರಣವಾಗಿ, (ಹೆಂಗುಸರು ಮದುವೆಯಾಗುವುದು ತಪ್ಪೆನ್ನುತ್ತಿದ್ದವಳು) ತನ್ನ ಪೂರ್ವದ ಅಭಿಪ್ರಾಯವನ್ನು ತಿದ್ದಿಕೊಂಡು ಜೇನೆಟ್ಟಳಿಗೆ ಮದುವೆಗೆ ಒಪ್ಪಿಗೆ ಕೊಟ್ಟಿದ್ದಳು. ಜೇನೆಟ್ಟಳು ಒಬ್ಬ ಶ್ರೀಮಂತ ಹೆಂಡದಂಗಡಿ ಒಡೆಯನನ್ನು ಮದುವೆಯಾಗಿದ್ದಳು. ಅತ್ತೆ ಆ ಮದುವೆಗೆ ಸ್ವತಃ ಹೋಗಿ ವಧೂವರರನ್ನು ಆಶೀರ್ವದಿಸಿ ಒಳ್ಳೊಳ್ಳೇ ಉಡುಗೊರೆ ವಸ್ತುಗಳನ್ನು ಕೊಟ್ಟಿದ್ದಳು. ಮಿ. ಡಿಕ್ಕರು ಸಹ ತಮ್ಮ ಬರವಣಿಗೆಯಿಂದ ಒಳ್ಳೆ ಸಂಪಾದನೆ ಮಾಡುತ್ತಿದರು. ಈಗ ಅವರ ಬರವಣಿಗೆಯ ಮಧ್ಯೆ ಚಾರ್ಲ್ಸ್ ದೊರೆಯ ತಲೆ ಬರುತ್ತಿರಲಿಲ್ಲ. ಹೀಗೆ ಅನೇಕ ವಿಷಯಗಳನ್ನು ಮಾತಾಡುತ್ತಾ ನಾನು ಮಿ. ವಿಕ್ಫೀಲ್ಡರನ್ನು ಏಗ್ನೆಸ್ಸಳನ್ನೂ ನೋಡಿ ಬರಬೇಕೆಂದು ನಿಶ್ಚೈಸಿದೆನು.

ಏಗ್ನೆಸ್ಸಳನ್ನು ಕುರಿತಾಗಿ ಮಾತಾಡುವಾಗ, ನಾನು ಮೊದಲು ಕೇಂಟರ್ಬರಿಗೆ ಹೋಗಿ ಅನಂತರ ಡೋವರಿಗೆ ಬರುವುದಾಗಿ ತನ್ನ ಮನಸ್ಸಿನಲ್ಲಿ ಬಹಳವಾದ ಹಂಬಲವಿತ್ತೆಂದೂ ಕೇವಲ ನನ್ನ ಕರ್ತವ್ಯ ದೃಷ್ಟಿಯಿಂದ ಅತ್ತೆಯನ್ನು ಪ್ರಥಮವಾಗಿ ನೋಡಲು ಡೋವರಿಗೆ ಬಂದದ್ದಾಗಿಯೂ ಮರೆಮಾಚದೆ ಅತ್ತೆಗೆ ತಿಳಿಸಿದೆ. ಅತ್ತೆಗೆ ಸಂತೋಷವೇ ಆಗಿ ಅವಳು ನಗಾಡುತ್ತಾ –
“ಈ ಮುದುಕಿಯನ್ನು ನೋಡುವುದು ಅಷ್ಟೊಂದು ಮುಖ್ಯವೆಂದು ನೀನು ಗ್ರಹಿಸುವ ಅಗತ್ಯವಿರಲಿಲ್ಲ. ಮಿ. ಮತ್ತು ಮಿಸ್ ವಿಕ್ಫೀಲ್ಡರನ್ನು ನೋಡಿಯೇ ಬರಬಹುದಿತ್ತು. ಅವರೆಲ್ಲ ಸೌಖ್ಯವಾಗಿದ್ದಾರೆ. ಏಗ್ನೆಸ್ಸಳಂತೂ ಅವಳ ನಿರಂತರ ಶಾಂತತೆಯಿಂದ ತಂದೆಗೆ ಸಹಾಯಕಳಿದ್ದುಕೊಂಡು ಮನೆಯನ್ನು ಚೆನ್ನಾಗಿ ನಡೆಸಿ ಬರುತ್ತಿದ್ದಾಳೆ” ಅಂದಳು.
“ವಿದ್ಯಾರ್ಥಿನಿಯರು ಕೆಲವರಿಗೆ ಪಾಠ ಹೇಳಿ ಕೊಡುತ್ತಿದ್ದಾಳೆಂದು ಕೇಳಿದ್ದೇನೆ, ನಿಜವೋ?” ಎಂದು ನಾನು ವಿಚಾರಿಸಿದೆನು.
“ಹೌದು. ಕೆಲವು ವಿದ್ಯಾರ್ಥಿನಿಯರಿಗೆ ತನ್ನ ಆತ್ಮಸಂತೋಷದಿಂದ ಪಾಠ ಹೇಳಿ ಕೊಡುತ್ತಿದ್ದಾಳೆ. ತನ್ನ ಜೀವನವು ಪರೋಪಕಾರಕ್ಕಾಗಿಯೇ ಮೀಸಲಾಗಿಟ್ಟಿರುವಂತೆ – ಈ ಚಿಕ್ಕಪ್ರಾಯದಲ್ಲೇ ಅವಳು ಈ ಕೆಲಸವನ್ನು ಮಾಡುತ್ತಿದ್ದಾಳೆ” ಎಂದು ಅತ್ತೆ ತಿಳಿಸಿದಳು.
“ಅವಳನ್ನು ಮದುವೆಯಾಗುವ ಪ್ರಸ್ತಾಪ ಯಾರಿಂದಾದರೂ ಬಂದಿದೆಯೋ?”
“ಪ್ರತ್ಯಕ್ಷ ಯಾರೂ ಬಂದಿರುವಂತೆ ತೋರುವುದಿಲ್ಲ. ಆದರೆ ಅವಳ ಕೈ ಹಿಡಿಯಲು ಬೇಕಾದಷ್ಟು ಜನರು, ಯೋಗ್ಯರೇ ಮುಂದೆ ಬರುವುದರಲ್ಲಿ ಸಂಶಯವಿಲ್ಲ.”
“ಅವಳ ಮನಸ್ಸು ಇಂಥವರ ಮೇಲೆ ಎಂದೇನಾದರೂ .... ಸಂದರ್ಭ ನಡೆದಿರಬಹುದೋ?” ಎಂದು ಕಷ್ಟದಿಂದ ಕೇಳಿದೆನು.
“ನಾನು ಹೇಳಲಾರೆ – ನನ್ನ ಅಭಿಪ್ರಾಯ ಪ್ರಕಾರ ಅವಳ ಮನಸ್ಸೆಲ್ಲ ಒಂದು ಕಡೆಗೆ ಹರಿದಿದೆ. ಅನುಕೂಲ ಪರಿಸ್ಥಿತಿ ಸಿಕ್ಕದೆ ಅದಕ್ಕಿಂತ ಹೆಚ್ಚನ್ನು ಹೇಳಲಾರೆ” ಎಂದು ಅತ್ತೆ ಉತ್ತರವಿತ್ತಳು. ಅತ್ತೆ ಈ ಮಾತನ್ನಾಡುವಾಗ ನನ್ನನ್ನೇ ನೋಡುತ್ತಲೂ ನಾನು ಅದೇ ಮಾತನ್ನು ಪ್ರಕೃತ ಮುಂದರಿಸುವ ಅಗತ್ಯವಿಲ್ಲವೆಂದು ತೋರುತ್ತಲೂ ಕುಳಿತಳು.

ಮರುದಿನ ಬೆಳಗ್ಗೆ ನಾನು ಕುದುರೆಯನ್ನೇರಿ ಕೇಂಟರ್ಬರಿಗೆ ಹೋದೆನು. ಮಿ. ವಿಕ್ಫೀಲ್ಡರ ಮನೆಯನ್ನು ಸೇರಿದೆನು. ನನ್ನ ಬಾಲ್ಯದ ಪರಿಚಿತ ಮನೆಯಲ್ಲಿ ಬಹು ಸಂತೋಷದಿಂದ ಸ್ವಲ್ಪ ಕಾಲ ಕಳೆದೆನು. ಅಲ್ಲಿನ ಆಫೀಸು, ಕೋಣೆಗಳು, ಅಲಂಕಾರಗಳು ಎಲ್ಲವೂ ಪೂರ್ವದಂತೆಯೇ ಬಹು ಚೆನ್ನಾಗಿದ್ದುವು. ಉರೆಯನ ಸಂಪರ್ಕ ಬೆಳೆದು ಕೆಡತೊಡಗಿದ್ದ ಕಾಲದ ಒರಟುತನ ಅವ್ಯವಸ್ಥೆಗಳು ಈಗ ಅಲ್ಲಿರಲಿಲ್ಲ.

ನನ್ನನ್ನು ಕಂಡೊಡನೆ ಏಗ್ನೆಸ್ಸಳು ಬಂದು ಆಲಂಗಿಸಿದಳು. ನಮಗಿಬ್ಬರಿಗೂ ಆನಂದ ಬಾಷ್ಪವೇ ಬಂದು ಮಾತಾಡಲಾರದಿದ್ದಷ್ಟು ಹರ್ಷಪುಳಕಿತರಾಗಿ ಹೋದೆವು. ಅನಂತರ ಕುಳಿತು ಅವಳು ವಿಚಾರಿಸಿದ್ದಕ್ಕಾಗಿ ನನ್ನ ದೇಶಯಾಟನೆ ವೃತ್ತಾಂತವನ್ನೆಲ್ಲ ನಾನು ಸೂಕ್ಷ್ಮವಾಗಿ ಹೇಳಿದೆ. ಇನ್ನೊಬ್ಬರ ಸುಖದುಃಖವನ್ನು ಸಹಾನುಭೂತಿಯಿಂದ ವಿಚಾರಿಸಿ ಕೇಳುವುದೇ ಅವಳ ವೈಶಿಷ್ಟ್ಯವಾಗಿದ್ದ ಮೇಲಂತೂ ನನ್ನನ್ನು ಕುರಿತಾಗಿ ತುಂಬಾ ವಿಚಾರಿಸಿದಳು. ಅನಂತರ ನಾನು, ಸ್ವಲ್ಪ ಮಧ್ಯೆ ಪ್ರವೇಶಿಸಿ ಕೇಳಿದೆ –
“ತಂಗೀ, ಏಗ್ನೆಸ್, ನೀನು ನನ್ನನ್ನು ಕುರಿತಾಗಿ ಇಷ್ಟೆಲ್ಲ ವಿಚಾರಿಸಿದೆ, ಮಾತಾಡಿದೆ, ನಿನ್ನ ಸಂಗತಿಯನ್ನು ನಾನೇಕೆ ಕೇಳಬಾರದು. ನೀನು ಹೇಗಿದ್ದೀಯಾ? ನಿನ್ನ ತಂದೆಯವರು ಹೇಗಿದ್ದಾರೆ. ಈ ಮಧ್ಯೆ ಬಂದಿದ್ದ ಕಷ್ಟವೆಲ್ಲ ಮುಗಿದು ನೀನು ಸಂತೋಷವಾಗಿದ್ದೀಯೇನು?” ಎಂದು ಕೇಳಿದೆ.

ನಾನು ಅವಳನ್ನು ತಂಗೀ ಎಂದಂದಾಗ ಅವಳ ಮುಖ ಸ್ವಲ್ಪ ಕೆಂಪೇರಿತು. ಅನಂತರ ಮೆಲ್ಲಗೆ ಉತ್ತರವಿತ್ತಳು –

"ತಂದೆಯವರ ಕಷ್ಟಗಳೆಲ್ಲ ಪರಿಹಾರವಾಗಿ ಈಗ ಅವರಿಗೆ ಈ ಮನೆಯೂ ಹಿತ್ತಲೂ ಉಳಿದಿವೆ. ಅವರು ಆರೋಗ್ಯವಾಗಿದ್ದಾರೆ. ನಾನು ಅವರ ಶುಶ್ರೂಷೆಯಲ್ಲೂ ನನ್ನ ಸಂತೋಷ ಮತ್ತೂ ಜೀವನ ಸಾರ್ಥಕ್ಯಕ್ಕಾಗಿ ಕೆಲವು ಬಾಲಕಿಯರಿಗೆ ಪಾಠ ಹೇಳಿಕೊಡುತ್ತಲೂ ಇದ್ದೇನೆ. ಹೀಗೆ ನಾವಿಬ್ಬರೂ ಕ್ಷೇಮದಲ್ಲಿದ್ದೇವೆ."

ಮಿ. ವಿಕ್ಫೀಲ್ಡರು ಅವರ ಕೋಣೆಯಲ್ಲಿ ಯಾವುದೋ ಒಂದು ಅವಸರದ ಕೆಲಸದಲ್ಲಿದ್ದುದರಿಂದ, ಅವರೊಡನೆ ಅನಂತರ ಮಾತಾಡೋಣವೆಂದು, ನಾನು ಕೇಂಟರ್ಬರಿಯಲ್ಲೆಲ್ಲ ಸ್ವಲ್ಪ ತಿರುಗಾಡಿ ಬರುವೆನೆಂದಂದು ಹೊರಟೆನು. ಊಟಕ್ಕೆ ಮೊದಲೇ ಮನೆಗೆ ಬರುವುದಾಗಿ ತಿಳಿಸಿದ್ದುದರಿಂದ ನನಗೆ ವಿಶೇಷವಾಗಿ ಮನಸ್ಸಿದ್ದ ಕಡೆಗಳಲ್ಲಿ ಮಾತ್ರ ತಿರುಗಾಡಿದೆನು. ಕೇಂಟರ್ಬರಿಯಲ್ಲಿ ವಿಶೇಷ ಬದಲಾವಣೆಗಳೇನೂ ಆಗಿದ್ದಂತೆ ತೋರಲಿಲ್ಲ. ನನ್ನ ತಿರುಗಾಟದಲ್ಲಿ ಒಬ್ಬ ಪೋಲೀಸಿನವನನ್ನು ಕಂಡು ಗುರುತಿಸಿದ್ದೊಂದು ವಿಶೇಷವಾಗಿತ್ತು. ನಾನು ಶಾಲೆಗೆ ಹೋಗುತ್ತಿದ್ದಾಗ ಕುಸ್ತಿ ಮಾಡಿದ್ದ ಆ ಕಟುಕರವನೇ ಇಂದು ಆ ಪೋಲೀಸಿನವನಾಗಿದ್ದನೆಂದು ತಿಳಿದೆನು.

ನಾನು ಊಟಕ್ಕೆ ಮೊದಲೇ ಮನೆಗೆ ಬಂದೆನು. ಹಿಂದೆ ನಾವು ಊಟ ಮಾಡುತ್ತಿದ್ದ ಕೋಣೆಯಲ್ಲೇ ಇಂದೂ ಊಟ ಮಾಡಿದೆವು. ಏಗ್ನೆಸ್ಸಳ ಶಿಷ್ಯೆಯರೂ ನಮ್ಮ ಜೊತೆಯಲ್ಲಿ ಊಟಕ್ಕಿದ್ದರು. ಮಿ. ವಿಕ್ಫೀಲ್ಡರು ವೈನ್ ಕುಡಿಯಲಿಲ್ಲ – ನಾನಂತೂ ಹೇಗೂ ಕುಡಿಯುವುದಿಲ್ಲವಷ್ಟೆ.

ನಮ್ಮ ಊಟಾನಂತರ ಏಗ್ನೆಸ್ಸಳ ಶಿಷ್ಯೆಯರು ಹೋದರು. ನಾವು ಮೂವರೂ ಮಹಡಿಯ ಮೇಲೆ ಹೋಗಿ ಆರಾಮವಾಗಿ ಕುಳಿತು ಮಾತಾಡತೊಡಗಿದೆವು. ಮಿ. ವಿಕ್ಫೀಲ್ಡರು ತಮ್ಮ ಜೀವಮಾನದ ಹಿಂದಿನ ಕೆಲವು ಕಥೆಗಳನ್ನು ಹೇಳಿದರು. ಇಂದಿನ ಕೆಲವು ಕಷ್ಟಗಳನ್ನೂ ಸುಖಗಳನ್ನೂ ಕುರಿತು ಮಾತಾಡಿದರು. ತಾನು ಉರೆಯನ ಕೈಯ್ಯಲ್ಲಿ ಸಿಕ್ಕಿಬಿದ್ದ ಕ್ರಮ ಪ್ರಸಂಗ, ಮೊದಲಾದುವನ್ನೆಲ್ಲ ಹೇಳಿದರು. ತನ್ನ ಆರೋಗ್ಯ ಕೆಡುತ್ತಾ ಬಂದು, ಆಸ್ತಿಪಾಸ್ತಿ, ಜೀವನ ಸ್ವಾತಂತ್ರ್ಯಗಳಲ್ಲೂ ಕೆಡುತ್ತ ಬಂದ ಸಂಗತಿಯನ್ನೂ ನಮ್ಮೆಲ್ಲರ ಸಹಾಯದಿಂದ ಉರೆಯನ ಕೈಯಿಂದ ತಪ್ಪಿ ಉದ್ಧಾರವಾದ ಸಂಗತಿಯನ್ನೂ ಹೇಳಿದರು. ತನ್ನ ಮಗಳನ್ನು ಕುರಿತು ಮಾತಾಡುವಾಗಲಂತೂ ಅವಳು ಮಗಳಾಗಿದ್ದರೂ ಮಾತೆಯೂ ಆಗಿದ್ದಾಳೆಂದೂ ಅವಳು ಬಾಲಕಿಯಾಗಿದ್ದರೂ ವೃದ್ಧೆಯೂ ಆಗಿದ್ದಾಳೆಂದೂ ತನ್ನ ಸುಖಸಂತೋಷಗಳನ್ನು ಬದಿಗೊತ್ತಿ ಅವರ ಸುಖಸಂತೋಷಕ್ಕಾಗಿ ಕಷ್ಟಪಟ್ಟಳೆಂದೂ ವಿವರಿಸಿ ವರ್ಣಿಸಿದರು. ಏಗ್ನೆಸ್ಸಳು ಸ್ವಲ್ಪ ಸ್ವಲ್ಪ ಮಾತಾಡುತ್ತಲೂ ಒಮ್ಮೊಮ್ಮೆ ಪಿಯಾನೊವನ್ನು ಬಾರಿಸುತ್ತಲೂ ಇದ್ದಳು. ಅಲ್ಲಿ ನಾವು ಮೂವರು ಕುಳಿತು ಕಳೆದ ಆ ಸಮಯ ಬಹು ಆನಂದಮಯವೇ ಆಗಿತ್ತು.

ಮಿ. ವಿಕ್ಫೀಲ್ಡರು ಸ್ವಲ್ಪ ವಿಶ್ರಮಿಸಿಕೊಳ್ಳುವುದಕ್ಕಾಗಿ ತನ್ನ ಕೋಣೆಗೆ ಹೋದನಂತರ ಏಗ್ನೆಸ್ಸಳೂ ನಾನೂ ನಮ್ಮ ಹಿಂದಿನ ಕಾಲದ ಕೋಣೆಯಲ್ಲಿ ಕುಳಿತು ಸ್ವೇಚ್ಛೆಯಾಗಿ ಮಾತಾಡತೊಡಗಿದೆವು. ಏಗ್ನೆಸ್ಸಳು ಮಾತಾಡುತ್ತಾ ಪ್ರಶ್ನಿಸಿದಳು –
"ಇನ್ನೂ ಪುನಃ ದೇಶಾಟನ ಮಾಡಬೇಕೆಂಬ ಲವಲವಿಕೆ ನಿನಗಿದೆಯೇ ಟ್ರಾಟೂಡ್?"
"ನೀನೇನನ್ನುವೇ – ಕೇಳೋಣ. ಅನಂತರ ನನ್ನ ಅಭಿಪ್ರಾಯ."
"ನನ್ನನ್ನು ಕೇಳಿದರೆ ಬೇಡವೆನ್ನುವೆನು. ನಿನ್ನ ಹೆಸರು ಪ್ರಖ್ಯಾತಿಗೆ ಬಂದಿದೆ. ನಿನ್ನ ಅನುಭವ ಪ್ರಖ್ಯಾತಿಗಳಿಗೆ ಬೆಲೆಯಿದೆ. ಆದ್ದರಿಂದ ನೀನು ನಮ್ಮ ಊರಿನಲ್ಲೇ ಇರುವುದು ಒಳ್ಳೆಯದು, ದೇಶಾಟನ ಅನಗತ್ಯ" ಅಂದಳು ಏಗ್ನೆಸ್.
"ನಾನು – ನೀನು ಅನ್ನುವಂತೆ ಏನೆಲ್ಲ ಆಗಿರುವೆನೋ, ಆಗಿರಬಹುದೋ ಅವುಗಳೆಲ್ಲಾ ನಿನ್ನಿಂದಲೇ ನನ್ನಲ್ಲಿ ಉತ್ಪನ್ನವಾದವುಗಳು" ಎಂದು ನಾನು ಬಹು ಸ್ಫೂರ್ತಿಯಿಂದ ನುಡಿದೆನು.
"ನನ್ನಿಂದಾ?" ಎಂದು ಆಶ್ಚರ್ಯ ಸೂಚಿಸಿ ಪ್ರಶ್ನಿಸಿದಳು.
"ನಿನ್ನಿಂದಲೇ ಆದುದು, ಅದರಲ್ಲಿ ಸಂಶಯವಿಲ್ಲ. ನೀನು ನನ್ನ ಎಲ್ಲಾ ಯಶಸ್ಸಿಗೂ ಅಭ್ಯುದಯಕ್ಕೂ ಕಾರಣಳು. ಏಗ್ನೆಸ್ ನಾನು ನನ್ನ ಮನಸ್ಸಿನ ಚಿಂತೆಗಳನ್ನೂ ಹಂಬಲಗಳನ್ನೂ ನಿನಗೆ ತಿಳಿಸಬೇಕೆಂದೇ ಇಂದು ಬಂದಿರುವೆನು. ನಿನ್ನ ಉಪಕಾರಗಳನ್ನು ಸ್ಮರಿಸದಿರಲು ನನ್ನಿಂದ ಸಾಧ್ಯವಿಲ್ಲ. ದೈವ ಒಲುಮೆಯನ್ನು ಸಂಪಾದಿಸುವ ಧರ್ಮಮಾರ್ಗವನ್ನು ನೀನು ನನಗೆ ತೋರಿಸಿರುವೆ. ನನ್ನ ಸದ್ಗುಣಗಳೇನಿದ್ದರೂ ಅವೆಲ್ಲವನ್ನೂ ತೋರಿಸಿ ಬೆಳೆಸಿಕೊಟ್ಟವಳು ನೀನು. ನೀನು ನನ್ನ ಜೀವನಪಥದಲ್ಲಿ ಮಾರ್ಗದರ್ಶಕಳಾಗಿ ನಿಂತು ನಿನ್ನ ಅಲೌಕಿಕ ಶಕ್ತಿಗಳಿಂದ ನನ್ನ ಬಹಿವೃದ್ಧಿಯನ್ನು ಸಾಧಿಸಿಕೊಟ್ಟಿರುವೆ. ನನಗೆ ನೀನು ಶುಭದೇವತೆ, ಮಾರ್ಗದರ್ಶಕ ಜ್ಯೋತಿ" ಎಂದಂದೆನು ನಾನು.

ಏಗ್ನೆಸ್ಸಳು ಅಳತೊಡಗಿದಳು. ಅದು ದುಃಖದ ಅಳು ಅಲ್ಲವೆಂದು ನನಗೆ ಗೊತ್ತಿತ್ತು. ನಾನೂ ಆವೇಶಪರವಶನಾಗಿದ್ದೆ. ನನ್ನ ಮಾತುಗಳನ್ನು ಮುಂದರಿಸಿ ಹೇಳತೊಡಗಿದೆನು–
"ನನ್ನ ಹೃದಯದಲ್ಲಿ ನೀನು ಸದಾ ಪ್ರತಿಷ್ಠಿತಳಾಗಿರುವೆ. ನನ್ನ ಹೃದಯದ ಆರಾಧ್ಯ ದೇವತೆಯೆ ನೀನು! ನನ್ನ ಅತ್ಯಂತವಾದ ಸಂತೋಷದ, ಅತ್ಯಂತವಾದ ದುಃಖದ, ಅತ್ಯಂತ ಗೂಢದ, ಗಹನದ ಆಲೋಚನೆಗಳಲ್ಲೆಲ್ಲ ನೀನು ಭಾಗಿಯಾಗಿದ್ದು, ನನ್ನ ಮನಸ್ಸಿನ ಶಾಂತಿ, ಧೈರ್ಯ, ಉತ್ಸಾಹಕ್ಕೆ ಸಹಾಯಕಳಾಗಿರುವೆ. ನಿನ್ನನ್ನು ನಾನು ಎಂದೆಂದೂ ಇದೆ ದೃಷ್ಟಿಯಿಂದ ಗ್ರಹಿಸಿ ಆರಾಧಿಸಲು ನನಗೆ ದಯಮಾಡಿ ಸಮ್ಮತಿಕೊಡು" ಎಂದು ಹೇಳುತ್ತ ಅವಳ ಸಮೀಪಕ್ಕೆ ಹೋಗಿ ಕುಳಿತೆನು. ಏಗ್ನೆಸ್ಸಳು ಸ್ವಲ್ಪ ಸ್ವಲ್ಪ ಅಳುತ್ತಲೇ ಇದ್ದಳು. ಇದನ್ನು 'ಅಳು' ಎಂದರೂ ತಪ್ಪಾಗಬಹುದು – ದುಃಖ ಸಂತೋಷಗಳ ಸಮ್ಮಿಶ್ರಣಾಭಾವದಿಂದ ಅವಳು ಮೌನವಾಗಿ ಕಣ್ಣೀರು ಸುರಿಸುತ್ತಿದ್ದಳೆಂದರೆ ಸರಿಯಾಗಬಹುದು. ಅವಳನ್ನು ನೋಡುತ್ತಾ ಹೋದ ಹಾಗೆ ನನಗೆ ಮಾತಾಡಲು ಮತ್ತಷ್ಟು ಉತ್ಸಾಹ ತೋರಿತು.

"ತಾಯಿಯಿಲ್ಲದಿದ್ದ ಮಗುವಾಗಿದ್ದ ನಿನ್ನನ್ನು ಇತರರು ಸಂರಕ್ಷಿಸುತ್ತಿದ್ದಾಗಲೇ ಬಂಧುಗಳೇ ಇಲ್ಲದಿದ್ದ ನನ್ನನ್ನು ನೀನು ಸಹೋದರಿಯಂತೆ ಸಾಕಿ, ಸಲಹಿ, ಸಂರಕ್ಷಣೆಯಿತ್ತೆ ಏಗ್ನೆಸ್. ನೀನೊಬ ಪುಣ್ಯದೇವಿಯೇ ಸರಿ. ನನ್ನ ಸರ್ವಶಕ್ತಿಗಳಿಗೆ ಸದಾ ಸ್ಫೂರ್ತಿ ಕೊಡಬಲ್ಲ ನೀನು ನಿನ್ನ ಕೃಪಾಹಸ್ತವನ್ನು ನನಗೆ ಸದಾ ಕೊಡುತ್ತಿರಬೇಕು ಏಗ್ನೆಸ್" ಎಂದು ಹೇಳಿದೆನು.

"ನನಗೆ ಅಷ್ಟೊಂದು – ಇಲ್ಲ ಸಲ್ಲದ, ಯೋಗ್ಯತೆಗಳನ್ನು ಕಲ್ಪಿಸಿ ಕೊಟ್ಟಿರುವಿಯಲ್ಲಾ ಟ್ರಾಟೂಡ್!" ಎಂದು ಸ್ವಲ್ಪ ವಿನೋದ ವ್ಯಂಗ್ಯದಿಂದ ಏಗ್ನೆಸ್ಸಳು ಕೇಳಿದಳು.
"ಈ ಅಭಿಪ್ರಾಯವನ್ನು ನಾನು ಬಾಲ್ಯದಿಂದಲೂ ಇಟ್ಟುಕೊಂಡಿರುವೆನು, ಏಗ್ನೆಸ್. ಇಂದು ಅದನ್ನು ಮಾತ್ರ ನಿಸ್ಸಂಕೋಚವಾಗಿ ತಿಳಿಸಿರುವೆನು. ನಾನು ಈ ರೀತಿಯಾಗಿ ಅಭಿಪ್ರಾಯಪಡುವುದನ್ನು ಆಕ್ಷೇಪಿಸುತ್ತೀಯೇನು?"
"ನಂದೇನಾಕ್ಷೇಪಣೆ! ನನ್ನನ್ನು ಕುರಿತಾಗಿ ನೀನು ಏನೇ ಗ್ರಹಿಸಿದರೂ ನನಗೆ ಸಂತೋಷವೇ!" ಎಂದು ಹೇಳುತ್ತಾ ಅವಳು ಕಣ್ಣೀರು ಒರೆಸಿಕೊಂಡಳು.

ನಾನು ಆ ರಾತ್ರಿಯೇ ಮನೆಗೆ ಬಂದೆನು. ರಾತ್ರಿಯ ಗಾಳಿ ತುಂಬಾ ಬೀಸಿ ಬರುತ್ತಿತ್ತು. ಬೀಸುತ್ತಿದ್ದ ಚಳಿಗಾಳಿಯಂತೆಯೇ – ದಾರಿಯುದ್ದಕ್ಕೂ – ನಾನಾ ವಿಧದ ಆಲೋಚನೆಗಳು ಎದ್ದು, ಬೀಸಿ, ನನ್ನನ್ನು ಬೆದರಿಸಿ ಮಾಯವಾಗುತ್ತಿದ್ದುವು. ನಾನು ನನ್ನ ಮನಸ್ಸಿನಲ್ಲಿದ್ದುದನ್ನೆಲ್ಲಾ ಪೂರ್ತಿಯಾಗಿ ಏಗ್ನೆಸ್ಸಳೊಂದಿಗೆ ಹೇಳಿಕೊಳ್ಳಲಿಲ್ಲವೆಂದು ಬೇಸರಿಸಿ, ನೊಂದುಕೊಂಡೆನು. ನಾನಾಗಿಯೇ ಅವಳಿಗೆ ಅಲೌಕಿಕ – ದೈವಿಕ – ಸ್ಥಾನವನ್ನು ನಿರ್ಮಿಸಿಟ್ಟಿರುವಾಗ ಅವಳನ್ನು ನಾನು ಈ ಲೋಕದಲ್ಲಿ ಹೇಗೆ ತಾನೆ ಪಡೆದು ಸುಖಿಸಬಹುದು, ಎಂದು ಹೆದರಿದೆ. ದೈವತ್ವವನ್ನೇ ಕಲ್ಪಿಸಿ ಪೂಜಿಸಿದವನಿಗೆ ಮನುಷ್ಯತ್ವದಿಂದ ಪಡೆದು ಅನುಭವಿಸುವ ಹಕ್ಕೇ ನನಗಿಲ್ಲವೆಂದೂ ಊಹಿಸಿದೆ. ಕೊನೆಗೆ ನಾನು ಅವಳನ್ನು ಎಷ್ಟೊಂದು ಪ್ರೀತಿಸುತ್ತಿರುವೆನೆಂಬುದನ್ನು ಪರಲೋಕದಲ್ಲೇ ಅವಳಿಗೆ ತಿಳಿಸುವೆನೆಂದು ನಿರ್ಧರಿಸಿಕೊಂಡೆನು.

ಅಧ್ಯಾಯ ಅರವತ್ತೊಂದು

ಪಶ್ಚಾತ್ತಾಪದಿಂದ ಮರೆಯಾಗುತ್ತಿದ್ದ ಪುನೀತರಿಬ್ಬರ ಪರಿಚಯ

ನಾನು ಬರೆಯಲು ಪ್ರಾರಂಭಿಸಿದ್ದ ಕಾದಂಬರಿ ಕೆಲಸವು ಮುಗಿಯುವವರೆಗೂ ನಾನು ಅತ್ತೆಯ ಮನೆಯಲ್ಲೇ ಇದ್ದೆನು. ನಾನು ಅತ್ತೆಯ ಈ ಮನೆಗೆ ಪ್ರಥಮವಾಗಿ ಬಂದಾಗ ಸಮುದ್ರದ ಮೇಲಿನ ಚಂದ್ರನನ್ನು ನೋಡುತ್ತಾ ಮಲಗುತ್ತಿದ ಕೋಣೆಯಲ್ಲೇ ನನ್ನ ಈ ಕೆಲಸವನ್ನು ಮಾಡುತ್ತಿದ್ದೆನು. ಈ ಕಾದಂಬರಿ ಕೆಲಸ ಮಾಡಿ ಪೂರೈಸಲು ನನಗೆ ಸಾಧಾರಣ ಆರು ತಿಂಗಳ ಕಾಲ ಹಿಡಿಯಿತು.

ಯಾವ ಕೆಲಸವನ್ನೇ ಕೈಕೊಂಡರೂ ನನಗೆ ಮನಸ್ಸಿನ ಸ್ವಾಸ್ಥ್ಯವೇ ಇರುತ್ತಿರಲಿಲ್ಲ. ಹೀಗಾಗಿ ನಾನು ಆಗಿಂದಾಗ್ಗೆ ಲಂಡನ್ನಿಗೆ ಹೋಗಿ ಟ್ರೇಡಲ್ಸನ ಮನೆಯಲ್ಲಿ ಒಂದೆರಡು ದಿನ ಇದ್ದು ಬರುತ್ತಿದ್ದೆನು. ನನಗೆ ಬರುವ ಪತ್ರಗಳೆಲ್ಲಾ ಟ್ರೇಡಲ್ಸನ ಮುಖಾಂತರವೇ ಬರುವಂತೆ ನನ್ನ ವಿಳಾಸವನ್ನು ಪ್ರಕಟಿಸಿದ್ದೆನು. ಇದಕ್ಕಾಗಿಯೇ ನನ್ನ ಹೆಸರು, ವಿಳಾಸಗಳನ್ನೊಳಗೊಂಡು ಒಂದು ಬೋರ್ಡನ್ನು ಟ್ರೇಡಲ್ಸನ ಆಫೀಸು ಬೋರ್ಡು ಜತೆಯಲ್ಲೇ ತೂಗಾಡಿಸಿದ್ದೆನು. ನನಗೆ ಅನೇಕ ಕಡೆಗಳಿಂದ ಪತ್ರಗಳು ಬರುತ್ತಿದ್ದುವು. ಆಂಗ್ಲ ಭಾಷೆಯ ಪ್ರಚಾರದಲ್ಲಿದ್ದ ಎಲ್ಲಾ ದೇಶಗಳಿಂದಲೂ ಪತ್ರಗಳು ಬರುತ್ತಿದ್ದವು. ನನ್ನ ಪ್ರಶಂಸೆ, ಕಾದಂಬರಿಗಳನ್ನು ಕುರಿತು ವಿಮರ್ಶೆ, ಅಪೂರ್ವಕ್ಕೊಮ್ಮೆ ನಾನೊಬ್ಬ ವಕೀಲನೆಂದು ಕಾನೂನು ಕಾಯಿದೆಗಳಿಗೆ ಸಂಬಂಧಪಟ್ಟೂ ಆ ಪತ್ರಗಳಿರುತ್ತಿದ್ದುವು. ಬ್ರಿಟಿಷ್ ಚಕ್ರಾಧಿಪತ್ಯದ ವಿದೇಶಾಂಗದ ಕಾರ್ಯದರ್ಶಿ ಸಂಬಳ ಪಡೆದು ಕೆಲಸ ಮಾಡುತ್ತಿರುವ ಕ್ರಮದಲ್ಲಿ ನಾನು ಈ ಎಲ್ಲಾ ದೇಶ ವಿದೇಶಗಳ ಪತ್ರಗಳಿಗೆ – ಸಂಬಳ ಪಡೆಯದೆ, ಉತ್ತರವನ್ನು ಕಳುಹಿಸುವ ಕೆಲಸ ಮಾಡುತ್ತಿದ್ದೆನು. ನಾನು ಹಿಂದೆ ವಕಾಲತ್ತು ಪಾಸಾಗಿದ್ದುದರಿಂದ, ವಕೀಲ ವೃತ್ತಿಯನ್ನು ಕುರಿತಾಗಿ ಬರುತ್ತಿದ್ದ ಪತ್ರಗಳಲ್ಲಿ ಕೆಲವು ಆಶ್ಚರ್ಯಕರದವೂ ಇರುತ್ತಿದ್ದುವು. ನಾನು ಸ್ವಲ್ಪ ಪ್ರತಿಫಲ ತೆಗೆದುಕೊಂಡು ಬೇರೆಯವರು ನನ್ನ ಹೆಸರಿನಲ್ಲಿ ವಕಾಲತ್ತು ವೃತ್ತಿಯನ್ನು ನಡೆಸಲು ಎಡೆಸಿಗುವಂತೆ ನಾನು ಮಾಡಬೇಕೆಂದು ಪ್ರಾರ್ಥಿಸಿಯೂ ಪತ್ರಗಳು ಬಂದಿವೆ. ಈ ವಿಧದ ಪರಭಾರೆಯು, ಸರಕಾರವನ್ನು ವಂಚಿಸಿ, ಗುಪ್ತವಾಗಿ ನಡೆಯುತ್ತಿದ್ದುದಾಗಿಯೂ ನಾನು ಕೇಳಿದ್ದೇನೆ. ಅಂಥ ಪತ್ರಗಳಿಗೆ ವಿಶೇಷ ಉತ್ತರ ಕೊಡದೆ – ವಕಾಲತು ವೃತ್ತಿಯಲ್ಲೇ ಅಡಗಿರುವ ಅನ್ಯಾಯದ ಜತೆಗೆ ಈ ಒಂದು ಹೊಸ ಅನ್ಯಾಯವನ್ನೂ ಸೇರಿಸಿ ಸಮಾಜ ದ್ರೋಹ ಮಾಡಬಾರದೆಂದು ಮಾತ್ರ ಉತ್ತರವಿತ್ತದ್ದುಂಟು.

ಹೀಗೆ ನಾನು ಟ್ರೇಡಲ್ಸನ ಮನೆಗೆ ಹೋಗಿ ಬರುತ್ತಿದ್ದುದರಿಂದ ಟ್ರೇಡಲ್ಸನ ಸಂಸಾರವು ಹೇಗೆ ಸಾಗುತ್ತಿತ್ತೆಂದೂ ತಿಳಿಯಲನುಕೂಲವಾಯಿತು. ಟ್ರೇಡಲ್ಸನೂ ಅವನ ಪತ್ನಿಯೂ ಸದಾ ಸಂತೃಪ್ತಿಯಿಂದಿರುತ್ತಿದ್ದು, ದುಃಖದ ಅರಿವೇ ಅವರಿಗಿರಲಿಲ್ಲವೆಂಬಷ್ಟರ ಸಂತೋಷದಲ್ಲಿರುತ್ತಿದ್ದರು. ಅವರಿಗೆ ಸಾಹಿತ್ಯ, ಸಾಮಾನು, ಮನೆ, ಇತ್ಯಾದಿಗಳು – ನಿಜವಾಗಿಯೂ ಸಾಕಷ್ಟು ಇಲ್ಲದೇ ಇದ್ದರೂ – ಇಲ್ಲವೆಂಬ ಕೊರತೆಯ ಅರಿವೆ ಅವರಿಗೆ ಇರಲಿಲ್ಲ. ತಮಗೆ ಬೇಕಾದ ಸಾಮಾನುಗಳನ್ನು ಅಂಗಡಿಗಳಲ್ಲಿ ನೋಡಿ, ಅವುಗಳಿಗೆ ಕ್ರಯಮಾಡಿ, ಅಷ್ಟಕ್ಕೆ ನಿಲ್ಲಿಸಿ, ತಾವು ಅವುಗಳನ್ನು ಪಡೆದಷ್ಟೇ ತೃಪ್ತಿ, ಸಂತೋಷದಿಂದಿರುತ್ತಿದ್ದರು. ತನ್ನ ಸಂಪಾದನೆ ಹೆಚ್ಚಿದಾಗ ಸೋಫಿಗೆ ಒಂದು ಚಿನ್ನದ ಸರವನ್ನು ಕೊಡುವುದಾಗಿ ಹೇಳಿ ಟ್ರೇಡಲ್ಸನು ಸೋಫಿಯನ್ನು ಕರೆದುಕೊಂಡು ಹೋಗಿ ಅಂಗಡಿಯಲ್ಲಿ ಚಿನ್ನದ ಸರ ತೋರಿಸಿ, ಕ್ರಯಮಾಡಿ, ಸಂತೋಷಪಡುವುದೂ ಹಾಗೆಯೇ ಗಂಡನ ಸಂಪಾದನೆ ಹೆಚ್ಚಿದಾಗ ತಾನು ಟ್ರೇಡಲ್ಸನಿಗೊಂದು ರಿಸ್ಟು ವಾಚ್ ಕೊಡುವುದಾಗಿ ಸೋಫಿಯು ಹೇಳಿ, ಅಂಗಡಿಯಲ್ಲಿ ವಾಚನ್ನು ನೋಡಿ ಸಂತೋಷಿಸುವುದೂ ಅವರ ಪದ್ಧತಿಯಾಗಿತ್ತು. ಇವರ ಮನೆಯಲ್ಲಿ ಸಾಕಷ್ಟು ಸ್ಥಳಾನುಕೂಲವಿರಲಿಲ್ಲ. ಆದರೆ ಅವರಿಗೆ ಅದನ್ನು ಕುರಿತು ದುಃಖವೂ ಇರಲಿಲ್ಲ. ಅವರು ಯಾರದರೂ ಕಟ್ಟಿಸುತ್ತಿದ್ದ ಹೊಸ ಮನೆಗಳಿದ್ದಲ್ಲಿಗೆ ಉದ್ದೇಶಪೂರ್ವಕವಾಗಿ ಹೋಗಿ ನೋಡಿ, ಅವುಗಳೊಳಗಣ ಕೋಣೆಗಳನ್ನು ತಾವು ಹೇಗೆಲ್ಲ ಉಪಯೋಗಿಸಬಹುದೆಂದು ತಂತಮ್ಮೊಳಗೆ ಮಾತಾಡಿ ಸಂತೋಷಪಟ್ಟುಕೊಳ್ಳುತ್ತಿದ್ದರು. ಅವರು ನಾಟಕಗಳಿಗೆ ಹೋದರೆ ಕೆಳತರಗತಿಯ ಆಸನಗಳಲ್ಲಿ ಕುಳಿತು ನೋಡಿ, ಮೇಲ್ತರಗತಿಯಲ್ಲಿ ತಾವು ಕುಳಿತು ನೋಡಿದ್ದಾಗಿಯೇ ಕಲ್ಪಿಸಿಕೊಂಡು ಸಂತೋಷಿಸುತ್ತಿದ್ದರು. ಅವರು ನಾಟಕಗಳಿಗೆ ಹೋದರೆ ಸ್ವಸ್ತಿವಾಚನದಿಂದ ಹಿಡಿದು ಮಂಗಳಪದ ಮುಗಿದು ಪರದೆಯು ಪೂರ್ಣ ಬೀಳುವವರೆಗೆ ನೋಡಿಯೇ ಅಲ್ಲಿಂದ ಹೊರಡುತ್ತಿದ್ದರು.

ಹೀಗೆ ನಾನು ಟ್ರೇಡಲ್ಸನ ಮನೆಗೆ ಹೋಗಿ ಬರುತ್ತಿದ್ದ ದಿನಗಳಲ್ಲಿ ಒಂದು ದಿನ ನನಗೆ ಮಿ. ಕ್ರೀಕಲರಿಂದ ಒಂದು ಪತ್ರ ಬಂತು. ಈ ಪತ್ರದ ಸಂಗತಿಯನ್ನು ಟ್ರೇಡಲ್ಸನೊಡನೆ ಪ್ರಸ್ತಾಪಿಸಿದಾಗ ಅವನು ವಿಚಾರಿಸಿದನು –

"ಯಾವ ಕ್ರೀಕಲ್?"

"ನಮ್ಮ ಹಳೇ 'ರೇಸ್ಕಲ್' – ಸೆಲಂ ಶಾಲೆಯ ಮೇನೇಜರ್!" ಎಂದಂದೆ. ನಾನು ಕ್ರೀಕಲರನ್ನು ಎಂದೂ ಮರ್ಯಾದೆಯಿಂದ ಗ್ರಹಿಸಿದುದೇ ಇಲ್ಲ.

"ಈಗಲೂ ಅವರು ಶಾಲಾ ಮೇನೇಜರರಾಗಿರುವರೇನು?" ಎಂದು ಟ್ರೇಡಲ್ಸನು ವಿಚಾರಿಸಿದನು.

"ಇಲ್ಲ, ಈಗ ಅವನು ಜೈಲು ಮೇಜಿಸ್ಟ್ರೇಟರನಾಗಿದ್ದಾನೆ. ಯಾವ ಕುತಂತ್ರದಿಂದ ಅವನು ಆ ಪದವಿಗೆ ತಲುಪಿದನೆಂದು ನಾನರಿಯೆ."

"ಆಶ್ಚರ್ಯವೇ ಸರಿ" ಅಂದನು ಟ್ರೇಡಲ್ಸ್.

"ಅಷ್ಟು ಮಾತ್ರವಲ್ಲ – ಅವನ ಸುಪರ್ದಿನಲ್ಲಿರುವ ಜೈಲಿನಲ್ಲಿ ಅವರದೊಂದು ನೂತನ 'ಕ್ರೀಕಲ್ ಸಿಸ್ಟಂ'ನ್ನು (ಕ್ರಮವನ್ನು) ಜಾರಿಗೆ ತಂದಿರುತ್ತಾನಂತೆ. ಈ 'ಸಿಸ್ಟಂ'ನಲ್ಲಿ ಕೈದಿಗಳು ಕ್ರಮೇಣವಾಗಿ ಸಮಾಜದಲ್ಲಿ ಪುನಃ ಮಿಳಿತವಾಗಿ, ಸಮಾಜದ ಗಣನೀಯ ವ್ಯಕ್ತಿಗಳೇ ಆಗುವಷ್ಟರ ತರಬೇತು ಕೊಡಲಾಗುವುದಂತೆ. ಇದಕ್ಕೆ ಬೇಕಾದ ಅನುಕೂಲಗಳನ್ನು ಸರಕಾರವು ಆ ಜೈಲು ಮೆಜಿಸ್ಟ್ರೇಟರಿಗೆ ಒದಗಿಸುತ್ತದೆ."
"ಕ್ರೀಕಲ್ ಸಿಸ್ಟಂ'ನ್ನು ಪತ್ರದಲ್ಲಿ ವಿವರಿಸಿರುವರೇನು?" ಎಂದು ಟ್ರೇಡಲ್ಸನು ಪ್ರಶ್ನಿಸಿದನು.
"ಸ್ವಲ್ಪ ವಿವರವಾಗಿಯೇ ಬರೆದಿರುವರು. ಕ್ರೀಕಲ್ ಸಿಸ್ಟಂನ ರೂಪ ರೇಖೆಗಳು ಸಾಧಾರಣ ಈ ರೀತಿ ಇವೆ –
"ಆಹಾರ ವಿಹಾರಾದಿ ಆನುಕೂಲ್ಯಗಳನ್ನು ಕೈದಿಗಳಿಗೆ ಸಮೃದ್ಧವಾಗಿ ಒದಗಿಸಿ, ವೈಯ್ಯಕ್ತಿಕ ಯೋಗ್ಯತೆಗೆ ತಕ್ಕಂಥ ವೃತ್ತಿಗಳನ್ನು ಕಲಿಸಿ, ಈ ಎಲ್ಲಾ ಸ್ಥಿತಿಯಲ್ಲೂ ಕೈದಿಗಳು ಒಬ್ಬರೊಂದಿಗೆ ಇನ್ನೊಬ್ಬರು ಸಂಪರ್ಕ ಬೆಳೆಸದಂತೆ ಅವರನ್ನು ಪ್ರತ್ಯಪ್ರತ್ಯೇಕ ಇಟ್ಟು, ಅವರ ಮನಸ್ಸಿನ ಸಂಸ್ಕಾರ, ಪರಿವರ್ತನೆಗಳಿಗಾಗಿ ಧರ್ಮಸಂಬಂಧವಾದ ಬೋಧನೆಗಳನ್ನು ಕೊಡುವರಂತೆ. ಈ ವಿಧದ ಏಕಾಂತ ಜೀವನ ಮತ್ತು ಧರ್ಮ ಬೋಧನೆಗಳಿಂದ ಕೈದಿಗಳು ಕ್ರಮೇಣವಾಗಿ ಪ್ರಾಪಂಚಿಕ ವಿಷಯಗಳನ್ನೆಲ್ಲಾ ಮರೆಯುತ್ತಾ ಬಂದು ಕೊನೆಗೆ ಅವರ ಮನಸ್ಸು ಕೇವಲ ಶೂನ್ಯ ಪರಿಸ್ಥಿತಿಗೆ ತಲಪುತ್ತದಂತೆ. ಈ ಶೂನ್ಯ ಸ್ಥಿತಿಯ ಮನಸ್ಸೇ ಮುಂದಿನ ಭಾವನೆ – ವಿಷಯಗಳನ್ನು ಒಳಗೊಳ್ಳತಕ್ಕದ್ದಿದೆ, ಅರ್ಥಾತ್ ಶುಭ್ರವಾದ ಪರದೆಯ ಮೇಲೆ ಚಿತ್ರವನ್ನು ಬರೆಯುವಂತೆ, ಈ ಶೂನ್ಯ ಪರಿಸ್ಥಿತಿಯ ಮನಸ್ಸಿನ ಮೇಲೆ ಉತ್ತಮ ಸಮಾಜಧರ್ಮ, ಭವ್ಯವಾದ ಮತಬೋಧೆ ಮೊದಲಾದುವುಗಳನ್ನು ಬೆಳೆಸಿ ಅವರನ್ನು ಪುನೀತರನ್ನಾಗಿ ಮಾಡುವರಂತೆ" ಎಂದು ನಾನು ತಿಳಿಸಿ, ಮಿ. ಕ್ರೀಕಲರು ಟ್ರೇಡಲ್ಸನೂ ಸಹ ನನ್ನ ಜತೆಯಲ್ಲಿ ಅವರ 'ಸಿಸ್ಟಂ'ನ್ನು ಪರೀಕ್ಷಿಸಲು ಬರಬೇಕೆಂದು ಕೇಳಿಕೊಂಡ ವಿಷಯವನ್ನೂ ತಿಳಿಸಿದೆನು.

ನಾನು ಮಿ. ಕ್ರೀಕಲರಿಗೆ ಒಂದು ಪತ್ರವನ್ನು ಬರೆದು, ಇಂಥಾ ದಿನದಲ್ಲಿ ಟ್ರೇಡಲ್ಸನ ಸಮೇತವಾಗಿ ಬರುವೆನೆಂದು ತಿಳಿಸಿದೆನು ಮತ್ತು ಆ ಗೊತ್ತು ಮಾಡಿದ ದಿನ ನಾವಿಬ್ಬರೂ ಮಿ. ಕ್ರೀಕಲರ ಜೈಲಿಗೆ ಹೋದೆವು.

ಜೈಲಿನಲ್ಲಿ ಮಿ. ಕ್ರೀಕಲರ ಜತೆಗೆ ಇನ್ನೂ ನಾಲ್ಕು ಮಂದಿ ಜೈಲ್ ಮೆಜಿಸ್ಟ್ರೇಟರಿದ್ದರು. ಈ ಐವರ ಕಮಿಟಿಯಿಂದ ಆ ಜೈಲು ನಡೆಯುತ್ತಿತ್ತು. ನಾವು ಜೈಲು ಕಂಪೌಂಡಿಗೆ ತಲುಪಿದ ಕೂಡಲೇ ಮಿ. ಕ್ರೀಕಲರು ನಮ್ಮನ್ನು ಎದುರುಗೊಂಡು ಒಳಗೆ ಕರೆದುಕೊಂಡು ಹೋದರು. ಅವರ ಜತೆಯಲ್ಲಿ ಇತರ ನಾಲ್ವರು ಮೆಜಿಸ್ಟ್ರೇಟರೂ ಪೋಲೀಸಿನವರೂ ಇದ್ದರು. ಮಿ. ಕ್ರೀಕಲರು ನಮ್ಮೊಡನೆ ಮಾತಾಡುವಾಗ ಹಿಂದೆ ಅವರು ನಮ್ಮ ಸೆಲಂ ಶಾಲೆಯ ಮೇನೇಜರರಾಗಿದ್ದ ಕಾಲದಲ್ಲಿ ಅವರು ತಮ್ಮ ಕೆಳಗಿನವರೊಡನೆ ವರ್ತಿಸುತ್ತಿದ್ದಷ್ಟೇ ಸಲಿಗೆಯಿಂದ ನಮ್ಮೊಡನೆ ಇಂದು ವರ್ತಿಸುತ್ತಾ ಟ್ರೇಡಲ್ಸನಿಗೂ ನನಗೂ ಇಂದೇನಾದರೂ ಒಂದು ಗಣ್ಯ ಸ್ಥಾನ ಸಮಾಜದಲ್ಲಿ ಇದ್ದರೆ ಆ ಸ್ಥಾನಕ್ಕೆ ಮುಖ್ಯ ಕಾರಣರು ತಾವೇ ಎಂದು ಅವರ ಜತೆಯಲ್ಲೂ ಹಿಂದೆಯೂ ಇದ್ದವರಿಗೆಲ್ಲ ತಿಳಿಯುವಂತೆ ಮಾತಾಡುತ್ತಿದ್ದರು. ಲಂಚದಿಂದಲೂ ವಂಚನೆಯಿಂದಲೂ ಎಳೆ ಬಾಲಕರ ಮನಸ್ಸನ್ನು ಮುರಿದು, ಶಾಲೆಯ ನೆಪದಿಂದ ಸಮಾಜದಿಂದ ಹಣ ಸಂಪಾದಿಸಿ ಬದುಕುತ್ತಿದ್ದ ಮಿ. ಕ್ರೀಕಲರು ಅದೇ ಸಮಾಜದ ಅಜಾಗ್ರತೆ, ಆಲಸ್ಯದಿಂದ ಇಂದು ತಮ್ಮ ಯೋಗ್ಯತೆಗೆ ಮೀರಿದ ಅಧಿಕಾರವನ್ನು ಪಡೆದು ಅಪರಾಧಿಗಳ ಮೇಲೆ ತಮ್ಮ ಕ್ರೌರ್ಯ, ಶಿಸ್ತು, ಮೊದಲಾದ ಅಮಾನುಷ ಗುಣಗಳನ್ನು ಕಾರ್ಯರೂಪದಲ್ಲಿ ಪ್ರಯೋಗಿಸಿ, ತಮ್ಮ ಜೀವನವನ್ನು ಅರ್ಹತೆಗೆ ಮೀರಿದ ಘನಸ್ತಿಕೆಯಿಂದಲೂ ಸುಖದಿಂದಲೂ ಸಾಗಿಸುತ್ತಿದ್ದರು.

ಜೈಲು ಕಟ್ಟಡ ಬಹು ದೊಡ್ಡದೂ ಬಲವಾದದ್ದೂ ವಿಶಾಲವಾದದ್ದೂ ಆಗಿತ್ತು. ಅಲ್ಲಿನ ವ್ಯವಸ್ಥೆಗಳೆಲ್ಲ ಬಹು ಜನ ಪೋಲೀಸ್ ಪೇದೆ, ಗುಮಾಸ್ತರುಗಳಿಂದ ನಡೆಸಲಾಗುತ್ತಿದ್ದುವು. ಕೈದಿಗಳಿಗೆ ಕೊಡುತ್ತಿದ್ದ ಆಹಾರವೆಲ್ಲ ಉತ್ತಮತರದ್ದಾಗಿದ್ದು, ಕ್ಲುಪ್ತ ಕಾಲಗಳಲ್ಲಿ ಬೇಕಾದಷ್ಟು ಕೊಡುತ್ತಿದ್ದರು. ಅನೇಕ ಜನ ಕೈದಿಗಳಿಗೆ ಇಲ್ಲಿ ಯಾಂತ್ರಿಕ ಪರಿಷ್ಕಾರತೆಯಿಂದ ಆಹಾರ, ಮತ್ತು ಇತರ ಸೌಕರ್ಯಗಳನ್ನು ಒದಗಿಸುತ್ತಿದ್ದರು. ಪ್ರತಿ ಕೈದಿಯು ಒಬ್ಬಂಟಿಗನಾಗಿ, ಪ್ರತ್ಯಪ್ರತ್ಯೇಕ ಕೋಣೆಗಳಲ್ಲಿ ಇರಬೇಕಾದ ಒಂದು ವಿಷಯ ಹೊರತಾಗಿ ಇತರ ಎಲ್ಲಾ ಆನುಕೂಲ್ಯಗಳೂ ಸರ್ವಸಾಧಾರಣದ ಜನರಿಗೆ ಜೈಲಿನ ಹೊರಗಡೆ ದೊರಕುತ್ತಿರುವುದಕ್ಕಿಂತ ಹೆಚ್ಚಿನವೂ ಉತ್ತಮವೂ ಆಗಿ ದೊರಕುತ್ತಿದ್ದುವು. ಮನಸ್ಸು ಸ್ವಚ್ಛವಾಗಿ ಶೂನ್ಯತೆಗೆ ತಲಪುವ ವಿಧಾನವನ್ನು ಮಿ. ಕ್ರೀಕಲರು ಸ್ವತಃ ನಮಗಿಬ್ಬರಿಗೂ ವಿವರಿಸಿ ಹೇಳಿದರು.

ವೃದ್ಧರಿಗೂ ಬಾಲಕರಿಗೂ ಅನಾಥರಾಗಿರುವ ಸಂದರ್ಭಗಳಲ್ಲಿ ಜೀವನದ, ಅಥವಾ ವೃತ್ತಿಯನ್ನು ಕುರಿತಾದ ಏರ್ಪಾಡುಗಳನ್ನು ಮಾಡಬೇಕೆಂದು ಸರಕಾರದೊಡನೆ ಯಾರಾದರೂ ವಿನಂತಿಸಿಕೊಂಡರೆ, ಸರಕಾರದ ಬೊಕ್ಕಸದಲ್ಲಿ ಹಣವಿಲ್ಲವೆನ್ನುವ ಸರಕಾರವೇ ಈ ಜೈಲಿನ 'ಸಿಸ್ಟಂ'ಗಳಿಗಾಗಿ ಎಷ್ಟೋ ಖರ್ಚು ಮಾಡಲು ತಯಾರಿರುವುದನ್ನು ನೋಡಿದರೆ ಆಶ್ಚರ್ಯವಾಗುವುದು ಈ 'ಸಿಸ್ಟಂ'ನ ಮುಖ್ಯ ಫಲವೇನೆಂದರೆ ಅಪರಾಧಿಗಳಿಗೆ ಅವರ ಅರ್ಹತೆ ಮತ್ತು ಅಗತ್ಯಗಳಿಗೆ ಮೀರಿದ ಸುಖವೂ ಸರಕಾರಕ್ಕೆ ಅನಾವಶ್ಯಕವಾದ ಅಪಾರ ಹಣದ ಖರ್ಚೂ ಎಂದು ತಿಳಿಯಬಹುದು.

ಇಲ್ಲಿ ಮೇಜಿಸ್ಟ್ರೇಟರೆಲ್ಲ ಅಪರಾಧಿಗಳ (ಕೈದಿಗಳ) ಪೈಕಿ ನಂ. ಇಪ್ಪತ್ತೇಳನೇ ಮತ್ತು ನಂ. ಇಪ್ಪತ್ತೆಂಟನೇ ಕೈದಿಗಳು ಅತ್ಯಂತ ಉತ್ತಮರೆಂದು ಹೇಳುತ್ತಿದ್ದರು. ನಂ. ಇಪ್ಪತ್ತೇಳನ್ನು ಮಿ. ಕ್ರೀಕಲ್ ಹೊಗಳಿದೊಡನೆ ನಂ. ಇಪ್ಪತ್ತೆಂಟನ್ನು ಇನ್ನೊಬ್ಬ ಮೆಜಿಸ್ಟ್ರೇಟರು ಹೊಗಳುತ್ತಿದ್ದರು. ಇಪ್ಪತ್ತೇಳನೆಯವನು ಇಲ್ಲದಿರುತ್ತಿದರೆ ಇಪ್ಪತ್ತೆಂಟನೆಯವನು ಅಗ್ರ ಮನ್ನಣೆಯನ್ನು ಪಡೆಯುತ್ತಿದ್ದನೆಂಬುದರಲ್ಲಿ ಸಂಶಯವಿರಲಿಲ್ಲ. ಈ

ಸಂಸ್ಕಾರ ಹೊಂದುತ್ತಿದ್ದ ಗಣನೀಯ ಕೈದಿಗಳನ್ನು ತೋರಿಸಲು ಮಿ. ಕ್ರೀಕಲ್ ನಮ್ಮನ್ನು ಅವರವರ ಕೋಣೆ ಜಗುಲಿಗೆ ಕರೆದುಕೊಂಡು ಹೋದರು.

ಒಂದು ಕೋಣೆಯ ಎದುರು ತಲುಪಿದೊಡನೆ ಮಿ. ಕ್ರೀಕಲರು –
"ಇದು ನಂ. ಇಪ್ಪತ್ತೇಳನೆಯವನ ಕೋಣೆ" ಅಂದರು.
ಮಿ. ಕ್ರೀಕಲರು ಬಾಗಿಲ ಸೆರೆಯಿಂದ ಒಳಗಿನ ಕೈದಿಯನ್ನು ನೋಡಿ, ಅನಂತರ ಈಚೆಗೆ ಬಂದು ನಾನು ಒಳಗೆ ನೋಡುವಂತೆ ಹೇಳಿ, ಅಲ್ಲಿ ನೆರೆದಿದ್ದವರೊಡನೆ ಅಂದರು –
"ದೇವರ ಸ್ತೋತ್ರವನ್ನು ಪಾರಾಯಣ ಮಾಡುತ್ತಿದ್ದಾನೆ!" ಎಂದು.

ಐದಾರು ತಲೆಗಳೂ ಅದೇ ಬಾಗಿಲ ಸೆರೆಯಿಂದ ಒಳಗೆ ನೋಡಿ, ಒಳಗಿದ್ದವನ ದರ್ಶನ ಮಾಡಿಕೊಂಡು, ಬಹು ದೊಡ್ಡ ಯೋಗಿಯ ದರ್ಶನ ಮಾಡಿಕೊಂಡವರಂತೆ ಒಬ್ಬರನ್ನೊಬ್ಬರು ಗಂಭೀರವಾಗಿ ನೋಡಿಕೊಂಡರು. ಮಿ. ಕ್ರೀಕಲರು ಬಾಗಿಲು ತೆರೆಸಿ ಕೈದಿಯನ್ನು ಹೊರಗೆ ಬರ ಹೇಳಿದರು. ಆಗ ಬಹು ನಯ ಭಯಗಳಿಂದ, ತನ್ನ ಮೈ ಕೈ ಬಳುಕಿಸಿ, ಡೊಂಕಿಸಿಕೊಂಡು ಉರೆಯನೇ ನಮ್ಮೆದುರು ಬಂದು ನಿಂತನು. ಅವನು ಮೊದಲು ಮಿ. ಕ್ರೀಕಲರಿಗೆ ನಮಸ್ಕಾರ ಮಾಡಿ, ಅನಂತರ –
"ನಮಸ್ಕಾರ ಮಿ. ಕಾಪರ್ಫೀಲ್ಡ್, ನಮಸ್ಕಾರ ಮಿ. ಟ್ರೇಡಲ್ಸ್" ಎಂದಂದನು.

ಬಂದಿದ್ದವರ ಹತ್ತಿರ ಅವನು ನಿಂತು ಮಾತಾಡಿದ ವಿನಯ, ವಿನೀತತೆಯನ್ನು ಕಂಡು ಅವನಿಗೆ ಕೊಟ್ಟಿದ್ದ ಅಗ್ರಸ್ಥಾನದ ಯೋಗ್ಯತೆಯನ್ನು ಅಲ್ಲಿದ್ದವರೆಲ್ಲ ಕೊಂಡಾಡಿದರು.
"ಹೇಗಿದ್ದೀಯಾ ನಂ. ಇಪ್ಪತ್ತೇಳು?" ಎಂದು ಕೇಳಿದನು ಮಿ. ಕ್ರೀಕಲ್.
"ಆರೋಗ್ಯವಾಗಿದ್ದೇನೆ, ಸರ್. ದೇಹಾರೋಗ್ಯಕ್ಕಿಂತಲೂ ನನ್ನ ಮಾನಸಿಕ ಆರೋಗ್ಯ ಹೆಚ್ಚಿದೆ, ಸರ್. ತುಂಬಾ ಪಶ್ಚಾತ್ತಾಪಡುತ್ತಾ ವಿನೀತನಾಗಿದ್ದೇನೆ, ಸರ್" ಎಂದನು ಉರೆಯ.
"ನಿನ್ನೆಯ ಆಹಾರ ಚೆನ್ನಾಗಿತ್ತೇ, ಇಪ್ಪತೇಳು?"
"ಮೊನ್ನೆಯದಕ್ಕಿಂತ ಚೆನ್ನಾಗಿತ್ತು, ಸರ್. ಮೊನ್ನೆ ಸರಿಯಾಗಿ ಬೆಂದಿರಲಿಲ್ಲ ಮಾತ್ರ. ಆದರೆ ಸರ್, ಈ ವಿಧದ ಅಸೌಕರ್ಯಗಳಿಂದ ನಮ್ಮ ಮನೋನಿಗ್ರಹ ಕಾರ್ಯವು ಸುಲಭವಾಗಿ ಆಗುತ್ತದೆ. ನಾವು ಈ ರೀತಿಯ ಸಂದರ್ಭಗಳನ್ನು ನಮ್ಮ ಉತ್ತಮ ಪ್ರಯೋಜನಕ್ಕಾಗಿ ಪರಿವರ್ತಿಸಿಕೊಳ್ಳುತ್ತೇವೆ, ಸರ್. ನನಗೆ ಎಲ್ಲವೂ ಸುಖವೆ – ವಿನಮ್ರ ಸ್ವಭಾವ, ಪಶ್ಚಾತ್ತಾಪಯುತ ಮನಸ್ಸು, ದೈವಭಕ್ತಿ – ಈ ಮೂರೂ ಲಭಿಸಿದವರಿಗೆ ಮತ್ತೇನು ತಾನೆ ಬೇಕು, ಸರ್" ಎಂದು ಹೇಳಿ ದೈವಿಕ ಒಲುಮೆಯನ್ನು ಪಡೆದಿದ್ದು, ಭೂಭಾಗದವರಲ್ಲಿ ವಿಶ್ವಾಸವಿಲ್ಲದಿದ್ದವನಂತೆ, ಅಂತರಿಕ್ಷವನ್ನೇ ನೋಡಿದನು.

ಇಷ್ಟು ಹೊತ್ತಿನಲ್ಲಿ ನಂ. ಇಪ್ಪತ್ತೆಂಟನ್ನು ಕರೆ ತಂದರು. ಅವನು ಒಂದು ಪುಸ್ತಕವನ್ನು ಓದುತ್ತಾ ಬಂದನು. ನಮ್ಮನ್ನು ಕಂಡ ಕೂಡಲೇ "ಸರ್ ನಮಸ್ಕಾರ" ಎಂದಂದನು.

ನಂ. ಇಪ್ಪತ್ತೆಂಟನ್ನು ಕಂಡು ನನಗೆ ಪರಮಾಶ್ಚರ್ಯವಾಯಿತು. ಅವನು ನನ್ನ ಪೂರ್ವ ಪರಿಚಿತ – ಗಂಭೀರತೆಯ ಮೂರ್ತಿ ಲಿಟ್ಮರನೇ ಆಗಿದ್ದನು! ಅವನ ಗಂಭೀರತೆ ಸ್ವಲ್ಪವೂ ಕಡಿಮೆಯಾಗಿರಲಿಲ್ಲ. ಅವನ ಪುಸ್ತಕ, ನಿಲುವು, ಸ್ವರ, ಮಾತು ಎಲ್ಲವೂ ಅವನ ವಿನಯ, ಗಾಂಭೀರ್ಯಗಳನ್ನು ಪೋಷಿಸುತ್ತಿದ್ದುವು.

"ನಿನ್ನೆ ಕೊಕ್ಕೋ ಹೇಗಿತ್ತು ನಂಬರ್ ಇಪ್ಪತ್ತೆಂಟು?" ಎಂದು ಇನ್ನೊಬ್ಬ ಮೆಜಿಸ್ಟ್ರೇಟನು ಕೇಳಿದನು.
"ಸರ್, ಚೆನ್ನಾಗಿತ್ತು – ಸಾಧ್ಯವಿದ್ದಷ್ಟು ಚೆನ್ನಾಗಿತ್ತು. ಹಾಲಿಗೆ ನೀರು ಬೆರೆಸಿದ್ದರೆಂಬುದು ಮಾತ್ರ ಚಿಕ್ಕ ಕೊರತೆ ಸರ್. ನೀರು ಬೆರೆಸದ ಹಾಲು ಇಡೀ ಲಂಡನ್ನಿನಲ್ಲೇ ಸಿಕ್ಕದಿರುವಾಗ ಯಾರನ್ನೂ ದೂರಿ ಪ್ರಯೋಜನವಿಲ್ಲ. ಕೊಕ್ಕೋ ಚೆನ್ನಾಗಿತ್ತು, ಸರ್" ಎಂದನು ಲಿಟ್ಮರ್.
"ಏನಾದರೂ ಹೇಳಿಕೊಳ್ಳುವುದು ಇದೆಯೇ ನಂ, ಇಪ್ಪತ್ತೆಂಟು?"
"ವಿಶೇಷವೇನೂ ಇಲ್ಲ ಸರ್. ಆದರೆ ಇಲ್ಲಿಗೆ ಬಂದು ನನ್ನ ಮನಸ್ಸು ಪರಿಶುದ್ಧವಾಗಿ, ನನಗೆ ವಿವೇಕ ಬಂದಿರುವುದರಿಂದ, ಕೇವಲ ನನ್ನ ಕರ್ತವ್ಯ ದೃಷ್ಟಿಯಿಂದ, ತಮ್ಮ ಅಪ್ಪಣೆ ಪಡೆದು, ಎರಡು ಮಾತು ಹೇಳಬೇಕೂಂತ ಕಾಣುತ್ತದೆ, ಸರ್" ಅಂದನು ಲಿಟ್ಮರ್.
"ಧಾರಾಳವಾಗಿ ಹೇಳು" ಅಂದನು ಮೆಜಿಸ್ಟ್ರೇಟ್.
"ಇಲ್ಲಿ, ತಮ್ಮ ಜೊತೆಯಲ್ಲಿ – ನನ್ನೆದುರಿಗೆ, ನನಗೆ ಪರಿಚಯವಿರುವ ಇಬ್ಬರು ಯುವಕರಿದ್ದಾರೆ. ಇಂಥವರ ಸಹವಾಸವೇ ನನ್ನ ಇಂದಿನ ಸ್ಥಿತಿಗೆ ಕಾರಣ. ಯುವಕನೊಬ್ಬನು ಒಬ್ಬಳು ಹುಡುಗಿಯನ್ನು ಜಾರಿಸಿಕೊಂಡು ಹೋಗುವಾಗ ಅನ್ಯಾಯವನ್ನು ತಡೆದು ನ್ಯಾಯ ಕಾಪಾಡಲು ನಾನು ಪ್ರಯತ್ನಿಸಿದ ಪ್ರಸಂಗದಲ್ಲಿ ಆ ಯುವಕನು ಕುತಂತ್ರದಿಂದ ನನ್ನನ್ನು ಸಿಕ್ಕಿಸಿ ತಾನು ತಪ್ಪಿಸಿಕೊಂಡಿರುವನು. ಆದರೆ ಈ ಎಲ್ಲಾ

ಯುವಕರನ್ನೂ ಆ ವ್ಯಭಿಚಾರೀ ಹುಡುಗಿಯನ್ನೂ ನಾನು ಕ್ಷಮಿಸುತ್ತೇನೆ, ಸರ್. ಅಲ್ಲದೆ, ಇನು ಮುಂದಾದರೂ ಈ ಯುವಕರು ಇಂಥ ದುರ್ವರ್ತನೆಯಲ್ಲಿ ಪ್ರವೇಶಿಸದಿರಲಿ ಎಂದು ಅವರ ಹಿತಕ್ಕಾಗಿ ಎಚ್ಚರಿಸುತ್ತೇನೆ" ಅಂದನು ಲಿಟ್ಮರ್.

ಲಿಟ್ಮರನ ಗುಣಗಳನ್ನು ಕೊಂಡಾಡುತ್ತಾ ಪೋಲಿಸಿನವರು ಅವನನ್ನು ಅವನ ಕೋಣೆಗೆ ಕರೆದುಕೊಂಡು ಹೋದರು.

"ನಂಬರ್ ಇಪ್ಪತ್ತೇಳು ನೀನೇನಾದರೂ ಹೇಳುವುದಿದೆಯೇ?" ಎಂದು ಮಿ. ಕ್ರೀಕಲನು ಕೇಳಿದನು. ಉರೆಯ ಇವರ ಮೆಚ್ಚಿನ ಕೈದಿಯಾಗಿದ್ದುದರಿಂದ ಅವನ ತೇಜಸ್ಸನ್ನು ಪ್ರಕಟಿಸುವುದಕ್ಕಾಗಿ ಈ ಪ್ರಶ್ನೆ ಹಾಕಿರಬೇಕೆಂದು ನಾನು ಊಹಿಸಿದೆನು. ಉರೆಯ ಹೇಳತೊಡಗಿದನು –

"ನನ್ನ ತಾಯಿಗೆ ಪತ್ರ ಬರೆಯಲು ಅನುಮತಿ ಬೇಕು, ಸರ್."

"ಆಗಬಹುದು.ಮತ್ತೇನಾದರೂ ಇದೆಯೇ?"

"ಸ್ವಲ್ಪ ಮಾತ್ರ ಹೇಳುವುದಿದೆ. ನಿಮ್ಮ ಜೊತೆಯಲ್ಲಿರುವವರ ಪೈಕಿ ಮಿ. ಕಾಪರ್ಫೀಲ್ಡರನ್ನು ನಾನು ಚೆನ್ನಾಗಿ ಬಲ್ಲೆ. ನಾನು ಅವರೆಲ್ಲರ ಮಧ್ಯದಲ್ಲಿ ಬೆಳೆದುಬಂದಾಗ – ಅಹಂಕಾರಿಗಳ ಮಧ್ಯೆ ವಿನೀತನಾಗಿದ್ದೆ; ಹಿಂಸಾತ್ಮಕ ಕಾಠಿಣ್ಯದ ಎದುರು ಕಷ್ಟಸಹಿಷ್ಣುತೆಯನ್ನು ಅಭ್ಯಸಿಸಿದೆ. ಮಿ. ಕಾಪಫೀಲ್ಡರು ಒಮ್ಮೆ ನನ್ನ ಕೆನ್ನೆಗೆ ಹೊಡೆದಾಗ ಪೆಟ್ಟನ್ನು ಉಜ್ಜಿಕೊಂಡು ವಿನಮ್ರನಾಗಿ ತಲೆಬಗ್ಗಿಸಿ ನಿಂತೆ...." (ಈ ಸಂದರ್ಭವನ್ನು ಅವನು ಹೇಳುವಾಗ ಒಂದು ಬಹು ದೈವಿಕ ಸಂದರ್ಭಕ್ಕೆ ತನ್ನ ಸಂದರ್ಭವನ್ನು ಹೋಲಿಸಿಕೊಳ್ಳಲು ಪ್ರಯತ್ನಿಸಿದನು. ಅವನು ಅಲ್ಲಿ ಅಂದಿರುವ ಭ್ರಷ್ಟ ವಚನಗಳನ್ನು ನಾನಿಲ್ಲಿ ಬರೆಯಲಾರೆ!)

"ಈ ರೀತಿಯಲ್ಲಿ ನನ್ನ ಆದರ್ಶ ಜೀವನವನ್ನು ನೋಡಿಯೂ ಅವರು ಯಾರೂ ಪಶ್ಚಾತ್ತಾಪಪಟ್ಟದ್ದಾಗಲೀ ಉತ್ತಮರಾದದ್ದಾಗಲೀ ನಾನು ಕಾಣಲಿಲ್ಲ. ಇಲ್ಲಿನ ವಾತಾವರಣದಲ್ಲಿ ಮನಸ್ಸು ಪರಿಶುದ್ಧವಾಗುತ್ತಾ ಮೃಗವು ಮನುಷ್ಯನಾಗಿ, ಮನುಷ್ಯನು ದೇವತೆಯಾಗುತ್ತಾನೆ. ಅಗತ್ಯವಿರುವವರೆಲ್ಲರೂ ಇಲ್ಲಿಗೆ ಬರಲಿ, ಮುಖ್ಯವಾಗಿ ಮಿ. ಮತ್ತು ಮಿಸ್ ವಿಕ್ಫೀಲ್ಡರೂ ಆ ಸಮುದಾಯವೇ ಇಲ್ಲಿಗೆ ಬರಲಿ, ಉದ್ಧಾರವಾಗಲಿ!" ಅಂದನು ಉರೆಯ ಅನಂತರ ಅವನನ್ನು ಅವನ ಕೋಣೆಗೆ ಕರೆದುಕೊಂಡು ಹೋದರು.

ನಾವು ಅಲ್ಲಿಂದ ಹೊರಟೆವು. ನಮ್ಮನ್ನು ಹೆಬ್ಬಾಗಿಲವರೆಗೆ ಕಳುಹಿಸಿಕೊಡುವ ಗೌರವಕ್ಕಾಗಿ ಒಬ್ಬ ಪೋಲಿಸ್ ಗಾರ್ಡನನ್ನು ನಮ್ಮ ಹಿಂದೆ ಕಳುಹಿಸಿದ್ದರು. ದಾರಿಯಲ್ಲಿ ನಂಬರ್ ಇಪ್ಪತ್ತೇಳೂ ಮತ್ತು ಇಪ್ಪತ್ತೆಂಟನೆಯವರ ಅಪರಾಧಗಳೇನೆಂದು ವಿಚಾರಿಸಿದೆವು.

"ನಂ ಇಪ್ಪತ್ತೇಳು 'ಬೇಂಕ್ ಆಫ್ ಇಂಗ್ಲೆಂಡಿ'ನಿಂದ ಫೋರ್ಜರಿ ಮಾಡಿ ಹಣ ತೆಗೆದು ಕೆಲವು ಗೃಹಸ್ಥರನ್ನು ಆ ಕೇಸಿನಲ್ಲಿ ಸಿಕ್ಕಿಸಿ ಹಾಕುವುದರಲ್ಲಿದ್ದನು. ಇಷ್ಟು ಹೇಳಿ, ಹಿಂತಿರುಗಿ ನೋಡಿ, (ಜೈಲು ನೌಕರರು ಸರಕಾರದ ಗುಟ್ಟನ್ನು ಪ್ರಚಾರ ಮಾಡುವರೆಂದು ಮಿ. ಕ್ರೀಕಲ್ಲನು ತಿಳಿಯಬಾರದೆಂದು) ಹತ್ತಿರ ಯಾರೂ ಇಲ್ಲವೆಂದು ನಿಶ್ಚಯ ಮಾಡಿಕೊಂಡು ನಂ. ಇಪ್ಪತ್ತೆಂಟನೆಯವನ ಕಥೆ ಹೇಳಿದನು.

"ನಂ. ಇಪ್ಪತ್ತೆಂಟು ಮಾಡಿದ್ದು ದರೋಡೆ. ಅವನು ತನ್ನ ಎಳೆ ಪ್ರಾಯದ ಯಜಮಾನನ ಇನ್ನೂರೈವತ್ತು ಪೌಂಡು ಹಣ ಕದ್ದು, ವೇಷಪಲ್ಲಟ ಮಾಡಿಕೊಂಡು ಅಮೆರಿಕಕ್ಕೆ ಓಡುವುದರಲ್ಲಿದ್ದನು. ಪೋಲೀಸಿನವರಿಗೆ ಇವನು ಸಿಕ್ಕದೆ ಹುಡುಕುತ್ತಿದ್ದಾಗ, ಸೌತ್ ಹೇಂಪ್ಟನ್ನಿನ ಒಬ್ಬ ಕುಳ್ಳಿ ಹೆಂಗುಸು ಇವನನ್ನು ಬಹು ಚಮತ್ಕಾರದಿಂದ ಹಿಡಿದುಕೊಟ್ಟಳು."

"ಆ ಕುಳ್ಳಿ ಹೆಸರೇನು? ಮೌಚರ್ ಎಂದೇನು?" ಎಂದು ನಾನು ಕೇಳಿದೆ.

"ಹೌದು, ಅವಳ ಹೆಸರು ಮೌಚರ್. ಅವನನ್ನು ಅವಳು ಹಿಡಿದ ಕ್ರಮವು ಬಹು ಚಮತ್ಕಾರವಾದದ್ದು. ಅವನ ಹತ್ತಿರ ಅವಳು ಕಾದಾಡಿದ್ದರೆ ಅವಳು ಸೋಲಲೇ ಬೇಕಾಗಿತ್ತು. ಅದಕ್ಕೆ ಅವಳು ಮಾಡಿದ ಉಪಾಯ ಇಷ್ಟೇ. ಅವನನ್ನು ಗುರುತಿಸಿದ ಕೂಡಲೇ ಅವಳು ಅವನ ಕಾಲಸೆರೆಯಲ್ಲಿ ನುಗ್ಗಿ, ಅವನನ್ನು ನೆಲಕ್ಕೆ ಮಗುಚಿದಳು. ಹಾಗೆ ಬಿದ್ದವನನ್ನು ತನ್ನ ಕೈಕಾಲು ಹಲ್ಲುಗಳಿಂದ ಹಿಡಿದು, ಪೋಲಿಸರೇ ಬಂದು "ಬಿಡು" ಎಂದಾಗಲೂ ಬಿಡದೆ ಹಿಡಿದಿದ್ದಳು. ಈ ಪ್ರಯತ್ನದಿಂದ ಅವಳಿಗೆ ತುಂಬಾ ಪೆಟ್ಟಾಗಿದ್ದರೂ ಅವರಿಬ್ಬರನ್ನೂ ಒಬ್ಬನೇ ಮನುಷ್ಯನನ್ನು ಹೊತ್ತಂತೆ ನಾವು ಪೋಲೀಸ್ ಸ್ಟೇಷನ್ನಿಗೆ ಹೊತ್ತುಕೊಂಡು ಹೋದಮೇಲೆ ಅವನನ್ನು ಬಿಟ್ಟಳು. ಕೊನೆಗೆ ಅವಳು ಕೋರ್ಟಿನಲ್ಲಿ ಸಾಕ್ಷಿಯನ್ನು ಸಹ ಒಂದು ಕುರ್ಚಿಯ ಮೇಲೆ ನಿಂತುಕೊಂಡು ಹೇಳಿ ಅವನಿಗೆ ಶಿಕ್ಷೆ ಮಾಡಿಸಿದಳು" ಎಂದನು ಗಾರ್ಡನು.

ಇಷ್ಟರಲ್ಲಿ ನಾವು ಹೆಬ್ಬಾಗಿಲಿಗೆ ಬಂದೆವು, ಗಾರ್ಡನು ಹಿಂದೆ ಹೋದನು. ನಾವು ಅಲ್ಲಿ ನೋಡಬೇಕಾದುದನ್ನೆಲ್ಲ ನೋಡಿದ್ದಾಯಿತು. ಆದರೆ, ಹೇಳಬೇಕೆಂದು ಮನಸ್ಸಿಗೆ ತೋರಿದ್ದನ್ನು ಆ ಬುದ್ಧಿಯಿಲ್ಲದಿದ್ದ ಮಹಾ ಘನವಂತ ಸ್ಥಾನದ ಮಿ. ಕ್ರೀಕಲನೊಡನೆ ಹೇಳಿದರೆ ಪ್ರಯೋಜನವಿಲ್ಲವೆಂದು ಸುಮ್ಮನೆ ಬಂದಿದ್ದೆವು. ಆ ಮೂರ್ಖ ಎಂದೂ ಉತ್ತಮನಾಗತಕ್ಕವನಲ್ಲ. ಈ ಜೈಲಿನ ಪರಿಸ್ಥಿತಿಗೆ ತಕ್ಕದಾಗಿ ನಟಿಸಿ ವಂಚಿಸಬಲ್ಲ ಮಹಾ ನಟನೇ ಅವನು. ಬುದ್ಧಿಯಿಲ್ಲದ ಮಿ. ಕ್ರೀಕಲನನ್ನು ವಂಚಿಸಿ, ಜೈಲಿನಲ್ಲಿ ಅಭ್ಯಾಸ ಮಾಡುವ ಇಂದಿನ ಹೊಸ ನಾಟಕೀಯ ವಂಚನೆಯನ್ನು ಈ ಕೈದಿಗಳು, ಜೈಲಿನಿಂದ ಬಿಡುಗಡೆ ಹೊಂದಿದಾಗ, ತಮ್ಮ ಪೂರ್ವ ವೃತ್ತಿಗಳನ್ನು ಅವಲಂಬಿಸಿ ಪ್ರಯೋಗಿಸಲಿದ್ದಾರೆ.

ನಾವು ನಡೆಯುತ್ತಾ ಸಾಗುತ್ತಿದ್ದಾಗ ನಾನಂದೆ, ಟ್ರೇಡಲ್ಸನೊಡನೆ –
“ಆ ಮೂರ್ಖರನ್ನು ಅವರ ದಾರಿಯಲ್ಲೇ ಮುಂದರಿಸಲು ಬಿಟ್ಟಿದ್ದರೆ ಅವರ ಪಾಪವೇ ಅವರ ನಾಶವನ್ನು ಶೀಘ್ರದಲ್ಲೇ ತರುತ್ತಿತ್ತು” ಎಂದು.
“ನನಗೂ ಹಾಗೆಯೇ ತೋರುತ್ತದೆ” ಎಂದುತ್ತರವಿತ್ತನು ಟ್ರೇಡಲ್ಸನು.

ಅಧ್ಯಾಯ ಅರವತ್ತೆರಡು

ನನ್ನ ಜೀವನ ಪಥದ ದಿವ್ಯಜ್ಯೋತಿ

ದಿನಗಳು ಉರುಳುತ್ತಾ ಉರುಳುತ್ತಾ ಕ್ರಿಸ್ಮಸ್ ಕಾಲ ಬಂತು. ಈ ಮಧ್ಯೆ ನಾನು ಏಗ್ನೆಸ್ಸಳನ್ನು ಆಗಿಂದಾಗ್ಗೆ ಕೇಂಟರ್ಬರಿಗೆ ಹೋಗಿ ನೋಡಿ ಬರುತ್ತಲೇ ಇದ್ದೆನು. ನನ್ನ ಸಾಹಿತೀ ವೃತ್ತಿಯಲ್ಲಿ ನನ್ನನ್ನು ಯಾರು ಎಷ್ಟೇ ಹೊಗಳಿ ಪ್ರೋತ್ಸಾಹಿಸಿದರೂ – ಒಮ್ಮೆಗೆ ಅಂಥಾ ಪ್ರೋತ್ಸಾಹ ನನ್ನನ್ನು ಎಷ್ಟೇ ಹುರಿದುಂಬಿಸಿದ್ದಿರಬಹುದಾದರೂ – ಆ ಹೊಗಳಿಕೆ ಪ್ರೋತ್ಸಾಹಗಳು ಏಗ್ನೆಸ್ಸಳ ಬರೇ ಒಂದು ಮಾತು ನನ್ನಲ್ಲಿ ಉಂಟು ಮಾಡುತ್ತಿದ್ದುದರಷ್ಟು ಪರಿಣಾಮವನ್ನು ಮಾಡುತ್ತಿರಲಿಲ್ಲ.

ನಾನು ವಾರಕ್ಕೊಮ್ಮೆ ಕೇಂಟರ್ಬರಿಗೆ ಹೋಗಿ ಬರುತ್ತಿದ್ದರೂ ನನ್ನ ಮನಸ್ಸು ಸುಖವಾಗುತ್ತಿರಲಿಲ್ಲ, ಅದಕ್ಕೆ ಶಾಂತಿಯಿರಲಿಲ್ಲ. ಇದಕ್ಕಾಗಿ ದೈಹಿಕ ಪರಿಶ್ರಮಗಳನ್ನು ಕೈಕೊಳ್ಳುತ್ತಿದ್ದೆನು. ಅದಕ್ಕಾಗಿ ಕುದುರೆ ಸವಾರಿ ಮಾಡುತ್ತಿದ್ದೆನು, ತುಂಬಾ ದೂರ ನಡೆಯುವುದೂ ಇತ್ತು. ಏನೇ ಮಾಡಿದರೂ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ಏಗ್ನೆಸ್ಸಳು ನನ್ನ ಪತ್ನಿಯಾಗಬೇಕೆಂದು ನಾನು ಪರದೇಶದಲ್ಲಿದ್ದಾಗ ಉಂಟಾಗಿದ್ದ ಕಾಂಕ್ಷೆ ಈಗಲೂ ಹಾಗೆಯೇ ಇದ್ದು, ಅವಳಿಗೆ ನನ್ನ ಮನಸ್ಸನ್ನು ಬಿಚ್ಚಿ ತಿಳಿಸಬೇಕೆಂದು ಅದು ಒಂದು ಕಡೆಯಿಂದ ಒತ್ತಾಯಿಸುತ್ತಿದ್ದರೂ ಮತ್ತೊಂದು ಕಡೆಯಿಂದ, ಹೀಗೆ ತಿಳಿಸಿದ್ದಾದರೆ ನಮ್ಮ ಸಹೋದರ –ಸಹೋದರೀ ಭಾವಕ್ಕೆ ಸಹ ಭಂಗ ಬಂದು, ಕಾಂಕ್ಷೆಯಾಗಿ ಸಹ ಉಳಿಯದೇ ಹೋಗಬಹುದೆಂದು ಅದು ಹೆದರಿಸುತ್ತಲೂ ಇತ್ತು. ನಾನು ನನ್ನ ಕಾದಂಬರಿಗಳ ಕರಡು ಪ್ರತಿಗಳನ್ನು ಏಗ್ನೆಸ್ಸಳಿಗೆ ಓದಿ ಹೇಳುತ್ತಿದ್ದೆನು. ಆ ಕಾದಂಬರಿಗಳಲ್ಲಿ ತೋರುವ ನನ್ನ ಎಲ್ಲಾ ಭಾವನೆಗಳನ್ನು ಅವಳು ಅರಿತು, ಆನಂದಿಸಿ, ದುಃಖಿಸಿ, ನನ್ನನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದಳು. ಡೋರಾಳಿಗೆ ಸಾಕಷ್ಟು ಬುದ್ಧಿಯೊಂದು ಇದ್ದಿದ್ದರೆ ನನ್ನ ಸಂತೋಷವನ್ನು ಎಷ್ಟೊಂದು ಹೆಚ್ಚಿಸಬಹುದಿತ್ತೆಂದು ಗ್ರಹಿಸುತ್ತಿದ್ದಂತೆಯೇ – ಇಷ್ಟೊಂದು ಬುದ್ಧಿ, ಜ್ಞಾನ, ಅನುಭವವುಳ್ಳ ಏಗ್ನೆಸ್ಸಳು ಸಹೋದರಿಯಂತಿರುವುದರ ಜತೆಗೆ ಪತ್ನಿಯೂ ಆಗಿದ್ದಿದ್ದರೆ ನನ್ನ ಬಾಳು ಎಷ್ಟೊಂದು ಸುಖ ಸಂತೋಷಮಯವಾಗಿರುತ್ತಿತ್ತೆಂದೂ ಗ್ರಹಿಸುತ್ತಿದ್ದೆನು.

ಆದರೆ, ನನ್ನ ಈ ಅಭಿಪ್ರಾಯಗಳನ್ನು ಏಗ್ನೆಸ್ಸಳಿಗೆ ತಿಳಿಸುವಷ್ಟು ನನಗೆ ಧೈರ್ಯವಿರಲಿಲ್ಲ. ನಾವಿಬ್ಬರೂ ಮುದುಕರಾದಾಗ ಈ ಸಂಗತಿಗಳನ್ನು ತಿಳಿಸುವುದೆಂದೂ ಆವರೆಗೆ ಮೌನವಾಗಿದ್ದು ಕಷ್ಟಗಳನ್ನು ಸಹಿಸುವೆನೆಂದೂ ನಿರ್ಧರಿಸಿದೆನು.

ಅತ್ತೆಗೆ ನನ್ನ ಮನಸ್ಸಿನ ಮಾರ್ಗಗಳೂ ಅದರ ತರಂಗಗಳೂ ಅರ್ಥವಾಗುತ್ತಿದ್ದುವು. ಆದರೆ ತನ್ನ ಅಭಿಪ್ರಾಯವನ್ನು ನನಗೆ ತಿಳಿಸುವುದು ಹೇಗೆಂದು ಅವಳೂ ಹೆದರುತ್ತಿದ್ದಿರಬೇಕೆಂದು ನಾನು ಊಹಿಸುತ್ತಿದೆ. ಅವಳ ಮನಸ್ಸನ್ನು ನಾನು ಅರಿತಿದ್ದೆನು. ಈ ಕಾರಣಗಳಿಂದ ಕೆಲವೊಮ್ಮೆ, ನಾವು ಒಬ್ಬರನ್ನೊಬ್ಬರು ನೋಡಿಕೊಂಡು ಘಂಟೆಗಟ್ಟಲೆ ಮೌನವಾಗಿ ಕುಳಿತಿರುತ್ತಿದ್ದೆವು.

ನನ್ನ ಮಾನಸಿಕ ತಳಮಳ ವಿಪರೀತವಾಗಿದ್ದ ಒಂದು ದಿನ, ಅತ್ತೆಯು ಈ ವಿಷಯವನ್ನು ನನ್ನ ಮುಖ ನೋಡಿಯೇ ತಿಳಿದುಕೊಂಡು – "ನಾಳೆ ದಿನ ನೀನು ಕೇಂಟರ್ಬರಿಗೆ ಹೋಗಲಿದೆಯೇ" ಎಂದು, ಏನಾದರೂ ಒಂದು ವಿಧದಿಂದ ನನ್ನೊಡನೆ ಪ್ರಸ್ತಾಪವೆತ್ತಲೋಸ್ಕರವೆನ್ನುವಂತೆ ಕೇಳಿದಳು. ನಾನಂದೆ –

"ಹೋಗಬೇಕು."

"ಈ ಚಳಿಯಲ್ಲಿ? – ಹಿಮ ಸುರಿಯುತ್ತಿದೆ, ಹೀಗೊಂದು?"

"ಇಂಥ ಸಮಯದಲ್ಲೇ ವ್ಯಾಯಾಮವೋ ದೇಹ ಚಟುವಟಿಕೆಗಳೋ ಬೇಕು. ನನಗೆ ಕುದುರೆ ಸವಾರಿಯಿಂದ ತುಂಬಾ ಸುಖವಾಗುತ್ತದೆ."

"ನೀನು ಹೋಗುವಾಗ್ಗೆ ಒಂದು ಶುಭವಾರ್ತೆಯನ್ನೇ ತಿಳಿದುಕೊಂಡು ಹೋಗು – ನಿನಗೆ ಶುಭವಾಗಲಿ!" ಎಂದು ಅತ್ತೆ ಹೇಳಿದಳು.

"ಏನು ಶುಭವಾರ್ತೆ?" ಎಂದನ್ನಬೇಕಾಯ್ತು ನಾನು.

"ಏಗ್ನೆಸ್ಸಳು ಮದುವೆಯಾಗಲು ನಿಶ್ಚೈಸಿರುವಳು" ಅಂದಳು ಅತ್ತೆ; ಮತ್ತೆ ಮಾತು ಮುಂದುವರಿಸಲಿಲ್ಲ. ನನಗೆ ಆಶ್ಚರ್ಯವಾಯಿತು, ದುಃಖವಾಯಿತು, ಸ್ವಲ್ಪ ಗಾಬರಿಗೊಂಡೆನು. ಆದರೆ, ನನ್ನ ಮನಸ್ಸಿನ ಸ್ಥಿತಿಗಳನ್ನು ಆಗಲೇ ಅತ್ತೆಗೆ ತಿಳಿಸದಿರುವುದು ಉತ್ತಮವೆಂದು ನಿಶ್ಚೈಸಿದೆನು. ಹಾಗಾಗಿ ನಾನು ಮೌನವಾಗಿ ಕುಳಿತೆನು.

ಮರುದಿನ ಬೆಳಗ್ಗೆ ಕೇಂಟರ್ಬರಿಗೆ ಹೊರಟೆನು. ಸರ್ವತ್ರ ಹಿಮವು ಆವರಿಸಿತ್ತು. ರಸ್ತೆಯ ಮೇಲೆಲ್ಲ ಮಂಜುಗಡ್ಡೆ ಮುಚ್ಚಿತ್ತು. ಕುದುರೆಯು ಕಲ್ಲಿನ ಮೇಲೆ ನಡೆಯುತ್ತಿದ್ದಂತೆ ಶಬ್ದ ಕೇಳಿಸುತ್ತಿತ್ತು. ಕುದುರೆಯೂ ಚಳಿಗಾಗಿ ಸಿಗಾರ್ ಸೇದುತ್ತಿದ್ದಂತೆ ಅದರ ಮೂಗಿನಿಂದ ಹೊಗೆಯಾಕಾರದಲ್ಲಿ ಉಸಿರು ಹೊರಬರುತ್ತಿತ್ತು. ರಸ್ತೆಯಲ್ಲಿ ಜನ, ವಾಹನಗಳ ಸಂಚಾರವಿರಲಿಲ್ಲ. ಒಂದು ಕಡೆ ಮಾತ್ರ ನನ್ನ ಎದುರಿನಿಂದ ಬರುತ್ತಿದ್ದ ಹುಲ್ಲಿನ ಗಾಡಿಯ ಕುದುರೆಗಳು ಏರಿಬರುತ್ತಿದ್ದ ರಸ್ತೆಯ ತುದಿಯಲ್ಲಿ ಸುಧಾರಿಸಿಕೊಳ್ಳಲು ನಿಂತಿದ್ದುವು. ಅವುಗಳು ಚಳಿಗಾಗಿ ತಮ್ಮ ಕತ್ತನ್ನೊಮ್ಮೆ ಕುಡುಗಿ ಬಂಡಿಯನ್ನೆಳೆಯುವಾಗ ಆದ ಘಂಟಾಮಣಿಗಳ ಶಬ್ದ, ಆ ಬೆಳಗ್ಗಿನ ಹವ, ಸನ್ನಿವೇಶದಲ್ಲಿ, ಬಹು ಇಂಪಾಗಿ ಕೇಳಿಸಿತು.

ನಾನು ಮಿ. ವಿಕ್ಫೀಲ್ಡರ ಮನೆಗೆ ಹೋಗುವಾಗ ಏಗ್ನೆಸ್ಸಳು ಒಂದು ಕುರ್ಚಿಯಲ್ಲಿ ಕುಳಿತು ಏನೋ ಒಂದು ಪುಸ್ತಕವನ್ನು ಓದುತ್ತಿದ್ದಳು. ನಾನು ಅಲ್ಲಿ ಕಂಡದ್ದು ಅವಳೊಬ್ಬಳನ್ನೇ ಆಗಿದ್ದುದರಿಂದ, ವಿಶೇಷ ಮಾತಾಡದೆ ಅವಳ ಸಮೀಪ ಹೋಗಿ, ಕಿಟಕಿಯ ಅಗಲವಾದ ಚಡಿಯಲ್ಲಿ ಕುಳಿತುಕೊಂಡೆನು. ನಾವು ಯಾವಾಗಲೂ ವಿಶೇಷ ಸಾಂಪ್ರದಾಯಿಕ ಮರ್ಯಾದೆಗಳನ್ನು ಪರಸ್ಪರವಾಗಿ ಮಾಡಿಕೊಳ್ಳುತ್ತಿರಲಿಲ್ಲ. ನಾವು ಅಂಥ ಸಂಬಂಧಕ್ಕಿಂತಲೂ ಹೆಚ್ಚಿನ ಸಮೀಪದವರಾಗಿದ್ದುದರಿಂದ, ಅವಳು ನನ್ನನ್ನು ನೋಡಿದೊಡನೆಯೇ –
"ಟ್ರಾಟೂಡ್, ನೀನು ಯಾವುದೋ ಚಿಂತೆಯಲ್ಲಿರುವಂತೆ ತೋರುವೆಯಲ್ಲಾ?" ಎಂದು ಆಶ್ಚರ್ಯಚಕಿತಳಾಗಿ ಕೇಳಿದಳು.
"ನಿನ್ನೊಡನೆ ಕೆಲವು ವಿಷಯಗಳನ್ನು ಮಾತಾಡಬೇಕೆಂದು ಬಂದಿರುತ್ತೇನೆ, ಸಮಯವಿದ್ದರೆ ಹೇಳು" ಎಂದಂದೆನು.

ಏಗ್ನೆಸ್ಸಳು ಪುಸ್ತಕವನ್ನು ಒಂದು ಕರೆಯಲ್ಲಿಟ್ಟು, ಪೂರ್ಣ ನನ್ನ ಕಡೆಗೆ ಮುಖ ಹಾಕಿ, ನನ್ನ ಮಾತನ್ನು ಅವಳು ಯಾವಾಗಲೂ ಕೇಳುವ ಶ್ರದ್ಧೆಯಿಂದ, ಕೇಳಲು ಅನುವಾಗಿ ಕುಳಿತಳು. ನಾನು ಕೇಳಿದೆ –
"ನಾನು ನಿನ್ನನ್ನು ವಂಚಿಸಿರುವೆನೆಂದು ಎಂದಾದರೂ ಗಹಿಸಿರುವೆಯಾ?"
"ಇಲ್ಲ."
"ನೀನು ನನ್ನ ಜೀವನ ಪಥಕ್ಕೆ ಒಂದು ಜ್ಯೋತಿಯಂತೆ ಇರುವೆ – ಎಂದಂದ ಪಕ್ಷಕ್ಕೆ ನಾನು ಠಕ್ಕು ಮಾತಾಡುತ್ತಿದ್ದೇನೆಂದು ಗ್ರಹಿಸುವೆಯಾ?"
"ಇಲ್ಲ – ನಿನ್ನ ಭಾವನೆಯನ್ನು ನಿರ್ವಂಚನೆಯಿಂದ ತಿಳಿಸುತ್ತಿರುವೆಯೆಂದೇ ನಂಬುತ್ತೇನೆ. ನಾನು ಮಾತ್ರ ನಿನ್ನ ಅಭಿಪ್ರಾಯಕ್ಕೆ ತಕ್ಕಂಥ ಯೋಗ್ಯತೆಯುಳ್ಳವಳೋ ಅಲ್ಲವೋ ಎಂಬ ಪ್ರಶ್ನೆಯೇ ಬೇರೆ."
"ಅಷ್ಟೊಂದು ನಂಬಿಕೆ ನಿನಗೆ ನನ್ನಲ್ಲಿದ್ದರೆ ನಿನ್ನಂತರಂಗದಲ್ಲಿರುವ ಗುಟ್ಟನ್ನೇಕೆ ನನಗೆ ತಿಳಿಸುವುದಿಲ್ಲ?"

ನನ್ನ ಪ್ರಶ್ನೆಗೆ ಏಗ್ನೆಸ್ಸಳು ಉತ್ತರವೀಯಲಿಲ್ಲ. ಮುಖ ತಿರುಗಿಸಿ ಬೇರೇನನ್ನೋ ನೋಡತೊಡಗಿದಳು – ಸ್ವಲ್ಪ ಅಳು ಬರುತ್ತಿದ್ದಂತೆ ತೋರುತ್ತಿದ್ದಳು.
"ಏಗ್ನೆಸ್, ನಿನ್ನ ಮನಸ್ಸು ಯಾರಲ್ಲಿ ಅನುರಕ್ತವಾಗಿರುವುದೆಂದು – ಹಾಗೆ ನೀನು ಅನುರಕ್ತಳಾಗಿರುವುದಾದ ಪಕ್ಷಕ್ಕೆ, ನಾನು ನಿನ್ನಿಂದಲೇ ತಿಳಿಯ ಬಯಸುತ್ತೇನೆ. ಇತರರಿಂದ ಅಂಥ ವರ್ತಮಾನವನ್ನು ಕೇಳಿದರೆ ನನಗೆ ದುಃಖವಾಗುವುದು. ನಮ್ಮೊಳಗೆ ಗುಟ್ಟು ಇರಬಾರದೆಂದೂ ಗುಟ್ಟು ಇಲ್ಲವೆಂದೂ ವರ್ತಿಸುವ ನಮಗೆ ಈ ವಿಷಯದಲ್ಲೂ ಗುಟ್ಟಿರಬಾರದು. ನಾನು ಡೋರಾಳನ್ನು ಕುರಿತು ಪಡುತ್ತಿದ್ದ ಅಭಿಪ್ರಾಯವನ್ನೂ ಅನಂತರ ನನ್ನ ಪ್ರೇಮದ ಬೆಳವಣಿಗೆಯನ್ನೂ ನಿನಗೆ ತಿಳಿಸಿ ನನ್ನ ಸಂತೋಷವನ್ನು ಹೆಚ್ಚಿಸಿಕೊಂಡಿದ್ದೇನೆ. ಈ ಕ್ರಮದಲ್ಲಿ ನಾನೇಕೆ ನಿನ್ನ ಅಂತರಂಗವನ್ನು ತಿಳಿದು ನಿನ್ನ ಸಂತೋಷದಲ್ಲಿ ಭಾಗಿಯಾಗಬಾರದು?" ಎಂದು ನಾನು ಪ್ರಶ್ನಿಸಿದೆ.

ಏಗ್ನೆಸ್ಸಳಿಗೆ ಕಣ್ಣೀರು ಬಂತು. ಅಳುತ್ತಾ ಎದ್ದಳು –
"ಈ ಹೊತ್ತು ಬೇಡ, ಈಗ ಬೇಡ...." ಎಂದು ಹೇಳುತ್ತಾ ಹೊರಟು ಹೋಗಲು ಉದ್ಯುಕ್ತಳಾದಳು.
"ಹೆದರಬೇಡ, ಏಗ್ನೆಸ್. ನಿನ್ನ ಹೃದಯವನ್ನು ಬೇರೊಬ್ಬನಿಗೆ ಒಪ್ಪಿಸಿದ್ದರೆ, ಆ ಸಂಗತಿಯನ್ನು ನಾನು ತಿಳಿದರೆ, ನಾನು ದುಃಖಪಡಬಹುದೆಂದು ಹೆದರಬೇಡ. ನೀನು ನನಗೆ ಸದಾ ಅತ್ಯಂತ ಪ್ರಿಯಳಾದ ಸಹೋದರಿಯೇ ಆಗಿ ಉಳಿಯುವೆ. ನಿನ್ನ ಮನಸ್ಸಿಗೆ ವೇದನೆಯಿಲ್ಲದಂತೆ ನನ್ನ ಬಾಳನ್ನು ನಡೆಸುವ ನಿರ್ಧಾರವನ್ನು ನಾನು ಮಾಡಿಕೊಳ್ಳಬಲ್ಲೆನು. ದಯಮಾಡಿ ತಿಳಿಸು" ಎಂದು ಉತ್ತರಕ್ಕಾಗಿ ಒತ್ತಾಯಿಸಿದೆನು.
"ಟ್ರಾಟೂಡ್, ನೀನು ಇಷ್ಟನ್ನು ಸ್ಪಷ್ಟವಾಗಿ ತಿಳಿದಿರು: ನೀನು ಶಾಲೆಗೆ ಹೋಗುತ್ತಿದ್ದಾಗಿನಿಂದಲೂ – ಅಂದಿನಿಂದ ಇಂದಿನವರೆಗೂ, ಸದಾ ನಾನು ನಿನ್ನನ್ನು ಒಂದೇ ವಿಧದಿಂದ ಪ್ರೀತಿಸುತ್ತಿದ್ದೇನೆ. ನನ್ನ ಜೀವನದಲ್ಲಿ ನೀನು ಕೊಡತಕ್ಕ ಸಂತೋಷವನ್ನು ಇನ್ನು ಯಾರೂ ಕೊಡಲಾರರೆಂಬುದು ನನಗೂ ದೇವರಿಗೂ ಮಾತ್ರ ಗೊತ್ತು. ನಿನ್ನ ಮೇಲಿನ ನನ್ನ ಭಾವನೆಯೇ ನಾನು ಬದುಕುವುದರಲ್ಲಿನ ಸಂತೋಷ. ಆ ದಿವ್ಯ ಅನುಭವವೂ ನನ್ನ ಪ್ರೀತಿಯ ಸ್ಥಿರತೆಯೂ ನನ್ನಿಂದ ಎಂದೂ ಅಗಲಿ ಹೋಗಲಾರವು. ಆದ್ದರಿಂದ ನನ್ನ ಮನಸ್ಸು ಹೇಗಿದೆ, ಯಾರ ಮೇಲಿದೆ ಇತ್ಯಾದಿಗಳನ್ನು ಹೇಳದಿರಲು ಕಾರಣವೇ ಇಲ್ಲ. ಇದಕ್ಕಿಂತ ಹೆಚ್ಚೇನು ಹೇಳಲಿ!" ಎಂದು ನನ್ನ ಹೃದಯವೇ ಕರಗುವಂತೆ ಹೇಳಿದಳು.

"ಇಷ್ಟೊಂದು ಚಿಕ್ಕ ಪ್ರಾಯದಲ್ಲೇ ನೀನು ಇತರರಿಗಾಗಿ ಶ್ರಮಪಡುತ್ತಾ ಬಾಳುತ್ತಿರುವೆ. ನೀನೇ ಇತರರ ದುಃಖಗಳನ್ನು ವಿಚಾರಿಸಿ, ಅವರಿಗೆ ಸಹಾಯ ನೀಡುವ ನಿನ್ನ ಗುಣದ ಪ್ರಯೋಜನವನ್ನು ನಾನೂ ಸಹಸ್ರಾರು ವಿಧದಿಂದ, ಸಂದರ್ಭಗಳಲ್ಲಿ ಪಡೆದಿರುವೆನು. ಆದರೂ ನಿನ್ನ ಮನಸ್ಸು ಹೇಗಿದೆ – ನಿನ್ನಂತರಂಗದಲ್ಲಿ ದುಃಖವೇನಾದರೂ ಇದೆಯೋ ಎಂದು ವಿಚಾರಿಸಲು ನನಗೆ ಬುದ್ಧಿ ತೋಚಲಿಲ್ಲ. ನೀನು ಅಂದಿನಿಂದಲೂ ಒಂದೇ ರೀತಿಯಲ್ಲಿರುವೆ. ನನ್ನ ಮನಸ್ಸಿನ ಚಾಂಚಲ್ಯದ ಫಲವನ್ನು ಒಮ್ಮೆ ಅನುಭವಿಸಿ ಆಯಿತು. ನನ್ನ ಅಂಥ ಅನುಭವದ ಕಾರಣವಾಗಿ ಇನ್ನೊಮ್ಮೆ ನನ್ನ ಮನಸ್ಸು ಅಸ್ಥಿರವಾಗಲಾರದು. ನಿನ್ನನ್ನು ಸಹೋದರಿ ಎಂದು ಭಾವಿಸುವುದಕ್ಕಿಂತ – ಕರೆಯುವುದಕ್ಕಿಂತ, ಹೆಚ್ಚಿನದಾದ ಒಂದು ದೃಷ್ಟಿಯಿಂದ ಭಾವಿಸುವ – ಕರೆಯುವ, ಭಾಗ್ಯ ನನ್ನದಾಗಲು ನಿನ್ನಲ್ಲಿ ಎಡೆಯಿದೆಯೇ ಎಂದು ತಿಳಿಯಬೇಕೆಂಬುದು ನನ್ನ ಕಾಂಕ್ಷೆ. ಈ ಕಾಂಕ್ಷೆಯನ್ನು ಅಡಗಿಸಿಟ್ಟರೆ ನಾನು ಆತ್ಮವಂಚಕನಾಗುತ್ತೇನೆ. ಅಂದರೆ, ನನಗೆ ಮಾತ್ರವಲ್ಲ, ನನ್ನ

ಆತ್ಮವೇ ಆಗಿರುವ ನಿನಗೂ ವಂಚಕನಾಗುತೇನೆ. ಅನುಕೂಲವಿದ್ದರೆ ನನ್ನ ಪ್ರಶ್ನೆಗೆ ದಯಮಾಡಿ ಉತ್ತರ ಕೊಡು" ಎಂದು ನಾನು ಹೇಳಿದೆನು.

ಏಗ್ನೆಸ್ಸಳು ಮೆಲ್ಲಗೆ ಅಳುತ್ತಲೇ ಇದ್ದಳು. ಆದರೆ ಆ ಅಳುವಿನಲ್ಲಿ ಸಂತೋಷವೂ ಅಡಗಿತ್ತು. ನಾನು ಮತ್ತೂ ಮಾತಾಡಿದೆನು.
"ನಾನು ಡೋರಾಳನ್ನು ಪ್ರೀತಿಸುತ್ತಿದ್ದೆನು, ನಿಜ. ಆದರೆ, ಆಗಲೂ ನಿನ್ನ ಪ್ರೀತಿ, ಸ್ನೇಹಗಳು ಇಲ್ಲದಿದ್ದರೆ ನನ್ನ ಜೀವನವೇ ಅಪೂರ್ಣವಾಗಿರುತ್ತಿತ್ತೆಂಬುದು ನಿನಗೂ ಗೊತ್ತಿರಬೇಕು. ನಾನು ಪರದೇಶ ಸಂಚಾರಕ್ಕೆ ಹೊರಡುವಾಗ, ಪರದೇಶದಲ್ಲಿ ಇದ್ದಾಗ, ಮರಳಿ ಈ ದೇಶಕ್ಕೆ ಬರುವಾಗ, ನಿನ್ನ ಮನಸ್ಸನ್ನು ತಿಳಿಯಲು ತವಕಪಡುತ್ತಿದ್ದೆನು. ನಿನ್ನ ಸಹೋದರೀ ಬಾಂಧವ್ಯ ದೊರಕಿದ್ದೇ ಒಂದು ಪರಮಾನುಗ್ರಹವೆಂದು ತಿಳಿಯುತ್ತಿದ್ದವನಿಗೆ, ಅದಕ್ಕಿಂತಲೂ ಹೆಚ್ಚಿನ ಬಾಂಧವ್ಯವನ್ನು ಬಯಸಿ, ನಿನಗೆ ತಿಳಿಸಿ, ದೊರಕಿರುವುದನ್ನೇ ಕಳೆದುಕೊಳ್ಳುವ ಸಂಭವವನ್ನು ತಂದೊಡ್ಡಿಕೊಳ್ಳಬಾರದೆಂದು ಈವರೆಗೆ ಅಂತರಂಗದಲ್ಲೇ ಶ್ರಮಪಡುತ್ತಾ ನಿನ್ನನ್ನು ವಿಚಾರಿಸದೆ ಸುಮ್ಮನಿದ್ದೆ" ಎಂದೆನು

ಏಗ್ನೆಸ್ಸಳು ಎದ್ದು ಬಂದು ನನ್ನ ಹತ್ತಿರ ಕುಳಿತು, ನನ್ನ ಕೈ ಹಿಡಿದುಕೊಂಡು ನನ್ನ ಮುಖವನ್ನು ನೋಡಿ –
"ನನ್ನ ಕಡೆ ಒಂದು ಒಗಟಿದೆ – ಏನೆಂದು ಗೊತ್ತಿದೆಯೇ?" ಎಂದು ಕೇಳಿದಳು.
"ಇಲ್ಲ" ಅಂದೆ.
"ನನ್ನ ಪ್ರೇಮವು ಇನ್ನು ಯಾರ ಮೇಲೂ ಎಂದೂ ನಿನ್ನ ಮೇಲೆ ಇದ್ದಂತೆ ಇರಲಿಲ್ಲ. ನಿನ್ನ ಮೇಲಿನ ನನ್ನ ಪ್ರೇಮವು ಒಂದೇ ವಿಧವಾಗಿ ಸ್ಥಿರವಾಗಿ ಇತ್ತು" ಅಂದಳು ಏಗ್ನೆಸ್.

ಒಗಟು ಪರಿಹಾರವಾಯಿತಷ್ಟೆ! ಇನ್ನೇನು ಕೇಳಬೇಕೇ? ನಾವು ಬಹುವಾಗಿ ಆನಂದಿಸಿದೆವು. ಈ ನೂತನ ಆನಂದದ ಪರವಶತೆಯಲ್ಲಿ ಆನಂದಬಾಷ್ಪಗಳನ್ನು ಸುರಿಸುತ್ತಿದ್ದೆವು. ನಮ್ಮೀರ್ವರ ಹೃದಯಗಳು ಒಂದಾದುವು – ಎಂದೆಂದೂ ಎರಡಾಗದಂತೆ ಒಂದಾದವು.

ಸಂಜೆಗೆ ನಾವಿಬ್ಬರೂ ಜೊತೆಯಾಗಿ ಅತ್ತೆಯ ಮನೆಗೆ ಹೋದೆವು. ಅತ್ತೆಗೆ ಆದ ಆನಂದ ಅಷ್ಟಿಷ್ಟಲ್ಲ. ನಮ್ಮಿಬ್ಬರನ್ನೂ ಅಪ್ಪಿಕೊಂಡು ಆನಂದಬಾಷ್ಪವನ್ನು ಸುರಿಸಿದರು. ಮಿ. ಡಿಕ್ಕರು ತುಂಬಾ ಸಂತೋಷಪಟ್ಟರು. ಏಗ್ನೆಸ್ ಮತ್ತು ನನ್ನೊಳಗೆ ನಡೆದಿದ್ದ ಮಾತುಗಳ ಸೂಕ್ಷ್ಮ ವಿಚಾರಗಳನ್ನೆಲ್ಲಾ ಅತ್ತೆಗೆ ತಿಳಿಸಿರುವೆನೆಂಬುದನ್ನು ಪ್ರತ್ಯೇಕ ಹೇಳಬೇಡವಷ್ಟೆ?

ಎರಡು ವಾರಗಳಲ್ಲಿ ನಮ್ಮ ಮದುವೆಯಾಯಿತು. ಟ್ರೇಡಲ್ಸ್, ಸೋಫಿ, ಮಿಸೆಸ್ ಮತ್ತು ಮಿ. ಸ್ಟ್ರಾಂಗರು ಮಾತ್ರ ನಮ್ಮ ಮದುವೆಗೆ ಆಮಂತ್ರಿತರಾಗಿ ಬಂದಿದ್ದರು. ಮದುವೆಯು ಆಡಂಬರವಿಲ್ಲದೆ ಜರುಗಿತು. ಬಂದಿದ್ದ ನೆಂಟರೆಲ್ಲಾ ಹೋದನಂತರ ಏಗ್ನೆಸ್ಸಳೂ ನಾನು ಕುದುರೆ ಸಾರೋಟಿನಲ್ಲಿ ಕುಳಿತು ಸವಾರಿ ಬಿಟ್ಟೆವು. ನನ್ನ ಉತ್ತಮ ಕಾರ್ಯಗಳೆಲ್ಲಕ್ಕೂ ಪ್ರೇರಕಳಾದ, ನನ್ನ ಜೀವನದ ಸರ್ವಸ್ವವಾದ – ನನ್ನ ಜೀವವೇ ಆಗಿರುವ, ಪ್ರಾಣಪ್ರಿಯೆ ಏಗ್ನೆಸಳನ್ನು ಅಪ್ಪಿ ಹಿಡಿದುಕೊಂಡು ನಾವು ಸವಾರಿ ಮಾಡಿದೆವು. ನಮ್ಮಿಬ್ಬರ ಪ್ರೇಮವು ಶಿಲಾಸದೃಶವಾದ ಸ್ಥಿರತೆಯಲ್ಲಿದೆಯೆಂಬುದು ಇಬ್ಬರಿಗೂ ಗೊತ್ತಿತ್ತು. ದಾರಿ ಸಾಗುತ್ತಾ ಏಗ್ನೆಸ್ಸಳು ಅಂದಳು –
"ಇನ್ನೊಂದು ವಿಷಯವನ್ನು ತಿಳಿಸಲು ಬಾಕಿಯಿದೆ."
"ಏನದು?"
"ಆ ಹೊತ್ತು ಡೋರಾಳು ನನ್ನನ್ನು ಮಹಡಿಯ ಮೇಲಕ್ಕೆ ಕರೆಸಿ ಏಕಾಂತದಲ್ಲಿ ಹೇಳಿದ್ದೇನೆಂದು ಗೊತ್ತಿದೆಯೇ?"
ಅದೇನಿರಬಹುದೆಂದು ನಾನು ಊಹಿಸಿದ್ದೆನಾದರೂ ಅವಳ ಬಾಯಿಯಿಂದಲೇ ಕೇಳೋಣವೆಂದು, ಏಗ್ನೆಸ್ಸಳನ್ನು ಮತ್ತಷ್ಟು ಬಲವಾಗಿ ಅಪ್ಪಿಕೊಂಡು –
"ಹೂಂ, ಏನೆಂದಳು ಡೋರಾ ಹೇಳು" ಅಂದೆನು.
"ನಿನ್ನ ಹೃದಯದಲ್ಲಿ ಅವಳ ಸ್ಥಾನಕ್ಕೆ ನಾನು ತಪ್ಪದೆ ಸೇರಬೇಕೆಂದು ಕೇಳಿಕೊಂಡಿರುವಳು" ಅಂದಳು ಏಗ್ನೆಸ್.

ಏಗ್ನೆಸ್ಸಳು ತನ್ನ ತಲೆಯನ್ನು ನನ್ನೆದೆಯಮೇಲಿಟ್ಟು ನನ್ನವಳೇ ಆದಳು. ನಾವಿಬ್ಬರೂ ಅಳುತ್ತಿದ್ದೆವು. ಜತೆಯಲ್ಲೇ ಆ ಅಳುವು ಆನಂದ ಪರವಶತೆಯಿಂದ ಬಂದದ್ದೆಂಬ ಪರಮಾನಂದ ನಮ್ಮದಾಗಿತ್ತು.

ಅಧ್ಯಾಯ ಅರವತ್ತ್ಮೂರು

ಒಬ್ಬ ಅಭ್ಯಾಗತ

ನನ್ನ ಕಾರ್ಯ ಬಹ್ವಂಶ ಮುಗಿದಿದೆ. ಆದರೆ ಈ ಒಂದು ವಿಷಯವನ್ನು ಹೇಳದಿರುವುದು ಸರಿಯಲ್ಲ. ನನ್ನ ಮನಸ್ಸಿನಲ್ಲಿ ಸದಾ ಎದ್ದು ಕಾಣುತ್ತಿದ್ದು, ಸದಾ ನನಗೆ ಸಂತೋಷ ಕೊಡುತ್ತಿದ್ದ ಈ ವಿಷಯವನ್ನು ತಿಳಿಸದೆ ಬಿಟ್ಟರೆ ನನ್ನ ವೃತ್ತಾಂತದ ಬಲೆಯೊಳಗಣ ಅಮೂಲ್ಯ ತಂತುವೊಂದನ್ನು ಜಡಕಾಗಿ ಬಿಟ್ಟಂತೆಯೇ ಸರಿ.

ಮದುವೆ ಕಳೆದು ಹತ್ತು ವರ್ಷಗಳ ಸುಖಸಂತೋಷಗಳ ಕಾಲವನ್ನು ಕಳೆದಿದ್ದೆನು. ಚಳಿಗಾಲದ ಒಂದು ರಾತ್ರಿ ನನ್ನನ್ನು ಕಂಡು ಮಾತಾಡುವುದಕ್ಕಾಗಿ ಅಪರಿಚಿತನೊಬ್ಬನು ಬಂದು ಹೊರಗೆ ಕಾದುನಿಂತಿರುವುದಾಗಿ ಕೆಲಸದವಳು ಬಂದು ತಿಳಿಸಿದಳು. ಏಗ್ನೆಸ್ಸಳು ನಾನೂ ಮಕ್ಕಳ ಜತೆ ಸೇರಿಕೊಂಡು, ಸುಖವಾಗಿ ಬೆಂಕಿಯ ಬುಡದಲ್ಲಿ ಮಾತಾಡುತ್ತಾ ಕುಳಿತಿದ್ದೆವು. ಬಂದವನನ್ನು ಒಳಗೆ ಕರೆತರಲು ಕೆಲಸದವಳ ಹತ್ತಿರ ಹೇಳಿ, ನಮ್ಮ ಮಾತು ನಿಲ್ಲಿಸಿ, ಅವನನ್ನು ನಿರೀಕ್ಷಿಸಿ ಬಾಗಿಲ ಕಡೆಗೆ ನೋಡುತ್ತಾ ಕುಳಿತೆವು.

ಪ್ರಾಯದಿಂದ ಮುಖವೆಲ್ಲಾ ಹಣ್ಣಾಗಿ ಕೆಂಪಗಾಗಿದ್ದ, ಬಿಳಿಯ ತಲೆ ಕೂದಲಿನ ಮುದುಕನೊಬ್ಬನು, ಕೈಯ್ಯಲ್ಲೊಂದು ದೊಣ್ಣೆ ಹಿಡಿದುಕೊಂಡು, ಒಳಗೆ ಬಂದನು. ಚೊಕ್ಕಟವಾಗಿದ್ದ ಒರಟು ಬಟ್ಟೆಯನ್ನುಟ್ಟು, ಅವನೊಬ್ಬ ಕೃಷಿಕನಂತೆ ತೋರುತ್ತಿದ್ದನು. ಅವನು ಮುದುಕನೂ ನಿರೋಗಿಯೂ ದೃಢಕಾಯನೂ ಧೈರ್ಯಸ್ಥನೂ ಆಗಿ ತೋರುತ್ತಿದ್ದನು. ಅವನನ್ನು ಪೂರ್ಣ ನೋಡುವುದರೊಳಗೆ ಅವನು ಮಿ. ಪೆಗಟಿಯೆಂದು ಗೊತ್ತಾಯಿತು. ಏಗ್ನೆಸ್ಸಳು ಮಾತ್ರ ಅವನನ್ನು ಸ್ವಲ್ಪ ನಿಧಾನವಾಗಿಯೇ ಗುರುತು ಹಚ್ಚಿದಳು. ಅವನಿಗೆ ಹಸ್ತಲಾಘವವನ್ನಿತ್ತು ಅಪ್ಪಿಕೊಂಡೆನು. ನಮಗೆಲ್ಲ ಸಂತೋಷದಿಂದ ಕಣ್ಣೀರೇ ಬಂತು. ಅವರನ್ನು ಸೋಫಾದ ಮೇಲೆ ಕುಳ್ಳಿರಿಸಿ ರಾತ್ರಿಯ ಊಟದ ಏರ್ಪಾಡನ್ನು ಮಾಡಿದೆವು. ನಮ್ಮ ಊಟ ಮುಗಿದ ಕೂಡಲೆ ಮಕ್ಕಳನ್ನು ಮಲಗಿಸಿದೆವು. ಮಿ. ಪೆಗಟಿ ನಮ್ಮೂರಲ್ಲಿ ಕೆಲವು ದಿನಗಳಾದರೂ ನಿಲ್ಲಬಹುದೆಂದು ಗೊತ್ತಿದ್ದರೂ ಅವರ ಊರಿನ ವರ್ತಮಾನವನ್ನು ಆಗಲೇ ತಿಳಿಯಬೇಕೆಂದು ನಾವು ಬಹುವಾದ ಕಾತುರತೆಯಲ್ಲಿದ್ದೆವು. ಹಾಗಾಗಿ ಮಕ್ಕಳನ್ನು ಮಲಗಿಸಿ ನಾವು ಮೂವರೂ ಬಹು ಸಮಯದವರೆಗೆ ಮಾತಾಡುತ್ತ ಕುಳಿತೆವು.

"ನಿಮ್ಮೂರಿನ ನಿಮ್ಮ ಮತ್ತು ಮಿ. ಮೈಕಾಬರರ ವರ್ತಮಾನವನ್ನೆಲ್ಲ ವಿವರವಾಗಿ ತಿಳಿಸಬೇಕು, ಮಿ. ಪೆಗಟಿ" ಎಂದು ನಾನು ಕೇಳಿಕೊಂಡೆನು.

"ನೀವು ಕೇಳುವ ಮೊದಲೇ ಹೇಳಬೇಕೆಂದಿದ್ದೇನೆ, ಮಾ. ಡೇವಿ. ಈಗ ತ್ರಾಣವಿದೆ. ಪ್ರಾಯ ಹೋದದ್ದು ವಿಶೇಷ ತಿಳಿಯುವುದಿಲ್ಲ. ಆದ್ದರಿಂದಲೇ ಈಗ ಬಂದು ನಿಮ್ಮೆಲ್ಲರ ಭೇಟಿ ಮಾಡಿ ಹೋಗಬೇಕೆಂದು ಇಲ್ಲಿಯವರೆಗೆ ಬಂದಿದ್ದೇನೆ" ಎಂದಂದರು ಮಿ.ಪೆಗಟಿ, ಮುಗುಳ್ನಗೆಯಾಡುತ್ತಾ.

"ನೀವು ಈ ಊರಿನಲ್ಲಿ ಎಷ್ಟು ದಿನಗಳು ಇದ್ದೀರಿ?" ಎಂದು ಏಗ್ನೆಸ್ ಕೇಳಿದಳು.

"ಕೆಲವು ದಿನಗಳು ಮಾತ್ರ."

"ಈಗ ಹತ್ತು ವರ್ಷಗಳ ಕಾಲದ ವರದಿಯನ್ನು ಕೇಳಲು ನಾವು ತಯಾರಿದ್ದೇವೆ" ಎಂದು ನಾನು ಅಂದೆನು.

"ನಾನು ಸೀದಾ ನಿಮ್ಮ ಮನೆಗೆ ಬರಲಿಲ್ಲ. ಹೋಟೆಲಿನಲ್ಲಿ ಸ್ವಲ್ಪ ಪಾನೀಯವನ್ನು ತೆಗೆದುಕೊಂಡು ವಿಶ್ರಮಿಸಿಕೊಂಡು ಬಂದಿದ್ದೇನೆ. ಆದ್ದರಿಂದ, ಬೇಕಾದರೆ ಬೆಳಗಾಗುವವರೆಗೆ ನಾನು ಮಾತಾಡಲು ಸಿದ್ಧನೇ ಆಗಿದ್ದೇನೆ" ಎಂದು ಮಿ. ಪೆಗಟಿ ಉತ್ಸಾಹದಿಂದ ಹೇಳಿದರು.

ಹುರುಪು ಬರಲೆಂದು ಅವರಿಗೆ ಸ್ವಲ್ಪ ವೈನ್ ಕೊಟ್ಟೆ ಮತ್ತು ನಾನೂ ಸ್ವಲ್ಪ ಕುಡಿದೆ. ಅನಂತರ ಮಿ. ಪೆಗಟಿ ಹೇಳತೊಡಗಿದರು –

"ಮುಖ್ಯವಾಗಿ ಮಾಸ್ಟರ್ ಡೇವಿ, ನಾವೆಲ್ಲರೂ ಅಭಿವೃದ್ಧಿ ಸ್ಥಿತಿಯಲ್ಲಿದ್ದೇವೆ. ಆರೋಗ್ಯವಾಗಿಯೂ ಇದ್ದೇವೆ. ನಮ್ಮ ಗದ್ದೆ, ತೋಟಗಳ ಉತ್ಪತ್ತಿ ಚೆನ್ನಾಗಿದೆ. ಮಿ. ಮೈಕಾಬರರ ಕುಟುಂಬವೂ ಇದೇ ರೀತಿಯಲ್ಲಿದೆ.

"ಇನ್ನು ನಮ್ಮ ಮುಖ್ಯ ಸಂಗತಿ – ಎಮಿಲಿಯನ್ನು ಕುರಿತು ನೀವು ಕೇಳಲು ಅಪೇಕ್ಷಿಸಬಹುದು. ಅವಳಿಗಾಗಿಯೇ ನಾವು ಅತ್ತ ಕಡೆ ಹೋಗಿರುವುದರಿಂದ ಅವಳ ಕಥೆ ಹೇಳುತ್ತೇನೆ, ಕೇಳಿ. ಅವಳು ಮೊದಲಿನಂತೆಯೇ ಸುಂದರಿಯಾಗಿದ್ದಾಳೆ ಎಂಬುವುದರಲ್ಲಿ ಸಂಶಯವಿಲ್ಲ. ಆದರೆ, ಅವಳನ್ನು ನೋಡಿದರೆ ಸುಂದರಿಯಾದ ಒಬ್ಬ ಸ್ತ್ರೀಯಾಗಿ ಕಾಣುವ ಬದಲು ಗೌರವಾನ್ವಿತ ಒಬ್ಬ ಸನ್ಯಾಸಿನಿಯಾಗಿ ತೋರುವಳು. ಈಗವಳು ಸ್ವಲ್ಪ ಮುಂದಕ್ಕೆ ಬಗ್ಗಿ ನಡೆಯುತ್ತಾಳೆ. ತಲೆಕೂದಲು ಬಿಳಿದಾಗಿದೆ. ಅವಳನ್ನು ಮದುವೆಯಾಗಲು ತುಂಬಾ ಜನರು ಅಪೇಕ್ಷೆಪಟ್ಟರೂ ಅವಳು ಒಪ್ಪಲಿಲ್ಲ. ಅವಳ ಜೀವನವೂ ಒಬ್ಬ ಸನ್ಯಾಸಿನಿಯ ಜೀವನದಂತೆಯೇ ಸಾಗುತ್ತಿದೆ. ರೋಗಿಷ್ಟರ ಚಿಕಿತ್ಸೆ, ಚಿಕ್ಕ ಮಕ್ಕಳಿಗೆ ಪಾಠ ಹೇಳಿಕೊಡುವುದು, ಮದುವೆ –ಮಂಗಲೋತ್ಸವಗಳಲ್ಲಿ ಮರ್ಯಾದೆಯಿರುವಂಥಾ ಶೃಂಗಾರ ಕೆಲಸಗಳನ್ನು ಧರ್ಮಾರ್ಥವಾಗಿ ಮಾಡಿಕೊಡುವುದು, ಇತರ ಸಮಯಗಳಲ್ಲಿ ಓದುವುದೂ ದರ್ಜಿ ಕೆಲಸ ಮಾಡುವುದೂ – ಇವೇ ಅವಳ ದಿನನಿತ್ಯದ ಕಸಬು" ಅಂದರು.

"ಹೇಮನ ಮರಣವಾರ್ತೆ ಅವಳಿಗೆ ಗೊತ್ತಾಗಿದೆಯೇನು? ಎಂದು ಕೇಳಿದೆ.

“ಆ ವರ್ತಮಾನವನ್ನು ಮಿ. ಮೈಕಾಬರರು ಈ ಊರನ್ನು ಬಿಟ್ಟು ಬಹಳ ದೂರ ಹೋದಮೇಲೆ ನನಗೆ ತಿಳಿಸಿದರು. ನಾನು ಮಾತ್ರ ಅವಳಿಗೆ ತಿಳಿಸದೇ ಬಹಳ ಸಮಯ ದಿನ ಕಳೆದೆ. ಕೊನೆಗೆ ಒಂದು ದಿನ ನಮ್ಮ ಮನೆಗೆ ಬಂದಿದ್ದವನೊಬ್ಬನ ಹತ್ತಿರವಿದ್ದ ಒಂದು ಹಳೇ ವರ್ತಮಾನ ಪತ್ರಿಕೆಯನ್ನು ಅವಳು ಕಂಡು – ಪತ್ರಿಕೆಯು ತಮ್ಮೂರಿನದಷ್ಟೆ, ಹಳತಾದರೇನು, ಎಂದು ಓದಿ, ಹೇಮನು ಮೃತಪಟ್ಟದ್ದು ತಿಳಿದುಕೊಂಡಳು” ಅಂದರು.

“ಅವಳಿಗೆ ಬಹಳ ದುಃಖವಾಗಿರಬೇಕು, ಮಾಸ್ಟರ್ ಡೇವಿ. ಅವಳ ಮೃದು ಹೃದಯವು ಎಲ್ಲರ ದುಃಖದಲ್ಲೂ ಅನುಕಂಪಿಸುವಾಗ ಹೇಮನನ್ನು ಕುರಿತು ಖಂಡಿತವಾಗಿಯೂ ದುಃಖಿಸಿಯೇ ದುಃಖಿಸುವುದು. ಆದರೆ, ಆ ಮೊದಲೇ ಅವಳಿಗೆ ಮೇರೆ ಮೀರಿದ ದುಃಖದ ಅನುಭವವಿದ್ದುದರಿಂದ ಮತ್ತೂ ಈ ಘಟನೆಯು ಕಳೆದು ಅನೇಕ ದಿನಗಳನಂತರ ಅವಳಿಗೆ ಈ ವರ್ತಮಾನ ಸಿಕ್ಕಿದ್ದರಿಂದ ಅವಳ ಈ ದುಃಖವನ್ನು ಒಂದು ವಿಧದ ಸಮಾಧಾನದಿಂದ ಸಹಿಸಿ ಶಾಂತಳಾಗಿದ್ದಾಳೆ. ಆದರೆ ಈ ವರ್ತಮಾನ ತಿಳಿದ ಅನಂತರ ಅನೇಕ ದಿನಗಳವರೆಗೆ ಅವಳು ಜನರ ಎದುರು ಬರುತ್ತಲೇ ಇರಲಿಲ್ಲ.”

ಮತ್ತೂ ಮುಂದುವರಿಸುತ್ತಾ ಸ್ವಲ್ಪ ನಸು ನಗೆಯಾಡುತ್ತಲೇ ಇರುತ್ತಾ –

“ಮಾಸ್ಟರ್ ಡೇವೀ ಮಿಸೆಸ್ ಗಮ್ಮಿಜ್ಜಳ ಕಥೆಯೇ ಬೇರೆ! ಅವಳು ಅಳುತ್ತಲೂ ಇಲ್ಲ, ಪರಚಿಕೊಳ್ಳುತ್ತಲೂ ಇಲ್ಲ. ಅವಳು ಮನೆ ಕೆಲಸದಲ್ಲಿ ನಿಪುಣಳು. ಅವಳ ಯೋಗ್ಯತೆ ಮತ್ತು ಗುಣಗಳನ್ನು ಕಂಡು ಆ ಊರಿನವನೊಬ್ಬನು ಅವಳನ್ನು ಮದುವೆಯಾಗಲು ಕೇಳಿಕೊಂಡನು. ಆದರೆ ಮಿಸೆಸ್ ಗಮ್ಮಿಜ್ಜಳಿಗೆ ಸಿಟ್ಟೇ ಬಂತು. ಆ ಸಿಟ್ಟಿನಿಂದ ತನ್ನ ಕೈಯಲ್ಲಿ ಇದ್ದ ನೀರಿನ ಬಾಲ್ದಿಯನ್ನು ಅವನ ತಲೆಗೆ ಕವುಚಿಬಿಟ್ಟಳು. ಕೊನೆಗೆ ನಾವು ಹೋಗಿ ಅವನನ್ನು ಬಿಡಿಸಬೇಕಾಯಿತು. ಜನರಿಲ್ಲದ ಆ ಊರಲ್ಲಿ ನೆಂಟಸ್ತನ ಬಯಸುವ ಸ್ವಾಭಾವಿಕ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವಷ್ಟೂ ಅವಳಿಗೆ ತಾಳ್ಮೆಯಿರಲಿಲ್ಲ” ಹೀಗೆ ಹೇಳಿ ಅವರು ಗಹಗಹಿಸಿ ನಗಾಡಿದರು. ಹತ್ತು ಮಿನಿಟುಗಳವರೆಗೆ ನಾವೆಲ್ಲರೂ ನಗಾಡುತ್ತಾ ನಮ್ಮ ಮಾತೇ ನಿಂತುಹೋಯಿತು. ಅನಂತರ ಮಿ. ಪೆಗಟಿ ಮಾತಾಡತೊಡಗಿದರು –

“ಕೇಳಿ ಮಾಸ್ಟರ್ ಡೇವಿ, ಪರಿಪೂರ್ಣ ಪಾಪಿಗಳೆಂದು ಪ್ರಪಂಚದಲ್ಲಿ ಯಾರೂ ಇಲ್ಲ. ಮಾರ್ಥಾಳು ನ್ಯಾಯವಾದ ಸಂಪಾದನೆ ಮಾಡಿ, ಮರ್ಯಾದೆಯಿಂದ ಬದುಕುತ್ತಿದ್ದಾಳೆ. ಒಬ್ಬನು ಅವಳನ್ನು ಮದುವೆಯಾಗಲು ಇಚ್ಛಿಸಿ, ಅವಳನ್ನೇ ಕೇಳಿದನು. ತನ್ನ ಚರಿತ್ರೆಯನ್ನೂ ಅವಗುಣಗಳನ್ನೂ ಅವಳೇ ಅವನಿಗೆ ತಿಳಿಸಿದಳು. ಇಷ್ಟು ಕೇಳಿಯೂ ಅವಳನ್ನು ಮದುವೆಯಾಗಲು ಅವನು ಹಟಹಿಡಿದುದರಿಂದ ಅವಳು ಅವನನ್ನು ಮದುವೆಯಾಗಿರುವಳು. ಈಗ ಆ ದಂಪತಿಗಳು ನ್ಯಾಯವಾದ ಮತ್ತೂ ಸುಖವಾದ ಜೀವನವನ್ನು ಸಾಗಿಸುತ್ತಿದ್ದಾರೆ” ಎಂದು ಮಿ. ಪೆಗಟಿ ಅಂದರು.

“ಮತ್ತೆ ಮಿ. ಮೈಕಾಬರರ ಕುಟುಂಬ!” ಎಂದು ನಾವಿಬ್ಬರೂ ಏಕಕಂಠದಿಂದ ಕೇಳಿದೆವು.

“ಅದನ್ನು ಹೇಳದೇ ಉಂಟೇ! ಅವರ ಜೀವನಕ್ರಮವೇ ಬೇರೆ ವಿಧದ್ದು. ಅವರು ಆಶ್ಚರ್ಯಕರವಾದ ಅಭಿವೃದ್ಧಿ ಸ್ಥಿತಿಯಲ್ಲಿ ಇದ್ದಾರೆ. ಮಿ. ಮೈಕಾಬರರು ಇಲ್ಲಿಂದ ಹೋದ ಕೂಡಲೇ ಕೃಷಿ ಕೆಲಸವನ್ನು ಕೈಕೊಂಡರು. ಹಾರೆ ಪಿಕಾಸುಗಳನ್ನು ಹಿಡಿದು ದಿನಕ್ಕೆ ಎಂಟು ಹತ್ತು ಘಂಟೆ ಕೆಲಸ ಮಾಡುತ್ತಿದ್ದರು. ಅವರ ಕುಟುಂಬದವರೆಲ್ಲರೂ ಇದೇ ರೀತಿ ತುಂಬಾ ಕೆಲಸ ಮಾಡಿ, ಉತ್ಪತ್ತಿ ತೆಗೆದು, ಅವರ ಸಾಲದಲ್ಲಿ ಹೆಚ್ಚಿನ ಅಂಶವೆಲ್ಲ ಈಗ ಸಂದಾಯವಾಗಿದೆ. ಇದಕ್ಕಿಂತಲೂ ಹೆಚ್ಚಿನದು ಅವರ ವ್ಯಕ್ತಿತ್ವ, ಅವರ ಮಾತಿನ ವೈಖರಿ, ಮುಖದ ತೇಜಸ್ಸು, ದೇಹರಚನೆ ಎಲ್ಲವೂ ಅವರನ್ನು ಈಗ ಅತ್ಯುನ್ನತ ಪದವಿಗೆ ಏರಿಸಿದೆ. ನನ್ನ ಮಾತುಗಳಿಂದ ಅವರ ಈಗಿನ ಪರಿಸ್ಥಿತಿಯನ್ನು ತಿಳಿಯುವುದಕ್ಕಿಂತ ಈ ಪತ್ರಿಕೆಯನ್ನೋದಿ ತಿಳಿಯುವುದು ಉತ್ತಮ” ಎಂದು ಮಿ. ಪೆಗಟಿ ಹೇಳುತ್ತಾ ಅವರ ಜೇಬಿನಲ್ಲಿದ್ದ ಒಂದು ಪತ್ರಿಕೆಯನ್ನು ತೆಗೆದು ನನಗೆ ಕೊಟ್ಟರು. ಪತ್ರಿಕೆಯ ಒಂದು ಬಾತ್ಮಿಯು ಹೀಗಿತ್ತು.

“ಜನರು ಕಿಕ್ಕಿರಿದು ನೆರೆದಿದ್ದ ಇಲ್ಲಿನ ಮುಖ್ಯ ಹೋಟೆಲಿನ ವಿಶಾಲ ಹಾಲಿನಲ್ಲಿ ಪೋರ್ಟ್ ಮಿಡಲ್ಬೆಯ ಮಾನ್ಯ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರೂ ಈ ಊರಿನ ಗಣನೀಯ ಗೃಹಸ್ಥರೂ ಆದರ್ಶ ಕೃಷಿಕರೂ ಆಗಿರುವ ಮಿ. ವಿಲ್ಕಿನ್ಸ್ ಮೈಕಾಬರ್ ಎಸ್ಕ್ವಯರ್ ಅವರುಗಳಿಗೆ ಮಾನಪತ್ರ ಒಪ್ಪಿಸುವ ಸಾರ್ವಜನಿಕ ಸಮಾರಂಭವೊಂದು ಏರ್ಪಡಿಸಲಾಗಿತ್ತು. ಮುಖ್ಯ ಪಂಕ್ತಿಯಲ್ಲೇ ನಲವತ್ತೇಳು ಜನರಿಗಿಂತ ಹೆಚ್ಚು ಗೌರವಾನ್ವಿತ ಗೃಹಸ್ಥರೂ ಹೋಟೆಲಿನ ಇತರ ಭಾಗಗಳಲ್ಲಿ ಅನೇಕಾನೇಕ ಇತರ ಆಮಂತ್ರಿತ ಗೃಹಸ್ಥರೂ ಏಕಕಾಲದಲ್ಲಿ ಭೋಜನಕ್ಕೆ ಮಂಡಿಸಿದ್ದರು. ಮಹಾ ಪಂಡಿತವರ್ಯರೂ ಮಹಾ ಗೌರವಾನ್ವಿತರೂ ಸುಪ್ರಷ್ಠಿತರೂ ಜನಪ್ರಿಯರೂ ಆಗಿರುವ ಮೆಜಿಸ್ಟ್ರೇಟರವರಿಗೆ ಮಾನಪತ್ರವನ್ನು ಒಪ್ಪಿಸಲು ಸಮಗ್ರ ಪೋರ್ಟು ಮಿಡಲ್ಬೆಯ ಶ್ರೀಮಂತರೂ ಜನಪ್ರಮುಖರೂ ಕುಲೀನ ಸ್ತ್ರೀ ಸಮುದಾಯವೂ ಶ್ರದ್ಧೆಯಿದ ಬಂದು ಕೂಡಿದ್ದರು. ಪೋರ್ಟ್ ಮಿಡಲ್ಬೆಯ ಸೆಲಂ ಶಾಲೆಯ ಡಾಕ್ಟರ್ ಮೆಲ್ರವರು ಅಗ್ರಾಸನವನ್ನು ಅಲಂಕರಿಸಿದ್ದರು. ಭೋಜನಾನಂತರ ಜನಸಂದಣಿಯು ರಾಷ್ಟ್ರಗೀತೆಯನ್ನು ಹಾಡಿತು. (ಇದರಲ್ಲಿ ಮಾನ್ಯ ಮೆಜಿಸ್ಟ್ರೇಟರ ಸುಪುತ್ರ ಕುಮಾರ ವಿಲ್ಕಿನ್ಸ್ ಮೈಕಾಬರರವರು ಅವರ ದೈವದತ್ತವಾದ ಕಂಠಸ್ವರದಿಂದ ಜನರನ್ನು ಬೆರಗುಗೊಳಿಸಿದರೆಂದು ತಿಳಿಸಲು ಸಂತೋಷಿಸುತ್ತೇನೆ.) ಅಧ್ಯಕ್ಷರ ಭಾಷಣದಲ್ಲಿ ಮಾನ್ಯ ಮೆಜಿಸ್ಟ್ರೇಟರನ್ನು ಕುರಿತು –

“ನಮ್ಮ ನಗರಕ್ಕೆ ಭೂಷಣಪ್ರಾಯರಾದ ಮಹಾತ್ಮರೇ ತಾವು ಸದಾ ನಮ್ಮ ಮಧ್ಯೆ ಇರುವ ಯೋಗ್ಯತೆಯು ನಮ್ಮದಾಗಲೆಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ! ಎಂದಾದರೂ ತಾವು ನಮ್ಮಿಂದ ಅಗಲುವ ಸಂದರ್ಭ ಬರುವುದಾದರೆ ಆ ಸಂದರ್ಭವು ತಮ್ಮ ಸಂಪತ್ತು

ಮತ್ತೂ ಪ್ರತಿಷ್ಠೆಗಳ ಏರಿಕೆಗೆ ಮಾತ್ರ ಆಗಿರಲಿ! ಎಂದೂ ಸ್ವಾರ್ಥವನ್ನು ಬಯಸದ ತಮ್ಮ ಶಕ್ತಿಗಳು ಜನಹಿತಕ್ಕಾಗಿ ಈ ದೇಶದಲ್ಲಿ ವಿನಿಯೋಗವಾಗುವಂತೆ ದೇವರು ಅನುಗ್ರಹಿಸಲಿ!" ಎಂದು ಮೊದಲಾಗಿ ಪ್ರಶಂಸಿಸಿದರು.

"ಮಿ. ವಿಲ್ಕಿನ್ಸ್ ಮೈಕಾಬರರವರೂ ಅವರ ಪತ್ನಿ, ಪುತ್ರ, ಪುತ್ರಿಯರೂ ಜನಪ್ರಿಯರಾಗಿಯೂ ಆದರ್ಶ ಪ್ರಜೆಗಳಾಗಿಯೂ ಜನಮುಖಂಡರಾಗಿಯೂ ಈ ಪ್ರದೇಶದ ಅತ್ಯುನ್ನತ ಏಕೈಕ ಕುಟುಂಬವಾಗಿ, ಜನರಿಂದ ಗೌರವಿಸಲ್ಪಟ್ಟು ಈ ಕೂಟದಲ್ಲಿ ಸರ್ವತೋಮುಖವಾಗಿ ಮೆರೆದರು."

ಅದೇ ಪತ್ರಿಕೆಯಲ್ಲಿ ಮತ್ತೊಂದು ಪುಟದಲ್ಲಿ ನನ್ನ ಹೆಸರಿಗೆ ಅರ್ಪಿಸಲ್ಪಟ್ಟಿದ್ದ ಒಂದು ಮಾನಪತ್ರವು ಇತ್ತು. ಅದು ಹೀಗಿತ್ತು.

"ಪ್ರಖ್ಯಾತ ಸಾಹಿತಿ ಡೇವಿಡ್ ಕಾಪರ್ಫೀಲ್ಡ್ ಎಸ್ಕ್ವಯರ್ ಅವರುಗಳಿಗೆ –
"ಪ್ರಿಯ ಮಹನೀಯರೇ
"ಪ್ರಪಂಚದ ಜ್ಞಾನವಂತ ಮಹಾಜನರಿಗೆ ಚಿರಪರಿಚಯವುಳ್ಳ ತಮ್ಮ ಕಲಾಕೃತಿಗಳನ್ನು ಓದಿ ನೋಡುವ ಭಾಗ್ಯವು ನನ್ನದಾಗಿ ಕೆಲವು ವರ್ಷಗಳು ಕಳೆದಿವೆ.

"'ಭೋರ್ಗರೆಯುವ ಸಮುದ್ರಗಳ್ ಸಂಪರ್ಕ ವಿಚ್ಛೇದ ಗೈದಿಹವು' ಎಂಬ ಮಹಾಕವಿ ಬರ್ನ್ಸನ ಮಾತುಗಳಂತೆ ನಾನು ತಮ್ಮಿಂದ ದೂರವಿರುವೆನಾದರೂ ನನ್ನ ಯೌವ್ವನಕಾಲದ ಸ್ನೇಹಿತರಾಗಿ, ಏಕಕುಟುಂಬಿಕರಂತೆ ಇದ್ದು ಬಾಳಿದ ತಮ್ಮನ್ನು ನಮ್ಮ ಅಭಿವೃದ್ಧಿ ಕಾಲದಲ್ಲಿ ಮರೆಯೆನು.

"ಈ ನಗರದ ಮಹಾಜನರು ಅವರ ಜ್ಞಾನಸಂಪಾದನೆಗಾಗಿ, ಉಲ್ಲಾಸದಿಂದ, ಉತ್ಸಾಹದಿಂದ ತಮ್ಮ ಹೊಸ ಹೊಸ ಕಲಾಕೃತಿಗಳನ್ನು ನಿರೀಕ್ಷಿಸುತ್ತಿರುವರು. ತಮ್ಮ ದೇಶದ ಜನರಿಗೆ ತಾವು ಪರಿಚಯವಿರುವಷ್ಟೇ ಈ ದೇಶದವರಿಗೂ ತಮ್ಮ ಪರಿಚಯವಿರುವುದರಿಂದ, ದೇಶಕಾಲಾಬಾಧಿತವಾಗದೆ ತಮ್ಮ ಕಲಾಕೌಶಲ ಏರಲಿ! ತಮ್ಮ ಕೀರ್ತಿ ಪ್ರತಿಷ್ಠೆಗಳೇರಲಿ. ತಾವು ಜಗದ್ವಿಖ್ಯಾತರಾಗಿರಿ!

"ಭೂಗೋಳದ ಇತ್ತ ಕಡೆಯ ವಿಭಾಗದಿಂದ ತಮ್ಮ ಕಡೆಗೆ ಗೌರವದಿಂದ ನೋಡುತ್ತಿರುವ ಲಕ್ಷಾಂತರ ನಯನಗಳ ಪೈಕಿ, ಕಣ್ಣಿನಲ್ಲಿ ದೃಷ್ಟಿ, ದೇಹದಲ್ಲಿ ಜೀವ, ಇರುವವರೆಗೆ ನೋಡಿ ದಣಿಯದ ನಯನಗಳುಳ್ಳ
ವಿಲ್ಕಿನ್ಸ್ ಮೈಕಾಬರ್, "ಮೆಜಿಸ್ಟ್ರೇಟ್"

ಈ ಪತ್ರಿಕೆಯ ಒಂದು ಮೂಲೆಯಲ್ಲಿ ಪತ್ರಿಕೆಯ ಬಾತ್ಮಿದಾರರ ಹೆಸರುಗಳ ಪಟ್ಟಿಯಲ್ಲಿ ಮಿ. ಮೈಕಾಬರರ ಹೆಸರೂ ಇತ್ತು.

ಆ ರಾತ್ರಿ ಮಿ. ಪೆಗಟಿ ನಮ್ಮ ಮನೆಯಲ್ಲೇ ಇದ್ದರು. ಮರುದಿನ ಬೆಳಗ್ಗೆ ಬೇರೆ ಕಡೆ ಕೆಲಸವಿದೆಯೆಂದು ಹೊರಟು ಹೋದರು. ಅವರು ಸಾಧಾರಣ ಒಂದು ತಿಂಗಳ ಕಾಲ ಈ ದೇಶದಲ್ಲಿದ್ದು ಹೋಗುವುದಾಗಿಯೂ ಸಮಯವಿದ್ದಾಗ ಈ ಮಧ್ಯೆ, ನನ್ನನ್ನು ನೋಡಲು ಬರುವರೆಂದೂ ತಿಳಿಸಿದ್ದರು.

ಒಂದು ದಿನ ಅವರು ನಮ್ಮ ಮನೆಗೆ ಬಂದು ನನ್ನನ್ನು ಕರೆದುಕೊಂಡು ಹೇಮನ ಗೋರಿಯನ್ನು ನೋಡಲು ಯಾರ್ಮತ್ತಿಗೆ ಹೋದರು. ಹೇಮನ ಗೋರಿಯನ್ನು ನಾನೇ ಕಟ್ಟಿಸಿದ್ದು. ಅದರಲ್ಲಿ ಒಂದು ಚಂದದ ಕಲ್ಲಿನ ಮೇಲೆ ಕೆಲವು ಒಕ್ಕಣೆಗಳನ್ನು ಬರೆಸಿದ್ದೆನು. ಮಿ. ಪೆಗಟಿಯ ಅಪೇಕ್ಷೆಯ ಮೇರೆಗೆ ನಾನು ಆ ಒಕ್ಕಣೆಗಳನ್ನು ಒಂದು ಕಾಗದದಲ್ಲಿ ಬರೆದುಕೊಳ್ಳುತ್ತಿದ್ದಾಗ, ಮಿ. ಪೆಗಟಿ ಸಮಾಧಿಯಿಂದ ಸ್ವಲ್ಪ ಹುಲ್ಲನ್ನೂ ಮಣ್ಣನ್ನೂ ತೆಗೆದು ಸಂಗ್ರಹಿಸಿಕೊಂಡರು.
"ಎಮಿಲಿಗಾಗಿ, ಮಾಸ್ಟರ್ ಡೇವಿ, ತರುತ್ತೇನೆಂದು ವಾಗ್ದಾನ ಮಾಡಿದ್ದೇನೆ" ಎಂದು ಅವರು ನನ್ನನ್ನು ನೋಡಿ ಹೇಳಿದರು.

ಅಧ್ಯಾಯ ಅರವತ್ನಾಲ್ಕು

ಕೊನೆಯ ಸಿಂಹಾವಲೋಕನ

ಇನ್ನು ಬರೆಯತೊಡಗಿದ ನನ್ನ ಜೀವನ ವೃತ್ತಾಂತವು, ಸಾಧಾರಣ, ಇಲ್ಲಿಗೆ ಮುಗಿಯುವುದು. ಇಲ್ಲೇ ನಡೆದುಹೋದ ಸಂಗತಿಗಳನ್ನು ಒಮ್ಮೆ ಹಿಂತಿರುಗಿ ನೋಡೋಣವೆಂದು ಮನಸ್ಸಾಗುತ್ತದೆ.

ನನ್ನ ಈ ಜೀವನದ ಸಂಗಾತಿಯಾಗಿ ಏಗ್ನೆಸ್ಸಳು ನನ್ನ ಕೈ ಹಿಡಿದುಕೊಂಡು ಜತೆಯಲ್ಲೇ ಬರುತ್ತಿರುವಳು. ನನ್ನ ಮಕ್ಕಳು, ಸ್ನೇಹಿತರು, ಪರಿಚಿತರು, ನಮ್ಮ ಸುತ್ತಲೂ ಕಂಡುಬರುತ್ತಾರೆ. ಈ ಜನಸಮೂಹದಿಂದಲೂ ನನಗೆ ವಿಶೇಷ ಪರಿಚಯವಿಲ್ಲದ ಇತರರಿಂದಲೂ ನನ್ನನ್ನು ಕುರಿತಾಗಿ ಅವರು ಆಡುತ್ತಿರುವ ಪ್ರಶಂಸೆ, ಹಿತವಚನ ಮೊದಲಾದ ಮಾತುಗಳೂ ಕೇಳಿಬರುತ್ತಿವೆ.

ಜನಸಂದಣಿಯಲ್ಲಿ ಸ್ಪಷ್ಟವಾಗಿ ತೋರಿಬರುವ ಮುಖಗಳು ಕೆಲವಿವೆ. ಅವರೆಲ್ಲರನ್ನೂ ಒಂದಾವೃತ್ತಿಯಾದರೂ ನೋಡೋಣ. ಮೊದಲು ನನಗೆ ಕಾಣುವವಳು ನನ್ನ ಅತ್ತೆ – ಎಂಬತ್ತು ವರ್ಷ ಪ್ರಾಯ ಕಳೆದರೂ ನೆಟ್ಟಗೆ ನಿಂತು, ಚಳಿಯಲ್ಲೂ ಆರು ಮೈಲು ನಡೆದು ದಣಿಯದೆ, ಕನ್ನಡಕ ಧರಿಸಿರುವ ಅತ್ತೆ. ಅನಂತರ ಕಾಣುವವಳು – ಪೆಗಟಿ, ನನ್ನ ಬಾಲ್ಯದ ದಾದಿ. ನನಗೆ ನಡೆಯಲು ಕಲಿಸಿದಂತೆ ನನ್ನ ಕಿರಿಮಗುವಿಗೆ ಈಗ ಅವಳು ನಡೆಯಲು ಕಲಿಸುತ್ತಿದ್ದಾಳೆ. ನನ್ನ ಹಳೆ 'ಮೊಸಳೆ ಪುಸ್ತಕ'ವನ್ನು ಕಾಪಾಡಿಕೊಂಡು ಬಂದಿದ್ದಾಳೆ ಪೆಗಟಿ – ಎಷ್ಟೊಂದು ಪ್ರೀತಿ!

ಸಂಜೆಯ ಹೊಂಬಣ್ಣದ ಬಿಸಿಲಿನಲ್ಲಿ ಆಡುವ ಮಕ್ಕಳ ಜತೆಯಲ್ಲಿ ಕಲೆತು ಬೆರೆತು, ಆಟವಾಡುವ ಆ ನರೆತ ತಲೆಗೂದಲಿನ ಮುದುಕ – ಗಾಳಿಪಟ ಬಿಟ್ಟುಕೊಂಡು ಮಕ್ಕಳಂತೆ ನಗುತ್ತಾನಷ್ಟೆ – ಅವನ್ಯಾರು? ಓಹೋ! ಅವರು ಮಿ. ಡಿಕ್ಕರು. ಅತ್ತೆಯಂಥ ಒಳ್ಳೆ ಜನರು ಬೇರೆ ಯಾರೂ ಇಲ್ಲವೆಂದು ಈಗಲೂ ಹೇಳಿ ಸಂತೋಷಿಸುತ್ತಾರೆ!

ಆ ಹೂವಿನ ತೋಟದಲ್ಲಿ ಗಂಭೀರ ಮುಖವುಳ್ಳ, ಮನೋರೋಗದಿಂದ ಬಗ್ಗಿ ಮಂಕಾಗಿ ತೋರುವ ಓರ್ವ ವೃದ್ಧೆ ಮತ್ತೂ ಅವಳ ಸಮೀಪದಲ್ಲಿ ತುಟಿಗೆ ಅಡ್ಡವಾಗಿ ಗಾಯಗೊಂಡಿರುವ, ಈಗ ಕೃಶವಾಗಿರುತ್ತಾ ಪೂರ್ವದಲ್ಲಿ ತೇಜಸ್ವಿಯಾಗಿರಬೇಕಾಗಿದ್ದ ಹೆಂಗಸರು ಇರುವರಷ್ಟೆ – ಅವರ ಪರಿಚಯವಿದೆಯಲ್ಲಾ? ಪ್ರೇಮ ಭಂಗದಿಂದ ಕೃಶಳಾಗಿರುವ ಮಿಸ್ ಡಾರ್ಟಲ್ಲಳನ್ನೂ ಪುತ್ರ ಶೋಕದಿಂದ ಜೀವನ್ಮೃತಳಾಗಿರುವ ಮಿಸೆಸ್ ಸ್ಟೀಯರ್ಫೋರ್ತಳನ್ನೂ ಒಮ್ಮೆ ನೋಡಿರಿ!

ಜೂಲಿಯಾ ಮಿಲ್ಸಳನ್ನು ನೋಡಬೇಡವೇ? ಅವಳು ಮದುವೆಯಾಗಿ ಶ್ರೀಮಂತಿಕೆಯಿಂದ ಮೆರೆದು ನಲಿಯುತ್ತಿರುವಳು. ಮಿಸ್ ಮಿಲ್ಸಳು ಹೀಗಾಗುವಳೆಂದು ಯಾರೂ ಗ್ರಹಿಸಿರಲಿಲ್ಲ. ಮಿಸ್ ಮಿಲ್ಸಳು ಮೆರೆಯುವಾಗ ಅವಳ ಸುಖವಿಲಾಸಗಳಲ್ಲಿ ಭಾಗವಹಿಸಲು ಜಾಕ್ ಮಾಲ್ಡನ್ ಮತ್ತೂ 'ಸಿಪಾಯಿ'ಯರು ಸೇರುತ್ತಿರುವರಲ್ಲವೇ! ಇವರಿಗೆ ಈಗ ಡಾಕ್ಟರ್ ಸ್ಟ್ರಾಂಗರಲ್ಲಿ ಮೊದಲಿನಷ್ಟು ಸಲಗೆ ತೋರುವುದಿಲ್ಲ.

ಇತ್ತ ಡಾಕ್ಟರ್ ಸ್ಟ್ರಾಂಗರು ತಮ್ಮ ಡಿಕ್ಷನರಿ ಕೆಲಸದಲ್ಲಿ ಬಹು ಮುಂದರಿಸಿದ್ದಾರೆ. ಸಾಧಾರಣ 'ಡಿ' ಅಕ್ಷರದವರೆಗೆ ತಲುಪಿದ್ದಾರೆ. ಅವರ ಡಿಕ್ಷನರಿ ಕೆಲಸ, ಪ್ರೇಮದ ಪತ್ನಿ ಇವುಗಳಿಂದ ಅವರ ಸಂಸಾರ ಸುಖವಾಗಿ, ಸಂತೋಷದಿಂದ ಸಾಗುತ್ತಿದೆ.

ಇನ್ನು ಕಾಣುವುದು ಯಾರನ್ನು? ನನ್ನ ಬಾಲ್ಯದ ಸ್ನೇಹಿತ ಟ್ರೇಡಲ್ಸನನ್ನು, ಅವನ ತಲೆ ಸಾಣೆ ಹೋಗದಿರುವಲ್ಲಿ ಎದ್ದು ನಿಲ್ಲುವ ಕೂದಲು ಮೊದಲಿನಂತೆಯೇ ಎದ್ದು ನಿಂತಿದೆ. ಅವನು ವಕೀಲ ವೃತ್ತಿಯಲ್ಲಿ ತುಂಬಾ ಹಣ ಸಂಪಾದಿಸುತ್ತಿದ್ದಾನೆ. ಮೇಜಿನ ಎದುರು ತುಂಬಾ ರಿಕಾರ್ಡು ಕಟ್ಟುಗಳನ್ನಿಟ್ಟುಕೊಂಡು ಸಂತೋಷ ಸಂತೃಪ್ತಿಯ ಮೂರ್ತಿಯಾಗಿ ಕುಳಿತಿರುವ ಟ್ರೇಡಲ್ಸನನ್ನು ನೋಡಿದಷ್ಟು ಸಾಲದೆನಿಸುತ್ತದೆ.

ಟ್ರೇಡಲ್ಸನ ಮಾವನ ಮನೆಯವರಲ್ಲಿ ಕೆಲವರಿಗೆ ಮದುವೆಯಾಗಿದೆ; ಕೆಲವರು ಶಾಲೆಯಲ್ಲಿ ಓದುತ್ತಾರೆ. ಅವರೆಲ್ಲರ ವಿದ್ಯಕ್ಕೆ ಸಂಬಂಧಪಟ್ಟ ಖರ್ಚನ್ನು ಟ್ರೇಡಲ್ಸನೇ ಮಾಡುತ್ತಿದ್ದಾನೆ. ಮದುವೆಯಾಗದ ಹೆಣ್ಣು ಮಕ್ಕಳು ತಂದೆಯೊಡನೆಯೂ ಟ್ರೇಡಲ್ಸನೊಡನೆಯೂ ಇರುತ್ತಾರೆ.

ಟ್ರೇಡಲ್ಸನು ಈಗ ವಾಸವಾಗಿರುವ ಮನೆ ಹೊಸತು. ಅವನೇ ಕ್ರಯಕ್ಕೆ ಪಡಕೊಂಡ ಮನೆ. ಹಿಂದೆ ಸೋಫಿಯೂ ಟ್ರೇಡಲ್ಸನೂ ನೋಡಿ ಸಂತೋಷಪಟ್ಟುಕೊಂಡು ಬಂದಿದ್ದ ಮನೆಯನ್ನೇ ಈಗ ಕ್ರಯಕ್ಕೆ ಪಡೆದಿದ್ದಾನೆ. ಈ ಮನೆ ದೊಡ್ಡದಾಗಿದ್ದು ಸೋಫಿಯ ತಂಗಿಯರು ಬಂದಾಗ ಇರಲು ಸಾಕಷ್ಟು ಸೊಗಸಾದ ಸ್ಥಳ ಇದರಲ್ಲಿದೆ.

ಸೋಫಿಯ ಸುಂದರಿಯಾದ ಅಕ್ಕ ಒಬ್ಬ ಕ್ರೂರಿ, ದುರಾಚಾರಿಯನ್ನು ಮದುವೆಯಾಗಿ, ಆ ಗಂಡನೂ ಸತ್ತು, ಟ್ರೇಡಲ್ಸನ ಮನೆಯಲ್ಲೇ ಇದ್ದಾಳೆ.

ಯಾವುದು ಏನಿದ್ದರೂ ತೃಪ್ತಿ ಸಮಾಧಾನಗಳ ಮತ್ತೂ ಸರಳ ಸ್ವಭಾವದ ಟ್ರೇಡಲ್ಸನು ಅಷ್ಟೊಂದು ನಂಟರಿಷ್ಟರ ಭಾರವನ್ನು ಸಂತೋಷದಿಂದ ಹೊತ್ತು ಬದುಕುತ್ತಿದ್ದಾನೆ. ಅವನಿಗೆ ಸಂಪೂರ್ಣ ಒಪ್ಪುವ, ಅವನ ಮೆಚ್ಚಿಗೆಯ ಸೋಫಿಯು ಈ ಸದ್ಗುಣಗಳಲ್ಲಿ ಟ್ರೇಡಲ್ಸನನ್ನೇ ಮೀರಿಸುವಂತಿದ್ದಾಳೆ.

ಈ ವರೆಗೆ ಜತೆಯಲ್ಲಿ ಬಂದಿರುವ ಜನಸ್ತೋಮವನ್ನು ಮರೆತು ಚರಿತ್ರೆಯನ್ನು ಮುಗಿಸುವುದು ಸ್ವಲ್ಪ ಬೇಸರದ ಸಂಗತಿ. ಆ ಎಲ್ಲಾ ಮುಖಗಳೂ ಮಾಯವಾದರೂ ಒಂದು ಮುಖ ಮಾತ್ರ ಸ್ಥಿರವಾಗಿ ನಿಂತು ಅವೆಲ್ಲವುಗಳ ಮೇಲೂ ನಾನು ನೋಡಬೇಕಾದ ಎಲ್ಲಾ ವಸ್ತು, ವಿಷಯಗಳ ಮೇಲೂ ಒಂದು ಜ್ಯೋತಿಯಂತೆ ತನ್ನ ಪ್ರಭೆಯನ್ನು ಬೀರುತ್ತಿದೆ. ನಾನು ನೋಡುವುದೇ ಆ ಬೆಳಕಿನಿಂದ. ಈ ತೇಜೋಮಯ ಮುಖವನ್ನೊಮ್ಮೆ ನೋಡಿ ಹಿಡಿದಿರುವ ಕಾರ್ಯವನ್ನು ಮುಗಿಸುವೆನು.

ರಾತ್ರಿ ಅಪಾರವಾಯಿತು – ದೀಪವೂ ಮಸಕಾಗುತ್ತಾ ಬಂದಿದೆ. ನನ್ನ ಜೀವನದ ಮಾರ್ಗದರ್ಶಕಳಾಗಿದ್ದ – ಯಾರು ನನ್ನ ಜತೆಯಲ್ಲಿ ಈವರೆಗೆ ಇಲ್ಲದಿರುತ್ತಿದ್ದರೆ ನಾನೊಬ್ಬ ಅನಾಮಧೇಯನಾಗಿ ಮಾತ್ರ ಉಳಿಯುತ್ತಿದ್ದೆನೋ – ಅಂಥವಳ, ಪ್ರಿಯ ಸಾನ್ನಿಧ್ಯ ಈಗಲೂ ನನ್ನ ಬಳಿ ಇದೆ.

ಏಗ್ನೆಸ್, ಪ್ರಿಯತಮಳಾದ ಏಗ್ನೆಸ್, ಈ ಜೀವನ ವೃತ್ತಾಂತದ ದೇಶ, ಕಾಲ, ಜನ ಮಾಯವಾದಂತೆಯೇ ನಾನೂ ಮಾಯವಾಗುವ – ನನ್ನ ಬದುಕಿರೋಣದ ಅಂತ್ಯದಲ್ಲಿ ಪ್ರಪಂಚದ ಜ್ಞಾನವೇ ಮಾಯವಾಗುವ – ಸಮಯದಲ್ಲಿ ನನ್ನ ಕಣ್ಣೆದುರಿನ ಕೊನೆಯ ಪ್ರಭೆಯಾಗಿ ನಿಂತಿರಮ್ಮಾ – ಅಗ ಸ್ವರ್ಗದ ಕಡೆಗೆ ಕೈತೋರಿಸುವ ದಿವ್ಯ ಜ್ಯೋತಿಯಾಗಿ ಬೆಳಗಮ್ಮಾ!

(ಡೇವಿಡ್ ಕಾಪರ್ಫೀಲ್ಡನ ಜೀವನ ವೃತ್ತಾಂತ ಮತ್ತು ಅನುಭವಗಳು, ಕಾದಂಬರಿ, ಮುಗಿಯಿತು)